JJ-5 (B) 25220

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ

12TH SESSION

ಸಂಪುಟ – ೧೩ (ಕ್ರಮಾಂಕ ೧ ರಿಂದ ೪)

Volume - 13 (No. 1 to 4)

(೫, ೬, ೯ ಮತ್ತು ೧೦ನೇ ಜುಲೈ ೨೦೦೭.)

(5th, 6th, 9th and 10th July 2007)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 25220

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ
12TH SESSION

ಸಂಪುಟ – ೧೩ (ಕ್ರಮಾಂಕ ೧ ರಿಂದ ೪)
- Volume - 13 (No. 1 to 4)

(೫, ೬, ೯ ಮತ್ತು ೧೦ನೇ ಜುಲೈ ೨೦೦೭.)
(5th, 6th, 9th and 10th July 2007)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ

ಐದನೇ ಅಧಿವೇಶನದ ಮುಂದುವರೆದ ಉಪವೇಶನ

ಶ್ರೀ ಕೃಷ್ಣ

ಅಧ್ಯಕ್ಷರು

ಶ್ರೀ ಎನ್ ವೈ ಗೋಪಾಲಕೃಷ್ಣ

ಉಪಾಧ್ಯಕ್ಷರು

05 07 2007 ವಿಷಯಾನುಕ್ರಮಣಿಕೆ ಸ ಸಂಖ್ಯೆ

1 **ಅಧ್ಯಕ್ಷರ ಅಪ್ಪಣೆ ಮೇರೆಗೆ** **1–8**

ವಿಷಯ ಸದನವನ್ನು ಬೆಳಿಗ್ಗೆ 9 45ಕ್ಕೆ ಕರೆದಿರುವ ಬಗ್ಗೆ

2 ಸಂತಾಪ ಸೂಚನೆ 8–15

ವಿಷಯ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ ಪಿ ನಾಡಗೌಡ, ಶ್ರೀ ಜಿ ಅಮರೇಗೌಡ ಹಾಗೂ ಶ್ರೀ ಎಸ್ ಜಿ ರಾಮಲಿಂಗಯ್ಯ ಅವರುಗಳ ನಿಧನದ ಬಗ್ಗೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಎನ್ ಧರ್ಮಸಿಂಗ್,
ಮಾನ್ಯ ವಿರೋಧ ಪಕ್ಷದ ನಾಯಕರು

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ

ಶ್ರೀ ವಾಟಾಳ್ ನಾಗರಾಜ್

3 ಅಧ್ಯಕ್ಷರ ಅಪ್ಪಣೆ ಮೇರೆಗೆ 15–17

ವಿಷಯ ಹಕ್ಕುಚ್ಯುತಿ ನಿರ್ಣಯದ ಮಂಡನೆ ಚರ್ಚೆಗೆ ಅವಕಾಶ ಕೋರಿಕೆ

ಶ್ರೀ ದಿನೇಶ್ ಗುಂಡುರಾವ್

ಶ್ರೀ ಧರ್ಮಸಿಂಗ್, ವಿರೋಧ ಪಕ್ಷದ ನಾಯಕರು

4 ಕಾರ್ಯದರ್ಶಿಯವರ ವರದಿ 17–17

ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿ

5 ಸಭೆಯ ಮುಂದಿಡಲಾದ ಕಾಗದ ಪತ್ರಗಳು 17–20

6 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ 20–28

ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾಗಿರುವ ಅನಾಹುತದ ಬಗ್ಗೆ ಶ್ರೀ ಧರ್ಮಸಿಂಗ್, ವಿರೋಧ ಪಕ್ಷದ ನಾಯಕರು (ನಿಯಮ 69ರ ಅಡಿಗೆ ಚರ್ಚೆಗೆ ಅವಕಾಶ ನೀಡಲಾಯಿತು)

7 ನಿಯಮ 69ರ ಅಡಿಯಲ್ಲಿ ಚರ್ಚೆ 28–184

6 ರಿಂದ 41

ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾಗಿರುವ ಅನಾಹುತದ ಬಗ್ಗೆ

ಶ್ರೀ ಎನ್ ಧರ್ಮಸಿಂಗ್, ವಿರೋಧ ಪಕ್ಷದ ನಾಯಕರು

ಶ್ರೀ ಸಿದ್ಧರಾಮಯ್ಯ

ಶ್ರೀ ಜೆ ಸಿ ಮಾಧುಸ್ವಾಮಿ

ಶ್ರೀ ಆರ್ ವಿ ದೇಶಪಾಂಡೆ

ಶ್ರೀ ವಾಟಾಳ್ ನಾಗರಾಜ್

ಶ್ರೀ ಜಿ ವಿ ಶ್ರೀರಾಮರೆಡ್ಡಿ

ಶ್ರೀ ಅರಗ ಜ್ಞಾನೇಂದ್ರ

ಶ್ರೀ ಹೆಚ್ ಎಂ ವಿಶ್ವನಾಥ್

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ

ಶ್ರೀ ಎನ್ ಎಸ್ ಭೋಸರಾಜು

ಶ್ರೀ ಪ್ರಕಾಶ್ ಬಿ ಹುಕ್ಕೇರಿ

ಶ್ರೀ ಸರಿಕರ್ ಭೀಮಪ್ಪ ಚನ್ನಪ್ಪ

8 ಪ್ರಕಟಣೆ 184–184

ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ

ಪುಟ ಸಂಖ್ಯೆ

ವಿಷಯಾನುಕ್ರಮಣಿಕೆ–06–07–2007

1 ನಿಯಮ 69 ರ ಮೇರೆಗೆ ಮುಂದುವರೆದ ಚರ್ಚೆ 185–242

ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾಗಿರುವ ಅನಾಹುತದ ಬಗ್ಗೆ

1 ಶ್ರೀಮತಿ ಶಕುಂತಲಾ ಟಿ ಶೆಟ್ಟಿ
2 ಶ್ರೀ ಕೆ ಜಿ ಬೋಪಯ್ಯ
3 ಶ್ರೀ ಮನೋಹರ್ ಕಲ್ಲಪ್ಪ ಕಿಣೇಕರ್
4 ಶ್ರೀ ಧೃವನಾರಾಯಣ್
5 ಶ್ರೀ ಹೆಚ್ ಎಸ್ ಮಹಾದೇವ ಪ್ರಸಾದ್ ಕನ್ನಡ ಮತ್ತು ಸಂಸ್ಕೃತಿ ಸಚಿವರು
6 ಶ್ರೀ ವಾಟಾಳ್ ನಾಗರಾಜ್
7 ಶ್ರೀ ಗಂಗಾಧರ ನಾಗೇಶ್ ಭಟ್
8 ಶ್ರೀ ಪಾಪ ರೆಡ್ಡಿ
9 ಶ್ರೀ ಎ ಎಸ್ ಬಸವರಾಜ್
10 ಶ್ರೀ ವೀರ ಬಸವಂಡರೆಡ್ಡಿ ಮುದ್ನಾಳ್
11 ಶ್ರೀ ಓಲೇಕಾರ್ ನೆಹರೂ ಚೆನ್ನ ಬಸಪ್ಪ
12 ಶ್ರೀ ಕೆ ಪ್ರಭಾಕರ ಬಂಗೇರ
13 ಶ್ರೀ ಶಿವ ಪುತ್ರಪ್ಪ ಎಂ ದೇಸಾಯಿ
14 ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು
15 ಶ್ರೀ ಸಿದ್ದು ಸವದಿ
16 ಶ್ರೀ ಎನ್ ಯೋಗೀಶ ಭಟ್
17 ಶ್ರೀ ಲಾಲಾಜಿ ಆರ್ ಮೆಂಡನ್
18 ಶ್ರೀ ಪದ್ಮನಾಭ ಕೋರಾರಿ
19 ಶ್ರೀ ಎಂ ಪಿ ಕುಮಾರ ಸ್ವಾಮಿ
20 ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್

2 ಖಾಸಗಿ ಸದಸ್ಯರುಗಳ ನಿರ್ಣಯ 242–267

ವಿವಾಹ ಕಾರ್ಯಕ್ರಮಗಳ ಬಗ್ಗೆ ಒಂದು ಹೊಸ ಶಾಸನ ರಚಿಸಲು ನಿರ್ಣಯ

1 ಶ್ರೀ ವಾಟಾಳ್ ನಾಗರಾಜ್

2 ಶ್ರೀ ಡಾ ಕೆ ಅನ್ನದಾನಿ

09-07-2007

ವಿಷಯಾನುಕ್ರಮಣಿ

ಕ್ರಮ ಸಂಖ್ಯೆ	ಸರದಿ ಸಂಖ್ಯೆ
1 ಸಂತಾಪ ಸೂಚನೆ	268-316

ಶ್ರೀ ಚಂದ್ರಶೇಖರ್, ಮಾಜಿ ಪ್ರಧಾನ ಮಂತ್ರಿ, ಇವರ ನಿಧನದ ಬಗ್ಗೆ

1 ಶ್ರೀ ಹೆಚ್ ಡಿ ಕುಮಾರ ಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

2 ಶ್ರೀ ಎನ್ ದರ್ಮಸಿಂಗ್ (ವಿರೋಧ ಪಕ್ಷದ ನಾಯಕರು)

3 ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

4 ಶ್ರೀ ಮಲ್ಲಿಕಾರ್ಜುನ ಖರ್ಗೆ

5 ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

6 ಶ್ರೀ ವಾಟಾಳ್ ನಾಗರಾಜ್

7 ಶ್ರೀ ಜಿ ವಿ ರಾಮರೆಡ್ಡಿ

8 ಶ್ರೀ ಕೆ ಆರ್ ರಮೇಶ್ ಕುಮಾರ್

9 ಶ್ರೀ ಜಯಪ್ರಕಾಶ್ ಹೆಗ್ಡೆ

10 ಶ್ರೀ ಆರ್ ವಿ ದೇಶಪಾಂಡೆ

11 ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

12 ಶ್ರೀ ಆರಗ ಜ್ಞಾನೇಂದ್ರ

13 ಶ್ರೀ ಬಿ ಎ ಜೀವಿಜಯ

14 ಶ್ರೀ ವೈಜನಾಥ್ ಪಾಟೀಲ್

15 ಶ್ರೀ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

16 ಶ್ರೀ ನರಸಿಂಹ ನಾಯಕ್ (ರಾಜು)

17 ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ದಿನಾಂಕ ಹತ್ತನೇ ಜುಲೈ 2007

ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

1 ಪ್ರಶ್ನೋತ್ತರಗಳು 317–368

ಜನತಾ ದರ್ಶನದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ
ನೀಡಲಾದ ಉತ್ತರಗಳು

1 ನೆ ಲ ನರೇಂದ್ರಬಾಬು

2 ಹೆಚ್ ಡಿ ಕುಮಾರಸ್ವಾಮಿ

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು 368–374

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 374–390
ವಿಷಯ ಬೆಂಗಳೂರಿನಲ್ಲಿ ಭಯೋತ್ಪಾದಕ ಚಟುವಟಿಕೆ ಬಗ್ಗೆ

4 ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ
ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ 390–521

(ಮುಂದುವರೆದ ಚರ್ಚೆ)

5 ಅನುಬಂಧಗಳು 522–689

ಕರ್ನಾಟಕ ವಿಧಾನಸಭೆ

ಗುರುವಾರ 5ನೇ ಜುಲೈ 2007 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9 45 ಗಂಟೆಗೆ ಸಮಾವೇಶ ಗೊಂಡಿತು

ಅಧ್ಯಕ್ಷರು ಶ್ರೀ ಕೃಷ್ಣ ರವರು

ಪೀಠವನ್ನು ಅಲಂಕರಿಸಿದ್ದರು

1 ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ ಸದನವನ್ನು ಬೆಳಗ್ಗೆ 9 45ಕ್ಕೆ ಕರೆದಿರುವ ಬಗ್ಗೆ

(ಸಭೆಯು 9 50 ಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಇಂದು 9 45ಕ್ಕೆ ಅಧಿವೇಶನ ಕರೆದಿದ್ದು ಏಕೆ ಎಂದು ಅರ್ಥವಾಗುತ್ತಿಲ್ಲ ಯಾವತ್ತೂ ಅಧಿವೇಶನವನ್ನು 9 45ಕ್ಕೆ ಕರೆದಿಲ್ಲ 10 00 ಗಂಟೆಗೆ, 9 00 ಗಂಟೆಗೆ, 11 00 ಗಂಟೆಗೆ ಕರೆದಿದ್ದೀರಿ ಇವತ್ತು ಮೊದಲನೆಯ ದಿವಸ ನಾವು ಊರುಗಳಿಂದ ಬರಬೇಕು, ಆದರೆ ತಾವು ಇವತ್ತು ಬೆಳಿಗ್ಗೆ 9 45ಕ್ಕೆ ಅಧಿವೇಶನ ಕರೆದರೆ ಹೇಗೆ?

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ

ಶ್ರೀ ವಾಟಾಳ್‌ನಾಗರಾಜ್ ತಾವು ಅದರ ಬಗ್ಗೆ ಹೇಳಬೇಕು

ಶ್ರೀಜಿ ವಿ ಶ್ರೀರಾಮರೆಡ್ಡಿ ತಾವು ಈ ರೀತಿ ಸಿಟ್ಟು ಮಾಡಿಕೊಳ್ಳಬಾರದು

ಅಧ್ಯಕ್ಷರು ರಾಜ್ಯಪಾಲರಿಂದೇನು ಬಂದಿದೆ, ಅದರ ಪ್ರಕಾರ ಈ ಅಧಿವೇಶನವನ್ನು ಕರೆದಿದ್ದೇವೆ ಅದ್ದರಿಂದ ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ ರಾಜ್ಯಪಾಲರೇನು ಕಳುಹಿಸಿದ್ದಾರೆ ಅದರ ಪ್ರಕಾರ ನಾವು ಅಧಿವೇಶನವನ್ನು ಕರೆದಿದ್ದೇವೆ ದಯಮಾಡಿ ಕುಳಿತುಕೊಳ್ಳಬೇಕು ಇದರ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ ಈಗ ಸಂತಾಪ ಸೂಚನೆಗಳು

ಶ್ರೀ ವಾಟಾಳ್ ನಾಗರಾಜ್ 9 45ಕ್ಕೆ ಅಧಿವೇಶನವನ್ನು ಕರೆದಿದ್ದು ಏಕೆ?

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಇದರ ಬಗ್ಗೆ ಚರ್ಚೆಯ ಅಗತ್ಯವಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಇಲ್ಲಿ ಕುಳಿತುಕೊಳ್ಳಿಕ್ಕೇ ಬಂದಿರುವುದು

ಶ್ರೀ ವಾಟಾಳ್ ನಾಗರಾಜ್ ನಾವು ಕುಳಿತುಕೊಳ್ಳುತ್ತೇವೆ ತಮ್ಮ ಆಜ್ಞೆಯನ್ನು ಪಾಲಿಸುತ್ತೇವೆ 9 45ಕ್ಕೆ ಅಧಿವೇಶನವನ್ನು ಕರೆಯಲು ಕಾರಣವೇನು ಎಂದು ತಮ್ಮನ್ನು ಕೇಳುತ್ತಿದ್ದೇನೆ

ಅಧ್ಯಕ್ಷರು ರಾಜ್ಯಪಾಲರಿಂದೇನು ಬಂದಿದೆ, ಅದರ ಪ್ರಕಾರ ಈ ಅಧಿವೇಶನವನ್ನು ಕರೆದಿದ್ದೇವೆ ಅಷ್ಟನ್ನು ಬಿಟ್ಟು ನಾನು ಇನ್ನೇನನ್ನೂ ಹೇಳಲು ಸಾಧ್ಯವಿಲ್ಲ ದಯಮಾಡಿ ಕುಳಿತುಕೊಳ್ಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ರಾಜ್ಯಪಾಲರು ಸಮಯವನ್ನು ನಗದಿ ಮಾಡುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ರಾಜ್ಯಪಾಲರು ಪ್ರತಿ ಸಲ 11 00 ಗಂಟೆಗೆ ಕರೆದಿದ್ದಾರೆ 9 45ಕ್ಕೆ ಎಲ್ಲಿ ಕರೆದಿದ್ದಾರೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಬಿ ಎ ಸಿ ಸಮಿತಿಯಲ್ಲಿ 11 0 ಗಂಟೆಗೆ ಕರೆಯಬೇಕೆಂದು ತೀರ್ಮಾನ ಮಾಡುವಾಗಿ ರಾಜ್ಯಪಾಲರಿಂದ ಅನುಮತಿ ತೆಗೆದುಕೊಳ್ಳುತ್ತೀರೋ?

ಶ್ರೀ ಅರಗ ಜ್ಞಾನೇಂದ್ರ. ವಿಧಾನ ಸಭೆಯ ಅಧಿವೇಶನ ಕರೆಯದಿದ್ದರೆ ಏಕೆ ಕರೆಯಲಿಲ್ಲವೆಂದು ಹೇಳುತ್ತಾರೆ ಈಗ ಕರೆದರೆ 9 45ಕ್ಕೆ ಏಕೆ ಕರೆದಿರಿ, 11 00 ಗಂಟೆಗೆ ಕರೆಯಲಿಲ್ಲವೆಂದು ಹೇಳುತ್ತಾರೆ

(ಗೊಂದಲ)

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರೆ, ತಾವು ಹಿರಿಯ ಸದಸ್ಯರಾಗಿ ಈ ರೀತಿಯೆಲ್ಲಾ ಮಾತನಾಡಬಾರದು "ನೀವು ಇಷ್ಟ ಬಂದಂತೆ ನಡೆಸುತ್ತಿದ್ದೀರಿ" ಎನ್ನತಕ್ಕ ಮಾತುಗಳನ್ನು ಹಿರಿಯ ಸದಸ್ಯರಾದ ತಾವು ಆಡಬಾರದು

ಶ್ರೀ ವಾಟಾಳ್ ನಾಗರಾಜ್ ತಾವು ಅದರ ಬಗ್ಗೆ ಹೇಳಬೇಕು

ಅಧ್ಯಕ್ಷರು ಏನು ಹೇಳುತ್ತೀರಿ? ಸುಮ್ಮಸುಮ್ಮನೆ ಏನೇನೋ ವಿಚಾರಗಳನ್ನು ತಂದುಕೊಳ್ಳುತ್ತೀರಿ ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ 9 45ಕ್ಕೆ ಏಕೆ ಕರೆದಿರಿ ಎಂಬ ಬಗ್ಗೆ ಹೇಳಿ

ಅಧ್ಯಕ್ಷರು ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ತಾವು ಕೂರಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಇವತ್ತು ಸದನ ಪ್ರಾರಂಭವಾಗಿದೆ ಎಲ್ಲಾ ನಮ್ಮ ಹಿರಿಯ ಸದಸ್ಯರು ಕೇಳುತ್ತಿದ್ದಾರೆ ನೀವು ನಮ್ಮ ಸಹಕಾರವನ್ನು ಕೇಳುತ್ತಿದ್ದೀರಿ ಆದರೆ ನೀವೇ ಆವೇಶಕ್ಕೆ ಒಳಗಾಗಬಾರದು ನಮಗೂ ನಿಯಮಾವಳಿ ಗೊತ್ತಿದೆ ರಾಜಭವನದವರು ಕಳುಹಿಸಿದ್ದಾರೆ ಎಂಬುದಲ್ಲ ಕ್ಯಾಬಿನೆಟ್‌ನಲ್ಲಿ 9 45ಕ್ಕೆ ಮಾಡಬೇಕೆಂದು they have taken a dicision ಸಾಕಷ್ಟು ಚರ್ಚೆ ಅದರ ಬಗ್ಗೆ ಆಗಿದೆ ನಾನು ಅದರ ವಿವರ ಹೇಳಲು ಬಯಸುತ್ತಿಲ್ಲ ಕೊನೆಗೆ ನಿಮ್ಮನ್ನೂ ಕೇಳುತ್ತಾರೆ 1972 ರಿಂದ ಈ ಸದನದ ಸದಸ್ಯರಾಗಿ ಕೆಲಸ ಮಾಡುತ್ತಿದ್ದೇವೆ ಆದರೆ ಎಂದೂ ಕೂಡ ಅಧಿವೇಶನವನ್ನು ಮೊದಲ ದಿವಸ 9 45 ಕ್ಕೆ ಕರೆದಿಲ್ಲ ಇದು ರಾಜ್ಯದ ಜನರಿಗೆ ಸಂಬಂಧ ಪಟ್ಟ ಸಮಸ್ಯೆಗಳು ಯಾರೂ ವೈಯಕ್ತಿಕವಾಗಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿಲ್ಲ ಆದ್ದರಿಂದ ಅಧಿವೇಶನವನ್ನು ಮಹೂರ್ತ ನೋಡಿ ಇಡುವುದೇನಿದೆ? ಸೆಕ್ಯುಲರ್ ಬಗ್ಗೆ ಮಾತನಾಡುತ್ತೀರಿ, ದೊಡ್ಡ ದೊಡ್ಡ ವಿಚಾರಗಳನ್ನು

ಮಾತನಾಡುತ್ತೀರಿ, ಇವತ್ತು ಸದನವನ್ನು 9 45ಕ್ಕೆ ಕರೆಯಲು ಏನು ಒತ್ತಡ ನಿಮ್ಮ ಮೇಲಿತ್ತು? ನೀವು ಸಭಾಧ್ಯಕ್ಷರಾಗಿದ್ದೀರಿ ಇವತ್ತಿಗೂ ಆ ಪೀಠದಲ್ಲಿ ಮಾನ್ಯ ಬಾಳಿಗಾರ್ ಕಾಲದಿಂದ ಎಷ್ಟೋ ಮಹನೀಯರು ಕುಳಿತಿದ್ದಾರೆ ನೀವೆಲ್ಲಾ ಕೇಳಬೇಡಿ ಎಂದರೆ ಯಾರನ್ನು ಕೇಳಬೇಕು? ಸದನ 9 45ಕ್ಕೆ ಪ್ರಾರಂಭವಾಗಿದೆ ನಾನು ನಿನ್ನೆ ರಾತ್ರಿ ಕೂಡ ಫೋನ್ ಮಾಡಿದ್ದೆ

ಅಧ್ಯಕ್ಷರು ತಾವು 1972 ರಿಂದ ಈ ಸದನದ ಸದಸ್ಯರಾಗಿದ್ದೀರಿ ಮುಖ್ಯಮಂತ್ರಿ ಸ್ಥಾನದಲ್ಲೂ ಕುಳಿತಿದ್ದೀರಿ ವಿವಿಧ ಇಲಾಖೆಯ ಮಂತ್ರಿಗಳಾಗಿಯೂ ಕೆಲಸ ಮಾಡಿ ಈಗ ಈ ಸ್ಥಾನದಲ್ಲೂ ಕುಳಿತಿದ್ದೀರಿ ಇದು ಹೇಗೆ ನಡೆದುಕೊಂಡು ಬರುತ್ತದೆ ಎಂಬುದು ತಮಗೆ ಗೊತ್ತಿದೆ ರಾಜ್ಯಪಾಲರು ಕಳುಹಿಸಿದ್ದನ್ನೇ ನಾವು ಮಾಡಬೇಕಾಗುತ್ತದೆ

ಶ್ರೀ ಎನ್ ಧರ್ಮಸಿಂಗ್ ರಾಜ್ಯಪಾಲರು ಕಳುಹಿಸಿದ್ದಲ್ಲ.

ಅಧ್ಯಕ್ಷರು ನಮಗೆ ಅದರಲ್ಲಿ say ಇಲ್ಲ ತಮಗೆ ಇಷ್ಟೆಲ್ಲಾ ಅನುಭವವಿದ್ದರೂ ಸುಮ್ಮನೆ ನೀವು ನನ್ನ ಮೇಲೆ ಆರೋಪ ಮಾಡಿದರೆ ಅರ್ಥವೇನಿದೆ? ಇದು ನನಗೆ say ಇಲ್ಲ

ಶ್ರೀ ಎನ್ ಧರ್ಮಸಿಂಗ್ ನೀವು ಅಧ್ಯಕ್ಷರಾಗಿ ಸದನಕ್ಕೆ ಉತ್ತರವನ್ನು ಕೊಡಬೇಕು

ಅಧ್ಯಕ್ಷರು ಇದರ ಬಗ್ಗೆ ನಾನು ಉತ್ತರ ಕೊಡುವುದಿಲ್ಲ ಇದರಲ್ಲಿ ನಮ್ಮ say ಇಲ್ಲ

ಶ್ರೀ ಎನ್ ಧರ್ಮಸಿಂಗ್ ಮತ್ತೆ ಯಾರಿಗೆ ನಾವು ಕೇಳಬೇಕು?

ಅಧ್ಯಕ್ಷರು ನೀವು ಅದನ್ನು ಯಾರಿಗೆ ಕೇಳಬೇಕು? ನೀವು ವಿಚಾರವನ್ನು ಎತ್ತಿದ್ದೀರಿ ಇದರ ಬಗ್ಗೆ ನಿರ್ಧಾರ ಮಾಡುವುದು ಕ್ಯಾಬಿನೆಟ್ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದ್ದು Governer ಹತ್ತಿರ ಹೋಗುತ್ತದೆ Governer ರವರಿಂದ ನಮಗೆ ಬರುತ್ತದೆ ಇದಕ್ಕೆ ಏನಾದರೂ ಉತ್ತರ ಹೇಳುವುದಿದ್ದರೆ ಸರ್ಕಾರ ಹೇಳಬೇಕು ಇದರ ಬಗ್ಗೆ ನನಗೆ ಕೇಳಿದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸದನದಲ್ಲಿ ನಿಮ್ಮನ್ನು ಕೇಳದೇ ನಾವು ಮತ್ತೆ ಯಾರನ್ನು ಕೇಳಬೇಕು? ಅದಾದರೂ ಹೇಳಿ?

ಶ್ರೀ ವಾಟಾಳ್ ನಾಗರಾಜ್ 9 45 ಎಂದು ಹೇಳಿ ಸಮಯ ಕೊಟ್ಟವರು ಯಾರು? ನಿಮ್ಮದು ಸರಿಯಿಲ್ಲವೆಂದು ನಾನು 9 30ಕ್ಕೇ ಬಂದು ಕುಳಿತುಕೊಂಡೆ 9 45 ಎಂದು ಸಮಯ ಕೊಟ್ಟವರು ಯಾರು ಎಂಬ ಬಗ್ಗೆ ತಾವು ಹೇಳಬೇಕು

(ಗೊಂದಲ)

ಅಧ್ಯಕ್ಷರು ನಾನು ಸ್ಪಷ್ಟವಾಗಿ ಹೇಳಿದೆನಲ್ಲಾ, ಕ್ಯಾಬಿನೆಟ್ ತೀರ್ಮಾನ ಮಾಡಿ ರಾಜ್ಯಪಾಲರಿಗೆ ಕಳುಹಿಸುತ್ತಾರೆ ಅದನ್ನು ರಾಜ್ಯಪಾಲರು ನಮಗೆ ಕಳುಹಿಸುತ್ತಾರೆ ಅದರಂತೆ ನಾವು ಸದನವನ್ನು ಕರೆಯುತ್ತೇವೆ ಇದು ಹಿರಿಯ ಸದಸ್ಯರಾದ ತಮಗೆಲ್ಲಾ ಗೊತ್ತಿದೆ

ಶ್ರೀ ವಾಟಾಳ್ ನಾಗರಾಜ್ ರಾಜ್ಯಪಾಲರು ಸಮಯವನ್ನು ನಗದಿ ಮಾಡಿಲ್ಲ ಈ ಸಮಯವನ್ನು ಯಾರೋ ಜ್ಯೋತಿಷ್ಯರು ಮಾಡಿರಬಹುದಷ್ಟೇ ಜ್ಯೋತಿಷ್ಯಗಾರರಿಗೆ ಸದನವನ್ನು ಅಡವಿಡಲು ಸಾಧ್ಯವಾಗುವುದಿಲ್ಲ ಜ್ಯೋತಿಷ್ಯರುಗಳು ಸದನವನ್ನು ಗುಲಾಮಗಿರಿ ಮಾಡಲು ಸಾಧ್ಯವಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮೊದಲನೆಯ ದಿವಸ 11 ಗಂಟೆಗೆ ಅಧಿವೇಶನವನ್ನು ಇಡುವುದು ಸಾಮಾನ್ಯ ಆದರೆ ಮೊದಲನೆಯ ದಿವಸ 9 45ಕ್ಕೆ ಇಡತಕ್ಕದ್ದು ಅನಾನುಕೂಲ ಮಾಡಿದಂತಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈ ಸದನವನ್ನು 9 45ಕ್ಕೆ ಕರೆದಿರತಕ್ಕದ್ದು ಏನೋ ದೊಡ್ಡ ಅಪರಾಧವಾಗಲಿ, ನಿಯಮಾವಳಿಯನ್ನು ಉಲ್ಲಂಘಿಸಿ ಮಾಡಿರತಕ್ಕದ್ದಾಗಲಿ ಅಲ್ಲ ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಹಿರಿಯರೆಲ್ಲರಿಗೂ ಗೊತ್ತಿದೆ ಸದನವನ್ನು ಕರೆಯಬೇಕಾಗಿರುವ ಸಂದರ್ಭದಲ್ಲಿ ದಿನಾಂಕ ಮತ್ತು ಸಮಯವನ್ನು ನಿರ್ಧಾರ ಮಾಡಿ ಮಾನ್ಯ ರಾಜ್ಯಪಾಲರಿಗೆ ನಾವು ಕಳುಹಿಸಿಕೊಡುತ್ತೇವೆ ಆ ಪ್ರಕಾರ ರಾಜ್ಯಪಾಲರು ಯಾವ ಸಮಯಕ್ಕೆ

ಸದನವನ್ನು ಕರೆಯಬೇಕೆಂದು ತಿಳಿಸುತ್ತಾರೆ, ಆ ಪ್ರಕಾರ ತಾವು ಸಭಾಧ್ಯಕ್ಷರಾಗಿ ಈ ಅಧಿವೇಶನವನ್ನು ಕರೆದಿದ್ದೀರಿ ಇದನ್ನು ನಾವು ಸಚಿವ ಸಂಪುಟದ ಸಭೆಯಲ್ಲಿ ನಿರ್ಧಾರ ಮಾಡಿದ್ದೇವೆ 9 45 ಕ್ಕೆ ಕರೆದಿರತಕ್ಕದ್ದು ಯಾವ ದೊಡ್ಡ ಅಪರಾಧವಾಯಿತು? 9 45ಕ್ಕೂ 10 00 ಗಂಟೆಗೂ ಏನು ವ್ಯತ್ಯಾಸವಿರುತ್ತದೆ? ಅಥವಾ 11 00 ಗಂಟೆಗೂ 9 45ಕ್ಕೂ ಏನು ವ್ಯತ್ಯಾಸವಿರುತ್ತದೆ? ನಮ್ಮ ಉದ್ದೇಶವೇನೆಂದರೆ ಇಂಥ ದಿನಮಾನಗಳಲ್ಲಿ ಬಹಳ ವಿಷಯಗಳು ಚರ್ಚೆಗೆ ಬರುತ್ತಿರುತ್ತದೆ, ಆದಷ್ಟು 10 00 10 30 ಗಂಟೆಯೆಂದರೆ ತಡವಾಗಬಹುದು, ರಾತ್ರಿ 6 00, 7 00 ಗಂಟೆಯವರೆಗೆ ಕುಳಿತುಕೊಳ್ಳಲು ಅನೇಕ ಸಲ ತಯಾರಾಗುವುದಿಲ್ಲ ಆದ್ದರಿಂದ ನಾವು 9 45ಕ್ಕೆ ಕರೆದಿದ್ದೇವೆ

ಶ್ರೀ ಜಿ ಸಿ ಮಾಧುಸ್ವಾಮಿ ಎಲ್ಲವನ್ನೂ ನಿಮ್ಮ ತಲೆಯಮೇಲೆ ಎಳೆದುಕೊಳ್ಳುವ ನಿಮ್ಮ ಕರ್ಮಕ್ಕೆ ನಾವು ಹೊಣೆಯಲ್ಲ

ಶ್ರೀ ಸಿದ್ದರಾಮಯ್ಯ 9 45ಕ್ಕೆ, 10 00 ಗಂಟೆಗೆ ಕರೆದರೇನು ಎಂಬ ನಿಮ್ಮ ವಾದವನ್ನೇ ಒಪ್ಪಿಕೊಳ್ಳುವುದಾದರೆ, ಅವರು ಏಕೆ ಕೇಳುತ್ತಿದ್ದಾರೆಂದರೆ, ಮೊದಲನೆಯ ದಿವಸ ಅಧಿವೇಶನವನ್ನು ಕರೆಯುವಾಗ, ನೀವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡುವಾಗ 11 00 ಗಂಟೆಗೇ ಮಾಡ ಬಹುದಾಗಿತ್ತು 10 00ಕ್ಕೇ ಮಾಡಬಹುದಾಗಿತ್ತು 9 45ಕ್ಕೆ ಮಾಡಿದ್ದೀರಲ್ಲಾ ಏಕೆ ಮಾಡಿದ್ದೀರೆಂದು ಅವರು ಕೇಳುತ್ತಿದ್ದಾರೆ ನೀವು ಅದ್ಯಕ್ಷರು ಏಕೆ ಆ ರೀತಿ ಮಾಡಿದ್ದೇವೆಂದು ಹೇಳಿಬಿಟ್ಟರೆ ಆಯಿತು

ಅಧ್ಯಕ್ಷರು ನಾನು ಹೇಳಿದ್ದೇನಲ್ಲ ನನಗೇನು ಅದರ ಬಗ್ಗೆ ಗೊತ್ತಿದೆ?

ಶ್ರೀ ಸಿದ್ದರಾಮಯ್ಯ ಇನ್ನು ಯಾರಿಗೆ ಇದರ ಬಗ್ಗೆ ಕೇಳಬೇಕು? 10 00 ಗಂಟೆಗೇ ಕರೆದಿದ್ದರೆ ಗಂಟೇನು ಹೋಗುತ್ತಿತ್ತು? ಸರ್ಕಾರಕ್ಕೇನು ಆಗುತ್ತಿತ್ತು? ಈ ಹಿಂದೆ ಎಂದೂ 9 45ಕ್ಕೆ ಕರೆದಿರಲಿಲ್ಲ

ಶ್ರೀ ಎಂ ಪಿ ಪ್ರಕಾಶ್ 10 00 ಗಂಟೆಗೆ ಕರೆದರೂ 9 45ಕ್ಕೆ ಕರೆದರೂ ತಪ್ಪಲ್ಲ ಅದರ ನಿರ್ಧಾರ ಸರ್ಕಾರಕ್ಕೆ ಇರುತ್ತದೆ ಅದನ್ನು ರಾಜ್ಯಪಾಲರಿಗೆ ಕಳುಹಿಸಿ ಕೊಟ್ಟಿದ್ದೇವೆ

ಶ್ರೀ ಸಿದ್ದರಾಮಯ್ಯ ಇಲ್ಲಿ ಶಾಸಕರ ಅನುಕೂಲತೆಯನ್ನು ನೋಡಿ ಕರೆಯಬೇಕಲ್ಲಾ? ಮೊದಲನೆಯ ದಿವಸ ಬರುವಾಗ ಶಾಸಕರು ಸ್ವಲ್ಪ ನಿಧಾನವಾಗಿ ಬರುತ್ತಾರೆ ಅವರಿಗೆ ಅನುಕೂಲವಾಗಲಿ ಎಂದೇ ಮೊದಲನೆಯ ದಿವಸ 11 00 ಗಂಟೆಗೆ ಕರೆಯುವುದು ನೀವು ಮೊದಲನೆಯ ದಿವಸವೇ 9 45ಕ್ಕೆ ಕರೆದುಬಿಟ್ಟರೆ ಯಾರಿಗೆ ಅನುಕೂಲವಾಗುತ್ತದೆ?

ಶ್ರೀ ಎಂ ಪಿ ಪ್ರಕಾಶ್ ಈ ಚರ್ಚೆಯನ್ನು ಇಲ್ಲಿಗೇ ಬಿಟ್ಟುಬಿಡೋಣ

ಶ್ರೀ ಸಿದ್ದರಾಮಯ್ಯ ಇದು ಚರ್ಚೆಯಲ್ಲ ಇದು ಚರ್ಚೆಯಾಗುವ ವಿಚಾರವಲ್ಲ ಆದರೆ ಏಕೆ 9 45ಕ್ಕೆ ಕರೆದಿರಿ?

(ಗೊಂದಲ)

ಶ್ರೀ ಜಿ ವಿ ಶಿವರಾಮರೆಡ್ಡಿ 9 45ಕ್ಕೂ 10 00ಕ್ಕೂ ವ್ಯತ್ಯಾಸವಿಲ್ಲವೆಂದರೆ 10 00ಕ್ಕೇ ಕರೆಯಬಹುದಾಗಿತ್ತಲ್ಲ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ 9 45ಕ್ಕೆ ವಿರೋಧ ಪಕ್ಷದಿಂದ ಬರುವ ಪೀಡನೆಗಳು ಕಡಿಮೆಯಾಗುವಂಥ ಒಳ್ಳೆಯ ಮುಹೂರ್ತವೆಂದು ಕಾಣುತ್ತದೆ!

ಅಧ್ಯಕ್ಷರು ಇಲ್ಲಿಗೆ ಇದನ್ನು ನಿಲ್ಲಿಸೋಣ ಈಗ ಸಂತಾಪ ಸೂಚನೆ

ಶ್ರೀ ವಾಟಾಳ್ ನಾಗರಾಜ್ ತಾವು ಏನೂ ಹೇಳಲಿಲ್ಲ ಏನಾದರೂ ಒಂದನ್ನು ಹೇಳಿ

ಅಧ್ಯಕ್ಷರು ನಾನು ಮೊದಲೇ ಹೇಳಿದೆ ಇದನ್ನು ಸಚಿವ ಸಂಪುಟದವರು ನಿರ್ಧಾರ ಮಾಡಿ ರಾಜ್ಯಪಾಲರಿಗೆ ಕಳುಹಿಸುತ್ತಾರೆ ರಾಜ್ಯಪಾಲರು ನಮಗೆ ಏನು ಕಳುಹಿಸುತ್ತಾರೆ, ಆ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ ಅದರನ್ವಯ ನಾನು ಬುಲೆಟಿನ್ ಇಶ್ಯೂ ಮಾಡಿ ಕರೆದಿದ್ದೇನೆಂದು ಈಗಾಗಲೆ ಹೇಳಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ತಾವೂ ಮತ್ತು ಸಂಸದೀಯ ವ್ಯವಹಾರಗಳ ಸಚಿವರು 9 45ಕ್ಕೆ ಕರೆದಿದ್ದು ಏಕೆ ಎಂದು ಪ್ರಾಮಾಣಿಕವಾಗಿ ಹೇಳಿಬಿಟ್ಟರೆ ನನಗೆ ನಿಜವಾಗಿಯೂ ಸಂತೋಷವಾಗುತ್ತದೆ

ಅಧ್ಯಕ್ಷರು ಅದನ್ನು ನಾನು ಹೇಳುವ ಅಗತ್ಯವಿಲ್ಲ I am not at all a party ಇದರಲ್ಲಿ ನನ್ನ ಪಾತ್ರವೇನೂ ಇಲ್ಲ ಆದ್ದರಿಂದ ದಯಮಾಡಿ ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಜ್ಯೋತಿಷ್ಯರನ್ನು ಕೇಳಿ ಈ ಸದನ ಕರೆಯುವುದು ಸರಿಯಾದ ಕ್ರಮವಲ್ಲ ಇದನ್ನು ವಿರೋಧಿಸಿ ನಾನು ಸದನದಿಂದ ಹೊರಗಡೆ ಹೋಗುತ್ತಿದ್ದೇನೆ ನನಗೆ ಇದರಿಂದ ಬಹಳ ನೋವಾಗಿದೆ

(ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಹೊರಕ್ಕೆ ನಡೆದರು)

2 ಸಂತಾಪ ಸೂಚನೆ

ವಿಷಯ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ ವಿ ನಾಡಗೌಡ, ಶ್ರೀ ಜಿ ಅಮರೇಗೌಡ ಹಾಗೂ ಶ್ರೀ ಎಸ್ ಜಿ ರಾಮಲಿಂಗಯ್ಯ ಅವರುಗಳ ನಿಧನದ ಬಗ್ಗೆ

ಅಧ್ಯಕ್ಷರು ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ ಪಿ ನಾಡಗೌಡ, ಶ್ರೀ ಜಿ ಅಮರೇಗೌಡ ಹಾಗೂ ಶ್ರೀ ಎಸ್ ಜಿ ರಾಮ ಲಿಂಗಯ್ಯ ರವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಯಬಯಸುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು) ಮಾನ್ಯ ಅಧ್ಯಕ್ಷರೆ, ಇಂದು ಇಲ್ಲಿ ತಾವೇನು ಸಂತಾಪ ಸೂಚನೆ ತಂದಿದ್ದೀರಿ, ಅದನ್ನು ಬೆಂಬಲಿಸುತ್ತ, ಕೆ ಪಿ ನಾಡಗೌಡರೇನು 1916 ರಲ್ಲಿ ಜನಿಸಿ ಶಾಸಕರಾಗಿ, ಕೃಷಿ ಹಾಗೂ ಕೃಷಿ ಕಾರ್ಮಿಕರಾಗಿ ಹೋರಾಟ ಮಾಡುವುದರ ಜೊತೆಗೆ

ಅವರು ವಕೀಲರಾಗಿ ಮಾಡಿರುವ ಸೇವೆಯನ್ನು ಸ್ಮರಿಸುತ್ತೇನೆ ಶ್ರೀ ಅಮರೇ ಗೌಡರವರೇನು ಹಲವಾರು ಕಾರ್ಮಿಕ ಸಂಘಗಳ ಚಟುವಟಿಕೆಗಳಲ್ಲಿ ಭಾಗವಹಿಸಿ ಅವರೂ ವಕೀಲರಾಗಿ ಏನು ಸೇವೆ ಸಲ್ಲಿಸಿದ್ದಾರೆ, ರಾಮಲಿಂಗಯ್ಯನವರು ಕೃಷಿಕರಾಗಿ ಶಿಕ್ಷಣ ಕ್ಷೇತ್ರದಲ್ಲಿ ಅವರದೇ ಆದ ಸಾಧನೆಯನ್ನು ಮಾಡಿ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನೇನು ಸಲ್ಲಿಸಿದ್ದಾರೆ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ ಪಿ ನಾಡಗೌಡ, ಶ್ರೀ ಜಿ ಅಮರೇಗೌಡ ಹಾಗೂ ಶ್ರೀ ಎಸ್ ಜಿ ರಾಮಲಿಂಗಯ್ಯ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ

1 ಶ್ರೀ ಕೆ ಪಿ ನಾಡಗೌಡ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ ಪಿ ನಾಡಗೌಡ ಅವರು 1916ನೇ ಡಿಸೆಂಬರ್, 25 ರಂದು ಬೆಳಗಾಂ ಜಿಲ್ಲೆ ಆವರಡಿ ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು ಕೃಷಿ ಕಾರ್ಮಿಕರ, ಕೃಷಿಕರ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಬಗ್ಗೆ ಕಾಳಜಿಯನ್ನು ಹೊಂದಿದ್ದ ಶ್ರೀಯುತರು ಕವಿ ಚಕ್ರವರ್ತಿ ರನ್ನ ಸ್ಮಾರಕ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು ಶ್ರೀ ಯುತರು ನಾಲ್ಕು ಮತ್ತು ಐದನೇ ವಿಧಾನ ಸಭೆಗೆ ಮುಧೋಳ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು

ಶ್ರೀಯುತರು ದಿನಾಂಕ 5 05 2007 ರಂದು ನಿಧನ ಹೊಂದಿದರು

2 ಶ್ರೀ ಜಿ ಅಮರೇಗೌಡ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ ಅಮರೇಗೌಡ ಅವರು 1929 ರಲ್ಲಿ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಗದ್ರಟಗಿ ಗ್ರಾಮದಲ್ಲಿ ಜನಸಿದ್ದು ವೃತ್ತಿಯಲ್ಲಿ ವಕೀಲರಾಗಿದ್ದರು ಶ್ರೀಯುತರು ಹಟ್ಟಿ ಗೋಲ್ಡ್‌ಮೈನ್ಸ್ ಕಾರ್ಮಿಕರ ಸಂಘ ಹಾಗೂ ಮುನಿರಾಬಾದಿನ ವರ್ಕ್ ಚಾರ್ಜ್‌ಡ್ ನೌಕರರ ಸಂಘಗಳ

ಅಧ್ಯಕ್ಷರಾಗಿದ್ದರು ಹಾಗೂ "ದುಡಿಮೆ" ಎಂಬ ಪತ್ರಿಕೆಯನ್ನು ಪ್ರಪ್ರಥಮವಾಗಿ ಸಿಂಧನೂರು ತಾಲ್ಲೂಕಿನಲ್ಲಿ ಪ್ರಾರಂಭಿಸಿ ಪತ್ರಿಕೋದ್ಯಮ ಕ್ಷೇತ್ರದಲ್ಲಿಯೂ ಕಾರ್ಯನಿರ್ವಹಿಸಿದ್ದರು ಶ್ರೀಯುತರು ನಾಲ್ಕನೇ ವಿಧಾನಸಭೆಗೆ ಸಿಂಧನೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ

ಶ್ರೀಯುತರು ದಿನಾಂಕ 20 5 2007 ರಂದು ನಿಧನ ಹೊಂದಿದರು

3 ಶ್ರೀ ಎಸ್ ಜಿ ರಾಮಲಿಂಗಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್ ಜಿ ರಾಮಲಿಂಗಯ್ಯ ಅವರು 1937ನೇ ಆಗಸ್ಟ್ 13ರಂದು ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು ಚಿಕ್ಕನಾಯಕನ ಹಳ್ಳಿಯ ಯಳನಾಡು ಶ್ರೀ ಸಿದ್ಧರಾಮೇಶ್ವರ ಪ್ರೌಢಶಾಲೆಯ ಸಂಸ್ಥಾಪಕರು ಹಾಗೂ ಕಾರ್ಯದರ್ಶಿಯಾಗಿ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ

ಶ್ರೀಯುತರು ದಿನಾಂಕ 26 06 2007 ರಂದು ನಿಧನ ಹೊಂದಿದರು

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಶ್ರೀ ಕೆ ಪಿ ನಾಡಗೌಡರು ಬೆಳಗಾಂ ಜಿಲ್ಲೆಯವರಾಗಿ ಕವಿಚಕ್ರವರ್ತಿ ರನ್ನ ಸ್ಮಾರಕದ ಕಾರ್ಯದರ್ಶಿಯಾಗಿ ಸಹ ಕೆಲಸ ಮಾಡಿದ್ದಾರೆ ಸ್ವಾತಂತ್ರ್ಯ ಹೋರಾಟಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ ಶ್ರೀ ಅಮರೇ ಗೌಡರೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಟ್ರೇಡ್ ಯೂನಿಯನ್ ನಾಯಕರಾಗಿ ಸಹ ಕೆಲಸ ಮಾಡಿದ್ದಾರೆ "ದುಡಿಮೆ" ಎಂಬ ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ ಸಾಕಷ್ಟು ಪ್ರತಿಭಟನೆ ಮಾಡಿದ್ದಾರ ಕೃಷಿ ಮತ್ತು ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸಹ ಹೋರಾಟ ಮಾಡಿದ್ದಾರೆ ಶ್ರೀ ಎಸ್ ಜಿ ರಾಮಲಿಂಗಯ್ಯನವರು ವೃತ್ತಿಯಲ್ಲಿ ಕೃಷಿಕರಾಗಿದ್ದು ಚಿಕ್ಕನಾಯಕನಹಳ್ಳಿಯ ಯಳನಾಡು ಗ್ರಾಮದವರಾಗಿದ್ದಾರೆ ಅವರೂ ತಾಲ್ಲೂಕು ಅಭಿವೃದ್ಧಿಯ ಬಗ್ಗೆ ಕೆಲಸ ಕಾರ್ಯವನ್ನು ಮಾಡಿದ್ದಾರೆ ತಾಬು ಈ ಮೂವರೂ ಮಹನೀಯರ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದಕ್ಕೆ ನಾನೂ ಅನುಮೋದನೆಯನ್ನು ಕೊಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ತಾವೇನು ಮೂರು ಜನ ಮಾಜಿ ಶಾಸಕರು ನಿಧನರಾಗಿರುವ ಸೂಚನೆಯನ್ನು ತಂದಿದ್ದೀರಿ, ಅದನ್ನು ಅನುಮೋದಿಸುತ್ತ, ಮಾನ್ಯ ನಾಡಗೌಡರು ಮತ್ತು ಅಮರೇ ಗೌಡರಿಗೆ ಸಂತಾಪವನ್ನು ಸೂಚಿಸಿ ಮಾನ್ಯ ಎಸ್ ಜಿ ರಾಮಲಿಂಗಯ್ಯನವರು ನನ್ನ ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ 1983 ರಿಂದ 1985ರವರೆಗೆ ಶಾಸಕರಾಗಿದ್ದರು ಅವತ್ತು ಬಿ ಜೆ ಪಿ ಪಕ್ಷವನ್ನು ಅವರು ಪ್ರತಿನಿಧಿಸುತ್ತಿದ್ದರು, ಅವರು ಬಹಳ ಸೌಮ್ಯವಾದ ಮನುಷ್ಯ ಇಲ್ಲಿ ಒಬ್ಬರು ಶಾಸಕರು ಇದ್ದಾರೆ ಎಂಬ ಭಾವನೆ ಬಾರದ ರೀತಿಯಲ್ಲಿ ಶಾಸನ ಸಭೆಯಲ್ಲಿ, ಚಿಕ್ಕನಾಯಕನ ಹಳ್ಳಿಯ ಆಡಳಿತ ರಂಗದಲ್ಲಿ ಕೆಲಸ ಮಾಡಿದವರು ಚಿಕ್ಕನಾಯಕನಹಳ್ಳಿಯ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ಸದಸ್ಯರಾಗಿ ಬಹುಶಃ ಅವರದೇ ಆದ ಒಂದು ಛಾಪನ್ನು ಮೂಡಿಸಿದ್ದರು ಅವರು ಶಾಸನ ಸಭೆಯ ಚುನಾವಣೆಗೆ ನಿಂತಾಗ ಜನರು ಒಂದೇ ಮಾತನ್ನು ಹೇಳುತ್ತಿದ್ದರು ಮಾನ್ಯ ರಾಮಲಿಂಗಯ್ಯನವರು ಟಿ ಡಿ ಬಿ ಸದಸ್ಯರಾಗಿದ್ದಾಗ ಪ್ರತಿಯೊಂದು ಕೆಲಸ ಆಗುವ ಕಡೆ ಅವರೇ ಛತ್ರಿ ಹಿಡಿದುಕೊಂಡು ಬಂದು ನಿಂತುಕೊಳ್ಳುತ್ತಿದ್ದರು ಅಷ್ಟು ಸಭ್ಯವಾದ ಮನುಷ್ಯರು ಮನೆಯ ಕೆಲಸ ಬಿಟ್ಟು ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ಮಾಡಿಸುತ್ತಿದ್ದ ರಸ್ತೆಯಾಗಲೀ ಬೇರೆ ಕಾಮಗಾರಿಯಾಗಲೀ ಬೆಳಿಗ್ಗೆಯಿಂದ ಸಂಜೆಯವರೆಗೆ ಮೇಸ್ತ್ರಿಯ ರೀತಿ ಕೆಲಸ ಮಾಡಿದಂಥ ಒಬ್ಬ ಸರಳ ಜೀವಿ ಕೊನೆಯ ದಿವಸಗಳಲ್ಲಿ ಅವರು ಬಹಳ ಯಾತನೆಯನ್ನು ಅನುಭವಿಸಿ ತುಮಕೂರಿನಲ್ಲಿ ಮನೆ ಮಾಡಿಕೊಂಡು ಅಕಸ್ಮಾತ್ ಹೃದಯಾಘಾತದಿಂದ ತೀರಿಹೋದರು ಅವರು ಒಂದು ಶಿಕ್ಷಣ ಸಂಸ್ಥೆಯನ್ನು ನಮ್ಮ ತಾಲ್ಲೂಕಿನಲ್ಲಿ ಸ್ಥಾಪಿಸಿ ಕೊನೆಯ ದಿನಗಳಲ್ಲಿ ಅವರೇ ಮುಂದೆ ನಿಂತು ಸರ್ಕಾರಕ್ಕೆ ಅದನ್ನು ಕೊಟ್ಟರು ನನಗೆ ಇನ್ನೂ ಚೆನ್ನಾಗಿ ನೆನಪಿದೆ ಅವರೇ ನನ್ನ ಜೊತೆ ಹೇಳಿದ್ದರು ಇವೆಲ್ಲಾ ಮುಂದೆ ಒಳ್ಳೆಯ ಸ್ಥಿತಿಯಲ್ಲಿ ಉಳಿಯುವುದಿಲ್ಲ, ವಾಣಿಜ್ಯ ಕೇಂದ್ರಗಳಾಗಿಬಿಡುತ್ತದೆ, ನಮ್ಮಂತಹವರಿಗೆ ಇನ್ನು ಮುಂದಿರುವ ಶಿಕ್ಷಣ ಸಂಸ್ಥೆಗಳು ಗೌರವ ತರುವುದಿಲ್ಲ ಹಾಗಾಗಿ ಈ ಶಿಕ್ಷಣ ಸಂಸ್ಥೆಯನ್ನು ಹೇಗಾದರೂ ಮಾಡಿ ಸರ್ಕಾರಕ್ಕೆ ಕೊಡಬೇಕೆಂದು ಹೇಳಿದ್ದರು ಅಂತಹ ಹಿರಿಯರಾದ ಮನ್ಯ ರಾಮಲಿಂಗಯ್ಯನವರು ಏನು ತೀರಿ ಹೋಗಿದ್ದಾರೆ, ಅವರ ಕುಟುಂಬದವರಿಗೆ ದೇವರು ಈ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳಿ ನನ್ನ ಪಕ್ಷದ ಪರವಾಗಿ ಸಂತಾಪವನ್ನು ತಮ್ಮ ಮೂಲಕ ಸೂಚಿಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೆ, ಮೂರು ಜನ ಮಾಜಿ ಸದಸ್ಯರ ನಿಧನದ ಬಗ್ಗೆ ತಾವು ತಂದಿರತಕ್ಕ ಸಂತಾಪ ಸೂಚನಾ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ ಅವರಲ್ಲಿ ಬಹಳ ಮುಖ್ಯವಾಗಿ ದಿವಂಗತ ಅಮರೇಗೌಡರು ನನಗೆ ಕೊನೆಯ ಕಾಲದಲ್ಲಿ ಪರಿಚಯುವಾದವರಾಗಿದ್ದರು ಅವರು ರಾಯುಚೂರು ಜಿಲ್ಲೆಯಲ್ಲಿ ಕಾರ್ಮಿಕರನ್ನು ಮತ್ತು ದುಡಿಯುವ ಜನರನ್ನು ಸಂಘಟನೆ ಮಾಡಿ ಹಲವಾರು ಹೋರಾಟಗಳನ್ನು ನಡೆಸಿದಂತಹ ಒಬ್ಬ ಜನಪರವಾದಂತಹ ವ್ಯಕ್ತಿಯಾಗಿದ್ದರು ಅದರ ಜೊತೆಗೆ ಶೋಷಣೆಗೆ ಒಳಗಾದ ಜನರ ಧ್ವನಿಯನ್ನು ಸಾಮಾನ್ಯ ಜನರಿಗೆ ತಲುಪಿಸಲಿಕ್ಕೆ ಅವರು "ದುಡಿಮೆ" ಎಂಬ ಪತ್ರಿಕೆಯನ್ನು ಪ್ರಾರಂಭ ಮಾಡಿದರು ಅದನ್ನು ಬಿಡುಗಡೆ ಮಾಡಿದಂತಹ ಸಂದರ್ಭದಲ್ಲಿ ವಿದ್ಯಾರ್ಥಿ ಸಂಘಟನೆಯು ಮುಖಂಡನಾಗಿ ನಾನೂ ಕೂಡ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ ಅವರಿಗೆ ಎಷ್ಟು ಬದ್ಧತೆ ಇತ್ತು ಎಂದರೆ, ಆ ಪತ್ರಿಕೆಯ ಮುಖಾಂತರ ಸಾಮಾನ್ಯ ಜನರ ಬದುಕನ್ನು ಪ್ರತಿಬಿಂಬಿಸಬೇಕು, ಅದನ್ನು ಸರ್ಕಾರ ಮತ್ತು ಅಧಿಕಾರಸ್ಥರ ಗಮನಕ್ಕೆ ತರಬೇಕೆನ್ನುವುದು ಅವರ ಆಶಯವಾಗಿತ್ತು ಆ ಪ್ರಯತ್ನದಲ್ಲಿ ಆಪ್ರತಿಕೆ ಪ್ರಕಟವಾದ ಮೇಲೆ ಹಲವಾರು ಕೇಸ್‌ಗಳನ್ನು ಸರ್ಕಾರದ ಬೇರೆ ಬೇರೆ ಇಲಾಖೆಗಳವರು ಮತ್ತು ಇತರರು ಅವರ ಮೇಲೆ ಹಾಕಿದರು ಆದರೂ ಕೂಡ ಅವರು ಎದೆಗುಂದದೆ ಬಹಳ ಕಷ್ಟದಲ್ಲಿ ಆ ಪತ್ರಿಕೆಯನ್ನು ನಡೆಸುತ್ತಿದ್ದರು ನಂತರದ ದಿನಗಳಲ್ಲಿ ಅವರು ಆ ಪತ್ರಿಕೆಯನ್ನು ನಡೆಸಲಿಕ್ಕೆ ಸಾಧ್ಯವಾಗದೇ ಬೇರೆ ಸಂಘಟನೆಯುವರಿಗೆ ವಹಿಸಿಕೊಟ್ಟರು ಅದನ್ನು ಅವರು ಮುಂದು ವರೆಸಿಕೊಂಡು ಹೋಗುವುದಕ್ಕೆ ಎಲ್ಲಾ ರೀತಿಯಿಂದಲೂ ಅವರು ಸಹಕಾರವನ್ನು ನೀಡಿದರು ಆ ರೀತಿಯಾಗಿ ಉತ್ತರ ಕರ್ನಾಟಕ ಭಾಗದಲ್ಲಿ ದುಡಿಯುವ ಜನರ ಪರವಾಗಿ ಕೆಲಸ ಮಾಡಿದಂತಹ ಮಾಜಿ ಶಾಸಕರು ಅವರಾಗಿದ್ದರು ಅವರಿಗೆ ನನ್ನ ಮತ್ತು ನನ್ನ ಪಕ್ಷದ ಪರವಾಗಿ ಸಂತಾಪವನ್ನು ಸೂಚಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಈ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡುತ್ತೇನೆ ಮಾನ್ಯ ಕೆ ಪಿ ನಾಡಗೌಡರು, ಮಾನ್ಯ ಅಮರೇಗೌಡರು ಮತ್ತು ಮಾನ್ಯ ರಾಮಲಿಂಗಯ್ಯನವರ ನಿಧನದಿಂದ ತುಂಬಲಾರದ ನಷ್ಟವಾಗಿದೆ ಅವರ ಆತ್ಮಕ್ಕೆ ಶಾಂತಿಯನ್ನು ನಾನು

ಕೋರುತ್ತೇನೆ ಅನೇಕ ಸಾರಿ ಈ ಸದನದ ಮೂಲಕ ಒಂದು ವಿಚಾರದ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆದಿದ್ದೆ ಈ ರೀತಿಯಾಗಿ ಮಾಜಿ ಶಾಸಕರುಗಳು ನಿಧನ ಹೊಂದಿದಾಗ, ಈ ರೀತಿಯಾಗಿ ನಾವು ಕೇವಲ ಸಂತಾಪ ಸೂಚಕ ಸಭೆ ಮಾಡಿದರೆ ಸಾಲದು ಇದೊಂದು ರೀತಿಯಲ್ಲಿ ಈಗ ಅರ್ಥವನ್ನು ಕಳೆದುಕೊಳ್ಳುತ್ತಿದೆ ಸಾಮಾನ್ಯವಾಗಿ ಕೆಲವರು ಅಸು ನೀಗುತ್ತಾರೆ ಅಂತಹವರ ಬಗ್ಗೆ ಪ್ರತಿ ಸಲ ಸದನ ಆರಂಭವಾದಾಗ ನಾವು ಸಂತಾಪವನ್ನು ಸೂಚಿಸುತ್ತೇವೆ ಇಲ್ಲಿ ಒಂದು ಪುಟ ಸಂತಾಪ ಸೂಚನೆ ನಿರ್ಣಯ ಅಂಗೀಕರಿಸಿ ನಾವು ಅದನ್ನು ಅಷ್ಟಕ್ಕೇ ಮುಗಿಸುತ್ತೇವೆ ಬಹುಶಃ ಮಾಜಿ ಶಾಸಕರುಗಳು ಈಗ ಯಾವ ರೀತಿ ಇದ್ದಾರೆ? ಅವರ ಪರಿಸ್ಥಿತಿ ಏನು? ಅವರು ಹೇಗೆ ಜೀವನ ನಡೆಸುತ್ತಿದ್ದಾರೆ ಎಂಬ ಬಗ್ಗೆ ಯೋಚಿಸುತ್ತಿಲ್ಲ ಈ ಸದನದಲ್ಲಿ ದುಡಿದಂತಹ ಅನೇಕ ಮಾಜಿ ಶಾಸಕರ ಸ್ಮರಣಾರ್ಥ ಸ್ಮಾರಕ ಭವನವೊಂದನ್ನು ನಿರ್ಮಾಣ ಮಾಡಬೇಕಾಗಿದೆ ಅಲ್ಲಿ ಅವರ ಕುರಿತು ಅನೇಕ ಮಾಹಿತಿಗಳು ಇರುವಂತೆ ಮಾಡಬೇಕು ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡಿರತಕ್ಕಂಥ ಕೆಲಸಗಳು ಇತ್ಯಾದಿ ಪ್ರತಿಯೊಂದರ ಬಗ್ಗೆ ವಿವರಗಳು ಅಲ್ಲಿರುವಂತೆ ಮಾಡಬೇಕು ಅವರ ಜೀವನ ಭದ್ರತೆಗಾಗಿ ಏನಾದರೂ ಅನುಕೂಲ ಮಾಡತಕ್ಕ ವ್ಯವಸ್ಥೆ ಮಾಡಬೇಕು ಅವರ ಮನೆಯವರು ಮತ್ತು ಮಕ್ಕಳು ಯಾವ ಪರಿಸ್ಥಿತಿಯಲ್ಲಿದ್ದಾರೆ ಎಂಬ ಬಗ್ಗೆ ನಾವು ಗಮನ ಹರಿಸುತ್ತಿಲ್ಲ ಇನ್ನೊಂದು ವಿಚಾರವನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ ತಮ್ಮ ವಿಶ್ರಾಂತಿ ವೇತನಕ್ಕಾಗಿ ಕಾದು, ಆ ಹಣವನ್ನು ಪಡೆದೇ ಜೀವನ ನಡೆಸುತ್ತಿರುವ ಹಲವಾರು ಸ್ನೇಹಿತರನ್ನು ನಾನು ನೋಡಿದ್ದೇನೆ ಅವರು ಅಷ್ಟೊಂದು ತೊಂದರೆಯಲ್ಲಿದ್ದಾರೆ ಈ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ ಈ ಬಗ್ಗೆ ಎಲ್ಲೋ ಒಂದು ಕಡೆ ತಾವು ಎಲ್ಲರನ್ನೂ ಕರೆದು ಮಾತನಾಡಬೇಕಾಗುತ್ತದೆ ತಾವು ಎಲ್ಲಾ ಪಕ್ಷದವರನ್ನು ಸೇರಿಸಿ ಇದಕ್ಕಾಗಿ ತಮ್ಮ ಅಧ್ಯಕ್ಷತೆಯಲ್ಲಿ ಸದನ ಸಮಿತಿ ಯೊಂದನ್ನು ರಚಿಸಿ ತಾವು ಎಲ್ಲರನ್ನೂ ಕರೆದು ಮಾತನಾಡಿ, ಮುಂದೆ ಯಾವ ರೀತಿಯಾಗಿ ಮಾಜಿ ಶಾಸಕರಿಗೆ ಅನುಕೂಲ ಮಾಡಬಹುದು ಎಂದು ಯೋಚಿಸಿ ಅವರಿಗೆ ಏನಾದರೂ ಒಂದು ಇಡಿಗಂಟನ್ನು ಮುಡಿಪಾಗಿಟ್ಟು, ಅದನ್ನು ಅವರಿಗೆ ಅಥವಾ ಅವರ ಕುಟುಂಬದವರಿಗೆ ನೀಡಿ ಅವರಿಗೆ ಅನುಕೂಲ ಮಾಡತಕ್ಕದ್ದು ಸೂಕ್ತ ನಾನು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಸಹ ತರುತ್ತಿದ್ದೇನೆ ಈ ಮೂಲಕ ಅನೇಕ ಮಾಜಿ ಶಾಸಕರಿಗೆ ನಾವು ಸಹಾಯವನ್ನು

ಮಾಡಬಹುದು ಮಾಜಿ ಶಾಸಕರುಗಳ ಬಗ್ಗೆ ನಾವು ಗಮನ ಹರಿಸುತ್ತಿಲ್ಲ ಮಾಜಿ ಶಾಸಕರುಗಳನ್ನು ತೀರಾ ಕಡೆಗಣಿಸಿರುವಂತಹ ಪರಿಸ್ಥಿತಿ ಈಗ ನಿರ್ಮಾಣವಾಗಿದೆ ಅವರ ಆರೋಗ್ಯದ ಬಗ್ಗೆ ಚಿಂತನೆ ಮಾಡಿದಾಗ ಬಹಳ ನೋವಾಗುತ್ತದೆ ಅವರಲ್ಲಿ ಕೆಲವರದು ಕಣ್ಣೀರಿನ ಕಥೆಯೇ ಆಗಿದೆ ಅವರ ಮನೆಯುವರು ಮತ್ತು ಮಕ್ಕಳು ತೀರಾ ಕಣ್ಣೀರಿನಲ್ಲಿ ಕೈ ತೊಳೆಯುತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ ದಯಮಾಡಿ ತಾವು ಈ ಒಂದು ಸದನ ಮುಗಿಯುವುದ ರೊಳಗಾಗಿ ಈ ಬಗ್ಗೆ ಗಮನ ಹರಿಸಬೇಕು ತಾವು, ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಸಂಸದೀಯ ಸಚಿವರು, ನಮ್ಮೆಲ್ಲರನ್ನೂ ಕರೆಸಿ, ಕುಳಿತುಕೊಂಡು ಮಾತನಾಡಿ ಮಾಜಿ ಶಾಸಕರಿಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಏನು ಮಾಡಬೇಕು? ಇವರ ಬಗ್ಗೆ ಒಂದು ಸ್ಮಾರಕ ನಿರ್ಮಾಣ ಮಾಡುವುದಕ್ಕೆ ಏನು ಮಾಡಬೇಕು ಎಂದು ಯೋಚಿಸಬೇಕು ಇಲ್ಲದಿದ್ದರೆ ಈ ರೀತಿ ಸಂತಾಪ ಮಾಡಿ, ಒಂದು ನಿಮಿಷ ಮೌನವನ್ನಾಚರಿಸಿದ್ದಕ್ಕೆ ಬೆಲೆ ಇರುವುದಿಲ್ಲ ಇತ್ತೀಚಿನ ದಿನಗಳಲ್ಲಿ ಈ ರೀತಿ ಸಂತಾಪ ಅರ್ಪಿಸುತ್ತಿರುವುದು ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ ಈ ರೀತಿಯಾಗಿ ಇದು ಅರ್ಥ ಕಳೆದುಕೊಳ್ಳದ ರೀತಿಯಲ್ಲಿ ಇದಕ್ಕೊಂದು ಶಕ್ತಿ ಬರುವ ರೀತಿಯಲ್ಲಿ ತಾವು ಮಾಡಬೇಕು ಈ ಮೃತ ಗಣ್ಯರ ಆತ್ಮಕ್ಕೆ ಶಾಂತಿ ದೊರಕಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, ಕಳೆದ ಬಜೆಟ್ ಅಧಿವೇಶನ ಮತ್ತು ಈ ಅಧಿವೇಶನದ ನಡುವೆ ನಮ್ಮನ್ನು ಅಗಲಿರುವ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದಕ್ಕೋಸ್ಕರ ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಧ್ವನಿಯನ್ನು ಸೇರಿಸುತ್ತೇನೆ ಈ ಸದನದ ಮಾಜಿ ಸದಸ್ಯರಾಗಿದ್ದಂತಹ ಮಾನ್ಯ ಕೆ ಪಿ ನಾಡಗೌಡರು, ಮಾನ್ಯ ಜಿ ಅಮರೇಗೌಡರು ಮತ್ತು ಮಾನ್ಯ ಎಸ್ ಜಿ ರಾಮಲಿಂಗಯ್ಯನವರು ನಮ್ಮನ್ನು ಅಗಲಿದ್ದಾರೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಎಸ್ ಜಿ ರಾಮಲಿಂಗಯ್ಯನವರು ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ 7ನೇ ವಿಧಾನಸಭೆಗೆ ಭಾರತೀಯ ಜನತಾಪಕ್ಷದ ಪ್ರತಿನಿಧಿಯಾಗಿ ಚುನಾಯಿತರಾಗಿದ್ದರು ವೃತ್ತಿಯಿಂದ ಕೃಷಿಕರಾಗಿದ್ದ ರಾಮಲಿಂಗಯ್ಯನವರು ಯಳನಾಡು ಶ್ರೀ ಸಿದ್ದರಾಮೇಶ್ವರ ಪ್ರೌಢಶಾಲೆಯನ್ನು ಸ್ಥಾಪಿಸುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ಅವರದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದರು

ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿಯೂ ಅವರು ತಮ್ಮ ಸೇವೆಯನ್ನು ಕಾರ್ಯ ನಿರ್ವಹಿಸಿದ್ದರು ಅತ್ಯಂತ ಪ್ರಾಮಾಣಿಕರಾಗಿ ತಮ್ಮ ಜೀವನದುದ್ದಕ್ಕೂ ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಂತಹ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ ಹಾಗೆಯೇ ಬೆಳಗಾವಿ ಜಿಲ್ಲೆ ಅವರಡಿ ಗ್ರಾಮದಲ್ಲಿ 1916ನೇ ಡಿಸೆಂಬರ್, 25ರಂದು ಜನಿಸಿದ ಮಾನ್ಯ ನಾಡಗೌಡರು ಜನಪ್ರಿಯ ವಕೀಲರಾಗಿದ್ದರು ಮತ್ತು ಎರಡು ಅವಧಿಗೆ ವಿಧಾನಸಭೆಯ ಸದಸ್ಯರಾಗಿ ಮುಧೋಳ ಕ್ಷೇತ್ರದಿಂದ ಆಯ್ಕೆಯಾಗಿದ್ದರು ಕೃಷಿಕರ ಮತ್ತು ಕೃಷಿ ಕಾರ್ಮಿಕರ ಬಗ್ಗೆ ಕಳಕಳಿ ಇದ್ದಂತಹ ಹಿರಯರಾಗಿದ್ದರು ಮಾನ್ಯ ಅಮರೇಗೌಡರವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ 4ನೇ ವಿಧಾನ ಸಭೆಗೆ ಸಿಂಧನೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು ವಕೀಲರಾಗಿ ತಮ್ಮದೇ ಆದಂತಹ ಒಂದು ಸೇವೆಯನ್ನು ಸಲ್ಲಿಸಿದ್ದಂತಹ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ ಈ ಮೂವರು ಮಹನೀಯರು ಸಾರ್ವಜನಿಕ ಬದುಕಿನಲ್ಲಿ ತಮ್ಮದೇ ಆದಂತಹ ವಿಶಿಷ್ಟ ಛಾಪನ್ನು ಬಿಟ್ಟು ಹೋಗಿದ್ದಾರೆ ಅವರುಗಳ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿ, ಸನ್ಮಾನ್ಯ ಸಭಾಧ್ಯಕ್ಷರು ತಂದಿರುವಂತಹ ನಿರ್ಣಯಕ್ಕೆ ನನ್ನ ಧ್ವನಿಗೂಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಮೃತರ ಗೌರವಾರ್ಥ ಸದನದ ಗೌರವಾನ್ವಿತ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ

(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಮೌನ ವನ್ನಾಚರಿಸಿತು)

ಸದನವು ಅಂಗೀಕರಿಸಿರುವ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು

3 ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ ಹಕ್ಕುಚ್ಯುತಿ ನಿರ್ಣಯದ ಮಂಡನೆ ಚರ್ಚೆಗೆ ಅವಕಾಶ ಕೋರಿಕೆ

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಅಧ್ಯಕ್ಷರೆ, ನಾನು ಹಕ್ಕುಚ್ಯುತಿ ಮಂಡನೆಗಾಗಿ ಸೂಚನೆಯೊಂದನ್ನು ತಮಗೆ

ಕಳುಹಿಸಿಕೊಟ್ಟಿದ್ದೇನೆ, ಆ ವಿಚಾರದಲ್ಲಿ ದಯವಿಟ್ಟು ತಾವು ಪರಿಶೀಲನೆ ಮಾಡಬೇಕಾಗುತ್ತದೆ

ಅಧ್ಯಕ್ಷರು ತಾವು ಆ ಸೂಚನೆಯನ್ನು ಕೊಟ್ಟಿದ್ದೀರಾ?

ಶ್ರೀ ದಿನೇಶ್ ಗುಂಡೂರಾವ್ ಕಾರ್ಯದರ್ಶಿಗಳಿಗೆ ಅದನ್ನು ಕೊಟ್ಟಿದ್ದೇನೆ

ಅಧ್ಯಕ್ಷರು ತಾವು ಕೊಟ್ಟಿದ್ದಲ್ಲಿ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಅದನ್ನು ಪ್ರಸ್ತಾಪಿಸಲಿಕ್ಕೆ ತಾವು ನನಗೆ ಇವತ್ತೇ ಅವಕಾಶ ಮಾಡಿಕೊಡಬೇಕು ನಮ್ಮ ತಂದೆಯವರ ಮೇಲೆ, ನನ್ನ ಮೇಲೆ ಹಾಗೂ ನಮ್ಮ ತಾಯಿಯವರ ಮೇಲೆ ನಿನ್ನೆ 'ಈ ಸಂಜೆ' ದಿನಪತ್ರಿಕೆಯಲ್ಲಿ ಸುದ್ದಿಯೊಂದು ಪ್ರಕಟವಾಗಿದೆ ನಾವು ಭೂ ಕಬಳಿಕೆ ಮಾಡಿದ್ದೇವೆಂದು ಎ ಟಿ ರಾಮಸ್ವಾಮಿ ಅಧ್ಯಕ್ಷತೆಯ ಸಮಿತಿ ಹೇಳಿದೆ ಎಂದು ಅದರಲ್ಲಿ ವರದಿಯಾಗಿದೆ ಏನೋ ಒಂದು ರೀತಿಯಲ್ಲಿ ತಮ್ಮ ತೇಜೋವಧೆ ಮಾಡತಕ್ಕ ಪ್ರಯತ್ನ ನಡೆದಿದೆ ಅದರ ಬಗ್ಗೆ ಪ್ರಸ್ತಾಪಿಸಲು ದಯವಿಟ್ಟು ತಾವು ನನಗೆ ಅವಕಾಶ ಕೊಡಬೇಕು

ಅಧ್ಯಕ್ಷರು ತಾವು ಕೊಟ್ಟಿರುವ ಸೂಚನೆ ನನ್ನ ಗಮನಕ್ಕೆ ಬಂದಿಲ್ಲ ಅದು ನನ್ನ ಗಮನಕ್ಕೆ ಬಂದ ಮೇಲೆ ಅದನ್ನು ಪರಿಶೀಲಿಸಿ, ತಮಗೆ ಪ್ರಸ್ತಾಪಿಸಲು ನಾನು ಅವಕಾಶ ಮಾಡಿಕೊಡುತ್ತೇನೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ದಿವಂಗತ ಗುಂಡೂರಾವ್ ರವರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ ದಿನೇಶ್ ಗುಂಡೂರಾವ್‌ರವರು ಅವರ ಪುತ್ರರಾಗಿದ್ದಾರೆ ಅವರ ತಂದೆ ಮೇಲೆ, ಅವರ ಅಮ್ಮನ ಮೇಲೆ ಇವತ್ತಿನ ದಿವಸ ಆಪಾದನೆ ಬಂದಿದೆ ಆ ಬಗ್ಗೆ ತಮ್ಮ ಹಕ್ಕುಚ್ಯುತಿಯಾಗಿದೆ ಎಂದು ಸದನದಲ್ಲಿ ಪ್ರಸ್ತಾಪಿಸಲು ಅವರು ತಮಗೆ ಸೂಚನೆಯೊಂದನ್ನು ಕೊಟ್ಟಿದ್ದಾರೆ ಅದಕ್ಕೆ ತಾವು ಹೆಚ್ಚಿನ ರೀತಿಯಲ್ಲಿ ಗೌರವ ಮತ್ತು ಪ್ರಾಧಾನ್ಯತೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಅವರ ಅನಿಸಿಕೆಗಳನ್ನು ತಾವು ಕೇಳಬೇಕು

ಅಧ್ಯಕ್ಷರು ಕೇಳೋಣ

ಶ್ರೀ ಧರ್ಮಸಿಂಗ್ ಈಗಾಗಲೇ ಅವರು ಕಾರ್ಯದರ್ಶಿಯವರಿಗೆ ಆ ಬಗ್ಗೆ ಸೂಚನೆಯನ್ನು ಕೊಟ್ಟಿದ್ದಾರೆ ಅದಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು ಮಾನ್ಯ ಸದಸ್ಯರು ಸೂಚನೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ ಅದು ಕಾರ್ಯದರ್ಶಿಗಳ ಬಳಿ ಇರಬಹುದು ಅದನ್ನು ನೋಡಿ, ಪರಿಶೀಲಿಸಿ ನಾನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತೇನೆ

ಶ್ರೀ ಧರ್ಮಸಿಂಗ್ 'ಈ ಸಂಜೆ' ಪತ್ರಿಕೆಯಲ್ಲಿ ಗುಂಡೂರಾವ್ ಬಗ್ಗೆ ಪ್ರಕಟವಾಗಿರುವ ಬಗ್ಗೆ ಅವರಿಗೆ ನೋವು ಉಂಟಾಗಿದೆ ಅವರಿಗೆ ಅದನ್ನು ಪ್ರಸ್ತಾಪಿಸಲು ತಾವು ಇವತ್ತೇ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು ಆಯಿತು, ಪರಿಶೀಲಿಸಿ ಇವತ್ತೇ ಅದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ

4 ಕಾರ್ಯದರ್ಶಿಯವರ ವರದಿ

ಅಪರ ಕಾರ್ಯದರ್ಶಿ ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲಕರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಸಭೆಯ ಮುಂದಿಡಲಾದ ಕಾಗದಪತ್ರಗಳು ಮೊದಲನೇ ಪಟ್ಟಿ

5 ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಅವರು,

<u>1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3) ರ ಪ್ರಕರಣದ ಮೇರೆಗೆ.</u>

1 1947 ರ ಕರ್ನಾಟಕ ನಾಗರೀಕ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿ 2ಕ್ಕೆ ತಿದ್ದುಪಡಿ

ಮಾಡಿ ದಿನಾಂಕ 27 04 2007 ರಂದು ಹೊರಡಿಸಲಾದ ಡಿಪಿಎಆರ್ 28 ಎಸ್‌ಎಸ್‌ಆರ್ 2006ನೇ ಸಂಖ್ಯೆಯ ಅಧಿಸೂಚನೆ

2 1997 ರ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) (3ನೇ ತಿದ್ದುಪಡಿ) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 02 05 2007 ರಂದು ಹೊರಡಿಸಲಾದ ಡಿಪಿಎಆರ್ 82 ಎಸ್‌ಆರ್‌ಆರ್ 2006ನೇ ಸಂಖ್ಯೆಯ ಅಧಿಸೂಚನೆ

ಹಾಗೂ

3 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸೂಚಿ II ಕ್ಕೆ ತಿದ್ದುಪಡಿ ಮಾಡಿ ದಿನಾಂಕ 04 05 2007 ರಂದು ಹೊರಡಿಸಲಾದ ಡಿಪಿಎಆರ್ 12 ಎಸ್‌ಡಿಇ 2006ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು) ಅವರು,

1965 ರ ಕರ್ನಾಟಕ ಅಬಕಾರಿ ಕಾಯ್ದೆ 71(4) ರ ಪ್ರಕರಣದ ಮೇರೆಗೆ

1 1967ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳ ನಿಯಮ 4ಎ ನಂತರ 4ಬಿ ಮತ್ತು 4ಸಿ ಯನ್ನು ಸೇರ್ಪಡೆಗೊಳಿಸಿ ದಿನಾಂಕ 04 05 2007 ರಂದು ಹೊರಡಿಸಲಾದ ಎಫ್‌ಡಿ 23 ಪಿಇಎಸ್ 2006(1) ನೇ ಸಂಖ್ಯೆಯ ಅಧಿಸೂಚನೆ

2 1968ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ವೈನ್ ತಯಾರಿಕೆ) ನಿಯಮಗಳ ಹೊಸ ನಿಯಮ 6ಎ ನಂತರ 6ಬಿ ಮತ್ತು 6ಸಿ ಯನ್ನು ಸೇರ್ಪಡೆಗೊಳಿಸಿ ದಿನಾಂಕ 04 05 2007 ರಂದು ಹೊರಡಿಸಲಾದ ಎಫ್‌ಡಿ 23 ಪಿಇಎಸ್ 2006(2) ನೇ ಸಂಖ್ಯೆಯ ಅಧಿಸೂಚನೆ

3 1967ರ ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳ ಹೊಸ ನಿಯಮ 3ಎ ನಂತರ 3ಬಿ ಮತ್ತು 3ಸಿ ಯನ್ನು ಸೇರ್ಪಡೆಗೊಳಿಸಿ ದಿನಾಂಕ 04 05 2007ರಂದು ಹೊರಡಿಸಲಾದ ಎಫ್‌ಡಿ 23 ಪಿಇಎಸ್ 2006(3) ನೇ ಸಂಖ್ಯೆಯ ಅಧಿಸೂಚನೆ

4 1967ರ ಕರ್ನಾಟಕ ಅಬಕಾರಿ (ಡೀನೇಚರ್ಡ್ ಸ್ಪಿರಿಟ್ ಮತ್ತು ಡೀನೇಚರ್ಡ್ ಸ್ಪಿರಿಶ್ಯುಯಸ್ ಪ್ರಿಪರೇಷನ್) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 25 05 2007 ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007(1) ನೇ ಸಂಖ್ಯೆಯ ಅಧಿಸೂಚನೆ

5 1967ರ ಕರ್ನಾಟಕ ಅಬಕಾರಿ (ಸಾಮಾನ್ಯ ಷರತ್ತುಗಳು) ನಿಯಮಗಳ ನಿಯಮ 17 (ಬಿ)ಗೆ ತಿದ್ದುಪಡಿ ಮಾಡಿ ದಿನಾಂಕ 25 05 2007 ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007(2) ನೇ ಸಂಖ್ಯೆಯ ಅದಿಸೂಚನೆ

6 1990ರ ಕರ್ನಾಟಕ ಅಬಕಾರಿ (ಪರ್ಮಿಟ್ ಫೀ) ನಿಯಮಗಳ ನಿಯಮಗಳನ್ನು ನಿರಸನಗೊಳಿಸಿರುವ ಬಗ್ಗೆ ದಿನಾಂಕ 25 05 2007 ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007(3) ನೇ ಸಂಖ್ಯೆಯ ಅಧಿಸೂಚನೆ

ಹಾಗೂ

7 1968 ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು)ನಿಯಮಗಳ ನಿಯಮ 2, 2–ಎಡಿ ಮತ್ತು 2–ಎಇ, 2–ಎಎಫ್‌ಗೆ ತಿದ್ದುಪಡಿ ಮಾಡಿ ಹಾಗೂ 2ಬಿ, 2ಸಿ, 2ಡಿ, 2ಇ, 3ಬಿ, ಅನುಸೂಚಿ ಬಿ ಮತ್ತು ಅನುಸೂಚಿ ಸಿ ಯನ್ನು ಬಿಟ್ಟು ಬಿಡುವ ಬಗ್ಗೆ ದಿನಾಂಕ 25 05 2007 ರಂದು ಹೊರಡಿಸಲಾದ ಎಫ್‌ಡಿ 3 ಪಿಇಎಸ್ 2007 (4) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರುಗಳು) ಅವರು,

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ರ ಪ್ರಕರಣದ ಮೇರೆಗೆ

ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಸೈನ್, ಬೆಂಗಳೂರು ಇವರ ಜಂಖಾನಾದಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸುವುದಕ್ಕೆ ಸಂಬಂಧಪಟ್ಟಂತೆ ಅನುಮತಿ ನೀಡಿ ದಿನಾಂಕ 26 04 2007 ರಂದು ಹೊರಡಿಸಲಾದ ಹೆಚ್‌ಡಿ 18 ಸಿಇನ್‌ಎ 2006ನೇ ಸಂಖ್ಯೆಯ ಆದೇಶವನ್ನು ಮಂಡಿಸುತ್ತೇನೆ

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ ಶ್ರೀ ಎಂ ಪಿ ಪ್ರಕಾಶ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂದಗಳು) ಗೆ ಸಂಬಂಧಿಸಿದಂತೆ ಹೊರಡಿಸಲಾದ ಸಂವ್ಯಶಾಇ 26 ಶಾಸನ 2007 ದಿನಾಂಕ 22 06 2007ರ ಅಧ್ಯಾದೇಶ ಸಂಖ್ಯೆ 1ನ್ನು ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾಗಿರುವ ಅನಾಹುತದ ಬಗ್ಗೆ

6 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎನ್ ಧರ್ಮಸಿಂಗ್ (ಮಾನ್ಯ ವಿರೋಧಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ ನಿಲುವಳಿ ಸೂಚನೆ ಬಗ್ಗೆ ಚರ್ಚೆ ಆಗಲೇ ಬೇಕು ರಾಜ್ಯಕ್ಕೆ, ರಾಜ್ಯದ ಜನತೆಗೆ ಮತ್ತು ರೈತರಿಗೆ ಸಂಬಂಧಪಟ್ಟಂತೆ ಇತ್ತೀಚಿನ ದಿವಸಗಳಲ್ಲಿ ಪ್ರಕೃತಿ

ವಿಕೋಪದಿಂದ ಏನು ಅನಾಹುತ ಆಗಿದೆ, ಅದರ ಬಗ್ಗೆ ಚರ್ಚೆ ಆಗಬೇಕೆಂದು ನಾವು ವಿರೋಧ ಪಕ್ಷದವರೆಲ್ಲರೂ ಒಗ್ಗಟ್ಟಾಗಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ ತಾವು ಅದಕ್ಕೆ ಅನುವು ಮಾಡಿಕೊಡಬೇಕು ಪ್ರಾರಂಭದಲ್ಲಿ ನಾನು ಅದರ ಬಗ್ಗೆ submission ಮಾಡುತ್ತೇನೆ ಚರ್ಚೆ ಆಗಬೇಕು

ಅಧ್ಯಕ್ಷರು· ವಿತ್ತೀಯ ಕಾರ್ಯಕಲಾಪಗಳು ಮಂಡನೆಯಾಗಲಿ ನಂತರ ಅವಕಾಶ ಕೊಡುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಏಕೆ ಕಳುಹಿಸಿದ್ದೇವೆಂದು ಹೇಳಬೇಕು ನೀವು ಹೋಗಿ ಎರಡು ದಿವಸ ತಿರುಗಾಡಿ ಬಂದು ಏನೂ ಕೆಲಸ ಆಗುವುದಿಲ್ಲವೆಂದು ಹೇಳಿದ್ದೀರಿ ನೀವೇ ಅವಕಾಶ ಕೊಡುವುದಿಲ್ಲ? ಎರಡು ದಿವಸಗಳ ಮಳೆ ಅನಾಹುತ ಏನಾಗಿದೆ, 22 ಮತ್ತು23 ನೇ ತಾರೀಖು ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಮಂಗಳೂರು ಜಿಲ್ಲೆಯಲ್ಲಿ ಬಹಳಷ್ಟು ಅನಾಹುತವಾಗಿದೆ ರಾಜ್ಯದ ಯಾವೊಬ್ಬ ಮಂತ್ರಿಗಳು ಕೂಡ ಅಲ್ಲಿ ಹೋಗಿ ಭೇಟಿ ನೀಡಿಲ್ಲ ನಾನು ನನ್ನ ದೆಹಲಿಯ ಪ್ರವಾಸವನ್ನು ಕಡಿತಗೊಳಿಸಿ ಹೋಗಿದ್ದೆ ತದನಂತರ ಮಾನ್ಯ ದರ್ಶನಾಪುರ್‌ರವರು ಕೂಡ ಬಂದು ಹೋಗಿದ್ದಾರೆ ಇವತ್ತು ನಿನ್ನೆ ಮಾನ್ಯ ಎಂ ಪಿ ಪ್ರಕಾಶ್‌ರವರು ಬರದಬಗ್ಗೆ ಎಲ್ಲ ಕಡೆ ಅನಾಹುತ ಆಗುತ್ತಿದೆ ಅದರ ಉಸ್ತುವಾರಿ ಅಧ್ಯಕ್ಷರು ಕೂಡ ಆಗಿದ್ದಾರೆ ಅವರೂ ಕೂಡ ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ ಪತ್ರಿಕಾ ಹೇಳಿಕೆಯಲ್ಲಿ ಏನು ಕೊಟ್ಟಿದ್ದಾರೆ, ನಾವು ಕೇಂದ್ರ ಸರ್ಕಾರಕ್ಕೆ ಹೋಗಿ ಏನು ಅನಾಹುತವಾಗಿದೆ, ಏನು ಸಹಾಯ ಬೇಕಾಗಿದೆ, ಅದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಮೊರೆ ಹೋಗುತ್ತೇವೆ ಎನೆನತಕ್ಕಂತಹ ಮಾತನ್ನು ಅವರು ಹೇಳಿದ್ದಾರೆ ಮತ್ತೆ ಅದರಲ್ಲಿ ಅವರು ಏನು ಹೇಳಿದ್ದಾರೆ, 124 ಕೋಟಿ ರೂಪಾಯಿ ಕೇಂದ್ರದಿಂದ ಬರತಕ್ಕಂತಹ ಹಣವನ್ನು ಕೂಡ ಕೇಳಬೇಕಾಗಿದೆ ಅದೂ ಕೂಡ ಬಂದಿಲ್ಲವೆಂದು ಅವರು ಹೇಳಿದ್ದಾರೆ ಇವತ್ತು ರಾಜ್ಯದಲ್ಲಿ ರೈತರ ಸಾಲ ಮನ್ನ ಮಾಡುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಇಡೀ ರಾಜ್ಯದಲ್ಲಿ ವಿಕಾಸ ಯಾತ್ರೆ ಮಾಡುವುದರ ಮುಖಾಂತರ ಘೋಷಣೆ ಮಾಡಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು 58 ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರ ಯಾವ ಕೆಲಸ ಮಾಡಲಿಲ್ಲ, ಸಮ್ಮಿಶ್ರ ಸರ್ಕಾರ ಆ ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ ಉಳ್ಳಾಲದಲ್ಲಿ ಏನು ಡೆಪಾಸಿಟ್ ಹೋಯಿತು ಆ ಘಟನೆ ಆಗುತ್ತದೆ ನಾನು ವಿವರಗಳ ಬಗ್ಗೆ ಹೋಗುವುದಿಲ್ಲ ಅಂಕಿ ಅಂಶಗಳ

ಮುಖಾಂತರ ಸರ್ಕಾರ ಎಲ್ಲಿ ಎಡವಿದೆ, ಎಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದೀರಿ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ ಹೋದ ಅಧಿವೇಶನದಲ್ಲಿ ಬರದ ಬಗ್ಗೆ ಚರ್ಚೆಯಾಯಿತು ಬರದ ಬಗ್ಗೆ ಚರ್ಚೆ ಆದಾಗ ಪ್ರತಿ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಕಂದಾಯ ಮಂತ್ರಿಗಳು ಹೇಳಿದರು ಇವತ್ತು Taskforce ಕಮಿಟಿಗಳನ್ನು ಮಾಡಿದ್ದೀರಿ ಅದರ ಮುಖಾಂತರ ಕೆಲಸ ಆಗುತ್ತಿದೆ ನಾವು ಆ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಂತ ಕೆಲಸಗಳನ್ನು ಈಗಿನ ಸರ್ಕಾರ ಎಲ್ಲಿಯೂ ಕೂಡ ಅನುಷ್ಠಾನ ಮಾಡಿಲ್ಲ ಮಾನ್ಯ ವೀರಕುಮಾರ್ ಪಾಟೀಲ್‌ರವರು ವಿಧಾನ ಪರಿಷತ್ತಿನಲ್ಲಿ ಕೇಳಿದಂತಹ ಪ್ರಶ್ನೆಗೆ ಅವರು ಏನು ಹೇಳಿದ್ದಾರೆ, 494 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ ಅದರಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿದ್ದು ಬಹಳಷ್ಟು ಕಡಿಮೆ ಇದೆ 260 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ National Calamity Relief Fund and State Calamity Relief Fund ಎಂದು ಎರಡು ಫಂಡ್‌ಗಳು ಇವೆ National Calamity Relief Fund 2005-06 ರಲ್ಲಿ 358 ಕೋಟಿ ರೂಪಾಯಿ ಕೇಂದ್ರದವರು ಕೊಟ್ಟಿದ್ದಾರೆ, 2006-07 ರಲ್ಲಿ ಕೇಂದ್ರ ಸರ್ಕಾರ 384 ಕೋಟಿ ರೂಪಾಯಿಗಳನ್ನು ಕೊಟ್ಟಿದೆ Agriculture Ministry ಯಿಂದ ಕೇಂದ್ರ ಸರ್ಕಾರ ಕೊಟ್ಟಿರುವುದು 361 ಕೋಟಿ ರೂಪಾಯಿ ಒಟ್ಟಾರೆ 1103 ಕೋಟಿ ರೂಪಾಯಿಗಳು ಕೇಂದ್ರದಿಂದ ಬಂದಿವೆ ವಿದರ್ಭ ಪ್ಯಾಕೇಜ್ ಬೇರೆ ವಿದರ್ಭ ಪ್ಯಾಕೇಜ್‌ನಲ್ಲಿ 2690 ಕೋಟಿ ರೂಪಾಯಿ ಕೊಟ್ಟರೂ ಕೂಡ ರೇವಣ್ಣನವರ ಅಧ್ಯಕ್ಷತೆಯಲ್ಲಿ ಏನು ಸಬ್ ಕಮಿಟಿ ಇದೆ, ಇವತ್ತು ಅಲ್ಲಿ ಈಶ್ವರಪ್ಪನವರು ನೀರಾವರಿ ಬಗ್ಗೆ ಬಹಳಷ್ಟು ಹೇಳುತ್ತಾರೆ 800 ಕೋಟಿ ರೂಪಾಯಿ ಅದರಲ್ಲಿ ಒದಗಿಸಿದ್ದೇವೆ, ಇನ್ನು ಕೂಡ They have not placed Action plan Action plan prepare ಮಾಡಿಲ್ಲ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇವತ್ತು ನಾವು ಕೇಂದ್ರ ಸರ್ಕಾರಕ್ಕೆ ಬೇಕಾದಾಗ ನಿಯೋಗ ಮೆಥೋಡಿಕಲಿ, ವಿವಿಧ ರೀತಿಯಲ್ಲಿ ರಾಜ್ಯದಲ್ಲಿ ಉಂಟಾದ ಈ ಪ್ರವಾಹ ಕಂಟ್ರೋಲ್ ಮಾಡುವುದಕ್ಕೆ ಏನೇನು ಹಣ ಬೇಕಾಗಿದೆ, ಕೇಂದ್ರ ಸರ್ಕಾರದಿಂದ ನಿಯೋಗ ಬರುತ್ತದೆ ನಾವು ಬರುತ್ತೇವೆ, ನಿಮ್ಮ ಜೊತೆಗೆ ಬಂದು ಪ್ರಧಾನ ಮಂತ್ರಿಗಳಿಗೆ ಹೇಳುತ್ತೇವೆ ಎಷ್ಟು ಹಣ ಬೇಕು ಎಂದು ಆದರೆ ಇವತ್ತಿನ ದಿವಸ ಕೊಟ್ಟಂತಹ ಹಣವನ್ನು ತಾವು ಬರ

ಪರಿಹಾರಕ್ಕೆ ಬಿಡುಗಡೆ ಮಾಡಿದ್ದು 220 ಕೋಟಿ ರೂಪಾಯಿ, ಉಪಯೋಗಿಸಿಕೊಂಡಿದ್ದು 90 ಕೋಟಿ ರೂಪಾಯಿ, ಪ್ರವಾಹಕ್ಕಾಗಿ ಬಿಡುಗಡೆ ಮಾಡಿದ್ದು 217 ಕೋಟಿ ರೂಪಾಯಿ ಒಟ್ಟು ಖರ್ಚು ಆಗಿರುವುದು 185 ಕೋಟಿ ರೂಪಾಯಿ ಒಟ್ಟಾರೆ ಇವತ್ತು ರಾಜ್ಯದಲ್ಲಿ ಸರ್ಕಾರ ಇದೆ ಇಲ್ಲ ಎನ್ನುವುದು ನಾವು ಹೇಳಬೇಕಾಗಿದೆ ನಾನು ಮುಖ್ಯಮಂತ್ರಿ ಆಗಿದ್ದೆ ಮಾನ್ಯ ಪ್ರಕಾಶ್‌ರವರು ತಾವು ಉಪಮುಖ್ಯಮಂತ್ರಿಗಳಾಗಿದ್ದಿರಿ ಮಾನ್ಯ ಖರ್ಗೆಯವರು ನೀರಾವರಿ ಸಚಿವರಾಗಿದ್ದರು ಎಷ್ಟು ಸಲ ನಾವು ಬೆಳಗಾಂ ಜಿಲ್ಲೆಗೆ ಹೋಗಿಲ್ಲ ಎಷ್ಟು ಸಲ ನಾವು ಬಿಜಾಪುರ ಜಿಲ್ಲೆಗೆ ಹೋಗಿಲ್ಲ, ಎಷ್ಟು ಸಲ ನಾವು ಬಾಗಲಕೋಟೆಗೆ, ಬಿಜಾಪುರಕ್ಕೆ, ಗುಲ್ಬರ್ಗಾಕ್ಕೆ ಮತ್ತು ರಾಯಚೂರು ಜಿಲ್ಲೆಗಳಿಗೆ ಹೋಗಿಲ್ಲ ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳಿಗೆ ಹೋಗಿ, ನಾವು ಆಲಮಟ್ಟಿ ಡಾಂಗೆ ಹೋಗಿ ಟೆಲಿಫೋನ್ ಮುಖಾಂತರ ನಾವು ಮಾನ್ಯ ಪ್ರಧಾನ ಮಂತ್ರಿಗಳೊಂದಿಗೆ ಮಾತನಾಡಿ Sir, the situation is very grave, You have to come to our rescue ಇಲ್ಲಿ ಬರಬೇಕು ಅಥಣಿಯಲ್ಲಿ ಮುಳುಗತಕ್ಕಂತಹ ಗ್ರಾಮಗಳು ಯಾವುವು ಇವೆ ಅವುಗಳನ್ನು ಬಂದು ನೋಡಬೇಕೆಂದು ಹೇಳಿದೆವು ಅವರು ಗೋವಾ ಮೂಲಕ ಬಂದರು, ವಿಮಾನ Take off ಆಗಲಿಲ್ಲ ಆ ಕಾರಣದಿಂದ ಅವರು ಬರಲಿಲ್ಲ ಮಾನ್ಯ ಶರದ್ ಪವಾರ್ ರವರು ಬಂದರು ಒಟ್ಟಾರೆ ಆ ಭಾಗದಲ್ಲಿ ಇರತಕ್ಕಂತಹ ಪ್ರಭಾವ ಪೀಡಿತ ಪ್ರದೇಶಕ್ಕೆ ಈಗಾಗಲೇ 3270 ಕೋಟಿ ರೂಪಾಯಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಇದು ನಾನು ಹೇಳುತ್ತಿಲ್ಲ ಮಾನ್ಯ ಕೆ ಬಿ ಶಾಣಪ್ಪನವರು ನಿಮ್ಮ ಪಕ್ಷದ ರಾಜ್ಯಸಭಾ ಸದಸ್ಯರು ನೀವು ಪ್ರವಾಹಕ್ಕಾಗಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳಿದರು ಎಲ್ಲಾ ಅಂಕಿ ಅಂಶಗಳನ್ನು ಮಾನ್ಯ ಶರದ್ ಪವಾರ್‌ರವರು ಕೊಟ್ಟಿದ್ದಾರೆ ಇಂತಹ ಪರಿಸ್ಥಿತಿ ಬಂದಾಗ ರಾಜ್ಯ ಸರ್ಕಾರ ಖರ್ಚು ಮಾಡಬೇಕಾಗುತ್ತದೆ ರಾಜ್ಯ ಸರ್ಕಾರ ನೆರವಿಗೆ ಬರಬೇಕಾಗುತ್ತದೆ ಇವತ್ತು ಜನರಲ್ಲಿ ವಿಶ್ವಾಸ ಮೂಡಿಸತಕ್ಕಂತಹ ರೀತಿಯಲ್ಲಿ ನಾವು ಕೆಲಸ ಮಾಡಬೇಕಾಗಿದೆ ಅಧಿಕಾರ ಹಸ್ತಾಂತರ ಮಾಡುತ್ತೇವೆಂದು ಖಚಿತವಾಗಿ ಹೇಳಿದ್ದಾರೆ ಮುಂದೆ ಅಕ್ಟೋಬರ್ ತಿಂಗಳಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುತ್ತಾರೆಯೋ, ಇಲ್ಲವೋ ಅದು ಬೇರೆ ಪ್ರಶ್ನೆ ಅದು ಜನರ ಮನೋರಂಜನೆಗಾಗಿ ದಿನಾಲೂ ಪತ್ರಿಕೆಯಲ್ಲಿ ಬರುತ್ತಿತ್ತು ನಾವು ಓದುತ್ತಿದ್ದೆವು That is not important ನಿಮ್ಮ ಸಮ್ಮಿಶ್ರ ಸರ್ಕಾರದ

ಬದ್ದತೆ ಏನಿದೆ, ಏನು understanding ಇದೆ, ನೀವು ಇವತ್ತಿನ ದಿವಸ ಜನರ ಹಿತಕ್ಕಾಗಿ ಕೆಲಸ ಮಾಡತಕ್ಕಂತಹ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಹೇಳಬೇಕಾಗುತ್ತದೆ ಯಾರಾದರೂ ಒಬ್ಬ ಮಂತ್ರಿಗಳು ಕೂಡ ಆ ಭಾಗದಲ್ಲಿ ಅನಾಹುತ ಆಗತಕ್ಕಂತಹ ಪರಿಸ್ಥಿತಿ ನೋಡಿದ್ದೀರಾ? ರೈತರ ಅಳಿವು ನೋಡಿದ್ದೀರಾ? ಒಟ್ಟಾರೆ ಇವತ್ತು ರಾಜ್ಯದಲ್ಲಿ 250 ರೈತರ ಆತ್ಮಾಹುತಿ ಆಗಿದೆ ಬೀದರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಇನ್ನು ಮುಂದೆ ರೈತರ ಆತ್ಮಹತ್ಯೆ ಆದರೆ ಅಧಿಕಾರ ತ್ಯಾಗ ಮಾಡುತ್ತೇನೆ ಎಂದು ಹೇಳಿದರು ನಾವು ಏನು ರಾಜೀನಾಮೆ ಕೊಡಿ ಎಂದು ಕೇಳಲಿಲ್ಲ ರಾಜೀನಾಮೆ ಕೊಡಬೇಡಿ ಎಂದು ಬೇರೆ ಕಡೆಯಿಂದ ಆದೇಶ ಬಂದಿತ್ತು ನಾವು ಮಾನ್ಯ ಕುಮಾರಸ್ವಾಮಿಯವರಿಗೆ ಏಕೆ ರಾಜೀನಾಮೆ ಕೇಳೋಣ? You have got the responsibility to run the Government ಇವತ್ತು escapism ಬೇಕಾಗಿಲ್ಲ ಆದರೆ ಜನರಿಗೆ ಕೆಲಸ ಬೇಕು ಈಗಾಗಲೇ ನೀವು 32 ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದೀರಿ ಇವತ್ತಿಗೆ ಅಲ್ಲಿ ಏನಾಗಿದೆ? ಆ ಗ್ರಾಮಗಳ ಸಮಸ್ಯೆಗಳನ್ನು ನೀವು ಬಗೆಹರಿಸಿದ್ದೀರ? ಈಗಾಗಲೇ ರಾಜೀವ್‌ಗಾಂಧಿಯವರ ಏನು ಕಾನ್ಸೆಪ್ಟ್ 1972-73 ರಲ್ಲಿ ಅಮೆಂಡ್‌ಮೆಂಟ್ ಆಗಿಗ್ದು ಏನಿತ್ತು ಅದನ್ನು ನೀವು ನೋಡಿ ಇವತ್ತು ನೀವು ಗ್ರಾಮ ಪಂಚಾಯತಿಗೆ ಕೊಡತಕ್ಕಂಥ ಅಧಿಕಾರಗಳನ್ನು ಮೊಟಕುಗೊಳಿಸಿದ್ದೀರಿ ಗ್ರಾಮಗಳಲ್ಲಿ ಏನೂ ಕೆಸಲವೇ ಆಗಿಲ್ಲ ನಾಳೆ ಎಲ್ಲಾ ಗ್ರಾಮ ಪಂಚಾಯತಿಗಳ ಜನರೆಲ್ಲರೂ ಬೆಂಗಳೂರಿಗೆ ಬರುತ್ತಿದ್ದಾರೆ ಅದಕ್ಕಾಗಿಯೇ ನಾನು ನಿಮಗೆ ಹೇಳುತ್ತಿದ್ದೇನೆ, ತಾವು ದಯಮಾಡಿ ಗ್ರಾಮ ವಾಸ್ತವ್ಯಕ್ಕೆ ಹೋಗಬೇಡಿ ತಾವು ವಿಧಾನಸಭೆಯಲ್ಲಿ ವಾಸ್ತವ್ಯ ಮಾಡಿ ತಾವು ವಿಧಾನಸಭೆಯ ಸದನದಲ್ಲಿ ವಾಸ್ತವ್ಯ ಮಾಡಿದರೆ ಸಮಸ್ಯೆಗಳನ್ನು ತಿಳಿಯತಕ್ಕಂಥ ಪ್ರಯತ್ನವನ್ನು ಮಾಡಬಹುದು ಈಗಾಗಲೇ ಆಗಿರುವುದು ಔಟ್‌ಡೇಟೆಡ್, ಗ್ರಾಮ ವಾಸ್ತವ್ಯ ಈಗಾಗಲೇ ಆಗಿದೆ ನಾವು ಇದರ ಬಗ್ಗೆ ಕೇಳಿದ್ದೇವೆ 32 ಗ್ರಾಮ ವಾಸ್ತವ್ಯದಿಂದ ಅಲ್ಲಿಯ ಗ್ರಾಮಗಳ ಜನರ ಬವಣೆ ಏನಿದೆ, ಸಮಸ್ಯೆಗಳೇನಿದೆ, ಇದನ್ನು ಪರಿಹರಿಸಲು ಯಾವ ಯಾವ ಅಧಿಕಾರಿಗಳಿಗೆ ಎಷ್ಟು ಆದೇಶಗಳನ್ನು ಕೊಟ್ಟಿದ್ದೀರಿ ಮತ್ತು ಎಷ್ಟು ಆದೇಶಗಳು ಪಾಲನೆಯಾಗಿವೆ ಎಂಬ ಬಗ್ಗೆ ಕೂಡ ನಾವು ಕೇಳಿದ್ದೇವೆ ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ತಾವು ಗ್ರಾಮ ವಾಸ್ತವ್ಯವನ್ನು ಬಿಟ್ಟು ವಿಧಾನಸೌಧದಲ್ಲಿ ವಾಸ್ತವ್ಯ ಮಾಡಿ ಸದನ ನಡೆಯತಕ್ಕಂಥ ಕಾಲದಲ್ಲಿ

ಒಂದು ತಿಂಗಳು ಇಲ್ಲಿ ಕುಳಿತು ನಾವು ಹೇಳತಕ್ಕಂಥ ವಿಚಾರಗಳನ್ನು ದಯವಿಟ್ಟು ಕೇಳಿ ಇವತ್ತು ಪ್ರವಾಹ ಪೀಡಿತ ಪ್ರದೇಶದಲ್ಲಿ ತಾವೇನು ಮಾಡುತ್ತಿದ್ದೀರಿ? ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರೇ ಅದ್ವಾನಿಯವರ ಜೊತೆಯಲ್ಲಿ ಹೋಗಿದ್ದರು ನಾನು ಮುಖ್ಯಮಂತ್ರಿ ಯಾಗಿದ್ದಾಗ ಹೇಗೆ ಕೆಲಸ ನಡೆಯುತ್ತಿದೆ ಎಂಬ ಬಗ್ಗೆ ಮಾನ್ಯ ಅನಂತ ಕುಮಾರ್‌ರವರು, ಅದ್ವಾನಿಯವರು, ಯಡಿಯೂರಪ್ಪನವರು ಹೇಳಿದ್ದೇ ಹೇಳಿದ್ದು, ಏನೂ ಸರ್ಕಾರ ಮಾಡಿಲ್ಲವೆಂದು ಇವತ್ತು ನಾವು ಬೆಳಗಾಂಗೆ 196 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಕೊಟ್ಟಂಥ ಹಣವನ್ನು ಖರ್ಚು ಮಾಡುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ ಇವತ್ತಿನ ದಿವಸ ಪಿ ಡಿ ಅಕೌಂನಲ್ಲಿ ಎಷ್ಟು ಹಣ ಡೆಪ್ಯೂಟಿ ಕಮೀಶನರ್‌ರವರಲ್ಲಿದೆ ಯಾರು ಇದನ್ನು ನೋಡುವವರು? ಇವತ್ತಿನ ದಿವಸ ನಿಮ್ಮ ಎಲ್ಲಾ ಮಂತ್ರಿಗಳು ಹೋಗಬೇಕಾಗುತ್ತದೆ, ಫಾಲೋ ಅಪ್ ಆಗಬೇಕಾಗುತ್ತದೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ, ಅದನ್ನು ಖರ್ಚು ಮಾಡಿದ್ದೀರಾ ಎಂದು ನೋಡಬೇಕಾಗುತ್ತದೆ ಆದರೆ ಆ ಕೆಲಸವೇನೂ ಕೂಡ ಆಗುತ್ತಿಲ್ಲ ರೈತರ ಪರಿಸ್ಥಿತಿ ಹದಗೆಟ್ಟು ಹೋಗಿದೆ ಇವತ್ತು ರೈತರ ಬವಣೆಯನ್ನು ಕೇಳತಕ್ಕಂಥವರಿಲ್ಲ ಕೇವಲ ಇವರು ಸಾಲ ಮನ್ನಾ ಮಾಡಿದ್ದೇವೆಂದು ಹೇಳಿದ್ದಾರೆ ಎಷ್ಟು ಸಾಲ ಮನ್ನಾ ಮಾಡಿದ್ದಾರೆ? ಈಗಾಗಲೇ ಬಿತ್ತನೆ ಪ್ರಾರಂಭವಾಗಿದೆ ಯಾವ ಡಿ ಸಿ ಸಿ ಬ್ಯಾಂಕ್‌ಗಳಲ್ಲೂ ಕೂಡ ಇವತ್ತು ರೈತನಿಗೆ ಸಾಲ ಕೊಡತಕ್ಕಂಥ ಪರಿಸ್ಥಿತಿ ಇಲ್ಲವಾಗಿದೆ ಈ ಮಾತನ್ನು ನಾನು ಹೇಳುತ್ತಿಲ್ಲ ಜಿ ಟಿ ದೇವೇ ಗೌಡರೇ ಈ ಮಾತನ್ನು ಹೇಳುತ್ತಿದ್ದಾರೆ ಇದು ವ್ಯಾವಹಾರಿಕವಾಗಿ ಆಗತಕ್ಕಂಥ ಕೆಸಲವಲ್ಲ ಇವತ್ತು ಅಪೆಕ್ಸ್ ಬ್ಯಾಂಕ್‌ಗೆ 1950 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗಿದೆ ನಮ್ಮ ಕಡೆ ಸಾಲ ಕೊಡುವುದಕ್ಕೆ ಆಗುವುದಿಲ್ಲ ವೆನ್ನತಕ್ಕಂಥ ಮಾತನ್ನು ಅಪೆಕ್ಸ್ ಬ್ಯಾಂಕ್‌ನವರು ಹೇಳುತ್ತಿದ್ದಾರೆ ಸುಮ್ಮನೇ ನೀವು ಘೋಷಣೆ ಮಾಡುತ್ತಿದ್ದೀರಿ You have to make alternative arrangements ಪರ್ಯಾಯ ವ್ಯವಸ್ಥೆ ಮಾಡಲಾರದೇ ಕೇವಲ ಮಾತಿನಲ್ಲಿ ನಾವೆಲ್ಲಾ ಮಾಡಿದ್ದೇವೆ, ರೈತರಿಗೆ ಅನುಕೂಲವಾಗಿದೆ ಇದರಿಂದ ಕಾಂಗ್ರೆಸ್‌ನವರಿಗೆ ಹೊಟ್ಟೆ ಕಿಚ್ಚಾಗಿದೆ ಎನ್ನುತ್ತಿದ್ದೀರಿ ಕಾಂಗ್ರೆಸ್‌ನವರಿಗೆ ಏಕೆ ಹೊಟ್ಟೆಕಿಚ್ಚು ಆಗುತ್ತದೆ ನಿಮಗೆ ಸರ್ಕಾರ ನಡೆಸುವ ಅವಕಾಶ ಸಿಕ್ಕಿದೆ ಅದರಲ್ಲೂ ಬಿ ಜೆ ಪಿ ಯವರಿಗೆ ಆಕಸ್ಮಿಕವಾಗಿ ಅಧಿಕಾರದ ಅವಕಾಶ ಸಿಕ್ಕಿದೆ ಏನೊಂದು ಅಧಿಕಾರ ಸಿಕ್ಕಿದೆ, ಅದನ್ನು ಸರಿಯಾದಂಥ ರೀತಿಯಲ್ಲಿ

ನಿರ್ವಹಣೆ ಮಾಡಿ ಆ ಮೂಲಕ ಕೆಲಸವನ್ನು ಮಾಡಿ ಇವೊತ್ತಿನ ದಿವಸ ಬೆಂಗಳೂರು ಬಿಟ್ಟು ಬೇರೆ ಕಡೆಗೆ ಹೋದರೆ ಸಾಕಷ್ಟು ರೈತರುಗಳು ಇವತ್ತು ಪ್ರತಿಭಟನೆಯನ್ನು ಮಾಡುತ್ತಿರುವುದು ತಮಗೆ ಗೊತ್ತಾಗುತ್ತದೆ ಅವರು ಇವತ್ತು ರೊಚ್ಚಿಗೆದ್ದಿದ್ದಾರೆ ಇವತ್ತು ಕೆಲಸವನ್ನು ತಾವು ಮಾಡಬೇಕಾಗಿದೆ ತಮ್ಮ ಮುಂದೆ ಇವತ್ತು ಮಾನ್ಯ ಪ್ರಕಾಶ್‌ರವರು ಇದ್ದಾರೆ ಮಾನ್ಯ ಪ್ರಕಾಶ್‌ರವರೆ, ಮೊನ್ನೆ ತಾವೇನು ಹೇಳಿಕೆಯನ್ನು ಕೊಟ್ಟಿದ್ದೀರಿ, ಅದು ಸತ್ಯಕ್ಕೆ ದೂರವಾದಂಥದ್ದು ಇವತ್ತಿನವರೆಗೆ ಕೇಂದ್ರದಿಂದ ಬರತಕ್ಕಂಥ ಹಣ ಎಲ್ಲವೂ ಬಂದಿದ ಕೇಂದ್ರದವರು ಕೊಟ್ಟಿದ್ದಾರೆ ಯಾವಾಗ ಬರ ಪರಿಸ್ಥಿತಿ ಬಂತೋ ಆಗಲೇ ನಾನು, ಖರ್ಗೆಯವರು, ಸಿದ್ಧರಾಮಯ್ಯ ನವರು ಕೇಂದ್ರದಲ್ಲಿ ಶಿವರಾಜ್ ಪಾಟೀಲ್‌ರವರು ಭೇಟಿ ಮಾಡಿ ಬರ ಪರಿಹಾರಕ್ಕಾಗಿ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಾಗ ಕೇಂದ್ರ ಸರ್ಕಾರ ನಿಮಗೆ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿಲ್ಲವೇ ಹೇಳಿ ಇವತ್ತು ಬೇರೆ ಕೆಲಾಮಿಟಿ ರಿಲೀಫ್ ಫಂಡ್‌ನಿಂದಲೂ ಕೂಡ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ ಹಣವನ್ನು ತೆಗೆದುಕೊಳ್ಳಿ, ಖರ್ಚು ಮಾಡಿ ಎಲ್ಲಾ ಅಧಿಕಾರಿಗಳ ಮೇಲೆ ತಾವು ಹತೋಟಿ ಇಟ್ಟುಕೊಳ್ಳಿ ಅಧಿಕಾರಿಗಳ ಮೇಲೆ ತಾವು ಹತೋಟಿ ಇಟ್ಟುಕೊಳ್ಳಬೇಕು ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ಪ್ರತಿಯೊಂದರಲ್ಲಿಯೂ ಏನು ಮಾಡುತ್ತಿದ್ದಾರೆ ಎಂಬುದನ್ನು ತಾವು ನೋಡಬೇಕು ಈಗ ಮುಖ್ಯ ಕಾರ್ಯದರ್ಶಿಯವರು ಇಲ್ಲಿ ಇಲ್ಲ ಎಲ್ಲಿ ಹೋಗಿದ್ದಾರೆ ಕೇಳಿ ಅವರು ಏನೇನು ಕೆಲಸ ಮಾಡುತ್ತಾರೆ ಎಂದು ಅವರನ್ನು ನೀವು ಕೇಳಿ ಮುಖ್ಯ ಕಾರ್ಯದರ್ಶಿ ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳ್ಯಾರೂ ಕೂಡ ಎಲ್ಲಿಗೂ ಕೂಡ ಹೋಗಿ ಅವರು ಕೆಲಸವನ್ನು ಮಾಡಿಲ್ಲ ನಾವು 36 ವರ್ಷದ ಅವಧಿಯಲ್ಲಿ ಮಾನ್ಯ ದೇವರಾಜ ಅರಸು ಅವರು 8 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆ ಸ್ಥಾನದಲ್ಲಿಯೇ ಕುಳಿತ್ತಿದ್ದರು ಬಡತನ ರೇಖೆಯಲ್ಲಿರತಕ್ಕಂಥ ಜನರಿಗೆ ಇವತ್ತಿಗೂ ಕೂಡ ನೀವು ಕಾರ್ಡ್‌ಗಳನ್ನು ವಿತರಣೆ ಮಾಡತಕ್ಕಂಥ ಕೆಲಸವನ್ನು ತಾವು ಇದುವರೆವಿಗೂ ಮಾಡಿಲ್ಲ ಮಾನ್ಯ ಯಡಿಯೂರಪ್ಪನವರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಈ ಬಗ್ಗೆ ತಾವು ಎಷ್ಟು ಆಕ್ಷೇಪಣೆಯನ್ನು ಮಾಡಿದ್ದಿರಿ ಈಗ ನೀವು ಹೇಳಿ ಕಾರ್ಡ್ ಎಲ್ಲಿ ವಿತರಣೆಯಾಗಿದೆ? ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ 3 ರೂಪಾಯಿಗೆ ಒಂದು ಕೆ ಜಿ ಅಕ್ಕಿ ಬಗ್ಗೆ ಇತ್ತು ಈಗ ತಾವು ಎಷ್ಟು ಕೆ ಜಿ ಅಕ್ಕಿಯನ್ನು ಕೊಡುತ್ತಿದ್ದೀರಿ? ರೈತರಿಗೆ

ಹೊಟ್ಟೆಗೆ ಅನ್ನವನ್ನು ಮುಟ್ಟಿಸತಕ್ಕಂಥ ರೀತಿಯಲ್ಲಿ ಕೆಲಸ ಮಾಡುವುದರಲ್ಲಿ ಯಾವ ಸರ್ಕಾರದವರು ವಿಫಲರಾಗುತ್ತಾರೋ ಆ ಸರ್ಕಾರ ಬಹಳ ದಿವಸಗಳ ಕಾಲ ಉಳಿಯುವುದಕ್ಕೆ ಸಾಧ್ಯವಿಲ್ಲ ಅದರ ಬಗ್ಗೆ ಇನ್ನೂ ನಮ್ಮ ಬಹಳ ಸದಸ್ಯರುಗಳು ಮಾತನಾಡುವವರಿದ್ದಾರೆ ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ ಇದು ಬಹಳ ಗುರುತರವಾದಂಥದ್ದು ಬಹಳ ಸಮಸ್ಯೆಗಳ ಬಗ್ಗೆ, ಸರ್ಕಾರದ ವೈಫಲ್ಯತೆಗಳ ಬಗ್ಗೆ, ಈ ಸರ್ಕಾರದವರು ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಿದ್ದಾರೆ ಎಂಬ ಬಗ್ಗೆ ಚರ್ಚೆಯಾಗಬೇಕಾಗಿದೆ ನಮಗೆ ಅನುವು ಮಾಡಿ ಕೊಡಬೇಕೆಂದು ತಮ್ಮನ್ನು ಕೇಳಿಕೊಂಡು ನನ್ನ ಪ್ರಾರಂಭಿಕವಾಗಿ ತಮ್ಮನ್ನು ಮನವೊಲಿಸುವ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದಲ್ಲಿ ಸಂಭವಿಸಿರತಕ್ಕಂಥ ಪ್ರವಾಹದಿಂದ ಆಗಿರತಕ್ಕಂಥ ಪರಿಸ್ಥಿತಿ, ಕಷ್ಟಗಳು ಮತ್ತು ನಷ್ಟಗಳು, ಇವುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆದುದರಿಂದ ನಾವೂ ಕೂಡ ಪ್ರಿಲಿಮಿನರಿ ಸಬ್‌ಮಿಶನ್ ಮಾಡಬೇಕೋ ಅಥವಾ ಬೇಡವೋ ಎಂಬ ಬಗ್ಗೆ ತೀರ್ಮಾನ ಮಾಡಿ ನೀವೇ ಚರ್ಚೆಗೆ ಒಪ್ಪಿಗೆಯನ್ನು ಕೊಟ್ಟುಬಿಟ್ಟರೆ ವಿವರವಾಗಿ ಚರ್ಚೆಗೆ ಹೊರಟುಬಿಡಬಹುದು

ಶ್ರೀ ಎಂ ಪಿ ಪ್ರಕಾಶ್(ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾಗಿರತಕ್ಕಂಥ ವಿಷಯ ಸರ್ಕಾರ ಈ ಬಗ್ಗೆ ಚರ್ಚೆ ಮಾಡಲು ಯಾವುದೇ ತರವಾದ ಅಡ್ಡಿಯನ್ನು ಉಂಟುಮಾಡಲು ಇಷ್ಟಪಡುವುದಿಲ್ಲ ಈಗ ನಿಯಮಾವಳಿ ಸೂಚನೆ ಪ್ರಕಾರ ಬೇರೆ ಅನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವಾದ ಕಾರಣ ತಾವು ಇದನ್ನು ನಿಯಮ 69 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಪರಿವರ್ತನೆ ಮಾಡಿದರೆ ಆಗ ಎಲ್ಲ ಸದಸ್ಯರಿಗೂ ಚರ್ಚೆಯಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗುತ್ತದೆ

ಅಧ್ಯಕ್ಷರು ನಾನು ಈಗಲೇ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇನೆ ಈಗ ಚರ್ಚೆಯನ್ನು ಪ್ರಾರಂಭ ಮಾಡಬಹುದು

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, ತಾವು ನಿಲುವಳಿ ಸೂಚನೆಯನ್ನು ಯಾವಾಗಲೂ ನಿಯಮ 69ಕ್ಕೆ ಕನ್‌ವರ್ಟ್ ಮಾಡಿಬಿಡುತ್ತೀರಿ

ಅಧ್ಯಕ್ಷರು ಅದು ಹಾಗಲ್ಲ ಇದು ರೈತರಿಗೆ ಸಂಬಂದಪಟ್ಟ ವಿಚಾರ ಈಗ ಎಲ್ಲ ಕಡೆ ಪ್ರವಾಹ, ಪ್ರವಾಹ ಭೀತಿ ಇದೆ ಆದುದರಿಂದ ಈ ಬಗ್ಗೆ ಮಾತನಾಡಲು ಎಲ್ಲ ಸದಸ್ಯರೂ ಭಾಗವಹಿಸಬೇಕಾಗುತ್ತದೆ ಆದುದರಿಂದ ನಿಯಮ 69ಕ್ಕೆ ಪರಿವರ್ತನೆ ಮಾಡಿದ್ದೇನೆ ತಾವು ಮಾತನಾಡಿ ಸಾಕಷ್ಟು ಕಾಲಾವಕಾಶವನ್ನು ಕೊಡುತ್ತೇನೆ ಆದುದರಿಂದ ದಯಮಾಡಿ ಆರಂಭ ಮಾಡಿ

7 ನಿಯಮ 69 ರ ಅಡಿಯಲ್ಲಿ ಚರ್ಚೆ

ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ ಉಂಟಾಗಿರುವ ಅನಾಹುತದ ಬಗ್ಗೆ

ಶ್ರೀ ಎನ್ ಧರ್ಮ್‌ಸಿಂಗ್ (ವಿರೋಧಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ತಮಗೆ ಮನವೊಲಿಸುವಾಗಲೇ ಹಲವಾರು ವಿಚಾರಗಳನ್ನು ಹೇಳಿದ್ದೇನೆ ತಮಗೆ ಮನವರಿಕೆಯಾದ ಮೇಲೆ ಇದು ರಾಜ್ಯಕ್ಕೆ ಸಂಬಂಧ ಪಟ್ಟ ವಿಚಾರವಾದ್ದರಿಂದ ಇದರ ಬಗ್ಗೆ ವಿವರವಾಗಿ ಚರ್ಚೆಯಾಗಬೇಕೆಂದು ಎಲ್ಲರಿಗೂ ಅವಕಾಶ ಮಾಡಿಕೊಟ್ಟಿದ್ದೀರಿ ನೀವು ಹೀಗೆ ಒಮ್ಮೊಮ್ಮೆ ದೊಡ್ಡ ಮನಸ್ಸನ್ನು ಮಾಡುತ್ತೀರಿ ಇದು ರೈತರಿಗೆ ಸಂಬಂಧಪಟ್ಟಂಥದ್ದು ತಾವು ಕೂಡ ರೈತರಾಗಿ ಕೆಲಸ ಮಾಡಿದ ಕಾರಣ ಇವತ್ತು ಅವಕಾಶ ಮಾಡಿಕೊಟ್ಟಿದ್ದೀರಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅವರು ಕೃಷಿಕರಲ್ಲ ವಕೀಲರು

ಶ್ರೀ ಎನ್ ಧರ್ಮ್‌ಸಿಂಗ್ ಅವರೂ ವಕೀಲರೆ ಸಿದ್ದರಾಮಯ್ಯನವರ ಜೊತೆ ಪ್ರಾಕ್ಟೀಸ್ ಮಾಡಿರಬೇಕು ಇರಲಿ ಮಾನ್ಯ ಯಡಿಯೂರಪ್ಪನವರೆ, ಈಗ ಸರ್ಕಾರವನ್ನು ತಾವು ನಡೆಸುತ್ತಿದ್ದೀರಿ ಇಂಥ ಒಂದು ಪರಿಸ್ಥಿತಿ

ಬಂದಾಗ you have to create a confidence ಜನರಿಗೆ ನಿಜವಾಗಿ ಏನು ಯಡಿಯೂರಪ್ಪನವರು ರೈತರ ಬಗ್ಗೆ ಕಾಳಜಿ ವಹಿಸಿದ್ದಾರೆ, ಏನು ಸಾಲ ಮನ್ನಾ ಮಾಡಿದ್ದಾರೆ, ಸಾರಾಯಿ ನಿಷೇಧವಾಗಿದೆ, ಇವೆಲ್ಲವನ್ನೂ ಕೂಡ ಕೇವಲ ಹೇಳಿಕೆ ಮುಖಾಂತರವಲ್ಲ, ರೈತರಿಗೆ ನಿಜವಾಗಿಯೂ ಕೂಡ ಸರ್ಕಾರ ನಮ್ಮ ಪರವಾಗಿದೆ ಎನ್ನತಕ್ಕಂಥ ರೀತಿಯಲ್ಲಿ ಅವರ ಮನಸ್ಸಿನಲ್ಲಿ ಆ ರೀತಿಯ ಭಾವನೆ ಬರಬೇಕು ಮುಖ್ಯಮಂತ್ರಿಗಳು ಯಾವಾಗಲೂ ಹೇಳುತ್ತಿರುತ್ತಾರೆ, ಎನ್ರಿ ನೀವು 58 ವರ್ಷ ಇದ್ದಿರಿ ನೀವೇನು ಮಾಡಿದಿರಿ ಎನ್ನುತ್ತಿರುತ್ತಾರೆ ತಾವು 58 ವರ್ಷದ ಹಿಂದಿನವರೆಗೆ ಏಕೆ ಹೋಗುತ್ತೀರಿ 1968 ರಿಂದ 1972 ರಲ್ಲಿ ಈ ದೇಶದಲ್ಲಿ ಕಾಂಗ್ರೆಸ್ ಇಭ್ಭಾಗಬಾದ ನಂತರ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಏನು ಕ್ರಾಂತಿಕಾರಕವಾದ ಬದಲಾವಣೆಗಳಾಯಿತೋ ಅಲ್ಲಿಂದ ತಾವು ನೋಡಬಹುದು ಬ್ಯಾಂಕ್ ರಾಷ್ಟ್ರೀಕರಣವಾಯಿತು ಬಡವರಿಗೆ ಮನೆ ಕಟ್ಟಿಸತಕ್ಕಂಥ ರೀತಿಯಲ್ಲಿ ಕೆಲಸವಾಯಿತು ಹೀಗೆ ಬಹಳಷ್ಟು ಕೆಲಸ ಕಾರ್ಯಗಳನ್ನು ನಾವು ಪ್ರಾರಂಭ ಮಾಡಿದ್ದೇವೆ ಈಗಾಗಲೇ ಹೇಳಿದ ಹಾಗೆ ಮಾನ್ಯ ದೇವರಾಜ ಅರಸುರವರೂ ಕೂಡ ಅದೇಸ್ಥಾನದಲ್ಲಿ ಕುಳಿತು ಕೆಲಸ ಮಾಡಿದ್ದಾರೆ ಅವತ್ತು ಮಾನ್ಯ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು ಅಲ್ಲಿ ದೇವರಾಜ ಅರಸುರವರು ಇದ್ದರು ಆಗ ನಂಜೇಗೌಡರು ನೀರಾವರಿ ಮಂತ್ರಿಗಳು ಇದ್ದರು ಚೆನ್ನಬಸಪ್ಪನವರು, ಸಿದ್ದವೀರಪ್ಪನವರು ಹೀಗೆ ಘಟಾನುಘಟಿಗಳು ಇದ್ದಂಥ ಆ ಒಂದು ಸನ್ನಿವೇಶ ಬೇರೆ ಇವೆಲ್ಲವನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು ಕೇವಲ ಚೀಪ್ ಪಾಪ್ಯುಲಾರಿಟಿ ಮಾಡಬಾರದು ನಿಜಲಿಂಗಪ್ಪನವರು ರಾಜ್ಯ ಮುಖ್ಯ ಮಂತ್ರಿಗಳಾಗಿದ್ದರು ಆಗ ದಾಸಪ್ಪನವರು ಅಬ್ಕಾರಿ ಮಂತ್ರಿಗಳಾಗಿದ್ದರು ಅವರು ರಾಜೀನಾಮೆಯನ್ನು ಕೊಟ್ಟರು ಸಾರಾಯಿ ನಿಷೇಧ ಮಾಡಿ ನಮಗೇನೂ ಬೇಕಿಲ್ಲ ಎಲ್ಲಾ ಕಡೆಗೂ ಸಾರಾಯಿ ನಿಷೇಧ ಮಾಡಿ, ಎಷ್ಟು ಸಾಲವನ್ನು ನೀವು ಮನ್ನಾ ಮಾಡುತ್ತೀರಿ? ಕಳೆದ ಸಲ ನಾವೇನು ಕೇಳಿದ್ದೇವೆ ಅದನ್ನು ಕೇಳಿದ ಮೇಲೆ ಇವತ್ತು ಮಾಧುಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರು ಹೇಳಿದರು ಇನ್ನೂ ಕೂಡ ಆ ಬಗ್ಗೆ ಹೆಚ್ಚು ಮಾಡುವಂಥದ್ದರ ಬಗ್ಗೆ ಇದುವರೆಗೂ ಕೂಡ ನಮಗೆ ಸ್ಪಷ್ಟವಾದ ಉತ್ತರವನ್ನು ನೀವು ಕೊಡಲಿಲ್ಲ ಇವತ್ತಿನ ಸರ್ಕಾರ ರೈತರ ಬಗ್ಗೆ ಕೆಲಸ ಮಾಡುತ್ತಿಲ್ಲ ಹಾಗೂ ಅವರ ಬಗ್ಗೆ ಕಾಳಜಿ ಇಲ್ಲ ಇವತ್ತು ಮಾನ್ಯ ಎಂ ಪಿ ಪ್ರಕಾಶ್‌ರವರು ರಾಜ್ಯದ ಜನರಿಗೆ

ಏನು ತೊಂದರೆಯಾಗಿದೆ, ಎಲ್ಲೆಲ್ಲಿ pumpset ಗಳು ತೊಂದರೆಯಾಗಿದೆ ಮತ್ತು ಬೀಜ, ಗೊಬ್ಬರಕ್ಕೆ ರಾಜ್ಯದ ಬಜೆಟ್‌ನಿಂದ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಬೇಕು ಇಲ್ಲಿ ಮಾನ್ಯ ಬಂಡೆಪ್ಪ ಕಾಶಂಪೂರ್‌ರವರು ಇದ್ದಾರೆ, ಅವರು ಏನೂ ತೊಂದರೆಯಿಲ್ಲವೆಂದು ಹೇಳುತ್ತಾರೆ ಆದರೆ ತೊಂದರೆಯಿದೆ ಸ್ವಾಮಿ ನಾವೂ ನಿಮ್ಮ ಜಿಲ್ಲೆಗೆ 24ನೇ ತಾರೀಖಿನಂದು ಹೋಗಿದ್ದೆವು ಬೀದರ್‌ನಲ್ಲಿ ತೊಂದರೆ ಇದೆ ನಾವೂ ಕೂಡ ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದೇವೆ ಒಂದೇ ಬಾರಿಗೆ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ನಾವು ಕೇಳುತ್ತಿಲ್ಲ ಆದರೆ ವ್ಯವಸ್ಥಿತ ರೀತಿಯಲ್ಲಿ ರೈತರಿಗೆ ಬೀಜ ಮತ್ತು ಗೊಬ್ಬರ ವಿತರಣೆಯಾಗಬೇಕು ಅದಕ್ಕೆ You have to thank the Prime Minister of the country and also Sri Sharad Pawar ಪದೇಪದೇ ರೈತರ ಆತ್ಮಹತ್ಯೆ ಆಗುತ್ತಿರುವಂತಹ ಸಂದರ್ಭದಲ್ಲಿ ಅದನ್ನು ತಪ್ಪಿಸುವ ರೀತಿಯಲ್ಲಿ ಬೆಂಗಳೂರು ಆಗಲಿ, ಬೆಳಗಾಂ, ದಾವಣಗೆರೆ, ಹಾಸನ, ಕೊಡಗು, ಚಿಕ್ಕಮಗಳೂರು ಆಗಲಿ ಹಾಗೂ ತುಮಕೂರು ಜಿಲ್ಲೆಗಳಿಗೆ 2,680 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದಾರೆ ಕೇಂದ್ರ ಸರ್ಕಾರದವರು 1,600 ಕೋಟಿ ರೂಪಾಯಿ subsidy ರೂಪದಲ್ಲಿ ಕೊಡುತ್ತಾರೆ ಅದಕ್ಕೆ ರಾಜ್ಯ ಸರ್ಕಾರದವರು ಕೂಡ ಕೊಡಬೇಕಾಗುತ್ತದೆ ಒಂದೂವರೆ ವರ್ಷದ ಹಿಂದೆ ಬಂದಂತಹ ವಿದರ್ಭ package ಏನಿದೆ, ರೈತರಿಗೆ ಏಕೆ ಅನಾನು ಕೂಲವಾಗುತ್ತಿದೆ ಎಂದು ಗೊತ್ತಾಗುತ್ತಿಲ್ಲ ಕೇಂದ್ರದಿಂದ ಬಂದಿರುವಂತಹ ಹಣವನ್ನು ಬಹಳಷ್ಟು ಮಂತ್ರಿಗಳಿಗೆ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ ನಾವು ಇರತಕ್ಕಂಥ ವಸ್ತು ಸ್ಥಿತಿಯನ್ನು ತಮ್ಮ ಮುಂದೆ ಇಡುತ್ತಿದ್ದೇವೆ ಮಾನ್ಯ ಎಂ ಪಿ ಪ್ರಕಾಶ್‌ರವರು ಬಹಳ ಅನುಭವಿಗಳಿದ್ದಾರೆ ಆದುದರಿಂದ ಈ ಎಲ್ಲಾ ಕೆಲಸಗಳನ್ನು ಮಾಡುವಂತಹ ಜವಾಬ್ದಾರಿ ಕೊಟ್ಟಿದೆ ತಾವು ಒಂದು ವಿಚಾರ ಸ್ಪಷ್ಟವಾಗಿ ಹೇಳಬೇಕು, ನಮ್ಮ ಕಂದಾಯ ಸಚಿವರು ಏನು 494 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು, ಅದರಲ್ಲಿ ಎಷ್ಟು ಖರ್ಚಾಗಿದೆ ಎಂದು ಇವತ್ತು ಸ್ಪಷ್ಟನೆ ಬೇಕು ಇವತ್ತು Natural Calamity Relief Fund ಗೋಸ್ಕರ ಸರ್ವಪಕ್ಷದ ನಿಯೋಗ ಕೇಂದ್ರಕ್ಕೆ ಹೋಗಬೇಕಾದಲ್ಲಿ ನಾವೆಲ್ಲರೂ ಕೂಡ ಅಲ್ಲಿಗೆ ಬಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆ ರಾಜ್ಯ ಸರ್ಕಾರ ತನ್ನ ಮಿತಿಯೊಳಗೆ ಕೆಲಸ ಮಾಡುತ್ತಿದೆ, ದುಡ್ಡನ್ನು ಬಿಡುಗಡೆ ಮಾಡಿದೆ, ಖರ್ಚು ಆಗಿದೆ, ಅದು

ಜನರಿಗೆ ಮುಟ್ಟಿದೆ ನೀವು ಕೂಡ ಎಷ್ಟು ಬೇಕೆಂದು ಹೇಳಿ PD account ನಲ್ಲಿ ಎಷ್ಟು ದುಡ್ಡು ಇಟ್ಟಿದ್ದಾರೆ? ಜಿಲ್ಲಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ? ಎಲ್ಲಿಯೂ ಕೂಡ ಕೆಲಸವಾಗುತ್ತಿಲ್ಲ ಇವತ್ತು ಪ್ರವಾಹ ಬಂದಿದೆ ಹೋದಸಲ ಪ್ರವಾಹ ಬಂದಾಗ ಆ ಭಾಗದಲ್ಲಿ ನಾವು ಕೆಲಸ ಮಾಡಿದ್ದೇವೆ ಕೇಂದ್ರ ಸರ್ಕಾರ ಹಣವನ್ನು ಕೊಟ್ಟಿದೆ ಇವತ್ತು ರಾಜ್ಯ ಸರ್ಕಾರ ಕೂಡ ರೈತರ ನೆರವಿಗೆ ಬರಬೇಕಾಗುತ್ತದೆ ಇವತ್ತು ತಾವೆಲ್ಲರೂ ಸ್ಪಷ್ಟವಾಗಿ ಎಷ್ಟು ಹಣ ಬೇಕು ಹಾಗೂ ಎಷ್ಟು ಖರ್ಚಾಗಿದೆ? ಎಷ್ಟು ಬೀಜ ಮತ್ತು ಗೊಬ್ಬರ ಬೇಕಾಗಿದೆ? ಯಾವ್ಯಾವ ಬೀಜದ ಕೊರತೆ ಇದೆ? ರೈತರು ಯಾವ್ಯಾವ season ನಲ್ಲಿ ಯಾವ್ಯಾವ ಬೀಜ ಬಿತ್ತುತ್ತಾರೆ? ಇವತ್ತು ನಮ್ಮ ಕಡೆ ಉದ್ದು, ತೊಗರಿ, ಎಳ್ಳು ಮತ್ತು ಸೂರ್ಯಕಾಂತಿ ಬಿತ್ತುತ್ತಾರೆ ಇವತ್ತು ಹಳೇ ಮೈಸೂರಿನಲ್ಲಿ ಬಿತ್ತುವಂತಹ ಬೀಜಕ್ಕೆ ಪಟ್ಟಿ ಮಾಡ ಬೇಕಾಗುತ್ತದೆ ನಿಮ್ಮ ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ರಾತ್ರಿ ಹಗಲು ಕುಳಿತು ಅಂಕಿಅಂಶಗಳನ್ನು ತೆಗೆದುಕೊಂಡು ಹೋಗ ಬೇಕಾಗುತ್ತದೆ ಇವತ್ತು ನಿಮ್ಮ ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬಿತ್ತನೆ ಬೀಜ ಸಿಗುತ್ತಿಲ್ಲವೆಂದು ದೊಡ್ಡ ಪ್ರತಿಭಟನೆಯಾಯಿತು ಅದಾದ ಮೇಲೆ ಅಲ್ಲಿ ರೈತರಿಗೆ ಬೀಜ ವಿತರಣೆ ಆಯಿತೋ ಇಲ್ಲವೋ ಗೊತ್ತಿಲ್ಲ ಆ ರೀತಿ ಪ್ರತಿಭಟನೆಗೆ ಏಕೆ ಅನುವು ಮಾಡಿಕೊಡುತ್ತೀರಿ? ಅಲ್ಲಿ ಯಾವುದೇ ಆಲೂಗಡ್ಡೆ ಬೀಜ ವಿತರಣೆಯಾಗಿಲ್ಲವೆಂದು ಅಲ್ಲಿನ ಜನರು ಕೇಳುತ್ತಿದ್ದಾರೆ ಅದರ ಜೊತೆಗೆ ಇನ್ನೊಂದು ವಿಚಾರ insurance ಬಗ್ಗೆ ಹೇಳಿದ್ದೀರಿ, ಪತ್ರಿಕೆಯಲ್ಲಿ ನಿನ್ನೆ ಓದಿದ್ದೇನೆ ಅದನ್ನು ವಿತರಣೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಏನು ಆಗುತ್ತಿದೆ, ಅದು ನೀವು ಬಂದ ಮೇಲೆ 172 ಇದ್ದದ್ದು 252ಕ್ಕೆ ಹೋಗಿದೆ ಬೀದರ್ ಜಿಲ್ಲೆಯಲ್ಲಿ 50ಕ್ಕಿಂತ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಏಕೆಂದರೆ ಸಾಕಷ್ಟು ಸಾಲ ಇದೆ ಇವತ್ತು ಮಾನ್ಯ ಯಡಿಯೂರಪ್ಪನವರು ಏನು ಸಾಲ ಮನ್ನಾ ಯೋಜನೆ ತಂದಿದ್ದಾರೆ, ಒಂದು ವರ್ಷದ ಅವಧಿಯಲ್ಲಿ ರೈತರ ಆತ್ಮಹತ್ಯೆ ಬಹಳ ಆಗುತ್ತದೆ ಏಕೆಂದರೆ ಯಾವ DCC Bank ನವರೂ ಕೂಡ ಸಾಲ ಕೊಡುವುದಿಲ್ಲ ರೈತರಿಗೆ ತೊಂದರೆಯಾಗುತ್ತದೆ ನೀವು Apex Bankಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂದು ಸ್ಪಷ್ಟವಾಗಿ ಹೇಳಿ ಎಲ್ಲಾ ಜಿಲ್ಲಾ ಬ್ಯಾಂಕಿಗೆ ಎಷ್ಟು ಹಣ ಹೋಗಿದೆ? ಎಲ್ಲಾ ಕಡ default ಆಗಿ DCC Bank ಎಲ್ಲಿ ಕೂಡ ಕೆಲಸ ಮಾಡುತ್ತಿಲ್ಲ You

have brought financial crisis in the Karnataka State ನೀವು ಒಂದೆರಡು ದಿವಸ ಹೇಳಿಕೆ ಮುಖಾಂತರ ಹೇಳಿದರೆ ಆಗುವುದಿಲ್ಲ ತಾವೂ ಕೂಡ ರೈತರ ಬಗ್ಗೆ ಬಹಳಷ್ಟು ಕಳಕಳಿ ಇರುವಂತಹವರಾಗಿದ್ದು, ಈ ಸದನದಲ್ಲಿ ಬಹಳಷ್ಟು ಪ್ರತಿಭಟನೆ ಮಾಡಿದ್ದೀರಿ, ಚರ್ಚೆಯಲ್ಲಿ ಭಾಗವಹಿಸಿದ್ದೀರಿ ನಿಜವಾದ ರೀತಿಯಲ್ಲಿ ನಿಮ್ಮ ಸಾಲ ಮನ್ನಾದಿಂದ ಬ್ಯಾಂಕುಗಳು ಎಷ್ಟು ಹಣವನ್ನು ರೈತರಿಗೆ ಕೊಡುತ್ತಿದೆ? ಬಿತ್ತನೆ ಪ್ರಾರಂಭ ಆಗಿದೆ ಎಲ್ಲೂ ಕೂಡ ರೈತರಿಗೆ ಸಾಲ ಸಿಗುತ್ತಿಲ್ಲ ಪರದಾಟ ನಡೆದಿದೆ ಇವತ್ತು ರೈತರಿಗೆ ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ ನೀವು ಘೋಷಣೆ ಮಾಡುತ್ತೀರಿ ಮಾನ್ಯ ಕುಮಾರಸ್ವಾಮಿಯವರು ರೈತರ ಸಮಸ್ಯೆಗಳನ್ನು ಕೇಳಲು ದೊಡ್ಡ ಸಮಾವೇಶ ಕರೆದಿದ್ದರು ಆ ಸಮಾವೇಶಕ್ಕೆ ನಾನು ಹೋಗಿದ್ದೆ ಮತ್ತು ಹೆಚ್ ಕೆ ಪಾಟೀಲ್‌ರವರು ಬಂದಿದ್ದರು ಅಲ್ಲಿ ಒಂದು ಅರ್ಧ ಗಂಟೆ ಕುಳಿತುಕೊಂಡಿದ್ದೆ ಆ ಸಮಾವೇಶ ಹೇಗಿತ್ತೆಂದರೆ ಕುಮಾರಸ್ವಾಮಿಯವರ ಅಭಿಮಾನಗಳ ಸಮಾವೇಶವಾಗಿತ್ತು ಆ ಸಮಾವೇಶಕ್ಕೆ ಮಾನ್ಯ ಉಪಮುಖ್ಯಮಂತ್ರಿಯವರು ಹಾಗೂ ಮಾನ್ಯ ಕಂದಾಯ ಸಚಿವರು ಬಂದಿಲ್ಲ See their co-ordination ಸಮ್ಮಿಶ್ರ ಸರ್ಕಾರದಲ್ಲಿ they must have perfect co-ordination ಅವರಲ್ಲಿ co-ordination ಇಲ್ಲ ನಾನು ಹೇಳಿದ್ದೇನೆ, ಇದು ಕೇವಲ ರೈತರ ಸಾಮಾವೇಶ ಅಲ್ಲ, ಅಲ್ಲಿ ರೈತರ ಸಮಸ್ಯೆಗಳನ್ನು ತಿಳಿದುಕೊಂಡು, ಎಷ್ಟು ಹಣವನ್ನು ಬಿಡುಗಡೆ ಮಾಡಬೇಕು, ರೈತರಿಗೆ ಎಲ್ಲಿ ತೊಂದರೆಯಾಗಿದೆ? ಆ ಒಂದು ಸಭೆಯಲ್ಲಿ ಏನು ಪ್ರಕಟಣೆ ಮಾಡಿದ್ದಾರೆ, ಆ ಒಂದು ಸಭೆಯಲ್ಲಿ ಹಣಕಾಸಿನ ಸಚಿವರಾದ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲ ಇದನ್ನು ನೋಡಿದಾಗ ತಮ್ಮಲ್ಲಿ co-ordination ಇಲ್ಲವೆಂದು ಕಂಡುಬರುತ್ತದೆ ಇನ್ನು ಎರಡು ತಿಂಗಳು ಉಳಿದಿರುವುದು ರಾಜ್ಯದಲ್ಲಿ ಆ ಎರಡು ತಿಂಗಳಲ್ಲಿ ಏನು ಬದಲಾವಣೆಯಾಗುತ್ತದೆ ಅದು ಬೇರೆ ವಿಷಯ ಆದರೆ ಬರತಕ್ಕಂಥ ದಿವಸದಲ್ಲಿ ಈ ರಾಜ್ಯದ ಮುಖ್ಯಮಂತ್ರಿಯಾದಾಗ ಈ ರಾಜ್ಯದಲ್ಲಿ ಎಂತಹ ಕಷ್ಟ ಕಾರ್ಪಣ್ಯಗಳು ಬಂದಾಗ ಅದನ್ನು ನಿವಾರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ That is the satisfaction ಆ ಒಂದು ತೃಪ್ತಿ ತಮಗೆ ಯಾವಾಗಲೂ ಕೂಡ ಸಿಗುತ್ತದೆ Man must have a philosophical blend of mind ನನ್ನ ಅಧಿಕಾರ ಶಾಶ್ವತವಲ್ಲ ನನ್ನ ಅಧಿಕಾರ ಕಾಲದಲ್ಲಿ ರೈತರಿಗೆ ಏನು ಮಾಡಿದ್ದೇನೆ ಎನ್ನುವುದು ಬರುತ್ತದೆ

ರೈತರ ಬಗ್ಗೆ ಹೇಳುವಾಗ 'ಮಣ್ಣಿನ ಮಗ' ಎಂದು ಹೇಳುತ್ತೀರಿ ಯಾವ ಕಾಲದಲ್ಲಿ ಆಗದೇ ಇರುವಂತಹ ಕೆಲಸ ಮಾಡಿದ್ದೇವೆಂದು ಹೇಳುತ್ತೀರಿ ಆದರೆ ಪ್ರಚಾರ ಮಾತ್ರ ಬಹಳ ಸಿಕ್ಕಿದೆ ಯಾರಿಗೂ ಕೂಡ ಪ್ರಚಾರ ಸಿಕ್ಕಿಲ್ಲ ತಮಗೆ ಮತ್ತು ಮಾನ್ಯ ಯಡಿಯೂರಪ್ಪನವರಿಗೆ ಪ್ರಚಾರ ಸಿಕ್ಕಿದೆ ನೀವು ಆ ಪ್ರಚಾರದ ಧಾಟಿಯಲ್ಲಿ ತಾವು ಹೋದಿರಿ ಉಳ್ಳಾಲ ಕ್ಷೇತ್ರದಲ್ಲಿ ವಿಕಾಸ ಯಾತ್ರೆ ರಥ ಹೋಯಿತು ಆ ರಥಕ್ಕೆ ಉಳ್ಳಾಲ ಮತಕ್ಷೇತ್ರದಲ್ಲಿ puncture ಆಯಿತು That is the reaction of the people ಜನರ ಅಭಿಪ್ರಾಯ ಏನಿದೆ, ಅದು ಯಾವಾಗಲೂ ಕೂಡ ಚುನಾವಣೆಯಲ್ಲಿ ಗೊತ್ತಾಗುತ್ತದೆ ತಮ್ಮ ಗತಿ ಏನೆಂದು ಆ ಚುನಾವಣೆಯಲ್ಲಿ ಗೊತ್ತಾಯಿತು ನಮ್ಮದು ಈ ಗತಿಯಾಗಿ ಇಲ್ಲಿ ಬಂದು ಕುಳಿತಿದ್ದೇವೆ ಬರತಕ್ಕಂಥ ದಿನದಲ್ಲಿ ರಾಜ್ಯದಲ್ಲಿ ಕೂಡ ನಮ್ಮ ಪಕ್ಷಕ್ಕೆ ಆತ್ಮವಿಶ್ವಾಸ ಬೆಳೆಸುವಂತಹ ರೀತಿಯಲ್ಲಿ ಒಳ್ಳೆಯ ಮನೋಬಲ ನಮ್ಮ ಪಕ್ಷಕ್ಕೆ ಬಂದಿದೆ ಆದುದರಿಂದ ಕೆಲಸವನ್ನು ಪ್ರಾರಂಭ ಮಾಡಿ ಮಾನ್ಯ ಪ್ರಕಾಶ್‌ರವರೆ, ಯಾವಾಗಲಾದರೂ ಕೂಡ ಪ್ರವಾಹ ಪೀಡಿತ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ವಿರೋಧ ಪಕ್ಷದವರನ್ನು ಕರೆಸಿ ಮಾತನಾಡಿದ್ದೀರಾ? Floor leaders ಅನ್ನು ಕರೆಸಿ ಮಾತನಾಡಿದ್ದೀರಾ? ಯಾವ್ಯಾವ ಭಾಗದಲ್ಲಿ ಏನೇನಾಗುತ್ತಿದೆಯೆಂದು ಕೇಳಿದ್ದೀರಾ? ನಾನು ಎಲ್ಲ ಕಡೆ ಕಳುಹಿಸಿ ಕೇಳಿದ್ದೇನೆ ಇಲ್ಲಿ ಉನ್ನತ ಶಿಕ್ಷಣ ಸಚಿವರು ಇಲ್ಲ ಅವರನ್ನು ಮತ್ತೊಂದು ಕಡೆ ತರಾಟೆಗೆ ತೆಗೆದುಕೊಳ್ಳುತ್ತೇವೆ ಯಾವಾಗಲೂ ಕೂಡ ರಾಜ್ಯದಲ್ಲಿ ಸಮಸ್ಯೆಗಳು ಬಂದಾಗ ನಮ್ಮ ಅನಿಸಿಕೆಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕು Floor leaders ಅನಿಸಿಕೆಯನ್ನು ಗಣನೆಗೆ ತೆಗೆದುಕೊಳ್ಳಬೇಕು ಆದರೆ ಎಲ್ಲೂ ಕೂಡ ಅವರನ್ನು ಗಣನೆಗೆ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಲಿಲ್ಲ ಆದರೆ ಏನೋ ಬಂದು ಬಿಟ್ಟಿದೆ ಎನ್ನುವ ಭರಾಟೆ ನಡೆಯುತ್ತಿದೆ ಮಾನ್ಯ ಕುಮಾರಸ್ವಾಮಿಯವರೇ, ಆ ಜಾಗದಲ್ಲಿ ಎಷ್ಟೋ ಜನ ಮುಖ್ಯಮಂತ್ರಿಗಳಾಗಿ ಬಂದಿದ್ದಾರೆ ಮುಖ್ಯಮಂತ್ರಿಗಳಾಗಿ 20 ತಿಂಗಳು ಇರಲಿ, 8 ವರ್ಷವಿರಲಿ, ಅಲ್ಲಿ ಕುಳಿತು ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿದ್ದಾರೆ ಇವತ್ತು ರಾಷ್ಟ್ರಮಟ್ಟದಲ್ಲಿ ಕೂಡ ಸಾಕಷ್ಟು ರಾಜಕೀಯ ಬದಲಾವಣೆಯಾಗಿದೆ ಇಲ್ಲಿಯೂ ಕೂಡ ಬದಲಾವಣೆಯಾಗುವಂತಹ ಸಂದರ್ಭ ಬರುತ್ತಿದೆ ಮಾನ್ಯ ಯಡಿಯೂರಪ್ಪನವರು ಸಾಲ ಮನ್ನಾ ಮಾಡಿ ರಾಜ್ಯದ ಬಡವರಿಗೆ ಹಾಗೂ ರೈತರಿಗೆ ಸಹಾಯ ಮಾಡಬೇಕು ಎನ್ನುವ ಕಳಕಳಿಯಿದ್ದರೆ, ವಾಸ್ತವ ಏನು ನಡೆಯುತ್ತಿದೆ

ಎಂದು ವರದಿ ತರಿಸಿ ಪ್ರತಿಯೊಂದು DCC Bank ನ ಅಧ್ಯಕ್ಷರನ್ನು ಕರೆಸಿ, ಎಲ್ಲೆಲ್ಲಿ ಕೊರತೆ ಇದೆ ನೋಡಿ ನೀವು ಸುಮ್ಮನೆ ಎಲ್ಲಾ ಕಡೆ ಸಾಲ ಮನ್ನಾ ಮಾಡಿದ್ದೇವೆಂದು ಹೇಳಿಕೊಂಡು ಹೋದರೆ ಆಗುವುದಿಲ್ಲ ಇಲ್ಲಿ ಮಾನ್ಯ ಈಶ್ವರಪ್ಪನವರು ಇಲ್ಲ ಇವತ್ತು ವಿದರ್ಭ ಪ್ಯಾಕೇಜ್‌ನಲ್ಲಿ 800 ಕೋಟಿ ರೂಪಾಯಿ ಇದ್ದು, ನೀರಾವರಿಗೆ ಸಂಬಂಧಪಟ್ಟ ಹಾಗೆ ಏನೂ ಆಗುತ್ತಿಲ್ಲ ಇವತ್ತಿನ ಈ ಸಂದರ್ಭದಲ್ಲಿ ಸಾಕಷ್ಟು ವಿಚಾರಗಳನ್ನು ನಾನು ಹೇಳಿದ್ದೇನೆ, ಮೊದಲು ಹೇಳಿದ್ದೇನೆ ಈಗಲೂ ಕೂಡ ಹೇಳಿದ್ದೇನೆ ಇದು ರಾಜ್ಯದ ರೈತರಿಗೆ ಸಂಬಂಧಪಟ್ಟಂಥ ಸರ್ಕಾರವಲ್ಲ ಇದು ನಿಷ್ಕ್ರಿಯವಾದ ಸರ್ಕಾರ, ಯಾವ ಕೆಲಸ ಕಾರ್ಯಗಳನ್ನು ಮಾಡಿಲ್ಲ ರಾಜ್ಯದಲ್ಲಿ ಇವತ್ತು ರೈತರು ದಿಕ್ಕು ತಪ್ಪಿ ಹೋಗಿದ್ದಾರೆ ರಾಜ್ಯದಲ್ಲಿ ಬಡವರಿಗೆ ಯಾವುದೇ ಹಾದಿಯನ್ನು ತೋರಿಸುತ್ತಿಲ್ಲ ಇಂಥ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಅವರ ನೆರವಿಗೆ ಬರಬೇಕಾಗಿದೆ ಇವತ್ತಿನ ದಿವಸ ಅವರು ಯಶಸ್ವಿಯಾಗಿ ಕೆಲಸವನ್ನು ಮಾಡಿಲ್ಲ ಇವತ್ತು ಕೆಲಸವನ್ನು ಮಾಡುವಂಥಾದ್ದು ರಾಜ್ಯದ ರೈತರಿಗೆ ನೆರವಾಗುವಂಥ ರೀತಿಯಲ್ಲಿ ಆಗಬೇಕು ಕೇಂದ್ರ ಸರ್ಕಾರದಿಂದ ಏನಾದರೂ ಸಹಾಯ ಬೇಕಾಗಿದ್ದರೆ, ನಾವು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಇತರರು ಇದ್ದಾರೆ ನಾವೆಲ್ಲರೂ ನಿಮ್ಮ ಜೊತೆಯಲ್ಲಿ ಬರುತ್ತೇವೆ ನಾವೂ ಒತ್ತಡವನ್ನು ತರುತ್ತೇವೆ ಕಳಸಬಂಡೂರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಸೋಧ್‌ರವರನ್ನು ಸಂಪರ್ಕ ಮಾಡಿರಬೇಕು ಅವರು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸುತ್ತಿದ್ದಾರೆ ನಾವು 18 ತಿಂಗಳುಗಳು ಸಾಕಷ್ಟು ಕೇಳಿದೆವು ತಾವು ಒಂದು ಸಾರಿಯೂ ನಿಯೋಗವನ್ನು ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ಮಾಡಲಿಲ್ಲ ನಾವು ಮಾಡಿದ್ದೇವೆ, ನಾವು ಹೇಳಿದ್ದೇವೆ, ಎರಡೂ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಸಿ, ಕುಡಿಯುವ ನೀರಿನ ಸಮಸ್ಯೆ ಏನು ಇದೆ, ಅದು 7 56 ಟಿ ಎಂ ಸಿ ಇದೆ ತಮಿಳುನಾಡಿನಲ್ಲಿ ನೀರಿಗೆ ಪರದಾಟವಾದರೆ, ಆಂದ್ರಪ್ರದೇಶದಿಂದ ನೀರು ಕೊಟ್ಟಿದ್ದೀರಿ, ಮಧ್ಯಪ್ರದೇಶಕ್ಕೆ ಕೊಟ್ಟಿದ್ದೀರಿ Only you have to solve the drinking water problem ಅಂದ ಹಾಗೆ ಇವತ್ತು ಮಾನ್ಯ ಮನಮೋಹನ ಸಿಂಗ್‌ರವರು ಹೇಳಿದ್ದಾರೆ ಯು ಪಿ ಎ ಅಧ್ಯಕ್ಷರಾದ ಶ್ರೀಮತಿ ಸೋನಿಯಗಾಂಧಿಯವರು ಹೇಳಿದ್ದಾರೆ ಮಾನ್ಯ ಸೋಧ್‌ರವರು ಕೂಡ ಸಭೆಯನ್ನು ಕರೆಸುತ್ತಾರೆ ಅದು ಕೂಡ ಆಗುತ್ತದೆ ನೀವು ಏನು ಎಲ್ಲ confrontation ಮಾಡುತ್ತೀರಿ ಗುದ್ದಲಿ ಹಿಡಿದುಕೊಂಡು

ಮಾನ್ಯ ಕೆ ಎಸ್ ಈಶ್ವರಪ್ಪನವರು ಹೊರಟುಬಿಟ್ಟರು ಈ ಗುದ್ದಲಿ ಪೂಜೆ ಏನು ಆಯಿತು? ಎಲ್ಲಾ ಕಡೆ ಏನು ಆಯಿತು? ಏನೂ ಆಗಿಲ್ಲ ಇವತ್ತು ಕೇಂದ್ರ ಸರ್ಕಾರದ ಸಹಾಯ ಬೇಕೆಂದು ಹೇಳಿ, ಸರ್ವಪಕ್ಷದ ನಿಯೋಗ ಹೋಗುವುದಕ್ಕೆ ತಯಾರಾಗಿ ಇದ್ದೀರಿ. ಮತ್ತೊಂದು ಕಡೆ ಗುದ್ದಲಿ ಪೂಜೆ ಮಾಡುತ್ತೇವೆನ್ನುವುದಕ್ಕೆ ಅರ್ಥವೇ ಇಲ್ಲ ಇದು ಕೇವಲ cheap popularity ಭಾಗದ ಜನರಿಗೆ ಮೋಸ ಮಾಡುವಂಥ ತಂತ್ರ, ಇದು ಬಹಳ ದಿವಸ ನಡೆಯುವುದಿಲ್ಲ ಕೋಮು ಮತ್ತೊಂದು ಕೋಮಿನ ಮಧ್ಯೆ ಮಾಡಿದ್ದೀರಿ. ಅದೇ ರಾಜಕಾರಣವಲ್ಲ ಇವತ್ತು ಕಾರ್ಯಕ್ರಮಗಳನ್ನು ಎದುರಿಗಿಟ್ಟುಕೊಂಡು, ಬಡವರ ಬಗ್ಗೆ ಚಿಂತನೆ ಮಾಡತಕ್ಕಂಥ ಬಡವರ ಹೊಟ್ಟೆಗೆ ಅನ್ನವನ್ನು ಕೊಡುವಂಥ ಕೆಲಸದ ಬಗ್ಗೆ ಸರ್ಕಾರ ಎಲ್ಲಿಯವರೆಗೆ ಕೆಲಸ ಮಾಡುವುದಿಲ್ಲ, ಜನರ ಭಾವನೆಗಳನ್ನು ಕೆರಳಿಸಿ ಯಾರು ಸಹ ಬಹಳಷ್ಟು ದಿವಸ ರಾಷ್ಟ್ರಮಟ್ಟದಲ್ಲಿ ಮಾಡುವುದಕ್ಕೆ ಆಗಲಿಲ್ಲ ರಾಜ್ಯ ಮಟ್ಟದಲ್ಲೂ ನಿಲ್ಲುವುದಕ್ಕೆ ಆಗುವುದಿಲ್ಲ ಅದಕ್ಕೆ ಇವತ್ತಿನ ದಿವಸ ರೈತರಿಗೆ ಏನು ತೊಂದರೆ ಇದೆ ಅದನ್ನು ಬಗೆಹರಿಸುವ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿ, ನಮ್ಮನ್ನು ಕರೆಸಿ, ಸಮಾಲೋಚನೆಯನ್ನು ಮಾಡಿ ನಾವು ಕೂಡ ಸಮಾಲೋಚನೆಗೆ ಸಿದ್ಧವಿದ್ದೇವೆಂಬ ಮಾತನ್ನು ಹೇಳುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಸಿದ್ದರಾಮಯ್ಯನವರು (ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ವಿರೋಧಪಕ್ಷದ ಹಿರಿಯ ಮುಖಂಡರುಗಳು ಮಾತನಾಡಿದ್ದಾರೆ ಇವತ್ತು ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ಆಗಿರುವಂಥ ಪರಿಸ್ಥಿತಿಯ ಬಗ್ಗೆ, ರೈತರಿಗೆ, ಕೂಲಿ ಕಾಮಿಕರಿಗೆ ಬಡವರಿಗೆ, ಆಗಿರತಕ್ಕಂಥ ಸಾವು ನೋವುಗಳ ಬಗ್ಗೆ, ರೈತರಿಗೆ ಆಗಿರುವಂಥ ಬೆಳೆ ಹಾನಿ, ಬೇರೆ ಬೇರೆ ಬಿತ್ತನೆ ಕೆಲಸಗಳು ಪ್ರಾರಂಭವಾಗಿದೆ ಈ ಬಿತ್ತನೆ ಕಾರ್ಯವಾದ ಮೇಲೆ ಬಿತ್ತನೆ ಮಾಡಿರುವಂಥಾದ್ದು ಕೂಡ ಮಳೆಯಿಂದ ಕೊಚ್ಚಿ ಹೋಗಿರುವಂಥಾದ್ದು, ನಷ್ಟವಾಗಿರುವಂಥಾದ್ದು, ಇವತ್ತು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಆಗಿದೆ ಬೆಳಗಾಂ ಜಿಲ್ಲೆ, ಬಾಗಲಕೋಟೆ, ಗುಲ್ಬರ್ಗಾ, ರಾಯಚೂರು, ಕೊಡಗು ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು, ಇನ್ನು ಅನೇಕ ಜಿಲ್ಲೆಗಳಲ್ಲಿ ಇವತ್ತು ಮಳೆ ಹೆಚ್ಚಾಗಿ ಆಗಿ ಪ್ರವಾಹ ಬಂದು, ರೈತರಿಗೆ, ಕೂಲಿ ಕಾರ್ಮಿಕರಿಗೆ, ಬಹಳ ನಷ್ಟವಾಗಿದೆ ಕರಾವಳಿ ಪ್ರದೇಶದಲ್ಲಿ

ಕಡಲು ಕೊರೆತ, ರಸ್ತೆಗಳೆಲ್ಲಾ ಹಾಳಾಗಿರುವಂಥಾದ್ದು ಅನೇಕ ಜಿಲ್ಲೆಗಳಲ್ಲಿ ಜನ ಜೀವನ ಸಂಪೂರ್ಣ ಅಸ್ತವ್ಯಸ್ಥವಾಗಿರುವಂಥಾದ್ದನ್ನು ಕೂಡ ನಾವು ನೋಡುತ್ತಿದ್ದೇವೆ ನಮಗೆ ಇರುವ ಮಾಹಿತಿ ಪ್ರಕಾರ ಮಳೆ ಮತ್ತು ಪ್ರವಾಹದಿಂದಾಗಿ ಸುಮಾರು 50 ಜನರು ಪ್ರಾಣವನ್ನು ಕಳೆದು ಕೊಂಡಿದ್ದಾರೆಂದು ಇದೆ ಇದು ಸಣ್ಣ ಸಂಖ್ಯೆ ಏನಲ್ಲ ರೆವಿನ್ಯೂ ಸಚಿವರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಕೊಟ್ಟಿರುವ ಹೇಳಿಕೆ ಪ್ರಕಾರ ಸುಮಾರು 39 ಜನರು ಸತ್ತಿದ್ದಾರೆಂದು ಸರ್ಕಾರದ ಮಾಹಿತಿ ಇದೆ ನಮಗೆ ಇರುವ ಮಾಹಿತಿ ಪ್ರಕಾರ ಸುಮಾರು 50ಕ್ಕೂ ಹೆಚ್ಚು ಜನರು ಇವತ್ತು ಸಾವನ್ನಪ್ಪಿದ್ದಾರೆ ಇದು ಮನೆಗಳ ಕುಸಿತದಿಂದ ಸತ್ತಿರುವಂಥಾದ್ದು, ಸಿಡಿಲು ಬಡಿದು ಸತ್ತಿರುವಂಥಾದ್ದು, ಮಳೆಯಲ್ಲಿ ಕೊಚ್ಚಿ ಹೋಗಿ ಸತ್ತಿರುವಂಥಾದ್ದು, ಹೀಗೆ ಬೇರೆ ಬೇರೆ ರೀತಿಯಲ್ಲಿ ಪ್ರವಾಹದಿಂದ ರೈತರು ಸತ್ತಿದ್ದಾರೆ ಇದು ರೈತರು, ಜನರು ಸತ್ತಿರುವಂಥಾದ್ದು ಅದೇ ರೀತಿಯಲ್ಲಿ ಜಾನುವಾರುಗಳು ಕೂಡ ಎರಡು ಸಾವಿರಕ್ಕೂ ಹೆಚ್ಚು ಜಾನುವಾರುಗಳು ಇವತ್ತು ಸತ್ತಿವೆ ಕೆಲವು ಕಡೆಗಳಲ್ಲಿ ಪ್ರವಾಹದಿಂದ ಕುರಿಗಳ ಹಿಂಡು ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಸತ್ತಿವೆ ದನಕರುಗಳು ಸತ್ತಿವೆ, ಎಮ್ಮೆಗಳು ಸತ್ತಿವೆ, ಇದು ಒಂದು ಇನ್ನು ಈ ಪ್ರವಾಹದಿಂದಾಗಿ ಇವತ್ತು ಸುಮಾರು 25,000ಕ್ಕೂ ಹೆಚ್ಚು ಮನೆಗಳು ಬಿದ್ದು ಹೋಗಿವೆ ಅವರೆಲ್ಲರೂ ನಿರಾಶ್ರಿತರಾಗಿದ್ದಾರೆ ಸಾಮಾನ್ಯವಾಗಿ ಬಿದ್ದು ಹೋಗುವಂಥ ಮನೆಗಳೆಲ್ಲಾ ಬಡವರ ಮನೆಗಳಾಗಿರುತ್ತವೆ ಅದು ಹಳೆಯ ಮನೆಗಳು, ಬಡವರ ಮನೆಗಳು, ಬಡತನ ರೇಖೆಗಿಂತ ಕೆಳಗೆ ಇರುವಂಥ ಜನರ ಮನೆಗಳು, ಬಹಳ ಶಿಥಿಲವಾಗಿರುವಂಥ ಮನೆಗಳೆಲ್ಲಾ ಬಿದ್ದು ಹೋಗಿವೆ ಸುಮಾರು 25,000 ಮನೆಗಳು ಬಿದ್ದು ಹೋಗಿವೆ ಒಂದು ಅಂದಾಜಿನ ಪ್ರಕಾರ ಇವೆಲ್ಲದರ ನಷ್ಟ ಸುಮಾರು ಐದು ನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ಆಗಿದೆ ಇಷ್ಟೊಂದು ಕೆಟ್ಟ ಪರಿಸ್ಥಿತಿ ಪ್ರವಾಹದಿಂದ ನಿರ್ಮಾಣವಾಗಿದ್ದರೂ ಕೂಡ, ಜನ ಜೀವನ ಅಸ್ತವ್ಯಸ್ತವಾಗಿದ್ದರೂ ಕೂಡ, ಸರ್ಕಾರ ಇವತ್ತಿನವರೆಗೂ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ ಸರ್ಕಾರಕ್ಕೆ ಗಂಭೀರತೆ ಇದ್ದಿದ್ದರೆ, ಇಷ್ಟು ಹೊತ್ತಿಗೆ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪಮುಖ್ಯ ಮಂತ್ರಿಯವರು, ಮಾನ್ಯ ಹಣಕಾಸಿನ ಮಂತ್ರಿಯವರು, ಮಾನ್ಯ ಕಂದಾಯ ಸಚಿವರು, ಮಾನ್ಯ ಕೃಷಿ ಸಚಿವರು, ಮಾನ್ಯ ಗೃಹ ಸಚಿವರು, ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಇವರೆಲ್ಲರೂ

ಎಲ್ಲಿ ಪ್ರವಾಹದಿಂದ ಜನರು ಸತ್ತಿದ್ದಾರೆ, ತತ್ತರಿಸಿದ್ದಾರೆ, ಆ ಪ್ರದೇಶಗಳಿಗೆಲ್ಲಾ ಹೋಗಿ ಅವರಿಗೆ ಪರಿಹಾರವನ್ನು ಕೊಡುವಂಥ ಕೆಲಸ ಪ್ರಾರಂಭವಾಗ ಬೇಕಾಗಿತ್ತು ಇವತ್ತಿನವರೆಗೂ ಎಲ್ಲಿಯೂ ಪರಿಹಾರ ಕೊಡುವಂಥ ಕೆಲಸಗಳು ಪ್ರಾರಂಭ ಆಗಿಲ್ಲ ಕೆಲವು ಕಡೆಗಳಲ್ಲಿ ಸತ್ತವರ ಕುಟುಂಬಕ್ಕೆ ಅಲ್ಪಸ್ವಲ್ಪ ಪರಿಹಾರವನ್ನು ಕೊಟ್ಟಿದ್ದಾರೆ ಆದರೆ ಎಲ್ಲರಿಗೂ ಪರಿಹಾರ ಸಿಕ್ಕಿಲ್ಲ ಸತ್ತಿರುವವರ ಕುಟುಂಬಗಳಿಗೆ ಕೊಟ್ಟಿರುವ ಪರಿಹಾರದಿಂದ ಅವರ ಕಷ್ಟಗಳೆಲ್ಲಾ ಪರಿಹಾರವಾಗುತ್ತದೆ, ಅದು ಸರಿಹೋಗುತ್ತದೆಂಬ ಮಾತುಗಳನ್ನು ಹೇಳುವುದಿಲ್ಲ ಆದರೆ ಇವತ್ತು ಸತ್ತಿರುವಂಥವರು ಹೆಚ್ಚಾಗಿ ಕಷ್ಟದಲ್ಲಿರುವವರು, ಬಡವರು, ರೈತರು, ಆಗಿರುವುದರಿಂದ, ಈಗಾಗಲೇ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪ್ರವೃತ್ತಿ ಮುಂದುವರೆಯುತ್ತಲೇ ಇದೆ ರೈತರು ಆತ್ಮಹತ್ಯೆ ಮಾಡುಕೊಳ್ಳುವುದನ್ನು ನಿಲ್ಲಿಸಿಲ್ಲ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಸರ್ಕಾರವೇ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಸುಮಾರು 300ಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮಾನ್ಯ ಮುಖ್ಯಮಂತ್ರಿಯವರು ಬೀದರ್ ಜಿಲ್ಲೆಗೆ ಹೋಗಿದ್ದಾಗ ರೈತರು ಆತ್ಮಹತ್ಯೆ ಮಾಡಿಕೊಂಡರೆ, ನಾನು ಅಧಿಕಾರದಲ್ಲಿ ಮುಂದುವರೆಯುವುದಿಲ್ಲ, ರಜೀನಾಮೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ ಅವರು ಆ ರೀತಿ ಹೇಳಿದ ಮೇಲೂ ಸುಮಾರು 50 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಾಸನ, ಚಾಮರಾಜನಗರ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲೆಲ್ಲ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅದರ ಜೊತೆಗೆ, ಪ್ರವಾಹ ಬೇರೆ ಬಂದಿದೆ 2 ವರ್ಷ ಬರಗಾಲ ಬಂತು ಸರ್ಕಾರ ಬರಗಾಲದ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲಿಲ್ಲವೆಂದು ಎರಡು ಬಾರಿ ನಾವು ಈ ಸದನದಲ್ಲಿ ಚರ್ಚೆ ಮಾಡಿದೆವು ಎರಡು ಬಾರಿ ಚರ್ಚೆ ಆದರೂ ಕೂಡ ಪರಿಹಾರ ಕಾರ್ಯಕ್ರಮಗಳು ಸರಿಯಾಗಿ ಆಗಲಿಲ್ಲ ಸಂಕಷ್ಟಕ್ಕೆ, ಕಷ್ಟಕ್ಕೊಳಗಾದ ಜನರಿಗೆ ಪರಿಹಾರ ಸಿಗಲಿಲ್ಲ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಇವತ್ತು ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನೂ ಕೂಡ ಸಂಪೂರ್ಣವಾಗಿ ಖರ್ಚು ಮಾಡುವಂಥ ಕೆಲಸ ಕೂಡ ಆಗಲಿಲ್ಲ ರಾಜ್ಯ ಸರ್ಕಾರ ಹಣ ಖರ್ಚು ಮಾಡುವುದು ಬೇರೆ ಆದರೆ, ಎಲ್ಲದಕ್ಕೂ ಕೇಂದ್ರ ಸರ್ಕಾರ ಹಣ ಕೊಡಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ರಾಜ್ಯದಲ್ಲಿ ಪ್ರವಾಹ ಬಂದಿದೆ, ಅನೇಕ ಜಿಲ್ಲೆಗಳಲ್ಲಿ ತೊಂದರೆಯಾಗಿದೆ ಎಂದು ಕೇಂದ್ರ ಸರ್ಕಾರದವರನ್ನು ಭೇಟಿ ಮಾಡಿ

ಕೇಳಿದಾಗ ಕೇಂದ್ರ ಸರ್ಕಾರ ಸಹಾಯ ಮಾಡುತ್ತದೆ ಸಹಾಯವನ್ನು ನಾವು ಕೇಳಬೇಕು ಅದರ ಬಗ್ಗೆ ನಮ್ಮ ಕಡೆಯಿಂದ ಕೂಡ ಸಹಕಾರವಿರುತ್ತದೆ ಕೇಂದ್ರ ಸರ್ಕಾರದಿಂದ ಬರುವ ಸಹಾಯ ಪಡೆದುಕೊಳ್ಳತಕ್ಕಂಥದ್ದು ಒಂದು ಭಾಗ ಆದರೆ, ಇದುವರೆಗೆ ಕೇಂದ್ರ ಸರ್ಕಾರ ಸಹಾಯಕ್ಕೆ ಬಂದಿಲ್ಲ, ನಾವು ಇನ್ನೂ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿಲ್ಲ, ಅವರಿನ್ನೂ ಹಣ ಕೊಟ್ಟಿಲ್ಲ ಎಂದು ರಾಜ್ಯ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳಲಿಕ್ಕೆ ಸಾಧ್ಯವಿಲ್ಲ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾದ ಮೇಲೆ ಪದೇ ಪದೇ ನಮ್ಮ ಖಜಾನೆ ತುಂಬಿ ತುಳುಕುತ್ತಿದೆ, ಹಣಕಾಸಿಗೇನೂ ತೊಂದರೆಯಿಲ್ಲ, ಕಾರ್ಯಕ್ರಮಗಳಿಗೆ ಹಣದ ತೊಂದರೆಯೇ ಇಲ್ಲ, ನಿಭಾಯಿಸತಕ್ಕಂಥ ಶಕ್ತಿ ನಮಗಿದೆ ಎಂದು ಎಲ್ಲ ಕಡೆ statement ಕೊಡುತ್ತಿರುತ್ತಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಯಡಿಯೂರಪ್ಪನವರು ತುಂಬಿ ತುಳುಕುತ್ತಿದೆ ಎಂದರು ತುಂಬಿ ತುಳುಕುವುದೆಲ್ಲ ಚೆಲ್ಲಿ ಹೊಗುತ್ತಿದೆ, ಆಗ ಏನೂ ಉಳಿಯುತ್ತಿಲ್ಲ ಅದಕ್ಕಾಗಿ ಖರ್ಚು ಮಾಡುವುದಕ್ಕೆ ಹಣ ಕಡಿಮೆ ಇದೆ

ಶ್ರೀ ಸಿದ್ದರಾಮಯ್ಯ ತುಂಬಿ ತುಳುಕಿ ಹೊರಗಡೆ ಹೋಗುವುದು ಅದು waste ಅದನ್ನೇನೂ ಖರ್ಚು ಮಾಡುವುದಕ್ಕೆ ಬರುವುದಿಲ್ಲ ಏಕೆಂದರೆ, ಅದು waste ಆಗಿರುತ್ತದೆ ಏನು ತುಂಬಿರುತ್ತದೆ, ಆ ತುಂಬಿರುವ ಹಣವನ್ನಾದರೂ ಖರ್ಚು ಮಾಡಬೇಕಲ್ಲವೇ ಮಾನ್ಯ ಯಡಿಯೂರಪ್ಪನವರೇ? ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ನಾನು ಟೀಕೆ ಮಾಡುತ್ತಿದ್ದೇನೆಂದು ತಾವು ಭಾವಿಸಬಾರದು ಆರೋಗ್ಯಕರವಾದಂಥ ಟೀಕೆಗಳನ್ನು ಮಾಡ ಬೇಕಾಗುತ್ತದೆ ಆರೋಗ್ಯಕರವಾದ ಟೀಕೆಗಳು ಬಂದಾಗ ಅದನ್ನು ಸ್ವೀಕರಿಸುವ ಮನಸ್ಸು ನಿಮಗಿರಬೇಕಾಗುತ್ತದೆ ಅದಕ್ಕೆ ಸ್ಪಂದಿಸಬೇಕಾಗುತ್ತದೆ ಆದರೆ, ಆ ಮನಸ್ಸಿನ ಕೊರತೆ ನಿಮ್ಮಲ್ಲಿದೆ ಏನಾದರೂ ಹೇಳಿದರೆ ಒಂದೊಂದು ಸಲ ಜಗಳಕ್ಕೆ ಬಂದು ಬಿಡುತ್ತೀರಿ ಮುಖವೆಲ್ಲ ಕೆಂಪಾಗುತ್ತದೆ ಈಗ ಸ್ವಲ್ಪ ಕಡಿಮೆಯಾಗಿದೆ ಏಕೆಂದರೆ ಇತ್ತೀಚೆಗೆ ಅವರು ಸ್ವಯಂ ನಿಯಂತ್ರಣ ಮಾಡಿಕೊಂಡುಬಿಟ್ಟಿದ್ದಾರೆ ಏನೂ ಮಾತನಾಡಬಾರದೆಂದು ತೀರ್ಮಾನ ಮಾಡಿಕೊಂಡುಬಿಟ್ಟಿದ್ದಾರೆ ಬಹಳ ಸಂತೋಷ ಈಗ ಅವರು ಸ್ವಯಂ ನಿಯಂತ್ರಣ ಹಾಕಿಕೊಂಡಿದ್ದಾರೆ ಹಾಗಾಗಿ, ಆ ನಿಯಂತ್ರಣ ಒಳ್ಳೆಯದು

ಏಕೆಂದರೆ, ಇನ್ನೂ ನೀವು ವಿರೋಧ ಪಕ್ಷದಲ್ಲಿದ್ದ ಹಾಗೆ ಇರುವುದಕ್ಕಾಗು ವುದಿಲ್ಲ ಮತ್ತು ವಯಸ್ಸು ಕೂಡ ಆಗುತ್ತಿದೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಯಡಿಯೂರಪ್ಪನವರು ದಿನೇ ದಿನೇ ಯುವಕರಾಗುತ್ತಿದ್ದಾರೆ, ಆದರೆ ಮಾನ್ಯ ಪ್ರಕಾಶ್‌ರವರಿಗೆ ವಯಸ್ಸಾಗುತ್ತಿದೆ

ಶ್ರೀ ಸಿದ್ದರಾಮಯ್ಯ ನಾವೆಷ್ಟೇ ಯುವಕರೆಂದುಕೊಂಡರೂ ಸಹ ಮಾನ್ಯ ಪ್ರಕಾಶ್‌ರವರೆ, ನೀವು ಇನ್ನೂ ಹಾಗೆ ಅಂದು ಕೊಳ್ಳುವುದಕ್ಕಾಗುತ್ತದೆಯೇ? 1983 ರಲ್ಲಿದ್ದಂಥ ಹುಮ್ಮಸ್ಸು, ಉತ್ಸಾಹ ಈಗ ಇದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ. "ಊರಿನ ಚಿಂತೆ ಮಾಡಿ ಮುಲ್ಲಾ ಬಡವಾದನಂತೆ" ಆ ಗತಿ ಅವರಿಗಾಗಿದೆ ಅದಕ್ಕಾಗಿ ಅವರ ವಯಸ್ಸಿಗಿಂತಲೂ ಹೆಚ್ಚು ಮುದುಕರ ಹಾಗೆ ಕಾಣುತ್ತಿದ್ದಾರೆ

ಶ್ರೀ ಸಿದ್ದರಾಮಯ್ಯ ಮಾನ್ಯ ಪ್ರಕಾಶ್‌ರವರೆ, ನೀವು ಈ ಸಾರಿ Parliamentary Affairs Minister ಆದಮೇಲೆ Home Minister ಆದಮೇಲೆ ವಯಸ್ಸಿಗಿಂತ ಜಾಸ್ತಿ ವಯಸ್ಸಾದವರ ಹಾಗೆ ಕಾಣುತ್ತಿದ್ದೀರಿ ಇದು ಸತ್ಯ ಕೂಡ ಹೌದು

ಶ್ರೀ ಎಂ ಪಿ ಪ್ರಕಾಶ್ ನಾವಿರುವುದೇ ಹೀಗೆ ಸ್ವಾಮಿ

ಶ್ರೀ ಸಿದ್ದರಾಮಯ್ಯ ಅದಕ್ಕಿಂತ ಜಾಸ್ತಿ ಇದೆಯೇ ಎಂದು ನೋಡುತ್ತಿದ್ದೇವೆ ಇಲ್ಲ, ಆ ವಯಸ್ಸು ಈಗಿಲ್ಲ Parliamentary Affairs Minister, Home Minister ಆಗಿ ಅಲ್ಲಿ ಕುಳಿತುಕೊಂಡ ಮೇಲೆ ಏಕೋ ನಿಮ್ಮ ಶಕ್ತಿಯೇ ಉಡುಗಿ ಹೋಗಿದೆ

ಶ್ರೀ ವಾಟಾಳ್ ನಾಗರಾಜ್ ನಮ್ಮ ಗೃಹ ಸಚಿವರ ಶಕ್ತಿಯ ಬಗ್ಗೆ ಮಾತನಾಡತಕ್ಕಂಥದ್ದನ್ನು ನಾನು ಒಪ್ಪುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ ನಾನೂ ಕೂಡ ಒಪ್ಪಿಕೊಳ್ಳುವುದಿಲ್ಲ ಅವರು Home Minister ಅವರನ್ನು ವೀಕ್ ಮಾಡಿದರೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ ಸಿದ್ದರಾಮಯ್ಯನವರು ಈ ಕಡೆಗೆ ಬಂದ ಮೇಲೆ ಶಕ್ತಿ ಜಾಸ್ತಿಯಾಗಿಬಿಟ್ಟಿದೆ ನೋಡಿ, ನೀವೇನಾದರೂ ಯೋಚನೆ ಮಾಡುವ ಹಾಗಿದ್ದರೆ ಮಾಡಿ

ಶ್ರೀ ಸಿದ್ದರಾಮಯ್ಯ ಈಗ ನಾನು ಹೇಳಿದ್ದು, ಮಾನಸಿಕವಾಗಿ ಬಹಳ strong ಆಗಿದ್ದಾರೆ ಅದಿಲ್ಲದೆ ಇಲ್ಲಿ ಕುಳಿತುಕೊಂಡು ಎಲ್ಲರ ಪರವಾಗಿ ಉತ್ತರ ಕೊಡುವುದಕ್ಕಾಗುತ್ತಿರಲಿಲ್ಲ ಆದರೆ, physical ಆಗಿ ನೀವು ಸ್ವಲ್ಪ ಕುಗ್ಗಿದ ಹಾಗೆ ಕಾಣುತ್ತಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ ನೋಡುವವರ ಕಣ್ಣಿನ ಮೇಲೂ ಅದು ಅವಲಂಬಿತವಾಗಿರುತ್ತದೆ ನನಗೇನು ಅನಿಸುತ್ತಿದೆ ಎಂದರೆ, ಮಾನ್ಯ ಸಿದ್ದರಾಮಯ್ಯನವರು ಈ ಕಡೆ ಇದ್ದಾಗ ಎಷ್ಟು ಮಿಂಚುತ್ತಿದ್ದರೋ ಹಾಗೆ ಮಿಂಚುತ್ತಿಲ್ಲವಲ್ಲವೆಂದು ಹೇಳಿ ನನಗೆ ಕೊರಗು ಪ್ರಾರಂಭವಾಗಿದೆ

ಶ್ರೀ ವಾಟಾಳ್ ನಾಗರಾಜ್ ಇಬ್ಬರ ಪರಿಸ್ಥಿತಿಯೂ ಅದೇ ಕಾಣುತ್ತದೆ

ಶ್ರೀ ಸಿದ್ದರಾಮಯ್ಯ ಸರಿ ನಿಮ್ಮ ನೋಡುವ ದೃಷ್ಟಿ ಆ ತರಹ ಕಂಡರೆ ಬಹಳ ಸಂತೋಷ ನಾನು ಬಹಳ ಅಭಿಮಾನದಿಂದ, ಪ್ರೀತಿಯಿಂದ ಹೇಳುತ್ತಿದ್ದೇನೆ ನನ್ನನ್ನು ಕೇಳುವುದು ಬಿಟ್ಟುಬಿಡಿ, ನಿಮ್ಮ ಮನೆಯವರನ್ನೇ ಕೇಳಿ ನಾನೂ ಸಹ ಬೇಕಾದರೆ ನಮ್ಮ ಮನೆಯಲ್ಲಿ ಹೋಗಿ ನಮ್ಮ ಪ್ರಕಾಶ್ ಹೀಗೆ ಹೇಳಿದ್ದಾರೆ, ನಿಜವೇ ಎಂದು ಕೇಳುತ್ತೇನೆ ನೀವೂ ಸಹ ಹೋಗಿ ಕೇಳಿ

ಶ್ರೀ ಎಸ್ ರಾಜೇಂದ್ರನ್ ನಾವು ಮಾತನಾಡುವ ಸಮಯದಲ್ಲೆಲ್ಲ ನಮ್ಮ Home Minister ಕೇಳಿ ಮಾಡುತ್ತೇವೆ ಎಂದು ಪ್ರತಿಯೊಂದು ಸಾರಿ ಹೇಳುವುದಿದೆ ಮದುವೆಯಾಗಿರುವವರೆಲ್ಲರೂ ನಮ್ಮ Home Minister ಹತ್ತಿರ ಕೇಳಬೇಕೆಂದು ಹೇಳುತ್ತಾರೆ ಹಾಗಾದರೆ,, Home Minister ಗೆ ಶಕ್ತಿ ಇದೆ ಎಂದು ಅರ್ಥವಾಗುತ್ತದೆ

ಶ್ರೀಮತಿ ಭಾಗೀರಥಿ Home Minister ರವರನ್ನೇ ಕೇಳಿ ಎಲ್ಲವನ್ನೂ ಮಾಡುತ್ತಾರೆಂದರೆ ನನಗೆಕೋ ಬಹಳ ಅನುಮಾನ

ಶ್ರೀ ಸಿದ್ದರಾಮಯ್ಯ ನಿಮಗಿರುವ ಅನುಭವ ನಮಗಿಲ್ಲ ಆ ಜಿಲ್ಲೆಯವರು ನೀವು ನಿಮಗಿರುವ ಅನುಬವ ಕೆಲವೆಲ್ಲ ನಮಗಿರುವುದಿಲ್ಲ ಅದೇನೇ ಇರಲಿ, ಇವತ್ತು ಇಷ್ಟೊಂದು ಗಂಭೀರವಾದ ಪರಿಸ್ಥಿತಿ ಕೆಲವು ಕಡೆ ಇದೆ ಕೆಲವು ಕಡೆ ಬಿತ್ತನೆ ಬೀಜ ಸಿಕ್ಕಿಲ್ಲವೆಂದು ಜಗಳವಾಗಿ ಧರಣಿಗಳಾಗಿವೆ, ಗಲಾಟೆಗಳಾಗಿವೆ ಹಾಸನದಲ್ಲಿ ಆಲೂಗೆಡ್ಡೆ ಬೀಜ ಸಿಕ್ಕಿಲ್ಲವೆಂದು ಜಗಳವಾಗಿದೆ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಶೇಂಗಾ ಬೀಜ, ಮೆಕ್ಕೆಜೋಳ ಸಿಕ್ಕಿಲ್ಲವೆಂದು ರೈತರ ಗಲಾಟೆಯಾಗಿದೆ ಆಮೇಲೆ, ಗೊಬ್ಬರವಿಲ್ಲವೆಂದು ಇನ್ನೊಂದು ಕಡೆ ಗಲಾಟೆಯಾಗಿದೆ ಎಲ್ಲವನ್ನೂ ನಾವು ಕೊಟ್ಟಿದ್ದೇವೆ, ಸಬ್ಸಿಡಿ ಕೊಟ್ಟಿದ್ದೇವೆ, ಬೀಜ, ಗೊಬ್ಬರ ಕೊಟ್ಟಿದ್ದೇವೆ, ಏನೂ ತೊಂದರೆ ಇಲ್ಲವೆಂದು ನೀವು ಹೇಳುತ್ತೀರಿ ಅಲ್ಲಿ ರೈತರು ಮತ್ತೇಕೆ ಗಲಾಟೆ ಮಾಡುತ್ತಾರೆ? ಸುಮ್ಮ ಸುಮ್ಮನೆ ಗಲಾಟೆ ಮಾಡುತ್ತಾರೆಯೇ? ಏನೋ ತೊಂದರೆ ಇರಬೇಕಲ್ಲವೇ? ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದೇ ಹೋದರೆ, ಇಲ್ಲಿಯವರೆಗೆ ಯಾವ ಮಂತ್ರಿಗಳಾದರೂ ಹೋಗಿ ಅಲ್ಲಿ ಕುಳಿತುಕೊಂಡು ಚರ್ಚೆ ಮಾಡಿ, ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅಥವಾ ಅಧಿಕಾರಿಗಳಾದರೂ ಪ್ರವಾಹ ಬಂದಿರುವ ಕಡೆಗೆ ಹೋಗಿದ್ದಾರೆಯೇ? ಮುಖ್ಯಕಾರ್ಯದರ್ಶಿಯಿಂದ ಹಿಡಿದು Revenue Secretary ಅಥವಾ Agriculture Secretary ಯಾರಾದರೂ ಅಲ್ಲಿಗೆ ಹೋಗಿದ್ದಾರೆಯೇ? ಯಾರೂ ಹೋಗಿಲ್ಲ ಮಾನ್ಯ ಜಗದೀಶ್ ಶೆಟ್ಟರೂ ಕೂಡ ಎಲ್ಲಿಯೂ ಹೋದ ಹಾಗೆ ಕಾಣಿಸುವುದಿಲ್ಲ ನಾನು ಬಾಗಲಕೋಟೆಗೆ ಹೋಗಿದ್ದಾಗ ಅದು ಒಂದು ಜಿಲ್ಲೆಗೆ ನೀವು ಬಂದಿದ್ದಿರಿ ಎಂದು ಹೇಳಿದರು ಕಡಲ ತೀರದಲ್ಲಿ ಕಡಲ ಕೊರೆತ ಇದೆಯಲ್ಲ, ಅದ್ಯಾವುದೋ ಕಾರಣದಿಂದ ಅದನ್ನು ತಡೆಗಟ್ಟುವುದಕ್ಕೆ ಇಟ್ಟಿರುವ 25 ಲಕ್ಷ ರೂ ಗಳನ್ನು ಖರ್ಚೇ ಮಾಡಲಿಲ್ಲ ಅದೇಕೆ ಆಗಲಿಲ್ಲವೆಂಬುದನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಬೇಕು ಇವತ್ತಿನವರೆಗೆ ನೀವು ಆ ಹಣವನ್ನು ಖರ್ಚು ಮಾಡಲಿಲ್ಲ ಕಡಲ ತೀರವೆಲ್ಲ ಕೊರೆಯುತ್ತಿದೆ ಜನರಿಗೆಲ್ಲ ಕಷ್ಟವಾಗಿದೆ ಅಲ್ಲಿ ಸಮುದ್ರದ ಪಕ್ಕದಲ್ಲಿರುವ ಜನರೆಲ್ಲ ಆತಂಕದಲ್ಲಿ ಬದುಕುತ್ತಿದ್ದಾರೆ, ಅವರ ಮನೆಗಳೆಲ್ಲ ಕೊಚ್ಚಿ ಹೋಗುತ್ತಿವೆ ಇವತ್ತಿನವರೆಗೆ ಸರ್ಕಾರ ಆ ಹಣವನ್ನು ಖರ್ಚು

ಮಾಡುವುದಕ್ಕೇ ಹೋಗಲಿಲ್ಲ ಮತ್ತೆ, ನೀವು ಯಾವುದನ್ನು ನಿಭಾಯಿಸಿರುವುದು? ಬರ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲಿಲ್ಲ, ಪ್ರವಾಹ ಬಂದಾಗ ನಿಬಾಯಿಸಲಿಲ್ಲ ಕಳೆದ ಬಾರಿ ಪ್ರವಾಹ ಬಂದಾಗ ಹಣ ಕೊಡುತ್ತೇವೆಂದು ಹೇಳಿ ಇವತ್ತಿನವರೆಗೆ ಹಣ ಕೊಡುವುದಕ್ಕೆ ಆಗಲಿಲ್ಲ ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕು ಮತ್ತು ಜಿಲ್ಲೆಯ ಅನೇಕ ಕಡೆಗಳಲ್ಲಿ ಕಳೆದ ಸಲ ಪ್ರವಾಹ ಬಂದಿತ್ತು ಅಥಣಿಯಲ್ಲಿ ಕಳೆದ ವರ್ಷ ಪ್ರವಾಹ ಬಂದಾಗ ಇವತ್ತಿನವರೆಗೆ ಅಲ್ಲಿ ಹಣ ಕೊಡಲಿಲ್ಲ ಮಾನ್ಯ ಹಣಕಾಸಿನ ಸಚಿವರು ಒಂದು ಎಕರೆಗೆ ಇಷ್ಟು ಹಣ ಕೊಡುತ್ತೇವೆಂದು ಹೇಳಿ ಬಂದಿದ್ದರು ಆದರೆ, ಇದುವರೆಗೆ ಹಣ ಕೊಡಲಿಲ್ಲ ಇವತ್ತು ಅಲ್ಲಿನ ರೈತರನ್ನು ಕೇಳಿ ಜಗದೀಶ್ ಶೆಟ್ಟರ್‌ರವರೇ, ರೈತರನ್ನು ಹೋಗಿ ಕೇಳಿ ಇವತ್ತಿನವರೆಗೆ ಅಲ್ಲಿ ಹಣ ಕೊಡಲಿಲ್ಲ ಇವತ್ತಿನವರೆಗೆ ಬರ ಪರಿಹಾರವನ್ನು ಸರಿಯಾಗಿ ನಿಭಾಯಿಸಲಿಲ್ಲ ಕಳೆದ ವರ್ಷ ಪ್ರವಾಹದಿಂದ ಕೊಚ್ಚಿಹೋದ ಮನೆಗಳಿಗೆ ಜಾಗ ಕೊಡುತ್ತೇವೆ, ಸ್ಥಳಾಂತರ ಮಾಡುತ್ತೇವೆಂದು ಹೇಳಿದ್ದರು

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಸಿದ್ದರಾಮಯ್ಯನವರೇ, ಅಥಣಿ ಶಾಸಕರು ಅವರ Political Secretary ಕೂಡಾ ಆಗಿದ್ದಾರೆ ಇದನ್ನು ಅವರೇ ಹೇಳಿಬಿಟ್ಟರೆ ಸರಿಹೋಗುತ್ತದೆ

ಶ್ರೀ ಸಿದ್ದರಾಮಯ್ಯ ಕಳೆದ ಸಲ ಸಾವಿರಾರು ಮನೆಗಳು ಕೊಚ್ಚಿಹೋದವು ಅವರನ್ನೆಲ್ಲ ಸ್ಥಳಾಂತರ ಮಾಡಿ ಜಾಗ ಕೊಡುತ್ತೇವೆಂದರು ಇವತ್ತಿನವರೆಗೆ ಅವರಿಗೆ ಜಾಗವನ್ನು acquire ಮಾಡಿ ಕೊಡುವುದಕ್ಕಾಗಲಿಲ್ಲ ಅವರಿಗೆ ಪುನರ್‌ವಸತಿ ಮಾಡಿಕೊಡಲಿಕ್ಕಾಗಲಿಲ್ಲ ಕಳೆದ ವರ್ಷದ್ದನ್ನೇ ಮಾಡಲಿಲ್ಲವೆಂದರೆ ಜನರ ಬಗ್ಗೆ, ರೈತರ ಬಗ್ಗೆ ಸರ್ಕಾರಕ್ಕೆ ಯಾವ ಬದ್ಧತೆ ಇದೆ ಎನ್ನುವುದನ್ನು ಈ ನಾಡಿನ ಜನ ಇವತ್ತು ಚರ್ಚೆ ಮಾಡುತ್ತಿದ್ದಾರೆ ಮಾತೆತ್ತಿದರೆ ನೀವು ಜನರ ಹತ್ತಿರಕ್ಕೆ ಬನ್ನಿ ಎಂದು ಹೇಳುತ್ತಾರೆ ಯಡಿಯೂರಪ್ಪನವರು ಇಲ್ಲಿ ಕಳೆದ ಸಲ ಬಜೆಟ್ ಮಂಡನೆ ಮಾಡುವಾಗ ಜನರ ಹತ್ತಿರಕ್ಕೆ ಬನ್ನಿ ಎಂದು ಹೇಳಿದರು ಜನರ ಹತ್ತಿರಕ್ಕೆ ಹೋದರೆ ಇವರು ಸೋಲುತ್ತಾರೆ ನಿಮಗೆ ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆ ಎಂದು ಹೇಳಿದರು Bye-elections ಬಂದರೆ ಇವರು ಸೋಲುತ್ತಾರೆ ಕೆಲವರ deposit ಹೋಗುತ್ತದೆ ಅದಕ್ಕೆ ಹೆದರಿಕೊಂಡು

ಪುರಸಭೆ ಚುನಾವಣೆಯನ್ನೇ ಮಾಡುತ್ತಿಲ್ಲ ಮಾಡಿದ್ದೀರಾ? ಮಾನ್ಯ ಯಡಿಯೂರಪ್ಪನವರೇ, ನೀವೇನೋ ಮಾಡುತ್ತೇವೆಂದು ಹೇಳಿದ್ದೀರೋ ಗೊತ್ತಿಲ್ಲ ಒಂದು ವರ್ಷವಾಯಿತು Reservation ಪಟ್ಟಿ ಕೊಡುವುದಕ್ಕೆ ಮತ್ತೆ 4 ತಿಂಗಳ time ತೆಗೆದುಕೊಂಡಿರಿ ಆಮೇಲೆ ಇಲ್ಲಿ ಭಾಷಣ ಮಾಡುವಾಗ, ಬನ್ನಿ, ಜನರ ಹತ್ತಿರಕ್ಕೆ ಎಂದು ಹೇಳುತ್ತೀರಿ ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆಂದು ಹೇಳುತ್ತೀರಿ

ಶ್ರೀ ಆರ್ ವಿ.ದೇಶಪಾಂಡೆ ಚುನಾವಣೆ ನಡೆಸುವ ಮನಸ್ಸು ಸರ್ಕಾರಕ್ಕಿಲ್ಲ ಚುನಾವಣೆಯನ್ನೂ ಮಾಡುತ್ತಿಲ್ಲ ಹೈಕೋರ್ಟಿಗೆ ಹೋಗಿ ಜುಲೈವರೆಗೆ time ಬೇಕೆಂದು ಕೇಳಿ ಸಮಯ ತೆಗೆದುಕೊಂಡಿರಿ ಆದರೆ, ನಾನು ಮಾನ್ಯ ಹಣಕಾಸು ಸಚಿವರಾದ ನಿಮಗೆ ಒಂದು ಪ್ರಶ್ನೆ ಕೇಳುತ್ತೇನೆ, ಬಜೆಟ್ ಮಂಡನೆ ಮಾಡುವ ಮುಂಚೆ ಚುನಾವಣೆ ಬರುತ್ತಿದೆಯೆಂದು ನಿಮಗೆ ಗೊತ್ತಿತ್ತಲ್ಲವೇ? ಬಜೆಟ್‌ನಲ್ಲಿ ಮುನಿಸಿಪಾಲಿಟಿ, ನಗರಸಭೆ ಚುನಾವಣೆ ನಡೆಸಲಿಕ್ಕೆ ಹಣ ಇಟ್ಟಿಲ್ಲ Provision for election ಗೆ ಒಂದು ಪೈಸೆ ಸಹ ಇಟ್ಟಿಲ್ಲ That itself shows that you have no interest in holding elections

ಶ್ರೀ ಸಿದ್ದರಾಮಯ್ಯ ನಾನು ಇದನ್ನೇಕೆ ಹೇಳುತ್ತಿದ್ದೇನೆಂದರೆ, ಚುನಾವಣೆ ಮಾಡಬೇಕೆಂದು ಅವರಿಗೆ ಮನಸ್ಸಿಲ್ಲ ಪ್ರಜಾಪ್ರಭುತ್ವದಲ್ಲಿ, ಸಂವಿಧಾನದಲ್ಲಿ ನಂಬಿಕೆಯೇ ಇಲ್ಲ, ಗೌರವವಿಲ್ಲದಿರುವಾಗ, ಚುನಾವಣೆ ಹೇಗೆ ಮಾಡುತ್ತೀರಿ? ಚುನಾವಣೆ ಎಲ್ಲಿ ಮಾಡುತ್ತೀರಿ? ಚುನಾವಣೆ ಮಾಡಿ ಎಂದು ನಾವು demand ಮಾಡಿದ್ದೆವು ನೀವು ಬಡಿಗೆಯಿಂದ ಹೊಡಿಸಿಕೊಳ್ಳುತ್ತೀರಿ ಎಂದು ಹೇಳುತ್ತಿದ್ದೀರಿ, ಆದರೆ ನಾವು ಚುನಾವಣೆ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇವೆ, ಇವರು ಚುನಾವಣೆಯನ್ನು ಮುಂದೂಡಿಕೊಂಡು ನೆಪವೊಡ್ಡಿಕೊಂಡು, ಕುಂಟು ನೆಪವೊಡ್ಡಿಕೊಂಡು ಮಾಡುತ್ತಿದ್ದಾರೆ ಕೋರ್ಟಿನವರು 9 ವಾರ ಸಮಯ ಕೊಟ್ಟಿದ್ದರು ಅದಕ್ಕಿಂತ ಜಾಸ್ತಿ ಸಮಯ ಬೇಕಾಗಿತ್ತೇ? ಮತ್ತೆ, 4 ವಾರ ಸಮಯ ತೆಗೆದುಕೊಂಡರು ಮತ್ತೆ ಚುನಾವಣೆ ಮಾಡುತ್ತೀರೋ? ಇಲ್ಲವೋ? ಎಂಬ ಬಗ್ಗೆ ರಾಜ್ಯದಲ್ಲಿ ಯಾರಿಗೂ ನಂಬಿಕೆ ಇಲ್ಲ ಇನ್ನೊಂದು ಕಡೆ ಅಧಿಕಾರ ವಿಕೇಂದ್ರೀಕರಣವನ್ನು ಮೊಟಕು ಮಾಡಿ ಕೊಟ್ಟಿರುವ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದೀರಿ ಇವತ್ತು

12th Finance ನ ಹಣವನ್ನು ಜಿಲ್ಲಾ ಪಂಚಾಯತ್‌ಗಳು ಖರ್ಚು ಮಾಡದ ಹಾಗೆ ಹಿಡಿದು ಹಾಕಿ ಬಿಟ್ಟಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಹಾಗಲ್ಲ, 12th Finance ನ ಹಣದ ಬಗ್ಗೆ ತಾವು ತಪ್ಪಾಗಿ ಭಾವಿಸಿದ್ದೀರಿ ಶಾಸಕರನ್ನು ಕೇಳಿ ಆದ್ಯತೆ fix ಮಾಡಿ ಎಂದು ಇವರು ಕೊಟ್ಟಿದ್ದ ಆದೇಶವನ್ನು ಜಿಲ್ಲಾ ಪಂಚಾಯತ್‌ನವರು question ಮಾಡಿದರು ಅವರಿಗೆ ಅಧಿಕಾರವಿದೆಯೆಂದು ಹೈಕೋರ್ಟ್ ಹೇಳಿದರೂ ಕೂಡ ಅವರು ಹಣ ಖರ್ಚು ಮಾಡಲಿಲ್ಲ ತಪ್ಪು ಸರ್ಕಾರದ್ದಲ್ಲ

ಶ್ರೀ ಸಿದ್ದರಾಮಯ್ಯ ಕಳೆದ ವರ್ಷ MLA ಗಳನ್ನು ಕೇಳಿ ಮಾಡಬೇಕೆಂದಿತ್ತು ಆಗಲಿಲ್ಲ ಆದರೆ, ಈ ವರ್ಷ ಏನು ಮಾಡಿದ್ದಾರೆಂದರೆ ಕೊಟ್ಟಿದ್ದನ್ನು ನಿಲ್ಲಿಸಿಬಿಟ್ಟಿದ್ದಾರೆ

ಶ್ರೀ ಆರ್ ವಿ ದೇಶಪಾಂಡೆ 12ನೇ ಹಣಕಾಸು ಆಯೋಗದಿಂದ ಬರುವುದು ಅದು ಕೇಂದ್ರ ಸರ್ಕಾರದಿಂದ ಬರುವ ಹಣ ಮತ್ತು ಮುಖ್ಯಮಂತ್ರಿಗಳ ನಿಧಿಯಿಂದ ಬರುವ ಹಣ ಸೇರಿ ಒಂದು pacakage ಮಾಡಿ maintenance ಕೊಡಬೇಕೆಂದು ಮಾಡುತ್ತಿದ್ದೀರಿ ಅದರಿಂದ, PWD ಯಿಂದ ಈಗ maintenance ಮಾಡಿರುವುದರಿಂದ ಏನು ಅನಾಹುತವಾಗಿದೆ ಎಂಬುದೆಲ್ಲ ನಮಗೆ ಗೊತ್ತಾಗಿದೆ ಅದೇ ಪ್ರಕಾರ ನೀವು ಮಾಡಿದರೆ ರಸ್ತೆಯೂ ಇಲ್ಲ, ರಿಪೇರಿಯೂ ಇಲ್ಲ, ಏನೂ ಆಗುವುದಿಲ್ಲ ಇದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು

ಶ್ರೀ ಸಿದ್ದರಾಮಯ್ಯ ಮಾನ್ಯ ಉದಾಸಿಯವರೇ, ಈಗ pacakage ಮಾಡುವುದಕ್ಕೆ ಹೊರಟಿದ್ದೀರಲ್ಲವೇ? 3054 ಮತ್ತು 12ನೇ ಹಣಕಾಸು ಆಯೋಗದ ಮುಖಾಂತರ ಕೇಂದ್ರ ಸರ್ಕಾರದಿಂದ ಬರುವ ಹಣ ಸೇರಿ pacakage ಮಾಡಿದರೆ ಯಾರೋ ಒಬ್ಬ ದೊಡ್ಡ contractors ತೆಗೆದುಕೊಂಡು ಸಣ್ಣ contractors ಗೆ ಮತ್ತೆ sub lease ಕೊಡುತ್ತಾರೆ ಇದರಿಂದ, ಅದರ ಮೇಲೆ ಅವಲಂಬನೆಯಾಗಿದ್ದ ಸಣ್ಣ contractors ಎಲ್ಲ ಮನೆಗೂ ಹೋಗಬೇಕಾಗುತ್ತದೆ ಇದೆಲ್ಲ ಹಿಂದೆ ಆಗಿರುವಂಥ ಅನುಭವವಾಗಿದೆ ಒಂದು ಕಡೆ ಅಧಿಕಾರ ವಿಕೇಂದ್ರಿಕರಣದ ಕತ್ತು ಹಿಸುಕುವ

ಕೆಲಸ ಮಾಡುತ್ತಿದ್ದೀರಿ ಇನ್ನೊಂದು ಕಡೆ ಹಳ್ಳಿಗಾಡಿನ ಅಭಿವೃದ್ಧಿ ಬಗ್ಗೆ ದೊಡ್ಡದಾಗಿ ಮಾತನಾಡುತ್ತೀರಿ ಒಂದಕ್ಕೊಂದು ಏನಾದರೂ ಅರ್ಥಾತ್ ಸಂಬಂಧವಿದೆಯೇ? Total contradictions ಇವತ್ತು ಗ್ರಾಮ ಪಂಚಾಯತ್‌ನವರು ಚಳುವಳಿ ಮಾಡುವುದಕ್ಕೆ ಶುರು ಮಾಡಿದ್ದಾರೆ ಎಲ್ಲ ಕಡೆ ಗ್ರಾಮ ಪಂಚಾಯತಿ ಚಳುವಳಿ ನಡೆಯುತ್ತಿದೆ ಅಧಿಕಾರ ವಿಕೇಂದ್ರಿಕರಣಕ್ಕೆ ಬದ್ಧರಾಗಿರಬೇಕಲ್ಲವೇ? ಅಧಿಕಾರ ವಿಕೇಂದ್ರಿಕರಣ ಮಾಡುತ್ತೇವೆಂದು ಹೇಳಿದ ಮೇಲೆ ಅಧಿಕಾರ ವಿಕೇಂದ್ರಿಕರಣವನ್ನು ಮೊಟಕುಗೊಳಿಸುವಂಥ ಕೆಲಸವನ್ನು ಮಾಡಬಾರದು ಅದೇನೇ ಇರಲಿ, ಅದು ಇದಕ್ಕೆ ಸಂಬಂಧಪಟ್ಟಿಲ್ಲದಿರುವುದರಿಂದ ಅದನ್ನು ನಾನು ದೀರ್ಘವಾಗಿ ಎಳೆಯುವುದಕ್ಕೆ ಹೋಗುವುದಿಲ್ಲ ಗ್ರಾಮೀಣಾಭಿವೃದ್ಧಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆಗೆ ಬಂದಾಗ ಅದರ ಬಗ್ಗೆ ಚರ್ಚೆ ಮಾಡೋಣ ನೀವು ಬರಗಾಲಕ್ಕೆ ಕೂಡ 5 5 ಕೋಟಿ ರೂ ನಷ್ಟವಾಗಿದ್ದರೂ ಕೂಡ, 50 ಜನ ಸತ್ತಿದ್ದರೂ ಕೂಡ, ಸುಮಾರು 25 ಸಾವಿರ ಮನೆಗಳು ಬಿದ್ದಿದರೂ ಕೂಡ 2000 ಕ್ಕೂ ಹೆಚ್ಚು ಜಾನುವಾರುಗಳು ಸತ್ತಿದ್ದರೂ ಕೂಡ ಇವತ್ತಿನವರೆಗೆ ಒಂದು ರೂಪಾಯಿ ಸಹ ಪ್ರವಾಹಕ್ಕೋಸ್ಕರ ಬಿಡುಗಡೆ ಮಾಡಿದ್ದೀರಾ? ಯಾವುದಾದರೂ ಜಿಲ್ಲೆಗೆ ಒಂದು ರೂಪಾಯಿಯನ್ನು ಸಹ ಬಿಡುಗಡೆ ಮಾಡಿದ್ದಾರೆಯೇ? ಒಂದು ರೂಪಾಯಿ ಸಹ ಬಿಡುಗಡೆ ಮಾಡಿಲ್ಲ ಪ್ರವಾಹಕ್ಕೋಸ್ಕರ ಹಣ ಬಿಡುಗಡೆ ಮಾಡಿಲ್ಲ ಪ್ರವಾಹ ಬಂದು ಜನಗಳಿಗೆ ತೊಂದರೆಯಾಗಿ, ನಷ್ಟವಾಗಿ ಎಷ್ಟು ದಿನಗಳಾಯಿತು? ಏನು ಮಾಡುತ್ತಿದ್ದೀರಿ? ಕಳೆದ ಒಂದು ತಿಂಗಳಿನಿಂದ ಏನು ಮಾಡುತ್ತಿದ್ದೀರಿ? ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆಂಬ ಬಗ್ಗೆ ಚರ್ಚಿಸಲು ಎಲ್ಲ ಜಿಲ್ಲೆಗಳ ರೈತರ ಸಭೆ ಕರೆಯುತ್ತಾರೆ ಚರ್ಚೆ ಮಾಡಿ ನಂತರ ರೈತರು ಹೇಗೆ ಸಾಯುತ್ತಿದ್ದಾರೆಂಬುದನ್ನು ಪತ್ತೆ ಹಚ್ಚಲು ಇನ್ನೊಂದು ಹೊಸ ಕಮಿಟಿ ರಚಿಸುವುದು ಈಗಾಗಲೇ ಎಸ್ ಎಂ ಕೃಷ್ಣರವರ ಕಾಲದಲ್ಲಿ ವೀರೇಶ್‌ರವರ ಅಧ್ಯಕ್ಷತೆಯಲ್ಲಿ ರಚಿತವಾಗಿದ್ದ ಕಮಿಟಿಯು ರೈತರು ಏಕೆ ಸಾಯುತ್ತಿದ್ದಾರೆಂಬ ಬಗ್ಗೆ ಕೊಟ್ಟಿರುವ ವರದಿ ಸರ್ಕಾರದ ಮುಂದಿದೆ Is it not a time gaining device? ರೈತ ಆತ್ಮಹತ್ಯೆಮಾಡಿಕೊಳ್ಳುವುದನ್ನು ತಪ್ಪಿಸುವ ಕೆಲಸವೇ ಇದು? ಇದು delay tactics English ನಲ್ಲಿ time gaining device ಎಂದರೆ ಅದೇ ಅಲ್ಲವೇ ರಾಜೇಂದ್ರನ್‌ರವರೇ? ಆದ್ದರಿಂದ, ನಾನೇಕೆ ಹೇಳುತ್ತಿದ್ದೇನೆಂದರೆ ಇವರು ಇಷ್ಟೆಲ್ಲ ರೈತರ ಬಗ್ಗೆ ರೈತರ ಬದುಕು ಹಸನಾಗಿದೆ

ಎಂದು ಹೇಳುತ್ತಾರೆ ಅಷ್ಟಾದರೂ ಕೂಡ ಹಣಕಾಸಿನ ಮಂತ್ರಿಗಳಾದ ಯಡಿಯೂರಪ್ಪನವರು ಆ ರೈತರ ಸಭೆಯಲ್ಲಿ ಇರಲಿಲ್ಲ ಅಂದರೆ, ಇವರಿಗೆ ರೈತರ ಬಗ್ಗೆ ಕಾಳಜಿ ಎಷ್ಟಿದೆ ಎಂಬುದು ಗೊತ್ತಾಗುತ್ತದೆ ರೈತರ ಬಗ್ಗೆ ಮಾತನಾಡುವುದು ಕೇವಲ ಪ್ರಚಾರಕ್ಕೋಸ್ಕರವೇ? ಪುಕ್ಕಟೆ ಪ್ರಚಾರ ಗಿಟ್ಟಿಸಿಕೊಳ್ಳುವುದಕ್ಕಾಗಿಯೇ? ಇವತ್ತು ಬಿತ್ತನೆ ಕಾರ್ಯ ಪ್ರಾರಂಭವಾಗಿ ನಡೆಯುತ್ತಿದೆ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು co-operative field ನಲ್ಲಿದ್ದವರು ಅವರೂ ಈ ಸಭೆಯಲ್ಲಿದ್ದಾರೆ ಈ ವರ್ಷ ನೀವು 3 ಸಾವಿರ ಕೋಟಿ ರೂಪಾಯಿಗಳನ್ನು ಸಾಲ ಕೊಡಬೇಕೆಂದು ಲೆಕ್ಕ ಹಾಕಿಕೊಂಡಿದ್ದೀರಿ ಇವತ್ತಿನವರೆಗೆ ಎಷ್ಟು ಕೊಟ್ಟಿದ್ದೀರಿ? Not even Rs 500 crore 420-430 ಕೋಟಿ ರೂ ಕೊಟ್ಟಿದ್ದೀರಿ ಈ ಅವಧಿಯಲ್ಲಿ ಕಳೆದ ವರ್ಷ2200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ರೈತರು, ಕೃಷಿಕರು ಸೇರಿ ಸುಮಾರು 70 ಲಕ್ಷ ರೈತ ಕುಟುಂಬಗಳು ಕರ್ನಾಟಕದಲ್ಲಿವೆ ಅವರಲ್ಲಿ ಮೂರನೇ ಎರಡು ಭಾಗದಷ್ಟು ರೈತರು co-operative loan ಮೇಲೆ ಅವಲಂಬಿತವಾಗಿದ್ದಾರೆ More than 75% ಇದರ ಮೇಲೆ ಅವಲಂಬಿತರಾಗಿದ್ದಾರೆ ರೈತರು ವ್ಯವಸಾಯ ಮಾಡುವುದು ಹೇಗೆ? ಕೃಷಿ ಮಾಡುವುದು ,ಹೇಗೆ? ಅವರು invest ಮಾಡುವುದು ಹೇಗೆ? ಅವರಿಗೆ ಸಕಾಲದಲ್ಲಿ ಸಾಲ ಸಿಗದಿದ್ದರೆ ಏನು ಮಾಡುತ್ತಾರೆ? ಸಾಲ, ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿದರು ಅದನ್ನು ನಾವು ಸ್ವಾಗತ ಮಾಡಿದೆವು 25 ಸಾವಿರ ರೂಪಾಯಿಗಳ ಬೆಳೆ ಸಾಲ, ಬಡ್ಡಿ ಮನ್ನಾ ಮಾಡುತ್ತೇವೆಂದರು All right ಸ್ವಾಗತ ಮಾಡಿದ್ದೇವೆ ಆದರೆ, 2300 ಕೋಟಿ ರೂಪಾಯಿಗಳಲ್ಲಿ ಇವತ್ತಿನವರೆಗೆ ಬಿಡುಗಡೆ ಮಾಡಿರುವುದು ಕೇವಲ 750 ಕೋಟಿ ರೂಪಾಯಿಗಳನ್ನು ಮಾತ್ರ, ಒಂದು ಸಾರಿ 500 ಕೋಟಿ ರೂಪಾಯಿಗಳು, ಇನ್ನೊಂದು ಸಲ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ 250 ಕೋಟಿ ರೂಪಾಯಿಗಳು ಸಹ ಬಂದಿಲ್ಲವೆಂದು ಹೇಳುತ್ತಿದ್ದಾರೆ ಆದರೆ, 750 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹಣಕಾಸು ಮಂತ್ರಿಗಳು ಎಲ್ಲಾ ಕಡೆ ಹೇಳಿದರು ಇನ್ನು 1550 ಕೋಟಿ ರೂಪಾಯಿಗಳನ್ನು ನಬಾರ್ಡ್‌ಗೆ ಕೊಡಬೇಕು, ಅಪೆಕ್ಸ್ ಬ್ಯಾಂಕ್‌ಗೆ ಕೊಡಬೇಕು, ಡಿಸಿಸಿ ಬ್ಯಾಂಕ್‌ಗಳಿಗೆ ತುಂಬಿ ಕೊಡಬೇಕು, ಕೊಟ್ಟಿಲ್ಲ ನೀವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ ಮೇಲೆ, ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ ಮೇಲೆ, ಮೊದಲೇ ರೈತರಿಗೆ ಸಾಲ ಸಿಗುವಂಥ

ರೀತಿಯಲ್ಲಿ ವ್ಯವಸ್ಥೆಯನ್ನು ನೀವು ಮಾಡಬೇಕಾಗಿತ್ತು ಇವತ್ತು ರೈತರಿಗೆ ಸಕಾಲದಲ್ಲಿ ಸಾಲ ಸಿಕ್ಕದೇ ಹೋದರೆ, ಬಿತ್ತನೆ ಮಾಡತಕ್ಕಂಥ ಸಂದರ್ಭದಲ್ಲಿ ಸಾಲ ಸಿಕ್ಕದೇ ಹೋದರೆ, agriculture productions ಏನಾಗುತ್ತದೆ? There will be a big decline in the agricultural production ಕಳೆದ ವರ್ಷ agriculture production ಇವರ ನಿಗದಿತ ಗುರಿ ಸುಮಾರು 65 ರಿಂದ 66% ಮಾತ್ರ. ಈಗ ಅನೇಕ ಬ್ಯಾಂಕ್‌ಗಳಲ್ಲಿ ಸಾಲವನ್ನೇ ಕೊಟ್ಟಿಲ್ಲ ಈ ಮುಂಗಾರಿನಲ್ಲಿ ಕೋಲಾರದಲ್ಲಿ ಒಂದು ರೂಪಾಯಿ ಕೊಟ್ಟಿಲ್ಲ ಮಂಡ್ಯದಲ್ಲಿ ಕೊಟ್ಟಿಲ್ಲ ಗದಗ್‌ನಲ್ಲಿ ಕೊಟ್ಟಿಲ್ಲ ಗುಲ್ಬರ್ಗಾದಲ್ಲಿ ಕೊಟ್ಟಿಲ್ಲ ಯಾವ ಬ್ಯಾಂಕ್‌ಗಳಲ್ಲೂ ಈ ರೈತರಿಗೆ ಸಾಲವನ್ನೇ ಕೊಟ್ಟಿಲ್ಲ ಆ ರೈತರು ಎಲ್ಲಿಗೆ ಹೋಗಬೇಕು? ಏನು ಮಾಡಬೇಕು? ನೀವು ಬಡ್ಡಿ ಮನ್ನಾ ಮಾಡಿದ್ದೇವೆ, ಸಾಲ ಮನ್ನಾ ಮಾಡಿದ್ದೇವೆಂದು ಬಹಳ ದೊಡ್ಡದಾಗಿ ಪ್ರಚಾರ ಮಾಡಿಕೊಂಡು, ದೊಡ್ಡದಾಗಿ ಹೇಳಿಕೊಂಡು ಹೋಗುತ್ತಿದ್ದೀರಿ ಆದರೆ ನಿಜವಾಗಿ ನೋಡಿದರೆ ನೀವು ರೈತರನ್ನು ಕಷ್ಟಕ್ಕೆ ಸಿಲುಕಿಸಿದ್ದೀರಿ ಸಕಾಲಕ್ಕೆ ಸಾಲ ಸಿಗದೇ ಇವತ್ತು ರೈತರು ಸಂಕಷ್ಟಕ್ಕೆ ಸಿಕ್ಕಿ ಹಾಕಿ ಕೊಂಡಿರ ತಕ್ಕಂಥದ್ದಕ್ಕೆ ನೀವೇ ಕಾರಣಕರ್ತರಲ್ಲವೇ? 1550 ಕೋಟಿ ರೂಪಾಯಿ ಅಲ್ಲದೇ ಇಷ್ಟೊತ್ತಿಗೆ ಕನಿಷ್ಟ ಇನ್ನೊಂದು ಸಾವಿರ ಕೋಟಿ ರೂಪಾಯಿ ಯನ್ನಾದರೂ ಕೊಡಬೇಕಾಗುತ್ತದೆ ಏಕೆಂದರೆ, ನಬಾರ್ಡ್‌ನಿಂದ 40% ಹಣ ಕೊಡುತ್ತಾರೆ, ಅಪೆಕ್ಸ್ ಬ್ಯಾಂಕ್‌ನಂದ 20% ಹಣ ಕೊಡುತ್ತಾರೆ ಇವರು ಕೊಡದೇ ಹೋದರೇ ಅವರು ಎಲ್ಲಿಂದ ಸಾಲ ಕೊಡುತ್ತಾರೆ? ಅನೇಕ ಡಿಸಿಸಿ ಬ್ಯಾಂಕ್‌ಗಳಲ್ಲಿ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಜನರೇನು ತಮ್ಮ ಹಣವನ್ನು ಡೆಪಾಸಿಟ್ ಇಟ್ಟಿರುತ್ತಾರೆ, ಆ ಹಣ ಕೂಡ ಸಾಲವನ್ನಾಗಿ ಕೊಟ್ಟು ಬಿಟ್ಟಿರುತ್ತಾರೆ ಜನರು ತಾವು ಇಟ್ಟಿರತಕ್ಕಂಥ ಡೆಪಾಸಿಟ್ ಹಣವನ್ನು ವಾಪಸ್ಸು ತೆಗೆದುಕೊಂಡರೆ ಆ ಹಣ ಮತ್ತು ಅದಕ್ಕೆ ಬಡ್ಡಿ ಕೂಡ ಕೊಡಬೇಕು ಇದನ್ನು ಅವರು ಕೊಡಬೇಕಾದರೆ ಅವರ ಹತ್ತಿರ ದುಡ್ಡು ಇರಬೇಕಲ್ಲವೇ? ಅಪೆಕ್ಸ್ ಬ್ಯಾಂಕ್‌ನಲ್ಲಿ ದುಡ್ಡು ಇರಬೇಕು ನಬಾರ್ಡ್ ಬ್ಯಾಂಕ್‌ಗಳಿಗೆ ದುಡ್ಡು ಕಟ್ಟಿ ಕೊಡಬೇಕು ನಬಾರ್ಡ್ ಬ್ಯಾಂಕ್‌ನವರಿಗೆ ನೀವು ದುಡ್ಡು ಕಟ್ಟದೇ ಹೋದರೆ, ಅವರು ಮತ್ತೆ ರೀಫೈನಾನ್ಸ್ ಮಾಡುವುದಿಲ್ಲ ರೀಫೈನಾನ್ಸ್ ಎಲ್ಲಾ ನಿಂತು ಹೋಗಿದೆ, ರೈತರು ಇವತ್ತು ಎಂಥ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆಂದರೆ, ಒಂದು ಕಡೆ ಬರಗಾಲ ಬಂತು, ಇನ್ನೊಂದು ಕಡೆ ಪ್ರವಾಹ ಬಂತು ಇನ್ನೊಂದು ಕಡೆ ಹಣ ಸಿಕ್ಕುತ್ತಿಲ್ಲ ಇನ್ನೊಂದು

ಕಡೆ ಬೀಜ ಸಿಕ್ಕುತ್ತಿಲ್ಲ ಇನ್ನೊಂದು ಕಡೆ ಹಾಕಿರುವುದು ಕೂಡ ಕೊಚ್ಚಿಕೊಂಡು ಹೋಗುತ್ತದೆ ಮನೆಗಳೆಲ್ಲವೂ ಬಿದ್ದು ಹೋಗಿವೆ ಈ ಪರಿಸ್ಥಿತಿಯಲ್ಲಿ ನೀವು ಏನೂ ಆಗಿಲ್ಲವೆನ್ನುವ ತರಹ ಇದ್ದೀರಲ್ಲಾ ಈ ಸರ್ಕಾರಕ್ಕೆ ನಾವು ಏನೆಂದು ಕರೆಯಬೇಕು? Can I call this Government alive? ಸಂಪೂರ್ಣವಾಗಿ ಸತ್ತು ಹೋಗಿದೆ ಎಂದು ಕರೆಯಬೇಕಾಗುತ್ತದೆ, ಮತ್ತೊಂದು ಕಡೆ ಕೇಂದ್ರ ಸರ್ಕಾರದಿಂದ ಬಂದಂಥ ವಿದರ್ಭ ಪ್ಯಾಕೇಜ್‌ಗೆ ಸುಮಾರು 2689 ಕೋಟಿ ರೂಪಾಯಿ ಬಂತು ಅದು ಬಂದು ಈಗ ಎಂಟು ತಿಂಗಳಾಯಿತು ಕೆಎಂಎಫ್ ನಲ್ಲಿ ಒಂದಿಷ್ಟು ದುಡ್ಡು ಬಳಸಿಕೊಂಡಿರುವುದನ್ನು ಬಿಟ್ಟರೆ ಇವತ್ತಿನವರೆಗೆ ಎಲ್ಲೂ ಕೂಡ ಮಧ್ಯಮ ನೀರಾವರಿಯಲ್ಲಾಗಲಿ, ಮೇಜರ್ ಇರಿಗೇಷನ್‌ನಲ್ಲಾಗಲೀ, ಸಣ್ಣ ನೀರಾವರಿಯಲ್ಲಾಗಲೀ, ಬೀಜಗಳನ್ನು ಕೊಟ್ಟಿರುವುದಾಗಲೀ, ಗೊಬ್ಬರಗಳನ್ನು ಕೊಟ್ಟಿರುವುದಾಗಲೀ, ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಾಗಲೀ, ಅನಿಮಲ್ ಹಸ್‌ಬೆಂಡ್ರಿ ಡಿಪಾರ್ಟ್‌ಮಂಟಿ ನಲ್ಲಾಗಲೀ, ಎಲ್ಲಾದರೂ ಇವರು ದುಡ್ಡು ಖರ್ಚು ಮಾಡಿದ್ದಾರೆಯೇ? ಇವತ್ತಿನವರೆಗೆ ಕೇಂದ್ರ ಸರ್ಕಾರಕ್ಕೆ ನೀರಾವರಿಯ ಬಗ್ಗೆ ಒಂದಾದರೂ ಪ್ರಪೋಸಲ್‌ಗಳನ್ನು ಕಳುಹಿಸಿದ್ದೀರಾ? ಮಾನ್ಯ ಪಿಡಬ್ಲೂಡಿ ಮಿನಸ್ಟ್ರ ಅಧ್ಯಕ್ಷತೆಯಲ್ಲಿ ಸಬ್‌ಕಮಿಟಿ ಇದೆ ಅವರು ಏನು ಮಾಡಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ ಹೀಗಾಗಿ ಅವರೇನು ಮಾಡಿದ್ದಾರೆಂದು ಈ ಸದನದ ಮುಂದೆ ಇಡಬೇಕಾಗುತ್ತದೆ 2689 ಕೋಟಿ ರೂಪಾಯಿಗಳಲ್ಲಿ 1560 ಕೋಟಿ ರೂಪಾಯಿ ಸಬ್ಸಿಡಿ 1129 ಕೋಟಿ ರೂಪಾಯಿ ಸಾಲ ಅದು ಲಾಂಗ್ ಪೀರಿಯಡ್, ಮೂರು ವರ್ಷದ ಪ್ಯಾಕೇಜ್ ನೀವು ರೈತರ ಆತ್ಮಹತ್ಯೆ ತಪ್ಪಿಸಬೇಕೆಂದು, ಹಣವನ್ನೇ ಖರ್ಚು ಮಾಡದೇ ನಿದ್ದೆ ಮಾಡುತ್ತಿದ್ದರೆ, ಕ್ರಿಯಾಯೋಜನೆಯನ್ನು ಮಾಡದೇ, ಪ್ರಸ್ತಾವನೆಗಳನ್ನು ಕಳುಹಿಸದೇ ಹೋದರೆ, ರೈತರು ಆತ್ಮಹತ್ಯೆ ಮಾಡುವುದನ್ನು ನೀವು ಹೇಗೆ ತಪ್ಪಿಸುತ್ತೀರಿ? ಇದರಲ್ಲಿ ನಿಮಗೆ ಯಾವ ಪ್ರಾಮಾಣಿಕತೆ ಇದೆ? ನಿಮಗೆ ಈ ಪ್ರಯತ್ನದಲ್ಲಿ ಎನಾದರೂ ಪ್ರಾಮಾಣಿಕತೆ ಇದೆಯೆ? ಇದರಲ್ಲಿ ಪ್ರಾಮಾಣಿಕತೆಯೆ ಇಲ್ಲ ಸುಮ್ಮನೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇದನ್ನು ತಪ್ಪಿಸುತ್ತೇವೆಂದು ಹೇಳುವುದು ಸಭೆ ಕರೆದ ತಕ್ಷಣ ರೈತರ ಆತ್ಮಹತ್ಯೆ ನಿಲ್ಲುತ್ತದೆಯೇ? ರೈತರು ಸತ್ತುಹೋಗಿಬಿಟ್ಟರೆ ನಾನು ರಾಜೀನಾಮೆಯನ್ನು ಕೊಟ್ಟುಬಿಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾವೇನು ಕೇಳಿದ್ದೆವಾ? ಯಾರೇನು ಕೇಳಿರಲಿಲ್ಲ ಅವರಾಗಿಯೇ

ಹೇಳಿದರು ಅವರು ಹೇಳಿದ ಹಾಗೆ ನಡೆದುಕೊಂಡರಾ? ಅದಾದ ಮೇಲೆ ಸುಮಾರು ಐವತ್ತು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಇದೇನಿದು? ನಾನು ಇದನ್ನು ಟೀಕೆ ಮಾಡುವುದಕ್ಕಾಗಿ ಹೇಳತಕ್ಕಂಥದ್ದಲ್ಲ ನಮ್ಮ ಜಿಲ್ಲೆಯಲ್ಲಿ, ಹುಣಸೂರು, ಪಿರಿಯಾಪಟ್ಟಣ ಆ ಕಡೆ ಎಲ್ಲಾ ಹೊಗೆಸೊಪ್ಪು ಎಲ್ಲಾ ಹಾಳಾಗಿ ಹೋಯಿತು ಅದೇ ಅವರಿಗೆ ಮೇಜರ್ ಕ್ರಾಪ್ ಹುಣಸೂರು, ಪಿರಿಯಾಪಟ್ಟಣ, ಪಾರ್ಟ್ ಆಫ್ ಕೆ ಆರ್ ಪೇಟೆ, ಹೆಗ್ಗಡದೇವನ ಕೋಟೆ ಈ ಭಾಗದಲ್ಲೆಲ್ಲಾ ಹೊಗೆಸೊಪ್ಪು ಕೆಲವರಿಗೆ that is the major crop ಪಾವಗಡಕ್ಕೆ ಹೋದರೆ ಅಲ್ಲಿ ಅವರು ಶೇಂಗಾವನ್ನೇ ಬೆಳೆಯುವುದು ಅವರು ಬೇರೆ ಏನೂ ಬೆಳೆಯುವುದೇ ಇಲ್ಲ ಪಾಪ, ಅವರಿಗೆ ಶೇಂಗಾ ಬೀಜ ಸಿಕ್ಕಿಲ್ಲ ಅವರು ಅದೊಂದೇ ಬೆಳೆ ಬೆಳೆಯುವುದು, ಪಾಪ ಈ ಸಾರಿ ಅಪರೂಪಕ್ಕೆ ಪಾವಗಡಕ್ಕೆ ಮಳೆ ಬಿದ್ದಿತ್ತು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ಯಾವಾಗಲೂ ಬರಗಾಲಕ್ಕೆ ತುತ್ತಾಗುವಂಥ ತಾಲ್ಲೂಕು ಈ ಸಾರಿ ಮಳೆ ಬಿದ್ದಿತ್ತು, ನೀವು ಶೇಂಗಾ ಬೀಜವನ್ನು ಕೊಡದೇ ಹೋದರೆ ಆ ರೈತ ಏನು ಬೆಳೆ ಬೆಳೆಯಬೇಕು? ಇದೊಂದು ಬೆಳೆ ಹಾಕದೇ ಹೋದರೆ ಅವರ ಬದುಕೇ ಹಾಳಾಗಿ ಹೋಗಿ ಬಿಡುತ್ತದೆ ಮತ್ತೆ ಸಾಲಗಾರರಾಗುತ್ತಾರೆ ಮತ್ತೆ ಇದೇ ಪರಿಸ್ಥಿತಿ ರೈತರೇನು ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ ಅದು ತಪ್ಪೆ ಅದನ್ನು ಹೇಗಾದರೂ ಮಾಡಿ ಹೋಗಲಾಡಿಸಬೇಕು ಆ ಪ್ರವೃತ್ತಿ ಏನು ಇದೆ, ಅದರಿಂದ ರೈತರನ್ನು ಇವತ್ತು ಬಿಡುಗಡೆ ಮಾಡಬೇಕಾಗಿದೆ ಹಿಂದೆ ಯವಾಗಲೂ ರೈತರು ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ ಇತ್ತೀಚಿನ ಕೆಲವು ವರ್ಷಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ ಇದು ಜಾಸ್ತಿಯಾಗುತ್ತಿದೆ It is raising ಇದು ಪ್ರತಿ ವರ್ಷವೂ ಹೆಚ್ಚಾಗುವುದಕ್ಕೆ ಪ್ರಾರಂಭವಾಗಿಬಿಟ್ಟಿದೆ ಇದಕ್ಕೆ ನಾವು ಅಂತ್ಯ ಕಾಣಿಸ ಬೇಕಾಗಿದೆ ಅಂತ್ಯ ಕಾಣಿಸಬೇಕಾದರೆ, ಸರ್ಕಾರ ಕೇವಲ ಬಾಯಿ ಮಾತಿನಲ್ಲಿ ಅದನ್ನು ಅಂತ್ಯ ಕಾಣಿಸಲಿಕ್ಕೆ ಸಾಧ್ಯವಿಲ್ಲ ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಹಣ ಇವರು ಖರ್ಚು ಮಾಡಿಲ್ಲವೆಂದರೆ, ಈ ಸರ್ಕಾರದ ಬೇಜವಾಬ್ದಾರಿತನ ಮತ್ತು ಸರ್ಕಾರದ ನಿರ್ಲಕ್ಷ್ಯ ಎಷ್ಟರ ಮಟ್ಟಿಗೆ ಇದೆ ಎಂಬುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ ಇವತ್ತಿನವರೆಗೆ ಒಂದು ರೂಪಾಯಿ ಬಿಡುಗಡೆ ಮಾಡದೇ ಪರಿಹಾರಕ್ಕೆ ಹನ ಕೊಡದೇ, ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆಯುತ್ತೇವೆ, ಮನವಿ ಕೊಡುತ್ತೇವೆ, ನಿಯೋಗ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರೆ

ಹೇಗೆ? ನಿಯೋಗ ತೆಗೆದುಕೊಂಡು ಹೋಗುವುದು ಆಮೇಲೆ ನಿಮ್ಮ ಹತ್ತಿರ ಬೇಕಾದಷ್ಟು ದುಡ್ಡು ಇದೆ ಎಂದು ಹೇಳುತ್ತೀರಲ್ಲಾ, ನೀವು ಮಾಡಿ ನಿಮ್ಮ ಹತ್ತಿರ ಬೇಕಾದಷ್ಟು ದುಡ್ಡು ಇದೆ ಎಂದು ಹೇಳುತ್ತೀರಲ್ಲಾ, ರೈತರ ಸಾಲ ಏನು ಮನ್ನಾ ಮಾಡಿದಿರಿ, ಆ ಬ್ಯಾಂಕ್‌ಗಳಿಗೆ ವಾಪಸ್ಸು ಕಟ್ಟಿ, ಈಗಾಗಲೇ ನೀವು ಹಣವನ್ನು ಅವರಿಗೆ ಕಟ್ಟಿಬಿಟ್ಟಿದ್ದರೆ ಇಷ್ಟೊತ್ತಿಗೆ ಸಾಲ ಅವರಿಗೆ ಸಿಗುತ್ತಿತ್ತು ಈಗಾಗಲೇ ಸಾಕಷ್ಟು ನಿಧಾನವಾಯಿತು ಅವರೆಲ್ಲರೂ ಇವತ್ತು ಬಹಳ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ ಸತತವಾಗಿ ನಮ್ಮ ರಾಜ್ಯದಲ್ಲಿ ಎರಡು ವರ್ಷಗಳಿಂದ ಬರಗಾಲ ಬಂದಾಗಲೂ ಕೂಡ ಇವರು ಅದನ್ನು ಎದುರಿಸುವುದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ 138 ತಾಲ್ಲೂಕುಗಳಲ್ಲಿ ಬರಗಾಲವಿದೆ ಅದರ ಜೊತೆಗೆ ಈಗ ಮತ್ತೆ 7–8 ಜಿಲ್ಲೆಗಳಲ್ಲಿ ಪ್ರವಾಹ ಬಂದಿದೆ ಇವತ್ತು ರೈತನಿಗೆ ಒಂದು ಜೊತೆ ಎತ್ತುಗಳು ಸತ್ತು ಹೋಗಿ ಬಿಟ್ಟರೆ ಪಾಪ ಅವನು ಇನ್ನೊಂದು ಸಾರಿ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ ಏಕೆಂದರೆ, ಒಂದು ಜೊತೆ ಎತ್ತು ತೆಗೆದುಕೊಳ್ಳಬೇಕೆಂದರೆ ರೈತನಿಗೆ ಕನಿಷ್ಠ ಐವತ್ತು ಸಾವಿರ ರೂಪಾಯಿ ಬೇಕು ಬಹಳ costly ಒಂದು ಕುರಿ ಹೋಯಿತು ಎಂದರೆ ಅದರ ಕುರಿಗಾರನಿಗೆ ಸುಮಾರು ಎರಡರಿಂದ ಮೂರು ಸಾವಿರ ರೂಪಾಯಿ ನಷ್ಟವಾಗಿ ಬಿಡುತ್ತದೆ ಒಂದು ಹಸು ಹೋದರೆ ಹತ್ತು ಸಾವಿರ ರೂಪಾಯಿ ನಷ್ಟವಾಗುತ್ತದೆ ಹೀಗಾದರೆ ರೈತರನ್ನು ನಾವು ಹೇಗೆ ರಕ್ಷಣೆ ಮಾಡುವುದು? ಇವರು ಎಲ್ಲೂ ಹೋಗದೇ ಇವರು ಎಲ್ಲೂ ಮಾಡದೇ, ಮಾನ್ಯ ಪ್ರಧಾನ ಮಂತ್ರಿಗಳು ಕೊಟ್ಟಿರತಕ್ಕಂಥ ವಿದರ್ಭ ಪ್ಯಾಕೇಜ್-ಇದೆಯಲ್ಲ 2689 ಕೋಟಿ, ಅದೇನು ನೀರಾವರಿಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಅವರು ಮೀಟಿಂಗ್ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಅವರಿಗೆ ಗೊತ್ತಿಲ್ಲವೆಂದು ನಾನು ಅಂದುಕೊಂಡಿದ್ದೇನೆ ಎಲ್ಲೋ ಒಂದು ಸಾರಿ ರೇವಣ್ಣನವರು ಹೇಳಿಕೆ ಕೊಟ್ಟಿದ್ದರು ಕೆಎಂಎಫ್‌ಗೆ ಬಳಸಿಕೊಂಡಿದ್ದೀರಲ್ಲಾ ಎಂದು ಕೇಳಿದ್ದಕ್ಕೆ ಆ ಕೆಎಂಎಫ್ ಕೂಡ ಅಲ್ಲಿಯೇ ಬರುವುದು, ಅದರೊಳಗಡೆ ಬರುತ್ತದೆ ನಾಯಕರೇ, ಅದು ಅನಿಮಲ್ ಹಸ್‌ಬೆಂಡ್ರಿ ಡಿಪಾರ್ಟಮೆಂಟ್ ಎಂದರೆ ಕೆಎಂಎಫ್ ಕೂಡ ಅದರಲ್ಲಿಯೇ ಬರುತ್ತದೆ ಅದು ನಿಮಗೆ ಬರುತ್ತದೆ ಅದರಲ್ಲಿ ನಿಮ್ಮ ಇಲಾಖೆಗೆ ದುಡ್ಡು ಕೊಟ್ಟಿದ್ದಾರೆಯೆ? ನಿಮಗಿಲ್ಲ ಕೆಎಂಎಫ್‌ಗೆ ಕೊಟ್ಟಿದ್ದಾರೆ ಅದು ಕೂಡ ನಿಮ್ಮ ಇಲಾಖೆಯಲ್ಲಿಯೇ ಬರುವುದು ಆದರೆ, ಅನಿಮಲ್ ಹಸ್‌ಬೆಂಡ್ರಿ

(B) 25220

ಡಿಪಾರ್ಟ್‌ಮೆಂಟಿನ ಇಲಾಖೆಯಲ್ಲಿ ಔಷಧಿ, ರೋಗಕ್ಕೆ ಬೇಕಾದಂಥದ್ದು, ಅವುಗಳ ರಕ್ಷಣೆ ಮಾಡತಕ್ಕಂಥದ್ದು, ಅಭಿವೃದ್ಧಿಗೊಳಿಸತಕ್ಕಂಥದ್ದು, ಬರಗಾಲವಿರುವ ಪ್ರದೇಶಗಳಲ್ಲಿ ಏನು ಕಷ್ಟವಿದೆ, ಅದಕ್ಕೆ ಸ್ಪಂದಿಸತಕ್ಕಂಥ ಕೆಲಸ ಆಗಬೇಕಾಗಿತ್ತು ಅದನ್ನು ಬಿಟ್ಟು ನಾವು ಕೆಎಂಎಫ್‌ಗೆ ದುಡ್ಡು ಕೊಟ್ಟಿದ್ದೇವೆಂದು ಮೊನ್ನೆ ಎಲ್ಲೋ ರೇವಣ್ಣನವರು ಒಂದು ಹೇಳಿಕೆ ಕೊಟ್ಟಿದ್ದರು ಕೆಎಂಎಫ್‌ನಲ್ಲಿ ಏನು ದುಡ್ಡು ಇಲ್ಲವೇ? ಈ ದುಡ್ಡನ್ನು ಕೆಎಂಎಫ್‌ಗೆ ಬಳಸಿಕೊಳ್ಳಿ ಎಂದು ಹೇಳಿದ್ದಾರೆಯೇ? ಈ ರೀತಿಯಾಗಿ ಇವರು ಸಂಪೂರ್ಣವಾಗಿ, ಇವತ್ತು ಪ್ರವಾಹ ಬಂದು ಇಷ್ಟೊಂದು ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಕೂಡ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನೇ ಮಾಡಿಲ್ಲ ಗಂಭೀರವಾಗಿ ಕಾರ್ಯಕ್ರಮವನ್ನು ಮಾಡಿಲ್ಲ ಹಣವನ್ನು ಬಿಡುಗಡೆ ಮಾಡಿಲ್ಲವೆಂದ ಮೇಲೆ ತಾವು ಏನು ಕಾರ್ಯಕ್ರಮವನ್ನು ಮಾಡುತ್ತೀರಿ? ಜನಗಳಿಗೆ ಎಲ್ಲಿ ಪರಿಹಾರ ಸಿಗುತ್ತದೆ? ಇಷ್ಟರ ಮಟ್ಟಿಗೆ ಸರ್ಕಾರದ ದಿವ್ಯಮೌನ, ಏನೂ ಆಗಿಲ್ಲ ಈ ರಾಜ್ಯದಲ್ಲಿ ಏನೂ ನಡೆದೇ ಇಲ್ಲ ಎನ್ನುವ ರೀತಿಯಲ್ಲಿ ಸರ್ಕಾರ ವರ್ತಿಸುತ್ತಿದೆ ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಇನ್ನು ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರುಗಳು ಮಾತನಾಡಿ ಬೆಳಕು ಚೆಲ್ಲುತ್ತಾರೆ ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ನೀವು ಕೇಂದ್ರ ಸರ್ಕಾರವನ್ನು ಕಾಯುತ್ತಾ ಕುಳಿತುಕೊಳ್ಳಬೇಡಿ ಮೊದಲು ನಿಮ್ಮ ಹಣವನ್ನು ಖರ್ಚು ಮಾಡಿ, ಆಮೇಲೆ ಕೇಂದ್ರದಿಂದ ತರಿಸಿಕೊಳ್ಳಿ ಆಗ ನಾವು ನಿಮ್ಮ ಜೊತೆ ಒತ್ತಾಯ ಮಾಡುವುದಕ್ಕೆ ಬರುತ್ತೇವೆ ಇಲ್ಲಿ ಕುಳಿತುಕೊಂಡು ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾರೆ ಕೇಂದ್ರ ಸರ್ಕಾರ 4% ಬಡ್ಡಿಯನ್ನು ಕೊಡಲಿ ಎಂದು ಮಾನ್ಯ ಎಸ್ ಎಂ ಕೃಷ್ಣರವರ ಕಾಲದಲ್ಲಿ ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಲ್ಲಾ, ಆಗ ಬರಗಾಲ ಇತ್ತು ನೀವು ಎಷ್ಟು ಕೇಂದ್ರ ಸರ್ಕಾರದಿಂದ ಬಡ್ಡಿಯನ್ನು ಕೊಡಿಸಿದ್ದೀರಿ ಅಲ್ಲಿ ಇವರ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಗೂಬೆಯನ್ನು ಕೂರಿಸುತ್ತಾರೆ ಆ 4% ಬಡ್ಡಿಯನ್ನು ಇವರು ಮಾಡಿದ್ದು ಅಲ್ಲ ನಾವು 6% ಬಡ್ಡಿಗೆ ಮಾಡಿದ್ದೆವು, ಕೇಂದ್ರ ಸರ್ಕಾರದ ಮಾನ್ಯ ಚಿದಂಬರವರು 2% ಸಬ್ಸಿಡಿಯನ್ನು ಕೊಟ್ಟರು, ಅದು ಬಂದು 4% ಗೆ ಬಡ್ಡಿಗೆ ನಿಂತುಕೊಂಡಿತು ಇವರು ರೈತರಿಗೆ ಅದನ್ನು ನಾವು ಮಾಡಿದ್ದೇವೆಂದು ಹೇಳುತ್ತಾರೆ ಇವರು ಎಲ್ಲಾ ಕಡೆಗೆ ಹೋದಾಗ ನಾವು ಮಾಡಿದ್ದೇವೆಂದು

ಹೇಳುತ್ತಾರೆ ರೈತರಿಗೆ ಇವರು ಕೊಟ್ಟಿರುವ ಕೊಡುಗೆ ಅಲ್ಲ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ನಾನು ಹಣಕಾಸಿನ ಮಂತ್ರಿಯಾಗಿದ್ದಾಗ 12 5% ನಿಂದ 6% ಗೆ ಇಳಿಯಿತು ಅದು ಆದ ಮೇಲೆ ಕೃಷಿ ವಲಯಕ್ಕೆ 2% ಸಬ್ಸಿಡಿ ಕೊಟ್ಟು ಇವರು ಕಡಿಮೆ ಮಾಡಿದರು ಆ 2% ಕಡಿಮೆ ಮಾಡಿದ ಮೇಲೆ it has come down to 4% ಮಾನ್ಯ ಯಡಿಯೂರಪ್ಪನವರೆ, ಇಲ್ಲಿ ನಿಮ್ಮ contribution ಏನೂ ಇಲ್ಲ ಆ 4% ಮಾಡಿರುವ ಕಾರ್ಯಕ್ರಮ ನಿಮ್ಮದಲ್ಲ ರೈತರಿಗೆ ತಾವು 4% ಕೊಟ್ಟಿದ್ದೇವೆ, ಕೇಂದ್ರ ಸರ್ಕಾರ ಏನೂ ಕೊಟ್ಟಿಲ್ಲ ಕೇಂದ್ರ ಸರ್ಕಾರದವರು ಕೂಡ 9% ದಿಂದ 7%ಗೆ ತಂದಿದ್ದಾರೆ ನಂತರ 4%ಗೆ ಆಯಿತು ಇವರು ಮಾಡದೇ ಇರುವುದನ್ನು ಹೆಚ್ಚು ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ ಇವರು ಪ್ರಚಾರ, ಬರಿ ಅಬ್ಬರ ಮಾಡುತ್ತಿದ್ದಾರೆ, ಮಾನ್ಯ ಕೃಷ್ಣಪ್ಪನವರೆ, ನಾವು ನೀವು ಇದ್ದಾಗಲೇ ಮಾಡಿದ್ದು ಇವರು ಮಾಡಿಲ್ಲವೆಂದು ನಾನು ಹೇಳುತ್ತಿರುವುದು ಈಗ ತಮಗೆ ಅರ್ಥವಾಗಿರಬೇಕಲ್ಲವೇ? ಆಮೇಲೆ ಇವರು 4% ನಂತೆ ಸಾಲವನ್ನು ಕೊಟ್ಟರಲ್ಲಾ, ಬಡ್ಡಿ ಸಹಾಯ ಸಿಗುತ್ತದೆಂದು ಇವರು ಸಾಲವನ್ನೆ ಕೊಟ್ಟಿಲ್ಲ ಇಷ್ಟು ಹೊತ್ತಿಗಾಗಲೇ 2200 ಕೋಟಿ ರೂ ಗಳನ್ನು ಕೊಡಬೇಕಾಗಿತ್ತು ಇವರು ಸಾಲವನ್ನು ಕೊಟ್ಟಿದ್ದರೆ ರೈತರಿಗೆ ಅನುಕೂಲವಾಗುತ್ತಿತ್ತು ಇವರು 450 ಕೋಟಿ ರೂ ಗಳಷ್ಟು ಕೊಟ್ಟುಬಿಟ್ಟು ನಾವು 4% ರೈತರಿಗೆ ಸಹಾಯವನ್ನು ಮಾಡಿದ್ದೇವೆಂದು ಹೇಳುತ್ತಿದ್ದಾರೆ ಇವರು ಸಾಲವನ್ನೇ ಕೊಟ್ಟಿಲ್ಲ ಸಹಾಯ ಹೇಗೆ ಮಾಡಿದ ಹಾಗೆ ಆಯಿತು? ಮಾನ್ಯ ಯಡಿಯೂರಪ್ಪನವರೆ, ತಾವು ದಯಮಾಡಿ ನೀವು ಹಣಕಾಸಿನ ಮಂತ್ರಿಗಳಾಗಿ ರೈತರ ಪರವಾಗಿ ಹೋರಾಟವನ್ನು ಮಾಡಿಕೊಂಡು ಬಂದವರಾಗಿದ್ದೀರಿ ಅದರಿಂದಾಗಿ ಈಗಲಾದರೂ ಕೂಡ ತಾವು ರೈತರ ಪರವಾಗಿ ನಿಲ್ಲಬೇಕು ರೈತರು ಕಷ್ಟದಲ್ಲಿದ್ದಾರೆ ನೀವು ಇದರ ಬಗ್ಗೆ ಎಲ್ಲರನ್ನು ಕರೆದು ಚರ್ಚೆ ಮಾಡಿ ಪರಿಹಾರದ ಕೆಲಸಕ್ಕೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಹಣವನ್ನು ಬಿಡುಗಡೆ ಮಾಡುವ ಕೆಲಸವನ್ನು ಮಾಡಬೇಕು ಮನೆಗಳು ಬಿದ್ದು ಹೋದವರಿಗೆ ಹಣವನ್ನು ಬಿಡುಗಡೆ ಮಾಡಿ ಈಗಾಗಲೇ 25 ಸಾವಿರ ಮನೆಗಳು ಬಿದ್ದು ಹೋಗಿವೆ ಜಾನುವಾರುಗಳೆಲ್ಲವು ಸತ್ತು ಹೋಗಿವೆ, ಅವುಗಳಿಗೆ ನೀವು ಪರಿಹಾರವನ್ನು ಕೊಡಬೇಕು ನಮ್ಮ ಸರ್ಕಾರದಲ್ಲಿ ಕೆಲವೊಂದು ನಿಯಮಾವಳಿಗಳನ್ನು ಮಾಡಿಕೊಂಡಿದ್ದಾರೆ ಕುರಿಗಳು ಸತ್ತು ಹೋದರೆ ಪರಿಹಾರ ಕೊಡುವುದಿಲ್ಲ, ದನಕರುಗಳು ಸತ್ತು ಹೋದರೆ

ಕೊಡುವುದಿಲ್ಲ, ಎಮ್ಮೆ ಸತ್ತು ಹೋದರೆ ಕೊಡುವುದಿಲ್ಲ ಇವತ್ತಿನ ದಿವಸ ರೈತರು ಇದರಿಂದಲೇ ನಷ್ಟಕ್ಕೆ ಒಳಗಾಗಿದ್ದಾರೆ ಒಂದು ಸಾರಿ ಇವರುಗಳು ಕುರಿಗಳನ್ನು ಹಾಗೂ ಎಮ್ಮೆಗಳನ್ನು, ದನಗಳನ್ನು, ಎತ್ತುಗಳನ್ನು ಕಳೆದುಕೊಂಡು ಬಿಟ್ಟರೆ ಅವರು ಕಷ್ಟದಿಂದ ಪಾರಾಗುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ನಾನು ಈ ಸರ್ಕಾರವನ್ನು ತೀವ್ರವಾಗಿ ಒತ್ತಾಯವನ್ನು ಮಾಡುತ್ತೇನೆ, ನೀವು ಇಲ್ಲಿಯವರೆಗೆ ವಿಫಲರಾಗಿರುತ್ತೀರಿ ಸರ್ಕಾರ ಇದೆ ಎನ್ನುವ ರೀತಿಯಲ್ಲಿ ನೀವು ನಡೆದುಕೊಂಡಿರುವುದಿಲ್ಲ ಅದಕ್ಕಾಗಿ ನಿವು ಈಗಲಾದರೂ ಎಚ್ಚರವನ್ನು ವಹಿಸಿ ನಾವು ಹೇಳಿರುವುದನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಪರಿಹಾರದ ಕೆಲಸವನ್ನು ಮಾಡಬೇಕು ರೈತರು, ಬಡವರು, ಕೂಲಿಕಾರ್ಮಿಕರು ಇವರುಗಳ ಸಹಾಯಕ್ಕೆ ಬರಬೇಕೆಂದು ಹೇಳಿ ಈ ಸರ್ಕಾರವನ್ನು ಒತ್ತಾಯ ಮಾಡಬೇಕಾಗುತ್ತದೆ ಅದನ್ನು ನಾನು ಮಾಡುತ್ತಿದ್ದೇನೆ ಇಲ್ಲದಿದ್ದರೆ ಇವರು ರೈತರ ಪರವಾಗಿ ಮೊಸಳೆ ಕಣ್ಣೀರನ್ನು ಹಾಕುತ್ತಾರೆ ಇವರು ಬಡವರ ಪರವಾಗಿ ಇಲ್ಲ ಇವರು ದಲಿತರ ಹಾಗೂ ಕೂಲಿಕಾರ್ಮಿಕರ ಪರವಾಗಿ ಇಲ್ಲವೆಂದು ಹೇಳಿ ನಾವು ಆಪಾದನೆಯನ್ನು ಮಾಡಬೇಕಾಗುತ್ತದೆ ನನಗೆ ಮಾತನಾಡುವುದಕ್ಕೆ ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಬಹಳ ಗಂಭೀರವಾದಂಥ ನಿಲುವಳಿ ಸೂಚನೆಯನ್ನು ಏನು ಪ್ರಸ್ತಾಪ ಮಾಡಿದ್ದಾರೆ, ನಾನು ಅವರನ್ನು ಅಭಿನಂದಿಸಿ, ಅದನ್ನು ಚರ್ಚೆಗೆ ತೆಗೆದುಕೊಂಡಿದ್ದಕ್ಕಾಗಿ ತಮಗೂ ಕೂಡ ಅಭಿನಂದಿಸುತ್ತೇನೆ ಕರ್ನಾಟಕಕ್ಕೆ ಉತ್ತಮವಾದ ಮಳೆಯಾಗಿದೆ ಎಂದು ಹೇಳಿ ನಾವು ಇಲ್ಲಿ ಚರ್ಚ ಮಾಡುತ್ತಿಲ್ಲ ಈ ರಾಜ್ಯದ ದುರಂತ ಏನೆಂದರೆ, ನಮಗೆ ಇವತ್ತು regular monsoon ನ್ನು ನಿರೀಕ್ಷೆ ಮಾಡಲಾರದ ಸ್ಥಿತಿ ಉಂಟಾಗಿದೆ ಯಾವತ್ತೋ ಎಲ್ಲೋ ಮಳೆ ಬರುತ್ತದೆ, ಇನ್ನೊಂದು ಕಡೆ ಸತತವಾಗಿ ಬರುವಂತಹ ಮಳೆ ಬಾರದೇ ಹೋಗುತ್ತಿದೆ ನಾನು ಮಾನ್ಯ ಯಡಿಯೂರಪ್ಪನವರ ಬಜೆಟ್ ಇಟ್ಟು ನಮಗೆ ಬಹಳ ಹಣಕಾಸಿನ ಪ್ರವಾಹ ಬಂದಿದೆ ಎಂದು ಹೇಳಿದಾಗ, flood ಆಗಿದೆ ಎಂದು ಹೇಳಿದಾಗ ನಾನು ಒಂದು ಮಾತನ್ನು ಅವರಿಗೆ ಹೇಳಿದ್ದೆ ತಾವು ಬಹಳ ಒಳ್ಳೆಯ ಕಾಲದಲ್ಲಿದ್ದೀರಿ, ತಮಗೆ ಭಗವಂತನು ಒಳ್ಳೆಯದನ್ನು ಮಾಡಿದ್ದಾನೆ, ರಾಜ್ಯದ

ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ, ಹೇಗಾದರೂ ಮಾಡಿ ತಾವು project ಮಾಡುವುದನ್ನು ತಾವು ಯೋಚನೆ ಮಾಡಬೇಕಾಗಿತ್ತು ನೀವು programme ಗಳಿಗೆ ಸ್ವಲ್ಪ ಕಡಿವಾಣ ಹಾಕಿ ಎಂದು ಹೇಳಿದ್ದೆ ಅದನ್ನು ನಾನು ಇವತ್ತು ಮತ್ತೆ reiterate ಮಾಡುವುದಕ್ಕೆ ಬಯಸುತ್ತೇನೆ ಈ ನಿರೀಕ್ಷೆಗಳನ್ನು ಸರ್ಕಾರವನ್ನು ನಡೆಸುವವರು ಮಾಡಬೇಕಾಗುತ್ತದೆ ಆಕಸ್ಮಿಕಗಳು ಯಾವಾಗ ಸಂಭವಿಸಬಹುದು ಪ್ರಾಕೃತ್ತಿಕವಾಗಿ ಏರುಪೇರುಗಳು ಯಾವಾಗ ಆಗಬಹುದು, ಇದರ ಬಗ್ಗೆ ಸರ್ಕಾರ ನಡೆಸುವಂಥವರು ಆಲೋಚನೆಯನ್ನು ಮಾಡಿದ್ದರೆ ಬಹುಶಃ western ghats ನಿಂದ ಆ ಕಡೆಗೆ ಸತತವಾಗಿ ವರ್ಷಕ್ಕೆ 3 ರಿಂದ 5 ದಿವಸ ತೀವ್ರವಾದ ಮಳೆಗೆ ಸಿಕ್ಕಿ ಪ್ರವಾಹ ಮತ್ತು ಕೊರೆತ, ಕುಸಿತ, ಭೂಕುಸಿತ, ಮನೆ ಕುಸಿತ ಇದನ್ನೆಲ್ಲಾ ಕಡಿಮೆ ಮಾಡುವ ಬಗ್ಗೆ ತಾವು ಆಲೋಚನೆಯನ್ನು ಮಾಡಬಹುದಾಗಿತ್ತು ಈ ಕಡೆ, ನಾವು ಏನು ಪ್ರತಿಸಲ ಬರದ ಬವಣೆಗೆ ಸಿಲುಕುತ್ತಿದ್ದೇವೆ, ಪ್ರವಾಹ ಪೀಡಿತಕ್ಕೆ ಸಿಗುತ್ತಿದ್ದೇವೆ, ನಮ್ಮನ್ನೇನಾದರೂ ಉಳಿಸುವ ಬಗ್ಗೆ ತಾವು ಏನಾದರೂ ಆಲೋಚನೆಯನ್ನು ಮಾಡಬಹುದಾಗಿತ್ತು ಸರ್ಕಾರ ನಡೆಸುವವರು ಬರಿ ಅವಧಿಗೆ ಮಾತ್ರ ಸರ್ಕಾರವನ್ನು ನಡೆಸುತ್ತೇವೆಂದು ಭಾವಿಸಬಾರದು ತಾವು ಏನು ಇವತ್ತು ಸರ್ಕಾರವನ್ನು ನಡೆಸುತ್ತಿದ್ದೀರಿ, ಮುಂದಿನ ಜನಾಂಗಕ್ಕೆ ಒಳ್ಳೆಯದು ಆಗುವ ಹಾಗೆ ಸರ್ಕಾರವನ್ನು ನಡೆಸಬೇಕು ನಿಮಗೇನಾದರೂ ಇವತ್ತು ಶಕ್ತಿಯನ್ನು ಕೊಟ್ಟಿದ್ದರೆ ಆ ಶಕ್ತಿಯು ಮುಂದೆ ರಾಜ್ಯಕ್ಕೆ ಬರಬೇಕಾಗಿರುವಂಥ ಪೀಡೆಗಳನ್ನು ನಿಭಾಯಿಸುವುದ ಕ್ಕೋಸ್ಕರ ಬಳಸಬೇಕಾಗಿತ್ತು ಇವತ್ತು ದುರಂತವೇನೆಂದರೆ, ಇವತ್ತು ಬರೀ ಪ್ರಚಾರಕ್ಕೆ ಇಳಿದುಬಿಟ್ಟು ರಾಜ್ಯವನ್ನು ಇವತ್ತು ಬಹಳ ಗಂಭೀರವಾದ ಸ್ಥಿತಿಗೆ ತಂದಿದ್ದೇವೆ ಇವತ್ತು ಹಿಮಪರ್ವತ ಕಡಿಮೆಯಾಗುತ್ತಿದೆ ಸಮುದ್ರಗಳಲ್ಲಿ ಏರಿಳಿತಗಳು ಜಾಸ್ತಿ ಆಗುತ್ತಿವೆ ಸಿಹಿನೀರು, ಕುಡಿಯುವ ನೀರು ಸಿಕ್ಕಲಾರದ ಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ ಇದು ಪ್ರಪಂಚದಲ್ಲಿ ಆಗುತ್ತಿರುವಂಥ ಒಂದು ಪ್ರಕ್ರಿಯೆ ಆಗಿದೆ ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ, ನಾವು ಅನೇಕ ಸಲ ಹೇಳಿದ್ದೇವೆ, ಮಧ್ಯೆ ಕರ್ನಾಟಕದಲ್ಲಿ ಕುಡಿಯುವ ನೀರಿಗೆ 2010 ರಿಂದ 2020 ನೇ ಇಸ್ವಿಯವರೆಗೆ ಸಿಗುವಂಥ ಪರಿಸ್ಥಿತಿ ಇಲ್ಲ ಕರಾವಳಿಯಲ್ಲಿ ಇವತ್ತು ಮಳೆಯನ್ನು ತಡೆದುಕೊಳ್ಳುವಂಥ ಸ್ಥಿತಿ ಇಲ್ಲ, ಬಹಳ ಮಳೆ ಒಂದು ದಿವಸ ಬಿದ್ದಿದೆ, ಆದರೆ ಪ್ರವಾಹ ಏತಕ್ಕೆ ಆಗುತ್ತಿದೆ, ನಿಮ್ಮ ಎಲ್ಲಾ river basin silt up ಆಗಿದೆ ನೀವು ಎಲ್ಲಿ ನೀರನ್ನು

ಹರಿಸಬೇಕಾಗಿತ್ತು, ಆ ಜಾಗಗಳೆಲ್ಲಾ occupy ಆಗಿದೆ ಎಲ್ಲಿ catchments ನಿಂದ ಎಲ್ಲಿ ಲೀಡ್ ಮಾಡಬೇಕಾಗಿತ್ತೋ ಆ feeder canals ಇತ್ತು, ಯಾವುದು ಕೂಡ ಆಳ ಇಲ್ಲ ನಾನು ಬೆಂಗಳೂರಿನ ಬಗ್ಗೆ ಮಾತನಾಡುತ್ತಾ ಒಂದು ಮಾತನ್ನು ಪ್ರವಾಹದ ಬಗ್ಗೆ ಹೇಳುತ್ತೇನೆ, either it is covered by roof or by road ಬೆಂಗಳೂರು ನಗರದಲ್ಲಿ ನೀರು ಹರಿದುಕೊಂಡು ಹೋಗುತ್ತದೆ ಅಲ್ಲವೆ, ಆ ಪ್ರಮಾಣದಲ್ಲಿ ಮಳೆ ಬರುತ್ತಿಲ್ಲ ನೀರನ್ನು ತೆಗೆದುಕೊಳ್ಳುವಂಥ ನೆಲ ಇವತ್ತು ಇಲ್ಲ ನೀರನ್ನು ತೆಗೆದುಕೊಳ್ಳುವುದಕ್ಕೆ ನೀವು ಜಲವನ್ನು ಬಿಟ್ಟಿಲ್ಲ ರೋಡ್ ಮಾಡಿ concrete ಹಾಕಿದ್ದೀರಿ ಮನೆ ಕಟ್ಟಿ ಬಿಲ್ಡಿಂಗ್ ಕಟ್ಟಿ ಕಾಂಕ್ರೀಟ್ ಹಾಕಿದ್ದೀರಿ ಬಿದ್ದ ಮಳೆ ನೀರು ಒಂದು ಕಡೆ ತುಂಬಿಸಿ ಹರಿಯಬೇಕಾದರೆ ಪ್ರವಾಹವಾಗುತ್ತದೆ ಅದು ಹರಿದುಕೊಂಡು ಹೋಗಬೇಕಾದರೆ ಬೆಂಗಳೂರಿನಲ್ಲಿ 355 ಕೆರೆಗಳು ಇತ್ತು, ಅವುಗಳನ್ನು ಮುಚ್ಚಿಬಿಟ್ಟಿದ್ದೀರಿ ಕೆರೆಗಳನ್ನು ನೀವು ಸರ್ವನಾಶ ಮಾಡಿದ್ದೀರಿ ಸಣ್ಣಮಳೆ ಬಿದ್ದರೆ ಬೆಂಗಳೂರಿನಲ್ಲಿ ಮನೆಗೆ ನೀರು ನುಗ್ಗಿತು ಎಂದು ಪತ್ರಿಕೆಯ ತುಂಬಾ ಬಂತು, ಅವರ ಮನೆಗಳಿಗೆ ನೀರು ನುಗ್ಗಿತು ಅಲ್ಲಿರುವ ಮಕ್ಕಳು ಕಂಗಾಲಾದರು ಇವರ ಮನೆಗೆ ನೀರು ನುಗ್ಗಿತು, ಈ ಪ್ರವಾಹವಾಯಿತು, ಇಲ್ಲಿಗೆ ಪರಿಹಾರವನ್ನು ಕೊಡಿ, ಇದು ಖಂಡಿತವಾಗಿ ಆಗಿಲ್ಲ ಬೆಂಗಳೂರು ಸಿಟಿಯಲ್ಲಿ 355 ಕೆರೆಗಳು ಇದ್ದಿದ್ದರೆ ಆಮೇಲೆ ಸರ್ಕಾರವೇ ಕಟ್ಟಿರುವಂತಹ ರಚಿಸಿರುವಂತಹ ಒಂದು ಸಮಿತಿಯ ಶಿಫಾರಸ್ಸಿನಲ್ಲಿ ಕನಿಷ್ಠ 144 ಕೆರೆಗಳನ್ನು ನೀವು ಉಳಿಸಿದ್ದರೆ ಬೆಂಗಳೂರಿನಲ್ಲಿ ಇವತ್ತು ವಾಟರ್ ರೀಚಾರ್ಜ್ ಆಗುವಂತಹ ಸ್ಥಿತಿ ಇರುತ್ತಿತ್ತು ವಾಟರ್‌ನ್ನು ಸ್ಟೋರ್ ಮಾಡುವಂತಹ ಸ್ಥಿತಿ ಇರುತ್ತಿತ್ತು ಅವನ್ನೆಲ್ಲಾ ನಿರ್ನಾಮ ಮಾಡುವುದಕ್ಕೆ ನಾವು ಸರ್ಕಾರವನ್ನು ನಡೆಸಿದವರು ನೇರವಾಗಿ ಹೊಣೆಗಾರರಾಗಿ ಪ್ರವಾಹದ ಮಟ್ಟವನ್ನು ಜಾಸ್ತಿ ಮಾಡುವ ಹಾಗೆ ತಾವು ಮಾಡಿದ್ದೀರಿ ಇವತ್ತು ದಕ್ಷಿಣ ಕನ್ನಡವನ್ನು ಹಾಗೆ ಮಾಡಿದ್ದೀರಿ The loss of vegetation in old Mysore, ನಮ್ಮ ಭಾಗದಲ್ಲಿ ಇವತ್ತು ಏನು ಆಗಬೇಕಾಗಿತ್ತೋ ಚಿಕ್ಕಮಗಳೂರಿನಿಂದ ತುಮಕೂರಿನವರೆಗೆ ಇರುವಂತಹ ಕಾಡನ್ನು ತಾವು ನಾಶ ಮಾಡಿ ಇಡೀ ಮಳೆಯೂ ಒಂದು ಕಡೆ ಸುರಿಯುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ ಮಂಗಳೂರಿನಲ್ಲಿ ಮಳೆ ಬರುತ್ತಿದೆ ಎಂದು ನಮಗೆ ಯಾರು ಹೇಳಬೆಕಾಗಿಲ್ಲ ಮಂಗಳೂರಿನಿಂದ-ತುಮಕೂರು-ಬೆಂಗಳೂರಿನವರೆಗೂ ಮೋಡ ಕವಿದ

ವಾತಾವರಣವಿದ್ದರೆ ಮಂಗಳೂರಿನಲ್ಲಿ, ಶಿವಮೊಗ್ಗದಲ್ಲಿ ಮಳೆಯಾಗುತ್ತಿದೆ ಎಂದು ನಾವು ತಿಳಿದುಕೊಂಡು ಬಿಡಬಹುದು We can`assume ನಮಗೆ ಮಳೆ ಬೀಳುವುದಿಲ್ಲ ನಾವು ಯಾವಾಗಲೂ ಶೀತಗಾಳಿ ಮೋಡದ ನೆರಳಿನಲ್ಲಿ ಬದುಕುವಂತಹ ಸ್ಥಿತಿಯೂ ನಿರ್ಮಾಣವಾಗಿದೆ ಇದು ಏಕೆ? ಇಲ್ಲಿ ತಂಪು ಇಲ್ಲ, ಇಲ್ಲಿ forest ಇಲ್ಲ ಇಲ್ಲಿ ನಾವೆಲ್ಲರು ಗಣಿಗಾರಿಕೆಗೆ ಸಿಕ್ಕಿಹಾಕಿಕೊಂಡು ನರಳುತ್ತಿದ್ದೇವೆ ತುಮಕೂರಿನಲ್ಲಿ ಇದ್ದ 33% ಕಾಡು ಅದು 8% ಗೆ ಇಳಿದಿದೆ ಅದಕ್ಕಿಂತ ಕೋಲಾರ ಕಡಿಮೆಗೆ ಇಳಿದಿದೆ ಹಾಸನ ಜಿಲ್ಲೆಯಲ್ಲಿ ಇವತ್ತು ಮಲೆನಾಡು ಇದೆಯಾ ಎಂದು ಹುಡುಕಬೇಕು ನಾನು ಸಕಲೇಶಪುರದ ಕಡೆಗೆ ಹೋದಾಗ ಹೇಳುತ್ತಿದ್ದರು ರೋಡ್ ಪಕ್ಕದಲ್ಲಿ ಮಾತ್ರ ನಿಮಗೆ ಗಿಡ ಕಾಣುತ್ತದೆ ಒಳಗೆ ಹೋಗಬೇಡಿ ಅದು ಬಯಲು ಸೀಮೆಯಾಗಿದೆ ಇಡೀ ಕಾಫಿ ಬೆಳೆ ಹೋಯಿತು ಎಂದು ಹೇಳಿ ಇಡೀ ಕಾಫಿ ಎಸ್ಟೇಟ್‌ನಲ್ಲಿ ಇರುವಂಥ ಮರಗಳನ್ನು ಕಡಿಯುವುದಕ್ಕೆ ಪರ್ಮಿಟ್ ಕೊಟ್ಟಿದ್ದೀರಿ ಕಾಫಿ ಧಾರಣೆ ಕಡಿಮೆಯಾದರೆ ಎಸ್ಟೇಟ್‌ನಲ್ಲಿ ಇರುವಂಥ forest ಗಳನ್ನು ಇವತ್ತು ಖಾಲಿ ಮಾಡಿಸಿದ್ದೀರಿ ಮಳೆ ಎಲ್ಲಿ ಬೀಳಬೇಕು? ಎಲ್ಲೋ ಒಂದು ಕಡೆ ಮಳೆ ಸುರಿಯುತ್ತದೆ ಅದರಿಂದ ನಮಗೆ ಏನಾದರೂ ಪ್ರಯೋಜನವಾಗುತ್ತಿದೆಯೇ? ಇವತ್ತು ಮಳೆಗಾಲ ಆಗುತ್ತಿದ್ದರೆ ನಷ್ಟ ಜಾಸ್ತಿಯಾಗುತ್ತಿದೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ ಏಕೆ? ಏರೋಬಿಕ್ ಲ್ಯಾಂಡ್‌ನ್ನು ಕಡಿಮೆ ಮಾಡಿದ್ದೀರಿ ಉಳುಮೆ ಮಾಡುವುದಕ್ಕೆ ಜಾಗ ಇಲ್ಲ SEZ ಗಳನ್ನು ಮಾಡಿದ್ದೀರಿ ನಗರಗಳನ್ನು ವ್ಯಾಪಕವಾಗಿ ಬೆಳೆಸಿಕೊಂಡು ಬಂದಿದ್ದೀರಿ ಒಂದು ಕಡೆ ಕೃಷಿ ಭೂಮಿಯನ್ನು ಕಡಿತ ಮಾಡುತ್ತಾ ಬರುತ್ತಾ ಹೇಳಿ ನಮ್ಮ ರಾಜ್ಯಕ್ಕೆ ಬೇಕಾಗಿರುವಂಥ ಅಗ್ರಿಕಲ್ಚರ್ ಪ್ರೊಡಕ್ಷನ್‌ಗೆ ಎಷ್ಟು ನಷ್ಟವಾಯಿತು ಇನ್ನೊಂದು ಕಡೆ ಸಾಯಿಲ್ ಎರೋಷನ್, ಸಾಯಿಲ್ ಸ್ಟ್ರಕ್ಚರ್ ಇಲ್ಲ ನಿಮ್ಮ ಇಲಾಖೆಗಳು ಸತ್ತು ಹೋಗಿವೆ, ಕೃಷಿ ಇಲಾಖೆ ಮತ್ತು water shed ಇಲಾಖೆ ಇವತ್ತು ರಾಜ್ಯದಲ್ಲಿ ಸತ್ತು ಹೋಗಿವೆ ಅವುಗಳು ಜೀವಂತವಾಗಿಲ್ಲ ಒಂದೇ ಒಂದು water shed programme ನ್ನು ಇವತ್ತು ನೀವು ಜೀವಂತವಾಗಿ ಇಟ್ಟಿಲ್ಲ NGO ಗಳ ಹೆಸರಿನಲ್ಲಿ ಕೆಲಸವನ್ನು ಕೊಟ್ಟಿರಿ ಯಾರಿಗೆ ಯಾರು ಜವಾಬ್ದಾರಿ ಇಲ್ಲ ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿ ಒಂದು ಕಡೆ ನೀರು ಶೇಖರಣೆಯಾಗುವಂಥ ಸ್ಥಿತಿಯನ್ನು ನಾವು ರಾಜ್ಯದಲ್ಲಿ ಇಡುವುದಕ್ಕೆ ಆಗಲಿಲ್ಲ ಇದಕ್ಕೆ ನೇರವಾಗಿ ಸರ್ಕಾರ ನಡೆಸುವವರೇ ಹೊಣೆಗಾರರಾಗಬೇಕಾಗುತ್ತದೆ ಏನೋ ಅಕಸ್ಮಾತ್ ಆಗಿ

ಮಳೆ ಬಿತ್ತು, ನೀವು ಅಲ್ಲಿಗೆ ಹೋಗಿ ಬಿಟ್ಟು ಕಂಬಳಿ ಕೊಡಿಸಿ ಪ್ರವಾಹ ಬಂದಿದೆ, ಅವರೆಲ್ಲರನ್ನು ಕರೆದುಕೊಂಡು ಹೋಗಿ ಸ್ಕೂಲ್‌ನಲ್ಲಿ ಮಲಗಿಸಿ ಬಿಟ್ಟು ಮೂರು ದಿವಸ ಊಟ ಹಾಕಿ ಬಿಟ್ಟು ನಾವು ಬಹಳ ಚೆನ್ನಾಗಿ ನೋಡಿಕೊಂಡಿದ್ದೇವೆಂದು ಹೇಳಿದರೆ ಅದನ್ನು ಸರ್ಕಾರ ಎನ್ನುವುದಿಲ್ಲ ಅದನ್ನು ಚಾರಿಟಿ ಎಂದು ಹೇಳುತ್ತಾರೆ ಅದನ್ನು ಧಾರ್ಮಿಕ ದತ್ತಿಯವರು ಮಾಡಬೇಕಾಗಿರುವ ಕೆಲಸ ಎಂದು ಹೇಳುತ್ತಾರೆ ನೀವು ಒಂದು ವರ್ಷದ ಅನುಭವವನ್ನು ಮುಂದೆ ಆ ತರಹದ ಸ್ಥಿತಿ ನಿರ್ಮಾಣವಾಗಬಾರದೆಂದು ತೀರ್ಮಾನವನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಹಾಕಿಕೊಳ್ಳುವ ಬಗ್ಗೆ ತಾವು ಏನು ಮಾಡಿದ್ದೀರಿ? ಹೋದ ವರ್ಷವೂ ಕೂಡ ಮಂಗಳೂರಿನಲ್ಲಿ floods ಆಗಿತ್ತು ವರ್ಷ ವರ್ಷ ಈ ಸೀಸನ್‌ನಲ್ಲಿ ಕೋಸ್ಟಲ್ ಕರ್ನಾಟಕದಲ್ಲಿ floods ಆಗುತ್ತಿದೆ ತಾವು ಆ ಬಗ್ಗೆ ಏನು ಕಾರ್ಯಕ್ರಮವನ್ನು ಮಾಡಿದ್ದೀರಿ? ಸೇತುವೆಗಳು ಬೀಳುತ್ತಿವೆ ಓಡಾಡುವುದಕ್ಕೆ ಸಮರ್ಪಕವಾದ ರೋಡ್‌ಗಳು ಇಲ್ಲ ನದಿಗಳಲ್ಲಿ ಇವತ್ತು ಸಿಲ್ಟ್ ಅಪ್ ಆಗಿ ಇಡೀ ನೀರು ಭೂಮಿಯ ಮೇಲೆ ಹರಿದುಹೊಗುತ್ತಿದೆ ಹಾಗಾಗಿ ಅಲ್ಲಿ ಇದ್ದ ಸಾರವೆಲ್ಲಾ ಕೊಚ್ಚಿಕೊಂಡು ಹೋಗುತ್ತಿದೆ ಸಾಯಿಲ್ ಎರೋಷನ್‌ಗೆ ತಾವು ಏನು ಮಾಡುತ್ತೀರಿ? ಅಲ್ಲಿ ನಾಳೆ ದಿವಸ ಬೆಳೆಯುವ ರೈತ ಅಲ್ಲಿ ಏನು ಬೆಳೆಯಬಹುದು? ಅವನು ಏನಾದರೂ Chemicals, Fertilizers ಹಾಕಿದರೆ ಮಾತ್ರ ಬೆಳೆಯನ್ನು ಬೆಳೆಯಬಹುದು ಇವತ್ತು ನೈಸರ್ಗಿಕವಾದ ಗೊಬ್ಬರದಿಂದ ಬೆಳೆಯನ್ನು ಬೆಳೆಯುವ ಸ್ಥಿತಿಯಲ್ಲಿ ಆ ಭೂಮಿ ಇರುವುದಿಲ್ಲ ಭೂಮಿಯಲ್ಲಿ ತಂಪನ್ನು ಉಳಿಸಿಲ್ಲ Atmospheric humidity ಎಲ್ಲಿಗೆ ಹೋಗಿದೆ? 38,40,42 ಡಿಗ್ರಿ ಇವತ್ತು ನಿಮ್ಮ ಬೆಂಗಳೂರಿಗೆ ಬಂದಿದೆ, ತುಮಕೂರಿಗೆ ಬಂದಿದೆ, ಇದಕ್ಕೆಲ್ಲಾ ಯಾರು ಕಾರಣ? ಸಮಯೋಚಿತವಾದ ತೀರ್ಮಾನವನ್ನು ತೆಗೆದುಕೊಳ್ಳದ್ದಕ್ಕೆ ಸರ್ಕಾರವೇ ಕಾರಣ ಒಂದು ಕಡೆ ಪ್ರಕೃತಿಯ ವಿಕೋಪ, ಇನ್ನೊಂದು ಕಡೆ ತಮ್ಮ ದಿವ್ಯ ಅಲಕ್ಷ್ಯ ದೀರ್ಘವಾದ ನಿದ್ದೆ, ದೀರ್ಘವಾದ ರಾಜಕೀಯ ಚಟುವಟಿಕೆ ಆಡಳಿತಕ್ಕೆ ಬಂದಾಗ ಏತಕ್ಕೆ ಸರ್ಕಾರಗಳು ನೆಗೆಟಿವ್ ಆಗುತ್ತದೆ, next vote ಗೆ ಹೋದಾಗ ಸೋಲುತ್ತಿದ್ದವೆಂದರೆ, ಜನಗಳ ಕೆಲಸ ಮಾಡುವುದಕ್ಕೆ ಹೋಗಿ ಪಕ್ಷವನ್ನು ಮರೆಯುತ್ತಿದ್ದರು ಕಾರ್ಯಕರ್ತರನ್ನು ಮರೆಯುತ್ತಿದ್ದರು ಹಾಗಾಗಿ negative franchise ಆಗುತ್ತಿತ್ತು ಇವತ್ತು ನೀವು ಏನು ಮಾಡಿದಿರಿ, ಆಡಳಿತವೇ ಗೊತ್ತಿಲ್ಲ ಇಡೀ ಜಿಲ್ಲೆಗಳಲ್ಲಿ ಯಾರು ಆಡಳಿತ

ಮಾಡುತ್ತಿದ್ದಾರೆಂದು ನಮಗೆ ಗೊತ್ತೇ ಇಲ್ಲ ಜಿಲ್ಲಾಧಿಕಾರಿಗಳಿಗೆ ಏನು ಅಧಿಕಾರವನ್ನು ಕೊಟ್ಟಿದ್ದೀರಿ, ನೋಡಲ್ ಆಫೀಸರ್‌ಗೆ ಏನು ಅಧಿಕಾರವನ್ನು ಕೊಟ್ಟಿದ್ದೀರಿ, ನಾವು ಯಾರನ್ನು ಕೇಳಬೇಕು ಇವತ್ತು ಮನೆಗಳು ಬೀಳುತ್ತಿರುವುದು ಎಂದರೆ ಯಾರದೋ ಬಡವರದು ಹಳೇ ಮನೆ, ಅದರಲ್ಲೂ ನಮ್ಮ ಕಾಲದಲ್ಲಿ ಮಾಳಿಗೆಯ ಮನೆಯನ್ನು ಕಟ್ಟುತ್ತಿದ್ದರು ಆ ಮಾಳಿಗೆಯ ಮನೆಗಳ ಚಾವಣಿಗಳು ಕುಸಿಯುತ್ತಿವೆ ಆ ಮನೆಗಳನ್ನು ಕಟ್ಟುವುದಕ್ಕೆ ಒಂದು ವೈಜ್ಞಾನಿಕವಾದ ತಳಹದಿ ಇತ್ತು ಬಿಸಿಯನ್ನು, ಶಾಖವನ್ನು absorb ಮಾಡುವುದಕ್ಕೆ ಯಾವುದಕ್ಕಾದರೂ ಶಕ್ತಿ ಇತ್ತು ಎಂದರೆ, ಆ ಮಣ್ಣಿಗೆ ಇತ್ತು ನಿಮ್ಮ RCC ಚಾವಣಿಗೆ ಇರಲಿಲ್ಲ ಏಕೆ ನಮ್ಮ ಭಾಗದಲ್ಲಿ ಕಷ್ಟ ಬಂದರೂ ಸಹಿಸಿಕೊಂಡು ಮಣ್ಣಿನಲ್ಲಿ ಮನೆಗಳನ್ನು ಕಟ್ಟುತ್ತಿದ್ದರು, ಮಣ್ಣಲ್ಲೇ ರೂಫ್ ಹಾಕುತ್ತಿದ್ದರು ಎಂದರೆ, ಆ ಮನೆಯು ಆ ಬಿಸಿಯನ್ನು ತಡೆದುಕೊಳ್ಳುತ್ತಿತ್ತು ಮನೆಗಳಲ್ಲಿ ತಂಪು ಇರುತ್ತಿತ್ತು ಎಂದು ಮಾಡುತ್ತಿದ್ದರು ಅದನ್ನು ವೈಜ್ಞಾನಿಕವಾಗಿ ಮಾಡುತ್ತಿದ್ದರು ಇವತ್ತು ಎರಡು-ಮೂರು ದಿವಸ ಮಳೆ ಜಿಡ್ಡು ಹಿಡಿದರೆ ಆ ರೂಫ್ ಬಿದ್ದೇ ಬೀಳುತ್ತದೆ ಏಕೆಂದರೆ, ಅದಕ್ಕೆ ನಾವು ಕೆಳಗಡೆ ಕಟ್ಟಿಗೆಯನ್ನು ಹಾಕುತ್ತಿದ್ದೆವು ನೆನದರೆ ಮುರಿದು ಹೋಗುತ್ತದೆ, ಅವನಿಗೆ ಏನಾದರೂ ಮನೆಯನ್ನು ಕೊಡುವುದಕ್ಕೆ ಅವಕಾಶ ಮಾಡಿದ್ದೀರಾ? ಇಲ್ಲ ಗ್ರಾಮ ಸಭೆಯ ಪಟ್ಟಿಯನ್ನು ಇಟ್ಟುಕೊಳ್ಳಬೇಕು, 2003ನೇ ಇಸವಿಯಲ್ಲಿ ಇರುವ ಲಿಸ್ಟ್‌ನಲ್ಲಿರುವವರಿಗೆ ಮಾತ್ರ ಮನೆಯನ್ನು ಕೊಡಬೇಕು ಮನೆಯು ಮುರಿದು ಹೋಗಿದೆಯೋ, ಸುಟ್ಟು ಹೋಗಿದೆಯೋ, ಬಿದ್ದು ಹೋಗಿದೆಯೋ, ಅವನಿಗೆ ಯಾವ ಶಾಸಕರು ಏನು ಅನುಕೂಲವನ್ನು ಮಾಡುವ ಸ್ಥಿತಿಯಲ್ಲಿ ಇವತ್ತು ರಾಜ್ಯ ಸರ್ಕಾರ ಉಳಿಸಿಲ್ಲ ನಾನು ಇವತ್ತು ಇವರನ್ನು ಕೇಳುತ್ತೇನೆ, ರಾಜ್ಯದಲ್ಲಿ ನದಿಗಳು ಎಷ್ಟು ದಿವಸ ಹರಿಯುತ್ತಿದೆ ಹೇಳಿ ಸ್ವಾಮಿ ನಾನು ನಿಮಗೆ ಒಂದು ಮಾಹಿತಿಯನ್ನು ಕೊಡುತ್ತೇನೆ ದಕ್ಷಿಣ ಒಳನಾಡಿನಲ್ಲಿ 70-74 ದಿವಸ ಕನಿಷ್ಟ ಮಳೆಗಾಲ ಆಗಬೇಕಾಗಿತ್ತು ಈಗ ಒಂದು ವರ್ಷಕ್ಕೆ 15 ದಿವಸವು ಕೂಡ ಮಳೆಯಾಗುತ್ತಿಲ್ಲ ನಿಮಗೆ ವಾಡಿಕೆಯ ಮಳೆಯಾಗಿದೆ ಎಂದು ರಿಪೋರ್ಟ್ ಬರುತ್ತದೆ ಯಾವತ್ತೋ ಒಂದು ದಿವಸ ಮಳೆ ಬರುತ್ತದೆ, ಹೊರಟು ಹೋಗುತ್ತದೆ ಅದನ್ನು ನೀವು ಮಳೆಗಾಲ ಎಂದು ಕರೆಯುತ್ತೀರಾ? ಅದರಲ್ಲಿ ನಾವು ಬೆಳೆಯನ್ನು ಬೆಳೆಯುವುದಕ್ಕಾಗುತ್ತದೆಯೇ? ಅದರಲ್ಲಿ ನಾವು ಕೃಷಿ ಚಟುವಟಿಕೆಯನ್ನು ಮಾಡುವುದಕ್ಕಾಗುತ್ತದೆಯೇ? ಇದರ

ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು ರಾಜ್ಯದ ಜನರು ನಿಮಗೆ ಯಾರಿಗೂ ಕೂಡ ನೇರವಾಗಿ ಅಧಿಕಾರವನ್ನು ಕೊಟ್ಟಿಲ್ಲ, ಕಾಂಗ್ರೆಸ್‌ಗೂ ಕೊಟ್ಟಿಲ್ಲ ಜೆಡಿಎಸ್‌ಗೂ ಕೊಡಲಿಲ್ಲ, ಬಿಜೆಪಿಗೂ ಕೊಡಲಿಲ್ಲ, ನಮ್ಮನ್ನು ಲೆಕ್ಕಕ್ಕೇ ಇಟ್ಟುಕೊಳ್ಳಲಿಲ್ಲ ಏನೇನು ಒಡಂಬಡಿಕೆಯನ್ನು ಮಾಡಿಕೊಂಡು ಬಂದು ನೀವು ಅಲ್ಲಿ ಕುಳಿತಿದ್ದೀರಿ? ಯಾರು ಕೂಡ ಇವತ್ತು ಹೆಗಲನ್ನು ತಟ್ಟಿಕೊಳ್ಳಬೇಕಾಗಿಲ್ಲ 'I am given a mandate by the public ' No No mandate is given to anybody in this state ಈ ರಾಜ್ಯದಲ್ಲಿ ಯಾವುದೇ ಪಕ್ಷಕ್ಕೆ ಆಡಳಿತವನ್ನು ಮಾಡುವ mandate ಇಲ್ಲದ ಕಾಲದಲ್ಲಿ ತಾವು ಒಡಂಬಡಿಕೆಯನ್ನು ಮಾಡಿಕೊಂಡಿದ್ದೀರಿ ಕೂಡುವಳಿಯನ್ನು ಮಾಡಿಕೊಂಡಿದ್ದೀರಿ ರಾಜೀ ಸೂತ್ರವನ್ನು ಅನುಸರಿಸಿದ್ದೀರಿ ರಾಜೀ ಸೂತ್ರವನ್ನು ಮಾಡಿಕೊಂಡು ಆಡಳಿತವನ್ನು ಮಾಡಬೇಕಾದರೂ ಕೂಡ ಕನಿಷ್ಟ ನಿಮ್ಮ ಕೈಲಿ ಆಗುವ ಒಳ್ಳೆಯದನ್ನು ಮಾಡಬೇಕು ಮುಂದೆ ಅಧಿಕಾರಕ್ಕೆ ಬರುವ ಬಗ್ಗೆ ಆಲೋಚನೆಯನ್ನು ಮಾಡಬೇಕೇ? ಯಾವುದೇ ಕ್ಷೇತ್ರವಾಗಲಿ, ತಾವು ಏನು ಮಾಡಿದ್ದೀರಿ? ನಾನು ಮಾನ್ಯ ಸಿದ್ಧರಾಮಯ್ಯನವರ ಮಾತನ್ನು ಒಪ್ಪುತ್ತೇನೆ ತಾವು ಏನು ಬಹಳ ಘನವಾದ ಉದ್ದೇಶವನ್ನು ಇಟ್ಟುಕೊಂಡು ರೈತರ ಸಾಲಕ್ಕೆ 25 ಸಾವಿರ ಅಸಲು ಮನ್ನಾ ಮಾಡುತ್ತೇವೆ, ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ, ಸಹಕಾರಿ ಕ್ಷೇತ್ರವು ನಿಮಗೆ ಸ್ಪಂದಿಸಿಲ್ಲ ಇನ್ನು ಮಾನ್ಯ ಸಚಿವರಾದ ಜಿ ಟಿ ದೇವೇಗೌಡರು ಗಮನಿಸಬೇದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಬೇರೆ ಕಡೆ ನಮಗೆ ಗೊತ್ತಿಲ್ಲ ತುಮಕೂರು ಡಿಸಿಸಿ ಬ್ಯಾಂಕ್ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ ಎಷ್ಟು ಪ್ರಮಾಣದ ಹಣವನ್ನು ನಾವು ಸಾಲಗಾರರು ಕಟ್ಟಿದ್ದೇವೆ, ಅಷ್ಟು ಮಾತ್ರ ನಮಗೆ ಸಾಲವನ್ನು ವಿತರಣೆ ಮಾಡಬೇಕೆಂದು ಆಗಿದೆ 25 ಸಾವಿರದ ಒಲಗಡೆ ಸಾಲವನ್ನು ತೆಗೆದುಕೊಂಡಿರುವ ಒಬ್ಬ ರೈತನಿಗೆ ನೀವು ಸಾಲವನ್ನು ಕೊಡುತ್ತಿಲ್ಲ It is your decision ತಾವು ಬಡವರನ್ನು ಉದ್ದಾರ ಮಾಡುತ್ತಿದ್ದೀರಾ? ತಮಗೆ ಅವರು ನಿರ್ಧಾರ ಮಾಡಿರುವುದು ಗೊತ್ತಿದೆಯೇ? 25 ಸಾವಿರದವರೆಗೆ ಏನು ಸಾಲ ಇತ್ತೋ, ಟೋಟಲ್ ಸಾಲವನ್ನು ತಾವು ಏನು ಮನ್ನಾ ಮಾಡಿದ್ದೀರಿ, ನೀವು ರೀ-ಇಂಬರ್ಸ್ ಮಾಡುವವರೆಗೆ ಡಿಸಿಸಿ ಬ್ಯಾಂಕ್ ಅವರಿಗೆ ಸಾಲವನ್ನು ಕೊಡುವುದಿಲ್ಲವೆಂದು ನಿರ್ಧಾರವನ್ನು ಮಾಡಿದೆ ನನಗೆ 75 ರಿಂದ 1 ಲಕ್ಷದವರೆಗೆ ಸಾಲವನ್ನು ಕೊಟ್ಟಿದ್ದರು, ಅದರಲ್ಲಿ

ನಾನು 50 ಸಾವಿರವನ್ನು ಕಟ್ಟಿದ್ದೆ 25 ಸಾವಿರ ರೂ ಗಳು ರಿಯಾಯಿತಿ ಹೋಗುತ್ತಾ ಆ 50 ಸಾವಿರ ರೂ ಗಳನ್ನು ಕೊಡುವುದರ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡಿದೆ Where is your programme? Where is your speech you uttered in the Assembly? ಈ ಶಾಸನಸಭೆಯಲ್ಲಿ ನಾವು ಧರಣಿಗೆ ನಿಂತುಕೊಂಡು ಎಲ್ಲರಿಗೂ ಕೊಡಿ ಎಂದು ಹೇಳಿದಾಗ ಇಲ್ಲಾ ಎಂದು ಹೇಳಿದ್ದೀರಿ, ಬರೀ 25 ಸಾವಿರ ರೂ ಗಳ ಒಳಗಡೆ ಸಾಲ ಇರುವವರಿಗೆ ನಾನು ಬಡವನಿಗೆ ಸಹಾಯ ಮಾಡುತ್ತೇನೆಂದು ಹೇಳಿದಿರಿ ಅಲ್ಲವೇ, ಆ ಬಡವನಿಗೆ ಇವತ್ತು ಸಾಲ ಸಿಗುತ್ತಿಲ್ಲ ಈ ವರ್ಷ ಸಾಲ ಸಿಗುವುದೇ ಇಲ್ಲ ಇನ್ನು ಎರಡು ತಿಂಗಳು ಆದ ಮೇಲೆ ಅವನಿಗೆ ಸಾಲ ಬೇಕಾಗಿಲ್ಲ ತಾವು ಸರ್ಕಾರವನ್ನು ನಡೆಸುತ್ತಿದ್ದೀರಾ? ತಾವು ಎಲ್ಲಿಯಾದರೂ ಕೇಳಿದ್ದೀರಾ? ಆ ಬಡವನ ಗತಿ ಏನು? ಏತಕ್ಕಾಗಿ ಸಾಲವನ್ನು ಕೊಡಲಿಲ್ಲ, Government ಮೇಲೆ ನಂಬಿಕೆ ಇಲ್ಲವೆ? ನಾಳೆ ನಿಮಗೆ reimburse ಮಾಡುವುದಿಲ್ಲವೇ ಎಂದು ಎಲ್ಲಿಯಾದರೂ ಕೇಳಿದ್ದೀರಾ? ಸ್ವಾಮಿ, ಸಾಲವನ್ನು ಕೊಡಲಿಲ್ಲ ಆರೈತ ಈಗ ಏನು ಮಾಡಬೇಕು? ಬೀಜ ನಿಮ್ಮ ರಾಜ್ಯದಲ್ಲಿ ಎಲ್ಲಿ ಇದೆ? ಶೇಂಗಾ ಎಲ್ಲಿ ಇದೆ, ಹೊಗೆ ಸೊಪ್ಪು ಎಲ್ಲಿದೆ, ಮುಸುಕಿನ ಜೋಳ ಎಲ್ಲಿ ಇದೆ? ರಾಗಿ ಎಲ್ಲಿ ಇದೆ, ನಿಮ್ಮ ಪಲ್ಸಸ್ ಸತ್ತು ಹೋಗಿದೆ ನೀವು ಎಲ್ಲಿಂದು ತಂದು ಕೊಡುತ್ತೀರಿ? ಈ ಪಲ್ಸಸ್ ಪ್ರೋಗ್ರಾಮ್ ಆಯಿಲ್ ಸೀಡ್ಸ್ ಪ್ರೋಗ್ರಾಮ್ ಅನ್ನು ಮರೆತು ಕುಳಿತಿದ್ದೀರಿ ಅಕಸ್ಮಾತ್ ಮಳೆ ಬಿದ್ದಿದ್ದರೆ ಈಗ ರೈತರು ಅದನ್ನು ಬೆಳೆಯಬೇಕಾಗಿತ್ತು ಒಂದು ಕಡೆ ಬೀಜ ಇಲ್ಲ ಈ ದಿವ್ಯ ನಿರ್ಲಕ್ಷ್ಯವನ್ನು ಏತಕ್ಕಾಗಿ ವಹಿಸುತ್ತಿದ್ದೀರಿ? ಇದನ್ನು practical ಆಗಿ ನೋಡುವುದಕ್ಕೆ ಹಳ್ಳಿಗಳಿಗೆ ಹೋಗಿ ಮಲಗಿಕೊಳ್ಳಬೇಕೆ? ಇಲಾಖೆಗಳು ಇಲ್ಲವೆ? ಮಾಹಿತಿಗಳನ್ನು ಕೊಡುವುದಿಲ್ಲವೆ? ರೈನ್‌ಗೇಜ್‌ಗಳು ಇಲ್ಲವೆ? ಈ ರಾಜ್ಯದಲ್ಲಿರುವ ಸಮಸ್ಯೆ ಏನು, ಯಾರ‍್ಯಾರು ಯಾವ್ಯಾವ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ ಎಂದು ನಮಗೆಲ್ಲ ಗೊತ್ತಿಲ್ಲವೆ? ಅವರ ಮನೆಯಲ್ಲಿಯೆ ಉಂಡು ಮಲಗಿಕೊಂಡರೆ ಅವರ ಮನೆಯ ಸಮಸ್ಯೆ ಗೊತ್ತಾಗುತ್ತದೆಯೇ? ಇಲ್ಲದಿದ್ದರೆ ಗೊತ್ತಾಗುವುದಿಲ್ಲವೆ? ಹಾಗಾಗಿ ಇಡೀ ರಾಜ್ಯದಲ್ಲಿರುವ 5 ಕೋಟಿ ಜನರ ಮನೆಯಲ್ಲಿ ಮಲಗುತ್ತೀರಾ? ಅಷ್ಟು ಜನರ ಮನೆಯಲ್ಲಿ ಉಂಡು ಮಲಗಿಕೊಂಡು ಅಷ್ಟು ಜನರ ಸಮಸ್ಯೆಯನ್ನು ಬಗೆಹರಿಸಿಕೊಂಡು ಬರುವುದಾದರೆ ನಮ್ಮ ಕಡೆಗೆ ಯಾವಾಗ ಬರುತ್ತೀರಿ ಹೇಳಿ ಸ್ವಾಮಿ What is this going on in this State? For whose sake your are throwing away the exchequer?

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ತಾವು ಆ ಕಾರ್ಯಕ್ರಮಕ್ಕೆ ಎಷ್ಟು ಖರ್ಚು ಮಾಡುತ್ತಿದ್ದೀರಿ, ಯಾರ ತೆವಲಿಗೆ ಖರ್ಚು ಮಾಡುತ್ತಿದ್ದೀರಿ? ಸತ್ತು ಹೋಗಿರುವವರನ್ನು ಹೋಗಿ ನೋಡಿದ್ದೀರಾ? ಮಂಗಳೂರಿಗೆ ಹೋಗಿ ನೋಡಿದ್ದೀರಾ? ಬೆಳ್ತಂಗಡಿಗೆ ಹೋಗಿ ನೋಡಿದ್ದೀರಾ? ತಾವು ಎಲ್ಲಿಗೆ ಹೋಗಿ ಮಲಗುತ್ತಿದ್ದೀರಿ? ಏನು ಸಮಸ್ಯೆ ಇತ್ತು ಆ ಊರಿನಲ್ಲಿ ಹೋಗಿ ಮಲಗಿಕೊಳ್ಳುವುದಕ್ಕೆ? ಇಡೀ ಜಿಲ್ಲಾಡಳಿತವನ್ನು 5 ದಿವಸ 6 ದಿವಸ ತುಮಕೂರಿನ ಒಂದೊಂದು ಹಳ್ಳಿಗೆ ಒಂದೊಂದು ಮನೆಗೆ ಕರೆದುಕೊಂಡು ಹೋಗಿ ನಿಲ್ಲಿಸಿದ್ದೀರಲ್ಲಾ, ಜಿಲ್ಲಾಡಳಿತ ನಾಶವಾಗಿದೆ ನಿಮಗೆ ಗೊತ್ತೆ? Where do you find D Cs? ಚಿಕ್ಕನಾಯಕನ ಹಳ್ಳಿಯಲ್ಲಿರುವಂಥ ಆಫೀಸರ್‌ನಿಂದ ಹಿಡಿದು ಇಡೀ ಜಿಲ್ಲೆಯ ಆಫೀಸರ್‌ಗಳನ್ನು ಅಲ್ಲಿಗೆ ಕೇಂದ್ರೀಕರಿಸುವುದಕ್ಕೆ ನಿಮಗೆ ಯಾರು ಅಧಿಕಾರವನ್ನು ಕೊಟ್ಟರು? Where is the provision? ಈ ಸರ್ಕಾರಕ್ಕೆ ಯಾರು ಹೇಳುವವರು ಕೇಳುವವರು ಇಲ್ಲವೆ? ಬಡವರಿಗೆ ನೀವು ಒಂದಿಷ್ಟು ಗಂಗಾ ಕಲ್ಯಾಣ ಸ್ಕೀಂ ಮಾಡಿ ಕೊಡುತ್ತಿದ್ದೀರಿ ಒಂದು ಲಕ್ಷ ರೂ ಗಳಿಗೆ estimate exceed ಆಗುತ್ತಿದೆ ಎಂದು ಹೇಳಿ ಒಂದೇ ಒಂದು IP setಗೆ connection ಕೊಟ್ಟಿಲ್ಲ ನೀರು ಹೊಡೆದುಕೊಳ್ಳುತ್ತೇವೆಂದರೆ ನೀರು ಕೊಡುವುದಿಲ್ಲ ಪ್ರವಾಹ ಬರುತ್ತಿದೆ, ಏನಾದರೂ ಮಾಡಿ ಅಲ್ಲಿ ಸ್ವಲ್ಪ ಡಿಸಿಲ್ಟ್ ಮಾಡಿಸುತ್ತಿಲ್ಲ, ನಾಲ್ಕು ಕಡೆ ನೀರು ನಿಲ್ಲಿಸುವುದಕ್ಕೆ structure ಮಾಡುತ್ತಿಲ್ಲ ಅವರು ಯಾರನ್ನು ಕೇಳಿ ಆಲಮಟ್ಟಿ ಡ್ಯಾಂನಿಂದ ನೀರು ಬಿಟ್ಟರು ಎಂದು ಹೇಳಬೇಕಲ್ಲವೇ? ಯಡಿಯೂರಪ್ಪನವರಿಗೆ ಮಂಡ್ಯ ರೈತರು ತಡೆದಿದ್ದಾರೆ ಯಾರನ್ನು ಕೇಳಿ ಕೆ ಆರ್ ಎಸ್ ನಿಂದ ನೀರು ಬಿಟ್ಟರು ಎಂದು ಇವರು ಹೇಳಬೇಕಲ್ಲವೇ? What made you to release water? ನಿನ್ನೆವರೆಗೆ ಕೊಯ್ನಾದವರು ಕೇಳಿದರೆ ನೀರು ಬಿಡುವುದಿಲ್ಲವೆಂದಿರಿ' ಕೊಯ್ನಾ 200 ಕಿ ಮೀ ಇದೆ ಅಲ್ಲಿ ಫ್ಲಡ್ ಆಗುವುದಿಲ್ಲವೆಂದಿರಿ, ಕೊಲ್ಲಾಪುರದವರು ನೀರು ಕೇಳುತ್ತಾರೆಂದು ನೀರು ಬಿಡುತ್ತೇವೆಂದರೆ ಕೊಲ್ಲಾಪುರ ಜನ ನಿಮ್ಮನ್ನು ಶ್ಲಾಘಿಸಬೇಕೇ? ಕರ್ನಾಟಕ ಜನ ನಿಮ್ಮನ್ನು ಶ್ಲಾಘಿಸಬೇಕೇ? You have released water from Alamatti only on the request of Kollapur, ಆದರೆ ಅವರು ಇವತ್ತು ಬೆಳಗಾಂ ಮುಚ್ಚಿಸುತ್ತಿದ್ದಾರೆ, ನಿಮ್ಮ ಜೊತೆ ನಾವು

ಬಂದಿದ್ದೆವು ಸನ್ಮಾನ್ಯ ಶಿವರಾಜ್ ಪಾಟೀಲ್‌ರವರ ಹತ್ತಿರ 250 ಕೋಟಿ ರಿಹ್ಯಾಬಿಲಿಟೇಷನ್‌ಗೆ ದುಡ್ಡು ಕೊಟ್ಟರು, ಎಷ್ಟು ಜನಕ್ಕೆ rehabilitation ಮಾಡಿದ್ದೀರಿ ತಾವು? ಎಷ್ಟು ಜನಕ್ಕೆ ಮಾಡಿದ್ದೀರಿ, ಮಾಡಿದ್ದರೆ ಇವತ್ತು ಆ ಬೆಳಗಾಂ ಜಿಲ್ಲೆಯ ಜನ ಮುಳುಗಿ ಹೋಗುತ್ತಿದ್ದರೆ? Have you not justified? ನಿಮಗೇನಾದರೂ ಅರ್ಥವಾಗುತ್ತಿದೆಯೇ ಇಲ್ಲವೇ? ಕೇಂದ್ರ ಸರ್ಕಾರದವರು ಕೊಡುವ ಹಣವನ್ನು ಆ ಕಾರ್ಯಕ್ರಮಕ್ಕೆ ಬಳಸಲಿಕ್ಕೆ ಯೋಗ್ಯತೆ ಇಲ್ಲದವರು ಸರ್ಕಾರದಲ್ಲಿ ಉಂಡುಕೊಂಡು ತಿರುಗಾಡುತ್ತಿರುವಿರಾ? ಸಾಯಬೇಕೇ ನಾವು ಹಳ್ಳಿಯಲ್ಲಿರುವ ಜನ? ಮಂಗಳೂರಿನವರು ಮಂಗಳೂರಿನಲ್ಲಿ ಸಾಯಲಿ, ತುಮಕೂರಿನವರು ತುಮಕೂರಿನಲ್ಲಿ ಸಾಯಲಿ, ಬೆಳಗಾಂನವರು ಅಲ್ಲೇ ಮುಳುಗಿಹೋಗಲಿ, ನೆಮ್ಮದಿ ಏನಲ್ಲ, ಜಗಳವಿಲ್ಲ What is the news we are reading? ಇಬ್ಬರು ಬಿಟ್ಟುಕೊಡುತ್ತಾರೆಯೇ ಇಲ್ಲವೇ, ಬಿಡಿಸಿಕೊಳ್ಳುತ್ತಾರೋ ಇಲ್ಲವೋ, ಇದೇನೇ ಈ ರಾಜ್ಯದಲ್ಲಿ ಆಗಬೇಕಾಗಿರುವ ಚರ್ಚೆ 2010–2020 ನೇ ಇಸವಿಗೆ ಕರ್ನಾಟಕ ಸತ್ತುಹೋಗುತ್ತಿದೆ ಎಂದು ಯಾರಾದರೂ ಯೋಚನೆ ಮಾಡುತ್ತಿದ್ದಾರೆಯೇ? ಯಾರಾದರೂ ಈ ಶಾಸನಸಭೆಯ ಸದಸ್ಯರು ಎನ್ನುವುದಕ್ಕೆ ನಾವು ಲಾಯಕ್ಕಾಗಿದ್ದೇವೆಯೇ? What is the priority of this Government? ಯಾರೋ ಸತ್ತು ಹೋಗುತ್ತಾರೆ? ಎಲ್ಲೆಲ್ಲಿ ಏನಾಗಿದೆಯೆಂದು ಸ್ಟೇಟ್‌ಮೆಂಟ್ಸ್ ಕೊಡುವುದಕ್ಕಾ ನಾವು ಈ ರಾಜ್ಯದಲ್ಲಿರುವುದು? ನಿಮ್ಮ ಸಾರ್ವಭೌಮತ್ವ ಒಪ್ಪಿಕೊಳ್ಳುವುದಕ್ಕೆ ನಾವಿದ್ದೇವೆಯೇ ಇಲ್ಲಿ? ಹುಲಿಯಂತೇ, ಸಿದ್ದರಾಮಯ್ಯನವರು ಮಾತನಾಡುವಾಗಲೇ ನಾನು ಹೇಳೋಣವೆಂದಿದ್ದೆ ಹುಲಿ ಸಾರ್, ಹುಲಿಗೇನು ಭಯವಿಲ್ಲವಲ್ಲ ನಿಮ್ಮದೇ ನ್ಯಾಯ, ನಿಮ್ಮದೇ ಆಡಳಿತ, ಅದೇನು ಆಡಳಿತ ಮಾಡುತ್ತೀರೋ ಹೇಳಿಬಿಡಿ The law of the forest exists in Karnataka ಎಂದು ಹೇಳಿ ನೀವು ಒಂದು ಕೆಲಸಕ್ಕೆ ನೀವು ದಕ್ಷಿಣ ಕನ್ನಡವನ್ನು ನೋಡಲಿಲ್ಲ ಒಂದು ಕೆಲಸಕ್ಕೆ ಬೆಳಗಾಂ ನೋಡಲಿಲ್ಲ ಬೆಳಗಾಂನಲ್ಲಿ ಅಸೆಂಬ್ಲಿ ನಡೆಸಿಬಿಟ್ಟರೆ ಬೆಳಗಾಂ ಜಿಲ್ಲೆ ಉಳಿದು ಬಿಡುತ್ತದೆಯೇ? ರಸ್ತೆಗಳನ್ನು ಮಾಡಿಬಿಟ್ಟರೆ ನಂಜುಂಡಪ್ಪ ವರದಿ ಇಂಪ್ಲಿಮೆಂಟ್ ಆಗಿಬಿಡುತ್ತದೆಯೇ? ಅಲ್ಲಿರುವವರ ಹೊಟ್ಟೆ ತುಂಬಬೇಕು ಸರ್, ಅವರ ಮೈಮೇಲೆ ಬಟ್ಟೆ ಬರಬೇಕು ಅದು ನಂಜುಂಡಪ್ಪ ವರದಿಯ ಕೇಂದ್ರ, ಅದು gist of the report ರೋಡ್ ಮಾಡಿಕೊಟ್ಟುಬಿಟ್ಟು ನಂಜುಂಡಪ್ಪ

ವರದಿಯನ್ನು ಇಂಪ್ಲಿಮೆಂಟ್ ಮಾಡಿದ್ದೇವೆಂದು ಹೇಳಲಿಕ್ಕೆ ಈ ರಾಜ್ಯದ ರೈತರು ನಂಜುಂಡಪ್ಪನವರ ಕಡೆ ನೋಡಲಿಲ್ಲ ಏನು ಮಾಡಿದ್ದೀರಿ, What have you done to elevate them economically? ಈ ರಾಜ್ಯದ ಹಿಂದುಳಿದ ವರ್ಗದವರು, ಶಿರಾ, ಚಿಕ್ಕನಾಯಕನಹಳ್ಳಿ, ಪಾವಗಡ, ಮಧುಗಿರಿಯ ಜನ ಆರ್ಥಿಕವಾಗಿ ಮೇಲೆ ಬರಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿದ್ದೀರಿ, ಏನು inputs ಕೊಟ್ಟಿದ್ದೀರಿ, ಏನು infrastructure create ಮಾಡಿದಿರಿ ಎಂಬ ಬಗ್ಗೆ ಅಸೆಂಬ್ಲಿಯಲ್ಲಿ ಹೇಳಬೇಕಲ್ಲವೇ?

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಏನಿಲ್ಲ, ಏನೋ ಸುಮ್ಮನೆ ನಾವು ಬರುತ್ತೇವೆ, ಕೇಳುತ್ತೇವೆ, ಧರ್ಮಸಿಂಗ್ ಸಾಹೇಬರು ಮೂವ್ ಮಾಡುತ್ತಾರೆ, ನಾವು ಜೊತೆಯಲ್ಲಿ ಊದುತ್ತೇವೆಂದು ಹೇಳಿ ನೀವು ಹೋಗುವುದಾದರೆ ಏಕೆ ಈ ಸರ್ಕಾರ ನಡೆಸುತ್ತಿದ್ದೀರಿ? ಮುನಿಸಿಪಾಲಿಟಿ ಡಿಸಾಲ್ವ್ ಮಾಡಿದ ಹಾಗೆ ಇದನ್ನು ಡಿಸಾಲ್ವ್ ಮಾಡಿ, ನೀವ್ಯಾರೋ ಇಬ್ಬರು ಮೂವರು ಮಾನ್ಯ ರಾಜ್ಯಪಾಲರ ರಕ್ಷಣೆಯಲ್ಲಿ ಅಧಿಕಾರವನ್ನು ನಡೆಸಿಕೊಂಡು ಹೋಗಿ, ನಮಗೆ ಕೊಡುವ ಟಿ ಎ, ಡಿ ಎ ಆದರೂ ಉಳಿಯುತ್ತದೆ ಹಾಗಾದರೂ ರಾಜ್ಯಕ್ಕೆ ಒಳ್ಳೆಯ ಕೆಲಸ ಮಾಡಿ I am very sorry ಸರ್ಕಾರ ನಡೆಸುವ ರೀತಿ ಇದಲ್ಲ ಏನೋ ಒಂದು ಆಘಾತ ಆಗಿದೆ, ತುರ್ತಿದೆ ಎಂದು ಒಬ್ಬ ಮಂತ್ರಿಯೂ ಸಹ ವರ್ತಿಸುತ್ತಿಲ್ಲ ಸನ್ಮಾನ್ಯ ಉಪಾಧ್ಯಕ್ಷರೇ, ಮಂಗಳೂರಿನಲ್ಲಿ ಜನ ಸತ್ತುಹೋಗುತ್ತಿದ್ದಾರೆ, ವಾರ್ನ್ ಮಾಡಿದರೂ ಕೂಡ ಸಮುದ್ರದ ಮೇಲೆ ಹೋಗುತ್ತಿದ್ದಾನೆ, ಮುಳುಗುತ್ತಿದ್ದಾನೆ, ಅಲ್ಲಿರುವ ಡಿ ಸಿ ಏನು ಮಾಡುತ್ತಿದ್ದರು? ಅಲ್ಲಿನ ಅಧಿಕಾರಿಗಳು ಏನು ಮಾಡುತ್ತಿದ್ದರು, ಇಷ್ಟು ಬೇಜವಾಬ್ದಾರಿಯನ್ನು ಅಲೋ ಮಾಡುವುದನ್ನು ಎಂದಾದರೂ ಕೇಳಿದ್ದೀರಾ? Did you order for any enquiry? ಸತ್ತು ಹೋದವರ ಲೆಕ್ಕ ಇಲ್ಲ, ಪ್ರವಾಹದಲ್ಲಿ ಸಿಕ್ಕಿ ಸತ್ತರೆ ಲೆಕ್ಕ ಇಲ್ಲ, ಮನೆ ಬಿದ್ದು, ಜಾನುವಾರುಗಳು ಬಿದ್ದು ಸತ್ತರೆ ಲೆಕ್ಕ ಇಲ್ಲ, ನಿಮ್ಮ ಪ್ರಯಾರಿಟೀಸ್ ಬೇರೆ, ನಿಮ್ಮ ಕಾರ್ಯಕ್ರಮಗಳೇ ಬೇರೆ, ನಿಮ್ಮ ಉದ್ದೇಶವೇ ಬೇರೆ, ನಿಮ್ಮ ಗುರಿಗಳೇ ಬೇರೆ, ನಿಮ್ಮ ಆಲೋಚನೆಯೇ

ಬೇರೆ ಆ ಗುರಿ, ಆ ಆಲೋಚನೆ 2008 ನೇ ಇಸವಿ ಆದಮೇಲೆ ಇಟ್ಟುಕೊಳ್ಳಿ ಈಗ ಏನಾದರೂ ರಾಜ್ಯ ಉಳಿಸುವ ಪ್ರಯತ್ನ ಮಾಡಿ ಜನ ಸಾಯುತ್ತಿದ್ದಾರೆ, ಒಂದು ಕಡೆ ನೀರು ಜಾಸ್ತಿಯಾಗಿ ಜನ ಸಾಯುತ್ತಿದ್ದಾರೆ, ಒಂದು ಕಡೆ ನೀರು ಕಡಿಮೆಯಾಗಿ, ನೀರಿಲ್ಲದೆ ಜನ ಸಾಯುತ್ತಿದ್ದಾರೆ ಈ ಬಗ್ಗೆ ತಾವೇನು ನಿಜವಾಗಿ ನಿರ್ಲಕ್ಷ್ಯ ತೋರಿಸುತ್ತಿದ್ದೀರಿ, You are unfit to be called Government, you have nothing to say about this ನಿಮಗೇನಾದರೂ ಲಜ್ಜೆ ಇದ್ದರೆ ಜನಗಳಿಗೆ ಏನಾದರೂ ಮಾಡಿ ಭಾಷಣಗಳು ನಮಗೆ ಹೊಟ್ಟೆ ತುಂಬಿಸುವುದಿಲ್ಲ ಭಾಷಣಗಳು ನಮಗೆ ಹೊಟ್ಟೆ ತುಂಬಿಸಿಲ್ಲ, ಕಣ್ಣೀರು ಒರೆಸಿಲ್ಲ, ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಏನಾದರೂ ಪ್ರಾಜೆಕ್ಟ್ಸ್ ಮಾಡಿ ಆ ನೀರು ಭೂಮಿ ಮೇಲೆ ನಿಲ್ಲುವಂತೆ ಮಾಡಿ Underground water recharge ಆಗುವಂತೆ ಮಾಡಿ ಪ್ರವಾಹಗಳಲ್ಲಿ ಬರುತ್ತಿರುವಂಥ ನೀರನ್ನು ಸ್ಟಾಪ್ ಮಾಡಿಕೊಳ್ಳುವಂಥ ಕಾರ್ಯಕ್ರಮವೇನಾದರೂ ಹಾಕಿಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ

ಉಪಾಧ್ಯಕ್ಷರು ದೇಶಪಾಂಡೆಯವರಿಗೆ ಏನೋ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿದೆಯಂತೆ, ಅವರಾದ ಮೇಲೆ ವಾಟಾಳ್ ನಾಗರಾಜ್‌ರವರೇ ನೀವು ಮಾತನಾಡಿ ಅವರು 15 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತಾರೆ

ಶ್ರೀ ಆರ್ ವಿ ದೇಶಪಾಂಡೆ(ಹಳಿಯಾಳ) ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಸಿದ್ಧರಾಮಯ್ಯ, ಮಾಧುಸ್ವಾಮಿಯವರು ಹಲವಾರು ವಿಚಾರಗಳನ್ನು ಈ ಅತೀವೃಷ್ಟಿಯಿಂದಾದ ಅನಾಹುತಗಳ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಟೀಕೆ ಟಿಪ್ಪಣಿಗಳ ಜೊತೆ ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಅತೀವೃಷ್ಟಿ, ಬರಗಾಲ ಸರ್ಕಾರದ ಕೈಯಲ್ಲಿದೆಯೆಂದು ನಾನು ಹೇಳುವುದಿಲ್ಲ ನಿಸರ್ಗಕ್ಕೆ ಕೋಪವಾದಾಗ ಈ ರೀತಿ ಪರಿಸ್ಥಿತಿ ರಾಜ್ಯದಲ್ಲಿ, ದೇಶದಲ್ಲಿ ನಿರ್ಮಾಣವಾಗುತ್ತದೆ, ಆದರೆ ಸರ್ಕಾರ ಇದಕ್ಕೆ ಸ್ಪಂದಿಸಬೇಕಾಗುತ್ತದೆ, ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ಅನುಭವದ ಕೊರತೆಯಿಂದ, ರಾಜಕೀಯ ಗೊಂದಲದಿಂದ bureaucracy demoralized ಆಗಿ ಇವತ್ತು ಸರ್ಕಾರ ಏನು ಅತೀವೃಷ್ಟಿ, ಅನಾವೃಷ್ಟಿಯಿಂದ ರಾಜ್ಯದಲ್ಲಿ ಸಮಸ್ಯೆಗಳು ನಿರ್ಮಾಣವಾಗಿವೆ, ಅದಕ್ಕೆ ಸರ್ಕಾರ ಸ್ಪಂದಿಸಲಿಕ್ಕೆ ಸಂಪೂರ್ಣವಾಗಿ ವಿಫಲ

ವಾಗಿದೆಯೆಂದು ನಾನು ಹೇಳುತ್ತಿದ್ದೇನೆ ನಮಗೆ ನೆನಪಿದೆ, ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ, ಎಸ್ ಎಂ ಕೃಷ್ಣರವರ ಕಾಲದಲ್ಲಿ ಬರಗಾಲವಿದ್ದಾಗ ಯಾವ ರೀತಿಯಿಂದ, Prakash was party to all that, ಯಾವ ರೀತಿಯಿಂದ ವಾರ್ ಫುಟಿಂಗ್‌ನಿಂದ ಕೆಲಸ ಆಗುತ್ತಿತ್ತು ಇವತ್ತು ನಾನು ಕೇಳುತ್ತಿದ್ದೇನೆ, ಎಷ್ಟು ಜನ ಮಂತ್ರಿಗಳು, ಅಧಿಕಾರಿಗಳು ವಿಸಿಟ್ ಮಾಡಿದ್ದಾರೆ ವಿಸಿಟ್ ಮಾಡುವುದಷ್ಟೇ ಅಲ್ಲ ಎಷ್ಟು ಪರಿಹಾರ ಕೊಟ್ಟಿದ್ದಾರೆ, ಇವತ್ತು ಬೆಳಗಾವಿ ಜಿಲ್ಲೆ, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆ, ಕರಾವಳಿಯ ಉತ್ತರ ಕನ್ನಡ, ಕೊಡಗು, ಉಡುಪಿ ಇರಬಹುದು, ಇವತ್ತು ಅತೀವೃಷ್ಟಿಯಿಂದ 500-600 ಕೋಟಿ ರೂಗಳ ಮೇಲ್ಪಟ್ಟು ಆಸ್ತಿಪಾಸ್ತಿ ಬೆಳೆ ಹಾಳಾಗಿವೆ, ರಸ್ತೆಗಳು ಹಾಳಾಗಿವೆ, 39 ರಿಂದ 40 ಜನ ಪ್ರಾಣ ಹಾನಿಯಾಗಿದೆ, ನಮ್ಮ ಜಿಲ್ಲೆಯಲ್ಲಿ, ನಮ್ಮ ಗೌರವಾನ್ವಿತ ಮಂತ್ರಿಗಳ ಜಿಲ್ಲೆಯಲ್ಲಿ ಒಂದು ಸಾವು ಆಗಿದೆ, ಮೊಗೇರ್ ಎಂಬುವವರು, ಎಷ್ಟು ಜನಕ್ಕೆ ಪರಿಹಾರ ಕೊಟ್ಟಿದ್ದೀರಿ? ಪರಿಹಾರ ಕೊಡುತ್ತೀರಿ ಎಂದು ಕೇಳಿದ್ದೇವೆ, ಕೊಟ್ಟಿದ್ದು ನಮಗೆ ಗೊತ್ತಾಗಿಲ್ಲ Emergency cases ಎಷ್ಟು ತೆಗೆದುಕೊಂಡಿದ್ದೀರಿ? ಒಂದು ದುಡ್ಡೂ ಇವತ್ತಿನವರೆಗೆ ಬಿಡುಗಡೆಯಾಗಿಲ್ಲ ಕಳೆದ ವರ್ಷ ಸಹ ನಾನು ಪ್ರಕಾಶ್‌ರವರಿಗೆ ಹೇಳಿದೆ, ನಮ್ಮ ಜಿಲ್ಲಾ ಸಚಿವರು, ನಮ್ಮ ಶಾಸಕರು ತಮಗೆ ಹೇಳಿದರು ನಾನು ಸಹ ತಮಗೆ ಹೇಳಿದೆ, ಒಂದು ಕಡೆ ಬರಗಾಲವಿದೆ, ನಮ್ಮ ಕಡೆ ಅತೀವೃಷ್ಟಿ ಆಗಿದೆ ರಸ್ತೆಗಳೆಲ್ಲಾ ಹಾಳಾಗಿವೆ, ಅದಕ್ಕೆ ಹಣ ಬಿಡುಗಡೆ ಮಾಡಿ ಎಂದು ಕಳೆದ ವರ್ಷವೂ ಸಹ ತಮಗೆ ಹೇಳಿದೆ, ಮುಂಚೆ ಸ್ವಲ್ಪ ಹಣ ಕೊಟ್ಟರು, ಅದರಲ್ಲಿ ಹಣ ಬಿಡುಗಡೆ ಮಾಡಿಲ್ಲ, ಏನು ಮಾಡಬೇಕು ಎಲ್ಲಾ ಅತೀವೃಷ್ಟಿ, ಬರಗಾಲಕ್ಕೆ ಹೊಗುತ್ತದೆಂದು ಹೇಳಿದಿರಿ ಹಾಗಾಗಿ ಆ ಹಣ ಏನು ಮಾಡಿದಿರಿ? ಈ ಜಿಲ್ಲೆಗಳಲ್ಲಿ ಅತೀವೃಷ್ಟಿ ಆಗಿದೆ, ಮನೆಗಳು ಬಿದ್ದಿವೆ, ರಸ್ತೆಗಳು ಹಾಳಾಗಿವೆ, ಅವರೆಲ್ಲಾ ಏನು ಮಾಡಬೇಕು? ಕಳೆದ ವರ್ಷ ನೀವು ಹಣ ಕೊಟ್ಟಿಲ್ಲ, ಪ್ರಾರಂಭದಲ್ಲಿ ಸ್ವಲ್ಪ ಹಣ ಕೊಟ್ಟಿರಿ, ಆದರೆ ನೀವು ಸ್ಪಂದಿಸುತ್ತಿಲ್ಲ, ಮಾಧುಸ್ವಾಮಿಯವರು ಕೆಲವು ಮುಖ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅರಣ್ಯ ಸಂಪತ್ತು ಬೆಳೆಸುವುದರ ಬದಲು ನಾಶ ಮಾಡುತ್ತಿದ್ದೇವೆ, ಹಾಗಾಗಿ ಬರಗಾಲ ಇವತ್ತು ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಸಮುದ್ರದ ಕೊರತೆ ಸಮಸ್ಯೆ, ಹಲವಾರು ವರ್ಷಗಳಿಂದ ಇದೆ, ನಾನು ನಿಮ್ಮ ಮೇಲೆ ಜವಾಬ್ದಾರಿ ಹಾಕಿ ಓಡಿ ಹೋಗುತ್ತಿಲ್ಲ ಹಲವಾರು ವರ್ಷಗಳಿಂದ ಆ ಸಮಸ್ಯೆಯನ್ನು

ಬಗೆಹರಿಸಲಿಕ್ಕೆ ಆಗಲಿಲ್ಲ ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳು ಬಂದಾಗ ಜಿಲ್ಲೆಯಲ್ಲಿ ವಾರ್ ಫುಟಿಂಗ್ ಮೇಲೆ ಸಮುದ್ರದ ಕೊರೆತ, ರಸ್ತೆಗಳು, ಸಣ್ಣ ಸಣ್ಣ ಸೇತುವೆಗಳು, ಇದಕ್ಕೆ ಪರಿಹಾರ, 50,100 ಕೋಟಿ ರೂಗಳು, ನಾವೇನು ಕೇಳಿಲ್ಲ 25 ವರ್ಷಗಳಿಂದ ಕೆಲಸ ಮಾಡಿದ್ದೇನೆ, ಯಾವ ಮಂತ್ರಿಗಳು, ಮುಖ್ಯಮಂತ್ರಿಗಳು ಹೀಗೆ ಕೇಳಿದ ಹಾಗೆ ದಾನ ಮಾಡಿದ್ದನ್ನು ನಾನು ನೋಡಿಲ್ಲ ಏಕೆಂದರೆ ಒಂದು ಮುಂಗಡ ಪತ್ರವಿದೆ, ಆ ಮುಂಗಡ ಪತ್ರದಲ್ಲಿ ಪ್ರತಿಯೊಂದು ಹೆಡ್ಡಿಂಗ್‌ನಲ್ಲಿಯೂ ಹಣವಿದೆ ಹೆಚ್ಚು ಕಡಿಮೆ ಆದರೂ ಸಹ ಸಂಪನ್ಮೂಲಗಳು ಬೇಕು ನಮ್ಮ ಉಪಮುಖ್ಯಮಂತ್ರಿಗಳು ಒಂದೇ ಸಾರಿ head on collision ಪೇ ಕಮಿಷನ್ ಒಪ್ಪಿಕೊಂಡರು, ಅರ್‍ಯಾಕ್ ಅಬಾಲಿಷ್ ಮಾಡಿದಿರಿ, ಲಾಟರಿ ಅಬಾಲಿಷ್ ಮಾಡಿದಿರಿ, ಸಾಲ ಮನ್ನಾ ಮಾಡಿದಿರಿ, ಎಲ್ಲಾ ಒಳ್ಳೆಯದೇ ಇವತ್ತು ನಿಮ್ಮ resources ಏನಿವೆ ನನಗೆ ಹೇಳಿ ಬಹಳಷ್ಟು ಸಾರಿ ಹಣಕಾಸು ಪರಿಸ್ಥಿತಿ ಬಹಳ ಚೆನ್ನಾಗಿದೆ, ಚೆನ್ನಾಗಿದೆ ಎಂದು ಹೇಳುತ್ತಿದ್ದೀರಿ, But I want know ನನ್ನ ಪ್ರಕಾರ ನಿಮ್ಮ ಹಣಕಾಸಿನ ಪರಿಸ್ಥಿತಿ ಕೆಟ್ಟದಾಗಿದೆ ಏನು buoyancy ಇದೆ ಅದು ನಿಮ್ಮಿಂದಲ್ಲ ಇಡೀ ದೇಶದಲ್ಲಿ ಈ buoyancy ಬಂದಿದೆ ನೀವು ಯು ಪಿ, ಬಿಹಾರ್ ತೆಗೆದುಕೊಳ್ಳಿ ಅಲ್ಲೇನು buoyancy ಬಂದಿದೆ, ಏಕೆಂದರೆ ದೇಶದಲ್ಲಿ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತೊಂದು ಹೆಚ್ಚಾಗಿ, ವ್ಯಾಟ್‌ನಿಂದ ಹೆಚ್ಚಾಗಿ ಹಣ ಟ್ಯಾಕ್ಸ್ ರೂಪದಲ್ಲಿ ನಿಮಗೆ ಬರುತ್ತಿದೆ Government ನಿಂದ Indent component ಬರುತ್ತದೆ ಆದರೆ, ಮುಖ್ಯವಾಗಿ ಕೆಲವು ಸ್ನೇಹಿತರು ಹೇಳುವ ಹಾಗೆ, ಇವತ್ತು ಬಡವರು ಇರಬಹುದು, ರೈತರು ಇರಬಹುದು, ಕೂಲಿಕಾರರು ಇರಬಹುದು, ಅವರ ಜೀವನ ಬಹಳ ಕಷ್ಟದಾಯಕವಾಗಿದೆ ಅತಿವೃಷ್ಟಿಯಿಂದಾಗಿ, ಬಡವರಿಗೆ ಕೂಲಿಯಿಲ್ಲ, ಕೆಲಸವಿಲ್ಲ ಅವರ ಕೈಯಲ್ಲಿ ರೇಷನ್ ಕಾರ್ಡಿಲ್ಲ, ಎಷ್ಟು ಬಾರಿ ನಾವು ಹೇಳಿದ್ದೇವೆ ನಮ್ಮ ಪಕ್ಷದ ಮುಖಾಂತರ ಅಜಿಟೇಷನ್, ನಮ್ಮ ಅಧ್ಯಕ್ಷರ ನಾಯಕತ್ವದಲ್ಲಿ ರಾಜ್ಯದಲ್ಲಿ ಮಾಡಿದ್ದೇವೆ ಎಷ್ಟೋ ಬಡವರಿಗೆ ಈಗ ಕೂಲಿಯಿಲ್ಲ, ರೇಷನ್ ಕಾರ್ಡಿಲ್ಲ ರೇಷನ್ ಕಾರ್ಡ್‌ನ ಸಮಸ್ಯೆ ಬಗೆಹರಿಸುತ್ತೇವೆಂದು ಎಷ್ಟೋ ಬಾರಿ ಹೇಳಿದ್ದೀರಿ, ಆದರೆ ಏನು ಮಾಡುವುದಕ್ಕಾಗಿಲ್ಲ ನಾನು ಇವತ್ತು ಕೇಳುತ್ತಿದ್ದೇನೆ, ನಿಮ್ಮ ಮನಸ್ಸಿನಲ್ಲಿ ಏನಿದೆ ಹೇಳಿ ನೀವು ಅಕ್ಟೋಬರ್‌ನಲ್ಲಿ ಮುಖ್ಯಮಂತ್ರಿಗಳಾಗಬಹುದು, ಅವರು ನಿಮಗೆ ಬಿಟ್ಟು ಕೊಡಬಹುದು, they are all internal

matters, we have no right to discuss on it ಆದರೆ, ರಾಜ್ಯದ ಪ್ರಜೆಯಾಗಿ, ಪ್ರತಿನಿಧಿಯಾಗಿ ಕೇಳಬೇಕಾಗುತ್ತದೆ ಮುಂಜಾನೆಯಿಂದ ಸಂಜೆಯ ತನಕ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಇದೇ ಜಗಳದಲ್ಲಿ ಸಮಯ ತೆಗೆಯುತ್ತೀರೋ? ರಾಜ್ಯದ ಜನರ ಬಗ್ಗೆ, ಬಡವರ ಬಗ್ಗ, ಕೂಲಿಕಾರರ ಬಗ್ಗೆ, ರೈತರ ಬಗ್ಗೆ ಏನು ಚಿಂತನೆ ಮಾಡುತ್ತೀರಿ ಇದನ್ನು ತಿಳಿದುಕೊಳ್ಳಬೇಕಲ್ಲ ಪತ್ರಿಕೆಯಲ್ಲಿ ಮತ್ತೆ ಬೇರೆ ಯಾವುದು ವಿಚಾರವಿಲ್ಲ ಇಷ್ಟು ಅತಿವೃಷ್ಟಿಯಾದರೂ ಸಹ ಎಲ್ಲಿಯೂ ಮಾನ್ಯ ಮುಖ್ಯಮಂತ್ರಿಗಳು, ಸ್ಪಂದಿಸಿದ್ದನ್ನು ನಾನು ನೋಡಿಲ್ಲ ಮಾನ್ಯ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡುತ್ತಾರೆ, ಬಹಳ ಸಂತೋಷ ಅದು ಅವರ programme ಅದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ ಆದರೆ ನಾನು ಕೇಳುತ್ತೇನೆ 30-40 ಹಳ್ಳಿಗಳಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದಾರೆ ಸಾವಿರಾರು petition ಗಳು ಬಂದಿವೆ I want a white paper on that ಎಷ್ಟು ಜನರಿಗೆ ಪರಿಹಾರ ಕೊಟ್ಟಿದ್ದೀರಿ, ಎಷ್ಟು ಮನವಿಗಳು ಬಂದವು ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಮೂರುವರೆಯಿಂದ ನಾಲ್ಕು ಸಾವಿರ ಮನವಿಗಳು ಬಂದಿದ್ದಾವೆ ನಾನು Officers ಅವರನ್ನು ಮಾನ್ಯ ಮುಖ್ಯಮಂತ್ರಿಗಳು ಬಂದು ಹೋದ ನಂತರ ಎಷ್ಟು ಪರಿಹಾರ ಸಿಕ್ಕಿದೆ ಎಂದು ಕೇಳಿದೆ, ಅವರು 58 ಎಂದು ಹೇಳಿದರು ನಾನು ಕೇಳುತ್ತಿದ್ದೇನೆ ಗ್ರಾಮ ವಾಸ್ತವ್ಯ it is a political stunt, ಅಥವಾ ನಿಜವಾಗಿ ಆ ಭಾಗದಲ್ಲಿ ಹೋಗಿ ಬಡವರಿಗೆ ಸಹಾಯ ಮಾಡುವ ಮನಸ್ಸಿದೆಯೇ? We should know, we want a white paper ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ entire Administration is at standstill, the entire administration is at the doorstep of a village ಹಳ್ಳಿಯಲ್ಲಿ ಹೊಗುವುದಕ್ಕೆ ಆಗುವುದಿಲ್ಲ ಒಂದೇ ಸಾರಿ ನೂರು ಗಾಡಿಗಳು ಹೋಗುತ್ತವೆ ಆದರೆ ಅವರ programme ಬಗ್ಗ ಬೇರೆ ರೀತಿಯಿಂದ ವಿಷಾದ ಮಾಡುತ್ತೇನೆ ಆದರೆ, ನನ್ನ ಪ್ರಶ್ನೆ ಏನಿದೆ ಎಂದರೆ ನೀವು ಹೋಗಿ ಮನವಿ ಸ್ವೀಕಾರ ಮಾಡಿದಿರಲ್ಲ, ಎಷ್ಟು ಜನರಿಗೆ ಪರಿಹಾರ ಸಿಕ್ಕಿತು ಎನ್ನುವುದು ಬಹಳ ಮುಖ್ಯ ಆ ಕಾರ್ಯಕ್ರಮ ಯಶಸ್ವಿಯಾಗಿದೆ, ಅಯಶಸ್ವಿಯಾಗಿದೆ, ಅದರ Dependence will be on the merit of applications disposed of ಇವತ್ತು ವಿದ್ಯುಚ್ಛಕ್ತಿ ವಿಚಾರ ಇದೆ ಒಂದು ಕಡೆ ಬರಗಾಲವಿದೆ ಕೆಲವು ಬರಗಾಲ ತಾಲ್ಲೂಕುಗಳಲ್ಲಿ ಮಳೆಯಾಗಿದೆ ಅಲ್ಲಿ

ರೈತರಿಗೆ ಉಳುಮೆಗೆ ಬೀಜವಿಲ್ಲ ಎಲ್ಲಿ ಅತಿವೃಷ್ಟಿಯಾಗಿದೆ ಅಲ್ಲೂ ವಿದ್ಯುಚ್ಛಕ್ತಿಯಿಲ್ಲ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು Parliamentary Secretary ಆಗಿದ್ದಾರೆ, ಬಹಳ ಸಂತೋಷ, ಅಭಿನಂದನೆಗಳು ಮುಳಗೋಡು ತಾಲ್ಲೂಕಿನಲ್ಲಿ ಆರು ದಿನ ವಿದ್ಯುಚ್ಛಕ್ತಿ ಇರಲಿಲ್ಲ ಮಾನ್ಯ ಉಪಮುಖ್ಯಮಂತ್ರಿಗಳು ಮಾಡಿದ್ದಾರೆ ನಾನು ಯಾರ ಮೇಲೂ ಆಪಾದನೆ ಮಾಡುವುದಿಲ್ಲ ಆದರೆ, Administration ಯಾವ ಪ್ರಕಾರ totally deteriorate ಆಗಿದೆ, totally ಯಾವ ರೀತಿ collapse ಆಗಿದೆಯೆಂದು ತೋರಿಸುತ್ತಿದ್ದೇನೆ 25 ವರ್ಷದಿಂದ ಆ ಕ್ಷೇತ್ರದ ಪರಿಸ್ಥಿತಿ ನಿರ್ಮಾಣ ಯಾವತ್ತು ಈ ರೀತಿ ಆಗಿರಲಿಲ್ಲ ಆರು ದಿನ ಸತತವಾಗಿ ಇಡೀ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಇರಲಿಲ್ಲ ಜನ ಏನು ಮಾಡಬೇಕು, ಕುಡಿಯುವುದಕ್ಕೆ ನೀರು ಇಲ್ಲ ಸ್ನಾನಕ್ಕೆ ನೀರು ಇಲ್ಲ ಮನೆಯಲ್ಲಿ ಲೈಟಿಲ್ಲ, ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲ ನಿಮಗೆ ಶಾಪ ಹಾಕುತ್ತಿದ್ದಾರೆ ಅದರ ಜೊತೆ ನಮಗೆ ಶಾಪ ಹಾಕುತ್ತಿದ್ದಾರೆ ನಾವು ಅದೇ ಕ್ಷೇತ್ರದಿಂದ ಬಂದವರು, ನಿಮ್ಮ ಜೊತೆಗೆ ನಮಗೂ ಬಯ್ಯುತ್ತಾರೆ ನಮ್ಮ MLA ಏನು ಮಾಡುತ್ತಿದ್ದಾರೆ, ಮಂತ್ರಿಗಳಾಗಿದ್ದರೂ ಮಾನ್ಯ ಯಡಿಯೂರಪ್ಪನವರ ಪರಿಚಯವಿದೆ, ಮಾನ್ಯ ರೇವಣ್ಣನವರ ಪರಿಚಯವಿದೆ, ಮಾನ್ಯ ಪ್ರಕಾಶ್‌ರವರ ಪರಿಚಯವಿದೆ, ಪ್ರಭಾವ ಹಾಕಬೇಕು ನಾವೇ ನಿಮ್ಮ ಮೇಲೆ ಪ್ರಭಾವ ಹಾಕಬೇಕು ಹಾಗಾಗಿ ನೀವು ತಿಳಿದುಕೊಳ್ಳಬೇಕಾಗಿದೆ ರಾಜ್ಯದ ಜನರ ಕಷ್ಟ ಏನಿದೆಯೆಂದು ತಿಳಿದುಕೊಳ್ಳಬೇಕಾಗಿದೆ ಆ ಅನುಭವದ ಕೊರತೆ ಆಡಳಿತದಲ್ಲಿ ಇದ್ದ ಮೂಲಕ ಇವತ್ತು ಈ ತರಹದ ಪರಿಸ್ಥಿತಿ ನಿರ್ಮಾಣವಾಗಿದೆ, ಇವತ್ತು ಸಾಲ ಮನ್ನಾದ ವಿಚಾರ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಆದರೆ, ಪರಿಸ್ಥಿತಿ ಏನಿದೆ ಮಾನ್ಯ ಯಡಿಯೂರಪ್ಪನವರೆ? ಮಾನ್ಯ ಮಾಧುಸ್ವಾಮಿಯವರು, ಮಾನ್ಯ ಸಿದ್ದರಾಮಯ್ಯನವರು ಹೇಳಿದರು ನೀವೇನು ಸಾಲಮನ್ನಾ ಮಾಡಿದಿರಿ, ನಿಮ್ಮ ಮೇಲೆ ನನ್ನ ಅಂದಾಜಿನ ಪ್ರಕಾರ 2300 ರಿಂದ 2400 ಕೋಟಿ ಭಾರ ಬರಬಹುದು ಸಾಧಾರಣ ನೀವು 25000 ರತನಕ ಎಲ್ಲಾ ಸಾಲವನ್ನು ಮನ್ನಾ ಮಾಡಿದಿರಿ, ಅದರಲ್ಲಿ ಸಾಧಾರಣ 750 ಕೋಟಿ ರೂಪಾಯಿ ಹಣ ಕೊಡುವಷ್ಟು ಪರಿಸ್ಥಿತಿ ಬಂದಿದೆ ಅದೇ ಪ್ರಕಾರ 25000 ದ ಮೇಲೆ ನೀವೇನು ಸಾಲ ಮನ್ನಾ ಮಾಡಿದಿರಿ ಅದರ ಮೇಲೆ 950 ಕೋಟಿ ಭಾರ ಬರಬಹುದು ಅಂದರೆ, total waive off ಮಾಡಿದಿರಿ 25000 ಮೇಲೆ ಮನ್ನಾ ಮಾಡಿದಿರಿ, ಅಲ್ಲಿ ನಿಮಗೆ 650

ಕೋಟಿ ವಸೂಲು ಮಾಡಿದಿರಿ, ನಿಮ್ಮ ಮೇಲೆ 1050 ಕೋಟಿ ನಿಮ್ಮ ಮೇಲೆ ಭಾರ ಬರುತ್ತದೆ Totally 2000 ಕೋಟಿ ರೂ ಆಗುತ್ತದೆ ಯಾರು defaulters ಇದ್ದರೂ ಅವರಿಗೆ ನಿಮ್ಮ ಕಡೆಯಿಂದ ಸಹಾಯ ಆಗಿಲ್ಲ, ಅಲ್ಲಿ recovery ಆಗಿಲ್ಲ Sucide death ಬಗ್ಗೆ Veeresh Committee Report ಇದೆ ಮತ್ತೊಂದು Report ಇದಕ್ಕೆ ಏಕೆ ಬೇಕು? ನಾನು ಕಳೆದ ಬಾರಿ ನಿಮ್ಮ ಹತ್ತಿರ ಮಾತನಾಡುವಾಗ ಹೇಳಿದೆ, 25000 ತನಕ ಸಾಲ ಮನ್ನಾ ಮಾಡಿದ್ದು ಸಂತೋಷ 25000 ಮೇಲೂ ಮಾಡಿರಿ ಎಂದೆ ಆದರೆ, ಯಾರು defaulters ಇದ್ದಾರೆ, ಅವರಿಗೂ ಸಹ ಸಹಾಯ ಮಾಡಿ ಎಂದರೆ ಮಾಡಿಲ್ಲ ಇವತ್ತು ಯಾರಿಗೆ ಸಾಲ ಮರು ಪಾವತಿ ಮಾಡಲು ಆಗಲಿಲ್ಲ, ಯಾರು defaulters ಇದ್ದಾರೆ, ಅವರು suicide ಮಾಡಿಕೊಳ್ಳುತ್ತಿದ್ದಾರೆ, ನಿಮ್ಮ ಸಾಲದ ಮನ್ನಾ ಯೋಜನೆ ಆ defaulters ಗೆ ಆಗಿಲ್ಲ ಆದುದರಿಮದ, 100, 150 ಕೋಟಿ ಬರಬಹುದು ಸಾಧಾರಣ 2200 ಕೋಟಿ ಭಾರ ಬರಬಹುದು ಕಳೆದ ವರ್ಷ ಈಗಾಗಲೇ ನೀವು ಮಾರ್ಚ್ 31 ಕಳೆದ ವರ್ಷ 500 ಕೋಟಿ ಕೊಟ್ಟಿದ್ದೀರಿ April ನಂತರ, ಪುನಃ 250 ಕೋಟಿ ಕೊಟ್ಟಿದ್ದೀರಿ 750 ಕೋಟಿ ಈಗಾಗಲೇ ಕೊಟ್ಟಿದ್ದೀರಿ ಇನ್ನು ಸಾಧಾರಣವಾಗಿ 1600, 1700 ಕೋಟಿ ಕೊಡಬೇಕು ಮುಂಗಡ ಪತ್ರ ಜುಲೈ ನಲ್ಲಿ ಪಾಸ್ ಮಾಡಿಕೊಟ್ಟ ನಂತರ 250 ಕೋಟಿ ಇದೆ ಅಂದರೆ 1500 ಕೋಟಿಗೆ appropriation ಮಾಡಬೇಕಾಗುತ್ತದೆ, ಇದಕ್ಕೆ ನಿಮ್ಮ ಸಂಪನ್ಮೂಲ ಇದೆಯೇ, ಎರಡನೇ ಪ್ರಶ್ನೆ ಅದನ್ನು ಮುಂದೂಡುವುದು ನೀವೇನಾದರೂ ಮಾಡಬಹುದು, ಇವತ್ತೇನು ಸಾಲ ಸಿಕ್ಕಿಲ್ಲ ಎಂದು ಹೇಳುತ್ತಿದ್ದಾರೆ, ಅದು ಮಹತ್ವದ್ದಾಗಿದೆ April ನಂದ September ವರೆಗೂ ನಮ್ಮ Khariff season 65 ರಿಂದ ಶೇಕಡ 70 ರವರೆಗೆ ರೈತರು ಸಾಲವನ್ನು ಈ Khariff season ನಲ್ಲಿ ತೆಗೆದುಕೊಳ್ಳುತ್ತಾರೆ ಕಳೆದ ವರ್ಷ ನಾವು ಇಡೀ ವರ್ಷದಲ್ಲಿ 2200 ಕೋಟಿ Crop Loan ಕೊಟ್ಟಿದ್ದೇವೆ, ಅದರಲ್ಲಿ ಶೇಕಡ 70 ಅಂದರೆ, 16 ರಿಂದ 1700 ಕೋಟಿ April ನಿಂದ September ತನಕ ಕೊಡುತ್ತೇವೆ ಇವತ್ತಿನವರೆಗೆ ನೀವು ಕೊಟ್ಟಿರುವ ಸಾಲ 438 ಕೋಟಿ ರೂಪಾಯಿ ರೈತರಿಗೆ ಸಾಲ ಬೇಕು, D C C Bank ನವರು ನಮ್ಮ ಹತ್ತಿರ ದುಡ್ಡೇ ಇಲ್ಲ ಎನ್ನುತ್ತಾರೆ Land Banks ಬಹುತೇಕವಾಗಿ default ಆಗಿವೆ ಕಳೆದ ವರ್ಷ 1115 ಬ್ಯಾಂಕುಗಳಿಗೆ elegibility Unrestricted Finance ಮಾಡುವುದು ಇತ್ತು ಈ ವರ್ಷ

ಮುಂಜಾನೆಯಿಂದ ಸಂಜೆಯವರೆಗೂ ನೀವು ಎಲ್ಲಾ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ ತಮಗಿಂತ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು ತಾವು Balance ಆಗಿ ಮಾತನಾಡುತ್ತಿದ್ದೀರಿ, ನಾನು ಹಣಕಾಸಿನ ಸಂಪನ್ಮೂಲ ನೋಡುತ್ತೇನೆ ಎಂದು ಹೇಳುತ್ತಿದ್ದೀರಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಮಂತ್ರಿಗಳು Nationalised Banks, Co-operative bank loan ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದರು ಅದರ ಪರಿಣಾಮ ಏನಾಯಿತು ವಸೂಲಿ ಆಗಲಿಲ್ಲ ಈ P L D Bank ಗಳ Unrestricted Eligibility ಕೇವಲ 55ಕ್ಕಿದೆ 31 06 ಕ್ಕೆ 105, 115 ಇತ್ತು ಕೆಲವಕ್ಕೆ ಸಹಾಯ ಮಾಡಲಿಲ್ಲ ಎಲ್ಲಿ interest waiver subsidy ಕೊಟ್ಟಿರಿ, ಅಲ್ಲಿ ವಸೂಲು ಆಗಲಿಲ್ಲ, Because of your statement ವಸೂಲಿ ಆಗಲಿಲ್ಲ ಹಾಗಾಗಿ ಏನಾಯಿತು, ಇವತ್ತು ದೇಶದಲ್ಲಿ 8 5, 9 5 T D P Growth Rate ಇದ್ದರೂ ಸಹ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಆಗುತ್ತಿಲ್ಲ 1 5, 2 T D P Growth ಇಲ್ಲ ಹಾಗಾಗಿ ಇವತ್ತು ಕೃಷಿ ಕ್ಷೇತ್ರದಲ್ಲಿ ತೋಟಗಾರಿಕೆಯಿರಬಹುದು, ವ್ಯವಸಾಯವಿರಬಹುದು, ಅದು ಬೆಳೆಯಬೆಕು, ಕೃಷಿ ಉತ್ಪಾದನೆ ಹೆಚ್ಚಾಗಬೇಕು, ರೈತರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ತಂದಿದ್ದಾರೆ, ನೀವು ಸಹ ತರುತ್ತೇನೆ ಎಂದು ಹೇಳುತ್ತಿದ್ದೀರಿ ಅದು ಹೇಗೆ ಸಾಧ್ಯ, ರೈತರಿಗೆ ಉಳುಮೆಗೆ ಬೀಜ ಇಲ್ಲ ಗೊಬ್ಬರ ತೆಗೆದುಕೊಳ್ಳಲು ಹಣ ಇಲ್ಲ, ಸಾಲ ಇಲ್ಲ, ಯಾವ ತನಕ ನೀವು ಹಣ ಬಿಡುಗಡೆ ಮಾಡುವುದಿಲ್ಲ, ಅಲ್ಲಿಯತನಕ ರೈತರಿಗೆ ಸಾಲ ಸಿಗುವುದಿಲ್ಲ ಹಾಗಾಗಿ ನಾನು ಎಚ್ಚರಿಕೆ ಕೊಡುತ್ತಿದ್ದೇನೆ, ನೀವು ತಕ್ಷಣ 750 ಕೋಟಿ ಕೊಟ್ಟಿದ್ದೀರಿ, ಉಳಿದ 1500 July ಒಳಗೆ ಕೊಟ್ಟರೆ September ನಲ್ಲಿ Private Society ಗಳು D C C Bank ಗಳು ಸಾಲ ಕೊಡಲು ಸಾಧ್ಯ ಎಷ್ಟು ವಸೂಲಾತಿ ಆಗಿದೆ ಅಷ್ಟು ಕೊಡಲು ಸಾಧ್ಯ, ಇಲ್ಲದಿದ್ದರೆ ಸಾಲ ಕೊಡಲು ಸಾಧ್ಯವಿಲ್ಲ ಮಾನ್ಯ ಸಿದ್ಧರಾಮಯ್ಯನವರು ಹೇಳಿದ ಹಾಗೆ ರಾಜ್ಯದಲ್ಲಿ 70 ಲಕ್ಷ ರೈತ ಕುಟುಂಬಗಳು ಇವೆ ಮಾನ್ಯ ಯಡಿಯೂರಪ್ಪನವರಿಗೂ ಗೊತ್ತು ಇಲ್ಲಿಂದ ಬಹಳಷ್ಟು ಹೋರಾಟ ರೈತ ಪ್ರತಿನಿಧಿಯಾಗಿ ಮಾಡಿದಿರಿ ಅದರಿಂದ ಅಂದಾಜು 36 ರಿಂದ 38 ಲಕ್ಷ ರೈತ ಕುಟುಂಬಗಳು ಸಹಕಾರಿ ಕ್ಷೇತ್ರದಿಂದ, Commercial Banks ನಿಂದ R R B ನಿಂದ ಸಾಲ ತೆಗೆದುಕೊಳ್ಳುತ್ತಾರೆ, ಉಳಿದ 32, 33 ಲಕ್ಷ Family ಗಳು ಯಾವುದೋ Private ಸಾಲ Money Enterprises

ನಂದ ಸಾಲ ತೆಗೆದುಕೊಳ್ಳುತ್ತಾರೆ ಅಥವಾ ತೆಗೆದುಕೊಳ್ಳುವುದಿಲ್ಲ, ಇವತ್ತು D C C Bank default ಆದವು, P L D Bank default ಆದವು, Primary Societyಗೆ eligibility ಇಲ್ಲ ಯಾರು ಸಾಲ ತೆಗೆದುಕೊಂಡರೋ ನಿಮ್ಮ scheme ನಲ್ಲಿ, ಸಾಲ ಮರುಪಾವತಿ ಆಯಿತೋ ಅವರಿಗೂ ಸಾಲ ಸಿಗುತ್ತಿಲ್ಲ ಹೊಸ ಸಾಲ ಏನು ಬೇಕಾಗಿತ್ತೋ, ಅವರಿಗೂ ಸಾಲ ಸಿಗುತ್ತಿಲ್ಲ ಹಾಗಾಗಿ ಇದರಿಂದ agriculture production affect ಆಗಿದೆ ಇದರ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ ಹೊಸದಾಗಿ ಎಷ್ಟು ಸಾಲ ಬೇಕೋ, ಅದೂ ಸಹ ಅವರಿಗೆ ಸಿಗುತ್ತಿಲ್ಲ ಇದರಿಂದ agricultural production ಗೆ affect ಆಗಿದೆ ಇದರ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ, ನಿಮ್ಮ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ ಅದಕ್ಕೋಸ್ಕರ, ನಾನು ಏನು ಹೇಳುತ್ತಿದ್ದೇನೆಂದರೆ, ಸರ್ಕಾರ ಸ್ವಲ್ಪ ಜವಾಬ್ದಾರಿಯಿಂದ ನಜವಾದ ಪರಿಸ್ಥಿತಿ ಏನು ಇದೆಯೆಂಬುದನ್ನು ತಿಳಿದುಕೊಂಡು ಕೆಲಸ ಮಾಡಿದರೆ ನೀವು ಇದಕ್ಕೆ ಪರಿಹಾರ ಕಂಡು ಹಿಡಿಯಬಹುದು ಕೇವಲ ಪೊಳ್ಳು ಮಾತುಗಳು, ಪೊಳ್ಳು ಘೋಷಣೆಗಳು, ದೊಡ್ಡ ದೊಡ್ಡ ವಿಚಾರಗಳನ್ನು ಹೇಳುತ್ತಾ ಹೋದರೆ, ಅವುಗಳು ಮಾತುಗಳಾಗಿ ಉಳಿಯುತ್ತವೆಯೇ ವಿನಾ ಪತ್ರಿಕೆಗಳವರು ಒಂದೆರಡು ದಿವಸಗಳ ಕಾಲ headlines ಕೊಡುತ್ತಾರೆ ನಾಲ್ಕಾರು ತಿಂಗಳುಗಳಾದ ಬಳಿಕ ಅದರ ಪರಿಣಾಮ ಸರ್ಕಾರದ ಮೇಲಾಗುತ್ತದೆ ಹಾಗಾಗಿ, ನಾನು ಹೇಳುತ್ತಿದ್ದೇನೆ, ರೈತರಿಗೆ ನೀವು ಏನು ಸಬ್ಸಿಡಿ ಕೊಡಬೇಕಾಗಿದೆ, ಅದನ್ನು ತಕ್ಷಣ ಕೊಡಬೇಕು ಸಬ್ಸಿಡಿ ಕೊಡಲಿಲ್ಲವೆಂದರೆ ಬಹಳ ಕಷ್ಟವಿದೆ, ಎಲ್ಲ ಸಹಕಾರಿ ಸಂಸ್ಥೆಗಳು ಮುಚ್ಚಿಹೋಗುತ್ತವೆ ಇವತ್ತು 4% ಸಾಲ ಕೊಡುತ್ತೇವೆಂದು ಹೇಳುತ್ತಿದ್ದೀರಿ ತಾವು ತಿಳಿದುಕೊಳ್ಳಬೇಕು ಏಕೆ? ಕೇಂದ್ರ ಸರ್ಕಾರ ಇಡೀ ದೇಶದಲ್ಲಿ ರೈತರಿಗೆ 7% ನಲ್ಲಿ ಸಾಲ ಕೊಡಬೇಕೆಂದು ನಿರ್ಣಯ ಮಾಡಿದೆ? ಇವತ್ತು NABARD ನಿಂದ Apex bank ಗೆ ಏನು refinance ಆಗುತ್ತದೆ, that is a 3% 2 5 to 3% ವರೆಗೂ refinance ಆಗುತ್ತದೆ ಮುಂಚೆ ನಾವು ಧರ್ಮಸಿಂಗ್‌ರವರ ಕಾಲದಲ್ಲಿ ಮಾಡಿದಾಗ 6-7% ವರೆಗೂ refinance ಆಗುತ್ತಿತ್ತು NABARD ನವರು refinance ಏನು ಮಾಡಿದರು, ಕೇಂದ್ರ ಸರ್ಕಾರದವರು lending rate ಅನ್ನು 7% ಮಾಡಿದರು ಅದಕ್ಕೋಸ್ಕರ, ನಿಮಗೆ 4% ಕೊಡುವುದಕ್ಕೆ ಅನುಕೂಲವಾಯಿತೇ ವಿನಾ ಅದು ನಿಮ್ಮ ಕಾರ್ಯಕ್ರಮವಲ್ಲ ಅದರಿಂದ

ನೀವು ಜಂಬ ಪಟ್ಟುಕೊಳ್ಳುವುದಕ್ಕಾಗುವುದಿಲ್ಲ, ಅದರ ಅವಶ್ಯಕತೆಯೂ ಇಲ್ಲ ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಒಂದು ಕಡೆ ಸಾವು ಆಗಿದೆ, ಅದಕ್ಕೆ ಪರಿಹಾರವಿಲ್ಲ ಅತಿವೃಷ್ಟಿಯಿಂದ ರಸ್ತೆಗಳೆಲ್ಲವೂ ಹಾಳಾಗಿವೆ, ಬ್ರಿಡ್ಜ್‌ಗಳು ಬಿದ್ದಿವೆ, 25 ಸಾವಿರದಿಂದ 30 ಸಾವಿರದಷ್ಟು ಮನೆಗಳು ಬಿದ್ದಿವೆ ಇವತ್ತು ಅದಕ್ಕೆ ಯಾವುದೇ ಪರಿಹಾರವಿಲ್ಲ ಈ ದಿಸೆಯಲ್ಲಿ ಒಂದು ಕಡೆ ಸರ್ಕಾರ ಪರಿಹಾರ ಕೆಲಸವನ್ನು war-footing ಮೇಲೆ ಶುರು ಮಾಡಬೇಕಾಗುತ್ತದೆ ಏಕೆಂದರೆ, ನಾವು ಸದನದಲ್ಲಿ ಹಲವಾರು ಬಾರಿ ಚರ್ಚೆ ಮಾಡಿದ್ದೇವೆ ನಾವು ಆ ಕಡೆ ಇದ್ದಾಗಲೂ ಇತ್ತ ಕಡೆ ಕುಳಿತಿದ್ದ ಕೆಲವರು ಚರ್ಚೆ ಮಾಡಿ ಹೇಳಿದ್ದಾರೆ ಆದರೆ, ನಿಜವಾಗಿಯೂ ಹೇಳಬೇಕಾದರೆ, ಬಹಳ ವಿಷಾದದಿಂದ ಹೇಳುತ್ತೇನೆ ನಾವು ಬಹಳ serious ಆಗಿ ಖಾಯಂ ಸ್ವರೂಪದ measures ಏನು ತೆಗೆದುಕೊಳ್ಳಬೇಕೆಂದು ನಾವು ಯಾವುದೇ ತರಹದ ಕ್ರಮವನ್ನು ತೆಗೆದುಕೊಂಡಿಲ್ಲ ಅದು drought ಇರಬಹುದು ಈಗ drought situation ಇದ್ದಾಗ dry land farming ನಾವು dry landಗೆ facilities ಹೆಚ್ಚು ಕೊಟ್ಟೆವು ಆದರೆ, ಇವತ್ತು dry land farming ಗೆ ಹೆಚ್ಚು ಗಮನ ಕೊಡುತ್ತಿಲ್ಲ Water sheds ಕಟ್ಟುವುದು, ಇದರಿಂದ ನಾವು ಬರಗಾಲದ ಎಷ್ಟೋ ತಾಲ್ಲೂಕುಗಳಲ್ಲಿ ಸಹಾಯ ಮಾಡುವುದಕ್ಕೆ ಅನುಕೂಲವಾಯಿತು Especially Kolar District ಆ ಅರಣ್ಯವನ್ನು ನಾವು ಈಗಾಗಲೇ ಕೈಬಿಟ್ಟಾಗಿದೆ ಅರಣ್ಯವನ್ನು ಏನು ಮಾಡುತ್ತೀರಿ, ಹೇಳಿ? ಇಲ್ಲಿ ಅರಣ್ಯ ಸಚಿವರು ಕುಳಿತಿದ್ದಾರೆ, ತಾವೇ ಹೇಳಿ ಕಳೆದ 5 ವರ್ಷಗಳಲ್ಲಿ Plantationಗೆ ನಿಮ್ಮ ಬಜೆಟ್ ಎಷ್ಟಿದೆ? ಪ್ರತಿ ವರ್ಷವೂ ಕಡಿಮೆಯಾಗುತ್ತಿದೆ ನಿಮ್ಮ ಕಡೆಯಿಂದ ಹಣ ತೆಗೆದುಕೊಳ್ಳುತ್ತಾರೆ ಆದರೆ, plantation ಮಾಡುವುದಕ್ಕೆ Japan programme, London Programme ಎಂದು ಅಷ್ಟೇ ಮಾತನಾಡಬೇಕೇ ವಿನಾ ರಾಜ್ಯದ ಮುಂಗಡ ಪತ್ರದಿಂದ ನಿಮಗೆ ಎಷ್ಟು ಬರುತ್ತದೆ ಎಂಬುದನ್ನು ಮೊದಲು ತಿಳಿದುಕೊಳ್ಳಿ ನೀವಿನ್ನೂ ನಮ್ಮ ಜಿಲ್ಲೆಗೆ ಬಂದಿಲ್ಲ ನೀವು ಬರಬೇಕು ಸ್ವಾಮಿ ನೀವು ಅರಣ್ಯ ಸಚಿವರಾಗಿದ್ದೀರಿ ಕೊಡಗು, ಉತ್ತರ ಕನ್ನಡ ಜಿಲ್ಲೆಯನ್ನೂ ನೀವು ನೋಡಿಲ್ಲವೆಂದರೆ, ಅರಣ್ಯ ಸಚಿವರು ಅಲ್ಲಿಗೆ ಬರುವುದಿಲ್ಲ ಬಂದು ನೋಡಿ ನೀವು ಬಳ್ಳಾರಿ ನೋಡಿರಬಹುದು, ಕೊಪ್ಪಳ ನೋಡಿರಬಹುದು, ಮತ್ತು ನಿಮ್ಮ ತುಮಕೂರು ಅಷ್ಟೇ ಇನ್ನು ಕಬ್ಬು ಬೆಳೆಗಾರರು ಬಹಳಷ್ಟು ಕಷ್ಟದಲ್ಲಿದ್ದಾರೆ ಕಳೆದ ವರ್ಷ

ಕಬ್ಬು ಸಾಗಾಣಿಕೆಯಾಗಲಿಲ್ಲ ನಂತರ, ಮೇ, ಜೂನ್ ವರೆಗೂ crush ಮಾಡಿದರು ಮುಂಚೆ ಶುಗರ್ ಫ್ಯಾಕ್ಟರಿಯಲ್ಲಿ 1,200, 1,300 ರೂಪಾಯಿಗಳಷ್ಟು ರೇಟ್ ಕೊಟ್ಟರು ಈಗ 400, 500 ರೂಪಾಯಿಗಳಂತೆ ಮಾತನಾಡುತ್ತಿದ್ದಾರೆ ಸರ್ಕಾರ ರೈತರ ಪರವಾಗಿ ಕಬ್ಬು ಬೆಳೆಗಾರರಿಗೆ ಈ ರೀತಿ ತೊಂದರೆಯಾಗಿದೆ ಎಂದು ಏನಾದರೂ ನೀವು ಪ್ರಯತ್ನ ಮಾಡಿದ್ದೀರಾ? ಇವತ್ತು ಕಬ್ಬು ಎಷ್ಟೋ ಕಡೆಗಳಲ್ಲಿ ನೀರಿನಲ್ಲಿ ನಿಂತಿದೆ ಕಳೆದ ವರ್ಷ ಎಷ್ಟೋ ಕಬ್ಬನ್ನು ತೆಗೆದುಕೊಂಡು ಹೋಗುವುದಕ್ಕಾಗಲಿಲ್ಲ ಎಲ್ಲೆಲ್ಲಿ ಕಬ್ಬು ಸುಟ್ಟು ಹೋಯಿತು, ಯಾರ ಕಬ್ಬು factory ಗೆ ಹೋಗಲಿಲ್ಲವೋ, ಅವರಿಗೆ ಪರಿಹಾರ ಕೊಡುತ್ತೇವೆಂದು ಕಂದಾಯ ಸಚಿವರು ಇದರ ಬಗ್ಗೆ settle ಮಾಡಿದ್ದೀರೇನು? ಕಂದಾಯ ಸಚಿವರು ಉಪಮುಖ್ಯಮಂತ್ರಿಯವರಿಗೆ ಹೇಳಿದ್ದಾರೆ ಆದರೆ order ಎಲ್ಲಿದೆ? Order issue ಆಗಿಲ್ಲ ಎಲ್ಲೆಲ್ಲಿ ಕಳೆದ ವರ್ಷ ಕಬ್ಬು Sugar Factoryಗೆ ಹೋಗುವುದಕ್ಕಾಗಲಿಲ್ಲವೋ, ಯಾವ ಕಬ್ಬು ಸುಟ್ಟುಹೋಯಿತೋ, ಪ್ರತಿ ಎಕರೆಗೂ, ಪ್ರತಿ ಹೆಕ್ಟೇರಿಗೂ ಪರಿಹಾರ ಕೊಡುತ್ತೇವೆಂದು ನೀವು statement ಮಾಡಿದಿರಿ ಆ order ಇನ್ನೂ ಬಂದಿಲ್ಲ Order ಮುಟ್ಟಿಲ್ಲ ಹಾಗೆಯೇ, ಕಬ್ಬು ಬೆಳೆಗಾರರಾಗಲಿ, ಇವತ್ತು ನಮ್ಮ ಜಿಲ್ಲೆಯ ಅಡಿಕೆ ಬೆಳೆಗಾರರ ಬಗ್ಗೆ ವಿಶೇಷವೇನೆಂದು ನೋಡಬೇಕು ಅಡಿಕೆ ದರಗಳೆಲ್ಲವೂ ಕುಸಿದು ಬಿದ್ದಿದೆ ಯಾರು support ಕೊಡುತ್ತಾರೆ? ಕೇಂದ್ರ ಸರ್ಕಾರಕ್ಕೆ ಹೋಗುತ್ತಿದ್ದೇವೆ, ಹೇಳುತ್ತಿದ್ದೇವೆ ಆದರೆ, ರಾಜ್ಯ ಸರ್ಕಾರ, support ಮಾಡುವುದಕ್ಕೆ ಏನು ಮಾಡಿದೆ? ಕಬ್ಬು ಬೆಳೆಗಾರರಾಗಲಿ, ಅಡಿಕೆ ಬೆಳೆಗಾರರಾಗಲಿ ಇಲ್ಲಿ ಪ್ರಶ್ನೆ ಇರುವುದೇನೆಂದರೆ, ಯಡಿಯೂರಪ್ಪನವರು ಇಲ್ಲಿ ಕುಳಿತಿದ್ದಾಗ ಎಷ್ಟೊಂದು ಗಲಾಟೆ, ಏನು ಕತೆ, ಅಬ್ಬಬ್ಬಾ! ಈಗ ಅಲ್ಲಿಗೆ ಹೋಗಿರುವ ನಿಮಗೆ ಏನಾಗಿದೆ? ಗಲಾಟೆ ಮಾಡಬೇಡಿ, ಶಾಂತವಾಗಿ ಹೊಡೀರಿ ಆದರೆ, ಏನಾದರೂ ಒಂದು ಕ್ರಮ ಕೈಗೊಳ್ಳಿ ಸರ್ ದೇವರು ಕೈಯಲ್ಲಿ ಅಧಿಕಾರ ಕೊಟ್ಟಾಗ ಹಣಕಾಸನ್ನೂ ಕೊಡುತ್ತಾನೆ ಇನ್ನು ಎರಡು ತಿಂಗಳು ನಿಮ್ಮ ಕಡೆ ಹಣಕಾಸು ಇಲಾಖೆ ಇರುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ದೇಶಪಾಂಡೆಯವರು ಮಾತಿನ ಭರಾಟೆಯಲ್ಲಿ ದೇವರು ಎಲ್ಲವನ್ನೂ ನಿಮ್ಮ ಕೈಯಲ್ಲಿ ಕೊಟ್ಟಿದ್ದಾನೆ, ಹಣಕಾಸನ್ನೂ ಕೊಟ್ಟಿದ್ದಾನೆಂದು ಹೇಳಿಬಿಟ್ಟರು ನಾವೆಲ್ಲರೂ tax ಕೊಟ್ಟು

ಸೋತು ಸೊರಗುತ್ತಿದ್ದೇವೆ ಎಲ್ಲವೂ ಮೇಲಿಂದಲೇ ಬರುತ್ತಿದೆ ಎಂದು ನೀವು ಹೇಳಿದರೆ, ನಾಳೆ ಅವರು ಅದನ್ನೇ ತಿಳಿದುಕೊಂಡು ಏನೂ ಮಾಡುವಂತಿಲ್ಲ ಎಲ್ಲವೂ ಮೇಲಿಂದ ಬರುತ್ತಿದೆ, ಮೇಲಿಂದ ಬರುತ್ತಿದೆ ಎಂದು ನೀವು ಹೇಳಿದರೆ, ಅವರು ಸಿಕ್ಕಂತೆ announce ಮಾಡಿಕೊಂಡು ಹೋಗುತ್ತಿದ್ದಾರೆ ಈಗಾಗಲೇ ಅವರ announcement ಸಾಕಾಗಿ ಹೋಗಿದೆ ಮತ್ತೆ ನೀವು ಅದಕ್ಕೆ add ಮಾಡಬೇಡಿ

ಶ್ರೀ ಆರ್ ವಿ ದೇಶಪಾಂಡೆ ನಾನು ಹಾಗೆ ಹೇಳಲಿಲ್ಲ ನಾನು ಹೇಳಿದ್ದು ಏನೆಂದರೆ, ಮಾನ್ಯ ಉಪಮುಖ್ಯಮಂತ್ರಿಗಳು ಹೆಜ್ಜೆಹೆಜ್ಜೆಗೂ ಹಣಕಾಸಿನ ಪರಿಸ್ಥಿತಿ ಸುಧಾರಿಸಿದೆ, ಹೀಗಾಗಿದೆ, ಹಾಗಾಗಿದೆ ಎಂದು ಅವರು ಹೇಳುತ್ತಾರೆ ಆದರೆ, ಅದು ಕಾರ್ಯರೂಪದಲ್ಲಿ ಬರಬೇಕಲ್ಲ ನೀವು ಹಣಕಾಸಿನ ಮಂತ್ರಿಯಾಗಿದ್ದಾಗ ಏನಾಯಿತು, ಏನಿಲ್ಲ, ಅಷ್ಟೇ ಉಳಿದಿದೆ ನಾನು ಮಂತ್ರಿಯಾಗಿದ್ದೆ ಏನಾಯಿತು, ಅಷ್ಟೂ record ಇರುತ್ತದೆ ಹಾಗಾಗಿ, ಅವಕಾಶ ಇದ್ದಾಗ ಒಳ್ಳೆಯ ಕೆಲಸ ಮಾಡಿ, ರೈತರ ಪರವಾಗಿ ಎಷ್ಟೆಲ್ಲಾ ಹೋರಾಟ ಮಾಡುತ್ತಿದ್ದೀರಿ, ಎಷ್ಟು ಮಾತನಾಡುತ್ತಿದ್ದಿರಿ ಆದರೆ, ಅಲ್ಲಿಗೆ ಹೋದ ನಂತರ ಯಾವ ಪರಿಣಾಮ ನಿಮ್ಮ ಮೇಲಾಗಿದೆ? ಕಬ್ಬು ಬೆಳೆಗಾರರಿಗೂ ಇಲ್ಲ, ಅಡಿಕೆ ಬೆಳೆಗಾರರಿಗೂ ಇಲ್ಲ, ಭತ್ತ, ಜೋಳ ಬೆಳೆಗಾರರಿಗೂ ಏನಿಲ್ಲ ಏನಾಗಿದೆ ನಿಮಗೆ? ಇಷ್ಟೆಲ್ಲಾ ಅತಿವೃಷ್ಟಿ ಆಗಿದೆ, ಕಷ್ಟ ಆಗಿದೆ, ಒಂದು ರೂಪಾಯಿಯನ್ನೂ ಬಿಡುಗಡೆ ಮಾಡಿಲ್ಲ ಏಕೆ ದಿಲ್ಲಿ ಕಡೆ ನೋಡುತ್ತೀರಿ? Why are you looking at Delhi? ನಿಮ್ಮ ಕಡೆ Calamity Relief Fund ಇಲ್ಲ ಸಿದ್ಧರಾಮಯ್ಯನವರು ಇದ್ದಾಗ ಕೊಟ್ಟಿಲ್ಲ, ಬೇರೆ ಸರ್ಕಾರ ಇದ್ದಾಗ ಕೊಟ್ಟಿಲ್ಲ ಕೇಂದ್ರ ಸರ್ಕಾರವನ್ನು ಕೇಳೋಣ, ನಾವೂ ಸಹಾಯ ಮಾಡುತ್ತೇವೆ ನಾವೂ ನಿಮ್ಮ ಜೊತೆಗೆ ಬರುತ್ತೇವೆ ಅದರ ಅರ್ಥ don't only point out at Government of India ಇವತ್ತು ರಾಜ್ಯದ ರೈತರು, ಜನರು, ಕೂಲಿ ಕಾರ್ಮಿಕರು ಕಷ್ಟದಲ್ಲಿದ್ದಾಗ you have to rise to the occasion ಅವರ ಕಷ್ಟವನ್ನು ದೂರ ಮಾಡುವುದಕ್ಕೆ ನೀವು ಮತ್ತು ನಾವು ಕುಳಿತುಕೊಂಡು ಪ್ರಯತ್ನ ಮಾಡಬೇಕಾಗಿದೆ ಕೇಂದ್ರ ಸರ್ಕಾರವನ್ನು ಕೇಳೋಣ, ಕೇಳಬಾರದೆಂದೇನೂ ಇಲ್ಲ ಕೇಳೋಣ ನಾವೂ ಸಹಕಾರ ಕೊಡುತ್ತೇವೆ ಆದರೆ, ಕೇಂದ್ರ ಸರ್ಕಾರ, ಕೇಂದ್ರ ಸರ್ಕಾರ ಎಂದರೆ ಏನಾಗುತ್ತದೆ ಸ್ವಾಮಿ? ಇಲ್ಲಿ

ಸಿದ್ದರಾಮಯ್ಯನವರು ಹೇಳಿದರಲ್ಲ, ವಿದರ್ಭ ಪ್ಯಾಕೇಜ್ ಎಂದು 2,700 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದನ್ನು ಉಪಯೋಗಿಸುವುದಕ್ಕಾಗಲಿಲ್ಲ ಇವತ್ತು ಸರ್ಕಾರ ಅಂತರ್ಗತ ಭಿನ್ನಾಭಿಪ್ರಾಯದಿಂದ, ಜಗಳದಿಂದ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿದೆ ಒಬ್ಬೊಬ್ಬ ಅಧಿಕಾರಿಗೂ ಆರು ತಿಂಗಳಿನಲ್ಲಿ ಆರು ಕಡೆಗಳಿಗೆ posting ಮಾಡುತ್ತೀರಿ? ಇದನ್ನು ಏಕೆ ಮಾಡುತ್ತೀರಿ? ಏನು ಮಾಡುತ್ತೀರಿ? ಸ್ವಲ್ಪ ಕೇಳಬೇಕಾಗುತ್ತದಲ್ಲವೇ? ಒಬ್ಬ ಅಧಿಕಾರಿಯನ್ನು ಆರು ತಿಂಗಳಿನಲ್ಲಿ ಆರು ಬಾರಿ posting ಮಾಡುತ್ತೀರಿ? ಏನ್ರಿ ಇದು? ನೀವು ಈ ಕಡೆ ಇದ್ದಾಗ ಯಾವ ತರಹದ ಗಲಾಟೆ ಇತ್ತು 2–3 ವರ್ಷಗಳಿಗೆ posting ಮಾಡಿದ್ದರೆ, ನೀವು ಗಲಾಟೆ ಮಾಡುತ್ತಿದ್ದಿರಿ ಯಡಿಯೂರಪ್ಪನವರೆ, ಈಗ ನಿಮಗೆ ಏನಾಗಿದೆ? ನೀವು ಇಷ್ಟು ಶಾಂತವಾಗಿ ಕುಳಿತರೆ ಹೇಗೆ? ವಿಚಾರ ಮಾಡಿ ಇವತ್ತು ಹಿಂದುಳಿದ ಜನಾಂಗ, ಪರಿಶಿಷ್ಟ ಜನಾಂಗ, ಅಲ್ಪಸಂಖ್ಯಾತ ಅಧಿಕಾರಿಗಳು ನಿಮ್ಮ ಹೊಡೆತಕ್ಕೆ ಭಯಭೀತರಾಗಿದ್ದಾರೆ ಅವರಿಗೆ ಯಾವುದೇ ತರಹದ ಸ್ಥಾನಮಾನಗಳಿಲ್ಲ ನಿಮ್ಮ postings ಅನ್ನು ತೆಗೆದು ನೋಡಿ ಯಾವ ಕಾಲದಲ್ಲಿ ಯಾವ ಜನರಿದ್ದಾರೆ, ಎಷ್ಟು ದಿವಸಗಳಾದವು ಹಾಗಾಗಿ, ತಾವು ಸಹ ಸಾಮಾಜಿಕ ನ್ಯಾಯ ಕೊಡಬೇಕಾದರೆ, ಆಡಳಿತದಲ್ಲಿರುವ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಲ್ಲರಿಗೂ ಜವಾಬ್ದಾರಿ ಕೊಡಬೇಕು ಆದರೆ, ಅದು ಸರ್ಕಾರದ ಕಡೆಯಿಂದ ಆಗುತ್ತಿಲ್ಲ Flood situation ಅನ್ನು tackle ಮಾಡುವುದಕ್ಕೆ ಸರ್ಕಾರ ಸಂಪೂರ್ಣ ವಿಫಲವಾಗಿದೆ ಬರಗಾಲದಿಂದ ಸಾಕಷ್ಟು ರೈತರು ಸತ್ತಿದ್ದಾರೆ ಅವರಿಗೆ ಸರ್ಕಾರದಿಂದ ಯಾವುದೇ ರೀತಿಯ ಸಹಾಯವಿಲ್ಲ Especially power sector, ರೇವಣ್ಣನವರು ಇಲ್ಲಿ ಇಲ್ಲ ಅವರು ತಿಳಿದುಕೊಳ್ಳಬೇಕು ಆನರು ಬಹಳ ಕಷ್ಟದಲ್ಲಿದ್ದಾರೆ ಇವತ್ತು transformers ಇಲ್ಲ, poles ಇಲ್ಲ, 5–5 ದಿವಸ ವಿದ್ಯುತ್ ಇಲ್ಲ ಇದರಿಂದ ಯಾರಿಗೂ ಗೌರವ ತರುವುದಿಲ್ಲ ಇದೊಂದು ಅವಮಾನವೆಂದು ನಾನು ತಿಳಿದುಕೊಳ್ಳುತ್ತೇನೆ ಆದರೆ, ಸರ್ಕಾರ ತಿಳಿದುಕೊಳ್ಳಬೇಕಲ್ಲ ನಾನು ನಿನ್ನೆ ಬೆಳಗಾವಿಯಲ್ಲಿದ್ದೆ ಶಂಕರಾಚಾರ್ಯರ ಒಂದು ಕಾರ್ಯಕ್ರಮವಿತ್ತು ಅಲ್ಲಿ ಮಳೆ ಇಲ್ಲ, ಏನೂ ಇಲ್ಲ, 5 ಬಾರಿ 2 ಗಂಟೆಗಳ ಕಾಲ ವಿದ್ಯುತ್ ಹೋಯಿತು ಏನಿದು? ಯಾವ ರೀತಿಯಿಂದ ನಿಮ್ಮ ಆಡಳಿತ ನಡೆಯುತ್ತಿದೆ? ಯಾರಿಗಾದರೂ ಭಯವಿದೆಯೇ? ಅಧಿಕಾರಿಗಳು ಬೇಜವಾಬ್ದಾರಿಯಿಂದಿದ್ದಾರೆ ಅತಿವೃಷ್ಟಿಯಿಂದ,

ಬರಗಾಲದಿಂದ ರೈತರು, ಕೂಲಿ ಕಾರ್ಮಿಕರು, ಬಡವರು ಸಹಾಯಕ್ಕೆ ಧಾವಿಸುವುದಕ್ಕೆ ಇವತ್ತು ಸರ್ಕಾರ ಸಂಪೂರ್ಣ ವಿಫಲವಾಗಿದೆ ತಕ್ಷಣ ಪ್ರತಿ ತಾಲ್ಲೂಕಿಗೂ ಹಣ ಬಿಡುಗಡೆ ಮಾಡಬೇಕು, war-footing ನಲ್ಲಿ ಕೆಲಸ ತೆಗೆದುಕೊಳ್ಳಬೇಕು ರಸ್ತೆ ಕೆಲಸ ಇರಬಹುದು, bridge collapse ಆಗಿದ್ದಿರಬಹುದು, ವಿದ್ಯುತ್ ಇರಬಹುದು, ತಮ್ಮ ಕಡೆಯಿಂದ ಈ ಕೆಲಸ ಆಗಬೇಕಾಗಿದೆಯೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲರ ಜೊತೆಯಲ್ಲಿ ಸಮಾಲೋಚನೆ ನಡೆಸಿ ಬರಗಾಲ ಮತ್ತು ಮಳೆಯ ಅವಾಂತರದ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕೆಂದು ನಿಲುವಳಿ ಸೂಚನೆಯೊಂದನ್ನು ಮಂಡಿಸಿದ್ದರು ತಾವು ಅದಕ್ಕೆ ಅನುಮತಿ ಕೊಟ್ಟು, ಅದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ ಅದಕ್ಕಾಗಿ ನಾವು ತಮ್ಮನ್ನು ಅಭಿನಂದಿಸುತ್ತೇನೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು 45 ಸಾವಿರ ಮನೆಗಳು ನಾಶವಾಗಿವೆ ಮತ್ತು 43 ಜನರ ಬಲಿಯಾಗಿದೆ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ ಮಾನ್ಯ ಕಂದಾಯ ಸಚಿವರು ಮಳೆಯಿಂದಾಗಿ 157 ಕೋಟಿ ರೂಪಾಯಿಗಳ ಹಾನಿಯಾಗಿದೆ, ಅದಕ್ಕಾಗಿ ಕೇಂದ್ರದ ನೆರವನ್ನು ಕೋರಲು ನಿಯೋಗವೊಂದು ಹೋಗಲಿದೆ ಎಂದು ಹೇಳಿದ್ದಾರೆ ಇದರ ಜೊತೆಗೆ ಮಾನ್ಯ ಪ್ರಕಾಶ್‌ರವರೂ ಸಹ ಪ್ರವಾಹ ಪರಿಹಾರಕ್ಕಾಗಿ ಕೇಂದ್ರದಿಂದ ಹೆಚ್ಚಿನ ಹಣ ಕೇಳುವುದಕ್ಕಾಗಿ ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗಲಾಗುವುದು ಎಂದು ಹೇಳಿದ್ದಾರೆ 45 ಸಾವಿರ ಮನೆಗಳು ನಾಶವಾಗಿರುವ ಬಗ್ಗೆ ಸರ್ಕಾರದವರು ಏನೊಂದು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲ ಸಮರೋಪಾದಿಯಲ್ಲಿ ಏನೊಂದು ಕೆಲಸಗಳು ಆಗಬೇಕಾಗಿತ್ತೋ, ಅದು ಪ್ರಾಮಾಣಿಕವಾಗಿ ಆಗಿಲ್ಲ ಅದು ಆಗಿದ್ದರೆ, ಆ ಬಗ್ಗೆ ಅವರು ಹೇಳಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ಬುದ್ಧಿವಂತರಾಗಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಅವರು ಒಳ್ಳೆಯ ಕೆಲಸವನ್ನೇ ಮಾಡುತ್ತಿದ್ದಾರೆ, ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ ನೀವು ಹೃದಯ ಬಿಚ್ಚಿ ಹೇಳಿ 45 ಸಾವಿರ ಮನೆಗಳು ನಾಶವಾಗಿವೆ,

ಅಗರಲ್ಲಿ ಎಷ್ಟು ಮನೆಗಳವರಿಗೆ ನೀವು ಅನುಕೂಲ ಮಾಡಿದ್ದೀರಿ? ಪ್ರವಾಹದಿಂದ ತತ್ತರಿಸಿರತಕ್ಕಂಥ ಎಷ್ಟು ಜನಕ್ಕೆ ನೀವು ಅನುಕೂಲ ಮಾಡಿದ್ದೀರಿ? ಅವರಲ್ಲಿ ಎಷ್ಟು ಜನಕ್ಕೆ ಮನೆಗಳನ್ನು ನೀವು ಕಟ್ಟಿಕೊಟ್ಟಿದ್ದೀರಿ? ಸಾವಿರಾರು ಜಾನುವಾರುಗಳನ್ನು ಸತ್ತಿವೆ ಆ ಅಂಕಿ ಅಂಶಗಳನ್ನು ನೋಡಿದಾಗ ಬಹಳ ಅಪಾಯಕಾರಿಯಾದಂತಹ ವಿಚಾರಗಳು ಗಮನಕ್ಕೆ ಬರುತ್ತಿವೆ ಯಾವುದರ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿದ್ದೀರಿ? ಕಳೆದ 3–4 ತಿಂಗಳುಗಳಿಂದ ಪತ್ರಿಕೆಗಳಲ್ಲಿ ನಿಮ್ಮ ಗೊಂದಲದ ಬಗ್ಗೆ ಸುದ್ದಿಗಳನ್ನು ಓದುತ್ತಿದ್ದೇವೆಯೇ ಹೊರತು ಬೇರೆ ಯಾವುದರ ಬಗ್ಗೆಯೂ ಸುದ್ದಿ ಇಲ್ಲ ಮಾನ್ಯ ಯಡಿಯೂರಪ್ಪನವರು ಈ ಕಡೆಗೆ ಇದ್ದಾಗ, ಇದೇ ರೀತಿಯ ಬರಗಾಲ ಪರಿಸ್ಥಿತಿ ಇದ್ದಾಗ, ಅವರ ರೌದ್ರಾವತಾರವನ್ನು ಇಲ್ಲಿ ನಾನು ನೋಡಿದ್ದೇನೆ ಆ ಕಡೆಗೆ ಹೋದ ನಂತರ ಅದು ಕಾಣೆಯಾಗಿದೆ

ಶ್ರೀ ಸಿದ್ದರಾಮಯ್ಯ ನೀವಿಬ್ಬರೂ ಈಗಲೂ ಹಳೆಯ ಸ್ನೇಹಿತರಂತೆಯೇ ಇದ್ದೀರಾ?

ಶ್ರೀ ವಾಟಾಳ್ ನಾಗರಾಜ್ ಹಳೆಯ ಸ್ನೇಹ ಅಥವ ಹೊಸ ಸ್ನೇಹ ಎಂದೇನೂ ಇಲ್ಲ ನಾವು ಮತ್ತು ಅವರ ನಡುವಿನ ಸ್ನೇಹಕ್ಕೇನೂ ಕೊರತೆ ಇಲ್ಲ ಸ್ನೇಹದಲ್ಲಿ ಅವರನ್ನು ವಿರೋಧ ಮಾಡಿಕೊಳ್ಳುವುದು ಏನಿದೆ? ಅಂತಹ ಕೊರತೆಗಳು ಯಾವತ್ತೂ, ಎಂದೂ ಸಹ ಬರುವುದಿಲ್ಲ

ಶ್ರೀ ಸಿದ್ದರಾಮಯ್ಯ ವಿದೇಶಕ್ಕೆ ಹೋದಾಗ ಇದ್ದಂತಹ ಸ್ನೇಹ ಈಗಲೂ ಇದೆಯೇ?

ಶ್ರೀ ವಾಟಾಳ್ ನಾಗರಾಜ್ ಅದಕ್ಕಿಂತ ಪರಮವಾದ ಸ್ನೇಹ ಇದೆ ಅದೇನೂ ಹಾಳಾಗಿಲ್ಲ ಸ್ನೇಹವನ್ನು ಅವರೂ ಕೆಡಿಸಿಕೊಳ್ಳಲಿಕ್ಕೆ ತಯಾರಾಗಿಲ್ಲ, ನಾವೂ ತಯಾರಾಗಿಲ್ಲ ಸ್ನೇಹವಂತೂ ಇದ್ದೇ ಇರುತ್ತದೆ ಆ ಬಗ್ಗೆ ನನ್ನದೇನೂ ತಕರಾರು ಇಲ್ಲ ಅವರಿಗೆ ಸ್ನೇಹದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತ್ರ ಭಿನ್ನಾಭಿಪ್ರಾಯ ಬರಬಹುದೇ ಹೊರತು, ನನಗೂ ಮತ್ತು ಅವರಿಗೂ ಸ್ನೇಹದಲ್ಲಿ ಕೊರತೆಯಿಲ್ಲ ನಾವು ಅವರನ್ನು ಬಿಟ್ಟು ಕೊಡುವ ಮಟ್ಟದಲ್ಲೂ ಇಲ್ಲ ತೆಗೆದುಕೊಳ್ಳುವ ಮಟ್ಟದಲ್ಲೂ ಇಲ್ಲ ತೆಗೆದುಕೊಳ್ಳುವುದು ಮತ್ತು

ಬಿಟ್ಟು ಕೊಡುವುದು ಅವರಿಬ್ಬರಲ್ಲಿದೆ ಸ್ನೇಹ ಇಟ್ಟುಕೊಳ್ಳುವುದು ಅಥವಾ ಬಿಡುವುದು ಅವರಿಗೆ ಸೇರಿದ್ದು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನೀವು ಮಾತನಾಡುವುದು ನೋಡಿದರೆ, ಇದು one way love ಎನಿಸುತ್ತಿದೆ ಕೇವಲ ನೀವು ಮಾತ್ರ ಮಾತನಾಡುತ್ತಿದ್ದೀರಿ, ಆ ಕಡೆಯಿಂದ ಏನೂ response ಬರುತ್ತಿಲ್ಲ ಹೀಗಿದ್ದರೂ, ನಾವಿಬ್ಬರೂ ಬಹಳ ಚೆನ್ನಾಗಿದ್ದೇವೆ, ನನಗೆ ಅವರ ಮೇಲೆ ಪ್ರೀತಿ ಇದೆ, ಹಿಂದಿನಂತೆಯೇ ನಮ್ಮ ಮತ್ತು ಅವರಿಬ್ಬರ ನಡುವೆ ಸ್ನೇಹವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ ಎಂದೆಲ್ಲಾ ನೀವೇ ಹೇಳಿ ಕೊಳ್ಳುತ್ತಿದ್ದೀರೆ ಹೊರತು, ಆ ಕಡೆಯಿಂದ ಏನೂ response ಇಲ್ಲ ಇದರಿಂದಾಗಿ ಈಗ ನಿಮ್ಮಿಬ್ಬರಲ್ಲಿ ಆ ಒಂದು ಸಾಮರಸ್ಯ ಇಲ್ಲವೆಂದು ಅರ್ಥವಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಹಾಗೇನಿಲ್ಲ ಇತ್ತೀಚೆಗೆ ಮಾನ್ಯ ಯಡಿಯೂರಪ್ಪನವರು ಮೌನವನ್ನು ಆಚರಿಸುತ್ತಿದ್ದಾರೆ ನೀವು ಅದನ್ನು ಅರ್ಥ ಮಾಡಿಕೊಳ್ಳಬೇಕು ಅದರ ಬಗ್ಗೆ ನಾನು ಏನನ್ನೂ ಮಾತನಾಡುವುದಿಲ್ಲ, ಯಾವ ವಿಚಾರವನ್ನೂ ಮಾತನಾಡುವುದಿಲ್ಲ ಅದೇನೇ ಇರಲಿ, ಈಗ ಅವರು ಬಹಳ ಮೌನಿಯಾಗಿದ್ದಾರೆ ಈಗ ಒಂದು ತಿಂಗಳಿಂದೀಚೆಗೆ ಅವರು ತಮ್ಮ ಇತಿಹಾಸದಲ್ಲಿ ಮೊದಲ ಬಾರಿಗೆ ಮೌನಾಚರಣೆ ಮಾಡುತ್ತಿದ್ದಾರೆ ಮಿಕ್ಕ ಮಂತ್ರಿಗಳು ಯಾರು ಏನು ಬೇಕಾದರೂ ಮಾತನಾಡಿಕೊಳ್ಳಲಿ, ನಾನಂತೂ ಯಾವ ವಿಚಾರದ ಬಗ್ಗೆಯೂ ಮಾತನಾಡುವುದಿಲ್ಲ ಎಂದು ಅವರು ಮೌನ ಆಚರಿಸುತ್ತಿದ್ದಾರೆ ಅವರ ಮೌನದಲ್ಲಿ ಗಾಢವಾದಂತಹ ಉದ್ದೇಶವಿದೆ ನಾನು ಅದನ್ನು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ ಮಾನ್ಯ ಯಡಿಯೂರಪ್ಪನವರು ನನ್ನ ಮತ್ತು ಅವರ ಸ್ನೇಹಕ್ಕೆ ಸಹಮತ ವ್ಯಕ್ತಪಡಿಸಲಿಲ್ಲವೆಂದು ನೀವೇಕೆ ಗಾಬರಿ ಪಟ್ಟುಕೊಳ್ಳುತ್ತೀರಿ? ಅವರ ಮೌನವೇ ಅದಕ್ಕೆ ಸಮ್ಮತಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು 'ಮೌನವೇಶ್ವರ' ಎಂದೇ ಇಟ್ಟುಬಿಡಿ

ಶ್ರೀ ವಾಟಾಳ್ ನಾಗರಾಜ್ ರೈತರ ಆತ್ಮಹತ್ಯೆಗಳ ಬಗ್ಗೆ ನೀವು ಏನು ಚಿಂತನೆ ಮಾಡಿದ್ದೀರಿ? ಎಂದು ನನಗೆ ಅರ್ಥವಾಗಲಿಲ್ಲ ಸೆಂಟ್ರಲ್ ಕಾಲೇಜ್‌ನಲ್ಲಿ ತಾವು ಈ ಬಗ್ಗೆ ಸಭೆಯೊಂದನ್ನು ಕರೆದಿರಿ ಸಧ್ಯಕ್ಕೆ ತಾವು ಮೈದಾನದಲ್ಲಿ ಸಭೆಯನ್ನು ಕರೆಯಲಿಲ್ಲ ಅದೇನು ಒಂದು ಸಭೆಯೇ? ಅಲ್ಲಿ ಬದಲು ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಯಾವುದಾದರೂ ಒಂದು ಜಾತ್ರೆಯಲ್ಲಿ ಹೋಗಿ ಭಾಷಣ ಮಾಡಬಹುದಾಗಿತ್ತಲ್ಲವೇ? ಪರಿಸ್ಥಿತಿ ಏನು ಎಂದು ನಿಮಗೆ ಅರಿವಾಗಬೇಕಲ್ಲವೇ? ಸುಮ್ಮನೆ ಸಭೆ ಕರೆದು, ಭಾಷಣ ಮಾಡಿದರೆ ಆಗುವುದಿಲ್ಲ ನಾವೆಲ್ಲಾ ಕೆಳಕ್ಕೆ ಕುಳಿತಿರುತ್ತೇವೆ, ನೀವೆಲ್ಲಾ ಮಾತನಾಡಿ ಸಲಹೆ ಕೊಡಿ ಎಂದರೆ, ಅಂತಹ ಸಭೆ ಮೂರು ತಿಂಗಳಾದರೂ ಮುಗಿಯುವುದಿಲ್ಲ ಅದು ಪರಿಣಾಮಕಾರಿಯಾಗಿರುವುದಿಲ್ಲ ನಾವೇನು ಮಾಡಬೇಕು ಎನ್ನುವುದು ಮಾನ್ಯ ವೀರೇಶ್ ಕೊಟ್ಟಿರತಕ್ಕಂಥ ವರದಿಯಲ್ಲಿದೆ ಶಾಸನ ಸಭೆಯಲ್ಲಿ ಅಂತಹದ್ದರ ಬಗ್ಗೆ ಚರ್ಚೆಯಾಗಬೇಕು ಮೂರನೇ ಮಹಡಿಯಲ್ಲಿ ಮತ್ತು ಸಚಿವ ಸಂಪುಟದ ಸಭೆಗಳಲ್ಲಿ ಅದರ ಬಗ್ಗೆ ಚರ್ಚೆಯಾಗಬೇಕೇ ಹೊರತು ಸೆಂಟ್ರಲ್ ಕಾಲೇಜ್ ಭವನದಲ್ಲಿ ಅಲ್ಲ ನೀವು ಅಲ್ಲಿಗೆ ಹೋಗಲೇ ಬಾರದಿತ್ತು ಅಲ್ಲಿಗೆ ನೀವು ಹೋದರೆ ಸರ್ಕಾರ ಇಲ್ಲವೆಂದೇ ಅರ್ಥ ಮಾನ್ಯ ಯಡಿಯೂರಪ್ಪನವರು ಅಲ್ಲಿಗೆ ಹೋಗಿಲ್ಲ ನಮ್ಮನ್ನೆಲ್ಲಾ ಆ ಸಭೆಗೆ ಕರೆದಿದ್ದರು ನಮ್ಮಲ್ಲಿ ಆ ಸಭೆಗೆ ಯಾರು ಹೋದರೋ ಗೊತ್ತಿಲ್ಲ, ನಾನಂತೂ ಹೋಗಿಲ್ಲ ಏಕೆ ಎಂದರೆ, ಅಲ್ಲಿ ಆ ಸಮಸ್ಯೆ ಪರಿಹಾರವಾಗುವುದಿಲ್ಲ ಇದು ಸಂಪೂರ್ಣ ಮೊಸಳೆ ಕಣ್ಣೀರು ಜನರ ಮೇಲೆ ಏನೋ ಒಂದು ರೀತಿ ಪ್ರಭಾವ ಬೀರಲು ಈ ರೀತಿ ಮಾಡಿದ್ದೀರಿ 20–25 ಜನ ರೈತರನ್ನು ಕರೆದುಕೊಂಡು ಬನ್ನಿ ಎಂದು ನೀವು ಜಿಲ್ಲಾಧಿಕಾರಿಗಳಿಗೆ ಹೇಳಿದ್ದಿರಿ ರೈತರನ್ನು ಕರೆದುಕೊಂಡು ಬರಲಿಕ್ಕೆ ಮಾತ್ರ ಅವರು ಹೇಳಿದ್ದರು, ಅವರು ಹೋಗಲಿಕ್ಕೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದರೋ ನನಗೆ ಗೊತ್ತಿಲ್ಲ ಪ್ರತಿ ಜಿಲ್ಲೆಯಿಂದ ಇಂಥಿಂಥವರು ಬೇಕು ಎಂದು, ಯಾರು ಇವರಿಗೆ ಬೇಕಾಗಿದ್ದರೋ ಅಂತಹವರನ್ನು ಮಾತ್ರ ಕರೆಸಿಕೊಂಡರು ಮಾನ್ಯ ಯಡಿಯೂರಪ್ಪನವರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಅದು ನಿಮಗೂ ಗೊತ್ತಿದೆ ರೈತರಲ್ಲಿ ಆತ್ಮ ಸ್ಥೈರ್ಯ ತುಂಬುವಂತಹ ಕೆಲಸವಾಗಬೇಕು ನಾಟಕದಲ್ಲಿ ಬರುವ ಪಾತ್ರಧಾರಿಗಳ ರೀತಿಯಲ್ಲಿ ನೀವು ಪಾತ್ರ ಹಾಕಿದರೆ, ಅದರಿಂದ ರೈತರು ಉದ್ಧಾರವಾಗುವುದಿಲ್ಲ, ಅವರ ಬೆಳವಣಿಗೆ ಆಗುವುದಿಲ್ಲ ಇವತ್ತಿನವರೆಗೂ

ನೀವು ಕಬ್ಬು ಬೆಳೆಗಾರರ ಬಗ್ಗೆ ಪ್ರಾಮಾಣಿಕವಾದಂತಹ ಚಿಂತನೆ ಮಾಡಿಲ್ಲ 14-16 ತಿಂಗಳು ಕಬ್ಬು ಬೆಳೆದರೂ, ಆ ಬೆಳೆ ಹಾಗೆಯೇ ರೈತರ ಜಮೀನಿನಲ್ಲಿ ಇದೆಯೇ ಹೊರತು ಇನ್ನೂ ಕಟಾವು ಆಗಿಲ್ಲ ರೈತರ ಆತ್ಮಹತ್ಯೆಗೆ ಏನು ಕಾರಣ? ಅದರ ಬಗ್ಗೆ ನೀವು ಏನು ಚಿಂತನೆ ಮಾಡಿದ್ದೀರಿ? ಒಟ್ಟಾರೆಯಾಗಿ ಇಡೀ ರಾಜ್ಯದಲ್ಲಿ ಯಾವ್ಯಾವ ಸಣ್ಣ ರೈತ ಎಷ್ಟೆಷ್ಟು ಸಾಲ ತೆಗದು ಕೊಂಡಿದ್ದಾನೆ? ಎಂದು ನೋಡಬೇಕು ಇಡೀ ರಾಜ್ಯದ ಉದ್ದಗಲಕ್ಕೂ ಪ್ರತಿ ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಎಷ್ಟು ಜನ ಸಾಮಾನ್ಯ ರೈತರು ಸಾಲ ತೆಗೆದುಕೊಂಡಿದ್ದಾರೆ? ಇವರ ಬೆಳೆ ಪರಿಸ್ಥಿತಿ ಏನು? ಅವರು ಹಣವನ್ನು ಕಟ್ಟಲಿಕ್ಕೆ ಆಗುತ್ತದೆಯೇ? ಇಲ್ಲವೇ? ಎಂದು ನೋಡಿದ್ದೀರಾ? ಇವರು ಹಣ ಕಟ್ಟುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ, ನಾವು ನಿನ್ನ ಹಣವನ್ನು ಬ್ಯಾಂಕ್‌ಗೆ ಕಟ್ಟುತ್ತೇವೆ, ನೀನು ಹೆದರಬೇಡ ಅನ್ನತಕ್ಕಂಥ ಅಭಯವನ್ನೇನಾದರೂ ನೀವು ರೈತರಿಗೆ ಕೊಟ್ಟಿದ್ದೀರಾ? ಇಡೀ ರಾಜ್ಯದಲ್ಲಿ ಸಣ್ಣ ರೈತರು ಎಷ್ಟು ಜನರಿದ್ದಾರೆ? ಕಬ್ಬು ಬೆಳೆಗಾರರು ಎಷ್ಟು ಜನ ಇದ್ದಾರೆ? ಬೇರೆಯವರು ಎಷ್ಟು ಜನ ಇದ್ದಾರೆ? ಎಂಬುದನ್ನು ಏನಾದರೂ ನೀವು ನೋಡಿದ್ದೀರಾ? ನೀವು ಇದು ಯಾವುದನ್ನೂ ನೋಡಿಲ್ಲ, ಇದರ ಬಗ್ಗೆ ಏನೂ ಮಾತಾಡಿಲ್ಲ ಸಭೆ ಅಥವಾ ಸಮಾರಂಭಗಳನ್ನು ನಡೆಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ರೈತರು ಇನ್ನು ಮೇಲೆ ಆತ್ಮಹತ್ಯೆ ಮಾಡಿಕೊಂಡರೆ ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ ಏಕೆ? ಎಂದು ನನಗೆ ಅರ್ಥವಾಗಲಿಲ್ಲ ನಿಮ್ಮ ರಾಜೀನಾಮೆಗೂ ಮತ್ತು ರೈತರ ಆತ್ಮಹತ್ಯೆಗೂ ಏನು ಸಂಬಂಧ? ರಾಜೀನಾಮೆ ಕೊಟ್ಟು ನೀವು ಓಡಿ ಹೋಗುತ್ತೀರಾ? ಅದಕ್ಕಾಗಿ ನಿಮಗೆ ಅಧಿಕಾರ ಸಿಕ್ಕಿದೆಯೇ? ಅದಕ್ಕಾಗಿಯೇ ಇಷ್ಟೊಂದು ಕಷ್ಟಪಟ್ಟು ಅಧಿಕಾರ ತೆಗೆದುಕೊಂಡಿದ್ದೀರಾ? ನೀವು ಇರಬೇಕು, ಇದ್ದು ಹೇಳಬೇಕು ನೀವು ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಬಾರದು ಮಾತಿಗೆ ಬೆಲೆ ಬೇಕು, ಮಾತಿಗೆ ಶಕ್ತಿ ಬೇಕು ರಾಜೀನಾಮೆ ಕೊಡುತ್ತೇನೆ ಎನ್ನುವುದಾದರೆ ರಾಜೀನಾಮೆಯನ್ನು ಕೊಟ್ಟುಬಿಡಬೇಕು ರಾಜೀನಾಮೆ ಕೊಡುತ್ತೇನೆಂದು ನೀವು ಏಕೆ ಹೇಳಬೇಕು? ಯಾವ ಉದ್ದೇಶದಿಂದ ಅದನ್ನು ಹೇಳುತ್ತಿದೀರಿ? ನೀವು ಆ ರೀತಿ ಹೇಳಬಾರದು ರಾಜೀನಾಮೆ ಕೊಡುತ್ತೇನೆ ಎಂದು ಹೇಳಬೇಕಾದರೆ, ಅತ್ಯಂತ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿ, ನಿಮ್ಮ ಕೈಯಲ್ಲಿ ಆಡಳಿತ ನಡೆಸುವುದಕ್ಕಾಗುವುದಿಲ್ಲ,

ನಿಮ್ಮ ಆಡಳಿತ ಸಂಪೂರ್ಣವಾಗಿ ನಾಶವಾಗಿದೆ, ನಿಮ್ಮಿಂದ ಆಡಳಿತ ನಡೆಸಲಿಕ್ಕೆ ಆಗುವುದಿಲ್ಲ ಎನ್ನುವಂತಹ ಪರಿಸ್ಥಿತಿ ಇದ್ದರೆ, ನಾನು ರಾಜೀನಾಮೆ ಕೊಡುತ್ತೇನೆ ಎಂಬ ಮಾತನ್ನು ನೀವು ಹೇಳಬೇಕು ತಾವು ಆ ಮಟ್ಟಕ್ಕೆ ಹೋಗಿ, ರೈತರ ಸಮಸ್ಯೆಗಳನ್ನು ಬಗೆಹರಿಸಿ ಎಂದು ಹೇಳಿದರೆ, ನಾನು ರಾಜೀನಾಮೆ ಕೊಡುತ್ತೇನೆ ಎನ್ನುವುದು ಇದೆಯಲ್ಲಾ, ಅದು ಎಷ್ಟರಮಟ್ಟಿಗೆ ಸಮಂಜಸ? ಯಾವ ಮುಖ್ಯಮಂತ್ರಿಗಳೂ ಸಹ ಆ ರೀತಿ ಹೇಳಿದ್ದನ್ನು ನಾನು ಕೇಳಿಲ್ಲ ಇದುವರೆಗೂ ನಾನು ನೋಡಿದಂತಹ ಯಾವ ಮುಖ್ಯಮಂತ್ರಿಗಳೂ ಸಹ, ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ ಎನ್ನುವಂತಹ ಮಾತನ್ನು ಆಡಿರಲಿಲ್ಲ ಅದಕ್ಕೇನು ಕಾರಣವಿಲ್ಲ ನೀವು ಆ ರೀತಿ ಹೇಳಿದ ಮೇಲೂ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸಲಿಲ್ಲ ನೀವು ಹೇಳಿದ ಮೇಲೂ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ ಇದು ನಿಜಕ್ಕೂ ಅತ್ಯಂತ ಅಪರಾಧ ಮತ್ತು ಅಪಾಯ ರಾಜ್ಯದ ಮುಖ್ಯಮಂತ್ರಿಗಳು ಆಗಿರತಕ್ಕಂಥವರು ಈ ರೀತಿ ಹೇಳತಕ್ಕದ್ದು ಒಳ್ಳೆಯ ಸೂಚನೆಯಲ್ಲ ಇನ್ನೊಂದು ವಿಚಾರವನ್ನು ನಾನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತಿದ್ದೇನೆ ಇನ್ನು ಕಾವೇರಿ ನೀರು ಏನು ಸ್ವಾಮಿ, ತಮಗೆ ಸಂತೋಷವಿದೆಯೇ? ನಮ್ಮ ರೈತರು ಚೆನ್ನಾಗಿದ್ದಾರೆಯೇ? ಕಾವೇರಿ ಮತ್ತು ಕಬಿನಿಯಿಂದ ನಿನ್ನೆ ನೀವು ನೀರು ಬಿಟ್ಟಿರಲ್ಲ, ಬಿಡಬಹುದೇ? ಕಬಿನಿ ತುಂಬಿಲ್ಲ, ಕಾವೇರಿ ತುಂಬಿಲ್ಲ, ಹೇಮಾವತಿಯೂ ತುಂಬಿಲ್ಲ ಆದರೂ ನೀವು ನೀರು ಬಿಟ್ಟಿರಲ್ಲ, ಬಿಡಬಹುದೇ? ಯಾರಿಗೋಸ್ಕರ? ಯಾವ ಕಾರಣಕ್ಕೆ? ನಮ್ಮ ರೈತರನ್ನು ಬೀದಿ ಪಾಲು ಮಾಡಿ ಅನ್ಯಾಯ ಮಾಡಿ, ಅವರನ್ನು ಕಡೆಗಣಿಸಿ ಕಾವೇರಿ ನೀರು ಬಿಟ್ಟಿರಿ ನಿನ್ನೆ ತಾವು ಮಂಡ್ಯದಲ್ಲಿ ಹೋಗುವಾಗ ಜನರು ತಮ್ಮನ್ನು ಸುತ್ತುವರೆದರು ಅದು ಪತ್ರಿಕೆಗಳಲ್ಲಿ ಬಂದಿದೆ ಇನ್ನು ನೀರನ್ನು ಬಿಡುವುದಿಲ್ಲವೆಂದು ಹೇಳಿದಿರಿ ಅಂದರೆ, ನೀರು ಬಿಟ್ಟಿರುವುದು ನಿಜ ಅದನ್ನು ನೀವು ಹೇಳಿದಿರಿ ನೀವು ಕಾವೇರಿ ನೀರನ್ನು ಬಿಟ್ಟಿದ್ದೀರೆಂದು ನಾನೂ ಹೇಳಿದ್ದೇನೆ ಕಾವೇರಿ, ಕಬಿನಿ, ಆಲಮಟ್ಟಿಯಲ್ಲಿರುವ ನೀರನ್ನು ಬಿಟ್ಟಿದ್ದೀರಿ ನಿಮಗೆ ನೀರು ಬಿಡಿ ಎಂದು ಹೇಳಿದವರು ಯಾರು? ಏನು ಪರಿಸ್ಥಿತಿ? ಮತ್ತು ಇದುವರೆಗೂ ಕಾವೇರಿ ಏನಾಯಿತು? ಮುಂದೆ ಏನು ಮಾಡುತ್ತೀರಿ? ನ್ಯಾಯಾಧಿಕರಣ ಏನಾಯಿತು? ಸರ್ವೋಚ್ಚ ನ್ಯಾಯಾಲಯದ್ದು ಏನು ಮಾಡಿದಿರಿ? ಅದರ ಬಗ್ಗೆ ಒಂದು ಚೂರು ಗಮನ ಕೊಟ್ಟಿಲ್ಲ

ಇವತ್ತಿನವರೆಗೂ ಈ ಸದನಕ್ಕೆ ತಿಳಿಸಲಿಲ್ಲ ಈ ಸದನವನ್ನು ನೀವು ನಂಬಿಕೆಗೆ ತೆಗೆದುಕೊಂಡಿಲ್ಲ ವಿರೋಧ ಪಕ್ಷವನ್ನು ನೀವು ನಂಬಿಕೆಗೆ ತೆಗೆದುಕೊಳ್ಳಲಿಲ್ಲ ಕಾವೇರಿ ಬಗ್ಗೆ ಇದುವರೆಗೂ ಏನು ಮಾಡಿದೀರಿ? ಏನು ಪರಿಸ್ಥಿತಿ? ದೆಹಲಿಯಲ್ಲಿ ಏನು ನಡೆಯಿತು? ಬೇರೆ ಕಡೆ ಏನು ಮಾಡಿದ್ದೀರಿ? ಏನಾದರೊಂದು ಇದುವರೆಗೂ ಆಗಿದೆಯೇ? ಈ ಸಂದರ್ಭದಲ್ಲಿ ಧರ್ಮಸಿಂಗ್‌ರವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಅನೇಕ ಬಾರಿ ವಿರೋಧ ಪಕ್ಷಗಳನ್ನು ನಂಬಿಕೆಗೆ ತೆಗೆದುಕೊಂಡು ದೆಹಲಿಗೆ ಹೋಗಿದ್ದೇವೆ ಸ್ವಲ್ಪ ಹೆಚ್ಚು-ಕಡಿಮೆ ಅವರು ಮುಖ್ಯಮಂತ್ರಿಯಾಗಿರುವವರೆಗೂ 20 ನಿಯೋಗಗಳು, 7-8 ನಿಯೋಗಗಳಿರಬಹುದು ಇವರು ಒಂದಕ್ಕೂ ಕರೆದುಕೊಂಡು ಹೋಗಿಲ್ಲವಲ್ಲ ಇವರಿಗೆ ವಿರೋಧ ಪಕ್ಷದವರ ಬಗ್ಗೆ ನಂಬಿಕೆಯೇ ಇಲ್ಲ ಈ ಸರ್ಕಾರಕ್ಕೆ ವಿರೋಧ ಪಕ್ಷದ ಬಗ್ಗೆ ನಂಬಿಕೆಯೇ ಇಲ್ಲ ಕನಿಷ್ಠ ಪಕ್ಷ ಯಡಿಯೂರಪ್ಪನವರಿಗಾದರೂ ನಂಬಿಕೆ ಬೇಡವೇ? ನೀವು ಇಲ್ಲಿದ್ದವರು, ಈ ಕಡೆ ಇದ್ದವರು, ಮಾನ್ಯ ಪ್ರಕಾಶ್‌ರವರು ತಾವು ಒಂದು ಸಲ ನಿವೃತ್ತಿಯಾಗುತ್ತೇನೆಂದು ಹೇಳಿದಾಗ ನನಗೆ ನೋವಾಯಿತು ತಕ್ಷಣ ನೀವು ಓದಿದಿರೋ ಇಲ್ಲವೋ ಗೊತ್ತಿಲ್ಲ ಪತ್ರಕರ್ತರು ನನ್ನನ್ನು ಕೇಳಿದರು ಮೌಲ್ಯಾಧಾರಿತ ರಾಜಕಾರಣದಲ್ಲಿರುವ ಕೆಲವೇ ರಾಜಕಾರಣಿಗಳಲ್ಲಿ ಮಾನ್ಯ ಪ್ರಕಾಶ್‌ರವರು ಒಬ್ಬರು ಅಂತಹವರೇ ನಿವೃತ್ತಿಯಾಗುವುದಾದರೆ, ಇದು ಪ್ರಜಾತಂತ್ರ ವ್ಯವಸ್ಥೆಗೆ ಅಪಾಯ ಎಂಬ ಮಾತನ್ನು ನಾನು ತಕ್ಷಣವೇ ಹೇಳಿದೆ ತಾವು ಅದನ್ನು ನೋಡಿದಿರೋ, ಇಲ್ಲವೋ, ಗೊತ್ತಿಲ್ಲ ನಾನು ಹೇಳಿದೆ ಈ ಪರಿಸ್ಥಿತಿ ಇರುವಾಗ ನೀವುಗಳು ಪ್ರಜಾತಂತ್ರ ವ್ಯವಸ್ಥೆ ಬಗ್ಗೆ

ಶ್ರೀ ಸಿದ್ದರಾಮಯ್ಯ ಅವರು ನಾಟಕ-ಗೀಟಕ ಮಾಡಿಕೊಂಡು ಇರಲೆಂದು ಹಾಗೆ ಹೇಳಿರಬೇಕು

ಶ್ರೀ ವಾಟಾಳ್‌ನಾಗರಾಜ್ ಅವರ ಅಧ್ಯಕ್ಷರು ಹೇಳಿದ್ದು ಆ ಭಾಷೆಯಲಲ್ಲ, ಆಕಾಶವೇನೂ ಬಿದ್ದುಹೋಗುವುದಿಲ್ಲವೆಂದರು ನಾನು ಆ ಪದವನ್ನು ಓದಿದ್ದೇನೆ ಪ್ರಕಾಶ್‌ರವರು ನಿವೃತ್ತರಾದರೆ ಆಕಾಶವೇನೂ ಬಿದ್ದುಹೋವುದಿಲ್ಲವೆಂದರು ಬಹುಶಃ ಅವರು ಯಾವ ಕೋಪ-ತಾಪದಲ್ಲಿ ಹೇಳಿದರೋ? ಒಳ್ಳೆಯ ಮಾತುಗಳಲ್ಲಿ ಹೇಳಿದರೋ ಗೊತ್ತಾಗಲಿಲ್ಲ ಅಥವಾ ಇವರ ಮೇಲೆ ಪ್ರೀತಿಗೆ ಹೇಳಿದರೋ? ಇದ್ದರೂ ಇರಬಹುದು ಪ್ರೀತಿಗೆ

ಆ ಮಾತುಗಳನ್ನು ಹೇಳಿದ್ದರೂ ಹೇಳಿರಬಹುದು ಪ್ರಕಾಶ್‌ರವರು ಹೋದರೆ ಆಕಾಶವೇನೂ ಬಿದ್ದುಹೋಗುತ್ತದೆಯೇ? ಏನೂ ಇಲ್ಲ ಆದರೂ ಇಷ್ಟೆಲ್ಲಾ ಮಾತುಗಳನ್ನು ಹೇಳಿದರೂ ಪ್ರಕಾಶ್‌ರವರು ಮೌನವಾಗಿದ್ದರು ನಿಜಕ್ಕೂ ಅದನ್ನು ನಾನು ಒಪ್ಪುತ್ತೇನೆ ಏಕೆಂದರೆ, ತಿರುಗಿ ಆ ಮಾತನ್ನು

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಒಪ್ಪದಿದ್ದರೂ ಅವರು ಹಾಗೇ ಇರುತ್ತಾರೆ ಇವರು ಒಪ್ಪಿದರೂ ಹಾಗೇ ಇರುತ್ತಾರೆ, ಒಪ್ಪದಿದ್ದರೂ ಅವರು ಹಾಗೇ ಇರುತ್ತಾರೆ

ಶ್ರೀ ಎಂ ಪಿ ಪ್ರಕಾಶ್ ಪ್ರಕೃತಿ ವಿಕೋಪದ ಬಗ್ಗೆ ಪ್ರಸ್ತಾಪಿಸುತ್ತಿದ್ದುದ್ದನ್ನು ಬಿಟ್ಟು ಎಲ್ಲೆಲ್ಲಿಗೋ ಹೋಗುತ್ತಿದ್ದೀರಿ

ಶ್ರೀ ಸಿದ್ದರಾಮಯ್ಯ ನಿಮ್ಮ ಪ್ರಕೃತಿ ವಿಕೋಪವಾಗಿದೆ ಅದರ ಬಗ್ಗೆಯೇ ಮಾತನಾಡುತ್ತಿರುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಪ್ರಕೃತಿಯಲ್ಲ, ನಿಮ್ಮ ಪರಿಸ್ಥಿತಿಯೇ ವಿಕೋಪಕ್ಕೆ ಹೋಯಿತಲ್ಲ!

ಶ್ರೀ ಎಂ ಪಿ ಪ್ರಕಾಶ್ ನಾವು ಬಹಳ ಸಲ ಹೇಳಿದ್ದೇವೆ ಈ ತರಹದ ಸಂತಾಪ ಬೇಕಾಗಿಲ್ಲ ಇದು ತೋರಿಕೆಗೆ ಇರುವಂಥಾದ್ದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಪ್ರಕಾಶ್‌ರವರೆ, ನಿಮ್ಮ ಬಗ್ಗೆ ನಾವ್ಯಾರೂ ಆ ರೀತಿ ಮಾತನಾಡುವುದಿಲ್ಲ, ಆ ರೀತಿಯ ಭಾವನೆಯನ್ನೂ ಇಟ್ಟುಕೊಂಡಿಲ್ಲ ನಾವು ತೋರಿಕೆಗೆ ಹೇಳುವುದಿಲ್ಲ ನಿಮ್ಮಂತಹವರು ರಾಜಕಾರಣದಲ್ಲಿ ಇರಬೇಕೆಂದು ಬಯಸತಕ್ಕಂಥವರು ನಾವು

ಶ್ರೀ ಎಂ ಪಿ ಪ್ರಕಾಶ್ ಅನುಕಂಪ ತೋರಿಸುವುದರಲ್ಲೂ ಕೂಡ ಬೇರೆ ಬೇರೆ ರೀತಿಯ ಬಹಳ ಉದ್ದೇಶಗಳೂ ಇರುತ್ತವೆ, ಇರುವುದಿಲ್ಲವೆಂದು £Á£À ¤ÃªÀ ÀªÀ ®è E ° è£Á£À PÀqÀ ¤Ãz ÉÃE Nobody is inevitable ಎಂದು ನಾನೂ ಕೂಡ ಹೇಳಿದ್ದೇನೆ

ಶ್ರೀ ಸಿದ್ದರಾಮಯ್ಯ ನೀವು ಈ ರೀತಿ defend ಮಾಡಿಕೊಂಡರೆ ಹೇಗೆ? ನೀವು ಎಷ್ಟೇ defend ಮಾಡಿಕೊಂಡರೂ ಕೂಡ ನಿಮ್ಮ ಅಂತರಂಗದ ಪರಿಸ್ಥಿತಿ ಇದೆಯಲ್ಲ, ಆ ಒಳ ನೋವು ಇದೆಯಲ್ಲ, ಅದು ಜನರಿಗೆ ಅರ್ಥವಾಗಿಬಿಟ್ಟಿದೆ

ಶ್ರೀ ಎಸ್ ಎಸ್ ಪಾಟೀಲ್ ಅವರ ಒಳ ನೋವು ಏನೆಂದು ನಿಮಗೂ ಅವರಿಗೂ, ಇಬ್ಬರಿಗೂ ಗೊತ್ತಿದೆ ಮತ್ತಾರಿಗೆ ಗೊತ್ತಿದೆ? ಬೇರೆಯವರಿಗೆ ಗೊತ್ತಾಗಬೇಕಲ್ಲ

ಶ್ರೀ ವಾಟಾಳ್‌ನಾಗರಾಜ್ ಪ್ರಕಾಶ್‌ರವರೆ, ನಾನು ನಿಮ್ಮ ಬಗ್ಗೆ ಪ್ರಾಮಾಣಿಕವಾಗಿ ಹೇಳತಕ್ಕಂಥ ಮಾತು ಬೇಕಾದರೆ ನೀವು ದೇವರನ್ನು ನಂಬುತ್ತೀರೋ, ಇಲ್ಲವೋ, ಗೊತ್ತಿಲ್ಲ ಎಷ್ಟು ದೇವರುಗಳನ್ನು ಪ್ರಮಾಣ ಮಾಡು ಎಂದರೂ ನಾನು ಇಲ್ಲಿ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ನಂಬದೇ ಇರುವವರು ಏಕೆ ಪ್ರಮಾಣ ಮಾಡುತ್ತಾರೆ ಎಂಬುದೇ ಇಲ್ಲಿ ಈಗ ಪ್ರಶ್ನೆಯಾಗಿದೆ

ಶ್ರೀ ವಾಟಾಳ್‌ನಾಗರಾಜ್ ಅವರು ನಂಬಿದರೆ

ಶ್ರೀ ಸಿದ್ದರಾಮಯ್ಯ ಮೊದಲು ನಿಮಗೆ ನಂಬಿಕೆ ಇದೆಯೇ?

ಶ್ರೀ ವಾಟಾಳ್‌ನಾಗರಾಜ್ ನಾನು ಅದಕ್ಕೆ ತಯಾರಾಗಿಲ್ಲ ಅವರು ನಂಬಿದರೆ 36 ಸಾವಿರವೋ, 38 ಸಾವಿರವೋ ದೇವರುಗಳಿವೆಯಲ್ಲ, ಅಷ್ಟರ ಮೇಲೂ ಬೇಕಾದರೆ ಕೈಮುಟ್ಟಿ ಹೇಳುತ್ತೇನೆ, ಅದರ ಬಗ್ಗೆ ಏನೂ ಚಿಂತೆ ಇಲ್ಲ ನೀವು ತಕ್ಷಣ ನಮ್ಮ ಮನಸ್ಸಿನ ಧೋರಣೆಯನ್ನು ಈ ತರಹ ತಿಳಿದುಕೊಂಡರೆ ನಮಗೆ ನಿಜಕ್ಕೂ ದುಃಖವಾಗುತ್ತದೆ ಅದು ಆಗಬಾರದು ನಿಮ್ಮ ಬಗ್ಗೆ ನಮಗೆ ಪ್ರಾಮಾಣಿಕವಾದ ಗೌರವವಿದೆ ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ ಸಮ್ಮಿಶ್ರ ಸರ್ಕಾರ ಬಂದು 17 ತಿಂಗಳುಗಳಾದವು 300 ರೈತರ ಆತ್ಮಹತ್ಯೆ ಆಗಿವೆ ಹಿಂದೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಯಡಿಯೂರಪ್ಪನವರೆ, ಏನು ನಿಮ್ಮ ಆರ್ಭಟ? ನಿಮ್ಮ ಭಾಷೆಗಳು, ಆ

ಪ್ರಲಾಪಗಳು, ರೋಷ, ಅವೆಲ್ಲವೂ ಎಲ್ಲಿ ಹೋದವು? ನೀವು ಬೃಹನ್ನಳೆ ಆಗಿದ್ದೀರಲ್ಲ!? ಮಹಾಭಾರತದಲ್ಲಿ ಅರ್ಜುನ ಏನಾಗುತ್ತಾನೆ? ಅವರು ಅರ್ಜುನನಂತೆ ಅವರ ಪರಿಸ್ಥಿತಿ ಏನು? ಏಕೆ ಹೀಗಾಯಿತು? ಮುಖ್ಯಮಂತ್ರಿ ಪದವಿ ಬರುತ್ತದೆ, ಹೋಗುತ್ತದೆ, ಏನಿದು? ನಾವೆಲ್ಲರೂ ಇದ್ದೇವೆ, ನೀವು ತಲೆ ಕೆಡಿಸಿಕೊಳ್ಳಬೇಡಿ

ಶ್ರೀ ಜೆ ಸಿ ಮಾಧುಸ್ವಾಮಿ ಇವರು ಎಲ್ಲರಿಗೂ ಹೀಗೇ ಹೇಳುತ್ತಾರೆ ಧರ್ಮಸಿಂಗ್ ಸಾಹೇಬರಿಂದಿಡಿದು ಎಲ್ಲರಿಗೂ ಇದೇ ರೀತಿ ಹೇಳಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ನಾನು ಹೇಳಿದ್ದನ್ನು ಇವರಿಬ್ಬರೂ ಹಾಳು ಮಾಡುತ್ತಾರೆ ನಾನು ಏನೋ ನಿಮಗೆ ಹೇಳಬೇಕೆನ್ನುತ್ತೇನೆ ಆದರೆ, ಬಲಗಡೆ ಮಾಧುಸ್ವಾಮಿ, ಎಡಗಡೆ ಶ್ರೀರಾಮರೆಡ್ಡಿ ಇರುವುದರಿಂದ ಇವರು ಹಾಳು ಮಾಡುತ್ತಾರೆ ರಾಜೇಂದ್ರನ್‌ರವರು ನನಗೆ support ಮಾಡುತ್ತಾರೆ ಹೆಗ್ಡೆಯವರೂ ಸ್ವಲ್ಪ ಹೆಚ್ಚು-ಕಡಿಮೆ support ಮಾಡುತ್ತಾರೆ

ಶ್ರೀ ಸಿದ್ದರಾಮಯ್ಯ ಇದು ವಾಡಿಕೆ ನನಗೂ ಹೇಳಿದ್ದಾರೆ ನನಗೆ ಹೇಳಿ ನಿಜವಾಗಿಯೂ ನನ್ನ ಜೊತೆ ಇದ್ದಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಾಗರಾಜ್‌ರವರೆ, ನಿಮಗೆ ಅವಕಾಶ ಬಂದರೆ ನಿಮಗೆ ಬೆಂಬಲ ಕೊಡುತ್ತಾರೆ, ಅವರಿಗೆ ಅವಕಾಶ ಬಂದಾಗ ಅವರಿಗೆ ಕೊಡುತ್ತಾರೆ

ಶ್ರೀ ವಾಟಾಳ್ ನಾಗರಾಜ್ ಯಡಿಯೂರಪ್ಪನವರನ್ನು ಪ್ರಶಂಸೆ ಮಾಡಲೇಬೇಕಾಗುತ್ತದೆ ಅದನ್ನು ತಳ್ಳಿ ಹಾಕುವುದಕ್ಕೆ ಸಾಧ್ಯವಿಲ್ಲ ಅದರ ಬಗ್ಗೆ ಬೇರೆಯವರು ಏನೇ ಹೇಳಿದರೂ ಅವರಿಗೆ ಶಕ್ತಿ ಇದೆ ಬೆಳೆಸಿದ್ದಾರೆ, ಎಲ್ಲವನ್ನೂ ಮಾಡಿದ್ದಾರೆ ಯಡಿಯೂರಪ್ಪನವರು ಇಲ್ಲದಿದ್ದರೆ, ಇವರೆಲ್ಲರೂ ಮಂತ್ರಿಗಳಾಗುವುದಕ್ಕೆ ಸಾಧ್ಯವಿತ್ತೇ? ಆಗುತ್ತಿರಲಿಲ್ಲ ಅದೆಲ್ಲವನ್ನು ತಮಗಿರುವ ಶಕ್ತಿಯಿಂದ ಮಾಡಿದ್ದಾರೆ ಆದರೆ, ಮೌನವೇಕೆ? ಅದಕ್ಕೆ ನಾನು ಮಹಾಭಾರತದಲ್ಲೇ ಅಂತಹ ವೀರಾಧಿವೀರ ಅರ್ಜುನ, ಅವನ ಪರಿಸ್ಥಿತಿ ಬೃಹನ್ನಳೆ ಆ ಪರಿಸ್ಥಿತಿ ನೀವು ಆಗಿದೀರಿ ಎನ್ನತಕ್ಕಂಥ ವಾಸ್ತವಾಂಶವನ್ನು ಅತ್ಯಂತ ಗಂಭೀರವಾಗಿ ಹೇಳುತ್ತಿದ್ದೇನೆ ಆದುದರಿಂದ, ಮಾನ್ಯ

ಯಡಿಯೂರಪ್ಪನವರೆ, ಈ ರೈತರ ಆತ್ಮಹತ್ಯೆ ನಿಮಗೆ ಗೊತ್ತಾಗಲಿಲ್ಲವೇ? ನಿಮಗೆ ತಿಳಿದಿಲ್ಲವೇ? ಇದು ಯಾರಿಗೂ ಗೊತ್ತಿಲ್ಲವೇ? ಜಗದೀಶ್ ಶೆಟ್ಟರ್, ನೀವೇ ಹೇಳಿರುವುದು ಅಂದರೆ, 1-1 ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನು ಅಷ್ಟಕ್ಕೇ ಬಿಟ್ಟುಬಿಟ್ಟಿರಾ? 1 ಲಕ್ಷ ರೂಪಾಯಿ ಒಬ್ಬ ರೈತನ ರೇಟು! ಈ ರಾಜ್ಯದಲ್ಲಿ ವ್ಯಾಪಾರವೇ? ಒಬ್ಬ ರೈತ ಸತ್ತರೆ 1 ಲಕ್ಷ ರೂಪಾಯಿ ಯಾರಾದರೂ ಸಾಯಲಿ, 1 ಲಕ್ಷ ರೂಪಾಯಿ ಘೋಷಿಸುವುದು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಕಾರ್ಯಾಲಯಗಳ ಮುಂದೆ ಒಬ್ಬ ರೈತ ಸತ್ತರೆ, ಈ ರೀತಿ ಸತ್ತರೆ, 1 ಲಕ್ಷ, ಇಷ್ಟು ರೇಟು ಎಂದು ಒಂದು ಪಟ್ಟಿ ಮಾಡಿ ಬಿಡಿ ಸಮ್ಮಿಶ್ರ ಸರ್ಕಾರದ ಆದ್ಯ ಕೊಡುಗೆ ಎಂದು ಒಂದು ರೇಟು ಹೇಳಿಬಿಡಿ ಸ್ವಾಮಿ ಇದರಿಂದ ಸತ್ತು ಸ್ವರ್ಗದಲ್ಲಿರುತ್ತಾರಲ್ಲ, ಕನಿಷ್ಠ ಆ ರೈತರ ಆತ್ಮಕ್ಕಾದರೂ ಶಾಂತಿ ಸಿಗುತ್ತದೆ 1 ಲಕ್ಷ ಕೊಟ್ಟಿದ್ದೇವೆ, ಗಯಾಳುಗಳಿಗೆ 50,000 ರೂಪಾಯಿಗಳನ್ನು ಕೊಟ್ಟಿದ್ದೇವೆ, ಮಿಕ್ಕವರಿಗೆ 25,000 ರೂಪಾಯಿಗಳನ್ನು ಕೊಟಿದ್ದೇವೆಂದು ಇಲ್ಲಿ ಕುಳಿತುಕೊಂಡು ಹೇಳಿ ಬಿಡುತ್ತೀರಾ? ಒಬ್ಬ ರೈತನ ಜೀವ, ಒಬ್ಬ ಮನುಷ್ಯನ ಜೀವ 1 ಲಕ್ಷ ರೂಪಾಯಿಗೆ? ಇದು ನ್ಯಾಯವೇ? ಇದರ ಬಗ್ಗೆ ನೀವು ಗಂಭೀರವಾಗಿ ಚಿಂತನೆ ಮಾಡಿದ್ದೀರಾ? ರೈತನ ಆತ್ಮಹತ್ಯೆ ತಡೆಯುವುದಕ್ಕೆ ನಿಮ್ಮಲ್ಲಿ ಏನು ಕ್ರಮವಿದೆ? ಯಾವ ಚಿಂತನೆ ನಡೆಸಿದ್ದಿರಿ? ಇದು ಒಳ್ಳೆಯದಲ್ಲ, ರೈತನ ಪಾಪದ ಜ್ವಾಲೆಗೆ, ಸತ್ತಿರುವ ರೈತರ ಪಾಪದ ಕೂಪಕ್ಕೆ ನೀವು ಹೋಗುತ್ತೀರಿ, ಉಳಿಯುವುದಿಲ್ಲ ಅದರಲ್ಲೂ ನಾನೇಕೆ ಇದರ ಬಗ್ಗೆ ಒತ್ತಿ ಹೇಳುತ್ತೇನೆಂದರೆ, ಇಡೀ ರಾಜ್ಯಾದ್ಯಂತ ರೈತರು ಎಂದು ಹೇಳಿಕೊಂಡು ಸುತ್ತಾಡಿದಿರಲ್ಲ, ನೀವು ಇಲ್ಲಿ ಹೆಜ್ಜೆಹೆಜ್ಜೆಗೂ ಏನು ಕೂಗಾಡಿದಿರಿ, ನಿಮ್ಮ ಹಳೆಯ ಭಾಷಣಗಳನ್ನು ತಂದಿಟ್ಟರೆ, 10,000 ಪುಟಗಳಷ್ಟು ಬೃಹತ್ ಪುಸ್ತಕ ಸಿದ್ಧ ಪಡಿಸಬಹುದು ನೀವು ಏನು ಮಾಡಿದಿರಿ? ಇದರ ಜೊತೆಗೆ, ಪರಿಹಾರದ ಬಗ್ಗೆ ನೀವು ಏನು ಹೇಳಿದಿರಿ? ಮುಖ್ಯಮಂತ್ರಿಗಳು ಒಂದು ಕಡೆ, ಮಂತ್ರಿಗಳು ಒಂದು ಕಡೆ, ಸಿದ್ದರಾಮಯ್ಯನವರೆ, ಮೊನ್ನೆ ರಾಮನಗರದಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ 1,000 ಕೋಟಿ ರೂಪಾಯಿಗಳ ಸಮಗ್ರ ಅಭಿವೃದ್ಧಿ

ಶ್ರೀ ಎಸ್ ಸಿದ್ದರಾಮಯ್ಯ ಒಂದು ಸಾವಿರ ಕೋಟಿ ರೂಪಾಯಿ ಸುಮ್ಮನೆ ಅಭಿವೃದ್ಧಿ ಎಂದರೆ ರಾಮನಗರದಲ್ಲಿ ನಂಜುಂಡಪ್ಪನವರ ವರದಿ ಪ್ರಕಾರ ಅಭಿವೃದ್ಧಿ ಮಾಡುತ್ತಾರಾ?

ಶ್ರೀ ವಾಟಾಳ್ ನಾಗರಾಜ್ ಚಾಮರಾಜನಗರಕ್ಕೆ ಬಂದರು 392 ಕೋಟಿ, ಹಾಸನಕ್ಕೆ ಹೋದರು 480 ಕೋಟಿ ಹೀಗೆ ಕೋಟಿಗಳು ನಿಮ್ಮ ಬಜೆಟ್ ಮಂಡಿಸಿರುವ ಹಣಕಾಸು ಎಷ್ಟು, ನೀವು ರಾಜ್ಯದ ಜನರಿಗೆ ಹೇಳುತ್ತಿರುವುದು ಏನು? ಎಷ್ಟು ಹಣ ನಿಮ್ಮಲ್ಲಿದೆ? ಇಷ್ಟೆಲ್ಲಾ ಇದ್ದರೂ ನೀವು ಎಲ್ಲಾದರೂ ಒಂದು ಕಡೆ ನೀವು ಹಾಗೆಲ್ಲಾ ಹೇಳುವುದಕ್ಕೆ ಹೋಗಬೇಡಿ, ನಾನು ಹಣಕಾಸಿನ ಸಚಿವನಾಗಿ ಬಿಡುಗಡೆ ಮಾಡಿರುವ ಹಣ ಇಷ್ಟು ನೀವು ಈ ರೀತಿ ಹೇಳಿಬಿಟ್ಟರೆ ಗತಿ ಏನು ಎಂದು ಹೇಳಬೇಕು ಈ ಪರಿಸ್ಥಿತಿ ಏನು? ಇದು ಒಳ್ಳೆಯ ಸೂಚನೆ ಅಲ್ಲ ಸತ್ತ ರೈತನ ಬಗ್ಗೆ ಹೇಳುತ್ತಿದ್ದೇನೆ ಹಿಂದೆ ಈ ರೈತನಿಂದಲೇ ಅನೇಕ ಸರ್ಕಾರಗಳು ಉರುಳಿ ಹೋಗಿವೆ ಬೆಂಗಳೂರಿನಲ್ಲಿ ನಾಯಿ ಕಚ್ಚಿ ಒಬ್ಬ ಮನುಷ್ಯ ಸತ್ತರೆ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು ರೈತನಿಗೆ ಒಂದು ಲಕ್ಷ ರೂಪಾಯಿ ಈ ನಮ್ಮ ರಾಜ್ಯ ಸರ್ಕಾರದ ವೈಖರಿ ಮತ್ತು ಆಡಳಿತ ಹೇಗಿದೆ? ಇದು ಸರಿಯಾ? ಇದು ನನಗೆ ಅರ್ಥವಾಗುತ್ತಿಲ್ಲ ನಿಮಗೆ ಮತ್ತು ನಿಮ್ಮ ಸರ್ಕಾರಕ್ಕೆ ರೈತನ ಆತ್ಮಹತ್ಯೆಯನ್ನು ತಡೆಯುವುದಕ್ಕೆ ಆಗಲಿಲ್ಲವೆಂದರೆ, ರೈತನ ಸಮಸ್ಯೆ ಬಗೆಹರಿಸುವುದಕ್ಕೆ ಆಗಲಿಲ್ಲವೆಂದರೆ, ಒಂದು ನಿಮಿಷ ಈ ರಾಜ್ಯದಲ್ಲಿ ನೀವು ಅಧಿಕಾರದಲ್ಲಿ ಇರುವುದಕ್ಕೆ ನಿಮಗೆ ಅಧಿಕಾರ ಇಲ್ಲ ಮುಂದೆ ಚುನಾವಣೆ ಬರಲಿ, ರಾಜ್ಯಪಾಲರ ಆಡಳಿತ ಬರಲಿ, ನಾನು ರಾಜ್ಯಪಾಲರ ಆಡಳಿತವನ್ನು ವಿರೋಧ ಮಾಡುವವನು ಆದರೂ ನಿಮ್ಮ ಈ ಸಮ್ಮಿಶ್ರ ಸರ್ಕಾರದ ವ್ಯವಸ್ಥೆಗಿಂತ ಇದು ಉತ್ತಮ ದಿನಕ್ಕೊಬ್ಬರು ಒಂದೊಂದು ತರಹ ಮಾತನಾಡುತ್ತಾರೆ ಬಾಯಿ ಭದ್ರ ಇಲ್ಲ ನಾಲಿಗೆ ಭದ್ರ ಇಲ್ಲ ನೀತಿ ನಿಯಮ ಇಲ್ಲ ಸತ್ಯಸಂಧತೆ ಇಲ್ಲ ಹುಚ್ಚಾಬಟ್ಟೆ ಮಾತನಾಡುತ್ತಿದ್ದಾರೆ ನನಗೆ ಅರ್ಥವಾಗುತ್ತಿಲ್ಲ ಸಮ್ಮಿಶ್ರ ಸರ್ಕಾರ ಹುಚ್ಚಾಸ್ಪತ್ರೆ ಆದ ಹಾಗಾಗಿದೆ ಒಬ್ಬೊಬ್ಬರು ಒಂದೊಂದು ತರಹ ಮಾತನಾಡುತ್ತಾರೆ ಯಾರು ಏನು ಮಾತನಾಡುತ್ತಾರೋ ಉತ್ತರ ಕೊಡುವವರು ಯಾರೋ, ಎಲ್ಲಿ ಉತ್ತರ ಕೊಡಬೇಕು, ಯಾರು ಉತ್ತರ ಕೊಡಬೇಕು, ಜನರಿಗೂ ಬುದ್ದಿ ಕೆಟ್ಟು ಹೋಗಿದೆ ಏನಿದು, ಒಬ್ಬ ಮಂತ್ರಿ ಹೀಗೆ ಹೇಳುತ್ತಾರೆ, ಇನ್ನೊಬ್ಬ ಮಂತ್ರಿ ಹೀಗೆ ಹೇಳುತ್ತಾರೆ, ಈ ಪರಿಸ್ಥಿತಿ ನಿರ್ಮಾಣವಾಗಿದೆ ಇದು ಜನರು ಆಡತಕ್ಕಂತಹ ಮಾತು ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಪ್ರಕಾಶ್‌ರವರೇ, ಮಾನ್ಯ ಶೆಟ್ಟರ್‌ರವರೇ, ಬಹಳ ಹಿರಿಯರಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾಗಿದ್ದವರು, ಅಧಿಕಾರ ಬರುತ್ತದೆ ಹೋಗುತ್ತದೆ, ಬಹಳ ಮುಚ್ಚು ಮರೆಯಿಲ್ಲದೇ ಮಾತನಾಡೋಣ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಬೀಚಿಯವರು ಒಂದು ಮಾತನ್ನು ಹೇಳುತ್ತಾರೆ ಹುಚ್ಚು ಆಸ್ಪತ್ರೆಯಲ್ಲಿ ಯಾರ್ಯಾರು ಸೇರಿದ್ದಾರೆ, ಅವರು ಗುಣಮುಖರಾಗುತ್ತಾರೆ ಎಂದು ಅದರ ಅರ್ಥ ಯಾರು ಹೊರಗಡೆ ಇದ್ದಾರೆ ಅವರು ಗುಣಮುಖರಾಗುವುದಿಲ್ಲವೆಂದು ಜನ ಹೊರಗಡೆ ಬಿಟ್ಟು ಬಿಟ್ಟಿದ್ದಾರೆ ನೀವು ಗುಣಮುಖರಾಗುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ ನಿಮ್ಮ ಸರ್ಕಾರ ಹುಚ್ಚು ಆಸ್ಪತ್ರೆ ಎಂದು ನೀವು ಒಪ್ಪಿಕೊಂಡಿದ್ದೀರಿ ಹುಚ್ಚು ಆಸ್ಪತ್ರೆ ಎಂದು ಎಲ್ಲಾ ರೀತಿಯಲ್ಲಿಯೂ ಒಪ್ಪಿಕೊಂಡ ಹಾಗಾಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಾಗಾದರೆ ಎಲ್ಲರನ್ನೂ ಕರೆದುಕೊಂಡು ಹೋಗಿ ಅಲ್ಲಿ ಸೇರಿಸಿಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಪ್ರಕಾಶ್‌ರವರು ಹುಚ್ಚು ಆಸ್ಪತ್ರೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ ಸಂತೋಷ ನಾವು ಇಲ್ಲಿ ಹುಚ್ಚರಾಗಿರು ತ್ತೇವೋ ಇಲ್ಲವೋ ಅದು ಬೇರೆ ಹುಚ್ಚು ಆಸ್ಪತ್ರೆಯಲ್ಲಿರುವವರು ಗುಣಮುಖರಾಗುತ್ತಾರೆ ಎಂದು

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ದಯವಿಟ್ಟು ಆ ಹುಚ್ಚು ಆಸ್ಪತ್ರೆಗೆ ನೀವು ಡಾಕ್ಟರ್ ಆಗಿ ಹೋಗಬೇಡಿ

ಶ್ರೀ ವಾಟಾಳ್ ನಾಗರಾಜ್ ನಾವೆಲ್ಲಾ ಡಾಕ್ಟರ್‌ಗಳಾಗಿ ಒಟ್ಟಿಗೆ ಹೋಗೋಣ ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಕೊಟ್ಟಿರುವ ಮಾಹಿತಿ ಪ್ರಕಾರ 39 ಪ್ರಾಣ ಹಾನಿ ಆಗಿವೆ ಜಾನುವಾರುಗಳು 2158 24,618 ಮನೆಗಳು ಕುಸಿದಿವೆ 5558 ಹೆಕ್ಟೇರ್ ಭೂಮಿಯಲ್ಲಿನ 478 ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ ಇದನ್ನು ತಾವು ಹೇಳಿದ್ದೀರಿ,ಈ ದೃಷ್ಟಿಯಿಂದ ಕೇಂದ್ರದಿಂದ ನಿಮಗೆ ಎಷ್ಟು ಹಣ ಬಂದಿತು, ಕೇಂದ್ರಕ್ಕೆ ನೀವು ನಮ್ಮ ನಿಯೋಗ ಕರೆದುಕೊಂಡು ಹೋಗದೇ ಇದ್ದರೂ ಚಿಂತೆ ಇಲ್ಲ ನೀವು ಹೋಗಿ ಕೇಂದ್ರದಿಂದ ನಿಮಗೆ ಎಷ್ಟು ಹಣ ಬಂದಿದೆ, ಎಷ್ಟು ಬಿಡುಗಡೆ ಮಾಡಿದ್ದೀರಿ, ರಾಜ್ಯದ ಹಣ ಎಷ್ಟು, ಅವರ ಪರಿಸ್ಥಿತಿ ಏನು, ಖಾಯಂ ಬರಗಾಲ ಮತ್ತು ಖಾಯಂ ಮಳೆ ಹಾನಿ, ಅದರಲ್ಲಿಯೂ

ಉತ್ತರ ಕರ್ನಾಟಕ ಬೆಳಗಾವಿ, ರಾಯಚೂರು, ಗುಲ್ಬರ್ಗ, ಬೀದರ್ ಮತ್ತು ಉತ್ತರ ಕರ್ನಾಟಕ ಉತ್ತರ ಕರ್ನಾಟಕದ ಜನತೆ ನಿಜವಾಗಿಯೂ ಬಹಳ ಕಣ್ಣೀರಿನಲ್ಲಿ ಬದುಕುತ್ತಿದ್ದಾರೆ, ಅದು ನರಕವಾಗಿದೆ ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಜನ ನರಕದಲ್ಲಿ ಬದುಕುತ್ತಿದ್ದಾರೆ ನರಕದಲ್ಲಿ ಬದುಕುವವರಿಗೆ ನೀವು ಎಲ್ಲಾದರೂ ಒಂದು ಕಡೆ ಆಸರೆ ಕೊಡಬೇಕು ಏನು ಮಾಡಿದ್ದೀರಿ ನೀವು? ನಿಮ್ಮಲ್ಲಿ ಜನ ಬದುಕುವುದಕ್ಕೂ ನೀವು ಆಶ್ರಯ ಕೊಡುತ್ತಿಲ್ಲ ಆಹಾರ ಕೊಡುತ್ತಿಲ್ಲ, ಮನೆ ಕೊಡುತ್ತಿಲ್ಲ ಅವರ ಬೇಡಿಕೆ ಈಡೇರಿಸುತ್ತಿಲ್ಲ ನಂಜುಂಡಪ್ಪ ವರದಿಯನ್ನು ಮೂಲೆಗುಂಪು ಮಾಡಿದಿರಿ ನಂಜುಂಡಪ್ಪ ವರದಿಯನ್ನು ಕಸದ ತೊಟ್ಟಿಗೆ ಹಾಕಿದ್ದೀರಿ ಏನು ನೀವು ನಂಜುಂಡಪ್ಪನವರ ವರದಿಗೆ ಮಾಡಿರುವುದು? ನೀವು ಹೇಳಿದಿರಿ, 1500 ಕೋಟಿ ರೂಪಾಯಿಗಳ ಬಿಡುಗಡೆ, ರವೀಂದ್ರ ಅವರ ಸಮಿತಿ ಮಾಡಿದಿರಿ, ಅದೂ ಇಲ್ಲ ಏನು ಮಾಡಿದಿರಿ ನೀವು, ಎಲ್ಲಿ ಕೊಟ್ಟಿದ್ದೀರಿ? ನಂಜುಂಡಪ್ಪನವರ ವರದಿ ಸಂಪೂರ್ಣ ಸಮಾಧಿಗೆ ಹೋಗಿದೆ ನಂಜುಂಡಪ್ಪನವರ ವರದಿ ಎಲ್ಲಿದೆ, ಏನು ಮಾಡಿದ್ದೀರಿ, ಇಡೀ ಉತ್ತರ ಕರ್ನಾಟಕದ ಜನ ಆ ತಾರತಮ್ಯದ ಬಗ್ಗೆ ಮುಂದೆ ದೊಡ್ಡ ಯುದ್ಧ ಮಾಡುತ್ತಾರೆ ಸಮರವನ್ನು ಸಾರುತ್ತಾರೆ ಹುಷಾರಾಗಿರಿ ಅದನ್ನು ನೀವು ತಡೆದುಕೊಳ್ಳುವುದಕ್ಕಾಗುವುದಿಲ್ಲ ಪಕ್ಕದಲ್ಲಿಯೇ ಆಂಧ್ರದಲ್ಲಿ ತೆಲಂಗಾಣ ಪ್ರಾರಂಭವಾಯಿತು ಅದೇ ಪರಿಸ್ಥಿತಿ ಕರ್ನಾಟಕದಲ್ಲಿ ಆಗುತ್ತದೆ ಮಾನ್ಯ ಯಡಿಯೂರಪ್ಪನವರೇ, ಅದಕ್ಕೆ ನಾವು ನೀವೆ ಕಾರಣಕರ್ತರಾಗುತ್ತೇವೆ ಸರ್ಕಾರ ಕಾರಣಕರ್ತವಾಗುತ್ತದೆ ಉತ್ತರ ಕರ್ನಾಟಕದಲ್ಲಿ ಕಣ್ಣೀರಿನ ಕತೆಯ ಪರಿಸ್ಥಿತಿ ನಿರ್ಮಾಣವಾಗಿದೆ ಇದು ಸರಿಯಾದ ವ್ಯವಸ್ಥೆ ಅಲ್ಲ ನಂಜುಂಡಪ್ಪ ವರದಿ ಬಗ್ಗೆ ನೀವು ಈ ಸದನದ ಮುಂದೆ ಒಂದು ಶ್ವೇತ ಪತ್ರ ಹೊರಡಿಸಬೇಕು ಎಷ್ಟು ಮಾಡಿದ್ದೀರಿ, ಏನು ಮಾಡಿದ್ದೀರಿ, ಏನು ಎನ್ನುವುದನ್ನು ಪ್ರಾಮಾಣಿಕವಾಗಿ ಹೇಳಬೇಕು ಇಲ್ಲದಿದ್ದರೆ ನಾವೆಲ್ಲರೂ ಉತ್ತರ ಕರ್ನಾಟಕದ ಪರವಾಗಿ ಸೇರುತ್ತೇವೆ ನಾವೇ ಹೋರಾಟಕ್ಕೆ ನಿಲ್ಲುತ್ತೇವೆ ನಂಜುಂಡಪ್ಪ ವರದಿ ಪರವಾಗಿ ಈ ಸರ್ಕಾರ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಕೊಡಗನ್ನು ಕಡೆಗಣಿಸಿದ್ದಾರೆ ಎಂದು ಹೇಳಿ ಗಡಿನಾಡಿನ ಪರವಾಗಿ ನಾವೂ ನಿಲ್ಲುತ್ತೇವೆ ಕರ್ನಾಟಕ ಏಕೀಕರಣಕ್ಕೂ ನಾವು ನಿಂತಿದ್ದೇವೆ ಏಕೀಕರಣವಾದ ಮೇಲೆ ಉತ್ತರ ಕರ್ನಾಟಕವನ್ನು ಕಡೆಗಣಿಸಿರತಕ್ಕಂತಹ ವಿಚಾರಕ್ಕೆ ನಾವು ನಿಲ್ಲುತ್ತೇವೆ ಮಾನ್ಯ ಮುಖ್ಯ

ಮಂತ್ರಿಗಳು ಅನೇಕ ಕಡೆ ವಾಸ್ತವ್ಯ ಮಾಡುತ್ತಿದ್ದಾರೆ ವಾಸ್ತವ್ಯದ ಬಗ್ಗೆ ನಮ್ಮ ತಕರಾರು ಇಲ್ಲ ವಾಸ್ತವ್ಯ ಏಕೆ ಮಾಡುತ್ತಾರೆಂದು ನನಗೆ ಅನುಮಾನ ಮಾನ್ಯ ಮುಖ್ಯಮಂತ್ರಿಗಳಿಗೆ ಮೂರನೇ ಮಹಡಿಯಲ್ಲಿ ದೊಡ್ಡ ಕಾರ್ಯಾಲಯ ಇದೆ ಭಾರೀ ಸಿಬ್ಬಂದಿ ಭಾರೀ ವ್ಯವಸ್ಥೆ ಮತ್ತು ಇವತ್ತು ಆಧುನಿಕವಾದಂತಹ ಹೊಸ ಹೊಸ ಯಂತ್ರಗಳು, ಇದ್ದಾಗ ಇಲ್ಲಿ ಕುಳಿತು ಒಂದು ಗುಂಡಿ ಒತ್ತಿದರೆ ಇಡೀ ರಾಜ್ಯವೇ ಕಣ್ಣು ಮುಂದೆ ಬರುತ್ತದೆ ಬಿಜಾಪುರ ಬೇಕಾ, ಗುಲ್ಬರ್ಗಾ ಬೇಕಾ, ರಾಯಚೂರು ಬೇಕಾ, ಯಾವ ಹಳ್ಳಿ ಬೇಕು, ಯಾವ ತಾಲ್ಲೂಕು ಬೇಕು, ಯಾವ ಜಿಲ್ಲಾಧಿಕಾರಿ ಬೇಕು, ಯಾವ ತಹಶೀಲ್ದಾರ್ ಬೇಕು, ಯಾವ ಎಸಿ ಬೇಕು, ಎಲ್ಲವೂ ಮೂರನೇ ಮಹಡಿಯಲ್ಲಿ ಕುಳಿತು ಒಂದು ಗುಂಡಿ ಒತ್ತಿದರೆ ಮಾಹಿತಿ ಬರುತ್ತದೆ ಇವರು ಹೋಗಿ ಹಳ್ಳಿಗಳಲ್ಲಿ ಮಲಗುವುದು, ಇರುವುದೇ ಇಲ್ಲ ಎಷ್ಟು ಹೊತ್ತಿಗೆ ಮಲಗುತ್ತಾರೆ, ಬೆಳಿಗ್ಗೆ ಐದೂವರೆ ಗಂಟೆಗೆ ಐದೂವರೆ ಗಂಟೆಯವರೆಗೆ ಕಾದಿರಬೇಕು ಐದೂವರೆ ಗಂಟೆಗೆ ಅವರು ತಟ್ಟೆ ಹಿಡಿದುಕೊಳ್ಳುತ್ತಾರೆ ಒಂದು ಚೂರು ಊಟ ಹೀಗೆ ಮಾಡುತ್ತಾರೆ ನಮ್ಮ ಸ್ನೇಹಿತರೆಲ್ಲಾ ಫೋಟೋ ಕ್ಲಿಕ್ ಮಾಡಿಕೊಳ್ಳುತ್ತಾರೆ ಅಲ್ಲಿಗೆ ಮುಗಿಯಿತು ಬೆಳಿಗ್ಗೆ ಎದ್ದು ಏಳು ಗಂಟೆಗೆ ಪಕ್ಕಕ್ಕೆ ಹೋಗುತ್ತಾರೆ ಏಳುವರೆ ಗಂಟೆಗೆ ಹಾಸಿಗೆ ಎತ್ತಿಕೊಂಡು ಹೋಗುತ್ತಾರೆ, ಮಂಚ ಎತ್ತಿಕೊಂಡು ಹೋಗುತ್ತಾರೆ, ಅಲ್ಲಿರುವ ಲ್ಯಾವೇಟರಿ ಎಲ್ಲ ಎತ್ತಿಕೊಂಡು ಹೋಗುತ್ತಾರೆ, ಅಲ್ಲಿ ಎಲ್ಲಾ ಖಾಲಿ ನಮ್ಮ ಊರಿನಲ್ಲಿಯೇ ನಾನು ನೋಡಿದ್ದು, ನಾನು ಬೆಳಿಗ್ಗೆ ಆರು ಗಂಟೆಗೆ ಹೋಗಿದ್ದೆ ಅಲ್ಲಿ ಮಂಚ ಒಬ್ಬರದು, ದುಪ್ಪಟಿ ಒಬ್ಬರದು, ಶೌಚಾಲಯ ಒಬ್ಬರದು, ಏನಿದು? ನಮ್ಮ IAS ಅಧಿಕಾರಿಗಳು ಶೌಚಾಲಯಗಳನ್ನು ಎತ್ತಿಕೊಂಡು ಹೋಗುತ್ತಿರುವುದು ನೋಡು ವುದಕ್ಕಾಗುವುದಿಲ್ಲ ಮಾನ್ಯ ಯಡಿಯೂರಪ್ಪನವರಿಗೆ ಅವತ್ತು ನೋದಿದೆ, ಬಾಚಣಿಗೆ ತೆಗೆದುಕೊಂಡು ತಲೆ ಬಾಚಿಕೊಂಡು ಬಂದ ಅವರ ಪರಿಸ್ಥಿತಿ ಟೀವಿಯಲ್ಲಿ ನೋಡಿದೆ, ಇವರಿಗೇನು ಬಂತು ಗ್ರಹಚಾರ, ಇವರೇನು ಪಾಪ ಮಾಡಿದ್ದಾರೆ, ನೀವು ಯಾವುದಾದರೂ ಒಂದು ಹಳ್ಳಿಗೆ ಗೋಗಿ ಅರಮನೆ ತರಹ ಇರುವುದು ಪರಿಶಿಷ್ಟ ಜನಾಂಗದ ಒಂದು ಹಳ್ಳಿ ನೀವು ಬರುವುದಕ್ಕೆ ಮುಂಚೆ ಸುಣ್ಣ ಬಣ್ಣ ಹೊಡೆದು ಲೈಟ್ ಹಾಕಿ ಸುಂದರವಾಗಿ ಮಾಡಿಕೊಟ್ಟರೆ ನನಗೆ ಅಲ್ಲಿ ಕೊಟ್ಟರೆ ನಾನು ಅಲ್ಲಿ ದಿನಾ ಮಲಗಿಕೊಳ್ಳುತ್ತೇನೆ ನೀವು ಯಾರು ಬೇಕಾದರೂ ಮಲಗಿಕೊಳ್ಳಬಹುದು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಇದು ಹೇಳತಕ್ಕಂಥಾದ್ದು ಒಂದು ನವಿರಾದ ವಾತಾವರಣ ಸೃಷ್ಟಿಯಾಗಲಿ ಎಂದು ಹೇಳಿ ಆದರೆ ಗಾಂಧೀಜಿಯವರೂ ಕೂಡ ಈ ರೀತಿಯಾಗಿ ಹರಿಜನ ಬಸ್ತಿಗಳಲ್ಲಿ ಹೋಗಿ ಮಲಗಿಕೊಳ್ಳುತ್ತಿದ್ದರು

ಶ್ರೀ ಎಸ್ ಸಿದ್ದರಾಮಯ್ಯ ಗಾಂಧೀಜಿಯವರಿಗೆ ಹೋಲಿಕೆ ಮಾಡುವುದಕ್ಕೆ ಹೋಗಬೇಡಿ ಗಾಂಧೀಜಿಯವರು ಹರಿಜನ ಬಸ್ತಿಗಳಿಗೆ ಹೋಗಿ ಸುಣ್ಣ ಬಣ್ಣ ಹೊಡೆಸಿ artificial ಕಮೋಡ್ ತೆಗೆದುಕೊಂಡು ಹೋಗಿ toilet ಕಟ್ಟಿಸಿಕೊಂಡು ಕುರ್ಲಾನ್ ಹಾಸಿಗೆ ತೆಗೆದುಕೊಂಡು ಹೋಗಿ, ಬೆಡ್ ತೆಗೆದುಕೊಂಡು ಹೋಗಿ, ದಿಂಬು ತೆಗೆದುಕೊಂಡು ಹೋಗಿ, ಬಿಸಿಲರಿ ನೀರು ತೆಗೆದುಕೊಂಡು ಹೋಗಿ ಮೂರು ಗಂಟೆಗೆ ಹೋಗಿ ಐದು ಗಂಟೆಯವರೆಗೆ ಮಲಗಿದ್ದು ಬರಲಿಲ್ಲ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಅಧ್ಯಕ್ಷರೆ, ನಾನು ಮಾತನ್ನು ಮುಗಿಸುವುದಕ್ಕೆ ನನಗೆ ಅವಕಾಶ ಕೊಡಬೇಕು ಸರೋಜಿನಿ ನಾಯ್ಡು ಎಂಬುವವರು ನಿಮಗೆಲ್ಲರಿಗೂ ಗೊತ್ತಿರುವಂಥ ದೊಡ್ಡ ಪೊಯೆಟೆಸ್ ಆಕೆ ಈ ವಿಚಾರದಲ್ಲಿ 'Do you know Bapu how much it costs to Birlas to keep you in poverty?' ಎಂದು ಕೇಳುತ್ತಿದ್ದಳು ನೀವೇನೋ ಹೋಗಿ ಅಲ್ಲಿ ಹರಿಜನ ಬಸದಿ ಹತ್ತಿರ ಮಲಗುತ್ತೀರಿ ಆದರೆ ಬಿರ್ಲಾರವರಿಗೆ ನಿಮ್ಮನ್ನು ಬಡತನದಲ್ಲಿ ಇಡುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದು ನಿಮಗೆ ಗೊತ್ತಿದೆಯೆ ಎಂದು ಅವರು ಪ್ರಶ್ನೆ ಕೇಳುತ್ತಿದ್ದರು ಅದರರ್ಥ ಅವನ್ನೆಲ್ಲಾ ಸ್ವಚ್ಛ ಮಾಡತಕ್ಕಂಥದ್ದು, ಬಿಳಿ ವಸ್ತ್ರಗಳಿಂದ ಆಶ್ರಮ ಕಟ್ಟತಕ್ಕಂಥದ್ದು, ಖಾದಿ ಬಟ್ಟೆಯಿಂದ ಆಶ್ರಮ ಕಟ್ಟುವುದು, ಇವನ್ನೆಲ್ಲಾ ಮಾಡಿದಾಗ ಸರೋಜಿನಿ ನಾಯ್ಡುರವರಿಗೆ ಅವರು ಉತ್ತರ ಕೊಟ್ಟರು ನಾನು ಈ ಕಾರಣಕ್ಕಾಗಿ ನಾನು ಇಲ್ಲಿ ಬಂದು ಕೂರುತ್ತೇನೆ ಎಂದು ತಿಳಿದುಕೊಳ್ಳಬಾರದು, ಆದರೆ ಎಂಥ ದುಸ್ಥಿತಿಯಲ್ಲಿ ಜನರು ಇದ್ದಾರೆ ಎಂಬುದೂ ಗೊತ್ತಾಗಲಿ, ಪತ್ರಿಕಾ ಕರ್ತರು, ರಾಜಕಾರಣಿಗಳು, ಅಧಿಕಾರಿಗಳು ನನ್ನನ್ನು ಮಾತನಾಡಿಸುವ ನೆಪದ ಮೂಲಕವಾಗಿ ಬಂದಾಗ ಅದರ ದಾರುಣ ಪರಿಸ್ಥಿತಿ ಅರ್ಥವಾಗಲಿ ಎಂದು ನಾನು ಇಲ್ಲಿ ಬಂದು ವಸತಿ ಮಾಡುತ್ತೇನೆ ಎಂದು ಅವರು ಹೇಳಿದರು ನಾನು ಮಹಾತ್ಮಾಗಾಂಧಿಯವರಿಗೆ

ಕುಮಾರಸ್ವಾಮಿಯವರನ್ನು ಹೋಲಿಸುತ್ತೇನೆ ಎಂದು ಅಲ್ಲ ಆದರೆ ಇದರ ಅರ್ಥ ಇಷ್ಟೆ ಆ ಕಡೆಗೆ ಗಮನವನ್ನು ಸೆಳೆಯಬೇಕು ಎನ್ನುವಂಥ ಉದ್ದೇಶವಿದೆಯೇ ವಿನಃ ಬೇರೆ ಇನ್ನಾವುದೂ ಇಲ್ಲ ತಾವು ತಮಾಷೆಯಾಗಿ ನಾಲ್ಕು ಮಾತುಗಳನ್ನು ಹೇಳತಕ್ಕಂಥದ್ದರ ಬಗ್ಗೆ ನನ್ನದೇನೂ ಪ್ರಶ್ನೆಯಿಲ್ಲ

ಶ್ರೀ ಸಿದ್ದರಾಮಯ್ಯ ನಿಮಗೆ ಹಳ್ಳಿಯಲ್ಲಿರುವ ಜನರ ಸಮಸ್ಯೆ ಬಗ್ಗೆ ಗೊತ್ತಿಲ್ಲವೆ?

ಶ್ರೀ ಎಂ ಪಿ ಪ್ರಕಾಶ್ ಗೊತ್ತಿದೆ ನಾನು ಹಳ್ಳಿಯಲ್ಲಿಯೇ ಹುಟ್ಟಿರುವುದು ಎಲ್ಲರಿಗೂ ಕೂಡ ಗೊತ್ತಿದೆ

ಶ್ರೀ ಸಿದ್ದರಾಮಯ್ಯ ಬೇರೆಯವರಿಗೆ ಗೊತ್ತಿಲ್ಲವೆ? ಆ ಊರಿನಲ್ಲಿರುವರೆಲ್ಲರಿಗೂ ಗೊತ್ತಿಲ್ಲವೆ? ಅಲ್ಲಿ ಹೋಗಿ ಮಲಗಿದರೇನೆ ಗೊತ್ತಾಗುತ್ತದೆಯೆ? 27 ಸಾವಿರ ಹಳ್ಳಿಗಳಲ್ಲಿ ಎಲ್ಲೋ ಒಂದು ಹಳ್ಳಿಗೆ ಹೋಗಿ ಅಲ್ಲಿ ಮಲಗಿದ ತಕ್ಷಣ ಸಮಸ್ಯೆಗಳ ಬಗ್ಗೆ ಆ ಮನೆಯಲ್ಲಿ ಗೊತ್ತಾಗಿಬಿಡುತ್ತದೆಯೆ?

ಶ್ರೀ ಎಂ ಪಿ ಪ್ರಕಾಶ್ ಅದು ಹಾಗಲ್ಲ ಇದರ ಕಡೆಗೆ ಹೆಚ್ಚು ಒತ್ತನ್ನು ಕೊಡಬೇಕು

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದವರು ಆದರೆ ಎಲ್ಲಿ ಯಾವ ಹೋರಾಟ ಇದೆ ಸ್ವಾಮಿ? ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಹೊರಾಟಕ್ಕೋಸ್ಕರ ರಾಷ್ಟ್ರವನ್ನು ಒಗ್ಗೂಡಿಸಬೇಕು, ಅವರಿಗೇನು ಅವರ ಕೈಯಲ್ಲಿ ಅಧಿಕಾರವಿತ್ತೇ? ಅವರ ಹತ್ತಿರ ಕೆಲಸ ಮಾಡಲು ಅಧಿಕಾರಿಗಳಿದ್ದರೆ? ಅವರ ಹತ್ತಿರ ಕೆಲಸ ಮಾಡತಕ್ಕಂಥ ಶಕ್ತಿ ಏನಿತ್ತು ಹೇಳಿ ಜನರನ್ನು ಸೇರಿಸಬೇಕು, ರಾಷ್ಟ್ರ ಒಂದಾಗಬೇಕು ಎನ್ನುವ ಉದ್ದೇಶ ಅವರಲ್ಲಿತ್ತು

ಶ್ರೀ ಎಂ ಪಿ ಪ್ರಕಾಶ್ – ಕುಮಾರಸ್ವಾಮಿಯವರನ್ನು ನಾನು ಮಹಾತ್ಮಗಾಂಧೀಜಿಗೆ ಹೋಲಿಸಿದೆ ಎಂದು ನೀವು ಭಾವಿಸಿಕೊಳ್ಳಬೇಡಿ

ಅಲ್ಲಿರತಕ್ಕಂಥ ಉದ್ದೇಶದ ಹಿಂದಿರುವಂಥ ಆಶಯಗಳ ಬಗ್ಗೆ ನಾನು ಮಾತನಾಡಿದೆ ಈಗ ಪ್ರಿನ್ಸ್ ಡಯಾನ ಹೋಗಿ ಯಾರೋ ಹೆಚ್ ಐ ವಿ ಏಡ್ಸ್ ಇರತಕ್ಕಂಥ ಒಬ್ಬರಿಗೆ ಕೈ ಕುಲುಕಿದರು ಎಂಬ ವಿಷಯ ಇಡೀ ಅಂತರಾಷ್ಟ್ರೀಯ ಪತ್ರಿಕೆಗಳಲ್ಲೆಲ್ಲಾ ಬಂತು ಇವರು ಹೋಗಿ ಅಂಥವರ ಮನೆಯಲ್ಲಿ ಮಲಗಿದ್ದಾರೆ ಎಂದ ತಕ್ಷಣ ಅದನ್ನು ಶಹಭಾಸ್‌ಗಿರಿ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಅದರ ಹಿಂದೆ ಸಂದೇಶ ಏನಿದೆಯೆಂದರೆ ಇದು ಒಂದು ಸಾಂಕ್ರಾಮಿಕ ಜಾಡ್ಯವಲ್ಲ ಅಂಥ ಕಡೆ ಹೋಗಿ ನಾವು ಇರುವುದಕ್ಕೆ ಸಾಧ್ಯತೆ ಇದ್ದರೆ ಅವರನ್ನು ಕೂಡ ಮಾನವೀಯವಾಗಿ ನೋಡಿ ಎನ್ನತಕ್ಕಂಥ ಸಂದೇಶ ಅದರ ಹಿಂದೆ ಇದೆಯೇ ವಿನಃ ಮತ್ತೊಂದೇನೂ ಅಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್, ಹೆಚ್ ಐ ವಿ ಪೇಶೆಂಟ್ ಮನೆಗೆ ಹೋದವರಿಗೆ ಊರೆಲ್ಲಾ ಬಹಿಷ್ಕಾರ ಹಾಕಿದೆ ಈಗ ಏನು ಮಾಡುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ ಆ ರೀತಿ ಬಹಿಷ್ಕಾರ ಹಾಕತಕ್ಕಂಥದ್ದು ಸರಿಯಾದುದಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಹೋಗಿ ಬಂದ ಕಾರಣಕ್ಕೆ ಈಗ ಆಕೆ ತಿರಸ್ಕೃತಳಾಗಿದ್ದಾರಲ್ಲ

ಶ್ರೀ ಎಂ ಪಿ ಪ್ರಕಾಶ್ ಆ ರೀತಿ ಸಗ್ರಿಗೇಶನ್ ಮಾಡತಕ್ಕಂಥದ್ದು ಏನಿದೆ ಹೆಚ್ ಐ ವಿ ಅನ್ನತಕ್ಕಂಥ

ಶ್ರೀ ದಿನೇಶ್ ಗುಂಡುರಾವ್ ಪ್ರಿನ್ಸ್‌ಸ್ ಡಯಾನಾಗೆ ಮುಖ್ಯ ಮಂತ್ರಿಗಳನ್ನು ನೀವು ಏಕೆ ಹೋಲಿಸುತ್ತೀರಿ? ಏಡ್ಸ್ ಕಾರ್ಯಕ್ರಮಕ್ಕೆ ಒಂದು ಯೋಜನೆ ಮಾಡಲಿ, ಅದಕ್ಕೆ ಹಣ ಬಿಡುಗಡೆ ಮಾಡಲಿ, ಕೆಲಸ ಕಾರ್ಯಗಳನ್ನು ಮಾಡಲಿ

ಶ್ರೀ ಎಂ ಪಿ ಪ್ರಕಾಶ್ ಈಗ ಇರತಕ್ಕಂಥದ್ದಕ್ಕೆ ಏನೆಲ್ಲಾ ಉತ್ತರವನ್ನು ಕೊಡಬೇಕೋ ಅದಕ್ಕೆ ಖಂಡಿತವಾಗಿಯೂ ಉತ್ತರವನ್ನು ಕೊಡುತ್ತೇವೆ ಆದರೆ ಅಲ್ಲಿ ಇರತಕ್ಕಂಥ ವಾಸ್ತವದ ಉದ್ದೇಶ, ಇದರ ಹಿಂದೆ ಇರತಕ್ಕಂಥ

ಆಶಯ, ಇವುಗಳ ಬಗ್ಗೆ ಮಾತನಾಡುತ್ತೇನೆ ಈಗ ಅವರು ಹೇಳಿದರು ಈಗ ಅಲ್ಲಿ ಹೋಗಿ ಮಲಗಿದವರ ಮನೆಯನ್ನು ಈಗ ಆ ಊರಿನವರು ಬಹಿಷ್ಕಾರ ಹಾಕಿದ್ದಾರೆ ಎಂದು ಅವರು ಹೇಳಿದರು ಎಂಥ ಒಂದು ನೀಚ ಪದ್ಧತಿ ಇನ್ನೂ ನಮ್ಮ ದೇಶದಲ್ಲಿ ಇದೆ ನೋಡಿ ಮಕ್ಕಳನ್ನು ಶಾಲೆಗೆ ಸೇರಿಸಿದರೆ ಆ ಶಾಲೆಯಲ್ಲಿರುವ ಇಡೀ ಮಕ್ಕಳೇ ಬಿಟ್ಟು ಹೋಗಿರತಕ್ಕಂಥದ್ದು ಇದೆ ಅದು ಒಂದು ರೋಗ ವಿನಃ ಅದು ಒಂದು ದೇವರ ಶಾಪವಲ್ಲ ಅದು ಸಾಂಕ್ರಾಮಿಕವಾದಂಥ ಜಾಡ್ಯವೂ ಅಲ್ಲ ಆದ್ದರಿಂದ ಒಬ್ಬ ರಾಜ್ಯದ ಮುಖ್ಯಮಂತ್ರಿ ಅದರ ಮೂಲಕವಾಗಿ ಒಂದು ಫೋಕಸ್ ಕೊಡತಕ್ಕಂಥ ಒಂದು ಪ್ರಯತ್ನ ಅದನ್ನು ತಾವು ಸಾಂದರ್ಭಿಕವಾಗಿ ನವಿರಾಗಿ ಹಾಸ್ಯಕ್ಕೆ ತಾವು ಉಪಯೋಗಿಸಿ ಅದಕ್ಕೆ ನಾವ್ಯಾರೂ ಆಕ್ಷೇಪಣೆಯನ್ನು ಮಾಡುವುದಿಲ್ಲ ಆದರೆ ಉದ್ದೇಶ ಮಾತ್ರ ಸದುದ್ದೇಶದಿಂದ ಕೂಡಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್, ಹಾಗಾದರೆ ಏಡ್ಸ್ ಪೇಶೆಂಟ್‌ನ್ನು ಗುರುತಿಸಬಾರದು, ಏಡ್ಸ್ ಪೇಶೆಂಟನ್ನು ಪ್ರಚಾರಕ್ಕೆ ಇಡಬಾರದು, ಏಡ್ಸ್ ಪೇಶೆಂಟ್ ಯಾರು ಎಂದು ಊರಿನವರಿಗೆ ಗೊತ್ತಾಗದ ಹಾಗೆ ನೋಡಿಕೊಳ್ಳಬೇಕು ಎಂದು ತಾವು ಆಸ್ಪತ್ರೆಗಳಿಗೆ ಏಕೆ ಗೈಡ್‌ಲೈನ್ಸ್‌ನ್ನು ಕೊಟ್ಟಿದ್ದೀರಿ ಯಾವುದೇ ಆಸ್ಪತ್ರೆಯಲ್ಲಿ ಕೌನ್ಸ್‌ಲಿಂಗ್ ಮಾಡುವವರನ್ನೂ ಕೂಡ ಸಾರ್ವಜನಿಕವಾಗಿ ಕೌನ್ಸ್‌ಲಿಂಗ್ ಮಾಡಬಾರದು, ಅವರು ಸಮಾಜಕ್ಕೆ ಎದ್ದು ಕಾಣಬಾರದು, ಅವರನ್ನು ತೋರಿಸಬಾರದು ಎಂದು ಮೌಖಿಕವಾಗಿ ಅವರನ್ನು ಏಕೆ ಇಟಿದ್ದೀರಿ?

ಶ್ರೀ ಎಂ ಪಿ ಪ್ರಕಾಶ್ ಅದಕ್ಕಾಗಿಯೇ ಅದರ ಉದ್ದೇಶ ಇರತಕ್ಕಂಥದ್ದು, ಕುಷ್ಠರೋಗಿಗಳಾಗಿರಲಿ ಮತ್ತೊಂದು ಕಾಯಿಲೆಯವರನ್ನಾಗಲಿ/ಇವರನ್ನು ಸಗ್ರಿಗೇಟ್ ಮಾಡಬಾರದು ಅವರನ್ನು ನಾವು ಹತ್ತಿರದಲ್ಲಿ ಕರೆದುಕೊಳ್ಳಬೇಕು ಎನ್ನತಕ್ಕಂಥ ಮಾತಿದೆ ಆ ಕಾರಣಕ್ಕಾಗಿ ಈಗ ಬಯಲಾಗಿದೆ ಅವರು ಇಂಥ ರೋಗಪೀಡಿತರಾಗಿದ್ದಾರೆ ಎಂದು ಬಯಲಾಗಿದೆ ಬಯಲಾಗಿರುವವರ ಮನೆಗೂ ನಾನು ಹೋಗುತ್ತೇನೆ, ನಾನು ಅಲ್ಲಿಯೇ ಮಲಗುತ್ತೇನೆ, ಅಲ್ಲಿಯೇ ನಾನು ಊಟ ಮಾಡುತ್ತೇನೆ, ಆದರೆ ಆ ರೋಗ ನನಗೆ ತಟ್ಟುವುದಿಲ್ಲ ಎನ್ನತಕ್ಕಂಥ ಸಂದೇಶ ಜನಗಳಿಗೆ ಹೋಗಬೇಕು ಆ ಕಾರಣದಿಂದ ಅವರು ಈ ರೀತಿ ಮಾಡಿದರು

ಶ್ರೀ ವಾಟಾಳ್ ನಾಗರಾಜ್ ಅವರ ಉದ್ದೇಶವನ್ನು ನಾವು ವಿರೋಧ ಮಾಡುತ್ತಿಲ್ಲ ಅವರು ಮಲಗುವುದನ್ನು ನಾವು ವಿರೋಧ ಮಾಡುತ್ತಿಲ್ಲ ಇದರಿಂದ ನಾಟಕೀಯವಾಗುತ್ತಿದೆ ಏನು ನಾಟಕೀಯವಾಗುತ್ತಿದೆ ನಾನು ಆಗಲೇ ಹೇಳಿದೆ ನೀವು ಹಿಂದಿನ ರಾಜಾಧಿರಾಜರ ಕಥೆಗಳನ್ನು ಕೇಳಿದ್ದಿರಿ ಕೃಷ್ಣದೇವರಾಯ ಮತ್ತು ಹಾಗೆಯೇ ಹಲವಾರು ರಾಜರ ಹೆಸರುಗಳನ್ನು ಕೇಳಿದ್ದೀರಿ ರಾಜ್ಯದಲ್ಲಿ ಜನರು ಹೇಗೆ ಜೀವನ ನಡೆಸುತ್ತಿದ್ದಾರೆ ಎಂಬ ಬಗ್ಗೆ ಮಂತ್ರಿಗಳು ಹಾಗೂ ಅಕ್ಕಪಕ್ಕದಲ್ಲಿಯೇ ಇರುವ ಇನ್ನಿತರರು ನಮಗೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ ಆದ್ದರಿಂದ ಸರಿಯಾದ ಮಾಹಿತಿಯನ್ನು ಪಡೆಯಬೇಕಾದರೆ ರಾಜ ವೇಷವನ್ನು ಮರೆಸಿಕೊಂಡು ರಸ್ತೆಯಲ್ಲೋ ಅಥವಾ ಬೇರೆ ಕಡೆಯಲ್ಲೋ ಅಥವಾ ದೇವಸ್ಥಾನದ ಮುಂದೆ ಭಿಕ್ಷುಕನಾಗಿಯೋ ಅಥವಾ ರಸ್ತೆ ಅಥವಾ ಜಾತ್ರೆಯಲ್ಲಿ ಕುಳಿತು ನೋಡೋಣವೆಂದು ರಾಜರು ವೇಷ ಮರೆಸಿಕೊಂಡು ಹೋಗುತ್ತಿದ್ದರು ಎಂಬುದನ್ನು ನಾವು ಓದಿದ್ದೇವೆ ಆ ರೀತಿ ವೇಷವನ್ನು ಮರೆಸಿ ಯಾವ ಅಧಿಕಾರಿಗಳಿಗೂ ಹೇಳದೇ ಯಾರನ್ನೂ ಕರೆದುಕೊಂಡು ಹೋಗದೇ ಹಿಂದೆ ಹೊಗಿರತಕ್ಕಂಥದ್ದು ಇತಿಹಾಸವಿದೆ ಆದರೆ ಈಗ ಊರಿಗೆ ಮುಖ್ಯಮಂತ್ರಿಗಳು ಬರುತ್ತಾರೆ ಎಂದ ತಕ್ಷಣ ಊರೆಲ್ಲಾ ಸ್ವಚ್ಛವಾಗುತ್ತದೆ, ಊರಿನಲ್ಲಿರುವ ವಾಸನೆ ಹೋಗುತ್ತದೆ, ಉರಿನಲ್ಲೆಲ್ಲಾ ಲೈಟ್ ಬರುತ್ತದೆ, ಊರಿನಲ್ಲೆಲ್ಲಾ ರಸ್ತೆಯಾಗುತ್ತದೆ, ಅವತ್ತು ಒಂದು ದಿವಸ ಹೊಟ್ಟೆ ತುಂಬ ಊಟ ಸಿಗುತ್ತದೆ ಆ ದಿನವಾದ ಬೆಳಗ್ಗೆಯೇ ಅವರನ್ನು ದೇವರೇ ಕಾಪಾಡಬೇಕು ಆದುದರಿಂದ ನಾನು ಹೇಳುವುದೇನೆಂದರೆ ಹಿಂದೆ ರಾಜಾಧಿರಾಜರು ಯಾವ ರೀತಿ ವೇಷ ಮರೆಸಿಕೊಂಡು ಹೋಗುತ್ತಿದ್ದರು ಆ ರೀತಿ ಮಾಡಿ ನೀವು ಹರಿಜನರ ಮನೆಯಲ್ಲಿ ಹೋಗಿ ಮಲಗಿಕೊಳ್ಳಬೇಕೆ, ನೀವು ಯಾರಿಗೂ ಹೇಳಬಾರದು ಹರಿಜನ ಭಾವಡಿಗೆ ರಾತ್ರೋರಾತ್ರಿ ಒಂದು ಗಂಟೆಗೆ ಯಾರಿಗೂ ಹೇಳದೆ ತಕ್ಷಣ ಹೋಗಿ ನೀವು ಅವನ ಪಕ್ಕದಲ್ಲಿ ಮಲಗಬೆಕು ಬೆಳಿಗ್ಗೆ ಎದ್ದಾಗ ಆತನಿಗೆ ಅರೆರೆ, ಏನು ಮುಖ್ಯಮಂತ್ರಿಗಳು ನನ್ನ ಪಕ್ಕದಲ್ಲಿ ಬಂದು ಮಲಗಿದ್ದಾರೆ ಎಂದು ಅವನಿಗೆ ಆಶ್ಚರ್ಯವಾಗಬೇಕು ಇಡೀ ಊರಿಗೇ ಆಶ್ಚರ್ಯವಾಗಬೇಕು ಜನಗಳಿಗೆ ಆಶ್ಚರ್ಯವಾಗಬೇಕು ಆದರೆ ಆ ರೀತಿ ಆಗುತ್ತಿಲ್ಲ ಈಗ ನೀವು ಹೋಗುತ್ತೀರಿ ಎಂದ ತಕ್ಷಣ ಅಲ್ಲಿ ಲೈಟ್‌ಗಳನ್ನು ರಿಪೇರಿ ಮಾಡುತ್ತಾರೆ, ತಂತಿ ರಿಪೇರಿ ಮಾಡುತ್ತಾರೆ, ಸುಣ್ಣ ಹೊಡೆಯುವುದು, ಶೌಚಾಲಯ ನಿರ್ಮಾಣ ಮಾಡುವುದು, ಊಟಕ್ಕೆ ಬೆಳ್ಳಿ ತಟ್ಟೆ ರೆಡಿ

ಮಾಡುತ್ತಾರೆ ಏನು ಹಣೆಬರಹ ಇದು? ಅದಕ್ಕೇ ನಾನು ಹೇಳುತ್ತಿದ್ದೇನೆ, ಅವರು ಹೋಗಿ ಮಲಗಿಕೊಳ್ಳಲಿ ನಮ್ಮದೇನೂ ತಕರಾರಿಲ್ಲ ಅವರು ಎಲ್ಲಿ ಬೇಕಾದರೂ ಮಲಗಿಕೊಳ್ಳಲಿ ನಮ್ಮದೇನೂ ಅಭ್ಯಂತರವಿಲ್ಲ ನಾನು ಹೇಳುವುದೇನೆಂದರೆ ಇಲ್ಲಿ ವಿಧಾನ ಸೌಧದಲ್ಲಿ ಮೂರನೇ ಮಹಡಿ ಇದೆಯಲ್ಲಾ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಧಾನ ಸಭೆ, ವಿಧಾನ ಸೌಧದಲ್ಲಿ ವಿಧಾನ ಸಭೆಯ ಸದನದಲ್ಲಿ ಮುಖ್ಯಮಂತ್ರಿಗಳು ನಾಯಕರಾಗಿದ್ದಾರೆ ಅವರು ಹೇಳುವ ಮಾತಿಗೆ ಶಕ್ತಿ ಇದೆ ಸದನದಲ್ಲಿ ಅವರಿಗೆ ಇರತಕ್ಕಂಥ ಅಪಾರವಾದಂಥ ಶಕ್ತಿ ಬಹುಶಃ ಯಾರಿಗೂ ಇರಲಾರದು ಅವರೇನು ಕುಳಿತ ಕೆಳಗೆ ಈ ಊರಿನಲ್ಲಿರುವ ಗುಡಿಸಲುಗಳನ್ನೆಲ್ಲಾ ಸಂಪೂರ್ಣವಾಗಿ ತೆಗೆಯಿರಿ, ಗೋಡೆ ಹಾಕಿ ಮನೆ ಮಾಡಿ, ಕುಡಿಯಲು ನೀರು ಕೊಡಿ, ಪೈಪ್‌ಗಳನ್ನು ಅಳವಡಿಸಿ, ಈ ರೀತಿ ಹೇಳಿದರೆ ರಾತ್ರೋ ರಾತ್ರಿ ಮಾಯಮಂತ್ರ ಆಗಿಹೋಗುತ್ತದೆ ಏಕೆ ಈ ರೀತಿ ನೀವು ಮಾಡಬಾರದು ಇದಕ್ಕಾಗಿ ಹಣವನ್ನು ಇಡಿ ಸಾವಿರಾರು ಕೋಟಿ ಖರ್ಚು ಮಾಡಿ ಇಡೀ ಕರ್ನಾಟಕ ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಗುಡಿಸಲು ವಾಸಿಗಳು ಇದ್ದಾರೆ ಎಂಬ ಬಗ್ಗೆ ಒಂದು ತಿಂಗಳಲ್ಲಿ ಅಂಕಿ ಅಂಶವನ್ನು ತರಿಸಿಕೊಂಡು ಇದಕ್ಕೆ ಆಯವ್ಯಯ ಎಷ್ಟಾಗುತ್ತದೆ, ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಎಂಬುದನ್ನು ನೋಡಿ ಕೊಟ್ಟು ಕೆಲಸ ಮಾಡಿಸಿ ಆ ಗುಡಿಸಲುಗಳಲ್ಲಿ ಹರಿಜನರಿರಬಹುದು, ಗಿರಿಜನರಿರಬಹುದು, ಕುರುಬರಿರಬಹುದು, ಲಿಂಗಾಯಿತರಿರಬಹುದು, ಯಾರೇ ಇರಲಿ ಈ ಬಡಜನರ ಬಡತನವನ್ನು ನಿರ್ಮೂಲನೆ ಮಾಡತಕ್ಕಂಥದ್ದೇ ನಮ್ಮಗಳ ಧ್ಯೇಯ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರಿಬ್ಬರೂ ಸೇರಿ ಮಾಡುತ್ತೇವೆ ಎಂದು ನಾವು ತೀರ್ಮಾನಕ್ಕೆ ಬಂದಿದ್ದೇವೆಯಾದ ಕಾರಣ ನಾವು ಇಡೀ ರಾಜ್ಯವನ್ನೇ ಬೆಳಗಿಸುತ್ತೇವೆ ಎಂದು ನೀವು ಹೇಳಿ ಸ್ವಾಮಿ ಮತ್ತು ಅದರಂತೆ ಹಣವನ್ನು ನೀವು ಬಿಡುಗಡೆ ಮಾಡಿ ಸ್ವಾಮಿ ನಿಮ್ಮ ಜಿಲ್ಲಾಧಿಕಾರಿಗಳಿಗೆ ಹೇಳಿ ಡಿ ಸಿ ಯವರು ಏನು ಮಾಡುತ್ತಾರೆ, ಎ ಸಿ ಯವರು ಏನು ಮಾಡುತ್ತಾರೆ, ತಹಶೀಲ್ದಾರ್‌ರವರು ಏನು ಮಾಡುತ್ತಾರೆ, ಹಳ್ಳಿಯಲ್ಲಿ ಯಾರು ಕೆಲಸವನ್ನು ಮಾಡುತ್ತಾರೋ ಅವರೆಲ್ಲರಿಗೂ ನೀವು ಹೇಳಿಬಿಸಿ ತಾವು ಉತ್ತರ ಕೊಡುವಾಗ ಈ ಸದನದಲ್ಲಿ ಇದರ ಬಗ್ಗೆ ನೀವು ತೀರ್ಮಾನವನ್ನು ತೆಗೆದುಕೊಳ್ಳಿ ನಾನು ಏನು ನಿಮಗೆ ಹೇಳುತ್ತೇನೆಂದರೆ ಒಬ್ಬ ಬಡವನ ಮನೆಯಲ್ಲಿ ನೀವು ಹೋಗಿ ಮಲಗಿ ಬಂದರೆ ನಾಳೆ

ಬೆಳಗ್ಗೆ ಇರುವ ಸೌಟು ಪೌಟುಗಳನ್ನೂ ಕೂಡ ಕಿತ್ತುಕೊಂಡು ಹೋಗಿ ಬಿಡುತ್ತಾರೆ ನಾಳೆ ಬೆಳಿಗ್ಗೆ ಇಡೀ ಮನೆಯೇ ಖಾಲಿ ಆಮೇಲೆ ಏನು ಆಗುತ್ತದೆಂದರೆ, ಪಕ್ಕದ ಬೀದಿಯಲ್ಲಿ ಇರುವವರು ನಮ್ಮ ಮನೆಗೆ ಮುಖ್ಯಮಂತ್ರಿಗಳು ಬರಲೇ ಇಲ್ಲ, ನಮ್ಮ ಮನೆಯಲ್ಲಿ ಹೆಂಚು ಹಾಗೆಯೇ ಇದೆ, ನಮ್ಮ ರೋಡ್ ಹೀಗೆಯೇ ಇರುತ್ತದೆ, ನಮಗೆ ಕೊಡುವ ನೀರು ಹೀಗೆಯೇ ಇರುತ್ತದೆ, ನಮ್ಮ ಮನೆ ಮುಂದೆ ಮೋರಿ ಇದ್ದೇಇರುತ್ತದೆ, ನಮ್ಮ ಪಾತ್ರೆ ಹೀಗೆಯೇ ಇರುತ್ತದೆ, ನಮ್ಮ ರಾಗಿಮುದ್ದೆ ಹೀಗೆಯೇ ಇರುತ್ತದೆ ಈ ರೀತಿಯಲ್ಲಿಯೇ ಇಡೀ ರಾಜ್ಯದ ಉದ್ದಗಲಕ್ಕೂ ವಾತಾವರಣವಿದೆ ಈ ರೀತಿ ಆಗಬಾರದು ನೀವು ಒಂದು ಊರಿನಲ್ಲಿ ಮಲಗುತ್ತೀರ, ಇಡೀ ಊರು, ಇಡೀ ರಾಜ್ಯ, ಇಡೀ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಮಾಡಿ ಸ್ವಾಮಿ ನಾವು ಸಂತೋಷಪಡುತ್ತೇವೆ ಆ ರೀತಿ ಯೋಜನೆಯನ್ನೇ ಮಾಡಿಕೊಳ್ಳದೇ ಈ ರೀತಿ ನೀವು ಮಾಡತಕ್ಕಂಥದ್ದು ನಿಮಗೆ ಶ್ರೇಯಸ್ಸಲ್ಲ ಇದು ಒಳ್ಳೆಯದಲ್ಲ ಜನರನ್ನು ನೀವು ತಿಳಿದುಕೊಂಡಿರಬಹುದು ಏಕೆಂದರೆ ಮುಖ್ಯಮಂತ್ರಿಗಳು ಹೋದ ಕಡೆ ಜನ ಬಂದೇ ಬರುತ್ತಾರೆ ನೀವು ಹೆಲಿಕಾಪ್ಟರ್‌ನಲ್ಲಿ ಇಳಿದರೆ, ಆ ಹೆಲಿಕಾಪ್ಟರ್‌ನ್ನು ನೋಡುವುದಕ್ಕೇ ಇಷ್ಟು ವರ್ಷಗಳಾದರೂ ಸಾವಿರಾರು ಜನರು ಬರುತ್ತಾರೆ ಇನ್ನು ನಿಮ್ಮನ್ನು ನೋಡುವುದಕ್ಕೆ ಜನರು ಸೇರುವುದಿಲ್ಲವೆ, ಜನರು ಸೇರಿಯೇ ಸೇರುತ್ತಾರೆ ಆದರೆ ನಾನು ಹೇಳುತ್ತೇನೆ ನಾವು ಕಾರ್ಯಕ್ರಮವನ್ನು ಮಾಡಬೇಕು ಅದನ್ನು ಪರಿಣಾಮಕಾರಿಯಾಗಿ ತಾವು ಮಾಡಬೇಕು ಆದರೆ ಈಗ ನಿಮ್ಮ ಸರ್ಕಾರ ಇಡೀ ರಾಜ್ಯದಲ್ಲಿ ಮಳೆ ಹಾನಿಯನ್ನು ಗುರುತಿಸುವುದಕ್ಕೆ, ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಕಾರ್ಯಕ್ರಮ ಹಾಕಿಕೊಳ್ಳುವಲ್ಲಿ, ಬಡತನ ಹೋಗಲಾಡಿಸಲು ಮತ್ತು ಬರಗಾಲವನ್ನು ಎದುರಿಸುವಲ್ಲಿ ಸಂಪೂರ್ಣವಾಗು ವಿಫಲವಾಗಿದೆ ಈ ವಿಫಲತೆ ಬಗ್ಗೆ ನಾನು ನೇರವಾಗಿ ಹೇಳುತ್ತಿದ್ದೇನೆ, ಇದರ ಬಗ್ಗೆ ತಾವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಈಗ ತಾವು ಏನು ಹೇಳಿದ್ದೀರಿ, ಎಷ್ಟು ಜನ ಸತ್ತಿದ್ದಾರೆ, ಎಷ್ಟು ಮನೆ ಹೋಗಿದೆ, ಏನೇನಾಗಿದೆ ಅವೆಲ್ಲವನ್ನೂ ಸರಿಪಡಿಸುವುದಕ್ಕೆ ಪ್ರಾಮಾಣಿಕವಾದಂಥ ಚಿಂತನೆಯನ್ನು ನೀವು ಮಾಡಬೇಕೆಂದು ನಾನು ಒತ್ತಾಯ ಮಾಡಿ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಪ್ರವಾಹ ಪೀಡಿತ ಪರಿಸ್ಥಿತಿ ಬಗ್ಗೆ ರಾಜ್ಯದಲ್ಲಿ ಚರ್ಚೆಯಾಗಬೇಕೆಂದು ಹೇಳಿ ನಾವೆಲ್ಲರೂ ಸೇರಿ ನಿಲುವಳಿ

ಸೂಚನೆಗೆ ಕೊಟ್ಟಿದ್ದನ್ನು ತಾವು ನಿಯಮ 69ಕ್ಕೆ ಪರಿವರ್ತನೆ ಮಾಡಿದ್ದೀರಿ 15 ದಿವಸದಿಂದ ಇಡೀ ರಾಜ್ಯದಲ್ಲಿ ಪ್ರವಾಹ ವಿಕೋಪಕ್ಕೆ ಹೋಗಿದೆ ಇದೇನು ಮೊದಲನೇ ಬಾರಿ ಅಲ್ಲ ಕಳೆದ ವರ್ಷ ಹಾಗೂ ಅದರ ಹಿಂದಿನ ವರ್ಷ ಕೂಡ ಪ್ರಕೃತಿ ವಿಕೋಪಕ್ಕೆ ಒಳಗಾಗಿ ಅತಿವೃಷ್ಟಿ ಉಂಟಾಗಿರುವುದನ್ನು ನಮ್ಮ ರಾಜ್ಯದಲ್ಲಿ ನಾವು ನೋಡುತ್ತಿದ್ದೇವೆ ಇದರ ಅನುಭವವಿದ್ದರೂ ಕೂಡ ಇವತ್ತಿನ ಸರ್ಕಾರಕ್ಕೆ ಏನಾದರೂ ದೂರದೃಷ್ಟಿ ಇದ್ದಿದ್ದರೆ, ಹವಾಮಾನ ಇಲಾಖೆಯವರು ಸುಮಾರು 15 ದಿವಸ, ಒಂದು ತಿಂಗಳಿನಿಂದ "ಈ ಸಲದ ಮುಂಗಾರು ಭಾರೀ ಭೀಕರವಾಗಿರುತ್ತದೆ, ಅನಾಹುತವನ್ನು ಸೃಷ್ಟಿ ಮಾಡುತ್ತದೆ" ಎಂದು ನಿರಂತರವಾಗಿ ಹೇಳುತ್ತಾ ಬಂದಿದ್ದಾರೆ ಇವರ ಸರ್ಕಾರ ಏನಾದರೂ ಜೀವಂತವಾಗಿದ್ದರೆ, ಅದಕ್ಕೆ ಪ್ರಾಣ, ವಾಯು ಹಾಗೂ ನೀರು ಏನಾದರೂ ಇದ್ದರೆ, ಹವಾಮಾನ ಇಲಾಖೆಯವರು ಕೊಡುತ್ತಿದ್ದಂತಹ ವರದಿಯನ್ನು ಈ ಸರ್ಕಾರ ಮತ್ತು ಸರ್ಕಾರದಲ್ಲಿ ಇರುವಂತಹ ಅಧಿಕಾರಿಗಳು ಗಮನಿಸದೇ ಇರುವುದಕ್ಕೆ ಕಾರಣವೇನು ಎಂದು ಈ ರಾಜ್ಯಕ್ಕೆ ಇವರು ಉತ್ತರ ಹೇಳಬೇಕು ಮಾನ್ಯ ಯಡಿಯೂರಪ್ಪನವರೇ, ಹವಾಮಾನ ಇಲಾಖೆಯವರು ಈ ರೀತಿ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಒಂದು ತಿಂಗಳಿನಿಂದ ಹೇಳುತ್ತಿದ್ದಾರೆ ನೀವು ಹಾಗೂ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಿರಿ? ಪ್ರಾಣ ಹಾನಿಯಾಗಿದೆ, ಆಸ್ತಿ ನಷ್ಟವಾಗಿದೆ, ಜಾನುವಾರುಗಳು ಸತ್ತಿದೆ, ಇದಕ್ಕೆ ಯಾರು ಹೊಣೆ? ಇದಕ್ಕೆ ನೀವು ಇವತ್ತು ಉತ್ತರ ಕೊಡಬೇಕು ಏಕೆಂದರೆ, ಒಂದು ತಿಂಗಳಿನಿಂದ ಈ ರಾಜ್ಯದ ಹವಾಮಾನ ಇಲಾಖೆಯವರು ಎಚ್ಚರಿಕೆಯನ್ನು ಕೊಡುತ್ತಿದ್ದಾರೆ ನಿಮ್ಮ ಸರ್ಕಾರ ಬದುಕಿದ್ದರೆ, ಅದಕ್ಕೆ ಜೀವ ಇದ್ದರೆ, ನಿಮ್ಮ ಅಧಿಕಾರಿಗಳಿಗೆ ಏನಾದರೂ ಸ್ಪರ್ಶವಿದ್ದರೆ, ಇದನ್ನು ಏಕೆ ಸರ್ಕಾರದ ಗಮನಕ್ಕೆ ತರಲಿಲ್ಲ? ಇವತ್ತು ನೀವು 500 ಚಿಲ್ಲರೆ ಕೋಟಿ ರೂಪಾಯಿಯಷ್ಟು ನಷ್ಟವಾಗಿದೆಯೆಂದು ಹೇಳುತ್ತಿದ್ದೀರಿ ಈ ಲೆಕ್ಕದಿಂದಲೇ ನಿಮ್ಮ ಸರ್ಕಾರದಲ್ಲಿ ಹೊಂದಾಣಿಕೆಯಿಲ್ಲವೆಂದು ನಿಮ್ಮ ಹೇಳಿಕೆ ಹೇಳುತ್ತದೆ ಮಾನ್ಯ ಕಂದಾಯ ಮಂತ್ರಿಗಳು 478 ಕೋಟಿ ರೂಪಾಯಿಯಷ್ಟು ನಷ್ಟವಾಗಿದೆಯೆಂದು ಒಂದು ಕಡೆ ಹೇಳುತ್ತಾರೆ ಇನ್ನೊಂದು ಕಡೆ 5,558 ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ ಎಂದು ಹೇಳುತ್ತಾರೆ ಈ ಇಲಾಖೆಗೆ ಸ್ವಲ್ಪ ಪ್ರಜ್ಞೆ ಎನ್ನುವುದು ಏನಾದರೂ ಇದೆಯಾ? ಮಾನ್ಯ ಜಗದೀಶ್ ಶೆಟ್ಟರ್‌ರವರೇ ಹೇಳಿ 5,558 ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದ್ದರೆ, 478 ಕೋಟಿ ರೂಪಾಯಿಯಷ್ಟು ಮಾತ್ರ ನಷ್ಟವಾಗುತ್ತದೆಯೇ? ಇದು

ಯಾವ ಲೆಕ್ಕ ಸ್ವಾಮಿ? ಯಾವ ಅಧಿಕಾರಿ ನಿಮಗೆ ಈ ಲೆಕ್ಕವನ್ನು ಕೊಟ್ಟಿದ್ದು? ಇದು ಸರ್ಕಾರವನ್ನು ನಡೆಸುವಂತಹ ವಿಧಾನವೇ? ಇದು ಸರ್ಕಾರವೇ? ಈ ಸರ್ಕಾರಕ್ಕೆ ಘನತೆ, ಗೌರವ, ಮಾನ, ಮರ್ಯಾದೆ ಎನ್ನುವುದು ಏನಾದರೂ ಇದೆಯಾ? ಈ ಸರ್ಕಾರಕ್ಕೆ ಜವಾಬ್ದಾರಿ ಎನ್ನುವುದು ಇದೆಯಾ ಎನ್ನುವುದನ್ನು ಹೇಳಬೇಕು ಇನ್ನೊಂದು ಕಡೆ 39 ಜನ ಸತ್ತಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿಕೆ ಕೊಡುತ್ತಾರೆ ಆದರೆ ಸರ್ಕಾರದ ಇಲಾಖೆ 43 ಜನ ಸತ್ತಿದ್ದಾರೆ ಎಂದು ಹೇಳುತ್ತದೆ ಅಂದರೆ ಇವರಿಗೆ ಜನ ಸತ್ತರೂ ಲೆಕ್ಕವಿಲ್ಲ, ದನ ಸತ್ತರೂ ಲೆಕ್ಕವಿಲ್ಲ, ಬೆಳೆ ನಾಶವಾಗಿರುವುದಕ್ಕೆ ಸರಿಯಾದ ಲೆಕ್ಕವಿಲ್ಲ ಯಾವುದರ ಬಗ್ಗೆಯೂ ಕೂಡ ಒಂದು ಸರಿಯಾದಂತಹ, ಖಚಿತವಾದಂತಹ ಮಾಹಿತಿಯನ್ನು ಈ ಸರ್ಕಾರ ಕೊಡುವುದಕ್ಕೆ ಸಾದ್ಯವಿಲ್ಲ ಇವರ ಹತ್ತಿರ ಅಂಕಿ ಅಂಶಗಳು ಇಲ್ಲ ನಿಖರವಾಗಿ ಎಷ್ಟು ಜನ ಪ್ರವಾಹದಿಂದ ಸತ್ತಿದ್ದಾರೆ? ಎಷ್ಟು ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ? ಇಷ್ಟು ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದ್ದರೆ ಎಷ್ಟು ಹಣಕಾಸು ನಷ್ಟವಾಗಿದೆ ಎನ್ನುವ ಖಚಿತವಾದಂತಹ ಮಾಹಿತಿಯನ್ನು ಕೊಡುವುದಕ್ಕೆ ಇವತ್ತಿಗೂ ಸರ್ಕಾರಕ್ಕೆ ಆಗಲಿಲ್ಲ ಕೇಂದ್ರ ಸರ್ಕಾರದಿಂದ 157 ಕೋಟಿ ರೂಪಾಯಿ ನೆರವನ್ನು ಕೇಳಿದ್ದೇವೆಂದು ಹೇಳುತ್ತಾರೆ ಇಲ್ಲಿ 478 ಕೋಟಿ ರೂಪಾಯಿ ನಷ್ಟವೆಂದು ಹೇಳುತ್ತಾರೆ ಇದೇನು? ಒಂದು ಕಡೆ 5,558 ಹೆಕ್ಟೇರ್‌ನಲ್ಲಿ ಬೆಳೆ ನಾಶವೆಂದು ಹೇಳುತ್ತಾರೆ ಇದರಲ್ಲಿ ಯಾವುದು ಗ್ಯಾರಂಟಿ? ನೀವು ಕೇಂದ್ರ ಸರ್ಕಾರಕ್ಕೆ 157 ಕೋಟಿ ರೂಪಾಯಿ ನೆರವು ಕೇಳುತ್ತಿರುವುದು ಗ್ಯಾರಂಟಿನಾ? ಮಾನ್ಯ ಕೃಷಿ ಸಚಿವರು, ಮಳೆಯಿಂದಾಗಿ ಎಷ್ಟು ಸಾವಿರ ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ ಎಂದು ಹೇಳಬೇಕು ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ಮಳೆಯಾಗದೆ ಬಿತ್ತನೆಯಾಗಿಲ್ಲ ಆ ವಿಚಾರ ಕೃಷಿ ಇಲಾಖೆಯ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ ಮಳೆ ಬಾರದೇ ಇರುವುದರಿಂದ ಇನ್ನೂ ಕೆಲವು ಕಡೆ ಬಿತ್ತಿಲ್ಲ ನಮ್ಮ ಕೋಲಾರ ಜಿಲ್ಲೆಯಲ್ಲಿ ಇನ್ನೂ ಪೂರ್ತಿಯಾಗಿ ಬಿತ್ತಿಲ್ಲ 30 ರಿಂದ 40% ನಷ್ಟು ಬಿತ್ತಿದ್ದಾರೆ ಅಷ್ಟೆ ಇಂತಹ ಪರಿಸ್ಥಿತಿ ಬೇರೆ ಜಿಲ್ಲೆಗಳಲ್ಲಿ ಕೂಡ ಇದೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಈ ರೀತಿಯಾಗಿ ನಡೆಸುವುದಕ್ಕೆ ಈ ಸರ್ಕಾರ ಬೇಕಾ? ಇಂತಹ ಪರಿಸ್ಥಿತಿ ನಿರ್ಮಾಣವಾಗಿ, ಜನರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದಾರೆಂದು ದಿನಪತ್ರಿಕೆಯಲ್ಲಿ ಮತ್ತು ಟಿ ವಿ ಯಲ್ಲಿ ನೋಡುತ್ತಿದ್ದೇವೆ ಮಸುಕಿನಹಾಳದಲ್ಲಿ gate ಅನ್ನು

ತೆಗೆಯುವುದಕ್ಕೆ ನಿಮಗೆ ಯಾರು ಹೇಳಿದರು? ರಾಯಚೂರು ಜಿಲ್ಲೆಯಲ್ಲಿ ಇವತ್ತು ಪ್ರವಾಹ ಬಂದಿದೆ ಇದು ನಿಜವಾಗಿಯೂ ಕುಡ ಮಳೆಯಿಂದ ಬಂದಂತಹ ಪ್ರವಾಹವಲ್ಲ ಮೂರು ಗೇಟ್‌ಗಳನ್ನು ಒಂದೇ ಬಾರಿಗೆ ನೀವು ಏಕೆ ತೆಗೆಸಿದಿರಿ? ನಿನ್ನೆ ರಾತ್ರಿ ನಾನು ಟಿ ವಿ ಯಲ್ಲಿ ನೋಡಿದೆ, JrA • A ÆEA A¼AMAz A Island ಆಗಿದೆ ಏಕೆ? ಮೂರು ಗೇಟ್‌ಗಳಲ್ಲಿ ನೀವು ನೀರು ಬಿಟ್ಟಿದ್ದೀರಿ ಏಕೆ ಮೂರು ಗೇಟ್‌ಗಳಲ್ಲಿ ನೀರು ಬಿಟ್ಟಿರಿ? ಯಾವ ಕಾರಣಕ್ಕೋಸ್ಕರ ನೀರು ಬಿಟ್ಟಿರಿ ನಿಮ್ಮ ಅಧಿಕಾರಿಗಳ ಬೇಜವಾಬ್ದಾರಿ ತನದಿಂದ ಈ ಮೂರು ಗೇಟ್‌ಗಳಲ್ಲಿ ನೀರು ಬಿಟ್ಟಿರಾ? ಇವತ್ತು ಅದರ ಪರಿಣಾಮ ಏನಾಗಿದೆ? ಮಸ್ಕಿ ಪಟ್ಟಣದ ಸುತ್ತಲೂ ಕುಡಿಯುವುದಕ್ಕೆ ನೀರು ಇಲ್ಲದಂತಹ ಪರಿಸ್ಥಿತಿಯಾಗಿದೆ ಇವತ್ತು ಪತ್ರಿಕೆಯಲ್ಲಿ ನಾನು ನೋಡಿದೆ, ಪ್ರವಾಹದಲ್ಲಿ ಬಂದಂತಹ ನೀರನ್ನು ಕುಡಿದೇ ಜನರಿಗೆ ನಾನಾ ರೀತಿಯಾದಂತಹ ಖಾಯಿಲೆ ಪ್ರಾರಂಭವಾಗಿದೆ ಶುದ್ಧವಾದಂತಹ ನೀರಿಲ್ಲ ಇಡೀ ಉತ್ತರ ಕರ್ನಾಟಕದಲ್ಲಿ ಎಲ್ಲೆಲ್ಲಿ ಪ್ರವಾಹ ಪೀಡಿತವಾಗಿದೆ ಅಲ್ಲೆಲ್ಲೂ ಕೂಡ ಒಂದು ವಾರದಿಂದ ಜನರಿಗೆ ಸ್ವಚ್ಛವಾದಂತಹ ನೀರು ಕುಡಿಯುವುದಕ್ಕೆ ಇಲ್ಲ ಹಾಗಾದರೆ ಅವರ ಪರಿಸ್ಥಿತಿ ಏನು? ಈ ಸರ್ಕಾರ ಅದಕ್ಕೆ ಏನು ಕ್ರಮ ತೆಗೆದುಕೊಂಡಿದೆ? ಸತ್ತವರಿಗೆ ಪರಿಹಾರ ಹೆಚ್ಚು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಆದರೆ ಬದುಕಿರುವವರ ಪರಿಸ್ಥಿತಿ ಏನು? ಸರ್ಕಾರಕ್ಕೆ, ಸತ್ತವರಿಗೆ ಸ್ವಲ್ಪ ಹಣ ಕೊಟ್ಟುಬಿಟ್ಟರೆ ಸಮಾಧಾನವಾಗುತ್ತದೆ ಎನ್ನುವ ರೀತಿಯಲ್ಲಿ ಒಂದು ಅಭಿಪ್ರಾಯ ಬಂದು ಬಿಟ್ಟಿದೆ ಪ್ರವಾಹ ಪ್ರದೇಶದಲ್ಲಿ ಜನರು ಬದುಕಿದ್ದಾರಲ್ಲ, ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಏನು? ಅವರಿಗೆ ಆಹಾರದ ಪರಿಸ್ಥಿತಿ ಏನು? ಜಾನುವಾರುಗಳಿಗೆ ಮೇವಿನ ಪರಿಸ್ಥಿತಿ ಏನು? ಅವುಗಳ ರಕ್ಷಣೆ ಮಾಡುವಂತಹ ಪರಿಸ್ಥಿತಿ ಏನು? ಇದೇನು ಹೊಸದಾಗಿ ಬಂದಿದೆಯಾ? ಮೂರು ವರ್ಷದಿಂದ ಸತತವಾಗಿ ನಾವು ಬರವನ್ನು ಅನುಭವಿಸುತ್ತಿದ್ದೇವೆ ಸರ್ಕಾರ ಏಕೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದೆ? ಯಾವುದೇ ಒಂದು ಜವಾಬ್ದಾರಿ ಇರುವಂತಹ ಸರ್ಕಾರ ಮುಂಗಾರು ಪ್ರಾರಂಭವಾಗುವಂತಹ ಸಂದರ್ಭದಲ್ಲಿ, ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ನಾವು ನಿರೀಕ್ಷೆ ಮಾಡಿರಬೇಕು ಸರ್ಕಾರಕ್ಕೆ ಏನಾದರೂ ಸ್ಪರ್ಶವಿದ್ದರೆ, ಜೀವಂತವಾಗಿರುವಂತಹ ಸರ್ಕಾರಗಳು ಇದನ್ನು ನಿರೀಕ್ಷೆ ಮಾಡುತ್ತವೆ ಈಗ ಮುಂಗಾರು ಪ್ರಾರಂಭವಾಗುತ್ತಿದೆ, ಇಂತಹ ಪರಿಸ್ಥಿತಿ ಬರಬಹುದಾ ಎಂದು ನರೀಕ್ಷೆಯನ್ನು ಮಾಡಬೇಕಾಗುತ್ತದೆ

ನಿರೀಕ್ಷೆ ಮಾಡಿ ಇಂತಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಬೇಕಾಗಿರುವಂತಹ ಸಿದ್ದತೆಗಳನ್ನು ಜವಾಬ್ದಾರಿ ಇರುವಂತಹ ಸರ್ಕಾರ ಮಾಡಿಕೊಳ್ಳಬೇಕಾಗುತ್ತದೆ ಇವರು ಏನು ಸಿದ್ದತೆಗಳನ್ನು ಮಾಡಿದ್ದಾರೆ? ಹೋದ ವರ್ಷ ಕೂಡ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು ಮಾನ್ಯ ಧರ್ಮ್‌ಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು ಅದರ ನಂತರವೂ ಕೂಡ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಗೊತ್ತಿದ್ದರೂ ಕೂಡ ಇದಕ್ಕೆ ಪೂರ್ವ ಸಿದ್ಧತೆಯನ್ನು ಈ ಸರ್ಕಾರ ಏನು ಮಾಡಿಕೊಂಡಿತ್ತು? ಈ ಸರ್ಕಾರಕ್ಕೆ ಯಾವುದೇ ರೀತಿಯಾದಂತಹ ಪೂರ್ವ ಸಿದ್ಧತೆ ಇಲ್ಲ ಇವರು ಪರಿಹಾರ ಜಾಸ್ತಿ ಕೊಡುತ್ತೇವೆಂದು ಹೇಳಿರುವುದು "ಸಂತೆ ಪ್ರಾರಂಭವಾಗುವ ಹೊತ್ತಿಗೆ ಮೂರು ಮೊಳ ಸೀರೆ ನೇಯ್ದ ಹಾಗೆ" ಎನ್ನುವ ರೀತಿಯಲ್ಲಿ ತಯಾರಿ ನಡೆಸುವುದಕ್ಕೆ ಹೊಗಿದ್ದಾರೆ ಮಾನ್ಯ ಯಡಿಯೂರಪ್ಪನವರೆ, ಪರಿಹಾರ ಕೊಟ್ಟರೆ ಏನೂ ಪ್ರಯೋಜನವಿಲ್ಲ ಇವತ್ತು ಪ್ರವಾಹಕ್ಕೆ ಗುರಿಯಾಗಿರುವಂತಹ ಪ್ರದೇಶದಲ್ಲಿ ಇರುವಂತಹ ಜನರಿಗೆ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಬೇಕು ಅವರಿಗೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಕೊಡಬೇಕು ಬೆಳೆ ನಾಶವಾಗಿರುವಂತಹ ರೈತರಿಗೆ ಯಾವ ರೀತಿಯಾದಂತಹ ಪರಿಹಾರವನ್ನು ಕೊಡಬೇಕು ಮತ್ತು ಬೆಳೆ ಬಿತ್ತುವುದಕ್ಕೆ ಅವರಿಗೆ ಏನು ವ್ಯವಸ್ಥೆ ಮಾಡಿಕೊಡಬೇಕು ಎನ್ನುವಂತಹ ಕಾರ್ಯಕ್ರಮವನ್ನು ನೀವು ರೂಪಿಸದೇ, ಪ್ರವಾಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಮಾನ್ಯ ಯಡಿಯೂರಪ್ಪನವರೆ, ಇದನ್ನೆಲ್ಲಾ ಎದುರಿಸಬೇಕಾದರೆ ನಿಮ್ಮ ಆಡಳಿತ ಯಂತ್ರ ಇದೆಯಲ್ಲ, ಅದರ ಪರಿಸ್ಥಿತಿಯನ್ನು ನೋಡಿ ನೀವು ಮತ್ತು ನಿಮ್ಮ ಮುಖ್ಯಮಂತ್ರಿಗಳು ದಿನಬೆಳಗಾದರೆ, ಅಧಿಕಾರಿಗಳು ಪ್ರಯೋಜನ ಇಲ್ಲ, ಅಧಿಕಾರಿಗಳು ನಮ್ಮ ಮಾತು ಕೇಳುವುದಿಲ್ಲ, ಅಧಿಕಾರಿಗಳು ಕೆಲಸ ಮಾಡುತ್ತಿಲ್ಲವೆಂದು ನೀವುಗಳೇ ಹೇಳುತ್ತಿದ್ದೀರಿ ಅವರು ಸೋಮಾರಿಗಳು, ನಿಜ, ಮಾನ್ಯ ಯಡಿಯೂರಪ್ಪನವರೆ, ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ ಬಾಗೇಪಲ್ಲಿಯಲ್ಲಿ ಒಂದು park ಆಗಬೇಕೆಂದು ನಾನೊಂದು ಪತ್ರವನ್ನು ನಿಮಗೆ ಕೊಟ್ಟಿದ್ದೆ Budget ಅಧಿವೇಶನದಲ್ಲಿ ಅದಕ್ಕೆ ಹಣ ಬೇಕೆಂದು ಕೇಳಿದ್ದೆ ನೀವು ಆ ಪತ್ರದ ಮೇಲೆ ಬರೆದಿದ್ದೀರಿ ಈ ಬಗ್ಗೆ ತಕ್ಷಣ ಅಗತ್ಯ ಕ್ರಮ ತೆಗೆದುಕೊಂಡು ಹಣ ಬಿಡುಗಡೆ ಮಾಡಿಯೆಂದು ಹೇಳಿದ್ದೀರಿ

ಇವತ್ತಿಗೂ ಆ ಪತ್ರ ಏನಾಗಿದೆಯೆಂಬುದು ನಿಮ್ಮ ಇಲಾಖೆಗೆ ಗೊತ್ತಿಲ್ಲ ನಾನು ಎರಡನೇ ತಿಂಗಳಲ್ಲಿ ಕೇಳಿದ್ದು, ಈಗ ನಾವು ಯಾವ ತಿಂಗಳಲ್ಲಿ ಇದ್ದೇವೆ? ನಾನು ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವಂಥ ಶಾಸಕ, ನಾನು ತಮ್ಮಲ್ಲಿ ವಿನಂತಿಸಿಕೊಂಡು, ತಮಗೆ ಒಂದು ಪತ್ರವನ್ನು ಕೊಟ್ಟೆ, ತಾವು ಆ ಪತ್ರದ ಮೇಲೆ ಬರೆದಿದ್ದೀರಿ ನಿಮ್ಮ ಬರವಣಿಗೆಗೆ ಏನು ಬೆಲೆ ಇದೆ? ಇದು ಆಗಿ ಆರು ತಿಂಗಳುಗಳಾಗಿದೆ ಇದುವರೆಗೂ ಅದು ಆಚೆಗೆ ಬಂದಿಲ್ಲ ತಾವು ಹಣ ಕೊಡುತ್ತೀರೋ, ಬಿಡುತ್ತೀರೋ, ಅದಾದರೂ ತೀರ್ಮಾನವಾಗಬೇಕಲ್ಲಾ? ನಾನು ಒಬ್ಬ ಶಾಸಕನಾಗಿ ಕೇಳಿದೆ ಇಂಥ ಅಗತ್ಯತೆ ಇದೆ, ಹಣ ಕೊಡಿಯೆಂದು ಕೇಳಿದೆ ನೀವು ಒಬ್ಬ ಹಣಕಾಸಿನ ಮಂತ್ರಿಯಾಗಿ, ಒಬ್ಬ ಉಪ ಮುಖ್ಯಮಂತ್ರಿಯಾಗಿ ಬರೆದಿದ್ದೀರಿ ಇದಕ್ಕೆ ಏನು ಬೆಲೆ ಇದೆ? ಇದು ಆಗಿ ಆರು ತಿಂಗಳುಗಳಾಗಿದೆ ಇವತ್ತಿಗೆ ಹಣ ಕೊಡುತ್ತೇವೆ ಅಥವಾ ಇಲ್ಲವೆಂದು ತೀರ್ಮಾನ ಮಾಡುವುದಕ್ಕೆ ಆರು ತಿಂಗಳುಗಳ ಕಾಲ ಬೇಕಾ? ಹೇಳಿ, ಮಾನ್ಯ ಬಿ ಎಸ್ ಯಡಿಯೂರಪ್ಪನವರೆ, ಇದು ನಿಮ್ಮದೇ ಸ್ವಂತ ಇಲಾಖೆಯಾಗಿದೆ ಇದಕ್ಕೆ ಆರು ತಿಂಗಳು ಬೇಕಾ? ನಾನು ಏಕೆ ಉದಾಹರಣೆಯನ್ನು ಹೇಳುತ್ತಿದ್ದೇನೆಂದರೆ, ನಿಮ್ಮ ಆಡಳಿತ ಯಂತ್ರಾಂಗದ ಸ್ಥಿತಿ ಇದು ನೀವು ಈ ರಾಜ್ಯವನ್ನು ನಡೆಸುತ್ತೀರಿ ಈ ರಾಜ್ಯದ ಜನರಿಗೆ ನೀವು ಏನು ಕೊಡುತ್ತೀರಿ? ಈ ರಾಜ್ಯದ ಜನರ ಸಮಸ್ಯೆಯನ್ನು ಏನು ಪರಿಹಾರ ಮಾಡುತ್ತೀರಿ? ತಾವು ಗ್ರಾಮ ವಾಸ್ತವ್ಯವೆಂದು ಹೇಳುತ್ತೀರಿ, ಜನತಾ ದರ್ಶನವೆಂದು ಹೇಳುತ್ತೀರಿ ಮಾನ್ಯ ಅಲಂಗೂರು ಶ್ರೀನಿವಾಸ್‌ರವರು ಇಲ್ಲಿ ಇಲ್ಲ, ಎಲ್ಲಿಗೋ ಹೋಗಿದ್ದಾರೆ ಇವರು ಸಾರ್ವಜನಿಕರ ಕುಂದು ಕೊರತೆ ವಿಚಾರಣೆಗೆ ಒಂದು ಸಭೆ ಎಂದು ಹೇಳುತ್ತಾರೆ ಒಂದು ತಾಲ್ಲೂಕಿಗೆ ಬರುತ್ತಾರೆ ಇಂಥ ಆಡಳಿತವನ್ನು ನೀವು ಕಟ್ಟಿಕೊಂಡು, ಯಾವ ಜನರ ಸಮಸ್ಯೆಯನ್ನು, ಸಾಮಾನ್ಯ ಜನರ ಪರಿಸ್ಥಿತಿಯನ್ನು, ಸಮಸ್ಯೆಯನ್ನು ನೀವು ಏನು ಪರಿಹಾರ ಮಾಡುತ್ತೀರಿ? ನೀವು ಪರಿಹಾರ ಮಾಡುವುದಕ್ಕೆ ಏನು ಸಾಧ್ಯವಿದೆಯೆಂಬುದನ್ನು ಹೇಳಿ ಈ ರೀತಿ ಕುಸಿದು ಹೋಗಿರುವಂಥ ಆಡಳಿತ ಯಂತ್ರಾಂಗವನ್ನು ನೀವು ಕಟ್ಟಿಕೊಂಡು ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಸಾಧ್ಯತೆ ಇದೆಯಾ? ಮಾನ್ಯ ಕಂದಾಯ ಸಚಿವರು ಸದನದಲ್ಲೇ ಇದ್ದಾರೆ ಇವರು ನಮ್ಮ ಕೋಲಾರ ಜಿಲ್ಲೆಗೆ ಬಂದರು ಅಲ್ಲಿ ಬರಗಾಲದ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡುತ್ತೇವೆಂದು ಹೇಳಿದರು ಇಷ್ಟು ಕೋಟಿ ರೂಪಾಯಿಗಳನ್ನು

ಬಿಡುಗಡೆ ಮಾಡುತ್ತೇವೆಂದು ಹೇಳಿದರು, ಮತ್ತೆ ಹಣವನ್ನು ಬಿಡುಗಡೆ ಮಾಡಿದ್ದೇನೆಂದು ಹೇಳಿದರು ಆ ಸಭೆಯಲ್ಲಿ ಮಾನ್ಯ ಎಸ್ ರಾಜೇಂದ್ರನ್ ರವರು ಸಹ ಇದ್ದರು ಇವತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನೀವು ಹೇಳಿದ್ದರಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅಲ್ಲಿಗೆ ಎಷ್ಟು ಹಣ ಬಂದಿದೆ? ಕುಡಿಯುವ ನೀರಿಗೆ ತುರ್ತಾಗಿ ಬೋರ್‌ವೆಲ್‌ಗಳನ್ನು ಕೊರೆಸಬೇಕೆಂದು ನೀವೇ ಹೇಳಿದ್ದೀರಿ ಬೋರ್‌ವೆಲ್‌ಗಳನ್ನು ಕೊರೆಸಿ ನಾಲ್ಕು ತಿಂಗಳುಗಳಾಗಿದೆ ಅಲ್ಲಿ ಬೋರ್‌ವೆಲ್‌ಗಳನ್ನು ಕೊರೆದವರಿಗೆ ಒಂದು ರೂಪಾಯಿ ಹಣವನ್ನು ಕೊಟ್ಟಿಲ್ಲ ಸ್ಟೇಟ್ ಸೆಕ್ಟಾರ್‌ನಲ್ಲಿ, ಸೆಂಟ್ರಲ್ ಸೆಕ್ಟಾರ್‌ನಲ್ಲಿ, ಎರಡರಲ್ಲೂ ಬೋರ್‌ವೆಲ್‌ಗಳನ್ನು ಕೊರೆಸಿದ್ದೀರಿ ಇದು ಆಗಿ ನಾಲ್ಕು ತಿಂಗಳುಗಳಾಯಿತು, ಹಣ ಬಂದಿಲ್ಲ ಬೋರ್‌ವೆಲ್‌ಗಳನ್ನು ಕೊರೆದಿರುವಂಥ ಕಂಟ್ರಾಕ್ಟರ್‌ಗಳು ಈಗ ನಮ್ಮ ಕುತ್ತಿಗೆಯನ್ನು ಹಿಡಿದಿದ್ದಾರೆ ಬೋರ್‌ವೆಲ್ ಕೊರೆದರೆ ಅದಕ್ಕೆ ಮೋಟರ್ ಇಲ್ಲ, ಪಂಪ್ ಇಲ್ಲ, ಪೈಪ್ ಇಲ್ಲ ನೀವು ಬರಗಾಲದಲ್ಲಿ ಜನರಿಗೆ ಏನು ಕುಡಿಯುವುದಕ್ಕೆ ನೀರನ್ನು ಕೊಟ್ಟಿದ್ದೀರಿ? ಹಣವನ್ನು ಎಲ್ಲಿ ಕೊಟ್ಟಿದ್ದೀರಿ? ನೀವು ಒಂದೊಂದು ಕ್ಷೇತ್ರಕ್ಕೆ ನೂರು ಲಕ್ಷ ರೂಪಾಯಿಗಳೆಂದು ಹೇಳಿದ್ದೀರಿ ನಿಮ್ಮ ಜಿಲ್ಲಾಧಿಕಾರಿಗಳು ಏನು ಮಾಡಿದರು? ಮೊದಲನೆಯ ಕಂತು 18 ಲಕ್ಷ ರೂಪಾಯಿಗಳೆಂದು ಹೇಳಿ ಅದನ್ನು ಬಿಡುಗಡೆ ಮಾಡಿ, ಕೊನೆಗೆ ಅದನ್ನು 18 ಲಕ್ಷ ರೂಪಾಯಿಗಳಿಗೆ ಮುಗಿಸಿಬಿಟ್ಟರು ಇವರು ಹೇಳಿದಂತೆ ನೂರು ಲಕ್ಷ ರೂಪಾಯಿಗಳು ಪ್ರತಿ ಕ್ಷೇತ್ರಕ್ಕೆ ಎಂದು ಹೇಳಿದ್ದು, ಕೊಡಲೇ ಇಲ್ಲ ಇವರು 18ಲಕ್ಷ, 19 ಲಕ್ಷ ರೂಪಾಯಿಗಳಿಗೆ ಮುಗಿಸಿಬಿಟ್ಟರು ನೀವು ರಾಜ್ಯಕ್ಕೆ ಹೇಳಿದ್ದು ಏನು? ಒಂದೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಬರಗಾಲ ಪರಿಹಾರಕ್ಕೆ ನೀಡಿದ್ದೇವೆಂದು ಹೇಳಿ, ನೀವು ಘೋಷಣೆ ಮಾಡಿದ್ದೀರಿ ನೀವು ಜಿಲ್ಲಾಧಿಕಾರಿಗಳ ಬಳಿ ಲೆಕ್ಕವನ್ನು ತೆಗೆದುಕೊಳ್ಳಿ ನೀವು ವಾಸ್ತವವಾಗಿ ಬರಗಾಲಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಇವತ್ತು ಬೋರ್‌ವೆಲ್‌ಗಳಿಗೆ ಮೋಟರ್ ಕೊಟ್ಟಿದ್ದೀರಾ? ಪಂಪ್ ಕೊಟ್ಟಿದ್ದೀರಾ? ಕಾಂಟ್ರಾಕ್ಟ್‌ದಾರರಿಗೆ ದುಡ್ಡನ್ನು ಕೊಟ್ಟಿದ್ದೀರಾ? ಇಲ್ಲ ಇದು ನಿಮ್ಮ ಆಡಳಿತ ವ್ಯವಸ್ಥೆಯ ಪರಿಸ್ಥಿತಿಯಾಗಿದೆ ಇಂಥ ಆಡಳಿತ ವ್ಯವಸ್ಥೆಯನ್ನು ಇವತ್ತು ನೀವು ಇಟ್ಟುಕೊಂಡಿದ್ದೀರಿ ಈ ಸ್ಥಿತಿಗೆ ಆಡಳಿತ ವ್ಯವಸ್ಥೆ ಬಂದಿದೆಯೆಂಬುದು ಗೊತ್ತಿದೆಯೇನು? ಸರ್ಕಾರ ನಡೆಸುತ್ತಿರುವಂಥ ಜನರಿಗೆ ಆಡಳಿತದ ಮೇಲೆ ಹಿಡಿತವಿಲ್ಲ ಈ ಸರ್ಕಾರದ ಬಗ್ಗೆ ಯಾವುದೇ ರೀತಿಯಾದಂಥ ನಂಬಿಕೆ

ಅಧಿಕಾರಿಗಳಿಗೆ ಇಲ್ಲ ಇದು ಉಳಿಯುತ್ತದೊ, ಹೋಗುತ್ತದೋ, ಯಾವಾಗ ಏನು ಮಾಡುತ್ತಾರೋ, ನಾನು ಇಲ್ಲಿ ಎಷ್ಟು ದಿವಸ ಇರುತ್ತೇನೋ ಎಂಬ ಬಗ್ಗೆ ಯಾವ ಅಧಿಕಾರಿಗಳಿಗೂ ಗ್ಯಾರಂಟಿ ಇಲ್ಲ ಇಲ್ಲಿ ನಾನು ಆರು ತಿಂಗಳುಗಳು ಇರುತ್ತೇನೆಂದು ಯಾರಿಗೂ ಗ್ಯಾರಂಟಿ ಇಲ್ಲ ಯಾವ ಅಧಿಕಾರಿಗೂ ಇಲ್ಲಿ ನಾನು ಒಂದು ವರ್ಷವಿರುತ್ತೇನೆಂದು ಗ್ಯಾರಂಟಿ ಇಲ್ಲ ಇವರು ರಾತ್ರೋರಾತ್ರಿ ಟ್ರಾನ್ಸ್‌ಫರ್ ಆಗುತ್ತಾರೆ ಯಾರ್ಯಾರನ್ನು ಎಲ್ಲೆಲ್ಲಿಗೆ ಎತ್ತಂಗಡಿ ಮಾಡುತ್ತಾರೋ ಗೊತ್ತಿಲ್ಲ ಆ ರೀತಿಯಾದರೆ ಈ ರಾಜ್ಯದ ಯಂತ್ರಾಂಗದ ಪರಿಸ್ಥಿತಿ ಇವತ್ತು ಏನಾಗುತ್ತದೆ? ಇದರ ಪರಿಣಾಮ ಏನು ಆಗಿದೆ? ಇವತ್ತು ಸರ್ಕಾರ ಇದೆಯಾ? ಒಂದು ಸರ್ಕಾರ ನಡೆಯುತ್ತಿದೆಯಾ ಎನ್ನುವಂಥಾದ್ದೆ ಇವತ್ತು ಸಾಮಾನ್ಯ ಮನುಷ್ಯನಿಗೆ ಗುಮಾನಿ ಬಂದು ಬಿಟ್ಟಿದೆ ಇಲ್ಲಿ ಒಂದು ಸರ್ಕಾರವಿದೆಯೆಂದು ಹೇಳುವಂಥ ಪರಿಸ್ಥಿತಿಯು ಅವರಿಗೆ ಇಲ್ಲ ಇದು ಬಹುಶಃ ನಿನ್ನೆ ದಿವಸ ಗೊತ್ತಾಗಿರಬೇಕು ಮಾನ್ಯ ಬಿ ಎಸ್ ಯಡಿಯೂರಪ್ಪನವರು ಗೆಜ್ಜಲಗೆರೆಗೆ ಹೋಗಿದ್ದಾಗ ಅಲ್ಲಿ ಜನರು ಘೇರಾವ್ ಹಾಕಿದ ಮೇಲೆ ಪೊಲೀಸ್‌ನವರು ಲಾರಿ ಚಾರ್ಜ್ ಮಾಡಿದಾಗ, ಸರ್ಕಾರವಿದೆಯೆಂದು ಜನರಿಗೆ ಗೊತ್ತಾಗಿರಬೇಕು ಆಗ ಸರ್ಕಾರವಿದೆ, ಏಕೆಂದರೆ ನಮ್ಮ ಮೇಲೆ ಲಾರಿ ಚಾರ್ಜ್ ಮಾಡಿದ್ದಾರೆ ಎಂದು ಗೊತ್ತಾಗಿದೆ ಮಾನ್ಯ ಯಡಿಯೂರಪ್ಪನವರೆ, ತಾವು ಸಾಲ ಮನ್ನಾ ವಿಷಯವನ್ನು ಪ್ರಕಟಣೆ ಮಾಡಿದಾಗ ನಾವು ಕೋಲಾರ ಜಿಲ್ಲೆಯವರು ಬಂದು ಬೇಡಿಕೊಂಡೆವು ನಮ್ಮ ಜಿಲ್ಲೆಯ ರೈತರಿಗೆ ನಿಮ್ಮ ಸಾಲ ಮನ್ನಾ ಯೋಜನೆಯಿಂದ ಒಂದು ನಯಾಪೈಸೆ ಪ್ರಯೋಜನವಾಗುವುದಿಲ್ಲ, ಏಕೆಂದರೆ ಕಳೆದ ಎರಡು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಒಬ್ಬ ರೈತನಿಗೆ ಒಂದು ರೂಪಾಯಿ ಸಾಲವನ್ನು ಕೊಟ್ಟಿಲ್ಲ ನಮ್ಮ ಜಿಲ್ಲೆಯಲ್ಲಿ ಡಿ ಸಿ ಸಿ ಬ್ಯಾಂಕ್ ದಿವಾಳಿಯಾಗಿದೆ ಸೊಸೈಟಿಗಳು ದಿವಾಳಿ ಎದ್ದು ಹೋಗಿದೆ ನಮ್ಮ ಜಿಲ್ಲೆಯಲ್ಲಿ ಇದರಿಂದ ಯಾರಿಗೆ ಪ್ರಯೋಜನವಾಗುತ್ತದೆ? ನಾವು ಈ ವಿಷಯವನ್ನು ಅವತ್ತೇ ಹೇಳಿದೆವು ನೀವು ದಿ 1 1 2006 ಎಂದು ಕಟಾಫ್ ಡೇಟ್ ಏನು ಮಾಡಿದ್ದೀರಿ ಅದರಿಂದ ನಮ್ಮ ಜಿಲ್ಲೆಗೆ ಏನು ಪ್ರಯೋಜನವಾಗುವುದಿಲ್ಲ, ನಮಗೆ ಏನಿದ್ದರೂ 2001 ಎಂದು ಹೇಳಿದರೆ, ನಮ್ಮ ಜಿಲ್ಲೆಯವರಿಗೆ ಪ್ರಯೋಜನವಾಗುತ್ತದೆ ನಮ್ಮ ಜಿಲ್ಲೆಯಲ್ಲಿ ಡಿ ಸಿ ಸಿ ಬ್ಯಾಂಕ್ ಮುಚ್ಚಿ ಹೋಗಿದೆ ಯಾವ ಸೊಸೈಟಿಗಳು ಸಾಲವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇಲ್ಲ, ಎಲ್ಲಿಗೋ

ಹೋಗಿದ್ದಾರೆ ರೈತರಿಗೆ ಸಾಲವನ್ನು ಕೊಡಬೇಕಾದರೆ, ಅವರಿಗೆ ಯಾವ ಸಂದರ್ಭದಲ್ಲಿ ಸಾಲವನ್ನು ಕೊಡಬೇಕು? ಬೆಳೆ ಇಡುವಂಥ ಸಂದರ್ಭದಲ್ಲಿ, ಇಲ್ಲಿ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಇದ್ದಾರೆ, ಮಾನ್ಯ ಜೆ ಸಿ ಮಾಧುಸ್ವಾಮಿಯವರು ಇದ್ದಾರೆ ಇವರು ಡಿ ಸಿ ಸಿ ಬ್ಯಾಂಕ್‌ನಲ್ಲಿ ಭಾರಿ ಅನುಭವವಿರುವಂಥವರು ರೈತರಿಗೆ ಸಾಲವನ್ನು ಕೊಡುವಂಥ ಸಮಯ ಯಾವುದಂಬುದು ಸರ್ಕಾರಕ್ಕೆ ಗೊತ್ತಿದೆಯಾ? ರೈತರಿಗೆ ಯಾವಾಗ ಸಾಲವನ್ನು ಕೊಡಬೇಕು? ಯಾವ ಯಾವುದಕ್ಕೆ ಸಾಲವನ್ನು ಕೊಡಬೇಕು? ಯಾವಾಗ ರೈತರಿಗೆ ಸಾಲವನ್ನು ಕೊಟ್ಟರೆ ಪ್ರಯೋಜನವಾಗುತ್ತದೆ? ಎಂಬುದು ಸರ್ಕಾರಕ್ಕೆ ಗೊತ್ತೇ ಇಲ್ಲ ರೈತರಿಗೆ ಸಾಲ ಬೇಕಾಗಿರುವಂಥದ್ದು ಮೇ ತಿಂಗಳಿಂದ ಜೂನ್ ತಿಂಗಳವರೆಗೂ ಅಷ್ಟೆ ಅವರಿಗೆ ಕಾರೀಫ್, ರಬಿಯಲ್ಲಿ ಅಷ್ಟೆ ಸಾಲ ಬೇಕಾಗಿರುವುದು, ಮತ್ತೆ ಅವರಿಗೆ ಸಾಲ ಬೇಕಾಗಿಲ್ಲ ಆ ಸಮಯದಲ್ಲಿ ಸರ್ಕಾರ ರೈತರಿಗೆ ಸಾಲವನ್ನು ಕೊಡುವಂಥ ವ್ಯವಸ್ಥೆ ಏನಾದರೂ ಮಾಡಿದ್ದೀರಾ? ಅದಕ್ಕೆ ನಿಮ್ಮ ವ್ಯವಸ್ಥೆ ಏನು? ದೇಶಕ್ಕೆಲ್ಲಾ 25,000 ಸಾಲ ಮನ್ನಾ ಎಂದು ಹೇಳಿಕೊಂಡು ಬಂದರಲ್ಲಾ, ಇದರಿಂದ ಎಷ್ಟು ಕುಟುಂಬಗಳಿಗೆ ಪ್ರಯೋಜನವಾಗಿದೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಒಬ್ಬ ರೈತನಿಗೂ ಇದರಿಂದ ಪ್ರಯೋಜನವಾಗಿಲ್ಲ ಇದರಿಂದ ಯಾರಿಗೆ ಪ್ರಯೋಜನವಾಗಿದೆ? ಇದನ್ನು ಬಿಡಿ ಇವತ್ತು ಈ ಪ್ರವಾಹದ ಬಗ್ಗೆ ಇಷ್ಯೂ ಇರುವಂಥಾದ್ದು ಈ ಪ್ರವಾಹ ಎನ್ನುವಂಥಾದ್ದು ಪ್ರಕೃತಿ ವಿಕೋಪ ಎಂದು ದಯವಿಟ್ಟು ಹೇಳಬೇಡಿ ನಿಮ್ಮ ಅಸಮರ್ಥತತೆಯಿಂದ ಇದು ಆಗಿರುವಂಥಾದ್ದು ಸರ್ಕಾರಗಳ ಬೇಜವಾಬ್ದಾರಿತನದಿಂದ ಇವತ್ತು ಪ್ರವಾಹ ಪೀಡಿತವಾಗಿರುವಂಥಾದ್ದು ಇದು ಏಕೆ ಎಂಬುದು ಗೊತ್ತೇನು? ಮಾನ್ಯ ಜೆ ಸಿ ಮಾಧುಸ್ವಾಮಿಯವರು ಮಾತನಾಡುವ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಿದರು ಅವರು ಇನ್ನು ವಿವರವಾಗಿ ಹೇಳುತ್ತಾರೆಂದು ನಿರೀಕ್ಷೆ ಮಾಡಿದ್ದೆ ಕೆರೆಗಳಲ್ಲಿ ಹೂಳು ತುಂಬಿ ಹೋಗಿದೆ ನೀರು ಸ್ಟೋರ್ ಮಾಡುವಂಥ ಕೆಪಾಸಿಟಿ ಇಲ್ಲ ಕಾಲುವೆಗಳು ಹೋಗಿ ಬಿಟ್ಟಿವೆ, ನೀರು ಅಬ್ಸರ್ವ್ ಮಾಡುವಂಥ ಶಕ್ತಿ ಅದಕ್ಕೆ ಇಲ್ಲ ನದಿ ತಳಕ್ಕೆ ಹೋಗಿ ಬಿಟ್ಟಿದೆ, ನೀರು ಹರಿಯುವುದನ್ನು ತಡೆದುಕೊಳ್ಳುವಂಥ ಶಕ್ತಿ ಅವುಗಳಿಗೆ ಇಲ್ಲ ಯಾವುದಕ್ಕೂ ಎರಡು ಹದ ಮಳೆ ಬಿದ್ದರೆ, ನಮ್ಮ ಕಡೆ ಕೆರೆ ಒಂದೂ ಉಳಿಯುವುದಿಲ್ಲ, ಏಕೆಂದರೆ ಕೆರೆಗಳೆಲ್ಲಾ ಹಾಳಾಗಿ ಹೊಗಿದೆ, ಅದರ ಶಕ್ತಿಯನ್ನು ಕಳೆದುಕೊಂಡು ಬಿಟ್ಟಿದೆ, ಸಿಲ್ಟ್ ಆಗಿದೆ ಯಾವ ಟೌನ್‌ಗಳಲ್ಲೂ

ಚರಂಡಿಗಳಲ್ಲಿ ನೀರು ಹೋಗುವುದಿಲ್ಲ ಈ ಚರಂಡಿಗಳು ಮುಚ್ಚಿ ಹೋಗಿದೆ ಇದಕ್ಕೆ ಉದಾಹರಣೆಯನ್ನು ಹೇಳಿದ್ದಾರಲ್ಲಾ, ಬೆಂಗಳೂರಿನಲ್ಲಿ ಮಳೆ ಬಿದ್ದರೆ, ಮನೆಗಳಿಗೆ ಏಕೆ ನೀರು ನುಗ್ಗುತ್ತದೆಂದರೆ, ಮಳೆಯಿಂದ ಬಿದ್ದಂತಹ ನೀರು, ಹೋಗುವುದಕ್ಕೆ ನಾವು ಎಲ್ಲಾದರೂ ಜಾಗವನ್ನು ಮಾಡಿರಬೇಕಲ್ಲಾ, ಹಳ್ಳಿಗಳಲ್ಲಿ, ಟೌನ್‌ಗಳಲ್ಲಿ ಮಳೆಯಿಂದ ನೀರು ಬಿದ್ದರೆ, ಆ ನೀರು ಹೊರಗಡೆ ಹೋಗುವುದಕ್ಕೆ ನಮ್ಮಲ್ಲಿ ಒಂದು ವ್ಯವಸ್ಥೆ ಇರಬೇಕಲ್ಲಾ ಇದಕ್ಕೆ ಏನು ವ್ಯವಸ್ಥೆ ಇದೆ? ಟೌನ್‌ಗಳಲ್ಲಿ, ಹಳ್ಳಿಗಳಲ್ಲಿ ಮಳೆ ಬಿದ್ದರೆ, ಆ ನೀರು ಹೋಗುವುದಕ್ಕೆ ಎಲ್ಲಾದರೂ ಹೋಗುವುದಕ್ಕೆ ಒಂದು ವ್ಯವಸ್ಥೆ ಇರಬೇಕಲ್ಲಾ ಇದು ಹೋಗುವುದಕ್ಕೆ ಎಲ್ಲೂ ವ್ಯವಸ್ಥೆ ಇಲ್ಲ ಅದನ್ನು ಶೇಖರಣೆ ಮಾಡುವುದಕ್ಕೆ ವ್ಯವಸ್ಥೆ ಇಲ್ಲದಾಗ ಅದು ಮನೆಗಳಿಗೆ ನುಗ್ಗದೇ ಇನ್ನು ಎಲ್ಲಿಗೆ ಹೋಗುತ್ತದೆ? ಆಗ ಪ್ರವಾಹ ಬಂತು, ಮನೆಗಳು ಕೊಚ್ಚಿಕೊಂಡು ಹೋಯಿತು, ಎಂದು ಹೇಳುವುದು ಮನೆ ಕೊಚ್ಚಿಕೊಂಡು ಹೋಗಿದ್ದು ಪ್ರವಾಹದಿಂದ ಅಲ್ಲ ನಿಮ್ಮ ಬೇಜವಾಬ್ದಾರಿತನದಿಂದ, ನಿಮ್ಮ ದೂರದೃಷ್ಟಿ ಕೊರತೆಯಿಂದ, ನಿಮ್ಮ ಅಭಿವೃದ್ಧಿ ದೃಷ್ಟಿಹೀನತೆಯಿಂದ ಆ ರೀತಿಯಾಗಿರುವಂಥಾದ್ದು ಅಂಥಾ ದೊಡ್ಡ ಮಳೆ ನಮಗೆ ಏನೂ ಆಗುವುದಿಲ್ಲ, ಆಗುವುದೂ ಇಲ್ಲ, ಆಗಿಯೂ ಇಲ್ಲ ಆದರೆ ಬಿದ್ದಂತಹ ಆ ಸಣ್ಣ ಮಳೆಯನ್ನೇ ತಡೆದುಕೊಳ್ಳುವಂಥಾ ಶಕ್ತಿಯನ್ನು ಇವತ್ತು ನಾವು ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಸೃಷ್ಟಿ ಮಾಡಿಲ್ಲ ನಮ್ಮ ಕೆರೆಗಳಲ್ಲಿ ಸೃಷ್ಟಿ ಮಾಡಿಲ್ಲ ನಮ್ಮ ಕಾಲುವೆಗಳಲ್ಲಿ ಸೃಷ್ಟಿ ಮಾಡಿಲ್ಲ ನಮ್ಮ ನದಿಗಳಲ್ಲಿ ಸೃಷ್ಟಿ ಮಾಡಿಲ್ಲ, ನಮ್ಮ ಡ್ಯಾಮ್‌ಗಳಲ್ಲಿ ಸೃಷ್ಟಿ ಮಾಡಲಿಲ್ಲ ಇವತ್ತು ಅಬ್ಸರ್ವ್ ಮಾಡುವಂಥಾ ಶಕ್ತಿಯನ್ನು ನಾವು ತುಂಬಲಿಲ್ಲ ಅದಕ್ಕೋಸ್ಕರ ಇವತ್ತು ನಾವು ಪ್ರವಾಹದಿಂದ ಜನರು ಸತ್ತರು, ಎಂದು ಹೇಳುತ್ತಿದ್ದೇವೆ ನಿಜವಾಗಿಯೂ ಕೂಡ ಪ್ರಕೃತಿ ವಿಕೋಪದಿಂದ ಜನರು ಸತ್ತಿದ್ದು ಅಲ್ಲ, ನಷ್ಟವಾಗಿರುವಂಥಾದ್ದು ಅಲ್ಲ ಯಾವುದೇ ಒಂದು ಸರ್ಕಾರಕ್ಕೆ ವಿಷನ್ ಇರಬೇಕು, ದೂರದೃಷ್ಟಿ ಇರಬೇಕು ಇಂಥ ಪರಿಸ್ಥಿತಿ ಬಂದಾಗ, ಇಂಥ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಾವು ಯಾವ ರೀತಿಯಲ್ಲಿ ಸಜ್ಜಾಗಿರಬೇಕು ಯಾವುದೇ ಸರ್ಕಾರವಾಗಲಿ, ಈ ದೂರದೃಷ್ಟಿ ಇಲ್ಲದೇ ಹೋದರೆ ಅಂಥ ಸರ್ಕಾರವನ್ನು ನಾಲಾಯಕ್ ಸರ್ಕಾರವೆಂದು ಹೇಳಬೇಕಾಗುತ್ತದೆ ದೂರದೃಷ್ಟಿ ಇಲ್ಲದಿದ್ದರೆ ಸರ್ಕಾರ ನಡೆಸಲಿಕ್ಕೆ ಸಾಧ್ಯವಾಗುವುದಿಲ್ಲ ಈ ದೂರದೃಷ್ಟಿ ಇಲ್ಲದಿರುವುದು ನಮ್ಮನ್ನು ಸ್ವಾತಂತ್ರ್ಯ ಬಂದಾಗಿನಿಂದಲೂ ಕಾಡುತ್ತಿದೆ ಇದು ಇವತ್ತಿನ ಪ್ರಶ್ನೆ ಮಾತ್ರವಲ್ಲ

ಆ ಸಮಸ್ಯೆ ಇವತ್ತು ಉಲ್ಬಣಗೊಂಡಿದೆ ಮಳೆ ಬಿದ್ದರೂ ನಾವು ತಡೆದುಕೊಳ್ಳಲಿಕ್ಕೆ ತಯಾರಿಲ್ಲ, ಒಂದು ವರ್ಷ ಮಳೆ ಬೀಳದಿದ್ದರೂ ಅದನ್ನು ತಡೆದುಕೊಳ್ಳುವ ಶಕ್ತಿ ಇಲ್ಲ ಆ ಶಕ್ತಿಯನ್ನು ನಾವು ತಯಾರಿಸಿಲ್ಲ ಆ ಶಕ್ತಿಯನ್ನು ಅಭಿವೃದ್ಧಿ ಮಾಡಿಲ್ಲ ಮಾನವ ನಿರ್ಮಿತ ಬರಗಾಲವನ್ನು ಎದುರಿಸತಕ್ಕಂಥ ಶಕ್ತಿಯನ್ನು ಅಭಿವೃದ್ಧಿ ಮಾಡಿಲ್ಲ ಪ್ರಕೃತಿ ವಿಕೋಪದಿಂದ ಆಗುವ ಅನಾಹುತವನ್ನು ತಡೆದುಕೊಳ್ಳುವ ಶಕ್ತಿಯನ್ನು ನಾವು ತಯಾರು ಮಾಡಿಕೊಳ್ಳಲಿಲ್ಲ ಅದಕ್ಕೋಸ್ಕರ ನಾವು ನಷ್ಟ ಅನುಭವಿಸುತ್ತಿದ್ದೇವೆ ಅದರ ಹೊಣೆಯನ್ನು ಸಂಪೂರ್ಣವಾಗಿ ಹೊರಬೇಕಾಗಿರತಕ್ಕಂಥದ್ದು ಅಧಿಕಾರ ನಡಸುತ್ತಿರತಕ್ಕಂಥ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳದ್ದಾಗಿದೆ ಪ್ರತೀ ವರ್ಷ ಬರಗಾಲ ಬಂತು, ಬರಗಾಲ ಬಂತು ಎಂದು ವಿಧಾನ ಮಂಡಲದಲ್ಲಿ ಚರ್ಚೆ ಮಾಡುವುದು, ಬೈಯುವುದು,ಅದಕ್ಕೆ ಸರ್ಕಾರ ಒಂದು ಉತ್ತರ ಹೇಳುವುದು ಇದೇ ಪರಿಸ್ಥಿತಿ ಆಯಿತು ಪುನಃ ಅವರು ಒಂದು ಹೇಳುವುದು, ನಾವು ಬೈಯುವುದು ನಡೆಯುತ್ತಲೇ ಇದ್ದರೆ, ಮಾಮೂಲಾಗಿ ಸಾಯುವವರು ಸಾಯುತ್ತಿರುತ್ತಾರೆ, ಆಗುವುದು ಆಗುತ್ತಾ ಇರುತ್ತದೆ ಈ ರೀತಿ ಆಗಬಾರದು ಈ ರೀತಿ ಆಗದಿರಬೇಕಾದರೆ ನಾನು ಸರ್ಕಾರಕ್ಕೆ ವಿನಂತಿಸುತ್ತಿದ್ದೇನೆ, ಇನ್ನು ಮುಂದಾ ದರೂ ಇಂಥ ಪರಿಸ್ಥಿತಿ ಬರತಕ್ಕಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಎದುರಿಸಬೇಕೆನ್ನುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಮತ್ತು ದೂರುದೃಷ್ಟಿ ಇರಬೇಕು ಇವೆಲ್ಲವೂ ನಡೆಯಬೇಕಾದರೆ, ಆಡಳಿತ ಯಂತ್ರವನ್ನು ಬಿಗಿ ಮಾಡಬೇಕಾಗುತ್ತದೆ ಆಡಳಿತ ಯಂತ್ರ ಬಿಗಿಯಾಗಬೇಕಾದರೆ, ಸಮರ್ಥ ರಾಜಕೀಯ ನಾಯಕತ್ವ ಬೇಕು ಅದಕ್ಕೆ eminent political leadership ಬೇಕು If political leadership fails, administration will definitely collapse That is what is happening in Karnataka ಆದ್ದರಿಂದ ಇದನ್ನು ಸರಿಪಡಿಸಿಕೊಳ್ಳದೇ ಹೋದರೆ ಇಂಥ ಯಾವುದೇ ಪರಿಸ್ಥಿತಿಯನ್ನು ನಾವು ಎದುರಿಸಲಿಕ್ಕೆ ಸಾಧ್ಯವಿಲ್ಲ ಆ ರೀತಿ ತಯಾರಿಯನ್ನು ಸರ್ಕಾರ ಮಾಡಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಉಪಾಧ್ಯಕ್ಷರು. ಈಗ ಸದನವನ್ನು ಮಧ್ಯಾಹ್ನ 2 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವನ್ನು ಮಧ್ಯಾಹ್ನ 1 22 ಗಂಟೆಗೆ ಮುಂದೂಡಿ ಭೋಜನ ಬಳಿಕ ಪುನಃ ಮಧ್ಯಾಹ್ನ 2 30 ಗಂಟೆಗೆ ಸೇರಲು ನಿಶ್ಚಯಿಸಿತು)

ಸಭೆಯು ಮಧ್ಯಾಹ್ನ 3 03ಗಂಟೆಗೆ ಪ್ರಾರಂಭವಾಯಿತು

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಉಪಾಧ್ಯಕ್ಷರು ನಿಯಮ 69 ರ ಮೇಲೆ ಮಾತನಾಡಿ 15 ನಿಮಿಷ ಮಾತನಾಡಿ, ಉತ್ತರ ಆಗಬೇಕಲ್ಲವೇ?

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಉಪಾಧ್ಯಕ್ಷರೇ, ಆಡಳಿತ ಪಕ್ಷದವರು ನಾವು ಅನೇಕ ವಿಚಾರಗಳನ್ನು ಹೇಳುವುದಕ್ಕೆ ಮನಸ್ಸಿನಲ್ಲಿಟ್ಟುಕೊಂಡು ಕುಳಿತಿದ್ದೇವೆ

ಶ್ರೀ ಎಸ್ ಎಸ್ ಪಾಟೀಲ್ ಮಂತ್ರಿ ಮಂಡಲದಲ್ಲಿ ಅವಕಾಶ ಸಿಕ್ಕಿಲ್ಲ, ಮಾತನಾಡಲಿಕ್ಕೆ ಅವರಿಗೆ ಅವಕಾಶವನ್ನು ಕೊಡಿ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿರತಕ್ಕಂಥ ನಿಲುವಳಿಯನ್ನು ನಿಯಮ 69 ಕ್ಕೆ ಬದಲಾಯಿಸಿ ನಮಗೆಲ್ಲರಗೂ ಮಾತನಾಡಲಿಕ್ಕೆ ಈ ಸದನ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಇದೊಂದು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸುತ್ತೇನೆ ನಾನು ಬೆಳಿಗ್ಗೆಯಿಂದ ಮಾನ್ಯ ವಿರೋಧಪಕ್ಷದ ನಾಯಕರು, ಹಿರಿಯ ನಾಯಕರುಗಳು ಮಾತನಾಡಿದ್ದನ್ನು ಕೇಳಿದ್ದೇನೆ ಈ ಪ್ರಕೃತಿ ವಿಕೋಪದ ಬಗ್ಗೆ ನೆರೆ ಮತ್ತು ಬರದ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಈ ರಾಜಕಾರಣವನ್ನು ಮೀರಿ ಯೋಚನೆ ಮಾಡುವಂಥದ್ದು ಅಗತ್ಯವಿದೆಯೆಂದು ನನಗೆ ಅನ್ನಿಸುತ್ತಿದೆ ಕೆಲವರನ್ನು ಬಿಟ್ಟರೆ ಬಹಳಷ್ಟು ಜನರು ಇದರಲ್ಲೇನೋ ಒಂದು ರೀತಿಯ ರಾಜಕಾರಣ ಹುಡುಕಲಿಕ್ಕೆ ಹೊರಟಿದ್ದರು ಧರಂಸಿಂಗ್‌ರವರ ಸರ್ಕಾರ ಇದ್ದಾಗಲೂ ಕೂಡ ಈ ನೆರೆ, ಬರ ಎಲ್ಲವೂ ಇತ್ತು ಶ್ರೀ ಕೃಷ್ಣರವರ ಸರ್ಕಾರ ಇದ್ದಾಗಲೂ ಕೂಡ ಇತ್ತು ನಮ್ಮ ಸರ್ಕಾರಗಳು ಬಂದಾಗಲೂ ಬಂದಿದೆ ಅದು ಯಾವ ರಾಜಕಾರಣಿಗಳು, ಯಾವ ಪಕ್ಷದವರು ಸರ್ಕಾರವನ್ನು ನಡೆಸುತ್ತವೆಂದು

ನೋಡಿ ಬರುವುದಿಲ್ಲ ಇದು ನಮ್ಮ ರಾಜಕಾರಣಕ್ಕಿಂತ ಮಿಕ್ಕಿದಂಥ ವ್ಯವಸ್ಥೆ ಇದು ಹಾಗಾಗಿ ನಾವು ಇಂಥ ಸಂದರ್ಭಗಳಲ್ಲಿ ಚರ್ಚೆಯಲ್ಲಿ ಭಾಗವಹಿಸುವಾಗ, ನಾವು ಯೋಚನೆ ಮಾಡುವಾಗ, ಸರ್ಕಾರಕ್ಕೆ ಸಲಹೆ ಕೊಡುವಾಗ, ಇದನ್ನು ಏನಾದರೂ ಮಾಡಿ ಹದ್ದುಬಸ್ತು ಮಾಡುವುದ ಕ್ಕಾಗುತ್ತದೆಯೇ? ಇಂಥ ಸಂದರ್ಭಗಳು ಬಂದಾಗ ರಾಜ್ಯವನ್ನು, ರಾಜ್ಯದಲ್ಲಿರುವಂಥ ಜನರನ್ನು ಕಾಪಾಡುವಂತಹ ದೃಷ್ಟಿಯಿಂದ ಏನು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಒಟ್ಟಾರೆ ಚಿಂತನೆಯನ್ನು ಮಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎರಡೂ ಸರ್ಕಾರಗಳು ಕೂಡ ರಕ್ಷಣೆಗೆ ನಿಲ್ಲುವಂಥ ಅವಶ್ಯಕತೆ ಇದೆಯೆಂದು ನನಗನ್ನಿಸುತ್ತದೆ ಕಳೆದ ತಿಂಗಳ 22 ಮತ್ತು 23 ನೇ ತಾರೀಖು ತಮಗೆ ಗೊತ್ತಿರುವಂತೆ ನಮ್ಮ ಮಲೆನಾಡಿನಲ್ಲಿ ಎಂಥ ಮಳೆ ಬಂತು ಆಗುಂಬೆಯಲ್ಲಿ ಒಂದು ಶತಮಾನದಲ್ಲಿ ಬರದಿರುವಂಥ ಮಳೆ ಒಂದೇ ದಿನ ಬಂತು, ಅಷ್ಟು ಮಳೆ ಯಾವತ್ತೂ ಈ ಶತಮಾನದಲ್ಲಿ ಬಂದಿರಲಿಲ್ಲ ಅಷ್ಟೂ ಮಳೆ ಒಂದೇ ದಿವಸ ಬಂತು, ನಮ್ಮಲ್ಲಿ ಆಗುಂಬೆಯನ್ನು "ಎರಡನೇ ಚಿರಾಪುಂಜಿ" ಎಂದು ಹೇಳುತ್ತಾರೆ ಈ ಭಾಗದ ಇತಿಹಾಸದಲ್ಲಿಯೇ ಅಷ್ಟೊಂದು ಮಳೆ ಬಂದಿರಲಿಲ್ಲ ಅಷ್ಟೂ ಮಳೆ ಒಂದೇ ದಿನ ಬಂತು ತಾವು ಯೋಚನೆ ಮಾಡಿ, ಮಲೆನಾಡಿನವರಿಗೆ ಮಳೆಯೇನು ದೊಡ್ಡದಲ್ಲ 5–6 ತಿಂಗಳು ಬಿಸಿಲನ್ನು ನೋಡದಿರುವಂಥ ಪ್ರದೇಶ ನಮ್ಮದು ಅದರ ಜೊತೆಗೆ ಅಗಾಧವಾಗಿರುವಂಥ ಗಾಳಿ ಮಾನ್ಯ ದೇಶಪಾಂಡೆಯವರು ಹೇಳಿದರು, ಅವರಿಗೆ ಗೊತ್ತಿದೆ, ಕಬ್ಬಿನ ಗದ್ದೆಗಳನ್ನು ಕಡಿದು ಹಾಕಿದರೆ ಏನಾಗುತ್ತದೆ, ಆ ರೀತಿ ಅಡಿಕೆ ಮರಗಳು ಆಗಿವೆ ಒಂದು ಅಡಿಕೆ ಮರವನ್ನು ಬೆಳೆಸಲಿಕ್ಕೆ, ಫಸಲು ಬರುವುದಕ್ಕೆ 10 ವರ್ಷ ಬೇಕು ಸಂಪೂರ್ಣವಾಗಿ ನಾಶವಾಗಿದೆ ಧ್ವಂಸ ಎದ್ದು ಹೋಗಿದೆ ಯಾವುದೇ ಆನೆ ನುಗ್ಗಿ ತುಳಿದರೆ ಏನಾಗುತ್ತದೋ ಆ ರೀತಿ ಆಗಿದೆ ಬಹುಶಃ ನಾನೇ ನನ್ನ ತೋಟಕ್ಕೆ ಹೋಗಿ ಹೆದರಿ ಓಡಿ ಬಂದೆ ಏಕೆಂದರೆ ಆ ತೋಟಕ್ಕೆ ಮೂರ್‍ನಾಲ್ಕು ದಿವಸ ಹೋಗುವ ಸ್ಥಿತಿಯಿರಲಿಲ್ಲ ರಸ್ತೆ ಮೇಲೆ ಹೋಗುವವರು ಸತ್ತುಹೋಗಿದ್ದಾರೆ ನನ್ನ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಲ್ಮನೆ ಎಂದು ಇದೆ, ಇಬ್ಬರು ಅಲ್ಪಸಂಖ್ಯಾತ ಬಂಧುಗಳು ತಲೆ ಮೇಲೆ ಹೊತ್ತುಕೊಂಡು ಹಳ್ಳಿಹಳ್ಳಿಗೆ ಹೋಗಿ ಸಣ್ಣ ವ್ಯಾಪಾರ ಮಾಡುತ್ತಾರೆ ಬರುವಾಗ ಮರದ ರೆಂಬೆ ಬಿದ್ದು ಒಬ್ಬ spot death ಆಗಿದ್ದಾನೆ, ಇನ್ನೊಬ್ಬ ಶಾಶ್ವತವಾಗಿ ಅಂಗವಿಕಲನಾಗಿದ್ದಾನೆ

ಶಿವಮೊಗ್ಗದಲ್ಲಿ ಒಂದು ಡೆತ್ ಆಗಿದೆ, ಈ ರೀತಿಯಲ್ಲಿ ಈ ರಾಜ್ಯದಲ್ಲಿ ಸತ್ತವರ ಸಂಖ್ಯೆ ನಾನು ಹೇಳುವುದು ರೈತರ ಆತ್ಮಹತ್ಯೆ ಸಂಖ್ಯೆಯಲ್ಲ Natural calamity ಯಿಂದ, ಗಾಳಿಯಿಂದ, ಮಳೆಯಿಂದ ಸತ್ತಿರತಕ್ಕಂಥವರ ಸಂಖ್ಯೆ 43 ಎಂದು ಸರ್ಕಾರದ ಅಂಕಿ ಸಂಖ್ಯೆ ಪ್ರಕಾರ ನಮಗೆ ಸಿಕ್ಕಿದೆ ಇವತ್ತು ಮನೆಗಳು ಹೋಗಿರುವುದು ಅಷ್ಟೆ ಸುಮಾರು 24,500 ಮನೆಗಳು, 2,158 ಜಾನುವಾರುಗಳು, ಕ್ರಾಪ್ ಲಾಸಸ್ ಸುಮಾರು 55,500 ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ ಎಲ್ಲಕ್ಕಿಂತ ಇದರ ಜೊತೆಗೆ ಎಲೆಕ್ಟ್ರಿಸಿಟಿ, ರೇವಣ್ಣನವರು ಇಲ್ಲಿಲ್ಲ ಈ ಗಾಳಿಯಲ್ಲಿ ಎಷ್ಟು ಕಂಬಗಳು ಬಿದ್ದಿದೆಯೆಂದು ಹೇಳಿದರೆ ಇನ್ನೂ 15 ದಿನ, 23 ನೇ ತಾರೀಖಿನಿಂದ ನಮ್ಮಲ್ಲಿ ಎಲೆಕ್ಟ್ರಿಸಿಟಿ ಇಲ್ಲ ಇನ್ನೂ ಹಳ್ಳಿಗಳಲ್ಲಿ 15 ದಿವಸಗಳಾದರೂ ಆಗುವುದಿಲ್ಲ ನಮ್ಮ ಮೆಸ್ಕಾಂ ಇಲಾಖೆಯವರು ರಾತ್ರಿ ಹಗಲು ಕೆಲಸ ಮಾಡುತ್ತಿದ್ದಾರೆ, ಅವರಿಗೆ ಊಟ ನಿದ್ದೆ ಇಲ್ಲ ಏಕೆಂದರೆ ಅವರಿಗೆ ನಮ್ಮ ಕಾಟ ಏನಾದರೂ ಮಾಡಿ ಆ ಹಳ್ಳಿಗಳಿಗೆ ವಿದ್ಯುತ್ ಕೊಡಿ ಎಂದು ಹೇಳುತ್ತೇವೆ, ಏಕೆಂದರೆ ಕುಡಿಯುವ ನೀರಿಲ್ಲ ಅದರಿಂದ ಸಾಕಷ್ಟು ಅವ್ಯವಸ್ಥೆಯಾಗಿದೆ ಕೆಲವು ಹಳ್ಳಿಗಳಿಗೆ ಹೋಗಲಿಕ್ಕೆ ಆಗುವುದಿಲ್ಲ, ರಸ್ತೆಯ ಬದಿಯಿರುವ ಮರಮುಟ್ಟುಗಳು ಮುರಿದು ಬಿದ್ದಿವೆ, ಅದನ್ನು ಕ್ಲಿಯರ್ ಮಾಡುವುದೇ ದೊಡ್ಡ ಕೆಲಸವಾಗಿದೆ ಈ ರೀತಿಯಲ್ಲಿ ಅಗಾಧವಾಗಿರತಕ್ಕಂಥ ನಷ್ಟ ಕೆಲವೇ ದಿವಸಗಳಲ್ಲಿ ಬಂದಿವೆ ಅದ್ಯಾವುದು ಸರ್ಕಾರದ ಅಪರಾಧವಲ್ಲ ಅದು ಕಾಂಗ್ರೆಸ್ ಸರ್ಕಾರದ್ದೋ, ಇನ್ನೊಂದು ಸರ್ಕಾರದ್ದೋ ಎಂದಲ್ಲ ಕುಮಾರಸ್ವಾಮಿಯವರ ಸರ್ಕಾರದ್ದೋ ಎಂದಲ್ಲ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ – ನಾವೇನು ಮಾಡಿದ್ದೇವೆಂದು ಇವರು ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೋ, ಅಥವಾ ಮಳೆ ಹಾನಿ, ಮಹಾಪೂರದಿಂದ ಏನು ಹಾನಿ ಆಗಿದೆಯೆಂದು ಹೇಳುತ್ತಿದ್ದಾರೋ?

ಶ್ರೀ ಅರಗ ಜ್ಞಾನೇಂದ್ರ ನಾನು ವಾಸ್ತವಿಕ ಸಂಗತಿಯನ್ನು ಹೇಳುತ್ತಿದ್ದೇನೆ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಮೆಸ್ಕಾಂನವರು ಅದನ್ನು, ಇದನ್ನು ಮಾಡಿದರು ಎಂದು ಸಮರ್ಥಿಸಿಕೊಳ್ಳುತ್ತಾ ಇದ್ದರೆ ನಾವ್ಯಾಕೆ ಇಲ್ಲಿರಬೇಕು

ಶ್ರೀ ಅರಗ ಜ್ಞಾನೇಂದ್ರ ನನ್ನ ಮಾತನ್ನು ಸ್ವಲ್ಪ ತಾಳ್ಮೆಯಿಂದ ತಾವು ಕೇಳಿ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಸರ್ಕಾರ ಉತ್ತರ ಹೇಳಲಿ,

ಶ್ರೀ ಅರಗ ಜ್ಞಾನೇಂದ್ರ – ಅವರೆಲ್ಲಾ ಮಾತನಾಡುವಾಗ ನಾನು ಇಲ್ಲಿ ಸುಮ್ಮನೆ ಕುಳಿತುಕೊಂಡಿದ್ದೆನು, ಅವರೆಲ್ಲರೂ ಬಹಳ ಚೆನ್ನಾಗಿ ಮಾತನಾಡಿದ್ದಾರೆ ಸಿದ್ಧ ರಾಮಯ್ಯನವರಾಗಲಿ, ಇನ್ನೊಬ್ಬರಾಗಲಿ ಚೆನ್ನಾಗಿ ಮಾತನಾಡಿದರು

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ನಾವೇನು ಇಲ್ಲಿ ಗಲಾಟೆ ಮಾಡಲಿಕ್ಕೆ ಬಂದಿಲ್ಲ ನೀವು ಮಳೆಯಿಂದ ಏನು ಹಾನಿಯಾಗಿದೆ ಎಂಬ ಬಗ್ಗೆ ಹೇಳದೇ ಮೆಸ್ಕಾಂರವರು ರಾತ್ರಿ ಹಗಲು ಕೆಲಸ ಮಾಡುತ್ತಿದ್ದಾರೆ, ಕರೆಂಟ್ ಕೊಡುತ್ತಿದ್ದಾರೆಂದು ಹೇಳಿದರೆ, ನಮ್ಮ ಕ್ಷೇತ್ರದಲ್ಲಿ ಎರಡು ತಿಂಗಳಿಂದ ಕರೆಂಟ್ ಇಲ್ಲ ಅಲ್ಲಿ ನೀರಾವರಿಗೆ ಕರೆಂಟ್ ಕೊಟ್ಟಿಲ್ಲ

ಉಪಾಧ್ಯಕ್ಷರು ಮಾನ್ಯ ಹುಕ್ಕೇರಿಯವರೇ, ಅವರಿಗೆ ತಿಳಿದ್ದಿದ್ದನ್ನು ಅವರು ಹೇಳುತ್ತಿದ್ದಾರೆ, ನಿಮಗೆ ತಿಳಿದ್ದಿದ್ದನ್ನು ನೀವು ಆಮೇಲೆ ಹೇಳಿ ಅವರಿಗೆ ಅನುಕೂಲವಾಗಿದೆ ಹಾಗಾಗಿ ಅವರು ಹಾಗೆ ಅನುಕೂಲವಾಗಿದೆಯೆಂದು ಹೇಳುತ್ತಾರೆ, ನಿಮಗೆ ಅನಾನುಕೂಲವಾಗಿದ್ದರೆ ನೀವು ಅನಾನುಕೂಲವಾಗಿದಯೆಂದು ಹೇಳಿ ಇದರ ಬಗ್ಗೆ ಮತ್ತೆ ಮಾತನಾಡುವುದು ಬೇಡ ನೀವ್ಯಾಕೆ ವಾಗ್ವಾದ ಮಾಡುತ್ತೀರಿ?

(ಗೊಂದಲ)

ಶ್ರೀ ಡಿ ಎನ್ ಜೀವರಾಜ್ ಅವರು ಹೇಳುತ್ತಿರುವುದು ಬೆಳಗಾಂನಲ್ಲಿ ತೊಂದರೆಯಾಗಿದೆಯೆಂದು, ಜ್ಞಾನೇಂದ್ರರವರು ಹೇಳುತ್ತಿರುವುದು ತೀರ್ಥಹಳ್ಳಿಯಲ್ಲಿ ಒಳ್ಳೆಯದಾಗಿದೆಯೆಂದು, ನೀವು ತೀರ್ಥಹಳ್ಳಿಯನ್ನು ಬೆಳಗಾಂ ಅನ್ನು ಒಟ್ಟಿಗೆ ಏಕೆ ಮಾಡುತ್ತೀರಿ, ನೀವು ಹುಕ್ಕೇರಿಯದನ್ನು ಬೆಳಗಾಂನಲ್ಲಿಯದು ತಾವು ಆಮೇಲೆ ಹೇಳಿ ಸಾಹೇಬರೆ, ತೀರ್ಥಹಳ್ಳಿಯದನ್ನು ಹೇಳಲಿಕ್ಕೆ ಅವಕಾಶ ಕೊಡಿ, ಅವರು ತೀರ್ಥಹಳ್ಳಿಯದನ್ನು ಹೇಳುತ್ತಿದ್ದಾರೆ

ಮಲೆನಾಡಿನಲ್ಲಿ ಏನಾಗಿದೆಯೆಂದು ಜ್ಞಾನೇಂದ್ರರವರಿಗೆ ಗೊತ್ತು ನಿಮಗೆ ಗೊತ್ತಿದೆಯೇ? ನೀವು ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ?

ಉಪಾಧ್ಯಕ್ಷರು ಹುಕ್ಕೇರಿಯವರೇ, ಅವರು ಸರ್ಕಾರವನ್ನು ಸಮರ್ಥಿಸಿಕೊಳ್ಳುತ್ತಾ ಅವರಿಗೆ ಅನುಕುಲವಾಗಿದೆಯೆಂಬ ದೃಷ್ಟಿಯಿಂದ ಅವರು ಹೇಳುತ್ತಾರೆ ನಿಮಗೆ ಸರ್ಕಾರ ಅನುಕೂಲ ಮಾಡಿಕೊಡದಿದ್ದರೆ ನೀವು ಮಾತನಾಡಬೇಕಾದರೆ ಏನು ಮಾತನಾಡಬೇಕು ಅದನ್ನು ಹೇಳಿ ಸರ್ಕಾರ ಆಗ ಉತ್ತರ ಕೊಡುತ್ತದೆ ಅದು ವೈಯಕ್ತಿಕವಾಗುತ್ತದೆ

ಶ್ರೀ ಅರಗ ಜ್ಞಾನೇಂದ್ರ ಈಗ 69 ರ ನಿಯಮದಡಿ ಮೊನ್ನೆ ಬಂದಿರತಕ್ಕಂಥ ಚರ್ಚೆ ಅಷ್ಟೇ, ಅದು ಅನುಕೂಲವಾಗಿದಯೋ, ಅನಾನುಕೂಲವಾಗಿದೆಯೇ ಎನ್ನುವಂಥಾದ್ದು ಅಲ್ಲಿಲ್ಲ ಆದ್ದರಿಂದ ನಾನು ಹೇಳುವುದು ಅಧ್ಯಕ್ಷರೇ, ನಮಗೆ ಸಾಕಷ್ಟು ಡ್ಯಾಮೇಜ್‌ಗಳಾಗಿವೆ, ನಮಗೆ ನಿಲುಕಲಾರದಂಥ ,ಕೆಲವು ಸಮಸ್ಯೆಗಳು ಬಂದು ಬಿಟ್ಟಿವೆ, ಆದ್ದರಿಂದ ಇವತ್ತು ಸೇತುವೆಗಳು, ಆ ಮಳೆಯಿಂದ ನೀರಿನ ಬುಗ್ಗೆಗಳು ರಸ್ತೆಯ ಮೇಲೆ ಏಳುತ್ತವೆ ಒಂದು ಕಡೆ ಬರ ಇದೆ, ಬಹುಶಃ ಈ ಕೋಲಾರ, ತುಮಕೂರು, ತಿಪಟೂರು ಆ ಭಾಗದವರಿಗೆ ಕಲ್ಪನೆಗೆ ನಿಲುಕದಂಥ ಪರಿಸ್ಥಿತಿ ನಮ್ಮದಾಗಿದೆ, ಇದರ ಜೊತೆಗೆ ಏನಾಗಿದೆ, ಈ ಸಂದರ್ಭದಲ್ಲಿ ನಮ್ಮಲ್ಲಿ ಮೈನ್ಸ್ ಲಾರಿಗಳು ಈ ಬಗ್ಗೆ ನಮ್ಮ ಗೃಹ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ ಈ ಮೈನ್ಸ್ ಲಾರಿಗಳು ಎಷ್ಟೋ ಸಾರಿ 25-30 ಟನ್ಸ್ ತುಂಬಿರತಕ್ಕಂಥ ಲಾರಿಗಳೂ ನಮ್ಮ ರಸ್ತೆಯಲ್ಲಿ ಓಡಾಡುತ್ತಿವೆ ಸೇತುವೆಗಳು ಮುರಿದು ಬಿದ್ದಿವೆ, ಮೊನ್ನೆ ಶೃಂಗೇರಿಯ ಹತ್ತಿರ ಸೇತುವೆ ಮುರಿದು ಬಿದ್ದು ಬಹಳ ದೊಡ್ಡ ಗಲಾಟೆಯಾಯಿತು ಪರಿಸ್ಥಿತಿ ಏನೆಂದರೆ ಮುರಿದು ಬಿದ್ದಿರುವುದು ಮಳೆಯಿಂದಾಗಿ ಮತ್ತು ವಾಹನಗಳು ಹೋಗಿದ್ದರಿಂದಾಗಿ, ಶಾಸಕರು ಅಪರಾಧ ಮಾಡಿದ್ದೇವೆಂದು ಇವತ್ತು ಜನ ಮಾತನಾಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಏಕೆಂದರೆ ಅದು ಒಂದು ಸ್ಟೇಟ್ ಹೈವೇ, ಇವತ್ತು ಅಲ್ಲಿ ಲಾರಿಗಳು ಸಂಚಾರ ಮಾಡಬಾರದೆಂದು ಹೇಳುವು ದಕ್ಕಾಗುವುದಿಲ್ಲ ಲೋಡ್ ಎಷ್ಟು ಹಾಕಬೇಕೆಂದು ಸರ್ಕಾರ ಕಾನೂನು ಇದೆ, ಅನೇಕ ಸಾರಿ ಇದನ್ನು ತಪ್ಪಿಸಿಯೂ ಕೂಡ ಬಂದುಬಿಡುತ್ತಾರೆ, ಪರಿಣಾಮ ಏನಾಗುತ್ತದೆಂದರೆ

ಶ್ರೀ ಡಿ ಎನ್ ಜೀವರಾಜ್ ಜ್ಞಾನೇಂದ್ರರವರೇ, ಒಂದು ನಿಮಿಷ, ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ, ನಮ್ಮ ಕ್ಷೇತ್ರದಲ್ಲಿ ಮೂರು ತಾಲ್ಲೂಕುಗಳು ಹಾದುಹೋಗುತ್ತವೆ, ಮೂರು ಪೂರ್ಣ ತಾಲ್ಲೂಕುಗಳಿದ್ದರೆ, ಪರ್ಮಿಟ್ ಅನ್ನು ಈ ಮಳೆಗಾಲದಲ್ಲಿ ಮೈನ್ಸ್ ಲಾರಿಗಳಿಗೆ ಇಷ್ಯೂ ಮಾಡುತ್ತಿದ್ದಾರೆ, ಹುಂಬಲೆಬಯಲು, ಎನ್ ಆರ್ ಪುರ, ಕೊಪ್ಪ, ಶೃಂಗೇರಿ, ಕೆರೆಕಟ್ಟೆ, ಮಂಗಳೂರು ಎಂದು ಹೇಳಿ, ಈ ರಸ್ತೆ ಮೇಲೆ ನೀರು ಏಳುತ್ತಿವೆಯೆಂದು ಜ್ಞಾನೇಂದ್ರ ಹೇಳಿದರು ಇದು ಬಯಲುಸೀಮೆಯವರಿಗೆ ಕಲ್ಪನೆಗೆ ಸಿಗುವುದಿಲ್ಲ ಇದು ಯಾವ ರೀತಿಯ ನೀರಿನ ಬುಗ್ಗೆಗಳು ಬರುತ್ತವೆಂದು ಮಾಡಿರುವಂಥ ಡಾರ್ ರಸ್ತೆಗಳು ಪೂರ್ತಿ ಒಂದು ಕಡೆ ಕಿತ್ತುಕೊಂಡು ಹೋಗುತ್ತಿವೆ ಒಂದು ಕಡೆ ಈ ಮೈನ್ಸ್ ಲಾರಿಗಳ ಕಾಟ, ನೂರು, ಇನ್ನೂರು ಲಾರಿಗಳು ಒಟ್ಟೊಟ್ಟಿಗೆ ಬರುತ್ತವೆ ಜೈಪುರುದಲ್ಲಿರುವ ಬ್ರಿಡ್ಜ್ ತೊಯ್ದು ಹೋಯಿತು ಎಂದು ಎಂಜಿನಿಯರ್‌ಗೆ ರಸ್ತೆಯ ಮೇಲಿರುವಂತಹ ಜನ ಹೊಡೆಯುವಂಥದ್ದನ್ನು ಪತ್ರಿಕೆಗಳಲ್ಲಿ ತಾವು ಓದಿದ್ದೀರಿ, ನನ್ನ ಕ್ಷೇತ್ರದಲ್ಲಿ ಇಂಥ ಒಂದು ಘಟನೆ ನಡೆದಿದೆ, ಅದರ ಮಧ್ಯದಲ್ಲಿ ನೂರು ಇನ್ನೂರು ಲಾರಿಗಳು ಹೋದರೆ ನಾವು ಇದನ್ನು ಹೇಗೆ ಸುಧಾರಿಸುವುದು ಎನ್ನುವುದು ಅರ್ಥವಾಗುವುದಿಲ್ಲ ಕೇಳಿದರೆ ಕಾನೂನು ಪ್ರಕಾರ ಪರ್ಮಿಟ್ ಸರಿಯಿದೆಯೆಂದು ಹೇಳುತ್ತಾರೆ ಆದರೆ ನಮ್ಮದೇ ಸರ್ಕಾರ ನಮ್ಮ ಮಂತ್ರಿಗಳು ಇದರ ಬಗ್ಗೆ ಸೂಕ್ತ ಆದೇಶವನ್ನು ಕೊಟ್ಟು ತಕ್ಷಣ ರಸ್ತೆಯ ಮೇಲೆ ಹೋಗುವಂಥ ಮೈನ್ಸ್ ಲಾರಿಗಳನ್ನು ನೂರು ನೂರು ಒಟ್ಟೊಟ್ಟಿಗೆ ಹೋದರೆ ಸುಧಾರಿಸಲಿಕ್ಕಾಗುವುದಿಲ್ಲ, ಇದನ್ನು ನಿಲ್ಲಿಸುವಂತಾಗಬೇಕು ಜೊತೆಗೆ ನಕ್ಸಲ್ ಬೇರೆ, ನಮ್ಮ ಹತ್ತಿರ ಶೃಂಗೇರಿಯ ಶಾರದಾಂಬೆ ಒಂದು ಬಿಟ್ಟರೆ ಎಲ್ಲಾ ಸಮಸ್ಯೆಗಳು ಶಾಪಗಳು ನಮ್ಮಲ್ಲಿವೆ ಹಾಗಾಗಿ ಇದನ್ನು ಏನಾದರೂ ಮಾಡಿ ಪರಿಹರಿಸಿ ಕೊಡಬೇಕೆಂದು ಇದರೊಂದಿಗೆ ನಾನು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ

ಶ್ರೀ ಅರಗ ಜ್ಞಾನೇಂದ್ರ ನಮ್ಮ ಭಾಗದಲ್ಲಿ ಅಡಿಕೆ ಬೆಳೆಯುವವರು, ಒಂದಷ್ಟು ಮರಗಳು ಮುರಿದುಹೋಗಿವೆ, ಗಾಳಿಗೆ ಒಂದು ಮರ ಇನ್ನೊಂದು ಮರಕ್ಕೆ ಡಿಕ್ಕಿ ಹೊಡದು ಅಷ್ಟು ಮರಗಳ ಫಸಲು ಉದುರಿ ಹೋಗಿವೆ, ಉಳಿದಿರತಕ್ಕಂಥ ಫಸಲನ್ನು ನಾವು ಉಳಿಸಿಕೊಳ್ಳಬೇಕೆಂದರೆ ನಮ್ಮ ಮಲೆನಾಡಿನಲ್ಲಿ ನಾವು ಕಾಪರ್ ಸಲ್ಫೇಟ್, ಬೋರ್ಡೋ ಮಿಶ್ರಣವನ್ನು

ನಾವು ಸಿಂಪಡಿಸಬೇಕಾಗುತ್ತದೆ ನಾನು ಇದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ, ಈಗಾಗಲೇ ನಮಗೆ ಸಬ್ಸಿಡಿ ರೇಟ್‌ನಲ್ಲಿ ಕಾಪರ್ ಸಲ್ಫೇಟ್ ಅನ್ನು ಸಾಕಷ್ಟು ಸರಬರಾಜು ಮಾಡುತ್ತಿದ್ದೀರಿ ಇದನ್ನು ಜನ ಕ್ಯೂ ನಿಂತು ತೆಗೆದುಕೊಂಡು ಹೋಗಿ ಅದನ್ನು ಸಿಂಪಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ನನಗೆ ಅನ್ನಿಸುತ್ತಿದೆ, ನಮ್ಮ ಮಿತ್ರರು ಹೇಳಿದ ಹಾಗೆ ಯಡಿಯೂರಪ್ಪನವರೇ, ಕುಮಾರಸ್ವಾಮಿಯವರೆ, ದಯವಿಟ್ಟು ಬನ್ನಿ ಡೆಲ್ಲಿಗೆ ಹೋಗೋಣ ನಾವೆಲ್ಲಾ ಹೋಗಿ ಈ ಒಂದು ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ನಮ್ಮ ರಾಜ್ಯಕ್ಕೆ ಏನಾದರೂ ಒಂದಷ್ಟು ತರೋಣವೆಂದು ಅವರು ಧೈರ್ಯ ಹೇಳುತ್ತಾರೆಂದು ಮಾಡಿದ್ದೆ ಏಕೆಂದರೆ ರಾಜ್ಯ ಸರ್ಕಾರ ಈ ಸಾರಿ 50 ಕೋಟಿ ರೂ Natural calamity ಯಲ್ಲಿ ಬಿಡುಗಡೆ ಮಾಡಿದೆ, ಸೆಂಟ್ರಲ್‌ನಿಂದ ಒಂದೇ ಒಂದು ಪೈಸೆಯನ್ನು ಕೂಡ ಇದುವರೆಗೆ ಬಿಡುಗಡೆ ಮಾಡಿಲ್ಲ ಇಂಥ ಒಂದು ಪರಿಸ್ಥಿತಿಯಲ್ಲಿ ತಾವು ವರದಿಯನ್ನು ಕುಡ ಸೆಂಟ್ರಲ್‌ಗೆ ಕಳುಹಿಸಿಕೊಡಬೇಕು ಎಂದು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ ಏಕೆಂದರೆ ರಾಜ್ಯ ಸರ್ಕಾರದ ಕಡೆಯಿಂದ ಈ ಒಂದು ದುರಂತವನ್ನು ತಪ್ಪಿಸಿಕೊಳ್ಳಲಿಕ್ಕೆ ಖಂಡಿತವಾಗಿ ಆಗುವುದಿಲ್ಲ ಇದು ಮೊದಲನೇ ಮಳೆ, ಇನ್ನು ಎಷ್ಟು ಮಳೆಗಳು ಬರುತ್ತವೆ ಕಳೆದ ವರ್ಷದ ಕಾಲುಭಾಗ ಇನ್ನು 10% ಮಳೆ ಇನ್ನೂ ಆಗಿಲ್ಲ ಇಂಥ ಒಂದು ಪರಿಸ್ಥಿತಿಯಲ್ಲಿ ಆರಂಭದಲ್ಲಿಯೇ ನಾವು ಇನ್ನು ಹೀಗಿದ್ದೇವೆ ಇನ್ನೂ ಕೂಡ ನಾವು ಮುಂದಿನ ದಿನಗಳನ್ನು ನಿಭಾಯಿಸಲಿಕ್ಕೆ ಕಷ್ಟವಾಗುತ್ತದೆ ಆದ್ದರಿಂದ ಖಂಡಿತವಾಗಿಯೂ ನಮ್ಮ ವಿರೋಧ ಪಕ್ಷದ ನಾಯಕರು ಈ ರಾಜ್ಯದ ಜನತೆಗೆ ಒಂದು ಧೈರ್ಯ ತುಂಬಬೇಕು ಕೇಂದ್ರ ಸರ್ಕಾರ ತುಂಬಾ ದೊಡ್ಡದು, ಅದರ ಖಜಾನೆ ಬಹಳ ದೊಡ್ಡದು ಹಾಗಾಗಿ ಅದರಿಂದ ಸಾಕಷ್ಟು ಹಣ ತರಲಿಕ್ಕೆ ಅಲ್ಲಿ ಅಧಿಕಾರದಲ್ಲಿರುವಂಥವರ ಮೇಲೆ ಒತ್ತಡವನ್ನು ಹಾಕಲಿಕ್ಕೆ ನಮ್ಮ ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರ ನೇತೃತ್ವದಲ್ಲಿ ಎಲ್ಲರೂ ಕೂಡ ಒಂದು ಡೆಲಿಗೇಷನ್ ಹೋಗುವಂಥದ್ದು ಅಗತ್ಯವಿದೆಯೆಂದು ಹೇಳಿ ನಾನು ಭಾವಿಸುತ್ತೇನೆ ಈಗಾಗಲೇ ಮರ ಬಿದ್ದು ಹಾಳಾಗಿರುವಂಥ ಮನೆಗಳಿಗೆ ಆದಷ್ಟು ಬೇಗನೆ ಹಣವನ್ನು ಕೊಡಬೇಕು

ಶ್ರೀ ಜೆ ಸಿ ಮಾಧುಸ್ವಾಮಿ ಒಂದು ನಿಮಿಷ, ಮರ ಬಿದ್ದು ಹಾಳಾಗಿರುವ ಮನೆ ಎಂದರೆ ನಮಗೆ ಅರ್ಥವಾಗುತ್ತಿಲ್ಲ ಹೇಗೆ?

ಶ್ರೀ ಅರಗ ಜ್ಞಾನೇಂದ್ರ ಹೌದು, ನಮ್ಮಲ್ಲಿ ಮನೆಗಳ ಮೇಲೆ ಮರಗಳು ಬಿದ್ದಿವೆ

ಶ್ರೀ ಜೆ ಸಿ ಮಾಧುಸ್ವಾಮಿ ಮರ ಮೊದಲಿತ್ತೋ, ಮನೆ ಮೊದಲಿತ್ತೋ?

ಶ್ರೀ ಅರಗ ಜ್ಞಾನೇಂದ್ರ · ಮನೆಯ ಪಕ್ಕದಲ್ಲಿ ಮರ ಬೆಳೆದುಕೊಂಡಿತ್ತು

ಶ್ರೀ ಜೆ ಸಿ ಮಾಧುಸ್ವಾಮಿ ಮರದ ಕೆಳಗೆ ಮನೆ ಕಟ್ಟುವುದನ್ನು ತಪ್ಪಿಸಬೇಕು

ಶ್ರೀ ಡಿ ಎನ್ ಜೀವರಾಜ್ ಮಾಧುಸ್ವಾಮಿಯವರೇ ನಿಮಗೆ ಕಲ್ಪನೆಯಿಲ್ಲ ಮರ ಇಲ್ಲದೇ ಮನೆಗಳನ್ನು ಕಟ್ಟಬೇಕೆಂದರೆ ನಮ್ಮೂರಿನಲ್ಲಿ ಜಾಗವೇ ಇಲ್ಲ ಕಾಡೊಳಗೆ ನಾವಿದ್ದೇವೆ, ನೀವು ಒಂದು ಸಾರಿ ಬನ್ನಿ ನೀವು ತೀರ್ಥಹಳ್ಳಿಯ ಕಡೆ ಟೂರ್ ಮಾಡುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ – ಅವರು ಕಾಂಪೌಂಡ್‌ನೊಳಗೆ ಮರಗಳನ್ನು ಹಾಕಿರುತ್ತಾರೆ

ಶ್ರೀ ಅರಗ ಜ್ಞಾನೇಂದ್ರ ನಮ್ಮ ಕಾಂಪೌಂಡ್‌ನೊಳಗೆ ದೊಡ್ಡ ದೊಡ್ಡ ಮರಗಳಿವೆ, ಅವು ಗಟ್ಟಿಯಿವೆ ಎಂದು ನಾವು ತಿಳಿದುಕೊಂಡಿರುತ್ತೇವೆ ಆದರೆ ಆ ಬಿರುಗಾಳಿಗೆ ಸಿಲುಕಿ ಮನೆಯ ಮೇಲೆ ಬಿದ್ದು ಮನೆಗಳು ಪುಡಿಪುಡಿಯಾಗಿವೆ, ಜಾನುವಾರುಗಳು ಸತ್ತುಹೋಗಿವೆ ಮನುಷ್ಯರಿಗೆ ಹೊಡೆತವಾಗಿವೆ, ರಸ್ತೆಯಲ್ಲಿ ಹೋಗುವ ವಾಹನಗಳಿಗೆ ಜಖಂ ಆಗಿವೆ, ನನ್ನ ವಿನಂತಿ ಏನೆಂದರೆ ಮಲೆನಾಡಿನಲ್ಲಿ ಆಗಿರುವಂಥ ಇಂತಹ ಅನಾಹುತವನ್ನು

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಮಾತನಾಡುವಾಗ ಹೇಳಿದೆ, ಕನಿಷ್ಠ ಈ ಆಶ್ರಯ ಸ್ಕೀಮ್‌ನಲ್ಲಿ ಇಂಥವುಗಳಿಗೆ ಮನೆ ಕೊಡಲಿಕ್ಕೆ ಪ್ರಾವಿಷನ್ ಮಾಡಿ outside ಗ್ರಾಮಸಭಾ ಎಂದು ನಾನು ಹೇಳಿದೆ

ಶ್ರೀ ಅರಗ ಜ್ಞಾನೇಂದ್ರ, ನಾವು ಅದನ್ನು ಯೋಚನೆ ಮಾಡಿದ್ದೆವು ಆದರೆ ಆಶ್ರಯದಲ್ಲಿ ನಾರ್ಮ್ಸ್‌ನಲ್ಲಿ ಬರದೇ ಇರುವಂಥವರ ಮನೆಗಳು ಪುಡಿಯಾಗಿವೆ ಸುನಾಮಿ ರೀತಿ ಪರಿಹಾರ ಕೊಟ್ಟರೆ ಅಡ್ಡಿಯಿಲ್ಲ ವಿಚಿತ್ರವೆಂದರೆ ಮಾನ್ಯ ಖರ್ಗೆಯವರು ಈ ಕಡೆ ಕೇಳಬೇಕು ನಮ್ಮ ಕೇಂದ್ರ ಸರ್ಕಾರದಲ್ಲಿ, ಈ ಸರ್ಕಾರ ಬಂದಾಗ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ಒಂದು norms fix ಮಾಡಿದ್ದಾರೆ 50% ಗಿಂತ ಜಾಸ್ತಿ ನಾಶ ಆದರೆ ಮಾತ್ರ compensation ಕೊಡುವುದು ಎಂದು ಒಂದು ಸಾವಿರ ಅಡಿಕೆ ಮರ ನಮ್ಮ ತೋಟದಲ್ಲಿದ್ದರೆ 500 ಮರಗಳು ಹೋಗಬೇಕು 500 ಹೋಗುವವರೆಗೆ ಕೊಡುವುದಿಲ್ಲ ಆದರೆ ನೂರು ಮರ ಹೋದರೆ ಏನು ಅನಾಹುತ ಎಂದು ಬೆಳೆದವರಿಗೆ ನಮಗೆ ಅದರ ಕಷ್ಟ ಗೊತ್ತಿದೆ ಹಾಗಾಗಿ ಹೋದಷ್ಟು ಮರಗಳಿಗೆ ಪರಿಹಾರ ಕೊಡಲಿಕ್ಕೆ ಪ್ರಾವಿಷನ್ ಮಾಡಬೇಕು ಮನೆಯ ಕೊಟ್ಟಿಗೆ ಬಿದ್ದು ಹೋದರೆ compensation ಇಲ್ಲ ಮಾನ್ಯ ಖರ್ಗೆಯವರಿಗೆ ಗೊತ್ತಿದೆಯೇ ಇಲ್ಲವೆ ಗೊತ್ತಿಲ್ಲ Natural calamity ಯಲ್ಲಿ ಕೊಟ್ಟಿಗೆ ಡ್ಯಾಮೇಜ್ ಆದರೆ ಪರಿಹಾರ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಖರ್ಗೆಯವರು ಅದಕ್ಕೆ ಅಧ್ಯಕ್ಷರಾಗಿದ್ದರು

ಶ್ರೀ ಅರಗ ಜ್ಞಾನೇಂದ್ರ, ಕೇಂದ್ರ ಸರ್ಕಾರದ ನಾರ್ಮ್ಸ್ ಅದು ಕೊಡಲಿಕ್ಕೆ ಬರುವುದಿಲ್ಲ ಕೊಟ್ಟಿಗೆ ಎನ್ನುವಂಥಾದ್ದು ಇಲ್ಲ ಅವರ ಲಿಸ್ಟ್‌ನಲ್ಲಿಲ್ಲ ಜಾನುವಾರು ಕಟ್ಟುವಂಥ ಒಂದು ಕೊಟ್ಟಿಗೆ ಇರುತ್ತದೆಂದು ಹೇಳಿ ಡೆಲ್ಲಿಯಲ್ಲಿ ಇದರ ಬಗ್ಗೆ ಈ Natural calamity

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಜಾನುವಾರುಗಳಿಗೆ ಈಗ ಕೊಡುತ್ತಿಲ್ಲ

ಶ್ರೀ ಅರಗ ಜ್ಞಾನೇಂದ್ರ . ಬಣವೆಗಳು, ಭತ್ತದ, ಹುಲ್ಲಿನ ಬಣವೆಗಳು, ನಮ್ಮ ಕಣದಲ್ಲಿ ರಾಶಿ ಹಾಕಿರುತ್ತೇವೆ ಅದಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿದರೆ ಖರ್ಗೆಯವರೇ, ಅದಕ್ಕೆ ಪರಿಹಾರವಿಲ್ಲ ಏಕೆಂದರೆ ಆ ಲಿಸ್ಟ್ ಮಾಡುವಂಥ ದೊಡ್ಡ ದೊಡ್ಡ ಐ ಎ ಎಸ್ ಅಧಿಕಾರಿಗಳು ಇಂಥ ಮನೆಗಳಲ್ಲಿ ಅವರು ಹುಟ್ಟಿರುವುದಿಲ್ಲ ಕನಿಷ್ಠ ನಮ್ಮ ಹಳ್ಳಿಗಳ ಕಡೆ ಹೋಗಿ ನೋಡುವುದಿಲ್ಲ ಇದರ ಪರಿಸ್ಥಿತಿ ನಾವು

ಶ್ರೀ ಮಲ್ಲಿಕಾರ್ಜುನ ಖರ್ಗೆ ಅದಕ್ಕೆ ಹೇಳುವುದು ಅನೇಕ ಸಾರಿ ನಿಮಗೆ ನೆನಪು ಹೋಗುತ್ತದೆ ರಾಜ್‌ನಾಥ್ ಸಿಂಗ್ ಅವರು ಕೃಷಿ ಮಂತ್ರಿಗಳಾಗಿದ್ದಾಗ ನಾವೆಲ್ಲರೂ ಕೂಡ ಡೆಲಿಗೇಷನ್ ಹೋಗಿದ್ದೇವೆ ಏನೆಂದರೆ ಕೆಲವು ಕೇಂದ್ರಸರ್ಕಾರದ ನಾರ್ಮ್ಸ್ ಅನ್ನು ಚೇಂಜ್ ಮಾಡಿಕೊಡಿ, ಈ ಬಣವೆ, ಜಾನುವಾರುಗಳು ಸುಟ್ಟರೆ ದುಡ್ಡಿಲ್ಲ ಮೊದಲು ಕೊಡತಕ್ಕಂಥ compensation 50% ಮಾಡಿದರು ಒಂದು ಲಕ್ಷದಿಂದ 50,000 ಆಯಿತು, ಇಂಥವೆಲ್ಲಾ ತೊಂದರೆಯಾಗಿದೆ, ಇದನ್ನು ಸರಿಪಡಿಸಬೇಕು ಎಂದು ಹೇಳಿ ನೀವು ನಾವು ಎಲ್ಲರೂ ಫುಡ್‌ಗ್ರೇನ್ ಕೇಳಲಿಕ್ಕೆ ಅನಂತಕುಮಾರ್‌ರವರ ನೇತೃತ್ವದಲ್ಲಿ ಹೋಗಿದ್ದೇವೆ ಅಂದಿನಿಂದ ಈ ಸರ್ಕಾರದವರೆಗೆ ಪ್ರಯತ್ನ ಮಾಡಿದರೂ ಅದು ಆಗುತ್ತಿಲ್ಲ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಖರ್ಗೆಯವರೇ ಈಗ Guidelines change ಆಗಿದೆ Central Government ಹತ್ತಿರ ನಾವು ನೀವು ಏನು ಪ್ರಯತ್ನ ಮಾಡುತ್ತಿದ್ದೆವು, ಪರಿಹಾರ 50,000 ಇದ್ದದ್ದು ಇವತ್ತು 1 ಲಕ್ಷ ಆಗಿದೆ ಮನೆ ಪೂರ್ತಿ ಬಿದ್ದು ಹೋಗಿದ್ದರೆ 10,000 ಇದ್ದದ್ದು, 25,000 ಎಂದು Guidelines Change ಆಗಿದೆ, ನಾನು ಅದರ ಬಗ್ಗೆ ಹೇಳುತ್ತೇನೆ

ಶ್ರೀ ಸಿದ್ಧರಾಮಯ್ಯ ಜಾನುವಾರುಗಳಿಗೆ ಕೊಡಬೇಕು, ಕುರಿ ಸತ್ತುಹೋದರೂ ಕೊಡಬೇಕು

ಶ್ರೀ ಜಗದೀಶ್ ಶೆಟ್ಟರ್ ಈಗ ಜೂನ್ 27ಕ್ಕೆ Guidelines change ಆಗಿದೆ

ಶ್ರೀ ಸಿದ್ಧರಾಮಯ್ಯ ನಮ್ಮ U P A ಸರ್ಕಾರ ಮಾಡಿದ್ದು, ಅದರ Copy ಕೊಡಿ

ಶ್ರೀ ಜಗದೀಶ್ ಶೆಟ್ಟರ್ ನಿಮ್ಮ U P A ಸರ್ಕಾರವೇ ಮಾಡಿದ್ದು, ಅದರ Copy ಕೊಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಜಗದೀಶ್ ಶೆಟ್ಟರ್, ಅವರೇ ಈಗ ಇರುವ Guidelines ನಲ್ಲಿ ಇನ್ನು ಕೆಲವು ದೋಷವಿದೆ ಅದೇನೆಂದರೆ, ಮಳೆ ಬಂದು ಒಂದು ಕೆರೆ ತುಂಬಿರುತ್ತದೆ ಕೆರೆ ಒಡೆದು ಮುಂದಿನ ಹೊಲ ಹಾಳಾದರೆ ಅದಕ್ಕೆ ಪರಿಹಾರ ಕೊಡುವುದಿಲ್ಲ, ಅದು Flood ಅಲ್ಲ ಅನ್ನುತ್ತಾರೆ ಹೊಳೆ ಹಳ್ಳ ಬಂದು flood ಆದರೆ ಮಾತ್ರ ಕೊಡುತ್ತಾರಂತೆ ಈಗ ನಮ್ಮಲ್ಲಿ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ ಐದು ವರ್ಷಗಳಿಂದ ಹೇಳುತ್ತಿದ್ದೇವೆ ಹಿಂದೆ ಮಾನ್ಯ ಎಂ ಪಿ ಪ್ರಕಾಶ್ ಅವರು Revenue Minister ಆಗಿದ್ದಾಗ ಸ್ವತಃ ಬಂದಿದ್ದರು, ಅಲ್ಲೂ ಹೇಳಿದರು D C ಅವರು Guidelines ಇಲ್ಲ ಪರಿಹಾರ ಬರುವುದಿಲ್ಲ ಅದು ಹಾಗೆ ಇಲ್ಲ ಅದನ್ನು ಬದಲಾವಣೆ ಮಾಡುವುದಿಲ್ಲ ಎಂದರು ಹೀಗಾಗಿ ಇವೆಲ್ಲ ರೈತರಿಗೆ ಬಹಳ ತೊಂದರೆಯಾಗಿದೆ ಕೆರೆ ಒಡೆದು ಮುಂದೆ ಹೊಲ ಹಾಳಾದರೆ ಅದಕ್ಕೆ ಏನೂ ಕೊಡುವುದಿಲ್ಲವಂತೆ ನೋಡಿ ಅದನ್ನು ಏನಾದರೂ ಮಾಡಿ ಬದಲಾವಣೆ ಮಾಡಿ State Government ನವರು Change ಮಾಡಿಕೊಳ್ಳಬೇಕು, ಎಲ್ಲವನ್ನು Central Government ಮೇಲೆ ಹೇಳುವುದಕ್ಕಾಗುವುದಿಲ್ಲ

ಶ್ರೀ ಅರಗ ಜ್ಞಾನೇಂದ್ರ ಈಗ 50,000 ಪರಿಹಾರ ಒಬ್ಬ ಮನುಷ್ಯ ಸತ್ತು ಹೋದರೆ ಕೇಂದ್ರ ಸರ್ಕಾರದ ನಿಯಮದ ಪ್ರಕಾರ ಇದೆ ಅದನ್ನು ಈಗ ಒಂದು ಲಕ್ಷ ಮಾಡಲಾಗಿದೆ ತೊಂದರೆಗೆ ಒಳಗಾದವರಿಗೆ ಪರಿಹಾರ ಸಿಕ್ಕಿದರೆ ಸಾಕು ನಾನು ಮೊದಲೇ ಹೇಳಿಬಿಟ್ಟೆ ಈ ಚರ್ಚೆಯಲ್ಲಿ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಖರ್ಗೆಯವರೇ, ಈಗ ಏನಾಯಿತು ಅಂದರೆ, ಇವತ್ತಿನ ಸಮ್ಮಿಶ್ರ ಸರ್ಕಾರ ಬಂದ ಮೇಲೆ ನೀವೆಲ್ಲಾ ಪ್ರಯತ್ನ ಮಾಡಿದ್ದೀರಿ ಅದು ಆಗಿರಲಿಲ್ಲ ಇವತ್ತು ನಾವು ಪ್ರಯತ್ನ ಮಾಡಿದ ಮೇಲೆ ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದ್ದರು

ಶ್ರೀ ಸಿದ್ಧರಾಮಯ್ಯ – ಮಾನ್ಯ ರಾಜನಾಥ್ ಸಿಂಗ್‌ನವರು ಕೊಡಲಿಲ್ಲ ಅದಕ್ಕೆ Credit ತೆಗೆದುಕೊಳ್ಳಿ ಮಾನ್ಯ ಶರದ್‌ಪವಾರ್ ಅವರು ಕೊಟ್ಟಿದ್ದಾರೆ, ಅದಕ್ಕೂ ನೀವೇ ಕ್ರೆಡಿಟ್ ತೆಗೆದುಕೊಳ್ಳಿ

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ ಮಾನ್ಯ ಸಭಾಧ್ಯಕ್ಷರೆ, ಬೆಂಕಿ ಬಿದ್ದರೆ ಮೇವಿನ ಬಗ್ಗೆ ಮಾತನಾಡುತ್ತಿದ್ದಾರೆ ಬರಗಾಲದಲ್ಲಿ ಏನು ಮೇವು ಸಂಗ್ರಹಣೆ ಆಗಿದೆಯಲ್ಲ, ಯಾವಾಗಲೂ Guidelines ಇಟ್ಟುಕೊಂಡು ಹೋಗಲು ಕೆಲವು ಸಾರಿ ಆಗುವುದಿಲ್ಲ ಈಗೇನು ಮೇವು ಸಂಗ್ರಹಣೆ ಆಗಿದೆಯಲ್ಲಾ, ಅದನ್ನು ನಮ್ಮ ರೈತರಿಗೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ ಏನೋ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ದುಡ್ಡು ಕಡಿಮೆ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ ಮಳೆ ಬಂದು ಗಾಳಿಗೆ ಎಲ್ಲಾ ಹಾರಿ ಹೋಗುತ್ತಿದೆ, ಅಲ್ಲಿ ನಾವು 2 ರೂ ಗಳಿಗೆ ಕೊಡಲು ಯೋಚನೆ ಮಾಡಿಕೊಂಡು ಕುಳಿತಿದ್ದೇವೆ, ಅದನ್ನು ರೈತರಿಗೆ ಕೊಡಲು ಆಗಿಲ್ಲ, ಅದರ ಬಗ್ಗೆ ಸರ್ಕಾರ ಯೋಚನೆ ಮಾಡಲಿ

ಶ್ರೀ ಅರಗ ಜ್ಞಾನೇಂದ್ರ – Sir, ಹಾಗಾಗಿ ಈ ಎಲ್ಲಾ ಪರಿಹಾರಗಳು ಪುನರ್ವಸತಿಗಳು ಬಹಳ ಜರೂರಾಗಿ ಆಗಬೇಕಾಗಿದೆ ಯಾಕೆಂದರೆ, ಮನೆ ಕಳೆದುಕೊಂಡು, ಮನೆಯಲ್ಲಿ ಸತ್ತು ನಿರ್ವಹಣೆ ಬೀದಿಯ ಮೇಲೆ ಇದ್ದಂತಹ ಸಂದರ್ಭದಲ್ಲಿ ನಾವು ಆದಷ್ಟು ಬೇಗ ಧಾವಿಸುವಂತಹ ಪ್ರಯತ್ನ ಆಗಬೇಕಾಗುತ್ತದೆ ಮತ್ತೆ ಎಲ್ಲರೂ ಮಾತನಾಡುವಾಗ ಈ Natural Calamities ಬಗ್ಗೆ ಚರ್ಚೆ ಆಗುತ್ತಿದೆ, ಆದರೆ ಎಲ್ಲಿಗೆ ವಿಚಾರ ಬರುತ್ತಿದೆ ಎಂದರೆ ಸಾಲ ಮನ್ನಾದ ಬಗ್ಗೆ ವಿಚಾರ ಬರುತ್ತಿದೆ ನನಗೆ ಅನ್ನಿಸುತ್ತದೆ ಎಲ್ಲೋ ಒಂದು ಕಡೆ ನಮ್ಮಲ್ಲಿನ ಕೆಲವರಿಗೆ ಈ ಸಾಲ ಮನ್ನಾದಿಂದ ಅವರ ಅಸ್ತಿತ್ವವೇ ಹೋಗುತ್ತದೆ ಎನ್ನುವ ಭಯ ಇವತ್ತು ಇದೆಯೇನೋ ಸಾಲ ಮನ್ನಾ ಶೇಕಡ 4 ರಷ್ಟು ಬಡ್ಡಿ ಇದರಿಂದ ರೈತರ ಒಂದು Vote Bank ಕಿತ್ತುಕೊಂಡು ಹೋಗಿದೆ ಎನ್ನುವಂತಹ ಕನವರಿಕೆ ಶುರು ಆಗಿ ಬಿಟ್ಟಿದೆ ಏಕೆಂದರೆ, ನಾವು ಮಳೆ, ಗಾಳಿ ಅತಿವೃಷ್ಟಿಯಿಂದ ಏನು ಹಾನಿಯಾಗಿದೆ ಎಂಬ ಬಗ್ಗೆ Notice ಕೊಟ್ಟುಕೊಂಡು ಕೊನೆಗೆ ಬರುವುದು ರೈತರ ಸಾಲಮನ್ನಾದ ಬಗ್ಗೆ, ನಾನು ಹೇಳುತ್ತಿದ್ದೇನೆ, ನಮಗೆ ಇದೇ ಒಂದು ಒಳ್ಳೆಯ ಸಂದರ್ಭ ಇದೆ ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಮಂಡನೆ ಮಾಡಲಿ ಇಡೀ ಸದನೆ ಒಂದು ನಿರ್ಣಯ ಮಾಡೋಣ ರೈತರ Bank ನಲ್ಲಿರುವಂತಹ 25 ಸಾವಿರ ರೂಪಾಯಿಯ ಒಳಗೆ ಇರುವಂತಹ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಬೇಕು ರೈತರೇನೊ Nationalised Bank ನಲ್ಲಿ ಸಾಲ ಪಡೆದಿದ್ದಾರೆ,

25,000ದವರೆಗೆ ಸಾಲವನ್ನು ಮನ್ನಾ ಮಾಡಬೇಕು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ರೈತರು ಪಡೆದಿರುವಂತಹ ಸಾಲಕ್ಕೂ ಶೇಕಡ 4 ರಷ್ಟು ಬಡ್ಡಿಯಲ್ಲಿ ನೀಡಬೇಕು ನಾವು ಕನಿಷ್ಠ ಕರ್ನಾಟಕದಲ್ಲಿರುವ ಎಲ್ಲರೂ ಕೂಡಾ ಪಕ್ಷ ಮೀರಿ ನಿರ್ಣಯ ಮಾಡೋಣ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಖರ್ಗೆಯವರು ಮತ್ತು ನಮ್ಮ ನಾಯಕರೆಲ್ಲರೂ ಕೂಡ ಅದನ್ನು ಅನುಮೋದಿಸುತ್ತಾರೆಂದು ತಿಳಿದುಕೊಂಡಿದ್ದೇನೆ ಈ ರೀತಿಯ ಒಂದು ನಿರ್ಣಯ ತೆಗೆದುಕೊಂಡು ಒಂದು ಪ್ರಸ್ತಾಪ ಮಾಡುವಂತಹ ಅವಶ್ಯಕತೆ ಇದೆಯೆಂದು ನನಗೆ ಅನ್ನಿಸುತ್ತದೆ ನಮ್ಮ ಅನೇಕ ನಾಯಕರುಗಳು ಮಾತನಾಡತಕ್ಕಂತಹ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿನ ಬೀಜದ ಬಗ್ಗೆ ಹೇಳಿದರು, ಬೀಜದ ವಿಚಾರ ಒಂದು ದೊಡ್ಡ ಸಮಸ್ಯೆಯಾಗಿದೆ ಭತ್ತ ಇರಬಹುದು, ಜೋಳ ಇರಬಹುದು, ರಾಗಿ ಇರಬಹುದು, ಬಹಳ ದೊಡ್ಡ ಸಮಸ್ಯೆಯಾಗಿದೆ

ಉಪಾಧ್ಯಕ್ಷರು Next Demand ಬಗ್ಗೆ ಮಾತನಾಡುವುದು ಸಾಕಷ್ಟಿದೆ ಇದೆಲ್ಲಾ ಅಲ್ಲಿ Cover ಆಗುತ್ತದೆ ಈಗ Flood ಬಗ್ಗೆ ಏನು ಸಮಸ್ಯೆ ಇದೆ, ಅದರ ಬಗ್ಗೆ ದಯವಿಟ್ಟು ಮಾತನಾಡಿ ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ

ಶ್ರೀ ಅರಗ ಜ್ಞಾನೇಂದ್ರ Sir, ಅವರೆಲ್ಲ ಎಲ್ಲೆಲ್ಲೋ ಹೋಗಿ ಬಂದರು ತಾವೇ ಕುಳಿತುಕೊಂಡು ಕೇಳುತ್ತಿದ್ದೀರಿ ನಾವು ಕುಳಿತುಕೊಂಡು ಕೇಳಿದ್ದೇವೆ ಎಲ್ಲಾ ಸುತ್ತಿ ಬಂದರು, ಆಗ ಬೆಲ್ ಮಾಡಲಿಲ್ಲ ನಾನು Subject ಮೇಲೆ ಮಾತನಾಡುವಾಗ bell ಮಾಡಿದರೆ ಹೇಗೆ Sir

ಉಪಾಧ್ಯಕ್ಷರು ಇನ್ನು Demand ಇದೆಯಲ್ಲಾ, ಅದರ ಬಗ್ಗೆ ಚೆನ್ನಾಗಿ ಮಾತನಾಡಿ

ಶ್ರೀ ಅರಗ ಜ್ಞಾನೇಂದ್ರ – ಬೀಜದ ಭತ್ತ ಈ ವರ್ಷ ಅತಿವೃಷ್ಟಿಯಿಂದ ಅನಾವೃಷ್ಟಿಯಿಂದ ಮತ್ತೆ ಮತ್ತೆ ಹಾಕಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಇದಕ್ಕೆ ಒಂದು ಯೋಗ್ಯವಾಗಿರತಕ್ಕಂತಹ Quality Seeds ಅನ್ನು ಕೊಡುವ ಬಗ್ಗೆ ಹಿಂದಿನ ಸರ್ಕಾರ ವಿಚಾರ ಮಾಡಿತ್ತು ನಾನು ಇಲ್ಲ ಎಂದು ಹೇಳುವುದಿಲ್ಲ ಮಾನ್ಯ ಧರ್ಮಸಿಂಗ್ ಅವರ ಸರ್ಕಾರ ಹಾಗೂ ಹಿಂದಿನ ಸರ್ಕಾರ ವಿಚಾರ ಮಾಡಿತ್ತು ಹಿಂದಿನ ಸರ್ಕಾರ ಎಷ್ಟು

ಖರ್ಚು ಮಾಡಿತ್ತೆಂದು ನಾನು ಲೆಕ್ಕ ತೆಗೆಸಿದೆ 28 ಕೋಟಿ ರೂಪಾಯಿ ಒಂದು ವರ್ಷಕ್ಕೆ ಖರ್ಚು ಮಾಡಿದೆ ಈಗ ಸುದೈವ ನಮ್ಮ ಸಮ್ಮಿಶ್ರ ಸರ್ಕಾರ ಬಂದಾಗ ರೈತರ ಬಗ್ಗೆ ಎಲ್ಲರೂ ಬೊಬ್ಬೆ ಹಾಕುತ್ತೇವೆ ಆದರೆ, ಅಧಿಕಾರದಲ್ಲಿದ್ದಾಗ ನಾವೇನು ಮಾಡಿದ್ದೇವೆ ಎನ್ನುವುದು ಬಹಳ ಮುಖ್ಯವಾಗಿದೆ ರೈತರಿಗೆ ನೇರವಾಗಿ ಫಲ ದೊರಕಬೇಕು ಪ್ರತಿಯೊಬ್ಬ ರೈತ ಸಲಹಾ ಕೇಂದ್ರಗಳ ಎದುರುಗಡೆ ಹೋಗಿ ಜನರು Queue ನಲ್ಲಿ ನಿಂತುಕೊಂಡು ಇವತ್ತು ಬೀಜಗಳನ್ನು ಪಡೆಯುತ್ತಿದ್ದಾರೆ ಶೇಕಡ 75 ರಷ್ಟು Subsidy ಯನ್ನು ಮಾಡಿದಾಗ ಸುಮಾರು 87 ಕೋಟಿ ರೂಪಾಯಿ ಕಳೆದ ವರ್ಷ ಖರ್ಚಾಗಿದೆ ನಾವೆಲ್ಲರೂ ಕೂಡ ' Phone ಮಾಡಿ ಮಹರಾಯರೆ, ಇನ್ನು ಸ್ವಲ್ಪ ಜಾಸ್ತಿ ಕೊಡಿ" ಎಂದು ಹೇಳಿದೆ ರಾಜ್ಯ ಸರ್ಕಾರ ಇಷ್ಟೊಂದು ದೊಡ್ಡ ಅಗಾಧವಾಗಿರತಕ್ಕಂತಹ ಹಣ ರೈತರ ಪರವಾಗಿ ಬಿಡುಗಡೆ ಮಾಡಿದೆ ಎನ್ನುವುದು ನಮಗೆ ಅತ್ಯಂತ ಸಂತೋಷ ಕೊಡುತ್ತದೆ ಈಗಾಗಲೆ ಬೀಜದ ಬಗ್ಗೆ ಕೇಂದ್ರ ಸರ್ಕಾರ 68 ಲಕ್ಷ ರೂಪಾಯಿಗಳನ್ನು ಮಾತ್ರ Prime Minister Package ನಲ್ಲಿ ಬಿಡುಗಡೆ ಮಾಡಿದೆ, ಅದು ಕೊಡಬೇಕಾಗಿದ್ದು 60 ಕೋಟಿ ಅದು ತಮಗೆ ತಿಳಿದಿರಲಿ ಇದರ ಬಗ್ಗೆ ಸ್ವಲ್ಪ ಒತ್ತಡ ಹಾಕುವಂತಹ ಪ್ರಯತ್ನ ಮಾಡಬೇಕು ಇದು ರಾಜಕಾರಣಕ್ಕಿಂತ ರೈತರಿಗೆ ಉಪಯೋಗವಾಗುವಂತಹ ವಿಚಾರ ಅದೇ Package ನಲ್ಲಿ ರಾಜ್ಯ ಸರ್ಕಾರ ಈಗಾಗಲೇ 5 ಕೋಟಿ ರೂಪಾಯಿಗಳನ್ನು release ಮಾಡಿದೆ 60 ಕೋಟಿ ರೂಪಾಯಿ ಬರುತ್ತದೆ ಎಂದು ತಿಳಿದುಕೊಂಡು 5 ಕೋಟಿ ರೂಪಾಯಿ ಖರ್ಚು ಮಾಡಿಬಿಟ್ಟಿದ್ದಾರೆ ನಾವು P M Package ಎಂದು ಕನವರಿಸುತ್ತಿರುತ್ತೇವೆ, ಅದು ಬಹಳ ಒಳ್ಳೆಯದು ಸಂಪೂರ್ಣವಾಗಿ ಹಣ ಬರಬೇಕು ಅಷ್ಟೇ ಹಣ ಬಂದರೆ ಅದು ತುಂಬಾ ಒಳ್ಳೆಯ ಯೋಜನೆ ಇಲ್ಲ ಎಂದು ನಾನು ಹೇಳುವುದಿಲ್ಲ ಆದರೆ ಪ್ರಾಮಾಣಿಕವಾಗಿ ಅನುಷ್ಠಾನ ಅದರಲ್ಲಿ ಬರಬೇಕಾಗುತ್ತದೆ ನನಗೆ ಗೊತ್ತಿದೆ, ನಾನು ಅನೇಕ ಅಧಿಕಾರಿಗಳ ಜೊತೆ ಮಾತನಾಡುತ್ತಿದ್ದೆ ಅವರು ದಿನಕ್ಕೊಂದು ಸುತ್ತೋಲೆ ಕಳುಹಿಸುತ್ತಿದ್ದಾರೆ ದಿನಕ್ಕೊಂದು Norms ಕಳುಹಿಸುತ್ತಿದ್ದಾರೆ ಕೊಟ್ಟಿದ್ದೀವಿ, ಆದರೆ ಇವರು ಖರ್ಚು ಮಾಡಬಾರದು ಇದನ್ನು ಉಪಯೋಗಿಸಿಕೊಳ್ಳಬಾರದು ಈ ರೀತಿಯ ಆಲೋಚನೆ ಕೇಂದ್ರ ಸರ್ಕಾರಕ್ಕೆ ಇದ್ದರೆ ನಾವೇನು ಮಾಡುವುದಕ್ಕಾಗುವುದಿಲ್ಲ ಅದಕ್ಕೆ ಬೇಕಾದರೆ Media ದಲ್ಲಿ ನಾವಿಷ್ಟು ಸಾವಿರ ಕೋಟಿ ಕೊಟ್ಟಿದ್ದೇವೆಂದು Publicity ತೆಗೆದುಕೊಳ್ಳಲಿ

ಆದರೆ, ಈ ರಾಜ್ಯ ಅದನ್ನು ಪಡೆದುಕೊಳ್ಳುವುದಕ್ಕೆ ಆಗದೇ ಇರುವಂತಹ Norms ಗಳನ್ನು fix ಮಾಡುತ್ತಿದ್ದಾರೆ ದಯವಿಟ್ಟು ಅದನ್ನು ಸರಿಪಡಿಸುವಂತಹ ಕೆಲಸ ನಮ್ಮೆಲ್ಲರ ಕಡೆಯಿಂದ ಆಗಬೇಕೆಂದು ಹೇಳಿ ನನ್ನ ವಿನಂತಿ Veeresh Committee ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಹೇಳಿದರು Veeresh Committee report ಆಧಾರವಿಟ್ಟುಕೊಂಡು ಮಾಡಿ ಎಂದು ಹೇಳಿದರು Veeresh Committee ಯ ಒಟ್ಟಾರೆ ತಾತ್ಪರ್ಯ ಏನು ಎಂದರೆ ಒಬ್ಬ ರೈತನು ವಿಷ ತೆಗೆದುಕೊಂಡು ಸಾಯಲಿಲ್ಲ ಎಂದು ವರದಿ ಕೊಟ್ಟಿದ್ದಾರೆ Veeresh Committee report ಇಟ್ಟುಕೊಂಡರೆ ಕೇಂದ್ರ ಸರ್ಕಾರದಿಂದ ನಮಗೆ ಒಂದು ಪೈಸೆಯೂ ಸಿಗುವುದಿಲ್ಲ ನಾವೇ ಅಲ್ಲಿ ಕುಳಿತಿದ್ದಾಗ Veeresh Committee Report ಯನ್ನು ರದ್ದು ಮಾಡಿ ಎಂದು ಬಹಳ ದೊಡ್ಡ ಗಲಾಟೆ ಮಾಡಿದ್ದೆವು ಈಗ ನೀವು ಆ ಕಡೆಗೆ ಕುಳಿತುಕೊಂಡಿದ್ದಾಗ Veeresh Committee report ಅನ್ನು ಇಟ್ಟುಕೊಳ್ಳಿ ಅಂದರೆ ಇದರ ಅರ್ಥ ಏನು ಎಂದು ನನಗೆ ಗೊತ್ತಾಗಲಿಲ್ಲ ಯಾವ ಅಂಶಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆಂದು ಈಗಾಗಲೇ ಹೇಳಬೇಕಾಗುತ್ತದೆ ಹೀಗಾಗಿ ಎಲ್ಲರೂ ಕೂಡ ವಿಶೇಷವಾದ ರೀತಿಯಲ್ಲಿ ಆಲೋಚನೆ ಮಾಡಬೇಕು, ಸರ್ಕಾರಕ್ಕೆ ಸಲಹೆ ಕೊಡಬೇಕು ಸರ್ಕಾರ ಕೂಡ ಇದನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿಯಂತೂ ಹೊಸನಗರ, ಸಾಗರ, ತೀರ್ಥಹಳ್ಳಿ ಮತ್ತು ಸೊರಬ ತಾಲ್ಲೂಕುಗಳು ಇವೆ ಮಾನ್ಯ ಕುಮಾರ್ ಬಂಗಾರಪ್ಪನವರು ಇದ್ದಾರೆ ನಮ್ಮ ಮಲೆನಾಡಿನ ತಾಲ್ಲೂಕುಗಳಂತೂ ಬಹಳ ದೊಡ್ಡ ಹಾನಿಯನ್ನು ಅನುಭವಿಸಿದ್ದಾರೆ ನಮಗೆ ಆದಷ್ಟು ಬೇಗ ಹಣ ಮತ್ತು ಪರಿಹಾರಗಳು ಬರಬೇಕು ಎಂದು ಹೇಳುತ್ತೇನೆ ಹಾಗೇನೆ ನಮ್ಮ ಸೇತುವೆಗಳು ಬಿದ್ದುಹೋಗಿದ್ದಾವೆ ಅವಕ್ಕೆ ದುರಸ್ತಿ ಮಾಡಲು ದೊಡ್ಡ ದೊಡ್ಡ Company ಗೆ contract ಇವತ್ತು ಕೊಟ್ಟಿದ್ದೀರಿ ಮಾನ್ಯ ಲೋಕೋಪಯೋಗಿ ಸಚಿವರಾದಂತಹ ರೇವಣ್ಣನವರು ಇಲ್ಲ ದೊಡ್ಡ ದೊಡ್ಡ ಕಂಪನಿಗೆ ಕೊಟ್ಟಿದ್ದಾರೆ ಅವು ಯಾವುವೆಂದರೆ, Gammon India, Nagarjuna Constructions ಇತ್ಯಾದಿ ಅವನ್ನು ತಕ್ಷಣವೇ Black List ಗೆ ಸೇರಿಸಬೇಕೆಂದು ನನ್ನ ವಿನಂತಿ ಏಕೆಂದರೆ ಅವರು ಕೆಲಸ ಮಾಡುತ್ತಿಲ್ಲ ಉದಾಹರಣೆ ನಮ್ಮ ನಗರದಿಂದ ಕೊಲ್ಲೂರು ರಸ್ತೆಯ ಒಂದು State

Highway ನಲ್ಲಿ ಒಂದು Bridge ಬಿದ್ದು ಹೋಗಿದೆ ಅವರಿಗೆ ಕಲಸ ವಹಿಸಿಕೊಟ್ಟರೆ ನಮ್ಮ ಮೋರಿ ಕಟ್ಟುವವರು Concrete Mixture ಇಟ್ಟುಕೊಳ್ಳುತ್ತಾರೆ ಆ ರೀತಿಯ ಒಂದು Mixture ಇಟ್ಟುಕೊಂಡು ಒಂದು Wall ಅನ್ನು ಎಬ್ಬಿಸಲಿಲ್ಲ ಮಳೆ ಬಂತು ಈಗ ನೀರು ತುಂಬಿಕೊಂಡಿದೆ, ಆ ಕಡೆ, ಈ ಕಡೆ, ಓಡಾಡುವ ಹಾಗಿಲ್ಲ ಇಷ್ಟು ದೊಡ್ಡ ಕಂಪನಿಗೆ ಏಕೆ ಕೊಡುತ್ತೇವೆಂದರೆ, ಅವರು ಅತ್ಯಂತ ಕಡಿಮೆ ಅವಧಿಯಲ್ಲಿ ಮಾಡಿ ಕೊಡುತ್ತಾರೆಂದು ಶೃಂಗೇರಿಯದು ಕೂಡ ಅಷ್ಟೇ, ಗ್ಯಾಮನ್ ಇಂಡಿಯಾಗೆ ಕೊಟ್ಟಿರುವ ಒಂದು ಸೇತುವೆ ಇವತ್ತಿನವರೆಗೂ ಕೂಡ ಏನೂ ಆಗುವುದಿಲ್ಲ ಅವರು ಬದಲಿ ರಸ್ತೆ ಮಾಡಿದ್ದನ್ನು ತೊಳೆದುಕೊಂಡು ಹೋಯಿತು ಈ ಸಂಬಂಧವಾಗಿ ಮೊನ್ನೆ ಜನರು ಇಂಜಿನಿಯರ್ ಅವರನ್ನು ಹಿಡಿದುಕೊಂಡು ಹೊಡೆದರು ಇಂತಹ ಪರಿಸ್ಥಿತಿಗಳನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ ಇಂತಿಂಥ ದೊಡ್ಡ ದೊಡ್ಡ ಕಂಪನಿಗಳಿಗೆ ಕೆಲಸಗಳನ್ನು ವಹಿಸಿಕೊಟ್ಟು 'ನೀನು ಯವಾಗ ಬೇಕಾದರೂ ಮಾಡಯ್ಯ, ಹೇಗೆ ಬೇಕಾದರೂ ಮಾಡಯ್ಯ, ಆಗಿಂದಾಗ್ಗೆ ಸಿಮೆಂಟ್, ಕಲ್ಲಿನ ರೇಟ್ ಜಾಸ್ತಿಯಾದಾಗ ನಾವು ಜಾಸ್ತಿ ಮಾಡಿಕೊಡುತ್ತೇವೆ' ಎಂದು ಹೇಳಿ blank cheque ಅನ್ನು ಕೊಡುವುದಕ್ಕೆ ಹೋಗಬಾರದು, ಸರ್ಕಾರ ದಯವಿಟ್ಟು ಇದರ ಬಗ್ಗೆ ಆಲೋಚನೆ ಮಾಡಬೇಕು ನಮ್ಮ local contractor ಗೆ ಟೆಂಡರ್ ಕರೆದು ಕೊಟ್ಟಿದ್ದರೆ, ಅವರು ಕೆಲಸ ಮಾಡದಿದ್ದರೆ 'ನಮ್ಮನ್ನು Black List ಗೆ ಸೇರಿಸುತ್ತಾರೆ' ಎಂದು ಹೆದರಿಯಾದರೂ ಕೆಲಸ ಮಾಡುತ್ತಾರೆ ಆದರೆ, ಇವರು ಭಾರಿ ದೊಡ್ಡ ಕಂಪನಿಗಳವರು, ನಾವು ಈ ರಾಜ್ಯಕ್ಕೆ ಅವರು ಅನಿವಾರ್ಯವಾಗಿದ್ದೇವೆಂದು ತಿಳಿದುಕೊಂಡಿದ್ದಾರೆ ಅವುಗಳನ್ನು Black List ಗೆ ಸೇರಿಸುವ ವ್ಯವಸ್ಥೆಯಾಗಬೇಕೆಂದು ನಾನು ವಿನಂತಿಸಿಕೊಳ್ಳುತ್ತಾ ಪ್ರವಾಹ ಪರಿಹಾರವಾಗಿ ವಿಶೇಷ ಹಣಕ್ಕಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕಿ ನಾವು ಅತಿ ಹೆಚ್ಚಿನ ಅನುದಾನ ತರಬೇಕು ಬಯಲುಸೀಮೆ ತಾಲ್ಲೂಕುಗಳಲ್ಲೂ ಮಳೆ ಇಲ್ಲದೆ flood ಆಗಿದೆ ಅದು ಕಳೆದ ವರ್ಷವೂ ಆಗಿತ್ತು ಈ ವರ್ಷವೂ ಆಗಿದೆ ಒಂದು ಶಾಶ್ವತವಾದ ಪರಿಹಾರಕ್ಕಾಗಿ ನಾವೆಲ್ಲರೂ ಆಲೋಚನೆ ಮಾಡಬೇಕೆಂದು ವಿನಂತಿಸಿಕೊಂಡು ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) ಸನ್ಮಾನ್ಯ ಅಧ್ಯಕ್ಷರೆ, ಈಗ flood ಬರಗಾಲದ ಬಗ್ಗೆ ಚರ್ಚೆಯಾಗುತ್ತಿದೆ ನಾನು ಇನ್ನೂ ನಮ್ಮ

ಊರಿನಲ್ಲಿ ನೋಡಿಲ್ಲ ಅದಕ್ಕೆ ಅದು ನನ್ನ ಬಾಯಲ್ಲಿ ಬಂದಿಲ್ಲ ಒಂದು ಕಡೆ flood, ಇನ್ನೊಂದು ಕಡೆ ನೀರೇ ಇಲ್ಲ ನಮ್ಮ ಕೋಲಾರ ಜಿಲ್ಲೆಯಲ್ಲಿ ನೀರೇ ಇಲ್ಲ ಒಂದು ಕಡೆ ಮಳೆ ಬಂದಿದೆ, ಮರಗಳು, ಮನೆಗಳು ಬಿದ್ದು ಹೋಗಿವೆಯೆಂದು ಹೇಳುತ್ತಿದ್ದಾರೆ, ಆದರೆ, ಕೋಲಾರ ಜಿಲ್ಲೆಯಲ್ಲಿ ನೀರೇ ಇಲ್ಲ ! ನಾನು ನೋಡುವುದಕ್ಕೂ ಸಾಧ್ಯವಾಗುವುದಿಲ್ಲ, ಕುಡಿಯುವುದಕ್ಕೂ ಸಾಧ್ಯವಾಗುವುದಿಲ್ಲ ಈ ಕೆಲಸಗಳನ್ನು ಮಾಡುವುದಕ್ಕೆ ಮಂತ್ರಿಗಳು they must know what ıs the real fact ಸಾಮಾನ್ಯ ಮನುಷ್ಯರ ಜೀವನ ಹೇಗಿದೆ ಎಂಬುದು ಗೊತ್ತಾಗಬೇಕು ಶ್ರೀಮಾನ್ ರಮೇಶ್‌ಕುಮಾರ್‌ರವರ ಕಾಲದಲ್ಲಿ ಹೊಸದಾಗಿ ಶಾಸನಸಭೆಗೆ ಆಯ್ಕೆಯಾಗಿ ಬಂದಿದ್ದ ಎಂಎಲ್‌ಎ ಗಳಿಗೆ ಮೈಸೂರಿನಲ್ಲಿ traınıng ನೀಡಿದರು ಈಗ ಕೆಲವು ಹೊಸ ಮಂತ್ರಿಗಳಿಗೆ, ಇಲ್ಲವೇ senıor ಮಂತ್ರಿಗಳಿಗೆ traınıng ನೀಡಬೇಕು ನಿಜವಾಗಿಯೂ ಅವರುಗಳಿಗೆ traınıng ನೀಡಬೇಕು I feel thıs I am brıngıng from my heart to the Hon'ble Deputy Chıef Mınıster and Home Mınıster, ಕೆಲವು ಮಂತ್ರಿಗಳಿಗೆ traınıng ನೀಡಬೇಕು ಬರಗಾಲದ ಬಗ್ಗೆ ಮಾತನಾಡಿ ಎಂದರೆ, ಆ ಕೆಲಸ ಮಾಡುವುದಿಲ್ಲ Development ಬಗ್ಗೆ ಮಾತನಾಡಿ ಎಂದರೆ, ಅದರ ಬಗ್ಗೆಯೂ ಮಾತನಾಡುವುದಿಲ್ಲ ಮತ್ತು development ಮಾಡುವುದೂ ಇಲ್ಲ ಜಿಲ್ಲಾ ಮಂತ್ರಿಗಳು Clerk ತರಹ ಕುಳಿತುಕೊಂಡು Postman ತರಹ ಕೆಲಸ ಮಾಡಿಕೊಂಡಿದ್ದಾರೆ Partıcularly, ın my dıstrıct there ıs no drınkıng water, I have brought ıt to the notıce of the Mınıster ನಾನು ಕೋಲಾರದ D C ಅವರನ್ನು ನೋಡಲು ಹತ್ತು ಸಲ ಬರಬೇಕು ಸ್ವಾಮಿ, ಕುಡಿಯುವುದಕ್ಕೆ ನೀರಿಲ್ಲವೆಂದರೆ, ಈಗ ತಾನೆ ಸಾಹೇಬರು ಹೊರಗಡೆ ಹೋಗಿದ್ದಾರೆಂದು ಹೇಳುತ್ತಾರೆ ಎಲ್ಲಿಗೆ ಹೋಗಿದ್ದಾರೆಂದರೆ, ಗೊತ್ತಿಲ್ಲವೆನ್ನುತ್ತಾರೆ, ಕ್ಯಾಂಪ್‌ಗೆ ಹೋಗಿದ್ದಾರೆ ಎನ್ನುತ್ತಾರೆ ಇದನ್ನೇ 15 ದಿವಸಗಳ ಕಾಲ ಹೇಳುತ್ತಾರೆ So far, ıf the Government have guts to tell, Scarcıty ಯಲ್ಲಿ ನಮ್ಮ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರೆಂಬುದನ್ನು ನೀವು ಹೇಳಿ In my Constıtuency, Scarcıty ಯಲ್ಲಿ ಕೊಟ್ಟಿದ್ದಾರೆಂದು ಹೇಳಿಬಿಟ್ಟರು ಒಂದು ರೂಪಾಯಿಯನ್ನೂ ಕೊಟ್ಟಿಲ್ಲ ನಿಮ್ಮ ಗೌರವ, ಜಂಬ ಕೋಟಿ ಕೊಟ್ಟಿದ್ದೇವೆ, ಕೋಟಿ ಕೊಟ್ಟಿದ್ದೇವೆಂದು ಹೇಳುತ್ತದೆ ನಮ್ಮ ಊರಿನಲ್ಲಿ

ಕೋಟಿಲಿಂಗೇಶ್ವರ ಎಂಬುವವರಿದ್ದು, ಗುಡಿ ಕಟ್ಟಿದ್ದಾರೆ ಆ ಕೋಟಿಲಿಂಗೇಶ್ವರನನ್ನು ನೋಡುವುದಕ್ಕೆ ಯಾರೋ ಒಬ್ಬರು ಬಂದರೆ, ಅರೆರೆ, ಕೋಟಿಲಿಂಗೇಶ್ವರನನ್ನು ಏತಕ್ಕೆ ನೋಡುತ್ತೀರಿ? ವಿಧಾನಸೌಧಕ್ಕೆ ಬನ್ನಿ, ಶ್ರೀಮಾನ್ ಯಡಿಯೂರಪ್ಪನವರು ಇದ್ದಾರೆ, ಅವರು ಸಾವಿರ ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆಂದರು ಬರೀ ಪತ್ರಿಕೆಗಳಲ್ಲಿ ಕೋಟಿಗಳೆಂದು ಹೇಳಿಕೊಂಡರೆ ಆಗುತ್ತದೆಯೇ? 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ K GF ಪರಿಸ್ಥಿತಿ ಹೇಗಿದೆ ಎಂಬುದು ನನಗೆ ಗೊತ್ತಿದೆ ನಮ್ಮ ಜಿಲ್ಲೆಯ ಪರಿಸ್ಥಿತಿ ಹೇಗಿದೆ ಎಂಬುದು ನನಗೆ ಗೊತ್ತಿದೆ 'Dark Area' ಎಂದು declare ಮಾಡಿದ್ದಾರೆ ಬೆಳಿಗ್ಗೆ ಮಾತನಾಡುವಾಗ CM ಮಲಗಿಕೊಂಡಿರುವ ಜಾಗ ಮತ್ತು ಅವರು ಎಲ್ಲಿ ಮಲಗಿಕೊಂಡಿದ್ದಾರೆಂದು clear ಆಗಿ ಹೇಳಿದರು ಅವರು ಮಲಗಿಕೊಂಡಿರುವ ಜಾಗದ ಬಗ್ಗೆ ಹೇಳಿದರೆ ತಪ್ಪಾಗುತ್ತದೆ 'ಅವನ ಬಗ್ಗೆ ಗೊತ್ತಿದೆ ಅವನು ಎಲ್ಲೆಲ್ಲಿ ಮಲಗಿಕೊಂಡಿದ್ದಾನೆ' ಎಂಬ ಆ ತರಹದ ಮಾತುಗಳು ಬರುತ್ತವೆ It is my privilege to take ಅವರು ಎಲ್ಲಿ ಮಲಗಿಕೊಂಡಿದ್ದಾರೋ, ಯಾವಾಗ ಮಲಗಿಕೊಂಡಿದ್ದಾರೋ, ಅವರು KGF ಗೆ ಬಂದು ಮಲಗಿಕೊಳ್ಳಲಿ What is that KGF house ಎಂದು ನಮ್ಮ ಖರ್ಗೆ ಸಾಹೇಬರಿಗೆ ಗೊತ್ತು ಅದು 8 ಅಡಿ ಮನೆ, ಅಲ್ಲಿ toilet ಇಲ್ಲ, bathroom ಇಲ್ಲ, ಹೊರಗಡೆ ಹೋಗಬೇಕು ಆ toilet ಗೆ ಹೋಗಿ ಸ್ವಲ್ಪ ನೋಡಿ, ಅದನ್ನು ಸ್ವಲ್ಪ ಉಪಯೋಗಿಸಿಕೊಂಡರೆ, ಆಗ ಕರ್ನಾಟಕ ರಾಜ್ಯದಲ್ಲಿನ ನಿಮ್ಮ administration ನ ಯೋಗ್ಯತೆಗಳು ಏನೆಂಬುದು ಗೊತ್ತಾಗುತ್ತದೆ ನಾನು ಸುಮಾರು ಸಲ ಕೇಳಿದ್ದೇನೆ ಮಳೆ ಬಂದರೆ ಶೌಚಾಲಯಗಳು ಬಿದ್ದುಹೋಗುತ್ತದೆ, ಅಲ್ಲಿ toilets ಇಲ್ಲ It is happening in my Constituency ಅದು natural calamity ಅದರ ಬಗ್ಗೆ ನಾನು ನಮ್ಮ ಜಿಲ್ಲಾ ಮಂತ್ರಿಗಳನ್ನು ಕೇಳಿದರೆ, ಹೌದಾ? ಅದು ಹೇಗಾಗುತ್ತದೆ? ಎಂದು ಕೇಳುತ್ತಾರೆ! ಇಂತಹ ಮಂತ್ರಿಗಳನ್ನು ಇಟ್ಟುಕೊಂಡು ನಾವು ಬರಗಾಲದ ಬಗ್ಗೆ, flood ಬಗ್ಗೆ ಮಾತನಾಡಿದರೆ, ಜನರಿಗೆ ಅನುಕೂಲವಾಗುತ್ತದೆಯೇ? ತಾವೇ ಯೋಚನೆ ಮಾಡಿ They must have that common knowledge How it is happening? From where we have to pump? What is the depth? It is 10,000 ft ಕುಡಿಯಲು ನೀರಿಲ್ಲ, ಟ್ಯಾಂಕುಗಳಿಲ್ಲ,

ಬೋರ್‌ವೆಲ್‌ಗಳಿಲ್ಲ, ಒಂದು ಪೈಸೆಯಷ್ಟೂ ಹಣ ಬಿಡುಗಡೆ ಮಾಡಿಲ್ಲ Deputy Chief Minister ಗೆ ನಾವೇನಾದರೂ ನಿಜ ಹೇಳಿದರೆ, ನಮ್ಮ ಮೇಲೇ ಅವರಿಗೆ ಕೋಪ ಬರುತ್ತದೆ ಜಿಲ್ಲಾ ಅಧಿಕಾರಿಗಳಿಗೆ ತಾವು ಒಂದು ಮಾತು ಹೇಳಬೇಕು Bethamangala is a dry area One of the best water tank, ಈಗ dry ಆಗಿದೆ ಕೇಂದ್ರ ಸರ್ಕಾರದ BEML ಸಂಸ್ಥೆಯ Managing Director ರವರು, ನಾವು 'free ಆಗಿ ಕೊಡುತ್ತೇವೆ, ನಮ್ಮ JCB ಇದೆ, ಉಪಯೋಗಿಸಿಕೊಳ್ಳಿ' ಎನ್ನುತ್ತಾರೆ The in-charge Minister or concerned Minister for water has never bothered about it What for you are using red light car, A/C Room, salary? Is it all not people's money? To enjoy, you and your family members are utilizing that money It is a sin ನೀವು ಏತಕ್ಕೆ ಮಾಡಿಲ್ಲ? ನಾವು ಕೇಳಬೇಕು ನಾನು 20 ಸಲ ಹೋಗಿ ಕೇಳಬೇಕು ನಮಗೆ ಗೌರವ ಎಲ್ಲಿದೆ? ನಮ್ಮ ಗೌರವ ನಮಗೆ ಗೊತ್ತಿದೆ ಎಂ ಎಲ್ ಎ ಗಳಾದ ನಾವು ಹೋಗಿ ಕೇಳಿದರೆ, ಸಾಮಾನ್ಯ case worker ಸರ್, ಈಗ ಹಣ ಬಂದಿಲ್ಲ, ನೀವು ಡಿ ಸಿ ಯವರನ್ನು ನೋಡಿ ಎಂದು ಹೇಳುತ್ತಾನೆ ಡಿ ಸಿ ಯವರನ್ನು ಹೋಗಿ ಕೇಳಿದರೆ, why can't you contact the in-charge Minister ಎಂದು ಹೇಳುತ್ತಾರೆ In-charge Minister ಅವರನ್ನು ಕೇಳಿದರೆ, C M ಗೆ ಬರೆದಿದ್ದೇವೆಂದು ಹೇಳುತ್ತಾರೆ ಕುಡಿಯುವ ನೀರಿಗೆ ಹಣವನ್ನು ಯಾರು ಬಿಡುಗಡೆ ಮಾಡುವುದು? Tell me Sir Though I am non-agricultural man but, now my people need water to drink ಇದನ್ನು ಮಾಡುವುದಕ್ಕೆ ಯೋಗ್ಯತೆಯಿಲ್ಲ ಹಾಗಾದರೆ, ನಾವು ಸರ್ಕಾರದ ಮೇಲೆ ಹೇಗೆ ಗೌರವ ಇಟ್ಟುಕೊಳ್ಳುವುದು? ಸುಮ್ಮನೆ ಗೌರವಕ್ಕೋಸ್ಕರ rule ಆ KRDCL ನವರು ಯಾರೆಂದು ಗೊತ್ತಿಲ್ಲ ಆ Engineer ಯಾರೆಂಬುದು ಗೊತ್ತಿಲ್ಲ ಆ Chief Engineer ಸಹ ಯಾರೆಂಬುದು ಗೊತ್ತಿಲ್ಲ ಒಂದು ಬ್ರಿಡ್ಜ್ ಕಟ್ಟಿದ್ದು ಅದನ್ನು ಜಾಯಿಂಟ್ ಮಾಡಿಲ್ಲ, ಏನೂ ಮಾಡಿಲ್ಲ, ಹಾಗೇ ಬಿದ್ದಿದೆ Just drizzling ಬಂದರೆ ಸಾಕು, ಅದರ ಮೇಲೆ ಬೈಸಿಕಲ್ ಸಹ ಹೋಗುವುದಕ್ಕಾಗುವುದಿಲ್ಲ ಕರ್ನಾಟಕ ರಾಜ್ಯದಲ್ಲಿ ಅದಕ್ಕೆ ಒಬ್ಬರೇ Secretary ಅವರನ್ನು ಕೇಳಿದರೆ, Is it not done so far ಎಂದು ಹೇಳುತ್ತಾರೆ ಇವರನ್ನು ನಾವು ಹೇಗೆ ಕೇಳುವುದು? ಇದನ್ನು

control ಮಾಡುವ capacity ಇಲ್ಲ Minister should be powerful to control the administrator ಅಲ್ಲಿ Administrator control ಮಾಡಿಕೊಂಡಿದ್ದಾರೆ ಇವರು ಏನು ಹೇಳುತ್ತಾರೆ, ಇಲ್ಲ, ನಾನು ಕೇಳಿದ್ದೇನಪ್ಪ, ಅದೆಲ್ಲವೂ ಸರಿ ಹೋಗುತ್ತದೆ' ಎಂದು ಹೇಳುತ್ತಾರೆ ಅಂದರೆ, ಶಾಸಕರು ಹೇಳಿದ್ದು ಸುಳ್ಳೇ? ಇದೇನಾ ನೀವು ನಮಗೆ ಗೌರವ ಕೊಡುವುದು? ಸತ್ಯಾಂಶ ಹೇಳಿ ಕೆಲಸ ಮಾಡುವ ಶಾಸಕರಿಗೂ ಇದೇ ಪರಿಸ್ಥಿತಿ ಮತ್ತೆ ಶಾಸಕರಾಗಿ ನಾವು ಸಭೆಗಳಲ್ಲಿ ಏಕೆ ಭಾಷಣ ಮಾಡಬೇಕು? ನೀವೇ ಹೇಳಿ ಬೋರ್‌ವೆಲ್‌ಗಳನ್ನು ಕೊರೆದು ಪಂಪ್ ಕೊಟ್ಟಿಲ್ಲ, ಮೋಟರ್ ಕೊಟ್ಟಿಲ್ಲ ಪೈಪ್ ಕೊಟ್ಟಿಲ್ಲ 3 ಇಂಚು ಪೈಪು ಕೇಳಿದರೆ, 'ಇಲ್ಲ ಸ್ವಾಮಿ, ಈಗ ಸ್ಟಾಕ್ ಇಲ್ಲ' ಎಂದು ಹೇಳುತ್ತಾರೆ '4 ಇಂಚಿನ ಪೈಪ್ ಬೇಕಾದರೆ Chief engineer ಅವರನ್ನು ಕೇಳಬೇಕು, ಚೆಕ್ ರಿಲೀಸ್ ಮಾಡಬೇಕು' ಎನ್ನುತ್ತಾರೆ D C ಹತ್ತಿರ ಹೋದರೆ, ಮುನಿಸಿಪಾಲಿಟಿಗೆ ನಾನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ Scarcity ಯಲ್ಲಿ ಹಣ ಬಂದಿಲ್ಲ ಮತ್ತೆ ನಮ್ಮನ್ನು ನೀವು ಮೀಟಿಂಗ್‌ಗೆ ಏತಕ್ಕಾಗಿ ಕರೆಯುತ್ತೀರಿ? Revenue Minister ಆದ ತಾವು ನಮ್ಮ ಜಿಲ್ಲೆಗೆ ಬಂದಿರಿ ಶ್ರೀರಾಮರೆಡ್ಡಿಯವರು ಹೇಳಿದರು ಸಭೆಯಲ್ಲಿ ತಾವು ಇದ್ದಿರಿ City ಗೆ 36 ಲಕ್ಷ ಕೊಡುತ್ತೇವೆಂದು ಹೇಳಿದಿರಿ ಕೇವಲ 29 ಲಕ್ಷ ರೂಪಾಯಿಗಳಿಗೆ 29 ಸಲ ನಾನು ಕೋಲಾರಕ್ಕೆ travel ಮಾಡಿದ್ದೇನೆ ಯಾಕೆ ಸ್ವಾಮಿ? ಕುಡಿಯುವ ನೀರು ಕೊಡುವುದಕ್ಕೂ ನನಗೆ ಯೋಗ್ಯತೆಯಿಲ್ಲವೆಂದರೆ ನಾನು ಶಾಸಕನೇ? ನೀವು ಯೋಚನೆ ಮಾಡಿ

ಶ್ರೀ ಜಗದೀಶ್ ಶೆಟ್ಟರ್ Drinking water purpose ಗೆ ಕೋಲಾರಕ್ಕೆ 5 ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟಿದ್ದೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಣ ಕೊಟ್ಟಿದ್ದೀರೆಂದು ನೀವು ಹೇಳುತ್ತೀರಿ ಆದರೆ, ಅಲ್ಲಿ ಹಣ ಇಲ್ಲ ಹಾಗಾದರೆ, ನಾವು ಯಾರನ್ನು ಕೇಳಬೇಕು? Drinking water ಗೆ ನೀವು ಯಾವ್ಯಾವ scheme ನಲ್ಲಿ ಕೊಟ್ಟಿದ್ದೀರಿ? ಒಂದು Central Sector, ಮತ್ತೊಂದು State sector ಇದರಲ್ಲಿ ಹಣ ಬಂದಿದೆ ನಿಮ್ಮ ಪರಿಸ್ಥಿತಿ ಹೇಗಿದೆಯೆಂದರೆ, over head tanks ಸಂಬಂಧ proposal ತಯಾರಿಸಿ ಎಂದು ಕಳೆದ ವರ್ಷ ಒಂದು proposal

ತೆಗೆದುಕೊಂಡಿದ್ದರು ಅದು approval ಆಗಿ ಬಂದಿತ್ತು ಬರಗಾಲದಲ್ಲಿ ಕುಡಿಯುವ ನೀರಿಗೆ ಹಣ ಇಲ್ಲವೆಂದು ಅದನ್ನು ರದ್ದು ಮಾಡಿ ಇವರು ಹಣವನ್ನು ತೆಗೆದುಕೊಂಡರು 5 ಕೋಟಿ ಕೊಟ್ಟಿದ್ದೇನೆಂದು ಇವರು ಹೇಳುತ್ತಾರೆ over head tanks ಗೆ ಕೊಟ್ಟ ಹಣವನ್ನು Drinking water ಗೆ ನಮ್ಮ ಹತ್ತಿರ ಹಣ ಇಲ್ಲವೆಂದು over head tanks ನದ್ದನ್ನೆಲ್ಲ cancel ಮಾಡಿ ಈ scarcity ಗೆ ತೆಗೆದುಕೊಂಡು ಬಿಟ್ಟರು ಹಾಗಾದರೆ ಕೊಟ್ಟಿದ್ದ 5 ಕೋಟಿ ಏನಾಯಿತು? ಬೋರ್‌ವೆಲ್ಸ್ ಹಾಕಿರುವುದಕ್ಕೆ ಇದುವರೆಗೆ Central sector ನಲ್ಲಿ ಹಣ release ಆಗಿಲ್ಲ State sector ನಲ್ಲಿ ಹಾಕಿರತಕ್ಕದ್ದು ಬಹಳ ಕಡಿಮೆ ಅದರಲ್ಲಿ ಪೈಪು ಇದ್ದರೆ ಮೊಟಾರ್ ಇಲ್ಲ ಮೋಟಾರ್ ಇದ್ದರೆ ಪೈಪು ಇಲ್ಲ ಹೇಗೆ ನೀವು ಕುಡಿಯುವುದಕ್ಕೆ ನೀರನ್ನು ಕೊಡುತ್ತೀರಿ? ನೀವು 5 ಕೋಟಿ ಕೊಟ್ಟಿದ್ದೇವೆಂದು ಹೇಳಿದಿರಿ ಹಾಗಾದರೆ either we should be at fault or your officers are at fault ಹಾಗಾದರೆ ಯಾರನ್ನು ಕೇಳಬೇಕು? ನಮಗೆ ಗೊತ್ತಿರುವ ಮಾಹಿತಿಯ ಪ್ರಕಾರ ನಮಗೆ ಹಣ ಬಂದಿಲ್ಲ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ನಾನು ಅಲ್ಲಿಗೆ ಹೋಗಿ ಬಂದ ಮೇಲೆ 5 ಕೋಟಿ ರೂಪಾಯಿ ಹಣವನ್ನು ರಿಲೀಸ್ ಮಾಡಿದ್ದೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಣ ಬಿಡುಗಡೆ ಮಾಡಿರುವ ಬಗ್ಗೆ ನೀವು ಹೇಳುತ್ತಿದ್ದೀರಿ ಆದರೆ ಅಧಿಕಾರಿಗಳನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲವೆಂದು ಹೇಳುತ್ತಾರೆ ಅದಕ್ಕೆ ಜವಾಬ್ದಾರಿ ಯಾರು? ಅದನ್ನು ನೀವು ತರಿಸಿ ಅವರಾದರೂ ಸುಳ್ಳು ಹೇಳಿರಬೇಕು ಇಲ್ಲದಿದ್ದರೆ ನಾವಾದರೂ ಸುಳ್ಳು ಹೇಳಿರಬೇಕು ನನ್ನ ಒಂದೇ ಒಂದು ಕ್ಷೇತ್ರದಲ್ಲಿ 56 ಬೋರ್‌ವೆಲ್ ಕೊರೆದು 4 ತಿಂಗಳಾಗಿದೆ, ಇವತ್ತಿನವರೆಗೂ ಬಿಲ್ಲನ್ನು ಕೊಟ್ಟಿಲ್ಲ ನೀವು 5 ಕೋಟಿಕೊಟ್ಟಿದ್ದೇನೆಂದರೆ ಅದು ಎಲ್ಲಿ ಹೋಯಿತು?

ಶ್ರೀ ಎಸ್ ರಾಜೇಂದ್ರನ್ – ಹಿಮಾಲಯದಲ್ಲಿ ಈ ವಾತಾವರಣದಲ್ಲಿ ಜನರೆಲ್ಲ ಹಿಮ ಶಿವಲಿಂಗವನ್ನು ಪೂಜೆ ಮಾಡಿ ನೋಡಲು ಹೋಗುತ್ತಾರೆ ಆದರೆ ಹಿಮಾಲಯದಲ್ಲಿ ಬಹಳ ಹೀಟ್ ಆಗಿ ಹಿಮದ ಶಿವಲಿಂಗವೇ ಇಲ್ಲ ಕರಗಿ ಹೋಗಿದೆ ಆ ರೀತಿ ನಮ್ಮ ಊರಿನಲ್ಲಿ ನೀರೇ ಇಲ್ಲ

ಇದಕ್ಕೇನು ವ್ಯವಸ್ಥೆ ಮಾಡುವುದು? ತಕ್ಷಣ ಕ್ರಮ ತೆಗೆದುಕೊಳ್ಳಬೇಕು ನಾವು ಜನರಿಗೆ ಸರ್ಕಾರದವರು ಸಭೆ ಕರೆದಿದ್ದಾರೆ ಸಭೆಯಲ್ಲಿ ಮಾತನಾಡುತ್ತೇನೆ, ಸ್ವಲ್ಪ ಹಣ ಸಿಗುತ್ತದೆ ಅದರಲ್ಲಿ ನಾವು ಕುಡಿಯುವ ನೀರಿಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೇವೆ ಈ ಪರಿಸ್ಥಿತಿಯಲ್ಲಿ ಪೇಪರ್‌ನಲ್ಲಿ ಏನು ಹೇಳಿದ್ದೀರಿ? ಯಾರು ಬಂದರೂ ನಮಗೇನು ಸ್ವಾಮಿ? ಈ ಕುರ್ಚಿ ಇಲ್ಲೇ ಇರುತ್ತದೆ ಗೆದ್ದರೆ ಇಲ್ಲಿ ಕುಳಿತುಕೊಳ್ಳುತ್ತೇವೆ ಸೋತರೆ ಹೊರಗಡೆ ಹೋಗುತ್ತೇವೆ ನಮ್ಮ ಕುರ್ಚಿ change ಆಗುವುದಿಲ್ಲ ಬರಲಿ ಯಡಿಯೂರಪ್ಪನವರು Chief Minister ಆಗಿ ಕುಳಿತುಕೊಳ್ಳಲಿ, ನಾಳೆ ಬೇರೆಯವರು ಬಂದು ಕುಳಿತುಕೊಳ್ಳಲಿ ಅದರ ಬಗ್ಗೆ ನಾವು ಕೇಳುವುದಿಲ್ಲ Whether the Chief Minister is changing or not is not material My people's life, economic style should change ಅದಕ್ಕೆ ಸರ್ಕಾರವೇನು ಮಾಡುತ್ತದೆ What is your development? ಮನೆಗಳು ಬಿದ್ದು ಹೋಗುತ್ತದೆ ತಹಶೀಲ್ದಾರರ ಹತ್ತಿರ ಹೋದರೆ ನನ್ನ capacity ಗೆ 1500 ರೂ ಕೊಡಬಹುದು ಎಂದು ಹೇಳುತ್ತಾರೆ 1500 ರೂಪಾಯಿಗೆ footpath ನಲ್ಲಿ ಮಲಗಿಕೊಳ್ಳಲು ಬಡಿಗೆ ಕೊಡಲು ಆಗುವುದಿಲ್ಲ ಅಂಥವರ ಲೈಫನ್ನು ಹೇಗೆ ಚೇಂಜ್ ಮಾಡುತ್ತೀರಿ? In what way you are giving upliftment for them? You can't You have failed totally ಆದರೆ ಸುಮ್ಮನೆ ಪತ್ರಿಕೆಯವರು ನೋಡಬೇಕೆನ್ನುವುದಕ್ಕೋಸ್ಕರ ಕೋಟಿಗಟ್ಟಲೆ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ, ಮನೆಗಳಿಗೆ ಇಷ್ಟು ಕೊಟ್ಟಿದ್ದೇವೆ, ಕುಡಿಯುವ ನೀರಿಗೆ ಇಷ್ಟು ಕೊಟ್ಟಿದ್ದೇವೆ, ಯಾರ್‍ಯಾರು ರೈತರುಗಳು ತೀರಿ ಹೋಗಿದ್ದಾರೋ ಅವರಿಗೆಲ್ಲಾ ನಾವು ಒಂದೊಂದು ಲಕ್ಷ, ಎರಡೆರಡು ಲಕ್ಷ ಕೊಟ್ಟಿದ್ದೇವೆಂದು ಪಟ್ಟಿ ಮಾಡಿಕೊಂಡಿದ್ದೀರಿ This is not correct ಒಂದು 20 ಸಾವಿರ ಕೋಟಿ ಇಟ್ಟುಕೊಂಡು ರೈತರನ್ನು ಕರೆಯಿರಿ, ರೈತರ ಬಗ್ಗೆ ನೀವು ಪ್ರಾಣವನ್ನು ಕೊಡುವವರು! ಜೀವ ಕೊಡುವವರು! ಮಣ್ಣಿನ ಮಕ್ಕಳು! ನಾವೆಲ್ಲಾ ನೀರಿನ ಮಕ್ಕಳು ಇದು ಹೇಗೆ ಸ್ವಾಮಿ? ಇದೆಲ್ಲಾ ಮಾತನಾಡಿಕೊಂಡು ಹೋದರೆ ಆಗುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನೀರಿನ ಮಗ ಎಂದರೆ ಯಾರು!

ಶ್ರೀ ಎಸ್ ರಾಜೇಂದ್ರನ್ – ಶ್ರೀರಾಮರೆಡ್ಡಿಯವರೆ ಸುಮ್ಮನಿರಿ ನೀರಿನಲ್ಲಿದ್ದರೆ ನೀರಿನ ಮಗ, ಮಣ್ಣಿನ ಮೇಲಿದ್ದರೆ ಮಣ್ಣಿನ ಮಗ ನಾನು ಚಿನ್ನದ ಮೇಲಿದ್ದೇನೆ, ಆದರೆ ಚಿನ್ನದ ಮಗನೆಂದು ಹೇಳಲು ಆಗುತ್ತದೆಯೇ? ನಮ್ಮ ಊರೇ ಚಿನ್ನ, ಆದರೆ ನಾನು ಚಿನ್ನದ ಮಗ ಎಂದು ಹೇಳಲು ಆಗುತ್ತದೆಯೇ? ಸುಮ್ಮನೆ ಆ ರೀತಿ ಹೇಳಿಕೊಳ್ಳಬೇಕು ಆ ರೀತಿ ಇವರು ರೈತರಿಗೂ ಏನೂ ಮಾಡಿಲ್ಲ, ರೈತರ ಜೀವನಕ್ಕೂ ಏನೂ ಸಹಾಯ ಮಾಡಿಲ್ಲ, ಆದರೆ ರೈತರ ಬಗ್ಗೆ ಮಾತನಾಡುತ್ತೀರಿ ಇದರಿಂದ ಏನು ಪ್ರಯೋಜನ? ನಮ್ಮ ಕೋಲಾರ ಜಿಲ್ಲೆಯಲ್ಲಿ ಎಷ್ಟು ರೈತರಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ? ಎಷ್ಟು ಬಡವರನ್ನು ಮೇಲಕ್ಕೆ ತೆಗೆದುಕೊಂಡು ಬಂದಿದ್ದೀರಿ? ನಮ್ಮ ಊರಿನಲ್ಲಿನ ಡಿ ಸಿ ಸಿ ಬ್ಯಾಂಕ್‌ನವರು ಜನರ deposit ಹಣವನ್ನೆಲ್ಲಾ ತಿಂದು ಹೋಗಿಬಿಟ್ಟಿದ್ದಾರೆ ಜನರಿಗೆ ಲೋನನ್ನು ಕೊಟ್ಟಿಲ್ಲ ನಮ್ಮ ಊರಿನ employees ಡಿ ಸಿ ಸಿ ಬ್ಯಾಂಕ್‌ನಲ್ಲಿ deposit ಮಾಡಿದ್ದರೆ ಅದನ್ನು ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ ದುಡ್ಡೇ ಇಲ್ಲವೆಂದು ಹೇಳುತ್ತಾರೆ ಹೀಗಾದರೆ ಡಿ ಸಿ ಸಿ ಬ್ಯಾಂಕು, ಸೊಸೈಟಿಗಳನ್ನು ಬೆಳೆಸಲು ಹೇಗೆ ಸಾಧ್ಯವಾಗುತ್ತದೆ? No asker, no teller Your Government has no responsibility, no administration capacity ಎಲ್ಲಿ administration ಸರಿಯಾಗಿ ಮಾಡಿದ್ದೀರಿ ಎಂಬ ಬಗ್ಗೆ ಉದಾಹರಣೆಯಾಗಿ ಒಂದು ಕ್ಷೇತ್ರವನ್ನು ಹೇಳಿ ನಿಮ್ಮ ಮಂತ್ರಿಗಳ ಕ್ಷೇತ್ರದಲ್ಲಿ ಇರಬಹುದು ಸಾಮಾನ್ಯ ಶಾಸಕರ ಕ್ಷೇತ್ರದಲ್ಲಿ administration ಕೆಲಸ ಏನಾಗಿದೆ? What development you have done? Road ಗಳನ್ನು ಮಾಡಿಲ್ಲ, bridges ನ್ನು ಮಾಡಿದವರು ಯಾರೆಂದೇ ಗೊತ್ತಿಲ್ಲ ಅದು ಕೆ ಆರ್ ಡಿ ಸಿ ಎಲ್ ಇಲಾಖೆಗೆ ಬರುತ್ತದೆ ಆ ಕೆ ಆರ್ ಡಿ ಸಿ ಎಲ್ ನವರು ಯಾರು ಎಂದರೂ ಗೊತ್ತಿಲ್ಲ ಅವರು ಅರ್ಧಂಬರ್ಧ ಮಾಡಿ ಹೋಗಿಬಿಟ್ಟಿದ್ದಾರೆ ಯಾರು ಗುತ್ತಿಗೆದಾರರು ಎಂದರೆ ದೊಡ್ಡ ದೊಡ್ಡ ಗುತ್ತಿಗೆದಾರರಾದ Nagarjuna Constructions, L & T ರವರು ಎಂದು ಹೇಳುತ್ತಾರೆ ಇವರನ್ನೆಲ್ಲ ನೋಡಲೂ ಸಾಧ್ಯವಾಗುವುದಿಲ್ಲ ನಮಗೆ ಅವರನ್ನು ನೋಡುವ ಅವಶ್ಯಕತೆಯೂ ಇಲ್ಲ But, what your departments are doing? What your officers concerned are doing? ಪ್ರತಿಯೊಂದಕ್ಕೂ ಡಿ ಸಿ ಯವರ ಹತ್ತಿರ ನಾವು ಹೋಗಲು ಆಗುತ್ತದೆಯೇ? ಯಾವಾಗಲೂ ಬರಗಾಲದ ಬಗ್ಗೆ ಮಾತನಾಡುವುದು ಮಂತ್ರಿಗಳು ಕೋಲಾರಕ್ಕೆ ಬರುತ್ತಾರೆ ನಾವು ನಮ್ಮ ಕ್ಷೇತ್ರವನ್ನು ಬಿಟ್ಟು ಅಲ್ಲಿಗೆ ಹೋಗಬೇಕು

ಆದರೆ ನೀವು ಮಾಡಿರುವ ಕೆಲಸವೇನಿದೆ? ಏನೂ ಇಲ್ಲ Development work ಸಾಧ್ಯವೇ ಇಲ್ಲ ಕುಡಿಯುವ ನೀರಿಗೆ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ 40-45 ಜನ Chief Engineer ಗಳನ್ನು ಮಾಡಿದ್ದೀರಿ 65 ಜನ S E ಗಳನ್ನು ಮಾಡಿದ್ದೀರಿ ಇದರಿಂದ ಏನೂ ಪ್ರಯೋಜನವಿಲ್ಲ ರಾತ್ರೋರಾತ್ರಿ Chief Engineer ಗಳನ್ನು ಮಾಡಿರುವ ಉದಾಹರಣೆ ಈ ದೇಶದಲ್ಲಿ ಎಲ್ಲಿಯಾದರೂ ಸಿಗುತ್ತದೆಯೇ? ರಾತ್ರಿ 7 ಗಂಟೆಗೆ orders ನ್ನು ಕೊಟ್ಟಿದ್ದಾರೆ

ಶ್ರೀ ಎಸ್ ರಾಜೇಂದ್ರನ್ ರಾಮಾಯಣ ಪುರಾಣಗಳ ಕಾಲದಲ್ಲಿ ಒಬ್ಬರಿಗೆ ಸಾವಿರ wife ಇದ್ದರೂ ಮಕ್ಕಳು ಇರಲಿಲ್ಲ ಆ ಗತಿ ಇದು ಇಲ್ಲಿ ಎಷ್ಟು wife ಮುಖ್ಯವಲ್ಲ ಆದರೆ ಮಕ್ಕಳು ಇಲ್ಲವೇ? ಮಕ್ಕಳು ಇರಬೇಕಲ್ಲವೇ? ಆ ರೀತಿ ಎಷ್ಟು ಇಂಜಿನಿಯರ್‌ಗಳು, ಅಧಿಕಾರಿಗಳು ಇದ್ದಾರೆ ಎಂಬುದು ಮುಖ್ಯವಲ್ಲ ಕೆಲಸ ಏನೂ ಆಗದಿದ್ದರೆ ಏನು ಪ್ರಯೋಜನ?

ಶ್ರೀ ಸಿದ್ದರಾಮಯ್ಯ Genetical problem ಇದ್ದರೆ ಏನು ಮಾಡುತ್ತೀರಿ?

ಶ್ರೀ ಎಸ್ ರಾಜೇಂದ್ರನ್ ಅದಕ್ಕೆ ನಾವೇನೂ ಮಾಡಲು ಆಗುವುದಿಲ್ಲ ಆ ಕಾಲದಲ್ಲಿ ಈ ರೀತಿಯಾಗಿದ್ದರೆ ದೊಡ್ಡ ಉಪವಾಸ ಕುಳಿತುಕೊಂಡು ಯಾರಾದರೂ ಹಣ್ಣು ಹಂಪಲು ಕೊಟ್ಟು ಅದನ್ನು ತಿಂದರೆ ಅನಂತರ ಮಕ್ಕಳು ಹುಟ್ಟುತ್ತಿತ್ತು ಆ ರೀತಿಯೂ ಇರಬಹುದು ಅದು ನಮಗೆ ಗೊತ್ತಿಲ್ಲ ಆದರೆ ಈ ಸ್ಥಿತಿಯಲ್ಲಿ ನಮ್ಮ Deputy Chief Minister should take much interest ತಾವು Next Chief Minister ಆಗಿ ಬರುವವರು ತಾವು ಅಲ್ಲಿ ಬಂದು ಕುಳಿತರೂ ನಾವು ಇದನ್ನೇ ಭಾಷಣ ಮಾಡುತ್ತೇವೆ ನೀವು ಎಷ್ಟು ಕೊಟ್ಟರೂ ನಾವು ಇಲ್ಲಾ ಇಲ್ಲಾ ಎಂದೇ ಹೇಳುವುದು ಏಕೆಂದರೆ ನಾವು ಇನ್ನೂ ನಮ್ಮ ಏರಿಯಾವನ್ನು ಡೆವಲಪ್ ಮಾಡಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಮುಖ್ಯಮಂತ್ರಿಯವರೆ, ಕೆ ಆರ್ ಡಿ ಸಿ ಎಲ್ ನ್ನು ಏಕೆ ಮಾಡಿದಿರಿ? ಅವರು ಯಾರೋ ನಾಗಾರ್ಜುನ

ಕನ್‌ಸ್ಟ್ರಕ್ಷನ್ ನವರು ಇತರರಿಗೆ 3 ವರ್ಷ ಪ್ಯಾಕೇಜ್ ಮಾಡಿಕೊಟ್ಟು, ನನ್ನ ಕ್ಷೇತ್ರದಲ್ಲಿ ಒಂದು ಬ್ರಿಡ್ಜ್ ಸುಮಾರು 80 ಲಕ್ಷದ್ದು ಕೊಟ್ಟು 3 ವರ್ಷವಾಗಿದೆ ಅದು ಇನ್ನೂ ಪೂರ್ತಿ ಮಾಡಿಲ್ಲ ಹೆಸರಿಗೆ ನಾಗಾರ್ಜುನ ಕನ್‌ಸ್ಟ್ರಕ್ಷನ್ ಅವರಿಗೆ ಪ್ಯಾಕೇಜ್ ಕಾಂಟ್ರಾಕ್ಟ್ ಎಂದು ಕೊಟ್ಟುಬಿಟ್ಟಿದ್ದೀರಿ ಅವನು ನನಗೆ 3 ವರ್ಷ time ಎಂದು ಹೇಳುತ್ತಾನೆ 80 ಲಕ್ಷ ವೆಚ್ಚದ ಬ್ರಿಡ್ಜ್‌ನ್ನು 3 ವರ್ಷದಲ್ಲಿ ಮಾಡದಿದ್ದರೆ ಅವರನ್ನು ಕಾಂಟ್ರಾಕ್ಟರ್ ಎಂದು ಹೇಳುತ್ತೀರೋ? ಹೀಗಾದರೆ ನೀವೇನು development ಮಾಡುತ್ತೀರಿ? ನಾಗಾರ್ಜುನ, L&T ಅಂಥ ದೊಡ್ಡ ದೊಡ್ಡವರಿಗೇಕೆ entertain ಮಾಡುತ್ತೀರಿ? ಬ್ರಿಡ್ಜ್‌ಗಳನ್ನು ಕಟ್ಟಲು ಅವರಿಗೇಕೆ ಕೊಡುತ್ತೀರಿ?

ಶ್ರೀ ಜೆ ಸಿ ಮಾಧುಸ್ವಾಮಿ ಅದನ್ನು ಯಡಿಯೂರಪ್ಪನವರು ಕೊಟ್ಟಿದ್ದಾರೆಯೇ? ಅದು ನಿಮಗೆ ಗೊತ್ತೇ ಸ್ವಾಮಿ, ಪಾಪ ಅವರಿಗೆ ಗೊತ್ತೇ ಇಲ್ಲ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಸರ್ಕಾರದವರು ಕೊಟ್ಟಿರುವುದು ನೀವು Deputy Chief Minister Sir, you are the Deputy Chief minister of the coalition Government ನನಗೆ ಗೊತ್ತಿಲ್ಲವೆಂದು ಅವರು ಹೇಳಲಿ

ಶ್ರೀಎಸ್ ರಾಜೇಂದ್ರನ್ ಶ್ರೀರಾಮರೆಡ್ಡಿ ಮತ್ತು ಮಾಧುಸ್ವಾಮಿಯವರು ಅವರು ಮಾತನಾಡುವ ಕಾಲದಲ್ಲಿ ಅವರನ್ನು ಟೀಕೆ ಮಾಡಿ ಅದೂ ಸಾಕಾಗಲಿಲ್ಲವೆಂದು ಈಗ ಮತ್ತೆ ಟೀಕೆ ಮಾಡುತ್ತಿದ್ದಾರೆ ಇದು ನಮಗೆ ಗೊತ್ತಿದೆ ಆದರೆ ನಾನು ಅದನ್ನು ಟೀಕೆ ಮಾಡಲು ಹೇಳಲಿಲ್ಲ ಸತ್ಯಾಂಶವನ್ನು ಹೇಳಿದ್ದೇನೆ ನಮಗೆ ಒಟ್ಟಿನಲ್ಲಿ development ಆಗಬೇಕು ನಾವು ಜನರ ಮುಂದೆ ಹೋಗಬೇಕು ನೀವು ಹೇಗೆ ಜನರ ಮುಂದೆ ಹೋಗುತ್ತಿದ್ದೀರಿ, ಮುಖ್ಯಮಂತ್ರಿಯವರು ಮನೆ ಮನೆಗೂ ಹೋಗಿ ಮಲಗಿಕೊಂಡು ನಾಳೆ ಚುನಾವಣೆಯಲ್ಲಿ ಯಾವ ರೀತಿಯಾಗಿ ಗೆಲ್ಲಬೇಕೆಂದು ನಿಮಗೆ ಆಸೆ ಇದೆಯೋ ಅದೇ ರೀತಿ ಆಸೆ ಶಾಸಕರಾದ ನಮಗೆ ಇರಬೇಡವೇ? ತಾವೇ ಯೋಚನೆ ಮಾಡಿ ದೊಡ್ಡ ಸ್ಥಾನದಲ್ಲಿ ಕುಳಿತಿರುವ ನಿಮಗೇ next, future ನಲ್ಲಿ ನಾವು ಗೆದ್ದು ಬರಬೇಕು ಎಂಬ ಉದ್ದೇಶದಿಂದ ಜನರ

ಮುಂದೆ ಹೋಗುತ್ತೀರೆಂದರೆ ಸಾಮಾನ್ಯ ಶಾಸಕರಾದ ನಾವೇನು ಮಾಡಬೇಕು? ನಿಮ್ಮ ರೀತಿ fight ಮಾಡಿ ಜನರಿಗೆ ಒಳ್ಳೆಯ ಕೆಲಸ ಮಾಡಿ next ನಾವು ಚುನಾವಣೆಗೆ ಹೋದರೆ ನಿಮಗೆ ನಾವು ಕುಡಿಯುವ ನೀರನ್ನು ಕೊಟ್ಟಿದ್ದೇವೆ, ವಿದ್ಯುತ್ ಕೊಟ್ಟಿದ್ದೇವೆಂದು ಹೇಳಬೇಡವೆ? ಆ ಸ್ಥಾನದಲ್ಲಿ ಕುಳಿತ ನೀವು ಪೋಸ್ಟ್ ಮ್ಯಾನ್ ಕೆಲಸದ ರೀತಿ ಈ Commissioner, Police officer ಬೇಡ ಎಂದು peon ಕೆಲಸ ಮಾಡಿಕೊಂಡಿರುವ in charge ಮಂತ್ರಿಗಳನ್ನು ಕರೆದು ಸಭೆ ಮಾಡಿ ಈ ಸ್ಥಿತಿಗೆ ಹೋಗಬಾರದು, ನಿಮ್ಮ ಮಂತ್ರಿ ಸ್ಥಾನದಿಂದ ಬಿಟ್ಟು ಹೋಗಬಾರದು, ನಿಮ್ಮ ಗೌರವ ಕಡಿಮೆಯಾಗುತ್ತದೆ, ಬಡ ಜನರಿಗೆ ಸಹಾಯ ಮಾಡಿ ಅವರಿಗೇನು ಮನೆ ಕಟ್ಟಿಕೊಡಬೇಕೋ, ವಿದ್ಯುತ್ ಇದೆಯೋ, ಕುಡಿಯುವ ನೀರು ಇದೆಯೋ, ಅವರಿಗೆ ಏನೇನು ಸಹಾಯ ಮಾಡಬೇಕು, ರೈತರುಗಳಿಗೆ ಏನೇನು ಮಾಡಬೇಕು ಎಂಬ ಬಗ್ಗೆ ಚಿಂತನೆ ಮಾಡಿ ಕೆಲಸ ಮಾಡಿದರೆ ಸರ್ಕಾರಕ್ಕೆ ಗೌರವ ಅದನ್ನು ಬಿಟ್ಟು ಯಾರು ಮುಖ್ಯಮಂತ್ರಿಯಾಗುತ್ತಾರೆ, ಯಾರು ಆಗುವುದಿಲ್ಲ ಎಂದು ಮಂತ್ರಿಗಳು ಕಾಮೆಂಟ್ ಮಾಡಿಕೊಂಡಿದ್ದರೆ ಅದನ್ನು ನೋಡಲು ನಾವು ಶಾಸಕರಾಗಿ ಬಂದಿಲ್ಲ ಅದನ್ನು ನೋಡಿಕೊಂಡು ಹೋಗಲು ನಾನು ಶಾಸಕನಾಗಿ ಬಂದಿಲ್ಲವೆಂದು ಸತ್ಯವಾಗಿ ಹೇಳುತ್ತೇನೆ Whoever it may be We are not worrying about it We need our constituency, ನಮ್ಮ ಜನ, ನಮ್ಮ ಕರ್ನಾಟಕದ ರೈತರುಗಳು, ನಾವು ಎಲ್ಲಾ ಸೇರಿ development ಮೇಲೆ concentrate ಮಾಡಬೇಕು ರಾಜಕೀಯದ ಮೇಲೆ concentrate ಮಾಡಿಕೊಂಡು ಹೋಗಬಾರದು If we are doing that, definitely we are achieving something in front of the people ಇಲ್ಲದಿದ್ದರೆ ಸುಮ್ಮನೆ ನಾವು ಶಾಸನ ಸಭೆಯಲ್ಲಿ ಮಾತನಾಡಿದ್ದೇವೆ, ಕೂಗಾಡಿದ್ದೇವೆ ಎಂದು ಹೇಳಿಕೊಂಡು ಹೋದರೆ ಪ್ರಯೋಜನವಿಲ್ಲ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ

ಉಪಾಧ್ಯಕ್ಷರು ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಮಾನ್ಯ ವಿಶ್ವನಾಥ್‌ರವರು ತಮ್ಮ ಊರಿನಲ್ಲಿ ಮೂರು ಜನ ಸತ್ತಿದ್ದಾರೆ, ಅದರ

ಬಗ್ಗೆ ಮಾತನಾಡಲು ಅನುಮತಿ ಕೊಡಬೇಕೆಂದು ಕೋರಿದ್ದರು 5 ನಿಮಿಷ ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ ನಂತರ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮಾತನಾಡಬಹುದು

(ಗೊಂದಲ)

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಮ್ಮಲ್ಲೂ ಜನ ಸತ್ತಿದ್ದಾರೆ

(ಗೊಂದಲ)

ಶ್ರೀ ಎನ್ ಎಸ್ ಬೋಸರಾಜ್ ನಮ್ಮಲ್ಲಿ 12 ಜನ ಸತ್ತಿದ್ದಾರೆ

(ಗೊಂದಲ)

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) ಮಾನ್ಯ ಉಪಾಧ್ಯಕ್ಷರೆ, ಸಕಲೇಶಪುರ ಪಶ್ಚಿಮ ಘಟ್ಟದೊಳಗೆ ಅತ್ಯಂತ ಪ್ರಮುಖವಾದಂತಹ ಮಳೆ ಬೀಳುವಂತಹ ಪ್ರದೇಶವಾಗಿದೆ ನಾನು ಈ ಸದನದಲ್ಲಿ ನಾಲ್ಕನೇ ಬಾರಿ ನನ್ನ ಭಾಗದ ಮಳೆಯಿಂದ ಆಗತಕ್ಕಂಥ ಸಮಸ್ಯೆಯನ್ನು ಪ್ರಸ್ತಾಪ ಮಾಡುತ್ತಿದ್ದೇನೆ 2004 ರಲ್ಲಿ ನಮ್ಮಲ್ಲಿ ಸುಮಾರು 1200 ಕಂಬಗಳು ಬಿದ್ದಿದ್ದವು 2005 ರಲ್ಲಿ ಸುಮಾರು 1800, ಕಳೆದ ಬಾರಿಯೂ ಸಹ ಸುಮಾರು 2000ದಷ್ಟು ತಂತಿ ಕಂಬಗಳು ಮುರಿದು ಹೋಗಿದ್ದಂತಹ ಪರಿಸ್ಥಿತಿ ಬಗ್ಗೆ ನಾನು ಈ ಸದನದಲ್ಲಿ ಮಾತನಾಡಿದ್ದೆ ರಸ್ತೆ, Buildings, ಅಲ್ಲಿಯ ಕೃಷಿಗೆ ಸಂಬಂಧಪಟ್ಟಂತಹ ಕಾಫಿ ಇರಬಹುದು, ಮೆಣಸು ಇರಬಹುದು, ಇವಿಷ್ಟೂ ನಷ್ಟದ್ದರ ಬಗ್ಗೆ ನಾನು ಮಾತನಾಡಿದ್ದೆ ನಾನು ಇವತ್ತು ಮಾತನಾಡುವುದು ಕೇವಲ ಮಾತಾಗಿಯೇ ಉಳಿಯುತ್ತದೆಯೇ? ಎನ್ನುವಂತಹ ಆತಂಕ ನನಗಾಗುತ್ತಿದೆ ಏಕೆಂದರೆ, ಕಳೆದ ಮೂರು ಬಾರಿಯೂ ಕೂಡ ಈ ಬಗ್ಗೆ ಪ್ರಸ್ತಾಪಿಸಿದಾಗ, ಏನೊಂದು ಭರವಸೆಯನ್ನು ಸರ್ಕಾರ ನನಗೆ ಕೊಟ್ಟಿತ್ತೋ, ಏನೊಂದು ಉತ್ತರಗಳನ್ನು ಕೊಟ್ಟಿತ್ತೋ, ಅಷ್ಟೂ ಕೂಡ ಅನುಷ್ಠಾನವಾಗಲಿಲ್ಲ ಕಳೆದ ವರ್ಷ ಮತ್ತು ಆಚೆ ವರ್ಷ ಅಂದರೆ 2005 ಮತ್ತು 2006 ರಲ್ಲಿ ರಸ್ತೆ ಮತ್ತು ಇತರೆ ವಿಚಾರಗಳಲ್ಲಿ ನಮ್ಮಲ್ಲಿ 2

ಕೋಟಿ ರೂ ಗಳ ನಷ್ಟವಾಗಿದ್ದರೂ ಕೂಡ ಕೇವಲ 50 ಲಕ್ಷ ರೂ ಗಳನ್ನು ಮಾತ್ರ ಕೆಲಸ ಕೈಗೊಳ್ಳಲು ಪರಿಹಾರವಾಗಿ ನೀಡಲಾಗಿತ್ತು ಈ ಸಾರಿ ನಮ್ಮಲ್ಲಿ ಮೂರು ಜನ ಸತ್ತು ಹೋಗಿದ್ದಾರೆ ಒಬ್ಬ ಮಹಿಳೆ, ನನ್ನ ಊರಿನ ಪಕ್ಕದಲ್ಲಿಯ ದೋಣಿಲೆ ಎಂಬಲ್ಲಿ ದನ ಅಟ್ಟಿಕೊಂಡು ಅವರ ಜಮೀನಿನ ಹತ್ತಿರ ಹೋಗಿ ವಾಪಸ್ ಬರಬೇಕಾದರೆ, ಮೇಲ್ಗಡೆ ಬಿದ್ದಂತಹ ಭಾರೀ ಮಳೆಯಿಂದಾಗಿ ನೀರು ಬಂದು, ಹೊಳೆ ದಾಟಬೇಕಾದರೆ ಕೊಚ್ಚಿಕೊಂಡು ಹೋಗಿದ್ದಾರೆ ಹಾಗೆಯೇ ಇಬ್ಬರು ಕೂಲಿ ಕಾರ್ಮಿಕರು ಬೆಳಗೋಡು ಮತ್ತು ಸಿದ್ದಾಪುರ ಎಂಬ ಗ್ರಾಮಗಳಲ್ಲಿ ಸತ್ತಿದ್ದಾರೆ ಎರಡು ದಿನಗಳ ಕಾಲ ನಮಗೆ ಹೆಣಗಳೇ ಸಿಕ್ಕಿರಲಿಲ್ಲ ಹೇಮಾವತಿ ನದಿಯಲ್ಲಿ ಹೋಗಿ, ಯಾವುದೇ ಒಂದು ಬಿದಿರು ಮೆಳೆಯಲ್ಲಿ ಸಿಕ್ಕಿಹಾಕಿಕೊಂಡಾಗ, ಮೂರು ದಿವಸಗಳ ಮೇಲೆ ನಮಗೆ ಹೆಣ ಸಿಕ್ಕಿತು ಅದನ್ನು ತೆಗೆದು, ನಿನ್ನೆ Post Mortem ಮಾಡಿ ಹೂಳುವಂತಹ ಕೆಲಸ, ಮಾಡಿದ್ದೇವೆ ಈ ಮೂರೂ ಹೆಣಗಳನ್ನು ಹೂಳಾಗಿದೆ ಆದರೆ ಇದುವರೆಗೂ ಕೂಡ ಸರ್ಕಾರದಿಂದ ಒಂದು ಪೈಸೆ ಹಣವನ್ನೂ ಸಹ ಅವರಿಗೆ ಪರಿಹಾರವಾಗಿ ಕೊಡುವಂತಹ ಕೆಲಸ ಆಗಿಲ್ಲ ಬೆಂಗಳೂರಿನಲ್ಲಿ ನಾಯಿ ಕಚ್ಚಿ ಸತ್ತರೆ, ಅಲ್ಲಿಗೆ ನಮ್ಮ ಅಧಿಕಾರಿಗಳು ಮತ್ತು ಸರ್ಕಾರ ಧಾವಿಸುವಷ್ಟು ವೇಗದಲ್ಲಿ ನಮ್ಮ ಕಡೆ ಗಮನಿಸುವುದಿಲ್ಲ ನಮ್ಮ ಹಳ್ಳಿ ಜನರು ಸತ್ತರೆ ಕೇಳುವವರೇ ಇಲ್ಲ ಅನ್ನತಕ್ಕಂಥ ಒಂದು ಆತಂಕ ಇದೆ ಅದೂ ಮಲೆನಾಡಿನ ಬಗ್ಗೆ ಏನಾದರೂ ಮಾತನಾಡಿದರೆ, ಅದಕ್ಕೆ ನೂರೆಂಟು ಅಡ್ಡಿ ಆತಂಕಗಳು ಬರುತ್ತವೆ ನಾವು ಆನೆ ಎಂದರೆ, ಅರಸೀಕೆರೆಯವರು ಕರಡಿ ಎನ್ನುತ್ತಾರೆ ನಾವು ಪ್ರವಾಹ ಎಂದರೆ, ನಮ್ಮ ಮಾನ್ಯ ರಾಜೇಂದ್ರನ್‌ರವರು ನನಗೆ ಕುಡಿಯಲಿಕ್ಕೆ ನೀರಿಲ್ಲವೆಂದು ಹೇಳುತ್ತಾರೆ ನಮ್ಮ ಪರಿಸ್ಥಿತಿ ತುಂಬಾ ಗಂಭೀರವಾಗಿದೆ ಜೂನ್ 23ನೇ ತಾರೀಖು ನಮಗೆ 6 ಇಂಚು 41 ಸೆಂಟ್ ಮಳೆ ಬಿದ್ದಿದೆ ಜೂನ್ 30 ನೇ ತಾರೀಖಿನ ಅಳತೆಗೆ 48 1/2 ಇಂಚು ಮಳೆ ಬಿದ್ದಿದೆ ಒಂದೇ ದಿನದಲ್ಲಿ ನಮ್ಮಲ್ಲಿಯ ಪಶ್ಚಿಮ ಘಟ್ಟದ ಕೆಲವು ಭಾಗದ ಹಳ್ಳಿಗಳಲ್ಲಿ 24-25 ಇಂಚು ಮಳೆ ಬಿದ್ದಿದೆ ನಾವು ಹೇಗೆ ಉಳಿದಿರಬಹುದು ಎಂಬುದನ್ನು ನೀವೇ ಊಹಿಸಿ ಕಳೆದ ಮೂರು ವರ್ಷಗಳಲ್ಲಿ ನಮ್ಮ ಮಲೆನಾಡು ಭಾಗದಲ್ಲಿ, ಅದೂ ಪಶ್ಚಿಮ ಘಟ್ಟದಲ್ಲಿ ಪ್ರಥಮ ಬಾರಿಗೆ ಸರ್ಕಾರ ಭಾರಿ ದೊಡ್ಡ ಪ್ರಮಾಣದಲ್ಲಿ ಅಂದರೆ ಸುಮಾರು 350 ಕಿ ಮೀ ರಸ್ತೆ upgrade ಮಾಡಿ ಕೊಟ್ಟಿದೆ ಶ್ರೀಯುತ ರೇವಣ್ಣನವರು ನಮಗೆ ಆ ರಸ್ತೆಯನ್ನು

ಮಾಡಿಕೊಟ್ಟಿದ್ದಾರೆ ಆ ರಸ್ತೆ ಇವತ್ತು ಸ್ವಲ್ಪವೂ ಉಳಿದುಕೊಂಡಿಲ್ಲ ಸೇತುವೆ ಮಾಡಿ ಅದರ ಹಿಂಬದಿಗೆ ಹಾಕಿದಂತಹ ಮಣ್ಣೂ ಕೂಡ ಉಳಿದುಕೊಳ್ಳದೆ ಕೊಚ್ಚಿಕೊಂಡು ಹೋಗಿದೆ ಅದಲ್ಲದೆ, ಈಗ ನಮ್ಮಲ್ಲಿ ಕಾಳೂ ಮೆಣಸು ಬಿಡತಕ್ಕಂಥ ಸಂದರ್ಭ ಬಂದಿದೆ ಕಾಫಿ ಕೀಚು ಕಟ್ಟುವುದು ಇದೇ ಸಂದರ್ಭದಲ್ಲಿ ಏಲಕ್ಕಿ ಮಿಡಿ ಬರತಕ್ಕಂಥದ್ದು ಇದೇ ಸಂದರ್ಭದಲ್ಲಿ ಒಂದೇ ಸಾರಿಗೆ ಕೊಡಪಾನದಲ್ಲಿ ನೀರು ಹುಯ್ದಂತೆ ನಮಗೆ ಮಳೆ ಬಿದ್ದು, ಹೆಚ್ಚು ಕಡಿಮೆ ಶೇಕಡ 80 ಭಾಗದಷ್ಟು ಮೆಣಸು, ಕಾಫಿ ಮತ್ತು ಏಲಕ್ಕಿ ಕೊಚ್ಚಿಕೊಂಡು ಹೋಗಿದೆ ಅವುಗಳ ಕೀಚೇ ಹೊರಟು ಹೋಗಿದೆ 1400 ಮನೆಗಳು ಬಿದ್ದು ಹೋಗಿವೆ ಆಲೂರು ತಾಲ್ಲೂಕಿನಲ್ಲಿ 300 ಮನೆಗಳು ಬಿದ್ದಿವೆ ಇದುವರೆಗೂ ನನಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ 1800 ಕೆಇಬಿ ಕಂಬಗಳು ಆಲೂರು ಮತ್ತು ಸಕಲೇಶಪುರದಲ್ಲಿ ಬಿದ್ದಿವೆ ಇದುವರೆಗೂ ಸುಮಾರು 120 ವಿಲೇಜ್‌ಗಳಲ್ಲಿ ಕರೆಂಟ್ ಇಲ್ಲ, 15 ದಿವಸಗಳಿಂದ ನಾವು ಕರೆಂಟ್ ಅನ್ನು ನೋಡಿಲ್ಲ ಹೋಬಳಿ Head Quarters ನಲ್ಲಿ ಕರೆಂಟ್ ಇಲ್ಲ ಕುಡಿಯುವ ನೀರಿಗಾಗಿ ನಾವು ಮಳೆ ನೀರನ್ನೇ ಆಶ್ರಯಿಸಬೇಕಾದಂತಹ ಪರಿಸ್ಥಿತಿ ಉಂಟಾಗಿದೆ ಆದರೆ ಇದುವರೆಗೂ ಒಂದು ಬಿಡಿಗಾಸನ್ನೂ ಕೂಡ ಜಿಲ್ಲಾಧಿಕಾರಿಗಳು ನಮಗೆ ಬಿಡುಗಡೆ ಮಾಡಿಲ್ಲ ನಮ್ಮಲ್ಲಿ ನಷ್ಟ ಉಂಟಾಗಿರುವ ಬಗ್ಗೆ ನಾವು ಫೋಟೋ ತೆಗೆಸಿ, ವಿಡಿಯೋಗ್ರಾಫ್ ಮಾಡಿಸಿ, ಬಹಳ ವ್ಯವಸ್ಥಿತವಾಗಿ ಸರ್ಕಾರಕ್ಕೆ ಮುಂದೆ ನಾವು ತಂದಿಟ್ಟಿದ್ದೇವೆ ಇಷ್ಟು ದೊಡ್ಡ ಪ್ರಮಾಣದ ನಷ್ಟದ ಜೊತೆಗೆ ನಮ್ಮಲ್ಲಿ ರಸ್ತೆ ಸಹ ಹಾಳಾಗಿದೆ ಈಗಾಗಲೇ ನಮ್ಮ ಸ್ನೇಹಿತರಾದ ತೀರ್ಥಹಳ್ಳಿ ಶಾಸಕರು ಮತ್ತು ಶೃಂಗೇರಿ ಶಾಸಕರುಗಳು ಆ ಬಗ್ಗೆ ಹೇಳಿದ್ದಾರೆ ಪಶ್ಚಿಮ ಘಟ್ಟದಲ್ಲಿ ಎರಡು ರಸ್ತೆಗಳು ಕೆಳಗಡೆ ಘಟಕ್ಕೆ ಹೋಗುತ್ತವೆ ಮಂಗಳೂರಿಗೆ ಹೋಗತಕ್ಕಂಥ ಎರಡು ರಸ್ತೆಗಳಿವೆ ಒಂದು ಶಿರಾಡಿ ಮತ್ತೊಂದು ಚಾರ್ಮುಡಿ ಆ ಚಾರ್ಮುಡಿ ಘಾಟ್ ಬಂದ್ ಆದರೆ, ನಮ್ಮ ಸಕಲೇಶಪುರ ಭಾಗಕ್ಕೆ ಬಂದು, ಶಿರಾಡಿ ಘಾಟ್‌ಗೆ ಹೋಗುತ್ತಾರೆ ಶಿರಾಡಿ ಘಾಟ್ ಬಂದ್ ಆದರೆ ಈ ಭಾಗದಲ್ಲಿ ಹೋಗುತ್ತಾರೆ ಅಲ್ಲಿರುವ ರಸ್ತೆಗೆ ಕೆಪಾಸಿಟಿ ಇರುವಂಥಾದ್ದು ಕಡಿಮೆ ಕೇವಲ ಅಟ್ಟಂನಿಂದ ಮೇಲ್ಪಟ್ಟು ಹೋಗಲಿಕ್ಕೆ ಆಗುವುದಿಲ್ಲ ಆದರೆ ಇವತ್ತು ಅಲ್ಲಿ ಮೈನ್ಸ್ ಗಲಾಟೆ ನಡೆಯುತ್ತಿದೆ ಕಬ್ಬಿಣದ ಅದಿರು ಸಾಗಿಸುವ 30-40 ಟನ್ ಕೆಪಾಸಿಟಿಯ 60-70-100 ಲಾರಿಗಳು ಇವತ್ತು ಅಲ್ಲಿ ತಿರುಗುತ್ತಿವೆ ಇವತ್ತು ಪಶ್ಚಿಮ ಘಟ್ಟದಲ್ಲಿ ನಮ್ಮ ರಸ್ತೆಗಳ ಪರಿಸ್ಥಿತಿ ಹೇಗಿದೆ ಎಂದರೆ,

ವಿಶೇಷವಾಗಿ National Highway NH-48 ರಲ್ಲಿ ರಸ್ತೆಯ ಮಧ್ಯೆ ಜಲ ಉಕ್ಕುತ್ತಿದೆ 90 ಲಕ್ಷ ರೂಗಳನ್ನು ಖರ್ಚು ಮಾಡಿ ರಿಪೇರಿ ಮಾಡಿಸಿದ್ದೆವು ಇನ್ನೂ ಕೂಡ ಕೇಂದ್ರ ಸರ್ಕಾರದಿಂದ ಆ ಹಣ ನಮಗೆ ಬಂದಿಲ್ಲ ಇಂತಹ ಸ್ಥಿತಿಯಲ್ಲಿ ಇವತ್ತು NH-48 ರಲ್ಲಿ ಯಾವುದೇ ಬಸ್ ಹೋಗುತ್ತಿಲ್ಲ ಯಾವುದೇ ಸಣ್ಣ ಪುಟ್ಟ ವಾಹನಗಳೂ ಸಹ ಅಲ್ಲಿ ಹೋಗಲಿಕ್ಕಾಗುತ್ತಿಲ್ಲ ಮಂಗಳೂರಿನ ನಮ್ಮ ಶಾಸಕರುಗಳು ಬಹುಶಃ ಹೇಗೆ ಬರುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ, ಅವರು ಸುಮ್ಮನೆ ಕುಳಿತಿದ್ದಾರೆ ಆ ರಸ್ತೆ ಸಂಪೂರ್ಣ ಬಿದ್ದೇ ಹೋಗುತ್ತದೆ, ಆ ರಸ್ತೆ ನಿಮಗೆ ಇನ್ನು ಸಿಕ್ಕುವುದೇ ಇಲ್ಲ ಇಡೀ ನಮ್ಮ ಮಲೆನಾಡು ಭಾಗದಲ್ಲಿ ಇರತಕ್ಕಂಥ ರಸ್ತೆಗಳು ಇವತ್ತು ಕುಸಿದು ಹೋಗುವಂತಹ ಸ್ಥಿತಿಗೆ ಬಂದಿವೆ ಕಾರಣ, ದೊಡ್ಡ ಪ್ರಮಾಣದಲ್ಲಿ ಮಳೆ ಬಂದಿದೆ ಮಳೆಯನ್ನು ನಾವು ಇದೇ ಮೊದಲೇನೂ ನೋಡುತ್ತಿಲ್ಲ ನಾನು ನನ್ನ ಊರಿನಲ್ಲಿ, ನನ್ನ ಜಮೀನು ಹತ್ತಿರ ನಿಂತುಕೊಂಡಾಗ, ಮಳೆ ಬಂದು 10–15 ನಿಮಿಷಗಳಲ್ಲಿ ನಾನು ದ್ವೀಪದೊಳಗೆ ಬಂದು ಬಿಟ್ಟೆ, ಅಂದರೆ ಸುತ್ತಲೂ ನದಿ ಸುತ್ತಿಕೊಂಡು ಬಂದಿತು ಅಲ್ಲಿಂದ ಹೊರಗಡೆ ಸೊಂಟದಿಂದ ಮೇಲ್ಪಟ್ಟದ ನೀರಿನಿಂದ ಹೊರಗಡೆ ಬರಬೇಕಾದಂತಹ ಸ್ಥಿತಿ ಬಂದಿತು ಇಂತಹ ಒಂದು ಭೀಕರವಾದಂತಹ ಸ್ಥಿತಿ ನಿರ್ಮಾಣವಾಗಿದೆ ಮಲೆನಾಡಿನಲ್ಲಿ ಮರಗಳೂ ಸಹ ಬಿದ್ದಿವೆ ಮಾನ್ಯ ಉಪಾಧ್ಯಕ್ಷರೆ, ಇವತ್ತು ಯಾರಾದರೂ ಆ ಬಗ್ಗೆ ಹೇಳಿದರೆ, ಅದು ಹೇಗೆ ಈ ಸದನ ಒಪ್ಪುತ್ತದೋ, ಅಧಿಕಾರಿಗಳು ಒಪ್ಪುತ್ತಾರೋ ನನಗೆ ಗೊತ್ತಿಲ್ಲ ನಾವು ಸಿಲ್ವರ್ ಓಕ್‌ಗಳನ್ನು ತೋಟದೊಳಗೆ ಹಾಕುತ್ತೇವೆ ಒಂದು ಎಕರೆಗೆ 10–20 ರಂತೆ ನಮ್ಮ ಲೆಕ್ಕದಲ್ಲಿ 5 ಲಕ್ಷಕ್ಕೂ ಹೆಚ್ಚು ಮರಗಳು ಬಿದ್ದಿವೆ ನನ್ನ ಒಂದು ಕ್ಷೇತ್ರದಲ್ಲೇ ಇಷ್ಟೊಂದು ಆದರೆ, ಇನ್ನು ಇಡೀ ಪಶ್ಚಿಮ ಘಟ್ಟದಲ್ಲಿ ಎಷ್ಟು ಬಿದ್ದಿರಬಹುದು ಎಂಬುದನ್ನು ನೀವೇ ಲೆಕ್ಕ ಹಾಕಿ ಇಡೀ ಪಶ್ಚಿಮ ಘಟ್ಟದಲ್ಲಿ ಒಂದೇ ತರಹದ ಸಮಸ್ಯೆ ಇದೆ ಈ ತರಹದ ಗಾಳಿಯನ್ನು ನಾವು ನಮ್ಮ ಜೀವನದಲ್ಲಿ ನೋಡಿರಲಿಲ್ಲ 1969ನೇ ಇಸವಿಯಲ್ಲಿ ಈ ತರಹ ಬಂದಿತ್ತು ಎಂದು ಹೇಳುತ್ತಾರೆ ಆದರೆ ನಾವು ಇಂತಹ ಗಾಳಿಯನ್ನು ನೋಡಿರಲಿಲ್ಲ ಇಂತಹ ಭೀಕರವಾದಂತಹ ಸುಂಟರ ಗಾಳಿ ಮಲೆನಾಡು ಭಾಗದಲ್ಲಿ ನಾವೆಂದೂ ನೋಡಿರಲಿಲ್ಲ ಅದು ಮನೆ, ಮರಗಳ ಜೊತೆಗೆ ಎಲ್ಲಾ ಸರ್ಕಾರಿ ಕಟ್ಟಡಗಳು ಮತ್ತು ನಮ್ಮ ಕಟ್ಟಡಗಳನ್ನೂ ಸಹ ಉರುಳಿಸಿದೆ, ಎಲ್ಲ ಸೇರಿ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ

ನನ್ನ ಕ್ಷೇತ್ರದಲ್ಲಿ 15 ಕೋಟಿ ರೂಗಳಿಗೂ ಹೆಚ್ಚಿನ ನಷ್ಟವಾಗಿದೆ ನಾನು ಇದನ್ನು ಲಂಬಿಸಿ ಹೇಳಲಿಕ್ಕೆ ಹೋಗುವುದಿಲ್ಲ ಸರ್ಕಾರದ ಬಗ್ಗೆ ನನಗೆ ವಿಶ್ವಾಸವಿದೆ ಆದರೆ ಕಳೆದ ಮೂರು ವರ್ಷಗಳು ಅಂದರೆ 2004, 2005 ಮತ್ತು 2006 ರ ಅನುಭವದಿಂದ ಹೇಳುವುದಾದರೆ, ಅಂದು ಇದ್ದಂತಹ ಮಂತ್ರಿಗಳು ಹೇಳಿದಂತದ್ದು ಸುಳ್ಳಾಗಿದೆ, ಹಣ ಕೊಟ್ಟಿಲ್ಲ ಈಗಲೂ ಕೂಡ ನನಗೆ ಸರ್ಕಾರದ ಮೇಲೆ ನಂಬಿಕೆ ಇದೆ

ಶ್ರೀ ಸಿದ್ದರಾಮಯ್ಯ ಮೂರು ವರ್ಷ ಸುಳ್ಳು ಹೇಳಿದ ಮೇಲೂ ನಿಮಗೆ ಸರ್ಕಾರದ ಮೇಲೆ ನಂಬಿಕೆ ಇದೆಯೇ?

ಶ್ರೀ ಹೆಚ್ ಎಂ ವಿಶ್ವನಾಥ್ ನಾನು ನಿಮ್ಮನ್ನೂ ನಂಬಿದ್ದೆ ನೀವೂ ಸಹ ಅವತ್ತು ಹೇಳಿಕೆ ಕೊಟ್ಟಿರಿ ನೀವೇ ಆಗ Finance Minister ಆಗಿದ್ದಿರಿ ಆಯಿತು, ಮಲೆನಾಡಿಗೆ ದುಡ್ಡು ಕೊಡುತ್ತೇವೆ ಎಂದು ಹೇಳಿದ್ದಿರಿ ಆದರೆ ಆಗ ಕೆಲಸವಾಗಲಿಲ್ಲ ನಂತರ ಖರ್ಗೆ ಸಾಹೇಬರು ಇದ್ದರು 'ಅವರು ನಿಮ್ಮ ವ್ಯವಹಾರ ಕಷ್ಟ ಕಣಪ್ಪ' ಎಂದು ಹೇಳಿದ್ದರು ಆಗಲೂ ನಮಗೆ ಸರ್ಕಾರದಿಂದ ಹಣ ಬರಲಿಲ್ಲ ಈಗ ನಮ್ಮ ಶೆಟ್ಟರ್‌ರವರು ಇದ್ದಾರೆ ಅವರಿಗೂ ಕೂಡ ಹಿಂದೆ ಒಂದು ಸಲ ಹೇಳಿದ್ದೆ, ಈ ಸಲವೂ ಕೂಡ ಅವರಿಗೆ ಹೇಳುತ್ತಿದ್ದೇನೆ ನನಗೆ ಸರ್ಕಾರದ ಮೇಲೆ ನಂಬಿಕೆ ಇದೆ ಆದರೆ ಜನ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಪಶ್ಚಿಮಘಟ್ಟದಲ್ಲಿ ಯಾವುದೇ ಸಮಸ್ಯೆ ಎತ್ತಿದರೆ, ಅದಕ್ಕೆ ಅಡ್ಡಿ ಆತಂಕಗಳು ಬರುತ್ತವೆ, ಕೆಲಸ ಮಾಡುವುದಿಲ್ಲ ಆಮೇಲೆ ನೀವು ಅಲ್ಲಿ ನಕ್ಸಲೈಟ್‌ಗಳು ಬರುತ್ತಿದ್ದಾರೆಂದು ಹೇಳುತ್ತೀರಿ ಯಾವ ನಕ್ಸಲೈಟ್‌ಗಳೂ ಸಹಿತ ಹೊರಗಡೆಯಿಂದ ಬಂದವರಲ್ಲ ಈ ತರಹದ ಸಮಸ್ಯೆಗಳನ್ನೆಲ್ಲಾ ಬಗೆಹರಿಸದೇ, ಹಾಗೇ ಅವುಗಳು ಜೀವಂತವಾಗಿ ಉಳಿದರೆ, ಅವು ಕೊನೆಗೆ ವಿಕೋಪಕ್ಕೆ ಹೋಗುತ್ತವೆ ಆದ್ದರಿಂದ ನಾನು ಸರ್ಕಾರಕ್ಕೆ ಒಂದು ಗಂಭೀರವಾದಂತಹ ವಿಚಾರವನ್ನು ಹೇಳುತ್ತೇನೆ ನೀವು ಪಶ್ಚಿಮಘಟ್ಟವನ್ನು ಕಡೆಗಣಿಸಬೇಡಿ ಪದೇ ಪದೇ ಈ ತರಹದ ಸಮಸ್ಯೆಗಳು ಬಂದಾಗ, ಇದನ್ನು ಕೇವಲ ಭಾಷಣ ರೂಪದಲ್ಲಿ ತೆಗೆದುಕೊಂಡು, ಹೇಳಿಕೆ ಕೊಟ್ಟುಬಿಟ್ಟು ನೀವು ಇಡುವುದೇ ಆದರೆ, ಖಂಡಿತ ನಿಮಗೆ ಈ ಪಶ್ಚಿಮಘಟ್ಟ ಇನ್ನೊಂದು ದಿವಸ ನಿಮಗೆ ಸಮಸ್ಯೆಯ ಕೂಪವಾಗುವುದು ಗ್ಯಾರಂಟಿ ಈಗ ಇರುವ ಸಮಸ್ಯೆಗೆ ನೀವು ಪರಿಹಾರವನ್ನು ಕಂಡು ಹಿಡಿಯಿರಿ

ಆನೆಗಳು ಒಂದು ಕಡೆಗೆ ಕಾಟ ಕೊಡುತ್ತಿವೆ ನಮ್ಮ ಮಂತ್ರಿಗಳೂ ಇಲ್ಲೇ ಇದ್ದಾರೆ ನಿನ್ನೆ ದಿನ ಮಳೆ ಜಾಸ್ತಿಯಾಗಿ ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳ ಮನೆಗೆ ಆರು ಆನೆಗಳು ಬಂದು ಮಲಗಿದ್ದವು ನಮ್ಮ ಊರಿನಲ್ಲಿ ಅವರಿಗೆ ತೋಟವಿದೆ ಆರು ಆನೆಗಳು ಬಂದು ನಮ್ಮ ಕಣದಲ್ಲಿ ಮಲಗಿವೆ ಎಂದು ಅವರೇ ಹೇಳಿದರು ಈ ರೀತಿ ಆನೆಗಳು ಬಂದು ಕಣದಲ್ಲಿ ಮಲಗುವಂತಹ ಸ್ಥಿತಿ ನಮ್ಮಲ್ಲಿ ನಿರ್ಮಾಣವಾಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ವಿಶ್ವನಾಥ್‌ರವರೆ, ಒಂದು ನಿಮಿಷ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿಶ್ವನಾಥ್‌ರವರು ಹೇಳಿದ್ದು Privilege ಆಗುತ್ತದೆಯೇ? ಇಲ್ಲವೇ? ಎಂಬುದು ನಮಗೆ ಗೊತ್ತಾಗಬೇಕು Minister ಮೂರು ವರ್ಷಗಳಿಂದ ಶಾಸನ ಸಭೆಯಲ್ಲಿ ಸುಳ್ಳು ಹೇಳಿದ್ದಾರೆಂದು ಶಾಸನ ಸಭೆಯಲ್ಲಿ ಅವರು ಇಲ್ಲಿ ಹೇಳುತ್ತಿದ್ದಾರೆ Will it amount to Privilege or not? ಆ ಬಗ್ಗೆ ತಾವು ರೂಲಿಂಗ್ ಕೊಡಬೇಕು ಮಂತ್ರಿಗಳು ಮೂರು ವರ್ಷ ಮೂರು ಸಲ ಈ ಶಾಸನ ಸಭೆಯಲ್ಲಿ ಸುಳ್ಳು ಹೇಳಿದ್ದಾರೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ ಆ ಮಂತ್ರಿಗಳು ಯಾರು ಎಂದು ಹೇಳಿ ಆ ಮಂತ್ರಿಗಳೇನು ಇಲ್ಲಿ ಕಡ್ಲೆ ಪುರಿ ತಿನ್ನುತ್ತಿದ್ದಾರೆಯೇ? ಆ ಬಗ್ಗೆ ಹೇಳಬೇಕಲ್ಲವೇ? ಈ ಸಭೆಯಲ್ಲಿ ನಿಂತುಕೊಂಡು ಒಬ್ಬ ರೂಲಿಂಗ್ ಪಾರ್ಟಿ ಸದಸ್ಯ ಮೂರು ವರ್ಷಗಳಿಂದ ಸುಳ್ಳು ಹೇಳುತ್ತಿದ್ದಾರೆ ಎಂದರೆ, ಸುಮ್ಮನೆ ಬಾಯಿ ಮುಚ್ಚಿಕೊಂಡು ಇವರು ಸರ್ಕಾರ ನಡೆಸುತ್ತಿದ್ದಾರೆಯೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ವಿಶ್ವನಾಥ್‌ರವರೂ ಕೂಡ ಆ ಮಂತ್ರಿಗಳು ಯಾರು ಎಂದು ಹೇಳಬೇಕು ಸದನಕ್ಕೆ ಸುಳ್ಳು ಹೇಳಿರತಕ್ಕವರ ಹೆಸರುಗಳನ್ನು ಅವರು ಹೇಳಬೇಕು ಶಾಸನಸಭೆಗೆ ಆ ರೀತಿ ಹೇಳಲಿಕ್ಕಾಗುವುದಿಲ್ಲ

ಉಪಾಧ್ಯಕ್ಷರು ರೆಡ್ಡಿಯವರೆ, ಅವರು ಯಾರು ಎಂದು ಅವರು ಹೇಳುತ್ತಾರೆ, ಇರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಯಾವ ಮಂತ್ರಿಗಳು ಆ ರೀತಿಯಾಗಿ ಸುಳ್ಳು ಹೇಳಿದ್ದಾರೆಂದು ಅವರಾದರೂ ಹೇಳಬೇಕಲ್ಲವೇ?

ಶ್ರೀ ಜೆ ಸಿ ಮಾಧುಸ್ವಾಮಿ it is on record ಅವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ

ಉಪಾಧ್ಯಕ್ಷರು ಮೊದಲು ಅವರು ಮಾತನಾಡುವುದನ್ನು ಮುಗಿಸಲಿ, ನಂತರ ನೋಡೋಣ ಮಾನ್ಯ ವಿಶ್ವನಾಥ್‌ರವರೆ, ತಾವು ಮಾತನಾಡು ವುದನ್ನು ಮುಂದುವರೆಸಿ

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಈಗಾಗಲೇ ಹೇಳಿದ್ದಾರೆ, ಅದು ರೆಕಾರ್ಡ್‌ಗೂ ಸಹ ಹೋಗಿದೆ ಅವರು ಇನ್ನೇನು ಹೇಳಬೇಕು? ಮೂರು ವರ್ಷಗಳಿಂದ ಸುಳ್ಳು ಹೇಳುತ್ತಿದ್ದೀರಿ ಎಂದು ಅವರು ನೇರವಾಗಿ ಹೇಳಿದ್ದಾರೆ

ಉಪಾಧ್ಯಕ್ಷರು ಯಾವ ಮಂತ್ರಿಗಳು ಎಂದು ಅವರು ಹೇಳಬೇಕಲ್ಲವೇ?

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರು ಈ ರೀತಿಯಾಗಿ ಸದಸ್ಯರ ರಕ್ಷಣೆಗೆ ಬಾರದಿರುವುದು ಸರಿಯಲ್ಲ

ಉಪಾಧ್ಯಕ್ಷರು ಅವರು ಮಂತ್ರಿಗಳು ಯಾರು ಎಂದು ಹೇಳಲಿಲ್ಲ ಸುಳ್ಳು ಹೇಳಿದರು ಎಂದಷ್ಟೇ ಅವರು ಹೇಳಿದರು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಂತ್ರಿಗಳು ಸುಳ್ಳು ಹೇಳಿದ್ದಾರೆಂದು ಅವರು ಹೇಳಿದರು

ಉಪಾಧ್ಯಕ್ಷರು ಮಾನ್ಯ ವಿಶ್ವನಾದ್‌ರವರೆ, ಏನು ಹೇಳುತ್ತೀರಿ?

ಶ್ರೀ ಜೆ ಸಿ ಮಾಧುಸ್ವಾಮಿ ಅವರು Assembly ಯಲ್ಲಿ ಏಕೆ ಮಾತನಾಡಬೇಕು? ಪ್ರತಿ ಸಲ ಸುಳ್ಳು ಕೇಳಿಕೊಂಡು ಹೋಗುವುದಕ್ಕೆ ಅವರು ಮಾತನಾಡಬೇಕೇ?

ಶ್ರೀ ಹೆಚ್ ಎಂ ವಿಶ್ವನಾಥ್ ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕುಮಾರಸ್ವಾಮಿಯವರ ಮನೆಗೆ ನಾಲ್ಕು ಆನೆಗಳು ಬಂದು ಮಲಗಿವೆ

ಎಂದು ಹೇಳಿದರು ಐದು ಎಕರೆ ಅಡಿಕೆ ತೋಟ ಮುರಿದು ಹೋಗಿವೆ ವಿಶ್ವನಾಥ್ ಏನು ಮಾಡುತ್ತೀರಿ ಎಂದು ಹೇಳಿದರು ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ, ಕಾಡಿನ ಪ್ರಾಣಿಗಳು ಕೂಡ ಮನೆಗಳ ಹತ್ತಿರ ಬಂದು ರಕ್ಷಣೆ ಪಡೆಯುವ ಸ್ಥಿತಿಗೆ ಹೋಗಿದೆ ಅಷ್ಟು ಭೀಕರವಾದ ಮಳೆ ಬಿದ್ದಿದೆ ಇದರ ಪರಿಣಾಮವನ್ನು ತಾವು ಅರ್ಥ ಮಾಡಿಕೊಳ್ಳಿ ನಾನು ಉತ್ಪ್ರೇಕ್ಷೆಯಿಂದ ಈ ಮಾತನ್ನು ಹೇಳುತ್ತಿಲ್ಲ ದಯಮಾಡಿ ಸದನದಲ್ಲಿ ಇರತಕ್ಕಂತಹ floor leaders ಇರಬಹುದು, ಅಥವಾ ಬೇರೆಯವರು ಇರಬಹುದು, ಮಲೆನಾಡು ಭಾಗದಲ್ಲಿ ಬಂದು ನೋಡಿ ಸಕಲೇಶಪುರ ಮಾತ್ರವಲ್ಲ, ಭಾಗಮಂಡಲದ ಸಿರ್ಸಿ ಸಿದ್ದಾಪುರದವರೆಗೆ ಇದೇ ಪರಿಸ್ಥಿತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ ನಮ್ಮ ಭಾಗದ ರಸ್ತೆಗಳಿರಬಹುದು, ಅಥವಾ ಕಟ್ಟಡಗಳಿರಬಹುದು ನನಗನ್ನಿಸುತ್ತದೆ, ನನ್ನ ಒಂದು ಕ್ಷೇತ್ರಕ್ಕೆ 2000 ಮನೆಗಳನ್ನು ಮಂಜೂರಾತಿ ಕೊಡಬೇಕು 1400 ಮನೆಗಳು ಬಿದ್ದು ಹೋಗಿವೆ ದಿನಂಪ್ರತಿ ನನಗೆ ಮನವಿಗಳು ಬರುತ್ತಿವೆ ಮನೆಗಳನ್ನು ಏಕೆ ಕಟ್ಟಿಕೊಂಡಿದ್ದೀರಿ ಎಂದು ಮಾತನಾಡುತ್ತಿದ್ದರು, ಮಲೆನಾಡಿನ ಒಳಗೆ ಮರದ ಮಧ್ಯದಲ್ಲಿ ಮನೆ ಕಟ್ಟಿಕೊಳ್ಳುತ್ತೇವೆ ನಮ್ಮ ಮನೆ ಕೂಡ ಆ ಹಲಸಿನ ಮರಗಳ ಮಧ್ಯೆ ಇದೆ ಆ ಎರಡು ಹಲಸಿನ ಮರ ನನ್ನ ಮನೆಯ ಮೇಲೆ ಬಿದ್ದರೆ ನಾವೆಲ್ಲಾ ಸತ್ತು ಹೋಗುತ್ತೇವೆ ಎಲ್ಲರ ಸಮಸ್ಯೆಯೂ ಹಾಗೆ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಏನನ್ನು ನೀವು ಇಲ್ಲಿ ಹೇಳುತ್ತೀರಿ, ಭರವಸೆ ಕೊಡುತ್ತೀರಿ, ಅದು ಕಾರ್ಯಗತವಾಗಬೇಕು ವಿಶೇಷವಾಗಿ ಮಲೆನಾಡು ಭಾಗವನ್ನು ನೀವು ದಯಮಾಡಿ ಉತ್ಪ್ರೇಕ್ಷೆ ಮಾಡಬೇಡಿ ಎಲ್ಲ ಪಶ್ಚಿಮ ಘಟ್ಟದ ಒಳಗಡೆ ಉಗ್ರಗಾಮಿಗಳು, ನಕ್ಸಲೈಟ್ ಬೇರೆ ಬೇರೆ ಜನರು ಬಂದು ಸೇರಿಕೊಳ್ಳುತ್ತಿದ್ದಾರೆ ಕಾರಣವೇನೆಂದರೆ ಅದು ನಿಲ್ಲುವುದಕ್ಕೆ ಒಳ್ಳೆಯ ಜಾಗ ಎಂದು ಅಲ್ಲ ಸಮಸ್ಯೆಗಳ ಪರಿಹಾರ ಮಾಡದೇ ಇರುವುದರಿಂದ ಅಲ್ಲಿಯ ಜನರು ಯುವಕರು ಉಗ್ರ ರೂಪಕ್ಕೆ ಹೋಗುತ್ತಿದ್ದಾರೆ ನಾನು ಸರ್ಕಾರದ ಮುಂದೆ ಯಾವುದೇ ಬೆದರಿಕೆಯನ್ನು ಇಡುತ್ತಿಲ್ಲ ನನ್ನ ಕ್ಷೇತ್ರದ ನೋವುಗಳನ್ನು ನಿಮ್ಮ ಮುಂದಿಟ್ಟಿದ್ದೇನೆ ನಮ್ಮಲ್ಲಿ ಸೆಮಿ ಮಲೆನಾಡು ಇರತಕ್ಕಂತಹ ಆಲೂರಿನಲ್ಲಿ ಆಲೂಗಡ್ಡೆ ಹಾಕಿರುವುದು ಸ್ವಲ್ಪವೂ ಉಳಿದಿಲ್ಲ ಜೋಳ ಉಳಿದಿಲ್ಲ ಕೊಳೆತು ಹೊಗಿದೆ ಕಾಪಿ ಮತ್ತು ಮೆಣಸು ಯಾವುದೂ ಉಳಿದುಕೊಂಡಿಲ್ಲ ಇವತ್ತು ನೀವು ಯಾವ ಪ್ಯಾಕೇಜ್ ಕೊಟ್ಟರೂ ಪಶ್ಚಿಮ ಘಟ್ಟದಲ್ಲಿರುವ ನಾವು ಉಳಿದುಕೊಳ್ಳುವ ಸ್ಥಿತಿಯಲ್ಲಿಲ್ಲ

ಯಾರೋ ನಾಲ್ಕಾರು ಜನ ಶ್ರೀಮಂತರು ನೂರಾರು ಎಕರೆ, ಇನ್ನೂರು ಮುನ್ನೂರು ನಾನೂರು ಎಕರೆ ಜಮೀನು ಮತ್ತು ಐನೂರು ಎಕರೆ ಜಮೀನು ಇಟ್ಟುಕೊಂಡಿರುವವರು, ಬೆಂಗಳೂರಿನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಕಾರ್ಖಾನೆಗಳನ್ನು ಇಟ್ಟುಕೊಂಡಿರುವವರು ಅಲ್ಲಿ ಬಚಾವಾಗಬಹುದೇ ವಿನಃ ನಾವ್ಯಾರೂ ಬಚಾವಾಗುವ ಸ್ಥಿತಿಯಲ್ಲಿಲ್ಲ ಕಾರ್ಮಿಕರ ಸ್ಥಿತಿ ಕೂಡ ಚಿಂತಾಜನಕವಾಗಿದೆ ಸರ್ಕಾರ ಚಿಂತನೆ ಮಾಡಿ ಪ್ರತ್ಯೇಕವಾದ ಒಂದು ಪ್ಯಾಕೇಜನ್ನು ಈ ಭಾಗಕ್ಕೆ ದಯಮಾಡಿ ಬಿಡುಗಡೆ ಮಾಡಬೇಕು ನಿಮ್ಮ ಅದಿಕಾರಿಗಳು ಮತ್ತು ನೀವು, ವಿಶೇಷವಾಗಿ ಮುಂದಿನ ಸಾಲಿನಲ್ಲಿರುವಂತಹ ಲೀಡರ್ಸ್ ನೀವೇ ಬಂದು ಬಿಡಿ ನಾನು ಕೈ ಮುಗಿದು ಕೇಳುತ್ತೇನೆ, ಒಂದೆರಡು ದಿನ ಉಳಿದು ಅಲ್ಲಿನ ಮಳೆಗಾಲವನ್ನು ನೋಡಿ ಮಾನ್ಯ ಮುಖ್ಯಮಂತ್ರಿಗಳು ಸಧ್ಯದಲ್ಲಿಯೇ ಈ ಗ್ರಾಮದಲ್ಲಿ ಮಳೆಗಾಲದಲ್ಲಿ ಉಳಿಯುವುದಕ್ಕೆ ಬರುತ್ತಿದ್ದಾರೆ ಮಾನ್ಯ ಹೆಗಡೆಯವರು ಬೇಡ 'ಮಾನ್ಯ ಹೆಗಡೆಯವರನ್ನು ಬಿಟ್ಟು ಉಳಿದವರು ಮಾನ್ಯ ವಿರೋಧ ಪಕ್ಷದ ಸದಸ್ಯರಾದ ಖರ್ಗೆ ಸಾಹೇಬರು ಇದ್ದಾರೆ, ಅವರಿಗೆ ಅನುಭವ ಇದೆ, ಶಕ್ತಿ ಇದೆ, ಕೇಂದ್ರ ಸರ್ಕಾರದಿಂದ ಹಣ ತರಬೇಕಾಗಿದೆ ಆದ್ದರಿಂದ ಅವರೂ ಕೂಡ ಬಂದು ಉಳಿದುಕೊಳ್ಳಲಿ ನಮ್ಮ ಸಮಸ್ಯೆಗಳನ್ನು ನೋಡಿ ದಯಮಾಡಿ ಮಲೆನಾಡು ಭಾಗದ ಸಮಸ್ಯೆಗಳನ್ನು ಬಗೆಹರಿಸಲಿ ಎಂದು ಸರ್ಕಾರ ಮತ್ತು ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಒಂದು ಕೆಲಸ ಮಾಡೋಣ ನೀವು ಮೇ ತಿಂಗಳಲ್ಲಿ ಗುಲ್ಬರ್ಗಾಕ್ಕೆ ಬಂದು ಬಿಡಿ ನಾನು ಜೂನ್ ಜುಲೈ ತಿಂಗಳಲ್ಲಿ ನಿಮ್ಮಲ್ಲಿ ಬಂದಿರುತ್ತೇನೆ ಆಗಬಹುದಾ?

ಶ್ರೀ ಹೆಚ್ ಎಂ ವಿಶ್ವನಾಥ್ ನಾನು ಖಂಡಿತಾ ಒಪ್ಪಿಕೊಳ್ಳುತ್ತೇನೆ ನನಗೆ ಸಮಸ್ಯೆ ಆಗಿರುವುದು ಏನೆಂದರೆ, ನಮ್ಮಲ್ಲಿ ಮಲೆನಾಡಿಗೆ ನವೆಂಬರ್ ತಿಂಗಳಿಂದ ಮೇ ತಿಂಗಳವರೆಗೆ ಬರುತ್ತಾರೆ ಮೇ ತಿಂಗಳಿನಿಂದ ಜುಲೈ, ಆಗಸ್ಟ್ ತಿಂಗಳವರೆಗೆ ಯಾರೂ ಬಂದಿಲ್ಲ ಈ ಮೂರು ತಿಂಗಳು ನೀವು ಬಂದು ನೋಡಿ ಆಮೇಲೆ ನಿಮಗೆ ಗೊತ್ತಾಗುತ್ತದೆ

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ ಮಾನ್ಯ ಉಪಾಧ್ಯಕ್ಷರೆ, ನಾವು ಈಗ ಅವರ ಊರಿನ ಮೇಲಿನಿಂದ ಬರುವುದು ಬಿಟ್ಟೇ ಬಿಟ್ಟಿದ್ದೇವೆ ಕಳೆದ

ಒಂದು ತಿಂಗಳ ಮಧ್ಯದಲ್ಲಿ ಬಂದಿದ್ದೇವೆ ನಂತರ ಬಿಟ್ಟುಬಿಟ್ಟಿದ್ದೇವೆ ಏಕೆಂದರೆ ಕಳೆದ ವರ್ಷವೂ ನಾವು ಇದೇ ರಾಗ ಹಾಡಿದ್ದೇವೆ ಶಿರಾಡಿ ಘಾಟ್ ಇದು ಈ ವರ್ಷವೂ ಅದೇ ರಾಗ ಏಕೆಂದರೆ ಬಸ್ಸುಗಳು ಅಲ್ಲಿ ಬರುವ ಪರಿಸ್ಥಿತಿಯಲ್ಲಿಲ್ಲ ಒಂದು ವೇಳೆ ಬಸ್ಸಿನಲ್ಲಿ ಬಂದರೆ ಒಂದೂವರೆಯಿಂದ ಎರಡು ದಿವಸಗಳು ತೆಗೆದುಕೊಳ್ಳುವ ಪರಿಸ್ಥಿತಿ ಇದೆ ಸರ್ಕಾರಕ್ಕೆ ಅದು ಇನ್ನೂ ಮನಸ್ಸಿಗೆ ಹೋಗಿಲ್ಲ ಅದು ನ್ಯಾಷನಲ್ ಹೈವೇ ರಾಜ್ಯ ಸರ್ಕಾರದ ಪರಿಸ್ಥಿತಿ ಹೇಳುತ್ತೇನೆ ಮಾನ್ಯ ಜೀವರಾಜ್‌ರವರು ಮತ್ತು ವಿಶ್ವನಾಥ್‌ರವರು ಹೇಳಿದರು, ಮಾನ್ಯ ಜ್ಞಾನೇಂದ್ರರವರು ರಾಜಕಾರಣ ಮೀರಿ ಚರ್ಚೆ ಮಾಡೋಣ ಎಂದು ಹೇಳಿದರು ರಾಜಕಾರಣ ಮೀರಿ ಅವರಿಬ್ಬರೂ ಚರ್ಚೆ ಮಾಡಿದರೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಮೈನ್ ಲಾರಿ ಬಗ್ಗೆ ನಾನು ಕಳೆದ ಸಾರಿ ಸದನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ ಅದರಿಂದ ಆದಾಯ ಎಷ್ಟು ಎಂದು ಕೇಳಿದೆ, 75 ಕೋಟಿ ರೂಪಾಯಿ ಎಂದು ಹೇಳಿದರು ರಸ್ತೆಗಳು ಮತ್ತು ಬ್ರಿಡ್ಜ್‌ಗಳಿಗೆ ಆದ ನಷ್ಟ ಎಷ್ಟು ಎಂದು ಕೇಳಿದ್ದಕ್ಕೆ 1700 ಕೋಟಿ ರೂಪಾಯಿ ಎಂದು ಹೇಳಿದರು ಮಳೆಗಾಲ ಪ್ರಾರಂಭವಾಗುವ ಮುಂಚೆ ನ್ಯಾಷನಲ್ ಹೈವೇಯವರು ರೀ-ಕಾರ್ಪೆಟಿಂಗ್ ಮಾಡಿದರು ಇವತ್ತು ಅದು ರೀ-ಕಾರ್ಪೆಟಿಂಗ್ ಮಾಡಿದ ರಸ್ತೆ ಎಂದು ಹೇಳುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಅವರ ಜಯಪುರ ಬ್ರಿಡ್ಜ್ ಹೋಯಿತು ನಗರ ಕೊಲ್ಲೂರು ಮಧ್ಯೆ ಬರುವ ಬ್ರಿಡ್ಜ್ ಇದೇ ಮೈನ್ ಲಾರಿ ಹೋಗಿ ಬಿದ್ದಿದಂತಹ ಬಾರ್ಕೂರ್ ಬ್ರಿಡ್ಜ್ ನನ್ನ ಕ್ಷೇತ್ರದಲ್ಲಿ ಖಾಸಗಿಯವರಿಗೆ ಕೊಟ್ಟಿದ್ದರಿಂದ ಎಲ್ಲಾ ಗಲಾಟೆ ಮಾಡಿದರು ಎಲ್ & ಟಿ ಯವರಿಗೆ ಕೊಟ್ಟಿದ್ದರೆ ಬೇಗ ಬ್ರಿಡ್ಜ್ ಮಾಡುತ್ತಿದ್ದರು ಗ್ಯಾಮನ್ ಇಂಡಿಯಾದವರಿಗೆ ಕೊಟ್ಟ ನನ್ನ ಕ್ಷೇತ್ರದ ಮೂರು ಬ್ರಿಡ್ಜ್ ಪ್ರಾರಂಭವೇ ಮಾಡಿಲ್ಲ ಇವರಿಗೆ ಕೊಟ್ಟು ಮೂರು ವರ್ಷಗಳಾದವು ಆದರೆ ಈ ಬಾರ್ಕೂರ್ ಬ್ರಿಡ್ಜ್ ಖಾಸಗಿಯವರಿಗೆ ಕೊಟ್ಟಿದ್ದು, 9 ತಿಂಗಳುಗಳಲ್ಲಿ ಅವರು ಮುಗಿಸಿ ಕೊಟ್ಟು ಬಿಟ್ಟರು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ನೀವು ಈ ಪ್ಯಾಕೇಜ್‌ನ್ನು ನಿಲ್ಲಿಸಿಬಿಡಿ ಲೋಕಲ್ಲಾಗಿ ನೀವು ಟೆಂಡರ್ ಕರೆದಾಗ ಅಲ್ಲಿ ಯಾರಾದರೂ ಮಾಡಿ ಬೇಗ ಮುಗಿಸಿ ಕೊಡುತ್ತಾರೆ ಇವರು ಗ್ಯಾಮನ್ ಇಂಡಿಯಾದವರು ಏನು ಮಾಡುತ್ತಿದ್ದಾರೆ, ಅವರು ಮಾಡದೇ ಲೋಕಲ್‌ನವರಿಗೆ ಕೊಡುತ್ತಿದ್ದಾರೆ ಸಬ್ ಕಂಟ್ರ್ಯಾಕ್ಟ್ ಕೊಡುತ್ತಿದ್ದಾರೆ ಸಬ್ ಕಂಟ್ರ್ಯಾಕ್ಟ್ ಕೊಡುವುದಾದರೆ ಗ್ಯಾಮನ್ ಇಂಡಿಯಾ ಏಕೆ ಬೇಕು?

ನೇರವಾಗಿ ಅಲ್ಲಿಯ ಲೋಕಲ್ ಕಂಟ್ರಾಕ್ಟರ್ ಮಾಡುವುದಕ್ಕಾಗುವುದಿಲ್ಲವಾ? ಇದರ ಬಗ್ಗೆ ಆಲೋಚನೆ ಮಾಡಬೇಕು ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದಿರಿ ಕಾನ್ಫರೆನ್ಸ್ ಹಾಲ್‌ನಲ್ಲಿ ನಮ್ಮನ್ನೆಲ್ಲಾ ಒಂದು ಸಭೆ ಕರೆದಿದ್ದರು ಬೆಳಗಾಂ ವಿಭಾಗದಲ್ಲಿ ಆದ ನೆರೆ ಹಾವಳಿ ಬಗ್ಗೆ ಸಾಕಷ್ಟು ಚರ್ಚೆಯಾದಾಗ ನಾನು ಹೇಳಿದೆ, ಬೆಳಗಾಂ ವಿಭಾಗದಲ್ಲಿ ಫ್ಲಡ್ ಬಂದಿರುವುದು ಇದೇ ಪ್ರಥಮ ನಾವು ಖಾಯಂ ಆಗಿ ನೆರೆ ಹಾವಳಿ ಮತ್ತು ಸಮುದ್ರ ಕೊರೆತದ ಮಧ್ಯ ಭಾಗದಲ್ಲಿದ್ದೇವೆಂದು ಹೇಳಿದ್ದಕ್ಕೆ ತಕ್ಷಣದಲ್ಲಿ ಈಗ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆಂದು ಹಣ ಬಿಡುಗಡೆ ಮಾಡಿದರು, ನಂತರ ಒಟ್ಟಾರೆ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು ಕಳೆದ ವರ್ಷ ನಮಗೆ ಬಂದಿದ್ದು ಕೇವಲ ಒಂದು ಕೋಟಿ ರೂಪಾಯಿ ಅದೂ ಇನ್ನೂ ಖರ್ಚಾಗಿಲ್ಲ 2006-07 ರಲ್ಲಿ ಕೊಟ್ಟ ಹಣ ಇದುವರೆಗೂ ಖರ್ಚಾಗಿಲ್ಲ ಕೆಲಸ ಆಗದೇ ಇದ್ದುದರಿಂದ ಅಲ್ಲ, Third Party inspection ಎಂದು ಕೊಟ್ಟು, Third Party inspection ಗೆ ಬಂದವರು ಹೋದರು ತಹಶೀಲ್ದಾರ್‌ರವರು ಮತ್ತು AC, DC ಯವರು inspection ಮಾಡದೇ Engineering division payment ಮಾಡುವುದಕ್ಕೆ ಆಗುತ್ತದಾ ಅಧ್ಯಕ್ಷರೆ? ಅದಕ್ಕೋಸ್ಕರ ಕೆಲಸ ನಿಂತು 2006-07 ರದ್ದು ಮೇ ತಿಂಗಳಲ್ಲಿ ಅನುಮೋದನೆ ಕೊಟ್ಟಿದ್ದಾರೆ ಇದನ್ನು ಎಲ್ಲಿ ಕೆಲಸ ಮಾಡುತ್ತೀರಿ? ಇವತ್ತು ಪ್ಯಾಕೇಜಿನ ವ್ಯವಸ್ಥೆಯಲ್ಲಿ ಸ್ಥಳೀಯ ಗುತ್ತಿಗೆದಾರರು ಚಿಕ್ಕಪುಟ್ಟ ಗುತ್ತಿಗೆದಾರರು ಮುಗಿದು ಹೋದರು ಯಾರೂ ಕೆಲಸ ಮಾಡುವುದಕ್ಕೆ ಬರುತ್ತಿಲ್ಲ ಅವರ ತನಿಖೆ ಜಾಸ್ತಿಯಾಗಿದೆ ದೊಡ್ಡ ದೊಡ್ಡ ಗುತ್ತಿಗೆ ಮಾಡಿದವರು ನೇರವಾಗಿ ಬಂದು ರಾಜ್ಯದಿಂದ LOC ತೆಗೆದುಕೊಂಡು ಹೋಗುತ್ತಾರೆ ಸ್ಥಳೀಯವಾಗಿ DC ಯವರ ಹತ್ತಿರ ನೀವು ಏನು ಕೊಟ್ಟಿದ್ದೀರಿ, ಅವರ inspection ನಲ್ಲಿ ಸ್ಥಳೀಯ ಗುತ್ತಿಗೆದಾರರು ಇಲ್ಲ ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ, ಈ ಸಮುದ್ರ ಕೊರೆತ ಪ್ರಾರಂಭವಾದ ಮೇಲೆ ನಾವು DC ಯವರ ಅನುಮೋದನೆ ಇಲ್ಲದೇ ಕೆಲಸ ಮಾಡುವುದಕ್ಕಾಗುವುದಿಲ್ಲ ಹಾಗಾದರೆ ನಾವು ಸಮುದ್ರಕ್ಕೆ ದಯವಿಟ್ಟು ನಿಲ್ಲಪ್ಪ ಸಮುದ್ರ ರಾಜ, ನಮ್ಮ ಜಿಲ್ಲಾಧಿಕಾರಿಗಳು ಅನುಮೋದನೆ ಕೊಟ್ಟಿಲ್ಲ, ಅವರು ಅನುಮೋದನೆ ಕೊಡುವವರೆಗೆ ನೀನು ಕೊರೆಯಬೇಡ, ಅವರು ಅನುಮೋದನೆ ಕೊಟ್ಟ ಮೇಲೆ ನೀನು ಕೊರೆಯಲಿಕ್ಕೆ ಪ್ರಾರಂಭ ಮಾಡು

ಎಂದು ಹೇಳುವ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ 2006-07 ರಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಕೋಟಿ ರೂಪಾಯಿ ಸುನಾಮಿಯಿಂದ ನದಿ ತಡೆ ಗೋಡೆಗಾಗಿ ಬಿಡುಗಡೆ ಮಾಡಿದ್ದರು ತಾವೇ ಕಂದಾಯ ಸಚಿವರಾಗಿದ್ದಿರಿ ಆ ವರ್ಷದ್ದು ಇನ್ನು ಒಂದು ಕೋಸಟಿ ರೂಪಾಯಿ ಬಾಕಿ ಇದೆ ಕಳೆದ ವರ್ಷದ್ದು 40 ಲಕ್ಷ ರೂಪಾಯಿ ಬಾಕಿ ಇದೆ ಏಕೆಂದರೆ ಇಲ್ಲಿ ಭಿನ್ನಾಭಿಪ್ರಾಯ ಇದೆ ಕೆಲಾಮಿಟಿ ರಿಲೀಫ್ ಫಂಡ್‌ನಿಂದ ಕೊಡುವುದಕ್ಕೆ ಬರುವುದಿಲ್ಲವೆಂದು ರೆವಿನ್ಯೂ ಇಲಾಖೆಯವರು, PWD ಯವರು ಹಣ ಇಲ್ಲೆಂದು ಅವರು ಕೊಡುವುದಿಲ್ಲ ಕೆಲಸ ಮಾಡಿದ ಗುತ್ತಿಗೆದಾರರದ್ದು ಒಂದು ಕೋಟಿ ಹಿಂದಿನ ವರ್ಷದ್ದು, 40 ಲಕ್ಷ ರೂಪಾಯಿ ಕಳೆದ ವರ್ಷದ್ದು ಬರುತ್ತದೆ ಎಂದು ಕಾಯುತ್ತಾ ಕುಳಿತ್ತಿದ್ದಾರೆ ಅದಕ್ಕೆ ಪುನಃ ಜಿಲ್ಲಾಧಿಕಾರಿಗಳು ಇವರು ನನಗೆ ಕೇಳದೇ ಮಾಡಿದ್ದಾರೆ ಎಂದು ಹೇಳುತ್ತಾರೆ ನಾವು ಏನು ಮಾಡಬೇಕೆಂದು ನಮಗೆ ಅರ್ಥವಾಗುತ್ತಿಲ್ಲ ಶಾಸಕರು ತಕ್ಷಣದಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ ಇಲ್ಲವೆನ್ನುವುದು ನಮಗೆ ಗೊತ್ತಾಗಬೇಕಾಗುತ್ತದೆ ನನಗೆ ನೆನಪು ಇದೆ ನಾನು ಮಂಗಳೂರಿನಲ್ಲಿ ಜಿಲ್ಲ ಉಸ್ತುವಾರಿ ಸಚಿವನಾಗಿದ್ದಾಗ ತಮ್ಮ ಜೊತೆಗೆ ನಾನು ಕೆಲಸ ಮಾಡಿದ್ದೇನೆ ಮಾನ್ಯ ಜಾಲಪ್ಪನವರು ಕಂದಾಯ ಸಚಿವರಾಗಿದ್ದರು ಎಂದು ಕಾಣುತ್ತದೆ ನನಗೆ ರಾಮಯ್ಯ ನಾಯಕರು ದೂರವಾಣಿ ಮಾಡಿದ್ದರು ಬಂಟ್ವಾಳದಲ್ಲಿ ಅನಾಹುತವಾಗಿದೆ, ನೀನು ಬಂದು ಹೋಗು ಎಂದು ಹೇಳಿದರು ನಾನು ಬೆಂಗಳೂರಿಗೆ ಹೊಗುತ್ತಿದ್ದೇನೆ ಎಂದು ಹೇಳಿದರೆ, ಇಲ್ಲ ನೀನು ಎಲ್ಲ ಕ್ಯಾನ್ಸಲ್ ಮಾಡಿ ಇಲ್ಲಿಗೆ ಬಾ ಎಂದು ಹೇಳಿದರು ಮಂಗಳೂರಿನಿಂದ ಬಂಟ್ವಾಳದವರೆಗೆ ಸುಂಟರಗಾಳಿಯಿಂದ ಹಂಚುಗಳೆಲ್ಲವೂ ಸಂಪೂರ್ಣವಾಗಿ ಹಾರಿ ಹೋಗಿದ್ದವು ಕಬ್ಬಿಣದ ವಿದ್ಯುತ್ ಕಂಬ ಟ್ವಿಸ್ಟ್ ಆಗಿತ್ತು ಅಡಿಕೆ ತೋಟ ಮತ್ತು ತಂಗಿನ ತೋಟಗಳೆಲ್ಲವೂ ಹಾಳಾಗಿ ಹೋಗಿದ್ದವು ಆಗಿನ ಜಿಲ್ಲಾಧಿಕಾರಿ ಭರತ್‌ಲಾಲ್ ಮೀನರವರು ಇದ್ದರು ನೇರವಾಗಿ ಹಂಚಿನ ಕಾರ್ಖಾನೆಗೆ ಹೊಗಿ ಎಷ್ಟು ಹಂಚು ಇದೆ ತೆಗೆದುಕೊಂಡು ಬಂದು ಹಾಕಿ ಎಂದು ಹೇಳಿದೆ ಸಾಯಂಕಾಲದ ಒಳಗೆ ಹಂಚು ಹಾಕಿಸಿ ಕೊಟ್ಟಿದ್ದಾರೆ ಇದು ಆಗಬೇಕಾದುದು ನಾವು ಜಿಲ್ಲಾಧಿಕಾರಿಗಳ ಆದೇಶ ಕಾಯುವುದು ಅಲ್ಲ ನಾವು ಜಿಲ್ಲಾಧಿಕಾರಿಗಳಿಗೆ ಕೆಲಸ ಹೇಳಿ ಅವರು ತಕ್ಷಣ ಕೆಲಸ ಮಾಡುವಂತಹ ವ್ಯವಸ್ಥೆ ಆಗಬೇಕು ಮೊನ್ನೆ ದಿನ ನಾನು ಕೇಳಿದೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು

ಜಿಲ್ಲಾಧಿಕಾರಿಯವರ ಜೊತೆಗೆ ಕಾಪುವಿನಲ್ಲಿ ಆಗಿರುವ ಸಮುದ್ರ ಕೊರೆತದ inspection ಗೆ ಹೋಗಿದ್ದರು ಎಂದು ಕೇಳಿದೆ ಉಸ್ತುವಾರಿ ಸಚಿವರು ಇಲ್ಲಿ ಹಾಕಿ ಎಂದು ಹೇಳಿದರೆ, ಡಿಸಿಯವರು ಇಲ್ಲ, ಅಲ್ಲಿ ಮನೆ ಇಲ್ಲ ಬೇಡವೆಂದು ಹೇಳಿದರು ಇದು ಪರಿಸ್ಥಿತಿ ಇವತ್ತು ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿಗಳ ಮಾತನ್ನು ಕೇಳುವ ಪರಿಸ್ಥಿತಿ ಬಂದಿರುವಂಥದ್ದು ಬಹಳ ನೋವಿನ ಸಂಗತಿ ಹಾಗಾದರೆ ಜಿಲ್ಲಾ ಉಸ್ತುವಾರಿ ಸಚಿವರು ಏಕೆ ಬೇಕು? ಒಂದು ಕೆಲಸವನ್ನು ಡಿಸಿಯವರಿಗೆ ಹೇಳಿ ಮಾಡಿಸುವುದಕ್ಕೆ ಸಾಧ್ಯವಾಗದೇ ಇದ್ದರೆ, ಎಲ್ಲಾ ಶಾಸಕರನ್ನು ಕರೆದು ಅವರ ಅಧ್ಯಕ್ಷತೆಯಲ್ಲಿ ನಾವು ಒಂದು ಸಭೆಯನ್ನು ಮಾಡಿದೆವು ಮಾನ್ಯ ಸುನೀಲ್ ಕುಮಾರ್‌ರವರು ಬರಲಿಲ್ಲ ಅವರು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ನಾನು ಬರುವುದಿಲ್ಲವೆಂದು ಏಕೆಂದರೆ ನಾವು ಹೇಳಿದ ಕೆಲಸವಾಗುವುದಿಲ್ಲವಾದ್ದರಿಂದ ನಾವೇಕೆ ಬರಬೇಕು ಎಂದು ಕೇಳುತ್ತಾರೆ ಇದು ಪರಿಸ್ಥಿತಿ ಕೆಲಸವಾಗಬೇಕೋ ಬೇಡವೋ ಎನ್ನುವಂಥದ್ದನ್ನು ನಾವು ತೀರ್ಮಾನ ಮಾಡಬೇಕಾಗುತ್ತದೆ ಅದು ಸರಿಯಾಗಿದೆಯೋ ಇಲ್ಲವೋ ಎನ್ನುವಂಥದ್ದರ ಬಗ್ಗೆ ತಾವು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್‌ನ್ನು ಮಾಡಿಸಿ ತಕ್ಷಣ ಹಣವನ್ನು ಬಿಡುಗಡೆ ಮಾಡುವಂಥದ್ದು ಆಗಬೇಕು ನಾನು ಮುಖ್ಯಮಂತ್ರಿಗಳಲ್ಲಿ ಎರಡ್ಮೂರು ಕೇಳಿಕೊಂಡೆ, ಬನ್ನಿ ನಮ್ಮ ಜಿಲ್ಲೆಗೆ ಒಂದು ರಿವ್ಯೂ ಮೀಟಿಂಗ್‌ನ್ನು ಮಾಡಿ, ಎಷ್ಟು ಕಡತಗಳು ಪೆಂಡಿಂಗ್‌ನಲ್ಲಿವೆ, ಏನು ಕೆಲಸವಾಗಿದೆ, ಕೆಲಸವಾಗಿಲ್ಲ ಎಂಬುದು ತಿಳಿಯುತ್ತದೆ ಎಂದು ಹೇಳಿದೆ ಏಕೆಂದರೆ ಎಲ್ಲರ ಮನಸ್ಸಿನಲ್ಲಿ ಉಡುಪಿ ಹಾಗೂ ಮಂಗಳೂರಿನಲ್ಲಿ ಎಲ್ಲ ಕೆಲಸವಾಗಿದೆ ಎಂದು ಇದೆ ಮಂಗಳೂರು ಬಗ್ಗೆ ನನಗೆ ಹೆಚ್ಚು ಮಾಹಿತಿ ಇಲ್ಲ ಆದರೆ ಉಡುಪಿಯಲ್ಲಂತೂ ರಸ್ತೆಗಳೆಲ್ಲಾ ಹಾಳಾಗಿದೆ ಬ್ರಿಡ್ಜ್‌ಗಳು ಬೀಳುವುದಕ್ಕೆ ಶುರುವಾಗಿದೆ ಮೊನ್ನೆ ಪುನಃ ಆಯಿತು ಸುಂಟರಗಾಳಿ ಬಂದು ಬೈಂದೂರಿನಲ್ಲಿ ತಾವು ಉಪ ಮುಖ್ಯಮಂತ್ರಿಗಳು ಹೋಗಿದ್ದಿರಿ ಆಗ ತೆಂಗಿನ ತೋಟ ಮತ್ತು ಅಡಿಕೆ ತೋಟವೆಲ್ಲಾ ಬಿದ್ದುಹೋಗಿವೆ ನನ್ನ ಕ್ಷೇತ್ರದ ಕರಾವಳಿಯಲ್ಲಿ ಈ ರೀತಿಯಾಗಿದೆ ಮತ್ತು ಸವಣೂರಿನಲ್ಲಿ ಸುನಿಲ್‌ಕುಮಾರ್‌ರವರ ಕ್ಷೇತ್ರಕ್ಕೆ ನಾನೂ ಕೂಡ ಹೋಗಿದ್ದೆ ಅಲ್ಲಿ ಡಿ ಸಿ ಆದೇಶಕ್ಕೆ ಏನೂ ಕಾಯಲಿಲ್ಲ ಹೆಂಚಿನ ಕಾರ್ಖಾನೆಯಿಂದ ಹೆಂಚನ್ನು ತರಿಸಿ ಎಲ್ಲ ಮನೆಗಳಿಗೂ ಹಾಕಿಸಿಕೊಟ್ಟೆ, ಆಮೇಲೆ ಏನಾಗುತ್ತದೆ ಮುಂದೆ ನೋಡಿಕೊಳ್ಳೋಣವೆಂದು ತೀರ್ಮಾನ ಮಾಡಿ ಹೆಂಚು ಹಾಕಿಸಿಕೊಟ್ಟೆ ಕಾರಣ ಆ ಮನೆಗಳ ಗೋಡೆ

ಮಣ್ಣಿನ ಗೋಡೆ ಹೆಂಚು ಹಾಕಿಸದಿದ್ದರೆ ಮನೆ ಸಮೇತ ಬಿದ್ದುಹೋಗುತ್ತದೆ ಇಂಥದ್ದಕ್ಕೆ ಅಧಿಕಾರಿಗಳ ಆದೇಶಕ್ಕೆ ಕಾಯ್ದರೆ ಖಂಡಿತ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಉಪಮುಖ್ಯಮಂತ್ರಿಗಳೇ, ತಾವು ಮಲೆನಾಡು ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಯಾವ ಅಧಿಕಾರಿಗಳ ಆದೇಶಕ್ಕಾಗಿ ಕಾಯಬೇಡಿ, ನೀವು ಮೊದಲು ಕೆಲಸವನ್ನು ಮಾಡಿಸಿ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆಂದು ಹೇಳಿದಿರಿ ಜವಾಬ್ದಾರಿ ಸರಿ ಆದರೆ ಈಗ ಕೆಲಸವಾಗಿದೆ, ಪೇಮೆಂಟ್ ಇನ್ನೂ ಆಗಿಲ್ಲ ಎಲ್ಲರೂ ನನ್ನ ಮನೆ ಬಾಗಿಲಲ್ಲಿ ಬಂದು ಕುಳಿತುಕೊಂಡು ಹೋಗುತ್ತಿದ್ದಾರೆ ದಯವಿಟ್ಟು ತಾವು ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು ಶಾಸಕರಿಗೆ ಬೇಜವಾಬ್ದಾರಿ ಇರುವುದಿಲ್ಲ ಸಮುದ್ರ ಕೊರೆತ ಇರುಬಹುದು, ಪ್ರಕೃತಿ ವಿಕೋಪವಿರಬಹುದು, ಇವು ಅಧಿಕಾರಿಗಳ ಆದೇಶವನ್ನು ಕಾಯುವುದಿಲ್ಲ ದಯವಿಟ್ಟು ಇಂಥದ್ದಕ್ಕೆಲ್ಲಾ ತಕ್ಷಣ ಹಣ ಬಿಡುಗಡೆ ಆಗಬೇಕು ನನ್ನ ಕ್ಷೇತ್ರದಲ್ಲಿ ಈ ಸಾರಿ ಇವತ್ತಿನವರೆಗೆ ಏನೂ ಕೊರೆತ ಇಲ್ಲ ಉಳ್ಳಾಲದಲ್ಲಿ ಕಾಗೇರಿಯವರ ಕ್ಷೇತ್ರದಲ್ಲಿ ವಿಪರೀತ ಸಮುದ್ರ ಕೊರೆತ ಇದೆ ಕಾಪೂವಿನಲ್ಲಿ, ಬೈಂದೂರಿನಲ್ಲಿ ಇದೆ ಅಲ್ಲಿ ಡಿ ಸಿ ಗಳು ನೋಡಿ ಆದೇಶ ಕೊಡುವಂಥ ಪರಿಸ್ಥಿತಿ ಬೇಡ ಅಗತ್ಯ ಇದ್ದಲ್ಲಿ ಶಾಸಕರೇ ಗೋಡೆಯನ್ನು ಹಾಕಿಸಬೇಕಾಗುತ್ತದೆ ನಂತರ ಅವರು ಹೋಗಿ ಇನ್ಸ್‌ಪೆಕ್ಷನ್‌ನ್ನು ಮಾಡಲಿ, ಕೆಲಸವಾಗಿರುವುದಕ್ಕೆ ಪೇಮೆಂಟ್ ಮಾಡುವುದನ್ನು ಮಾಡಲಿ ನಮ್ಮಲ್ಲಿ ಮಳೆ ಹೆಚ್ಚು ಆದರೆ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರು ಇರುವುದಿಲ್ಲ ಇದು ನಮ್ಮ ಪರಿಸ್ಥಿತಿ ನಾವು ಕಳೆದ ಬಾರಿ ಕೇಳಿದಾಗ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡುವುದಕ್ಕೆ ಹೇಳಲಿಲ್ಲ ಆದರೆ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡುವುದಕ್ಕೆ ಆಗುತ್ತದೆಯೆ? ಜಿಲ್ಲಾ ಪಂಚಾಯತಿಯಿಂದ 'ಮಾಡಿದರು ಮಾಡಲಿ ಅದು ಮಾನಿಟರಿಂಗ್ ಸೆಲ್ ಆದರೆ ಹಣ ಬಂದದ್ದು ಯಾವಾಗ? ಮಳೆ ಬಂದಾದ ಮೇಲೆ ಮಳೆ ಶುರುವಾದ ಮೇಲೆ ಹಣ ಬಂದರೆ ಏನು ಕೆಲಸವಾಗುತ್ತದೆ? ಇದು ಏನೂ ಪ್ರಯೋಜನವಾಗುವುದಿಲ್ಲ ಆದರೆ ನೀವು ಒಂದನ್ನು ಮಾಡಬೆಕು ಒಂದು ವೇಳೆ ನಮಗೆ ತಕ್ಷಣದಲ್ಲಿ ನೀರು ಕೊಡುವುದಕ್ಕೆ ಅಗತ್ಯವಿದ್ದರೆ ನಾವು ಕೆಲಸವನ್ನು ಮಾಡುವುದಕ್ಕೆ ತಕ್ಷಣ ಹಣ ಬಿಡುಗಡೆ ಮಾಡಿಸಬೇಕು ಮೊನ್ನೆ ಒಂದು ಕ್ಷೇತ್ರಕ್ಕೆ ಕೇವಲ ಎಂಟೂವರೆ ಲಕ್ಷ ರೂಪಾಯಿ ಬಂದದ್ದು 25 ಲಕ್ಷ ರೂಪಾಯಿ ಸಮುದ್ರ ಕೊರೆತಕ್ಕೆ ಅಂದರೆ 25 ಲಕ್ಷಕ್ಕಿಂತ ಹೆಚ್ಚು ಸಮುದ್ರ ಕೊರೆತವಾಗಬಾರದು 25 ಲಕ್ಷವೇ ಲಿಮಿಟ್ ಇದು ನೀಡ್

ಬೇಸ್ಡ್ ರೀತಿ ಇಲ್ಲ ಸಮುದ್ರ ಎಷ್ಟು ಕೊರೆಯುತ್ತದೆಯೋ ಅದಕ್ಕೆ ಸರಿಯಾಗಿ ಕೆಲಸವಾಗಬೇಕು ಆದರೆ ಇವರು 25 ಲಕ್ಷಕ್ಕೆ ಲಿಮಿಟ್ ಮಾಡಿದ್ದಾರೆ ಇನ್ನು ಫ್ಲಡ್ ಡ್ಯಾಮೇಜ್‌ನಲ್ಲಿ ನಮ್ಮ ಕ್ಷೇತ್ರಕ್ಕೆ 8 5 ಲಕ್ಷ ಮಾತ್ರ ಬಂದಿದೆ ದಯವಿಟ್ಟು ತಾವು ಇದರ ಬಗ್ಗೆ ಒಂದು ರಿವ್ಯೂ ಮೀಟಂಗನ್ನು ಮಾಡಿ ನಿಮ್ಮಲ್ಲಿ ಈಗ ಜಗದೀಶ್ ಶೆಟ್ಟರ್‌ರವರು ಹೇಳಿದರು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ನೀವು ಕಂಪ್ಯೂಟರ್‌ನಲ್ಲಿ ನೋಡಿಕೊಂಡು ಹೇಳುತ್ತೀರಿ ಏಕೆಂದರೆ ಅಲ್ಲಿ ದುಡ್ಡು ಇದೆ ಎಂದು ತೋರಿಸುತ್ತದೆ ಆದರೆ ಅಲ್ಲಿ ಕೆಲಸವಾಗಿದೆ ಆದರೆ ಪೇಮೆಂಟ್ ಆಗಿಲ್ಲ ದುಡ್ಡು ಅಲ್ಲಿಯೇ ಇದೆ ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಡದಿದ್ದರೆ ಇವರು ಹಣವನ್ನು ಪುನಃ ಕಳುಹಿಸುವುದಿಲ್ಲ ನೀವು ಕೆಲಸವೆಷ್ಟು ಆಗಿದೆಯೋ ಅದನ್ನು ನೋಡಿ ಹಣವನ್ನು ಬಿಡುಗಡೆ ಮಾಡಬೇಕೇ ಹೊರತು ಯುಟಿಲೈಸೇಷನ್ ಸರ್ಟಿಫಿಕೇಟ್‌ನ್ನು ಡಿ ಸಿ ಯವರು ಕೊಡದಿದ್ದರೆ ಹಣವನ್ನು ಎಲ್ಲಿ ಕೊಡುತ್ತಾರೆ? ಇದನ್ನೆಲ್ಲಾ ತಾವು ನೋಡಬೇಕು ದಯವಿಟ್ಟು ಇದರ ಬಗ್ಗೆ ಸ್ವಲ್ಪ ಆಲೋಚನೆಯನ್ನು ಮಾಡಬೇಕು ಇನ್ನು ಫ್ಲಡ್ ಡ್ಯಾಮೇಜ್ ಬಗ್ಗೆ ಫ್ಲಡ್ ಪ್ಯಾಕೇಜ್‌ನ್ನು ಯಾವ ರೀತಿಯಾಗಿ ನಾವು ಉಪಯೋಗ ಮಾಡಿಕೊಳ್ಳಬೇಕು ಎಂಬುದನ್ನು ಆಲೋಚನೆಯನ್ನು ಮಾಡಬೇಕಾಗುತ್ತದೆ ಡೀ-ಸಿಲ್ಟೇಶನ್ ಬಗ್ಗೆ ಹೇಳುವುದೇನೆಂದರೆ ಈ ಬಾರಿ ಮಾನ್ಯ ಉಪ ಮುಖ್ಯಮಂತ್ರಿಗಳು ಸಣ್ಣ ನೀರಾವರಿ ಇಲಾಖೆಗೆ ಬಹಳಷ್ಟು ಹಣವನ್ನು ಕೊಟ್ಟು ನಮಗೆ ವೆಂಟೆಡ್ ಡ್ಯಾಂ ಮಾಡಿಸುವುದಕ್ಕೆ ಹಣವನ್ನು ಕೊಟ್ಟಿದ್ದಾರೆ ಈ ಬಾರಿ ಹೈಯೆಸ್ಟ್ ಕೊಟ್ಟಿದ್ದಾರೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಆದರೆ ನದಿ ಏನಿದೆ, ಅದು ಭೂಮಿ ಮಟ್ಟಕ್ಕೆ ಬಂದಿದೆ ಕೇವಲ ಡ್ಯಾಂ ಅನ್ನು ಕಟ್ಟಿದರೆ ಸಾಕಾಗುವುದಿಲ್ಲ ಹೂಳು ಎತ್ತುವ ವ್ಯವಸ್ಥೆಯಾಗಬೇಕಾಗುತ್ತದೆ ಏಕೆಂದರೆ ರಿವರ್ ಬೆಡ್ ಬಹಳ ಮೇಲಕ್ಕೆ ಬಂದು ಬಿಟ್ಟಿದೆ ಅದನ್ನು ಮಾಡುವಂಥ ವ್ಯವಸ್ಥೆಯಾಗಬೇಕು ಈಗ ನೀವು ನೇತ್ರಾವತಿ ತಿರುವು ಎಂದು ಹೇಳಿ ಒಂದು ವೇಳೆ ಈ ಕಡೆಗೆ ತಿರುಗಿಸಿದರೆ ಅಲ್ಲಿಯೂ ನೀರಿಲ್ಲ, ಮೇಲೆಯೇ ನೀರು ಸಿಗದಿದ್ದಾಗ ನಮಗೆ ಹೊಡೆತ ಅಲ್ಲಿಂದ ಬರುತ್ತದೆ ಅಲ್ಲಿ ನಾವು ಉಪ್ಪು ನೀರಿನ ಅಣೆಕಟ್ಟುಗಳನ್ನು ಹಾಕಿಕೊಂಡು ಚೆಕ್‌ಡ್ಯಾಂ ಹಾಕುವಂಥ ವ್ಯವಸ್ಥೆಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ಏನು ಮಾಡುತ್ತಿದ್ದಾರೆ, ಅದಕ್ಕೆ ಒಂದು ರಿಕ್ವೆಸ್ಟ್ ಮಾನ್ಯ ಪ್ರಕಾಶ್‌ರವರೆ, ಕೃಷಿಯನ್ನು ಸಣ್ಣ ನೀರಾವರಿಯಲ್ಲಿ ಕ್ಲಬ್ ಮಾಡಿ ಒಳ್ಳೆಯ

ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಇಲಾಖೆಯಿಂದ ಎನ್ ಜಿ ಓ ಗಳನ್ನು ತೆಗೆಯಬೇಕು ಏಕೆಂದರೆ ಈಗ ವಾಟರ್‌ಶೆಡ್ ಪ್ರೋಗ್ರಾಂ ಏನಾಗುತ್ತಿದೆ ಎಂಬುದು ನಿಮಗೆಲ್ಲಾ ಗೊತ್ತಾಗುತ್ತಿದೆ ಅದರ ಬಗ್ಗೆ ಸ್ವಲ್ಪ ಹೆಚ್ಚು ಗಮನವನ್ನು ಹರಿಸಿದರೆ ನೀವು ತಿರುವ ಮಾಡುವುದಕ್ಕಿಂತ ಕೋಲಾರದಲ್ಲಿ ವಾಟರ್‌ಶೆಡ್ ಪ್ರೋಗ್ರಾಂನಲ್ಲಿ ಹೆಚ್ಚು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ ಮಳೆ ಬರುವುದಕ್ಕೆ ಮುಂಚಿತವಾಗಿಯೇ ನೀವು ಮಳೆಯಿಂದ ಹಾನಿಯಾಗಬಹುದಾದ ಏರಿಯಾಗಳನ್ನು ಐಡೆಂಟಿಫೈ ಮಾಡಬೇಕು ಮಳೆ ಬಂದು ಎಲ್ಲಿ ಡ್ಯಾಮೇಜ್ ಆಗುತ್ತದೆ, ಅದು ಆದಮೇಲೆ ಹೋಗಿ ಅಲ್ಲಿ ಕೆಲಸವನ್ನು ಮಾಡುವುದು ಸರಿಯಲ್ಲ ಕಳೆದ ಬಾರಿಯದ್ದನ್ನು ನೋಡಿ ಮುಂದೆ ಇಂಥದ್ದು ಮರುಕಳಿಸುವ ಸಾಧ್ಯತೆ ಇದೆ ಎಂದು ಆ ಬಗ್ಗ ಆಲೋಚನೆಯನ್ನು ಮಾಡಿ ಕೆಲಸ ಮಾಡುವುದನ್ನು ಬಿಟ್ಟು ಹಾನಿಯಾದ ಮೇಲೆ ಅಲ್ಲಿ ಹೋಗಿ ಕೆಲಸ ಮಾಡಿ ಸರಿಪಡಿಸಿ ಸಮಸ್ಯೆ ಪರಿಹಾರ ಮಾಡುವುದಕ್ಕೆ ಹೋದರೆ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಸತ್ತವರಿಗೆ ಇಷ್ಟು ಎಂದು ಫಿಕ್ಸ್ ಮಾಡಿದಂತಾಗುತ್ತದೆ ಕೇಂದ್ರ ಸರ್ಕಾರದವರು ಸ್ವಲ್ಪ ಬದಲಾವಣೆಯನ್ನು ಮಾಡಿದ್ದರಿಮದ ಇನ್ನೂ ಸ್ವಲ್ಪ ಸಹಾಯ ಆಗಬಹುದು ಇಲ್ಲದಿದ್ದರೆ ಕೊಟ್ಟಿಗೆ ಬಿದ್ದರೆ ಇಲ್ಲ, ದನಕರುಗಳು ಸತ್ತರೆ ಇಲ್ಲ ಎನ್ನುವ ಹಾಗೆ ಇತ್ತು ಈಗ ಬದಲಾವಣೆಯನ್ನು ಮಾಡಿದ್ದರಿಂದ ಸ್ವಲ್ಪ ಇಂಥದ್ದಕ್ಕೆ ಸಹಾಯವಾಗುತ್ತದೆ ಅಂದರೆ ಇಂಥದ್ದು ಘಟನೆ ಆಗಲಿ ಎಂದು ಹೇಳುತ್ತಿಲ್ಲ ಮೊನ್ನೆ ದಿವಸ ನನ್ನ ಕ್ಷೇತ್ರದಲ್ಲಿಯೇ ಒಂದು ಮರ ಮನೆಯ ಮೇಲೆ ಬಿದ್ದು ಹೊರಗೆ ಬರಲು ಪ್ರಯತ್ನ ಮಾಡಿದ ಒಬ್ಬ ಸತ್ತು ಹೋದ ಆಮೇಲೆ ಇನ್ನೊಬ್ಬ ಎಲೆಕ್ಟ್ರಿಸಿಟಿ ಲೈನ್ ವೈರ್ ಕಟ್ ಆಗಿ ಸತ್ತು ಹೋದ ಪಾಪ ಅವನಿಗೆ ಅದು ಕರೆಂಟ್ ಲೈವ್‌ವೈರ್ ಎಂದು ಗೊತ್ತಿಲ್ಲ, ಅದನ್ನು ತೆಗೆದುಹಾಕಲು ಮುಟ್ಟಿ ತಕ್ಷಣ ಕುಸಿದುಬಿದ್ದು ಸತ್ತು ಹೋದ ಇಂಥ ದುರಂತಗಳು ಕರಾವಳಿಯಲ್ಲಿ ಬಹಳ ಆಗುತ್ತಿವೆ ಮಲೆನಾಡು ಪ್ರದೇಶದಲ್ಲಿ ಇಂಥದ್ದು ಜಾಸ್ತಿಯಾಗುತ್ತಿವೆ ಈಗ ವಿಶ್ವನಾಥ್‌ರವರು ಮಾತನಾಡುವಾಗ ಕಳೆದ ಮೂರು ವರ್ಷದ ಆಶ್ವಾಸನೆ ಬಗ್ಗೆ ಹೇಳಿದರು ನಾನು ಮೂರು ವರ್ಷದ್ದು ಹೇಳುವುದಿಲ್ಲ ನಾನು ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದಾಗ ಮತ್ತು ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಯಾವ ರೀತಿ ಕೆಲಸಗಳು ಆಯಿತೋ ಅದರ ಬಗ್ಗೆ ಈಗಲೂ ಕೂಡ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಅದೇ ರೀತಿ ಕೆಲಸಗಳು ಈಗ

ಆಗಬೇಕಾಗುತ್ತದೆ ಆ ರೀತಿ ಹಣವನ್ನು ಬಿಡುಗಡೆ ಮಾಡಬೇಕು ಮತ್ತು ಶಾಸಕರನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳಿ ಅವರವರ ಕ್ಷೇತ್ರದಲ್ಲಿ ಏನಾಗಬೇಕು ಎಂಬುದು ಅವರಿಗೆ ಗೊತ್ತಿರುತ್ತದೆ ಸುಮ್ಮನೆ ಯಾರೂ ಕೆಲಸವನ್ನು ಮಾಡಿಸುವುದಕ್ಕೆ ಹೋಗುವುದಿಲ್ಲ ಸಮುದ್ರ ಕೊರೆತಕ್ಕೆ ಸಂಬಂಧ ಪಟ್ಟಂಥದ್ದನ್ನು ಅಥವಾ ನದಿ ದಂಡೆಗೆ ಸೇರಿದಂಥ ಕೆಲಸವನ್ನು ಯಾರೂ ಸುಮ್ಮನೇ ಮಾಡಿಸುವುದಕ್ಕೆ ಹೋಗುವುದಿಲ್ಲ ಗುತ್ತಿಗೆದಾರರಿಗೋಸ್ಕರ ಕೆಲಸವಲ್ಲ, ಕೆಲಸಕ್ಕೋಸ್ಕರ ಕೆಲಸವನ್ನು ಮಾಡುವುದಕ್ಕಾಗಿ ಗುತ್ತಿಗೆದಾರರನ್ನು ಇರುವ ವ್ಯವಸ್ಥೆಯಾಗಬೇಕೇ ಹೊರತು ಈ ಕೆಲಸವನ್ನು ಮಾಡಿಸಲು ನಾವು ಸರ್ಕಾರವನ್ನು ಕೇಳಿ ಮಾಡುವಂಥ ಪರಿಸ್ಥಿತಿ ನಿರ್ಮಾಣವಾದರೆ ಖಂಡಿತ ನಮ್ಮ ಪರಿಸ್ಥಿತಿ ಸರಿಯಾಗುವುದಿಲ್ಲ ಇನ್ನು ಅಲ್ಲಿ ರಸ್ತೆಗಳಲ್ಲಿ ಮೈನ್ ಲಾರಿಗಳು ಓಡಾಡುವುದನ್ನು ಗೃಹ ಸಚಿವರಾದ ಮಾನ್ಯ ಪ್ರಕಾಶ್‌ರವರು ನಿಲ್ಲಿಸಬೇಕಾಗುತ್ತದೆ ಇಲ್ಲದಿದ್ದರೆ ಇನ್ನು ಸ್ವಲ್ಪ ದಿವಸದಲ್ಲಿಯೇ ಮಳೆಗಾಲವಿರಲಿ, ಬೇರೆ ಕಾಲಗಳಲ್ಲಿಯೂ ಆ ರಸ್ತೆಗಳ ಮೂಲಕ ನಾವು ಮನೆಯಿಂದ ಬ್ರಹ್ಮಾವರ, ಉಡುಪಿಗೆ ಬರುವುದಕ್ಕೂ ಆಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಅಷ್ಟು ರಸ್ತೆ ಹಾಳಾಗಿದೆ ಮೊನ್ನೆಯವರೆಗೂ ಆ ರೀತಿ ಇರಲಿಲ್ಲ 'ಅಲ್ಲಿ ಸಡನ್-ಆಗಿ ಲಾರಿಗಳಲ್ಲಿ ಹಾಕಿರುವ ತೂಕದ ಬಗ್ಗೆಯೂ ಚೆಕ್ ಮಾಡುವ ವ್ಯವಸ್ಥೆ ಅಲ್ಲಿ ಇಲ್ಲ ಇದೆಂಥ ದುರಂತ ಬಂತೋ ನನಗೆ ಗೊತ್ತಿಲ್ಲ ಅದು ಏಕೆ ಈ ರೀತಿ ಮಾಡುತ್ತೀರೋ ಗೊತ್ತಿಲ್ಲ ಒಬ್ಬ ವ್ಯಕ್ತಿಗೆ ಸಹಾಯ ಮಾಡುವುದಕ್ಕೆ ಹೋಗಿ ಇಡೀ ಸರ್ಕಾರದ ವ್ಯವಸ್ಥೆ ಹಾಳು ಮಾಡಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣ ಆದದ್ದನ್ನು ನಾವು ಕಾಣುತ್ತಿದ್ದೇವೆ ಅದಕ್ಕೋಸ್ಕರ ನಾನು ಹೇಳಿದೆ ದಯವಿಟ್ಟು ನೀವು ಕೆ ಆರ್ ಡಿ ಸಿ ಎಲ್ ಗೆ ಪ್ಯಾಕೇಜ್‌ನ್ನು ಕೊಡಲೇಬೇಡಿ ಅದನ್ನು ನೀವು ನೇರವಾಗಿ ಲೋಕಲ್‌ನಲ್ಲಿ ಇರುವಂಥವರಿಗೆ ಕೊಡಿ ಇನ್ನು ರಸ್ತೆಗಳ ಕೆಲಸವನ್ನು ಕೊಡುವಾಗ ಕಿಲೋ ಮೀಟರ್ ವೈಸ್ 8 5 ಲಕ್ಷ, 10 5 ಲಕ್ಷ ಎಂದು ನೀವು ಅದನ್ನು ಮಾಡಿಕೊಳ್ಳಿ ಆದರೆ ಇದರಿಂದ ಏನು ಮಾಡುವುದಕ್ಕೆ ಆಗುತ್ತದೆ ನೀವು ಬೇಕಾದರೆ ಆರ್ ಡಿ ಪಿ ಆರ್ ರೋಡ್ಸ್ ಮತ್ತು ಪಿ ಡಬ್ಲ್ಯೂಡಿ ರೋಡ್ಸ್, ಇವೆರಡನ್ನೂ ಸೇರಿಸಿ ರಾಜ್ಯ ಮಟ್ಟದಲ್ಲಿ ಪ್ಲಾನ್ ಡೆವಲಪ್‌ಮೆಂಟ್‌ಗೋಸ್ಕರ ಒಂದು ಕಾರ್ಯಕ್ರಮವನ್ನು ಹಾಕಿ ಅಲ್ಲಿಗೆ ಹೋದ ಕೂಡಲೇ ಒಬ್ಬೊಬ್ಬರಿಗೆ ಇಂತಿಷ್ಟು ಎಂದು ಹಂಚಿಕೊಳ್ಳುವಂಥ ಪರಿಸ್ಥಿತಿ ಬೇಡ ಇನ್ನು ಸಾಲ ಮನ್ನಾ ಮಾಡಿರುವ ಬಗ್ಗೆ ಹೇಳುವುದಾದರೆ, 25 ಸಾವಿರ ರೂಪಾಯಿಗಳ ಸಾಲ ಮನ್ನಾವನ್ನು

ನೀವು ಮಾಡಿದ್ದೀರಿ ಸಾಲ ಮನ್ನಾ ಆಗುತ್ತದೆ ಎಂದು ಹೇಳಿ ಉಳಿದ ಸಾಲವನ್ನು ಕಟ್ಟುವುದಕ್ಕೆ ಬೇರೆ ಕಡೆಯಿಂದ ರೈತರು ಚಿನ್ನ ಅಡವಿಟ್ಟು ಸಾಲವನ್ನು ತಂದು ಕಟ್ಟಿದರು ಈಗ ಪರಿಸ್ಥಿತಿ ಏನಾಯಿತು? ಸರ್ಕಾರ ಸಹಕಾರ ಸಂಘಗಳಿಗೆ, ಬ್ಯಾಂಕ್‌ಗಳಿಗೆ ಹಣವನ್ನು ಕೊಡದೇ ಇರುವುದರಿಂದ ಈ ಸಂಘಗಳವರು ಮತ್ತು ಬ್ಯಾಂಕ್‌ನವರು ರೈತರಿಗೆ ಪುನಃ ಸಾಲವನ್ನು ಕೊಡಲಿಲ್ಲ ಈಗ 4% ಪರ್ಸೆಂಟ್ ಹೋಗಿ 15%, 20% ಬಡ್ಡಿಗೆ ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ ಆದುದರಿಂದ ತಾವು ದಯವಿಟ್ಟು ತಕ್ಷಣದಲ್ಲಿಯೇ ಸಹಕಾರ ಸಂಘಗಳಿಗೆ ಕೊಡಬೇಕಾದ ಹಣವನ್ನು ರೀ-ಇಂಬರ್ಸ್ ಮಾಡಿ ಪುನಃ ರೈತರಿಗೆ ಸಾಲ ಸಿಕ್ಕುವ ಹಾಗೆ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ನಿನ್ನೆ ಟಿ ವಿ ಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರುವುದನ್ನು ನಾನು ನೋಡಿದೆ ವರದಾ ನದಿಯಿಂದ ನೀರು ಹರಿದು ಬಂದು ಕೆಳಗಿನ ಎಲ್ಲಾ ಪ್ರದೇಶ ಮುಳುಗಡೆ ಆಗಿದೆ ನಮ್ಮಲ್ಲಿ ರೈತರು ಹಾಕಿದ ಬೀಜವೇ ತೇಲಿಕೊಂಡು ಹೋಗುವಂಥ ಪರಿಸ್ಥಿತಿ ಇದೆ ಗೊಬ್ಬರ ಮತ್ತು ಪೆಸ್ಟಿಸೈಡ್ಸ್ ಹಾಕಿದ್ದೆಲ್ಲ ಹೋಗುವಂಥ ಪರಿಸ್ಥಿತಿ ಇದೆ ಇದಕ್ಕೆಲ್ಲ ಸರಿಯಾದಂಥ ಒಂದು ವ್ಯವಸ್ಥೆಯನ್ನು ಮಾಡದೇ ಕೇವಲ ನಾವು ಚರ್ಚೆಯನ್ನು ಪ್ರತಿ ವರ್ಷ ಫ್ಲಡ್ ಬಂದಾಗ, ಬರ ಬಂದಾಗ ಮಾಡುವಂಥದ್ದು ಸರಿಯಲ್ಲ ಕಳೆದ ನಾಲ್ಕೈದು ವರ್ಷಗಳ ಹಿಂದೆ ಯಾವ ರೀತಿಯಾಗಿ ಕೆಲಸವನ್ನು ಮಾಡಿದ್ದರೋ ಅದೇ ರೀತಿ ಕೆಲಸವನ್ನು ಪುನಃ ಮಾಡಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ ಇನ್ನು ಮುಂದೆ ಕೇವಲ ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುವುದು ಆಗಬಾರದು ಹಣ ಕೊಟ್ಟಿದ್ದಕ್ಕೆ ಕೆಲಸವೆಷ್ಟು ಆಗಿದೆ, ಆ ಕ್ಷೇತ್ರದಲ್ಲಿ ಎಂದು ನೀವು ಕೇವಲ ಅಧಿಕಾರಿಗಳನ್ನು ಕೇಳುವುದಲ್ಲ ನೀವು ಶಾಸಕರನ್ನು ಕರೆದು ಚರ್ಚೆಯನ್ನು ಮಾಡಿ ಅಧಿಕಾರಿಗಳಿಗೆ ಆದೇಶವನ್ನು ಕೊಡುವ ವ್ಯವಸ್ಥೆಯನ್ನು ಮಾಡದೇ ಇದ್ದರೆ, ಪುನಃ ಸರ್ಕಾರಕ್ಕೆ ಉಳಿತಾಯ ಮಾಡುವ ವ್ಯವಸ್ಥೆಯನ್ನು ಮಾಡಬೇಡಿ ಹಣ ಕೊಟ್ಟು ಕೆಲಸವಾಗುವವರೆಗೆ ಅದನ್ನು ಮಾನಿಟರಿಂಗ್ ಮಾಡಿ ಈಗ ಕೆಲಾಮಿಟಿ ಫಂಡ್‌ಗೆ ಯಾರು ಅಧ್ಯಕ್ಷರೋ ನನಗೆ ಗೊತ್ತಿಲ್ಲ ದಯವಿಟ್ಟು ಇದರ ಬಗ್ಗೆ ಮಾಹಿತಿ ಎಷ್ಟು ಬಂದಿದೆ ಎಂದು ನನಗೆ ಗೊತ್ತಿಲ್ಲ ಅದರ ಬಗ್ಗೆ ಮಾಹಿತಿಗಳನ್ನು ಸದನದಲ್ಲಿ ಇಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ (ಸೊರಬ) – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೆಗ್ಡೆಯವರು ಒಂದು ಮಾತನ್ನು ಹೇಳಿದರು ಅದಕ್ಕೆ ಒಂದು ವಿಚಾರವನ್ನು ಹೇಳಿಬಿಡುತ್ತೇನೆ ಮಾನ್ಯ ಹೆಗ್ಡೆಯವರು ಕಡಲ ಕೊರೆತದ ಬಗ್ಗೆ ಏನು ಮಾತನಾಡಿದರು, ಅದಕ್ಕೆ ಕಡಲಿನಿಂದ 500 ಮೀಟರ್‌ವರೆಗೆ ನಿಜವಾಗಿ ಕಟ್ಟಡಗಳನ್ನು ಕಟ್ಟುವುದಕ್ಕೆ permission ಕೊಡಬಾರದು ಎನ್ನುವ ಕಾನೂನು ಇದೆ ಆದರೆ ಅನಿವಾರ್ಯ ಪರಿಸ್ಥಿತಿಯಿಂದ ತಲತಲಾಂತರದಿಂದ ಕಟ್ಟಿಕೊಂಡು ಬಂದಿದ್ದಾರೆ ಈಗ ಅಲ್ಲಿ ತಾವು rehabilitation work ಅಥವಾ ರಸ್ತೆಗಳನ್ನು ಮಾಡಬೇಕೆಂದು ಇದ್ದೀರಿ ಅಲ್ಲಿ ಕಡಲಿನಿಂದ ಸುಮಾರು 2,000 ಮೀ ಬಿಟ್ಟುಬಿಡಬೇಕು ಕಡಲ ಕೊರೆತಕ್ಕೆ ನಾವು ಏನೇ artificial barriers ಮಾಡಿದರೂ ಕೂಡ ಕಡಲು ತನ್ನ ಹಕ್ಕನ್ನು ಬಿಡುವುದಿಲ್ಲ ಏಕೆಂದರೆ global warming ಎನಿದೆ, ಅದರ ಪರಿಣಾಮವಾಗಿ sea is almost raising ಈಗ ನಾವೇನು ಉಳ್ಳಾಲದ ಕಡಲ ಕೊರೆತದ ಬಗ್ಗೆ ಮಾತನಾಡುತ್ತಿದ್ದೇವೆ, ಅಲ್ಲಿ ಕಡಲ ಕೊರೆತ 10 ವರ್ಷಕ್ಕಿಂತ ಮೊದಲಿನಿಂದ ಇತ್ತು ಮೊದಲು ಒಂದೂವರೆ ಕಿ ಮೀ ಸಮುದ್ರ ಒಳಗಡೆ ಇತ್ತು ಈಗ ಕಡಲ ಕೊರೆತ ಒಂದೂವರೆ ಕಿ ಮೀ ದಡಕ್ಕೆ ಬಂದಿದೆ 500 ಮೀಟರ್ ಕಡಲಿನಿಂದ ಬಿಡಬೇಕು ಎನ್ನುವಂತಹ ವಿಚಾರವನ್ನು ರೆವಿನ್ಯೂ ಇಲಾಖೆಯವರು ಗಮನದಲ್ಲಿ ಇಡಬೇಕು ಹಿಂದೆ ತಲತಲಾಂತರದಿಂದ ಬಂದಿರುವಂತಹ ಮೊಗವೀರ ಮೀನುಗಾರರಿರಬಹುದು, ಮತ್ತೊಬ್ಬರು ಇರಬಹುದು, ಇವರು ಮಾಡುವುದು ಬೇರೆ Commercial activities building ಗಳಿಗೆ ಅಥವಾ ರಸ್ತೆಗಳನ್ನು ಹೊಸದಾಗಿ ಮಾಡುವುದಕ್ಕೆ permission ಏನು ಕೊಡುತ್ತಿದ್ದೇವೆ, actually we do not have permission ಆ ರೀತಿ ನಮಗೆ permission ಕೊಡುವುದಕ್ಕೆ ಹಕ್ಕಿಲ್ಲ 500 ಮೀ ಗಿಂತ ಒಳಗೆ permission ಕೊಡುವುದು, it is against the law ನಾವೇನು ಮಾಡುತ್ತೇವೆಂದರೆ ಇದೆಲ್ಲವನ್ನು ಕೂಡ ಸೇರಿಸಿಕೊಂಡು development ಮಾಡುತ್ತೇವೆ, ನಂತರ ಅದು ಹಾಳಾದ ತಕ್ಷಣ ಹೇಳುತ್ತೇವೆ ಅಲ್ಲಿ ಆಗುವಂತಹ ಕಡಲ ಕೊರೆತವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಈಗಾಗಲೇ ಇರುವಂತಹ ಕಟ್ಟಡಗಳು ಏನಿವೆ, ಅದೇ size ನಲ್ಲಿ ಮತ್ತೆ ಕಟ್ಟುವುದಕ್ಕೆ ಬರುತ್ತದೆ ಆದರೆ ಹೊಸದಾಗಿ ಕಟ್ಟಡಗಳನ್ನು ಕಟ್ಟುವುದಕ್ಕಾಗುವುದಿಲ್ಲ ಈ ಸಮುದ್ರ ತಡೆಗೋಡೆ ಸಮಸ್ಯೆಗೆ

ಅಲ್ಲಿ ಕಲ್ಲು ಹಾಕುವುದಕ್ಕೆ ಹೋದಾಗ ರಸ್ತೆಗಳು ಪುನಃ ಹಾಳಾಗುತ್ತವೆ ಇದು ಒಂದರೆ ಹಿಂದೆ ಒಂದು ಸಮಸ್ಯೆಗಳು ದೊಡ್ಡದಾಗುತ್ತಾ ಹೋಗುತ್ತದೆ ಆದರೆ ಸಮುದ್ರ ಪಕ್ಕದಲ್ಲಿ glass factory ಗೆ ಮರಳನ್ನು ತೆಗೆಯುತ್ತಾರಲ್ಲ, ಅದನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ಅದನ್ನು ನಿಲ್ಲಿಸಬೇಕಾಗುತ್ತದೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ ಅದನ್ನು ನಿಲ್ಲಿಸಬೇಕು ಇರುವಂತಹ ಕಟ್ಟಡಗಳಿಗೆ ಒಂದು ಕಡೆ ನದಿಯಿದೆ, ಇನ್ನೊಂದು ಕಡೆ ಸಮುದ್ರ ಇದೆ, ಆ ರೋಡ್ ನಿಲ್ಲುತ್ತದೆಯಾ? ನಿಲ್ಲುವುದಕ್ಕೆ ಸಾಧ್ಯವೇ ಇಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಧ್ಯ ನಿಲ್ಲುವುದಿಲ್ಲ ಅದರ ಬಗ್ಗೆ ಅಧಿಕಾರಿಗಳಿಗೆ ಹೇಳಿದರೆ ಶಿಫ್ಟ್ ಮಾಡಿಸಬೇಕು ಎಂದು ಹೇಳುತ್ತಾರೆ ಶಿಫ್ಟ್ ಮಾಡಿಸಿದರೆ ಸಮುದ್ರ ಅಲ್ಲೆ ನಿಲ್ಲುತ್ತದೆಯೇ? ಮುಂದೆ ಬರುತ್ತಾ ಇರುತ್ತದೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ ಮುಂದೆ ಬರುತ್ತದೆ, ಅದಕ್ಕೆ ದಯಮಾಡಿ 500 ಮೀಟರ್ ಇರಬೇಕೆಂದು National Law ಇದೆ International Law ಕೂಡ ಇದೆ You are not supposed to give any permission and development upto 500 mts Land encroachment ಮತ್ತು ಮತ್ತೊಂದರ ಬಗ್ಗೆ ಏನು ಪ್ರಸ್ತಾಪ ಮಾಡುತ್ತೇವೆ, ಅದೇ ರೀತಿ ಕಡ್ಡಾಯವಾಗಿ ಇದರ ಬಗ್ಗೆ ಕೂಡ ಮಾಡಿದರೆ ಮುಂದೆ ಸಮಸ್ಯೆಗಳು ಬರದ ಹಾಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಅತಿವೃಷ್ಟಿ ಏನಾಗಿದೆ, ಒಂದು ಕಡೆ ಮಳೆ ಇದ್ದರೆ, ಇನ್ನೊಂದು ಕಡೆ ಮಳೆ ಇಲ್ಲ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ವಿಚಿತ್ರವಾಗಿದೆ ಒಂದು ಕಡೆ ಸರ್ಕಾರ, ಇನ್ನೊಂದು ಕಡೆ ದೇವರು ಈ ಎರಡು ಪರಿಸ್ಥಿತಿಯಲ್ಲಿ ರೈತರಾದ ನಾವು ಸಿಕ್ಕಿಹಾಕಿಕೊಂಡಿದ್ದೇವೆ ಅತಿವೃಷ್ಟಿಯಿಂದ ಹಾನಿಯಾಗಿ ಇವತ್ತು ಮನೆಗಳು ಬಿದ್ದುಹೋಗಿವೆ ಅಲ್ಲಿ ಅವರಿಗೆ ಯಾರೂ ದುಡ್ಡು ಕೊಡುವವರಿಲ್ಲ, ಅವರನ್ನು ಯಾರೂ

ನೋಡುವವರು ದಿಕ್ಕಿಲ್ಲ ಅಲ್ಲಿ ಮನೆಗಳು ಬಿದ್ದಿವೆ, ಯಾರಾದರೂ ಮಂತ್ರಿಗಳು ಹೋಗಿ visit ಮಾಡಿದ್ದಾರೆ? ಇದರ ಬಗ್ಗೆ ಯಾರೂ ಚಿಂತನೆ ಮಾಡುತ್ತಿಲ್ಲ ಬಿತ್ತನೆ ಬೀಜ, ಬಿತ್ತನೆ ಬೀಜದ ಬಗ್ಗೆ ಎಲ್ಲರೂ ಮಾತನಾಡಿದರು ಬಿತ್ತನೆ ಬೀಜ ಎಷ್ಟು ಸಿಗಬೇಕೋ ಅಷ್ಟು ಸಿಗುತ್ತಿಲ್ಲ ಹೋದ ಬಾರಿ ಬೀದರ್‌ನಲ್ಲಿ ಕಳಪೆ ಉದ್ದಿನ ಬೀಜವನ್ನು ಕೊಟ್ಟಿದ್ದಾರೆ ಅದಕ್ಕೆ ಇವತ್ತಿನವರೆಗೂ ಪರಿಹಾರ ಸಿಕ್ಕಿಲ್ಲ ಆ ರೈತರೆಲ್ಲಾ ಸತ್ತು ಹೋದರು ಇದಕ್ಕೆ ರೈತರಿಗೆ ಪರಿಹಾರ ಕೊಡಿ ಎಂದು ಕೇಳಿದ್ದೆ ಆಗ ಬಿತ್ತನೆ ಬೀಜಕ್ಕೆ ಪರಿಹಾರ ಕೊಡುತ್ತೇವೆಂದು ಹೇಳಿದ್ದರು ಆದರೆ ಏನೂ ಪರಿಹಾರವಿಲ್ಲ ಇವತ್ತಿಗೂ ಬಿತ್ತನೆ ಬೀಜದ ಬಗ್ಗೆ ಕೇಳುವಂತಹ ಪರಿಸ್ಥಿತಿಯಲ್ಲಿ ಯಾರೂ ಇಲ್ಲ ಒಂದು ಕಡೆ ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳುತ್ತಾರೆ, ಪಾಪದ ಹಣದಲ್ಲಿ ನಾವು ಸರ್ಕಾರವನ್ನು ನಡೆಸುವುದಿಲ್ಲ ಪಾಪದ ಹಣ ಎಂದರೆ ಯಾವುದು? ಸಾರಾಯಿ ಬಂದ್ ಮಾಡಿದ್ದು ಆದರೆ ಬಾಟಲ್‌ಗಳಲ್ಲಿ ಸಿಗುತ್ತದೆಯಲ್ಲ, ಅದನ್ನು ಕುಡಿಯುತ್ತಾರಲ್ಲ, ಅದು ಯಾವ ಹಣ? ಅದು ಪಾಪದ ಹಣವಲ್ಲವೇ? ಬಾಟಲುಗಳಿಂದ ದೊಡ್ಡ ದೊಡ್ಡ ಕಂಪನಿಗಳಿಗೆ ಲಾಭವಾಗುತ್ತದೆಯಲ್ಲ, ಅದು ಪಾಪದ ಹಣವಲ್ಲ ಇದಾದರೆ ಪಾಪದ ಹಣ ಮೊದಲು ನಾಲ್ಕು ರೂಪಾಯಿ ಕೊಟ್ಟು ಕುಡಿಯುತ್ತಿದ್ದರು, ಈಗ 20 ರೂಪಾಯಿ ಕೊಟ್ಟು ಕುಡಿಯುತ್ತಿದ್ದಾರೆ ಇದು ಪಾಪದ ಹಣವಲ್ಲವೇ? ಇದೇನು ನಡೆಯುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ ನೀವು ಪೂರ್ತಿ ಬಂದ್ ಮಾಡಿ ಬಹಳ ಸಂತೋಷ ಬೇರೆ ಸಾರಾಯಿ ಏನು ಕುಡಿಯುತ್ತಾರೆ, ಅದನ್ನು ಮಾಡುವಂತಹ ಕಂಪನಿಗಳು ಏನಿವೆ, ಅದನ್ನು ಪೂರ್ತಿ ಬಂದ್ ಮಾಡಿ ದೊಡ್ಡ ದೊಡ್ಡ ಕಂಪನಿಗಾದರೆ ಅಧಿಕಾರ ಇದೆ ಆದರೆ ಸಣ್ಣ ಸಣ್ಣ ಚಿಲ್ಲರೆಯಾಗಿ ಮಾರಾಟ ಮಾಡುವವರಿಗೆ ಮಾತ್ರ ಬಂದ್ ಮಾಡಿದ್ದೀರಿ ಅವರೆಲ್ಲ ಬೀದಿಗೆ ಹೋದರು, ಅವರಿಗೆ ದೇವರೇ ಗತಿ ಇದರಿಂದ ಯಾರಿಗೆ ಲಾಭವಾಗಿದೆ? ಸಣ್ಣ ಸಣ್ಣವು ಹಾಳಾಗಿ ಹೋದರು, ಅದು ದೊಡ್ಡವರಿಗೆ ಲಾಭವಾಗಿದೆ ಮೊದಲು ನಾಲ್ಕು ರೂಪಾಯಿ ಕೊಟ್ಟು ಕುಡಿಯುವವನು ಈಗ 20 ರೂಪಾಯಿ ಕೊಟ್ಟು ಕುಡಿಯುತ್ತಾನೆ ಇದು ಪಾಪದ ಹಣವಲ್ಲವೇ? ಇದೂ ಪಾಪದ ಹಣ ಪಾಪದ ಹಣದಲ್ಲಿ ಸರ್ಕಾರ ನಡೆಸದೇ ಇನ್ನ್ಯಾವುದರಲ್ಲಿ ಸರ್ಕಾರವನ್ನು ನಡೆಸುತ್ತಿದ್ದೀರಿ? ಪಾಪದ ಹಣದಲ್ಲಿಯೇ ನಡೆಸುತ್ತಿದ್ದೀರಿ ಇದೇನು ಪವಿತ್ರವಾದ ಹಣವೇ? ಏಕೆ ಹೀಗೆ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ ತಾವು ಸಾಲ ಮನ್ನಾ

ಮಾಡಿದಿರಿ ಅದರ ಬಗ್ಗೆ ಕೂಡ ಎರಡು ಮಾತನಾಡಬೇಕೆಂದು ನಾನು ನಿಂತಿದ್ದೇನೆ ನಾವು ಈಗ ನೋಡುತ್ತಿದ್ದೇವೆ, ನಾಲ್ಕು ರೂಪಾಯಿ ಕೊಟ್ಟು ಕುಡಿಯುತ್ತಿದ್ದವನು, ಪಾಪ ಎಷ್ಟು ಆರಾಮಾಗಿ ಇದ್ದ ಆದರೆ ಅದನ್ನು ಇವರು ಬಂದ್ ಮಾಡಿದ್ದಾರೆ, ಈಗ ಮನೆಯಲ್ಲಿ ಸಾಲ ಮಾಡಿ ತಂದು ಈಗ ಅವನ ಪರಿಸ್ಥಿತಿ ಗಂಭೀರವಾಗಿದೆ ಮನೆಗಳನ್ನು ಹಾಗೂ ಹೊಲಗಳನ್ನು ಮಾರಿಕೊಳ್ಳುತ್ತಿದ್ದಾರೆ ಏನು ಉದ್ಧಾರವಾಯಿತು? ಈ ಸಾರಾಯಿ ಬಂದ್ ಮಾಡಿದ್ದರಿಂದ ಯಾರಿಗೆ ಲಾಭವಾಯಿತು? ಸಣ್ಣ ಸಣ್ಣವರು ಉಳಿದರಾ? ಸಣ್ಣವರು ಏನೂ ಉಳಿದಿಲ್ಲ ಎಲ್ಲವನ್ನು ಸಂಪೂರ್ಣವಾಗಿ ಬಂದ್ ಮಾಡಿ, ಆಗ ನಿಮಗೆ ಶಹಭಾಷ್ ಹೇಳುತ್ತೇನ ನಿಜವಾಗಿ ಬಂದ್ ಮಾಡುವುದಿಲ್ಲದಿದ್ದರೆ ಎಲ್ಲಾ ಬಂದ್ ಮಾಡಿ ದೊಡ್ಡವರೂ ಕುಡಿಯಬಾರದು, ಸಣ್ಣವರೂ ಕುಡಿಯಬಾರದು ದೊಡ್ಡ ದೊಡ್ಡ ಕಂಪನಿಗಳಿಗೆ ಲಾಭ ಎಷ್ಟಾಗುತ್ತದೆ? ಇದನ್ನು ಬಂದ್ ಮಾಡಿರುವುದರಿಂದ ಇವತ್ತು ಆ ಕಂಪನಿಗಳಿಗೆ ಹೆಚ್ಚು ಲಾಭವಾಗಿದೆ

ಉಪಾಧ್ಯಕ್ಷರು. ನೀವು ಈಗ flood ಬಗ್ಗೆ ಮಾತನಾಡಿ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾತನಾಡುತ್ತೇನೆ company ಗಳಿಗೆ ಕೋಟಿಗಟ್ಟಲೆ ಲಾಭವಾಗಿದೆ ಅದರ ಬಗ್ಗೆ ತಾವು ಚಿಂತನೆ ಮಾಡಬೇಕು ನೀವು ಬಂದ್ ಮಾಡುವುದಾದರೆ ಎಲ್ಲವನ್ನೂ ಬಂದ್ ಮಾಡಿ ಆಗ ನಿಮಗೆ ನಾವು ಶಹಭಾಷ್‌ಗಿರಿ ಕೊಡುತ್ತೇವೆ, ಹಾರ ಹಾಕುತ್ತೇವೆ, ಸನ್ಮಾನ ಮಾಡುತ್ತೇವೆ ನೀವು ಒಂದು ಬಂದ್ ಮಾಡಿ ಇನ್ನೊಂದು ಏಕೆ ಹಾಗೆ ಬಿಟ್ಟಿದ್ದೀರಿ? ನಿಮಗೆ ಒಳ್ಳೆಯ ಹೆಸರು ಬರುತ್ತದೆ ತಾವು ಹೇಳಿದ್ದೀರಿ ಅದು ಪಾಪದ ಹಣ ಎಂದು, ಇದೂ ಕೂಡ ಪಾಪದ ಹಣವೇ ಅಲ್ಲವೇ? ಅದಕ್ಕೆ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಈ ಮಾತನ್ನು ಹೇಳುತ್ತಿದ್ದೇನೆ ಇನ್ನು ಸಾಲ ಮನ್ನಾದ ಬಗ್ಗೆ ಹೇಳುವುದಾದರೆ, ಸಾಲ ಮನ್ನಾ ಮಾಡಿದ ಮೇಲೆ ಎಲ್ಲಾ ಬ್ಯಾಂಕುಗಳು ಲಾಕ್ ಆಗುತ್ತವೆ ಯಾವ ಬ್ಯಾಂಕು ಕೂಡ ಉದ್ಧಾರವಾಗುವುದಿಲ್ಲ ಯಾವ ಬ್ಯಾಂಕು ನಡೆಯುವುದಿಲ್ಲ ಏಕೆಂದರೆ ಪ್ರತಿಯೊಂದು ಸಹಕಾರ ತತ್ವದಿಂದ ಸಹಕಾರ ಸಾಲ 75% ವರೆಗೆ ಹಳ್ಳಿಯಲ್ಲಿ ಸಾಲ ಕೊಡುವವರು ಯಾರೆಂದರೆ ಸಹಕಾರ ಬ್ಯಾಂಕುಗಳು ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅವರಿಗೆ ಈ ಕಡ ನಬಾರ್ಡ್‌ನಿಂದ ಸಾಲ

ಕೊಡುವುದಿಲ್ಲ ನೀವೂ ವಾಪಸ್ಸು ಕೊಡುವುದಿಲ್ಲ ಅವರಿಗೆ ಯಾರೂ ಕೊಡದೇ ಇರುವುದರಿಂದ ಬ್ಯಾಂಕ್ ಲಾಕ್ ಮಾಡಿಕೊಂಡು ಆರಾಮಾಗಿ ಕುಳಿತುಕೊಂಡು ಬಿಡುತ್ತಾರೆ ಸಾಲವನ್ನು 25 ಸಾವಿರ ಮನ್ನಾ ಮಾಡಿದಿರಿ ಆದರೆ 25 ಸಾವಿರ ಸಾಲ ಮನ್ನಾ ಮಾಡಿದರೂ ಕೂಡ ಯಾವ ಬ್ಯಾಂಕ್‌ನವರು ಸಾಲ ಕೊಡುತ್ತಿಲ್ಲ ಬ್ಯಾಂಕ್‌ನವರು ಸಾಲ ಕೊಡುವುದೆಷ್ಟು? ನೀವು ಹತ್ತು ಸಾವಿರ ಕೊಟ್ಟರೆ ಹತ್ತು ಸಾವಿರ, ಇಪ್ಪತ್ತು ಸಾವಿರ ಕೊಟ್ಟರೆ ಇಪ್ಪತ್ತು ಸಾವಿರ ರೂಪಾಯಿರವರೆಗೆ ಸಾಲವನ್ನು ಕೊಡುತ್ತಾರೆ ಆ ರೀತಿಯಾಗಿ ಅವರು ಸಾಲ ಕೊಟ್ಟವನಿಗೆ ಮಾತ್ರ ಸಾಲ ಕೊಡುತ್ತಿದ್ದಾರೆ ಹೊರತು, ನೀವೇನು ಸಾಲ ಮನ್ನಾ ಮಾಡಿದ್ದೀರಿ, ಅವರಿಗೆ ಯಾರೂ ದುಡ್ಡು ಕೊಡುತ್ತಿಲ್ಲ ಅವರಿಗೆ ಎಲ್ಲಿಗೆ ಹೊದರೂ ಕೂಡ ಬೀಜಕ್ಕೆ, ಗೊಬ್ಬರಕ್ಕೆ ದುಡ್ಡಿಲ್ಲ ಗೊಬ್ಬರದ ಪರಿಸ್ಥಿತಿ ಗಂಭೀರವಾಗಿದೆ ಏಕೆಂದರೆ ಗೊಬ್ಬರದ ವಿಚಾರದಲ್ಲಿ ನಿಮ್ಮ ಸರ್ಕಾರದವರು ಏನೂ ಮಾಡುವುದಕ್ಕೆ ಹೋಗಿಲ್ಲ ಗೊಬ್ಬರದ ಬಗ್ಗೆ ಪ್ರತಿ ಸರ್ಕಾರ ಕೂಡ ಕೇಂದ್ರ ಸರ್ಕಾರಕ್ಕೆ subsidy create ಮಾಡಿ ಎಂದು ಬರೆಯುತ್ತಿದ್ದರೆ ಮತ್ತು ಅವರ ಜೊತೆ ಮಾತನಾಡುತ್ತಿದ್ದಾರೆ ಇವತ್ತು DAP 12,000 ರೂಪಾಯಿಗೆ ಒಂದು ಟನ್ ಇದೆ ಮೊದಲು 4000 ರೂಪಾಯಿಗೆ ಒಂದು ಟನ್ ಸಿಗುತ್ತಿದ್ದು, 400 ರೂಪಾಯಿಗೆ ಒಂದು ಕ್ವಿಂಟಾಲ್ ಇತ್ತು ಇವತ್ತು 12,000 ರೂಪಾಯಿ ಕೊಟ್ಟು ಒಂದು ಕ್ವಿಂಟಾಲ್ ತೆಗೆದುಕೊಳ್ಳಿ ಎಂದು ಹೇಳಿದರೆ ಯಾರು ತೆಗೆದುಕೊಳ್ಳುತ್ತಾರೆ? ಈ ಸರ್ಕಾರದವರು ಅದರ ಬಗ್ಗೆ ಮಾತನಾಡುವುದಕ್ಕೆ ತಯಾರಿಲ್ಲ ನೀವ್ಯಾರು ಮಾತನಾಡುವುದಿಲ್ಲ 12,000 ರೂಪಾಯಿ ಕೊಟ್ಟು ಒಂದು ಟನ್ DAP ತೆಗೆದುಕೊಳ್ಳಿ ಎಂದರೆ ಯಾರು ತೆಗೆದುಕೊಳ್ಳುತ್ತಾರೆ? 4,000 ರೂಪಾಯಿಗೆ ಒಂದು ಟನ್ ಇರುವಾಗ ಅದಕ್ಕೆ subsidy ಇತ್ತು, ಆಗ ಮಾರುತ್ತಿದ್ದರು ಈ ಸರ್ಕಾರದವರು ಅದನ್ನು ಕೇಂದ್ರ ಸರ್ಕಾರಕ್ಕೆ ಹೇಳುವುದಕ್ಕೆ ತಯಾರಿಲ್ಲ ಮಾತೆತ್ತಿದರೆ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದೆ ಎಂದು ಹೇಳುತ್ತಾರೆ ನೀವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೀರಾ? ಅವರಿಗೆ ನೀವು ಹೇಳಿದ್ದೀರಾ? ಗೊಬ್ಬರಕ್ಕೆ subsidy ಬೇಕು, ಈ ರೀತಿಯಾಗಿದೆ, ನಾವು ಜವಾಬ್ದಾರಿ ಇದ್ದೇವೆ, ಕೊಡಿ ಎಂದು ಏನಾದರೂ indent ಹಾಕಿದ್ದೀರಾ? ಏನೂ ಇಲ್ಲ ಮಾತೆತ್ತಿದರೆ ಗೊಬ್ಬರ ಬೇಕಾದಷ್ಟು ಇದೆ ಎಂದು ಹೇಳುತ್ತಾರೆ DAP ಗೊಬ್ಬರ ಗುಲ್ಬರ್ಗ ಮತ್ತು ಬೀದರ್‌ನಲ್ಲಿ ಇಲ್ಲ ಅದಕ್ಕೆ ಒಂದು ಟನ್‌ಗೆ ರೂ 12,000 ಹೇಳುತ್ತಿದ್ದಾರೆ ನಾನು IFFCO board member

ಇದ್ದೇನೆ DAP IFFCO ನಲ್ಲಿ ತಯಾರಾಗುತ್ತದೆ ಅವರನ್ನು ನಾನು ಕೇಳಿದೆ ಆದರೆ ಅವರು 12,000 ರೂಪಾಯಿ ಕೊಟ್ಟರೆ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಾರೆ ಏಕೆಂದರೆ 30,000 ಕೋಟಿ ಸಬ್ಸಿಡಿ ಕೊಡಬೇಕು ಅದರ ಬಗ್ಗೆ ನಂತರ ಮಾತನಾಡುತ್ತೇನೆ ಈ ರೀತಿಯಿದ್ದಾಗ ಯಾರೂ ಕೇಳುವವರಿಲ್ಲ, ಬೀಜ ಮತ್ತು ಗೊಬ್ಬರದ ಬಗ್ಗೆ ಚಿಂತನೆಯಿಲ್ಲ ಈಗ ಸಣ್ಣ ರೈತರಿಗೆ ಕೊಡಿ ಎಂದರೆ ಅವರು ಎಲ್ಲಿಂದ ದುಡ್ಡು ತರಬೇಕು ಅವರಿಗೆ ಬಿತ್ತುವುದಕ್ಕೆ ಮನೆಯಲ್ಲಿ ದುಡ್ಡಿಲ್ಲ ಈ ರೀತಿಯ ಪರಿಸ್ಥಿತಿಯಾಗಿದೆ ಸಾಲ ಮನ್ನಾದಿಂದ ಯಾರಿಗೂ ಅನುಕೂಲವಾಗಿಲ್ಲ ಸಾಲ ಮನ್ನಾ ಮಾಡುವುದಿದ್ದರೆ ಎಲ್ಲರಿಗೂ ಮಾಡಬೇಕು ರೈತರು ಆತ್ಮಹತ್ಯೆ ಮಾಡಿಕೊಂಡರೆ ನಾನು ರಾಜೀನಾಮೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು ನಮ್ಮ ಜಿಲ್ಲೆಯಲ್ಲಿ 53 ಜನ ರೈತರು ಸತ್ತಿದ್ದಾರೆ ನೀವು ರಾಜೀನಾಮೆ ಕೊಡುತ್ತೇನೆಂದು ಹೇಳಿದ ಮೇಲೆ 4 ಮಂದಿ ಸತ್ತಿದ್ದಾರೆ ನಿಮಗೆ ರಾಜೀನಾಮೆ ಕೊಡಿ ಎಂದು ಯಾರಾದರೂ ಕೇಳಿದ್ದರಾ? ನೀವೇ ಹೇಳಿದ್ದಿರಿ, ನೀವೇ ರಾಜೀನಾಮೆ ಕೊಡಬೇಕಾಗಿತ್ತು ನೀವು ರಾಜೀನಾಮೆ ಕೊಡುವುದಕ್ಕೆ ನಾವ್ಯಾರೂ ಬೇಡವೆಂದು ಹೇಳಿಲ್ಲ 53 ಮಂದಿ ಸತ್ತಿದ್ದಾರೆ, ನೀವು ಏನೂ ಹೇಳಲೇ ಇಲ್ಲ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದರು, ಒಂದು ಲಕ್ಷ ರೂಪಾಯಿ ಕೊಡುತ್ತಾರೆ ಎನ್ನುವ ಸಲುವಾಗಿ ಸಾಯಬೇಕಾ? ರೈತರು ಏಕೆ ಸಾಯುತ್ತಿದ್ದಾರೆಂದರೆ ಅವರ ಸಾಲ ಬಹಳ ಹೆಚ್ಚಾಗಿದೆ ಪರಿಸ್ಥಿತಿ ಗಂಭೀರವಾಗಿದೆ ಒಬ್ಬೊಬ್ಬರ ಮೇಲೆ 5 ಲಕ್ಷ, 6 ಲಕ್ಷ ರೂಪಾಯಿಗಳ ಸಾಲವಿದೆ ಈ ಸಮಯದಲ್ಲಿ ಬ್ಯಾಂಕಿನ ಪರಿಸ್ಥಿತಿ ಏನಾಗಿದೆಯೆಂದರೆ, ಬ್ಯಾಂಕ್‌ನಲ್ಲಿ ಸಾಲ ಕೊಡಿ ಎಂದು ಕೇಳುವುದಕ್ಕೆ ಹೋದರೆ, ಅವರು "ಏನ್ರಿ ದಾನದ ಮನೆಯಲ್ಲಿ ಒಂದು ನಾಯಿಯನ್ನು ಕಟ್ಟಿದ ಹಾಗೆ, ನೀವು ಏಕೆ ಸಾಲವನ್ನು ಕೇಳುವುದಕ್ಕೆ ಬರುತ್ತೀರಿ" ಎಂದು ಕೇಳುತ್ತಾರೆ ಅದು ಏಕೆಂದರೆ, ನಮಗೆ ಹೇಗೂ ಸಾಲ ಮನ್ನಾ ಆಗುತ್ತದೆಂದು, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ರೀತಿ ಹೇಳುತ್ತಾರೆ ಮಾನ್ಯ ಉಪ ಮುಖ್ಯಮಂತ್ರಿಯವರು ಒಂದು ರೀತಿಯಲ್ಲಿ ಹೇಳುತ್ತಾರೆ ಇಲ್ಲಿ ಇಬ್ಬರದೂ ದ್ವಂದ್ವ ನೀತಿ ಏಕೆ? ನೀವು ಸಾಲ ಮನ್ನಾ ಮಾಡುತ್ತೇವೆಂದು ಹೇಳುವುದಾದರೆ, ಎಲ್ಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ, ಇಲ್ಲವೆಂದರೆ ಮಾಡುವುದಿಲ್ಲವೆಂದು ಹೇಳಿ ಈ ರೀತಿಯಾಗಿ ಇವತ್ತಿನ ಸಾಲ ಮನ್ನಾ ಪರಿಸ್ಥಿತಿಯಿಂದ, ಇವತ್ತು ಎಷ್ಟು ಕೊ-ಆಪರೇಟೀವ್ ಬ್ಯಾಂಕ್‌ಗಳು ಇವೆ,

ಅಷ್ಟು ಬ್ಯಾಂಕ್‌ಗಳು ಲಾಕ್ ಹಾಕಿಕೊಂಡು ಆರಾಮಾಗಿ ಕುಳಿತಿವೆ ಒಬ್ಬರೂ ಕೆಲಸವನ್ನು ಮಾಡುತ್ತಿಲ್ಲ ಸಾಲ ಕೊಡುವಂಥ ಪದ್ಧತಿ ಏನು ಇದೆ ಆ ಪದ್ಧತಿ ಮುಗಿದು ಹೋಗಿದೆ ಕಮರ್ಷಿಯಲ್ ಬ್ಯಾಂಕ್‌ಗಳು hardly 15% to 20% ಮೇಲೆ ಸಾಲವನ್ನು ಕೊಡುವುದಿಲ್ಲ ಈ ಅಗ್ರಿಕಲ್ಚರಲ್ ಸಾಲವನ್ನು ಕೊಡುವವರೆಲ್ಲಾ ಕೋ-ಆಪರೇಟಿವ್ ಸಾಲ ಈ ಕೋ-ಆಪರೇಟೀವ್ ಬ್ಯಾಂಕ್‌ಗಳಿಂದ ಏಕೆ ಈ ಪರಿಸ್ತಿತಿ ಎಂದರೆ, ಇವರ ಸಾಲ ಮನ್ನಾದಿಂದ ಈ ಪರಿಸ್ಥಿತಿಯಾಗಿದೆ ಇವರು ಸಾಲ ಮನ್ನಾ ಮಾಡಿದ್ದಾರೆ ಇವರು ಸಾಲ ಮನ್ನಾ ಮಾಡಿದ ಮೇಲೆ ಬ್ಯಾಂಕ್‌ಗಳನ್ನು ಕೇಳಿದ್ದೇವೆ, ನಬಾಡ್ ಅನ್ನು ಕೇಳಿದ್ದೇವೆ ಅವರನ್ನು 1,224 ಸಾವಿರ ಕೋಟಿ ರೂಪಾಯಿಗಳ ಸಾಲಕವನ್ನು ಕೇಳಿದ್ದೇವೆ ನಾವು ಇಷ್ಟು ಹಣವನ್ನು ಕೇಳಿದರೆ, ನಬಾರ್ಡ್‌ನವರು 851 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಇವರು ಈ 851 ಕೊಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ, ದುಡ್ಡನ್ನು ಕೊಟ್ಟಿಲ್ಲ ಅವರು ಏನು ಹೇಳುತ್ತಾರೆಂದರೆ, ನೀವು ಸಾಲವನ್ನು ಯಾವತ್ತಿನವರೆಗೂ ವಸೂಲು ಮಾಡುವುದಿಲ್ಲ ಅವತ್ತಿನವರೆಗೂ ನಾವು ಸಾಲವನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ ಇವರು ಸಾಲವನ್ನು ವಸೂಲು ಮಾಡುವುದಕ್ಕೆ ಇಲ್ಲಿ ಸಾಲ ವಸೂಲು ಆಗುವುದಿಲ್ಲ ಈ ಹಣ ಏಕೆ ವಸೂಲಾಗುವುದಿಲ್ಲವೆಂದರೆ, ಇವರು ಸಾಲವನ್ನು ಮನ್ನಾ ಮಾಡುತ್ತಾರೆಂದು ಕೊಡುವುದಿಲ್ಲವೆಂದು ಹೇಳುತ್ತಾರೆ ನಾವು ಕೊಡುವುದಿಲ್ಲವೆಂದು ಹೇಳುತ್ತಾರೆ ಅವನಿಗೆ 25,000 ರೂಪಾಯಿಗಳು ಮನ್ನಾ ಆಗಿದೆ ನನಗೂ ಆಗುತ್ತದೆಂದು ಹೇಳುತ್ತಾರೆ ಇವರು ಯಾರು ಸಾಲವನ್ನು ವಾಪಸ್ಸು ಕೊಡುವುದಕ್ಕೆ ತಯಾರಿಲ್ಲ ಇದರಿಂದ ಬ್ಯಾಂಕ್‌ಗಳು, ಸಹಕಾರ ಸಂಘಗಳು, ಎಲ್ಲ ಮುಳುಗಿ ಹೋಗುವ ಪರಿಸ್ಥಿತಿಗೆ ಬಂದಿದೆ ಇಡೀ ಸಹಕಾರಿ ಸಿಸ್ಟಂ ಮುಳುಗಿ ಹೋಗುವಂಥಾ ಪರಿಸ್ಥಿತಿ ಇವತ್ತು ಬಂದಿದೆ ಈ ಸಾಲ ಮನ್ನಾದಲ್ಲಿ ಏನಾಗಿದೆಯೆಂದರೆ, ಇವರು 2,114 30 ಕೋಟಿ ರೂಪಾಯಿಗಳ ಸಾಲ ಮನ್ನಾ ಕೊಡಬೇಕು ಅದರಲ್ಲಿ ಇವರು ಕೊಟ್ಟಿರುವಂಥಾದ್ದು ಮೊನ್ನೆ 250 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಮೊದಲು 500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಮೊನ್ನೆ 250 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದನ್ನು ಟ್ರೆಜರಿಯಿಂದ ವಾಪಸ್ಸು ಕಳುಹಿಸಿತ್ತು ನಿನ್ನೆ ಅದನ್ನು ಕೊಡಲು ಒಪ್ಪಿಕೊಂಡಿದ್ದಾರೆ ಇನ್ನು 1,364 ಕೋಟಿ ರೂಪಾಯಿಗಳು ಈ ವರ್ಷದ ಸಾಲ ಕೊಡಬೇಕು, ಮತ್ತೆ 2002 ರದ್ದು ಬಡ್ಡಿ ಮನ್ನಾ, ಸಬ್ಸಿಡಿ ಎಲ್ಲಾ

ಸೇರಿ, 325 78 ಕೋಟಿ ರೂಪಾಯಿಗಳನ್ನು ಕೊಡಬೇಕು ಅವರು ಇನ್ನು ಇಷ್ಟು ಸಾಲವನ್ನು ಕೊಡುವುದಿದೆ ಅವರು ಇದನ್ನು ಕೊಡುವವರೆಗೂ ಯಾವ ಬ್ಯಾಂಕುಗಳು ಸಾಲವನ್ನು ಕೊಡುವ ಹಾಗೆ ಇಲ್ಲ ಇದು ಎಷ್ಟಿದೆಯೆಂದರೆ 1,500 ಕೋಟಿ, 1,600 ಕೋಟಿ ರೂಪಾಯಿಗಳ ಬಡ್ಡಿ ಎಷ್ಟು ಆಗುತ್ತದೆ? ಈ ಬಡ್ಡಿಯನ್ನು ಯಾರು ಕೊಡಬೇಕು? ಈ ಬಡ್ಡಿಯನ್ನು ಸರ್ಕಾರ ಕೊಡುವುದಿಲ್ಲ, ರೈತರು ಕೊಡುವುದಿಲ್ಲವೆಂದರೆ ಆ ಬ್ಯಾಂಕುಗಳ ಗತಿ ಏನು ಆಗಬೇಕು? ಈ ಬಡ್ಡಿಯನ್ನು ಯಾರು ಕೊಡಬೇಕು? ಇದನ್ನು ಯಾರೂ ಕೊಡುವ ಹಾಗೆ ಇಲ್ಲ ಇದರಿಂದ ಇಡೀ ಬ್ಯಾಂಕ್, ಕೋ-ಆಪರೇಟಿವ್ ಸಿಸ್ಟಂ, ಎಲ್ಲಾ ಮುಳುಗಿ ಹೋಗುವ ಪರಿಸ್ಥಿತಿ ಇದೆ ಇದು ಮುಳುಗಿ ಹೋಗುವಂಥ ವ್ಯವಸ್ಥೆ ಇದೆ ಅದಕ್ಕಾಗಿ ಇದರ ಬಗ್ಗೆ ತಕ್ಷಣ ನಿರ್ಣಯವನ್ನು ತೆಗೆದುಕೊಳ್ಳಬೇಕು, ಇಲ್ಲವೆಂದರೆ ಯಾವ ಬ್ಯಾಂಕ್‌ಗಳು ಮುಂದೆ ಬರುವ ಪರಿಸ್ಥಿತಿಯಲ್ಲಿ ಇಲ್ಲ ಇವರು ಹೆಚ್ಚಿನ ಸಾಲವನ್ನು ಕೊಡಬೇಕೆಂದು ಹೇಳುತ್ತಿದ್ದಾರೆ ಹೌದು, ಇವತ್ತು ಸಾಲವನ್ನು ಎಷ್ಟು ಕೊಟ್ಟಿದ್ದಾರೆಂಬುದನ್ನು ತಮಗೆ ಹೇಳುತ್ತೇನೆ 2005-06 ರಲ್ಲಿ 1,178 09 ಕೋಟಿ ರೂಪಾಯಿಗಳು, 2006-07 ರಲ್ಲಿ 1,716 63 ಕೋಟಿ ರೂಪಾಯಿಗಳ ಸಾಲವನ್ನು ಕೊಡಲಾಗಿದೆ ಈ ವರ್ಷ ಏನು ಸಾಲವನ್ನು ಕೊಡಬೇಕೆಂಬ ಉದ್ದೇಶವಿತ್ತು, ಇವರು ಸಾಲ ಮನ್ನಾ ಮಾಡಿ ಅದನ್ನು ಕೆಡಿಸಿದರು ಈ ಸಾರಿ 2,145 ಕೋಟಿ ರೂಪಾಯಿಗಳ ಸಾಲವನ್ನು ಕೊಡಬೇಕೆಂಬ ಉದ್ದೇಶವಿತ್ತು ಅದನ್ನು ಇವರು ಸಾಲ ಮನ್ನಾ ಮಾಡಿ ಈ ಎಲ್ಲಾ ಸಿಸ್ಟಂ ಅನ್ನು ಮುಗಿಸಿಬಿಟ್ಟಿದ್ದಾರೆ ಯಾವ ಸಾಲವನ್ನು ಕೊಡುವುದಿಲ್ಲ ಯಾವ ಕೆಲಸಗಳು ಆಗುವಂಥ ಪರಿಸ್ಥಿತಿಯಲ್ಲಿ ಇಲ್ಲ ಇವತ್ತು ಬೇಡಿಕೆ ಎಷ್ಟು ಇದೆಯೆಂದರೆ, ಬಹಳವಿದೆ 3053 ಕೋಟಿ ರೂಪಾಯಿಗಳ ಬೇಡಿಕೆ ಇದೆ ಇವರಿಗೆ ಇಷ್ಟನ್ನು ಕೊಡುವುದಕ್ಕೆ ಆಗುವುದಿಲ್ಲ ಕೇಂದ್ರ ಸರ್ಕಾರ ಸಾಲವನ್ನು ಹೆಚ್ಚಿಗೆ ಕೊಡಿಯೆಂದು ಹೇಳುತ್ತಿದೆ ಇವರು ಹೇಳುತ್ತಿದ್ದಾರೆ, ಇದನ್ನು ಎಲ್ಲಿಂದ ಕೊಡಬೇಕು? ಆ ಸಾಲವನ್ನು ಕೊಡುವುದಕ್ಕೆ ಸರ್ಕಾರದಲ್ಲಿ ಏನಾದರೂ ಶಕ್ತಿ ಇದ್ದರೆ, ವ್ಯವಸ್ಥೆಯನ್ನು ಮಾಡಬೇಕು ಈ ವ್ಯವಸ್ಥೆಯನ್ನು ಮಾಡದಿದ್ದರೆ ಏನೂ ಉಪಯೋಗವಾಗುವುದಿಲ್ಲ ಇವರು ಸಾಲ ಮನ್ನಾ ಮಾಡಿ ಎಲ್ಲವನ್ನು ಮುಳುಗಿಸಿ ಕುಳಿತಿದ್ದಾರೆ ಈಗ ಯಾರೋ ಹೇಳುತ್ತಿದ್ದರು, ಇವರಿಗೆ ಭಯವಾಗುತ್ತಿದೆ, ಓಟುಗಳು ಹೋಗುತ್ತವೆ, ಇವರಿಗೆ ಸಾಲ ಮನ್ನಾ ಅಂಜಿಕೆ ಆಗಿದೆಯೆಂದು ಸೇಳುತ್ತಿದ್ದರು ಇವರಿಗೆ ಸಾಲ ಮನ್ನಾ

ಅಂಜಿಕೆಯಾಗಿಲ್ಲ ಇದರಿಂದ ಬಹಳ ತೊಂದರೆಯಾಗಿದೆ, ಜನರು ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡರು, ಬ್ಯಾಂಕ್‌ಗಳು ಸಿಕ್ಕಿಹಾಕಿಕೊಂಡವು ಇವತ್ತು ಮುಂದೆ ಆಗುವಂತಹ ಅನಾಹುತಗಳನ್ನು ಹೇಳುವಂಥಾದ್ದು ಒಳ್ಳೆಯದೆಂಬ ಉದ್ದೇಶದಿಂದ ನಾವು ಇದನ್ನು ಹೇಳುತ್ತಿದ್ದೇವೆಯೇ ಹೊರತು ಯಾರೂ ಸಹ ಓಟಿನ ಸಲುವಾಗಿ ಯಾರೂ ಕೂಡ ಭಯಪಡುತ್ತಿಲ್ಲ ಓಟುಗಳು ಹೇಗೆ ಬರಬೇಕೋ, ಹಾಗೆ ಬರುತ್ತದೆ ಅದು ಆಗುವಂಥಾದ್ದು ಆಗುತ್ತದೆ ಅದರ ಬಗ್ಗೆ ಚಿಂತೆ ಇಲ್ಲ ಆದರೆ ಇವರು ಮಾಡುವಂಥಾ ಪದ್ಧತಿಯನ್ನು ನೋಡಿದರೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಏಕೆ ಈ ಕಡೆ ಕುಳಿತ್ತಿದ್ದಾರೆಂದರೆ, ಅವರು ಯಾವತ್ತಿದ್ದರೂ ನಮ್ಮ ಕಡೆಗೆ ಇರುತ್ತಾರೆ ಅದಕ್ಕಾಗಿ ಅವರನ್ನು ನಾವು ಈ ಕಡೆಗೆ ಕೂರಿಸಿಕೊಂಡಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಅವರು ನಮ್ಮ ಕಡೆಗೆ ಬರಬೇಕಾಗಿರುವುದು

ಶ್ರೀಗುರಪಾದಪ್ಪ ನಾಗಮಾರಪಲ್ಲಿ ಅವರು ಮುಖ್ಯಮಂತ್ರಿ ಯಾಗುವವರಿದ್ದಾರೆ ಅವರಿಗೆ ಏಕೆ ಹಾಗೆ ಹೇಳುತ್ತೀರಿ?

ಶ್ರೀ ಜೆ ಸಿ ಮಾಧುಸ್ವಾಮಿ "ಅಲ್ಲಿರುವುದು ಸುಮ್ಮನೆ, ಇಲ್ಲಿರುವುದು ನನ್ನ ಮನೆ" ಎಂದು ಅವರು ಇಲ್ಲಿಗೆ ಬಂದಿದ್ದಾರೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ನೀವು ದಯವಿಟ್ಟು ಮಾನ್ಯ ಯಡಿಯೂರಪ್ಪನವರನ್ನು ದಿಕ್ಕು ತಪ್ಪಿಸಬೇಡಿ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅಲ್ಲಿ ತಪ್ಪಿಸಬೇಕೆಂದು ಇದ್ದಿರೇನು? ಮುಂದೆ ದಾರಿ ತಪ್ಪಿಸಬೇಕೆಂಬ ಉದ್ದೇಶ

ಶ್ರೀ ಎಂ ಪಿ ಪ್ರಕಾಶ್ ಅವರಿಗೆ ಖಾಯಂ ಆಗಿ ಇಟ್ಟುಕೊಳ್ಳುವ ಪ್ರಯತ್ನವಿದ್ದ ಹಾಗೆ ಕಾಣುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ. ನಾವು ಅವರ ಶಕ್ತಿಯನ್ನು ಪುನಃಶ್ಚೇತನ ಮಾಡುತ್ತಿದ್ದೇವೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅಧ್ಯಕ್ಷರೆ, ಈ ರೀತಿ ಗಂಭೀರವಾದ ಪರಿಸ್ಥಿತಿ ಉಂಟಾಗಿದೆ ಈ ಬಗ್ಗೆ ಸರ್ಕರ ತೀವ್ರವಾಗಿ ಪ್ರಯತ್ನ ಮಾಡಿ ಏನಾದರೂ ನಿರ್ಣಯವನ್ನು ತೆಗೆದುಕೊಂಡರೆ ಒಳ್ಳೆಯದು, ಇಲ್ಲವೆಂದರೆ ಬ್ಯಾಂಕ್‌ಗಳು, ರೈತರು, ಮುಳುಗಿ ಹೋಗುವ ಪರಿಸ್ಥಿತಿ ಇದೆ ತಾವು ಇದರ ಬಗ್ಗೆ ಸಂಪೂರ್ಣವಾಗಿ ಪ್ರಯತ್ನವನ್ನು ಮಾಡಬೇಕು ಮಾನ್ಯ ಯಡಿಯೂರಪ್ಪನವರು ಇಲ್ಲೇ ಕುಳಿತ್ತಿದ್ದಾರೆ ನಾನು ಅವರಿಗೆ ಈ ವಿಚಾರವನ್ನು ಕೇಳಬೇಕೆಂದು ಹೇಳಿದ್ದೆ ಅವರು ಕೇಳಿದ್ದಾರೊ, ಇಲ್ಲವೋ ಗೊತ್ತಿಲ್ಲ ನಾನು ಹೇಳುವಂಥ ವಿಚಾರಗಳನ್ನೆಲ್ಲಾ ಹೇಳಿದ್ದೇನೆ ಅದು ಏನೇನು ಆಗುತ್ತಿತ್ತೊ? ಮಾನ್ಯ ಮುಖ್ಯಮಂತ್ರಿಯವರು ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ ಅವರು ರಾಜೀನಾಮೆಯನ್ನು ಕೊಡುವುದು ಏಕೆ? ತಾವು ರಾಜೀನಾಮೆಯನ್ನು ಕೊಡುವುದಾದರೆ ಒಂದು ಸಾರಿ ಕೊಟ್ಟು ಬಿಡಿ, ಇಲ್ಲವೆಂದರೆ ಮಾನ್ಯ ಮುಖ್ಯಮಂತ್ರಿಯವರೆ, ಎಲ್ಲಾ ಸಾಲವನ್ನು ಮನ್ನಾ ಮಾಡಿ ಆಗ ಯಾರು ಸಾಯುವುದಿಲ್ಲ ನೋಡಿ ನೀವು ರೈತರು ಸತ್ತರೆ ರಾಜೀನಾಮೆಯನ್ನು ಕೊಡುತ್ತೇನೆಂದು ಏಕೆ ಹೇಳಿದ್ದೀರಿ ನೀವು ರಾಜೀನಾಮೆಯನ್ನು ಕೊಡುವುದು ಬೇಡ ಅವರು ಸಾಯುವುದು ಬೇಡ ನೀವು ಸಾಲ ಮ್ನನಾ ಎಲ್ಲವನ್ನು ಒಂದು ಸಾರಿ ಮಾಡಿ ನೀವು ಅರ್ಧ ಮನ್ನಾ ಮಾಡಿ, ಅರ್ಧ ಹಾಗೆ ಇಟ್ಟು, ಈ ಪರಿಸ್ಥಿತಿಯನ್ನು ಏಕೆ ತರುತ್ತೀರಿ? ತರಬೇಡಿ ಇದನ್ನು ಪೂರ್ತಿ ಮನ್ನಾ ಮಾಡಿ ಉದ್ಧಾರ ಆಗಿ, ನೀವು ಒಳ್ಳೆಯವರೆಂದು ಅನಿಸಿಕೊಳ್ಳಿ, ಇಲ್ಲವೆಂದರೆ ನಿಮಗೆ ಹೆಸರು ಬರುತ್ತದೆ ನೀವು ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದರೆ ಎಲ್ಲಾ ಸಾಲ ಮನ್ನಾ ಮಾಡಿ ಅದು ಒಂದು ಲಕ್ಷ ಇರುತ್ತದೆ, ಎರಡು ಲಕ್ಷ ಇರುತ್ತದೆ ಒಬ್ಬೊಬ್ಬರಿಗೆ ಆರು ಲಕ್ಷ ರೂಪಾಯಿಗಳ ಸಾಲವಿದೆ ಈ ಸಾಲವನ್ನು ಹೇಗೆ ತೆಗೆದುಕೊಂಡೆ ಎಂದು ಕೇಳಿದರೆ, ಅವರ ಕಡೆಯಿಂದ ತಂದವೆಂದು ಹೇಳುತ್ತಾರೆ ನೀವು ಎಷ್ಟು ವರದಿಯನ್ನು ತಂದರೂ ಏನೂ ಆಗುವುದಿಲ್ಲ ಎಲ್ಲಾ ರೈತರ ರಿಪೋರ್ಟ್‌ಗಳು ಎಷ್ಟು ತಂದರೂ ಏನೂ ಆಗುವುದಿಲ್ಲ, ಅಸಲಿ ರಿಪೋರ್ಟ್‌ಗಳು ಅದೇ ಇದೆ ಇವರ ಅಸಲಿ ಸಾಲ ಜಾಸ್ತಿಯಾಗಿದೆ, ಇವರು ಸಾಯುತ್ತಿದ್ದಾರೆ ಅವರ ಸಾಲವನ್ನು ಪೂರ್ತಿಯಾಗಿ ಒಂದು

ಸಾರಿ ಮನ್ನಾ ಮಾಡಿ ಅವರನ್ನು ಉದ್ಧಾರ ಮಾಡಿ, ಅವರು ಸಾಯುವುದು ಕಡಿಮೆಯಾಗುತ್ತದೆಯೋ ಇಲ್ಲವೋ ನೋಡಿ ನೀವು ರಾಜೀನಾಮೆ ಕೊಡುವಂಥದ್ದು ತಪ್ಪುತ್ತದೆ ಇಲ್ಲವೆಂದರೆ ನೀವು ರಾಜೀನಾಮೆಯನ್ನು ಕೊಡುತ್ತೇವೆಂದರೆ, ಅವರು ಸಾಯುವಂಥಾದ್ದು ತಪ್ಪುವುದಿಲ್ಲ ನೀವು ರಾಜೀನಾಮೆಯನ್ನು ಕೊಡುವುದಿಲ್ಲ ಇದರಿಂದ ಯಾವ ಉದ್ಧಾರವಾಗುವುದಿಲ್ಲವೆಂದು ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎನ್ ಎಸ್ ಬೋಸರಾಜ (ಮಾನ್ವಿ) ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಯಚೂರು ಜಿಲ್ಲೆಯಲ್ಲಿ ಜೂನ್ 22, 23ರಲ್ಲಿ 216 ಎಂ ಎಂ ನಷ್ಟು ಮಳೆಯಾಗಿ 12 ಜನರು ಸತ್ತು ಹೋಗಿದ್ದಾರೆ ಅದರ ಜೊತೆಗೆ ಸಾಕಷ್ಟು ಕಡೆಗಳಲ್ಲಿ ಸ್ಟೇಟ್ ಹೈವೇಯಲ್ಲಿರುವಂಥ ಬ್ರಿಡ್ಜ್‌ಗಳು, ಇದರ ಜೊತೆಗೆ ಮೈನರ್ ಇರಿಗೇಷನ್, ಹಾಗೂ ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂಥ ಕೆರೆಗಳು ಒಡೆದು ಹೋಗಿರುವಂಥಾದ್ದು, ಇದರ ಜೊತೆಗೆ ಸಾಕಷ್ಟು ಕಡೆ ವಾಟರ್ ಶೆಡ್ ಪ್ರೋಗ್ರಾಂನಲ್ಲಿ ಮಾಡಿರುವಂಥಾ ಚೆಕ್ ಡ್ಯಾಮ್ಸ್, ಹಾಗೂ ಬಂಡ್‌ಗಳು ಒಡೆದಿರುವಂಥಾದ್ದು, ಅದರ ಜೊತೆಯಲ್ಲಿ ಪ್ರೈವೇಟ್ ಕೋ-ಆಪರೇಟಿವ್‌ನಲ್ಲೂ ಸಹಿತ ಸಾಕಷ್ಟು ಸಾವಿರಾರು ಮನೆಗಳು ಬಿದ್ದಿರುವಂಥಾದ್ದು, ಜಾನುವಾರುಗಳು ಸತ್ತಿರುವಂಥಾದ್ದು, ಬಿತ್ತಿರುವಂಥ ಬೆಳೆ ಕೊಚ್ಚಿಕೊಂಡು ಹೋಗಿರುವಂಥಾದ್ದು, ಈ ರೀತಿಯಾಗಿ ರೈತರಿಗೆ ಆಗಿರುವಂಥಾ ತೊಂದರೆಗಳ ಜೊತೆಯಲ್ಲಿ, ಇವತ್ತು ಕೆ ಪಿ ಟಿ ಸಿ ಎಲ್ ನ ಪೋಲ್ಸ್ ಹಾಗೂ ಟ್ರಾನ್ಸ್‌ಫಾರ್ಮರ್‌ಗಳು ಸಹಿತ ಬಿದ್ದಿರುವ ಕಾರಣದಿಂದ ಇವತ್ತಿಗೂ ಅನೇಕ ಗ್ರಾಮಗಳಲ್ಲಿ ಕರೆಂಟ್ ಅನ್ನು ಸರಿಪಡಿಸುವಂಥಾ ಕಾರ್ಯಕ್ರಮ ಕೂಡ ಆಗಿಲ್ಲ ಇಷ್ಟೆಲ್ಲಾ ಅನಾಹುತ ಆಗಿ ಈ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳು ಪ್ರಿಲಿಮಿನರಿ ರಿಪೋರ್ಟ್‌ನಲ್ಲಿ ಮೂವತ್ತು ಕೋಟಿ ರೂಪಾಯಿಗಳ ಅಂದಾಜು ಲಾಸ್ ಆಗಿದೆಯೆಂದು ಒಂದು ರಿಪೋರ್ಟ್ ಅನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ ಆದರೂ ಸಹಿತ ಮಾನ್ಯ ರೆವಿನ್ಯೂ ಸಚಿವರಾಗಲೀ ಅಥವಾ ಜಿಲ್ಲಾ ಉಸ್ತುವಾರಿ ವಹಿಸಿರುವಂಥಾ ಕಾರ್ಯದರ್ಶಿಗಳಾಗಲೀ, ಬಂದು ಇವತ್ತಿಗೂ ಒಂದು ಮೀಟಿಂಗ್ ಅನ್ನು ಮಾಡಲಿಲ್ಲ ಅಲ್ಲಿ ಆಗಿರುವಂಥಾ ನಷ್ಟದ ಬಗ್ಗೆ ಅಸೆಸ್‌ಮೆಂಟ್ ಅನ್ನು ಮಾಡಲಿಲ್ಲ ಯಾವುದೇ ಸಂಬಂಧಪಟ್ಟಂಥ ಇಲಾಖಾಧಿಕಾರಿಗಳು, ಇವತ್ತು ಸ್ಟೇಟ್ ಹೈವೇಗಳಲ್ಲಿ ಬ್ರಿಡ್ಜ್‌ಗಳನ್ನು ಕಳಚಿಕೊಂಡಿರುವಂಥ ಸಂದರ್ಭದಲ್ಲಿ

ಮುಖ್ಯ ಇಂಜಿನಿಯರ್‌ಗಳು ಬರಬೇಕಾಗಿತ್ತು ಅವರೂ ಬಂದಿಲ್ಲ ಅದೇ ರೀತಿಯಾಗಿ ಕೃಷಿ ಇಲಾಖೆಗೆ ಸೇರಿರುವಂಥ ಅಧಿಕಾರಿಗಳು ಸಹಿತ ಫೀಲ್ಡ್‌ಗೆ ಬಂದಿಲ್ಲ ಅದೇ ರೀತಿಯಾಗಿ ಅಲ್ಲೇ ಇರುವಂಥ ಜೆಸ್ಕಾಂ ಎಂ ಡಿ ಯಾಗಲಿ, ಚೀಫ್ ಇಂಜಿನಿಯರ್ ಆಗಲಿ, ಇವತ್ತು ಅನೇಕ ಪೋಲ್‌ಗಳು, ಟ್ರಾನ್ಸ್‌ಫಾರ್ಮರ್‌ಗಳನ್ನು ಕಳೆದುಕೊಂಡಿದ್ದು, ಇಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದಕ್ಕೆ ಇನ್ನು ಆಗದೇ ಇರುವಂಥ ಸಂದರ್ಭದಲ್ಲಿ ಯಾವ ಅಧಿಕಾರಿಗಳೂ ಇನ್ನೂ ಆ ಪ್ರದೇಶಕ್ಕೆ ಬಂದಿಲ್ಲ ಇವತ್ತು ಇಷ್ಟಾದರೂ ಸರ್ಕಾರ ರಾಯಚೂರು ಜಿಲ್ಲೆಯಲ್ಲಿ ಆಗಿರುವಂಥ ಅನಾಹುತದ ಬಗ್ಗೆ ಬಹಳಷ್ಟು ಹಗುರವಾಗಿ ತೆಗೆದುಕೊಂಡಿದ್ದಾರೆಂದು ಜನರು ಭಾವಿಸಿದ್ದಾರೆ

State highway ನಲ್ಲಿ ಅನೇಕ ಕಡೆ bridge ಗಳು ಕೊಚ್ಚಿಕೊಂಡು ಹೋಗಿವೆ ಇವತ್ತು ಶ್ರೀಮಾನ್ ಅಮರೇಗೌಡರು ಸಹ ಇಲ್ಲಿದ್ದಾರೆ ಅವರ ಕ್ಷೇತ್ರದಲ್ಲಿ ಮಸ್ಕಿ ಹತ್ತಿರ ಒಂದು bridge ಕೊಚ್ಚಿಕೊಂಡು ಹೋಗಿದೆ ಅದರ ರಿಪೇರಿಗಾಗಿಯೇ ಸುಮಾರು 50 ಲಕ್ಷ ರೂಪಾಯಿಗಳು ಬೇಕೆಂದು ಅಂದಾಜು ಮಾಡಿದ್ದಾರೆ ಆದರೆ, ಗುಲ್ಬರ್ಗಾ, ಬೀದರ್, ರಾಯಚೂರು ಜಿಲ್ಲೆಗಳಿಗೆ ಸಂಪರ್ಕವಾಗಿರತಕ್ಕಂಥ State highway ನಲ್ಲಿರತಕ್ಕಂಥ road ಅನ್ನು ರಿಪೇರಿ ಮಾಡದೇ ಈಗಾಗಲೇ 13–14 ದಿವಸಗಳ ಕಾಲ ಆಗಿದೆ, ರಿಪೇರಿಯಾಗಲು ಇನ್ನೂ 8 ದಿವಸಗಳ ಕಾಲ ಬೇಕು ಎಂದು ಹೇಳುತ್ತಿದ್ದಾರೆ ನಾನು ಈಗಾಗಲೇ ಅಲ್ಲಿಗೆ ಮೂರು ಸಲ ಹೋಗಿ ಬಂದಿದ್ದೇನೆ ಮಾನ್ಯ ಅಮರೇ ಗೌಡರು ಸಹಿತ ಮೂರು ಸಲ ಹೋಗಿ ಬಂದಿದ್ದಾರೆ ಹಾಗೂ ನಮ್ಮ ಮಾನ್ಯ ಹಂಪನ ಗೌಡರು ಸಹಿತ ಹೋಗಿ ಬಂದಿದ್ದಾರೆ ಈಗ ಮಾನ್ಯ ದರ್ಶನಾಪುರರವರು ಆ ರಸ್ತೆ ಮೇಲೆ ಹೋಗಬೇಕಾದರೆ ತಪ್ಪಿಸಿಕೊಂಡು ಬೇರೆ ಕಡೆಯಿಂದ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಆ ಬ್ರಿಡ್ಜ್ ಕೊಚ್ಚಿಕೊಂಡು ಹೋಗಿರುವುದರಿಂದ ಅಲ್ಲಿ ಅನಾಹುತಕ್ಕೆ ಕಾರಣವಾಗಿದೆ 12 ಮಂದಿ ಸತ್ತು ಈ ರೀತಿಯಾಗಿ ಜನರಿಗೆ ತೊಂದರೆಯಾಗಿ ಸಂಪರ್ಕ ಕಳೆದುಕೊಂಡು ತೊಂದರೆ ಅನುಭವಿಸುತ್ತಿದ್ದಾರೆ ಇನ್ನೂ ಅನೇಕ ಕಡೆ energy ಕಲ್ಪಿಸಲಿಕ್ಕೆ ಆಗದೇ ಇರುವ ಸಂದರ್ಭದಲ್ಲಿ ಮಾನ್ಯ ರೇವಣ್ಣನವರು ಬರಬಹುದು, ಮುಖ್ಯಮಂತ್ರಿಗಳು ಬರಬಹುದು, ಉಪಮುಖ್ಯಮಂತ್ರಿಗಳು ಬರಬಹುದು, ಅಥವಾ ಕನಿಷ್ಟ ಪಕ್ಷ ಉಸ್ತುವಾರಿ ಕಾರ್ಯದರ್ಶಿಗಳಾದರೂ ಬಂದು ಜನಪ್ರತಿನಿಧಿಗಳ ಜೊತೆಯಲ್ಲಿ ಸಭೆಯನ್ನು

ಮಾಡಬಹುದೆಂದು ನಾವೆಲ್ಲ ಶಾಸಕರು ತಿಳಿದುಕೊಂಡಿದ್ದೆವು ಆದರೆ, ಇವತ್ತಿನವರೆಗೆ ಆ ಕೆಲಸ ಆಗಲಿಲ್ಲ ಈಗಾಗಲೇ 15 ದಿವಸ ಕಳೆದಿದೆ ಇಂಥ ಸಂದರ್ಭದಲ್ಲಿ 30 ಕೋಟಿ ರೂಪಾಯಿಗಳ preliminary report ಕಳುಹಿಸಿದ್ದಾರೆ ಆದರೆ ಇವತ್ತು ಸುಮಾರು 50 ಕೋಟಿ ರೂಪಾಯಿಗಳಿಗೆ ಹೋಗತಕ್ಕಂಥ ಅಂದಾಜು ಇದೆ ಆದರೂ ಸಹಿತ ಇವತ್ತಿನ ವರೆಗೆ ಒಂದು ರೂಪಾಯಿ ಸಹಿತ taluk administration ಗೆ release ಮಾಡಿಲ್ಲ ಇವತ್ತು ಮಧ್ಯಾಹ್ನ 3 00 ಗಂಟೆಗೆ ಸಂಬಂಧಪಟ್ಟ ತಹಶೀಲ್ದಾರರ ಹತ್ತಿರ ಮಾತನಾಡಿದ್ದೇನೆ, ಇತರ ಅಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ, ರಸ್ತೆಗಳ restoration ಗಾಗಲೀ ಅಥವಾ culverts restoration ಗಾಗಲೀ ಅಥವಾ ಜನರಿಗಾಗಿರತಕ್ಕಂಥ ಅನಾಹುತಕ್ಕೆ ಸಹಾಯ ಮಾಡಲಿಕ್ಕೆ ಮಾಡುವಂಥ ಯಾವುದೇ ಕೆಲಸಗಳಿಗೆ ಇವತ್ತು ಒಂದು ರೂಪಾಯಿ ಸಹಿತ ರಾಯಚೂರು ಜಿಲ್ಲೆಯಲ್ಲಿ taluk administration ಗೆ ಹಣ ಕೊಟ್ಟಿಲ್ಲ ಅಂದ ಮೇಲೆ ಯಾವ ರೀತಿಯಾಗಿ ಇಲ್ಲಿರತಕ್ಕಂಥ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯವಿದೆ ಎಂಬುದನ್ನು ತಾವು ಗಮನಿಸಬೇಕಾಗಿದೆ ಇಂಥ ಸಂದರ್ಭದಲ್ಲಿ ಅಲ್ಲಿ ಅನೇಕ ಕಡೆ ನಾಲೆಗಳ ಮೂಲಕ ನೀರು ಬಂದಿದೆ ಮಸ್ಕಿನಾಲ ಎಂದು ಲಿಂಗಸೂರು constituency ಯಲ್ಲಿ ಬರುತ್ತದೆ 4 ಗೇಟ್‌ಗಳನ್ನು ಎತ್ತುವುದರ ಮುಖಾಂತರ ಆ ನಾಲಾ ಮುಖಾಂತರ ಮಾನ್ವಿ ಮತ್ತು ಸಿಂಧನೂರು ತಾಲ್ಲೂಕುಗಳಲ್ಲಿ ಸುಮಾರು 40 ಹಳ್ಳಿಗಳಲ್ಲಿ ಸಾಕಷ್ಟು ರೀತಿಯಲ್ಲಿ ಹೊಲ ಕೊಚ್ಚಿಕೊಂಡು ಹೋಗಿರುವ ಸಂದರ್ಭದಲ್ಲಿ, ಅಲ್ಲಿ sand siltation ಆಗಿದೆ ಮತ್ತು ಬಿತ್ತಿರತಕ್ಕಂಥ ಬೀಜ ಅದು ಸೂರ್ಯಪಾನ ಇರಲಿ, ಸಜ್ಜೆ ಇರಲಿ, ಅನೇಕ ಕಡೆ ರೈತರಿಗೆ ನಷ್ಟವಾಗಿದೆ ಮತ್ತೆ ಬೀಜ ಬಿತ್ತನೆ ಮಾಡಬೇಕಾದರೆ ಈಗಾಗಲೇ ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದಿದ್ದೇನೆ Agriculture Department ನ ಅಧಿಕಾರಿಗಳು Commissioner ರವರ ಜೊತೆಯಲ್ಲಿ ಮಾತನಾಡಿದ್ದೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ ಯಾವ್ಯಾವ ರೈತರಿಗೆ ಮಳೆಯಿಂದ ಹಾನಿಯಾಗಿದೆ, ಆ ರೈತರಿಗೆ ಸಬ್ಸಿಡಿ ಮುಖಾಂತರ ತಕ್ಷಣ ಬೀಜ ಕೊಡಬೇಕೆಂದು ನಾವು ಹೇಳಿದ್ದೇವೆ ಆದರೆ, ಇವತ್ತಿನವರೆಗೂ ಯಾವುದೇ ರೀತಿಯ ಸ್ಪಂದನ ಆ ಇಲಾಖೆಯಿಂದ ರಾಯಚೂರು ಜಿಲ್ಲೆಗೆ ಸಿಕ್ಕಿಲ್ಲ ಹೀಗಾಗಿ ಒಟ್ಟಾರೆ ಕರ್ನಾಟಕದಲ್ಲಿ ರಾಯಚೂರು ಜಿಲ್ಲೆಯಲ್ಲಿ ರೈತರಿಗೆ ಅತ್ಯಂತ ಹೆಚ್ಚಿನ ಹಾನಿ ಆಗಿದೆ ಆದರೂ ಸಹಿತ ಜವಾಬ್ದಾರಿಯುತ ವಾದಂಥ ಸಚಿವರಾಗಲಿ,

ಕಾರ್ಯದರ್ಶಿಗಳಾಗಲಿ, ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಾಗಲಿ, ಯಾರು ಸಹಿತ ಹೆಚ್ಚಿನ ಗಮನ ತೆಗೆದುಕೊಳ್ಳದಿರತಕ್ಕಂಥ ವಿಷಯ ನಿಜವಾಗಿಯೂ ವಿಷಾದನೀಯ ಈ ರೀತಿಯಾದ ಸಂದರ್ಭದಲ್ಲಿ Minor Irrigation, ZP ಕೆರೆಗಳು ಸಹಿತ ನನ್ನ ತಾಲ್ಲೂಕಿನಲ್ಲಿ ಸಹಿತ ಎಕಲಾಸ್‌ಪುರ ಕೆರ ಮತ್ತು ಕುಷ್ಟಗಿ constituency ನಲ್ಲಿ ಬರತಕ್ಕಂಥದ್ದು ಲಿಂಗಸಗೂರು ತಾಲ್ಲೂಕಿಗೆ ಸೇರಿರತಕ್ಕಂಥ ಉಪ್ಪಾರನಂಜಾಳ್ ಕೆರೆ ಸುಮಾರು 15 feet ನಷ್ಟು ಸುಮಾರು 4 ವರ್ಷಗಳಾದ ನಂತರ ತುಂಬಿದಂಥ ನೀರು ಒಡ್ಡು ಒಡೆದಿರುವುದರಿಂದ ಇವತ್ತಿನ ತನಕ ಅದರ ರಿಪೇರಿ ಮಾಡುವ ಕೆಲಸವನ್ನು ಮಾಡಿಲ್ಲ ಮತ್ತು ಅದಕ್ಕೆ ಒಂದು ರೂಪಾಯಿ ಸಹ minor irrigation ನಲ್ಲಾಗಲೀ ZP ಯವರಾಗಲಿ ಕೊಟ್ಟಿರಲಿಲ್ಲ ಮತ್ತೆ ಮಳೆ ಬಂದರೆ ಆ ಕೆರಗಳು ತುಂಬಬೇಕಾಗಿದೆ ಮತ್ತೆ ಅದರಿಂದ ರೈತರಿಗೆ ಅನುಕೂಲವಾಗುವ ಸಂದರ್ಭ ಇರುವುದರಿಂದ ತಕ್ಷಣ ಆ ಕೆರೆಗಳನ್ನು ತುಂಬಿಸುವುದಕ್ಕೆ ಆ ಒಡ್ಡು ಅನ್ನು ರಿಪೇರಿ ಮಾಡತಕ್ಕಂಥ ಕೆಲಸಕ್ಕೆ ಚಾಲನೆ ಕೊಡಬೇಕೆಂದು ನಾವು ಸಾಕಷ್ಟು ಸಲ ಒತ್ತಾಯ ಮಾಡಿದ್ದೇವೆ ಆದರೂ ಸಹ ನಮ್ಮ ಹತ್ತಿರ ಹಣವಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ ಈ ರೀತಿಯ ಗಂಬೀರವಾದ ಸಮಸ್ಯೆ ರಾಯಚೂರು ಜಿಲ್ಲೆಯಲ್ಲಿ ಇದೆ ಹಾಗಾಗಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಕನಿಷ್ಟ ಪಕ್ಷ ಕೂಡಲೆ restoration ಮಾಡತಕ್ಕಂಥ ಕೆಲಸ, ಈ culverts, road, ಕೆರೆ ಒಡ್ಡುಗಳನ್ನು ಸರಿಪಡಿಸತಕ್ಕಂಥ ಕಾರ್ಯಕ್ರಮಕ್ಕೆ ಕನಿಷ್ಟ 4–5 ಕೋಟಿ ರೂ ಗಳನ್ನು ಆದರೂ ರಿಲೀಸ್ ಮಾಡಬೇಕು ತಮ್ಮ ಹೇಳಿಕೆಯನ್ನು ಮೊನ್ನೆ ಪತ್ರಿಕೆಯಲ್ಲಿ ನೋಡಿದ ಮೇಲೆ ನಮಗೆ ಸಾಕಷ್ಟು ಅನುಮಾನ ಬಂದಿದೆ ಏಕೆಂದರೆ, 157 ಕೋಟಿ ರೂ ಗಳಷ್ಟು ರಾಜ್ಯದಲ್ಲಿ loss ಆಗಿದೆ ಎಂದು ತಮ್ಮ ಹೇಳಿಕೆಯನ್ನು ಕೊಟ್ಟಿದ್ದೀರಿ ಕೇವಲ ರಾಯಚೂರು ಜಿಲ್ಲೆಯೊಂದರಲ್ಲೇ ತಮಗೆ ಇವತ್ತು ಬರತಕ್ಕಂಥ report ಪ್ರಕಾರ ಸುಮಾರು 40 ಕೋಟಿಯಷ್ಟು ಅಂದಾಜು ನಷ್ಟ ಆಗಿದೆ ಇಂಥ ಸಂದರ್ಭದಲ್ಲಿ ಇವತ್ತಿನವರೆಗೆ ಒಂದು ರೂಪಾಯಿಯನ್ನು ಸಹ ಯಾವುದೇ ತಾಲ್ಲೂಕಿಗೂ ರಿಲೀಸ್ ಮಾಡಿಲ್ಲ ಈ ರೀತಿಯಾಗಿರತಕ್ಕಂಥ ಸಂದರ್ಭದಲ್ಲಿ ಕಳೆದ 15 ದಿವಸಗಳಿಂದ ಯಾವ ರೀತಿಯಾಗಿ ಅಲ್ಲಿ administration ಕೆಲಸ ಮಾಡಬೇಕು, ಶಾಸಕರಾದ ನಾವು ಯಾವ ರೀತಿ ಜನರಿಗೆ ಸಮಾಧಾನ ಹೇಳಬೇಕು, ರಸ್ತೆಗಳ ಸಂಪರ್ಕವನ್ನು ಅಲ್ಲಿ ಯಾವ ರೀತಿಯಾಗಿ ಸರಿಪಡಿಸಬೇಕು ಎಂಬ

ವಿಷಯಗಳನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು ಅಲ್ಲಿ ಅನೇಕ ಕಡೆ ಸಾಕಷ್ಟು ಮನೆಗಳು ಬಿದ್ದಿವೆ ತಾಂಡಾಗಳನ್ನು assessment ಮಾಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿ ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸಿದಾಗ ಸಾವಿರಾರು ಮನೆಗಳು ಬಿದ್ದುಹೋಗಿವೆ ಎಂದು ಅವರು report ಮಾಡಿದ್ದಾರೆ ಅವರಿಗೆ ಯಾವ ದಿಶೆಯಲ್ಲಿ ಸಹಾಯ ಮಾಡಬೇಕು ಮತ್ತು ಮುಂದೆ ಬರತಕ್ಕಂಥದ್ದು ಮಳೆಗಾಲವಾಗಿರುವುದಿರಂದ ಜನರೂ ಸಹಿತ ಬಹಳ ಭೀತಿಯಿಂದಿದ್ದಾರೆ ಏಕೆಂದರೆ, ಈಗಾಗಲೇ 12 ಮಂದಿ ಆ ಜಿಲ್ಲೆಯಲ್ಲಿ ಸತ್ತಿದ್ದಾರೆ ಸರ್ಕಾರದಲ್ಲಿ ಜವಾಬ್ದಾರಿ ವಹಿಸಿಕೊಂಡಿರತಕ್ಕಂಥ ಮುಖ್ಯಸ್ಥರು ಯಾರೂ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳದ ಕಾರಣ ಮುಂದೆ ಆಗತಕ್ಕಂಥ ಅನಾಹುತಗಳು ಯಾವ ದಿಶೆಯಲ್ಲಿ ಇವೆ, ಯಾವ ದಿಶೆಯಲ್ಲಿ ಸರ್ಕಾರ ಸ್ಪಂದಿಸಬಹುದು ಎನ್ನುವ ಮಾತನ್ನು ಸಹಿತ ಇವತ್ತು ಜನರು ಮಾತನಾಡುತ್ತಿದ್ದಾರೆ ಹಾಗಾಗಿ ಇವತ್ತು ಜನರಿಗೆ ಆಗಿರತಕ್ಕಂಥ ನಷ್ಟದ ಬಗ್ಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಕೊಚ್ಚಿಹೋಗಿ ಮತ್ತೆ ರೈತರ ಭೂಮಿಗೆ ಬಿತ್ತಬೇಕಾಗಿರತಕ್ಕಂಥ ಬಿತ್ತನೆ ಬೀಜದ ಸಲುವಾಗಿ ಪರಿಹಾರ ಕೊಡಬೇಕು ಅದರ ಜೊತೆಯಲ್ಲಿ ತಕ್ಷಣ subsidy ಆಧಾರದಲ್ಲಿ ಬೀಜ ಸರಬರಾಜು ಮಾಡುವ ಪ್ರಯತ್ನ ಮಾಡಬೇಕು, ಅದರ ಜೊತೆಯಲ್ಲಿ ಇವತ್ತು State Highway ನಲ್ಲಿರ ತಕ್ಕಂಥ bridges, ಈಗಾಗಲೇ ಮಾನ್ಯ ಹೆಗ್ಡೆಯವರು ಮಾತನಾಡಿದಂತೆ ನಮ್ಮ ಜಿಲ್ಲೆಯಲ್ಲಿ KRDCL ನವರು Gyaman India ದವರಿಗೆ ಕೊಟ್ಟಿದ್ದಾರೆ 3 ವರ್ಷದ ಅವಧಿ ಕೊಟ್ಟು ಅವರು ಕೊಟ್ಟಿರತಕ್ಕಂಥ ಈ bridge ಗಳು ಅವರು plan estimate ಮಾಡಿ ಇವತ್ತಿನವರೆಗೂ ಆ ಜಾಗಕ್ಕೆ ಅವರು ಬಂದಿರಲಿಲ್ಲ ಹಾಗಾಗಿ ಇವತ್ತು ಸಂಪರ್ಕ ಕಳೆದುಕೊಂಡು ಮತ್ತೆ 10-20 ದಿವಸ ರಿಪೇರಿ ಮಾಡಿ temporary ಆಗಿ ಬಿಡಬೇಕಾದರೂ ಸಾಧ್ಯವಾಗಲಾರದ ಪರಿಸ್ಥಿತಿ ಇದೆ ನಿನ್ನೆ State Highway ನಲ್ಲಿ ಸಹ KSRTC bus ಬಿದ್ದು 40 ಮಂದಿಗೆ ಗಾಯವಾಗಿದೆ ಈ ವಿಷಯದ ಬಗ್ಗೆ ಸಹ ಯಾರೂ ಮಾತನಾಡುತ್ತಿಲ್ಲ ಯಾವ ಅಧಿಕಾರಿಗಳು ಸಹ ಸ್ಥಳಕ್ಕೆ ಬಂದಿಲ್ಲ ಅವರಿಗೆ ಆಗಿರತಕ್ಕಂಥ ಅನಾಹುತಕ್ಕೆ ಅವರಿಗೆ compensation ಕೊಡತಕ್ಕಂಥ ಪ್ರಯತ್ನ ಸಹಿತ ಮಾಡಿಲ್ಲ ಒಟ್ಟಾರೆ ಏಕೆಂದರೆ, ಸರ್ಕಾರ ದಿವ್ಯ ನಿರ್ಲಕ್ಷ್ಯ ವಹಿಸಿರತಕ್ಕಂಥ ಸಂದರ್ಭ ಇವತ್ತು ರಾಯಚೂರು ಜಿಲ್ಲೆಯ ಪ್ರದೇಶದಲ್ಲಿ ಜನರು ಗಮನಿಸಿರತಕ್ಕಂಥ ಸಂದರ್ಭ ಬಂದಿದೆ 12 ಮಂದಿ ಸತ್ತಿರುವವರಲ್ಲಿ

ಮಾನ್ವಿ ತಾಲ್ಲೂಕಿನಲ್ಲಿ 5 ಮಂದಿ, ರಾಯಚೂರು ತಾಲ್ಲೂಕಿನಲ್ಲಿ 2, ಸಿಂಧನೂರು ತಾಲ್ಲೂಕಿನಲ್ಲಿ 1, ದೇವದುರ್ಗ ತಲ್ಲೂಕಿನಲ್ಲಿ 4 ಮಂದಿ, ಹೀಗೆ 12 ಮಂದಿ ಜಿಲ್ಲೆಯಾದ್ಯಂತ ಮನೆಗಳು ಬಿದ್ದಿರುವುದರಿಂದ ಸತ್ತಿರತಕ್ಕಂಥದ್ದು, ಮರಗಿಡಗಳ ಕೆಳಗೆ ನಿಂತಿರತಕ್ಕಂಥ ಸಂದರ್ಭದಲ್ಲಿ ಅದು ಬಿದ್ದಿರುವ ಸಂದರ್ಭದಲ್ಲಿ ಸತ್ತಿರುವಂಥದ್ದು, ಅದರ ಜೊತೆಗೆ ಸಿಡಿಲು ಬಡಿದ ಸಮಯದಲ್ಲಿ 4 ಜನರಿಗೆ ತೊಂದರೆಯಾಗಿ ಅವರು ಒಳ ರೋಗಿಯಾಗಿ ಲಿಂಗಸೂರು ಆಸ್ಪತ್ರೆಯಲ್ಲಿದ್ದಾರೆ ನಾವೂ ಸಹಿತ ಅಲ್ಲಿಗೆ ಬೇಟಿ ಕೊಟ್ಟಿದ್ದೇವೆ ಮತ್ತು ಶ್ರೀಮಾನ್ ಅಮರೇ ಗೌಡರು ಸಹಿತ ಭೇಟಿ ಕೊಟ್ಟಿದ್ದಾರೆ ಅವರಿಗೂ ಸಹಿತ ಯಾವ ರೀತಿಯಾದಂಥ ಏನೂ ಸಹಾಯ ಸರ್ಕಾರದಿಂದ ಸಿಕ್ಕಿರಲಿಲ್ಲ ಆ ಜನರೂ ಸಹಿತ ಬಹಳ ಬಡವರಾಗಿದ್ದಾರೆ ಅವರಿಗೆ ಯಾವ ರೀತಿಯಲ್ಲಿ ಸರ್ಕಾರದಿಂದ ಸಹಕಾರ ಸಿಗಬಹುದೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ, ಅವರು ಯಾವುದೇ ರೀತಿಯಲ್ಲಿ ಸ್ಪಂದನ ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ ಹಾಗಾಗಿ ಇವತ್ತು ಸರ್ಕಾರ ರಾಯಚೂರು ಜಿಲ್ಲೆ ಬಗ್ಗೆ ಕಡೆಗಣಿಸಿದೆ ಅಲ್ಲಿರುವ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ತಕ್ಷಣ ತಾವು ಅಧಿಕಾರಿಗಳಿಗೆ ಸೂಚಿಸಬೇಕು, ಜೊತೆಯಲ್ಲಿ ಅಲ್ಲಿಗೆ ಹಣ ಕೊಡತಕ್ಕಂಥ ಪ್ರಯತ್ನ ಮಾಡಬೇಕು ಹಣ ಇಲ್ಲದಿದ್ದರೆ ಅಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ ತಮ್ಮ ಗಮನಕ್ಕೆ ಇವತ್ತು ತರುವುದೇನೆಂದರೆ, NREG scheme ನಲ್ಲಿ ಇವತ್ತು ರಾಯಚೂರು ಜಿಲ್ಲೆ ಸೇರಿರುವುದರಿಂದ ಅಲ್ಲಿ ಕೆಲಸ ಮಾಡಿದ 4 ತಿಂಗಳುಗಳಿಂದ ಕೂಲಿಗಾಗಿ ಕಾಳು ಯೋಜನೆಯಲ್ಲಿ ಹಣ ಕೊಟ್ಟಿಲ್ಲ ಸಾಕಷ್ಟು ಗಲಾಟೆ ನಡೆಯುತ್ತಿದೆ ನಾವೂ ಸಹಿತ Chief Secretary ಯವರ ಜೊತೆ ಮಾತನಾಡಿದ್ದೇವೆ ಕಳೆದ 2 ತಿಂಗಳುಗಳಲ್ಲಿ 4 Chief Secretary ಗಳು ರಾಯಚೂರು ಜಿಲ್ಲೆಯಲ್ಲಿ change ಆಗಿದ್ದಾರೆ ಹಾಗಾಗಿ ಯಾರೂ ಜವಾಬ್ದಾರಿ ವಹಿಸಲಿಕ್ಕೆ ತಯಾರಿರಲಿಲ್ಲ ಕೂಲಿಗಾಗಿ ಕಾಳು ಯೋಜನೆಯಲ್ಲಿ ಸುಮಾರು 4 ಕೋಟಿ ರೂಪಾಯಿಗಳಷ್ಟು ಹಣ ಕಳೆದ 4 ತಿಂಗಳುಗಳಿಂದ payment ,ಆಗದೇ ಸಾಕಷ್ಟು ಪರದಾಡತಕ್ಕಂಥ ಪರಿಸ್ಥಿತಿ ರಾಯಚೂರು ಜಿಲ್ಲೆಯಲ್ಲಿದೆ ಸಾಕಷ್ಟು ಹಣ ಇದೆ, ಕೇಂದ್ರ ಸರ್ಕಾರದಿಂದ NREG scheme ನಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೊಡಲಿಕ್ಕೆ ಯಾವುದೇ ತೊಂದರೆ ಇಲ್ಲವೆನ್ನುವಂಥ ಮಾತನ್ನು ಅವರು ಹೇಳುವಂಥ ಸಂದರ್ಭದಲ್ಲಿ ಇವತ್ತು ಹಣ release ಮಾಡಲಾರದಂಥ ಸಂದರ್ಭ ನಮ್ಮ ಜಿಲ್ಲೆಯಲ್ಲಿ

ಕಾಣುತ್ತಿದೆ ಹಾಗಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಸಹ ಕೂಲಿ ಕಾರ್ಮಿಕರಿಗೆ ಸಿಗಬೇಕಾದಂಥ ಹಣವನ್ನು ತಕ್ಷಣ release ಮಾಡಿಸತಕ್ಕಂಥದ್ದು ಸರ್ಕಾರ ಮಾಡಬೇಕೆನ್ನುವ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಒತ್ತಾಯಿಸಿ, ಇವತ್ತು ತಾವು ಈ ಉಪ್ಪಾರ್‌ನಂಜಾಳ ಕೆರೆ ಮತ್ತು ಅಗಲಾಸಪುರ ಕೆರೆ, ಹೀಗೆ ಅನೇಕ ಕೆರೆಗಳು ಇವತ್ತು ಒಡೆದಿರುವುದರಿಂದ ನೀರು ಪೂರ್ತಿ ಖಾಲಿಯಾಗಿದೆ ಇವತ್ತು ಮಳೆ ಬಂದರೆ ನೀರು ನಿಲ್ಲಬೇಕಾದರೆ ಆ ಒಡ್ಡನ್ನು ತಾವು ರಿಪೇರಿ ಮಾಡಿಸಿದರೆ ಮಾತ್ರ ಏನಾದರೂ ಅಲ್ಲಿ ರೈತರಿಗೆ ಮತ್ತು ಜನರ ಕುಡಿಯುವ ನೀರಿಗೂ ಅನುಕೂಲವಾಗುತ್ತದೆಂಬ ಮಾತನ್ನು ಸಹಿತ ನಾವು ಗಮನಿಸಬೇಕಾಗಿದೆ ಇಂಥ ಸಂದರ್ಭದಲ್ಲಿ ತಕ್ಷಣ ಜಿಲ್ಲೆಗೆ ಬೇಕಾಗಿರತಕ್ಕಂಥ ಬೀಜ, ಜನರಿಗೆ compensation ಕೊಡತಕ್ಕಂಥ ಒಂದು ಪರಿಸ್ಥಿತಿ, ಅದರ ಜೊತೆಯಲ್ಲಿ ಕೊಚ್ಚಿಕೊಂಡು ಹೋಗಿರತಕ್ಕಂಥ ರೈತರ ಭೂಮಿ ಮತ್ತು ಅದರಲ್ಲಿ sand siltation ಆಗಿರತಕ್ಕಂಥದ್ದು, ನೀರಾವರಿ ಪ್ರದೇಶದಲ್ಲಿ ಸಾಕಷ್ಟು ನಾಲೆಗಳು ಇರುವಂಥ ಸಂದರ್ಭ, ಆ ನಾಲೆಗಳ ಮುಖಾಂತರ ನಮಗೆ ಇವತ್ತು ಯಾವುದೇ maintenance ಆಗಿರಬಹುದು Minor Irrigation Department ಅಥವಾ ನೀರಾವರಿ ಇಲಾಖೆಯವರು ನಮ್ಮದಲ್ಲವೆಂದು ಹೇಳುತ್ತಾರೆ Revenue ಇಲಾಖೆಯವರು ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ ಹಾಗಾಗಿ, ನೀರು ಆ ನಾಲೆಗಳ ಮುಖಾಂತರ ಹೋಗತಕ್ಕಂಥದ್ದಿದೆ ನೀರು ಆ ಗ್ರಾಮಗಳ ಹತ್ತಿರ ಬಂದಂಥ ಸಂದರ್ಭದಲ್ಲಿ siltation ಆಗಿರುವುದರಿಂದ ತಕ್ಷಣ ಆ ನೀರು ಗ್ರಾಮಾಂತರ ಪ್ರದೇಶಗಳಿಗೆ ಹೊಗಿ ಅಲ್ಲಿರತಕ್ಕಂಥ ಗುಡಿಸಲು ಮತ್ತು ಇತರೆ ಪ್ರದೇಶಗಳಲ್ಲಿ ಹೋಗುವುದರ ಮುಖಾಂತರ ಬಡ ಜನರಿಗೆ ಸಾಕಷ್ಟು ತೊಂದರೆಯಾಗುತ್ತದೆ ಹಾಗಾಗಿ, ನಾನು ಕಳೆದ ಸಲ ಮಾತನಾಡುವ ಸಂದರ್ಭದಲ್ಲಿ ಆ ನಾಲೆಗಳ maintenance ಮಾಡುವ ಪ್ರಯತ್ನವನ್ನು ಯಾವುದಾದರೂ ಇಲಾಖೆಗೆ ಒಪ್ಪಿಸಬೇಕೆಂಬ ಮಾತನ್ನು ಹೇಳಿದ್ದೆ Minor Irrigation Department ಗಾಗಲೀ, ನೀರಾವರಿ ಇಲಾಖೆಗಾಗಲೀ ವಹಿಸಿ ಆ ನಾಲೆಗಳನ್ನು ಪ್ರತಿ ವರ್ಷ maintenance ಮಾಡುವ ಪ್ರಯತ್ನ ಮಾಡದಿದ್ದರೆ ಸ್ವಲ್ಪ ಮಳೆ ಬಂದರೆ siltation ಆಗಿರುವುದರಿಂದ ತಕ್ಷಣ ಸುತ್ತಲೂ ಇರುವ ಗ್ರಾಮಗಳಲ್ಲಿ ಆ ನೀರು ಕೊಚ್ಚಿಕೊಂಡು ಹೋಗಿ ಸಾಕಷ್ಟು ತೊಂದರೆಯಾಗುವ ಸಂದರ್ಭವನ್ನು ನಾವು ನಿವಾರಣೆ ಮಾಡಬೇಕಾದರೆ ಅಲ್ಲಿ ಒಡ್ಡು ಹಾಕುವ

ಕಾರ್ಯಕ್ರಮ, silt removal ಮಾಡುವ ಕಾರ್ಯಕ್ರಮ, ಆ ಜಾಲಿ ಗಿಡಗಳನ್ನು ತೆಗೆಸುವ ಕಾರ್ಯಕ್ರಮವನ್ನು ಸಹ ಯಾವುದಾದರೊಂದು ಇಲಾಖೆ ಮುಖಾಂತರ ಮಾಡಬೇಕೆಂಬ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುತ್ತೇನೆ ಇದರ ಜೊತೆಗೆ, ಈಗಾಗಲೇ ನಾವು ಈ flood ವಿಷಯದಲ್ಲಿ ಹಣವನ್ನು ಯಾವ ರೀತಿಯಲ್ಲಿ ತಾವು ಜಿಲ್ಲೆಗೆ ಸಹಾಯ ಮಾಡುತ್ತೀರಿ ಎಂಬ ಮಾತನ್ನು ಘೋಷಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಿ ಈ ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಂ ಬಿ ಪಾಟೀಲ್ (ತಿಕೋಟ) ಜೂನ್ 22 ಮತ್ತು 23 ರಂದು ಆದಂದ ಭಾರೀ ಮಳೆಯಲ್ಲಿ ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ ಡೋಣಿ ನದಿಯ ಪ್ರವಾಹದಿಂದ ನನ್ನ ಮತ ಕ್ಷೇತ್ರದಲ್ಲಿ 3 ಜನ ಮತ್ತು ಬಿಜಾಪುರ ತಾಲ್ಲೂಕಿನ ಹುಕುಮನಾಳ ಊರಿನಲ್ಲಿ ಇಬ್ಬರು ಮತ್ತು ಸಿಂಧಗಿ ತಾಲ್ಲೂಕು ಸೇರಿ ಒಟ್ಟು 6 ಜನ ಮೃತಪಟ್ಟಿದ್ದಾರೆ 6 ಜನ ಮೃತಪಟ್ಟಿದ್ದಲ್ಲದೇ ಇವತ್ತಿನ ದಿವಸ ರೈತರೇನು ಬೀಜ ಬಿತ್ತನೆ ಮಾಡಿದ್ದರು, ಅದೂ ಕೂಡ ಹಾಳಾಗಿ ಹೋಗಿ ಇವತ್ತು ವಿಶೇಷವಾಗಿ ನಮ್ಮ ರೈತರ ಎಲ್ಲ ಒಡ್ಡುಗಳು, ಬಾಂದಾರುಗಳು, ಫಲವತ್ತಾದ ಮಣ್ಣು ಕೂಡ ಹರಿದು ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ ಜಿಲ್ಲಾಧಿಕಾರಿಗಳು ಸುಮಾರು 25-30 ಕೋಟಿ ರೂ ಅಂದಾಜು ಮಾಡಿದ್ದಾರೆ ನೂರಾರು ಕೋಟಿ ರೂಪಾಯಿ ಇವತ್ತಿನ ದಿವಸ ಹಾನಿಯಾಗಿದೆ ವಿಶೇಷವಾಗಿ ಇದಕ್ಕೆ ಮೂಲ ಕಾರಣವೆಂದರೆ ಡೋಣಿ ನದಿಯಲ್ಲಿ ಹೂಳು ತುಂಬಿದ್ದು ಈ ಪ್ರವಾಹಕ್ಕೆ ಕಾರಣವಾಗಿದೆ ಹಿಂದೆ ಕೇಂದ್ರ ಸರ್ಕಾರ ಡೋಣಿ ನದಿಯ ಹೂಳು ತೆಗೆಯಬೇಕೆಂಬ ಕಾರ್ಯಕ್ರಮ ಹಾಕಿಕೊಂಡಿತ್ತು Pilot project ನಡಿಯಲ್ಲಿ ಕೂಡ ಸುಮಾರು 5 ಕೋಟಿ ರೂಪಾಯಿಗಳನ್ನು ಸಹ ಬಿಡುಗಡೆ ಮಾಡಿದ್ದರು ಬಿಜಾಪುರದಲ್ಲಿ University of Agircultural Sciences ನವರು ಅದಕ್ಕೆ ಹಣವನ್ನು ಕೊಟ್ಟು ಆ Pilot project ಮಾಡಿದ್ದರು ಆದರೆ, ಇವತ್ತೇನಾಗಿದೆ? ಮುಖ್ಯವಾದ ಕಾರ, ಡೋಣಿ ನದಿಯ ಹೂಳೆತ್ತುವ ಕಾರ್ಯಕ್ರಮ ಎಲ್ಲಿಯವರೆಗೆ ಆಗುವುದಿಲ್ಲ ಅಲ್ಲಿಯವರೆಗೆ ಡೋಣಿ ನದಿ ಸುತ್ತಮುತ್ತ ಬರುವ ಹಳ್ಳಿಗಳಲ್ಲಿ ಈ ಪ್ರವಾಹ ತಪ್ಪಿದ್ದಲ್ಲ ನಾನು ಈ ಸಂದರ್ಭದಲ್ಲಿ ವಿಶೇಷವಾಗಿ ಸರ್ಕಾರವನ್ನು ಒತ್ತಾಯ

ಮಾಡುತ್ತೇನೆ, ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಡೋಣಿ ನದಿಯ ಹೂಳೆತ್ತುವ ಕಾರ್ಯಕ್ರಮ ಮುಂದುವರಿಯಬೇಕು ಅದು ಶೀಘ್ರದಲ್ಲಿ ಆಗಬೇಕು ಅದರ ಜೊತಗೆ, ಡೋಣಿ ನದಿ ಸುತ್ತಮುತ್ತ ಬರುವ ಕೋಟ್ಯಾಳು ಮತ್ತು ಹುಕುಮನಾಳ ಮುಂತಾದ 20 ಹಳ್ಳಿಗಳಿವೆ ಆ ಹಳ್ಳಿಗಳ ಜನರನ್ನು ಸುರಕ್ಷಿತವಾದ ಜಾಗಕ್ಕೆ ಸ್ಥಳಾಂತರ ಮಾಡುವುದು ಮುಖ್ಯವಾಗಿದೆ ನಮ್ಮ ಜವಳಿ ಸಚಿವರು, ಉಸ್ತುವಾರಿ ಸಚಿವರು ಇವತ್ತಿನ ದಿವಸ ಹೋಗಿದ್ದಾರೆ ಕೋಟ್ಯಾಳ ಗ್ರಾಮದಲ್ಲಿ ಅನೇಕ ಮನೆಗಳು ಇವತ್ತಿನ ದಿವಸ ಬಿದ್ದಿವೆ ಸಾವಿರಾರು ಮಣ್ಣಿನ ಮನೆಗಳು ಬೀಳುವಂಥ ಪರಿಸ್ಥಿತಿಯಲ್ಲಿವೆ ಸರ್ಕಾರದವರು ಒಂದು ಸಾವಿರ ರೂಪಾಯಿ ಪರಿಹಾರ ಎಂದು ಕೊಟ್ಟಿದ್ದಾರೆ ಈ ಒಂದು ಸಾವಿರ ರೂಪಾಯಿ ಯಾವುದಕ್ಕೂ ಸಾಲುವುದಿಲ್ಲ ಪ್ರತಿಯೊಬ್ಬ ರೈತನ ಜಮೀನಿನ ಪ್ರತಿಯೊಂದು ಎಕರೆಗೆ ಇವತ್ತಿನ ದಿವಸ ಕನಿಷ್ಠ ಪಕ್ಷ 25 ಸಾವಿರ ರೂ ಗಳಾದರೂ ಕೊಟ್ಟರೆ, ಇವತ್ತು ಹಾನಿಯಾದಂಥ ಒಡ್ಡುಗಳಾಗಲೀ, ಬಾಂದಾರಗಳಾಗಲೀ, ಬೀಜ, ಗೊಬ್ಬರ ತಂದು ರೈತರು ಉಪ ಜೀವನ ಮಾಡಲು ಅನುಕೂಲವಾಗುತ್ತದೆ ಅದರ ಜೊತೆಗೆ, ಮನೆಗಳೇನು ಬಿದ್ದಿವೆ, ಬಿದ್ದಂಥ ಪ್ರತಿ ಮನೆಗೆ ಕನಷ್ಠ ಪಕ್ಷ 25 ರಿಂದ 30 ಸಾವಿರ ರೂ ಕೊಡಬೇಕಾಗುತ್ತದೆ ಬೀಳುವಂಥ ಮತ್ತು partially damage ಆದಂಥ ಮನೆಗಳಿಗೆ ಕನಿಷ್ಠ ಪಕ್ಷ 10 ರಿಂದ 15 ಸಾವಿರ ರೂ ಕೊಟ್ಟರೆ ಆ ಜನರಿಗೆ ಅನುಕೂಲವಾಗುತ್ತದೆ ಕೇವಲ ಒಂದು ಸಾವಿರ ರೂ ಕೊಟ್ಟರೆ ಅದು ಯಾವುದಕ್ಕೂ ಪ್ರಯೋಜನವಾಗುವುದಿಲ್ಲ ಇದಲ್ಲದೇ, ತೊರವಿ ಗ್ರಾಮದಲ್ಲಿ ಕೆರೆ ಒಡೆದು 500 ಕುರಿಗಳು ಕೊಚ್ಚಿಕೊಂಡು ಹೋಗಿವೆ ಹಸು, ಎಮ್ಮೆ, ಮೇಕೆಗಳು ಈ ಪ್ರವಾಹದಿಂದ ಕೊಚ್ಚಿಕೊಂಡು ಹೋಗಿ ಸಾವಿಗೀಡಾಗಿವೆ ಅವುಗಳಿಗೆ ಸೂಕ್ತವಾದ ಪರಿಹಾರ ಕೊಡಬೇಕು ಅದಲ್ಲದೆ ಮಳೆಯ ರಭಸಕ್ಕೆ ಬಿಜಾಪುರ- ಲೋಕಾಪುರ ರಸ್ತೆ ಮತ್ತು ಇನ್ನಿತರ ಗ್ರಾಮೀಣ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿವೆ ಆ ಎಲ್ಲಾ ರಸ್ತೆಗಳನ್ನು ತುರ್ತಾಗಿ ರಿಪೇರಿ ಮಾಡಬೇಕು ಅವುಗಳ ಕಾಮಗಾರಿಗಳನ್ನು ಮತ್ತೆ ವ್ಯವಸ್ಥಿತವಾದ ರೀತಿಯಲ್ಲಿ ಮುಗಿಸಬೇಕಾಗುತ್ತದೆ ಅದರ ಜೊತೆಗೆ ವಿಶೇಷವಾಗಿ ಈ ರೈತರ ಏನು ಕಣಿಕೆ ಬಣವೆಗಳು ಇವೆ, ಅದೂ ಕೂಡ ಕೊಚ್ಚಿಕೊಂಡು ಹೋಗಿ ಮೇವಿಗೆ ಸಾಕಷ್ಟು ತೊಂದರೆಯಾಗಿ ಅಭಾವವಾಗಿದೆ ಅದಕ್ಕೆ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಈ ಕೂಡಲೇ ಈ ಎಲ್ಲಾ ಪರಿಹಾರ ಕಾಮಗಾರಿಗಳು ಶೀಘ್ರದಲ್ಲಿ ಆಗಿ ಮತ್ತು 2-3

ಕೆರೆಗಳು ಕೂಡ ಒಡೆದು ಹೋಗಿವೆ ಈ ಎಲ್ಲಾ ಕೆಲಸಗಳು ಶೀಘ್ರದಲ್ಲಿ ಆಗಬೇಕು - ಮಾನ್ಯ ಬೋಸರಾಜುರವರು ಹೇಳಿದ ಹಾಗೆ ವಿದ್ಯುಚ್ಛಕ್ತಿ ಇಲಾಖೆ 20 ರಿಂದ 25 ದಿವಸಗಳಾದರೂ ಕುಡ ಒಂದೊಂದು ಹಳ್ಳಿಗೂ ಕೂಡ ವಿದ್ಯುತ್ ಸಂಪರ್ಕ ಕೊಡಲಿಕ್ಕೆ ಆಗಲಿಲ್ಲ Transformer and pump-set ಹಾಳಾಗಿದೆ ಹಿಟ್ಟಿನ ಗಿರಣಿ ನಡೆಯಲಾರದ ಪರಿಸ್ಥಿತಿ ಇದೆ ವಿದ್ಯುತ್ ಕಂಬಗಳು ಕೂಡ ಹಾಳಾಗಿವೆ ಇಷ್ಟು ದಿವಸಗಳಾದರೂ ವಾಪಸ್ಸು ಆ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕೊಡಲಿಕ್ಕೆ ಆಗಲಿಲ್ಲ ಅದಕ್ಕೆ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ ಕೂಡಲೆ, ಘೋಣಿ ನದಿಯ ಹೂಳೆತ್ತುವ ಕಾರ್ಯ ಆಗಬೇಕು ಅದಕ್ಕೆ ಅತೀ ಸೂಕ್ಷ್ಮ ಪ್ರದೇಶಗಳೇನಿವೆ, ಅವುಗಳನ್ನು ಸ್ಥಳಾಂತರ ಮಾಡಬೇಕು ರೈತರಿಗೆ ವಿಶೇಷವಾಗಿ ಪ್ರತಿ ಎಕರೆ ಕನಿಷ್ಟ ಪಕ್ಷ 25 ಸಾವಿರ ರೂ ಕೊಟ್ಟರೆ ಒಡ್ಡು, ಬಾಂದಾರ, ಬಿತ್ತನೆ ಬೀಜಕ್ಕಾಗಲಿ ಅನುಕೂಲವಾಗಿ ರೈತರು ಜೀವನ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ ಬಿದ್ದಂಥ ಮನೆಗಳಿಗೆ ಕೂಡಲೆ ಕನಿಷ್ಠ ಪಕ್ಷ 25-30 ಸಾವಿರ ರೂ ಕೊಡಬೇಕು ಅನೇಕ ಕಡೆ ರೆವಿನ್ಯೂ ಇಲಾಖೆಯವರು ಮನೆಗಳು ಬಿದ್ದಿದ್ದಷ್ಟೇ ನೋಡುತ್ತಿದ್ದಾರೆ ಮನೆಗಳಿಗೆ ನೀರು ನುಗ್ಗಿ ಮನೆಗಳು ಸಂಪೂರ್ಣವಾಗಿ ಬೀಳುವಂಥ ಸ್ಥಿತಿಯಲ್ಲಿ ಸಾಕಷ್ಟಿವೆ ಅದಕ್ಕೆ ಸರ್ಕಾರ ಅತಿ ಶೀಘ್ರದಲ್ಲಿ ಎಲ್ಲಾ ಕೆಲಸಗಳಿಗೆ ಪರಿಹಾರ ದೊರಕಿಸಿ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಸದಲಗ) ಬೆಳಗಾಂ ಜಿಲ್ಲೆಯಲ್ಲಿ ಕೃಷ್ಣಾ ನದಿ ಮತ್ತು ದೂದ್‌ಗಂಗಾ, ವೇದಗಂಗಾ ನದಿಗಳ ಮೂಲಕ ಚಿಕ್ಕೋಡಿ ತಾಲ್ಲೂಕಿನ ಸುಮಾರು 16 ಹಳ್ಳಿಗಳು ಮತ್ತು ಅಥಣಿ ತಾಲ್ಲೂಕಿನ ಸುಮಾರು ಹಳ್ಳಿಗಳು ಪ್ರತಿ ವರ್ಷ ಮಹಾಪೂರದಿಂದ ಆ ಗ್ರಾಮಗಳು ಮುಳುಗಡೆ ಯಾಗುತ್ತವೆ 2005-06, 2006-07 ರಲ್ಲಿ ಸತತವಾಗಿ 3 ವರ್ಷಗಳು ಈ ಕೊಯ್ನಾ ಡ್ಯಾಂ ಮತ್ತು ಕಾಳೆಂವಾಡಿ ಡ್ಯಾಂ ನಿಂದ ನೀರು ಬಂದು ಅಥಣಿ ಮತ್ತು ಚಿಕ್ಕೋಡಿ ತಾಲ್ಲೂಕಿನ ಹಳ್ಳಿಗಳು ಪೂರ್ಣ ಜಲಾವೃತಗೊಂಡು ಜನರು ಹಳ್ಳಿಗಳಿಂದ ಹೊರಗೆ ಬರಲಿಕ್ಕೆ ಕೂಡ ಅನಾನುಕೂಲವಾಗಿದೆ ಆ ಸಂದರ್ಭದಲ್ಲಿ boats ಮುಖಾಂತರ ಹೊರತರುವ ಪರಿಸ್ಥಿತಿ ಇದೆ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ ಈ ವರ್ಷ ತಾವು ಆಲಮಟ್ಟಿ ಗೇಟ್ ಅನ್ನು ಸಂಪೂರ್ಣ ತೆಗೆದಿದ್ದರಿಂದ ಮಹಾಪೂರ ಎಷ್ಟು

ಬರಬೇಕಾಗಿತ್ತು ಅಷ್ಟು ಮಹಾಪೂರ ಈ ಸಲ ಬಂದಿಲ್ಲ ರೈತರು ನೆಮ್ಮದಿಯಿಂದ ಇದ್ದಾರೆಂದು ಹೇಳಲಿಕ್ಕೆ ಸಂತೋಷವೆನಿಸುತ್ತದೆ. ಆಲಮಟ್ಟಿಯ ಗೇಟನ್ನು ಎಲ್ಲ ಹೊರಗೆ ತೆಗೆದಿದ್ದುದರಿಂದ ಇವತ್ತು ಅಷ್ಟು ದೊಡ್ಡ ಪ್ರಮಾಣದಲ್ಲಿ ಚಿಕ್ಕೋಡಿ ತಾಲ್ಲೂಕು ಮತ್ತು ಅಥಣಿ ತಾಲ್ಲೂಕಿನಲ್ಲಿ ಅಷ್ಟು ಮಹಾಪೂರ ಬಂದಿಲ್ಲ ಕಂದಾಯ ಸಚಿವರನ್ನು ವಿನಂತಿಸುವುದೇನೆಂದರೆ ಮುಖ್ಯವಾಗಿ ಹಳ್ಳಿಗಳಿಂದ ರೈತರು, ಜಾನುವಾರುಗಳು ಹೊರಗೆ ಬರಲಿಕ್ಕೆ ರಸ್ತೆ ಎತ್ತರ ಮಾಡಲಿಕ್ಕೆ ಹಣ ಕೊಡಬೇಕು ತಮ್ಮ ಗಮನಕ್ಕೆ ನಾವು ಸಾಕಷ್ಟು ಸಲ ತಂದಿದ್ದೇವೆ ನನ್ನ ಕ್ಷೇತ್ರದಲ್ಲಿ 8 ಹಳ್ಳಿಗಳ ರಸ್ತೆ ಎತ್ತರ ಮಾಡುವುದರಿಂದ ನಮ್ಮ ಆ ಗ್ರಾಮಸ್ಥರಿಗೆ boat ಅವಶ್ಯಕತೆ ಬಂದಿಲ್ಲ ಇವತ್ತು ಮಹಾಪೂರ ಬಂದರೂ ಕೂಡ ತಮ್ಮ ದನಕರುಗಳನ್ನು ಜನರು ತೆಗೆದುಕೊಂಡು ಸುರಕ್ಷಿತ ಸ್ಥಳಕ್ಕೆ ಹೋಗುವುದಕ್ಕೆ ಈ ಸಾರಿ ಅನುಕೂಲವಾಗಿದೆ ದಯವಿಟ್ಟು ತಾವು ಹೋದ ವರ್ಷ ಈ ಗ್ರಾಮಗಳನ್ನು ಸ್ಥಳಾಂತರ ಮಾಡಲಿಕ್ಕೆ ಮತ್ತು ರಸ್ತೆಗಳನ್ನು ಎತ್ತರ ಮಾಡಲಿಕ್ಕೆ ಹಣ ಕೊಟ್ಟಿದ್ದೀರಿ, ಅದು ಸಂಪೂರ್ಣವಾಗಿ ಖರ್ಚಾಗಿಲ್ಲ ದಯವಿಟ್ಟು ಈ ಸಾರಿ, ಆ ಮಹಾಪೂರದಿಂದ ಎಲ್ಲೆಲ್ಲಿ ರಸ್ತೆಗಳನ್ನು ಎತ್ತರ ಮಾಡಬೇಕಾಗಿತ್ತು, ಅಲ್ಲಿಗೆಲ್ಲಾ ಹಣ ಕೊಡಬೇಕು ಎಲ್ಲಿ ಸ್ಥಳಾಂತರ ಮಾಡಬೇಕಾಗಿದೆ, ಆ ಗ್ರಾಮಗಳನ್ನು ಸ್ಥಳಾಂತರ ಮಾಡುವುದಕ್ಕೆ ನಮ್ಮದೇನು ತಕರಾರಿಲ್ಲ ಆದರೆ ಅಲ್ಲಿ ಈ ಮೊದಲು ಅಲ್ಲಿದ್ದಂಥ ಅಧಿಕಾರಿಗಳು ಸರಿಯಾಗಿ ಹೊಂದಾಣಿಕೆ ಯಾಗುತ್ತಿರಲಿಲ್ಲ ಈಗ ನೀವು ಅವರನ್ನು ಬೇರೆ ಕಡೆಗೆ ತೆಗೆದು ಹಾಕಿದಿರಿ, ಅದಕ್ಕೆ ನಾವು ನಿಮ್ಮನ್ನು ಅಭಿನಂದಿಸುತ್ತೇವೆ ಆದರೆ ದಯವಿಟ್ಟು ಆ ರೀತಿ ಆಗಬಾರದು ನಾವು ಇಲ್ಲಿ ಜಗಳ ಮಾಡಿಕೊಂಡು ಕುಳಿತರೆ, ಈ ಮಹಾಪೂರದಿಂದ ಜನರಿಗೆ ಏನು ಅನಾನುಕೂಲವಾಗುತ್ತದೆ, ಅದರ ಬಗ್ಗೆ ತಾವು ಗಮನಹರಿಸಬೇಕು 2005 ರಲ್ಲಿ ಚಿಕ್ಕೋಡಿ ಮತ್ತು ಅಥಣಿ ತಾಲ್ಲೂಕಿನಲ್ಲಿ ಮಹಾಪೂರ ಬಂದಂಥ ಸಂದರ್ಭದಲ್ಲಿ ಆಗ ಬೆಳಗಾವಿ ಜಿಲ್ಲೆಗೆ 171 ಕೋಟಿ ರೂಪಾಯಿಗಳನ್ನು ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ಎಂ ಪಿ ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ಕೊಟ್ಟಿದ್ದರು ಹೋದ ವರ್ಷ ಸಮ್ಮಿಶ್ರ ಸರ್ಕಾರದಲ್ಲಿ 40 ಕೋಟಿ ರೂಪಾಯಿ ಬಂತು ಈ ಸಾರಿ ಬರೀ 10 ಲಕ್ಷ ರೂಪಾಯಿಗಳನ್ನು ತಾಲ್ಲೂಕಿಗೆ ಹಣ ಬಿಡುಗಡೆ ಮಾಡಿದ್ದಾರೆ ಸನ್ಮಾನ್ಯ ಮುಖ್ಯಮಂತ್ರಿಗಳೇ, ಸ್ವಲ್ಪ ಈ ಕಡೆ ಗಮನ ಕೊಡಬೇಕು ಈ ಸಾರಿ

ತಾಲ್ಲೂಕುಗಳಿಗೆ ಬರೀ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಇದರಿಂದ ಏನೂ ಉಪಯೋಗವಾಗುವುದಿಲ್ಲ ಯಾರಿಗೂ ಆಹಾರಧಾನ್ಯಗಳನ್ನು ಕೊಡುವುದಕ್ಕೆ ಆಗುವುದಿಲ್ಲ, ಯಾರಿಗೂ ಸೀಮೆಎಣ್ಣೆ ಕೊಡುವುದಕ್ಕೆ ಆಗುವುದಿಲ್ಲ ಆದುದರಿಂದ ದಯಮಾಡಿ ನಮ್ಮ ಜಿಲ್ಲೆಗೆ 2005ರಲ್ಲಿ ಏನು 171 ಕೋಟಿ ರೂಪಾಯಿ ಬಂದಿತ್ತು, ಹೋದ ಸಾರಿ 40 ಕೋಟಿ ರೂಪಾಯಿ ಬಂದಿತ್ತು, ಅದೇ ತರಹ ಹೆಚ್ಚಿಗೆ ಈ ಪ್ರವಾಹ ಪೀಡಿತ ಪ್ರದೇಶಗಳಿಗೆ ಹಚ್ಚಿನ ಹಣವನ್ನು ಕೊಟ್ಟು, ಬೆಳೆ ಪರಿಹಾರ ಇರಬಹುದು, ನಮ್ಮ ಧಾನ್ಯವನ್ನು ಫ್ರೀಯಾಗಿ ಹಂಚಿಕೆ ಮಾಡುವುದಾಗಿರಬಹುದು ಅಥವಾ ರಸ್ತೆಗಳನ್ನು ಎತ್ತರ ಮಾಡುವುದಕ್ಕೆ ಇದೇ ತಿಂಗಳಲ್ಲಿ ರಾಜ್ಯ ಸರ್ಕಾರವೇ ಹಣ ಕೊಡಬೇಕು ಈಗಾಗಲೇ ನಮ್ಮ ಮಿತ್ರರು, ಕೇಂದ್ರ ಸರ್ಕಾರಕ್ಕೆ ಮನವಿ ಮಾಡೋಣ, ಅಲ್ಲಿಗೆ ಒಂದು ನಿಯೋಗ ತೆಗೆದುಕೊಂಡು ಹೋಗೋಣವೆಂದು ಒಂದು ಮಾತು ಹೇಳಿದರು ಇದು ಯಾವುದೂ ಬೇಕಾಗಿಲ್ಲ ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿ ಆಮೇಲೆ ಬೇಕಾದರೆ ಕೇಂದ್ರ ಸರ್ಕಾರದಿಂದ ಹಣ ಪಡೆದುಕೊಳ್ಳಬೇಕು ಆ ರೀತಿಯಾಗಿ ಮಾನ್ಯ ಎಂ ಪಿ ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದಾಗ ಸಾಕಷ್ಟು ಸಾರಿ ಮಾಡಿದ್ದಾರೆ ಎಲ್ಲೆಲ್ಲಿ ಅವಶ್ಯಕತೆ ಬೀಳುತ್ತದೆ, ಆ ವೇಳೆಯಲ್ಲಿ ತಕ್ಷಣ ರಾಜ್ಯ ಸರ್ಕಾರದಿಂದ ಹಣ ಮಂಜೂರು ಮಾಡಿ ಆಮೇಲೆ ಕೇಂದ್ರದಿಂದ ಹಣವನ್ನು ತರಿಸತಕ್ಕಂಥ ಪ್ರಾಮಾಣಿಕವಾದ ವ್ಯವಸ್ಥೆಯನ್ನು ಮಾಡಿದ್ದಾರೆ ದಯವಿಟ್ಟು ಆ ರೀತಿಯಾಗಿ ಮಾಡಬೇಕೆಂದು ಹೇಳುತ್ತಿದ್ದೇನೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕೆಂದರೆ, ಚಿಕ್ಕೋಡಿ ತಾಲ್ಲೂಕಿನಲ್ಲಿ ಎರಡು ತಿಂಗಳಿಂದ ಈ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮೊದಲು ಟ್ರಾನ್ಸ್‌ಫಾರಂ ಸುಟ್ಟು ಎರಡು ತಿಂಗಳಾಯಿತು ಸುಮಾರು ಎರಡು ತಿಂಗಳಿನಿಂದ ಚಿಕ್ಕೋಡಿ ಮತ್ತು ಅಥಣಿ ತಾಲ್ಲೂಕಿನಲ್ಲಿ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಟ್ರಾನ್ಸ್‌ಫಾರಂಗಳನ್ನು ಕೊಡುವುದಕ್ಕೆ ಆಗಿಲ್ಲ ಈಗ ಮಹಾಪೂರ ಬಂದಿರುವುದರಿಂದ ಅವರು ಕೊಟ್ಟರೂ ಎರಡು ತಿಂಗಳಾದರೂ ಅಲ್ಲಿ ಹೋಗಿ ಟ್ರಾನ್ಸ್‌ಫಾರಂಗಳನ್ನು ಹೊಲದಲ್ಲಿ ಹೋಗಿ ಹಾಕುವುದಕ್ಕೆ ಆಗುವುದಿಲ್ಲ ಹೀಗಾಗಿ ಮಹಾಪೂರ ಬಂದು ಎಲ್ಲಾ ಬೆಳೆ ಹಾಳಾಗಿ ಹೋಯಿತು ಮಹಾಪೂರಕ್ಕಿಂತ ಮೊದಲು ರೈತರಿಗೆ ಟ್ರಾನ್ಸ್‌ಫಾರಂಗಳನ್ನು ಕೊಡಲಿಲ್ಲ ಹೀಗಾಗಿ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಮಾಡಲಿಕ್ಕೆ ಆಗಲಿಲ್ಲ ಆದುದರಿಂದ ಅತಿವೃಷ್ಟಿಯಲ್ಲಿ ಮತ್ತು ಅನಾವೃಷ್ಟಿಯಲ್ಲಿ ಬೆಳೆಗಳನ್ನು ನಾವು ಕಳೆದುಕೊಂಡಿದ್ದೇವೆ ಮೊನ್ನೆ ನಮ್ಮ

ಉಸ್ತುವಾರಿ ಸಚಿವರು ಚಿಕ್ಕೋಡಿಗೆ ಬಂದಿದ್ದರು ಆ ಸಂದರ್ಭದಲ್ಲಿ ನಮ್ಮ ಲಕ್ಷ್ಮಣ ಸವದಿಯವರು ಬಂದಿದ್ದರು, ಆಗ ಅಲ್ಲಿ ಒಂದು ಮೀಟಿಂಗ್ ಮಾಡಿದಾಗ ಅಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರ್‌ರವರನ್ನು ಕರೆದು, ಟ್ರಾನ್ಸ್‌ಫಾರಂ ಹಾಳಾಗಿ ಹೋಗಿ ಎರಡು ತಿಂಗಳಾಯಿತು ನೀವು ಏಕೆ ಕೊಡಲಿಲ್ಲ? ಇದಕ್ಕೇನು ಕಾರಣವೆಂದು ಕೇಳಿದಾಗ ಅವರು ಒಂದೂ ಸರಿಯಾಗಿ ಉತ್ತರ ಕೊಡಲಿಕ್ಕೆ ಆಗಲಿಲ್ಲ ಸ್ವತಃ ಲಕ್ಷ್ಮಣ ಸವದಿಯವರೇ ಕಳೆದ ಮೂರು ತಿಂಗಳಿನಿಂದ ಅಥಣಿ ತಾಲ್ಲೂಕಿನಲ್ಲಿ ಯಾವ್ಯಾವ ತಾರೀಖಿಗೆ ಟ್ರಾನ್ಸ್‌ಫಾರಂಗಳು ಸುಟ್ಟಿವೆ, ಎಂಬುದರ ಬಗ್ಗೆ ಎಕ್ಸಿಕ್ಯೂಟಿವ್ ಇಂಜನಿಯರ್ ಗಮನಕ್ಕೆ ತಂದರು ಆದರೆ, ಆ ಎಕ್ಸಿಕ್ಯೂಟಿವ್ ಇಂಜನಿಯರ್ ಒಂದು ಮಾತನ್ನು ಆಡಲಿಲ್ಲ ಟ್ರಾನ್ಸ್‌ಫಾರಂಗಳನ್ನು ಏಕೆ ಕೊಡಲಿಲ್ಲ, ನಮಗೆ ಏಕೆ ಹಣ ಬರಲಿಲ್ಲ ಎಂಬುದರ ಬಗ್ಗೆ ಒಂದು ಚಕಾರ ಶಬ್ದವನ್ನು ಎತ್ತಲಿಲ್ಲ ಆಗ ಲಕ್ಷ್ಮಣ ಸವದಿಯವರು ಆ ಅಧಿಕಾರಿಗಳಿಗೆ ಏನು ಹೇಳಬೇಕಾಗಿತ್ತು, ಅದನ್ನು ಹೇಳಿದ್ದಾರೆ ಎಲ್ಲಾ ಮೀಟಿಂಗ್ ಮುಗಿದ ಮೇಲೆ ಇನ್ನಿತರ ಅಧಿಕಾರಿಗಳಿಗೆ ಏನು ಹೇಳುತ್ತಾರೆಂದರೆ, ಸಾಯಂಕಾಲ ಹೋಗಿ ಶಾಸಕರಿಗೆ ಮತ್ತು ಮಂತ್ರಿಗಳಿಗೆ ಭೇಟಿಯಾದರೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ, ಮೀಟಿಂಗ್‌ನಲ್ಲಿ ಏನಾದರೂ ಮಾತನಾಡಿಕೊಳ್ಳಲಿ, ಏನಾದರೂ ನಮ್ಮ ಮೇಲೆ ಹೇಳಲಿ, ನಾವು ಆಮೇಲೆ ಹೋಗಿ ನಾವು ಶಾಸಕರಿಗೆ ಮತ್ತು ಮಂತ್ರಿಗಳಿಗೆ ಭೇಟಿಯಾಗುತ್ತೇವೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳುತ್ತಾರೆ ಇದನ್ನು ಅದೇ ಜಾಗದಲ್ಲಿ ಹೇಳಿದ್ದಾರೆ ನಾವೇನು ಸುಳ್ಳು ಹೇಳುತ್ತಿಲ್ಲ ಎಕ್ಸಿಕ್ಯೂಟಿವ್ ಇಂಜನಿಯರ್ ರವರೇ ಹೇಳಿದ್ದಾರೆ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ತೋಟಗಾರಿಕೆ ಸಚಿವರು) ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ ಆದರೆ, ಮಂತ್ರಿಗಳ ಹತ್ತಿರ ಸಂಜೆ ಹತ್ತಿರ ಹೋಗಿ ಸರಿಪಡಿಸುತ್ತೇವೆಂದರೆ ಹೇಗೆ? ಆ ದಿವಸ ನಿಮ್ಮ ಮುಂದೆ ಅವರನ್ನು ಕರೆಯಿಸಿ ಏನು ಹೇಳಬೇಕಾಗಿತ್ತು ಎಂಬುದನ್ನು ತಾಕೀತು ಮಾಡಿದ್ದೇವೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಮಾಡಿದ್ದೇವೆ

(ಗೊಂದಲ)

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಯಾರು ದುಡ್ಡು ಕೊಟ್ಟಿದ್ದಾರೆ ಆ ರೈತರನ್ನೇ ನೀವು ಕರೆದು ಕೇಳಿದಿರಿ ನೀವೇ ಆ ರೈತರನ್ನು ಅಧಿಕಾರಿಗಳು ಎಷ್ಟೆಷ್ಟು ದುಡ್ಡು ತೆಗೆದುಕೊಂಡಿದ್ದಾರೆ ಹೇಳಿ ಎಂದು ನೀವೇ ಕೇಳಿದ್ದೀರಿ ನಾನು ಕೇಳಿಲ್ಲ ನೀವೇ ಜಿಲ್ಲಾ ಉಸ್ತುವಾರಿ ಸಚಿವರು ನಾನೇನು ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಡುತ್ತಿಲ್ಲ

(ಗೊಂದಲ)

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ ಆ ಕಂಟ್ರಾಕ್ಟ್‌ದಾರರಿಗೆ ಇವತ್ತು ಕೋಟ್ಯಾಂತರ ರೂಪಾಯಿ ಬಿಲ್ ಬಾಕಿ ಇದೆ

(ಗೊಂದಲ)

ಶ್ರೀ ಪ್ರಕಾಶ್ ಬಿ ಹುಕ್ಕೇರಿ ನೀವೇ ಆ ರೈತರನ್ನು ಕರೆದು ಸೆಕ್ಷನ್ ಆಫೀಸರ್‌ಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂದು ಕೇಳಿದಿರಿ ನಮ್ಮ ಮುಂದೆ ನೀವೇ ಕೇಳಿದಿರಿ, ನಾವು ಏಕೆ ಅದನ್ನು ಹೇಳಬೇಕು ಆ ದಿವಸ ನಾವು ಇದ್ದವು, ಎಲ್ಲಾ ಶಾಸಕರು ಇದ್ದರು ನಿಮ್ಮ ಗಮನಕ್ಕೂ ಬಂದಿದೆ ನೀವು ಹೊರಗಡೆ ಬಂದು ಕಾರಿನಲ್ಲಿ ಹೋದ ಮೇಲೆ ಆ ಎಕ್ಸಿಕ್ಯೂಟಿವ್ ಇಂಜಿನಿಯರ್ ಬಹಳ ಸ್ಪಷ್ಟವಾಗಿ ಹೇಳುತ್ತಾರೆ ** ಅದು ತಮ್ಮ ಗಮನಕ್ಕೂ ಕೂಡ ಬಂದಿದೆ ನಾವೇನು ಇವತ್ತು ಆ ಅಧಿಕಾರಿಗಳ ಮೇಲೆ ದೂರು ಹೇಳುವ ಪ್ರಮೇಯ ಇಲ್ಲ

ಶ್ರೀ ಜಗದೀಶ್ ವಿರೂಪಾಕ್ಷಪ್ಪ ಮೆಟಗುಡ್ ನೀವು ಕೂಡ ಹಿಂದೆ ಉಸ್ತುವಾರಿ ಮಂತ್ರಿಗಳಾಗಿದ್ದರಲ್ಲ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ನಾನು ನಮ್ಮ ಬೆಳಗಾವಿ ಜಿಲ್ಲೆಯದು ಮಾತನಾಡುತ್ತೇನೆ ನೀವು ಏಕೆ ಮಾತನಾಡುತ್ತೀರಿ? ತಾವು ಕುಳಿತುಕೊಳ್ಳಿ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ ನಾನು ಆ ದಿವಸ ತಮ್ಮ ಮುಂದೆಯೇ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಡಿ ಸಿ ಯವರ

**ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ

ಮುಖಾಂತರ ಹೇಳಿದ್ದೇವೆ ಹೀಗಿರುವಾಗ ತಾವು ಆ ರೀತಿಯಾಗಿ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡಬಾರದು

ಶ್ರೀ ಪ್ರಕಾಶ್ ಬಿ ಹುಕ್ಕೇರಿ ನಿವ್ಯಾಕೆ ಜಿಲ್ಲಾಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೀರಿ, ನಿವು ಜಿಲ್ಲಾ ಉಸ್ತುವಾರಿ ಸಚಿವರು ಇದ್ದೀರಿ ನೀವೇ ಕ್ರಮ ತೆಗೆದುಕೊಳ್ಳ ಬೇಕಾಗಿತ್ತು ನೀವೇ ಕ್ರಮ ತೆಗೆದುಕೊಂಡು ಹೋಗಬೇಕಾಗಿತ್ತು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ ನಾವು ನಿಮ್ಮ ಮುಂದೆ ಅವರನ್ನು ಕರೆದು ತಾಕೀತು ಮಾಡಿದ್ದೇವೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೇವೆಂದು ಆ ದಿವಸ ಹೇಳಿದ್ದೇವೆ

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ಮಾನ್ಯ ಸದಸ್ಯರು ಮಾತನಾಡುವಾಗ ನನ್ನ ಹೆಸರನ್ನು ಹೇಳಿದ್ದರಿಂದ ನಾನು ಅದರ ಬಗ್ಗೆ ಮಾತನಾಡಬೇಕಾಗಿದೆ ಹಿರಿಯ ಶಾಸಕರು ಒಂದು ಮಾತು ಹೇಳಿದರು ಮೊನ್ನೆ ನಾವು ಬೆಳಗಾವಿ ಜಿಲ್ಲೆಯಲ್ಲಿ ಒಂದು ಸಭ ಮಾಡಿದೆವು, ಆ ಸಭೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸಂಪೂರ್ಣವಾಗಿ ನಾಶವಾಗಿರತಕ್ಕಂಧ ಟ್ರಾನ್ಸ್‌ಫಾರಂಗಳನ್ನು ಆದಷ್ಟು ಬೇಗ ಅವುಗಳನ್ನು ಕೊಡಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ MAzÀ ÀÆ1ÀÄ¬ AVÀ D ÀÆ1Àº èC ª ÀÀ EzÀÄ ** ಸಚಿವರ ಗಮನಕ್ಕೆ ತಂದರೆ ನಮ್ಮ ತೊಂದರೆ ನಿವಾರಿಸಬಹುದು ಎನ್ನುವ ಉದ್ದೇಶ ವಿಟ್ಟುಕೊಂಡು ಅವರು ಹೇಳಿರಬಹುದು ಅದರ ಬಗ್ಗೆ ನೀವು ಬಹಳಷ್ಟು ಕಲರ್ ಕೊಡುತ್ತಿದ್ದೀರಲ್ಲ?

(ಗೊಂದಲ)

ಅವರು ಶಾಸಕರನ್ನು ಭೇಟಿಯಾಗಿ ತಮ್ಮ ತೊಂದರೆಯನ್ನು ಆದಷ್ಟು ಬೇಗ ನೀಗಿಸಬಹುದು ಎನ್ನುವ ಉದ್ದೇಶದಿಂದ ಹೇಳಿರಬಹುದು ಅದಕ್ಕೆ ಏಕೆ ನೀವು ಕಲರ್ ಕೊಡುತ್ತೀರಿ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಮಾನ್ಯ ಲಕ್ಷ್ಮಣ ಸವದಿಯವರು ಆ ದಿವಸ ಬಹಳ ಚೆನ್ನಾಗಿ ಬಹಳ ಸೀರಿಯಸ್ಸಾಗಿ ಮೀಟಿಂಗ್ ಮಾಡಿದರು,

---

**ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ

ನಮಗೆ ಬಹಳ ಸಂತೋಷವಾಯಿತು ಏಕೆಂದರೆ, ನೀವು ರೈತರ ಪರವಾಗಿ ಆ ದಿವಸ ಪ್ರತಿಯೊಬ್ಬ ರೈತರನ್ನು ಕರೆದು ಅವರವರ ಸಮಸ್ಯೆಯನ್ನು ಕೇಳಿದಿರಿ ಆ ಅಧಿಕಾರಿ ಇಂಥವರು ಎಂಬ ಸಂಪೂರ್ಣ ಮಾಹಿತಿ ಇದ್ದಾಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ನೀವು ತಕ್ಷಣ ಅವನನ್ನು ಅಮಾನತ್ತು ಗೊಳಿಸಬೇಕಾಗಿತ್ತು ಅಥವಾ ಬೇರೆ ಕಡೆಗೆ ವರ್ಗ ಮಾಡಬೇಕಾಗಿತ್ತು ಆತ ಸ್ಪಷ್ಟವಾಗಿ ಹೇಳುತ್ತಾನೆ ಆ ವಿಷಯ ನಿಮಗೂ ನಮಗೂ ಗೊತ್ತಿದೆ ಇದರಲ್ಲಿ ಹೆಚ್ಚಿಗೆ ಮಾತನಾಡುವುದು ಬೇಡ ಕೊನೆಯದಾಗಿ, ಬೆಳಗಾವಿಯಲ್ಲಿರುವ ಬಳ್ಳಾರಿ ನಾಲಾ ಬಗ್ಗೆ ಹೇಳಬಯಸುತ್ತೇನೆ ಈ ಬಳ್ಳಾರಿ ನಾಲೆಗೆ ನಮ್ಮ ಸಣ್ಣ ನೀರಾವರಿ ಇಲಾಖೆಯಿಂದ 3 ಕೋಟಿ 80 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಸುಮಾರು 27 ಕಿ ಮೀ ದೂರ ಬಳ್ಳಾರಿ ನಾಲಾವನ್ನು ಅಗಲೀಕರಣ ಮಾಡಿ ನೀರನ್ನು ಹೊರಗೆ ಹಾಕುವಂಥ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದರು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಪ್ರಕಾಶಹುಕ್ಕೇರಿಯವರು ಏನು ಒಂದು ಮಾತು ಹೇಳಿದ್ದಾರೆ,

ಉಪಾಧ್ಯಕ್ಷರು ನಾನು ಅದನ್ನು ತೆಗೆಸುವುದಕ್ಕೆ ಹೇಳುತ್ತೇನೆ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ ** ಅದು ಆ ರೀತಿ ಅಲ್ಲ ನಾವು ಅದೇ ದಿವಸವೇ ಹೇಳಿದ್ದೇವೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ಡಿ ಸಿ ಯವರ ಮುಖಾಂತರ ಹೇಳಿದ್ದೇವೆ ಅವರನ್ನು ಸಸ್ಪೆಂಡ್ ಮಾಡಬೇಕೆಂದು ಏನು ಹೇಳಿದ್ದಾರೆ, ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡು ರೈತರನ್ನು ಕರೆಸಿ, ರೈತರಿಗೆ ಏನು ತೊಂದರೆಯಾಗಿದೆ ಅದನ್ನು ನಿವಾರಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಆ ದಿವಸ ಹೇಳಿದ್ದೇವೆ ಆದುದರಿಂದ ದಯಮಾಡಿ ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ಉಪಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅದು ಸರಿಯಲ್ಲ, ಅವರು ಕೂಡ ನಿಜವಾಗಲೂ ಬಹಳ ಹಿರಿಯರು, ಸಚಿವರಾಗಿ ಹೋಗಿದ್ದಾರೆ ಸಾಕಷ್ಟು ಅನುಭವವಿರುವವರು ಹೀಗಾಗಿ ಅವರು ಅದನ್ನು ಯಾವ ರೀತಿಯಾಗಿ ಮಾತನಾಡಬೇಕೆಂದು ದಯಮಾಡಿ ಅವರು ತಿಳಿದುಕೊಳ್ಳಬೇಕು ಆದ್ದರಿಂದ ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ನನ್ನ ವಿನಂತಿ

**ಮಾನ್ಯ ಉಪಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಮಾನ್ಯ ಸಚಿವರೇ, ನಾನು ತಿಳಿದುಕೊಂಡೇ ಮಾತನಾಡುತ್ತಿದ್ದೇನೆ ಈ ವಿಷಯ ಏಕೆ ಮಾತನಾಡಬೇಕೆಂದರೆ, ಅಲ್ಲಿ ಹೊರಗಡೆ ನಿಂತ ಜನರ ಮುಂದೆ ಅವರು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ ನೀವು ಹೋದ ಮೇಲೆ ಕೂಡ ನಾನು ಅಲ್ಲಿ ಅರ್ಧಗಂಟೆ ಕಾಲ ಇದ್ದೆ ಅವರ ವರ್ತನೆ ನಿಮಗೆ ಗೊತ್ತಿದೆ, ನಾನೇನು ಹೇಳುವ ಅವಶ್ಯಕತೆಯಿಲ್ಲ ಅವರ ವರ್ತನೆಯನ್ನು ಮೂರು ತಾಸು ನಡೆದ ಸಭೆಯಲ್ಲಿ ನೀವೇ ಚರ್ಚೆಮಾಡಿದಿರಿ (ಗೊಂದಲ) ನೀವು ಅವರನ್ನು ಹೊರಗೆ ಹಾಕಬೇಕಾಗಿತ್ತು

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಸಚಿವರ ಮೇಲೆ ಮಾನ್ಯ ಹುಕ್ಕೇರಿಯವರು ಒಂದು ಗುರುತರವಾದ ಮಾತನ್ನು ಹೇಳಿದ್ದಾರೆ ಎಲ್ಲೋ ಯಾರೋ ಬೀದಿಯ ಮೇಲೆ ಆಡುವ ಮಾತನ್ನು ಸದನದಲ್ಲಿ ಒಬ್ಬ ಸಚಿವರ ಮೇಲೆ ಹೇಳಿ ರೆಕಾರ್ಡ್ ಮಾಡಿಸುತ್ತಾರೆಂದರೆ ಇದರ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಇದರ ಬಗ್ಗೆ ನಾನು ತಯಾರಿದ್ದೇನೆ ಏನು ನಾನು ಗಂಭೀರವಾಗಿ ಮಾತನಾಡಿದ್ದೇನೆ ಅದರ ಬಗ್ಗೆ ಸಿದ್ಧನಾಗಿದ್ದೇನೆ

ಶ್ರೀ ಅರಗ ಜ್ಞಾನೇಂದ್ರ ಇದರ ಬಗ್ಗೆ ನೋಟೀಸ್ ಕೊಟ್ಟು ಇದನ್ನೆಲ್ಲಾ ಆರೋಪ ಮಾಡಬೇಕಾಗುತ್ತದೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ – ಅದನ್ನು ನಾನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ

ಶ್ರೀ ಅರಗ ಜ್ಞಾನೇಂದ್ರ ಇಲ್ಲ, ತಾವು ಇದನ್ನು ಕಡತದಿಂದ ಕಿತ್ತು ಹಾಕಬೇಕು ಇಲ್ಲದಿದ್ದರೆ ಇದು ತೀವ್ರವಾಗುತ್ತದೆ, ಇದು ಸರಿಯಾಗುವುದಿಲ್ಲ ಇವರು ನೋಟೀಸ್ ಕೊಡಲಿ ಚರ್ಚೆಗೆ ಬರಲಿ, ಅದನ್ನು ಮಾಡೋಣಂತೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ತಾವು ತಿಳಿದುಕೊಳ್ಳಬೇಕು, ನಾನು ಆರೋಪವನ್ನು ಮಾಡಿಲ್ಲ ಅಲ್ಲಿಗೆ ಬಂದಿರುವಂಥ ರೈತರು ಹೇಳಿರುತ್ತಾರೆ

ಶ್ರೀ ಅರಗ ಜ್ಞಾನೇಂದ್ರ. ಅವರು ನೋಟೀಸ್ ಕೊಟ್ಟುಕೊಂಡು ಅವರ ಮೇಲೆ ಆರೋಪವನ್ನು ಮಾಡಲಿ ಆಗ ನಿಯಮಾವಳಿ ಪ್ರಕಾರ ಸರಿಯಾಗುತ್ತದೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ· ನಾನು ಆರೋಪವನ್ನು ಮಾಡಿಲ್ಲ ಆ ಜನರ ಮುಂದೆ ಅವರು ಮಾತನಾಡುತ್ತಿದ್ದ ಎಂದು ಹೇಳುತ್ತಿದ್ದೇವೆ

ಶ್ರೀ ಅರಗ ಜ್ಞಾನೇಂದ್ರ ನೋಡಿ, ಯಾರೋ ಬೀದಿ ಮೇಲೆ ಮಾತನಾಡುತ್ತಿರುತ್ತಾರೆ ಸರ್ ಅವರು ತುಂಬಾ ಹಿರಿಯರು, ಅವರು ಕೂಡ ಸಚಿವರಾಗಿ ಕೆಲಸ ಮಾಡಿದವರು ಆ ವಿಷಯವನ್ನು ಈ ಸದನದಲ್ಲಿ ಮಾತನಾಡುವುದಕ್ಕಾಗುತ್ತದೆಯೇ? ಇದು ಸರಿಯಾಗುವುದಿಲ್ಲ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ನಾನು ಏನು ಹುಟ್ಟಿಸಿ ಹೇಳುತ್ತಿಲ್ಲ ಆ ಮೀಟಿಂಗ್‌ದಲ್ಲಿ ಏನಾಗಿದೆ, ಆ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ. ಬೇಕಾದರೆ ಅವರು ರೆಕಾರ್ಡಿನಲ್ಲಿ ತೋರಿಸಲಿ

ಒಬ್ಬ ಮಾನ್ಯ ಸದಸ್ಯರು ಅವರು ಮೊದಲು ಇರುವ ಪದ್ಧತಿಯನ್ನು ಹೇಳಿದ್ದಾರೆ ಕಾಂಗ್ರೆಸ್‌ನ ನೀತಿ ಅದು

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ.- ಅದು ಸರಿಯಾಗುವುದಿಲ್ಲ, ಅದನ್ನು ಕಡತದಿಂದ ತೆಗೆಯಿಸಬೇಕು

ಉಪಾಧ್ಯಕ್ಷರು ಆಗಲೇ ಇದನ್ನು ಕಡತದಿಂದ ತೆಗೆಯುವಂತೆ ಹೇಳಲಾಗಿದೆ, ತೆಗೆಸಲಾಗಿದೆ ಹುಕ್ಕೇರಿಯವರೆ ತಾವು ಬೇಗ ಮುಗಿಸಿ ಬಿಡಿ ಇನ್ನು 4 ಜನರು ಇದ್ದಾರೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ನಾನು ನೇರವಾಗಿ ಅವರ ಮೇಲೆ ಆರೋಪವನ್ನು ಮಾಡಿಲ್ಲ ಮಾನ್ಯ ಲಕ್ಷ್ಮಣ ಸವದಿಯವರು ಹಾಗೂ ಎಲ್ಲರೂ ಇದ್ದರು ರೈತರು ತಮ್ಮ ತಮ್ಮ ಗ್ರಾಮದಿ⁻ನ ಸುಮಾರು ಮೂರು ಗಂಟೆಯವರೆಗೆ ಬಂದು ಈ ಅಧಿಕಾರಿಯ ಮೇಲ ದೂರನ್ನು ಸಲ್ಲಿಸುತ್ತಿದ್ದರು ಸಭೆ ಆದ ಮೇಲೆ, ಇದು ಹೊರಗೆ ಬಂದ ಮೇಲೆ ಆಗಿರುವುದು ಅವರು ಮತ್ತು ನಾವು ಇದ್ದೇವೆ ಕೇಳಿ ಮಾನ್ಯ ಸರಿಕರ್‌ರವರು, ಚಿಕ್ಕೋಡಿ ಶಾಸಕರು ಮತ್ತು 7–8 ಜನರು ಇದ್ದರು ಇದನ್ನು ನಾನೊಬ್ಬ ಆರೋಪ ಮಾಡುತ್ತಿಲ್ಲ

ಉಪಾಧ್ಯಕ್ಷರು ಜಿಲ್ಲೆಯ ಎಲ್ಲ ಶಾಸಕರು ನೀವು ಒಬ್ಬರ ಮೇಲೆ ಒಬ್ಬರು ಆರೋಪ ಮಾಡಿಕೊಂಡರೆ ಹೇಗೆ?

ಶ್ರೀ ಸರಿಕರ್ ಭೀಮಪ್ಪ ಚನ್ನಪ್ಪ (ರಾಯಚೂರ್) ಮಾನ್ಯ ಉಪಾಧ್ಯಕ್ಷರೆ, ಅವರು ಒಳ್ಳೆಯ ಮಾಜಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದವರು ಆದರೂ ಸಹ ಅವರು ಮೀಟಿಂಗ್‌ನಲ್ಲಿದ್ದಾಗ ಅಲ್ಲಿ ಆದ ಮಾತುಗಳು ಬೇರೆ, ಹೊರಗಡೆ ಬೀದಿಯಲ್ಲಿ ಆಗಿರುವ ಮಾತುಗಳನ್ನು ನಾವು ಕೇಳಿರಲಿಕ್ಕಿಲ್ಲ ಈಗಿರುವ ನಮ್ಮ ಉಸ್ತುವಾರಿ ಸಚಿವರು ಮತ್ತು ಮಾನ್ಯ ಲಕ್ಷ್ಮಣ ಸವದಿಯವರು ನಾವೆಲ್ಲರೂ ಇದ್ದಾಗ ಈ ಒಂದು ಪರಿಸ್ಥಿತಿ ಏನು ಉದ್ಭವವಾಗಿತ್ತು ಅದು ಒಂದು ಬೇರೆ ರಾಜಕಾರಣದಿಂದ ಉದ್ಭವವಾಗಿತ್ತು ನಿಜವಾಗಲೂ ನಾನು ಅಲ್ಲಿ ಕುಳಿತುಕೊಂಡು ನೋಡಿದಾಗ ಬೇರೆ ಒಂದು ಪಾರ್ಟಿಯವರು ಬಂದು ಅಲ್ಲಿ ಪರಿಸ್ಥಿತಿ ಉದ್ಭವ ಮಾಡುತ್ತಿದ್ದರು, ಅದು ಸರಿಯಾಗಿತ್ತು ಆದರೆ ಅದನ್ನು ನಾನು ಅಲ್ಲಿ ಕುಳಿತುಕೊಂಡು ನೋಡಿದಾಗ, ಅದು ಬೇರೆ ಬೇರೆ ರೀತಿಯಿಂದ ಒಂದು ಕಡ್ಡಿ ತೆಗೆದುಕೊಂಡು ಬೆಂಕಿ ಹಚ್ಚಿದಂತಿತ್ತು ಈಗ ಇರುವ ಉಸ್ತುವಾರಿ ಸಚಿವರು, ಡಿ ಸಿ ಯವರಿಗೆ ಹೇಳಿ ಆ KEB ಅಧಿಕಾರಿಯ ಮೇಲೆ ಯಾವ ರೀತಿಯ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು ಏಕೆಂದರೆ ಕೆಲವೊಂದು ಸಲ ತಪ್ಪು ತಡಿಗಳು ಆಗೇ ಆಗುತ್ತವೆ ಯಾವುದೇ ಅಧಿಕಾರಿಗಳು ಯಾವುದೇ ಸಚಿವರು ಆಗಲಿ, ಯಾರೋ ಮಾನ್ಯ ಉಸ್ತುವಾರಿ ಸಚಿವರಾಗಲಿ, ಎಲ್ಲಾ ಕಾಲದಿಂದ ನಡೆದುಕೊಂಡು ಬಂದಿರುವ ಒಂದು ವಿಷಯವಾಗಿದೆ ಇಂತಹ ಸಣ್ಣ ಪುಟ್ಟ ವಿಷಯಗಳನ್ನು ಈ ಅಧಿವೇಶನಕ್ಕೆ ತಂದು ಒಬ್ಬ ಸಚಿವರ ಮೇಲೆ ನಾವು ಅಪವಾದವನ್ನು ಮಾಡುವುದು ಸರಿಯಲ್ಲ ತಮಗೆ ಹೇಳುತ್ತೇನೆ, ಮಾಜಿ ಸಚಿವರಾದ ನಮ್ಮ ಹುಕ್ಕೇರಿಯವರು, ಇಂತಹ ಪ್ರವಾಹ ಬಂದಾಗ ಅಥಣಿ, ಕಾಗವಾಡ್,ಚಿಕ್ಕೋಡಿಯನ್ನು ಅಷ್ಟೆ

ತೆಗೆದುಕೊಳ್ಳುತ್ತಾರೆ ರಾಯಭಾಗ ಬಗ್ಗೆ ಏಕೆ ಅವರ ಮನಸ್ಸಿನಲ್ಲಿ ಬರಲಿಲ್ಲ ಎನ್ನುವುದನ್ನು ನಾನು ಹೇಳುತ್ತೇನೆ ನಾನು ಅವರಿಗೂ ಪ್ರತಿ ಸಲ ಹೇಳುತ್ತಿದ್ದೆ, ನಮ್ಮ ರಾಯಭಾಗ ತಾಲ್ಲೂಕಿನಲ್ಲಿ 12 ಹಳ್ಳಿಗಳು complete ಆಗಿ ಮುಳುಗಿ ಹೋಗುತ್ತವೆ ಅವರು ಉಸ್ತುವಾರಿ ಮಂತ್ರಿಗಳಾಗಿದ್ದಾಗ ಸಹ ಸವದತ್ತಿ, ದಿಗ್ಗೇವಾಡಿಗಿಗೆ ಬಂದು ಓಡಿ ಹೋಗುತ್ತಿದ್ದರು ಈಗ ಇರುವಂಥ ಉಸ್ತುವಾರಿ ಸಚಿವರಿಗೆ ನಾನು ಮೊನ್ನೆ request ಮಾಡಿದಾಗ ಅವರು ಕೂಡ ದಿಗ್ಗೇವಾಡಿಗೆ ಬಂದರು ಆದರೆ ಗುಂಡವಾಡ್, ಶಿರಗೂರ ನೀರಿನಲ್ಲಿ ಮುಳುಗಿರುವ ಊರಿಗೆ ಬರಲು ಹೇಳಿದರೂ ಸಹ ಅವರಿಗೆ ಬರಲಿಕ್ಕೆ time ಸಿಗಲಿಲ್ಲ ಅದಕ್ಕೆ ನನಗೆ ಬಹಳ ದುಃಖವಾಯಿತು ಮೊನ್ನೆ ನನಗೆ ಚಿಕ್ಕೋಡಿಗೆ ಮೀಟಿಂಗ್‌ಕ್ಕೆ ಹೋಗುವುದಕ್ಕೆ ಇಚ್ಛೆ ಇರಲಿಲ್ಲ ಆದರೂ ಸಹ ಮಾನ್ಯ ಉಸ್ತುವಾರಿ ಸಚಿವರು ನನ್ನನ್ನು ಕರೆದು ಆ ಒಂದು ಪರಿಹಾರದ ಬಗ್ಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದರು ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಹೇಳುತ್ತೇನೆ ಮಾನ್ಯ ರೇವಣ್ಣನವರಿಗೂ ಸಹ ಹೇಳಿರುತ್ತೇನೆ ಮಾನ್ಯ ಕಂದಾಯ ಸಚಿವರಿಗೆ ಎಲ್ಲರಿಗೂ letter ನ್ನು ಬರೆದಿರುತ್ತೇನೆ 2005, 2006, ಮತ್ತು 2007 ನೇ ಸಾಲಿಗೆ ನನ್ನ ಕ್ಷೇತ್ರದಲ್ಲಿ ಬರುವ 12 ಹಳ್ಳಿಗಳು ಮುಳುಗಿ ಹೋಗಿವೆ ಅದರಲ್ಲಿ 5 ಹಳ್ಳಿಗಳು complete ಆಗಿ ಮುಳುಗುತ್ತವೆ, ಈಗ ಯಾರಾದರೂ ಬಂದು ನೋಡಬಹುದು ಒಂದು ನಿಮಿಷದಲ್ಲಿ ಹೇಳುತ್ತೇನೆ ನಾನು ನನ್ನ ತಾಲ್ಲೂಕಿನ ಬಗ್ಗೆ ಆ ಹಳೆ ದಿಗ್ಗೇವಾಡಿ, ಗುಂಡವಾಡ ಮತ್ತು ಶಿರಗೂರ ಇವು complete ಮುಳುಗಿ ಹೋಗುವ ಹಳ್ಳಿಗಳಾಗಿವೆ ಆ ಹಳ್ಳಿಗಳನ್ನು ಬಿಟ್ಟು ಮತ್ತೆರಡು ಹಳ್ಳಿಗಳನ್ನು ಸಿದ್ದಾಪುರ, ಖೇಮಲಾಪುರನ್ನು ಶಿಫ್ಟ್ ಮಾಡುವಂಥ ಕೆಲಸವನ್ನು ಮಾಡಿದರು ಆದರೆ ಹೆಚ್ಚಾಗಿ ಮುಳುಗುವ ಹಳ್ಳಿಗಳನ್ನು ತಾವು ಬಿಟ್ಟಿದ್ದೀರಿ ಮಾನ್ಯ ಮುಖ್ಯಮಂತ್ರಿಗಳಾಗಲೀ, ಮಾನ್ಯ ಕಂದಾಯ ಸಚಿವರಾಗಲೀ, ನಮ್ಮ ರಾಯಭಾಗ ತಾಲ್ಲೂಕಿನಲ್ಲಿ ಇನ್ನು ಈ ಮೂರು ಹಳ್ಳಿಗಳನ್ನು ತಾವು ಶಿಫ್ಟ್ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಮಾನ್ಯ ಪ್ರಕಾಶ್ ಬಿ ಹುಕ್ಕೇರಿಯವರು, ಅವರು ಮಾತನಾಡುವ ಸಮಯದಲ್ಲಿ ನನಗೂ ಮಾತನಾಡಲು ಮಾನ್ಯ ಉಪಾಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಾರೆ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಉಪಾಧ್ಯಕ್ಷರು ಹೇಗೂ ನೀವು ಕೂಡ ಮಾತನಾಡಿ ಬಿಟ್ಟಿರಿ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಮಾನ್ಯ ಸಚಿವರ ಮೇಲೆ ನಾನು ಗಂಭೀರವಾದ ಆರೋಪವನ್ನು ಮಾಡಿಲ್ಲ

ಉಪಾಧ್ಯಕ್ಷರು ಮಾನ್ಯ ಹುಕ್ಕೇರಿಯವರೆ, ನಾವು ಹೇಳಿದ್ದು ನಿಮಗೆ ಒಬ್ಬರಿಗೆ ಮಾತನಾಡಲಿಕ್ಕೆ ನೀವು ಬೆಳಗಾಂ ಜಿಲ್ಲೆಯ ಎಲ್ಲರಿಗೂ ಕೊಟ್ಟುಬಿಟ್ಟಿದ್ದೀರಿ ಎಲ್ಲರೂ ಮಾತನಾಡಲಿ ಎಂದು ನೀವೇ permission ಕೊಟ್ಟು ಬಿಟ್ಟಿರಿ ತಾವು ಬೇಗ ಮುಗಿಸಿ

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಸದಲಗ) ಬಳ್ಳಾರಿ ನಾಲೆಗೆ ಚಿಕ್ಕ ನೀರಾವರಿ ಇಲಾಖೆಯಿಂದ 3 70 ಕೋಟಿ ರೂ ಗಳಿಗೆ tender ಆಗಿದೆ April ತಿಂಗಳಲ್ಲಿ ಅದರ ಕಾಮಗಾರಿ ಪ್ರಾರಂಭವಾಗಿತ್ತು, ಅದು ಸುಮಾರು 27 ಕಿ ಮೀ ಉದ್ದ ಇದೆ ಅದರಲ್ಲಿ ಸುಮಾರು 14 ಕಿ ಮೀ ಈಗಾಗಲೇ ಆ ನಾಲೆಯ ಅಗಲೀಕರಣ ಮಾಡುವ ಕೆಲಸ ನಡೆಯುತ್ತಿತ್ತು ಆದರೆ sudden ಆಗಿ ಆ ಕೆಲಸ ಮೇ ತಿಂಗಳಲ್ಲಿ ನಿಂತು ಹೋಗಿ ಇಲ್ಲಿಯವರೆಗೆ ಆ ಕೆಲಸ ಪ್ರಾರಂಬವಾಗಿಲ್ಲ ಸಾವಿರಾರು ಎಕರೆ ಜಮೀನು ಈ ಬಳ್ಳಾರಿ ನಾಲೆಯಲ್ಲಿ ಇವತ್ತು ನೀರು ನಿಂತು ರೈತರಿಗೆ ಸಾಕಷ್ಟು ಹಾನಿಯಾಗಿದೆ ದಯವಿಟ್ಟು ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಆ ಕಾಮಗಾರಿ ಏಕೆ ನಿಂತಿತು, ನಿಲ್ಲಲಿಕ್ಕೆ ಏನು ಕಾರಣ? ಅದರಲ್ಲಿ ಏನು ರಾಜಕಾರಣ ಇದೆಯೋ ನನಗಂತೂ ಗೊತ್ತಿಲ್ಲ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿತು, ಆಮೇಲೆ tender ಕರೆದು ಕೆಲಸವನ್ನು ಕೂಡ ಪ್ರಾರಂಭ ಮಾಡಿದರು ಈ ಬಳ್ಳಾರಿ ನಾಲೆಯನ್ನು ಹಲವಾರು ವರ್ಷಗಳಿಂದ ಅಗಲೀಕರಣ ಮಾಡಬೇಕು ಎನ್ನುವ ಒಂದು ಬೇಡಿಕೆ ಇತ್ತು ಜನರು ಕೂಡ ಸಂತೋಷವನ್ನು ಪಡುತ್ತಿದ್ದರು ಈ ಕೆಲಸ ಬಹಳ ದಿವಸದಿಂದ ಬಾಕಿ ಉಳಿದಿರುವುದು ಪ್ರಾರಂಭವಾಗಿದೆ ಆದರೆ ಆ ಕೆಲಸ ಅರ್ಧಕ್ಕೆ ಏಕೆ ನಿಂತಿತು? ಅದು ನಿಲ್ಲಲಿಕ್ಕೆ ಕಾರಣ ಏನು? ಇವತ್ತು ಮಾನ್ಯ ಸಚಿವರು ಉತ್ತರವನ್ನು ಕೊಡುವ ವೇಳೆಯಲ್ಲಿ ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಈ ಸದನದಲ್ಲಿ ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಂಡು ನನಗೆ ಎರಡು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕುಮಾರ್ ಬಂಗಾರಪ್ಪ (ಸೊರಬ) ಮಾನ್ಯ ಉಪಾಧ್ಯಕ್ಷರೆ, River Protection Commissionನ್ನು Central Government ಮಾಡಿದೆ ಗಂಗಾನದಿ, ಬ್ರಹ್ಮಪುತ್ರ ನದಿಗಳೆಲ್ಲದಕ್ಕೂ ಸಾವಿರಾರು ಕೋಟಿ ರೂಪಾಯಿಗಳನ್ನು Central Government ದಿಂದ river protection ಗೆ ಎಂದು ಕೊಡುತ್ತಾರೆ ನಮ್ಮ ಕೃಷ್ಣ, ಕಾವೇರಿ, ಮತ್ತು ಈ ಪಶ್ಚಿಮ ಘಟ್ಟದ ಬೇಸಿನ್‌ಗಳ proposals are pending ನಮ್ಮ Central Government ನಲ್ಲಿ River Protection Commission ಮುಂದೆ ಬಹಳ ವರ್ಷಗಳಿಂದ file pending ಇವೆ ಪ್ರತಿ ಸಲ floods ಆದಾಗ ಸಾವಿರಾರು ಕೋಟಿ ರೂಪಾಯಿಗಳನ್ನು ಆ commission ಮುಖಾಂತರ Central Government ನಿಂದ river protection ಗೆ ಕೊಡುತ್ತಾರೆ ಆದರೆ ನಮ್ಮ ಕರ್ನಾಟಕದಿಂದ ಹೋಗಿರುವಂಥ ಅನೇಕ ಯೋಜನೆಗಳು ಅಲ್ಲಿಯೇ struck ಆಗಿ ನಿಂತಿವೆ ಅದಕ್ಕಾಗಿ ನಮ್ಮ ಕರ್ನಾಟಕದಿಂದ ಹೋಗಿರ ತಕ್ಕಂಥ river protection walls ಗಳಿಗೆ ಏನು ಕಮಿಷನ್ ಮುಂದಿವೆ, ಇದಕ್ಕೆ ಸರ್ಕಾರದಿಂದ ದಯಮಾಡಿ ಮುತುವರ್ಜಿ ವಹಿಸಿ ಈ ಕಾರ್ಯಕ್ರಮಗಳು process ಆಗಬೇಕಾಗುತ್ತದೆ ಇಲ್ಲದಿದ್ದರೆ ಮಾನ್ಯ ಹುಕ್ಕೇರಿಯವರು ಹೇಳಿದ ಹಾಗೆ 3-4 ಕೋಟಿ ರೂ ಗಳಲ್ಲಿ vulnerable area ಗಳಿಗೆ tackle ಮಾಡುವುದಕ್ಕಾಗುವುದಿಲ್ಲ ಎಕೆಂದರೆ ಎಲ್ಲಾ ಹಣ ಅದಕ್ಕೆ ಹೋದಂತಾಗುತ್ತದೆ ದೋಣಿ ಬಗ್ಗೆ ಹೇಳಿದರು, ಅದು ಕೂಡ ಅಷ್ಟೆ ಅಷ್ಟು ಹಣ ಹೂಳು ತೆಗೆಯುವುದಕ್ಕೂ ಆಗುವುದಿಲ್ಲ ಹಾಗಾಗಿ river protection ಕೆಲಸಗಳು ಏನಿವೆ? ಯಾವುದೋ ಕಾರಣಗಳಿಗಾಗಿ ಅವುಗಳನ್ನು ಹಾಗೆ ನಿಲ್ಲಿಸಿದ್ದಾರೆ ಏನು programme ಗಳನ್ನು ಕಳುಹಿಸಿದ್ದಾರೆ, river protection commission ಮುಂದೆ ಇರುವುದರಿಂದ ಅವುಗಳನ್ನು ಸ್ವಲ್ಪ ಬಿಗಿ ಹಿಡಿದು ತರಬೇಕು ಇದರ ಬಗ್ಗೆ ಮಾನ್ಯ Central Water Resources Minister ಹತ್ತಿರ ಮಾತನಾಡಿ ಆ programme ಗಳನ್ನು ಕರ್ನಾಟಕಕ್ಕೆ ತರುವಂಥ ಒಂದು efforts ನ್ನು ತಾವು ಮಾಡಬೇಕಾಗುತ್ತದೆ

Thank you

ಉಪಾಧ್ಯಕ್ಷರು ಒಂದು ಪ್ರಕಟಣೆ ಇದೆ

8 ಪ್ರಕಟಣೆ

ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ

ದಿನಾಂಕ 05 07 2007 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಗಿದೆ

1) ದಿನಾಂಕ 06 07 2007 ರಂದು ಬೆಳಿಗ್ಗೆ 9 ರಿಂದ 11 00 ಗಂಟೆಯವರೆಗೆ ಕಲಾಪಗಳನ್ನು ನಡೆಸಲಾಗುವುದು

2) ದಿನಾಂಕ 09 07 2007 ರಿಂದ ಪ್ರತಿದಿನ ಸದನವನ್ನು ಬೆಳಿಗ್ಗೆ 10 00 ರಿಂದ 1 30 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2 30 ರಿಂದ 6 00 ಗಂಟೆಯವರೆಗೆ ನಡೆಸಲಾಗುವುದು

3) ದಿನಾಂಕ 09 07 2007 ರಿಂದ ನಡೆಯುವ ಪ್ರಶ್ನೋತ್ತರ ಕಾಲವನ್ನು ಒಂದು ಗಂಟೆಗೆ ಸೀಮಿತಗೊಳಿಸಿ ಮುಕ್ತಾಯಗೊಳಿಸಲಾಗುವುದು ಹಾಗೂ ಶೂನ್ಯವೇಳೆಗೂ ಸಹ ಒಂದು ಗಂಟೆಯ ಸಮಯವನ್ನು ಮೀಸಲಿರಿಸಲಾಗಿದೆ

ಉಪಾಧ್ಯಕ್ಷರು ಈಗ ಸದನವನ್ನು ನಾಳೆ ಬೆಳಿಗ್ಗೆ 9 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು 5 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ 06 07 2007 ರ ಶುಕ್ರವಾರ ಬೆಳಿಗ್ಗೆ 9 00 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ
ಐದನೇ ಅಧಿವೇಶನದ ಮುಂದುವರೆದ ಉಪವೇಶನ
ಶುಕ್ರವಾರ 6 ನೇ ಜುಲೈ 2007 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 09 ಗಂಟೆ 27 ನಿಮಿಷಗಳಿಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರಾದ ಶ್ರೀ ಕೃಷ್ಣ ರವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು

ಉಪಾಧ್ಯಕ್ಷರಾದ ಶ್ರೀ ಎನ್ ವೈ ಗೋಪಾಲ ಕೃಷ್ಣ ಅವರು ಉಪಾಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

[ಸದನವು ಬೆಳಿಗ್ಗೆ 9 27 ಗಂಟೆಗೆ
ಸಮಾವೇಶಗೊಂಡಿತ್ತು]

[ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು
ಪೀಠದಲ್ಲಿ ಉಪಸ್ಥಿತರಿದ್ದರು]

ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ
ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲಿ
ಉಂಟಾಗಿರುವ ಅನಾಹುತದ ಬಗ್ಗೆ

ಶ್ರೀಮತಿ ಶಕುಂತಲಾ ಟಿ ಶೆಟ್ಟಿ [ಪುತ್ತೂರು] ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಢಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಈ ಬಾರಿ ನಮ್ಮ ಜಿಲ್ಲೆಯಲ್ಲಿ ಮಳೆ ಪ್ರಾರಂಭವಾದ ಬಳಿಕ ಪ್ರತಿನಿತ್ಯ ಬಹಳ ಜೋರಾಗಿ ಮಳೆ ಬಂದು ನನ್ನ ಕ್ಷೇತ್ರದಲ್ಲಿ ಸುಮಾರು 10 ಮನೆಗಳು ನಾಶವಾಗಿ ಹೋಗಿವೆ ಸುಮಾರು 250ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ ಮಳೆ ಜಾಸ್ತಿಯಾಗಿ ಬುಡಸಮೇತ ಕಿತ್ತು ಬಿದ್ದ ಮರಗಳಿಂದಾಗಿ ಇಡೀ ವಿದ್ಯುತ್ ವ್ಯವಸ್ಥೆ ನಾಶವಾಗಿದೆ ಇಡೀ ನಮ್ಮ ತಾಲೂಕು ಒಮ್ಮೆಲೆ ಕತ್ತಲೆಯಲ್ಲಿ ಬಿದ್ದ ಹಾಗೆ ಆಗಿತ್ತು ನಮ್ಮ ಪುತ್ತೂರು -ಸುಬ್ರಹ್ಮಣ್ಯ ರಸ್ತೆಯಲ್ಲಿ ನರಿಮಗರು ಎಂಬಲ್ಲಿ ರಸ್ತೆ ಪೂರ್ತಿ ಕುಸಿದು ಹೋಗಿ ವಾಹನ ಸಂಚಾರಕ್ಕೆ ತಡೆ ಆಗುವಂತಹ ಪರಿಸ್ಥಿತಿ ಬಂದಿದೆ ನಮ್ಮ ಇಡೀ ಪುತ್ತೂರು ಕ್ಷೇತ್ರದಲ್ಲಿ ಸುಮಾರು 2-2 5 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿರುವ ಕಾರಣ, ಮಳೆ ಹಾನಿಗೆ ಒದಗಿಸುವ ಹಣದಲ್ಲಿ ನಮಗೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಕೋರುತ್ತೇನೆ ನಮ್ಮ ರೈತರ ಅದರಲ್ಲೂ ಸಣ್ಣ ರೈತರ ಅಡಿಕೆ ಮತ್ತು ತೆಂಗಿನ ಮರಗಳು ಬಿದ್ದಿವೆ ಸಣ್ಣ ರೈತರ ಸುಮಾರು 200-260 ತೆಂಗಿನ ಮರಗಳು ಮುರಿದು ಬಿದ್ದ ಪರಿಸ್ಥಿತಿ ಉಂಟಾಗಿತ್ತು ಇಡೀ ರಬ್ಬರ್ ತೋಟಗಳು ನೆಲ ಕಚ್ಚುವಂತಹ ಪರಿಸ್ಥಿತಿ ಈ ಬಾರಿಯ ಮಳೆಯಿಂದ ಉಂಟಾಗಿ ಕೃಷಿ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದೆ ಈ ಸಮಯದಲ್ಲಿ ಸಾಧಾರಣ ನಮಗೆ ಬರುವ ಮಳೆಯು ಶೇಕಡ 10ಕ್ಕಿಂತಲೂ ಹೆಚ್ಚು ಮಳೆ ಈ

ಒಂದು ವಾರದಲ್ಲೇ ನಮ್ಮಲ್ಲಿ ಬಂದು ಹೋಗಿದೆ ಆದ ಕಾರಣ ಹೆಚ್ಚಿನ ಹಣವನ್ನು ನಮ್ಮ ತಾಲ್ಲೂಕಿಗೆ ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ನಾನು ಒತ್ತಾಯಿಸುತ್ತಿದ್ದೇನೆ

ಶ್ರೀ ಕೆ ಜಿ ಬೋಪಯ್ಯ (ಮಡಿಕೇರಿ) ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಈ ಸಮಯದಲ್ಲಿ ಮಳೆ ಬರುವುದು ಸಾಮಾನ್ಯ ಬಹುಶಃ ಮೇ ತಿಂಗಳಿನಿಂದ ಹಿಡಿದು ಅಕ್ಟೋಬರ್ ತಿಂಗಳವರೆಗೆ ಪ್ರತಿ ವರ್ಷ ಮಳೆ ಬರುತ್ತದೆ ಆದರೆ ಈ ವರ್ಷ ಜೂನ್ 15,16, ಮತ್ತು 17 ಈ ಮೂರು ದಿವಸಗಳು ಸಾಕಷ್ಟು ಮಳೆಯಾಗಿ ಭಾರಿ ನಷ್ಟವಾಯಿತು ಆ ನಂತರ ಸತತವಾಗಿ ಜೂನ್ 23 ರಿಂದ ನೆನ್ನೆಯವರೆಗೆ, ಮತ್ತು ಇವತ್ತು ಬೆಳಿಗ್ಗೆಯವರೆಗೆ ಕೊಡಗು ಜಿಲ್ಲೆಯಲ್ಲಿ ಮಳೆ ಬರುತ್ತಿದೆ ಬಹುಶಃ ಒಂದೊಂದು ದಿವಸ ಭಾಗಮಂಡಲ ಮತ್ತು ತಲಕಾವೇರಿ ಭಾಗದಲ್ಲಿ ಪ್ರತಿ ದಿವಸ 17 ಇಂಚಿನಿಂದ 20 ಇಂಚಿನವರೆಗೆ ಮಳೆ ಆಗಿದೆ ಜೂನ್ ಮತ್ತು ಜುಲೈ ತಿಂಗಳ ಕೊನೆಯವರೆಗೆ ಆಗಬೇಕಾದ ಮಳೆ ಈಗಲೇ ಬಂದಾಗಿದೆ ಈ ವರ್ಷದ ಮಳೆಗಾಲದ ವಿಶೇಷತೆ, ಎಲ್ಲಿ ನೋಡಿದರೂ ಇಡೀ ಜಿಲ್ಲೆಯಲ್ಲಿ ಭೂ ಕುಸಿತ ಪ್ರಾರಂಭವಾಗಿದೆ ಹಿಂದೆ ಈ ರೀತಿ ಆಗುತ್ತಿರಲಿಲ್ಲ ಭೂ ಕುಸಿತದ ಪರಿಣಾಮವಾಗಿ ಇರುವಂತಹ ಎಲ್ಲಾ ರಸ್ತೆಗಳು ಇವತ್ತು ಮಣ್ಣು ಮತ್ತು ಮರದಿಂದ ತುಂಬಿ ಹೋಗಿದೆ ಯಾವುದೇ ಹಳ್ಳಿಗಳಿಗೆ ಸಂಚಾರ ವ್ಯವಸ್ಥೆ ಇಲ್ಲ ಎಲ್ಲಾ ಪ್ರದೇಶ ದ್ವೀಪದ ತರಹ ಆಗಿದೆ ನಾಪೋಕ್ಲು ಎನ್ನುವಂತಹ ಕ್ಷೇತ್ರಕ್ಕೆ ಎಲ್ಲಿಂದಲೂ ಹೋಗಲಿಕ್ಕೆ ಸಾಧ್ಯವಿಲ್ಲ ಒಂದು ಕಡೆ ಕಾವೇರಿ ಹೊಳೆ ತುಂಬಿ ಯಾವುದೇ ರಸ್ತೆಗಳಿಂದ ನೀರು ಇಳಿಯದಂತಹ ಪರಿಸ್ಥಿತಿ, ಎಲ್ಲಾ ಕಡೆ ಭೂ ಕುಸಿತದಿಂದ ಮಣ್ಣು ತುಂಬಿ ಮರಗಳು ಬಿದ್ದಿವೆ ಈಗಾಗಲೇ ಜಿಲ್ಲಾಡಳಿತದ ಪ್ರಾಥಮಿಕ ವರದಿಯಂತೆ ಇಡೀ ಜಿಲ್ಲೆಯಲ್ಲಿ ಸುಮಾರು 25 ಕೋಟಿ ರೂಪಾಯಿಗಳಿಗೂ ಹೆಚ್ಚು ನಷ್ಟವಾಗಿದೆ ಮಡಿಕೇರಿ ನಗರ ಒಂದರಲ್ಲಿ ಹೊಡೆದಂತಹ ಮಳೆ ರಾತ್ರಿ ಏನಾದರೂ ಹೊಡೆದಿದ್ದರೆ, ಅನೇಕ ಜನರ ಪ್ರಾಣ ಹಾನಿ ಆಗುತ್ತಿತ್ತು ಆದರೆ ಹಗಲು ಹೊತ್ತಿನಲ್ಲಿ ಆದ ಪರಿಣಾಮದಿಂದ ಯಾರದೂ ಪ್ರಾಣ ಹಾನಿ ಆಗಿಲ್ಲ ಸುಮಾರು 50ಕ್ಕೂ ಹೆಚ್ಚು ಮನೆಗಳು ಮಡಿಕೇರಿ ನಗರ ಒಂದರಲ್ಲಿಯೇ ಭೂ ಕುಸಿತದಿಂದ ನಾಶವಾಗಿ ಹೋಗಿವೆ ಎಲ್ಲಾ ಕಡೆ

ಇವತ್ತು ಗಂಜಿ ಕೇಂದ್ರಗಳನ್ನು ಸ್ಥಾಪನೆ ಮಾಡಿ ಅವರಿಗೆ ವ್ಯವಸ್ಥೆ ಮಾಡಿ ಕೊಟ್ಟಿದ್ದಾರೆ ಆದರೆ ನಮ್ಮ ಜಿಲ್ಲೆಯಲ್ಲಿ ಆ ಮನೆಗಳನ್ನು ನಾವು ಅಕ್ಟೋಬರ್ ತಿಂಗಳವರೆಗೂ ಸರಿ ಪಡಿಸುವು ದಕ್ಕಾಗುವುದಿಲ್ಲ ಏಕೆಂದರೆ ಅಕ್ಟೋಬರ್ ತಿಂಗಳವರೆಗೆ ಮಳೆ ಬರುತ್ತದೆ ಕೊಡಗು ಜಿಲ್ಲೆಯಲ್ಲಿ ಮಳೆ ಇಷ್ಟು ಪ್ರಮಾಣದಲ್ಲಿ ಹೊಡೆದುದರ ಪರಿಣಾಮವಾಗಿ ಇವತ್ತು ಕೃಷ್ಣರಾಜಸಾಗರ ತುಂಬುತ್ತದೆ ಹಾರಂಗಿ ಜಲಾಶಯ ತುಂಬುತ್ತದೆ ಮತ್ತು ಕಬಿನಿ ಜಲಾಶಯ ತುಂಬುತ್ತದೆ ಆದರೆ ನಮಗೆ ಆಗಿರುವ ನಷ್ಟದ ಪರಿಣಾಮ ಎಷ್ಟೆಂದರೆ ಜನಜೀವನಕ್ಕೆ ಎಲ್ಲಾ ಕಡೆ ತೊಂದರೆಯಾಗಿದೆ ಇಷ್ಟು ವಿದ್ಯುತ್ ಕಂಬಗಳು ಇಷ್ಟುವರ್ಷದಲ್ಲಿ ಬಿದ್ದಿರಲಿಲ್ಲ ನಾಲ್ಕು ತಿಂಗಳವರೆಗೆ ಇಡೀ ಗ್ರಾಮೀಣ ಪ್ರಧೇಶದಲ್ಲಿ ವಿದ್ಯುತ್ ಇಲ್ಲ ಅದರ ಜೊತೆಯಲ್ಲಿ ಇವತ್ತು ನಾವು ಏನು ತೊಂದರೆ ಅನುಭವಿಸುತ್ತಿದ್ದೇವೆ ಎಂದರೆ, ಎಲ್ಲಾ ಕಡೆ ಸೀಮೆ ಎಣ್ಣೆಯ ಲ್ಯಾಂಪ್‌ಗಳನ್ನು ಉರಿಸಿ ನಾವು ರಾತ್ರಿ ಕಳೆಯಬೇಕಾಗಿದೆ ರೇಷನ್ ಕಾರ್ಡ್‌ನಲ್ಲಿ ಗ್ಯಾಸ್ ಇರುವವರಿಗೆ ಸೀಮೆ ಎಣ್ಣೆ ಸಿಗುತ್ತಿಲ್ಲ ಸೀಮೆ ಎಣ್ಣೆ ಇಲ್ಲದ ಪರಿಣಾಮ ದೀಪ ಹಚ್ಚಲಿಕ್ಕೂ ಆಗದೇ ಇರುವಂತಹ ಪರಿಸ್ಥಿತಿ ಇದೆ ಸೀಮೆ ಎಣ್ಣೆಯನ್ನು ಖೋತ ಮಾಡಿರುವುದರಿಂದ ಇಡೀ ಜಿಲ್ಲೆ ಇವತ್ತು ಕತ್ತಲಿನಲ್ಲಿ ಮುಳುಗಿರುವುದನ್ನು ನಾವು ನೋಡುತ್ತಿದ್ದೇವೆ ಕಳೆದ ಬಾರಿ ರಸ್ತೆಗಳ ಅಭಿವೃದ್ಧಿಗಾಗಿ ನಮಗೆ ಸಾಕಷ್ಟು ಅನುದಾನಗಳನ್ನು ಕೊಟ್ಟಿದ್ದರು ಸಾಕಷ್ಟು ರಸ್ತೆಗಳು ರಿಪೇರಿ ಆಗಿದ್ದವು ನಾವು ಯಾರೂ ನಿರೀಕ್ಷಿಸದ ಮಟ್ಟದಲ್ಲಿ ಮಳೆ ಹೊಡೆದುದರ ಪರಿಣಾಮವಾಗಿ ಕಳೆದ ವರ್ಷ ಮಾಡಿದ ರಸ್ತೆಗಳೆಲ್ಲವೂ ಕುಸಿದು ಹೋಗಿವೆ ಮತ್ತೆ ಅವನ್ನು ರಿಪೇರಿ ಮಾಡಬೇಕಾದರೆ ಬಹುಶಃ ಸುಮಾರು 10 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚ ತಗುಲಬಹುದು ಎಂದು ಲೋಕೋಪಯೋಗಿ ಇಲಾಖೆಯವರು ಮಾಹಿತಿ ಕಳುಹಿಸಿಕೊಟ್ಟಿದ್ದಾರೆ ಸುಮಾರು 800 ಕ್ಕೂ ಹೆಚ್ಚು ಕಂಬಗಳು ಮುರಿದು ಬಿದ್ದಿವೆ ಈ ಸಂದರ್ಭದಲ್ಲಿ ಅವರು ಕೂಡ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ಕಳುಹಿಸಿಕೊಟ್ಟಿದೆ ಕೃಷಿ ಗದ್ದೆಯಲ್ಲಿ ಏನಾದರೂ ನಾಟಿ ಮಾಡಬೇಕೆಂದರೆ, ಇವತ್ತು ತುಂಬಿರುವ ನೀರು ಕಡಿಮೆಯಾಗಬೇಕಾದರೆ, ಇನ್ನು ಒಂದು ತಿಂಗಳು ಸಮಯ ಬೇಕಾಗುತ್ತದೆ ಇಡೀ ಜಿಲ್ಲೆ ಈ ಪರಿಸ್ಥಿತಿಗೆ ಒಳಗಾಗಿದೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ ಮಳೆ

ಹಾನಿಯನ್ನು ಕೊಡುವಾಗ ಕೊಡಗು ಜಿಲ್ಲೆಯನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ ಮಳೆಯಿಂದ ಎಲ್ಲಾ ರೀತಿಯ ನಷ್ಟವನ್ನು ನಾವು ಅನುಭವಿಸುತ್ತಿದ್ದೇವೆ ಈ ರೀತಿ ವಿಪರೀತ ಮಳೆ ಹೊಡೆದುದರಿಂದ ಕೃಷ್ಣರಾಜ ಸಾಗರ ತುಂಬಿದೆ ತಾವು ಬೆಂಗಳೂರಿನ ಜನ ಸಂತೋಷವಾಗಿರುತ್ತೀರಿ ನೀರು ಕುಡಿಯುತ್ತೀರಿ, ಎಲ್ಲವೂ ಆಗುತ್ತದೆ ಆದರೆ ನಾವು ಅಲ್ಲಿಯ ಜನ ಕಣ್ಣೀರು ಹಾಕುತ್ತಿದ್ದೇವೆ ನಮ್ಮ ಕಣ್ಣೀರನ್ನು ಒರೆಸುವಂತಹ ಕೆಲಸ ಸರ್ಕಾರದ ವತಿಯಿಂದ ಖಂಡಿತವಾಗಿ ಆಗಲೇಬೇಕಾಗಿದೆ ಮಳೆ ಹಾನಿಗಾಗಿ ವಿಶೇಷವಾಗಿ ನಮ್ಮ ಜಿಲ್ಲೆಗೆ 15 ಕೋಟಿ ರೂಪಾಯಿ ಇವತ್ತು ಪ್ರಾಥಮಿಕ ವರದಿಯಿಂದ ಕೊಟ್ಟಿದ್ದೀರಿ ನೆನ್ನೆ ಮೊನ್ನೆಯಿಂದ ಮತ್ತಷ್ಟು ಭೂ ಕುಸಿತವಾಗಿದೆ, ನನ್ನ ಬಳಿ ಮಾಹಿತಿ ಇಲ್ಲ ಮಳೆ ಹೊಡೆಯುತ್ತದೆ ಈ 15 ಕೋಟಿ ರೂಪಾಯಿಗಳಲ್ಲಿ ಪ್ರಾಥಮಿಕ ಹಂತದಲ್ಲಿ ಕನಿಷ್ಟ ರಸ್ತೆ ಸಂಪರ್ಕವನ್ನು ಮಾಡಿ ಸದ್ಯಕ್ಕೆ ವಾಹನಗಳನ್ನು ಓಡಾಡುವ ಹಾಗೆ ಮಾಡಲು ಸಾಧ್ಯವಿಲ್ಲ ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಉಳಿದ ಮೊತ್ತವನ್ನು ಕೂಡ ಬಿಡುಗಡೆ ಮಾಡಿ ರಸ್ತೆಗಳ ವ್ಯವಸ್ಥೆ ಮತ್ತು ವಿದ್ಯುತ್ ಸಂಪರ್ಕದ ವ್ಯವಸ್ಥೆಯನ್ನು ಮಾಡಬೇಕು ಅದರ ಜೊತೆಯಲ್ಲಿ ನಮ್ಮ ಜಿಲ್ಲೆಗೆ ವಿಶೇಷವಾಗಿ ಸೀಮೆ ಎಣ್ಣೆಯನ್ನು ಕೂಡ ಬಿಡುಗಡೆ ಮಾಡಬೇಕು ಹಿಂದೆ ಎಲ್ಲ ಇಲಾಖೆಗೆ ತರಕಾರಿ ಸೀಮೆ ಎಣ್ಣೆಯನ್ನು ಕೊಡುತ್ತಿದ್ದರು ಯಾವುದೇ ಇಲಾಖೆಯಲ್ಲಿ ಇವತ್ತು ಕೆಲಸ ಮಾಡುವ ಪರಿಸ್ಥಿತಿ ಇಲ್ಲ ಜನರೇಟರ್ ಓಡಿಸಬೇಕೆಂದರೆ ಅದಕ್ಕೆ ಸೀಮೆ ಎಣ್ಣೆ ಬೇಕು ಯಾವುದೇ ಇಲಾಖೆಯಲ್ಲಿ ಈ ವ್ಯವಸ್ಥೆ ಇಲ್ಲದೇ ಇರುವುದರಿಂದ ಕೆಲಸ ಮಾಡುವುದಕ್ಕಾಗುತ್ತಿಲ್ಲ ವಿಶೇಷವಾಗಿ ಪೋಲೀಸ್ ಇಲಾಖೆಯವರಾದರೂ ಅಲ್ಲಿ ಇಲ್ಲಿ ಓಡಾಡಬೇಕಾಗುತ್ತದೆ ಹೋಮ್ UÁqï £ÀgÀ NqÁqÀ ÀÉÌAUÀ/ÀÉ fire force ನವರಾದರೂ ಕೆಲಸ ಮಾಡಬೇಕಾಗುತ್ತದೆ ಅವರಿಗೂ ಕೂಡ electricity ಇಲ್ಲದೆ ಕೆಲಸ ಮಾಡುವುದು ಕಷ್ಟವಾಗುತ್ತಿದೆ ಸನ್ಮಾನ್ಯ ಆಹಾರ ಮಂತ್ರಿಗಳು ಇಲ್ಲಿದ್ದಾರೆ ನಮ್ಮ ಜಿಲ್ಲೆಗೆ ವಿಶೇಷವಾದ ಸೀಮೆ ಎಣ್ಣೆಯನ್ನು ಬಿಡುಗಡೆ ಮಾಡಬೇಕು ಮಳೆ ಪರಿಹಾರದ ಅನುದಾನವನ್ನು ತಕ್ಷಣದಲ್ಲಿ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು

SRI MANOHAR KALLAPPA KINEKAR (UCHAGAON) Hon'ble Adhyaksha, from the last three years because of heavy rain in Belgaum and Khanapur taluks, farmers and public are suffering too much During the last two years also they have ssuffered and this year also they are suffering from the last 15-20 days, continuous rain is there and because of the markandeya river and Bellary Nala because of these two Nala and rivers, nearly 10,000 acres of paddy crop is being damaged every year Especially paddy and potato, which are the main plantations in Belgaum and Khanapura taluks the farmers are losing too much But, the Government are giving Rs 800/- per acre in return Actually, this year the cost of potato seed per quintal is Rs 1800/- and nearly 7-8 quintal seed is required per acre only for the purpose of seeding, farmers are losing Rs 9000/- to 10,000/- and the Government is giving only Rs 800/- In the 800/- rupees farmers will not be benefited that is why I am requesting the Government that they should enhance this compensation amount to at least Rs 10,000/- per acre so that the farmers will be compensated a little The Government is telling that thisGovernment is for the farmers But, actually if we see, the farmers are not getting anything they are suffering every year Bellary Nala problem is there from the last 50 years in Belgaum area Last year, we had requested the Government to de-silt it and the Government has approved Rs 3 70 crores programme But, the Minor Irrigation Department had not started the work in proper time

Every year in June rain starts in Belgaum They should have started this work in the month of January or February But they had started this work in the moth of April on the 4th April they had started this work again because of some complications, I don't know what the complications are they had stopped it for the last 20 to 25 days Bellavy Nala runs nearly 27 kms If they had desilted it completely, farmers would not have suffered this year Because of the incomplete work, danges has doubled this year than last year they should complete such programmes in proper time if farmers suffer because of such incomplete works, the department should be punished Otherwise they will not think about these farmers They will do it according to their time When we complaint to the department, they are telling that six months time is still there If six months time is still there, they should have started it in December itself They start in April and they tell there is six months time In rainy season, no one can do desilting work that is why action should be taken on these departmental officers By giving amount from the Government, also they had not completed and again this year also the paddy crop in nearly 7,000 to 8,000 acres have been damaged in Belgaum taluka Same thing has happened in Khanapura Taluka every year roads are getting damaged School Buildings, houses, everything have collapsed But the help they get from Government's side is very poor So, I request the Government that they should increase this compensation for houses also For Kachha houses they are giving only Rs 2,000/- and I

think Pucca houses they are giving only Rs 5,000/- this is not sufficient in rural areas They should give at least 10,000/- for Kachha houses also what they have allotted for the roads in the last two years in Belgaum Taluka and Khanapur Taluka is too insufficient because there is heavy rain in Belgaum and Khanapur Taluka Floods will be coming to Gokak, Chikkodi and Raibagh Because of the heavy rains, roads will be damaged heavily in Belgaum and Khanapur Taluka so, we request the Government that it gives maximum funds to Belgaum and Khanapur Taluka also for the developmental work of these roads For the Crop compensation also I once again request to enhance the compensation I thank the Hon'ble Speaker for giving me time to speak in the Assembly thank you

ಶ್ರೀ ಆರ್ ಧ್ರುವ ನಾರಾಯಣ್ (ಸಂತೆ ಮಾರನ ಹಳ್ಳಿ) ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜ ನಗರ ಜಿಲ್ಲೆಯಲ್ಲಿ ಹೆಚ್ಚು ಮಳೆಯೇನೂ ಬಿದ್ದು ಹಾನಿಯಾಗಿಲ್ಲ ನಮ್ಮ ಜಿಲ್ಲೆಯಲ್ಲಿ ಈಗಲೂ ಕೂಡ ಬರ ಪರಿಸ್ಥಿತಿಯನ್ನು ಎದುರಿಸುತ್ತಿರತಕ್ಕಂಥದ್ದು ತಮ್ಮೆಲ್ಲರಿಗೂ ಗೊತ್ತೇ ಇದೆ ನಮ್ಮ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದಲೂ ಕೂಡ ಬರ ಇದೆ ನಮ್ಮ ಭಾರತ ದೇಶದಲ್ಲಿ ಮೊದಲನೆ ಮಳೆ ಬೀಳತಕ್ಕಂಥದೇ ನಮ್ಮ ಚಾಮರಾಜ ನಗರ ಜಿಲ್ಲೆಯಲ್ಲಿ ಈ ಬಾರಿ ಮೊದಲ ಮಳೆ ಬಿದ್ದು ಬಿತ್ತನೆ ಕಾರ್ಯ ನಡೆದು ಅವುಗಳ ಪೈರುಗಳು ಚೆನ್ನಾಗಿ ಬಂದಿರುವಂಥ ಸಂದರ್ಭದಲ್ಲಿ ಸರಿಯಾಗಿ ಮಳೆ ಬೀಳದೆ ಬೆಳೆ ಹಾನಿಯಾಗಿದೆ ಮತ್ತು ಆ ಬೆಳೆಯೇ ಹೋಗಿದೆ ಈಗಾಗಲೇ ನಮ್ಮ ಜಿಲ್ಲೆ ಬರಪೀಡಿತ ಜಿಲ್ಲೆಯೆಂದು ಘೋಷಣೆಯಾಗಿದೆ ಆದರೆ ಹೆಚ್ಚಿನ ಅನುದಾನವನ್ನು ನಮ್ಮ ಜಿಲ್ಲೆಗೆ ತಾವು ಮಾನ್ಯ ಮಂತ್ರಿಗಳ ಮುಖೇನ ನಮ್ಮ ಜಿಲ್ಲೆಗೆ ಅನುದಾನವನ್ನು ಒದಗಿಸಿಕೊಡಬೇಕೆನ್ನುವ ಮನವಿಯನ್ನು ನಾನು ಮಾಡುತ್ತೇನೆ ಇದರ ಜೊತೆಗೆ ಬರ ಪರಿಹಾರದಲ್ಲಿ ಬರತಕ್ಕಂಥಹ ಹಣದ ಹಂಚಿಕೆ ಸರಿಯಾದಂಥ

ರೀತಿಯಲ್ಲಿ ಆಗಬೇಕು ಮಾನ್ಯ ಉಸ್ತುವಾರಿ ಸಚಿವರು ಇಲ್ಲಿಯೇ ಇದ್ದಾರೆ ಬರ ಪರಿಹಾರ ಎಂದು ಹೇಳಿದರೆ ಎಲ್ಲಿ ಬರಪೀಡಿತ ಪ್ರದೇಶವಿದೆ ಅಲ್ಲಿಗೆ ಹೆಚ್ಚಿಗೆ ಹಂಚಿಕೆಯಾಗಬೇಕು ಎನ್ನತಕ್ಕಂಥ ಗೈಡ್‌ಲೈನ್ಸ್ ಇದೆ ಆದರೆ ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ನೀರಾವರಿ ಇರತಕ್ಕಂಥ ಪ್ರದೇಶಕ್ಕೂ ಕೂಡ ಬರ ಪರಿಹಾರದ ಹಣವನ್ನು ಹಂಚಿಕೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ ಈ ಪದ್ಧತಿ ಹೋಗಬೇಕು ಮಾನ್ಯ ಕಂದಾಯ ಸಚಿವರು ಕೂಡ ನಮ್ಮ ಜಿಲ್ಲೆಗೆ ಆಗಮಿಸಿ ಆ ಒಂದು ಬರದ ಬಗ್ಗೆ ರಿವ್ಯೂ ಮೀಟಿಂಗ್ ಮಾಡಲು ಬಂದಂಥ ಸಂದರ್ಭದಲ್ಲಿ ಕೂಡ ನಾವು ಅವರಿಗೆ ಈ ಬಗ್ಗೆ ತಿಳಿಸಿದ್ದೆವು ಯಾವ ಪ್ರದೇಶ ಹೆಚ್ಚು ಬರ ಪೀಡಿತವಾಗಿದೆಯೋ, ಆ ಏರಿಯಾಗಳಿಗೆ ಈ ಅನುದಾನ ಹಂಚಿಕೆಯಾಗಬೇಕು ಎನತಕ್ಕಂಥದ್ದು ನಮ್ಮ ಅನಿಸಿಕೆ ಆ ನಿಟ್ಟಿನಲ್ಲಿ ನಮ್ಮ ಕಂದಾಯ ಸಚಿವರು ನಮ್ಮ ಜಿಲ್ಲೆಯಲ್ಲಿ ಏನು ಹಂಚಿಕೆಯಾಗಿದೆ, ಉಸ್ತುವಾರಿ ಸಚಿವರಿಗೆ ಹಂಚಿಕೆ ಮಾಡತಕ್ಕಂಥ ಅಧಿಕಾರವನ್ನು ಕೊಟ್ಟಿದ್ದಾರೆ ದಯಮಾಡಿ ಉಸ್ತುವಾರಿ ಸಚಿವರು ಇಲ್ಲಿಯೇ ಇದ್ದಾರೆ ತಾವು ಎಲ್ಲಿ ಬರಪೀಡಿತ ಪ್ರದೇಶವಿದೆ ಅಲ್ಲಿಗೆ ಸರಿಯಾದ ರೀತಿಯಲ್ಲಿ ಹಣವನ್ನು ಹಂಚಿಕೆ ಮಾಡಬೇಕು ಅದನ್ನು ಬಿಟ್ಟು ತಮಗೆ ಇಚ್ಛೆ ಬಂದ ಹಾಗೆ, ತಮಗೆ ಬೇಕಾದವರಿಗೆ, ಹಣ ಕೊಡತಕ್ಕಂಥದ್ದು ಸರಿಯಲ್ಲ ಎನ್ನತಕ್ಕಂತ ಮಾತನ್ನು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್(ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಮಳೆ ಬಂದು ಪ್ರವಾಹಕ್ಕೆ ತುತ್ತಾಗಿರುವಂಥ ಸಂದರ್ಭದಲ್ಲಿ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಸಾಕಷ್ಟು ಮಳೆಯೇ ಆಗಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ ಅದು ವಾಸ್ತವದ ವಿಚಾರ ಕೂಡ ಆಗಿದೆ ಅದರ ಜೊತೆಯಲ್ಲಿಯೇ ನಮ್ಮ ಪ್ರಕೃತಿ ವಿಕೋಪ ಪರಿಹರ ನಿಧಿಯಿಂದ ಹಣವನ್ನು ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿ ಇದೆ ಆ ಸಮಿತಿಗೆ ಎಲ್ಲಾ ಶಾಸಕರು ಸದಸ್ಯರಾಗಿರುತ್ತಾರೆ ಅವರು ಆ ಸಮಿತಿ ಸಭೆಯಲ್ಲಿಯೇ ತೀರ್ಮಾನ ಕೈಗೊಂಡು, ಯಾವ ಯಾವ ಕ್ಷೇತ್ರಕ್ಕೆ ಎಷ್ಟು ಹಣ ವಿತರಣೆ ಮಾಡಬೇಕು ಎನ್ನುವಂಥ ತೀರ್ಮಾನವನ್ನು ಮಾಡಲಾಗಿರುತ್ತದೆ ಇದರ ಜೊತೆಗೆ

ಅತಿವೃಷ್ಟಿಗೂ ಮತ್ತು ಅನಾವೃಷ್ಟಿಗೂ ವ್ಯತ್ಯಾಸವಿರುತ್ತದೆ ಅತಿ ವೃಷ್ಟಿ ಯಾದಾಗ ನಿರ್ದಿಷ್ಟವಾದ ಕಡೆ ಅನಾಹುತಗಳಾಗಿರುವಂತ ಮಾಹಿತಿಗಳಿರುತ್ತದೆ ಅಂಥದಕ್ಕೆ ಮಾತ್ರ ಕ್ರಮ ಕೈಗೊಳ್ಳಬಹುದು ಆದರೆ ಅನಾವೃಷ್ಟಿ ಇದ್ದಾಗ ಇಡೀ ತಾಲ್ಲೂಕೇ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದಂಥ ಸಂದರ್ಭದಲ್ಲಿ ನಾವು ಎಲ್ಲವನ್ನೂ ಸಮಾನವಾಗಿ ನೋಡಬೇಕಾಗುತ್ತದೆ ಕ್ಷೇತ್ರದ ವ್ಯಾಪ್ತಿ ಹಾಗೂ ಜನಸಂಖ್ಯೆ ವ್ಯಾಪ್ತಿ ಆಧಾರದ ಮೇಲೆ ಆ ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿ ಕೈಗೊಳ್ಳುವಂಥ ಕಾರ್ಯಕ್ರಮವನ್ನು ಹಾಕುತ್ತಿದ್ದೇವೆಯೇ ಹೊರತು ಅದರಲ್ಲಿ ಯಾವುದೇ ಪಕ್ಷಪಾತ ಮಾಡುವಂಥದ್ದಾಗಲಿ ಅಥವಾ ವೈಯಕ್ತಿಕವಾಗಿ ಯಾರಿಗೋ ಕೆಲಸವನ್ನು ಕೊಡುವಂಥದ್ದೇ ಆಗಲಿ ಅದ್ಯಾವುದೂ ಆಗಿಲ್ಲವೆನ್ನುವಂಥ ವಿಚಾರವನ್ನು ತಮ್ಮ ಮೂಲಕ ತಿಳಿಸುವುದಕ್ಕೆ ಬಯಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಮಹದೇವ್ ಪ್ರಸಾದ್‌ರವರೆ, ಮೊದಲನೆಯದಾಗಿ ನೀವು ಏಕೆ ಇದ್ದಕ್ಕಿದ್ದ ಹಾಗೆ ಎದ್ದು ನಿಂತುಕೊಂಡಿರಿ ಎಂಬುದೇ ನಮಗೆ ಗೊತ್ತಾಗಲಿಲ್ಲ ಎರಡನೆಯದಾಗಿ ನೀವೇನು ಮಾತನಾಡುತ್ತೀರಿ ಎಂಬುದು ನಮಗೆ ಅರ್ಥವಾಗಲಿಲ್ಲ ನಾವೇನೂ ನಿಮ್ಮ ಮೇಲೆ ಛಾರ್ಜ್ ಮಾಡಲಿಲ್ಲ ನಾವೇನೂ ಹೇಳಲೇ ಇಲ್ಲ ಹೀಗಿದ್ದರೂ ನೀವು ತಕ್ಷಣ ಎದ್ದು ನಿಂತುಕೊಂಡಿದ್ದೇಕೆ?

ಶ್ರೀ ಎಚ್ ಎಸ್ ಮಹದೇವ ಪ್ರಸಾದ್ ಮಾನ್ಯ ಸದಸ್ಯರು ನೇರವಾಗಿ ಮಾತನಾಡಿ ಜಿಲ್ಲಾ ಉಸ್ತುವಾರಿ ಸಚಿವರು ಪಕ್ಷಪಾತ ಮಾಡಿ ಹಣವನ್ನು ಹಂಚಿಕೆ ಮಾಡುತ್ತಿದ್ದಾರೆ ಎಂದು ಪ್ರಸ್ತಾಪ ಮಾಡಿದ್ದರಿಂದ ನಾನು ಅದಕ್ಕೆ ಉತ್ತರ ಕೊಡಲು ಎದ್ದುನಿಂತುಕೊಳ್ಳಬೇಕಾಯಿತು ಅವರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳಿದ್ದು

ಶ್ರೀ ವಾಟಾಳ್ ನಾಗರಾಜ್ ಆ ರೀತಿ ಅವರು ಹೇಳಿದರೇ, ನನಗೆ ಕೇಳಲಿಲ್ಲ

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಸಚಿವರು ಮೊದಲನೇ ಬಾರಿ ಬರ ಪರಿಹಾರದ ಸಭೆಯನ್ನು ಕರೆದಾಗ ಶಾಸಕರುಗಳನ್ನು ಕರೆದಿದ್ದಿರಿ

ಎರಡನೆಯ ಸಾರಿ ನಮ್ಮನ್ನು ಯಾರನ್ನೂ ಕರೆಯಲೇ ಇಲ್ಲ ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲಿಯೇ ಇದ್ದಾರೆ ಅವರನ್ನು ಏನಾದರೂ ಹಿರಿಯರು ಎಂದು ಕರೆದಿರಬಹುದೇನೋ ನನಗೆ ಗೊತ್ತಿಲ್ಲ ಆದರೆ ನಮ್ಮನ್ಯಾರನ್ನೂ ಕರೆಯದೇ ಅವರೇ ಹಂಚಿದ್ದಾರೆ ಹಂಚಲಿ, ಹಂಚತಕ್ಕಂಥದ್ದು ತಪ್ಪು ಎನ್ನುವಂಥ ಭಾವನೆಯನ್ನು ವ್ಯಕ್ತಪಡಿಸುವುದಿಲ್ಲ ಆದರೆ ಸರಿಯಾಗಿ ಹಂಚಬೇಕು ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಎಳಂದೂರು ತಾಲ್ಲೂಕು, ನೀರಾವರಿ ಪ್ರದೇಶ ಹನೂರಿನ ಕೆಲವು ಭಾಗಗಳಲ್ಲಿಯೂ ಕೂಡ ನೀರಾವರಿ ಪ್ರದೇಶವಿದೆ ಆ ಭಾಗಗಳಿಗೂ ಕೂಡ ಈ ಬರ ಪರಿಹಾರದ ನಿಧಿಯ ಹಣವನ್ನು ಹಂಚಿದಾಗ ತೀವ್ರವಾಗಿ ಬರಗಾಲಕ್ಕೆ ತುತ್ತಾಗಿರುವ ನಮ್ಮ ಭಾಗದ ಪ್ರದೇಶದವರಿಗೆ ಇದರಿಂದ ಅನ್ಯಾಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಮನವರಿಕೆ ಮಾಡಿಕೊಡುವುದಕ್ಕೆ ನಾನು ಇಚ್ಛೆ ಪಡುತ್ತೇನೆ ಇದರ ಜೊತೆಗೆ ಕಳೆದ ಬರಿಯೂ ಕೂಡ ನಮ್ಮ ಭಾಗದಲ್ಲಿ ಬೆಳೆ ಹಾನಿಯಾಗಿತ್ತು ಆದರೆ ಬೆಳೆ ವಿಮೆಯ ಹಣ ಇನ್ನೂ ಬಂದಿಲ್ಲ ಈ ಬಾರಿಯೂ ಕೂಡ ನಮ್ಮ ಭಾಗದಲ್ಲಿ ಬೆಳೆ ಹಾನಿಯಾಗಿದೆ ಆದಕಾರಣ ಕಳೆದ ವರ್ಷದ್ದು ಕೂಡ ಬೆಳೆ ವಿಮೆಯ ಹಣವನ್ನು ತಕ್ಷಣ ಕೊಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡುತ್ತೇನೆ ಇದರ ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳು ಕಳೆದ 15 ವರ್ಷದ ನಂತರ ನಮ್ಮ ಜಿಲ್ಲೆಗೆ ಆಗಮಿಸಿದ್ದರು 15 ವರ್ಷಗಳಿಂದ ಯಾರೂ ಬಾರದೇ ಇದ್ದದ್ದರಿಂದ, ಅವರನ್ನು ನಾವು ಸ್ವಾಗತ ಮಡುತ್ತೇವೆ ಆದರೆ ಅವರು ಬಂದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಪ್ರಗತಿ ಪರಿಶೀಲನೆಯನ್ನು ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಏಕೆಂದರೆ ಎಲ್ಲಾ ಇಲಾಖೆಯ ಕಾರ್ಯ ದರ್ಶಿಗಳನ್ನು ನಮ್ಮ ಜಿಲ್ಲೆಗೆ ಆಗ ಅವರು ಕರೆಸಿದ್ದರು ಪ್ರಗತಿ ಪರಿಶೀಲನೆ ಮಾಡುತ್ತೇನೆಂದು ಹೇಳಿ ಸುಮಾರು 20 ಕಾರ್ಯದರ್ಶಿಗಳು, ಎಲ್ಲಾ ಟಾಪ್‌ಮೋಸ್ಟ್ ಐ ಎ ಎಸ್ ಆಫೀಸರ್ಸ್, ಇಲಾಖೆಯ ಕಾರ್ಯದರ್ಶಿಗಳು ಫೈಲ್‌ಗಳನ್ನು ಎತ್ತುಕೊಂಡು ಚಾಮರಾಜನಗರಕ್ಕೆ ಬಂದಿದ್ದರು ಅಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಪೆಂಡಾಲ್‌ಗಳನ್ನು ನಿರ್ಮಾಣ ಮಾಡಿ ಸಾರ್ವಜನಿಕರ ಜೊತೆಗೆ ಚರ್ಚೆ ಮತ್ತು ರೈತ ಸಂಘದವರೊಡನೆ ಚರ್ಚೆ ಹೀಗೆ ಎಲ್ಲವನ್ನೂ ಇಟ್ಟುಕೊಂಡಿದ್ದರು ಆದರೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದರೂ ಪ್ರಗತಿ ಪರಿಶೀಲನೆಯನ್ನು ಮಾಡಲಿಲ್ಲ, ನಮ್ಮ ಜಿಲ್ಲೆ ಗಡಿ ಜಿಲ್ಲೆ

ಮತ್ತು ಬರಪೀಡಿತ ಜಿಲ್ಲೆ ಅಲ್ಲಿ ಪರಿಶೀಲನೆಯನ್ನು ಮಾಡಿ ಜಿಲ್ಲೆಯ ವಾಸ್ತವಾಂಶವನ್ನು ಚೆನ್ನಾಗಿ ಪರಿಶೀಲನೆಯನ್ನು ಮಾಡಿ ಜಿಲ್ಲೆಗೆ ಏನಾಗಬೇಕು ಎಂಬ ಬಗ್ಗೆ ಎಲ್ಲವನ್ನೂ ತಿಳುವಳಿಕೆ ಕೊಟ್ಟು ಆ ಜಿಲ್ಲೆಗೆ ಏನಾಗಬೇಕು ಎನ್ನತಕ್ಕಂಥದ್ದನ್ನು ಮಾಡಿದ್ದರೆ ನಿಜಕ್ಕೂ ಅವರು ಬಂದಿದ್ದಕ್ಕೂ ಒಂದು ಅರ್ಥ ಇತ್ತು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೇ ಪಡುತ್ತೇನೆ ಏಕೆಂದರೆ ಎಲ್ಲಾ ಇಲಾಖೆಯ ಕಾರ್ಯದರ್ಶಿಗಳು ಅಲ್ಲಿಗೆ ಬಂದಿದ್ದರು 20 ಇಲಾಖೆ ಕಾರ್ಯದರ್ಶಿಗಳು ಬಂದಾಗ ಅಲ್ಲಿ ಪ್ರಗತಿ ಪರಿಶೀಲನೆ ನಡೆಯದೆ ವಾಪಸ್ ಹೋದರು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಮಾನ್ಯ ಮುಖ್ಯಮಂತ್ರಿಗಳೂ ಜಿಲ್ಲೆಗೆ ಭೇಟಿ ಕೊಟ್ಟಿದ್ದಕ್ಕಾದರೂ ತಮಗೆ ಸಮಾಧಾನವಿದೆ ತಾನೆ?

ಶ್ರೀ ಆರ್ ಧೃವನಾರಾಯಣ್ ನಾನು ಸ್ವಾಗತ ಮಾಡಿದೆನಲ್ಲ ಅದೊಂದು ಅಂಶವನ್ನು ಬಿಟ್ಟರೆ ಬೇರೆಯದರ ಬಗ್ಗೆ ನಾನು ಹೇಳುತ್ತಿಲ್ಲ ಏಕೆಂದರೆ 20 ಇಲಾಖೆಯ ಕಾರ್ಯದರ್ಶಿಗಳು ಚಾಮರಾಜ ನಗರಕ್ಕೆ ಬಂದಿದ್ದರು ಬಂದು ಪುನಃ ವಾಪಸ್ಸು ಬೆಂಗಳೂರಿಗೆ ಬಂದರು ಒಂದು ದಿವಸ ಒಂದು ಇಲಾಖೆ ಕಾರ್ಯದರ್ಶಿ ಚಾಮರಾಜ ನಗರಕ್ಕೆ ಬರಬೇಕೆಂದರೆ ಎಷ್ಟು ಹಣ ಖರ್ಚಾಗುತ್ತದೆ ತಾವೇ ಹೇಳಿದಿರಿ ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಪೆಂಡಾಲನ್ನು ನಿರ್ಮಾಣ ಮಾಡಿ ಬಹಳ ಅದ್ದೂರಿಯಾಗಿ ಬಹಳ ಚೆನ್ನಾಗಿ ನೀವು ಕಾರ್ಯಕ್ರಮವನ್ನು ಮಾಡಿದಿರಿ ಆದರೆ ಅಲ್ಲಿ ಪ್ರಗತಿ ಪರಿಶೀಲನೆ ಆಯಿತೆ? ದಯಮಾಡಿ ಮಾನ್ಯ ಸಚಿವರು ಹೇಳಬೇಕು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಅವೊತ್ತು ಅನಿವಾರ್ಯವಾಗಿ ಅವರು ಬೇರೆ ಕಾರ್ಯಕ್ರಮವಿದ್ದ ಕಾರಣ ಬೇಗ ಹೋದರು ಆದರೆ ಮಹದೇಶ್ವರ ಬೆಟ್ಟದಲ್ಲಿ ಎರಡನೆಯ ಸಲ ಭೇಟಿ ಕೊಟ್ಟಾಗ ಆ ಸಂದರ್ಭದಲ್ಲಿ ಪ್ರಗತಿ ಪರಿಶೀಲನೆ ಕಾರ್ಯಕ್ರಮವನ್ನು ಅವರು ಮಾಡಿದ್ದಾರೆ

ಶ್ರೀ ಆರ್ ಧೃವನಾರಾಯಣ್ ಮಾನ್ಯ ಅಧ್ಯಕ್ಷರೆ, ನಾಲ್ಕು ಗಂಟೆಗಳ ಕಾಲ ಮಾನ್ಯ ಮುಖ್ಯಮಂತ್ರಿಗಳನ್ನು ಕೇವಲ ದೇವಸ್ಥಾನಗಳಿಗೆ ಕರೆದುಕೊಂಡು

ಹೋಗಿದ್ದಾರೆ ಮೊದಲು ಚಾಮರಾಜನಗರದಲ್ಲಿ ಚಾಮರಾಜೇಶ್ವರ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದಾರೆ ಅದಾದ ಮೇಲೆ ನಾಲ್ಕು ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿದ್ದಾರೆ ನಾಲ್ಕು ಗಂಟೆಗಳ ಕಾಲ ಕೇವಲ ದೇವಸ್ಥಾನಗಳಲ್ಲಿ ಪೂಜೆಯನ್ನು ಮಾಡಿಸಿದ್ದಾರೆ

ಅಧ್ಯಕ್ಷರು ನೆರೆಹಾವಳಿ ಬಗ್ಗೆ ಮಾತನಾಡಿ

ಶ್ರೀ ಆರ್ ಧೃವನಾರಾಯಣ್ ನಾನು ಅದನ್ನೇ ಹೇಳುತ್ತಿರುವುದು ನಮ್ಮ ಜಿಲ್ಲೆಯಲ್ಲಿ ಬರ ಇದೆ ಅಲ್ಲಿ ಪ್ರಗತಿ ಪರಿಶೀಲನೆ ಎಂದು ಹೇಳಿ ಅಂದು ಬರದ ಬಗ್ಗೆ ಚರ್ಚೆಯಾಗಲಿಲ್ಲ ಮಾನ್ಯ ಸಚಿವರು ದೊಡ್ಡ ಪೆಂಡಾಲ್ ಹಾಕಿ ಬಹಳ ಅದ್ಧೂರಿಯಾಗಿ ಮಾಡಿದರು ಆದರೆ ನಾಲ್ಕು ಗಂಟೆಗಳ ಕಾಲ ಅವರು ದೇವಸ್ಥಾನದಲ್ಲೇ ಇದ್ದರು at least ಬಂದಂತಹ ಜಿಲ್ಲಾಧಿಕಾರಿಗಳ ಜೊತೆ ನಮ್ಮ ಜಿಲ್ಲೆ ಬಗ್ಗೆ ಒಂದು ಗಂಟೆಯಾದರೂ ಬರಪೀಡಿತ ಪ್ರದೇಶ ಎಂದು ಹೇಳಿ review ಮಾಡಿದರಾ? ಅವರು ಮಾಡಲಿಲ್ಲವೆನ್ನುವ ಆರೋಪವನ್ನು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ ತಾವು ಕೂಡ review ಮಾಡಿದ್ದೀರಿ ಈಗಲೂ ಕೂಡ ಪೂರ್ಣವಾಗಿ ಬರ ಇದೆ ನಮ್ಮ ಜಿಲ್ಲೆಗೆ ಹೆಚ್ಚಿನ ಅನುದಾನವನ್ನು ಒದಗಿಸಿಕೊಡಬೇಕೆಂದು ಮನವಿಯನ್ನು ಮಾಡಿ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಗಂಗಾಧರ ನಾಗೇಶ ಭಟ್(ಕಾರವಾರ) ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಾದ ಧಾರವಾಢ ಮತ್ತು ಜೊಯಿಡಾ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಬಹಳಷ್ಟು ಹಾನಿಯಾಗಿದೆ 2 ನೇ ಜುಲೈ 2007 ರಂದು ಬಿದ್ದಂತಹ ಬಹಳಷ್ಟು ಮಳೆಯಿಂದ ಸಮುದ್ರದ ಅಲೆಗಳು 40 ಮೀಟರ್‌ನಷ್ಟು ಒಳಗಡೆ ಬಂದು ಸಾಕಷ್ಟು ಕಡಲ ಕೊರೆತವಾಗಿದೆ ಅದರಿಂದಾಗಿ ಬಹಳಷ್ಟು ತೆಂಗಿನ ಹಾಗೂ ಮಾವಿನ ಮರಗಳು ಬಿದ್ದಿರುವುದಲ್ಲದೆ, ಅನೇಕ ಮನೆಗಳು ಕುಸಿದಿವೆ ಹಾಗೆ ಆ ಸಮುದ್ರದ ದಡದಲ್ಲಿ ವಾಸಿಸುವಂತಹ ಮೀನುಗಾರರು ಬಹಳಷ್ಟು ಭಯಬೀತರಾಗಿದ್ದಾರೆ

ಅದಕ್ಕೆ ಮಾನ್ಯ ಜಿಲ್ಲಾದಿಕಾರಿಗಳು ತುರ್ತು ಪರಿಹಾರ ಎಂದು ಹೇಳಿ ಅಲ್ಲಿ ಉಸುಕಿನ ಚೀಲವನ್ನು ಹಾಕಿ ತಡೆಗೋಡೆ ನಿರ್ಮಿಸಿದ್ದಾರೆ ಆದರೆ ಅದು ಬಹಳ ದಿನ ಇರುವುದಿಲ್ಲ ಅದಕ್ಕಾಗಿ ಅಲ್ಲಿ ಶಾಶ್ವತವಾಗಿ ಒಂದು ತಡೆಗೋಡೆಯನ್ನು ಮಾಡಿ ಪರಿಹಾರ ಮಾಡಬೇಕಾಗಿದೆ ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಬಹಳಷ್ಟು ಹಾನಿಯಾಗುವಂತಹ ಸಂದರ್ಭವಿದೆ ಅನೇಕ ಕಡೆಗಳಲ್ಲಿ electric ಕಂಬಗಳು ಬಿದ್ದು, ಅದರಿಂದ ಕೂಡ ಬಹಳಷ್ಟು ಹಾನಿಯಾಗಿದೆ ನಮ್ಮ ಜೊಯಿಡಾ ತಾಲ್ಲೂಕಿನಲ್ಲಿ ದಟ್ಟವಾದ ಅರಣ್ಯವಿದ್ದು, ಸುಮಾರು ಕಡೆ ಅಲ್ಲಿ electric ಕಂಬಗಳು ಮುರಿದರೆ, ಕನಿಷ್ಟವೆಂದರೆ ಒಂದು ತಿಂಗಳಾದರೂ ಕೂಡ ಅದು repair ಆಗುವುದಿಲ್ಲ ಅಂತಹ ಪರಿಸ್ಥಿತಿಯಲ್ಲಿ ಜನ ಅಲ್ಲಿ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಈ ಭಾಗದಲ್ಲಿ 15–20 ವರ್ಷದ ಹಿಂದೆ ಈ ಸಮಸ್ಯೆಗಳು ಇರಲಿಲ್ಲ ನೌಕಾ ನೆಲೆಯಲ್ಲಿ ಸಮುದ್ರದೊಳಗೆ ಅನೇಕ ಕಡೆಗಳಲ್ಲಿ ಅಲೆ ತಡೆಗೋಡೆಗಳನ್ನು ನಿರ್ಮಾಣ ಮಾಡಿರುವುದರಿಂದ ಕಾರವಾರ ಪಟ್ಟಣ ಮತ್ತು ಈ ಹಳ್ಳಿಗಳಲ್ಲಿ ಈ ಸಮಸ್ಯೆಗಳು ಪ್ರಾರಂಭವಾಗಿದೆ ಆದುದರಿಂದ ಈ ಸಮಸ್ಯೆಗಳು ಆಗದಂತೆ ನೋಡಿಕೊಳ್ಳಬೇಕಾಗಿದೆ ಈಗ ಅತಿವೃಷ್ಟಿಯಿಂದ ಸುಮಾರು ಪ್ರಮಾಣದಲ್ಲಿ ಎಂದರೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಹಾನಿಯಾಗಿದೆ ಅದಕ್ಕಾಗಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ವಿನಂತಿಯನ್ನು ಮಾಡುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎ ಪಾಪರೆಡ್ಡಿ(ರಾಯಚೂರು) ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮಳೆಯಿಂದ ಸುಮಾರು 70% ನಷ್ಟು ಮುಳುಗಿದ ಕರಣ, ನಗರದಲ್ಲಿ ಎಲ್ಲ ರಸ್ತೆಗಳು ಕೆಟ್ಟುಹೋಗಿ ಜನರಿಗೆ ಓಡಾಡುವುದಕ್ಕೆ ಅಸ್ತವ್ಯಸ್ತವಾಗಿದೆ ನಾನು ಕಂದಾಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, ತಕ್ಷಣವೇ ರಾಯಚೂರು ನಗರದಲ್ಲಿ ಎಲ್ಲಾ ರಸ್ತೆಗಳ ರಿಪೇರ್ ಆಗಬೇಕು ರೂ 150 ಕೋಟಿ ಹಣವನ್ನು ರಾಯಚೂರು ನಗರಕ್ಕೆ ಕೊಟ್ಟರೆ ಅಲ್ಲಿ ರಸ್ತೆ ರಿಪೇರ್ ಆಗಿ ಜನರಿಗೆ ಓಡಾಡುವುದಕ್ಕೆ ವ್ಯವಸ್ಥೆಯಾಗುತ್ತದೆ ಪ್ರತಿದಿನ ಕೂಡ ಒಬ್ಬೊಬ್ಬರಿಂದ ಅಲ್ಲಿ, strike ಆಗುತ್ತಿದೆ ಅಲ್ಲಿ auto gAikshwa ದವರು, school ನ ಮಕ್ಕಳು strike ಮಾಡುತ್ತಿದ್ದಾರೆ ಅಲ್ಲಿ ಮಕ್ಕಳಿಗೆ ಓಡಾಡುವುದಕ್ಕೆ ಸರಿಯಾದ ರಸ್ತೆಯಿಲ್ಲ ಎಲ್ಲಾ ಕೆಟ್ಟು ಹೋಗಿವೆ ಆ ಕಾರಣದಿಂದ ಮಾನ್ಯ ಕಂದಾಯ

ಮಂತ್ರಿಗಳು ತಕ್ಷಣವೇ road repair ಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ ಅದೇ ರೀತಿಯಲ್ಲಿ ಹಳ್ಳಿಗಳಿಗೆ ಹೋಗುವಂತಹ ದಾರಿಯಲ್ಲಿ ಸೇತುವೆಗಳು ಕೊಚ್ಚಿಕೊಂಡು ಹೋಗಿವೆ ಅಲ್ಲಿ ಕೂಡ ರಸ್ತೆಗಳ ವ್ಯವಸ್ಥೆ ಕೆಟ್ಟುಹೋಗಿವೆ ನದಿ ದಂಡೆಯಲ್ಲಿ ಇದ್ದಂತಹ ಹಳ್ಳಿಗಳಲ್ಲಿ ನೀರು ಬಂದು ಅಲ್ಲಿ ಇದ್ದಂತಹ ಜೋಪಡಿಗಳು ಕೊಚ್ಚಿಕೊಂಡು ಹೋಗಿದ್ದು, ಇದುವರೆಗೂ ಆ ಜನರಿಗೆ ಯಾವುದೇ ರೀತಿಯ ಅನುದಾನ ಬಿಡುಗಡೆಯಾಗಲಿಲ್ಲ ನನ್ನ ಕ್ಷೇತ್ರದಲ್ಲಿ ಮನೆ ಬಿದ್ದು ಇಬ್ಬರು ಮಕ್ಕಳು ಸತ್ತು ಹೋದರು ಆ ವಿಚಾರದಲ್ಲಿ ಕೂಡ ಇಲ್ಲಿಯವರೆಗೆ ಅನುದಾನ ಬಿಡುಗಡೆಯಾಗಿಲ್ಲ ನನ್ನ ಕ್ಷೇತ್ರದಲ್ಲಿ ಬಹಳಷ್ಟು ಅನಾಹುತವಾಗಿದೆ ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳು ತಕ್ಷಣವೇ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ

ಶ್ರೀ ಎ ಎಸ್ ಬಸವರಾಜ್ (ಅರಸೀಕೆರೆ) ಮಾನ್ಯ ಅಧ್ಯಕ್ಷರೆ, ಕಲವು ಭಾಗದಲ್ಲಿ ಅತಿ ವೃಷ್ಟಿಯಾಯಿತು ಆದರೆ ನನ್ನ ಕ್ಷೇತ್ರದಲ್ಲಿ ಅನಾವೃಷ್ಟಿ ಇದೆ ಅದಕ್ಕೆ ಕಾರಣವೇನೆಂದರೆ ಅರಸೀಕೆರೆ ತಾಲ್ಲೂಕಿನಲ್ಲಿ 126 ಗ್ರಾಮದಲ್ಲಿ flouride ಅಂಶ ಜಾಸ್ತಿಯಾಗಿ ಕುಡಿಯುವ ನೀರಿನ ಸಮಸ್ಯೆಯಾಗಿದೆ ನಮ್ಮ ಅರಸೀಕೆರೆಯಲ್ಲಿ ನೀರೇ ಇಲ್ಲ ಹಿಂದೆ ಅನೇಕ ಬೋರ್‌ವೆಲ್ ಕೊರೆಸಿದ್ದರು ಆಗ ನೀರು ಬಂದಿತ್ತು ಆದರೆ ಈಗ ನೀರು ಬತ್ತಿ ಹೋಗಿದೆ ಮೊನ್ನೆ ತಾನೆ Relief fund ನಲ್ಲಿ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದರು ಆದರೆ ಅದರಲ್ಲಿ ನಮಗೆ 50 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದು, ಅದನ್ನು ಗಿಡಮರ ಬೆಳೆಸುವುದಕ್ಕೋಸ್ಕರವೆಂದು ಕೊಟ್ಟಿದ್ದಾರೆ ಅಲ್ಲಿ ನೀರೇ ಇಲ್ಲದಿರುವಾಗ ಗಿಡ ಮರಗಳ ಅವಶ್ಯಕತೆ ಇಲ್ಲ ಅದರ ಜೊತೆಗೆ ಶಾಲಾ ಕಟ್ಟಡಗಳಿಗೆ ಮತ್ತು ರಸ್ತೆಗಳಿಗೆ ಕೊಟ್ಟಿದ್ದಾರೆ ಆದರೆ ನಮಗೆ borewell ಕೊರೆಸುವುದಕ್ಕೆ ಬೇಕೆಂದು ಕೇಳಿದಾಗ, deepening, pressing ಮಾತ್ರ ಇದು ಅನ್ವಯಿಸುತ್ತದೆಂದು ಹೇಳಿದರು ಅಲ್ಲಿ deepening, pressing ಮಾಡುವುದಕ್ಕೆ ಯಾರೂ ಬರಲಿಲ್ಲ ನಮ್ಮಲ್ಲಿ ಕುಡಿಯುವ ನೀರಿನ ಅಭಾವವಾಗಿದೆ ಏಕೆಂದರೆ ನಮ್ಮಲ್ಲಿ ನದಿಗಳು ಹಾಗೂ ಚಾನೆಲ್‌ಗಳು ಇಲ್ಲ ಆದುದರಿಂದ borewell ಕೊರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ಸಾಕಷ್ಟು

ಅನುದಾನವನ್ನು ನಮ್ಮ ಅರಸಿಕೆರೆ ತಾಲ್ಲೂಕಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ವೀರ ಬಸವಂತ ರೆಡ್ಡಿ ಮುದ್ನಾಳ್ (ಯಾದಗಿರಿ) ಮಾನ್ಯ ಅಧ್ಯಕ್ಷರೆ, ಇವತ್ತು ಮಳೆಯ ವಿಕೋಪದಿಂದ ಆಗಿರುವಂತಹ ಅನಾಹುತದ ಬಗ್ಗೆ ನೆಡೆದಿರುವ ಚರ್ಚೆಯಲ್ಲಿ ನಾನು ಹೆಚ್ಚು ಮಾತನಾಡದೇ ಎರಡು ಮೂರು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ 22 ಮತ್ತು 23 ರಂದು ಆದಂತಹ ಮಳೆ ಎಂದೂ ಆಗಲಾರದಂತಹ ಮಳೆಯಾಗಿದೆ ಅದರಿಂದ ನಮ್ಮಲ್ಲಿನ ರಸ್ತೆಗಳೆಲ್ಲಾ ಕೊಚ್ಚಿಕೊಂಡು ಹೋಗಿ ಸಂಪರ್ಕ ಕಟ್ ಆಗಿದೆ ಅದನ್ನು ಎರಡು ಮೂರು ದಿವಸದಲ್ಲಿ ರಿಪೇರಿ ಮಾಡಿದರೂ ಕೂಡ ಅದು ಶಾಶ್ವತವಲ್ಲ ಇನ್ನೊಂದು ಮಳೆ ಬಂದರೆ ಮತ್ತೆ ಕೊಚ್ಚಿ ಹೋಗುತ್ತದೆ ಅದಕ್ಕಾಗಿ ಇದಕ್ಕೆ ಹೆಚ್ಚಿಗೆ ಹಣ ನೀಡಿ ಇದರ ಬಗ್ಗೆ permanent ಆಗಿ ವ್ಯವಸ್ಥೆ ಮಾಡುವಂತಹ ರೀತಿಯಲ್ಲಿ ಚೆನ್ನಾಗಿ ಕೆಲಸವಾಗಬೇಕು ಎರಡನೆಯದಾಗಿ ಈ ರೀತಿ ಮಳೆಯಾಗಿ, ಪ್ರತಿಯೊಂದು ಹಳ್ಳಿಯಲ್ಲಿ ನೀರು ಹಳ್ಳಿಯಿಂದ ಹೊರಗೆ ಹೋಗದೆ ಹಾಗೆ ನಿಂತುಬಿಟ್ಟಿದೆ ನಿಂತ ನೀರಿನಿಂದ ಕಾಲರಾ ಪ್ರಾರಂಭವಾಗುತ್ತದೆ ಆದುದರಿಂದ ಸರ್ಕಾರ ಇದರ ವಿಚಾರದಲ್ಲಿ ಪ್ರತಿಯೊಂದು ಹಳ್ಳಿಯ ನೀರು ಹೊರಗೆ ಹೋಗುವ ಹಾಗೆ ಏನಾದರೂ ಮಾಡಿದರೆ ನಮಗೆ ಅನುಕೂಲವಾಗಬಹುದು ಇಲ್ಲದೆ ಇದ್ದಲ್ಲಿ ಪ್ರತಿ ಹಳ್ಳಿಯಲ್ಲಿ ನೀರು ನಿಂತು ಸಾಮಾನ್ಯ ಜನರ ಆರೋಗ್ಯಕ್ಕೆ effect ಆಗುತ್ತದೆ ಮೂರನೆಯದಾಗಿ ಈ ಮಳೆಯಿಂದ ಒಂದೇ ಒಂದು ಒಳ್ಳೆಯದಾಗಿದೆ ಯಾದಗಿರಿ ಮತಕ್ಷೇತ್ರದಲ್ಲಿ ಎಲ್ಲಾ ಕೆರೆಗಳು ತುಂಬಿವೆ ಹಾಗೂ ಅಲ್ಲಿ ಬಿತ್ತನೆ ಚೆನ್ನಾಗಿ ಆಗಿದೆ ಆದರೆ ಬಿತ್ತುವ ಬೀಜಕ್ಕೆ ನಾಲ್ಕು ವರ್ಷದಲ್ಲಿ ಈಗ ಬಹಳ demand ಬಂದಿದೆ ಏಕೆಂದರೆ ಎಲ್ಲಾ ಕೆರೆ ತುಂಬಿವೆ ಅದಕ್ಕೆ ಬೀಜವನ್ನು ಸರಿಯಾಗಿ ಸಪ್ಲೈ ಮಾಡಬೇಕೆಂದು ಸರ್ಕಾರಕ್ಕೆ ನಾನು ಆಗ್ರಹ ಮಾಡುತ್ತೇನೆ ಕೆಲವು ಕೆರೆಗಳು ಯಾವಾಗಲೂ ತುಂಬದೇ ಇದ್ದು ಈಗ ತುಂಬಿಕೊಂಡು ಕೆರೆಯ ಒಡ್ಡು ಒಡೆದು ಬಹಳ ನೀರು ಹೋಗಿಬಿಟ್ಟಿದೆ ಜಿಲ್ಲಾ ಪಂಚಾಯತ್‌ನವರು ಇದರ ಬಗ್ಗೆ ಕಾಳಜಿ ತೆಗೆದು ಕೊಂಡು ಕೆರೆಯ ಒಡ್ಡನ್ನು ರಿಪೇರಿ ಮಾಡಿಸಿದರೆ ನೀರು ಸಂಗ್ರಹ ಆಗಬಹುದೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ(ಬ್ಯಾಡಗಿ) ಮಾನ್ಯ ಅಧ್ಯಕ್ಷರೆ, ಮಳೆ ಹೆಚ್ಚಾಗಿರುವುದರಿಂದ ನಮ್ಮ ಜಿಲ್ಲೆಯಲ್ಲಿ ಅದರಲ್ಲೂ ನನ್ನ ಕ್ಷೇತ್ರವಾದ ಬ್ಯಾಡಗಿಯಲ್ಲಿ ರಸ್ತೆಗಳು ಬಹಳ ದುರಾವಸ್ಥೆಗೊಂಡಿವೆ ಈ ರಸ್ತೆಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ರಸ್ತೆಯ ಮೇಲೆ ಬಿದ್ದಂತಹ ನೀರನ್ನು ಚರಂಡಿಗೆ ಹರಿದು ಹೋಗುವಂತೆ ಮಾಡುವಂತಹ ವ್ಯವಧಾನ Engineering Section ಗೆ ಇಲ್ಲವೆಂದು ಕಾಣುತ್ತದೆ ಅದರ ಬಗ್ಗೆ ಅನೇಕ ಬಾರಿ ನಾವು ಪತ್ರಗಳನ್ನು ಬರೆದು ಸಂಬಂಧ ಪಟ್ಟ ಇಲಾಖೆಯವರಿಗೆ ಗಮನವನ್ನು ಸೆಳೆದರೂ ಕೂಡ ಇವತ್ತು ಆ ನೀರು ಹರಿದು ಚರಂಡಿಗೆ ಹರಿದು ಹೋಗದ ಹಾಗೆ ರಸ್ತೆಗಳನ್ನು ನಿರ್ಮಾಣ ಮಾಡಿರುವುದರಿಂದ ಆ ರಸ್ತೆಗಳು ಹಾಳಾಗುವುದಕ್ಕೆ ಅದೂ ಒಂದು ಕಾರಣವೆಂದು ಹೇಳಬಹುದು ಮಳೆ ಹೆಚ್ಚಾಗಿದ್ದರಿಂದ ರಸ್ತೆಯಲ್ಲಿಯೇ ನೀರು ನಿಂತು ವಾಹನಗಳು ಅಡ್ಡಾಡಿದ್ದರಿಂದ ಬಹಳ ಕೆಟ್ಟದಾಗಿದೆ ಅಲ್ಲಿ ಸಾಕಷ್ಟು ಹಾನಿಯಾಗಿ ರುವುದರಿಂದ ಸುಮಾರು 4 ರಿಂದ 5 ಕೋಟಿ ರೂಪಾಯಿಗಳು ನನ್ನ ಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿಗೆ ಅವಶ್ಯವಾಗಿ ಬೇಕಾಗುತ್ತದೆ ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಕೂಡಲೇ ಒಂದು circular ಅನ್ನು ಹೊರಡಿಸಬೇಕು ಎಲ್ಲಿ ಚರಂಡಿಗೆ ನೀರು ಹರಿದು ಹೋಗುವುದಿಲ್ಲ, ಅಲ್ಲಿ ಚರಂಡಿಗೆ ಸರಿಯಾಗಿ ನೀರು ಹರಿದು ಹೋಗುವ ಹಾಗೆ ಕೆಲಸಗಳನ್ನು ಮಾಡುವುದಕ್ಕೆ ಸಂಬಂಧಪಟ್ಟ engineering section ಗೆ ಸೂಚನೆಗಳನ್ನು ಕೊಡುವಂತಹ ಕೆಲಸವನ್ನು ಮಾಡಬೇಕು ಅದರ ಜೊತೆಯಲ್ಲಿ ಇವತ್ತು ಮಳೆಯಿಂದ ರಸ್ತೆಗಳು ಹಾಳಾಗಿರುವುದರಿಂದ ಅನೇಕ ಕಡೆಗಳಲ್ಲಿ ವಾಹನಗಳು ಅಡ್ಡಾಡುವುದಕ್ಕೆ ತೊಂದರೆಯಾಗಿದೆ ಆದುದರಿಂದ ಶೀಘ್ರಗತಿಯಲ್ಲಿ ಆ ಕೆಲಸವನ್ನು ಮಾಡಿಸಬೇಕೆಂದು ನಾನು ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ ಅದರ ಜೊತೆಗೆ 15 ರಿಂದ20 ದಿವಸಗಳಿಂದ ಮಳೆ ಏನು ಪ್ರಾರಂಭವಾಗಿದೆ, ಅದರಿಂದ ಅನೇಕ ಕಡೆಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರಿಗೆ ಸಮಸ್ಯೆಯಾಗಿದೆ ಅವರಿಗೆ ಇವತ್ತು ಕೂಲಿ ಕೆಲಸ ಸಿಗುತ್ತಿಲ್ಲ ಇವತ್ತು ರೋಜ್‌ಗಾರ್ ಯೋಜನೆಯಲ್ಲಿ ಸರ್ಕಾರ ಕೆಲಸವನ್ನು ಕೊಡುತ್ತಿದೆ ಬಹಳ ಸಂತೋಷ ಆದರೆ, ಮಳೆ ಪ್ರಾರಂಭವಾಗಿರುವುದರಿಂದ ಕೆಲಸಕ್ಕೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ ಅವರು ಪ್ರತಿನಿತ್ಯ ದುಡಿಯಲಿಲ್ಲವೆಂದರೆ ಅವರಿಗೆ ಸಾಯಂಕಾಲದ ಊಟಕ್ಕೆ ತೊಂದರೆಯಾಗುತ್ತದೆ ಇಂತಹ ಸಂದರ್ಭದಲ್ಲಿ

ಸರ್ಕಾರ ವಿಶೇಷ ಗಮನವನ್ನು ಹರಿಸಬೇಕಾಗುತ್ತದೆ ಎಲ್ಲಿ ಹೆಚ್ಚಿಗೆ ಮಳೆಯಾಗುತ್ತಿದೆ, ಸುಮಾರಿ 15–20 ದಿವಸಗಳಿಂದ ಸತತವಾಗಿ ಮಳೆ ಬರುತ್ತಾ ಇರುವುದರಿಂದ, ಅವರಿಗೆ ಕೂಲಿ ಕೆಲಸ ಸಿಗುತ್ತಾ ಇಲ್ಲ ಆ ಕಾರಣದಿಂದ ವಿಶೇಷವಾಗಿ ಆ ಜನಾಂಗದವರು ಕೆಲಸದ ಮೇಲೆ ಅವಲಂಬಿತರಾಗಿರುವಂಥಾ ಕುಟುಂಬಗಳು ಏನು ಇವೆ, ಆ ಕುಟುಂಬಗಳಿಗೆ ಹೆಚ್ಚು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಬೇಕು ಆ ಕುಟುಂಬಗಳಿಗೆ ಆಹಾರ ಧಾನ್ಯವನ್ನು ಬಿಡುಗಡೆ ಮಾಡಿ, ಅವರು ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು, ನಾನು ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ ಇದು ಅತ್ಯಂತ ಅವಶ್ಯಕ ಹಾಗೂ ಜರೂರಾದ ವಿಚಾರವೆಂದು ಹೇಳಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಾ, ಇವತ್ತು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಪ್ರಭಾಕರ ಬಂಗೇರ (ಬೆಳ್ತಂಗಡಿ) ಮಾನ್ಯ ಅಧ್ಯಕ್ಷರೆ, ಈ ಸಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಮಳೆ ಬಂದು ತುಂಬಾ ಹಾನಿಯಾಗಿದೆ ಅದರಲ್ಲೂ ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೇರೆ ತಾಲ್ಲುಕುಗಳಿಗಿಂತ ಹೆಚ್ಚು ಮಳೆ ಬಂದಿದೆ ಅದು ಪಶ್ಚಿಮ ಘಟ್ಟದ ತಪ್ಪಲಲ್ಲಿ ಇರುವುದರಿಂದ ಪಶ್ಚಿಮ ಘಟ್ಟದ ತಪ್ಪಲಲ್ಲಿ ಇರುವಂಥ ಮಲವಂತಿಗೆ ಎಂಬ ಗ್ರಾಮದಲ್ಲಿ ಅಡ್ಯಾನಡಕ ಎಂಬ ಸ್ಥಳವಿದೆ ಆ ಸ್ಥಳದಲ್ಲಿ ಸುಮಾರು 10ರಿಂದ 15 ಕುಟುಂಬಗಳು ವಾಸ ಮಾಡುತ್ತಿವೆ ಅವರು 365 ದಿನಗಳೂ ಕೂಡ ಗುಡ್ಡದ ನೀರನ್ನೇ ಉಪಯೋಗ ಮಾಡುತ್ತಿರುವಂಥಾದ್ದು ಆ ಗುಡ್ಡದ ಕುಸಿತದಿಂದಾಗಿ ಅಲ್ಲಿ 8–10 ಮನೆಗಳಿಗೆ ಹಾನಿಯಾಗಿದೆ ಮತ್ತೆ ಕುಡಿಯುವ ನೀರಿಗೂ ಕೂಡ ತೊಂದರೆಯಾಗಿದೆ ಇದರ ಜೊತೆಗೆ ಒಟ್ಟಿಗೆ 400 ರಿಂದ 500 ಒಂದೇ ಕುಟುಂಬದ ಅಡಿಕೆ ಮರಗಳು ಬಿದ್ದುಹೋಗಿವೆ ಈ ಬಗ್ಗೆ ಒಟ್ಟಾಗಿ ಹೇಳುವುದಾದರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಡಿಕೆ ಮರಗಳು ತುಂಬಾ ಕುಟುಂಬಗಳದ್ದು ನಾಶವಾಗಿದೆ ಅದರ ಜೊತೆಗೆ ಈ ಮಳೆಯಿಂದ ಮತ್ತು ಗಾಳಿಯಿಂದ ಬೆಳ್ತಂಗಡಿ ತಾಲ್ಲೂಕಿನಲ್ಲಿ 200ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಹಾನಿಗೊಳಗಾಗಿವೆ ಇದರಿಂದ ಅಲ್ಲಿ ಜನರು ಕತ್ತಲಲ್ಲಿ ಇರುವಂತೆ ಆಗಿದೆ ಅದಕ್ಕೆ ಇಲಾಖೆಯವರು ಶ್ರಮ ಪಡುತ್ತಿದ್ದಾರೆ ಆ ದೃಷ್ಟಿಯಿಂದ ಹೆಚ್ಚು ಅನುದಾನವನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುವುದರ ಜೊತೆಗೆ

ಬೆಳ್ತಂಗಡಿ ತಾಲ್ಲೂಕಿನಲ್ಲಿ ವೆಂಟೆಡ್ ಡ್ಯಾಮ್ ಇದೆ ಬ್ಯಾರೇಜ್ ಕೂಡ ಇವೆ, ರಸ್ತೆಗಳು ಇವೆ ಇಲ್ಲಿ ಮಳೆಯಿಂದ ದೇವಸ್ಥಾನದ ಹತ್ತಿರ ಇರುವಂಥ ವೆಂಟೆಡ್ ಡ್ಯಾಮ್‌ಗೆ ಮಳೆ ನೀರು ತುಂಬಾ ಬಂದು ಆ ನೀರು ದೇವಸ್ಥಾನದ ಒಳಗೆ ಹೋಗಿ ಹಾನಿಯಾಗಿದೆ ಅದು ಮಾತ್ರವಲ್ಲ, ಅಲ್ಲಿರುವ ಎಲ್ಲಾ ಜನರಿಗೆ ತೊಂದರೆಯಾಗಿದೆ ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ನದಿ ಕೊರೆತದಿಂದಾಗಿ ಕೂಡ ತುಂಬಾ ಸಮಸ್ಯೆಗಳು ಉಂಟಾಗಿದೆ ನೇತ್ರಾವತಿ ನದಿ ಬರುವಂಥಾ ಪ್ರದೇಶದಲ್ಲಿ ಕೂಡ ನದಿ ಕೊರೆತದಿಂದಾಗಿ ಅಲ್ಲಿಯ ಜನ ಜೀವನ ಅಸ್ತವ್ಯಸ್ಥವಾಗಿದೆ ಆದುದರಿಂದ ಇಂಡಿ ಅಣೆಕಟ್ಟುಗಳ ದುರಸ್ತಿ ಮತ್ತು ತಡೆಗೋಡೆಗಳ ನಿರ್ಮಾಣಕ್ಕೆ ಸರ್ಕಾರ ಹೆಚ್ಚಿನ ಅನುದಾನವನ್ನು ಕಿರು ನೀರವರಿ ಇಲಾಖೆಯ ಮೂಲಕ ಕೊಡಬೇಕಾಗಿದೆ ಇನ್ನು ಮನೆಗಳ ಮೇಲೆ ಮರಗಳು ಬಿದ್ದು ತುಂಬಾ ಮನೆಗಳು ಕುಸಿದು ಬಿದ್ದಿದೆ ಆ ಮನೆಗಳ ಮತ್ತೆ ನಿರ್ಮಾಣ ಮಾಡಬೇಕಾದರೆ, ಈಗ ಇರುವಂಥಾ ಪರಿಹಾರ ಧನ ಕಡಿಮೆ ಇದೆ ಇದನ್ನು ಕೂಡ ಹೆಚ್ಚು ಮಾಡುವ ಅಗತ್ಯತೆ ಇದೆ ಅದರ ಜೊತೆಗೆ ಕುಸಿದಿರುವ ಮನೆಗಳಿಗೆ ಅವರ ಬಳಿ ಹಕ್ಕು ಪತ್ರಗಳು ಇಲ್ಲ ಅವರು ಸರ್ಕಾರಿ ಭೂಮಿಯಲ್ಲಿ ಇದ್ದಾರೆ ಅವರಿಗೆ ಕೊಡುವುದಕ್ಕಾಗುವುದಿಲ್ಲವೆಂಬ ವಿಚಾರವೂ ಕೂಡ ಸರ್ಕಾರದಲ್ಲಿ ಇದೆ ಆದುದರಿಂದ ನಾವು ಹೇಳುವಂಥಾದ್ದು ಅವರಲ್ಲಿ ಹಕ್ಕು ಪತ್ರ ಇದೆಯೋ ಇಲ್ಲವೋ ಅವರಲ್ಲಿ ಇಲ್ಲದಿದ್ದರೂ ಕೂಡ ಆ ಮನೆ ಕುಸಿದಿದೆ ಎನ್ನುವ ಕಾರಣಕ್ಕಾಗಿ ನಾವು ಮಾನವೀಯ ದೃಷ್ಟಿಯಿಂದ ಅವರಿಗೆ ಪರಿಹಾರವನ್ನು ಕೊಡುವಂಥಾದ್ದನ್ನು ಮಾಡದಿದ್ದರೆ, ಅವರಿಗೆ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ ಆ ದೃಷ್ಟಿಯಲ್ಲೂ ಕೂಡ ಅದಕ್ಕೆ ಪರಿಹಾರವನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ ಈಗಾಗಲೇ ನಮ್ಮ ಕೊಡಗು ಜಿಲ್ಲೆಯಲ್ಲಿ ಆಗಿರುವಂತೆ ನಮ್ಮ ಜಿಲ್ಲೆಯಲ್ಲೂ ಸೀಮೆ ಎಣ್ಣೆಯ ಸಮಸ್ಯೆ ಇದೆ ಈ ಪಡಿತರ ಚೀಟಿಯ ವ್ಯವಸ್ಥೆಯಿಂದಾಗಿ ಸೀಮೆ ಎಣ್ಣೆ ಸಮಸ್ಯೆ ಇದೆ ಗ್ಯಾಸ್ ಇರುವವರಿಗೆ ಸೀಮೆ ಎಣ್ಣೆ ಇಲ್ಲವೆಂದು ಇದೆ ಆದರೆ ಮಾನವೀಯ ದೃಷ್ಟಿಯಿಂದ ಇದನ್ನು ಕೂಡ ಪರಿಹಾರ ಮಾಡಬೇಕೆಂದು, ಎಲ್ಲರಿಗೂ ಈ ಅವಧಿಯಲ್ಲಿ ಸೀಮೆ ಎಣ್ಣೆಯನ್ನು ಕೊಡುವಂಥಾ ಅಗತ್ಯತೆ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ ಈ ಪ್ರಕೃತಿ ವಿಕೋಪದಡಿಯಲ್ಲಿ ಹೆಚ್ಚಿನ ಅನುದಾನದಿಂದ ಆಗಿರುವಂಥಾ ಹಾನಿಯನ್ನು ತುಂಬುವುದಕ್ಕೆ ಸರ್ಕಾರ ಅದನ್ನು ಕಂದಾಯ ಇಲಾಖೆಯ ಮೂಲಕವಿರಬಹುದು, ಅಥವಾ ಇಂಡಿ

ಅಣೆಕಟ್ಟನ್ನು ದುರಸ್ತಿ ಮಾಡುವ ದೃಷ್ಟಿಯಿಂದ ಕಿರು ನೀರಾವರಿ ಇಲಾಖೆಯ ಮೂಲಕವಾಗಿ ಹೆಚ್ಚು ಅನುದಾನವನ್ನು ನನ್ನ ಕ್ಷೇತ್ರಕ್ಕೂ ಕೊಡಬೇಕೆಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂತಹ ತಮಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಶಿವಪುತ್ರಪ್ಪ ಎಂ ದೇಸಾಯಿ (ಹೂವಿನ ಹಿಪ್ಪರಗಿ)' ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ಅತಿವೃಷ್ಟಿಯಿಂದ ಅಪಾರವಾದ ಹಾನಿಗೊಳಗಾಗಿದ್ದು ಈಗಾಗಲೇ ಈ ಬಗ್ಗೆ ತಮಗೆ ಜಿಲ್ಲಾಡಳಿತ ವರದಿಯನ್ನು ಕೊಟ್ಟಿದೆ ನನ್ನ ಬಸವನ ಬಾಗೇವಾಡಿ ತಾಲ್ಲೂಕಿನ ಹೂವಿನ ಹಿಪ್ಪರಗಿ ಮತ ಕ್ಷೇತ್ರಕ್ಕೆ ದೋಣಿ ನದಿಯಿಂದ ರೈತರಿಗೆ ಅಪಾರವಾದಂಥ ಹಾನಿಯಾಗಿದೆ ದೋಣಿ ನದಿಯು ಹಳ್ಳಿಗಳಿಗೆ ನುಗ್ಗಿ ಮನೆಗಳು ಬಿದ್ದಿವೆ ಮತ್ತು ಜೋಳ ಶೇಖರಣೆ ಮಾಡಿದಂತ ಸ್ಥಳಗಳಿಗೆ ನೀರು ನುಗ್ಗಿ, ಅಪಾರವಾದಂಥ ಹಾನಿ ಈ ದೋಣಿ ನದಿಯಿಂದ ಆಗಿದೆ ಅದರ ಜೊತೆಯಲ್ಲಿ ದನಗಳ ಮೇವಿನ ಸಂಗ್ರಹಣೆಗೆ ಹೊಲಗಳಲ್ಲಿ ಬಣವೆಯನ್ನು ಹೂಡುವಂಥಾದ್ದು ಒಂದು ರೂಢಿ ಇದೆ ಇಂದ ಸಂದರ್ಭದಲ್ಲಿ ಇವತ್ತು ಅಪಾರವಾದಂಥ ನೀರು ಬಂದು ದನಗಳ ಮೇವಿನ ಸಂಗ್ರಹಣೆಯೆಲ್ಲಾ ಕೊಚ್ಚಿಕೊಂಡು ಹೋಗಿ ಇವತ್ತು ಮೇವಿನ ಕೊರತೆಯಾಗುವ ಸಂಭವವಿದೆ ಅದಕ್ಕಾಗಿ ಮೊದಲು ದನಗಳಿಗೆ ತುರ್ತಾಗಿ ಮೇವನ್ನು ಕೊಡಿಸುವಂಥಾದ್ದಕ್ಕೆ ಜಿಲ್ಲಾಡಳಿತ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ ಅದರಲ್ಲಿ ಮನೆಗಳಿಗೆ ಸಂಭಂಧ ಪಟ್ಟಂತೆ ನನ್ನ ಕ್ಷೇತ್ರದಲ್ಲಿ ಬರುವಂಥಾ ಸಿಂಡಗೇರಿ, ನಾಗರಾಳು, ಸಾದ್ಯಾಳು, ಈ ಸ್ಥಳಗಳಲ್ಲಿ 200 ಮನೆಗಳು ನೀರಿನಲ್ಲಿದ್ದು, ಅಲ್ಲಿ ಅಪಾರವಾಗಿ ಮನೆಗಳು ನಷ್ಟವಾಗಿರುವಂಥಾದ್ದು ಕಂಡು ಬರುತ್ತಿದೆ ಅದಕ್ಕಾಗಿ ತಾವು ಆ ಗ್ರಾಮಗಳಿಗೆ ಪುನರ್ವಸತಿ ಕೇಂದ್ರಗಳನ್ನು ಮಾಡುವಂಥಾ ವ್ಯವಸ್ಥೆಯಾಗಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಈಗಾಗಲೇ ನೀರು ನುಗ್ಗಿರುವಂಥ ಗ್ರಾಮಗಳಿಗೆ ವಿದ್ಯುತ್ ಕೊರತೆ ಇದ್ದು, ಅಲ್ಲಿ ಕಂಬಗಳು ಬಿದ್ದಿವೆ, ವೈಯರ್ ಇಲ್ಲ ಹೀಗೆ ಅವರು ತೊಂದರೆಯಲ್ಲಿರುವಾಗ ಅಲ್ಲಿ ಶೆಡ್ ಹಾಕಿಕೊಂಡು ನೂರಾರು ಜನರು ಒಟ್ಟಾಗಿ ಇರುವಂಥಾ ಸಂದರ್ಭದಲ್ಲಿ ಅವರಿಗೆ ಬೆಳಕಿನ ವ್ಯವಸ್ಥೆ ಮಡುವುದಕ್ಕೆ ತುರ್ತಾಗಿ ಆದೇಶವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇಲ್ಲಿ ಏನು

ತೊಂದರೆಯಾಗಿದೆ ಅದಕ್ಕೆ ಕಂದಾಯ ಇಲಾಖೆಯವರು ಮೊದಲು ದನಗಳಿಗೆ ಮೇವಿನ ತೊಂದರೆ ಏನು ಆಗಿದೆ, ಅದರ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಂಡು ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಬಿ ಕೆ ಗೋಪಾಲಕೃಷ್ಣ ಬೇಳೂರು (ಸಾಗರ) ಸನ್ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಕೂಡ ಈ ಸಾರಿ ಅತಿ ಹೆಚ್ಚು ಮಳೆ ಬಂದು, ಆ ಪ್ರದೇಶದಲ್ಲಿ ಬಹಳ ಹಾನಿಯಾಗಿದೆ ಈಗಾಗಲೇ ವರದಿ ಬಂದಿರುವ ಪ್ರಕಾರ ನಮ್ಮ ತಾಲ್ಲೂಕಿನಲ್ಲಿ 3,500 ಎಕರೆ ಬಿತ್ತನೆ ಜಮೀನು ಮಾಡಿರುವಂಥಾದ್ದು ಮುಳುಗಡೆಯಾಗಿದೆ ಇಲ್ಲಿ ಬಹಳ ಹಾನಿಯಾಗಿದೆ, ಮತ್ತು ಸೇತುವೆಗಳು, ಸಣ್ಣ ಸಣ್ಣ ಕೆರೆಗಳು, ಮನೆಗಳೆಲ್ಲಾ ಬಿದ್ದು ತುಂಬಾ ಹಾನಿಯಾಗಿದ್ದರೂ ಸಹಿತ ಇಲ್ಲಿಗೆ ಯಾವುದೇ ಅಧಿಕಾರಿಗಳು ಇದರ ಬಗ್ಗೆ ಪರಿಶೀಲನೆ ಮಾಡಲು ಇಲ್ಲಿಗೆ ಬಂದಿಲ್ಲ ಪ್ರತಿ ವರ್ಷ ಸಾಗರ ತಾಲ್ಲೂಕಿನಲ್ಲಿ ಹವಾಮಾನದ ವ್ಯತ್ಯಾಸದಿಂದ ಬರುವಂಥಾ ಮಳೆಯಿಂದ ಮುಳುಗಡೆಯಾಗುತ್ತಲೇ ಇರುತ್ತದೆ ಇದಕ್ಕೆ ಯಾವುದಾದರೂ ಒಂದು ಪರಿಹಾರವನ್ನು ಕೊಡಬೇಕೆಂಬ ಬಗ್ಗೆ ಸರ್ಕಾರ ಇದುವರೆಗೂ ಯಾವುದೇ ಚಿಂತನೆಯನ್ನು ಮಾಡಿಲ್ಲ ಈ ಹೋಬಳಿಯು ಪ್ರತಿ ವರ್ಷ ಮುಳುಗಡೆಯಾಗಿರುವುದರಿಂದ ವಿಮಾ ಯೋಜನೆಯಲ್ಲಿ ಇದನ್ನು ಘೋಷಣೆ ಮಾಡಿದರೆ, ಹವಾಮಾನದ ವ್ಯತ್ಯಾಸದಿಂದ ಬರುವಂಥಾ ವಿಮೆಯನ್ನು ಈ ಹೋಬಳಿಗೆ ಘೋಷಣೆ ಮಾಡಿದರೆ ಅನುಕೂಲವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಬಹಳಷ್ಟು ಹಾನಿಯಾಗಿರುವುದರಿಂದ ತಕ್ಷಣ ಜಿಲ್ಲಾದಿಕಾರಿಗಳಿಗೆ ಮನವಿಯನ್ನು ಮಾಡಿ ಪರಿಹಾರವನ್ನು ಕೊಡುವಂಥಾದ್ದಕ್ಕೆ ವ್ಯವಸ್ಥೆಯನ್ನು ಮಾಡಬೇಕು ಇಲ್ಲಿ ಬಹಳಷ್ಟು ಮನೆಗಳು, ಮತ್ತೆ ಕೆಲವು ಕೆರೆಕಟ್ಟೆಗಳು ಒಡೆದು ಹೋಗಿವೆ ಇಲ್ಲಿಗೆ ಫ್ಲಡ್‌ನಲ್ಲಿ ಬರುವ ಹಣವನ್ನು ತಕ್ಷಣ ರಿಲೀಜ್ ಮಾಡಿ ಅಲ್ಲಿನ ಸಂಪರ್ಕ ಸೇತುವೆಗಳನ್ನು ರೆಡಿ ಮಾಡಿಸಿಕೊಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಸಿದ್ದು ಸವದಿ (ಜಮಖಂಡಿ) ಮಾನ್ಯ ಅದ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳನ್ನು

ಸಲ್ಲಿಸುತ್ತೇನೆ ಜಮಖಂಡಿ ತಾಲ್ಲೂಕಿನಲ್ಲಿ ಹಿಂದೆಂದೂ ಇಲ್ಲದ ಭಾರೀ ಮಳೆಯಿಂದ ಬಡ ರೈತರ ಕೋಟ್ಯಾಂತರ ರೂಪಾಯಿಗಳ ಅನೇಕ ಆಸ್ತಿಗಳು ಸುಮಾರು ವರ್ಷಗಳಿಂದ ಅವರು ಕಾಯ್ದುಕೊಂಡು ಬಂದಿರುವಂಥಾ ಅನೇಕ ಒಡ್ಡುಗಳು, ಕೆರೆಗಳು ತುಂಬಿ ಹರಿದಿದ್ದರಿಂದ, ಅನೇಕ ತೆರೆದ ಬಾವಿಗಳು ಸಹ ಮುಚ್ಚಿ ಹೋಗಿದ್ದು, ಮತ್ತೆ ಅನೇಕ ಕುರಿಗಳು, ದನಗಳು ಸಹ ನೀರಿನಲ್ಲಿ ಕೊಚ್ಚಿ ಹೋದಂಥಾ ಪ್ರಸಂಗವಿದ್ದು, ಇಂಥ ಸಮಯದಲ್ಲಿ ಸರ್ಕಾರ ತಕ್ಷಣ ರೈತರ ನೆರವಿಗೆ ಬಂದು, ನಮ್ಮ ತಾಲ್ಲೂಕಿನಲ್ಲಿ ನಾಲ್ಕು ಜನರು ಮನೆ ಬಿದ್ದು ಸತ್ತಿದ್ದು, ಅವರಿಗೆ ತಕ್ಷಣ ಅಲ್ಲಿ 50,000 ರೂಪಾಯಿಗಳ ಚೆಕ್ ವಿತರಿಸಿದೆ ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಹೇಳಬಯಸುತ್ತೇನೆ ಆ ಬಡಪಾಯಿ ಜೀವಕ್ಕೆ ಕೇವಲ 50 ಸಾವಿರ ರೂಪಾಯಿಗಳ ಬೆಲೆ ಕಟ್ಟಬಾರದು ಅದನ್ನು ಬೇರೆ ಬೇರೆ ರಾಜ್ಯಗಳಲ್ಲಿರುವಂತೆ ಈ ರೀತಿಯ ಅನಾಹುತಗಳಲ್ಲಿ ಜೀವ ಕಳೆದುಕೊಂಡಂಥ ಕುಟುಂಬಗಳ ಪ್ರತಿ ವ್ಯಕ್ತಿಗೆ 2 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡಬೇಕೆಂದು ನಾನು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ ಅದಲ್ಲದೆ ಮೊನ್ನೆ ಅನೇಕ ದನಗಳು ಸಹ ನೀರಿನಲ್ಲಿ ಕೊಚ್ಚಿಹೋಗಿ ಸತ್ತಿರುವುದರಿಂದ ಅವುಗಳಿಗೂ ಸಹ ಉಚಿತವಾದ ಪರಿಹರ ಧನವನ್ನು ಕೊಡಬೇಕು ಅದರ ಜೊತೆಗೆ, ನನ್ನ ತಾಲ್ಲೂಕಿನಲ್ಲಿ ಸುಮಾರು ಎರಡೂವರೆ ಸಾವಿರ ಬಡವರ, ದಲಿತರ ಹಾಗೂ ರೈತರ ಮನೆಗಳು ಬಿದ್ದುಹೋಗಿದ್ದರಿಂದ, ಈಗಾಗಲೇ ಸರ್ಕಾರದಲ್ಲಿರುವ ಗೈಡ್‌ಲೈನ್ಸ್ ಪ್ರಕಾರ 800 ರಿಂದ 1200 ರೂಗಳವರೆಗೆ ಮಾತ್ರ ಪರಿಹಾರ ಕೊಟ್ಟಿದ್ದಾರೆ ಆದರೆ 800 ರೂಪಾಯಿಗಳಿಂದ ಬಡ ಜನರಿಗೆ ಏನೂ ಉಪಯೋಗವಾಗುವುದಿಲ್ಲ ಕೇವಲ ಒಂದು ಬತ್ತಾಸು ಸಹ ಬರಲಾರದ ಪರಿಸ್ಥಿತಿಯಲ್ಲಿ ಈ ರೀತಿ ಒಂದು ಪರಿಹಾರ ಕೊಡುವುದು ಯೋಗ್ಯವಲ್ಲವೆಂದು ನನಗನಿಸುತ್ತದೆ ಭಾಗಶಃ ಬಿದ್ದ ಮನೆಗಳಿಗೆ ಕನಿಷ್ಟ 5 ಸಾವಿರ ರುಪಾಯಿಗಳನ್ನಾದರೂ ಪರಿಹಾರವಾಗಿ ಕೊಟ್ಟರೆ ಒಳ್ಳೆಯದಾಗುತ್ತದೆ ಸಂಪೂರ್ಣವಾಗಿ ಬಿದ್ದ ಮನೆಗಳಿಗೆ ಯಾವ ರೀತಿ ನಾವು ಆಶ್ರಯ ಯೋಜನೆಯಲ್ಲಿ ಕೊಡುತ್ತಿದ್ದೇವೆಯೋ, ಆ ರೀತಿ 30-40 ಸಾವಿರ ರೂಪಾಯಿಗಳನ್ನು ಕೊಟ್ಟರೆ, ಆ ಬಡವರು ಸೂರು ಕಟ್ಟಿಕೊಳ್ಳುವುದಕ್ಕೆ ಯೋಗ್ಯವಾಗುತ್ತದೆನ್ನುವ ಮಾತನ್ನು ಹೇಳುವುದರ ಮುಲಕ ಈ ಸಭೆಯ ಮುಖಾಂತರ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ ಇನ್ನು ಮುಂದೆ ಭಾಗಶಃ ಬಿದ್ದ ಮನೆಗೆ 5 ಸಾವಿರ ರೂಪಾಯಿಗಳನ್ನು ಮತ್ತು ಸಂಪೂರ್ಣ

ಹಾನಿಗೊಳಗಾದ ಮನೆಗಳಿಗೆ ಸುಮಾರು 30 ಸಾವಿರ ರೂಪಾಯಿಗಳವರೆಗೆ ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಅದರ ಜೊತೆಗೆ, ಹಿಂದೆ ಅನೇಕ ಶಾಸಕರು ಮಾತನಾಡಿದ ಹಾಗೆ, ಕೃಷ್ಣಾ ನದಿಯ ಮಹಾಪೂರದಿಂದ ಹಿಂದಿನ 2 ವರ್ಷಗಳಲ್ಲಿ ನನ್ನ ತಾಲ್ಲೂಕಿನಲ್ಲಿ ಸುಮಾರು 30 ಹಳ್ಳಿಗಳನ್ನು ಸುತ್ತುವರಿದು ಅನೇಕ ಹಾನಿಗಳನ್ನು ಅನುಭವಿಸುವ ಸ್ಥಿತಿ ನಿರ್ಮಾಣವಾಗಿತ್ತು ಈ ಸಲವೂ ಸಹ ಕೃಷ್ಣಾ ನದಿಗೆ ಮಹಾಪೂರ ಬರುತ್ತಿದೆ ಕಳೆದ 2 ವರ್ಷಗಳಲ್ಲಿಯೂ ಸಹ ನಾವು ಸರ್ಕಾರವನ್ನು ಒತ್ತಾಯಿಸಿದ್ದೇವು ಮುಳುಗಡೆಯಾಗುವಂಥ ಹಳ್ಳಿಗಳನ್ನು ತಕ್ಷಣ ಸ್ಥಳಾಂತರಿಸಿ, ಅವರಿಗೆ ಪುನರ್ವಸತಿ ಕಲ್ಪಿಸಬೇಕೆನ್ನುವ ವಿನಂತಿಯನ್ನು ಈಗಾಗಲೇ ನಾವು ಸರ್ಕಾರಕ್ಕೆ ಮನವಿ ಮಾಡಿದ್ದಾಗಿದೆ ಆದರೆ, 2 ವರ್ಷ ಕಳೆದು 3 ನೇ ವರ್ಷ ಫ್ಲಡ್ ಬಂದರೂ ಸಹ ಇನ್ನೂ ಆ ಸಂತ್ರಸ್ತರ ಕುಟುಂಬಗಳಿಗೆ ಹಾನಿಗೊಳಗಾದ, ತೊಂದರೆ ಅನುಭವಿಸುವಂಥ ಹಳ್ಳಿಗಳು ಮತ್ತು ನಮ್ಮ ತಾಲ್ಲೂಕಿನಲ್ಲಿ ಬರತಕ್ಕಂಥ ಅತ್ಯಂತ ಕಷ್ಟದಾಯಕವಾಗಿರುವಂಥ 4-5 ಹಳ್ಳಿಗಳಿಗೆ ಸುಮಾರು 2 ಕಿ ಮೀ ವರೆಗೆ ನೀರು ಸುತ್ತುವರಿದು, ಯಾವುದೇ ದನಕರುಗಳು ಸಹ ದಾಟದಿರುವಂಥ ಬೀಕರ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ ಉದಾಹರಣೆಗಾಗಿ, ಹಸ್ಕಿ, ದಮದಡ್ಡಿ, ಹಳಿಮಲಿ, ಅರಳಿಮಟ್ಟಿ, ಹುಲ್ಲಹಳ್ಳಿ ಎಲ್ಲ ಹಳ್ಳಿಗಳಿಗೂ ಸಹ ನೀರು ಸುತ್ತುವರದು ತೊಂದರಯಾಗುತ್ತಿರುವುದರಿಂದ, ಕಳೆದ ವರ್ಷವೇ ನಾವು ತಕ್ಷಣ ಶಿಫ್ಟ್ ಮಾಡಿಕೊಡುತ್ತೇವೆ ಎನ್ನುವ ಮಾತನ್ನು ಸರ್ಕಾರ ಹೇಳಿತ್ತು ಆದರೆ, ಇದುವರೆಗೂ ಸ್ಥಳವನ್ನು ಗುರುತು ಮಾಡಿ, ಆ ಹಳ್ಳಿಗಳನ್ನು ಸ್ಥಳಾಂತರಿಸುವ ಕಾರ್ಯ ನಡೆದಿಲ್ಲ ಅದಕ್ಕೆ ಮೊದಲನೇ ಆದ್ಯತೆ ಕೊಟ್ಟು ಈ ಕೂಡಲೇ ಆ ಹಳ್ಳಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕೆಂಬ ವಿನಂತಿಯನ್ನು ಸರ್ಕಾರಕ್ಕೆ ಮಾಡುತ್ತೇನೆ ಅದಲ್ಲದೆ, ಹಿಪ್ಪರಗಿ ಯೋಜನೆಯಲ್ಲಿ ಮುಳುಗಡೆಯಾಗಿರುವ ರೈತರ ಜಮೀನುಗಳಿಗೆ ಪರಿಹಾರ ಕೊಟ್ಟಿಲ್ಲ ಈಗಾಗಲೇ ಹಿಂದಿನ ಅಧಿವೇಶನದಲ್ಲಿ ಸಚಿವರು, ಹೆಚ್ಚುವರಿ ಮುಳುಗಡೆಯಾಗಿರುವಂಥ ಜಮೀನುಗಳಿಗೆ ಪರಿಹಾರ ತಕ್ಷಣ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು ಅವರ ವರದಿಯ ಪ್ರಕಾರವೇ ಸುಮಾರು 860 ಎಕರೆ ಈಗಾಗಲೇ ಹೆಚ್ಚುವರಿಯಾಗಿದೆ ಅದಕ್ಕೆ 4(1) ನೋಟಿಫಿಕೇಷನ್ ಆಗುವ ಹಂತದಲ್ಲಿ ಅಧಿಕಾರಿ ಮಟ್ಟದಲ್ಲಿ ಅದನ್ನು ತಡೆ ಹಿಡಿಯಲಾಗಿದೆ

ಅದಕ್ಕಾಗಿ ತಕ್ಷಣ ಪುನರ್ ಪ್ರಾರಂಭಿಸಿ 4–5 ವರ್ಷಗಳವರೆಗೆ ನೀರಿನಲ್ಲಿ ನಿಂತಿರುವ ಜಮೀನಿಗೆ ತಕ್ಷಣ ಪರಿಹಾರ ಕೊಡುವ ವ್ಯವಸ್ಥೆಯಾಗಬೇಕು ಅದರ ಜೊತೆಗೆ, ಪ್ರತಿ ವರ್ಷ ಇಂಥ ಮಹಾಪೂರದಿಂದ ನಮ್ಮ ಜಮಖಂಡಿ ನಗರ ನಡುಗಡ್ಡೆಯಾಗುವುದನ್ನು ತಪ್ಪಿಸಲು ಈಗಾಗಲೇ 2 ವರ್ಷಗಳಿಂದ ಜಂಭಗಿ ಬಿಕೆ ಹತ್ತಿರ ಬ್ರಿಡ್ಜ್ ಬೇಕೆಂದು ಕೇಳಿದ್ದೆವು ಬ್ರಿಡ್ಜ್‌ಗೆ ಸಹ ಮಂಜೂರಿ ಕೊಟ್ಟ ತಕ್ಷಣ ಪ್ರಾರಂಭಿಸುವುದರ ಮುಖಾಂತರ ಫ್ಲಡ್ ಅನಾಹುತದಿಂದ ಆ ತಾಲ್ಲೂಕಿನ ಜನರ ರಕ್ಷಣೆ ಸಲುವಾಗಿ ಸರ್ಕಾರ ಮುಂದೆ ಬರಬೇಕೆನ್ನುವ ವಿನಂತಿಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಮಾಡಿಕೊಳ್ಳುತ್ತೇನೆ ಒಟ್ಟಾರೆಯಾಗಿ, ಫ್ಲಡ್ ಮತ್ತು ಅತಿವೃಷ್ಟಿಯಿಂದ ವಿಶೇಷವಾಗಿ ಜಮಖಂಡಿ ತಾಲ್ಲೂಕಿಗೆ ಈ 50 ವರ್ಷಗಳಲ್ಲಿ ಆಗದಂಥ ಭಾರೀ ಅನಾಹುತ ಸಂಭವಿಸಿದ್ದು, ಆ ಎಲ್ಲ ರೈತರಿಗೆ, ಯಾವ ರೈತರ ಜಮೀನಿನ ಒಡ್ಡು ಒಡೆದಿದೆ ಬಾವಿ ಮುಚ್ಚಿದೆ ದನಕರು ಹಾಳಾಗಿದೆ, ಯಾವ ಕಡುಬಡವರ ಮನೆ ಬಿದ್ದು ಹೋಗಿವೆ ಅವೆಲ್ಲಕ್ಕೂ ಯೋಗ್ಯವಾದ ಪರಿಹಾರವನ್ನು ಕೊಡಬೇಕು ಈಗಾಗಲೇ ಕೊಟ್ಟಿರುವ ಪರಿಹಾರ ಯಾವುದಕ್ಕೂ ಸಾಲುವುದಿಲ್ಲ ರೂ 800 ತೆಗೆದುಕೊಂಡು ಬರುವುದಕ್ಕೂ ಅದು ಸಾಲದು ಅದಕ್ಕಾಗಿ ಭಾಗಶಃ ಬಿದ್ದ ಮನೆಗಳಿಗೆ ಕನಿಷ್ಠ ರೂ 5 ಸಾವಿರ ಮತ್ತು ಸಂಪೂರ್ಣ ಹಾನಿಯಾದ ಮನೆಗಳಿಗೆ ರೂ 30,000 ಸಾವಿರ ದನಕರುಗಳು ಸತ್ತು ಹೋಗಿರುವುದಕ್ಕೂ ಯೋಗ್ಯವಾದ ಬಜಾರ್ ರೇಟ್ ಪ್ರಕಾರ ಬೆಲೆ ನಿರ್ಧರಿಸಿ ಪರಿಹಾರ ಕೊಡಬೇಕು ಒಡ್ಡುಗಳಿಗೂ ಸಹ ಅಂದಾಜು ಹಾಕಿ ಕೊಡಬೇಕು ಅನೇಕ ರಸ್ತೆಗಳು ಕಿತ್ತು ಹೋಗಿವೆ ಕೋಟಿಗಟ್ಟಲೆ ಖರ್ಚು ಮಾಡಿ ನಿರ್ಮಾಣ ಮಾಡಿದಂಥ ಹಳ್ಳಿಗಳ ಸಂಪರ್ಕ ರಸ್ತೆಗಳು ಸಹ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ದುರಂತಗಳು ಸಂಭವಿಸಿವೆ ಅಂಥ ರಸ್ತೆಗಳನ್ನು ಸಹ ತಕ್ಷಣ ಸರಿಪಡಿಸುವ ಮೂಲಕ ಆ ಹಳ್ಳಿಗಳಿಗೆ ಸಂಪರ್ಕವನ್ನು ಕಲ್ಪಿಸುವ ವ್ಯವಸ್ಥೆ ಮಾಡಬೇಕು ಅದಲ್ಲದೆ, ಹತ್ತಾರು ಹಳ್ಳಿಗಳಿಗೆ ಪ್ರತಿವರ್ಷ ನಾವು ಫ್ಲಡ್‌ಹೆಡ್‌ನಲ್ಲಿ ಹಣ ಖರ್ಚು ಮಾಡಿ ರಸ್ತೆಗಳನ್ನು ಮಾಡುತ್ತೇವೆ ಆದರೆ ಮತ್ತೆ ಮಳೆಗಾಲದಲ್ಲಿ ಕೊಚ್ಚಿಹೋಗುವಂಥಾ ಪರಿಸ್ಥಿತಿ ಇದ್ದುದರಿಂದ ಅವು permanent ಆಗಿ ಆಯಾ ಹಳ್ಳಿಗಳಿಗೆ ನೀರು ಸುತ್ತುವರಿಯದ ರೀತಿಯಲ್ಲಿ ಅಲ್ಲಿಗೆ ಸಂಪರ್ಕದ ದೃಷ್ಟಿಯಿಂದ ಆ ರಸ್ತೆಗಳನ್ನು ಎತ್ತರಿಸಿ ನಿರ್ಮಾಣ ಮಾಡುವಂಥ ವ್ಯವಸ್ಥೆಯಾಗಬೇಕೆನ್ನುವಂಥ ಒತ್ತಾಯವನ್ನು ಸರ್ಕಾರಕ್ಕೆ ನಾನು ಮಾಡಿಕೊಂಡು ನನಗೂ ಸಹ ಈ

ಅತಿವೃಷ್ಟಿ ಹಾಗೂ ಮಹಾಪೂರದ ಮೇಲೆ ನಡೆದಿರುವ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) ಮಾನ್ಯ ಅಧ್ಯಕ್ಷರೆ, ಕರಾವಳಿ ಜಿಲ್ಲೆಗಳಲ್ಲಿ ವಿಶೇಷವಾದಂಥ ಪರಿಸ್ಥಿತಿ ಇದೆ ಮಳೆಗಾಲದಲ್ಲಿ ನದಿಗಳು ತುಂಬಿ ತುಳುಕುತ್ತಿರುತ್ತವೆ ಆದರೆ, ಬೇಸಿಗೆಯಲ್ಲಿ ನದಿಗಳು ಬತ್ತಿ, ಕುಡಿಯುವ ನೀರಿಗೆ ಸಹ ತತ್ವಾರ ಬರುವ ಸ್ಥಿತಿ ಇದೆ ಇವತ್ತು ಸಿಕ್ಕಿರುವ ಮಾಹಿತಿಯಾಧಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 5 ಪ್ರಮುಖ ನದಿಗಳು, ಉಡುಪಿ ಜಿಲ್ಲೆಯಲ್ಲಿರುವ 8 ಪ್ರಮುಖ ನದಿಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿರುವ 6 ಪ್ರಮುಖ ನದಿಗಳು ಯಾವ ಸ್ಥಿತಿಯಲ್ಲಿವೆ ಎಂದರೆ ಅಪಾಯದ ಮಟ್ಟ ತಲುಪುವ ಹಂತಕ್ಕೆ ಬರುತ್ತಿವೆ ಇಂಥ ಅಪಾಯದ ಮಟ್ಟಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗಿದೆ? ಈ ಸಮಸ್ಯೆಗಳಿಗೆ ಶಾಶ್ವತವಾದಂಥ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಪ್ರಯತ್ನ ಮಾಡುವ ಬಗ್ಗೆ ಚಿಂತನೆ ಮಾಡುವ ಅವಶ್ಯಕತೆ ಇದೆ ನಾನು ಕೇವಲ ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಮಾತ್ರ ಹೇಳುವುದಾದರೆ, ವಿಪರೀತವಾದ ಮಳೆ, ವಿಶೇಷವಾಗಿ ಬಿರುಗಾಳಿ ಹಾಗೂ ಅತಿವೃಷ್ಟಿಯಿಂದಾಗಿ 5 ಜನರು ತೀರಿ ಹೋಗಿದ್ದಾರೆ 46 ಮನೆಗಳು ಪೂರ್ತಿ ಕುಸಿದುಹೋಗಿವೆ 456 ಮನೆಗಳು ಭಾಗಶಃ ಕುಸಿದಿವೆ 78 ಕುಟುಂಬಗಳು ಅಸಹಾಯಕ ಸ್ಥಿತಿಯಲ್ಲಿವೆ ನಮ್ಮಲ್ಲಿ 591 17 ಕಿ ಮೀನಷ್ಟು ರಸ್ತೆಗಳು damage ಆಗಿದ್ದು ಅದರಿಂದಾಗಿರುವ ನಷ್ಟ 8 ಕೋಟಿ ರೂಪಾಯಿಗಳಾಗಿರುತ್ತದೆ culverts and bridges ಗೆ ಹಾನಿ ರೂ 1 ಕೋಟಿ 80 ಲಕ್ಷ, ಸರ್ಕಾರಿ ಕಟ್ಟಡಗಳಿಗಾಗಿರುವ ಹಾನಿ ರೂ 1 ಕೋಟಿ 16 ಲಕ್ಷ, Private ಕಟ್ಟಡಗಳಿಗೆ ರೂ 64 ಲಕ್ಷದಷ್ಟು ಹಾನಿಯಾಗಿರುತ್ತದೆ Electrical damages ರೂ 48 ಲಕ್ಷ other damages ರೂ 47 ಲಕ್ಷ ನಮಗೆ ಈ ಸಮಯದಲ್ಲಿ ಸುಮಾರು ರೂ 17 ಕೋಟಿ 59 ಲಕ್ಷಗಳಷ್ಟು ಹಾನಿಯಾಗಿದೆ ಸಾರ್ವಜನಿಕ ಆಸ್ತಿಗಳ ತುರ್ತು ಪುನರ್ ಸ್ಥಾಪನೆ ಮಾಡಬೇಕೆಂದರೆ ಕನಿಷ್ಠ ರೂ 4 ಕೋಟಿ 25 ಲಕ್ಷ ನಮಗೆ ಬೇಕಾಗಿದೆ ಕಡಲ ಕೊರೆತದ ಸಮಸ್ಯೆಗಳಿಗೆ ತುರ್ತು ಪರಿಹಾರಕ್ಕೆ ಈಗಾಗಲೇ ತಕ್ಷಣಕ್ಕೆ ಕೊಡಬೇಕಾಗಿರುವ ನಿಟ್ಟಿನಲ್ಲಿ ನಿರೀಕ್ಷಣೆ ಮಾಡುವಂಥಾದ್ದು 1 ಕೋಟಿ

75 ಲಕ್ಷ ರೂಪಾಯಿಗಳು ಪರಿಹಾರ ವಿತರಣೆ ಸುಮಾರು 1 ಕೋಟಿ ರೂಪಾಯಿಗಳು ಹೀಗೆ ಏಳು ಕೋಟಿ ಮತ್ತು ಹನ್ನೆರಡು ಮುಕ್ಕಾಲುಕೋಟಿ ರೂಪಾಯಿಗಳು ಅಂದರೆ ಸುಮಾರು 20 ಕೋಟಿ ರೂಪಾಯಿಗಳಷ್ಟು ನಷ್ಟ ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಿದೆ ಕರಾವಳಿ ಜಿಲ್ಲೆಗಳಲ್ಲಿ ಉಳಿದ ಎರಡು ಜಿಲ್ಲೆಗಳಿಗೆ ಸಂಬಂಧ ಪಟ್ಟ ವರದಿಯನ್ನು ಅಲ್ಲಿಯ ಶಾಸಕರು ಹೇಳಿರಬಹುದು ಆದರೆ, ಇಲ್ಲಿ ರೂ 20 ಕೋಟಿ ನಷ್ಟವಾಗಿರುವ ಸಂದರ್ಭದಲ್ಲಿ ಬಹುಶಃ ಸರ್ಕಾರ ಇದರ ಬಗ್ಗೆ ಮೀನ-ಮೇಷ ಎಣಿಸಿಕೊಂಡು peice meal package ಕೊಡುವಂಥ ಕೆಲಸ ಕಾರ್ಯ ಮಾಡಿದರೆ ನಮಗೇನೂ ಪರಿಹಾರ ಕಾಣಲಿಕ್ಕೆ ಸಾಧ್ಯವಾಗುವುದಿಲ್ಲ ದಯಮಾಡಿ ಇದನ್ನು ಮನ್ಯ ಕಂದಾಯ ಸಚಿವರು ಗಮನಿಸಬೇಕು ಈ ಹಿನ್ನೆಲೆಯಲ್ಲಿ ನಾನು ತಮ್ಮಲ್ಲಿ ವಿನಂತಿ ಮಡುವುದೇನೆಂದರೆ, 20 ಕೋಟಿ ರೂಪಾಯಿಗಳಲ್ಲಿ ತಕ್ಷಣ 1/3 ರಷ್ಟು ಹಣವನ್ನಾದರೂ ಬಿಡುಗಡೆ ಮಾಡಬೇಕು ಅಂಥ ದುಸ್ಥಿತಿ ಇದೆ ಅಲ್ಲಿರುವ ನದಿಗಳಲ್ಲಿ ಬಹುಶಃ ಇವತ್ತು ಸರಿಯಾಗಿ ಬೋಟ್‌ಗಳನ್ನು ತೆಗೆದುಕೊಂಡುಹೋಗುವ ಸ್ಥಿತಿಯಲ್ಲಿಲ್ಲ ಹೆಚ್ಚಿನ ಕಡೆಗಳಲ್ಲಿ sand accumulate ಆಗಿದೆ ಹಲವು ದಶಕಗಳಿಂದ de-silting ಆಗಿಲ್ಲ dredging ಮಾಡುವಂಥ ಅವಶ್ಯಕಥೆ ಇದೆ dredging ಮಾಡಬೇಕೆನ್ನುವ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಬೇಡಿಕೆ ಇಟ್ಟಿದ್ದೇವೆ ಬಹುಶಃ ನಮ್ಮ ಸರ್ಕಾರ ಅದಕ್ಕೆ ಸ್ಪಂದಿಸುತ್ತದೆನ್ನುವ ನಿರೀಕ್ಷೆಯಲ್ಲಿ ನಾವಿದ್ದೇವೆ ಆದರೂ ಯಾವುದೇ ರೀತಿಯಲ್ಲಿ ಕಾರ್ಯಾಚರಣೆ ಆಗಿಲ್ಲ dredging ತಕ್ಷಣವೇ ಮಾಡದಿದ್ದರೆ, ಬರುವ ನೀರು ಕೂಡ ಮೇಲ್ಮಟ್ಟದಲ್ಲಿ ಹರಿದು ಹತ್ತಿರವಿರುವ ಮನೆಗಳಿಗೆ ನುಗ್ಗಿ ಇನ್ನೂ ಸಾಕಷ್ಟು ಹಾನಿಗಳನ್ನು ಮಾಡುವುದಕ್ಕೆ ಸಾಧ್ಯವಿರುವುದರಿಂದ dredging ಗೆ ಸಂಭಂಧ ಪಟ್ಟ ವ್ಯವಸ್ಥೆಯನ್ನು ಮಾಡುವ ಅವಶ್ಯಕತೆ ಇದೆ ಇಲ್ಲಿ ಇನ್ನೂ ಕೆಲವು ಸಮಸ್ಯೆಗಳಿವೆ ಸಮುದ್ರ ಕೊರೆತಕ್ಕೆ ಸಂಬಂಧ ಪಟ್ಟ ಹಾಗೆ ಬಹಳಷ್ಟು ವರ್ಷಗಳಿಂದ ಕೊರೆತ ಸಮಸ್ಯೆ ಬಹಳ ಗಂಭೀರವಾದ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಮಾನ್ಯ ಉಪ ಮುಖ್ಯಮಂತ್ರಿಗಳೂ ಮಾನ್ಯ ಸಚಿವರುಗಳು ಬಂದು ವೀಕ್ಷಣೆ ಮಾಡಿ ಆಶ್ವಾಸನೆ ಕೊಟ್ಟು ಹೋಗುವಂಥದ್ದು ಅಲ್ಲೊಂದು ರೂಢಿಯಾಗಿದೆ ಸಹಜವಾಗಿ ಗಂಭೀರ ಸ್ಥಿತಿ ಬಂದಾಗ ಯಾರೋ ಒಬ್ಬರು ಮಂತ್ರಿಗಳು ಬರುತ್ತಾರೆ ಅದನ್ನು ಗಮನಿಸುತ್ತಾರೆ ಅದಕ್ಕೆ ಸಂಬಂಧ ಪಟ್ಟ ಆಶ್ವಾಸನೆ ಕೊಟ್ಟು ಹೋಗುತ್ತಾರೆಂದು ಹೇಳುತ್ತಾರೆ ಅದರೆ ನಮಗೆ ಬೇಕಾಗಿರುವುದು

ಅದಕ್ಕೊಂದು ಪರಿಹರ ತುರ್ತು ಮತ್ತು ಶಾಸ್ವತವಾದಂಥ ಪರಿಹಾರ ಬೇಕಾಗಿದೆ ಇಲ್ಲಿ ತುರ್ತು ಪರಿಹಾರಕ್ಕೆ ಸಂಭಂಧಪಟ್ಟ ಹಾಗೆ ಸಮುದ್ರದ ಬದಿಯಲ್ಲಿರುವ ಮನೆಗಳನ್ನು ಸಂರಕ್ಷಿಸುವಂಥ ಅವಶ್ಯಕತೆ ಇದೆ ಎಲ್ಲಿ ಮನೆಗಳಿವೆ, ಆ ಮನೆಗಳ ಹತ್ತಿರವಾದರೂ ದೊಡ್ಡ ಕಲ್ಲುಗಳನ್ನು ಹಾಕುವಂಥ C ▪ ÀÃÀ É E z É E ▪ ÀÛ technical expertise ಹೇಳಿಕೊಂಡು ಹೊಯಿಗೆ ಚೀಲಗಳನ್ನು ಹಾಕುವ suggestion ಕೊಡುತ್ತಿದ್ದಾರೆ ಹೊಯಿಗೆ ಚೀಲಗಳನ್ನು ಹಾಕುವ ಮೂಲಕ ಯಾವುದೇ ಪರಿಹಾರವನ್ನು ಕಾಣಲಿಕ್ಕೆ ಆಗುವುದಿಲ್ಲ ಅದನ್ನು ಕೊಚ್ಚಿಕೊಂಡು ಹೋಗುತ್ತದೆ ಹೊಯಿಗೆ ಕೂಡ ಉಳಿಯುವುದಿಲ್ಲ ಹಾಕಿರುವ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳು ಸಮುದ್ರದ ಪಾಲಾಗುತ್ತದೆ ಇಂಥ ಸಂದರ್ಭದಲ್ಲಿ ದೊಡ್ಡ ಕಲ್ಲುಗಳನ್ನು ಹಾಕಿ ಮುಂದಕ್ಕೆ ಅದು ಬಾರದ ರೀತಿಯಲ್ಲಿ ಮಾಡಬೇಕೆನ್ನುವ ನಿಟ್ಟಿನಲ್ಲಿ ಆ ಕಾರ್ಯಕ್ರಮಗಳನ್ನು ಮಾಡಬೇಕಾಗಿದೆ ಅನೇಕ ಸಂದರ್ಭಗಳಲ್ಲಿ ಇಂಥ ಕಡೆ sensitive points ಇರುತ್ತದೆ ಇಂಥ ಕಡೆಗಳಲ್ಲಿ ಕೊರೆತ ಉಂಟಾಗುತ್ತದೆಂದು ಹೇಳುವಂಥದ್ದು ಮುಂಚಿತವಾಗಿ ಅಲ್ಲಿಯ ಜನರಿಗೆ ಖಂಡಿತವಾಗಿ ಗೊತ್ತಿರುತ್ತದೆ ಇಂಥ ಸೂಕ್ಷ್ಮ ಪ್ರದೇಶಗಳಿಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಸ್ಪಂದನೆ ಮಾಡಬೇಕಾಗಿದೆ ಯಾವ ರೀತಿಯಲ್ಲಿ ಅಲ್ಲಿ ಸ್ಪಂದನೆ ಮಾಡಬಹುದು? ಯಾವ ರೀತಿಯಲ್ಲಿ ಅಲ್ಲಿ ಬೇಕಾಗಿರುವಂಥ ವ್ಯವಸ್ಥೆಗಳನ್ನು ಮಾಡಿಕೊಳ್ಳುವಂಥದ್ದು ಆಗಬೇಕು? ಅಪಾಯಕರವಾದ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಕಲ್ಲುಗಳನ್ನು ಹಾಕುವಂಥಾದ್ದು ಮಾಡಬೇಕು ಶಾಶ್ವತವಾದ ವ್ಯವಸ್ಥೆ ಮಾಡುವ ನಿಟ್ಟಿನಲ್ಲಿ break water system ಮತ್ತು ಬೇರೆ ರೀತಿಯ ತಡೆಗೋಡೆ ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಸಂಬಂಧ ಪಟ್ಟಂತೆ ಇವತ್ತು ಮನವಿಗಳ ಮೇಲೆ ಮನವಿಗಳನ್ನು ಕೇಂದ್ರ ಸರ್ಕಾರಕ್ಕೆ ನಾವು ಕೊಟ್ಟಿದ್ದೇವೆ ಕೇಂದ್ರ ಸರ್ಕಾರದಿಂದ ಆಶ್ವಾಸನೆ ಬರುತ್ತದೆಯೇ ವಿನಾ ಯಾವುದೇ ರೀತಿಯಿಂದ ಕಾರ್ಯರೂಪಕ್ಕೆ ಬಂದಿಲ್ಲ ಕನಿಷ್ಟ ಇದನ್ನು ರಾಜ್ಯ ಸರ್ಕಾರ war-footing ರೀತಿಯಲ್ಲಿ ತೆಗೆದುಕೊಳ್ಳಬೇಕೆಂಬ ವಿನಂತಿಯನ್ನು ನಾನು ಮಾಡುತ್ತಿದ್ದೇನೆ ನನಗೆ ಆಶ್ಚರ್ಯವಾಗುತ್ತದೆ ಕೆಲವು ವರ್ಷಗಳ ಹಿಂದೆ french technology ಎಂದು ಹೇಳಿಕೊಂಡು ಅದರ ಬಗ್ಗೆ ಬಹಳಷ್ಟು paris ಸಂದರ್ಶನ ವಾಯಿತು ಆಗಿನ ಮಂತ್ರಿಗಳು ಭೇಟಿ ಕೊಟ್ಟು french technilogy ಬಗ್ಗೆ ವಿವರಣೆ ಕೊಟ್ಟಿದ್ದೇ ಕೊಟ್ಟಿದ್ದು ಇದು ನಮಗೆ ಸಂಬಂಧ ಪಟ್ಟಂತೆ

irrelevent ಎಂದು ಹೇಳುವಾಗ ಮಾತು ಬಂತು ಅಲ್ಲಿರುವ ಸ್ಥಳೀಯ NITK ಸಂಸ್ಥೆ ಅಲ್ಲಿ ರಿಜನಲ್ ಎಂಜಿನಿಯರಿಂಗ್ ಕಾಲೇಜ್ ಇತ್ತು ಈಗ NITK ಆಗಿದೆ ಅವರು ತಂತ್ರಜ್ಞಾನಕ್ಕೆ ಸಂಬಂಧ ಪಟ್ಟಂತೆ ದಕ್ಷಿಣ ಭಾರತ ಮಟ್ಟದ ಕರಾವಳಿ ಪ್ರದೇಶಗಳಲ್ಲಿರಯವಂಥ ಎಲ್ಲ ಜಿಲ್ಲೆಗಳಲ್ಲಿ ಇರುವಂಥ ತಜ್ಞರನ್ನು ಸಹ ಕರೆಸಿ ಅದರ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿ, ಸೆಮಿನಾರ್ ನಡೆಸಿ ಅಲ್ಲಿನ ಜನಪ್ರತಿನಿಧಿಗಳನ್ನು ಕೂಡ ಕರೆಸಿ ಇದಕ್ಕೆ ಯಾವ ರೀತಿ ಪರಿಹರ ಕಾಣಬಹುದು ಎಂಬ ನಿಟ್ಟಿನಲ್ಲಿ ಭಾರತೀಯ ತಂತ್ರಜ್ಞಾನಕ್ಕೆ ಸಂಬಂಧ ಪಟ್ಟಂಥ ಕೊಡುಗೆಯನ್ನು ಕೂಡ ಕೊಟ್ಟಿದ್ದಾರೆ ಆದರೆ, ನಮ್ಮ ದುರದೃಷ್ಟವೆಂದರೆ ಇದರ ಬಗ್ಗೆ ಕೂಡ ಯಾವುದೇ ಮಾನ್ಯತೆ ಸಿಕ್ಕಿಲ್ಲ ಪಕ್ಕದ ಕೇರಳದಲ್ಲಿ, ಗೋವಾದಲ್ಲಿ ಕಡಲ ಕೊರೆತದ ಯಾವುದೇ complaint ಕೇಳಿ ಬರುತ್ತಿಲ್ಲ ಆದರೆ, ಕರ್ನಾಟಕದಲ್ಲಿ ಮಾತ್ರ ಕೋಸ್ಟಲ್ ಬೆಲ್ಟ್ ಆದ 350ಕಿ ಮೀ ವ್ಯಾಪ್ತಿಯಲ್ಲಿ ಈ ಕಡಲ ಕೊರೆತದ ಸಮಸ್ಯೆ ಏಕೆ ಬರುತ್ತಿದೆ? ಶಾಶ್ವತವಾದ ಪರಿಹಾರ ಮಾಡಲಿಕ್ಕೆ ಇಷ್ಟು ವರ್ಷಗಳಲ್ಲಿ ಏಕೆ ವಿಫಲರಾಗಿದ್ದೇವೆ? ಈ ಸಮಸ್ಯೆಗೆ ಯಾವ ರೀತಿಯಾಗಿ ಪರಿಹಾರ ಕಾಣಬಹುದು? ಇದಕ್ಕೆ ಎಷ್ಟು ಹಣ ಬೇಕಾಗಿದೆ? ಪ್ರತಿ ಸಲ ಅರಣ್ಯರೋದನ ಮಾಡುವ ಸ್ಥಿತಿ ನಮ್ಮ ಸರ್ಕಾರಕ್ಕೆ ಬರಬಾರದು ನಾನು ತಮ್ಮ ಗಮನ ಸೆಳೆಯಲಿಕ್ಕೆ ಇಚ್ಛಿಸುತ್ತಿದ್ದೇನೆ ಕಡಲ ಕೊರೆತದ ತೀವ್ರ ಎಷ್ಟಿರುತ್ತದೆಂದರೆ ನೋಡುತ್ತಾ ನೋಡುತ್ತಾ ಇರುವಾಗಲೇ ಮನೆಗಳು ಬಿದ್ದುಹೋಗುತ್ತವೆ ಪಕ್ಕದಲ್ಲಿ ಮಸಿದಿಗಳು, ದೇವಸ್ಥಾನಗಳು ಬಿದ್ದುಹೋಗಬಹುದು, ಅಷ್ಟು ಮಾತ್ರವಲ್ಲ ಮುಂದಕ್ಕೆ ಅಪಾಯಕರವಾದ ಸನ್ನಿವೇಶ ಎಲ್ಲಿಯವರೆಗೆ ಬಂದಿದೆ ಎಂದರೆ ರಸ್ತೆಗಳು ಕೂಡ ಹಾಳಾಗುವ ಸಾಧ್ಯತೆಗಳಿವೆ ಆ ಪ್ರದೇಶಗಳು ದ್ವೀಪವಾಗುವ ಸಾದ್ಯತೆಗಳಿವೆ ಗೋವಾದ ಕೋಟೆ ಪುರ ಇರಬಹುದು, ಸುಬಾಷ್ ನಗರ ಇರಬಹುದು, ಹಳೆ ಅಂಗಡಿ ಇರಬಹದು, ಬೇಂಗ್ರೆ ಇರಬಹುದು, ಸುರತ್ಕಲ್ ಇರಬಹುದು, ಮುಲ್ಕಿ ಇರಬಹುದು, ಕಾಪು ಇರಬಹುದು, ಈ ಪ್ರದೇಶಗಳಲ್ಲಿ ನಿಶ್ಚಿತವಾಗಿ ಈ ವರ್ಷ ಕಡಲ ಕೊರೆತ ಇದೆ ಹೇಗೆ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳಬೇಕು ಎಂಬ ದುಸ್ಥಿತಿಯಲ್ಲಿ ಅಲ್ಲಿಯ ಜನರಿದ್ದಾರೆ ಶಾಶ್ವತವಾದ ಪರಿಹಾರದ ಬಗ್ಗೆ ಅಂಥ ಸಂದರ್ಭದಲ್ಲಿ ಸರ್ಕಾರ ಇನ್ನಾದರೂ ಕಣ್ಣು ತೆರೆಯಲಿ, ಇದರ ಬಗ್ಗೆ ಸಮರೋಪಾದಿಯಲ್ಲಿ ಕೆಲಸ ಮಾಡುವ ಅವಶ್ಯಕತೆ ಇದೆ ಮುಂದಿನ ಮಳೆಗಾಲದ ಅಧಿವೇಶನದಲ್ಲಿ ಯಾವುದೇ ಕಾರಣಕ್ಕೂ ಕಡಲ ಕೊರೆತದ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ

ಚರ್ಚೆಗೆ ಅವಕಾಶವಾಗದ ರೀತಿಯಲ್ಲಿ ಹಾಗೂ ತುರ್ತು ಕಾಮಗಾರಿಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ತಾವು ಸರ್ಕಾರಕ್ಕೆ ಸೂಕ್ತ ನಿರ್ದೇಶನವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಈ ಒಂದು ಅತಿವೃಷ್ಟಿಯ ಸಂದರ್ಭದಲ್ಲಿ ಬಂದ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ವಿದ್ಯುತ್ ಬರುವಂಥ ಧಾರಾಕಾರ ಮಳೆಯಿಂದಾಗಿ ಅತಿವೃಷ್ಟಿಯಿಂದ ವಿದ್ಯುತ್ ಕಂಬಗಳು ಬೀಳುತ್ತವೆ ಇನ್ನೊಂದು ಕಡೆಯಲ್ಲಿ ಮರಗಳು, ಮರಗಳ ಗೆಲ್ಲುಗಳು ಬೀಳುತ್ತವೆ ಅದರಿಂದ ವೈರ್ ಕಟ್ ಆಗಿ ನೆಲದ ಮೇಲೆ ಬೀಳುತ್ತದೆ ಅದು ಎಂಥ ಅಪಾಯಕರ ಸ್ಥಿತಿ ಎಂದರೆ ಮಧ್ಯಾಹ್ನ ಹೋದಂಥ ಸಂದರ್ಭದಲ್ಲಿ ಏನೂ ಆಗಲಿಲ್ಲ ರಾತ್ರಿ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವ ಸಂದರ್ಭದಲ್ಲಿ ಏನಾದರೂ ವೈರ್ ಕಟ್ ಆಗಿ ಸ್ಪರ್ಶ ಆಯಿತೆಂದರೆ ಮರಣ ನಿಶ್ಚಿತ ಬಹುಶಃ ಈ ಸಂದರ್ಭದಲ್ಲಿ ನಮ್ಮ ವಿದ್ಯುತ್ ಇಲಾಖೆ ಎಷ್ಟು ಸಧೃಢವಾಗಿದೆ, ಎಷ್ಟು ಸಶಕ್ತವಾಗಿದೆ, ಬೇಕಾಗಿರುವ ವ್ಯವಸ್ಥೆಗಳನ್ನು ಯಾವ ರೀತಿಯಲ್ಲಿ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಚಿಂತನೆ ಮಾಡಿದರೆ, ಆಘಾತಕರವಾದ ಸುದ್ದಿ ನಮಗೆ ಗೊತ್ತಾಗಬಹುದು ಒಂದೊಂದು station, sub-station ಗಳಿಗೆ ಭೇಟಿ ಕೊಟ್ಟರೆ 400–500 complaints ಒಂದೊಂದು sub station ಗಳಲ್ಲಿ ಬರುತ್ತದೆ ಇಂಥ complaints ಬರುವ ಸಂದರ್ಭದಲ್ಲಿ ಅಲ್ಲಿ ಇಬ್ಬರು ಲೈನ್‌ಮೆನ್ ಕುಳಿತುಕೊಂಡಿರುತ್ತಾರೆ ಒಬ್ಬ J E ಇರುತ್ತಾರೆ ಆ JE, ಕೂಡ ಸುತ್ತಾಡುತ್ತಿರುತ್ತಾರೆ ಆದರೆ, ಆ ಇಬ್ಬರು ಲೈನ್‌ಮೆನ್ ಏನು ಮಾಡುವಂಥಾದ್ದು? ಅಂಥ ಸಂದರ್ಭದಲ್ಲಿ ಕನಿಷ್ಟ ಒಂದು ಕಡೆಯಲ್ಲಿ 10–15 ಜನರ ಒಂದು ಗುಂಪು ಮಾಡಿ ಲೈನ್‌ಮೆನ್ ಜೊತೆಯಲ್ಲಿ ಸಂಭಂಧಪಟ್ಟ ಅಧಿಕಾರಿಗಳನ್ನು ಜವಾಬ್ದಾರಿಯನ್ನಾಗಿ ಮಾಡಿ ಒಂದು ವ್ಯವಸ್ಥೆ ಮಾಡಿ ಅವರಿಗೆ ಬೇಕಾದ ವಾಹನ ವ್ಯವಸ್ಥೆ ಮಾಡಿ, ವೈರ್‌ಕಟ್ ಆದ ಸಂದರ್ಭದಲ್ಲಿ ಬೇಕಾದ ಏಣಿ ಇನ್ನಿತರ ವ್ಯವಸ್ಥೆ ಮಾಡಬೇಕು ಅನೇಕ ಸಂಧರ್ಭಗಳಲ್ಲಿ ಒಂದು ಕಡೆ ಧಾರಾಕಾರ ಮಳೆ, ಇನ್ನೊಂದು ಕಡೆ ಕತ್ತಲಲ್ಲಿರುವ ಪ್ರದೇಶ ಆ ಕತ್ತಲಿರುವ ಸಂದರ್ಭದಲ್ಲಿ ಆಗುವಂಥ ಅನಾಹುತ ಬೇರೆಯಾಗಿರುತ್ತದೆ ಮಾರ್ಗದಲ್ಲಿ ಹೋಗುವಂಥ ಸಂದರ್ಭದಲ್ಲಿ ಕೇಬಲ್ ಕಟ್ ಆಗಿರಬಹುದು, ಬೇರೆ ಬೇರೆ ರೋಡ್ ಕಟ್ಟಿಂಗ್ಸ್ ಇರುತ್ತದೆ ಆ ರೋಡ್ ಕಟ್ಟಿಂಗ್ಸ್‌ನಲ್ಲಿ ನೀರು ಸೇರಿ ಲೆವೆಲ್ ಯಾವ ರೀತಿ ಇರುತ್ತದೆಂದರೆ, ಅಲ್ಲಿ ಹೋಗುವ ವಾಹನಗಳು ಬಿದ್ದೇ ಬೀಳಬೇಕು ಏಕೆಂದರೆ, ಆ

ರೋಡ್ ಕಟ್ಟಿಂಗ್‌ಗಳನ್ನು ಸಮಯಕ್ಕೆ ಸರಿಯಾಗಿ ಫಿಲ್‌ಅಪ್ ಮಾಡದಿರುವುದರಿಂದ ಆಗುವ ದುರಂತಗಳು ಇನ್ನೊಂದು ವಿಧ ಅದೇ ರೀತಿ national highway ಗೆ ಸಂಬಂಧ ಪಟ್ಟಂತೆ national highway authority ಕಡೆಯಿಂದ ಚತುಷ್ಪಥ ರಸ್ತೆಗಳು ಆಗುತ್ತಿವೆ ಒಂದು ರೀತಿಯಲ್ಲಿ ದೊಡ್ಡ ದೊಡ್ಡ ಪಾಯಗಳನ್ನು ತೆಗೆದಿದ್ದಾರೆ ಆಳವಾದ ಕಂದಕಗಳಿವೆ ಅದನ್ನು fillup ಮಾಡಿ border ಹಾಕುವ ಕಾರ್ಯವನ್ನು ಬೇಸಿಗೆ ಸಂದರ್ಭದಲ್ಲಿ ಮೇ ತಿಂಗಳೊಳಗೆ ಮಾಡಬೇಕಿತ್ತು ಆ ತೆಗೆದಿರುವ ಪಾಯಗಳಲ್ಲಿ ಕಾಲುವೆ ರೀತಿಯಲ್ಲಿ ನೀರು ತುಂಬಿ ಮಾರ್ಗ ಎಲ್ಲಿ ಎನ್ನುವುದೇ ಗೊತ್ತಾಗುವುದಿಲ್ಲ ಕಾಲುವೆ ಪ್ರದೇಶ ಎಲ್ಲಿ ಎನ್ನುವುದು ಗೊತ್ತಾಗುವುದಿಲ್ಲ ವಿಶೇಷವಾಗಿ ಪರ ಊರುಗಳಿಂದ ಸಂಚರಿಸುವ ವಾಹನಗಳು ಎಲ್ಲಾದರೂ ಇನ್ನೊಂದು ವಾಹನ ಬಂತು ಎಂದು ಸೈಡ್‌ಗೆ ಹೋದರೆ ಹೊಂಡದಲ್ಲಿ ಬಿದ್ದು ದುರಂತ ಸಂಭವಿಸುವುದು ನಿಶ್ಚಿತ ಇಂಥ ದುಸ್ಥಿತಿ ಸಂದರ್ಭದಲ್ಲಿ National Highway Authority ಯಾವ ರೀತಿ ಕಾಮಗಾರಿಗಳನ್ನು ಮಾಡಬೇಕು? National Highway Authority ಯವರು ಏನು ಕಾಮಗಾರಿಗಳು ಮಾಡಬೇಕೆಂಬ common sense ಅವರಿಗಿಲ್ಲ ಬಹುಶಃ ನಮ್ಮ ಶಿರಾಡಿಘಾಟ್ ಬಗ್ಗೆ ಮಾತನಾಡುವಂಥಾದ್ದು ಸೂಕ್ತವೋ ಅಲ್ಲವೋ ಗೊತ್ತಾಗುತ್ತಿಲ್ಲ almost all ದಕ್ಷಿಣ ಕನ್ನಡ ಜಿಲ್ಲೆ ದ್ವೀಪವಾಗಿದೆ ಹಾಸನದ ಮೇಲಗಡೆ ಒಂದು ಆಢಳಿತ, ಅದರ ಕೆಳಗಡೆ ಇನ್ನೊಂದು ಆಡಳಿತ ಎಂದು ಕಾಣುತ್ತಿದೆ ಕನಿಷ್ಠ ಅಲ್ಲಿರುವಂಥ ಶಿರಾಡಿ ಘಾಟ್ಗೆ ಸಂಬಂಧ ಪಟ್ಟಂತೆ ಕಾಂಕ್ರೀಟೀಕರಣಕ್ಕೆ ಬೇಕಾದಂಥ ಹಣವನ್ನು National Highway Authority ಕಡೆಯಿಂದ ಮಾಡಿಸಲಿಕ್ಕೆ ನಮ್ಮ ಸರ್ಕಾರವೇಕೆ ವಿಫಲವಾಗಿದೆ? ಮಾತನಾಡಿದರೆ ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲವೆಂದು ಹೇಳುವಂಥದ್ದಿದೆ ಕೇಂದ್ರ ಸರ್ಕಾರದಿಂದ ಹಣ ಬೇಡ ಇಲ್ಲಿ ಓಡಾಡುವವರು ನಮ್ಮ ರಾಜ್ಯದ ಜನರು, ಕನಿಷ್ಠ ನಮ್ಮ ಹಣದಲ್ಲಿಯಾದರೂ ತುರ್ತಾಗಿ ಇದನ್ನು ಮಾಡುವಂಥಾದ್ದು ಅವಶ್ಯಕತೆ ಇದೆ ಕೇಂದ್ರ ಸರ್ಕಾರ ಹಣ ಕೊಡದಿದ್ದರೂ ಕೂಡ ನಮ್ಮ ಸರ್ಕಾರದಿಂದಲೇ ಇದಕ್ಕೆ ಪ್ರಥಮ ಆದ್ಯತೆ ಕೊಟ್ಟು ಇದನ್ನು ಮಾಡುವಂಥ ಅವಶ್ಯಕತೆ ಇದೆ ಈಗ ಮಳೆಗಾಲ ಬಂದು ಎಲ್ಲವೂ ಕುಸಿಯುವ ಸ್ಥಿತಿಯಲ್ಲಿ ಕಾಂಟ್ರ್ಯಾಕ್ಟರ್‌ಗಳನ್ನು ಹುಡುಕುವ ಹುನ್ನಾರ ಪ್ರಯತ್ನವಾಗುತ್ತಿದೆ ಯಾವ ಕಾಂಟ್ರ್ಯಾಕ್ಟರ್‌ಗಳೂ ಹತ್ತಿರ ಬರುವುದಿಲ್ಲ premium ಕೊಡುತ್ತೇವೆಂದರೂ ಯಾರೂ ಹತ್ತಿರ

ಬರುವುದಿಲ್ಲ Executive Engineer ಜನರ ತಲೆ ತಪ್ಪಿಸುವಂಥ ಕಾರ್ಯ ಮಾಡುತ್ತಿದ್ದಾರೆ ಅಸಹಾಯಕತೆಯನ್ನು ಹೇಳುತ್ತಿದ್ದಾರೆ ಯಾವ ಅಧಿಕಾರಿಗಳು ಜವಾಬ್ದಾರಿ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾರೆ? ಯಾವ ಮಂತ್ರಿಗಳು ಜವಾಬ್ದಾರಿ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾರೆ? ಯಾರಿಗೆ ಇದರ ಬಗ್ಗೆ ಕಳಕಳಿ ಇದೆ? ರಾಜ್ಯದಲ್ಲಿ ಏನು ಇಂಥ ಘಾಟ್‌ಗಳಿವೆ ಅವುಗಳನ್ನು ರಕ್ಷಿಸಬೇಕೆನ್ನುವ ಕಾಳಜಿ ಏನದರೂ ಇಲ್ಲಿರುವ ಮಂತ್ರಿ ಮಂಡಳಕ್ಕಿದೆಯೇ? ಅಥವಾ ಕೇಂದ್ರ ಸರ್ಕಾರದ ಮಂತ್ರಿಗಳು ದೆಹಲಿಯಲ್ಲಿ statements ಕೊಡುತ್ತಾರೆಯೇ ವಿನಃ ಹಣ ಬಿಡುಗಡೆ ಮಾಡುವಂಥ ಸೌಜನ್ಯ ತೋರಿಸದ ದುಸ್ಥಿತಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದೆ ನಾನು ತುಂಬಾ ನೋವಿನಿಂದ ಹೇಳುತ್ತಿದ್ದೇನೆ ಒಂದು ಈ ರೀತಿಯಲ್ಲಿ National Highway Authority ಕಡೆಯಿಂದ, ಇನ್ನೊಂದು ಕಡೆಯಲ್ಲಿ ಆಗಿರುವಂಥ ರಸ್ತೆಗಳಲ್ಲಿ ನಗರ ವ್ಯಾಪ್ತಿಯುಲ್ಲಿರುವಂಥ ರಸ್ತೆಗಳ ರೋಡ್‌ಕಟ್ಟಿಂಗ್ಸ್ ಫಿಲಪ್ ಮಾಡದಿರುವುದುರಿಂದ ಆಗುವ ದುರಂತಗಳು ಈ ಎಲ್ಲ ನಿಟ್ಟಿನಲ್ಲಿ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ನೋಡಬೇಕು ಇಂಥ ಕಡೆಗಳಲ್ಲಿ ವಾಹನ ಸಂಚಾರವಿದ್ದರೆ ಎಂಥ ದುಸ್ಥಿತಿಗೊಳಪಡಬಹುದು ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕು ವಿದ್ಯುತ್ ಕ್ಷೇತ್ರಕ್ಕೆ ಸಂಭಂಧ ಪಟ್ಟಂತೆ ನಮ್ಮ ಜಿಲ್ಲೆಯಲ್ಲಿ ವಿಶೇಷವಾದ ಪರಿಸ್ಥಿತಿ ಉಂಟಾಗಿದೆ ಅಲ್ಲಿ ಇಬ್ಬರು ಲೈನ್‌ಮೆನ್ ಇರುವಂಥ ಸಬ್‌ಸ್ಟೇಷನ್ಸ್‌ನಲ್ಲಿ ನಾವೆಲ್ಲ ಒತ್ತಾಯ ಮಾಡಿ ಕಾಂಟ್ರ್ಯಾಕ್ಟರ್ ಕಡೆಯಿಂದ 10 ಜನ ಬೇಕೆಂದು ಹೇಳಿದ್ದೇವೆ ಏನಾದರೂ ಮಾಡಿ ಅವರನ್ನು ಸೇರಿಸಿಕೊಂಡು ಆ ಕಾರ್ಯವನ್ನು ಮಾಡಬೇಕು ತುರ್ತು ಸಂದರ್ಭದಲ್ಲಿ attend ಆಗಬೇಕೆಂದು ಹೇಳುವ ನಿಟ್ಟಿನಲ್ಲಿ 10 ಜನರನ್ನು ಒದಗಿಸುವ ಪ್ರಯತ್ನ ಕೂಡ ಆಗಿತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, Provident fund ಗೆ ಸಂಬಂಧ ಪಟ್ಟಂತೆ ಯಾವುದೋ ವರ್ಷಗಳಲ್ಲಿ ಆದಂಥ ಕಾಮಗಾರಿಗಳಿಗೆ ಸಂಬಂಧ ಪಟ್ಟು ಅಲ್ಲಿ ಹಣ ಕಟ್ಟಲಿಕ್ಕಾಗಲಿಲ್ಲವೆಂದು ಹೇಳಿ MESCOM ಕಛೇರಿಯನ್ನು ಜಪ್ತಿ ಮಾಡುವ ದುಸ್ಥಿತಿ ಬಂದಿದೆ ಈ ಕಾಂಟ್ರ್ಯಾಕ್ಟರ್‌ರವರ ಮೇಲೆ ನೀವು ಪಿ ಎಫ್ ಅನ್ನು ಕಟ್ಟಬೇಕೆಂದು ಹೇಳುವಂಥಾದ್ದು ಅವರು, ನಾವಲ್ಲ ನೀವು ಕಟ್ಟಬೇಕೆಂದು ಹೇಳುವಂಥದ್ದು, ಈ ಎರಡು ಕಡೆಯಿಂದ ಆಗಿರುವ ಗೊಂದಲದಿಂದ ಈ ಕಾಂಟ್ರ್ಯಾಕ್ಟ ಕಡೆಯಿಂದ ಬರುವಂಥ ಜನರನ್ನು ನಿಲ್ಲಿಸಿಬಿಟ್ಟರೆ ಅಲ್ಲಿ ಏನು ಗತಿ ಬರಬಹುದು? ಅಲ್ಲಿ ಏನು ದುಸ್ಥಿತಿ

ಬರಬಹುದು? ಇಂಥ ಒಂದು ಅನಿವಾರ್ಯದ ಸ್ಥಿತಿಯಲ್ಲಿ ನಾವಿದ್ದೇವೆ ಇನ್ನೊಂದು ವಿಶೇಷವಾಗಿ ತಮ್ಮ ಗಮನಕ್ಕೆ ತರುವುದು ಏನೆಂದರೆ, ಮೊನ್ನೆ ಸಮುದ್ರದಲ್ಲಿ ವಿದೇಶೀಯ ಹಡಗು ನೋಡುತ್ತಾ ನೋಡುತ್ತಾ ಹಾಗೇ ಮುಳುಗಿತು ಯಾವ ಕಾರಣಕ್ಕೂ ಅದಕ್ಕೆ ಸಂಬಂಧಪಟ್ಟ ಸೆಕ್ಯೂರಿಟಿ ಕೋಸ್ಟ್‌ಗಾರ್ಡ್‌ನವರು ಹತ್ತಿರ ಬುರುವುದಕ್ಕೆ ಸಾಧ್ಯವಾಗಲಿಲ್ಲ ಅಲ್ಲಿ ಎಂಥಹ ಒಂದು ತೂಫಾನ್ ಇತ್ತೆಂದರೆ, ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಎನ್ನುವ ಸಂಸ್ಥೆಯ ಟವರ್ 250 ಕಿ ಮಿ ವೇಗದಲ್ಲಿ ಬರುವಂಥ ಬಿರುಗಾಳಿಯನ್ನು ತಡೆಯುವಂಥ ಈ ಒಂದು ಟವರ್ ಇವತ್ತು ಮೊಗಚಿಬಿದ್ದು ಪ್ರತಿಭಾವಂತ ಇಬ್ಬರು ಸ್ಥಳೀಯ ಇಂಜಿನಿಯರ್‌ರವರು ಮರಣಕ್ಕಿಡಾದರು ಇಂಥ ದುಸ್ಥಿತಿ ಏಕೆ ಬಂತೆಂದರೆ ಇಂತ ಸಂದರ್ಭದಲ್ಲು ಕೂಡ ನಮ್ಮ ಕಡೆ ತುರ್ತು ನರವಿಗೆ ಬರಲಿಕ್ಕೆ ಏನೂ ಸಾದ್ಯವಾಗದೇ ಇರತಕ್ಕಂಥ ದುಸ್ಥಿತಿ ಬಂದಿದೆ ಅಲ್ಲಿ ಒಂದು ಕಡೆ ಕೋಸ್ಟ್ ಗಾರ್ಡ್‌ಗೆ ಸಂಬಂಧ ಪಟ್ಟವರು ಯಾವುದೇ ಕಾರಣಕ್ಕೂ ಹತ್ತಿರ ಬಂದು ನೆರವು ಕೊಡುವ ಸ್ಥಿತಿಯಲ್ಲಿಲ್ಲ ಸ್ವಲ್ಪ ಪರಿಸ್ಥಿತಿ ಶಾಂತವಾದ ಮೇಲೆ ಹೆಲಿಕ್ಯಾಪ್ಟರ್ ಸರ್ವಿಸ್ ಮೂಲಕ ಏನಾದರೂ ಸೇವೆಯನ್ನು ಕೊಡಲಿಕ್ಕೆ ಸಾದ್ಯವಾಗಬಹುದು ಎಂದರೆ ಅಲ್ಲಿ ಹೆಲಿಕ್ಯಾಪ್ಟರ್ ಇಲ್ಲ ಬೇರೆ ಎಲ್ಲಾ ಕಡೆಗೆ ನಮಗೆ ಓಡಾಡುವುದಕ್ಕೆ ಹೆಲಿಕ್ಯಾಪ್ಟರ್ ಸಿಕ್ಕುತ್ತದೆ ಇಂಥಹ ಕೋಸ್ಟ್ ಗಾರ್ಡ್‌ನಲ್ಲಿ ತುರ್ತಾಗಿ ನೆರವಿಗೆ ಬರತಕ್ಕಂತಹ ಸಂದರ್ಭದಲ್ಲಿ ಹೆಲಿಕ್ಯಾಪ್ಟರ್ ಸರ್ವಿಸ್ ಇಲ್ಲವೆಂದರೆ ಎಂಥ ದುಸ್ಥಿತಿಯಲ್ಲಿ ನಾವಿದ್ದೇವೆ? ಈ ಕೋಸ್ಟ್ ಗಾರ್ಡ್‌ನ ಸ್ಟ್ರೆಂಥನಿಂಗ್ ಮಾಡುವ ಅವಶ್ಯಕತೆ ಇದೆ ಅಲ್ಲಿ ಹೆಲಿಕ್ಯಾಪ್ಟರ್ ಸರ್ವಿಸ್ ಅನ್ನು ತಕ್ಷಣವೇ ಕೊಡಿಸುವುದು ಅವಶ್ಯಕತೆ ಇದೆ ಮಾನ್ಯ ಅದ್ಯಕ್ಷರೆ, ನಾನು ಅನೇಕರ ಕೈಯಲ್ಲಿ ನಮ್ಮ ಕ್ಷೇತ್ರದ ಬವಣೆಗಳನ್ನು ಹೇಳುತ್ತಿದ್ದೇನೆ ಮಳೆಗಾಲದಲ್ಲಿ ಅತಿವೃಷ್ಟಿಯಾಗಿ ಎಲ್ಲಾ ಕಡೆ ಈ ಮಳೆ ಬರುವುದು ಸಾಕು ಎಂದು ಪ್ರಾರ್ಥನೆ ಮಾಡುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಬೇಸಿಗೆ ಸಂದರ್ಭದಲ್ಲಿ ಒಂದು ಹನಿ ನೀರಿಗೆ ಪರದಾಡುವಂಥ ಪರಿಸ್ಥಿತಿ ಬಂದಿದೆ ನದಿಗಳೆಲ್ಲ ಬತ್ತಿ ಹೋಗುವುದು ಅನೇಕ ಸಂದರ್ಭದಲ್ಲಿ ಅನೇಕ ಕಡೆಗಳಲ್ಲಿ ಬಜೆಟ್ ಮೇಲೆ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಎಲ್ಲಾ ಕಡೆ ನಮ್ಮ ಒಂದೇ ಒಂದು ಬೇಡಿಕೆಗಳನ್ನು ಇಟ್ಟಿದ್ದು, ಇನ್ನಾದರೂ ಈ ಬ್ರೇಕ್ ವಾಟರ್ ಅಂಥ ಸಮಸ್ಯೆಗಳನ್ನು ಪರಿಹರಿಸುವಂಥ ನಿಟ್ಟಿನಲ್ಲಿ ಬ್ರೇಕ್ ವಾಟರ್ ಹಾಕುವಂತ ನಿಟ್ಟಿನಲ್ಲಿ ಕಡಲ ಕೊರೆತಕ್ಕೆ ಶಾಶ್ವತವಾಗಿ ಪರಿಹಾರ ಮಾಡುವ

ನಿಟ್ಟಿನಲ್ಲಿ ತುರ್ತು ಪರಿಹಾರ ಬೇಕಾದಂಥ ವ್ಯವಸ್ಥೆಯನ್ನು ಮಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಮೀನಾ–ಮೇಷ ಮಾಡದೆ ತಕ್ಷಣವೇ ಹಣ ಬಿಡುಗಡೆ ಮಾಡುವಂಥಾ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವಂಥಾದ್ದು ಒಂದು ಕಡೆಯಾದರೆ, ಎರಡನೆಯದು ಬೇಸಿಗೆಯಲ್ಲಿ ಕೂಡ ಈ ಸಮಸ್ಯೆ ಬರಬಾರದು ಎಂದು ಹೇಳುವಂಥ ನಿಟ್ಟಿನಲ್ಲಿ, ಪಶ್ಚಿಮ ವಾಹಿನಿಯಂಥ ಯೋಜನೆಗಳನ್ನು ಅದನ್ನು ಜೋಡಿಸಬೇಕೆಂದು ಹೇಳುವಂಥ ನಿಟ್ಟಿನಲ್ಲಿ, ಸುಮಾರು 550 ಟಿ ಎಂ ಸಿ ನೀರು ಜೀವ ನದಿಯಾಗಿರತಕ್ಕಂಥ ನೇತ್ರಾವತಿ ನದಿಯಿಂದ ಹರಿದುಹೋಗುತ್ತದೆ ಹರಿದು ಹೋಗುವಂಥ ಈ ನದಿಯಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಚೆಕ್ ಡ್ಯಾಂಗಳನ್ನು, ಅದಕ್ಕೆ ಬೇಕಾಗಿರತಕ್ಕಂಥ ವೆಂಟೆಡ್ ಡ್ಯಾಂಗಳನ್ನು ನಾವು ಹಾಕಲಿಕ್ಕೆ ಆಗದೇ ಇದ್ದರೆ, ಖಂಡಿತವಾಗಿ ಹೇಳುತ್ತೇನೆ ಎರಡೂವರೆ ಪರ್ಸೆಂಟ್, ಮೂರು ಪರ್ಸೆಂಟ್ ನೀರನ್ನು ನಾವು ಸದ್ಬಳಕೆ ಮಾಡುತ್ತಿಲ್ಲ ಖಂಡಿತವಾಗಿ ನಾವು ಹೆಚ್ಚಿಗೆ ಸದ್ಬಳಕೆ ಮಾಡಬಹುದು ಮಾತ್ರವಲ್ಲ ಶಾಶ್ವತವಾಗಿರತಕ್ಕಂಥಹ ಕುಡಿಯುವ ನೀರು, ಅಂತರ್ಜಲ, ಇರಿಗೇಶನ್‌ಗೆ ಸಂಬಂಧ ಪಟ್ಟ ಹಾಗೆ ಬೇರೆ ಬೇರೆ ಇದಕ್ಕೆ ಸಂಬಂಧ ಪಟಿರತಕ್ಕಂತಹ ಸಮಸ್ಯೆಗಳನ್ನು ತೀರಿಸಲಿಕ್ಕೆ ಆ ಪಶ್ಚಿಮ ವಾಹಿನಿ ಯೋಜನೆಯ ಬಗ್ಗೆ ಇನ್ನಾದರೂ ಸರ್ಕಾರ ಕಣ್ತೆರೆದು ಈ ಒಂದು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅದಕ್ಕೆ ಬೇಕಾಗಿರತಕ್ಕ ಹಣವನ್ನು ಇಡಬೇಕೆಂದು ಹೇಳುವಂಥ ಬೇಡಿಕೆಯನ್ನು ನಾನು ಈ ಸಂದರ್ಭದಲ್ಲಿ ಇಡುತ್ತಿದ್ದೇನೆ ಮಾನ್ಯ ಹಣಕಾಸು ಆಯೋಗದ ಅಧ್ಯಕ್ಷರಾದ ಶ್ರೀ ಎ ಜಿ ಕೊಡಗಿಯವರು ಬಹಳ ಸುಂದರವಾದ ಯೋಜನೆಯನ್ನು ಕೊಟ್ಟಿದ್ದಾರೆ ಪಶ್ಚಿಮ ಘಟ್ಟಗಳ ಬುಡದಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಯ ತನಕ ಸುಮಾರು ನೂರು ಫೀಟ್ ಅಗಲದ ಎಂಬತ್ತು ಫೀಟ್ ಆಳದ ಒಂದು ಕಾಲುವೆ ರೀತಿಯಲ್ಲಿ ತೋಡಿಕೊಂಡು ಹೆಚ್ಚುವರಿ ನೀರು ಅಲ್ಲಿಯೇ ಉಳಿಯಬೇಕು ಉಳಿದಂಥ ನೀರು ಹರಿದುಹೋಗುವಂಥ ನಿಟ್ಟಿನಲ್ಲಿ ಮಾಡಿ ಗ್ರಾವಿಟಿಯಲ್ಲಿ ಎಲ್ಲಾ ಕಡೆ ನೀರು ಹರಿದು ಬರಬೇಕು ತೆಗೆದಿರುವಂಥ ರಸ್ತೆಯಲ್ಲಿ ಮಾಡಿರುವಂಥ ರಸ್ತೆಯಲ್ಲಿ ಪ್ರವಾಸೋದ್ಯಮ ಕೇಂದ್ರವಾಗಿ CzÀÆ C©ëÈ Ý ¨ÁqÀ PÉ § gÁvÉ É J gÀ¼ÀÀ ÁzÀV inland fishery ಗೆ ಸಂಬಂಧ ಪಟ್ಟ ಯೋಚನೆ ಮಾಡಲಿಕ್ಕೆ ಬರುತ್ತದೆ ಬೇರೆ ಬೇರೆ ರೀತಿಯಲ್ಲಿ ಕುಡಿಯುವ ನೀರಿಗೂ ಮತ್ತು ಇರಿಗೇಷನ್‌ಗೆ ಶಾಶ್ವತವಾದ ಪರಿಹಾರವನ್ನು ಮಾಡಲಿಕ್ಕಾಗುತ್ತದೆ ಎತ್ತರದಿಂದ ಬರುವಂಥ ಇಲ್ಲಿ mini

hydal project ಹಾಕಿ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಬರುತ್ತದೆ ಹತ್ತು ಹಲವು ನಿಟ್ಟಿನಲ್ಲಿ ಹಲವು ರೀತಿಯ ಯೋಜನೆಗಳನ್ನು ಮಾಡಿ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರೆ ಯಾವ ನದಿ ತಿರುಗಿಸುವಿಕೆ ಬೇಡ, ನೇತ್ರಾವತಿ ನದಿ ತಿರುಗಿಸುವಿಕೆ ಬೇಡ ಯಾವುದೂ ಬೇಡ, ಬೇಕಾಗಿರತಕ್ಕಂಥ excess ನೀರು ಯಾವುದಿದೆ, ಶಾಶ್ವತವಾಗಿ ಹತ್ತಿರ ಇರುವಂಥ ಜಿಲ್ಲೆಗಳಿಗೆ ಖಂಡಿತವಾಗಿ ನಾವು ಕೊಡೋಣ ಇಂಥ ಒಂದು ಪರಿಣಾಮಕಾರಿಯಾದಂಥ ಕಾರ್ಯರೂಪಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂಥ ನಿಟ್ಟಿನಲ್ಲಿ ಇವತ್ತು ಸರ್ಕಾರ ಮನಗಾಣಬೇಕು ಅದು ಬಿಟ್ಟು ಎಲ್ಲೋ ಒಂದು ಸುರಂಗ ಕೊರೆದು ಎಲ್ಲೋ ಒಂದು ಕ್ಯಾಚ್‌ಮೆಂಟ್ ಏರಿಯಾದಲ್ಲಿ 12,13 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಹೋದರೆ, ಏನೂ ಆಗದೇ ಇರುವಂಥ ದುಸ್ಥಿತಿ, ಅಷ್ಟು ಮಾತ್ರವಲ್ಲ ಇನ್ನೊಂದು ವಿಶೇಷವಾದ ಪರಿಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ ಪ್ರತಿ ವರ್ಷ ನೂರು ಮೀಟರ್ ಸಮುದ್ರದ ಉಪ್ಪು ನೀರು ಹೆಚ್ಚು ಹೆಚ್ಚಾಗಿ ಕೊರೆದುಕೊಂಡು ಮುಂದಕ್ಕೆ ಬರುತ್ತಿದೆ ಇದಕ್ಕೆ ತಡೆಯನ್ನು ಮಾಡಲಿಕ್ಕೆ ಸಾದ್ಯವಾಗದಿದ್ದರೆ, ಕುಡಿಯುವ ಸಿಹಿ ನೀರು ಯವುದಿದೆ ಎಲ್ಲವೂ ಲವಣಯುಕ್ತವಾಗಿ ಉಪ್ಪಿನಾಂಶದಿಂದ ಕೂಡಿ ಕುಡಿಯುವುದಕ್ಕೆ ಯೋಗ್ಯವಲ್ಲದ ನೀರಾಗುವಂಥ ಸಾಧ್ಯತೆ ಇದೆ ಈ ಹಿನ್ನೆಲೆಯಲ್ಲಿ ಮೇಲಿಂದ ಬರತಕ್ಕಂಥ ನೀರು ಯಾವುದು ಇದೆ, ಅದಕ್ಕೆ ಪ್ರಾಕೃತಿಕವಾಗಿರುವಂಥ ಅಂಶಗಳ ನಿಟ್ಟಿನಲ್ಲಿ ಯಾವುದೇ ರೀತಿಯಲ್ಲಿ ಸಮುದ್ರಕ್ಕೆ ಹರಿದು ಹೋಗುವಂಥ ಈ ನೀರನ್ನು ತಡೆಮಾಡಲಿಕ್ಕೆ ಹೋಗದೆ ಕೆಳಗಡೆ excess ಆಗಿರುವ ನೀರನ್ನು ಮೇಲುಗಡೆ ಇರುವಂಥ ಜಿಲ್ಲೆಗಳಿಗೆ ತರಲು ಹೇಗೆ ನಾವು ವ್ಯವಸ್ಥೆಯನ್ನು ಮಾಡಬಹುದು, ಈ ಬಗ್ಗೆ ಶಾಶ್ವತವಾಗಿರತಕ್ಕಂಥ ಪರಿಹಾರವನ್ನು ಕಾಣುವಂಥ ನಿಟ್ಟಿನಲ್ಲಿ ಯಾವ ಯೋಜನೆಗಳನ್ನು ಅಳವಡಿಸುವುದು ಎನ್ನುವ ಆಲೋಚನೆಯನ್ನು ಮಾಡಿದರೆ, ಖಂಡಿತವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಕೇವಲ ದಕ್ಷಿಣ ಕನ್ನಡ ಜಿಲ್ಲೆ ಕರಾವಳಿಯಲ್ಲಿ ಮಾತ್ರವಲ್ಲದೇ ಹತ್ತಿರದಲ್ಲಿರುವ ಕೋಲಾರ, ತುಮಕೂರು, ಹಾಸನ ಅಥವಾ ಬೇರೆ ಜಿಲ್ಲೆಗಳಿಗೆ ಕೊಡುವಂಥ ನಿಟ್ಟಿನಲ್ಲಿ ವಿಶೇಷವಾಗಿರತಕ್ಕಂಥ ಕಾರ್ಯ ಯೋಜನೆಯನ್ನು ಮಾವು ಮಾಡಬೇಕು ಸರ್ವೇ ಎಂದು ಹೇಳಿಕೊಂಡು ನಾವು 10,12 ಕೋಟಿ ಎಂದು ಖರ್ಚು ಮಾಡುವುದರ ಬದಲು, ಈ ಸೌಭಾಗ್ಯ ಸಂಜೀವಿನಿ ಎಂದು ಹೇಳುವಂಥ

ಇಂಥ ಯೋಜನೆಗಳಿಗೆ ಹಣವನ್ನು ಕಾದಿರಿಸಿ ಅದರ ಬಗ್ಗೆ ಸರ್ವೆ ಮಾಡಿ ಅದರ ಬಗ್ಗೆ ಸಮಗ್ರವಾಗಿ ಕಾರ್ಯರೂಪಕ್ಕೆ ತಂದರೆ, 4–5 ಸಾವಿರ ಕೋಟಿ ರೂಪಾಶಯಿಗಳ ಯೋಜನೆಯಲ್ಲಿ ಬಹಳಷ್ಟು ಬೇಕಾಗಿರತಕ್ಕಂಥ ಸಮೃದ್ಧಿಯಾದಂಥ ನೀರನ್ನು ಬಳಸುವಂಥ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಅಂತರ್ಜಲ ಕೂಡ ಏರುತ್ತದೆ ಬೇರೆ ಕಡೆಗಳಲ್ಲಿ ಬೇರೆ ಸಂದರ್ಭದಲ್ಲಿ ಬೇಕಾದಷ್ಟು ನೀರನ್ನು ಕೊಡುವುದಕ್ಕೆ ಶಾಶ್ವತವಾದ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಈ ಎಲ್ಲಾ ಹಿನ್ನೆಲೆಯಲ್ಲಿ ಅತಿವೃಷ್ಟಿಯಿಂದ ಬಳಲುತ್ತಿರುವ ಕರಾವಳಿ ಜಿಲ್ಲೆಗಳಿಗೆ ತಕ್ಷಣವೆ ಏಳು ಕೋಟಿ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಬೇಕೆಂದು ಮನವಿ ಮಾಡುತ್ತೇನೆ ಅದೇ ರೀತಿಯಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಬೇಕಾಗಿರುವಂಥ ಪರಿಹಾರವನ್ನು ಕೊಡುವ ನಿಟ್ಟಿನಲ್ಲೂ ಕೂಡ ನಾನು ವಿಶೇಷವಾದ ವಿನಂತಿಯನ್ನು ಮಾಡುತ್ತೇನೆ ಮನೆ ಕುಸಿತವಾದರೆ ನೀವು ಹತ್ತು ಸಾವಿರ ರೂಪಾಯಿ ಪರಿಹಾರ ಕೊಡುತ್ತೀರಿ. ಮನೆ ಕುಸಿದವರು ಬಡವರಾಗಿರುತ್ತಾರೆ ಶ್ರೀಮಂತರ ಮನೆ ಎಲ್ಲೂ ಕುಸಿತವಾಗುವುದಿಲ್ಲ ಅವರು ಸಾಕಷ್ಟು ಗಟ್ಟಿ ಮುಟ್ಟಾಗಿ ಕಟ್ಟಿರುತ್ತಾರೆ ಈಗೇನು ಹತ್ತು ಸಾವಿರ ರೂಪಾಯಿ ಬದಲಿಗೆ ಆ ಅಮೌಂಟ್ ಡಬಲ್ ಆಗಿದೆ ಎಂದು ಹೇಳುತ್ತಾರೆ ಆದರೆ ನಾನು ಹೇಳುವುದು ಏನೆಂದರೆ, ಕನಿಷ್ಟ 50 ಸಾವಿರ ರೂಪಾಯಿಗಳನ್ನು ಕೊಡಬೇಕು ಶ್ರೀಮಂತರ ಮನೆ ಕುಸಿತವಾಗುವುದಿಲ್ಲ ಬಡವರ ಮನೆ ಕುಸಿತವಾಗುವುದು ಇಂಥ ಸಂದರ್ಭದಲ್ಲಿ ಪೂರ್ತಿಯಾಗಿ ಕುಸಿತವಾಗಿರತಕ್ಕಂಥ ಸಂದರ್ಭದಲ್ಲಿ ಆ ಮನೆಯನ್ನು ಪುನರ್ ನಿರ್ಮಾಣ ಮಾಡಲಿಕ್ಕೆ 50 ಸಾವಿರ ರೂಪಾಯಿಗಳನ್ನಾದರೂ ಕನಿಷ್ಟವಾಗಿಯಾದರೂ ಕೊಡಬೇಕೆಂದು ಕೇಳುತ್ತೇನೆ ಏಕೆಂದರೆ 20 ಸಾವಿರ ರೂಪಾಯಿ ಯಾವುದಕ್ಕೂ ಸಾಲುವುದಿಲ್ಲ ಈ ಹಿನ್ನೆಲೆಯಲ್ಲಿ ಯಾವುದೇ ͻÃwA1Aº ©Aª ÀxÀcomponent ಅನ್ನು ಬೇರೆಯದಕ್ಕೆ ನಾವು ಹೆಚ್ಚಿಗೆ ಕೊಡುತ್ತೇವೆ ಅದರೆ ಇಲ್ಲಿ ವಿಶೇಷವಾದಂಥ ಪ್ಯಾಕೇಜನ್ನು ನಾವು ಮಾಡಬೇಕು ಕನಿಷ್ಟ 50 ಸಾವಿರ ರೂಪಾಯಿಗಳನ್ನು ಕೊಡುವಂಥ ನಿಟ್ಟಿನಲ್ಲಿ ಮಾಡಬೇಕು ಬಾಗಶಃ ಇದರಲ್ಲಿ 25 ಸಾವಿರ ರೂಪಾಯಿ ಕೊಡಿ ನಿಜವಾಗಿ ಅಸಹಾಯಕ ಸ್ಥಿತಿಯುಲ್ಲಿರುವ ಕುಟುಂಬಗಳು ಇದ್ದರೆ, ಅವರಿಗೆ ದುಡಿಯುವಂಥ ಶಕ್ತಿ ಇಲ್ಲದಿರುವಂಥ ಸಂದರ್ಭದಲ್ಲಿ ಅವರಿಗೆ ತಾತ್ಕಾಲಿಕವಾಗಿ ಪರಿಹಾರವನ್ನು ಕೊಡುವಂಥಾದ್ದು ಮತ್ತು ಅವರ ಜೀವನ

ವೃತ್ತಿಯನ್ನು ನಡೆಸುವುದಕ್ಕೆ ಬೇಕಾದಂಥ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ಕೂಡ ಯೋಚನೆ ಮಾಡುವುದು ಅವಶ್ಯವಿದೆ ಒಟ್ಟಾರೆಯಾಗಿ ಮಳೆಗಾಲದಲ್ಲಿ ಈ ಅತಿವೃಷ್ಟಿ ಸಂದರ್ಭದಲ್ಲಿ ಈ ಸಮಸ್ಯೆಗಳು ಉದ್ಭವವಾಗತಕ್ಕಂಥ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕಿಂತ ಈ ಎಲ್ಲಾ ಚರ್ಚೆಗಳ ಸಾರಾಂಶವನ್ನು ಕ್ರೋಢೀಕರಿಸಿ ಶಾಶ್ವತವಾದ ಪರಿಹಾರವನ್ನು ಅನುಷ್ಠಾನಕ್ಕೆ ತಂದಲ್ಲಿ ನಿಜವಾದ ಅರ್ಥದಲ್ಲಿ ಏನಾದರೊಂದು ಅತಿವೃಷ್ಟಿ ಪ್ರದೇಶಗಳಲ್ಲಿ ಲಾಭವಾಗುವಂಥ ದೃಷ್ಟಿಯಲ್ಲಿ ನಾವು ಹೇಳಿದಂಥ ಪಶ್ಚಿಮವಾಹಿನಿ ಸೌಭಾಗ್ಯ ಸಂಜೀವಿನಿ ಯೋಜನೆಯನ್ನು ಸಮರ್ಪಕವಾಗಿ ಅಳವಡಿಸಿಕೊಂಡು excess ಆಗಿರುವಂಥ ನೀರನ್ನು ಬೇರೆ ಕಡೆ ಕೊಡುವಂಥ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತಂದರೆ, ಖಂಡಿತವಾಗಿ ವಿಶೇಷವಾದ ಲಾಭವಾಗುತ್ತದೆ ತಜ್ಞರು ಎಲ್ಲೋ ಕುಳಿತುಕೊಂಡು ತಾವು ಮಾಡಿರುವಂಥ ಭೂಪಟಗಳನ್ನು geography ಪ್ರಕಾರ ಯೋಜನೆಗಳನ್ನು ಮಾಡಿದರೆ ಆ ಯೋಜನೆಗಳು ಎಷ್ಟು ಪ್ರಾಕ್ಟಿಕಾಲಿಟಿ ಇವೆ ಎಂದು ಚಿಂತನೆಯನ್ನು ನಾವು ಮಡಬೇಕಾಗಿದೆ ಈ ಹಿನ್ನೆಲೆಯಲ್ಲಿ ಬಹುಶಃ ನಾವು ಈ ಎರಡು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಲ್ಲಿ ಖಂಡಿತವಾಗಿ ನಮ್ಮ ಜಿಲ್ಲೆಗಳು ಸಮೃದ್ಧಿಯಾಗುತ್ತವೆ ಕರಾವಳಿ ಜಿಲ್ಲೆಗಳು ಸಮೃದ್ಧೀಯಾಗುತ್ತವೆ ಹತ್ತಿರವಿರುವಂಥ ಜಿಲ್ಲೆಗಳಲ್ಲಿ ಶಾಶ್ವತವಾಗಿ ನೀರಿನ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ನಮ್ಮ ಜಿಲ್ಲೆಗಳ ಕೊಡುಗೆಯನ್ನು ಕೊಡಲಿಕ್ಕೆ ಆಗುತ್ತದೆ ಈ ಹಿನ್ನೆಲೆಯಲ್ಲಿ ವಿಶೇಷವಾದ ಚಿಂತನೆಯಿದೆ ತಮ್ಮ ಮೂಲಕ ಈ ಒಂದು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಲಾಲಾಜಿ ಆರ್ ಮೆಂಡನ್(ಕಾಪು) ಮಾನ್ಯ ಅಧ್ಯಕ್ಷರೆ, ಕಾಪು ಕ್ಷೇತ್ರದ ಕರಾವಳಿ ಪ್ರದೇಶಗಳಲ್ಲಿ ಈಗಾಗಲೇ ಹಲವಾರು ಕಡೆ ಕಡಲ ಕೊರೆತವಾದ ಬಗ್ಗೆ ಈಗಾಗಲೇ ನಮ್ಮ ಹಿರಿಯ ಸಚಿವರ ಗಮನಕ್ಕೆ ತಂದಿದ್ದೇವೆ ಜೊತೆಗೆ ನಮ್ಮ ಕರಾವಳಿ ಭಾಗದ ಶಾಸಕರು ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ ನಮ್ಮ ಕರ್ನಾಟಕ ಕರಾವಳಿಯ ಸುಮಾರು ಮುನ್ನೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಸಮುದ್ರ ಕೊರೆತವಾಗುವುದು, ಪ್ರತಿವರ್ಷ ಬರುವ ಹಾಗೆ ಸಮುದ್ರ ಕೊರೆತ ಆಗುತ್ತದೆ ಕಳೆದ ವಾರ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಡಾ॥ವಿ ಎಸ್ ಆಚಾರ್ಯರವರು ಮತ್ತು ಉಡುಪಿ ಜಿಲ್ಲಾಧಿಕರಿಗಳು ಮತ್ತು ನಾವು ಹಲವಾರು ಪ್ರದೇಶಗಳಿಗೆ

ಭೇಟಿ ಕೊಟ್ಟಿದ್ದೇವೆ ಈಗಾಗಲೇ ಕೇವಲ 70 ಮೀಟರ್ ವರೆಗೆ ಮಾತ್ರ ಜಿಲ್ಲಾಧಿಕಾರಿಗಳು ತಾತ್ಕಾಲಿಕ ತಡೆಗೋಡೆಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ ಆದರೆ ನನ್ನ ಕ್ಷೇತ್ರದಲ್ಲಿ ಕಳೆದ ವರ್ಷವೂ ಕೂಡ ಸುಮಾರು ಮುನ್ನೂರು ಮೀಟರಿನಷ್ಟು ತಾತ್ಕಾಲಿಕ ತಡೆಗೋಡೆ ಮಾಡಲಾಗಿದೆ ಈ ವರ್ಷ ಮತ್ತೆ 5–6 ಪ್ರಮುಖ ಸ್ಥಳಗಳಲ್ಲಿ ತಡೆಗೋಡೆಯಾಗುತ್ತಿದೆ ಅದಕ್ಕೆ ಕೂಡ ನಮ್ಮ ಕಂದಾಯ ಸಚಿವರ ಮೂಲಕ ಹಾಗೂ ನಮ್ಮ ಮಂತ್ರಿವರ್ಯರ ಮೂಲಕ ಅದಕ್ಕೆ ತಕ್ಷಣ ಪರಿಹಾರ ದೊರಕಬೇಕು ಹಿಂದೆ ಮೀನುಗಾರಿಕೆ ಇಲಾಖೆ ಮತ್ತು ಬಂದರು ಇಲಾಖೆ ಒಂದೇ ಇಲಾಖೆಯಾಗಿತ್ತು ಆಗ ಇದಕ್ಕೆ ಸ್ವಲ್ಪ ಬೇಗನೇ ಸ್ಪಂದನೆ ಸಿಗುತ್ತಿತ್ತು ಆದರೆ ಈಗ ಈ ಎರಡೂ ಇಲಾಖೆಗಳು ಒಂದೇ ಇಲಾಖೆಯಾಗಿರಬೇಕಾದರೂ ಕೂಡ ಆ ಇಲಾಖೆಗಳಿಂದ ನಮಗೆ ಬೇಗ ಸ್ಪಂದನೆ ಸಿಗುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ತಡೆಗೋಡೆ ನಿರ್ಮಾಣಕ್ಕೆ ಸ್ಪಂದಿಸಬೇಕು ನಮ್ಮ ಕರಾವಳಿ ಪ್ರದೇಶಗಳಲ್ಲಿ ಕಾಪು ಕ್ಷೇತ್ರವನ್ನೊಳಗೊಂಡಂತೆ ವಿಪರೀತ ಬಿರುಗಾಳಿಯಿಂದಾಗಿ ಹಲವಾರು ಮನೆಗಳ ಹೆಂಚು ಹಾರಿ ಹೋಗಿವೆ ಮತ್ತು ಶಾಲೆ ಕಾಲೇಜುಗಳು ತುಂಬಾ ಹಾನಿಯಾಗಿದೆ ಮೆಸ್ಕಾಮ ಕಂಬಗಳ ಮೇಲೆ ಹಲವಾರು ಮರಗಳು ಬಿದ್ದು ಏಳೆಂಟು ದಿವಸಗಳು ವಿದ್ಯುತ್ ಇಲ್ಲದೆ ಸಮಸ್ಯೆ ಆಗಿತ್ತು ಒಳನಾಡು ಪ್ರದೇಶಗಳಲ್ಲಿ ಅಂದರೆ ನದಿ ಕೊರೆತ ಇರುವಂಥ ಪ್ರದೇಶಗಳಲ್ಲೂ ಕೂಡ ವಿಪರೀತ ನದಿ ಕೊರೆತದಿಂದ ಗದ್ದೆ ಮತ್ತು ಮನೆಗಳಿಗೆ ತೊಂದರೆಯಗುತ್ತಿತ್ತು ಅದಕ್ಕೂ ಕಲ್ಲುಗಳನ್ನು ಹಾಕುವ ಮೂಲಕ ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಬೇಕಾಗುತ್ತದ ಹೀಗೆ ಕರಾವಳಿಯಾದ್ಯಂತ ತೊಂದರೆಯಾಗಿದ್ದು, ಅದರಲ್ಲಿನ ಕೆಲವು ಸಮಸ್ಯೆಗಳನ್ನು ಈಗಾಗಲೇ ನಮ್ಮ ಶಾಸಕರಾದ ಯೋಗೀಶ್ ಭಟ್‌ರವರು ಹೇಳಿದ್ದಾರೆ ಹತ್ತು ದಿವಸಗಳ ಮುಂಚೆ, ಮಂಗಳೂರು ನವ ಬಂದರಿನ ಸಮೀಪ ತಣ್ಣೀರಭಾವಿಯಿಂದ 150 ಮಿಟರ್ ದೂರದಲ್ಲಿ ವಿಪರೀತ ಬಿರುಗಾಳಿ ಮಳೆಗೆ ಸಿಕ್ಕಿ ಆಫ್ರಿಕದ ಸರಕು ನೌಕೆ ಮುಳುಗಿದೆ ಆ ಸಂದರ್ಭದಲ್ಲಿ ಶೀಘ್ರವಾಗಿ ಯಾವುದೇ ಪರಿಹಾರ ಕೈಗೊಳ್ಳಲು ಸಾಧ್ಯವಾಗದೇ ಆ ಸ್ಥಳಕ್ಕೆ ಹೆಲಿಕಾಪ್ಟರ್ ಹೋಗಲು ಸಾಧ್ಯವಾಗದೇ ಕೆಲವರು life jacket ಹಾಕಿಕೊಂಡು ಈಜಿಕೊಂಡು ಬಂದರೂ ಕೂಡ ಮೂರು ಜನರು ನಿಧನರಾಗಿದ್ದಾರೆ ಇಂಥ ಸ್ಥಿತಿ ಇರುವುದರಿಂದ ಈ ಮಳೆಗಾಲದಲ್ಲಿ ಮೀನುಗಾರಿಕೆಗೆ ತೊಂದರೆಯಾಗದ ರೀತಿಯಲ್ಲಿ ಕರಾವಳಿಯಲ್ಲಿರುವ ನಮಗೆ

ರಕ್ಷಣೆ ದೊರಕಬೇಕಾಗಿದೆ ಆ ದೃಷ್ಟಿಯಿಂದ ಮುಖ್ಯವಾಗಿ ನಮಗೆ ಸಮುದ್ರ ಕೊರೆತ ತಡೆಯಲು ತಡೆಗೋಡೆ ಆಗಬೇಕಾಗಿದೆ ಈಗಾಗಲೇ ಮತ್ಸ್ಯಾಶ್ರಯ ಯೋಜನೆಯ ಮೂಲಕ ಮನೆಗಳು ಸಿಗುತ್ತಿವೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಈ ಜಂಟಿ ಯೋಜನೆಯು ಶೀಘ್ರವಾಗಿ ತಲುಪುವಂತೆ ಆಗಬೇಕು ಏಕೆಂದರೆ, ಮಳೆಗಾಲಕ್ಕೆ ಮೊದಲೇ ಆ ಮನೆಗಳನ್ನು ಪೂರ್ತಿ ಮಾಡಬೇಕು ಎಂದಿದ್ದರೂ ಕೂಡ ಕೆಲವು ಮನೆಗಳಿಗೆ ಪ್ರಥಮ ಕಂತು ಮಾತ್ರ ಬಂದಿದೆ ಇದನ್ನು ಇನ್ನಷ್ಟು ವೇಗವಾಗಿ ಮಡುವ ಮೂಲಕ ಈ ಯೋಜನೆಗೆ ಸಹಕಾರವನ್ನು ಕೊಡಬೇಕಾಗುತ್ತದೆ ಅದೇ ರೀತಿ, ನಮ್ಮ ಕರಾವಳಿಯ ಗ್ರಾಮಾಂತರ ರಸ್ತೆಗಳು ಹಾಳಾಗಿವೆ ನಮ್ಮ ಜಿಲ್ಲೆಯಲ್ಲಿ ಬರುವಂತ ವಿಪರೀತ ಮಳೆಯಿಂದಾಗಿ fisheries ರಸ್ತೆಗಳು ಬೇಗನೆ ಹಾಳಾಗುತ್ತದೆ ಆದ್ದರಿಂದ ಈ ಮೀನುಗಾರಿಕಾ ರಸ್ತೆಗಳಿಗೆ ಕೂಡ ಡಾಂಬರೀಕರಣ ವ್ಯವಸ್ಥೆ ಮಾಡಬೇಕಾಗಿದೆ ಆಯ್ದ ಪ್ರದೇಶಗಳಿಗೆ ಕಾಂಕ್ರೀಟಿನ ರಸ್ತೆಗಳು ಬೇಕಾಗುತ್ತವೆ ಆ ದೃಷ್ಟಿಯಿಂದ ಮೀನುಗಾರಿಕಾ ಇಲಾಖೆಯು ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸನ್ಮಾನ್ಯ ಮೀನುಗಾರಿಕಾ ಸಚಿವರಾದ ಸನ್ಮಾನ್ಯ ನಾಗರಾಜ ಶೆಟ್ಟಿಯವರನ್ನು ಮತ್ತು ಇತರ ಸಂಬಂಧ ಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇವೆ ಪ್ರಕೃತಿ ವಿಕೋಪದ ವಿಷಯದಲ್ಲಿ ಕಂದಾಯ ಸಚಿವರಾದ ಸನ್ಮಾನ್ಯ ಜಗದೀಶ ಶೆಟ್ಟರ್‌ರವರು ವಿಶೇಷವಾಗಿ ಸ್ಪಂದಿಸಬೇಕಾಗುತ್ತದೆ ಕಳೆದ ವರ ಅವರು ಮಂಗಳೂರಿಗೆ ಬಂದಿದ್ದಾಗ ಕೆಲವು ಕಡೆಗಳಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ ಜಿಲ್ಲಾಧಿಕಾರಿಗಳ ಮೂಲಕ ಇಂಥ ಕಾಮಗಾರಿಗಳನ್ನು ಮಾಡಲು ಅವರು ತುರ್ತಾಗಿ ಅವಕಾಶವನ್ನು ಮಾಡಿಕೊಡಬೇಕು ಸಮುದ್ರ ಕೊರೆತ ತಡೆಗೋಡೆಯ ಕಾಮಗಾರಿಯನ್ನು ಮಳೆಗಾಲದಲ್ಲಿ ಮಾಡುವುದಲ್ಲ ಪೂರ್ವ ಸಿದ್ಧತೆಯಾಗಿ ಮೊದಲೇ ಅಂದರೆ ಅಕ್ಟೋಬರ್ ತಿಂಗಳಿಂದ ಪ್ರಾರಂಭಿಸಿ ಮಾರ್ಚ್ ತಿಂಗಳೊಳಗೆ ಮಾಡಿ ಮುಗಿಸುವ ಹಾಗೆ ಆಯ್ದ ಪ್ರದೇಶಗಳನ್ನು ಗುರುತಿಸಬೇಕು ಸರ್ಕಾರದ ಅಂದಾಜಿನ ಪ್ರಕಾರ 100 ಮೀಟರ್ ತಡೆಗೋಡೆ ಕಾಮಗಾರಿಗೆ 50 ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆ ಇಂಥ ಕಾಮಗಾರಿಯನ್ನು ವ್ಯವಸ್ಥಿತವಾಗಿ ತೆಗೆದುಕೊಂಡು ಮೊದಲೇ ಬಲೆಯನ್ನು ಹಾಕಿ, ಸಣ್ಣ ಕಲ್ಲು ಮತ್ತು ದೊಡ್ಡ ಕಲ್ಲುಗಳನ್ನು ಹಾಕುವ ಮೂಲಕ ವ್ಯವಸ್ಥಿತವಾಗಿ ಮಾಡಿದರೆ ಅಂಥ ತಡೆಗೋಡೆಯಿಂದ ಶಾಶ್ವತವಾಗಿ ನೀರಿನ ಸೆಳೆತವನ್ನು ನಿಲ್ಲಿಸಲು ಸಾಧ್ಯವಾಗುತ್ತದೆ ಈಚೆಗೆ ನಡೆದ ಉಲ್ಲಾಳ ವಿಧಾನಸಭಾ ಉಪಚುನಾವಣೆಯ

ಸಂದರ್ಭದಲ್ಲಿ ಕರಾವಳಿಯ ಬಂಧುಗಳೆಲ್ಲಾ ಅಲ್ಲಿಗೆ ಹೋಗಿದ್ದೆವು ನಾನು ಮೀನುಗಾರರ ಕುಟುಂಬದ ಮೊಗವೀರ ಸಮಾಜದಿಂದ ಬಂದಂಥವನಾದ್ದರಿಂದ ನನಗೆ ಕರಾವಳಿಯ ವಿಶೇಷ ಸಂಪರ್ಕವಿದೆ ಹಾಗಾಗಿ ಉಲ್ಲಾಳದಲ್ಲಿ ಗಮನಿಸಿದಂತೆ ಅಲ್ಲಿ ಕೂಡ ಸಮುದ್ರ ಕೊರೆತವಾಗುತ್ತದೆ ನಮ್ಮ ಕರಾವಳಿಗಿಂತಲೂ ಅಲ್ಲಿ ಸಮುದ್ರದ ಆಳ ಸ್ವಲ್ಪ ಜಾಸ್ತಿಯಿರುತ್ತದೆ, ಆದ್ದರಿಂದ ಅಲ್ಲಿ ತಡೆಗೋಡೆ ಮಾಡಿ ಕಲ್ಲು ಹಾಕಬೇಕಾಗುತ್ತದೆ ಆ ಬಗ್ಗೆ ಕೂಡ ಇಲ್ಲಿಯ ಜನರು ನಮ್ಮಲ್ಲಿ ಬೇಡಿಕೆಯನ್ನಿಟ್ಟಿದ್ದಾರೆ ಅದಕ್ಕೂ ಸ್ಪಂದಿಸಬೇಕಾಗಿ ಸನ್ಮಾನ್ಯ ನಾಗರಾಜ ಶೆಟ್ಟಿಯವರನ್ನು, ಬಂದರು ಖಾತೆ ಸಚಿವರನ್ನು ಮತ್ತು ಪ್ರಕೃತಿ ವಿಕೋಪ ನಿಧಿಯಿಂದ ಪರಿಹಾರಕೊಡುವ ಮೂಲಕ ಸನ್ಮಾನ್ಯ ಜಗದೀಶ ಶೆಟ್ಟರ್‌ರವರೂ ಇದಕ್ಕೆ ಸ್ಪಂದಿಸಬೇಕಾಗಿ ಕೇಳಿಕೊಂಡು, ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಪದ್ಮನಾಭ ಕೊರಾರಿ(ವಿಟ್ಲ) ಮಾನ್ಯ ಅದ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಂಬಾ ಅನಾಹುತವಾಗಿರುವ ಬಗ್ಗೆ ಈಗಾಗಲೇ ನಮ್ಮ ಜಿಲ್ಲೆಯ ಶಾಸಕರು ತಿಳಿಸಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಕಳೆದ 15 ದಿವಸಗಳಿಂದ ಆಗಿರುವಂಥ ಮಳೆ ಮತ್ತು ಬಿರುಗಾಳಿಯಿಂದ ಅನೇಕ ತೊಂದರೆಗಳಾಗಿದ್ದು, ಸುಮಾರು 150ಕ್ಕಿಂತಲೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ ಕೆಲವು ಮನೆಗಳು ಸಂಪೂರ್ಣವಾಗಿ ನಾಶವಾಗಿವೆ, ಸುಮಾರು 28 ವಿದ್ಯುತ್ ಸ್ಥಾವರಗಳು ಕೆಟ್ಟುಹೋಗಿವೆ ಸುಮಾರು 311 ಕ್ಕಿಂತಲೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಹೋಗಿವೆ ವೈರುಗಳು ತುಂಡಾಗಿವೆ ಹೀಗಾಗಿ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಹಲವಾರು ಹಳ್ಳಿಗಳಿಗೆ ಸುಮಾರು 15 ದಿವಸಗಳ ಕಾಲ ವಿದ್ಯುತ್ ಇಲ್ಲದೆ ಕತ್ತಲೆಯಲ್ಲೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು ಮನೆಗಳಲ್ಲಿ ಚಿಮಣಿ ದೀಪವನ್ನು ಉರಿಸೋಣವೆಂದರೆ ಈಗಿನ ಪರಿಸ್ಥಿತಿಯಲ್ಲಿ ಕೆಲವು ಮನೆಗಳಲ್ಲಿ ಒಂದು ಲೀಟರ್ ಸೀಮೆ ಎಣ್ಣೆ ಕೂಡ ಇರುವುದಿಲ್ಲ ಏಕೆಂದರೆ, ಆ ಮನೆಗಳಲ್ಲಿ ಅಡುಗೆ ಗ್ಯಾಸ್ ಇದ್ದರೆ ಅಂತವರಿಗೆ APL ಪಡಿತರ ಚೀಟಿ ಕೊಟ್ಟಿರುವುದರಿಂದ, ಆ ಮನೆಗಳಲ್ಲಿ ಚಿಮಣಿ ದೀಪವನ್ನು ಉರಿಸಲು ಸೀಮೆಎಣ್ಣೆ ಕೂಡ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿತ್ತು ಅಂಗಡಿಗಳಿಂದ ಕ್ಯಾಂಡಲ್‌ಗಳನ್ನು

ತೆಗೆದುಕೊಂಡು ಹೋಗಿ ಮನೆಗಳಲ್ಲಿ ಉರಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಈ ರೀತಿ ಬಹಳಷ್ಟು ತೊಂದರೆಗಳಾಗಿವೆ ಅದೇ ರೀತಿ ಕೃಷಿ ಕ್ಷೇತ್ರದಲ್ಲಿ ಕೂಡ ಬಹಳಷ್ಟು ಹಾನಿಯಾಗಿದೆ ಅಡಿಕೆ, ತೆಂಗು ಮತ್ತು ಭತ್ತದ ಕೃಷಿ ಇರುವಂಥ ಜಿಲ್ಲೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ನಮ್ಮ ತಾಲ್ಲೂಕಿನಲ್ಲಿ ಬಿರುಗಾಳಿಗೆ ಸಿಕ್ಕಿ ಬಹಳಷ್ಟು ಅಡಿಕೆ ಮರಗಳು ಬಿದ್ದು ಹೋಗಿವೆ ತೆಂಗಿನ ಮರಗಳು ಬಿದ್ದು ಹೋಗಿವೆ, ಅದೇ ರೀತಿ ಇನ್ನಿತರ ಹಲವಾರು ಮರಗಳು ಬಿದ್ದು ಹೋಗಿವೆ ಆದರೆ ಉತ್ಪನ್ನ ಬರುವಂಥ ತೆಂಗು ಮತ್ತು ಅಡಿಕೆ ಮರಗಳು ಬಿದ್ದಿರುವುದರಿಂದ ಸಂಬಂಧ ಪಟ್ಟ ಕೃಷಿಕರು ಈಗಾಗಲೇ ತೋಟಗಾರಿಕಾ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದಾರೆ, ತಾಲ್ಲೂಕು ಕಛೇರಿಗೆ ಅಂದರೆ ತಹಶೀಲ್ದಾರರಿಗೆ ಅರ್ಜಿಯನ್ನು ಸಲ್ಲಿಸಿದ್ದಾರೆ ಸಂಪೂರ್ಣವಾಗಿ ನಾಶವಾದಂಥ ಮನೆಗಳಿಗೆ 10 ಸಾವಿರ ರೂಪಾಯಿಗಳ ಪರಿಹಾರ ಕೊಡುವಂಥಾದ್ದು ಬಹಳ ಹಿಂದೆ ನಿಗದಿ ಪಡಿಸಿರುವಂಥ ವ್ಯವಸ್ಥೆಯಾಗಿದೆ ಮಾನ್ಯ ಯೋಗೀಶ್ ಭಟ್‌ರವರು ಈ ಬಗ್ಗೆ ಮಾತನಾಡುವಾಗ ಮಧ್ಯೆ ಪ್ರವೇಶಿಸಿದ ಮಾನ್ಯ ಜಗದೀಶ್ ಶೆಟ್ಟರ್‌ರವರು ಪರಿಹಾರವಾಗಿ ನೀಡುವ ಈ ಹಣದ ಮೊತ್ತ double ಆಗಿದೆ ಎನ್ನುವ ಮಾತನ್ನು ಹೇಳಿದರು ತುಂಬ ಸಂತೋಷ ಆದರೆ 10 ಸಾವಿರದ ಬದಲಿಗೆ 20 ಸಾವಿರ ರೂಪಾಯಿಗಳನ್ನು ಕೊಟ್ಟರೆ ಸಾಕಾಗುವುದಿಲ್ಲ ಇವತ್ತು ಆಶ್ರಯ ಮನೆಗಳಿಗೆ 30 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ ಇವತ್ತು ಒಂದು ಸಣ್ಣ ಹೆಂಚಿನ ಮನೆಯನ್ನು ಮಾಡಬೇಕಾದರೂ ಕೂಡ 30 ಸಾವಿರ ರೂಪಾಯಿಗಳು ಸಾಕಾಗುವುದಿಲ್ಲ ಕನಿಷ್ಠವೆಂದರೂ ಸುಮಾರು 50 ಸಾವಿರ ರೂಪಾಯಿಗಳು ಬೇಕಾಗುತ್ತದೆ ಹಾಗಾಗಿ, ಸಂಪೂರ್ಣವಾಗಿ ನಾಶವಾದಂಥ ಮನೆಗಳಿಗೆ ಹೆಚ್ಚಿನ ಸಹಾಯಧನ ಸರ್ಕಾರದಿಂದ ಕೊಡಬೇಕು ಭಾಗಶಃ ನಾಶವಾದಂಥ ಮನೆಗಳಿಗೆ ಈಗಾಗಲೇ ತಹಶೀಲ್ದಾರರು 700,800,1000,1200 ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ 15 ಸಾವಿರ ರೂಪಾಯಿಗಳಷ್ಟು ನಾಶವಾದ ಮನೆಗಳಿಗೆ 2,000 ರೂಪಾಯಿಗಳ ಪರಿಹಾರವೂ ಸರ್ಕಾರದಿಂದ ಸಿಗುತ್ತಿಲ್ಲ ಇದನ್ನು ಗಮನಿಸಿ ಕಷ್ಟದಲ್ಲಿರುವ ರೈತರಿಗೆ ಕೃಷಿ ಕಾರ್ಮಿಕರಿಗೆ ಬಡ ಹನರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ನಮ್ಮ ಸರ್ಕಾರ ಪರಿಹಾರವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಕಂದಾಯ ಸಚಿವರನ್ನು ತೋಟಗಾರಿಕೆ ಮತ್ತು

ಕೃಷಿ ಸಚಿವರನ್ನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಇವತ್ತು ಭತ್ತದ ಕೃಷಿ ಬಹಳಷ್ಟು ನಾಷವಾಗಿದೆ ಬಿತ್ತನೆ ಮಾಡಿರುವಂಥ, ನಾಟಿ ಮಾಡಿರುವಂಥ ಗದ್ದೆಯಲ್ಲಿ ನೀರು ತುಂಬಿ ಅದು ಕೊಳೆತು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ತೆಂಗು ಮತ್ತು ಅಡಿಕೆ ಮರಗಳು ತುಂಬ ನಾಶವಾಗಿರುವಂಥ ರೈತರಿಗೆ ತೋಟಗಾರಿಕಾ ಇಲಾಖೆಯಿಂದ ಪರಿಹಾರ ಕೊಡಬೇಕು ಅದೇ ರೀತಿ ಬಾಳೆ ಕೃಷಿ ಮಾಡಿದಂಥ ರೈತರ ತೋಟಗಳು ಬಹಳಷ್ಟು ಹಾನಿಯಾಗಿವೆ ಅಂಥ ರೈತರಿಗೂ ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಯಿಂದ ಸೂಕ್ತವಾದಂಥ ಪರಿಹಾರವನ್ನು ಕೊಡುವಂಥ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಬೇಕೆಂದು ಈ ಸಂರ್ಭದಲ್ಲಿ ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ ಇವತ್ತು ನಮ್ಮ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಬಹಳಷ್ಟು ಅನುಕೂಲತೆಯುನ್ನು ರೈತರಿಗೆ ಒದಗಿಸಿದೆ ಪ್ರಕೃತಿ ವಿಕೋಪ ಉಂಟಾಗಿರುವಂಥ ಈ ಸಂದರ್ಭದಲ್ಲಿ ಕೂಡ ಪ್ರಕೃತಿ ವಿಕೋಪ ನಿಧಿಯಿಂದ ಸೂಕ್ತ ಪರಿಹಾರವನ್ನು ಕೊಟ್ಟರೆ ಆ ರೈತರಿಗೆ ಸ್ವಲ್ಪ ಅನುಕೂಲವಾಗಬಹುದು ಇನ್ನು ಮೆಸ್ಕಾಂಗೆ ಸಂಬಂಧ ಪಟ್ಟಂತೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ 28 T C ವಿದ್ಯುತ್ ಸ್ಥಾವರಗಳು ಕೆಟ್ಟು ಹೋಗಿವೆ ಸುಮಾರು 350 ಕಂಬಗಳು ಬಿದ್ದು ಹೋಗಿವೆ ಅವುಗಳ ದುರಸ್ಥಿ ಕೆಲಸವನ್ನು ಇನ್ನೂ ಮಾಡುತ್ತಿದ್ದಾರೆ ಬಹಳಷ್ಟು ವೇಗವಾಗಿ ಅದನ್ನು ಮಾಡಬೇಕು ನಮಗೆ T C ಗಳು ಬೇಕೆಂದು ಕೇಳಿದರೆ, ಮಂಗಳೂರಿನಲ್ಲಿ ಇಲ್ಲ, ಪುತ್ತೂರಿನಲ್ಲಿ ಇಲ್ಲ, ಉಡುಪಿಯುಲ್ಲೂ ಇಲ್ಲ ಎಂದು ಹೇಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಇಂಧನ ಸಚಿವರು ಈ ಸಂದರ್ಭದಲ್ಲಿ ಸದನದಲ್ಲಿ ಇಲ್ಲ ಅವರನ್ನು ಕೂಡ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿ ಮಡುತ್ತೇನೆ ಅಲ್ಲಿ ಆದಷ್ಟು ಬೇಗ T C ಗಳನ್ನು ಹಾಕಿಸುವಂಥ ಕೆಲಸವನ್ನು ಮಾಡಿಸಬೇಕು ಎಂದು ವಿನಂತಿ ಮಾಡುತ್ತೇನೆ ಈ ರೀತಿಯಾಗಿ ಮನೆಗಳು ಮತ್ತು ಕೃಷಿ ಉತ್ಪನ್ನಗಳು ಒಂದು ಕಡೆ ನಷ್ಟವಾಗಿದ್ದರೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿರುವಂಥ ಯಾವುದೇ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ ನಾವು ಬೆಂಗಳೂರಿಗೆ ಬರಬೇಕಿದ್ದರೆ, ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಮೂಲಕ ಬರಬೇಕು ಈ ರಸ್ತೆಯಲ್ಲಿ ಬರುವಾಗ ನಾವು ಒಂದೊಂದು ದಿನ ಶಿರಾಡಿ ಘಾಟನಲ್ಲಿ ನಿಲ್ಲುವಂಥ ಪರಿಸ್ಥಿತಿ ಬರುತ್ತದೆ ಆ ಘಾಟಿಯಲ್ಲಿ ಬಸ್ಸುಗಳೇ ಬರುವುದಿಲ್ಲ ಬಂದರೂ

ಸಹ ಲಾರಿ ಅಥವಾ ಬಸ್ಸುಗಳು ಬಿದ್ದು ಆ ಘಾಟಿ ಬ್ಲಾಕ್ ಆಗಿ ಅಲ್ಲಿ ಒಂದೊಂದು ದಿವಸ ನಿಲ್ಲುವಂಥ ಪರಿಸ್ಥಿತಿ ಇದೆ ಈ ಬಗ್ಗೆ ನಾವು ಹಿಂದೆ ಕೂಡ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ ಅಲ್ಲಿ ಒಂದು ಟ್ರಾಲಿಯನ್ನು ಇಡಬೇಕು ಎಂದು ಹೇಳಿದ್ದೇವೆ ಅಲ್ಲಿ ಬಸ್ಸುಗಳು ಅಥವಾ ಲಾರಿಗಳು ಬಿದ್ದು ರಸ್ತೆ ಬ್ಲಾಕ್ ಅದಾಗ, ಅವುಗಳನ್ನು ಎತ್ತಿ ಬದಿಗಿಡುವಂಥ ಟ್ರಾಲಿಗಳನ್ನು ಅಲ್ಲಿ ಇಡಬೇಕು ಎಂದು ಕೂಡ ಹೇಳಿದ್ದೇವೆ

ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು) ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿನಂತಿ ಇನ್ನು ಮುಂದೆ ಬಹುಶಃ ನವು ಶಿರಾಡಿ ಘಾಟ್ ರಸ್ತೆಯ ಮೂಲಕ ಹೋಗುವಂತಿಲ್ಲ ರೈಲ್ವೆ ಮಾರ್ಗವು ಎಲ್ಲವೂ ಸಂಪೂರ್ಣವಾಗಿದೆ ಅಲ್ಲಿಯೂ ರಾಜಕಾರಣವನ್ನು ಮಾಡುತ್ತಿದ್ದಾರೆ ಕನಿಷ್ಟ ಮಂಗಳೂರು-ಹಾಸನಕ್ಕೆ ಸಂಬಂಧ ಪಟ್ಟಂತೆ ಬೆಂಗಳೂರಿನಿಂದ ಒಂದು ರೈಲನ್ನು ಹೊರಡಿಸುವುದಕ್ಕೆ ಒತ್ತಡ ತಂದರೆ ನಾವು ಕನಿಷ್ಟ ರೈಲಿನಲ್ಲಾದರೂ ಬರಬಹುದು ಎಲ್ಲವೂ ಆಗಿ ಸೆಕ್ಯುರಿಟಿ ಚೆಕ್ ಕ್ಲಿಯರೆನ್ಸ್ ಆದರೂ ಕೂಡ ಯಾವುದೋ ಒಂದು ಆರ್ಥಿಕ ವಿಷಯಕ್ಕೆ ಸಂಭಂಧ ಪಟ್ಟಂತೆ ವರ್ಕ್‌ಔಟ್ ಆಗುತ್ತಿಲ್ಲವೆಂದು ಇದನ್ನು ಪೆಂಡಿಂಗ್ ಇಟ್ಟಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ ನಾವು ಇದನ್ನು ಖಂಡಿತವಾಗಿಯೂ ಬಿಡಬಾರದು ಸರ್ಕಾರ ಇದರ ಹಿಂದೆ ನಿಂತುಕೊಂಡು ತಕ್ಷಣ ರೈಲು ಓಡಾಟ ಆಗಬೇಕಡೆನ್ನುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಮತ್ತು ಯೋಜನೆಯನ್ನು ಹಾಕಿಕೊಳ್ಳುವಂತಹ ಅವಶ್ಯಕತೆ ಇದೆ ನಮಗೆ ಯಾವ ಆಶ್ವಾಸನೆಗಳೂ ಕೂಡ ಬೇಡ ಈ ರೈಲು ಓಡಾಟ ತಕ್ಷಣ ಸ್ಟಾರ್ಟ್ ಆಗಲಿ ಇಲ್ಲದೆ ಇದ್ದರೆ ನಾವುಗಳು ಯಾರು ಸದನಕ್ಕೆ ಮತ್ತು ಊರಿನಿಂದ ಬರುವವರಿಗೆ, ಇಂತಹ ಒಂದು ದುಸ್ಥಿತಿಯಾಗಿದೆ ಮೈಸೂರು-ಮಡಿಕೇರಿ ಮೂಲಕ ಬರುವ ಮಾರ್ಗ ಕೊಲ್ಯಾಪ್ಸ್ ಆಗುವುದಕ್ಕೆ ಆರಂಭವಾಗಿದೆ ಚಿಕ್ಕಮಗಳೂರು ಕಡೆಯಿಂದ ಅದೇ ರೀತಿಯ ಸಮಸ್ಯೆಗಳು ಉದ್ಭವವಾಗುತ್ತಿವೆ ಈ ಹಿನ್ನಲೆಯಲ್ಲಿ ಕನಿಷ್ಟ ಮಂಗಳೂರು-ಬೆಂಗಳೂರು ರೈಲು ಓಡಾಡುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಒತ್ತಡವನ್ನು ಹಾಕಲಿ ಎಂದು ನಾನು ಹೇಳುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗಡೆ ಮಾನ್ಯ ಅಧ್ಯಕ್ಷರೆ, ಶಿರಾಡಿ ಘಾಟ್‌ನ ಬಗ್ಗೆ ನನು ನಿನ್ನೆಯ ದಿವಸ ಮಾತನಾಡಿದೆ, ಅಲ್ಲಿ ಬರುವುದಕ್ಕಾಗುವುದಿಲ್ಲ

ಚಾರ್ಮಾಡಿ ಘಾಟ್ ಈಗ ಹಾಳಾಗಿದೆ ಈಗ ವೋಲ್ವೋ ಬಸ್‌ಗಳು ಕೂಡ ಮಡಿಕೇರಿಯ ಮಾರ್ಗವಾಗಿ ಬರುತ್ತಿವೆ ಈ ಮೂರು ರಸ್ತೆಗಳು ಬಂದ್ ಅದಾಗ ಆ ಕಡೆಯಿಂದ ಈ ಕಡೆಗೆ ಬರುವಂತಹ ಒಂದು ವ್ಯವಸ್ಥೆ ಮಾಡಬೇಕು ಇದರ ಬಗ್ಗೆ ನಾನು ಬೆಳಗಾಂನಲ್ಲಿ ನಡೆದ ಅಧಿವೇಶನದಲ್ಲಿಯೇ ಹೇಳಿರುತ್ತೇನೆ ಮಂತ್ರಿಗಳು ಬೆಳಗಾಮ್ ನಿಂದ ಹೋಗುವಾಗ ಉತ್ತರ ಕನ್ನಡದ ಮೂಲಕ ಮಂಗಳೂರು ಉಡುಪಿ ಸಕಲೇಶಪುರ ಮಾರ್ಗವಾಗಿ ಬೆಂಗಳೂರಿಗೆ ಕಳುಹಿಸಿ ಅವರು ಈ ಪರಿಸ್ಥಿತಿಯನ್ನು ನೋಡಿಕೊಂಡು ಬರಲಿ ಎಂದು ಹೇಳಿದ್ದೇನೆ ಈಗ ಪರಿಸ್ಥಿತಿ ಏನಾಗುತ್ತದೆಂದು ಗೊತ್ತಿಲ್ಲ ನಾವು ಬರುವುದಕ್ಕೆ ಒಂದು ಪರ್ಯಾಯ'ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇನೆ ಶಾಸಕರು ಬರುವುದು ಒಂದು ಕಡೆ ಇರಲಿ, ಜನರು ದಿನವೂ ಓಡಾಡುವುದಕ್ಕೆ ಬೇಕಾಗುತ್ತದೆ ದಿವಸಕ್ಕೆ 200 ಬಸ್‌ಗಳು ಹೋಗುತ್ತವೆ ಮತ್ತು ಬರುತ್ತವೆ ನಾವು ಅಲ್ಲಿಗೆ ಹೋಗುವುದೆ ಬೇಡ ಎನ್ನುತ್ತೀರಾ ಮಾನ್ಯ ಮಾಧು ಸ್ವಾಮಿಯವರೆ!

ಶ್ರೀ ಜೆ ಸಿ ಮಾಧು ಸ್ವಾಮಿ ಇಲ್ಲೆ ಇರಲಿ, ಇವರುಗಳು ಏತಕ್ಕೆ ಅಲ್ಲಿಗೆ ಹೋಗಬೇಕು? ಸಾರ್ ಒಂದು ವಿಷಯ, ನೀವು ನಮಗೆ ಹೇಳಬೇಕಲ್ಲ, ಅಜೆಂಡಾವನ್ನು ಕಳುಹಿಸುತ್ತೀರಿ, ಬಿಎಸಿ ಮೀಟಿಂಗ್‌ನ್ನು ಕರೆದು ಬೆಳಿಗ್ಗೆ ರಿಪ್ಲೈ ಮಾಡಿಸುತ್ತೇನೆಂದು ಹೇಳಿರುವುದರಿಂದ ನಾವುಗಳು ಇಲ್ಲಿ ಕಾಯುತ್ತಾ ಕುಳಿತಿದ್ದೇವೆ

ಅಧ್ಯಕ್ಷರು ಏನಾಗಿದೆ ಎಂದರೆ, ವಿರೋಧ ಪಕ್ಷದವರು ಸದನದಲ್ಲಿ ಯಾರೂ ಇಲ್ಲ ಆ ಕಾರಣದಿಂದ ರಿಪ್ಲೈ ಕೊಡಿಸುವುದಕ್ಕಾಗುತ್ತಿಲ್ಲ

ಶ್ರೀ ಜೆ ಸಿ ಮಾಧು ಸ್ವಾಮಿ ಕಾಂಗ್ರಸ್ಸಿನವರು ಸದನದಲ್ಲಿ ಇರುವುದಿಲ್ಲವೆಂಬ ಕಾರಣಕ್ಕಾಗಿಯೇ ತಾವು ಸದನವನ್ನು ಬೆಳಿಗ್ಗೆ 9-00 ಗಂಟೆಗೆ ಕರೆದಿರುವುದು ಅದರಲ್ಲಿ ನಾವುಗಳೆಲ್ಲರೂ ಭಾಗಿಗಳು ಇವತ್ತು ಅಜೆಂಡಾದಲ್ಲಿ ಉತ್ತರವೆಂದು ಸ್ಪಷ್ಟವಾಗಿ ಕೊಟ್ಟಿದ್ದೀರಿ ಅಜೆಂಡಾದಲ್ಲಿ ಬಂದಿರುವುದಕ್ಕಾಗಿಯೇ ಸೌಜನ್ಯಕ್ಕಾಗಿ ತಾವು ಆ ಸೀಟಿನಲ್ಲಿ ಕುಳಿತುಕೊಂಡು ನಮಗೆ ಹೇಳುವುದಿಲ್ಲವಲ್ಲಾ? ಇವತ್ತು ರಿಪ್ಲೈ ಮಾಡುವುದಿಲ್ಲ ಇಂತಹ ದಿವಸ ಮಾಡಿಸುತ್ತೇನೆಂದು ತಾವು ಹೇಳಬೇಕಲ್ಲ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ ಶ್ರೀ ಧರ್ಮಸಿಂಗ್ ಹಾಗು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈಗ ಅವರು ಸದನದಲ್ಲಿ ಇಲ್ಲದಿರುವಾಗ ನಾವು ಉತ್ತರವನ್ನು ಕೊಡುವುದು ಸರಿಯಾದುದಲ್ಲ ನಾವು ಕೂಡ ಅದರಲ್ಲಿ ಪಾರ್ಟಿಸಿಪೇಟ್ ಮಾಡಬೇಕಾ ಗುತ್ತದೆ ಎಂದು ಅವರುಗಳು ಕೇಳಿಕೊಂಡಿರುವುದರಿಂದ ನಾನು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿಯನ್ನು ಮಾಡಿಕೊಂಡಿದ್ದೇನೆ

ಅಧ್ಯಕ್ಷರು ಇವತ್ತು ಬೆಳಿಗ್ಗೆ ತಾನೆ ಅವರುಗಳು ಹೇಳಿದ್ದಾರೆ

ಶ್ರೀ ಜೆ ಸಿ ಮಾಧು ಸ್ವಾಮಿ ಬಿಸಿನೆಸ್ ಅಡ್ವೈಸರಿ ಮೀಟಿಂಗ್‌ಗೆ ನವುಗಳು ಸಹ ಪಾರ್ಟಿಗಳು ಅವರುಗಳು ಅಲ್ಲಿಗೆ ಹೋಗುತ್ತಾರೆಂದೆ ತಾವು 11 00 ಗಂಟೆಗೆ ಸದನವನ್ನು ಕ್ಲೋಸ್ ಮಾಡಿ ಎಂದು ನಾವು ಮಾತನಾಡಿರುವುದು

ಶ್ರೀ ಎಂ ಪಿ ಪ್ರಕಾಶ್ ಅವರುಗಳು ಹೇಳಿದರು, ಆ ಬಗ್ಗೆ ನಾವುಗಳು ಸ್ಪಷ್ಟೀಕರಣವನ್ನು ಕೇಳಬೇಕಾಗುತ್ತದೆ ದಯವಿಟ್ಟು ಇವತ್ತು ಕೂಡುವಂತಹ ಉತ್ತರವನ್ನು ಮುಂದಕ್ಕೆ ಹಾಕಿ ಆ ಬಗ್ಗೆ ಎಲ್ಲರೂ ಮಾತನಾಡಲಿ, ಸೋಮವಾರ ದಿವಸ ಉತ್ತರವನ್ನು ಕೊಡಲಿ ಎಂದು ಹೇಳಿರುವುದಕ್ಕಾಗಿಯೇ ನಾನು ವಿನಂತಿ ಮಾಡಿಕೊಂಡಿದ್ದೇನೆ ಅವರು ಇಬ್ಬರೂ ನೇರವಾಗಿ ಕೇಳಿ ಕೊಂಡಿದ್ದಾರೆ ಆ ಕಾರಣಕ್ಕಾಗಿಯೇ ಸೋಮವಾರ ಉತ್ತರವನ್ನು ಕೊಡಿಸುತ್ತೇವೆ

ಶ್ರೀ ಜೆ ಸಿ ಮಾಧು ಸ್ವಾಮಿ ತಾವು ಬಿಸಿನೆಸ್ ಅಡ್ವೈಸರಿ ಮೀಟಿಂಗ್‌ಅನ್ನು ಕರೆಯುತ್ತೀರಿ ಅಲ್ಲು ಕೂಡ ಈ ಬಗ್ಗೆ ಚರ್ಚೆಯನ್ನು ಮಾಡುತ್ತೀರಿ ಅಜೆಂಡಾವನ್ನು ಸಹ ಕೊಡುತ್ತೀರಿ ಸಭೆಯನ್ನು ಒಂದು ದಿಕ್ಕಿನಲ್ಲಿ ನಡೆಸುತ್ತೀರಿ ಏಕೆ ತಾವು ನಮ್ಮೆಲ್ಲರನ್ನು ignore ಮಾಡಿ ಸಭೆಯನ್ನು ನಡೆಸುತ್ತೀರಿ, ಈ ಬಗ್ಗೆ ನಮಗೇನು ಹೇಳುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ ತಶವು ಹೇಳುತ್ತಿರುವುದು ನಿಜ? ಇರತಕ್ಕಂತಹ ಆಸನಗಳಲ್ಲಿ ಉತ್ತರ ಕೊಡಿಸಿ ಎಂದರೆ ಏನು ಮಾಡಬೇಕಾಗುತ್ತದೆ?

ಅಧ್ಯಕ್ಷರು ಈಗ ಸದನ ನಡೆಯುತ್ತದೆಯಲ್ಲಾ? ಈಗ ಚರ್ಚೆಯು ನಡೆಯುತ್ತಿದೆ, ಅನೇಕ ಹಿಂದಿನ ಸಾಲಿನ ಹೊಸ ಸದಸ್ಯರು ಮತನಾಡುತ್ತಿದ್ದಾರೆ

ಶ್ರೀ ಜೆ ಸಿ ಮಾಧು ಸ್ವಾಮಿ ಹೊಸ ಸದಸ್ಯರು ಮತನಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ

ಶ್ರೀ ಕೆ ಪದ್ಮನಾಭ ಕೊಠಾರಿ ಮಂಗಳೂರು-ಬೆಂಗಳೂರು ರೈಲಿನ ಬಗ್ಗೆ ಜನಪ್ರತಿನಿಧಿಗಳಾದ ತಾವು ಏನು ಮಾತನಾಡಿದರೂ ಕೂಡ ಜನರು ಇವರು ರೈಲೇ ಬಿಡುತ್ತಾರೆಂದು ಹೇಳುವ ಪರಿಸ್ಥಿತಿಯಾಗಿದೆ ನಾವುಗಳು ಜನಗಳಿಗೆ ಹೇಳಿ ಹೇಳಿ ಸಾಕಾಗಿ ಹೋಗಿದೆ ಇವತ್ತು ರೈಲು ಪ್ರಾರಂಭವಾಗುತ್ತದೆ, ಜನವರಿ, ಫೆಬ್ರವರಿ, ಏಪ್ರಿಲ್‌ಗೆ ಆಗುತ್ತದೆಂದು ಜನರಿಗೆ ಹೇಳಿದರೆ, ಜನಪ್ರತಿನಿಧಿಗಳು ರೈಲು ಬಿಡುತ್ತಾರೆಂಬ ಪರಿಸ್ಥಿತಿಯಾಗಿದೆ ಹಾಗಾಗಿ ನಾವುಗಳು ಇವತ್ತು ರೈಲಿನ ಬಗ್ಗೆ ಮಾತನಾಡುವುದಿಲ್ಲ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳಿಗೆ ಅದು ಮಂಗಳೂರು-ಬೆಂಗಳೂರು ಇರಬಹುದು ಅದು National Highway ಇರಬಹುದು, ಅದಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಕೊಡಬೇಕು ಅದರ ಬಗ್ಗೆ ತಕ್ಷಣ ದುರಸ್ಥಿಯನ್ನು ಮಾಡುವಂಥಹದ್ದು ಆಗಬೇಕು ರಾಜ್ಯ ಸರ್ಕಾರದವರು ಆ ಬಗ್ಗೆ ಗಮನವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ ಇವತ್ತು ಗುಂಡಿ ಮುಚ್ಚುವಂತಹ ಕೆಲಸ ತಕ್ಷಣ ಪ್ಯಾಚ್ ಮಾಡುವಂತಹ ಕೆಲಸವನ್ನು ತಾವು ಕೈಗೊಳ್ಳಬೇಕು ಗ್ರಾಮೀಣ ಪ್ರದೇಶದ ಪಿಡಬ್ಲ್ಯೂಡಿ ರಸ್ತೆಗಳು ಇರಬಹುದು, ಜಿಲ್ಲಾ ಪಂಚಾಯತಿ ರಸ್ತೆಗಳು ಇರಬಹುದು, ಎಲ್ಲಾ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ ಯಾವ ರಸ್ತೆಯಲ್ಲಿಯೂ ವಾಹನ ಸಂಚಾರ ಮಾಡುವಂತಹ ಪರಿಸ್ಥಿತಿಯಿಲ್ಲ ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ರಸ್ತೆಯ ಅಭಿವೃದ್ಧಿಗೆ ಒಂದು ವಿಶೇಷವಾದ ಪ್ಯಾಕೇಜನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ ಈ ರೀತಿಯಾಗಿ ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬಡ ವರ್ಗದ ಜನರ ನೆರವಿಗೆ ಸರ್ಕಾರ ಬರಬೇಕು ತೋಟಗಾರಿಕೆ ಇಲಾಖೆಯಿಂದಲು ಕೂಡ ವಿಶೇಷವಾದ ಪರಿಹಾರವನ್ನು ತೋಟಗರಿಕಾ ಕೃಷಿ ರೈತರಿಗೆ

ಕೊಡಬೇಕೆಂದು ವಿನಂತಿ ಮಾಡುತ್ತೇನೆ ನನಗೆ ಈ ಒಂದು ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎನ್ ಯೋಗೀಶ್ ಭಟ್(ಮಂಗಳೂರು) ಮಾನ್ಯ ಅಧ್ಯಕ್ಷರೇ, ಕರಾವಳಿ ಜಿಲ್ಲೆಯ ಶಾಸಕರುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಕರೆದುಕೊಂಡು ನೇರವಾಗಿ ದೆಹಲಿಗೆ ಹೋಗಿ ಅಲ್ಲಿ ಒತ್ತಡವನ್ನು ಹಾಕುವಂತಹ ರೀತಿಯಲ್ಲಿ ತಾವು ಸೂಕ್ತವಾದ ನಿರ್ದೇಶನವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿಯನ್ನು ಮಾಡುತ್ತೇನೆ ಇಲ್ಲಿ ಎಲ್ಲ ತರಹದ ಒತ್ತಡಗಳು ಆಯಿತು, ನಾವುಗಳು ಅಲ್ಲಿಯೇ ಕುಳಿತುಕೊಳ್ಳುತ್ತೇವೆ ಧರಣಿಯನ್ನು ಮಾಡುತ್ತೇವೆ ನಮಗೆ ಸ್ಯಾಂಕ್ಷನ್ ಆಗಿ ರೈಲು ಓಡಾಡುವ ತನಕ ನಾವುಗಳು ಖಂಡಿತವಾಗಿ ಧರಣಿಯನ್ನು ಮಾಡುವುದಕ್ಕೆ ತಯಾರಿದ್ದೇವೆ ಈ ಹಿನ್ನೆಲೆಯಲ್ಲಿ ತಾವು ದಯವಿಟ್ಟು ಒಂದು ಡೆಲಿಗೇಷನ್ ಹೋಗುವಂತಹ ನಿಟ್ಟಿನಲ್ಲಿ ತಾವು ಸೂಕ್ತ ನಿರ್ದೇಶನವನ್ನು ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ

ಶ್ರೀ ಎಂ ಪಿ ಕುಮಾರಸ್ವಾಮಿ (ಮೂಡಿಗೆರೆ) ಮಾನ್ಯ ಅಧ್ಯಕ್ಷರೆ, ಇವತ್ತು ಸದನದಲ್ಲಿ ಅತಿವೃಷ್ಟಿಯ ಬಗ್ಗೆ ಚರ್ಚೆಯಾಗುವಂತಹ ಕಾಲದಲ್ಲಿ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಮಳೆಯಿಂದ ಹಾನಿಯಾಗಿರುವಂತಹ ಪ್ರದೇಶಗಳು ಯಾವುದು ಎಂದು ತಮಗೆ ಗೊತ್ತಿದೆ ಈ ಕೊಟ್ಟಿಗೆ ಹಾರ-ಆಗುಂಬೆ-ಭಾಗಮಂಡಲ ಎಂದು ಈಗಾಗಲೇ ಗೊತ್ತಾಗಿದೆ ಈ ಕೊಟ್ಟಿಗೆಹಾರ ಎನ್ನುವಂತಹ ಪ್ರದೇಶ, ನನ್ನ ಮೂಡಿಗೆರೆ ಕ್ಷೇತ್ರದಲ್ಲಿರುವುದರಿಂದ ಇಲ್ಲಿ ಈ ವರ್ಷ ಅತ್ಯಧಿಕ ಮಳೆಯಾಗಿದೆ ಈಗಾಗಲೇ ವಾಡಿಕೆ ಮಳೆಗಿಂತ ಹೆಚ್ಚು ಎಂದರೆ ಒಂದೇ ತಿಂಗಳಲ್ಲಿ 50 ಮಿಲಿ ಮೀಟರಿಗಿಂತ ಕಳೆದ 20 ದಿವಸಗಳಲ್ಲಿ 828 6 ಮಿಲಿಮೀಟರ್ ಮಳೆಯಾಗಿದೆ ಈ ತಾಲ್ಲೂಕಿನ ಉದ್ದಗಲಕ್ಕೂ ಹೆಚ್ಚು ಮಳೆಯಾಗಿರುವುದರಿಂದ ನಮ್ಮ ಒತ್ತಾಯವೇನೆಂದರೆ, ಇಲ್ಲಿ ಯಾವುದೇ ತರಹದ ಬೆಳೆಯನ್ನು ಬೆಳೆಯುವುದಕ್ಕಾಗುತ್ತಿಲ್ಲ ಇದನ್ನು ಅತಿವೃಷ್ಟಿ ಪ್ರದೇಶವೆಂದು ಘೋಷಣೆಯನ್ನು ಮಾಡಬೇಕು ಈ ಅತಿವೃಷ್ಟಿ ಪ್ರದೇಶಕ್ಕೆ ವಿಶೇಷವಾದ ಪ್ಯಾಕೇಜನ್ನು ಕೂಡ ಸರ್ಕಾರ ಘೋಷಣೆಯನ್ನು ಮಾಡಬೇಕು

ಅತಿವೃಷ್ಟಿಯಾದ ನಮ್ಮ ಪ್ರದೇಶಗಳಲ್ಲಿ ಪ್ರಮುಖವಾದ ವಾಣಿಜ್ಯಬೆಳೆ ಏಲಕ್ಕಿಯಾಗಿದೆ ಆ ಬೆಳೆಗೆ ಇವತ್ತಿಗೂ ಕೂಡ ಅಲ್ಲಿ ಕೂಲಿ ಹುಟ್ಟುವುದಿಲ್ಲ ಆ ಒಂದು ಬೆಳೆಯನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಿದ್ದೇ ಮೊದಲು ಕೆ ಜಿ ಗೆ 600 ರೂಪಾಯಿಗಳು ಇತ್ತು ಯಾವುದೋ ಒಂದು ಸಂದರ್ಭದಲ್ಲಿ 500 ರೂಪಾಯಿ ಇತ್ತು ಈಗ ವಾಣಿಜ್ಯ ಬೆಳೆ ಏಲಕ್ಕಿ 180–200 ರೂಪಾಯಿಗಳು ಇದೆ ಇದರಿಂದಾಗಿ ನಮ್ಮ ರೈತರು ಕಾಫಿಯನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು ಆದರೆ ಅಲ್ಲಿ ಅತಿವೃಷ್ಟಿ ಪ್ರದೇಶವಾಗಿರುವುದರಿಂದ ವಾಡಿಕೆಗಿಂತ ಹೆಚ್ಚು ಮಳೆಯಾಗಿರುವುದರಿಂದ ಅಲ್ಲಿ ಕಾಫಿಯೂ ಕೂಡ ಹಾಕುತ್ತಿಲ್ಲ ಕಾಫಿ ಹಾಗೂ ಏಲಕ್ಕಿಯಾಗಲಿ, ಬಾಳೆಯಾಗಲಿ, ಯಾವುದನ್ನು ಕೂಡ ಬೆಳೆಯುವುದಕ್ಕಾಗುತ್ತಿಲ್ಲ ಆಗಲೇ ಎಲ್ಲವೂ ಕೊಳೆತು ಹೋಗಿದೆ ಈ ನಿಟ್ಟಿನಲ್ಲಿ ಸರ್ಕಾರವು ಒಂದು ವಿಶೇಷವಾದ ತಂಡವನ್ನು ಮಾಡಿ ಅಲ್ಲಿ ಯಾವ ಬೆಳೆಯನ್ನು ಬೆಳೆಯಬೇಕಾಗುತ್ತದೆ, ಅಲ್ಲಿ ಯಾವ ಬೆಳೆ ಬೆಳೆದರೆ ಬರುತ್ತದೆ ಎಂಬ ಬಗ್ಗೆ ವರದಿಯನ್ನು ಮಾಡಿ ಆ ಪ್ರದೇಶಕ್ಕೆ ಅನುಗುನವಗಿ ಬೆಳೆಯನ್ನು ಬೆಳೆಯುವ ಬಗ್ಗೆ ಸರ್ಕಾರದವರು ಒಂದು ತಜ್ಞರ ಸಲಹೆಯನ್ನು ಪಡೆದು ತಮಡವನ್ನು ನೇಮಕ ಮಡಿ ರೈತರಿಗೆ ಸಲಹೆಯನ್ನು ಕೊಡಬೇಕಾಗುತ್ತದೆ ಅತಿವೃಷ್ಟೀ ಪ್ರದೇಶಗಳಲ್ಲಿರತಕ್ಕಂಥ ಚಾರ್ಮುಡಿಘಾಟ್ ಮೂಲಕ ಕಡೂರು ಮಂಗಳೂರು ರೋಡ್ ಇದೆ ಆ ರಸ್ತೆಯಲ್ಲಿ ಯಾವುದೇ ವಾಹನಗಳು ಕೂಡ ಚಲಿಸವ ಹಾಗಿಲ್ಲ ಶಿರಾಡಿ ಘಾಟ್ ಬ್ಲಾಕ್ ಆಗಿದೆ ಈ ರಸ್ತೆಯಲ್ಲಿ ವಾಹನಗಳನ್ನು ಬಿಡುತ್ತಿದ್ದಾರೆ ಈ ಮಳೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಯವುದೇ ಲಾರಿಗಳನ್ನು ಅಲ್ಲಿ ಬಿಡಲೇಬಾರದು ಎಂಬ ಬಗ್ಗೆ ಸರ್ಕಾರದವರು ಒಮುದು ಆದೇಶವನ್ನು ಹೊರಡಿಸಬೇಕಾಗುತ್ತದೆ ಈ 2 ರಿಂದ 4 ತಿಂಗಳಿಗಾದರೂ ಕೂಡ ಅದನ್ನು ತಡೆಯಬೆಕಗುತ್ತದೆ ಈಗಾಗಲೇ ಅನೇಕ ಕರಾವಳಿಯ ಶಾಸಕರುಗಳು ಕೂಡ ನಮ್ಮ ಶಿರಾಡಿಘಾಟ್ ಬಗ್ಗೆ ಹೇಳಿದರು ಈ ಮಾರ್ಗದಿಂದಲು ಕೂಡ ಬರುವುದಕ್ಕಾಗುತ್ತಿಲ್ಲ ಸಾರ್ವಜನಿಕರಿಗೆ ಮತ್ತು ಶಾಸಕರಿಗೆ, ಯಾರಿಗೂ ಬರುವುದಕ್ಕೆ ಆಗದೇ ಇರುವಂತಹ ವಾತಾವರಣ ಇರುವುದರಿಂದ ಆ ಮೈನಿಂಗ್ ಲಾರಿಯನ್ನು ಈ 2 ತಿಂಗಳ ಮಟ್ಟಿಗಾದರೂ 3 ತಿಂಗಳು ಮಳೆ ಕಳೆಯುವ ತನಕ ನಿಲ್ಲಿಸಬೇಕಾಗುತ್ತದೆ ಮಲೆನಾಡು ಭಾಗದ ರಸ್ತೆಗಳಿಗೆ ವಿಶೇಷವಾದ ಒತ್ತನ್ನು ಕೊಟ್ಟು ಆ ಒಂದು ಮಳೆಯ ವಾತಾವರಣದ ಗುಣಮಟ್ಟಕ್ಕೆ ಅನುಗುಣವಾಗಿ ರಸ್ತೆಗಳನ್ನು

ಮಾಡಬೇಕಾಗುತ್ತದೆ ಇಲ್ಲದಿದ್ದರೆ ರಸ್ತೆಗಳು ಉಳಿಯುವುದಿಲ್ಲ ಈಗ ಏನು ಕಾಂಕ್ರಿಟ್ ರಸ್ತೆ ಮಾಡಿದರೆ ಆ ಭಾಗದಲ್ಲಿ ರಸ್ತೆಗಳು ಉಳಿಯುತ್ತವೆ ಕಳೆದ 2–3 ವರ್ಷಗಳಿಂದ ಆ ರಸ್ತೆಗಳ ಬಗ್ಗೆ ಗಮನವನ್ನು ಕೊಟ್ಟಿರುವುದಿಲ್ಲ ಅತಿ ಹೆಚ್ಚು ಮಳೆಯಾಗಿರುವುದರಿಂದ ರಸ್ತೆಗಳು ಕೊಚ್ಚಿಕೊಂಡು ಹೋಗಿವೆ ಪರಿಹರದ ಮೊತ್ತ ಹೆಚ್ಚಾಗಬೇಕು ಬರೀ 200–300 ರೂಪಾಯಿಗಳ ಪರಿಹಾರದ ಮೊತ್ತವನ್ನು ಕೊಡುವುದರಿಂದ ನಮಗೆ ಅವಮಾನವಾಗುತ್ತದೆ, ಪೂರ್ತಿ ಮನೆಯನ್ನು ಕಳೆದುಕೊಂಡವನಿಗೆ 500 ರೂಪಾಯಿಗಳನ್ನು ಕೊಡುವಂತಹ ಬಗ್ಗೆ ಸರ್ಕಾರದಲ್ಲಿ ಕಾನೂನುಗಳು ಇವೆ ದಯವಿಟ್ಟು ಆ ಕಾನೂನುಗಳು ಬದಲಾವಣೆಯಾಗಬೇಕು ಮತ್ತೆ ಹಾಕಿರುವಂತಹ ಭತ್ತದ ಸಸಿಗಳು ಎಲ್ಲವು ಕೊಚ್ಚಿಕೊಂಡು ಹೋಗಿದೆ ಅವರೆಲ್ಲರಿಗೂ ಸೂಕ್ತವಾದ ಪರಿಹಾರವನ್ನು ಕೊಡಬೇಕು ನನ್ನ ವಿಶೇಷವಾದ ಬೇಡಿಕೆ ಏನೆಂದರೆ ಮಲೆನಾಡು ಭಾಗದ ಹೆಚ್ಚು ಮಳೆ ಬೀಳುವಂತಹ ಕೊಟ್ಟಿಗೆ ಹಾರ ಮತ್ತು ಆ ಪ್ರದೇಶಕ್ಕೆ ಹೊಂದಿಕೊಂಡಂತೆ ಸಕಲೇಶಪುರ ತಾಲ್ಲೂಕಿನವರಿಗೂ ಕೂಡ ಅತಿವೃಷ್ಟಿ ಪ್ರದೇಶವೆಂದು ಘೋಷಣೆ ಮಡಬೇಕು ಅತಿವೃಷ್ಟಿ ಪ್ರದೇಶವೆಮುದರೆ ಚಿರಾಪುಂಜಿಯಲ್ಲಿ ಏನು ಮಳೆ ಸುರಿಯುತ್ತದೆ ಆಗುಂಬೆಯಲ್ಲಿ ಮಳೆ ಸುರಿಯುತ್ತದೆ ಭಾಗಮಂಡಲದಲ್ಲಿ ಮಳೆ ಸುರಿಯುತ್ತದೆ, ಅಷ್ಟೇ ಪ್ರಮಾಣದ ಮಳೆ ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದಲ್ಲೂ ಸುರಿಯುತ್ತದೆ ಅಲ್ಲಿ ಯಾವುದೇ ತರಹದ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ ದಯಮಾಡಿ ತಾವು ಅಲ್ಲಿಗೆ ತಜ್ಞರ ಸಮಿತಿಯನ್ನು ಕಳುಹಿಸಿ, ತಲಾ ಒಬ್ಬ ರೈತನ ವರಮಾನವನ್ನು ಪತ್ತೆ ಹಚ್ಚಿ ನೋಡಬೆಕು ಏಕೆ ವರಮಾನ ಜಾಸ್ತಿಯಾಗಿಲ್ಲವೆಂದು ಕೇಳಿನೋಡಿ ಈ ಅತೀ ವೃಷ್ಟಿಯೇ ಕಾರಣವಾಗಿದೆ ಇದನ್ನು ಅತಿವೃಷ್ಟಿ ಪ್ರದೇಶವೆಂದು ಘೋಷಣೆ ಮಾಡಬೇಕು ವಿಶೇಷವಾಗಿ ಕೃಷಿ ರಸ್ತೆಗೆ ಮತ್ತು ಬೆಳೆಗಳಿಗೆ ವಿಶೇಷ ಒತ್ತನ್ನು ಕೊಟ್ಟು ಪರಿಹಾರವನ್ನು ಕೊಡುವುದರ ಬಗ್ಗೆ ಮತ್ತು ಬೇರೆ ಪರ್ಯಾಯ ಬೆಳೆಯನ್ನು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ ಈಗಾಗಲೇ ಸಾಕಷ್ಟು ವಿದ್ಯುತ್‌ಕಂಬಗಳು, ಮನೆಗಳು ಕೆರೆಕೋಡಿಗಳು ಕಟ್ಟಾಗಿದೆ ಇವುಗಳಿಗೆಲ್ಲಾ ವಿಶೇಷ ಪರಿಹಾರವನ್ನು ಈ ಸಂದರ್ಭದಲ್ಲಿ ಸರ್ಕಾರವು ಘೋಷಣೆ ಮಾಡಬೇಕೆಂದು ಒತ್ತಾಯ ಮಾಡುತ್ತಾ ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ

ಶ್ರೀ ದೊಡ್ಡನಗೌಡ ಹನುಮನ ಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕಾಗಿ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ ಭಾಗಲ ಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ವಿಶೇಷವಾಗಿ ಕಳೆದ 40 ವರ್ಷಗಳಲ್ಲಿ ಆಗದೆ ಇರುವಂಥಹ ಒಂದು ಮಳೆಯು ಬಂದಿದ್ದರಿಂದ, ಇವತ್ತು ಹುನಗುಂದ ಹಾಗೂ ಇಳಕಲ್ ನಗರದ ಜನತೆಯು ಆಶ್ರಯ ಕಾಲೋನಿ ಮತ್ತು ನೇಕಾರರ ಕಾಲೋನಿಯಲ್ಲಿ ನೀರು ಹುಕ್ಕಿ ಅಲ್ಲಿಯ ಕೊಳಚೆ ಪ್ರದೇಶಗಳಲ್ಲಿ ಕೂಡ ನೀರು ಆವರಿಸಿ ಅಲ್ಲಿಯ ಜನರಿಗೆ ವಾಸ ಮಾಡುವುದಕ್ಕೂ ಕೂಡ ಯೋಗ್ಯತೆ ಇರಲಾರದಂತಹ ಒಂದು ಪರಿಸ್ಥಿತಿ ಇವತ್ತು ಅಲ್ಲಿ ನಿರ್ಮಾಣವಾಗಿದೆ ಏಕೆಂದರೆ ಸಾಕಷ್ಟು ಜನರು ಬಡ ರೈತರು, ಕೂಲಿ ಕಾರ್ಮಿಕರು, ನೇಕಾರರು, ವಾಸ ಮಾಡುತ್ತಿರುವ ಪ್ರದೇಶವಾಗಿದ್ದರಿಂದ ಹಳ್ಳದ ದಂಡೆಯ ಮೇಲಿರುವಂತಹ ಎಲ್ಲಾ ಗುಡಿಸಲುಗಳು ಕೂಡ ಇವತ್ತು ಮಳೆಯು ಹಾನಿಯಲ್ಲಿ ರಭಸಕ್ಕೆ ಕೊಚ್ಚಿಹೋಗಿವೆ ಅಲ್ಲಿ ಜನಜೀವನವು ಅಸ್ತವ್ಯಸ್ತಗೊಂಡು ಸಾವಿರಾರು ಕುಟುಂಬಗಳು ನಿರ್ಗತಿಕರಾದಂತಹ ಪ್ರಸಂಗಗಳು ಇವತ್ತು ಹುನಗುಂದ ಮತ್ತು ಇಳಕಲ್ ನಗರದಲ್ಲಿ ಸಂಭವಿಸಿವೆ ಆದ್ದರಿಂದ ಅವರಿಗೆ ವಿಶೇಷವಾಗಿ ಆಶ್ರಯ ಮನೆಗಳನ್ನು ಮಂಜೂರು ಮಾಡಿಕೊಡುವುದಲ್ಲದೆ ಸುಮಾರು ಸಾವಿರಕ್ಕಿಂತಲೂ ಹೆಚ್ಚು ಮನೆಗಳನ್ನು ಇವತ್ತು ಇಳಕಲ್ ಹಾಗೂ ಹುನಗುಂದ ನಗರಗಳಲ್ಲಿ ಕೊಡಬೇಕಾಗಿದೆ ಅದು ಅಲ್ಲದೆಯೇ ಈ ಒಂದು ಮಹಾಪೂರದಲ್ಲಿ ಗ್ರಾಮಾಂತರ ಪ್ರದೇಶದ ರೈತರ ಹೊಲಗದ್ದೆಗಳಿಗೂ ಕೂಡ ಈ ನೀರು ನುಗ್ಗಿ ಅವರು ಭಿತ್ತಿಕೊಂಡ ಬೀಜಗಳು ಕೊಚ್ಚಿಕೊಂಡು ಹೋಗಿವೆ ಇವತ್ತು ಅಲ್ಲಿ ಫಲವತ್ತಾದ ಮಣ್ಣು ಕೂಡ ಕೊಚ್ಚಿಕೊಂಡು ಹೋಗಿರುವುದರಿಂದ ರೈತರ ಒಡ್ಡುಗಳು ಕೂಡ ಒಡೆದುಹೋಗಿವೆ ಜಲಾನಯನ ಇಲಾಖೆಯಿಂದ ಮತ್ತು ಅಗ್ರಿಕಲ್ಚರ್ ಇಲಾಖೆಯಿಂದ ಈ ಒಂದು ಕೆಲಸವನ್ನು ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ ಇವತ್ತು ಕೃಷ್ಣಾ ಮತ್ತು ಮಲಪ್ರಭ ನದಿಯ ಪ್ರವಾಹದಲ್ಲಿ ಪ್ರತಿ ವರ್ಷವೂ ಕೂಡ ಕಳೆದ 2 ವರ್ಷಗಳಿಂದಲೂ ಕೂಡ ನಮ್ಮ ಭಾಗದ ಜನರು ಸುಮಾರು 16 ರಿಂದ 17 ಹಳ್ಳಿಯ ಜನರಿಗೆ ಬಹಳ ತೊಂದರೆಯಾಗುತ್ತಿದೆ ನಾರಾಯಣಪುರ ಹಿನ್ನೀರಿನಲ್ಲಿ ಈ ಒಂದು ಹಳ್ಳಿಗಳನ್ನು ತೋಡಿಗೆಯಿಂದ ಕಟಗೂರಿನಿಂದ ಹಿಡಿದು ದನ್ನೂರಿನವರೆಗೂ ಈ ಗ್ರಾಮಗಳನ್ನು ಮುಳುಗಡೆ ಪ್ರದೇಶವೆಂದು ಘೋಷಣೆ

ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಈ ಒಂದು ಮಳೆಯ ಆರ್ಭಟಕ್ಕೆ ಇವತ್ತು ನಮ್ಮ ತಾಲ್ಲೂಕಿನಲ್ಲಿ ಅದು ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ 22 ಕೆ ವಿ ಟ್ರಾನ್ಸ್‌ಫಾರ್ಮರ್ಸ್‌ಗಳು ಸುಟ್ಟಿರುವುದಲ್ಲದೆ ಅನೇಕ ವಿದ್ಯುತ್ ಕಂಬಗಳು ಇವತ್ತು ನೆಲದ ಮೇಲೆ ಮಲಗಿಕೊಂಡಿದೆ ಅದು ಅಲ್ಲದೆ ನಮ್ಮ ಬೆಳೆಗಳು ಕೂಡ ಸಾಕಷ್ಟು ಹಾನಿಯಾಗಿವೆ ಈಗ ನಾವು ಕೊಡತಕ್ಕಂತಹ ಪರಿಹಾರ ಬಹಳ ಕಡಿಮೆ ಯಾಗುತ್ತದೆಂದು ನನ್ನ ಭಾವನೆಯಾಗಿದೆ ಈ ಒಂದು ಪರಿಹಾರವನ್ನು ಎರಡು ಪಟ್ಟು ಹೆಚ್ಚು ಮಾಡಿ ಸರ್ಕಾರ ಕೊಡಬೇಕು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ಅನುಕೂಲವನ್ನು ಮಾಡಿಕೊಡಬೇಕು ಬಡ ಕುಟುಂಬದವರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ ನನಗೆ ಮಾತನಾಡುವುದಕ್ಕಾಗಿ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಈಗ ಯಾರಾದರೂ ಮಾತನಾಡುವವರು ಇದ್ದಾರೆಯೇ? ಈಗ ಚರ್ಚೆಯನ್ನು ಮುಕ್ತಾಯ ಮಾಡಲಾಗಿದೆ ಉತ್ತರವನ್ನು ಸೋಮವಾರ ಸಂಬಂಧ ಪಟ್ಟ ಮಾನ್ಯ ಮಂತ್ರಿಗಳು, ಮಾನ್ಯ ಮುಖ್ಯ ಮಂತ್ರಿಗಳು ಕೊಡುತ್ತಾರೆ ಈಗ ಬೇಡಿಕೆಗಳನ್ನು ಮಂಡನೆ ಮಾಡಬೇಕಾಗಿದೆ ಎಲ್ಲಾ ಮಾನ್ಯ ಮಂತ್ರಿಗಳು ಇದ್ದ ಹಾಗೆ ಇಲ್ಲ ಆದ್ದರಿಂದ ಸೋಮವಾರ ಏನು ಈ ಬೇಡಿಕೆಗಳನ್ನು ಯಾವುದು ಇವೆ, ಕಾರ್ಯಕಲಾಪದ ಪಟ್ಟಿಯಲ್ಲಿ ಇರುವಂಥಹ ಎಲ್ಲಾ ಸಚಿವರು ಸದನದಲ್ಲಿದ್ದು ಈ ಬೇಡಿಕೆಗಳ ಮಂಡನೆಯನ್ನು ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ ಈಗ ಖಾಸಗಿ ಸದಸ್ಯರ ಕಾರ್ಯಕಲಾಪ ಇದೆಯಲ್ಲಾ ಇದರಲ್ಲಿ ತಾವು ಏನಾದರೂ ಭಾಗವಹಿಸುತ್ತೀರೋ ಆ ಬಗ್ಗೆ ಹೇಳಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಾನು ಭಾಗವಹಿಸುತ್ತೇನೆ ಖಾಸಗಿ ನಿರ್ಣಯದ ಬಗ್ಗೆ

ಶ್ರೀ ಜೆ ಸಿ ಮಾಧು ಸ್ವಾಮಿ ಅಧ್ಯಕ್ಷರೆ, I am on a point of order ಸಭೆಯನ್ನು ಮುಕ್ತಾಯ ಮಾಡಲಾಗಿದೆ ಎಂದು ರೆಕಾರ್ಡ್‌ನಲ್ಲಿ ಹೋಗಿದೆ

ಅಧ್ಯಕ್ಷರು ಸಭೆಯನ್ನು ಮುಕ್ತಾಯ ಮಾಡಿದ್ದೇನೆಂದು ಹೇಳಿಲ್ಲ

ಶ್ರೀ ಜೆ ಸಿ ಮಾಧು ಸ್ವಾಮಿ ತಾವು ಸಭೆಯನ್ನು ಮುಕ್ತಾಯ ಮಾಡಿದ್ದೇನೆಂದು ಅನೌನ್ಸ್ ಮಾಡಿದಿರಿ

ಅಧ್ಯಕ್ಷರು ನಾನು ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆಂದು ಮಾತ್ರ ಹೇಳಿದೆ

ಶ್ರೀ ಜೆ ಸಿ ಮಾಧು ಸ್ವಾಮಿ ತಾವು ಮುಕ್ತಾಯ ಮಾಡಿದ್ದೇನೆಂದು ಹೇಳಿ ಸೋಮವಾರ ಉತ್ತರ ಎಂದು ಹೇಳಿದ್ದೀರಿ, ಸೋಮವಾರ ಬೆಳಿಗ್ಗೆ ರಿಪ್ಲೈ ಎಂದು ಹೇಳಿದ್ದೀರಿ

ಅಧ್ಯಕ್ಷರು ಚರ್ಚೆಯು ಮುಕ್ತಾಯವಾಗಿದೆ, ಅದಾದ ಮೇಲೆ ಖಾಸಗಿ ಸದಸ್ಯರ ನಿರ್ಣಯ ಇದೆಯಲ್ಲ?

ಶ್ರೀ ಜೆ ಸಿ ಮಾಧು ಸ್ವಾಮಿ ಸಭೆಯನ್ನು ಮುಕ್ತಾಯ ಮಾಡಿದ್ದೇನೆಂದು ಹೇಳಿದ್ದೀರಿ, ನೋಡಿ ಚೆಕ್ ಮಾಡಿ

ಅಧ್ಯಕ್ಷರು ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆಂದು ಹೇಳಿದ್ದೇನೆ

ಶ್ರೀ ಜೆ ಸಿ ಮಾಧು ಸ್ವಾಮಿ ಇಲ್ಲ, ನಮ್ ಕಿವಿ ಸ್ವಲ್ಪ ಚೆನ್ನಾಗಿದೆ

ಅಧ್ಯಕ್ಷರು ಚರ್ಚೆಯನ್ನು ಮುಕ್ತಾಯ ಮಾಡಲಾಗಿದೆ ಎಂದು ಹೇಳಿದ್ದೇನೆ ಈಗ ಏನೆಂದರೆ ತಾವು ತೆಗೆದುಕೊಳ್ಳೋಣವೆಂದರೆ ತೆಗೆದುಕೊಳ್ಳೋಣ ಇಲ್ಲದೆ ಇದ್ದರೆ 11–00 ಗಂಟೆಯಾಗಿದೆ ಸಭೆಯನ್ನು ಅಡ್ಜರ್ನ್ ಮಾಡೋಣ ಈ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಜೆ ಸಿ ಮಾಧು ಸ್ವಾಮಿ ಚರ್ಚೆಯನ್ನು ಮುಕ್ತಾಯ ಮಾಡಿದ್ದರೆ ಆ ಬಗ್ಗೆ ನಮ್ಮ ತಕರಾರು ಇಲ್ಲ

ಅಧ್ಯಕ್ಷರು ಇಲ್ಲ ನಾನು ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಇಲ್ಲ, ಮುಂದಕ್ಕೆ ಹಾಕಿದರೆ ನಮ್ಮದೇನೂ ಅಭ್ಯಂತರ ಇಲ್ಲ

ಶ್ರೀ ಜೆ ಸಿ ಮಾಧು ಸ್ವಾಮಿ ಇಲ್ಲ ಸಾರ್, ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆಯನ್ನು ಮುಗಿಸಬೇಕು ಎರಡು ವರ್ಷಗಳಿಂದ ಓದಿ, ಓದಿ ಅಜೆಂಡಾದಲ್ಲಿ ನಾವು ಸೋತುಬಿಟ್ಟಿದ್ದೇವೆ

ಶ್ರೀ ವಾಟಾಳ್ ನಾಗರಾಜ್ ಆಯಿತು ಸರ್, ಮಾತನಾಡಬೇಡಿ ಎಂದು ಹೇಳಿದರೆ ನಾನು ಕುಳುತುಕೊಳ್ಳುತ್ತೇನೆ ಈಗ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ ಮುಗಿಸಿಬಿಡಿ

ಶ್ರೀ ಜೆ ಸಿ ಮಾಧು ಸ್ವಾಮಿ ನಮ್ಮದು ಬೆರೆ ವಿಷಯಗಳು ಚರ್ಚೆ ಮಾಡುವುದಕ್ಕೆ ಇವೆ

ಅಧ್ಯಕ್ಷರು ಇದನ್ನು ಮುಗಿಸಿಬಿಡೋಣ

ಶ್ರೀ ವಾಟಾಳ್ ನಾಗರಾಜ್ ಮುಗಿಸಿ

ಶ್ರೀ ಜೆ ಸಿ ಮಾಧು ಸ್ವಾಮಿ ಒಂದು ವಿಷಯ ಅಜೆಂಡಾದಲ್ಲಿ ಎಷ್ಟು ದಿವಸ ಬರಬಹುದು ಸಾರ್? ನಾವು ಯಾರು ಬೇರೆ ವಿಷಯಗಳನ್ನು ಕೊಡುವ ಹಾಗಿಲ್ಲ 2 ವರ್ಷಗಳಿಂದ ಖಾಸಗಿ ಮೆಂಬರ್‌ಗಳ ನಿರ್ಣಯ ಒಂದೇ ಒಂದು ಬರುತ್ತಿದೆ ದಯಮಾಡಿ ನಾವೆಲ್ಲರೂ ಕುಳಿತಿರುತ್ತೇವೆ ತಾವು ಇದನ್ನು ಮುಗಿಸಿಕೊಡಬೇಕು ಇನ್ನೊಂದು ದಿವಸ ನನಗೆ ಕೊಡಬೇಕು

ಅಧ್ಯಕ್ಷರು ಇರಲಿ, ಒಂದು ಅವಕಾಶವನ್ನು ಕೊಟ್ಟು, ಇದನ್ನು ಮುಂದಿನ ವಾರ ಮುಗಿಸೋಣ

ಶ್ರೀ ವಾಟಾಳ್ ನಾಗರಾಜ್ ನೀವಿಬ್ಬರು ಏತಕ್ಕಾಗಿ ಹೀಗೆ ಆಡುತ್ತೀರಿ? ಒಳ್ಳೆಯ ಕಥೆಯಾಯಿತಲ್ಲಾ? ನಾನು ಆ ಬಗ್ಗೆ ಇನ್ನು ಒಂದು ಗಂಟೆಗಳ ಕಾಲ ಮಾತನಾಡಬೇಕಾಗಿದೆ

ಶ್ರೀ ಜೆ ಸಿ ಮಾಧು ಸ್ವಾಮಿ ನಾವು ಇವತ್ತು ಇರುತ್ತೇವಲ್ಲಾ?

ಶ್ರೀ ವಾಟಾಳ್ ನಾಗರಾಜ್ ನಿಮ್ಮದು ಒಳ್ಳೆಯ ಕಾಟ

ಶ್ರೀ ಜೆ ಸಿ ಮಾಧು ಸ್ವಾಮಿ ನಾವು ಅವರ ಮಾತುಗಳನ್ನು ಕೇಳುವುದಕ್ಕೆ ಇಲ್ಲಿ ಕುಳಿತಿರುತ್ತೇವೆ

ಅಧ್ಯಕ್ಷರು ಏನು ಈ ಖಾಸಗಿ ಸದಸ್ಯರ ನಿರ್ಣಯ ಇದೆಯಲ್ಲಾ, ಇದು ಬಹಳ ಮುಖ್ಯವಾದ ನಿರ್ಣಯವಾಗುದೆ ಇಡೀ ನಮ್ಮ ಸಮಾಜದ ವ್ಯವಸ್ಥೆಯೇ ಏರು ಪೇರು ಮಾಡುತ್ತಿರುವಂಥಹ ನಿರ್ಣಯವಾಗಿದೆ

ಶ್ರೀ ಜೆ ಸಿ ಮಾಧು ಸ್ವಾಮಿ ನಾವು ಅವರಿಗೆ ಮಾತನಾಡಿ ಮುಗಿಸಿ ಎಂದು ಹೇಳುತ್ತಿದ್ದೇವೆ

ಅಧ್ಯಕ್ಷರು ನಾನು ಹೇಳುವುದೇನೆಂದರೆ

ಶ್ರೀ ವಾಟಾಳ್ ನಾಗರಾಜ್ ನಾನು ಅದರ ಬಗ್ಗೆ ಸುದೀರ್ಘವಾಗಿ ಬಹಳ ಮಾತನಾಡಬೇಕಾಗಿದೆ ನಮ್ಮ ಸ್ನೇಹಿತರುಗಳು ಅನೇಕರು ಮಾತನಾಡಬೇಕಾಗಿದೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ ನಾವು ಇಲ್ಲಿ ಕುಳಿತಿರುತ್ತೇವೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಬೇಕು

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೇ, ಏನು ಅವರಿಬ್ಬರೂ ನಿಮ್ಮ ಮೇಲೆ ಎರಗಿಕೊಂಡುಬಿಟ್ಟರಲ್ಲಾ?

ಶ್ರೀ ವಾಟಾಳ್ ನಾಗರಾಜ್ ತಾವು ನನಗೆ ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ ನನ್ನದೇನು ಅಡ್ಡಿ ಇಲ್ಲ

ಅಧ್ಯಕ್ಷರು ಆಯಿತು, ತಾವು ಮಾತನಾಡಿ ಈಗ 11 00 ಗಂಟೆಯುವರೆಗೆ ಸದನವು ನಡೆಯುಬೇಕಾಗಿತ್ತು ಬೇಕಾದರೆ ಮುಂದುವರೆಸೋಣ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಇವರು ಮಾತನಾಡಬೇಕು, ನಾವು ಇವರು ಮಾತನಾಡುತ್ತಾರೆಂದು ಕಾಯ್ದುಕೊಂಡು ಕೂರುವುದಕ್ಕಾಗುವುದಿಲ್ಲ

ಅಧ್ಯಕ್ಷರು ಆಯಿತು ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ ಇವರಿಬ್ಬರ ಕಾಟ ಜಾಸ್ತಿಯಾಯಿತು ಇವರಿಬ್ಬರಿಂದ ಸದನದಲ್ಲಿ ನನಗೆ ಕಷ್ಟವಾಗಿದೆ, ಇದು ಒಳ್ಳೆಯ ಕಥೆಯಾಯಿತಲ್ಲಾ? ನಮಗೆ ತಾವು ಕುರ್ಚಿಯನ್ನು ಬದಲಾವಣೆ ಮಾಡಿಕೊಡಿ ಸ್ವಾಮಿ ನಾನು ಹಿಂದಕ್ಕೆ ಹೋಗುತ್ತೇನೆ ಸ್ವಾಮಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇಲ್ಲಾ ಸಾರ್, ಅವರು ಇಲ್ಲಿಯೇ ಇರಬೇಕು

ಶ್ರೀ ವಾಟಾಳ್ ನಾಗರಾಜ್ ಬಲಗಡೆ ಮಾನ್ಯ ಮಾಧುಸ್ವಾಮಿ ಎಡಗಡೆ ಮಾನ್ಯ ಶ್ರೀರಾಮ ರೆಡ್ಡಿ, ಏನು ಇವರಿಬ್ಬರ ಕಾಟ? ಮಾನ್ಯ ಶ್ರೀರಾಮ ರೆಡ್ಡಿ ಬ್ರಹ್ಮಚಾರಿ, ನಿಮಗೆ ಹೇಳುತ್ತೇನೆ ನಾನು ಮದುವೆಯ ಬಗ್ಗೆ ಮಾತನಾಡಬೇಕಾಗಿಲ್ಲ ನಾನು ಅನೇಕ ವಿಚಾರಗಳನ್ನು ಮಾತನಾಡಬೇಕಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಅದಕ್ಕೆ ಹೇಳುತ್ತಿರುವುದು ಹಾಗಾದರೆ ತಾವು ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಾ? ಸಾರ್ ಅವರುಗಳು ಬರುವುದಿಲ್ಲ ಇವತ್ತೆಲ್ಲಾ ಅವರುಗಳು ಬರುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್ ಅವರುಗಳು ಬರುತ್ತಿದ್ದಾರೆ ಅವರುಗಳು ಸಭೆಗೆ ಜಾಯಿನ್ ಆಗುತ್ತಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ತಾವು ನೆನ್ನೆಯ ದಿವಸ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಸ್ವಾಮಿ ನಿನ್ನೆಯ ದಿವಸ ಸಭೆಯನ್ನು 11 00 ಗಂಟೆ

ಗೆ ಮುಗಿಸುತ್ತೇನೆಂದು ತಾವು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ ನಿಮ್ಮ ತೀರ್ಮಾನ ಬೇಕೇ ಅಥವಾ ಬೇಡವೇ? ಅದನ್ನು ತಾವು ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೋಡಿ ಎಲ್ಲರೂ ಬಂದಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ತಮ್ಮ ತೀರ್ಮಾನವನ್ನು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಭೋಸರಾಜುರವರೆ, ಎಲ್ಲರೂ ಬರುತ್ತಿದ್ದಾರಲ್ಲವೇ? ಎಲ್ಲರೂ ಬರುತ್ತಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಎಲ್ಲರೂ ಬರುತ್ತಿದ್ದಾರೆ ಸಾರ್ ತಾವು ಮಾತನಾಡಿ ನೀವು ಮಾತನಾಡಿ ಇವತ್ತು ಮುಗಿಸಿಬಿಡಬೇಕು

ಅಧ್ಯಕ್ಷರು ತಮಗೆ ಇಚ್ಛೆ ಇದ್ದರೆ ತಾವು ಮಾತನಾಡಬಹುದು ಇದರಲ್ಲಿ ನನ್ನದೇನೂ ಇಲ್ಲ

ಶ್ರೀ ವಾಟಾಳ್ ನಾಗರಾಜ್ ಮಾತನಾಡೋಣ ನಿಮ್ಮದು ಒಳ್ಳೆಯ ಕಥೆಯಾಯಿತಲ್ಲ? ನನ್ನ ಪಕ್ಕದಲ್ಲಿ ಸರಿಯಾಗಿ ಸಿಕ್ಕಿದ್ದೀರಿ ನೀವು ಮತ್ತು ಶ್ರೀರಾಮರೆಡ್ಡಿಯವರು ಈ ತರಹ ಆಗಿಬಿಟ್ಟರೆ ಪರಿಸ್ಥಿತಿ ಹೇಗೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ರೀತಿ ನೀವು ಸದನವನ್ನು ಕಂಟ್ರೋಲ್‌ಗೆ ತೆಗೆದುಕೊಂಡು ಬಿಟ್ಟರೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ ಇದನ್ನು ನಾವು ಕೇಳಲಿಲ್ಲ ತಾವು ಅಜೆಂಡಾದಲ್ಲಿ ತಂದಿದ್ದೀರಿ, ಖಾಸಗಿ ಸದಸ್ಯರ ನಿರ್ಣಯಕ್ಕೆ ಶುಕವಾರ ಮತ್ರ ಅವಕಾಶವಿರುತ್ತದೆ ಎರಡುವರ್ಷದಿಂದ ಒಂದು ನಿರ್ಣಯ ಪಾಸ್ ಆಗಲಿಲ್ಲವೆಂದರೆ ಶಾಸನಸಭೆಗೆ ಗೌರವ ಬರುವುದಿಲ್ಲ ತಾವು ಮುಗಿಸಿಕೊಟ್ಟು ಬಿಟ್ಟರೆ ನಾವು ಬೇರೆ ನಿರ್ಣಯಗಳನ್ನು ಮಂಡಿಸುವುದಕ್ಕೆ ಒಂದು ಅವಕಾಶವಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಆಯಿತು

ಶ್ರೀ ಜೆ ಸಿ ಮಾಧುಸ್ವಾಮಿ ನಮಗೇನು ಅಡ್ಡಿಯಿಲ್ಲ ಅವರು ಇವತ್ತೆಲ್ಲಾ ಮಾತನಾಡಲಿ, ತಾವು ಇದನ್ನು ಏನಾದರೂ ಇತ್ಯರ್ಥ ಮಾಡಬೇಕು ಅವರುಗಳೆಲ್ಲರೂ ಬರುತ್ತಿದ್ದಾರೆ, ದಯಮಾಡಿ ಈ ವಿಷಯವನ್ನು ಮುಗಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನನು ಹೇಳುವುದೇನೆಂದರೆ ನಾನು ಮಾತನಾಡುವುದಕ್ಕೆ ಮುಂದೆ ಬೇಕಾದಂತಹ ಅವಕಾಶಗಳು ಇವೆ ನೆನ್ನೆಯ ದಿವಸ ನಾವುಗಳು ತೀರ್ಮಾನವನ್ನು ತೆಗೆದುಕೊಂಡಿದ್ದು ಏನು? ಹಿಂದಿನ ಸಭೆಗಳಲ್ಲಿ ನಾನು ಮಾತನಾಡದೇ ಇರುವುದಕ್ಕೆ ನಾನು ಕಾರಣ ಅಲ್ಲ ಹಿಂದಿನ ಪ್ರತಿ ಶುಕ್ರವಾರವೂ ಒಂದಲ್ಲ ಒಂದು ಚರ್ಚೆಯನ್ನು ನೀವು ಇಲ್ಲಿ ಇಟ್ಟುಕೊಂಡು ಖಾಸಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗಿರಲಿಲ್ಲ ಇದು ಸ್ಪಷ್ಟ ಮಾನ್ಯ ಅಧ್ಯಕ್ಷರೇ ನಾನು ಮಾತನಾಡಲೇ?

ಅಧ್ಯಕ್ಷರು ಶುರು ಮಾಡಿ, ಕಾಂಗ್ರೆಸ್ ಸದಸ್ಯರು ಬರುತ್ತಿದ್ದಾರೆ, ನೀವು ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ ನಾನು ಮತ್ತು ನಮ್ಮ ಮತ್ತೊಬ್ಬ ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ರಮೇಶ್ ಕುಮಾರ್ ಅವರು ಖಾಸಗಿ ನಿರ್ಣಯವನ್ನು ಮಂಡಿಸಿದ್ದೇವೆ ಖಾಸಗಿ ನಿರ್ಣಯ ಬಹಳ ಅತ್ಯಂತ ಮುಖ್ಯವಾದುದು ಮಾನ್ಯ ಶ್ರೀರಾಮರೆಡ್ಡಿಯವರೆ ನೀವು ಹೋಗಕೂಡದು ನಾನು ಎರಡುಗಂಟೆಗಳ ಕಾಲ ಮಾತನಾಡುತ್ತೇನೆ ನೀವು ಇಬ್ಬರೂ ಹೋಗಕೂಡದು

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಶ್ರೀರಾಮ ರೆಡ್ಡಿಯವರಿಗೆ ಮದುವೆ ಮಾಡೋ ಅಷ್ಟಿಲ್ಲ, ಮಾಡಿಕೊಳ್ಳುವಷ್ಟಿಲ್ಲ ನೀವು ಏಕೆ ಅವರು ಹೋಗುವುದನ್ನು ತಡೆಯುತ್ತೀರಿ

ಶ್ರೀ ವಾಟಾಳ್ ನಾಗರಾಜ್ ಇವರಿಬ್ಬರು ಈಗ ನಾನು ಮಾತನಾಡಲೇಬೇಕು ಎಂದು ಹಠ ಹಿಡಿದಿದ್ದಾರೆ ಅದಕ್ಕೋಸ್ಕರ ಅವರು

ಇಲ್ಲಿ ಕುಳಿತುಕೊಳ್ಳಲೇಬೇಕು ಮಾನ್ಯ ಅಧ್ಯಕ್ಷರೆ, ಅತ್ಯಂತ ಗಂಭೀರವಾದಂಥ ನಿರ್ಣಯವನ್ನು ನಾವು ಮಂಡಿಸಿದ್ದೇವೆ ನಮ್ಮ ಅನೇಕ ಮಾನ್ಯ ಸ್ನೇಹಿತರುಗಳು ಈ ನಿರ್ಣಯ ಬಹಳ ದಿನಗಳ ಕಾಲ ತೆಗೆದುಕೊಂಡಿದೆ, ಇದು ಬೇಗ ಮುಗಿಯಬೇಕು, ಇವತ್ತು ರಾತ್ರಿ 2 00 ಗಂಟೆಯದರೂ ಚಿಂತೆ ಇಲ್ಲ, ನಾವು ಕುಳಿತಿರುತ್ತೇವೆ ನೀವು ಮುಗಿಸಬೇಕು ಎನ್ನುವುದು ಅವರ ಸಿದ್ಧಾಂತ ಈ ಗಂಭೀರವಾದಂಥ ನಿರ್ಣಯ ಇದುವರೆಗೆ ನಡೆಯದೇ ಇರುವುದಕ್ಕೆ ನಾನು ಕಾರಣನಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ವಿಷಯಕ್ಕೆ ಬನ್ನಿ

ಶ್ರೀ ವಾಟಾಳ್ ನಾಗರಾಜ್ ಬರುತ್ತೇನೆ, ನೀವು ಹೇಳಿದಂತೆ ಕೇಳಲಿಕ್ಕೆ ನಾನು ಇಲ್ಲಿಗೆ ಬರುವುದಿಲ್ಲ ಒಳ್ಳೆಯ ಕೆಲಸ ಆಯಿತಲ್ಲ ವಿಷಯಕ್ಕೆ ಬರಬೇಕಂತೆ, ಅಧ್ಯಕ್ಷರು ಅವರೋ ನೀವೋ ಎಂಬುದು ನನಗೆ ಅರ್ಥವಾಗುತ್ತಿಲ್ಲ ನನಗೆ ವಿಷಯಕ್ಕೆ ಬನ್ನಿ ಎಂದು ಹೇಳುತ್ತೀರಲ್ಲಾ, ನಾನೇನು ನಿನ್ನೆ ಮೊನ್ನೆ ಸದನಕ್ಕೆ ಬಂದಿದ್ದೇನೆಯೇ? ಆಗುವುದಲ್ಲ ಅಧ್ಯಕ್ಷರೇ ಇದನ್ನು ನಾನು ಒಪ್ಪುವುದಿಲ್ಲ ಇದು ಗಂಭೀರವಾಗಿದೆ ನೀವು ಗಂಭೀರವಾಗಿ ಕುಳಿತುಕೊಳ್ಳಿ

ಅಧ್ಯಕ್ಷರು ನಿಮ್ಮ ಮಾತು ಕೇಳದೇ ಹೋಗುತ್ತಿದ್ದಾರಲ್ಲಾ

ಶ್ರೀ ವಾಟಾಳ್ ನಾಗರಾಜ್ ನಾನು ಅದಕ್ಕೆ ಕಾರಣಕರ್ತನಲ್ಲ ತಮಗೆ ಗೊತ್ತಿದೆ ತಾವು ಯಾವ ಗಳಿಗೆಯಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರೋ, ಆಗ ನಾವು ಮಾತನಾಡಲಿಕ್ಕೆ ಸಿದ್ದರಿದ್ದೇವೆ ಪ್ರತಿ ಶುಕ್ರವಾರ ಬರತಕ್ಕಂಥ ಈ ಒಂದು ಖಾಸಗಿ ನಿರ್ಣಯ ಅನೇಕ ಬೇರೆ ಬೇರೆ ಚರ್ಚೆಗಳಿಗೆ, ಬೇರೆ ಬೇರೆ ಮಸೂದೆಗಳ ಮೇಲೆ ಚರ್ಚೆ ಮಾಡುವ ದೃಷ್ಟಿಯಿಂದ ಹಾಗೆಯೇ ಮುಂದುವರೆಯುತ್ತದೆ ಇವತ್ತು ಇದು ಮುಂದುವರೆಯುತ್ತಿರಲಿಲ್ಲ ಕಾರಣ ನಮ್ಮ ಕಾಂಗ್ರೆಸ್ ಮಾನ್ಯ ಸ್ನೇಹಿತರುಗಳು ರಾಷ್ಟ್ರಪತಿ ಅಭ್ಯರ್ಥಿಯಾಗಿರತಕ್ಕಂತ ಶ್ರೀಮತಿ ಪ್ರತಿಭಾ ಪಾಟೀಲ್ ಬಂದಿದ್ದಾರೆಂದು ಅವರನ್ನು ಭೇಟಿ ಮಾಡಲಿಕ್ಕೆ ಹೋದರು ನಿನ್ನೆ ನಾವು ತೀರ್ಮಾನ ತೆಗೆದುಕೊಂಡಿರುವುದು, ಇವತ್ತು ಉತ್ತರ ಎಂದು ಉತ್ತರ

ಎನ್ನತಕ್ಕಂಥ ವಿಚಾರವನ್ನು ನೆನ್ನೆ ತೆಗೆದುಕೊಂಡಿದ್ದುದು ಅವರು ಉತ್ತರವನ್ನು ಕೊಡಲಿಲ್ಲ ನೆನ್ನೆ ತಾವೇ 11 00 ಗಂಟೆಗೆ ಸದನವನ್ನು ಮುಂದಕ್ಕೆ ಹಾಕುತ್ತೇನೆಂದು ತೀರ್ಮಾನ ತೆಗೆದುಕೊಂಡಿದ್ದೀರಿ ಆ ಒಂದು ಸಭೆಗೆ ನಮ್ಮಿಬ್ಬರು ಮಾನ್ಯ ಸ್ನೇಹಿತರುಗಳಾದ ಮಾಧು ಸ್ವಾಮಿ ಮತ್ತು ಶ್ರೀರಾಮ ರೆಡ್ಡಿಯವರು ಭಾಗಿಯಾಗಿದ್ದಾರೆ ಒಳಗಡೆ ಗಂಬೀರವಾಗಿದ್ದು, ಒಪ್ಪಿಕೊಂಡು ಇಲ್ಲಿ ಇವರಿಬ್ಬರು ಪಿತೂರಿ ನಡೆಸುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಯಾರಾದರೂ ಶಾಸನ ಸಭೆಯಲ್ಲಿ subhect move ಮಾಡುವವರನ್ನು ಮಾತನಾಡಿಸಿದರೆ ಅದನ್ನು ಪಿತೂರಿ ಎಂದರೆ subject move ಮಾಡುವುದು ಏಕೆ ಎಂದುಹೇಳಬೇಕು ಈ ನಿಲುವಳಿಯನ್ನು ಅಥವಾ ಈ ನಿರ್ಣಯವನ್ನು ತಂದವರನ್ನು ದಯಮಾಡಿ ಮಾತನಾಡಿಸಿ ಇದರ ಬಗ್ಗೆ ಒಂದು ಇತ್ಯರ್ಥ ಆಗಲಿ ಎಂದು ಹೇಳುವುದನ್ನು ಬಿಟ್ಟರೆ ಏನು ಪಿತೂರಿ ನಮ್ಮಿಂದ ನಡೆಯುತ್ತಿದೆ ಎಂಬ ಬಗ್ಗೆ ಅವರು ಈಗ ಹೇಳಬೇಕು ಈ ವಿಷಯ ಮಂಡಿಸಿದ್ದೇ ಪಿತೂರಿಯೇ ಎಂದು ಹೇಳಬೇಕು

ಶ್ರೀ ಜಿ ವಿ ಶ್ರೀರಾಮ ರೆಡ್ಡಿ ಅವರು ವಿಷಯಕ್ಕೆ ಬರುತ್ತಿಲ್ಲ ಆದುದರಿಂದ ನಾನು ಇದನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇನೆ

(ಮಾನ್ಯ ಸದಸ್ಯರಾದ ಶ್ರೀ ಜಿ ವಿ ಶ್ರೀರಾಮ ರೆಡ್ಡಿಯವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು ಈಗ ನಿಮ್ಮ ವಿಚಾರ ಏನಿದೆ ಎಂಬುದು ನಮಗೆ ಗೊತ್ತಿಲ್ಲ

ಶ್ರೀ ಎಸ್ ಎಸ್ ಪಾಟೀಲ್ ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಚಾರ ಆ ಗಾಂಭೀರ್ಯತೆಯನ್ನು ತಾವು ತೆಗೆದುಕೊಳ್ಳುತ್ತಿಲ್ಲ ಬೇರ ವಿಷಯಕ್ಕೆ ಹೋಗದೇ ದಯವಿಟ್ಟು ಈ ವಿಷಯಕ್ಕೆ ಬನ್ನಿ ಮಾತನಾಡಿ

2 ಖಾಸಗಿ ಸದಸ್ಯರುಗಳ ನಿರ್ಣಯ

ವಿಷಯ ವಿವಾಹ ಕಾರ್ಯಕ್ರಮಗಳ ಬಗ್ಗೆ ಒಂದು ಹೊಸ ಶಾಸನ ರಚಿಸಲು ನಿರ್ಣಯ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಮ್ಮ ಶಾಸನ ಸಭೆಯಲ್ಲಿ ಮದುವೆ ಆಗದೇ ಇರತಕ್ಕಂಥ ಶಾಸಕರು ಒಬ್ಬರು ಇದ್ದರು, ಅವರು ಈಗಾಗಲೇ ಮಾತನಾಡಿ ಮಾತನಾಡಿ ಎಂದು ಹೊರಗೆ ಹೊರಟು ಹೋದರು ಇದು ನನಗೆ ಅನ್ನಿಸುತ್ತಿದೆ ಮದುವೆಗಳ ಬಗ್ಗೆ ಮದುವೆಯ ಚರ್ಚೆಯ ಬಗೆಗೆ ಮದುವೆ ನಿರ್ಣಯಗಳ ಬಗ್ಗೆ ಚರ್ಚೆಯಾಗುವಾಗ ಗಂಭೀರವಾಗಿ ಚರ್ಚೆಯಾಗಬೇಕೆಂದು ಒತ್ತಾಯ ಮಾಡಿದಂಥಹವರು ನಮ್ಮ ಸ್ನೇಹಿತರು ಮತ್ತು ಹಾಗೂ ಬ್ರಹ್ಮಚಾರಿಯಾದಂಥ ಮಾನ್ಯ ಶ್ರೀಮಾನ್ ಶ್ರೀರಾಮರೆಡ್ಡಿಯವರು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಶ್ರೀರಾಮ ರೆಡ್ಡಿಯವರು ಬ್ರಹ್ಮ ಚಾರಿಯಲ್ಲ

ಶ್ರೀ ವಾಟಾಳ್ ನಾಗರಾಜ್ ಅವರು ಬ್ರಹ್ಮಚಾರಿಯಲ್ಲವೆಂದು ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿದ್ದಾರೆ ಅದು ನನಗೆ ಗೊತ್ತಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಹೇಳಿಲ್ಲ, ರೆಕಾರ್ಡ್‌ನಲ್ಲಿ ಶ್ರೀರಾಮ ರೆಡ್ಡಿಯವರು ಹೇಳಿದ್ದಾರೆ ನಾನು ಯಾವತ್ತು ಬ್ರಹ್ಮಚಾರಿಯೆಂದು ಹೇಳಿಲ್ಲ ನಾನು ಅವಿವಾಹಿತ ಎಂದು ಹೇಳಿದ್ದೇನೆಂದು ಅವರೇ ಹೇಳಿದ್ದಾರೆ, ನನ್ನ ಮೇಲೆ ಏತಕ್ಕೆ ಹೇಳುತ್ತಿದ್ದೀರಿ, ಅದು ರೆಕಾರ್ಡ್‌ನಲ್ಲಿದೆ

ಶ್ರೀ ಶಿವರಾಜ್ ಸಜ್ಜನರ್ ಮಾನ್ಯ ವಾಟಾಳ್ ನಾಗರಾಜ್‌ರವರೇ, ವಿವಾಹಿತರಿಗೂ ಅವಿವಾಹಿತರಿಗೂ ಏನು ವ್ಯತ್ಯಾಸವಿದೆಯೆಂದು ನೀವು ಹೇಳಿಲ್ಲ

ಶ್ರೀ ವಾಟಾಳ್ ನಾಗರಾಜ್ ಈಗ ಏನಾದರೂ ಅವರ ಮನವೊಲಿಸಿ, ಯಾವಾಗಲೂ ಬ್ರಹ್ಮಚಾರಿಗಳಾಗಿರುವವರಿಗೆ

ಶ್ರೀ ಜೆ ಸಿ ಮಾಧುಸ್ವಾಮಿ· ಗೊತ್ತಿಲ್ಲ, ಅವರು ನಿಮ್ಮನ್ನು ಕೇಳಿಲ್ಲ, ಅದೇ ಅವರು ತಪ್ಪು ಮಾಡಿದ್ದು

ಶ್ರೀ ವಾಟಾಳ್ ನಾಗರಾಜ್ ಯಾವಾಗಲೂ ಸಾಂಸಾರಿಕರಾಗಿರಬೇಕೆನ್ನುವಂಥಾದ್ದು, ಸಾಂಸಾರಿಕರಾಗಿದ್ದರೆ ಸಾಮಾಜಿಕಾ, ಸಮಾಜ, ಸಂಸಾರ, ಮನೆ ಇವೆಲ್ಲವೂ ಅರ್ಥವಾಗುತ್ತದೆ ಮತ್ತು ಅದರ ಬಗ್ಗೆ ವಿಶ್ಲೇಷಣೆ ಮಾಡಬಹುದು ಆ ದೃಷ್ಟಿಯಿಂದ ಯಾರಾದರೂ ನಮ್ಮ ಶಾಸನ ಸಭೆಯಲ್ಲಿ

ಶ್ರೀ ಜೆ ಸಿ ಮಾಧುಸ್ವಾಮಿ ಇವರು ನಿರ್ಣಯ ತಂದಿರುವುದು, ವಿವಾಹಗಳಿಂದ ಆಗುತ್ತಿರುವ ಹೆಚ್ಚು ಖರ್ಚನ್ನು ದುಂದು ವೆಚ್ಚವನ್ನು ತಪ್ಪಿಸಲಿಕ್ಕೆ ಒಂದು ನಿರ್ಣಯ ಪಾಸ್ ಮಾಡಿ ಎನ್ನುವ ಶಾಸನ ತರಬೇಕೆಂದು ಮದುವೆ ಆಗದೇ ಇರುವವರು 100% ಇವರಿಗೆ co-operate ಮಾಡಿದ್ದಾರೆ ಅವರು ಮದುವೆಯೇ ಆಗಿಲ್ಲ ಖರ್ಚು ಎಲ್ಲಿಂದ ಆಗುತ್ತದೆ ಯಾವ ಕಲ್ಯಾಣ ಮಂಟಪದ್ದು ಖರ್ಚು ಆಗುತ್ತದೆ ಅವರು ಪರವಾಗಿರುವವರ ಬಗ್ಗೆ ಇವರು ಟೀಕೆ ಮಾಡುತ್ತಿದ್ದಾರೆ, ಇದನ್ನು ನಾವು ಕೇಳಬೇಕೆ ಅಧ್ಯಕ್ಷರೆ, ನಾನು ಇದನ್ನು ಪ್ರತಿಭಟಿಸಿ ಸದನದಿಂದ ಹೊರಗೆ ಹೋಗುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಅಧ್ಯಕ್ಷರೇ, ನೀವು ನನಗೆ ಮುಂದಿನ ಸಭೆಯಲ್ಲಿ ಅವಕಾಶ ಕೊಡದಿದ್ದರೆ ನಾನು ಸಹ ಸಭಾತ್ಯಾಗ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಕಾಂಗ್ರೆಸ್ ಸದಸ್ಯರ ಕೋರಿಕೆ ಮೇಲೆ ಹೇಳುತ್ತೇನೆ, ಮದುವೆ ಆಗದೇ ಇರುವವರು ಖರ್ಚು ಜಾಸ್ತಿ ಮಡಿದ್ದಾರೋ ಕಡಿಮೆ ಮಡಿದ್ದಾರೋ ಅವರನ್ನು ಟೀಕೆ ಮಾಡಿದರೆ ಹೇಗೆ? ಅವರು ಮದುವೆಯೇ ಆಗಿಲ್ಲವೆಂದರೆ ದುಂದು ವೆಚ್ಚ ಮಾಡುವುದು ತಪ್ಪು ಇವೆಲ್ಲಾ ತಪ್ಪು ಎಂದು ಅವರು ನಿಮ್ಮ ಪರವಾಗಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಮದುವೆ ಆಗದಿದ್ದ ಕ್ಷಣಕ್ಕೆ ದುಂದು ವೆಚ್ಚದ ಪ್ರಶ್ನೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ ನಿಮ್ಮ ನಿರ್ಣಯ ಏನಿದೆ ಓದಿ

ಶ್ರೀ ವಾಟಾಳ್ ನಾಗರಾಜ್ ಓದುತ್ತೇನೆ ದುಂದು ವೆಚ್ಚದ ಬಗ್ಗೆ ಬರುವುದಿಲ್ಲ ಈಗ ಮಾನ್ಯ ಶ್ರೀ ರಮೇಶ್ ಕುಮಾರ್‌ರವರು ಗಂಡು ಬಂದರು ಬನ್ನಿ ತಮಗೋಸ್ಕರವೇ ಕಾದಿದ್ದೆವು

ಶ್ರೀ ಜೆ ಸಿ ಮಾಧುಸ್ವಾಮಿ ಗಂಡು ಈಗ ಬಂತು, ಮಾನ್ಯ ರಮೇಶ್ ಕುಮಾರ್ ಬರುವವರೆಗೂ ಚರ್ಚೆ ಮಾಡಲಿಕ್ಕೆ inspiration ಇರಲಿಲ್ಲ ಇವರಿಗೆ ಗಂಡು ಬರಲಿ ಎಂದು ಕಾಯುತ್ತಿದ್ದರು ಆ ಗಂಡು ಬಿಡದಿ ಮನೆಯಲ್ಲಿತ್ತು ಹಡಗಲಿ ಗಂಡು ಭಾಷಣ ಮಾಡುತ್ತಿತ್ತು, ಈಗ ಆ ಗಂಡು ಬಂತು, ಹಡಗಲಿ ಗಂಡು ಕೆಲಸ ಮುಗಿದು ಹೋಯಿತು ಈಗ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನನ್ನ ಮಾತಿನಲ್ಲಿ ಒಂದು ರೀತಿಯ ಹಾಸ್ಯವಿರಬಹುದು ಅದರೆ ಈ ವಿಚಾರದಲ್ಲಿ ಬಹಳ ಗಹನತೆ ಮತ್ತು ಗಂಭೀರತೆ ಇದೆ ಮದುವೆ ಆಗಿರುವವರ, ಮದುವೆ ಆಗದೇ ಇರುವವರ ಜೀವನವನ್ನು ನಾವು ನೋಡಿದಾಗ ಅವರ ನಡೆ ನುಡಿ ನೋಡಿದಾಗ, ಅವರ ಪ್ರಶ್ನೆ ನೋಡಿದಾಗ, ಅವರು ನಡೆದುಕೊಂಡಿರತಕ್ಕಂಥ ವಿಚಾರಗಳನ್ನು ನೋಡಿದಾಗ, ಸಮಾಜದಲ್ಲಿ ಯಾವ್ಯಾವ ರೀತಿ ಚಿಂತನೆಗಳನ್ನು ಅವರು ನಡೆಸುತ್ತಾರೆಂಬುದು ತಮಗೆ ಅರ್ಥವಾಗಿದೆ ಅದರೆ ಇಲ್ಲಿ ಯಾಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಮಾಧು ಸ್ವಾಮಿಯವರಿಗೆ ನಿರ್ಣಯವನ್ನು ಬಿಟ್ಟು ಆ ಕಡೆ ಎಲ್ಲೋ ಹೋಗುತ್ತಿದ್ದಾರೆನ್ನುವ ಭಾವನೆ ಬರುತ್ತಿದೆ ಅದಕ್ಕೋಸ್ಕರ ಏಕೆ ಈ ಮಾತು ಹೇಳುತ್ತಿದ್ದೇನೆಂಬುದನ್ನು ಅವರಿಗೆ ಅರಿವು ಮಾಡಿಸುತ್ತಿದ್ದೇನೆ ಯಾವ ಮಾನ್ಯ ಶ್ರೀರಾಮ ರೆಡ್ಡಿಯವರು ಮತ್ತಿಬ್ಬರು ಇರಬಹುದು, ಮಾನ್ಯ ಶ್ರೀ ರಾಜೇಂದ್ರನ್ ಅನೇಕ ಸ್ನೇಹಿತರು ಇರಬಹುದು, ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಮದುವೆ ಆಗುವಂಥಾದ್ದು ಒಳ್ಳೆಯದು, ಆಗಲೇ ಬೇಕು, ಮದುವೆ ಆದರೆ ಮನೆ, ಸಂಸಾರವನ್ನು ಯಾರೂ ಅತ್ಯಂತ ಜಾಗರೂಕತೆಯಿಂದ ಚೆನ್ನಾಗಿ ಚೊಕ್ಕವಾಗಿ ನಡೆಸುತ್ತಾರೆ ಅವರು ಸಮಾಜವನ್ನು ಅದೇ ರೀತಿ ನೋಡುತ್ತಾರೆಂಬುದು ನನ್ನ ಕಲ್ಪನೆ ಮತ್ತು ಬಾವನೆ ಆ ದೃಷ್ಟಿಯಲ್ಲಿ ಇಲ್ಲಿ ನಮ್ಮ ಮಾನ್ಯ ಶ್ರೀರಾಮರೆಡ್ಡಿಯಾದಿ ಅನೇಕ ಸ್ನೇಹಿತರುಗಳು ಮದುವೆಯಾಗಿಲ್ಲ ಆದ್ದರಿಂದ ಅವರು ಮದುವೆ ಆಗುವುದು ಬಿಡುವಂಥಾದ್ದು ಅವರಿಗೆ ಸೇರಿದ್ದು ನಾನು ಅದರ ಬಗ್ಗೆ

ತಕರಾರು ಹೇಳುವುದಕ್ಕೆ ಹೋಗುವುದಿಲ್ಲ ಆ ದೃಷ್ಟಿಯಿಂದ ಮದುವೆ ಆಗತಕ್ಕಂಥಾದ್ದು ಒಂದು ವಾದ, ಮದುವೆ ಯಾವ ರೀತಿ ಇರಬೇಕು? ಈ ಉದ್ದೇಶದಿಂದ ಮದುವೆ ಆಗದೇ ಇದ್ದವರು, ಪ್ರಾಮಾಣಿಕವಾಗಿ ಮದುವೆ ಆಗಬೇಕು ಇದುಸತ್ಯ ತೀರ ಮಿತಿ ಮೀರಿದರೆ ಶಾಸಕರಾಗಿರುವುದರಿಂದ ಅವರಿಗೆ ಅನೇಕ ಸವಲತ್ತುಗಳಿರುತ್ತವೆ ತಾವು ಅಥವಾ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಸಂಸದೀಯ ಸಚಿವರು ಮನಸ್ಸು ಮಾಡಿ ನಾವೇ ಅವರಿಗೆ ಮದುವೆ ಮಾಡಿಸತಕ್ಕಂತಹ ವ್ಯವಸ್ಥೆ ಆಗುವುದಾದರೆ ನಾವು ಸ್ವಾಗತ ಮಾಡುತ್ತೇನೆ ಅತ್ಯಂತ ಸರಳವಾಗಿ ತಮ್ಮ ಕಾರ್ಯಾಲಯದಲ್ಲಿಯೇ ಸರಳ ರೀತಿಯಲ್ಲಿ ಸರಳವಾಗಿ ಮದುವೆ ಆಗುವುದಾದರೆ ದೇಶಕ್ಕೆ, ಜನತೆಗೆ, ರಾಜ್ಯಕ್ಕೆ ನಾಡಿಗೆ ಅರ್ಥವಾಗುವ ರೀತಿಯಲ್ಲಿ ಮದುವೆ ಮಾಡಿಸತಕ್ಕದ್ದು ಒಳ್ಳೆಯದು ಅದರಲ್ಲಿ ತಾವು ಮಾನ್ಯ ಶ್ರೀರಾಮರೆಡ್ಡಿಯವರನ್ನು ತಾವು ಒಂದು ಸಾರಿ ಗೋಪ್ಯವಾಗಿ ಕರೆದು, ನೀವು ಮದುವೆಯಾಗುವುದಕ್ಕೆ ತಯರಾಗಿದ್ದೀರಾ? ಎಂದು ಕೇಳಿ ನೀವು ಒಪ್ಪಿದ್ದೀರೋ ಇಲ್ಲವೊ ಗೊತ್ತಿಲ್ಲ ಕನಿಷ್ಟ ನೀವು ಒಪ್ಪಿದ ಮೇಲೆ ನಾವು ಆ ಸರಳ ಮದುವೆಗೆ ಆದರ್ಶ ಮದುವೆಗೆ ಒಂದು ಹೊಸ ಆಯಾಮವನ್ನು ಮಾಡುತ್ತೇವೆಂದು ತಾವು ಹೇಳುವುದಾದರೆ ಆಗಲಿ

ಶ್ರೀ ಕೆ ಆರ್ ರಮೇಶ್ ಕುಮಾರ್ ನಾವು ಯವುದೇ ವಿಷಯದಲ್ಲಿ ಇಲ್ಲಿ ವ್ಯಾಖ್ಯಾನ ಮಾಡಬೇಕಾಗಿದ್ದರೆ, ಅದರ ಅಧ್ಯಯನ ಮತ್ತು ಪರಿಚಯ ಎಲ್ಲಾ ಇರಬೇಕು ಇವರಿಗೆ ಬಹಳ ವರ್ಷವಾಗಿದೆ ಈ ವಿಷಯದ ಸಂಬಂಧದ ವಿಚಾರಗಳಲ್ಲಿ ಅಧ್ಯಯನ ಪರಿಚಯ ಎಲ್ಲಾ ಹೋಗಿ ಬಹಳ ವರ್ಷವಾಗಿದೆ, ಸುಮ್ಮನೆ ಏನೋ ಹೇಳಬೇಕು ಹೇಳುತ್ತಿದ್ದಾರೆ ಮದುವೆ ಸಂಬಂಧ ವಿಚಾರಗಳೆಲ್ಲಾ ಏನು ಇದ್ದಾವೆ ಸಾಧಾರಣಾ ಅವೆಲ್ಲಾ ಮರೆತು ಹೋಗಿ ಬಹಳ ಕಾಲವಾಗಿದೆ

ಶ್ರೀ ವಾಟಾಳ್ ನಾಗರಾಜ್ ನಾನು ಇವರಿಗೆ ಮಾತನಾಡಲು ಅವಕಾಶ ಕೊಟ್ಟು ಬಯ್ಸಿಕೊಳ್ಳುತ್ತಿದ್ದೇನೆ ಇದು ಹೇಗಿದೆ ನೋಡಿ? ಅಧ್ಯಕ್ಷರಾಗಿದ್ದವರು ಆ ಸ್ಥಾನದಲ್ಲಿ ಕುಳಿತು ಅಧ್ಯಕ್ಷರಾಗಿದ್ದವರು ಸುಮ್ಮನೆ ಮಾತನಾಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ ಇಷ್ಟು ಬೇಜವಾಬ್ದಾರಿಯಿಂದ ಹೇಳಬಾರದು

ಶ್ರೀ ಜೆ ಸಿ ಮಾಧು ಸ್ವಾಮಿ ಸತ್ಯ ಯಾವಾಗಲೂ ಅಪ್ರಿಯ ಎಂದು ಹೇಳುವುದು ಇದಕ್ಕೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಈಗ ನಾನು ಹೇಳಿದ್ದನ್ನು ಅವರು ಗಮನಿಸಿಲ್ಲ ಮಾನ್ಯ ಪ್ರಕಾಶ್‌ರವರು observe ಮಾಡಿರಬಹುದು ಯಾವುದೇ ವಿಷಯದಲ್ಲಿ ನಾವು ಮಾತನಡಬೇಕಿದ್ದರೆ, ಆ ವಿಷಯದಲ್ಲಿ ಅಧ್ಯಯನ ಮಾಡಿರಬೇಕು ಅದರ ಅನುಭವ ಪರಿಚಯ ಎಲ್ಲಾ ಇರಬೇಕು ಇವರಿಗೆ ಮದುವೆಗೆ ವಿಷಯವಾದಂತಹ ಸಂಬಂಧದ ವಿಚಾರಗೆಳೆಲ್ಲಾ ಮರೆತುಹೋಗಿ ಬಹಳ ಕಾಲವಾಗಿಬಿಟ್ಟಿದೆ ಮಾನ್ಯ ಅಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ ಈಗ ಸುಮ್ಮನೆ ಕಾಲ ಕಳೆಯುವುದಕ್ಕೆ ನಿವು ಏನೇನೋ ಮಾತನಾಡುತ್ತಿದ್ದೀರಿ, ಏಕೆ ಎಂದು ನನು ಹೇಳುವುದು

ಶ್ರೀ ಎಂ ಪಿ ಪ್ರಕಾಶ್ ಈ ಎರಡು ಪದಗಳನ್ನು ಕಡತದಿಂದ ವಾಪಸ್ ತೆಗೆಸಬೇಕು, ಏಕೆಂದರೆ ಬಹಳ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ತಾವು ಅಧ್ಯಕ್ಷರಾಗಿದ್ದವರು ಬಹಳ ಗುರುತರವಾದ ವಿಚಾರಗಳು ಇವೆ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ ತಾವು ಅಧ್ಯಕ್ಷರಾಗಿದ್ದವರು ಈ ರೀತಿ ಮಾತನಾಡಬರದು ಮಾನ್ಯ ಪ್ರಕಾಶ್‌ರವರೇ ತಾವು ಹಿರಿಯರು ಇದ್ದೀರಿ ಅವರು ಈ ರೀತಿ ಮಾತನಾಡಬಹುದಾ ಹೇಳಿ

ಶ್ರೀ ಕೆ ಶ್ರೀನಿವಾಸ ಗೌಡ ಅಧ್ಯಕ್ಷರು ಆಗಿದ್ದವರು ಅಂದರೆ ಏನು ಬೇಕಾದರೂ ಮಾಡಬಹುದೇ?

ಶ್ರೀ ಸಿ ಎಂ ಉದಾಸಿ ನೀವು ಹೇಳಬಾರದೆಂದು ಹೇಳಿದಿರಲ್ಲಾ ಅದೇ ಅವರನ್ನು ಗುಮಾನಿಯಿಂದ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಇದೇ ಮೊದಲ ಆಕ್ಷೇಪಾರ್ಹ ವಿಚಾರ ಎಂದು ಹೇಳಬಯಸುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಅವರು ಸುಮಾರು ಸಲ ಹೇಳುತ್ತಲೇ ಇದ್ದಾರೆ ನಾನು ಯಾವ್ಯಾವ ವಿಚಾರ ಜನರಿಗೆ ಗೊತ್ತಾಗುವ ಹಾಗೆ ಮಾಡಬೇಕೋ ಅದನ್ನು ಮಾಡಿದ್ದೇನೆ ಗುಪ್ತವಾಗಿ ಮಾಡುವುದನ್ನು ಗುಪ್ತವಾಗಿಯೇ ಮಾಡಿದ್ದೇನೆ ಇವರು ಮಾಡುವುದೇ ಇಲ್ಲವೆಂದು ನನ್ನ charge Retire ಆಗಿ ಬಿಟ್ಟಿದ್ದೀರಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಪ್ರಕಾಶ್‌ರವರೇ ತಾವು ಹೇಳಿ ಎಂದರೆ ಹೇಳಿಬಿಡುತ್ತೇನೆ ಈ ಸದನದಲ್ಲಿ ಹೇಳಿ ಎಂದರೆ ಒಂದು-ಎರಡು ಹೀಗೆ ವಿಚಾರಗಳನ್ನು ಹೇಳಿಬಿಡುತ್ತೇನೆ ಬೇಡ ಎಂದರೆ ಬೇಡ ನೀವು ಹಿರಿಯರು, ನಮ್ಮ ಸ್ನೇಹಿತರು ಹೇಳಿ ಎಂದರೆ ಹೇಳಿಬಿಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ದಯವಿಟ್ಟು ಹೇಳಬಾರದು, ಮಾನ್ಯ ನಂಜೇಗೌಡರು ಮಾನ್ಯ ಜೆ ಹೆಚ್ ಪಟೇಲ್‌ರವರು, ಮಾನ್ಯ ಬಸವಲಿಂಗಪ್ಪನವರು ಇಲ್ಲದಿರುವುದರಿಂದ ತಾವು ದಯವಿಟ್ಟು ಅದನ್ನು ಹೇಳಬೇಡಿ

ಶ್ರೀ ವಾಟಾಳ್ ನಾಗರಾಜ್ ನಿಮ್ಮ ಮಾತಿಗೆ ಮನ್ನಣೆ ಕೊಟ್ಟಿದ್ದೇನೆ ಇದು ಬಹಳ ಗಂಭೀರವಾದ ಪ್ರಶ್ನೆ ನಾನಾ ರೀತಿಯ ಮದುವೆಗಳು ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ನಡೆಯುತ್ತವೆ ಕಲ್ಯಾಣ ಮಂಟಪಗಳು ಬೆಂಗಳೂರು ಹಾಗೂ ಇತರ ಕಡೆ ಇವೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮದುವೆ ಸಾವಿರ ವರ್ಣದ ಕನಸು ನಂತರ ಭಯಂಕರ ಭೂತ ಭೀತಿ

ಶ್ರೀ ವಾಟಾಳ್ ನಾಗರಾಜ್ ಕಲ್ಯಾಣ ಮಂಟಪಗಳು ಬೆಂಗಳೂರಿನಲ್ಲಿ ಹಾಗೂ ರಾಜ್ಯದಲ್ಲಿ ಇರತಕ್ಕಂತಹದ್ದು ಒಂದು ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮದುವೆ ಒಂದು ವಾರ ನಡೆಯುತ್ತಿತ್ತು ಗ್ರಾಮೀಣ ಪ್ರದೇಶದಲ್ಲಿ ಮದುವೆ ಮಾಡತಕ್ಕಂತಹವರು ಆ ಗ್ರಾಮದ ಎಲ್ಲಾ ಜನರನ್ನು ನಿಮ್ಮ ಮನೆಯಲ್ಲಿ ಇವತ್ತು ಅಡುಗೆ ಮಾಡಕೂಡದು ಎಲ್ಲದಕ್ಕೂ ನಮ್ಮಲ್ಲಿಗೆ ಬರಬೇಕು ಬೆಳಿಗ್ಗೆ ತಿಂಡಿಗೆ, ಮಧ್ಯಾಹ್ನ ಊಟಕ್ಕೆ, ಸಂಜೆ ಊಟಕ್ಕೆ ಬರಬೇಕು

ಇವತ್ತು ಚಪ್ಪರ ಪೂಜೆ, ನಾಳೆ ವರಪೂಜೆ, ಹೀಗೆ ಒಂದು ವಾರಗಳ ಕಾಲ ನಡೆಯುತ್ತಿತ್ತು ಅಂದರೆ, ನಮ್ಮ ರಾಜ್ಯದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಕನ್ನಡಿಗರ ವೈಶಿಷ್ಟ್ಯ ಮದುವೆಗಳು ಅದರ ಹಿನ್ನೆಲೆ ಅದನ್ನೆಲ್ಲಾ ನೋಡಿದಾಗ ಆ ಸಾಂಸ್ಕೃತಿಕ ಹಿನ್ನೆಲೆ ಇದೆಯಲ್ಲಾ ನಿಜಕ್ಕೂ ಬಹಳ ಒಂದು ಒಳ್ಳೆಯ ಸಂಪ್ರದಾಯ ಒಳ್ಳೆಯ ಚಿತ್ತ ನಮ್ಮ ಕಣ್ಣ ಮುಂದೆ ಬರುತ್ತದೆ ಈಗ ಮದುವೆ ಒಂದು ವಾರ ನಡೆಯುವುದು ನಿಂತಿದೆ ಹಳ್ಳಿಗಳ ಮದುವೆ ಕಡಿಮೆಯಾಗಿ ಮದುವೆ ಕಲ್ಯಾಣ ಮಂಟಪಗಳಿಗೆ'ಂದು ಬಂದಿದೆ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡತಕ್ಕವರು ಮತ್ತು ನೋಂದಣಿ ಮೂಲಕ ಮದುವೆ ಮಾಡುವುದು, ಅಲ್ಲಿ ಸಂಪೂರ್ಣ ಸಂಸಾರ ಕುಳಿತುಕೊಂಡು ಇವರು ಗಂಡು, ಇವರು ಹೆಣ್ಣು, ಇವರು ಮದುವೆ ಆಗುತ್ತಿದ್ದಾರೆ ಎಂದು ಹೇಳುವುದು ತೀರ ಸರಳವಾದಂತಹ ವಿಚಾರ ಕಲ್ಯಾಣ ಮಂಟಪಗಳ ಬೆಂಗಳೂರು ಮತ್ತು ಕೆಲವು ದೊಡ್ಡ ದೊಡ್ಡ ಪಟ್ಟಣಗಳು ಸೇರಿದಂತೆ ಬಾಡಿಗೆ ಬಹಳ ಅಪಾರವಾಗಿದೆ ಏನು ಬಹಳ ಅಪಾರ ಎಂದರೆ ನನಗನ್ನಿಸುತ್ತದೆ, ಅಂದರೆ ಸುಮಾರು 5 ಲಕ್ಷ, 10 ಲಕ್ಷ ಬಾಡಿಗೆ ಇರತಕ್ಕಂತಹ ಕಲ್ಯಾಣ ಮಂಟಪಗಳು ಉಂಟು ಸಾಮಾನ್ಯ ಕಲ್ಯಾಣ ಮಂಟಪದಲ್ಲಿ ಸ್ಥಳವೇ ಸಿಗುವುದಿಲ್ಲ ಜೊತೆಗೆ ಬೇರೆ ಬೇರೆ ಬಯಲಿನಲ್ಲಿ ಅರಮನೆ ಮೈದಾನ ಈ ಕಡೆ ಮದುವೆಗಳನ್ನು ಮಾಡತಕ್ಕಂತಹ ವ್ಯವಸ್ಥೆಗಳು ಉಂಟು ಈ ಕಲ್ಯಾಣ ಮಂಟಪದ ಬಾಡಿಗೆಗಳನ್ನು ನಿಯಂತ್ರಣ ಮಾಡದೇ ಇದ್ದರೆ ನಾವು ಎಲ್ಲೋ ಒಂದು ತರಹ ನೋವನ್ನು ಪಡ ಬೇಕಾಗಿದೆ ಈಗಾಗಲೇ ಮದುವೆ ವ್ಯವಸ್ಥೆಯಲ್ಲಿ ಬಹಳ ಬದಲಾವಣೆ ಆಗಿ ಹೋಗಿದೆ ಕಲ್ಯಾಣ ಮಂಟಪವನ್ನು ನಿಗದಿ ಮಾಡಿದ ತಕ್ಷಣ ಬೆಳಿಗ್ಗೆ ಧಾರೆ ಮಹೂರ್ತ ಇದ್ದರೆ, ಹಿಂದಿನ ದಿನವೇ ಧಾರೆಯೆರೆದು ಮದುವೆಯಾಗುವುದಿಲ್ಲ ತೀರ್ಮಾನ ಆಗಿರುವುದಿಲ್ಲ ಮಾತುಕತೆ ಆಗಿರುತ್ತದೆ ಎಲ್ಲರ ಎದುರಿಗೆ ನಮ್ಮ ಸಂಪ್ರದಾಯದ ಪ್ರಕಾರ ವಿಧಿ ವಿಧಾನ ಪೂಜೆ, ಪುನಸ್ಕಾರದ ಪ್ರಕಾರ, ನಾವು ಧಾರೆ ಎರೆದು ಕೊಡತಕ್ಕಂತಹದ್ದು ಅದರ ಹಿಂದಿನ ದಿನವೇ ಏನಾಗುತ್ತದೆ ಆರತಕ್ಷತೆ ಆಗುತ್ತದೆ ಗಂಡು ಹೆಣ್ಣು ಒಟ್ಟಿಗೆ ಸೇರಿಸಿ ಆರತಕ್ಷತೆ ಆಗುತ್ತದೆ ಕಾರಣ ಏನೆಂದರೆ, ಇದು ಬದಲಾವಣೆ ಆಗುವುದಕ್ಕೆ ಈ ಒಂದು ಕಲ್ಯಾಣ ಮಂಟಪದ ಬಾಡಿಗೆ ಮತ್ತೊಂದು ದಿನ ಜಾಸ್ತಿಯಾಗುತ್ತದೆ ಎನ್ನುವ ಉದ್ದೇಶದಿಂದ ಈ ರೀತಿ ನಡೆಯತಕ್ಕಂತಹದ್ದು ಇದು ನಮ್ಮ ಪಾರಂಪರಿಕ ಮನೋಭಾವನೆಗೆ ಶಾಸ್ತ್ರ ಸಿದ್ಧಾಂತಗಳಿಗೆ

ಒಪ್ಪಿಗೆಯಾಗತಕ್ಕಂತಹದಲ್ಲ ಯಾರು ಆ ರೀತಿ ಅಲ್ಲ ಸಾಮಾನ್ಯವಾಗಿ ಧಾರೆ ಮುಗಿಯುವವರೆಗೆ ಗಂಡು ಹೆಣ್ಣು ಮುಖ ನೋಡುವ ಹಾಗಿಲ್ಲ ಹೆಣ್ಣು ಗಂಡಿನ ಮುಖ ನೋಡುವ ಹಾಗಿಲ್ಲ ಎನ್ನುವ ವಿಚಾರಗಳು ಇವೆ ಗಂಡನ್ನು ಒಂದು ಕಡೆ, ಹೆಣ್ಣನ್ನು ಇನ್ನೊಂದು ಕಡೆ ಕೂಡಿಸಿರುತ್ತಾರೆ ಆದರೆ, ಈಗ ಪರಿಸ್ಥಿತಿ ತೀವ್ರ ಬದಲಾವಣೆಗಳಾಗುತ್ತಿವೆ ಆ ದೃಷ್ಟಿಯಿಂದ ಹಿಂದಿನ ದಿನವೇ ಆರತಕ್ಷತೆ ಮಾಡತಕ್ಕಂತಹದ್ದು ಅದಕ್ಕೆ ಮದುವೆಯ ವ್ಯವಸ್ಥೆ, ಈ ಮದುವೆ ವ್ಯವಸ್ಥೆ ಬಗೆಗೆ ನಾವು ಕಡ್ಡಾಯ ಮಾಡದೇ ಇದ್ದರೂ ಕಾನೂನು ಮಾಡದೇ ಇದ್ದರೂ ಜನರಲ್ಲಿ ತಿಳುವಳಿಕೆ ಮತ್ತು ಸಾಮಾನ್ಯ ಜನರ ಮದುವೆಗಳ ವ್ಯವಸ್ಥೆಗೆ ನಾವು ಎಲ್ಲೋ ಒಂದು ಕಡೆ ಗಮನ ಹರಿಸಬೇಕಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಕಾನೂನು ಮಂತ್ರಿಗಳೆ, reception ಆಗಿ ಬೆಳಿಗ್ಗೆ marriage consummate ಆಗದೇ ಹೋದರೆ divorce ಮತ್ತು maintenance ಕೇಳುವುದಕ್ಕೆ ಬರುವುದಿಲ್ಲ ಆದರೆ, ಹಿಂದಿನ ದಿನವೇ ಎಲ್ಲಾ ರೀತಿಯಲ್ಲೂ ಗಂಡ-ಹೆಂಡತಿ ಎಂದು ಚಿತ್ರೀಕರಿಸಿರುತ್ತಾರೆ ಫೋಟೋ ತೆಗೆಸಿರುತ್ತಾರೆ ಬಹಳಷ್ಟು ಜನರು ಸಾಕ್ಷಿಗಳಾಗಿ ಹೋಗಿ reception attend ಮಾಡಿರುತ್ತಾರೆ ಧಾರ್ಮಿಕ ಪ್ರಕ್ರಿಯೆ ಮುಗಿದು ಮಾಂಗಲ್ಯ ಧಾರಣೆ ಆಗದೇ ಹೋದರೆ ನೀವು ಅದನ್ನು ಮದುವೆ ಎಂದು ಹೇಳುವುದಕ್ಕೆ ಬರುವುದಿಲ್ಲ ಈಗ ಏನಾಗುತ್ತಿದೆಯೆಂದರೆ, ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ, cheating case ಹಾಕುವುದನ್ನು ಬಿಟ್ಟರೆ, ನನಗೆ ಮೋಸ ಮಾಡಿದರು ಎಂದು ಹೇಳುವುದನ್ನು ಬಿಟ್ಟರೆ she cannot ask compensation in court as his wife ಆ marriage solemnise ಆಗುವುದಿಲ್ಲ ಇದು ಬರೀ ಧಾರ್ಮಿಕವಾದ ಸಂಕಷ್ಟವಲ್ಲ ಕಾನೂನಿನಲ್ಲೂ ಕೂಡ they will not become husband and wife till it is consummated or solemnised Reception ಮಾಡುವವರಿಗೆ, ಎಲ್ಲಾದರೂ ಒಂದು ಕಡೆ ನಾವು ಹೇಳಬೇಕಾಗುತ್ತದೆ; ಆಕಸ್ಮಿಕ ಕಾರಣಗಳಿಂದ ಬೆಳಗ್ಗೆ ಮಾಂಗಲ್ಯ ಧಾರಣೆ ಆಗದೇ ಹೋದರೆ, ಆ ಹೆಣ್ಣು ಮಗಳಿಗೆ ಕಾನೂನಿನ ಯಾವುದೇ ಹಕ್ಕು ಸೃಷ್ಟಿಯಾಗುವುದಿಲ್ಲ ಮೋಸದ ಪ್ರಕರಣ 420 ಕೇಸ್ ಪ್ರಕರಣವೆಂದು ದಾಖಲಿಸುವುದನ್ನು ಬಿಟ್ಟರೆ ಇನ್ನೇನೂ ಆಗುವುದಿಲ್ಲ ಯಾವ ಕಲ್ಪನೆಯೂ ಇಲ್ಲದೆ ಎಲ್ಲವನ್ನೂ ಮುಗಿಸಿ ಮಾರನೇ

ದಿವಸವೇ ಧಾರಣೆ ಎಂದು ಕುಳಿತುಕೊಳ್ಳುವುದರಿಂದ ಧಾರ್ಮಿಕ ವಿಧಿಗೂ ಅಡ್ಡಿ, ಕಾನೂನಿಗೂ ತಕರಾರು, ಮತ್ತು ಕಾನೂನಿನಲ್ಲೂ ಅವರಿಗೆ claim settle ಆಗುವುದಿಲ್ಲ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೇ, ಕಳೆದ ಮೂರು ತಿಂಗಳ ಹಿಂದೆ ಆಂಧ್ರ ಪ್ರದೇಶದ ನೆಲ್ಲೂರಿನಲ್ಲಿ ಜರುಗಿದ ನಮ್ಮ ಸಂಭಂದಿಕರ ಮದುವೆಗೆಂದು ಹೋಗಿದ್ದೆ ಅಲ್ಲಿ ಮದುವೆಯಾಗುವುದಕ್ಕೆ separate ಆಗಿ ಒಂದು registration office ಇಟ್ಟಿದ್ದಾರೆ ಮಹೂರ್ತ, ಮದುವೆ ಆಗುತ್ತಿದ್ದಂತಯೇ ಗಂಡು ಹೆಣ್ಣು ಜೊತೆಯಲ್ಲಿ register ಮಾಡಿಸುತ್ತಾರೆ ಇದು ಆಂಧ್ರ ಪ್ರದೇಶದಲ್ಲಿ ಈಗಾಗಲೇ ಜಾರಿಗೆ ಬಂದಿದೆ ನಮ್ಮ ರಾಜ್ಯದಲ್ಲೂ ಇದನ್ನು ಜಾರಿಗೆ ತಂದಿದ್ದೇ ಆದಲ್ಲಿ, ಅನೇಕ divorce case ಕಡಿಮೆಯಾಗುತ್ತವೆ ಏಕೆಂದರೆ 3 ತಿಂಗಳ ಹಿಂದೆ ನೋಡಿದಾಗ ನಮ್ಮ ರಾಜ್ಯದಲ್ಲಿ ಈ ಪದ್ಧತಿಯನ್ನು ಏಕೆ ಜಾರಿಗೆ ತರಲಿಲ್ಲ ಎಂದೆನಿಸಿತು ಸರ್ಕಾರದಿಂದ ಕಚೇರಿ ಇಟ್ಟಿದ್ದಾರೆ minorities ನವರು ಮಸೀದಿಯಲ್ಲಿ ಇಟ್ಟುಕೊಂಡಿರುತ್ತಾರೆ, ಆಂದ್ರ ಪ್ರದೇಶದಲ್ಲಿ ಸರ್ಕಾರದವರೇ ಒಂದು Department ಮಾಡಿ, ಆ Department ಮೂಲಕ ಗಂಡು ಹೆಣ್ಣಿಗೆ register ಮಾಡಿಸುತ್ತಾರೆ ನಮ್ಮ ರಾಜ್ಯದಲ್ಲೂ ಇದನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಕಾನೂನು ಮಂತ್ರಿಗಳಿಗೆ ಹೇಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, Indian Marriage Act ನಡಿ Register ಮಾಡಿಸಿಕೊಳ್ಳುವುದು ಕಡ್ಡಾಯ ಆದರೆ, ನಮ್ಮವರು ಮಾಡುವುದಿಲ್ಲ ಈಗ ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಹಿಂದಿನ ದಿವಸ ಮಾಡತಕ್ಕಂಥಾದ್ದು ನಮ್ಮಲ್ಲಿರುವ ಹಳೆಯ ಪದ್ಧತಿಯಂತೆ, ಗಂಡು ಹೆಣ್ಣು ಗೊತ್ತಾದ ತಕ್ಷಣ ಸಣ್ಣ ವೀಳ್ಯವೆಂದು ಕರೆಯುತ್ತಾರೆ ಅದರಲ್ಲಿ ನಮಗೆ ಗೊತ್ತಾಯಿತೆಂದು ಸಕ್ಕರೆ ಹಂಚುತ್ತಾರೆ ದೊಡ್ಡ ವೀಳ್ಯ ಎನ್ನುವುದು ಶ್ರೀಮಂತರಾದವರು ಮೊದಲೇ ಮಾಡಬಹುದು ಇಲ್ಲದಿದ್ದರೆ, ಮದುವೆಯ ಹಿಂದಿನ ದಿವಸಖರ್ಚು ಉಳಿಸಿಕೊಳ್ಳುವುದಕ್ಕೆ ದೊಡ್ಡ ವೀಳ್ಯವೆಂದು ಮಾಡಬಹುದು ಪ್ರಾಯಶಃ ದೊಡ್ಡ ವೀಳ್ಯದ ಬೇರೆ ಸ್ವರೂಪವೇ ಇವತ್ತು ಇವರನ್ನು ಕೂರಿಸಿ ಆರತಕ್ಷತೆ ಮಾಡಿಸತಕ್ಕಂಥಾದ್ದು ಅದು ದಡ್ಡತನವೆಂದು ನಾವು ಯೋಚನೆ ಮಾಡುವುದು

ಶ್ರೀ ಜೆ ಸಿ ಮಾಧುಸ್ವಾಮಿ ವೀಳ್ಯದಲ್ಲಿ ಅವರ ತಂದೆ ತಾಯಿ ಇವರ ತಂದೆ ತಾಯಿ exchange ಮಾಡಿಕೊಳ್ಳುತ್ತಾರೆ ಹುಡುಗ-ಹುಡುಗಿಯನ್ನು ಕೂರಿಸುವುದು ಈಗ fashion ಆಗಿದೆ ಆದರೆ, ಅಷ್ಟಕ್ಕೆ ಅವರು husband and wife ಆಗುವುದಿಲ್ಲ ಮಾಂಗಲ್ಯ ಧಾರಣೆ ಆಗಲೇಬೇಕು

ಶ್ರೀ ಎಂ ಪಿ ಪ್ರಕಾಶ್.We can construe that it is only on engagement or a betrothel ಅದರಾಚೆಗೆ ಇನ್ನೇನೂ ಮಾಡವುದಕ್ಕಾಗುವುದಿಲ್ಲ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮದುವೆಯಾಗುವಾಗಲೇ ಅದನ್ನು ಮಾಡಬೇಕು ಅದನ್ನು ತರುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು

ಶ್ರೀ ನೆ ಲ ನರೇಂದ್ರ ಬಾಬು ಸನ್ಮಾನ್ಯ ಅಧ್ಯಕ್ಷರೆ, ಆಗಿನ ಕಾಲದಲ್ಲಿ ಹಳ್ಳಿಗಳಲ್ಲಿ ಊರುಗಳಲ್ಲಿ ಗಂಡು ಹೆಣ್ಣು ಮದುವೆ ಮಾಡಿ ಕಾರಿನಲ್ಲಿ ಕೂರಿಸಿ ಮದುವೆಯಾಗಿದೆಯೆಂದು ಇಡೀ ಊರಿನಾದ್ಯಂತ ಪ್ರದಕ್ಷಿಣೆ ಹಾಕಿಸುತ್ತಿದ್ದರು ಈಗಿನ ಕಾಲದಲ್ಲಿ ಆರತಕ್ಷತೆಯನ್ನು ಹಿಂದಿನ ದಿವಸವೇ ಏಕೆ ಇಟ್ಟುಕೊಳ್ಳುತ್ತಾರೆಂದರೆ ಬಾಡಿಗೆ ಕೊಡುವುದಕ್ಕಾಗುವುದಿಲ್ಲ ಒಂದು ಹೊತ್ತಿನ ಊಟ ಉಳಿಯುತ್ತದೆ, ಜೊತೆಗೆ ಜನರಿಗೆ convinient ಎಂದು ಅವತ್ತಿನ ದಿವಸ ಗಂಡು ಹೆಣ್ಣಿನ ಕಡೆಯವರು ಮಾಡುವುದು ಶಾಸ್ತ್ರೋಕ್ತವಾಗಿ ಹತ್ತು ದಿವಸಗಳಿಂದಲೇ ಗಂಡು ಹೆಣ್ಣು ನಿಶ್ಚಿತಾರ್ಥವೆಂದು ಒಂದು ಕಡೆಯಲ್ಲಿ ಮದುವೆ ಕಾರ್ಯಗಳು ಶುರುವಾಗುತ್ತದೆ ಈಗಿನ ಕಾಲದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಛತ್ರದ ಬಾಡಿಗೆ ವಿಪರೀತ ಹೆಚ್ಚಾಗಿದೆ ಪ್ಯಾಲೇಸ್‌ನಲ್ಲಿ ಅವರೇ ತಮ್ಮ ಮಗಳ ಮದುವೆ ಮಾಡಿದ್ದು ಗೊತ್ತಿದೆ ಎಷ್ಟು ಖರ್ಚಾಯಿತೆಂದು ಕೇಳಿ ಏಕೆಂದರೆ ವಿಷಯ ಬಹಳ ಕಷ್ಟ ಈಗಿನ ಕಾಲದಲ್ಲಿ ಬಹಳ ಅದ್ದೂರಿಯಾಗಿ ಮದುವೆ ಮಾಡುತ್ತಿದ್ದಾರೆ ನಾವು ಒಂದು ಸ್ಥಾನದಲ್ಲಿರುತ್ತೇವೆ ಎಲ್ಲರನ್ನೂ ಬರಬೇಕೆಂದು ಹೇಳದೇ ಹೋದರೆ ನಿಷ್ಠುರರಾಗುತ್ತೇವೆ ಮಾನ್ಯ ಕಾನೂನು ಸಚಿವರು ಈ ವಿಸ್ಮಯಕ್ಕೆ ಆದ್ಯತೆ ಕೊಟ್ಟು, importance ಕೊಟ್ಟು registration ಮಾಡುವುದಕ್ಕೆ ಆಲೋಚನೆ ಮಾಡಿ ರಾಜ್ಯದಲ್ಲಿ ಒಂದು ಕಾನೂನು ತರಬೇಕೆಂದು ವಿನಂತಿಸಿಕೊಳ್ಳುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ Registration ಬಗ್ಗೆ ಹೊಸದಾಗಿ ಏನೂ ಮಾಡಬೇಕಾಗಿಲ್ಲ ನಮ್ಮ law ನಲ್ಲಿ as it is compulsory ಆಗಿ register ಮಾಡಲೇಬೇಕಾಗಿದೆ ಆದರೆ, foriegn ಗೆ ಹೋಗುವ ಮಕ್ಕಳು ಅವರೆಲ್ಲರೂ ಹೋಗಿ certificate ತರುತ್ತಾರೆ ಉಳಿದವರ್ಯಾರೂ registration ಮಾಡಿಸುವುದಿಲ್ಲ ಅದು ನಂಬಿಕೆಯಲ್ಲಿ ಆಗಿ ಹೋಗುತ್ತದೆ ನಾನು ಮಾನ್ಯ ವಾಟಾಳ್ ನಾಗರಾಜ್‌ರವರ ಅನುಮತಿ ಪಡೆದು ಮದ್ಯೆ ಎದ್ದು ನಿಂತೆ ಈ ನಿರ್ಣಯವನ್ನು ನಾವು introduce ಮಾಡಿ ಬಹಳ ಕಾಲವಾಯಿತು ಅದರ ಮೂಲ ತಿರುಳನ್ನು ಬಹಳ ಜನರು ಮರೆತಂತೆ ಕಾಣುತ್ತದೆ ಇನ್ನು ಸ್ವಲ್ಪ ಎಲ್ಲೋ ಆಚೆ-ಈಚೆ ಹೋಗುತ್ತಿವೆ ಮದುವೆಗಳು institutionalise ಆಗಿದ್ದು ನಮ್ಮ family system ಹೆಚ್ಚು ಸಮರ್ಪಕವಾಗಿ, ಸಾಮರಸ್ಯದಿಂದ ನಡೆಯಬೇಕು ಆಂತರಿಕ ಭಿನ್ನಾಭಿಪ್ರಾಯಗಳು ಬರಬಾರದು, ಸುಗಮವಾಗಿ ನಡೆದುಕೊಂಡು ಹೋಗಬೇಕು, ಪ್ರಾಪ್ತ ವಯಸ್ಸಿಗೆ ಬಂದ ಗಂಡು ಹೆಣ್ಣಿಗೆ ಅಲ್ಲಲ್ಲಿ ಒಂದು ಸಂಬಂಧ ನೋಡಿ ಮದುವೆ ಮಾಡತಕ್ಕಂಥಾದ್ದು ಸರಳ ವಿಚಾರ ಆಗಬೇಕೆಂದು ಹೇಳಿ ಮಾಡಿದ್ದು ಆದರೆ, ಕ್ರಮೇಣ ನಮ್ಮ ಮೌಲ್ಯಗಳೆಲ್ಲವೂ ಬದಲಾದಂತೆ ಮದುವೆಗೆ ವೈಭವೀಕರಣ ಬಂದಿದೆ ಈ ವೈಭವೀಕರಣದಲ್ಲಿ ತೊಡಗುವವರು ಯಾರು ಶಾಸನಬದ್ಧವಾಗಿ ತೆರಿಗೆಗಳನ್ನು ಕಟ್ಟುವುದಿಲ್ಲವೋ, ಅಶ್ಲೀಲವಾದ ಅಕ್ರಮವಾದ ವ್ಯಾಪಾರ-ಸಾಪಾರಗಳಲ್ಲಿ, ರಾಜಕಾರಣದಲ್ಲಿ ಮತ್ತೊಂದರಲ್ಲಿ ತೊಡಗಿರುತ್ತಾರೋ, ಯಾರ್‍ಯಾರಲ್ಲಿ ಅಪಾರವಾಗಿ ಅಕ್ರಮವಾಗಿ ಹಣವಿರುತ್ತದೋ ಅವರು ಆ ಹಣದ ನಗ್ನ ಪ್ರದರ್ಶನ ಮಾಡುವುದಕ್ಕೆ ಮದುವೆಗಳನ್ನು ಒಂದು ಸಾಧನವಾಗಿ ಬಳಸಿ ಕೊಳ್ಳುತ್ತಿದ್ದಾರೆ ಗೌರವ ಯುತವಾಗಿ ಮದುವೆ ಮಾಡಬೇಕಾಗಿರುವವರಿಗೆ ಇದು ದೊಡ್ಡ ಸಮಸ್ಯೆಯಾಗಿ, ಅಪಮಾನವಾಗಿದೆ ಮಾನ ಮರ್ಯಾದೆಯಿಂದ ಬದುಕುವಂತಹ ನಾಗರಿಕರೀಗೆ ತಮ್ಮ ಪ್ರಾಪ್ತ ವಯಸ್ಸಿಗೆ ಬಂದ ಮಕ್ಕಳಿಗೆ ಮದುವೆ ಮಾಡಬೇಕೆಂದರೆ ಇವರು challenge ಆಗಿ ಕುಳಿತುಕೊಂಡಿದ್ದಾರೆ ಮದುವೆ ಎನ್ನುವುದು industry ಆಗಿದೆ ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಇದಕ್ಕೆ ಕಡಿವಾಣ ಹಾಕುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಅವರಲ್ಲಿ ಶ್ರೀಮಂತಿಕೆ ಇದ್ದಲ್ಲಿ ತಮ್ಮ ಹೆಣ್ಣು ಮಕ್ಕಳಿಗೆ ಕೊಟ್ಟುಕೊಳ್ಳಲಿ, ಅವರ ಅಳಿಯಂದಿರಿಗೆ ಕೊಟ್ಟುಕೊಳ್ಳಲಿ ಅದಕ್ಕೆ ನಮ್ಮದೇನೂ ಆಕ್ಷೇಪವಿಲ್ಲ ಆದರೆ ನಮ್ಮೆದುರಿಗೆ ನೀವು ಪ್ರದರ್ಶನ ಮಾಡುವುದಕ್ಕೆ ಬರಬೇಡಿ ಒಂದು

choultry ಯನ್ನು fix ಮಾಡುವಂಥಾದ್ದು vidio ತೋರಿಸತಕ್ಕಂಥಾದ್ದು, 4 ಲಕ್ಷ ರೂಪಾಯಿಗಳನ್ನು ಕೊಟ್ಟು ಅಡುಗೆಯವರನ್ನು ಕರೆಸತಕ್ಕಂಥಾದ್ದು, ಕೊನೆಗೆ ಎಲ್ಲವನ್ನೂ ತೆಗೆದು ಬಿಸಾಕತಕ್ಕಂಥಾದ್ದು ಇದು ನಾಗರೀಕ ಸಮಾಜದಲ್ಲಿ ಕಾನೂನು ಬದ್ಧವಾಗಿ ಬದುಕತಕ್ಕ ಗೌರವಸ್ಥ ಜನರಿಗೆ ಮಾಡತಕ್ಕಂಥಾ ಅಪಮಾನ ಇದೊಂದು ಅಪರಾಧವೇ ಸರಿ ಇದಕ್ಕೆ ನಿಮಗೇನೂ ಹಣ ದೊರಕುವುದಿಲ್ಲ ಈಗ 4–5 ಲಕ್ಷ ಕೊಟ್ಟು ಅವರೆಲ್ಲರೂ ಮದುವೆ ಮಾಡುತ್ತಿದ್ದಾರಲ್ಲಾ, 4 ಲಕ್ಷ ಕೊಡುವಂಥವರು ಗಂಡಾಗಲೀ ಹೆಣ್ಣಾಗಲೀ ಎರಡೂ ಕಡೆಯವರಿಂದ income tax assessmentಕೇಳಿ ನಿಮಗೆ Pancard ಇದೆಯೇ, ಅದು ಇಲ್ಲದೇ ಹೋದರೆ ನೀವು Income tax ತುಂಬದೇ ಹೋದರೆ, ಇಷ್ಟೊಂದು ಹಣ ನಿಮಗೆ ಎಲ್ಲಿಂದ ಬಂತು? ಅವರ ಮೇಲೆ Immediate ಆಗಿ income tax office ನಿಂದ clearance ತೆಗೆದುಕೊಂಡು ಬರಲಿ ಎಂದು ನಾನು ಹೇಳುವುದು ಮದುವೆಗಳನ್ನು ಸರಳೀಕರಣಗೊಳಿಸಿ ವೈಭವ ಮತ್ತು ಅದ್ದೂರಿಯಿಂದ ಮದುವೆಗಳನ್ನು ಆಚರಿಸಿ, ನಾಗರಿಕರಿಗೆ ಅಪಮಾನ ಮಾಡಬೇಡಿ ಎಂಬುದು ಮೂಲ ಉದ್ದೇಶ

ಸಭಾಧ್ಯಕ್ಷರು ಕಾನೂನು ಮಾಡುವುದರಿಂದ ಈ ವಿಚಾರ ಪರಿಹಾರವಾಗುವುದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಅನಂತರ ಮಾನ್ಯ ಮಾಧುಸ್ವಾಮಿಯುವರು, he has raised a very valid point ನೀವು ಯಾವುದೋ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ, ಧರ್ಮಗಳು, ಕುಲ ಮತಗಳನ್ನು ಹಾಕಿಕೊಂಡರೂ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಗಂಡು ಹೆಣ್ಣನ್ನು ಏಕಾ ಏಕಿಯಾಗಿ ಭೇಟಿ ಮಾಡಿಸುವುದಿಲ್ಲ ಒಂದು ಸಣ್ಣ ತೆರೆ ಇರುತ್ತದೆ ಮಧ್ಯೆ ಬಟ್ಟೆ ಇಟ್ಟು ಅದನ್ನು ಹಿಡಿದುಕೊಂಡು ಶಾಸ್ತ್ರಗಳನ್ನು ಮಾಡಿ, ಅದಾದ ಮೇಲೆ ಒಬ್ಬೊಬ್ಬರು ನೋಡುವಂತೆ ಮಾಡುತ್ತಾರೆ ತಮ್ಮದೇ ಆದ ರೀತಿಯಲ್ಲಿ ಸಪ್ತಪದಿ ಮಾಡಿ ಹಿಂದೂ ಧರ್ಮದಲ್ಲಿ ಮಾಡುವಾಗ ಅರ್ಥೇಚ, ಧರ್ಮೇಚ, ಕಾಮೇಚ ನಾತೀಚರಾಮಿ ಎಂದು ಮೂರು ಸಲ ಹೇಳಿಸುತ್ತಾರೆ ಇಸ್ಲಾಂ ಧರ್ಮದಲ್ಲಿ ಆತ ಅಲ್ಲೆಲ್ಲೋ ಇರುವ ಜಮಾಯತ್ ಮೇಲೆ ಪ್ರಮಾಣ ಮಾಡಿ ಇವಳನ್ನು ನನ್ನ ಶ್ರೀಮತಿ

ಎಂದು ಒಪ್ಪಿಕೊಂಡಿದ್ದೇನೆಂದು ಹೇಳಿಸುತ್ತಾರೆ ಅಲ್ ಹಮ್ದುಲ್ಲಿಲ್ಲಾಹ್ ಮೈನೆ ಖುಬೂಲ್ ಕಿಯಾ ಹೂಂ ಎಂದು ಹೇಳಬೇಕು ಅವನು ಸಾಕ್ಷಿಗಳ ಹತ್ತಿರ ಹೋಗಿ ಎಲ್ಲಾ ಗವಾಯಿಗಳ ಹತ್ತಿರ ಹೋಗಿಆಶೀರ್ವಾದ ಮಾಡಿಸಿಕೊಂಡು ಬರಬೇಕು ಒಂದೊಂದು ಧರ್ಮದಲ್ಲೂ ಕೂಡ enforce ಮಾಡಿದ್ದಾರೆ ಇಲ್ಲಿ ಅವರು ಹೇಳುತ್ತಿರುವುದು, it is very valid point you have accepted then as husband and wife before the rites are compelete, before they acquire the ligitimate status of husband and wife machanised sytem ನಲ್ಲಿ choultry costly ಆಗುತ್ತದೆಂದು ಹೇಳುವುದು ಅನಂತರ ಅವರಿಗೆ ಟೈಮ್ ಇರುವುದಿಲ್ಲ ಭಾನುವಾರಕ್ಕೆ adjustment ಮಾಡಬೇಕು orchestra ದವರು ಸಿಗುವುದಿಲ್ಲವೆನ್ನುವ ಕಾರಣಕ್ಕೆ ಲಗ್ನ fix ಮಾಡುವವರೂ ಇದ್ದಾರೆ ಅಡುಗೆಯವರು ಸಿಗುವುದಿಲ್ಲವೆನ್ನುವ ಕಾರಣಕ್ಕೂ ಮಾಡುವವರಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಧಾರಾ ಮಹೂರ್ತ ಎನ್ನುವುದು ಮದುವೆ ಕಾರ್ಯದಲ್ಲಿ ಬಹಳ ಪ್ರಮುಕವಾದ ಘಟ್ಟವಾಗಿದೆ ಅತ್ಯಂತ ಭವನಾತ್ಮಕವಾದ ಗಂಭಿರವಾದ ಘಟ್ಟವಾಗಿದೆ ಮದುವೆ ಹಿಂದಿನ ದಿವಸವೇ ಸೂಟ್ ಹಾಕಿ ಪೀತಾಂಬರ ಧರಿಸಿಕೊಂಡು ಕಾರ್ಯ ನಡೆದುಹೋಗಿರುತ್ತದೆ ಇಬ್ಬರನ್ನೂ ನಿಲ್ಲಿಸಿಕೊಂಡಿರುತ್ತಾರೆ ಬಂದವರಾದ ನಾವುಗಳೆಲ್ಲರೂ ಆ ಗಂಡು ಹೆಣ್ಣು ಯಾರು? ನಾಳೆ ಬೆಳಿಗ್ಗೆ ಧಾರೆ, ಮಹೂರ್ತಕ್ಕೆ ಬರುವವರು ಯಾರು? ಇದು ಬಹಳ ವಿಚಿತ್ರವಾದ ವ್ಯವಸ್ಥೆ ಇವತ್ತು ಏನಾಗಿದೆ? ಮದುವೆ ಎನ್ನುವ ಕಲ್ಪನೆ, ಚಿಂತನೆಯ ಅರ್ಥವೇ ಹೊರಟುಹೋಗಿದೆ ಮದುವೆ ಎನ್ನುವುದಕ್ಕೆ ಜೀವನದ ಉದ್ದಕ್ಕೂ ಅಪಾರವಾದ ಶಕ್ತಿ ಮತ್ತು ಗೌರವ ಇದೆ ಧರಾ ಮಹೂರ್ತ ಅಂದರೆ ಏನು? ಆದರೆ ನಮ್ಮಲ್ಲಿ ಈಗ ಮದುವೆಗೆ ಬಂದಿರುವವರೆಲ್ಲಾ ಧಾರೆಯನ್ನು ಎರೆಯುವುದು ಆ ಹೆಣ್ಣು ಗಂಡಿನ ಕೈಯಲ್ಲಿ ಒಂದು ತೆಂಗಿನ ಕಾಯಿಯನ್ನು ಕೊಟ್ಟು ಮೂರು ಕಡಾಯಿ ಹಾಲನ್ನು ಅಲ್ಲಿ ಇಟ್ಟು ಬಂದವರೆಲ್ಲಾ ಧಾರೆ ಎರೆದರೆ ಆ ಹೆಣ್ಣು ಗಂಡಿನ ಗತಿ ಏನಾಗಬೇಕು? ಧಾರಾ ಮಹೂರ್ತ ಎಂದರೆ ಹೆಣ್ಣನ್ನು ಧಾರೆ ಎರೆಯತಕ್ಕ ತಂದೆ, ತಾಯಿ ಇಬ್ಬರೇ ಹಕ್ಕುಳ್ಳವರು ತಾಯಿ ತಂದೆ ಹೆಣ್ಣಿನ ಅಣ್ಣಾ ತಮ್ಮಂದಿರು ಈ ರೀತಿ ಮೂರು ನಾಲ್ಕು ಜನರು ಮಾತ್ರ

ಧಾರೆ ಎರೆಯಲು ಹಕ್ಕುಳ್ಳವರು ಆದರೆ ಈಗ ಬಂದಿರುವ್ರೆಲ್ಲರೂ ಧಾರೆ ಎರೆಯುವುದು ಸ್ಪೀಕರ್ ಬಂದರು ಧರೆ ಮಾಡಿ, ಅದ್ಯಕ್ಷರು ಬಂದರು ಧಾರೆ ಮಾಡಿ, ಮುಖ್ಯಮಂತ್ರಿ ಬಂದರು ಧಾರೆ ಮಾಡಿ, ಯಾರ ಮಕ್ಕಳನ್ನು ಯಾರು ಧಾರೆ ಮಾಡುವುದು? ಏನು ಇದು ವಿಚಿತ್ರ, ಧಾರೆ ಮಾಡುವಾಗ ನಿಜವಾಗಿಯೂ ಕಣ್ಣಲ್ಲಿ ನೀರು ಬರುವುದು ಯಾರಿಗೆ? ತಂದೆ ಮತ್ತು ಹೆತ್ತ ತಾಯಿಗೆ ಆ ಸಂದರ್ಭದ ದೃಶ್ಯವನ್ನು ನೋಡಿದಾಗ ಸಂತೋಷದ ದೃಶ್ಯದಂತೆ ಕಾಣುವುದಿಲ್ಲ ಆ ದೃಶ್ಯ ನೋಡಿದ ನಮಗೋ ನೋವು ಏಕೆ? ಸಾಕಿದಂಥ ಮಗಳನ್ನು, ಸಣ್ಣ ಮಗುವಿನಿಂದ ಹಾಲನ್ನು ಉಣ್ಣಿಸಿ ದೊಡ್ಡವರನ್ನಾಗಿ ಮಾಡಿ ನಮ್ಮ ಮನೆಯಿಂದ ಮಗಳನ್ನು ಬೇರೆ ಕಳುಹಿಸುವಾಗ ಆ ವೇದನೆ ಇದೆಯಲ್ಲಾ ತಂದೆಗಿಂತ ತಾಯಿಗೆ ಹೆಚ್ಚಿನ ವೇದನೆಯಾಗುತ್ತದೆ ಆ ಮದುವೆಯ ಮಂಟಪದಲ್ಲಿ ನೋಡಿದಾಗ ಅದು ಕಂಡು ಬರುತ್ತದೆ ಶಾಕುಂತಲ ನಾಟಕದಲ್ಲಿ ಬರತಕ್ಕದ್ದು ಹಿಂದೆ ಇತಿಹಾಸದಲ್ಲಿ ಇರತಕ್ಕದ್ದು ಗೌರಿ ಮದುವೆಯಲ್ಲಿ ಈಶ್ವರನನ್ನು ಮದುವೆಯದಾಗಲೂ ಆ ಚಿಂತನೆ ಬರುತ್ತದೆ ಧಾರೆ ಎರೆಯವವರು ಯಾರು ಎಂಬುದು ತೀರ್ಮಾನವಾಗಬೇಕಾಗುತ್ತದೆ ಜೊತೆಗೆ ಮದುವೆಯೂ ಬೇಗನೆ ಮುಗಿಯುತ್ತದೆ ಆದರೆ ಈಗ ಬಂದವರೆಲ್ಲಾ ಧಾರೆ ಎರೆಯುವುದು ಯಾರ ಮಗಳನ್ನು ಯಾರು ಧಾರೆ ಎರೆಯುವುದು? ಇದೊಂದು ಅಸಂಭದ್ಧ ಅವಿವೇಕ ಕೆಲಸ ಸಣ್ಣ ಮಕ್ಕಳೂ ಧಾರೆ ಎರೆಯುವುದು ಅಲ್ಲಿ ಬಂದಿರುವ ಸ್ವಾಮಿಗಳು ಪಂಡಿತರುಗಳು, ಇದರ ಬಗ್ಗೆ ಮನೆಯವರಿಗೆ ಹೇಳಬೇಕು ಧಾರೆ ಎರೆಯುವವರು ಯಾರು ಎಂಬ ಬಗ್ಗೆ ತೀರ್ಮಾನ ಮಾಡಬೇಕು ಇದು ನಿಜಕ್ಕೂ ತಲೆ ತಗ್ಗಿಸತಕ್ಕದ್ದು ಸರಿಯದ ಕ್ರಮವಲ್ಲ ಇದು ಒಳ್ಳೆಯ ನೀತಿಯಲ್ಲ ಒಂದು ಹತ್ತು ಸಾವಿರ ಜನರು ಬಂದಿರುತ್ತಾರೆ ಅವರೆಲ್ಲಾ ಧಾರೆ ಎರೆಯುವುದು! ನಾನು ಅನೇಕ ಕಡೆ ನೋಡಿದ್ದೇನೆ ಧಾರೆ ಎರೆಯಲು ನಮ್ಮನ್ನೂ ಕರೆಯುತ್ತಾರೆ ನಾವು ಏಕೆ ಹೋಗಿ ಧಾರೆ ಎರೆಯಬೇಕು? ವಿಧಿ ಇಲ್ಲ ಕರೆದಿದ್ದಾರೆಂದು ಹೋಗಬೇಕೆ ಹೊರತು ನಮ್ಮ ಮನಃ ಪೂರ್ವಕವಾಗಿ ಹೋಗಿ ಎರೆಯುವುದಿಲ್ಲ

ಶ್ರೀ ಅರಗ ಜ್ಞಾನೇಂದ್ರ, ನಮ್ಮಲ್ಲಿ ಮಾಂಗಲ್ಯ ಧಾರಣೆಯಾದ ನಂತರ ಹಾಲನ್ನು ಹಾಕುವುದು

ಶ್ರೀ ಜೆ ಸಿ ಮಾಧುಸ್ವಾಮಿ ಇಲ್ಲ ಆ ರೀತಿ ಇಲ್ಲ

ಅಧ್ಯಕ್ಷರು ಒಂದೊಂದು ಕಡೆ ಒಂದೊಂದು ಸಂಪ್ರದಾಯವಿದೆ ಅವರು ಹೇಳಲಿ

ಶ್ರೀ ಅರಗ ಜ್ಞಾನೇಂದ್ರ ನಮ್ಮ ಮಲೆನಾಡಿನ ಭಾಗದಲ್ಲಿ ಮಾಂಗಲ್ಯ ಧಾರಣೆಯಾದ ನಂತರ ತಂದೆ ತಾಯಿ ಇಬ್ಬರು ಇದ್ದುಕೊಂಡು ಧಾರೆ ಎರೆದು ಕೊಡುತ್ತಾರೆ ಆ ರೀತಿ ಮಾಂಗಲ್ಯ ಧಾರಣೆಯದ ನಂತರ ಹೆಣ್ಣು ಮತ್ತು ಗಂಡನ್ನು ಚೇರ್ ಮೇಲೆ ಕೂರಿಸಿ ಹಾಲು ಕೊಟ್ಟು ಬಂದವರೆಲ್ಲರೂ ಆಶೀರ್ವಾದ ಮಾಡುವುದು ಕೈ ಮೇಲೆ ಕಾಯಿ ಇಟ್ಟುಕೊಂಡಿರುತ್ತಾರೆ ಅದರ ಮೇಲೆ ಹಾಲನ್ನು ಹಾಕಿ ಸುಖವಾಗಿರಿ ಸರಿಯಾದ ಬಾಳ್ವೆ ನಡೆಸಿ ಎಂದು ಆಶೀರ್ವಾದ ಮಾಡುವುದು ನಿಮ್ಮಲ್ಲಿ ಮಾಂಗಲ್ಯ ಧಾರಣೆಗಿಂತ ಮೊದಲು ಇದನ್ನು ಮಡುತ್ತಾರೆಂದು ನನಗೆ ಗೊತ್ತಿಲ್ಲ ಒಂದೊಂದು ಕಡೆ ಒಂದೊಂದು ಸಂಪ್ರದಾಯವಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಎಲ್ಲಾ ಕಡೆ ಇರುವುದು ಒಂದೇ ಪದ್ಧತಿ ಮಾನ್ಯ ವಾಟಾಳ್‌ರವರು ಹೇಳಿದಂತೆ ಹೆಣ್ಣನ್ನು ಬೆಳೆಸುವಾಗ ವಿಶೇಷವಾದ ಮುತುವರ್ಜಿಯಿಂದ ಬೆಳೆಸುತ್ತೇವೆ ನಮ್ಮಲ್ಲಿ ಹೆಣ್ಣು ಹುಟ್ಟುವಾಗಲೇ ಪದ್ಧತಿಯ ಕಲ್ಪನೆ ಏನೆಂದರೆ ನಾವು ಇವಳನ್ನು ಮತ್ತೊಂದು ಮನೆಗೆ ಕಳುಹಿಸಿ ಕೊಡುತ್ತಿದ್ದೇವೆ ನಮ್ಮಲ್ಲಿ ಇವಳು ಇರುವುದಿಲ್ಲ ಎಂದು ಆದ್ದರಿಂದ ಹೆಣ್ಣು ಮಗುವಿನ ಮೇಲೆ ವಿಶೇಷವಾದ ಮುತುವರ್ಜಿ ಇರುತ್ತದೆ ಆ ತಂದೆ ತಾಯಿ ರಕ್ತ ಹಂಚಿಕೊಂಡು ಹುಟ್ಟಿಕೊಂಡಿರುವ ಅಣ್ಣ ತಮ್ಮಂದಿರೆಲ್ಲರೂ ಕೂಡ ಮದುವೆಯ ಮಂಟಪದಲ್ಲಿ ನಿಂತುಕೊಂಡು ನಾವು ನಮ್ಮ ಮಗುವನ್ನು ಇಷ್ಟು ದಿವಸ ಪ್ರೀತಿಯಿಂದ ಬೆಳೆಸಿ ಸಾಕಿದ್ದೇವೆ, ಇವತ್ತು ನಮ್ಮ ಮಗುವನ್ನು ನಿನ್ನ ಕೈಯಲ್ಲಿ ಇಡುತ್ತಿದ್ದೇವೆ, ನಮ್ಮ ಮಗುವನ್ನು ಚೆನ್ನಾಗಿ ನೋಡಿಕೋ ಎಂದು ಹೇಳಿ ಕಳುಹಿಸಿಕೊಡುವಗ ಅವರಿಗೆ ಕರುಳು ಕಿತ್ತುಕೊಂಡು ಬರುತ್ತದೆ ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿರುತ್ತದೆ ಅದನ್ನು ಯಾರು ಹೇಳಿಕೊಡಬೇಕಾಗಿಲ್ಲ ಅದಕ್ಕೆ ಶೂಟಿಂಗ್ ಬೇಕಾಗಿಲ್ಲ Automatic ಆಗಿ ಕಣ್ಣಿನಲ್ಲಿ ನೀರು ಬರುತ್ತದೆ ಅಂಥ ಭಾವನಾತ್ಮಕವಾದ ಕ್ರಿಯೆ, ಆದ್ದರಿಂದ ಅವನಿಗೆ ಎಲ್ಲವನ್ನೂ ಕೊಟ್ಟು ಸಮರ್ಥನೆ ಮಾಡುವುದು

ಆದರೆ ಈಗ ಅವರನ್ನು ಬಿಟ್ಟು ಸಂಬಂಧ ಇಲ್ಲದೇ ಇರುವವರೆಲ್ಲಾ ಬರುವುದು, ಅವರಿಗೆ ಅಲ್ಲಿ ಕೂರಿಸುವುದು, ಒಂದು ತೆಂಗಿನ ಕಾಯಿಯನ್ನು ಕೊಡುವುದು, ಹಿಂದಿನ ದಿನವೇ ಇವರು ಅಳುವುದು ಗಿಳುವುದೆಲ್ಲಾ ಹೋಗಿಬಿಟ್ಟಿರುತ್ತದೆ ಇವರಿಬ್ಬರು ಪಕ್ಕದಲ್ಲಿ ಕುಳಿತುಕೊಂಡು ಸೂಟ್‌ಗೀಟನ್ನು ಹಾಕಿಕೊಂಡು ಮೆರೆದಿರುತ್ತಾರೆ ಹಾಲು ಹಾಕಲು ಬರುವವರಿಗೆ ಆ ವಿಡಿಯೋದವನು ಬಂದು ನಗಬೇಕು ಸ್ವಾಮಿ ಎಂದು ಹೇಳುತ್ತಾನೆ ನೀವು ನಗುತ್ತಾ ಧಾರೆ ಎರೆಯುತ್ತೀರಿ ಇದು ಏನಾಗುತ್ತದೆಂದರೆ, ಪದ್ಧತಿಗೆ ಸಂಸ್ಕಾರಕ್ಕೆ ಧರ್ಮಕ್ಕೆ ಎಲ್ಲದಕ್ಕೂ ಅಪಚಾರ ಮಾಡಿ ಮಾಡತಕ್ಕ ಅಸಹ್ಯ ಚೇಷ್ಟೆಗಳು ಎಂದು ಅವರು ಹೇಳುತ್ತಿರುವುದು ಇವೆಲ್ಲವನ್ನೂ ನಿಗ್ರಹ ಮಾಡುವ ಬಗ್ಗೆ ಎಲ್ಲರು ಆಲೋಚನೆ ಮಾಡಬೇಕು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಜ್ಞಾನೇಂದ್ರರವರೆ ನಿಮ್ಮಲ್ಲಿನ ಪದ್ಧತಿ ನಮಗೆ ಗೊತ್ತಿಲ್ಲ ಅದರ ಹೆಸರೇ ಧಾರಾ ಮುಹೂರ್ತ ಧಾರೆ ಮಾಡದೆಯೇ ಅವರ ಮಗಳನ್ನು ಇನ್ನೊಬ್ಬರಿಗೆ ವಹಿಸಿಕೊಡುವ ಹಕ್ಕು ತಂದೆ ತಾಯಿಗೆ ಇರುವುದಿಲ್ಲ ಸಾಕು ಮಗಳಾದ ಶಾಕುಂತಲೆಯನ್ನೇ ಕಳುಹಿಸಬೇಕಾದರೆ ಅಷ್ಟೊಂದು ಸಂಯುಮಿಯಾಗಿದ್ದ ಕಣ್ವಮಹರ್ಷಿಗಳೇ ಕಣ್ಣೀರನ್ನು ಹಾಕಿಬಿಟ್ಟರು ಧಾರೆ ಮಾಡದೆಯೇ ಇನ್ನೊಬ್ಬರಿಗೆ ವಹಿಸಿಕೊಡಲು ಸಾಧ್ಯವೇ ಇಲ್ಲ ನಾವು ಅದಕ್ಕೆ ನೀನೇನು ಧಾರೆ ಮಾಡಿ ಕೊಟ್ಟಿದ್ದೀಯಾ ಎಂದು ಕೇಳುವುದು You have to give your right You have to sacrifice your right Then only it can be acquired by somebody ಮೊದಲೇ ಧಾರೆ ಮಾಡುತ್ತಾರೆ ನಿಮ್ಮಲ್ಲೂ ತಂದೆ ತಾಯಿಯರಲ್ಲಿ ಒಬ್ಬರೋ ಇಬ್ಬರೋ ಧಾರೆ ಮಾಡಿರುತ್ತಾರೆ because of mad rush ಆಮೇಲೂ ಸಹ ಹೆಣ್ಣುಗಂಡನ್ನು ಕೂರಿಸಿ ಎಲ್ಲರ ಕೈಯಲ್ಲೂ ಹಾಲನ್ನು ಹಾಕಿಸುತ್ತಾರೆ ಹಾಲನ್ನು ಹಾಕುವುದು ಆಶೀರ್ವಾದ ಮಾಡುವ ಸಂಕೇತವಲ್ಲ ಅಕ್ಷತೆ ಹೂವನ್ನು ಹಾಕುವುದು ಆಶೀರ್ವಾದದ ಸಂಕೇತ ನೀರಿನಲ್ಲಿ ಅಥವಾ ಹಾಲಿನಲ್ಲಿ ಧಾರೆ ಮಡುವವರು ಸಾಕಿ ಬೆಳೆಸಿದವರಾಗಿರಬೇಕು ಮುಂದೆ ಬೆಳೆಸುತ್ತೇವೆಂಬುವವರು ಆಗಿರಬೇಕು ಒಬ್ಬರು ಧಾರೆ ಮಾಡಿಕೊಡುತ್ತಾರೆ ಇನ್ನೊಬ್ಬರು ಧಾರೆ ಮಾಡಿಸಿಕೊಳ್ಳುತ್ತಾರೆ ಧಾರೆ ಮಾಡಿಸಿಕೊಳ್ಳುವವರು ಗಂಡಿನ ಕಡೆಯವರಿರುತ್ತಾರೆ ಧಾರೆ ಮಾಡುವವರು ಹೆಣ್ಣಿನ ಕಡೆಯವರಿರುತ್ತಾರೆ ತಂದೆ ತಾಯಿ, ಅಣ್ಣ ಅತ್ತಿಗೆ ಯರಾದರೂ

ಸಾಕಿ ಸಲಹಿದವರು ಧಾರೆ ಮಾಡುವುದು, ವಾಸ್ತವ್ಯ ಧಾರೆ ಆದ ನಂತರ ಮಾಡುವ ಆಶೀರ್ವಾದವೇನಿದೆ ಅದು ನಮ್ಮಲ್ಲೆಲ್ಲಾ ಇರುವ ಸಂಪ್ರದಾಯ ಅಕ್ಷತೆಯಲ್ಲೇ ನಿಲ್ಲಬೇಕು ಧಾರೆಯಲ್ಲಿ ಅಲ್ಲ ಧಾರೆ ಆ ಕುಟುಂಬಕ್ಕೆ ಆ ಮಗಳನ್ನು ಬೆಳೆಸಿದವರಿಗೆ ಮೀಸಲಾದ ಹಕ್ಕು

ಶ್ರೀ ಎಂ ಪಿ ಪ್ರಕಾಶ್ ಶಾಕುಂತಲದ ಬಗ್ಗೆ ಚರ್ಚೆಯಾಗಿದ್ದರಿಂದ ಗಂಡಸಿನ ಅಹಂಕಾರ ಯಾವ ರೀತಿಯದಾಗಿರುತ್ತದೆ ಎಂದರೆ, ಕಣ್ವನ ಆಶ್ರಮದಲ್ಲಿ ಹೇಳಿ ಕೇಳಿ ಬ್ರಾಹ್ಮಣರು ಇರತಕ್ಕ ಪ್ರದೇಶ ಇವನು ಕ್ಷತ್ರಿಯ, ಆದ್ದರಿಂದ ಮದುವೆಯಾಗಲು ಆಗುವುದಿಲ್ಲ ಆದರೆ ಮೊದಲ ನೋಟದಲ್ಲೇ ಅವರಿಬ್ಬರಿಗೆ ಪ್ರೇಮಾಂಕುರವಾಗುತ್ತದೆ ನಾನು ಪ್ರೀತಿಸುತ್ತೇನೆ ಪ್ರೇಮಾಂಕುರವಾಗಿದೆ ಎಂದರೆ ಅವಳು ಕ್ಷತ್ರಿಯ ಪುತ್ರಿಯೇ ಆಗಿರಬೇಕೆಂದು ಇವನು ಭಾವಿಸಿಕೊಳ್ಳುತ್ತಾನೆ ನಾನು ತಪ್ಪು ಮಾಡುವುದಿಲ್ಲವೆಂದು ಭಾವಿಸಿಕೊಳ್ಳುತ್ತಾನೆ ಅಂದರೆ ಇದು ರಾಜನ ಮತ್ತು ಪುರುಷ ಪ್ರಧಾನ ಸಮಾಜದ ಅಹಂಕಾರ ಆ ಕಾರಣಕ್ಕಾಗಿ ಕಣ್ವ ಹೇಳುವುದಕ್ಕೆ ಮೊದಲೇ ಅವನು ಗಾಂಧರ್ವ್ಯ ವಿಧವಾ ವಿವಾಹವನ್ನು ಮಾಡಿಕೊಂಡು ಬಿಡುತ್ತಾನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಕಣ್ವ ಅವನ ಆಶ್ರಮದಲ್ಲಿ ಎಷ್ಟು ಪ್ರೀತಿ ಮತ್ತು ಮುತುವರ್ಜಿಯಿಂದ ಆ ಹೆಣ್ಣು ಮಗುವನ್ನು ಸಾಕಿರುತ್ತಾನೆ ಆ ಹೆಣ್ಣು ಮಗುವನ್ನು ದುಷ್ಯಂತನ ಕೈಯಲ್ಲಿ ಇಡತಕ್ಕ ನರಳುವಿಕೆ ಇದೆಯಲ್ಲಾ "ನಾನು ಬೆಳೆಸಿದ ಮಗುವನ್ನು ಕಳುಹಿಸಿಕೊಡುತ್ತಿದ್ದೇನೆ" ಎಂಬುವಂಥದ್ದು ಧಾರೆ ಎರೆದು ಕೊಡತಕ್ಕದ್ದೇ ಅದು ಅದೇ ಅಬಿಗ್ನಾ ಶಾಕುಂತಲದಲ್ಲಿ ಎರಡು ಮೂರು ಚಾಪ್ಟರ್ ಬರುತ್ತದೆ ಅದಾದ ಮೇಲೆ ಶಾಕುಂತಲೆ ಆ ಪರಿಸರವನ್ನು ಬಿಟ್ಟು ದುಷ್ಯಂತನಲ್ಲಿಗೆ ಹೋಗಬೇಕಾಗಿದ್ದರೆ ಪ್ರತಿಯೊಂದು ಗಿಡ ಮರ ಬಳ್ಳಿ ಹೂವಿಗೂ ಕೂಡ ತನ್ನ ಅವಳ ಸಂಪರ್ಕವನ್ನು ಹೇಳಿಕೊಂಡು "ನಾನು ಹೀಗೀಗೆ ಇದ್ದೆ, ಬಿಟ್ಟು ಹೋಗುತ್ತಿದ್ದೇನೆ" ಎನ್ನುತ್ತಾಳೆ ಅಂದರೆ ತವರಿನ ಜೊತೆಗೆ ಇರತಕ್ಕ ಆ ನೆಂಟಸ್ತಿಕೆಯ ಪ್ರಾಧಾನ್ಯತೆಯನ್ನು ಪ್ರತಿ ಅಕ್ಷರದಲ್ಲೂ ಅಲ್ಲಿ ತಿಳಿಸಿರತಕ್ಕದ್ದು ಅಂತ ಪವಿತ್ರವಾದ ಹಿನ್ನೆಲೆ ಇರತಕ್ಕ ಈ ಕ್ರಿಯೆಗೆ ಈ ಗತಿ ಬಂತಲ್ಲಾ ಎಂದು ಅವರು ಹೇಳುತ್ತಿರುವುದು

ಶ್ರೀ ಎಂ ಪಿ ಪ್ರಕಾಶ್ ಅಂಥ ಪವಿತ್ರವಾದಂಥ ಮದುವೆಯಾದರೂ ಕೂಡ ಶಾಕುಂತಲೆಗೆ ಎಂಥ ಗತಿಯಾಯಿತು ಎಂಬುದು ಕೂಡ ತಮಗೆ ಗೊತ್ತು

ಶ್ರೀ ಕೆ ಆರ್ ರಮೇಶ್‌ಕುಮಾರ್. ಅದು ಬೇರೆ ಪ್ರಶ್ನೆ ಅದು ಈಗಲೂ ಸುಮಾರು ಆಗುತ್ತಲೇ ಇದೆ

ಶ್ರೀ ಎಸ್ ಅನ್ನದಾನಿ ಒಟ್ಟಾರೆ ಈ ಆಡಂಬರದ ಮದುವೆಗಳನ್ನು ತಪ್ಪಿಸಬೇಕು ಇದನ್ನು ಸರಳೀಕರಣ ಮಾಡಬೇಕು ಎಂದು ಹಿರಿಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ರಮೇಶ್ ಕುಮಾರ್‌ರವರು ಬಹಳ ಚೆನ್ನಾಗಿ ಚರ್ಚೆ ಮಾಡುತ್ತಿದ್ದಾರೆ ಒಳ್ಳೆಯ ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಈ ನಿರ್ಣಯವನ್ನು ಮಂಡಿಸಿ ಚರ್ಚೆಗೆ ಬರುವಷ್ಟರಲ್ಲಿ ಇಲ್ಲಿಯವರೆಗೆ ಲಕ್ಷಾಂತರ ಮದುವೆಗಳಾಗಿಬಿಟ್ಟಿದೆ

ಡಾ ಕೆ ಅನ್ನದಾನಿ (ಮಳವಳ್ಳಿ) ಮಾನ್ಯ ಅಧ್ಯಕ್ಷರೆ, ಬಹಳ ಅತ್ಯುತ್ತಮವಾದಂತಹ ವಿಚಾರವನ್ನು ಈ ಸಭೆಯ ಮುಂದೆ ತಂದಿರುವುದಕ್ಕೆ ಇವತ್ತು ನನಗೆ ಬಹಳ ಸಂತೋಷವಾಗಿದೆ ನಮ್ಮ ಹಿರಿಯರಾದ ಮಾನ್ಯ ರಮೇಶ್‌ಕುಮಾರ್ ಸಾಹೇಬರು ಮತ್ತು ಮಾನ್ಯ ವಾಟಾಳ್ ನಾಗರಾಜ್ ಸಾಹೇಬರು ಎಲ್ಲರೂ ಕೂಡ ಇದರ ಬಗ್ಗೆ ಬಹಳ ಚೆನ್ನಾಗಿ ಚರ್ಚೆ ಮಾಡುತ್ತಿದ್ದಾರೆ ಆ ಚರ್ಚೆಯನ್ನು ನಾನು ಸ್ವಾಗತ ಮಾಡುತ್ತೇನೆ ಆದರೆ ಇವತ್ತು ಈ ಸಂಪ್ರದಾಯಗಳನ್ನು ಹುಟ್ಟು ಹಾಕಿರತಕ್ಕಂತವರು ಯಾರು? ಈ ಸಂಪ್ರದಾಯಗಳನ್ನು ತಡೆಯತಕ್ಕ ಪ್ರಯತ್ನವನ್ನು ಮಾಡಬೇಕಾಗಿರತಕ್ಕವರು ಯಾರು? ಈ ಸಂಪ್ರದಾಯ ಹುಟ್ಟಿಕೊಂಡಿರುವುದರಿಂದ ಆಗತಕ್ಕಂಥ ವೆಚ್ಚಕ್ಕೆ ಕಡಿವಾಣ ಹಾಕುವವರು ಯಾರು? ಈ ಸಂಪ್ರದಾಯಗಳಿಂದಲೇ ಹೆಚ್ಚಿನ ಹಣ ವ್ಯಯವಾಗಿ ಆಡಂಬರ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಇವತ್ತು ನಮ್ಮ ಮಾನ್ಯ ವಾಟಾಳ್ ನಾಗರಾಜ್ ಸಾಹೇಬರು ಹಿಂದಿನ ದಿವಸವೇ ರಿಸೆಪ್ಷನ್ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿದರು ಮದುವೆಗೆ ಮೊದಲೇ ಹಿಂದಿನ ದಿನವೇ ರಿಸೆಪ್ಷನ್ ಅನ್ನು ಛತ್ರದ ಬಾಡಿಗೆ

ಉಳಿಸಲು ಮಾಡುತ್ತಾರೆ ಹಿಂದಿನ ದಿನ ಅರಿಶಿನ ಕೊಡುವ ಮತ್ತು ಚಪ್ಪರ ಹಾಕುವ ಕಾರ್ಯಕ್ರಮ ಮಾಡುತ್ತಾರೆ ಮರುದಿನ ಬೆಳಿಗ್ಗೆ ಮದುವೆ ಮಾಡುತ್ತಾರೆ, ಆ ದಿನ ಮಧ್ಯಾಹ್ನ 3 ಗಂಟೆಗೆ ಛತ್ರ ಬಿಟ್ಟುಬಿಡಬೇಕೆಂಬ ಪದ್ಧತಿಯನ್ನು ಇಟ್ಟುಕೊಳ್ಳಲಾಗಿದೆ ಹಿಂದಿನ ದಿನ ಅವರು ರಿಸೆಪ್ಷನ್ ಮಾಡಲಿಲ್ಲ ಎನ್ನುವುದಾದರೆ ಅವರು ಎರಡು ದಿವಸ ಬಾಡಿಗೆಯನ್ನು ಛತ್ರಕ್ಕೆ ಕೊಡಬೇಕಾಗುತ್ತದೆ ಎರಡು ದಿನದ ಬಾಡಿಗೆಯುನ್ನು ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ರಿಸೆಪ್ಷನ್ ನಡೆಸುವುದನ್ನು ಉಲ್ಟಾ ಮಾಡಿಕೊಂಡಿದ್ದಾರೆ ಮದುವೆಯಾದ ಮೇಲೆಯೇ ರಿಸೆಪ್ಷನ್ ಮಾಡಬೇಕಾದರೆ ಅವರಿಗೆ ಕಷ್ಟವಾಗುತ್ತದೆ ಹಿಂದಿನ ದಿನ ರಾತ್ರಿ ಚಪ್ಪರ ಹಾಕುವ ಮತ್ತು ಗಂಡು ಹೆಣ್ಣಿಗೆ ಅರಿಶಿನ ತಿಕ್ಕುವ ಕಾರ್ಯಕ್ರಮ, ಅದಾದ ಮೇಲೆ ಮದುವೆ, ನಂತರ ರಿಸೆಪ್ಷನ್ ಮಾಡುವುದಕ್ಕೆ ಎರಡು ದಿವಸ ಸಮಯವಾಗುತ್ತದೆ ಎಂಬ ಕಾರಣದಿಂದ ಹಿಂದಿನ ದಿವಸವೇ ರಿಸೆಪ್ಷನ್ ಮಾಡಿ ಹಣ ಉಳಿಸುತ್ತಿದ್ದಾರೆ ಛತ್ರವನ್ನು ಕೇವಲ ಒಂದು ದಿವಸದ ಬಾಡಿಗೆಗೆ ಮಾತ್ರ ಪಡೆದುಕೊಳ್ಳುವುದಕ್ಕೋಸ್ಕರ ಈ ಪದ್ಧತಿಯನ್ನು ಇತ್ತೀಚೆಗೆ ಸ್ವಲ್ಪ ದಿವಸಗಳಿಂದ ರೂಢಿಸಿಕೊಳ್ಳಲಾಗಿದೆ ಹಾಗಾಗಿ

ಶ್ರೀ ಜೆ ಸಿ ಮಾಧುಸ್ವಾಮಿ ಒಂದು ನಿಮಿಷ ವೈಶ್ಯ ಸಮಾಜದವರು ಒಂದು ಡಿಸಿಷನ್ ತೆಗೆದುಕೊಂಡರು marraige ಆದಮೇಲೆ reception ಮಾಡುವುದಕ್ಕೆ ಬಹಳ ದುಬಾರಿಯಾಗುತ್ತದೆ, we have to control this expenditure ಎಂಬ ಬಗ್ಗೆ ಅವರಲ್ಲಿ ಚರ್ಚೆಯಾಯಿತು ಸಾಮಾನ್ಯವಾಗಿ ಮದುವೆ ಆಗುತ್ತಿದ್ದ ದಿವಸವೇ ಮಾಡಿಕೊಳ್ಳುತ್ತಿದ್ದ reception ಕಾರ್ಯಕ್ರಮವನ್ನು ಹೆಚ್ಚು ವೆಚ್ಚವಾಗುತ್ತದೆ ಎಂಬ ಕಾರಣಕ್ಕಾಗಿ ಮಾಡಬಾರದು ಎಂಬ ಡಿಸಿಷನ್ ಅನ್ನು ಮೊದಲ ಬಾರಿಗೆ ವೈಶ್ಯ ಸಮಾಜದವರು ತೆಗೆದುಕೊಂಡರು ಆಗ ಅದಕ್ಕೆ ಪ್ರತಿಯಾಗಿ ಕೆಲವರು youngsters ನೀವು ಮದುವೆಯಾದ ಮೇಲೆ reception ಮಾಡಬೇಡಿ ಎಂದು ಹೇಳುತ್ತಿದ್ದೀರಿ, ನಾವು ಅದನ್ನು ಹಿಂದಿನ ದಿವಸವೇ ಮಾಡಿ ಕೊಳ್ಳುತ್ತೇವೆ ಎಂದರು ಹೀಗೆ ಹಿಂದಿನ ದಿವಸವೇ reception ಮಾಡಬೇಕೆಂದು ಮೂಲತಃ ಅವರೇ ಶುರು ಮಾಡಿದರು ಇದಾದ ಮೇಲೆ ನಗರದಲ್ಲಿ ಕಛೇರಿಗಳಲ್ಲಿ ಕೆಲಸ ಮಾಡುವವರಿಗೆ ಮದುವೆಗೆ ಬರಲಿಕ್ಕಾಗು ವುದಿಲ್ಲ, Evening time ನಲ್ಲಿ reception ಮಾಡಿದರೆ ಎಲ್ಲರೂ

ಬರುತ್ತಾರೆ ಎಂಬ ಕಾರಣದಿಂದ ಹಿಂದಿನ ದಿವಸವೇ reception ಮಾಡುವುದು ಶುರುವಾಯಿತು ಖರ್ಚು ಕಡಿಮೆ ಮಾಡಬೇಕೆಂಬ ಒಳ್ಳೆಯ ಉದ್ದೇಶದಿಂದ reception ಅನ್ನು ಬ್ಯಾನ್ ಮಡಲಾಗಿತ್ತು ಆದರೆ ಅದು ನಂತರ ಹಿಂದಿನ ದಿವಸಕ್ಕೆ ಶಿಫ್ಟ್ ಆಯಿತು

ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) ಮಾನ್ಯ ಅಧ್ಯಕ್ಷರೆ ಹಿಂದಿನ ದಿವಸ reception ನಡೆಸುತ್ತಾರೆ ಎನ್ನುವುದಕ್ಕಿಂತ ಹೆಚ್ಚಾಗಿ ಈ ಒಂದು ವಾಡಿಕೆ ನೂರಾರು ವರ್ಷಗಳಿಂದ ಬೆಳೆದುಕೊಂಡು ಬಂದಿದೆ ಜನರನ್ನು ನಾವು ಜಾಗೃತಗೊಳಿಸದೆ ಹೋದರೆ, ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ನಾವು ಏನೆಲ್ಲಾ ಕಾನೂನುಗಳನ್ನು ಮಾಡಿದರೂ ಕೂಡ ಅದನ್ನು ಕಾರ್ಯ ರೂಪಕ್ಕೆ ತರತಕ್ಕಂತ ಸಂದರ್ಭ ಏನಿದೆ ಅದು ಮುಖ್ಯವಾಗುತ್ತದೆ ನಮ್ಮ ಪರಂಪರೆಯಲ್ಲಿ ಅಪ್ಪ ಹಾಕಿದ ಆಲದ ಮರ ಎಂಬಂತೆ ಇವೆಲ್ಲಾ ಪದ್ಧತಿ ನಡೆದುಕೊಂಡು ಬಂದಿದೆ ನಾವು ಇಲ್ಲಿ ಇಷ್ಟೆಲ್ಲಾ ಚರ್ಚೆ ಮಾಡುತ್ತೇವೆ ಮಾನ್ಯ ಮಹದೇವ ಪ್ರಸಾದ್‌ರವರು ಇಲ್ಲಿ ಈ ನಿರ್ಣಯವನ್ನು ಮಂಡನೆ ಮಾಡಿದ ಮೇಲೆಯೇ ಸಾವಿರಾರು ಆಡಂಬರದ ಮದುವೆಗಳು ನಡೆಯುತ್ತಿವೆ ಎಂಬ ಮಾತನ್ನು ಹೇಳಿದರು ಇದು ಶೆಟ್ಟರು ಸೃಷ್ಟಿ ಮಾಡಿದಂತಹ ವ್ಯವಸ್ಥೆ ಯಾಗಿದೆ ನಾವು ಖರ್ಚು ಹೆಚ್ಚು ಮಾಡಿಕೊಳ್ಳಬಾರದು ಎಂದು ಮಾತನಡುತ್ತೇವೆ ಮತ್ತು ಅದಕ್ಕಾಗಿ ಏನೆಲ್ಲಾ ಮಾಡುತ್ತೇವೆ ಆದರೆ ಒಂದು ಮಾತ್ರ ಸತ್ಯ ಎಲ್ಲರಿಗೂ ನಾವು ಹೇಳುತ್ತೇವೆ ಆದರೆ ನಾವು ಕಾರ್ಯಕ್ರಮ ಮಾಡುವಾಗ ನಾಲ್ಕು ಜನರನ್ನು ಕರೆಯೋಣವೆಂದು ನಲವತ್ತು ಜನರನ್ನು, ನಲವತ್ತು ಜನರನ್ನು ಕರೆಯೋಣವೆಂದು ನಾಲ್ಕು ಶಾವಿರ ಜನರನ್ನು ಮತ್ತು ನಾಲ್ಕು ಸಾವಿರ ಜನರನ್ನು ಕರೆಯೋಣವೆಂದು ಇಪ್ಪತ್ತು ಸಾವಿರ ಜನರನ್ನು ಕರೆಯುವ ಮಟ್ಟಕ್ಕೆ ಹೋಗಿಬಿಡುತ್ತೇವೆ ಮಾನ್ಯ ಅರಗ ಜ್ಞಾನೆಂದ್ರ ಅವರು ನಮ್ಮಲ್ಲಿ ಮಾಂಗಲ್ಯ ಧಾರಣೆಯಾದ ಮೇಲೆ ಧಾರೆ ಎರೆಯುವ ಸಂಪ್ರದಾಯವಿದೆ ಎಂದರು ತಾಳಿ ಕಟ್ಟುವುದಕ್ಕೆ ಮುಂಚೆಯೇ ಧಾರೆ ಎರೆಯಲಾಗುತ್ತದೆ ಎಲ್ಲೋ ಒಂದು ಕಡೆ ಕೆಲವರು ಅದನ್ನು ಅಳವಡಿಸಿಕೊಂಡು ಬೇರೆಯವರು ಅದನ್ನು ಅಳವಡಿಸಿಕೊಳ್ಳದೇ ಇರಬಹದು ಆದರೆ ಒಂದಂತೂ ಸತ್ಯ ತಂದೆ ತಾಯಿ ಹೆಣ್ಣಿನವರು ಗಂಡಿನವರು ಯಾರೇ ಮಾಡಿದರೂ ಸಹ ತಾಳಿ ಕಟ್ಟುವುದಕ್ಕೆ ಮುಂಚಿತವಾಗಿಯೇ ಶಾಸ್ತ್ರೋಕ್ತವಾಗಿ ಧಾರೆ ಎರೆಯತಕ್ಕಂತದ್ದು ಎಲ್ಲಾ ಸಂಪ್ರದಾಯಗಳಲ್ಲೂ

ಸಹ ಇದೆ ಎಲ್ಲೋ ಒಂದು ಕಡೆ ಬೇರೆಯವರನ್ನು ಸಂತೈಸುವುದಕ್ಕೋಸ್ಕರ ವಾಗಿ ಈ ಒಂದು ಪದ್ಧತಿಯನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ ನನ್ನ ಮಗನ ಮದುವೆಯನ್ನು ದಾವಣಗೆರೆಯಲ್ಲಿ ಮಾಡಿದಾಗ ನಾನು ಮತ್ತು ನಮ್ಮ ಶ್ರೀಮತಿಯವರು ಮತ್ತು ಅವರ ಬೀಗರು ಇತ್ಯಾದಿ ಐದಾರು ಜನರ ಸಮ್ಮುಖದಲ್ಲಿ ತಾಳಿ ಕಟ್ಟಿಸಿದೆವು ನನ್ನ ಸ್ವಂತ ಭಾವ ನನಗೆ ಮುಹೂರ್ತಕ್ಕೆ ಕರೆದು ನೀವು ನನಗೆ ಮುಹೂರ್ತ ಮಾಡಲಿಕ್ಕೆ ಬಿಡಲಿಲ್ಲ ಏಕೆ ಈ ತರಹ ಮಾಡಿದಿರಿ? ಇಂತಹ ಮದುವೆಗೆ ನನಗೇಕೆ ಕರೆಯಬೇಕಿತ್ತು ಎಂದು ಮುನಿಸಕೊಂಡು ಹೊರಟು ಹೋದರು ಈ ಪರಿಪಾರ ಸಹಸ್ರಾರು ವರ್ಷಗಳಿಂದ ಬೆಳೆದುಕೊಂಡು ಬಂದು, ಇದೊಂದು ರೀತಿಯ ಅಂಟು ಜಾಡ್ಯವಾಗಿದೆ ಈ ಅಂಟುಜಾಡ್ಯವನ್ನು ಹೇಗೆ ತೆಗೆದು ಹಾಕಬೇಕೆಂದು ಯೋಚಿಸಬೇಕು ಸಾಮಾನ್ಯ ಜನರಲ್ಲಿ ಎಂತಹ ಬಡವನಾದರೂ ಕೂಡ ಅವನ ಆಸ್ತಿಯನ್ನು ಮಾರಿ ಆಡಂಬರದ ಮದುವೆ ಮಾಡಬೇಕಂದು ಹೊರಟಿದ್ದಾನೆ ನಮ್ಮ ಪಕ್ಕದ ಮನೆಯವರು ಹೇಗೆ ಮಾಡಿದರೋ ಅದೇ ರೀತಿಯಲ್ಲಿ ನಾನೂ ಮದುವೆ ಮಾಡಬೇಕೆಂದು ಅವರು ಹೊರಡುತ್ತಾರೆ ಇನ್ನು ಮದುವಯಾದ ಮೇಲೆ ಬೀಗರ ಊಟವೆಂದು ಕಾರ್ಯಕ್ರಮಕ್ಕೆ ಮಾಡುತ್ತಾರೆ ಎಷ್ಟೋ ಮನೆಗಳಲ್ಲಿ ಸಾಲ ಮಡಿ ಅದಕ್ಕೆ ಬಡ್ಡಿ ಕಟ್ಟಲಿಕ್ಕೆ ಆಗದೇ ಅವರ ಪರಿಸ್ಥಿತಿಯನ್ನು ನಾವು ನೋಡಲಿಕ್ಕಾಗುವುದಿಲ್ಲ ಇದೆಲ್ಲದರ ಬಗ್ಗೆ ನಾವು ಯೋಚಿಸಿದಾಗ ಇದರ ಬಗ್ಗೆ ಜನರನ್ನು ಜಾಗೃತ ಗೊಳಿಸುವಂಥಾದ್ದು ಒಂದು ಕಡೆ ಆಗಬೇಕಾಗುತ್ತದೆ ಆಡಂಬರದ ಮದುವೆ ಆಗುವುದರಿಂದ ತೊಂದರೆಯಾಗುತ್ತದೆ ಎಂದು ಸಾಮಾನ್ಯ ಕುಟುಂಬದವರಿಗೆ ತಿಳಿಸಿ ಹೇಳಬೇಕಾಗುತ್ತದೆ ಶ್ರೀಮಂತರಿಗೆ ಇದರಿಂದ ಏನೂ ತೊಂದರೆ ಆಗುವುದಿಲ್ಲ ತುಂಬಾ ಕಡು ಬಡವರೂ ಸಹ ತಮ್ಮ ಇತಿ ಮಿತಿಯಲ್ಲೇ ಮದುವೆಗಳನ್ನು ಮಾಡುತ್ತಾರೆ ಮಧ್ಯಮ ವರ್ಗದವರು ಮಾತ್ರ ಆಡಂಬರದ ಮದುವೆಗಳನ್ನು ಮಾಡುತ್ತಾರೆ ಈ ಮದ್ಯಮ ವರ್ಗದ ಕುಟುಂಬ ವ್ಯವಸ್ಥೆ ಏನಿದೆ, ಇದನ್ನು ನಾವು ಎಲ್ಲಾದರೂ ಸರಿಪಡಿಸದೇ ಹೋದರೆ ನಾವು ಏನು ಮಡಿದರೂ ಕೂಡ ಇದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ ಆದರೆ ಒಂದಂತೂ ಸತ್ಯ ಇದು ತಾನೇ ತಾನಾಗಿ ನಿಲ್ಲತಕ್ಕಂಥ ಸಂದರ್ಭ ಸೃಷ್ಟಿ ಮಾಡಬೇಕಾಗುತ್ತದೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ತಂದಿರತಕ್ಕಂಥ ಈ ನಿರ್ಣಯ ಏನಿದೆ ಇದು ನಿಜವಾಗಿಯೂ ಕೂಡ ಸ್ವಾಗತಾರ್ಹ ಸಾಮಾನ್ಯರು ಇದನ್ನು ಒಪ್ಪುವುದಕ್ಕೆ

ಏನಾದರೂ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡರೆ ಮಾತ್ರ ಇದರ ಅನುಷ್ಠಾನ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಇಲ್ಲಿ ನಾವು ಸುಮ್ಮನೆ ಅದರ ಬಗ್ಗೆ ಮಾತನಾಡಿದಂತಾಗುತ್ತದೆ ಮಾನ್ಯ ರಮೇಶ್ ಕುಮಾರ್ ಅವರೇನಾದರೂ ನಾಳೆ ಇಂತಹ ದೊಡ್ಡ ಮದುವೆಯೊಂದಕ್ಕೆ ಹೋಗುವುದಿಲ್ಲ ಎಂದರೆ, ಅವರ ಕ್ಷೇತ್ರದ ಜನ ಅವರಿಗೆ ಎಲ್ಲೋ ಒಂದುಕಡೆ ತೊಂದರೆ ಕೊಡುವಂಥಹ ಪರಿಸ್ಥಿತಿ ಉದ್ಭವವಾಗುತ್ತದೆ ಮಾನ್ಯ ವಾಟಾಳ್ ನಾಗರಾಜ್‌ರವರು ನಾನು ಇಂತಹ ಮದುವೆಗೆ ಬರುವುದಿಲ್ಲ ಎಂದರೆ ಏನ್ ಸ್ವಾಮಿ? ನಾವು ನಿಮಗಾಗಿ ದುಡಿದಿಲ್ಲವೇ? ನಾವು ನಿಮ್ಮ ಜೊತೆಗೆ ಹೋರಾಟ ಮಾಡಲಿಲ್ಲವೇ? ನಿಮ್ಮ ಜೊತೆಗೆ ಏನೆಲ್ಲಾ ಮಾಡಲಿಲ್ಲವೆ? ನೀವ್ಯಾಕೆ ನಮ್ಮ ಮಗನ ಮದುವೆಗೆ ಬರುವುದಿಲ್ಲ? ಎಂದು ಕೇಳುವಂತಹ ಪ್ರಸಂಗ ಸೃಷ್ಟಿಯಾಗಿ ಹೋಗಿದೆ ಇದು ಹೆಮ್ಮರವಾಗಿ ಬೆಳೆದು, ಇಂದು ಇದೊಂದು ದೊಡ್ಡ ಆಲದ ಮರವಾಗಿದೆ ಇದಕ್ಕೆ ನಾವು ಯಾವ ರೀತಿಯಾಗಿ ಕಡಿವಾಣ ಹಾಕಬೇಕು, ಏನು ಮಾಡಿದರೆ ಇದು ಸರಿ ಹೋಗುತ್ತದೆ, ಯಾವ ರೀತಿಯಾಗಿ ಇದಕ್ಕೆ ನಾವು ಕಾರ್ಯಕ್ರಮಗಳನ್ನು ನಿರೂಪಣೆ ಮಾಡಬೇಕು ಎಂದು ಯೋಚಿಸಬೇಕು ಆ ರೀತಿ ಏನಾದರೂ ಮಾಡಿದ್ದೇ ಆದರೆ ಮಾತ್ರ ಇದನ್ನು ನಿಲ್ಲಿಸಲು ಸಾಧ್ಯವಾಗುತ್ತದೆ ಇಲ್ಲದಿದ್ದರೆ ಇದನ್ನು ನಿಲ್ಲಿಸಲು ಸಾದ್ಯ ವಾಗುವುದಿಲ್ಲ

[ಗೊಂದಲ]

ಶ್ರೀ ಆರ್ ಧೃವನಾರಾಯಣ್ ಮಾತನಾಡತಕ್ಕವರೆಲ್ಲಾ ಈಗಾಗಲೇ ದೊಡ್ಡ ದೊಡ್ಡ ಮದುವೆ ಮಾಡಿ ಬಿಟ್ಟಿದ್ದಾರೆ ದೊಡ್ಡ ದೊಡ್ಡ ಮದುವೆಗಳೆಲ್ಲಾ ಮಾಡಿ ಈಗ ಸರಳ ಮದುವೆಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ, ಮಾತನಾಡತಕ್ಕವರು ಮೊದಲು ಸರಳ ಮದುವೆ ಮಾಡಿ ತೋರಿಸಬೇಕು

[ಗೊಂದಲ]

ಮೊದಲು ಅದ್ದೂರಿಯಾಗಿ ಮದುವೆ ಮಾಡಿ ಇವರು ಈಗ ಸರಳವಾಗಿ ಮದುವೆ ಮಾಡಿ ಎಂದರೆ ಎಂದು ಹೇಳುತ್ತಿದ್ದಾರೆ

[ಗೊಂದಲ]

ಅಧ್ಯಕ್ಷರು ಏಕೆ ಎಲ್ಲರೂ ನಿಂತುಕೊಂಡು ಮಾತನಾಡುತ್ತಿದ್ದೀರಿ ಬಹಳ ಗಂಭೀರವಾದ ವಿಚಾರವಿದು

[ಗೊಂದಲ]

ಶ್ರೀ ಹೆಚ್ ಡಿ ಬಸವರಾಜ್ ಸರಳೀಕರಣದ ಬಗ್ಗೆ ಈ ಮನೆಯಲ್ಲಿ ಮಾತನಾಡುತ್ತಿದ್ದಾರೆ ಆದರೆ ಅವರಲ್ಲಿ ಎಷ್ಟು ಜನರು ಸರಳೀಕರಣದ ಮದುವೆ ಮಾಡಿದ್ದಾರೆ? ಒಬ್ಬರಾದರೂ ಮುಂದೆ ಬಂದು ಆ ರೀತಿ ಸರಳೀಕರಣದ ಮದುವೆ ಮಾಡಿದ್ದೇವೆಂದು ಹೇಳಲಿ ನೋಡೋಣ

[ಗೊಂದಲ]

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಏಕೆ ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದೀರಿ

[ಗೊಂದಲ]

ಶ್ರೀ ಹೆಚ್ ಡಿ ಬಸವರಾಜ್ ಇಲ್ಲಿ ಭಾಷಣ ಬೇಡ ಸಾರ್ ನಾವು ಏನಾದರೂ ಕಾನೂನು ತರಲಿಕ್ಕಾಗುತ್ತದೆಯೇ?

[ಗೊಂದಲ]

ಅಧ್ಯಕ್ಷರು ಎಲ್ಲರೂ ಒಟ್ಟಿಗೆ ನಿಂತುಕೊಂಡು ಮಾತನಾಡಿದರೆ ಹೇಗೆ?

[ಗೊಂದಲ]

ಶ್ರೀ ಹೆಚ್ ಡಿ ಬಸವರಾಜ್ ಇದೊಂದು ತರಹ ಮೊಸಳೆ ಕಣ್ಣೀರು ಸುರಿಸಿದಂತಾಗುತ್ತದೆ ಸಾರ್

[ಗೊಂದಲ]

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಒಟ್ಟಿಗೇ 4-5 ಜನ ಮಾತನಾಡಲು ನಿಂತುಕೊಂಡರೆ ಏನು ಮಾಡಲಿಕ್ಕಾಗುತ್ತದೆ

[ಗೊಂದಲ]

ಡಾ ಕೆ ಅನ್ನದಾನಿ ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದನ್ನು ಮುಂದುವರೆಸುತ್ತೇನೆ ಒಟ್ಟಾರೆಯಾಗಿ ನಮ್ಮ ಹಿಂದೂ ಧರ್ಮದ ಸಂಪ್ರದಾಯಗಳು ಮತ್ತು ಕಟ್ಟುಪಾಡುಗಳಿಂದಲೇ ಇಷ್ಟೊಂದು ದುಂದು ವೆಚ್ಚವಾಗುತ್ತಿರುವುದನ್ನು ನಾವೆಲ್ಲರೂ ಕೂಡ ನೋಡಿದ್ದೇವೆ ಇವತ್ತು ಹಿಂದೂ ಸಂಪ್ರದಾಯದಲ್ಲಿ ನಾವೆಲ್ಲರೂ ಬಹಳ ಕಟ್ಟುಪಾಡುಗಳನ್ನು ಆಚರಣೆ ಮಾಡುತ್ತೇವೆ ಆದ್ದರಿಂದ ಲಕ್ಷಾಂತರ ಹಣವನ್ನು ಖರ್ಚು ಮಾಡತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ ಇವತ್ತು ನಮ್ಮ ಹಿಂದೂ ಧರ್ಮದ ಸಂಪ್ರದಾಯಗಳು ಹೇಗಿವೆ ಎಂದರೆ, ಮದುವೆಗೂ ನಾವು ಹಾಲು ಬಿಡುತ್ತೇವೆ, ಹಾಗೆಯೇ ಯಾರಾದರೂ ಸತ್ತು ಹೋದರೆ ತಿಥಿಗೂ ಕೂಡ ಹಾಲು ಬಿಡುತ್ತೇವೆ

[ಗೊಂದಲ]

ಶ್ರೀ ಆರ್ ಧ್ರುವನಾರಾಯಣ್ ಶಾಸಕರೊಬ್ಬರು ತಮ್ಮ ಮಗನ ಬರ್ತ್‌ಡೇಯನ್ನೇ ಬಹಳ ಅದ್ಧೂರಿಯಾಗಿ ಮಾಡಿದರು

[ಗೊಂದಲ]

ಡಾ ಕೆ ಅನ್ನದಾನಿ ಮಾನ್ಯ ಅದ್ಯಕ್ಷರೆ, ನೆನ್ನೆ ದಿವಸ ನಾನು ನನ್ನ ಕ್ಷೇತ್ರದಲ್ಲಿ ಸರಳ ಸಾಮೂಹಿಕ ವಿವಾಹವನ್ನು ಏರ್ಪಾಟು ಮಾಡಿದ್ದೆ ಸುಮಾರು 30 ಜೋಡಿಗಳಿಗೆ ನಿನ್ನೆ ಸರಳ ಸಾಮೂಹಿಕ ವಿವಾಹವನ್ನು ಏರ್ಪಾಟು ಮಾಡಿದ್ದೇನೆ ಇವತ್ತು ಎಲ್ಲಾ ಶಾಸಕರು ಮತ್ತು ಎಲ್ಲಾ ಜನ ಪ್ರತಿನಿಧಿಗಳು ಈ ಕೆಲಸವನ್ನು ಮಾಡಿದಾಗ

[ಗೊಂದಲ]

ಅಧ್ಯಕ್ಷರು ಸುಮ್ಮನೆ ಕುಳಿತುಕೊಳ್ಳಿ ಮಾನ್ಯ ಸದಸ್ಯರು ತಮ್ಮ ಅನುಭವಗಳನ್ನು ಏನೋ ಹೇಳುತ್ತಿದ್ದಾರೆ

[ಗೊಂದಲ]

ಮಾನ್ಯ ಅನ್ನದಾನಿಯುವರೆ ತಾವು ಮಾತನಾಡುವುದನ್ನು ಮುಂದುವರೆಸಿ

ಡಾ ಕೆ ಅನ್ನದಾನಿ ಮಾನ್ಯ ಅಧ್ಯಕ್ಷರೆ, ಇಲ್ಲಿ ಸಂತೆ ತರಹ ಆಗಿದೆ ನಾವು ಯಾವ ರೀತಿ ಮಾತನಾಡಬೇಕು? ಈ ರೀತಿ ಅಕ್ಕಪಕ್ಕದಲ್ಲಿ ಡಿಸ್ಟರ್ಬ್ ಆಗುತ್ತಿದ್ದರೆ ನಾನು ಹೇಗೆ ಮಾತನಾಡಲು ಸಾಧ್ಯ? ಒಟ್ಟಾರೆಯಾಗಿ ಇದಕ್ಕೆ ಕಡಿವಾಣ ಹಾಕಬೇಕಾದರೆ, ಮದುವೆಯ ಸಂಪ್ರದಾಯಗಳು ಮತ್ತು ಪದ್ಧತಿಗಳೇನಿವೆ, ಇದನ್ನು ಸಂಪೂರ್ಣವಾಗಿ ಬದಲಾವಣೆ ಮಾಡ ಬೇಕಾಗುತ್ತದೆ ಇವತ್ತು ಆಂಧ್ರದಲ್ಲಿ ಹೊಸದಾಗಿ ಮದುವೆ ಪದ್ಧತಿಯೊಂದನ್ನು ಜಾರಿಗೆ ತಂದಿದ್ದಾರೆಂದು ಹಿರಿಯ ಮುಖಂಡರಾದ ಮಾನ್ಯ ಶ್ರೀನಿವಾಸ ಗೌಡರು ಹೇಳಿದ್ದಾರೆ ಮದುವೆಯಾದ ಮೇಲೆ ಅದನ್ನು ರಿಜಿಸ್ಟರ್ ಮಾಡತಕ್ಕಂಥ ಪದ್ಧತಿಯುನ್ನು ಜಾರಿಗೆ ತರಬೇಕೆಂದು ಅವರು ಮಾತನಾಡುವಾಗ ಹೇಳಿದ್ದಾರೆ ನಿಜವಾಗಿಯೂ ಕೂಡ ಈ ರಿಜಿಸ್ಟರ್ ಮಾಡತಕ್ಕಂತಹ ಪದ್ಧತಿಯನ್ನು ಜಾರಿಗೆ ತಂದರೆ ಅದು ಬಹಳ ಒಳ್ಳೆಯ ಕೆಲಸ ಈ ಸಂಪ್ರದಾಯಕ್ಕೂ ನಾವು ಕಡಿವಾಣ ಹಾಕಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳುತ್ತಾ ಇಂತಹ ನಿರ್ಣಯುವನ್ನು ತಂದಿರತಕ್ಕಂತಹದ್ದು ಒಳ್ಳೆಯ ಬೆಳವಣಿಗೆ ಒಟ್ಟಾರೆಯಾಗಿ ಈ ಸಭೆಯಲ್ಲಿ ಒಂದು ಅಂತಿಮ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ ಇವತ್ತು ಬಡವರನ್ನು ಆರ್ಥಿಕವಾಗಿ ಹಿಂದುಳಿದಿರತಕ್ಕಂತಹವರನ್ನು ಈ ದೇಶದಲ್ಲಿ ನಾವೇನಾದರೂ ಉಳಿಸಬೇಕೆಂದರೆ ಈ ಮದುವೆ ಮತ್ತು ಸಂಪ್ರದಾಯಗಳನ್ನು ನಾವು ಕಿತ್ತು ಹಾಕಬೇಕಾಗುತ್ತದೆ ಕೆಲವು ಮಟ್ಟಿಗೆ ನಾವು ಈ ಸಂಪ್ರದಾಯ ಗಳನ್ನು ಕಡಿಮೆ ಮಾಡಿಕೊಂಡು ನಾವು ಮಾಡಿದಂತಹ ಸಂದರ್ಭದಲ್ಲಿ ಈ ಬಡ ಜನರನ್ನು ಈ ದೇಶದಲ್ಲಿ ಉಳಿಸತಕ್ಕಂತಹ ಕೆಲಸವನ್ನು

ಮಾಡಬೇಕಾಗುತ್ತದೆ ಅದಕ್ಕೆಲ್ಲಾ ನಾವೆಲ್ಲಾ ಜನ ಪ್ರತಿನಿದಿಗಳು ಮಾದರಿಯಾಗಬೇಕಾಗುತ್ತದೆ ಶಾಸಕರಾಗಬಹದು, ಮಂತ್ರಿಗಳಾಗಬಹುದು, ಐ ಎ ಎಸ್ ಅಧಿಕಾರಿಗಳಾಗಿರಬಹುದು ಇವತ್ತು ಆರ್ದಿಕವಾಗಿ ಚೆನ್ನಾಗಿ ಇರತಕ್ಕಂತಹವರು ನಾನು ಚೆನ್ನಾಗಿ ಇದ್ದೇನೆಂದು ಅರಮನೆಯಲ್ಲಿ ಮದುವೆ ಮಾಡತಕ್ಕಂಥಾದ್ದು ಅವರನ್ನು ನೋಡಿಕೊಂಡು ಆರ್ಥಿಕವಾಗಿ ಕೆಳ ಮಟ್ಟದಲ್ಲಿರುವವರು ನಾನೂ ಕೂಡ ಅರಮನೆಯಲ್ಲಿ ಮದುವೆ ಮಾಡಬೇಕೆಂದು ಸಾಲ ಮಾಡಿಕೊಂಡು ಅರಮನೆಯಲ್ಲಿ ಮದುವೆ ಮಾಡಿ ಅವನು ಕೊನೆಯವರೆಗೂ ಸಾಲದಲ್ಲಿಯೇ ಸತ್ತು ಹೋಗುತ್ತಾನೆ ಸಾಲ ಮಾಡಿ ಸಾಲ ತೀರಿಸುವುದಕ್ಕಾಗದೇ ಬಡ್ಡಿ ಕಟ್ಟಿ ಕೊನೆಗೆ ಆ ಸಾಲದಲ್ಲಿಯೇ ಸತ್ತು ಹೋಗುವಂತಹ ಪರಿಸ್ಥಿತಿ ಆಗುತ್ತದೆ ಒಳ್ಳೆಯ ನಿರ್ಣಯವನ್ನು ನಮ್ಮ ಹಿರಿಯ ನಾಯಕರುಗಳು ತಂದಿದ್ದಾರೆ ಇಂತಹ ಕೆಟ್ಟ ಸಂಪ್ರದಾಯಗಳನ್ನು ನಾವು ದೂರ ಇಡಬೇಕಾಗುತ್ತದೆ ಮದುವೆಗಳ ಸರಳೀಕರಣ ಮಾಡುವುದಕ್ಕೆ ಏನೇನು ವ್ಯವಸ್ಥೆ ಬೇಕು, ಯಾವ ರೀತಿ ನಾವು ಮಾಡಬೇಕು ಎನ್ನ ತಕ್ಕಂಥಹದನ್ನು ನಾವು ಯೋಜನೆ ತಯಾರು ಮಾಡಿ ಕಾನೂನು ಜಾರಿಗೆ ತಂದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ

ಅಧ್ಯಕ್ಷರು. ಸದನವನ್ನು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 12 01 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 9ನೇ ಜುಲೈ 2007 ರ ಸೋಮವಾರದಂದು ಬೆಳಿಗ್ಗೆ 10 00 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ

ಐದನೇ ಅದಿವೇಶನದ ಮುಂದುವರೆದ ಉಪವೇಶನ

ಶ್ರೀ ಕೃಷ್ಣ

ಆದ್ಯಕ್ಷರು

ಶ್ರೀ ಎನ್ ವೈ ಗೋಪಾನಕೃಷ್ಣ

ಉಪಾಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ಸೋಮವಾರ 9ನೇ ಜುಲೈ 2007 ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10–26 ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು/ಉಪಾಧ್ಯಕ್ಷರು

ಶ್ರೀ ಕೃಷ್ಣ

ರವರು ಪೀಠವನ್ನು ಅಲಂಕರಿಸಿದ್ದರು

ಸಂತಾಪ ಸೂಚನೆ

ವಿಷಯ ದಿವಂಗತ ಚಂದ್ರಶೇಖರ್, ಮಾಜಿ ಪ್ರಧಾನ ಮಂತ್ರಿ ಇವರ ನಿಧನದ ಬಗ್ಗೆ

ಮಾನ್ಯ ಸಭಾಧ್ಯಕ್ಷರು ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ್ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ ಭಾರತದ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಹಾಲಿ ಲೋಕಸಭಾ ಸದಸ್ಯರಾದ ಶ್ರೀ ಚಂದ್ರಶೇಖರ್ ಆವರು 1927ನೇ ಜುಲೈ 1ರಂದು ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯ ಇಬ್ರಾಹಿಂ ಪಟ್ಟಿಯ ರೈತ ಕುಟುಂಬದಲ್ಲಿ ಜನಿಸಿದ್ದರು ವಿದ್ಯಾರ್ಥಿ ದಿಸೆಯಿಂದಲೆ ಅನ್ಯಾಯದ ವಿರುದ್ಧ ಸಿಡಿದೇಳುವ ಮನೋಭಾವವನ್ನು ಹೊಂದಿದ್ದ ಶ್ರೀಯುತರು ಅಲಹಾಬಾದ್ ವಿಶ್ವವಿದ್ಯಾನಿಲಯದಲದಲ್ಲಿ ಎಂ ಎ ಪದವಿಯನ್ನು ಗಳಿಸಿದ್ದು, ಸಾಮಾಜಿಕ ಚಳವಳಿಯಲ್ಲಿ ಪಾಲ್ಗೊಂಡಿದ್ದರು ಪ್ರಜಾ ಸೋಷಿಯಲಿಸ್ಟ್ ಪಕ್ಷದಿಂದ 1962ರಲ್ಲಿ ಪ್ರಥಮ ಭಾರಿಗೆ ರಾಜ್ಯ ಸಭೆಗೆ ಚುನಾಯಿತರಾಗಿ ಮೂರು ವರ್ಷದ ನಂತರ ಕಾಂಗ್ರೆಸ್ ಪಕ್ಷ ಸೇರಿ, ಸಂಸದೀಯ ಪಕ್ಷದ ಕಾರ್ಯದರ್ಶಿಯಾಗಿದ್ದರು ಆಡಳಿಲ ಪಕ್ಷದಲ್ಲಿದ್ದರೂ ಏಕಸ್ವಾಮ್ಯ, ಉದಾರೀಕರಣದಂತಹ ನೀತಿಗಳನ್ನು ಧೈರ್ಯವಾಗಿ ವಿರೋಧಿಸಿ "ಯಂಗ್ ಟರ್ಕ್" ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷದಿಂದ ಹೊರ ನಡೆದು ಸೆರೆಮನೆವಾಸ ಅನುಭವಿಸಿ 1977ರಲ್ಲಿ ಪ್ರಪ್ರಥಮ ಭಾರಿಗೆ ಉದಯವಾದ ಜನತಾ ಪಕ್ಷದ ಅಧ್ಯಕ್ಷರಾಗಿದ್ದ ಶ್ರೀಯುತರು ಆರನೇ ಲೋಕಸಭೆಗೆ ಬಲಿಯಾ ಕ್ಷೇತ್ರದಿಂದ ಚುನಾಯತರಾಗಿದರು ನಂತರ ಒಟ್ಟು ಎಂಟು ಭಾರಿ ಲೋಕಸಭೆಗೆ ಆಯ್ಕೆಯಾಗಿದ್ದರು 1990ರ ನವೆಂಬರ್ 10ರಂದು ಕಾಂಗ್ರೆಸ್ ಪಕ್ಷದ ಬಾಹ್ಯ ಬೆಂಬಲದಿಂದ ಭಾರತದ ಪ್ರಧಾನಮಂತ್ರಿಗಳಾಗಿದ್ದಾಗ ದೇಶದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ತಳಮಟ್ಟದ ಸಂದರ್ಬದಲ್ಲಿ ಚಿನ್ನವನ್ನು ಅಡವಿಟ್ಟು ದೇಶದ ಮಾನವನ್ನು ಕಾಪಾಡಿದ್ದರು ಪ್ರದಾನಿಯಾಗುವ ಮುನ್ನ ಯಾವುದೇ ಸರ್ಕಾರಿ ಅಧಿಕಾರದ ಸ್ಥಾನವನ್ನು ಅಲಂಕರಿಸಿರಲಿಲ್ಲ ಭಾರತ ಹಳ್ಳಿಗಳ ನಾಡಾಗಿದ್ದು, ರೈತರ ಏಳಿಗೆಯಾದರೆ ಮಾತ್ರ ದೇಶ ಉದ್ಧಾರವಾಗುತ್ತದೆ ಎನ್ನುವ ಮನೋಬಾವ ಹೊಂದಿದ್ದ ಶ್ರೀಯುತರು ಹಳ್ಳಿಗಳ ಪರಿಸ್ಥಿತಿ ಅರಿಯಲು 'ಭಾರತ್ ಯಾತ್ರಾ'ವನ್ನು ಕನ್ಯಾಕುಮಾರಿಯಿಂದ ದೆಹಲಿಯವರೆಗೆ ಸುಮಾರು 4260 ಕಿಲೋಮೀಟರ್ ಪಾದಯಾತ್ರೆಯನ್ನು ಕೈಗೊಂಡಿದ್ದರು ಈ ಸಂದರ್ಭದಲ್ಲಿ ದೇಶದ ವಿವಿದೆಡೆ ಭಾರತ್ ಯಾತ್ರಾ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ಶಿಕ್ಷಣ,

ಕುಡಿಯಲು ನೀರು, ಹರಿಜನ ಹಾಗೂ ಕೋಮು ಸಾಮರಸ್ಯ ಉಂಟುಮಾಡಲು ಪ್ರಯತ್ನಿಸಿದ್ದರು ಅತ್ಯಂತ ಸರಳ ಬದುಕನ್ನು ನಡೆಸಿದ್ದ ಶ್ರೀಯುತರು ತತ್ವ ಸಿದ್ಧಾಂತದ ರಾಜಕಾರಣಕ್ಕೆ ಹೆಸರಾಗಿದ್ದು, ಹುಟ್ಟು ಕ್ರಾಂತಿಕಾರಿ ಸ್ವಭಾವದ ಅವರು ಸಮಸ್ಯೆಗಳನ್ನು ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕೆಂಬ ಮನೋಭಾವವನ್ನು ಹೊಂದಿದ್ದವರು

ಶ್ರೀ ಚಂದ್ರಶೇಖರ್ ಅವರು ದಶಕ ಕಂಡ ಅಪರೂಪದ ರಾಜಕಾರಣಿ, ಚಿಂತಕ, ಹೋರಾಟಗಾರ, ಅದಮ್ಯ ಮಾನವ ಪ್ರೇಮಿ, "ಮೇರಿ ಜೈಲ್ ಡೈರಿ" ಹಾಗೂ "ಡೈನಾಮಿಕ್ಸ್ ಆಫ್ ಸೋಷಿಯಲ್ ಛೇಂಜ್" ಪುಸ್ತಕಗಳನ್ನು ಪ್ರಕಟಿಸಿದ್ದ ಶ್ರೀಯುತರು ಸಾಂಸ್ಕೃತಿಕ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದರು ಶ್ರೀಯುತರು ನಿಧನದಿಂದ ರಾಷ್ಟ್ರದ ರಾಜಕೀಯ ಕ್ಷೇತ್ರ ಬಡವಾಗಿದೆ ಹಾಗೂ ಉತ್ತಮ ನಾಯಕನೊಬ್ಬನನ್ನು ಕಳೆದುಕೊಂಡಂತಾಗಿದೆ ಶ್ರೀಯುತರು ದಿನಾಂಕ 08 07 2007ರಂದು ನಿದನ ಹೊಂದಿದರು (ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಮೌನವನ್ನು ಆಚರಿಸಿದರು)

ಶ್ರೀ ಹೆಚ್ ಡಿ ಕುಮಾರಸ್ವಾಮಿ(ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರು ಈ ದಿವಸ ಭಾರತದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದಂಥ ಮಾನ್ಯ ಚಂದ್ರಶೇಖರ್‌ರವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯವನ್ನು ತಾವು ಈ ಸಭೆಯ ಮುಂದೆ ತಂದಿರತಕ್ಕಂಥ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಈ ಒಂದು ಸಂತಾಪ ಸೂಚಕಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ ಒಂದು ಸಣ್ಣ ರೈತ ಕುಟುಂಬದಲ್ಲಿ ಜನ್ಮ ತಾಳಿದ ಚಂದ್ರಶೇಖರ್‌ರವರು ರಾಷ್ಟ್ರದ ರಾಜಕಾರಣದಲ್ಲಿ ಅವರದೇ ಆದಂಥ ಯುವಕರಿಗೆ ಅವರ ಹೋರಾಟದ ಮಜಲುಗಳು ಅತ್ಯಂತ ಒಳ್ಳೆಯ ಮಾರ್ಗದರ್ಶನವನ್ನು ನೀಡಿವೆ ಅವರ ಸುದೀರ್ಘ ರಾಜಕಾರಣವನ್ನು ನೋಡಿದಾಗ ಅವರ ಮಾರ್ಗದರ್ಶನವನ್ನು ನಮ್ಮ ಜೀವನದಲ್ಲಿ ಅಲ್ಪಸ್ವಲ್ಪ ಮಟ್ಟಿಗೆ ಅಳವಡಿಸಿಕೊಳ್ಳತಕ್ಕಂಥದಕ್ಕೆ ಸ್ಫೂರ್ತಿಯನ್ನು ನೀಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ

ಅವರು ಮೊದಲನೆಯ ಭಾರಿ ಪ್ರಜಾ ಸೋಶಿಯಲಿಸ್ಟ್ ಪಾರ್ಟಿಯಿಂದ ರಾಜ್ಯಸಭಾ ಸದಸ್ಯರಾಗಿ ಸಂಸತ್‌ಗೆ ಪಾದಾರ್ಪಣೆಯನ್ನು ಮಾಡಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿ ನಂತರ ಅವರು ಎಂಟು ಬಾರಿ ಸತತವಾಗಿ ಲೋಕಸಭೆಗೆ ಆಯ್ಕೆಯಾಗುವುದರ ಮೂಲಕ ಅವರಿಗೆ ಜನಸಾಮಾನ್ಯರೊಂದಿಗಿದ್ದ ಒಡನಾಟ ಮತ್ತು ಅವರಿಗಿದ್ದ ಜನಸಾಮಾನ್ಯರ

ಬೆಂಬಲ ಯಾವ ರೀತಿ ಇತ್ತು ಎನ್ನುವುದನ್ನು ಅವರು ಎಂಟು ಬಾರಿ ಲೋಕಸಭೆಗೆ ಚುನಾಯಿತರಾಗಿರುವುದನ್ನು ನೋಡಿದರೆ ವ್ಯಕ್ತವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಚಂದ್ರಶೇಖರ್‌ರವರು, ಯಾವುದಾದರೊಂದು ಅಹಿತಕರ ಘಟನೆ ದೇಶದಲ್ಲಿ ನಡೆದಂಥ ಸಂದರ್ಭವಿರಬಹುದು, ದೇಶಕ್ಕೆ ಗಂಡಾಂತರ ಬಂದಂಥ ಸಂದರ್ಭದಲ್ಲಿ ಅವರ ಒಂದು ನೇರ ಮತ್ತು ಧೈರ್ಯದ ಸಂಕಲ್ಪಗಳು ಮನಸ್ಸಿನಲ್ಲಿದಂಥದ್ದು ಏನಿತ್ತೋ ಅದಕ್ಕೆ ಒಂದು ಪ್ರಮುಖವಾಗಿರತಕ್ಕಂಥ ನಿದರ್ಶನ ಹೇಳಬೇಕೆಂದರೆ, ಹಿಂದೆ ಸನ್ಮಾನ್ಯ ದಿವಂಗತ ಇಂದಿರಾಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ ಅವರ ಜೊತೆ ಅತ್ಯಂತ ಹೆಚ್ಚಿನ ಒಡನಾಟವನ್ನು ಚಂದ್ರಶೇಖರ್‌ರವರು ಹೊಂದಿದ್ದರೂ ಕೂಡ ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ದೇಶದಲ್ಲಿ ದೊಡ್ಡ ಹೋರಾಟ ಪ್ರಾರಂಭವಾದಂಥ ಸಂದರ್ಭದಲ್ಲಿ ಅವರಿಗೆ ಕಾಂಗ್ರೆಸ್ ಪಕ್ಷದಲ್ಲಿ ಇದ್ದಂಥ ಒಡನಾಟ ಮತ್ತು ಅಂದು ಇಂದಿರಾಗಾಂಧಿಯುವರೊಂದಿಗೆ ಅವರು ಹೊಂದಿದ್ದಂಥ ಅತ್ಯಂತ ಒಳ್ಳೆಯ ಸಂಬಂಧ ಇದ್ದಂಥ ಸನ್ನಿವೇಶದಲ್ಲೂ ಕೂಡ ಅವರು ತೆಗೆದುಕೊಂಡಂಥ ನಿರ್ಧಾರದಂತೆ ಅಂದು ಆ ಒಂದು ಹೋರಾಟದ ಮುಂಚೂಣಿಯಲ್ಲಿ ಅವರು ಕೆಲಸ ಮಾಡಿದಂಥದ್ದನ್ನು ನಾವು ಇಂದು ಸ್ಮರಿಸಲೇಬೇಕಾಗುತ್ತದೆ ಅವರ ಒಂದು ಹೋರಾಟದ ಫಲ ಈ ದೇಶದಲ್ಲಿ ಅವರದೇ ಒಂದು ಕಾಣಿಕೆ ಎಂದು ಹೇಳುವುದಕ್ಕೆ ಬಯಸುತ್ತೇನೆ ಮೊದಲನೆಯ ಬಾರಿಗೆ ರಾಷ್ಟ್ರದಲ್ಲಿ ಪ್ರಥಮವಾಗಿ ಕಾಂಗ್ರೆಸ್ಸೇತರ ಸರ್ಕಾರವನ್ನು ರಾಷ್ಟ್ರದಲ್ಲಿ ರಚನೆ ಮಾಡತಕ್ಕಂಥದ್ದರಲ್ಲಿ ಅವರ ಒಂದು ಸುದೀರ್ಘವಾದ ಪಾತ್ರವನ್ನು ಈ ಸಂದರ್ಬದಲ್ಲಿ ನಾನು ನೆನೆಸಿಕೊಳ್ಳುದಕ್ಕೆ ಬಯಸುತ್ತೇನೆ ಅವರು ಅಂದು ಜನತ ಆ ಪಕ್ಷದ ಅಧ್ಯಕ್ಷರಾಗಿ ಅವರ ಒಂದು ನಾಯಕತ್ವದಲ್ಲಿ ಸರ್ಕಾರ ನಡೆಯತಕ್ಕಂಥ ಸಂದರ್ಭದಲ್ಲಿ ಹಲವಾರು ಮಜಲುಗಳಲ್ಲಿ ಜನತಾ ಪಕ್ಷ ಒಡೆದು ಹೋಗತಕ್ಕಂಥ ಸನ್ನೀವೇಶಗಳು ಬಂದರೂ ದೃತಿಗೆಡದೆ ಅವರು ರಾಷ್ಟ್ರದ ರಾಜಕಾರಣದಲ್ಲಿ ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೆ ಅದರ ಜೊತೆಗೆ ವಿನೂತನವಾಗಿ ಅವರು ಪಾದಯಾತ್ರೆಯನ್ನು ಕನ್ಯಾಕುಮಾರಿ ಯಿಂದ ದೆಹಲಿಯವರೆಗೆ ಹಮ್ಮಿಕೊಂಡಿದ್ದರು ಈ ಮೂಲಕ ಜನಸಾಮಾನ್ಯರ ಸಮಸ್ಯೆಗಳನ್ನು ಅರಿಯತಕ್ಕಂಥದ್ದರ ಜೊತೆಗೆ ಜನಸಾಮಾನ್ಯರಲ್ಲಿ ತಿಳುವಳಿಕೆಯನ್ನು ಮೂಡಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ ಅವರು ಈ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಪಾದಯಾತ್ರೆಯ ಸುದೀರ್ಘ ದಿನಗಳಲ್ಲಿ ನಡೆದ ಘಟನೆಗಳೇನಿವೆ ಅವುಗಳು ಇವತ್ತಿನ ನಮ್ಮ ಎಲ್ಲಾ ಜನ ಪ್ರತಿನಿಧಿಗಳಿಗೆ ಮಾರ್ಗದರ್ಶನವನ್ನು ನೀಡತಕ್ಕಂಥ ಘಟನೆಗಳೇ ಆಗಿವೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ ಅದರಲ್ಲೂ ಕರ್ನಾಟಕ ರಾಜ್ಯದ

ರಾಜಕಾರಣದಲ್ಲಿ ಹಲವಾರು ಎರಡನೆಯ ಹಂತದ ನಾಯಕರುಗಳಿಗೆ ಅವರು ನೀಡಿರತಕ್ಕಂಥ ಬೆಂಬಲ ಪ್ರೋತ್ಸಾಹದಿಂದ ಈ ಒಂದು ರಾಜ್ಯದಲ್ಲಿ ಉನ್ನತ ಸ್ಥಾನಗಳಿಗೆ ಏರತಕ್ಕಂಥದ್ದಕ್ಕೆ ಸಾಧ್ಯವಾಯಿತು ಅಂದರೆ ಎರಡನೆಯ ಹಂತದ ನಾಯಕರುಗಳಿಗೆ ಈ ರೀತಿಯಲ್ಲಿ ಅವರು ಕೊಟ್ಟ ಬೆಂಬಲ ಮತ್ತು ಪ್ರೋತ್ಸಾಹವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ ಅದರ ಜೊತೆಗೆ ದಿವಂಗತ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗತಕ್ಕಂಥದ್ದಕ್ಕೆ ಬಹುಶಃ ಅವರ ನೇರವಾದ ಒಂದು ಪಾತ್ರವೇನಿದೆ ಆ ಸಂದರ್ಭದಲ್ಲಿ ಅದೂ ಎರಡನೆಯ ಬಾರಿಗೆ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಪ್ರದಮವಾಗಿ ಕಾಂಗ್ರೆಸ್ಸೇತರ ಸರ್ಕಾರ ತರತಕ್ಕಂಥದ್ದರಲ್ಲಿ ಅವರ ಸೇವೆ ಇತ್ತು ಅದೇ ರೀತಿ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಪ್ರಥಮವಾಗಿ 1983ನೆಯ ಇಸವಿಯಲ್ಲಿ ಕಾಂಗ್ರೆಸ್ಸೇತರ ಸರ್ಕಾರವನ್ನು ತರತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಪದವಿಯನ್ನು ಹೊಂದುವುದರಲ್ಲಿ ಪಕ್ಷದಲ್ಲಿ ಗೊಂದಲವಿದ್ದಾಗ ಅವರೇ ನೇರವಾಗಿ ತಮ್ಮ ಪಾತ್ರವನ್ನು ವಹಿಸಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗುವುದಕ್ಕೆ ಹೆಚ್ಚು ಸಹಕಾರವನ್ನು ಕೊಟ್ಟಿದ್ದರು ಎಂಬುದನ್ನು ಈ ಸಂದರ್ಭದಲ್ಲಿ ನಾನು ಸ್ಮರಿಸಿಕೊಳ್ಳಬಯಸುತ್ತೇನೆ ಕರ್ನಾಟಕ ರಾಜ್ಯದಲ್ಲಿ ಅವರು ಪಾದಯಾತ್ರೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ, ಈಗ ಎಲ್ಲಿ ಎಂ ಪಿ ಪ್ರಕಾಶ್‌ರವರು ಇದ್ದಾರೆ, ಪಿ ಜಿ ಆರ್ ಸಿಂಧ್ಯಾರವರು ಇವತ್ತು ಇಲ್ಲಿಗೆ ಬಂದಿಲ್ಲ ಇವರುಗಳೆಲ್ಲಾ ಚಂದ್ರಶೇಖರ್‌ರವರ ಪಾದಯಾತ್ರೆಗೆ ಹೆಚ್ಚಿನ ಸಹಕಾರವನ್ನು ಕೊಟ್ಟಿದ್ದರು ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಎರಡ್ಮೂರು ಕಡೆ ಅವರು ಭಾರತ ಯಾತ್ರೆಯನ್ನು ಪ್ರಾರಂಭ ಮಾಡುವುದರ ಮೂಲಕ ಈ ಒಂದು ಭಾಗದಲ್ಲಿರುವ ಗ್ರಾಮೀಣ ಪ್ರದೇಶದ ಜನರ ಪರವಾಗಿರತಕ್ಕಂಥ ಕಾರ್ಯಕ್ರಮಗಳನ್ನು ತರತಕ್ಕಂಥದ್ದಕ್ಕೆ, ಕೇಂದ್ರದಿಂದ ಒಳ್ಳೆಯ ಕಾರ್ಯಕ್ರಮವನ್ನು ಮಾಡತಕ್ಕಂಥದ್ದಕ್ಕೆ ಸಹಕಾರ ಏನು ಸಿಕ್ಕಿದೆ ಅದನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ ಅವರು ಪ್ರಧಾನ ಮಂತ್ರಿಗಳಾಗಿ ಕೇವಲ ಕೆಲವೇ ತಿಂಗಳುಗಳ ಕಾಲ ರಾಷ್ಟ್ರವನ್ನು ಆಳತಕ್ಕಂಥ ಸಂದರ್ಭದಲ್ಲಿ ಅವರು ಸಲ್ಲಿಸಿರತಕ್ಕಂಥ ಸೇವೆ ಬಹುಶಃ ಈ ರಾಷ್ಟ್ರದ ರಾಜಕಾರಣದಲ್ಲಿ ಹೆಚ್ಚಿನ ಕಾಲ ಒಂದು ಅಧಿಕಾರದ ಸ್ಥಾನವೇನಾದರೂ ಅವರಿಗೆ ಸಾಧ್ಯವಾಗುತ್ತಿತ್ತು ಆದರೆ ಅವರಿಗೆ ಸಿಕ್ಕಂಥ ಕಡಿಮೆ ಕಾಲದಲ್ಲಿ ಅವರು ಸಲ್ಲಿಸಿರತಕ್ಕಂಥ ಸೇವೆಯನ್ನು ನಾವೆಲ್ಲರೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳತಕ್ಕಂಥದ್ದಕ್ಕೆ ಈ ದಿನ ನಾವುಗಳೆಲ್ಲರೂ ಇಲ್ಲಿ ಸೇರಿದ್ದೇವೆ ಮೃತರ ಆತ್ಮಕ್ಕೆ ಭಗವಂತ ಶಾಂತಿಯನ್ನು ನೀಡಲೆಂದು ಈ ಸಂದರ್ಭದಲ್ಲಿ ಹೇಳಿ ತಾವು ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀಮಾನ್ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾಜಿ ಪ್ರಧಾನಿ ಚಂದ್ರಶೇಖರ್‌ರವರ ನಿಧನಕ್ಕೆ ಸಂತಾಪ ಸೂಚನೆಯನ್ನು ತಾವು ಮಂಡಿಸಿದ್ದೀರಿ ಸಭಾ ನಾಯಕರು ಅದಕ್ಕೆ ತಮ್ಮ ಅನುಮೋದನೆಯನ್ನು ನೀಡಿದ್ದಾರೆ ಚಂದ್ರಶೇಖರ್‌ರವರು ಸಮಾಜವಾದಿ ಪಕ್ಷದ ನಾಯಕರು He was a secular and Nationalist leader ಆಚಾರ್ಯ ನರೇಂದ್ರ ದೇವ್‌ರವರ ಮಾರ್ಗದರ್ಶನದಲ್ಲಿ ಸಮಾಜವಾದಿ ಪಕ್ಷದ ಮುಖಂಡರಾಗಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಪಟ್ನಾ ವಿಶ್ವ ವಿದ್ಯಾಲಯದಲ್ಲಿ ರಾಜಕೀಯ ಶಾಸ್ತ್ರದ ಪ್ರಾಧ್ಯಾಪಕರಾಗಿ, ಪ್ರಪ್ರಥಮವಾಗಿ 1972ರಲ್ಲಿ ರಾಜ್ಯ ಸಭೆಗೆ ಆಯ್ಕೆಯಾಗಿ ಹೋಗಿ ಮುಂದೆ ಕಾಂಗ್ರೆಸ್ ಪಕ್ಷಕ್ಕೆ ಅವರು ಸೇರುತ್ತಾರೆ ಕಾಂಗ್ರೆಸ್ ಪಕ್ಷದಲ್ಲಿ ಒಂದು ಗುಂಪಾಯಿತು Young Turk. ಚಂದ್ರಶೇಖರರವರು, ಮೋಹನ್ ದಾರಿಯವರು, ಅರ್ಜುನ್‌ರವರು, ಕೃಷ್ಣಕಾಂತ್‌ರವರು ಇವರು ಯಾವಾಗಲೂ ಕೂಡ ಸಮಾಜವಾದಿ ವಿಚಾರಗಳನ್ನು ಪ್ರತಿಪಾದನೆ ಮಾಡತಕ್ಕಂಥ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು ಆಗಿನ ಕಾಲದಲ್ಲಿ ಕಾಂಗ್ರೆಸ್ ಪಕ್ಷದಲ್ಲಿದ್ದಂಥ ಎಲ್ಲಾ ಯುವಕರಿಗೆ ಅವರು ಬಹಳಷ್ಟು ಹುರಿದುಂಬಿಸುತ್ತಿದ್ದರು ಇವರು ಯಾವಾಗಲೂ ಕೂಡ ಎ ಐ ಸಿ ಸಿ ಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಿದ್ದರು ಆಗ ಪ್ರಪ್ರಥಮವಾಗಿ ನಾನಾಗಲಿ, ಮಾನ್ಯ ಖರ್ಗೆಯವರಾಗಲಿ ಎ ಐ ಸಿ ಸಿ ಇದ್ದಾಗ ನಾವು ಒಳಗೆ ಹೋಗಿ ಕುಳಿತುಕೊಳ್ಳುತ್ತಿದ್ದೆವು ಆಗ ಮೋಹನ್‌ದಾರಿ ಇರಬಹುದು, ಕೃಷ್ಣಕಾಂತ್‌ರವರು ಮತ್ತು ಅರ್ಜುನ್‌ರವರು ಒಳ್ಳೆಯ ಕೆಲಸಗಳನ್ನು ಕೂಡ ಮಾಡುತ್ತಿದ್ದರು ಇವತ್ತು ಅವರು ನಮ್ಮಿಂದ ಅಗಲಿ ಹೋಗಿದ್ದಾರೆ ಇವತ್ತು ಚಂದ್ರಶೇಖರ್‌ರವರ ಅಂತ್ಯಕ್ರಿಯೆ ನಡೆಯುತ್ತಿದೆ ಒಂದು ಘಟನೆಯನ್ನು ನಾನು ಈಗ ನೆನಪಿಸಿಕೊಳ್ಳುತ್ತಿದ್ದೇನೆ ನಾವು ಮತ್ತು ಮಾನ್ಯ ಖರ್ಗೆಯವರು ದಿವಂಗತ ಧರ್ಮರಾವ್ ಅಫ್ಜಲ್‌ಪುರ್‌ಕರ್ ರವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದದರು 1970ರ ದಶಕದಲ್ಲಿ ಗುಲ್ಬರ್ಗಾಕ್ಕೆ ಕಾಂಗ್ರೆಸ್ ಪಕ್ಷದ ಕಾರ್ಯಾಲಯ ಉದ್ಘಾಟನೆಗೆ ಬರಬೇಕೆಂದು ಹೇಳಿ ದೆಹಲಿಗೆ ಹೋಗಿ ಅವರನ್ನು ನಾವು ಗುಲ್ಬರ್ಗಾಕ್ಕೆ ಕರೆಸಿದ್ದೆವು ಮೋಹನ್‌ದಾರಿರವರಿಗೆ ಬರುವುದಕ್ಕೆ ಅಗಲಿಲ್ಲ ಆಗ ಚಂದ್ರಶೇಖರ್‌ರವರು, ಕೃಷ್ಣಕಾಂತ್ ಮತ್ತು ಧರ್ಮರಾವ್‌ರವರುಗಳೇ ಬಂದರು ಆಗ ವಿರೇಂದ್ರ ಪಾಟೀಲರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ನಮ್ಮ ದಿವಂಗತ ಮಾಣಿಕ್‌ರಾವ್ ಪಾಟೀಲ್‌ರವರೂ ಕೂಡ ಆಗ ಡೆಪ್ಯುಟಿ ಹೋಂ ಮಿನಿಸ್ಟರ್ ಆಗಿದ್ದರು ಸಂದರ್ಭ ಹೇಗಿತ್ತೆಂದರೆ ರಾಜಕೀಯವಾಗಿ ನಮಗೆ ಅಂದು ಸರ್ಕಾರ ಗೆಸ್ಟ್‌ಹೌಸ್‌ನ್ನೂ ಕೂಡ ಕೊಡುವುದಕ್ಕೆ ಸಹಕಾರವನ್ನು ಕೊಡಲಿಲ್ಲ ಅಂದು ಬಂದಂಥವರಿಗೆ ಗುಲ್ಬರ್ಗಾದಲ್ಲಿ ಬಜಾರ್‌ನಲ್ಲಿರತಕ್ಕಂಥ

ಐ ಬಿ ಯಲ್ಲಿ ನಾವು ನಿಲ್ಲಿಸಿದ್ದೆವು ಆಗ ಎಂ ಎಸ್ ಕ ಮಿಲ್‌ನ ಒಂದು ಕಾರ್ಮಿಕರ ಸಂಪು ಇತ್ತು ಗುಲ್ಬರ್ಗಾದಲ್ಲಿ ನಾನು ಮತ್ತು ಮಾನ್ಯ ಖರ್ಗೆಯವರು ಗುಲ್ಬರ್ಗಾ ಡಿ ಸಿ ಮತ್ತು ಎಸ್ ಪಿ ಯವರಲ್ಲಿ ಅಪ್ರೋಚ್ ಮಾಡಿ ಇಂದು ಸಾರ್ವಜನಿಕ ಸಭೆ ಇದೆಯಾದ ಕಾರಣ ನಮಗೆ ಅನುವು ಮಾಡಿಕೊಡಬೇಕೆಂದು ಕೇಳಿಕೊಂಡೆವು ಅವರು ಆಗ ಹೇಳಿದರು, ಇಂದು ಪೋಲೀಸ್ ಆ್ಯಕ್ಟ್‌ನ 35ರ ಸೆಕ್ಷನ್ ಇಂಪೋಸ್ ಮಾಡಿದ್ದೇವೆ, ಆದುದರಿಂದ ತಾವು ಬಹಿರಂಗವಾಗಿ ಸಭೆಯನ್ನು ನಡೆಸವುದಕ್ಕೆ ಆಗುವುದಿಲ್ಲವೆಂದರು ನಾನು ಮತ್ತು ಖರ್ಗೆಯವರು ಮತ್ತು ಧರ್ಮರಾವ್ ಆಫ್ಜಲ್‌ಪುರ್‌ಕರ್‌ರವರು ಹೋಗಿ ಏನು interpret ಮಾಡಿದೆವೆಂದರೆ, ನಾವು ನಗರಸಭೆಯ ಟೌನ್‌ಹಾಲ್‌ನ ಕಾಂಪೌಂಡ್‌ನಲ್ಲಿ ಸಭೆ ಮಾಡುತ್ತೇವೆ ಎಂದೆವು ಆದರೆ ಅಲ್ಲಿ ಮಾಡಕೂಡದು ಎನ್ನತಕ್ಕಂಥದ್ದು ಬಂತು ಡಾ ಕೃಷ್ಣಮೂರ್ತಿಯವರು ಈಗ ಡಿ ಜಿ ಯಾಗಿ ರಿಟೈರ್ ಆಗಿದ್ದಾರೆ ಆಗ He was ASP in Shahabad. ಮೊದಲನೆಯದಾಗಿ ಧರ್ಮರಾವ್‌ರವರು ಭಾಷಣವನ್ನು ಮಾಡಿದರು ನಾನೂ ಮತ್ತು ಖರ್ಗೆಯವರು ಡಯಾಸ್‌ನಲ್ಲಿ ಇದ್ದೆವು ಕಷ್ಣಕಾಂತ್‌ರವರೂ ಕೂಡ ಭಾಷಣವನ್ನು ಮಾಡು ಮುಗಿಸಿದರು ಕೃಷ್ಣಕಾಂತ್‌ರವರು ಬಹಳ ಚೆನ್ನಾಗಿಯೇ ಮಾತನಾಡಿದರು ನಂತರ ಚಂದ್ರಶೇಖರ್‌ರವರು ಭಾಷಣ ಮಾಡುವುದಕ್ಕೆ ನಿಂತಾಗ Krishnamurthy came and arrested Chandrashekar and all others ಭಾಷಣವಾಗಲೇ ಇಲ್ಲ ಮುನ್ಸಿಫ್ ಮ್ಯಾಜಿಸ್ಟ್ರೇಟರ್ ಹತ್ತಿರ ಹೋಗಿ ಬೇಲ್ ಮೇಲೆ ಬಿಡಿಸಿಕೊಂಡು ಬರಲಾಯಿತು ಅದಾದ ಮೇಲೆ ನಮಗೆ ಬಹಳ ಅನುಕೂಲವಾಯಿತು

ಮುಂದೆ ಈ case ಗುಲ್ಬರ್ಗದಲ್ಲಿ ಇದ್ದಾಗ ಅವರು ಬಂದರು ಅವರು ಎಲ್ಲಾ ಕಡೆಗೆ ಎಂದರೆ ಷಹಾಪುರ, ಯಾದಗಿರಿ, ಚಿತ್ತಾಪುರ, ಸೇಡಂ, ಆಳಂದ ಮತ್ತು ಚಿಂಚೋಳಿಯಲ್ಲಿ ಸಾರ್ವಜನಿಕ ಭಾಷಣ ಮಾಡಿದರು ಕಾಂಗ್ರೆಸ್ಸ್ ಏಕೆ ಇಬ್ಭಾಗವಾಯಿತು ಎಂದು ಬಂದಿದ್ದರಿಂದ, ಆ ಘಟನೆಯನ್ನು ತಮಗೆ ಹೇಳುತ್ತಿದ್ದೇನೆ ಅವರು ಮಾನವತಾವಾದಿ ಗುಲ್ಬರ್ಗದ Stationನಲ್ಲಿ Diamond Hair cutting saloon ಇದೆ ಅಲ್ಲಿಗೆ ಅವರು ಮುಂಜಾನೆ ಹೋದವರು, ಎಲ್ಲಿ ಹೋಗಿದ್ದಾರೆಂದು ಮಾನ್ಯ ಕೃಷ್ಣಕಾಂತ್‌ರವರನ್ನು ಕೇಳಿದರೆ, ಅವರು walking ಹೋಗಿದ್ದಾರೆಂದು ಹೇಳಿದರು ಅವರು ಮೇಟಿಯನ್ನು ಇಲ್ಲಿ ಯಾವ saloon ಚೆನ್ನಾಗಿದೆಯೆಂದು ಕೇಳಿದ್ದಾರೆ ಆಗ ಅವನು ಇಂತಹ ಕಡೆ ಚೆನ್ನಾಗಿ ಇದೆ ಹೋಗಿ ಎಂದು ಹೇಳಿದ್ದಾನೆ ಆಗ ಅವರು ಅಲ್ಲಿಗೆ ತಮ್ಮ ದಾಡಿ trim ಮಾಡುವುದಕ್ಕೆ ಹೋಗಿದ್ದರು ಎಂದರೆ how he was infor-

mal, ಅವರು ಜೀವನದಲ್ಲಿ ಕೂಡ ಸರಳತೆಯಿಂದ ಜೀವನ ನಡೆಸಿದ್ದಾರೆ ಯಾವಾಗ ಕಾಂಗ್ರೆಸ್ಸೇತರ ಪಕ್ಷದಿಂದ ಪ್ರಧಾನಮಂತ್ರಿಯಾಗಿ ಕೆಲಸ ಮಾಡುವಂತಹ ಸಂದರ್ಭ ಬರುತ್ತದೆ, ಆ ರೀತಿಯಲ್ಲಿ ಶ್ರೀಮಾನ್ ದೇವೇಗೌಡರು ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಪ್ರಧಾನ ಮಂತ್ರಿಯಾದರು ಅದೇ ರೀತಿಯಲ್ಲಿ ಮಾನ್ಯ ರಾಜೀವ್ ಗಾಂಧಿಯವರು ಕೂಡ ಮಾನ್ಯ ಚಂದ್ರಶೇಖರ್‌ರವರಿಗೆ ಈ ದೇಶದ ಪ್ರಧಾನ ಮಂತ್ರಿಯಾಗುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟರು ರಾಷ್ಟ್ರಮಟ್ಟದಲ್ಲಿ ಈ ರೀತಿಯಾಗಿದೆ ಒಬ್ಬ ಒಳ್ಳೆಯ socialist views ಮತ್ತು commitment ಏನಿದೆ, ಅದರ ಬಗ್ಗೆ ಅವರು ರಾಷ್ಟ್ರದಲ್ಲಿ ಪ್ರತಿಪಾದನೆ ಮಾಡಿದ್ದಾರೆ ರಾಷ್ಟ್ರದಲ್ಲಿ ಒಬ್ಬ ಪ್ರಧಾನಿಯಾಗಿ ಈ ದೇಶದ ರೈತರ ಬಗ್ಗೆ ಮತ್ತು ಕಾರ್ಮಿಕರ ಬಗ್ಗೆ ಕಳಕಳಿ ಇರುವಂತಹ ರೀತಿಯಲ್ಲಿ ನಮ್ಮ ಪ್ರಧಾನ ಮಂತ್ರಿಯಾಗತಕ್ಕಂಥವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಪಾದಯಾತ್ರೆ ಮಾಡಿ, ಈ ರಾಷ್ಟ್ರದ ಸಮಾಜದ ಸ್ಥಿತಿಗತಿಗಳನ್ನು ನೋಡತಕ್ಕಂಥ ಪ್ರಯತ್ನ ಮಾಡಿದಂತಹ ಮೇಧಾವಿ ಇವತ್ತು ಇಲ್ಲ ಇವತ್ತು ರಾಜ್ಯ ಸರ್ಕಾರ ಕೂಡ ರಜೆಯನ್ನು ಘೋಷಣೆ ಮಾಡಿದೆ ನಮಗೆ ಕೂಡ ಸಂತೋಷವಾಗುತ್ತಿದೆ ಇಂತಹ ಮಹಾನ್ ನಾಯಕನ ನೆನಪಿನ ದಿನದಲ್ಲಿ ಇವತ್ತಿನ ದಿವಸ ರಜೆ ಘೋಷಣೆ ಮಾಡಬೇಕು ನಾವು ವಿಶೇಷವಾಗಿ ಇಂತಹ ನಾಯಕರನ್ನು ನೆನಪಿಸಿಕೊಳ್ಳಬೇಕಾಗುತ್ತದೆ ಮತ್ತು ಅನುಷ್ಠಾನದಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗುತ್ತದೆ ಹಾಗಾದಾಗ ಮಾತ್ರ ಅವರು ಆತ್ಮಕ್ಕೆ ಶಾಂತಿ ಸಿಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ ಅವರ ideology, ಆತ್ಮಕ್ಕೆ ಶಾಂತಿ, ಪುನರ್ಜನ್ಮ ಇವೆಲ್ಲಾವನ್ನು ಕೂಡ ಅವರು political philosophyಯಲ್ಲಿ ಸಮಾಲೋಚನೆ ಮಾಡುವಂತಾದ್ದರಲ್ಲಿ ಭಿನ್ನ ಆದರೂ ಕೂಡ ನಮ್ಮ ನಡವಳಿಕೆ ಪ್ರಕಾರ ಏನಿದೆ ಆ ರೀತಿ ಆಗಬೇಕೆಂದು ಹೇಳಿ, ತಾವು ತಂದಂತಹ ಸಂತಾಪ ಸೂಚನೆಯನ್ನು ಅನುಮೋದಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಪ್ರತಿಪಕ್ಷದ ನಾಯಕರು ದಿವಂಗತ ಚಂದ್ರಶೇಖರ್ ಅವರ ಬಗ್ಗೆ ಗುಣಗಾನವನ್ನು ಮಾಡಿದ್ದಾರೆ ತಾವು ಸಮಯೋಚಿತವಾದ ಮತ್ತು ಅಗತ್ಯವಾದ ಸಂತಾಪ ಸೂಚನೆಯನ್ನು ಪರಿಸಿ ಮಾರ್ಗದರ್ಶನವನ್ನು ಮಾಡಿದ್ದೀರಿ ಈ ರಾಷ್ಟ್ರ ಕಂಡ ಅಪರೂಪದ ರಾಜಕಾರಣಿಗಳಲ್ಲಿ ಮಾನ್ಯ ಚಂದ್ರಶೇಖರ್‌ರವರು ಕೂಡ ಒಬ್ಬರು ಅವರ ವ್ಯಕ್ತಿತ್ವದ ವಿಕಸನವನ್ನು ನೋಡಿದರೆ ಬಹಳ ದೊಡ್ಡ ದೊಡ್ಡ ತಿರುವುಗಳನ್ನು ತೆಗೆದುಕೊಂಡು ಹೋಗಿದ್ದಾರೆ ಈಗಾಗಲೇ ಮಾನ್ಯ

ಮುಖ್ಯಮಂತ್ರಿಗಳು ಮತ್ತು ಮಾನ್ಯ ಧರ್ಮಸಿಂಗ್‌ರವರು ಪ್ರಸ್ತಾಪ ಮಾಡಿದಂತೆ ಅವರಿಗೂ ಮತ್ತು ಕರ್ನಾಟಕದ ಜನತೆಗೂ ಬಹಳ ನಿಕಟವಾದಂತಹ ಸಂಪರ್ಕ ಇತ್ತು ಅವರು ಸಾಮಾನ್ಯ ಕೃಷಿ ಕುಟುಂಬದಿಂದ ಬಂದಂತಹವರು ಅವರ ಊರಾದ ಇಬ್ರಾಹಿಂಪಟ್ಟೆಗೆ ನಾವೆಲ್ಲರೂ ಕೂಡ ಎರಡು ಮೂರು ಬಾರಿ ಹೋಗಿದ್ದೇವೆ ಅವರದು ಸಾಮಾನ್ಯ ಕುಟುಂಬವಾದರೂ ಕೂಡ ಅವರ ತಂದೆಯವರಾದ ರಾಕೂರ್‌ರವರು ಬಹಳ ನಿಷ್ಠುರವಾದ, ಕಠೋರ ಸತ್ಯಕ್ಕೆ, ಗತ್ತಿಗೆ, ದರ್ಪಕ್ಕೆ ಹೆಸರಾದಂತಹವರಾಗಿದ್ದರು ಅವರು ತಮ್ಮ ಜೀವನ ಚರಿತ್ರೆಯನ್ನು ಬರೆಯುವಾಗ ಅವರ ತಾಯಿಯ ಬಗ್ಗೆ ಕೂಡ ಬರೆದಿದ್ದು, ಅವರ ಭಾವಾರ್ಥ ಮತ್ತು ರಾಮಾಯಣ ಕಥೆಗಳಿಂದ ಪ್ರೇರೇಪಿತವಾದಂತಹ ಮನಸ್ಸು, ಅವರು ಬಡವರ ಬಗ್ಗೆ ತೋರಿಸುತ್ತಿದ್ದಂತಹ ಅನುಕಂಪ, ಚಿಂತನೆ ಕಾಳಜಿಗಳು ಹಾಗೂ ನನ್ನ ತಂದೆಯ ಕಠೋರ ನಿಲುವುಗಳ, ಸತ್ಯವನ್ನು ಪ್ರತಿಪಾದಿಸುವಂತಹ ರೀತಿ ನನ್ನ ವ್ಯಕ್ತಿತ್ವಕ್ಕೆ ದೊಡ್ಡ ಪ್ರಭಾವವನ್ನು ಬೀರಿದೆ ಎನ್ನುವಂತಹ ಮಾತನ್ನು ಬರೆದುಕೊಡುತ್ತಾರೆ ಅವರು ಕಷ್ಟಪಟ್ಟು ಓದಿ, ಎಲ್ಲಾ ಕೆಲಸವನ್ನು ಮಾಡಿದಂತಹ ಸಂದರ್ಭದಲ್ಲಿ ಕೂಡ ಸಮಾಜವಾದಿ ಪಕ್ಷದ ಆಚಾರ್ಯ ನರೇಂದ್ರ ದೇವ್‌ರವರಿಂದ ಪ್ರೇರಿಪಿತರಾದವರು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಹಾಗೂ ಮಾನ್ಯ ದೇವೇಗೌಡರನ್ನು ತುಂಬಾ ಹತ್ತಿರದಿಂದ ನೋಡಿರುವುದಲ್ಲದೆ, ಅವರ ಮೂಲಕವಾಗಿ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ತಿರುವು ಬರುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟವರು 1983ರಲ್ಲಿ ಪ್ರಥಮ ಬಾರಿಗೆ ನಮ್ಮ ಕಾಂಗ್ರೆಸ್ಸೇತ್ತರ ಸರ್ಕಾರ ಸ್ಥಾಪನೆತಯಾಗುವಂತಹ ಸಂದರ್ಭದಲ್ಲಿ ಕ್ರಾಂತಿರಂಗದೊಂದಿಗೆ ಮಾಡಿಕೊಂಡಿದಂತಹ ಒಪ್ಪಂದದಲ್ಲಿ ಮಾನ್ಯ ಬಂಗಾರಪ್ಪನವರು ಸಿಡಿದು ಹೊರಗಡೆ ಹೋದ ಸಂದರ್ಭದಲ್ಲಿ, ನಮ್ಮ ಪಕ್ಷ ಅಧಿಕಾರಕ್ಕೆ ಬರುತ್ತದೆ ಎನ್ನುವುದೇ ಸಂಶಯವಾಗಿತ್ತು ಮಾನ್ಯ ದೇವೇಗೌಡರು ನಮ್ಮ ಅದ್ಯಕ್ಷರಾಗಿದ್ದರು ಅವರ ಅಧ್ಯಕ್ಷತೆಯಲ್ಲಿ ನಮ್ಮ ಪಕ್ಷ ಗೆದ್ದು ಬಂದಿತ್ತು ಮಾನ್ಯ ಎಸ್ ಆರ್ ಬೊಮ್ಮಾಯಿಯವರು ಹಾಗೂ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಪ್ರಸ್ತಾಪವನ್ನು ಮಾಡಿರಲಿಲ್ಲ ಆದರೆ ಭಾರತ ಯಾತ್ರೆಯನ್ನು ಪ್ರಾರಂಭ ಮಾಡಿ ಪ್ರಥಮವಾಗಿ ಕಾಂಗ್ರೆಸ್ಸೇತ್ತರ ಸರ್ಕಾರ ರಚನೆಯಾಗುವಂತಹ ಸಂದರ್ಭದಲ್ಲಿ ಅವರು ಕನ್ನಡನಾಡಿಗೆ ಪ್ರವೇಶ ಮಾಡುವಾಗ ಮಾನ್ಯ ದೇವೇಗೌಡರಿಗೆ ದೂರವಾಣಿ ಮುಖಾಂತರ ಸಂಪರ್ಕ ಮಾಡಿ, ನೀವು ರಾಮಕೃಷ್ಣ ಹೆಗಡೆ ಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಹಾಗೂ ನೀವು ಸ್ಪರ್ಧೆಯಿಂದ ಹಿಂದಕ್ಕೆ ಸರಿಯಬೇಕೆನ್ನುವ ಆದೇಶವನ್ನು ಕಳುಹಿಸಿಕೊಟ್ಟರು ಆಗ ದೊಡ್ಡ ನಾಯಕರ ಬಗ್ಗೆ ಇದ್ದಂತಹ ಗೌರವ ಹೇಗಿತ್ತೆಂದರೆ, ಇವತ್ತು ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷನನ್ನು ನಾವು ಆರಿಸಿ ಕಳುಹಿಸಿರುತ್ತೇವೆ ಅದರ ಬಗ್ಗೆ

ಪಂಚಾಯಿತಿ ಆಗಿರುತ್ತದೆ 20 ತಿಂಗಳ ನಂತರ ನೀನು ಬೇರೆಯವರಿಗೆ ಬಿಟ್ಟು ಕೊಡಬೇಕೆಂದರೆ ಅವನು ಬಿಟ್ಟುಕೊಡುವುದಿಲ್ಲ ಅವರು ಇನ್ನೊಂದು ಪಕ್ಷಕ್ಕೆ ಸೇರಿಕೊಂಡು ಇನ್ನೇನಾದರೂ ಕತೆ ಮಾಡುತ್ತಾನೆ ಅಂತಹ ಒಂದು ಸಂದರ್ಭ ಇರುವಂತಹ ಸಮಯದಲ್ಲಿ ಸ್ಪರ್ಧೆ ಇಲ್ಲದಂತಹ ರೀತಿಯಲ್ಲಿ ರಾಮಕೃಷ್ಣ ಹೆಗಡೆಯವರು ಉಮೇದುವಾರಿಕೆ ಪತ್ರವನ್ನು ಸಲ್ಲಿಸದೇ ಇದ್ದಂತಹ ಸಂದರ್ಭದಲ್ಲಿ ಕೂಡ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದಂತಹ ಶ್ರೇಯನ್ನು ನಮ್ಮ ಪಕ್ಷದ ಅಂದಿನ ಅಧ್ಯಕ್ಷರಾಗಿದ್ದಂತಹ ಸನ್ಮಾನ್ಯ ಚಂದ್ರಶೇಖರ್‌ರವರಿಗೆ ಸಲ್ಲುತ್ತದೆ, ಅವರೆ ಅದಕ್ಕೆ ಭಾಜನರು 1977ರ ಸಾಲಿನಲ್ಲಿ ಮಾನ್ಯ ಮುರಾರ್ಜಿ ದೇಸಾಯಿಯವರು, ಮಾನ್ಯ ಚೌಧರಿ ಚರಣ್‌ಸಿಂಗ್‌ರವರು, ಮಾನ್ಯ ಜಗಜೀವನ ರಾಂ ರಂತಹವರು ಅವರೆಲ್ಲರೂ ಪಕ್ಷದಲ್ಲಿದ್ದಾಗ ಒಂದು ಕಡೆಯಿಂದ ಭಾರತೀಯ ಜನತಾ ಪಕ್ಷ ಜನಸಂಘದ ಮೂಲಕವಾಗಿ ಹೋರಾಟವನ್ನು ಮಾಡಿ, ಜೈಲಿನಲ್ಲಿ ತುರ್ತು ಪರಿಸ್ಥಿತಿಯ ಕಾಲದಲ್ಲಿ ಪುಟಕ್ಕಿಟ್ಟ ಚಿನ್ನದಂತೆ ಹೊರಗೆ ಬಂದಂತಹ ಮಹಾನಾಯಕರುಗಳಾದ ಮಾನ್ಯ ವಾಜಪೇಯಿ, ಎಲ್ ಕೆ ಅಡ್ವಾಣಿಯವರು, ಜಾರ್ಜ್ ಫರ್ನಾಂಡಿಸ್‌ರವರು, ಮದುಲಿಮೆಯೆ ಇಂತಹ ಜನಗಳ ನಡುವೆಯೂ ಕೂಡ ಜಯಪ್ರಕಾಶ್ ನಾರಾಯಣ್‌ರವರು ಚಂದ್ರಶೇಖರ್‌ರವರಂತಹ ಚಿಕ್ಕವಯಸ್ಸಿನ ಮತ್ತು ನ್ಯಾಯ ನಿಷ್ಠುರಿಯಾಗಿರುವಂತಹ ಒಬ್ಬ ವ್ಯಕ್ತಿಯನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಿದರು ಅವರೆಲ್ಲರೂ ಕೂಡ ಇವರ ಮಾತಿಗೆ ತಲೆತೂಗುವಂತಾಯಿತು ಮತ್ತು ನಿರ್ವಿವಾದವಾಗಿ ಮಾನ್ಯ ಚಂದ್ರಶೇಖರ್‌ರವರು ಪಕ್ಷದ ಅಧ್ಯಕ್ಷರಾಗಿರಬೇಕು ಎಂದು ಇತ್ತು ಇವತ್ತು ನಾವು ನೋಡಿದರೆ ಎಂತೆಂತಹ ದೊಡ್ಡ ಮಹಾನುಭಾವರು ಅಂತಹ ಒಂದು ಪಕ್ಷಕ್ಕೆ ನಾಯಕತ್ವವನ್ನು ಆ ಸಂದರ್ಭದಲ್ಲಿ ಕೊಟ್ಟರು ಆದಾದ ನಂತರ 18 ತಿಂಗಳಲ್ಲಿ ಆ ಪಕ್ಷ ಬಿದ್ದು ಹೋಯಿತು ಅದರ ದುರಂತವನ್ನು ಬಹಳ ಅದ್ಭುತವಾಗಿ ತಮ್ಮ "Young India" ಎನ್ನುವಂತಹ ಪತ್ರಿಕೆಯ ಸಮಾರಂಭದ ಸಂದರ್ಭದಲ್ಲಿ ಹೇಳುತ್ತಿದ್ದರು ಅದರಲ್ಲಿ ಲೇಖನಗಳನ್ನು ಅವರು ಬರೆಯುತ್ತಾರೆ ಅದೇನೆಂದರೆ ನಮ್ಮವರೇ ಆಗಿರುವಂತಹವರು, ಈ ತರಹದ ಪಿತೂರಿಯನ್ನು ಮಾಡಿ ಒಂದು ಜನಪರವಾದಂತಹ ಸರ್ಕಾರವನ್ನು, ಜನತೆಯ ಅಭೂತಪೂರ್ವವಾದಂತಹ ದನ್ನು ಕೊಡುವುದರ ಮೂಲಕವಾಗಿ ಅಧಿಕಾರಕ್ಕೆ ತಂದಂತಹ ಒಂದು ಪಕ್ಷವನ್ನು ಕುಟೀಲ ನೀತಿಯ ಮೂಲಕವಾಗಿ ಒಡೆದಿರುವಂತಾದ್ದು ದುರಂತದ ಒಂದು ಸಂಗತಿ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ ಅವರು ಸುಮಾರು 11 ವರ್ಷಗಳ ಕಾಲ ನಮ್ಮ ಪಕ್ಷದ ಅಧ್ಯಕ್ಷರಾಗಿದ್ದರು ಅದಕ್ಕಿಂತ ಪೂರ್ವದಲ್ಲಿ ಕೂಡ ಅವರ ಹೋರಾಟದ ಮನೋಭಾವ ಹೇಗಿತ್ತು ಎಂದರೆ 1962ರ ಸಾಲಿನಲ್ಲಿ ಮಾನ್ಯ ದೇವೇಗೌಡರು ಈ ಮನೆಗೆ ಸ್ವತಂತ್ರವಾಗಿ ಗೆದ್ದುಬಂದರು

ಅವರೂ ಕೂಡ ಸಮಾಜವಾದಿ ಪಕ್ಷದ ಹಿನ್ನೆಲೆಯಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿ ಬಂದಂತಹವರು ಅವರು ಪ್ರಥಮವಾಗಿ ಕಾಂಗ್ರೆಸ್‌ನವರಲ್ಲ ಆದರೆ ಮಾನ್ಯ ಜಯಪ್ರಕಾಶ್ ನಾರಾಯಣ್, ಗಾಂಧಿ ತತ್ವಕ್ಕೆ ಪ್ರೇರೇಪಿತರಾದಂತಹ ಡಾ|| ರಾಮ್‌ಮನೋಹರ್ ಲೋಹಿಯಾ ಮೊದಲಾದಂತಹವರ ಜೊತೆಗೆ ಮಾನ್ಯ ಆಚಾರ್ಯ ನರೇಂದ್ರ ದೇವ್‌ರವರನ್ನು ಗುರುವನ್ನಾಗಿ ಸ್ವೀಕಾರ ಮಾಡಿಕೊಂಡು ಹೋರಾಟವನ್ನು ಪ್ರಾರಂಭ ಮಾಡಿದಂತಹ ದಿನಗಳಲ್ಲಿ ಮುಂದೆ ಅವರು ಕಾಂಗ್ರೆಸ್ ಪಕ್ಷವನ್ನು ಸೇರುತ್ತಾರೆ ಕಾಂಗ್ರೆಸ್ ಪಕ್ಷವನ್ನು ಸೇರಿದಾಗಲೂ ಕೂಡ ತಮ್ಮದೇ ಅದಂತಹ ಒಂದು ಗುಂಪು ಇತ್ತು ಈಗಾಗಲೇ ಮಾನ್ಯ ಧರ್ಮಸಿಂಗ್‌ರವರು ಪ್ರಸ್ತಾಪ ಮಾಡಿದಂತೆ ಮಾನ್ಯ ಮೋಹನ್‌ದಾರಿ, ಮಾನ್ಯ ಕೃಷ್ಣಕಾಂತ್‌ರವರು, ಇದರ ಜೊತೆಗೆ ಆ ಕಾಲದಲ್ಲಿ 1969ರ ಕಾಂಗ್ರೆಸ್ ವಿಭಜನೆ ದೇಶಕ್ಕೆ ಹೊಸ ದಿಕ್ಕನ್ನು ತಂದುಕೊಡುವಂತಾದ್ದಾಗಿತ್ತು ಮಾನ್ಯ ಮೋಹನ್ ಕುಮಾರ್‌ಮಂಗಲಂರವರು communist in congress ಎಂದು ಪುಸ್ತಕವನ್ನು ಬರೆದಿದ್ದರು ಆಗ ರಘುರಾಂ ರೆಡ್ಡಿಯವರ ಜೊತೆಗೆ ಯಾವಾಗಲೂ communist card holders ಆಗಿದ್ದರು ಅವರೆಲ್ಲರೂ ಕೂಡ ಕಾಂಗ್ರೆಸ್ ಪಕ್ಷವನ್ನು ಉದ್ದೇಶಪೂರ್ವಕವಾಗಿ ಸೇರಿಕೊಳ್ಳುತ್ತಾರೆ ಅದಕ್ಕೆ ಒಂದು ಜನಪರವಾದಂತಹ ನಿಲುವನ್ನು ಕೊಡಬೇಕು ಎಂದು ಹೇಳಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಇದೇ ಗಾಜಿನ ಮನೆಯಲ್ಲಿ ನಡೆದಂತಹ ಅಧಿವೇಶನದಲ್ಲಿ stray dogs ಎಂದು ಬರೆದು ಕಳುಹಿಸಿದಂತಹವರು ಮಾನ್ಯ ಮೋಹನ್‌ಕುಮಾರ್ ಮಂಗಲಂನವರು ಆ ಮೂಲಕವಾಗಿ communist in congress ಎಂದು ಮಾಡಿದಾಗ ಜನಪರವಾದಂತಹ ಹೋರಾಟದ ರೀತಿಯಲ್ಲಿ ಕಾಂಗ್ರೆಸ್ ಪಕ್ಷ ಆಡಳಿತವನ್ನು ನಡೆಸಬೇಕು ಎಂದು ಮಾಡಿದರು ಆಗ ಅದು ಅಲ್ಪಸಂಖ್ಯೆಯ ಒಂದು ಸರ್ಕಾರ, ಅವರಿಗೆ ಅವತ್ತಿನ ಕಾಲದಲ್ಲಿ ಬಹುಮತ ಇರಲಿಲ್ಲ ಆದರೆ ಇವರು ಸಂಪ್ರದಾಯವಾದಿಗಳಾದಂತಹವರು ಮತ್ತು ಬಂಡವಾಳಶಾಹಿಗಳ ಪರವಾಗಿದ್ದರೆ ಎನ್ನುವ ಒಂದು ಪರಿಕಲ್ಪನೆಯ ಹಿನ್ನೆಲೆಯಲ್ಲಿ ಒಂದು ಹೊಸ ದಿಕ್ಕನ್ನು ತೋರಿಸುವುದಕ್ಕೆ ಬಂದಾಗ ಇವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರು ಮುರಾರ್ಜಿ ದೇಸಾಯಿಯವರ ಮಗ ಕಾಂತಿಲಾಲ್ ದೇಸಾಯಿಯವರು ಮಾಡುತ್ತಿದ್ದಂತಹ ಕೆಲವು ಅವ್ಯವಹಾರಗಳ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಂತಹ ಸಂದರ್ಭದಲ್ಲಿ ನಾವು ಇವರು ಉದ್ದೇಶಪೂರ್ವಕವಾಗಿ ಏನೋ ಮಾಡುತ್ತಿದ್ದಾರೆಂದು ತಪ್ಪಾಗಿ ಭಾವಿಸಿ ಕೊಂಡಿದ್ದೆವು ಆದರೆ ಅವರು ಆ ರೀತಿಯಾದಂತಹ ಕಠಿಣ ನಿಲುವನ್ನು ತೆಗೆದುಕೊಳ್ಳುತ್ತಿದ್ದರು ನ್ಯಾಯ ಮತ್ತು ಸತ್ಯಕ್ಕೆ ನಿಷ್ಠರಾಗಿರುವಂತಹ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದರು 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ

ಯಂತೂ ಶ್ರೀಮತಿ ಇಂದಿರಾಗಾಂಧಿಯನ್ನು ಬಹಳ ವಿಶ್ವಾಸದಿಂದ ಕಂಡಂತ ಹವರು ಆದರೆ ಅವರೇ ನಮಗೆ ಅನೇಕ ಸಂದರ್ಭದಲ್ಲಿ ಹೇಳುತ್ತಿದ್ದರು ಇವರು ಕಾರ್ಯಕಾರಿ ಸಮಿತಿಯ ಸದಸ್ಯತ್ವದ ಚುನಾವಣೆಗೆ ನಿಂತಾಗ ಶ್ರೀಮತಿ ಇಂದಿರಾಗಾಂಧಿಯವರು ಇವರನ್ನು ಬೆಂಬಲಿಸಲಿಲ್ಲ ಏಕೆಂದರೆ, ಈ ಮನುಷ್ಯ ಯಾರ ಮಾತನ್ನು ಕೇಳುವವನಲ್ಲ ಆದುದರಿಂದ, ಇವರನ್ನು ಬೆಂಬಲಿಸಿದಾಗ ನಮಗೆ ತೊಂದರೆಯಾಗಬಹುದು ಎನ್ನುವ ಸಂದರ್ಭವಿದ್ದಾಗ, ಕಾಂಗ್ರೆಸ್‌ನಲ್ಲಿದ್ದ ಚಿಕ್ಕವರಾಗಿದ್ದಂತಹ ಜನ, ಅವರನ್ನು ಅತ್ಯಂತ ಬಹುಮತದಿಂದ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಿ ಕಳುಹಿಸುತ್ತಾರೆ ಅವತ್ತಿನ ಕಾಲಕ್ಕೆ ಆ ಒಂದು Working Committee, cabinet ಇದ್ದ ಹಾಗೆ Congress Working Committtee ಎಂದರೆ ಪಕ್ಷದ ನೀತಿ ನಿರ್ಧಾರಗಳನ್ನು ರೂಪಿಸುವಂತಹದ್ದು, ಇವತ್ತಿನಂತೆ ನಾಮಕಾರಣವಾಗಿರುವ ಜನರಿರತಕ್ಕಂತಹದ್ದಲ್ಲ ಅತಂಹ ಒಂದು ರೀತಿಯ ಸಭೆಗೆ ಅವರು ಆಯ್ಕೆಯಾಗಿ ಹೋಗುತ್ತಾರೆ ಆಗ ಇಂದಿರಾಗಾಂಧಿಯವರ ವಿರುದ್ಧವಾಗಿಯು ಕೂಡ ತಮ್ಮ ಪ್ರೇಮ, ವಿಶ್ವಾಸಗಳನ್ನು ಇಟ್ಟುಕೊಂಡರು, ಅದರ ಮೂಲಕವಾಗಿ ನಿಷ್ಠುರವಾಗಿ ಹೇಳಿದಾಗಲು ಕೂಡ, ಅವರು ತಮ್ಮದೇ ಆದ ನಿಲುವುಗಳ ಮೂಲಕ, ಅವರು ಸೇರಿದಂತೆ, ಜಯಪ್ರಕಾಶ್ ನಾರಾಯಣ್, ಮುರಾರ್ಜಿ ದೇಸಾಯಿ ಹಾಗೂ ಚಂದ್ರಶೇಖರ್, ಈ ಮೂರು ಜನರನ್ನು ಏಕಾಂತ ಸೆರೆಮನೆಯಲ್ಲಿಟ್ಟಿದ್ದರು ಬಹಳ ಅಪಾಯಕಾರಿ ವ್ಯಕ್ತಿಗಳು ಎನ್ನುವ ರೀತಿಯಲ್ಲಿ solitary confinement ರೀತಿಯ ಸೆರೆಮನೆಯಲ್ಲಿಡುತ್ತಾರೆ ಆದರೆ ಅಲ್ಲಿಯೆ ನಿಂತು ಹೋರಾಟವನ್ನು ಮಾಡುತ್ತಾರೆ ಅದಾದ ನಂತರ ಅವರು ಮೊದಲು ಕಂಡದ್ದು ಇಂದಿರಾಗಾಂಧಿಯವರನ್ನು ಅದೇ ರೀತಿ 1977ರ ನಂತರದಲ್ಲಿ ಬಂದಂತಹ ಹೋರಾಟದಲ್ಲಿ ದಿ ದೇವರಾಜ ಅರಸ್ ರವರೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು ಅಂದರೆ ಜಾರ್ಜ್ ಫರ್ನಾಂಡಿಸ್ ಮೊದಲಾದ ಜನರು, ಬೇರೆ ಬೇರೆ ಅಭಿಪ್ರಾಯವನ್ನು ತಾಳಿದ್ದರು ಕೂಡ ಆ ಅಭಿಪ್ರಾಯಗಳನ್ನು ಕ್ರೂಢೀಕರಿಸಲು ಬೇಕಾಗಿರುವ ಸಹಮತ, ಪ್ರಜಾಪ್ರಭುತ್ವದ ನಿಜವಾದ ಅರ್ಥವನ್ನು ಇವರು ಇಟ್ಟುಕೊಂಡಿದ್ದರು ಭಾರತ ಯಾತ್ರ ಪ್ರಾರಂಭ ಮಾಡಿದರು ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದಂತೆ, ಅದು ಒಂದು ಜನತೆಯ ಹತ್ತಿರಕ್ಕೆ ಹೋಗಬೇಕು, ಸರ್ಕಾರ ಬಿದ್ದುಹೋದ ಮೇಲೆ ಒಂದು ರೀತಿಯ ವಿಷ್ಣತೆ ಅವರಿಸುತ್ತೆ, ವಿಧೇಯಕ ಕಾರ್ಯಕ್ರಮಗಳು ಇಲ್ಲದೇ ಏನು ಮಾಡಬೇಕೆನ್ನುವ ಪರಿಸ್ಥಿತಿಯಲ್ಲಿ, ಪ್ರಾಯಶಃ ಆದಿ ಶಂಕರಚಾರ್ಯರು, ಮಹಾತ್ಮ ಗಾಂಧಿಯವರು ಹಾಗೂ ವಿನೋಬಾಜಿಯವರನ್ನು ಬಿಟ್ಟರೆ, ಭಾರತ ದೇಶದ ಉದ್ದಗಲಕ್ಕು ಕಾಲ್ನಡಿಗೆಯಲ್ಲಿ ಹೋಗಿ ಜನತೆಯ ಜೊತೆಗೆ ಸಂಪರ್ಕವನ್ನು ಬೆಳೆಸಿರತಕ್ಕಂತಹ ಒಬ್ಬ ಇತ್ತೀಚಿನ

ನಾಯಕರು ಚಂದ್ರಶೇಖರ್ ಎಂದರೆ ತಪ್ಪಾಗಲಾರದು ಬರೀ ಭಾರತ ಯಾತ್ರೆ ಎಂದರೆ, ಏನು ಮಾಡುವುದಕ್ಕೆ ಕೆಲಸವಿಲ್ಲವೆಂದು ಪ್ರಾರಂಭ ಮಾಡಿದ್ದಲ್ಲ ಈ ಭಾರತೀಯ ಮನಸ್ಸು ಬಹಳ ಸೂಕ್ಷ್ಮ, ಭಾರತೀಯ ಮನಸ್ಸು ಬಹಳ ಸಂಕೀರ್ಣ ಎಲ್ಲಾ ಸೌಲತ್ತುಗಳಿದ್ದರು ಕೂಡ ಅವುಗಳಿಂದ ದೂರ ಸರಿಯುತ್ತೇನೆಂದು ಯಾರು ಜನತೆಯ ಹತ್ತಿರಕ್ಕೆ ಬರುತ್ತಾರೆ ಅಂತಹ ನಾಯಕರನ್ನು ಜನತೆ ಅಪೇಕ್ಷೆ ಮಾಡುತ್ತಾರೆ ಅವರಂತೆ ಕಷ್ಟಸಂಕಷ್ಟಗಳನ್ನು ಯಾರು ಎದುರಿಸುವುದಕ್ಕೆ ತಯಾರಾಗುತ್ತಾರೆ, ಅಂತಹವರನ್ನು ನಾಯಕರೆಂದು ಗುರುತಿಸುತ್ತಾರೆ ಅಧಿಕಾರವಿರತಕ್ಕಂತಹವರ ಅಧಿಕಾರ ಪ್ರಭಾವಳಿಯಲ್ಲಿ ಭಯಪಡುತ್ತಾರೆ, ಭಯದಿಂದ ದೂರವಿರುತ್ತಾರೆ, ಆದರೆ ಅವರ ಹತ್ತಿರವಿರುವ ನಾಯಕರನ್ನು ಪ್ರೀತಿಸುತ್ತಾರೆ, ಗೌರವಿಸುತ್ತಾರೆ ಅವರಿಗೆ ಅಧಿಕಾರವನ್ನು ಕೊಡದೆ ಇರಬಹುದು, ಅವರನ್ನು ಆಯ್ಕೆ ಮಾಡದೇ ಸೋಲಿಸಬಹುದು ಆದರೂ ಕೂಡ ನಮ್ಮ ಪ್ರಮುಖರಾಗಿರುವಂತಹರ ಹೋರಾಟವಾಗಿರುತ್ತದೆ ಅದೇ ದೃಷ್ಟಿಯಲ್ಲಿ ನಾನು ಇಲ್ಲಿ ಹೇಳಿದ ತಕ್ಷಣವೇ ಯಾರೂ ತಪ್ಪಾಗಿ ಭಾವಿಸಬಾರದು, ಮಾನ್ಯ ಮುಖ್ಯಮಂತ್ರಿಯವರ ಗ್ರಾಮವಾಸ್ತವ್ಯ ಕೂಡ ಅಂತಹದ್ದರಿಂದ ಪ್ರೇರೆಪಿತವಾದದ್ದು ಜನತೆಗೆ ನಾವು ಎಷ್ಟು ಹೇಳಿದಾಗಲು ಕೂಡ, ಅವರ ಹತ್ತಿರ ಬರಬೇಕೆನ್ನುವ ಮನಸ್ಸು ಏನು ಇರುತ್ತದೆ, ಅದು ಬಹಳ ಮುಖ್ಯವಾದ ಕೊಡುಗೆಯನ್ನು ಕೂಡ ತಂದು ಕೊಡುತ್ತದೆ ಈ ದೃಷ್ಟಿಯಿಂದ ಅವರು ಸುಮಾರು 4260 ಕಿ ಮೀ ನಷ್ಟು ಕನ್ಯಾಕುಮಾರಿಯಿಂದ ದೆಹಲಿಯವರೆಗೆ ಕಾಲ್ನಡಿಗೆಯಿಂದ ನಡೆದುಹೋದಂತಹವರು ಮುಂದೆ ಎಲ್ಲಾ ಸಂದರ್ಭಗಳಲ್ಲಿ ಯುವಕರಿಗೆ ಅವಕಾಶಗಳನ್ನು ಕಲ್ಪಿಸಿಕೊಡುವ ಸಂದರ್ಬದಲ್ಲಿ ನಾವು ಎಂದೂ ಅವರನ್ನು ಮರೆಯುವುದಕ್ಕೆ ಸಾಧ್ಯವಿಲ್ಲವೆಂಬುದು ಎಲ್ಲರಿಗೂ ಕೂಡ ಗೊತ್ತಿದೆ ನಜೀರ್ ಸಾಬ್ ಅವರನ್ನು ರಾಮಕೃಷ್ಣ ಹೆಗ್ಡೆಯವರು ಅಧ್ಯಕ್ಷರನ್ನಾಗಿ ಮಾಡಲು ಅಭ್ಯರ್ದಿಯನ್ನಾಗಿ ಮಾಡುವುದಕ್ಕೆ ಅಭ್ಯರ್ಥಿಯನ್ನಾಗಿ ನಿಲ್ಲಿಸಿದರು ಮಾನ್ಯ ದೇವೇಗೌಡರು ಗುರುಪಾದ ಸ್ವಾಮಿಯವರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿದರು ಅಲ್ಲಿ ಪರಸ್ಪರ ಮುಖಾಮುಖಿಯಾಗುತ್ತದೆನ್ನುವ ಸಂದರ್ಭ ಬಂದಾಗ, ನಾನು ಬೇರೆ ಬೇರೆಯವರಿಗೆಲ್ಲಾ ಫೋನ್ ಮಾಡಿ ನಜೀರ್ ಸಾಬ್‌ರವರಿಗೆ ಓಟು ಹಾಕುವುದಕ್ಕೆ ಬನ್ನಿ ಎಂದು ದೂರದವರನ್ನು ಕಳುಹಿಸಿಕೊಡಿ ಎಂದು ಹೇಳುವ ಎಂತಹ ಮುಜುಗರದ ಸಂದರ್ಭ ಬಂತೆಂದರೆ, ಪ್ರಾಯಶಃ ಯುವಕರಿಗೆ ಇಂತಹ ಅವಕಾಶವನ್ನು ಕೊಡಿ, ಅನುಭವವಿತಕ್ಕಂತಹದ್ದು ಬೇಡವೆಂದು ದೇವೇಗೌಡರು ಹಾಗೂ ರಾಮಕೃಷ್ಣ ಹೆಗ್ಡೆಯವರಿಗೆ ಹೇಳಿ ನನ್ನ ಹೆಸರನ್ನು ಸೂಚಿಸಿದ್ದರಿಂದ ನಾನು ಅವತ್ತು ಅಧ್ಯಕ್ಷನಾದೆ ಇದಕ್ಕೆ ಚಂದ್ರಶೇಖರ್‌ರವರೇ ನೇರ ಕಾರಣಕರ್ತರೆಂದು ಹೇಳಿದರೆ ತಪ್ಪಾಗಲಾರದು ಅಂದರೆ, ಯುವಕರನ್ನು

ಬೆಳೆಸಬೇಕೆನ್ನುವ ಉದ್ದೇಶ ನಮಗೆ ವಿಶೇಷವಾದ ಅರ್ಹತೆ ಇದೆ ಎನ್ನುವ ಕಾರಣಕ್ಕಲ್ಲ ಯುವಕರಾಗಿರುವವರನ್ನು ಮುಂದಕ್ಕೆ ತಂದರೆ ಮುಂದೆ ಅವರು ನಾಯಕರಾಗಿ ರೂಪಗೊಳ್ಳಬಹುದೆನ್ನುವುದು ಆದರೆ ನಾವೆಲ್ಲರೂ ಕೂಡ God that fade ಅಂದ ಹಾಗೆ ನಾವ್ಯಾರು ನಾಯಕರಾಗುವಂತಹ ಗುಣವನ್ನು ಅಳವಡಿಸಿಕೊಳ್ಳಲಿಲ್ಲ, ನಮ್ಮ ಪಕ್ಷದಲ್ಲಿ ಎಷ್ಟು ಸಬಲರಾಗಿರುವ, ಸಮರ್ಥರಾಗಿರುವ ಜನರಿದ್ದರು ಕೂಡ 13 ಭಾರಿ ನಮ್ಮ ಪಕ್ಷ ಹೋಳಾಗಿದೆ ಆಗ ಅವರು ಸಮಾಜವಾದಿ ಪಕ್ಷವನ್ನು ಕಟ್ಟಿದರು ಸಮಾಜವಾದಿ ಪಕ್ಷದಿಂದ ಅವರೊಬ್ಬರೇ ಗೆದ್ದುಬಂದರು, ದಕ್ಷಿಣದಲ್ಲಿ ಹಾಸನದಿಂದ ಮಾನ್ಯ ದೇವೇಗೌಡರೊಬ್ಬರೇ ಗೆದ್ದು ಬಂದರು, ಇವರಿಬ್ಬರನ್ನು ಬಿಟ್ಟರೆ ಪಾರ್ಲಿಮೆಂಟ್‌ನಲ್ಲಿ ಇನ್ನೊಬ್ಬರು ಇರಲಿಲ್ಲ ಆದರೆ ಮುಂದಿನ ಸೀಟನ್ನು ಪಾರ್ಲಿಮೆಂಟ್‌ನಲ್ಲಿ ಅವರಿಗೆ ಖಾಯಂ ಆಗಿ ಕೊಡುತ್ತಿದ್ದರು ಎಡಪಂಥಿಯರಾಗಿರಬಹುದು, ಮತ್ತ್ಯಾರೆ ಆಗಿರಬಹುದು, ಅನೇಕ ಸಂದರ್ಭದಲ್ಲಿ ತಾವೇನು ಅಂದುಕೊಂಡಿರುತ್ತಾರೆ ಅದನ್ನು ನಿಷ್ಠುರವಾಗಿ ಪ್ರತಿಪಾದಿಸುತ್ತಿದ್ದರು ಹೇಗೆ ಆಧ್ಯಾತ್ಮಿಕ ಚಿಂತನೆಗಳಿರುತ್ತಿದ್ದವರು ಅನೇಕರು ಅವರ ಚಿಂತನೆಗಳ ಬಗ್ಗೆ ಸಂಶಯಪಡತಕ್ಕಂಹ ರೀತಿಯಲ್ಲಿ ಪ್ರಶ್ನೆ ಮಾಡಿದಾಗಲು ಕೂಡ, ಅವರು ಮಾತನಾಡುವ ಮಾತಿಗೆ ದೊಡ್ಡ ಗೌರವವನ್ನು ಈ ದೇಶದ ಜನ, ಅಧಿಕಾರದಲ್ಲಿದ್ದಂತಹವರು ಕೂಡ ಅವರಿಗೆ ಕೊಟ್ಟಿದ್ದಾರೆ ಅಲ್ಲಿ ಸೈನ್ಯದ ಜಾಗದಲ್ಲಿ ಒಂದು ಆಶ್ರಮವನ್ನು ಕಟ್ಟಲು ಜಾಗವನ್ನು ಅವರು ಕೇಳಿದಾಗ ಸ್ವತಃ ಇಂದಿರಾಗಾಂಧಿಯವರೆ ನೇರವಾಗಿ ಪ್ರವೇಶ ಮಾಡಿ, ಇವರಿಗೆ ಸೈನ್ಯ ಜಾಗದಲ್ಲಿ ಆ ಭೋದಿ ಆಶ್ರಮವನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು, ಸದಾ ಕಾಲ ಅವರದು ಅಂತಹ ಸ್ನೇಹವಿದ್ದಂತಹದ್ದು ಇವತ್ತು ಚಂದ್ರಶೇಖರ್ ರವರು ನಮ್ಮ ಜೊತೆಯಲ್ಲಿಲ್ಲ ಅವರನ್ನು ಒಂದುವರೆ ತಿಂಗಳ ಹಿಂದೆ ನಾನು ಆಸ್ಪತ್ರೆಗೆ ಹೋಗಿ ಭೇಟಿ ಮಾಡಿ ಬಂದಿದ್ದೆ, ಅದೆ ನನಗೆ ಅವರ ಅಂತಿಮ ದರ್ಶನವೆಂದು ತಿಳಿದುಕೊಂಡಿದ್ದೇನೆ ಕರ್ನಾಟಕದ ಮಟ್ಟಿಗಂತು ಅವರು ಎಲ್ಲರಿಗೂ ನಾಯಕರೆ ಅದರಲ್ಲಿಯು ಜೀವಿಜಯರವನ್ನು ಮಂತ್ರಿಮಂಡಲದಲ್ಲಿ ಸೇರಿಸುವ ಸಂದರ್ಭದಲ್ಲಿ ನಮ್ಮನ್ನು ಬಹಳ ಜಾಣತನದಿಂದ ಕೈಬಿಟ್ಟಿದ್ದರು ಆಗ ಹೆಗ್ಡೆಯವರು ತಮ್ಮ ಮಾಮೂಲಿ ಚತುರತೆಯಿಂದ they were not dropped, but they were drafted to party work ಎಂದು ಹೇಳಿದಾಗ, ಜೀವಿಜಯರವರ ಪರವಾಗಿ ದೆಹಲಿಯಿಂದ ಫೋನ್ ಮಾಡಿ, ಆ ಹುಡುಗ ಎಷ್ಟು ಸಮರ್ಥವಾಗಿ ಕೆಲಸ ಮಾಡುತ್ತಿದ್ದಾನೆ, ನೀವು ಅಂತಹವರನ್ನೆಲ್ಲಾ ಏತಕ್ಕೆ ಕೈಬಿಟ್ಟಿರೆಂದು ಕೇಳಿದರು ಮತ್ತೆ ನಮ್ಮೆಲ್ಲರನ್ನು ಒಳಗೆ ಸೇರಿಸುವುದಕ್ಕೆ ಇವರು ಕಾರಣರಾಗಿದ್ದರು ನಿಕಟವಾದ ಸಂಪರ್ಕ ವಿಟ್ಟುಕೊಂಡಿದ್ದರು, ಯಾವಾಗಲು ಕಾವೇರಿ ಕಾಂಟಿನೆಂಟಲ್ ಹೋಟಲ್‌ನಲ್ಲಿ

ಉಳಿಯುತ್ತಿದ್ದರು, ಇಲ್ಲಿ ಕುಮಾರಕೃಪಕ್ಕೆ ಬರುತ್ತಿದ್ದರು ಅವರ ಜೊತೆಯಲ್ಲಿ ಮಾತನಾಡುತ್ತಾ ಕುಳಿತರೆ ಸಮಾಕಾಲೀನ ರಾಜಕೀಯ ಬದುಕಿನ ಚರಿತ್ರೆಯೇ ಹೊರಗಡೆಗೆ ಬರುತ್ತಿತ್ತು ಸಣ್ಣವರ ದೊಡ್ಡತನ, ದೊಡ್ಡವರ ಸಣ್ಣತನ, ಆಗಿಂದಾಗ್ಗೆ ಆಗುತ್ತಿದ್ದ ಕೆಲವು ಘಟನಾವಳಿಗಳು, ಇವುಗಳ ಕುರಿತಾಗಿ ನೀವು ಏತಕ್ಕೆ ಬರೆಯಬಾರದೆಂದು ನಾವು ಹೇಳುತ್ತಿದ್ದೇವು, ಅವರು ಇತ್ತೀಚೆಗೆ ಬರೆಯುವ ಮನಸ್ಸನ್ನು ಕೂಡ ಕಳೆದುಕೊಂಡಿದ್ದರು ಈ ದೇಶದಲ್ಲಿ ಭವಿಷ್ಯವಿದೆ ಎಂದು ನಾವು ಭಾವಿಸುವುದಿಲ್ಲ ಎನ್ನುವ ಭಾವನೆ ಇತ್ತು ಎಲ್ ಸಿ ಜೈನ್‌ರವರು, ರಾಜಕೀಯದಿಂದ ದೂರ ಸರಿದಂತೆ, ಬಹಳ ಜನ ತೀರಿಹೊದಂತೆ ನಕ್ಷತ್ರಗಳಿಲ್ಲದ ಬಾಂದಳ "A sky without stars" ವೆಂದು ಒಂದು ಲೇಖನವನ್ನು ಬರೆದಿದ್ದರು, ಆಗ ಚಂದ್ರಶೇಖರ್‌ರವರ ಬಗ್ಗೆ ದೊಡ್ಡ ಗುಣಗಾನವನ್ನು ಮಾಡಿದರು ಅಂತಹ ಒಂದು ಸಾಮಾನ್ಯ ಕುಟುಂಬದಿಂದ ಬಂದಂತಹ ಅತ್ಯಂತ ಮಧುರವಾದ ಆತ್ಮೀಯ ಸ್ನೇಹವನ್ನು ಇಟ್ಟುಕೊಂಡಂತಹವರು ಇವತ್ತಿನ ಸಮಕಾಲಿನ ಜಗತ್ತಿಗೆ, ಭಾರತ ದೇಶದಂತಹ ದೊಡ್ಡ ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಕನಿಷ್ಟ 25-50 ಜನರನ್ನು ಹೆಸರಿಡಿದು ಕರೆಯುವಷ್ಟು ಸ್ನೇಹವನ್ನು ಅವರು ಬೆಳೆಸಿಕೊಂಡಿದ್ದರು ಇದು ಪ್ರಾಯಶಃ ಒಬ್ಬ ದೊಡ್ಡ ನಾಯಕನಿಗೆ ಇರಬೇಕಾದ ದೊಡ್ಡ ಗುಣ ಮತ್ತು ಆತ್ಮೀಯತೆ ಅವರು ಅಧಿಕಾರದಲ್ಲಿದ್ದು ಕೇವಲ 7 ತಿಂಗಳು, ಅವರು ಶ್ರೀಲಂಕಾದಲ್ಲಿ ನಡೆದ ಸಾರ್ಕ್ ಸಮ್ಮೇಳನದಲ್ಲಿ ಅವರು ಹೋಗಿ ಮಾಡಿದ ಭಾಷಣ ಇವತ್ತಿಗೂ ಕೂಡ ಒಂದು ಉತ್ತಮವಾದ ಡಾಕ್ಯುಮೆಂಟೇಷನ್ ಆಗಿದೆ ಮನಮೋಹನ್ ಸಿಂಗ್ ಅವರಿಗೆ ಆರ್ಥಿಕ ಸಲಹೆಗಾರರಾಗಿದ್ದರು ಅವರು ಮುಂದು ಈ ಖಾಸಗೀಕರಣ ವಿಚಾರದ ಬಗ್ಗೆ ಅವರು ಪ್ರಸ್ತಾಪ ಮಾಡಿದಾಗ, ಅವರು ಅದ್ಭುತವಾದ ಲೇಖನವನ್ನು ತಮ್ಮ ಯಂಗ್ ಇಂಡಿಯಾದಲ್ಲಿ ಮನಮೋಹನ್‌ಸಿಂಗ್‌ರವರನ್ನು Mal notice to ಮನಮೋಹನ್‌ಸಿಂಗ್ ಎನ್ನುವ ರೀತಿಯ ಒಂದು ಲೇಖನವನ್ನು ಬರೆದು, ಇವರ ಖಾಸಗೀಕರಣ ಮತ್ತು ಜಾಗತೀಕರಣ ವಿಚಾರಗಳ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯವನ್ನು ವ್ಯಕ್ತಮಾಡಿದವರು ಕೂಡ ಅವರಾಗಿದ್ದರು ಈ ರೀತಿಯ ವ್ಯಕ್ತಿತ್ವವನ್ನು ಇಟ್ಟುಕೊಂಡಿರುವ ಚಂದ್ರಶೇಖರ್‌ರವರು ನಮ್ಮನ್ನು ಅಗಲಿದಂತಹ ಈ ಸಂದರ್ಭದಲ್ಲಿ ನಮ್ಮ ಪದ್ಧತಿ ಮತ್ತು ಸಂಪ್ರದಾಯಕ್ಕನುಗುಣವಾಗಿ ಈ ಸದನ ಅವರಿಗೆ ನಮ್ಮ ಹೃತ್ಪೂರ್ವಕವಾದ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ತಾವೇನು ಸಂತಾಪ ಸೂಚನೆಯನ್ನು ತಂದಿದ್ದಿರಿ, ಅದಕ್ಕೆ ನಾನು ತಮ್ಮನ್ನು ಅಭಿನಂದಿಸುವುದರ ಜೊತೆಗೆ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಮಾರ್ಗದರ್ಶನ ಇನ್ನು ಅನೇಕ ಯುವಕರಲ್ಲಿ ಪ್ರೇರೆಪಣೆಯನ್ನುಂಟು ಮಾಡಲಿ, ಸವಕಲು ನಾಣ್ಯವಾಗಿರುವ ಜನ, ನಮ್ಮಂತಹವರನ್ನು ಬಿಟ್ಟು ಹೋದ ಮೇಲೆ

ಏನೂ ಪ್ರಯೋಜನವಿಲ್ಲದಿರುವ ಜನಗಳ ನಡುವೆ ಯುವಕರಿಗೆ ಮಾರ್ಗದರ್ಶನವಾಗುವ ರೀತಿಯಲ್ಲಿ ಅವರ ಜೀವನಚರಿತ್ರೆಗಳು ಪ್ರಕಟವಾಗುವ ರೀತಿಯಲ್ಲಿ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುವ ಖರ್ಗೆ [ಗುರುಮಿಟ್ಕಲ್] ಸನ್ಮಾನ್ಯ ಸಭಾಧ್ಯಕ್ಷರೆ, ನಿಜವಾಗಲೂ ಇವತ್ತು ಒಬ್ಬ ಒಳ್ಳೆಯ ನಾಯಕನ ಮತ್ತು ವಿಶೇಷವಾಗಿ ಯುವಕರಿಗೆ ಮಾರ್ಗದರ್ಶನ ಮಾಡತಕ್ಕಂತಹ ಒಬ್ಬ ಅದ್ಭುತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ ರಾಜಕಾರಣದಲ್ಲಿ ಇಂತಹ ವ್ಯಕ್ತಿಗಳು ಬಹಳ ಅಪರೂಪ ನೇರ ನುಡಿ, ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ನಡೆದುಕೊಂಡು, ಆಡಳಿತದಲ್ಲಿ ಅವರು ಪಾರ್ಲಿಮೆಂಟ್ ಸದಸ್ಯರಾಗಿ, ರಾಜ್ಯಸಬಾ ಸದಸ್ಯರಾಗಿ ಬಹಳ ದೀರ್ಘಕಾಲವಿದ್ದರು ಕೂಡ ಅವರು ಎಂದೂ ಕೂಡ ಮಂತ್ರಿಮಂಡಲದಲ್ಲಿ ಸೇರಿರಲಿಲ್ಲ ಅವರು ಏನಾದರೂ ಆಗಿದ್ದರೆ ನೇರವಾಗಿ ಈ ದೇಶದ ಪ್ರಧಾನಮಂತ್ರಿಗಳಾಗಿ ಕೆಲಸ ಮಾಡುವುದನ್ನು ಮಾಡಿದರೆ ವಿನಃ ಯಾವುದೇ ಒಂದು ಮಂತ್ರಿಮಂಡಲದಲ್ಲಿ ರಾಜ್ಯ ಮಂತ್ರಿಯಾಗಿ ಅಥವಾ ಸಂಪುಟದ ಸಚಿವರಾಗಿ ಕೆಲಸ ಮಾಡುವಂತಹದ್ದನ್ನು ಅವರು ಮಾಡಲಿಲ್ಲ, ಮತ್ತೆ ಅದಕ್ಕೆ ಅವರು ಆಸೆಯು ಪಡಲಿಲ್ಲ

ಅದಕ್ಕೆ ಕಾರಣವೇನೆಂದರೆ ಅವರು ಯಾವಾಗಲೂ ಕೂಡ ಒಂದು ತತ್ವದ ಮೇಲೆ ನಂಬಿಕೆಯನ್ನು ಇಟ್ಟು, ಆ ತತ್ವಗಳನ್ನು ಅನುಷ್ಠಾನದಲ್ಲಿ ತರಬೇಕೆನ್ನುವಂತಾ ಧ್ಯೇಯ ಧೋರಣೆಯಿಂದ ಪಕ್ಷವನ್ನು ಕಟ್ಟಿ, ಆ ಪಕ್ಷದಲ್ಲಿ ಸೇರಿದಂಥದವರು ಈಗಾಗಲೇ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಎಂ ಪಿ ಪ್ರಕಾಶ್‌ರವರು ಹೇಳಿದ ಹಾಗೆ, ಆಚಾರ್ಯ ನರೇಂದ್ರ ದೇವ್‌ರವರ ಗರಡಿಯಲ್ಲಿ ಪಳಗಿದಂತಹ ವ್ಯಕ್ತಿ, ಪ್ರಜಾ ಸೋಷಿಯಲಿಷ್ಟ್ ಪಾರ್ಟಿಯಲ್ಲಿ ನಂಬಿಕೆಯನ್ನು ಇಟ್ಟು, ಸಮಾಜವಾದಿ ಸಮಾಜ ರಚನೆಗೆ ತಮ್ಮ ಬೆಂಬಲವನ್ನು ಸೂಚಿಸಿ, ಅದೇ ರೀತಿಯಲ್ಲಿ ತಮ್ಮ ಜೀವನದುದ್ದಕ್ಕೂ ನಡೆದುಕೊಂಡು ಬಂದರು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯನ್ನು ಅವರು ಬಿಟ್ಟರೂ ಕೂಡ, ಮುಂದೆ ಅವರು ಕಾಂಗ್ರೆಸ್ ಪಕ್ಷವನ್ನು ಸೇರಿ ತನ್ನದೇ ಅದಂತಹ ವಿಚಾರಗಳನ್ನು ಜನರ ಮುಂದೆ ಇಡುವಂದಾ ಕೆಲಸವನ್ನು ಮಾಡಿದರು, ಮತ್ತೆ ಇಲ್ಲೆ ಒಂದು ಹೊಸ ಗುಂಪು ಸೃಷ್ಟಿಯಾಗಿತ್ತೆಂಬ ಮಾತನ್ನು ಕೂಡ ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ ಅದಕ್ಕೆ ಹೆಚ್ಚು ಕಡಿಮೆ Congress Forum for Socialist Action ಎಂದು ಒಂದು ಫೋರಂ ಅನ್ನು ಮಾಡಿದರು, ಅಂದರೆ ಸಮಾಜವಾದಿ

ತತ್ವದ ಅನುಷ್ಠಾನಕ್ಕಾಗಿ ಕಾಂಗ್ರೆಸ್‌ನಲ್ಲೇ ಒಂದು ಘೋರಂ ಮಾಡಿ, Congress Forum for Socialist Action ಮಾಡಿದ ಉದ್ದೇಶವೆಂದರೆ, ಸಮಾಜವಾದಿ ತತ್ವಗಳನ್ನು ಕಾಂಗ್ರೆಸ್ ಮುಖಾಂತರ ಅನುಷ್ಠಾನದಲ್ಲಿ ತರಬೇಕೆಂಬ ದೃಷ್ಟಿಯಿಂದ, ಆ ಒತ್ತಡದ ಗುಂಪನ್ನು ಕಾಂಗ್ರೆಸ್‌ನಲ್ಲಿ ಸೃಷ್ಟಿ ಮಾಡತಕ್ಕಂಥಾದ್ದನ್ನು ಅವರು ಮಾಡಿದರು ಅದಕ್ಕಾಗಿ ಸಿಮ್ಲಾದಲ್ಲಿ ನಡೆದಂಥ Central Working Committee ಚುನಾವಣೆಯಲ್ಲಿ ಅವರು ನಿಂತು ಅತ್ಯಂತ ಬಹುಮತದಿಂದ ಆರಿಸಿ ಬಂದರು ಆಗ ನಾವು ಕೂಡ ಹೋಗಿದ್ದೇವು ಇದು ಏನು ತೋರಿಸುತ್ತದೆಯೆಂದರೆ, ಅಂದಿನ ದಿವಸದಲ್ಲೂ ಕೂಡ ಕಾಂಗ್ರೆಸ್ ಪಕ್ಷದಲ್ಲಿ ಸಮಾಜವಾದಿ ತತ್ವಕ್ಕೆ ಬೆಂಬಲವನ್ನು ಕೊಡುವ ಜನರ ಸಂಖ್ಯೆ ಹೆಚ್ಚಿಗೆ ಇದೆ ಅದಕ್ಕಾಗಿ ಹತ್ತು ಅಂಶಗಳ ಕಾರ್ಯಕ್ರಮ (Ten-point programme)ವನ್ನು ಅನುಷ್ಠಾನಕ್ಕೆ ತರಲು ಏಕೆ ಸಾಧ್ಯವಾಯಿತೆಂದರೆ, ಮಾನ್ಯ ಚಂದ್ರಶೇಖರ್‌ರವರು, ಮಾನ್ಯ ಕೃಷ್ಣಕಾಂತ್‌ರವರು, ಮಾನ್ಯ ಮೋಹನ್ ಧಾರಿಯವರು, ಮಾನ್ಯ ಅರ್ಜುನ್‌ರವರು, ಇಂಥ ಅನೇಕ ನಾಯಕರು ಮತ್ತು ರಾಜ್ಯದಲ್ಲೂ ಕೂಡ ಮಾನ್ಯ ಡಿ ದೇವರಾಜ ಅರಸು ಅಂಥವರು ಅನೇಕ ಜನರು ಈ ಘೋರಂನಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ರಾಜ್ಯ ಮಟ್ಟದಲ್ಲಿ ಕೆಲಸ ಮಾಡಿ, ಈ ಹತ್ತು ಅಂಶಗಳ ಕಾರ್ಯಕ್ರಮವನ್ನು ಕಾಂಗ್ರೆಸ್‌ನಲ್ಲಿ ಅನುಷ್ಠಾನದಕ್ಕೆ ತರಲು ಸಾಧ್ಯವಾಯಿತು, ಮತ್ತೆ ಅದಕ್ಕೆ ಅನಿವಾರ್ಯವಾಗಿ Congress Working Committee ಕೂಡ ಬೆಂಬಲವನ್ನು ಕೊಡುವಂಥಾದ್ದು ಅಯಿತು ಅದಕ್ಕೆ ನೇರವಾಗಿ ಶ್ರೀಮತಿ ಇಂದಿರಾ ಗಾಂಧೀಜಿಯವರು ಕೂಡ ಬೆಂಬಲವನ್ನು ಕೊಟ್ಟು ಕೊನೆಗೆ ಈ ಹತ್ತು ಅಂಶಗಳ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಇಡಿ ಭಾರತ ದೇಶದಲ್ಲಿ ಜಾರಿಗೆ ತರುವಂಥಾದ್ದು ಆಯಿತು ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ನಾವೆಲ್ಲರೂ ಕೂಡ ಅಂದಿನ ಕಾಲದಲ್ಲಿ ಈ ಹತ್ತು ಅಂಶಗಳ ಕಾರ್ಯಕ್ರಮಗಳನ್ನು ನೋಡಿಯೆ, ಆಗ ನಾವು ಕಾಂಗ್ರೆಸ್‌ಗೆ ಸೇರಿದೆವು ನಾವು ಆಗ ವಿದ್ಯಾರ್ಥಿ ಜೀವನದಲ್ಲಿ ಇದ್ದೆವು, ಮಾನ್ಯ ಧರ್ಮಸಿಂಗ್‌ರವರು ಹೇಳಿದರು ನಾವು ಬಂದಾಗ ಸೆಕ್ಷನ್ 144 ಅನ್ನು ಜಾರಿ ಮಾಡಿ, Police Act 35ರ ಪ್ರಕಾರ ಜಾರಿ ಮಾಡಿ ಭಾಷಣಗಳನ್ನೆ ಮಾಡಬಾರದೆಂದು, ಈ ತತ್ವಗಳನ್ನೆ ಹೇಳಿಕೊಡಬಾರದೆಂದು ಹೇಳಿ, ಆದೇಶ ಬಂದ ಮೇಲೆ, ಅಲ್ಲಿ ಲಾರಿ ಚಾರ್ಜ್ ಮಾಡಿ, ಕೊನೆಗೆ ಆ ಮೀಟಿಂಗ್ ಅನ್ನು disperese ಮಾಡಿದ್ದು ಅಲ್ಲದೇ ನಮ್ಮ ಹತ್ತು ಜನರ ಮೇಲೆ ಕೇಸ್ ಹಾಕಿ, ನಮ್ಮನ್ನು ಎರಡು ವರ್ಷಗಳ ಕಾಲ ತಿರುಗಾಡಿಸಿದರು ಕೊನೆಗೆ ನಮ್ಮ ಸರ್ಕಾರ ಬಂದಮೇಲೆ, ಆ ಕೇಸನ್ನು withdraw ಮಾಡಿ ಕೊಂಡೆವು ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಕೃಷ್ಣಕಾಂತ್‌ರವರು ಮತ್ತು ಚಂದ್ರಶೇಖರ್‌ರವರು ಆ ಕೇಸ್ ಇತ್ತೆಂದು ಪದೇ ಪದೇ ಗುಲ್ಬರ್ಗಾಕ್ಕೆ

ಬರುತ್ತಿದ್ದರು ನಾನು ಇದನ್ನು ಹೇಳಬೇಕೋ, ಬೇಡವೋ ಗೊತ್ತಿಲ್ಲ ಆದರೆ ಅವರು leave of basence ಕೇಳಿದ್ದರು, ಅಂದರೆ ನಮಗೆ absent ಇರುವುದಕ್ಕೆ ಪರ್ಮಿಷನ್ ಕೇಳಿದ್ದರು ಮೂರು ಸಲ ಕೊಡಲಿಲ್ಲ, ಇದು Police Actನಲ್ಲಿ ಒಂದು ಸಾಮಾನ್ಯ ಕೇಸ್, ಅಂದರೆ ಎಷ್ಟರಮಟ್ಟಿಗೆ ಜನರು ವಿನಾ ಕಾರಣ prejudice ಆಗುತ್ತಾರೆ ಹೀಗೆ ಅವರು ಎರಡು, ಮೂರು ಸಲ ಬಂದಾಗ ನಮಗೆ ಒಂದು ಅನುಕೂಲ ಏನಾಯಿತೆಂದರೆ, ಅವರನ್ನು ಎಲ್ಲಾ ಕಡೆ ಕರೆದುಕೊಂಡು ಹೋಗಿ ಭಾಷಣವನ್ನು ಮಾಡಿಸುವುದು ನಾವು ಅವರ ಜೊತೆಯಲ್ಲಿ ನಿಲ್ಲುವುದು ಈ ರೀತಿ ಒಂದು ಅವಕಾಶ ನಮಗೆ ಸಿಕ್ಕಿತು ಆ ಲಾರಿ ಚಾರ್ಜ್‌ನಿಂದ ನಮ್ಮ ರಾಜಕೀಯ ಜೀವನ ಪ್ರಾರಂಭವಾಗಿದ್ದು, ಇಲ್ಲಿಯವರೆಗೆ ಆ ನೀತಿ ಮತ್ತು ತತ್ವದ ಮೇಲೆ ನಂಬಿಕೆಯನ್ನು ಇಟ್ಟುಕೊಂಡು ಬಂದೆವು ಯಾರು ಏನೇ ಹೇಳಿದರೂ ಕೂಡ ಆ ತತ್ವಗಳನ್ನು ಜಾರಿ ಗೊಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಅವರಂಥವರಿಂದ ಕಲಿತಂಥಾ ವಿಚಾರವೆಂದರೆ, ಇದು ಅತಿಶಯೋಕ್ತಿಯಲ್ಲ ನಾವೆಲ್ಲಾ ಕಡೆ ಹೇಳುತ್ತಿದ್ದೆವು, ಇವರೆಲ್ಲಾ ಕಾಂಗ್ರೆಸ್ ಪಕ್ಷದಲ್ಲಿ ಇದ್ದು, ಬಡವರಿಗಾಗಿ, ದೀನ ದಲಿತರಿಗಾಗಿ, ವಿಶೇಷವಾಗಿ, ಭೂ ಸುಧಾರಣೆ ಕಾನೂನಿಗಾಗಿ, State trading, Bank Nationalization, ರಾಜ ಮಹಾರಾಜರ ಫಲಕಗಳನ್ನು ನಿಲ್ಲಿಸುವಂತಾದ್ದು, ಇಂಥಾದ್ದು ಎಲ್ಲವನ್ನು ಕೂಡ ಅವರು ಮಾಡುತ್ತಿದ್ದಾರೆ ನಾವು ಅದಕ್ಕೆ ಬೆಂಬಲವನ್ನು ಕೊಡಬೇಕೆಂದಾಗ, ಇದು ತಮಗೆಲ್ಲಾ ಗೊತ್ತಿದೆ ಅದನ್ನು ಹೇಳಬೇಕಾಗಿಲ್ಲ ಜನರು ತಾವಾಗಿ ಹುಚ್ಚೆದ್ದು ಎಲ್ಲಾ ಕಡೆ support ಮಾಡಿದರು ಆ ತತ್ವಗಳು, ಸುದೈವದಿಂದ ಕರ್ನಾಟಕ ರಾಜ್ಯದಲ್ಲಿ ದಿ ಡಿ ದೇವರಾಜ ಅರಸುರವರ ನೇತೃತ್ವದಲ್ಲಿ ಆಚರಣೆಗೆ ಬಂತೆಂದರೆ ಅದನ್ನು ಎಲ್ಲರೂ ಒಪ್ಪಿಕೊಳ್ಳುವಂಥಾದ್ದು ಅದಕ್ಕೆ ಮುಂದೆ ಯಾವ ರೀತಿಯಾಗಿ ಪ್ರೋತ್ಸಾಹ ಸಿಕ್ಕಿತು, ಯಾವ ರೀತಿಯಾಗಿ ಅನುಷ್ಠಾನದಲ್ಲಿ ಬಂತೆಂಬುದು ಕೂಡ ಎಲ್ಲರಿಗೂ ಗೊತ್ತಿದೆ ಹೀಗೆ ಇಂಥ ನಾಯಕರು ಬಹಳ ಕಡಿಮೆ, ಅಂದರೆ ಏನೋ ಒಂದು ಅಧಿಕಾರ ಸಿಕ್ಕುತ್ತದೆಂದರೆ ತಕ್ಷಣ ಬದಲಾವಣೆ ಮಾಡುವಂಥಾದ್ದು ಸಹಪ ಆದರೆ ಇವರು ಅವರ ಜೀವನದಲ್ಲಿ ಎಂದೂ ಕೂಡ ಬದಲಾವಣೆಯನ್ನು ಮಾಡಲಿಲ್ಲ ಅವರು ತನಗೆ ಏನು ಹೇಳಬೇಕೆಂದು ಅನಿಸುತ್ತದೋ ಅದನ್ನು ಹೇಳಿದರು ಯಾವಾಗ ಅವರ ಬೆಂಬಲವನ್ನು ವಾಪಸ್ಸು ತೆಗೆದುಕೊಂಡು ತಕ್ಷಣವೇ, ತಮ್ಮ ರಾಜೀನಾಮೆಯನ್ನು ಕೊಟ್ಟರು ಅಂದರೆ manipulation politics ಇಲ್ಲ ಯಾರಿಗೂ ಬೆಣ್ಣೆ ಹಚ್ಚುವಂಥಾದ್ದು ಇಲ್ಲ, ಯಾರ ಬಳಿಯೂ ವಿಶೇಷವಾಗಿ ಹೋಗಿ ಬೇಡಿಕೊಳ್ಳುವಂದಾದ್ದು ಕೂಡ ಅವರು ಮಾಡಿಲ್ಲ ಅಂಥಾ ಒಬ್ಬ ವ್ಯಕ್ತಿ ನಮ್ಮಿಂದ ಅಗಲಿದ್ದಾರೆ, ನಿಜವಾಗಿಯೂ ಅವರ

ಮಾರ್ಗದರ್ಶನ ಇನ್ನು ಈ ದೇಶಕ್ಕೆ ಬೇಕಾಗಿತ್ತು, ಏಕೆಂದರೆ ಇಂಥಾ ಸಂದಿಗ್ಧ ಪರಿಸ್ಥಿತಿಯಲ್ಲಿ ಇಂಥಾ ವಿಚಾರಧಾರೆ ಇರುವಂಥಾ ಜನರು ಇದ್ದರೆ, ಪ್ರಜಾ ಪ್ರಭುತ್ವದಲ್ಲಿ ನಮಗೆಲ್ಲರಿಗೂ ಅನುಕೂಲವಾಗುತ್ತಿತ್ತೆಂಬ ಮಾತನ್ನು ಹೇಳುತ್ತೇನೆ ಈ ವಿಷಯ ತಮಗೂ ಗೊತ್ತಿದೆ ಅವರು ಪಾರ್ಲಿಮೆಂಟ್‌ನಲ್ಲೂ ಕೂಡ ಅನೇಕ ಸಾರಿ ಎದ್ದು ನಿಂತರೆ ಉಳೀದ ಎಲ್ಲಾ ಸದಸ್ಯರು ಸುಮ್ಮನೆ ಕುಳಿತಿರುತ್ತಿದ್ದರು ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಎದ್ದು ನಿಂತಾಗ, ತಕ್ಷಣ ಅಲ್ಲಿ ವಿರೋಧ ಪಕ್ಷದವರು ಇರಲಿ, ಆಡಳಿತ ಪಕ್ಷದವರು ಇರಲಿ, ಬಿ ಜೆ ಪಿ ಕಮ್ಯುನಿಸ್ಟ್, ಎಲ್ಲರೂ ಕೂಡ ಶಾಂತ ರೀತಿಯಲ್ಲಿ ಅವರ ಮಾತನ್ನು ಕೇಳುತ್ತಿದದರು ಅಂಥಾ ಒಂದು ಕಮಾಂಡ್ ಇಟ್ಟುಕೊಂಡಿದ್ದಂಥಾ ಸಂಸದೀಯ ಪಟುವೆಂದರೆ, ಅದು ಅವರೊಬ್ಬರೇ ಎಂದರೆ, ಇದು ಎಂದೂ ಕೂಡ ತಪ್ಪಾಗುವುದಿಲ್ಲವೆಂದು ನನ್ನ ಭಾವನೆ ಅದಕ್ಕೆ ಅವರಿಗೆ 1995ರಲ್ಲಿ Best Parliamentarian ಎಂದು ಅವಾರ್ಡ್ ಅನ್ನು ಕೂಡ ಕೊಟ್ಟರು ಅಂದರೆ ನಾವು ಈ ಮಾತುಗಳೆಲ್ಲವನ್ನು ನೆನಪಿನಲ್ಲಿಡಬೇಕು ಜನರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವವರನ್ನು ಮೆಚ್ಚುತ್ತಾರೆ ಅಧಿಕಾರ ಇರಲಿ, ಇರದೇ ಇರಲಿ, ಅವರು ಬಹಳ brief period ಪ್ರಧಾನಮಂತ್ರಿಯಾಗಿ ಇರಬಹುದು ಆದರೆ ಅವರು ಚಂದ್ರಶೇಖರ್ ಆಗಿ ಇಡೀ ಭಾರತ ದೇಶಕ್ಕೆ ಗುರುತಾದಂಥ ವ್ಯಕ್ತಿಯಾಗಿದ್ದಾರೆ ಅವರು ಪ್ರಧಾನಮಂತ್ರಿಯಾಗಿಲ್ಲ, ಮಂತ್ರಿಯಾಗಿಲ್ಲ, ಆದರೆ ಅವರು ತನ್ನ ಹೆಸರಿನ ಮೇಲೆ, ವ್ಯಕ್ತಿತ್ವದ ಮೇಲೆ, ಇವತ್ತು ಇಡೀ ದೇಶಕ್ಕೆ ವಿಶೇಷವಾಗಿ ಯುವಕರಿಗೆ ಅವರು ಪರಿಚಿತರಾಗಿ, ಈಗಾಗಲೇ ಅವರು ಹೇಳಿದ ಹಾಗೆ ಎರಡನೆಯ ಸಾಲಿನ ಅಥವಾ second line leadership ಹೆಚ್ಚಾಗಿ ಬೆಳೆದಿದ್ದು, ಅವರ ಕಾಲದಲ್ಲಿ, ಅದು ಕಾಂಗ್ರೆಸ್‌ನಲ್ಲಿ ಇರಬಹುದು, ಅಥವಾ ಕಾಂಗ್ರೇಸೇತರ ಸರ್ಕಾರಗಳು, ಅಥವಾ ಪಕ್ಷಗಳಾಗಿರಬಹುದು ಅದಕ್ಕೆಲ್ಲದಕ್ಕೂ ಕೂಡ ಕಾರಣಕರ್ತರು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅವರಿಗೆ ನನ್ನ ಹೃತ್ಪೂರ್ವಕವಾದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ ತಾವು ಮಂಡಿಸಿದಂಥಾ ಈ ಸಂತಾಪ ಸೂಚನೆಗೆ ನಾನು ಕೂಡ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) ಮಾನ್ಯ ಸಭಾಧ್ಯಕ್ಷರೇ, ತಾವು ಮಂಡಿಸಿರುವಂಥ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತೇನೆ ಇವತ್ತು ನಮ್ಮ ಮಧ್ಯೆ ಮಾನ್ಯ ಚಂದ್ರಶೇಖರ್‌ರವರು ಇಲ್ಲ ಯಾವ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆಯೋ, ಅವರು ಹೋದಾಗ ಅವರಿಂದ ನಾವು ಏನು ಕಲಿಯಬೇಕು ಎನ್ನುವಂಥ ಅಂಶವನ್ನು ಅವರ

ಜೀವನದ ಮುಖಾಂತರ ರಾಜಕಾರಣಿಗಳಾದ ನಾವು ಏನು ಕಲಿಯಬೇಕು ಎನ್ನುವಂಥ ಅಂಶವನ್ನು ಅವರ ಜೀವನದ ಮುಖಾಂತರ ರಾಜಕಾರಣಿಗಳಾದ ನಾವು ಕಲಿಯಬೇಕಾಗುತ್ತದೆ ವಿಶೇಷವಾಗಿ ಅವರು ಜೀವನದಲ್ಲಿ ಅಳವಡಿಸಿ ಕೊಂಡಿದ್ದಂಥಾದ್ದನ್ನು ನಾವು ಗಮನಿಸಬೇಕಾದುದರೆಂದರೆ, ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು ಎಂದು ಸಾಧನೆ ಮಾಡಿ ತೋರಿಸಿದಂಥ ವ್ಯಕ್ತಿ ಚಂದ್ರಶೇಖರ್‌ರವರು ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರೂ ಕೂಡ, ಈ ದೇಶಕ್ಕೆ ತುರ್ತು ಪರಿಸ್ಥಿತಿ ಬಂದಂಥ ಸಂದರ್ಭದಲ್ಲಿ, ಯಾವುದೇ ಕಾರಣಕ್ಕೂ ಕೂಡ ಪತ್ರಿಕಾ ಸ್ವಾತಂತ್ರ್ಯ ಹರಣವನ್ನು ನಾನು ಒಪ್ಪುವುದಿಲ್ಲ, ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಳ್ಳನು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರು ಈ ಮಾತನ್ನು ಬೇರೆ ಬೇರೆ ವಿರೋಧ ಪಕ್ಷಗಳವರೂ ಹೇಳಿರಬಹುದು ಆದರೆ ಕಾಂಗ್ರೆಸ್ ಪಕ್ಷದಲ್ಲೇ ಇದ್ದಂಥ ವ್ಯಕ್ತಿಯಾದ ಅವರು ಇದನ್ನು ವಿರೋಧ ಮಾಡಿ, ಈ ದೇಶಕ್ಕೆ ಮತ್ತೊಂದು ಸ್ವಾತಂತ್ರ್ಯ ತಂದುಕೊಡುವ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ಜೈಲಿಗೆ ಹೋದಂಥವರೆಂದರೆ ಮಾನ್ಯ ಚಂದ್ರಶೇಖರ್‌ರವರು ಅಂಥ ವ್ಯಕ್ತಿಯನ್ನು ನಾವು ಏಕೆ ಇವತ್ತು ಸ್ಮರಣೆ ಮಾಡಿಕೊಳ್ಳುತ್ತಿದ್ದೇವೆಂದರೆ, ಪಕ್ಷದ ರಾಜಕಾರಣಗಳು ಇರುವಂಥ ಸಂದರ್ಭದಲ್ಲಿ, ಪಕ್ಷದಿಂದ ದೇಶಕ್ಕೆ ಅನ್ಯಾಯವಾಗುವಂಥ ಸಂದರ್ಭಗಳು ಬಂದಾಗ, ಯಾವುದೇ ಕಾರಣಕ್ಕೂ ಕೂಡ ನಾನು ದೇಶದ ಪರವಾಗಿರುತ್ತೇನೆ, ಯಾವುದೇ ಒಂದು ಪಕ್ಷದ ಪರವಾಗಿ, ವ್ಯಕ್ತಿಯ ಪರವಾಗಿ ಇರಲಿಕ್ಕೆ ಸಾಧ್ಯವೇ ಇಲ್ಲ ಎಂದು ತೋರಿಸಿಕೊಟ್ಟಂಥ ಮಾದರಿ ಜೀವನ ಚಂದ್ರಶೇಖರವರದ್ದಾಗಿತ್ತು ಅದೇ ರಿತಿ ರಾಷ್ಟ್ರದಲ್ಲಿ ಅವರು ಮಾಡಿರುವ ಪ್ರವಾಸವೂ ಕೂಡ ಮಾದರಿಯಾಗಿದೆ ನಮ್ಮ ದೇಶದ ಹಳ್ಳಿಗಾಡುಗಳಲ್ಲಿ ಯಾವ ರೀತಿಯ ಸ್ಥಿತಿ ಎಂದು ಅರ್ಥವಾಗಬೇಕಾದರೆ, ನಾವು ಪ್ರವಾಸಗಳನ್ನು ಮಾಡಬೇಕಾಗುತ್ತದೆ ಆ ರೀತಿಯ ಪ್ರವಾಸಗಳನ್ನು ಮಾಡುವ ಬಗ್ಗೆ ಬರೀ ಬಾಯಿಯಲ್ಲಿ ಹೇಳುವುದಲ್ಲ ನಮ್ಮ ಹಿರಿಯರಾದ ಎಂ ಪಿ ಪ್ರಕಾಶ್‌ರವರು ಈಗಾಗಲೇ ತಿಳಿಸಿದ ಹಾಗೆ, ಶಂಕರಚಾರ್ಯರ ಒಂದು ಆದರ್ಶವನ್ನಿಟ್ಟುಕೊಂಡು, ವಿನಾಬಾ ಭಾವೆಯವರ ಆದರ್ಶವನ್ನಿಟ್ಟುಕೊಂಡು, ಮಹಾತ್ಮಾ ಗಾಂಧಿಯವರು ಹೇಗೆ ಇಡೀ ದೇಶವನ್ನು ಸುತ್ತಿದರೋ, ಆ ರೀತಿ ಕಾಲ್ನಡಿಗೆಯಲ್ಲಿ ಪೂರ್ಣ ದೇಶವನ್ನು ಸುತ್ತಿ, ದೇಶವನ್ನು ಅರ್ಥ ಮಾಡಿಕೊಂಡಂಥ ಕೀರ್ತಿ ಚಂದ್ರಶೇಖರ್ರವರಿಗೆ ಸಲ್ಲುತ್ತದೆ ಅವರು ಮಾಡಿದಂಥ ಆ ಪ್ರಯತ್ನದಿಂದ, ಬೇರೆಲ್ಲರೂ ಕೂಡ ನಮ್ಮ ದೇಶದ ಸ್ಥಿತಿಯನ್ನು ತಿಳಿದುಕೊಳ್ಳಬೇಕಾದರೆ ಪ್ರವಾಸವನ್ನು ಮಾಡಬೇಕಾಗುತ್ತದೆ ರಾಜಕಾರಣಿಗಳು ಎಂದ ತಕ್ಷಣ ಅವರು ಧಾರ್ಮಿಕವಾಗಿ ದೂರ ಇರುತ್ತಾರೆ ಎನ್ನುವ ಭಾವನೆ ಇವತ್ತು ಇರುವುದನ್ನು ನಾವು ನೋಡುತ್ತಿದ್ದೇವೆ ಧಾರ್ಮಿಕ ವಿಚಾರಗಳು

ಎಂದರೆ ಮೂಢನಂಬಿಕೆಗಳು ಎಂದು ಅನೇಕರು ಮಾತನಾಡುವುದನ್ನು ನಾವು ಕೇಳಿದ್ದೇವೆ ಆದರೆ, ರಾಮಾಯಣವನ್ನು ಪೂರ್ಣ ಅಧ್ಯಯನ ಮಾಡಿ, ಅದರ ಬಗ್ಗೆ ಎಲ್ಲರಿಗೂ ತಿಳಿಸುವಂಥ ಪ್ರಯತ್ನವನ್ನು ಮಾಡಿದಂಥ ಒಬ್ಬ ಶ್ರೇಷ್ಠ ರಾಜಕಾರಣಿ ಈ ಚಂದ್ರಶೇಖರ್‌ರವರು ನಾನು ಕೇಳಿರುವ, ಓದಿರುವ ಪ್ರಕಾರ, ರಾಮಾಯಣದ ಬಗ್ಗೆ ಅಧ್ಯಯನ ಮಾಡುವಂಥ ಸಂದರ್ಭದಲ್ಲಿ ಅವರು ಮಾಡಿದಂಥ ಪ್ರಯತ್ನದಲ್ಲಿ ಅವರು ಸಾಕಷ್ಟು ಸಮಯವನ್ನು ರಾಮಾಯಣದ ಅಧ್ಯಯನದಲ್ಲಿ ಕಳೆದರು ಎನ್ನುವಂಥ ಅಂಶವನ್ನು ನಾನು ಕೇಳಿದ್ದೇನೆ ಹೀಗೆ, ರಾಷ್ಟ್ರೀಯ ವಿಚಾರಗಳ ಬಗ್ಗೆ ಇರಬಹುದು, ಧಾರ್ಮಿಕ ವಿಚಾರಗಳ ಬಗ್ಗೆ ಇರಬಹುದು, ಎಲ್ಲದರಲ್ಲೂ ಸಹ ಈ ಒಂದು ದೇಶ ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನುವ ಬಗ್ಗೆ ಇರಬಹುದು, ಎಲ್ಲದರಲ್ಲೂ ಸಹ ಈ ಒಂದು ದೇಶ ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನುವ ಬಗ್ಗೆ ಕಳಕಳಿಯಿದ್ದಂಥ ಒಬ್ಬ ವ್ಯಕ್ತಿಯನ್ನು, ರಾಷ್ಟ್ರ ಭಕ್ತನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ ಯಾವ ದಿಕ್ಕಿನಲ್ಲಿ ಅವರು ನಡೆದರೋ, ಆ ದಿಕ್ಕಿನಲ್ಲಿ ನಡೆಯುವಂಥ ಪ್ರಯತ್ನವನ್ನು ನಮ್ಮ ಜೀವನದಲ್ಲೂ ನಾವು ಅಳವಡಿಸಿಕೊಂಡಾಗ ಮಾತ್ರ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದ ಹಾಗಾಗುತ್ತದೆ ಎಂದು ಭಾವಿಸುತ್ತಾ ನಾನು ನನ್ನ ಪರವಾಗಿ ಮತ್ತು ನನ್ನ ಪಕ್ಷವಾದ ಭಾರತೀಯ ಜನತಾ ಪಕ್ಷದ ಪರವಾಗಿ ಶ್ರದ್ಧಾಂಜಲಿಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಮಜಿ ಪ್ರಧಾನಿ ಶ್ರೀಮಾನ್ ಚಂದ್ರಶೇಖರ್‌ರವರ ನಿಧನದಿಂದ ಈ ದೇಶಕ್ಕೆ ಮತ್ತು ತತ್ವ ಸಿದ್ಧಾಂತಗಳಿಗೆ ಭಾರಿ ದೊಡ್ಡ ಅಘಾತವಾಗಿದೆ ಅವರು ಅತ್ಯಂತ ಅಪರೂಪದ ರಾಜಕಾರಣಿ ಮತ್ತು ಮಹಾನ್ ವ್ಯಕ್ತಿ ಲೋಕಸಭೆಗೆ ಅವರು ಒಂದು ರೀತಿ ಯಜಮಾನರಾಗಿದ್ದರು ಅವರು ಯಾವುದೇ ಪಕ್ಷದಲ್ಲಿದ್ದರೂ ಇಡೀ ಲೋಕಸಭೆಯವರು ಅವರ ಮಾತನ್ನು ಆಲಿಸುತ್ತಿದ್ದರು, ಅವರ ಮಾತಿಗೆ ಬೆಲೆ ಕೊಡುತ್ತಿದ್ದರು ಅವರು ಈ ದೇಶದಲ್ಲಿ 'ಯಂಗ್ ಟರ್ಕ್' ಎಂದು ಪ್ರಾರಂಭ ಮಾಡಿದಾಗ ಒಂದು ಹೊಸ ಇತಿಹಾಸವನ್ನೇ ನಿರ್ಮಾಣ ಮಾಡಿದರು ಅವರ ಜೊತೆಯಲ್ಲ ಮೋಹನಧಾರಿಯ ಇದ್ದರು, ಕೃಷ್ಣಕಾಂತ್ ಇದ್ದರು, ಜೊತೆಗೆ ನಮ್ಮ ರಾಜ್ಯದವರೇ ಆದಂಥ ಎಂ ಎಸ್ ಗುರುಪಾದ ಸ್ವಾಮಿಯವರಿದ್ದರು ಆಗ ಅವರದೇ ಆದಂಥ ಈ ಗುಂಪು ಅತ್ಯಂತ ಶಕ್ತಿಯುತವಾಗಿತ್ತು ಇವರು ಈ ದೇಶಕ್ಕೆ ಇಂದು ಹೊಸ ದಿಕ್ಕನ್ನೇ ತೋರಿಸಿದರು, ಹೊಸ ಚಿಂತನೆಯನ್ನು ಕೊಟ್ಟರು, ಸಮಾಜವಾದಿ ಸಿದ್ಧಾಂತಕ್ಕೆ ಹೆಚ್ಚಿನ ಗೌರವ, ಶಕ್ತಿ ಬರುವ ರೀತಿ ನಡದುಕೊಂಡರು ಅವರಿಗೆ 80 ವರ್ಷಗಳು ಕಳೆದಿದ್ದರೂ, ಅವರ ಚಿಂತನೆಗಳಿಗೆ

ವಯಸ್ಸಾಗಿರಲಿಲ್ಲ, ಅವರ ಮಾತುಗಳಿಗೆ ವಯಸ್ಸಾಗಿರಲಿಲ್ಲ ಬಹಳ ಆದರ್ಶವಾದಂಥ ದೊಡ್ಡ ವ್ಯಕ್ತಿತ್ವವನ್ನು ಹೊಂದಿದ್ದಂಥವರು ಅವರು ಈಗಾಗಲೇ ಅನೇಕ ಸದಸ್ಯರು ಹೇಳಿದ ಪ್ರಕಾರ, ಮಹಾತ್ಮಾಗಾಂಧಿಯವರು, ವಿನೋಭಾ ಭಾವೆಯವರ ನಂತರ ದೇಶದಲ್ಲಿ ಪಾದಯಾತ್ರೆ ಮಾಡಿದಂಥ ಅತ್ಯಂತ ಎತ್ತರದಲ್ಲಿದ್ದಂಥ ಮಹಾನ್ ವ್ಯಕ್ತಿ ಅವರು ಅನೇಕ ನಮ್ಮ ಸ್ನೇಹಿತರು ಮಾತನಾಡುವಾಗ ಹೇಳಿದಂತೆ ಅವರಿಗೆ ಕರ್ನಾಟಕದ ಸಂಬಂಧ ಬಹಳವಾಗಿತ್ತು ಆ ದೃಷ್ಟಿಯಿಂದ ನೋಡಿದಾಗ ಅವರ ಒಂದು ಸ್ಮಾರಕ ಕರ್ನಾಟಕದಲ್ಲಿ ಆಗಬೇಕು ಎಂದು ನನಗನ್ನಿಸುತ್ತದೆ ದಕ್ಷಿಣ ಭಾರತದಲ್ಲಿ, ಕರ್ನಾಟಕದಲ್ಲಿ ಚಂದ್ರಶೇಖರ್‌ರವರ ಹೆಸರಿನಲ್ಲಿ ಇಂದು ಒಳ್ಳೆಯ ಸ್ಮಾರಕ ನಿರ್ಮಾಣವಾಗಲಿ ಅದನ್ನು ಸರ್ಕಾರವೇ ನಿರ್ಮಾಣ ಮಾಡಲಿ ಸ್ಮಾರಕ ಯಾವ ರೀತಿಯಾಗಬೇಕು, ಏನಾಗಬೇಕು ಎನ್ನುವ ಬಗ್ಗೆ ಒಂದು ಚಿಂತನೆ ನಡೆದು ದೊಡ್ಡ ಮಟ್ಟದಲ್ಲಿ ಸ್ಮಾರಕವಾಗಲಿ ಕರ್ನಾಟಕದಲ್ಲಿ ಅವರ ಅಭಿಮಾನಿಗಳು ಬಹಳ ಜನರಿದ್ದಾರೆ ಹೇಳಬೇಕೆಂದರೆ, ಗಡ್ಡ ಬಿಡುವ ರಾಜಕಾರಣ ಪ್ರಾರಂಭವಾದದ್ದು ಅವರಿಂದಲೇ, ಎಲ್ಲರೂ ಗಡ್ಡ ಬಿಡಲು ಶುರು ಮಾಡಿದ್ದು ಅಲ್ಲಿಂದಲೇ, ಆಗ ಗಡ್ಡ ಬಿಡುವವರು ಎಂದರೆ ಬಹಳ ಕ್ರಾಂತಿಕಾರಿಗಳು, ಚಿಂತನೆ ಇರತಕ್ಕಂಥವರು, ಸಮಾಜವಾದಿಗಳು, ಸಿದ್ಧಾಂತ ಇರತಕ್ಕಂಥವರು ಎಂದು ಆಗಿತ್ತು ಯಾರಾದರೊಬ್ಬರು ಗಡ್ಡ ಬಿಟ್ಟಿದ್ದರೆ, ಇವನು ಗಡ್ಡ ಬಿಟ್ಟಿದ್ದಾನೆ, ಇವನು ಚಂದ್ರಶೇಖರ್‌ರವರ ತತ್ವ ಸಿದ್ಧಾಂತದವನು ಎಂದು ಹೇಳುವಂಥ ಕಾಲವಿತ್ತು ಗಡ್ಡ ಬಿಡುವುದು ಎಂದರೆ ಬರೀ ಶೋಕಿಗಲ್ಲ ಗಡ್ಡ ಬಿಡತಕ್ಕಂಥ ರಾಜಕಾರಣವೆಂದರೆ ಇವರು ಚಿಂತನೆ ಮಾಡತಕ್ಕಂಥವರು, ಕ್ರಾಂತಿಕಾರಿಗಳು, ವಿವೇಚನೆ ಇರತಕ್ಕಂಥವರು, ಸಮಾಜವಾದಿಗಳು ಎಂದು ಹೇಳಿ, ಅವರ ಮುಖವನ್ನು ನೋಡಿದ ಲಕ್ಷಣ ಇವರದ್ದು ಇದೇ ದೃಷ್ಟಿ ಎನ್ನುವ ಇಂದು ಚಿತ್ರ ಕಣ್ಣು ಮುಂದೆ ಕಾಣಬೇಕಾದರೆ ಅದು ಚಂದ್ರಶೇಖರ್‌ರವರ ಅನುಯಾಯಿಗಳು, ಚಂದ್ರಶೇಖರ್‌ರವರ ಚಿಂತನೆ ಸಿದ್ಧಾಂತಗಳಿರತಕ್ಕಂಥವರು ಎಂದಾಗಿತ್ತು ಅವರು ಪ್ರಧಾನ ಮಂತ್ರಿಯಾಗಿ ಕೇವಲ ಏಳು ತಿಂಗಳು ಮಾತ್ರವಿದ್ದರು ಪ್ರಧಾನ ಮಂತ್ರಿಯಾಗಿ ಉಳಿದುಕೊಳ್ಳಬೇಕೆಂದು ಬೇರೆಯವರ ರೀತಿ ನಾನಾ ದಿಕ್ಕಿಗೆ ರಾಜಕಾರಣ ಮಾಡುವುದಕ್ಕೆ ಹೋಗಲಿಲ್ಲ, ರಾಜಕೀಯ ಮಾಡುವುದಕ್ಕೆ ಹೋಗಲಿಲ್ಲ ನನ್ನನ್ನು ಉಳಿಸಿ ಎಂದು ದೂರವಾಣಿ ಮೂಲಕ ಯಾರನ್ನೂ ಕೇಳುವುದಕ್ಕೆ ಹೋಗಲಿಲ್ಲ ಅವರು ಕಾರ್ಯಾಲಯದ ಮುಂದೆ ಇಬ್ಬರು ಬೇಹುಗಾರಿಕೆಯವರನ್ನು ಕಂಡ ತಕ್ಷಣವೇ ನನ್ನ ಸರ್ಕಾರದ ಮೇಲೆ ಬೇಹುಗಾರಿಕೆ ಇದೆ ಎಂದು ಹೇಳಿ, ಅವರಿಗೆ ಬೆಂಬಲ ಇದ್ದರೂ ತಕ್ಷಣವೇ ರಾಜೀನಾಮೆಯನ್ನು ಕೊಟ್ಟರು ಅವರು ಜಾಜೀನಾಮೆ ಕೊಟ್ಟಮೇಲೆ ರಾಜೀವ ಗಾಂಧಿಯವರಿಗೆ ಒಂದು ರೀತಿಯ ಆಘಾತವಾಗಿತ್ತು ಏಕೆ ಇವರು ರಾಜೀನಾಮೆ

ಕೊಟ್ಟು, ನಾವ್ಯಾರೂ ಅವರಿಗೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳುವ ಮಟ್ಟದಲ್ಲಿರಲಿಲ್ಲ ಎಂದು ಯೋಚಿಸಿದ್ದರು ಇದರ ಜೊತೆಗೆ, ಅವರು ವಿದೇಶಕ್ಕೆ ಹೋದಾಗ ಸೂಟು ಹಾಕಿಕೊಂಡು ಹೋಗಿರಲಿಲ್ಲ ಅದೇ ಕಚ್ಚೆ, ಅದೇ ಜುಬ್ಬದಲ್ಲಿ ಹೋಗಿದ್ದರು ಇಂಥ ಅನೇಕ ಆದರ್ಶಗಳನ್ನು ನಿರ್ಮಾಣ ಮಾಡಿರತಕ್ಕಂಥ ವ್ಯಕ್ತಿ ಚಂದ್ರಶೇಖರ್‌ರವರು ಅವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಸ್ಮಾರಕ ಕರ್ನಾಟಕದಲ್ಲಿ ಆಗಬೇಕು ಎಂದು ಮತ್ತೊಮ್ಮೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಜಿ ಬಿ ಶ್ರೀರಾಮರೆಡ್ಡಿ(ಬಾಗೆಪಲ್ಲಿ) ಮಾನ್ಯ ಅಧ್ಯಕ್ಷರೇ, ಇವತ್ತು ನೀವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯ ಬಹಳ ಅಮೂಲ್ಯವಾದುದು ಭಾರತ ದೇಶದ ರಾಜಕೀಯ ಇತಿಹಾಸದಲ್ಲಿ ಪ್ರಮುಖ ನಿರ್ಣಾಯಕ ಘಟ್ಟಗಳಲ್ಲಿ ಭಾರತ ದೇಶವನ್ನು ಮುನ್ನಡೆಸಿದಂಥ ಒಬ್ಬ ಮಹಾನ್ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸತಕ್ಕಂಥ ಸನ್ನಿವೇಶ ವಿಧಾನಸಭೆಗೆ ಬಂದಿರುವುದು ನಮಗೆ ಒಂದು ರೀತಿಯಲ್ಲಿ ದು ಖ ಮತ್ತು ಒಂದು ರೀತಿಯಲ್ಲಿ ಹೆಮ್ಮೆ ಪಡತಕ್ಕಂಥ ವಿಚಾರ ಹಿರಿಯರಿಗೆಲ್ಲ ಗೊತ್ತಿರಬೇಕು ಭಾರತ ದೇಶದ ರಾಜಕಾರಣದಲ್ಲಿ ಎರಡು ಪ್ರಮುಖವಾದಂಥ ಐತಿಹಾಸಿಕ ಘಟನೆಗಳನ್ನು ನಾವು ಕಂಡಿದ್ದೇವೆ ಇಂದು 1969ರಲ್ಲಿ ಅದಂಥ ಕಾಂಗ್ರೆಸ್ ಪಕ್ಷದ ವಿಭಜನೆ ಎರಡನೆಯದು, 1977ರಲ್ಲಿ ಸ್ವಾತಂತ್ರ್ಯ ನಂತರದ 30 ವರ್ಷಗಳಲ್ಲಿ ಪ್ರಪ್ರಥಮ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರವೊಂದು ದೇಶದಲ್ಲಿ ಅಧಿಕಾರಕ್ಕೆ ಬಂದಂಥಾದ್ದು ಈ ಎರಡೂ ಪ್ರಮುಖ ಐತಿಹಾಸಿಕ ಘಟನೆಗಳಲ್ಲಿ ಶ್ರೀಮಾನ್ ಚಂದ್ರಶೇಖರ್‌ರವರು ನಿರ್ಣಾಯಕ ಪಾತ್ರವನ್ನುವಹಿಸಿದಂಥ ಒಬ್ಬ ಮಹಾನ್ ನಾಯಕರು ಕಾಂಗ್ರೆಸ್ ಪಕ್ಷ ವಿಭಾಗವಾಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದ್ದು, ವೈಯುಕ್ತಿಕವಾದ ಭಿನ್ನಾಭಿಪ್ರಾಯಗಳಿಂದ ಅಲ್ಲ ಸೈಧಾಂತಿಕವಾದ ಆಂತರಿಕ ಸಂಘರ್ಷ ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿತ್ತು ಪ್ರಗತಿಪರ ಮತ್ತು ಪ್ರಗತಿ ವಿರೋಧಿ ಶಕ್ತಿಗಳ ಮಧ್ಯೆ ಏನು ಸಂಘರ್ಷ ನಡಯುತ್ತಿತ್ತು ಆ ಸಂಘರ್ಷಕ್ಕೆ ಒಂದು ರೀತಿಯಲ್ಲಿ catealyst force ಆಗಿ ಕೆಲಸ ಮಾಡಿದವರು ಶ್ರೀಯುತರುಗಳಾದ ಚಂದ್ರಶೇಖರ್‌ರವರು, ಕೆ ವಿ ರಂಗನಾಥರೆಡ್ಡಿ, ಕೆ ಆರ್ ಗಣೇಶ್, ಮೋಹನ್ ಕುಮಾರ್ ಮಂಗಳಂ ಮತ್ತು ಇಂಥ ಮುಖಂಡರು ಆವತ್ತು ಶ್ರೀಮತಿ ಇಂದಿರಾಗಾಂಧಿಯವರಿಗೆ ಸಂಪೂರ್ಣವಾಗಿ ಬೆಂಬಲವಾಗಿ ನಿಂತು ಕಾಂಗ್ರೆಸ್ ಪಕ್ಷ ಪ್ರಗತಿಪರ ಚಿಂತನೆ ಆಧಾರದ ಮೇಲೆ 1969ರಲ್ಲಿ ವಿಭಾಗವಾಗಲಿಕ್ಕೆ ಕಾರಣಕರ್ತರಾದವರು ಶ್ರೀ ಚಂದ್ರಶೇಖರ್‌ರವರು ಮತ್ತು ಅವರ ಸ್ನೇಹಿತರಾಗಿದ್ದರು ಅದು ಭಾರತ ದೇಶದ ರಾಜಕಾರಣದಲ್ಲಿ ಪ್ರಮುಖವಾದ ಘಟ್ಟ, ಏಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸಮಾಜವಾದಿಯ ಚಿಂತನೆ ಮತ್ತು ಪ್ರಗತಿಪರ ಚಿಂತನೆಯನ್ನು

ಭಾರತದೇಶದಲ್ಲಿ ವ್ಯಾಪಕವಾಗಿ ತರತಕ್ಕಂಥ ಐತಿಹಾಸಿಕವಾದ ಪ್ರಪ್ರಥಮವಾಗಿ ಪ್ರಯತ್ನವನ್ನು ಮಾಡಿದಂಥ ಅದೊಂದು ಘಟ್ಟ, ಅದು ಕೇವಲ ಪ್ರಯತ್ನವಾಗಲಿಲ್ಲ ಆ ತತ್ವಕ್ಕೋಸ್ಕರ ಆವತ್ತಿಗೆ 50 ವರ್ಷಗಳ ಇತಿಹಾಸವಿದ್ದಂಥ ಕಾಂಗ್ರೆಸ್ ಪಕ್ಷವನ್ನು ಒಡೆದು ಒಂದು ಹೊಸ ಚಿಂತನೆಯನ್ನು ತರಲಿಕ್ಕೆ ಪ್ರಮುಖ ಕಾರಣವಾಗಿ ಇಡೀ ದೇಶದಲ್ಲಿಯೇ ಒಂದು ಅಲೆಯನ್ನು ಎಬ್ಬಿಸಲಿಕ್ಕೆ ಕಾರಣವಾಗಿತ್ತು ಬಹುಶಃ ನಿಮಗೆಲ್ಲರಿಗೆ ಗೊತ್ತಿರಬಹುದು ಬ್ಯಾಂಕುಗಳ ರಾಷ್ಟ್ರಿಕರಣ ಮಾಡಿದಂಥ ಸಂದರ್ಭದಲ್ಲಿ ಶ್ರೀಮಾನ್ ಕೆ ಆರ್ ಗಣೇಶ್ ಇದ್ದರು ಮಾನ್ಯ ಮೊರಾರ್ಜಿ ದೇಸಾಯಿಯವರು ಹಣಕಾಸಿನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಸಂಪೂರ್ಣವಾಗಿ ವಿರೋಧವಾಗಿದ್ದರು ಶ್ರೀಮತಿ ಇಂದಿರಾ ಗಾಂಧಿಯವರು ಯಾವುದೇ ಕಾರಣದಿಂದ ಶ್ರೀಮಾನ್ ಮೊರಾರ್ಜಿ ದೇಸಾಯಿ ಯವರ ನಿಲುವನ್ನು ಒಪ್ಪಲಿಲ್ಲವೆಂದು ಶ್ರೀಮಾನ್ ಮೊರಾರ್ಜಿದೇಸಾಯಿಯವರು ರಾಜಿನಾಮೆಯನ್ನು ಕೊಟ್ಟರು ಅದಾದ ಮೇಲೆ ಶ್ರೀಯುತ ಗಣೇಶ್‌ರವರು ಹಣಕಾಸಿನ ಮಂತ್ರಿಗಳಾಗಿ ಈ ದೇಶದ ಇಡೀ ಹಣಕಾಸಿನ ವ್ಯವಸ್ಥೆ, financial institution ಹೇಗೆ ಜನಪರವಾಗಿ ಕೆಲಸ ಮಾಡಬೇಕೆನ್ನುವುದನ್ನು ಮೊಟ್ಟ ಮೊದಲನೆಯ ಬಾರಿಗೆ ತೋರಿಸಿಕೊಟ್ಟು 14 ಬ್ಯಾಂಕಗಳನ್ನು ರಾಷ್ಟ್ರೀಕರಣ ಮಾಡಿದಂಥ ಒಂದು ಪರಿಸ್ಥಿತಿ ಎಂತಹ ಸಂದರ್ಭದಲ್ಲಿಯೂ ಮಾನ್ಯ ಚಂದ್ರಶೇಖರ್‌ರವರೇ ನಿರ್ಣಾಯಕ ಪಾತ್ರ ವಹಿಸಿದ್ದರೆಂಬುದನ್ನು ನಾವೆಲ್ಲರೂ ಗಮನಿಸಬೇಕು 1962ರಲ್ಲಿ ಅವರು ಪ್ರಪ್ರಥಮ ಬಾರಿಗೆ ಲೋಕಸಭೆಗೆ ಬಂದಮೇಲೆ, ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಕ್ಕೆ ಕಾರಣವೇನೆಂದರೆ, ಅವತ್ತು ಸಮಾಜವಾದಿ ಚಳುವಳಿಯಲ್ಲಿ ಬಂದಂಥ ಹಲವಾರು ಭಿನ್ನಾಭಿಪ್ರಾಯಗಳಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದಂಥವರು ಆದರೆ, ಅವರು ಎಂದೂ ಕೂಡ ಸಮಾಜವಾದಿ ತತ್ವದಿಂದ ಹೊರಗಡೆ ಬರಲಿಲ್ಲ ಆ ತತ್ವದಿಂದಾಗಿಯೇ ಅವರು ಬೆಳೆದು ಬಂದರು ಆದರೆ, ಶ್ರೀಮತಿ ಇಂದಿರಾಗಾಂಧಿಯವರಿಗೆ 1969ರಲ್ಲಿ ಸಂಪೂರ್ಣವಾದ ಬೆಂಬಲವನ್ನು ಘೋಷಿಸಿ, ಒಂದು ರಾಜಕೀಯ, ಆರ್ಥಿಕ ಬದಲಾವಣೆಗೆ ಹಾದಿಯನ್ನು ಮಾಡಿಕೊಟ್ಟಂಥ ಶ್ರೀಯುತ ಚಂದ್ರಶೇಖರ್‌ರವರೇ 1975ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧವೇ ಅವರು ನಿಂತದ್ದೇನಿದೆ, ಅವರ ತಾತ್ವಿಕ ನಿಷ್ಠೆಗೆ ಮತ್ತು ಪ್ರಜಾತಂತ್ರ ರಾಜಕೀಯ ವಿಧಾನಕ್ಕೆ ಅದು ಎತ್ತಿಹಿಡಿದಂಥ ಒಂದು ಕನ್ನಡಿಯಾಗಿದೆ 1970ರ ಜೂನ್ 19ನೇ ತಾರೀಖು ಶ್ರೀಮಾನ್ ಜಯಪ್ರಕಾಶ್ ನಾರಾಯಣ್‌ರವರು ರಾಮಲೀಲಾ ಪೆರೇಡ್ ಗ್ರೌಂಡ್‌ನಲ್ಲಿ ಕಾನೂನುಬಾಹಿರ ಆದೇಶಗಳನ್ನು ಸರ್ಕಾರ ಹೊರಡಿಸಿದರೆ, ಅದನ್ನು ಅಧಿಕಾರಿಗಳು ಜಾರಿಮಾಡಬಾರದೆಂದು ಬಹಿರಂಗವಾಗಿ ಕರೆ ಕೊಟ್ಟಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಒಳಗಡೆಯೇ ಇದ್ದು ಅದನ್ನು ಸಮರ್ಥನೆ

ಮಾಡಿದಂಥ ಒಬ್ಬರೇ ಒಬ್ಬರು ನಾಯಕರೆಂದರೆ ಶ್ರೀಮಾನ್ ಚಂದ್ರಶೇಖರ್‌ರವರು ಶ್ರೀಮತಿ ಇಂದಿರಾಗಾಂಧಿಯವರು ತುರ್ತುಪರಿಸ್ಥಿತಿಯನ್ನು ಹೇರಿದಾಗ, ಅವರು ದೇಶಕ್ಕೆ ಕೊಟ್ಟಂಥ ಕೆಲವು ಕಾರಣಗಳಲ್ಲಿ ಇದೂ ಕೂಡ ಒಂದು ಕಾರಣವಾಗಿದೆ ದೇಶದ ನಾಯಕರು ಸಂವಿಧಾನಾತ್ಮಕವಾದ ಕಾನೂನನ್ನು ಜಾರಿಮಾಡಬಾರದೆಂದು ಸರ್ಕಾರವನ್ನು ಉರುಳಿಸತಕ್ಕಂಥ ಪ್ರಯತ್ನ ಮಾಡಿ ಕರೆಗಳನ್ನು ಕೊಟ್ಟಿದ್ದಾರೆ, ಸರ್ಕಾರ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಬೇಕೆನ್ನುವುದು ಮಾನ್ಯ ಜಯಪ್ರಕಾಶ್ ನಾರಾಯಣ್‌ರವರ ಭಾಷಣದಲ್ಲಿ ಹೇಳಿದಂತೆ ತುರ್ತು ಪರಿಸ್ಥಿತಿ ಬರಲಿಕ್ಕೆ ಇದೊಂದು ಸಹ ಕಾರಣ ಎಂದು ಅವರು ಹೇಳುತ್ತಿದ್ದರು ಆದರೆ ಅದನ್ನು ಬೆಂಬಲಿಸಿದವರು ಶ್ರೀಮಾನ್ ಚಂದ್ರಶೇಖರ್‌ರವರು ಅದೇ ರೀತಿಯಲ್ಲಿ ಆ ತುರ್ತುಪರಿಸ್ಥಿತಿ ವಿರುದ್ಧ ಇಡೀ ದೇಶದ ಜನತೆ ಹೋರಾಟ ನಡೆಸಿದಂಥ ಸಂದರ್ಭದಲ್ಲಿ ಅದಕ್ಕೆ ಬೆಂಬಲವಾಗಿ ನಿಂತು ಜೈಲುವಾಸವನ್ನು ಅನುಭವಿಸಿ ಅತ್ಯಂತ ಮಹತ್ತರವಾದಂಥ ರಾಜಕೀಯ ಸ್ಥಿತ್ಯಂತರವನ್ನು 1972ರಲ್ಲಿ ಭಾರತ ದೇಶದಲ್ಲಿ ಕಂಡಂಥ ಸಂದರ್ಭ ಪ್ರಪ್ರಥಮಬಾರಿಗೆ, ಕಾಂಗ್ರೆಸ್ಸೇತರ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ಅಲ್ಲೂ ಕೂಡ ನಿರ್ಣಾಯಕವಾದ ಪಾತ್ರವನ್ನು ವಹಿಸಿದಂಥವರು ಶ್ರೀಮಾನ್ ಚಂದ್ರಶೇಖರ್‌ರವರು ಅಂದರೆ, ಈ ಎರಡು ಪ್ರಮುಖ ರಾಜಕೀಯ ಘಟ್ಟಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ್ದಷ್ಟಲ್ಲದೆ, ಜನಪರವಾಗಿ ನಿರಂತರವಾಗಿ ದುಡಿದಂಥವರು, ಯಾವುದೇ ಅಧಿಕಾರಕ್ಕೆ ಆಸೆ ಪಡದೇ ಯಾವುದೇ ರೀತಿಯಾದ ಸರ್ಕಾರದ ಸವಲತ್ತುಗಳೀಗೆ ಆಸೆ ಪಡದೇ, ನಿರಂತರವಾಗಿ ಜನರಪರವಾಗಿ ಹೋರಾಟವನ್ನು ನಡೆಸಿದಂಥ, ಸೈದ್ಧಾಂತಿಕ ಹೋರಾಟ ಮತ್ತು ರಾಜಕೀಯ ಹೋರಾಟ ಇವೆರಡನ್ನೂ ನಡೆಸಿದಂಥ ಒಬ್ಬ ಧೀಮಂತ ವ್ಯಕ್ತಿ ಮಾನ್ಯ ಚಂದ್ರಶೇಖರ್‌ರವರು ಮಾನ್ಯ ಚಂದ್ರಶೇಖರ್‌ರವರು 7 ತಿಂಗಳಲ್ಲಿ ಪ್ರಧಾನ ಮಂತ್ರಿಯಾಗಿದ್ದೆ ಅದು ಎಷ್ಟು ಸಂತೋಷಪಡತಕ್ಕಂಥ ವಿಚಾರವೋ, ಹಾಗೆಯೇ, 1983ರಲ್ಲಿ ಒಂದು ಪಾದಯಾತ್ರೆ ನಡೆಸಿದರು ಎಂದು ಈಗಾಗಲೇ ಮಾತನಾಡಿದಂಥ ಸಂದರ್ಭದಲ್ಲಿ ಭಾಷಣ ಮಾಡಿ ಚಂದ್ರಶೇಖರ್‌ರವರು ಈ ದೇಶದ ಸ್ಥಿತಿಗತಿಗಳು ಹೇಗೆ ಬದಲಾವಣೆ ಮಾಡಬೇಕೆಂದು ಭಾಷಣ ಮಾಡಿದ್ದು ಎಲ್ಲರಿಗೂ ಗೊತ್ತಿದೆ ಅದರ ಮಾರನೆಯ ದಿವಸ A candidate for Prime Ministership ಎಂದು Indian Express ನಲ್ಲಿ ಒಂದು ಲೇಖನ ಬಂದಿತ್ತು ಆ ಲೇಖನವನ್ನು ಬರೆದದ್ದು ಯಾರೆಂದು ನನಗೀಗ ಮರೆತುಹೋಗಿದೆ ಅದರಲ್ಲಿ 'ಭಾರತ ದೇಶಕ್ಕೆ ಒಬ್ಬ ಸಮರ್ಥ ಪ್ರಧಾನಮಂತ್ರಿ ಆಗತಕ್ಕಂಥ ಎಲ್ಲಾ ಲಕ್ಷಣಗಳನ್ನು ಹೊಂದಿರತಕ್ಕಂಥ ಒಬ್ಬ ಮನುಷ್ಯ ಆ ಸಂದರ್ಭದಲ್ಲಿದ್ದನ್ನು ಚಂದ್ರಶೇಖರ್ ಎಂದು ಆ ಲೇಖನದಲ್ಲಿ ಪ್ರತಿಪಾದನೆ ಮಾಡಿರುವುದು ಈಗಲೂ ಕೂಡ

ನನಗೆ ಜ್ಞಾಪಕವಿದೆ ಆ ರೀತಿಯಲ್ಲಿ ಈ ದೇಶದ ಹಲವಾರು ರಾಜಕೀಯ ಮಜಲುಗಳಿವೆ ಕಾರಣೀಭೂತರಾಗಿದ್ದಂಥ ಸದಾ ಪ್ರಗತಿಪರ ಚಿಂತನೆಯನ್ನು ಹೊಂದಿದ್ದಂಥ ಮಾನ್ಯ ಚಂದ್ರಶೇಖರ್‌ರವರ ನಿಧನಕ್ಕೆ ಸಂತಾಪವನ್ನು ಸೂಚಿಸಿ ತಾವು ಇಲ್ಲಿ ತಂದಿರುವ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ). ಮಾನ್ಯ ಅಧ್ಯಕ್ಷರೆ, ಶ್ರೀಯುತ ಚಂದ್ರಶೇಖರ್‌ರವರ ಕುರಿತು ಈ ಕಡೆ ಆ ಕಡೆ ತಮ್ಮದೇ ಅದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಈ ದೇಶದ ರಾಜಕಾರಣದಲ್ಲಿ ಕೆಲವರಿಗೆ ಯೋಗ, ಮತ್ತೆ ಕೆಲವರಿಗೆ ಯೋಗ್ಯತೆಯಿಂದ ಪ್ರಮುಖ ಸ್ಥಾನ ಲಭ್ಯವಾಗುತ್ತದೆ ಯೋಗ್ಯತೆಯನ್ನುಸರಿಸಿ ಒಬ್ಬ ವ್ಯಕ್ತಿ ಒಂದು ಪ್ರಮುಖ ಸ್ಥಾನಕ್ಕೆ ಏರಿದಾಗ ಅದರಿಂದ ದೇಶಕ್ಕೆ ಲಾಭವಾಗುತ್ತದೆ ಯೋಗದ ಬಲದಿಂದ ಮಾತ್ರ ಯಾರಾದರೂ ಒಂದು ಸ್ಥಾನಕ್ಕೆ ಹೋದರೆ ಅವರಿಗೆ ಲಾಭವಾಗುತ್ತದೆ, ಆದರೆ, ದೇಶಕ್ಕೆ ನಷ್ಟವಾಗುತ್ತದೆ ಯೋಗ ಮತ್ತು ಯೋಗ್ಯತೆ ಎರಡೂ ಒಟ್ಟಾಗಿ ಸಂಭವಿಸುವುದು ಬಹಳ ಅಪರೂಪ 'A potential candidate for Prime Minister' ಎಂದು ಬರೆದಿದ್ದರೆಂದು ಮಾನ್ಯ ಶ್ರೀರಾಮರೆಡ್ಡಿಯವರು ಕಡೆಯಲ್ಲಿ ಒಂದು ಮಾತು ಹೇಳಿದರು Probably, Chandrashekar was the only person who had remained a potential candidate for Prime Ministership all through That was his speciality ಯಾವುದೇ ವಿಧಿಬದ್ಧವಾದ ಅಧಿಕಾರವಿಲ್ಲದೇ ವರ್ಚಸ್ಸನ್ನು ಬೀರತಕ್ಕಂಥ ನಿರ್ಣಾಯಕವಾದ ಪಾತ್ರವನ್ನು ವಹಿಸತಕ್ಕಂಥ ಯೋಗ್ಯತೆ ಇದ್ದಂಥ ಒಬ್ಬ ಮಹಾನ್ ರಾಜಕಾರಣಿ ಆವಾಗ multinationals ಇರಲಿಲ್ಲ Monopoly houses ಇತ್ತು Monopoly houses ವಿರುದ್ಧ fight ಮಾಡುವುದಕ್ಕೆ ಬಹಳ ಧೈರ್ಯ ಇರಬೇಕಾಗಿತ್ತು ಮೊದಲನೆ ಬಾರಿಗೆ Monopoly Restrictive Trade Practices Commission Act ಗೆ amendment ತರಬೇಕೆಂದು ಹೇಳಿದಾಗ ಕಾಂಗ್ರೆಸ್ ಪಕ್ಷದ ಒಳಗೆ ತೀವ್ರವಾಗಿ ವಿರೋಧ ಮಾಡಿ monopolies growth ಅನ್ನು check ಮಾಡಬೇಕೆಂದು ಒಂದು ಸೈದ್ಧಾಂತಿಕ ನಿಲುವನ್ನು ಪ್ರತಿಪಾದನೆ ಮಾಡಿದಂಥ ವ್ಯಕ್ತಿ ಅವರಾಗಿದ್ದರು ಅವರು ಶ್ರೀಯುತರುಗಳಾದ ಕಾಮರಾಜುರವರ, ನಿಜಲಿಂಗಪ್ಪನವರ ಅವಿಶ್ವಾಸಕ್ಕೆ ಆ ಸಂದರ್ಭದಲ್ಲಿ ಒಳಗಾಗುತ್ತಾರೆ

ಅನಂತರದ ದಿವಸಗಳಲ್ಲೂ ದ್ವಂದ್ವವಾದ ಬಹಳ ವಿಚಿತ್ರವಾದ ಅವರ ಜೀವನ ಕಾಂಗ್ರೆಸ್ ಪಕ್ಷ ಇಬ್ಬಾಗವಾದಂಥ ಸನ್ನಿವೇಶದ ಪೂರ್ಣ ಇತಿಹಾಸಕ್ಕೆ ನಾನು ಹೋಗುವುದಿಲ್ಲ ರೆಡ್ಡಿಯವರು ಒಂದು appropriate word catalyst ಎಂದು ಹೇಳಿದರು ತನ್ನಂತೆ ಯೋಚನೆ ಮಾಡತಕ್ಕಂಥ ಅರ್ಜುನ್ ಆರೋರ, ಅಮೃತ್ ಮೆಹ್ತಾ, ಆರ್ ಕೆ ಸಿನ್ಹಾ, ನಂದಿನಿ ಸತ್ಪತಿ, ಬಹುಗುಣ, ರಘುನಾಥ ರೆಡ್ಡಿ, ಚಂದ್ರಜಿತ್ ಯಾದವ್, ರಾಮ್‌ಧನ್ ಒಬ್ಬರಲ್ಲ ಇಬ್ಬರಲ್ಲ, ಎಲ್ಲರನ್ನೂ ಜೊತೆಗೆ ಸೇರಿಸಿಕೊಳ್ಳುತ್ತಾರೆ ಅವರು ಬಹಳ ಪ್ರಮುಖವಾದಂಥ ಒಂದು ಪಾತ್ರವನ್ನು ವಹಿಸಿ 1967ರ ಚುನಾವಣೆಗಳಾದ ಮೇಲೆ ಸಾವಿನಂಚಿನಲ್ಲಿದ್ದಂಥ ಕಾಂಗ್ರೆಸ್ ಪಕ್ಷಕ್ಕೆ ಹೊಸ ಸ್ವರೂಪವನ್ನೇ ಕೊಟ್ಟರು ಅವರು ಮಂತ್ರಿಯಾಗುವುದಿಲ್ಲ ಅವರು ಮಂತ್ರಿಯಾಗಬಹುದಾಗಿತ್ತು ಇದೇನು ಬಹಳ ದೊಡ್ಡ ವಿಚಾರ ಏನು ಆಗಿರಲಿಲ್ಲ ಅದಾದ ನಂತರ ಕಲ್ಕತ್ತ್‌ದಲ್ಲಿ ಕಾಂಗ್ರೆಸ್ ಅಧಿವೇಶನವಾಯಿತು ಆಗ ಬಾಂಗ್ಲಾದೇಶದ ಯುದ್ಧವಾದ ಮೇಲೆ ಶ್ರೀಮತಿ ಇಂದಿರಾಗಾಂಧಿಯವರ ಎದುರು ನಿಂತು ಮಾತನಾಡತಕ್ಕಂಥ ಚೈತನ್ಯ ಆವತ್ತಿನ ಕಾಂಗ್ರೆಸ್‌ನಲ್ಲಿ ಯಾರ್‍ಯಾರಿಗೂ ಸಾಧ್ಯವೇ ಇರಲಿಲ್ಲ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಚುನಾವಣೆ ಚಂದ್ರಶೇಖರ್‌ರವು ಒಂದು ಅಪ್ಲಿಕೇಷನ್ ಫೈಲ್ ಮಾಡಿ ತಮ್ಮಷ್ಟಕ್ಕೆ ತಾವು ಕುಳಿತುಬಿಟ್ಟರು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳುವ ಧೈರ್ಯ ಯಾರಿಗೂ ಇರಲಿಲ್ಲ ಇಂದಿರಾಗಾಂಧಿಯವರಿಗಿಂತಲೂ ಕೂಡ ಹೆಚ್ಚು ಮತವನ್ನು ಪಡೆದು ಅವತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಆಯ್ಕೆಯಾದರು ಇಂದಿರಾಗಾಂಧಿಯವರ ಜೊತೆಯಲ್ಲಿ ನಿಲ್ಲುತ್ತಾರೆ ಆಂತರಿಕ ಪ್ರಜಾಪ್ರಭುತ್ವದ ಪ್ರಶ್ನೆ ಬಂದಾಗ ಇಂದಿರಾಗಾಂಧಿಯವರನ್ನು ಎದುರಿಸುತ್ತಾರೆ ಮತ್ತೆ ಸ್ವಲ್ಪ ಮುಂದೆ ಹೋಗಿ ಎಮೆರ್ಜೆನ್ಸಿ ಬಂದಾಗ ಕಾಂಗ್ರೆಸ್‌ನ ವರ್ಕಿಂಗ್ ಕಮಿಟಿಯ ಮೆಂಬರ್ ಆಗಿದ್ದುಕೊಂಡು ಇಂದಿರಾಗಾಂಧಿಯವರಿಗೆ ಅತ್ಯಂತ ಸನಿಹದಲ್ಲಿದ್ದುಕೊಂಡು ಒಬ್ಬ ಪ್ರಜ್ಞಾ ಪೂರ್ವಕ ರಾಜಕಾರಣಿಯಾಗಿ ಇಂದಿರಾಗಾಂಧಿಯವರ ವಿರುದ್ಧ ಸಿಡಿದೆದ್ದು ಜೈಲ್‌ಗೆ ಹೋಗುವುದಕ್ಕೆ ಇಷ್ಟಪಡುತ್ತಾರೆ ನಾನೇಕೆ ಈ ಮಾತುಗಳನ್ನು ಪ್ರಧಾನವಾಗಿ ಹೇಳುತ್ತೇನೆಂದರೆ, ನಾವು ಈ ರಿಯಲ್ ಎಸ್ಟೇಟ್ ರಾಜಕಾರಣದಲ್ಲಿ ಇದ್ದೇವೆ ರಾಜಕಾರಣಿಯ ಮೌಲ್ಯವನ್ನು ತೂಕ ಹಾಕುವುದು ಹೇಗೆ ಎಂದರೆ, ಎಷ್ಟು ಸಾರಿ ಗೆದ್ದೆ, ಹೇಗೆ ಗೆದ್ದೆ, ಗೆದ್ದಾಗ ಎಷ್ಟು ಇತ್ತು ಈಗ ಎಷ್ಟು ಇದೆ, ಮುಂದೆ ಎಷ್ಟು ಮಾಡುತ್ತೀಯ, ಯಾರು ನಿನ್ನ ಎದುರಿಗೆ ನಿಲ್ಲುವುದಕ್ಕೆ ಸಾಮರ್ಥ್ಯವಿದೆ, total ನಿನ್ನ turnover ಎಷ್ಟು, ಇಂಥ ವಾತಾವರಣದಲ್ಲಿ ನಿಂತಿದ್ದೇವೆ ಅಲ್ಲಿಂದ ಎಲ್ಲಿಗೆ ಅವರು ಹೋಗುತ್ತಾರೆ 1977ರಲ್ಲಿ ಬಹುಶಃ ಯೂನಾನಿಮಸ್ ಚಾಯ್ಸ್ ಪ್ರೈಮ್ ಮಿನಿಸ್ಟರ್‌ಷಿಪ್‌ಗೆ ಅವರೆ ಮೊರಾರ್ಜಿ ದೇಸಾಯಿಯವರಲ್ಲ, ಚರಣಸಿಂಗ್

ರವರಲ್ಲ, ಜಗಜೀವನರಾಂ ವಂಚನೆಯಾದಾರೆ ರಾಷ್ಟ್ರಪತಿಭವನಕ್ಕೆ ಹೋಗಿ ಇವರು ಪ್ರತಿಭಟನೆ ಮಾಡುತ್ತಾರೆ ಅವರ ಬದುಕಿನಲ್ಲಿ ಅಂತೆಂಥ ಅನಿವಾರ್ಯತೆಗಳು, ಮುಜುಗರದ ಪರಿಸ್ಥಿತಿಗಳು ಬರುತ್ತವೆಂದರೆ, ಅವರು ಒಬ್ಬ ಮನುಷ್ಯ ನೋಡಿ ಅವರೇನು ಸನ್ಯಾಸಿಯಲ್ಲ ಎಲ್ಲೋ ಒಂದು ಕಡೆಗೆ ತಾನು ಹಿಂದೆ ಬಿದ್ದೆ ಎಂಬುದು ಅರಿವಾಗುತ್ತದೆ ಅದನ್ನು ಅವರ ಮನಸ್ಸಿನಲ್ಲಿ ಪ್ರೇರೇಪಿಸಿ ಅವರ ಮನಸ್ಸನ್ನು ಕಲುಷಿತಗೊಳಿಸುತ್ತಾರೆ ಅಂಥ ಪವಿತ್ರವಾದ ವ್ಯಕ್ತಿಗೂ ಕೂಡ ಎಲ್ಲೋ ಒಂದು ಕಡೆಗೆ ನಾನು ಎಂಬುದು ಬರುತ್ತದೆ ಯಾವ ಚಿಮನ್ ಭಾಯಿ ಪಟೇಲ್‌ರನ್ನು ಪಕ್ಷದಿಂದ ಹೊರಗೆ ಹಾಕಿ, ಯಾರ ವಿರುದ್ಧ ನವ ನಿರ್ಮಾಣ ಸಮಿತಿ ಹೋರಾಟ ಪ್ರಾರಂಭವಾಗಿರುತ್ತದೆ, ಯಾವ ಮನುಷ್ಯ ಅತ್ಯಂತ ಭ್ರಷ್ಟ ಎಂದು ಆತನ ವಿರುದ್ಧ ಹೋರಾಟ ಮಾಡಿರುತ್ತಾರೆ, ಅದೇ ಚಿಮನ್ ಭಾಯಿ ಪಟೇಲ್‌ರನ್ನು ಇವರು ಆಲಂಗಿಸಿಕೊಳ್ಳಬೇಕಾಗುತ್ತದೆ Full of controversies ಯಾವುದೇ ಅಧಿಕಾರಕ್ಕೆ ಆಸೆಪಡದೇ ಇರತಕ್ಕಂಥ ಮನುಷ್ಯ ಎಲ್ಲೋ ಒಂದು ಕಡೆಗೆ ಪ್ರಧಾನ ಮಂತ್ರಿಯಾಗಬೇಕೆಂದು ಸೋತು ಬಿಡುತ್ತಾರೆ ಇಷ್ಟು ಹೋರಾಟಗಳನ್ನು ಮಾಡಿಕೊಂಡು ಬರತಕ್ಕಂಥ ಮನುಷ್ಯನಿಗೆ ಒಂದು ಹಂತದಲ್ಲಿ ಮಾಡತಕ್ಕಂಥ ಒಂದೆರಡು ಸಣ್ಣ ತಪ್ಪುಗಳ ಕಾರಣದಿಂದಾಗಿ ಈ ದೇಶದ ಮಾಧ್ಯಮದವರ ದೃಷ್ಟಿಯಲ್ಲಿ ಅತ್ಯಂತ ದೊಡ್ಡ ಅಪರಾಧಿಯಾಗಿ ಅವರು ಕಾಣುತ್ತಾರೆ A hero becomes a villain. ಅವರಿಗಾದಷ್ಟು ಅಪಮಾನ, ಶಿಕ್ಷೆ, ಮತ್ಯಾರಿಗೂ ಆಗಲಿಲ್ಲ A very pathetic situation, ಆಗ ನಾಯಕತ್ವದ ಮಟ್ಟ ಹೇಗಿತ್ತು ಎಂದರೆ, ಈಶ್ವರಪ್ಪನವರ ಪಕ್ಷದಲ್ಲಿ ನಾನಾಜಿ ದೇಶ್‌ಮುಖ್‌ರವರು, ಶ್ಯಾಂಪ್ರಸಾದ್ ಮುಖರ್ಜಿಯವರು, ಅಟಲ್‌ಜಿಯವರು, ಜಗನ್ನಾಥ್ ಜೋಷಿಯವರು, ಅವರ ಪರಮ ಶತ್ರುಗಳು ದುರ್ಬಿನ್ ಹಾಕಿಕೊಂಡು ಜೀವನವಿಡಿ ಹುಡುಕಿದರೂ ಕೂಡ ಒಂದು ಚಿಕ್ಕ ತಪ್ಪು ಅವರ ವಿಚಾರದಲ್ಲಿ ಹುಡುಕುವುದಕ್ಕೆ ಆಗುವುದಿಲ್ಲ ಅಂಥ ನಾಯಕತ್ವ ಅವರದು ಕಮ್ಯುನಿಸ್ಟ್ ಪಾರ್ಟಿಗೆ ಬಂದರೆ ಸುಂದರಯ್ಯನವರು, ನಂಬೂದರಿ ಪಾದ್‌ರವರು, ನಾಗರೆಡ್ಡಿಯವರು, ಕಾಂಗ್ರೆಸ್ ಪಕ್ಷಕ್ಕೆ ಬಂದರೆ, ರಫೀ ಮಹಮದ್ ಕಿದ್ವಾಯಿಯವರು, ಒಬ್ಬರಿಗಿಂತ ಒಬ್ಬರು ಸುಬ್ಬರಾಯರವರು, ನಿಜಲಿಂಗಪ್ಪನವರು, ಯಾರ ವೈಯುಕ್ತಿಕ ಜೀವನದಲ್ಲಿ ನೀವೇನು ಹೇಳುವುದಕ್ಕೆ ಸಾಧ್ಯವೇ ಇರಲಿಲ್ಲ ಅಂತಹ ಕಾಲದಲ್ಲಿ ಆ ದಿಗ್ಗಜಗಳ ಮಧ್ಯೆ ಇವರು, he rises as a rebel ಅಂತಹ ಮನುಷ್ಯ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ ಸಾಮಾನ್ಯವಾಗಿ ನಾವು ಎಲ್ಲರಿಗೂ ಔಪಚಾರಿಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ ಒಂದು ಆತಂಕ, ವೇದನೆ, ಅದರ ಬಗ್ಗೆ ನಮಗೆ ಆದಂಥ ಅಂತರಿಕ ನೋವನಿಟ್ಟುಕೊಂಡು ಶ್ರದ್ಧಾಂಜಲಿಯನ್ನು ಅರ್ಪಿಸುವುದು ಒಂದಾದರೆ, ನಿರ್ಬಂಧದಿಂದ

ಶ್ರದ್ಧಾಂಜಲಿಯನ್ನು ಅರ್ಪಿಸುವುದು ಒಂದಾದರೆ, ನಿರ್ಬಂಧದಿಂದ ಶ್ರದ್ಧಾಂಜಲಿಯನ್ನು ಅರ್ಪಿಸುವುದು ಮತ್ತೊಂದು ವಿಚಾರವಾಗುತ್ತದೆ ಚಂದ್ರಶೇಖರವರ ನಾಯಕತ್ವ ಈ ದೇಶದಲ್ಲಿ ಉಪಯೋಗವಾಗಲಿಲ್ಲ ಬಳಕೆಯಾಯಿತು His services were not utilized He was put to use Others were experts They used the country They had no services to offer to the country This was a unique case where a unique personality was used for the services of the country Nothing was offered to him Congress Forum for Socialist Action ವಿಚಾರ ಹೇಳಿದರು Indo-Soviet Treaty ಆಗಬೇಕಾಗಿದ್ದರೆ, Indo-Pak Treaty ಆಗಬೇಕಾಗಿದ್ದರೆ, ದಿವಂಗತ ಡಿ ಪಿ ಧರ್‌ರವರು, ಮೋಹನಕುಮಾರ್ ಮಂಗಳಂರವರು, ಚಂದ್ರಶೇಖರರವರು, these are the architects ಅದರಿಂದ ಏನಾಗಿಬಿಟ್ಟಿತು ಎನ್ನುವ ಪ್ರಶ್ನೆ ಬೇರೆ ಹೆಪ್ಪು ಗಟ್ಟಿದ ನೀರು, ಹೆಪ್ಪು ಗಟ್ಟಿ 'ರಾಜಕಾರಣ, ಸ್ವಲ್ಪ ಮುಂದಕ್ಕೆ ಹೋಗುವುದಕ್ಕೆ ಚಾಲನೆ ಸಿಕ್ಕಿತು Bank nationalisation ಕೆಲವು ರಾಜ್ಯಗಳಲ್ಲಿ ಅದು ಯಶಸ್ವಿಯಾಗಿರಬಹುದು, ಮತ್ತೆ ಕೆಲವು ಕಡೆ ಅದು ಆಗದೇ ಇರಬಹುದು Land reforms was thought of as a subject in the Congress Party after 1972 as the initiation of all these things Backward Classes Commission ಪ್ರಬಲ ಸಮಾಜಗಳಿಗೆ ಸೇರದಿರತಕ್ಕಂಥವರನ್ನು ಕಾಂಗ್ರೆಸ್ ಆಳ್ವಿಕೆ ಇರತಕ್ಕಂಥ ರಾಜ್ಯಗಳಲ್ಲಿ ಮುಖ್ಯಮಂತ್ರಿಯಾಗಿ ಮಾಡತಕ್ಕಂಥ ಪ್ರಯೋಗ ಪ್ರಾರಂಭವಾಗಿದ್ದೇ ಆ ಶಕೆಯಲ್ಲಿ ಅಲ್ಲಿಯವರೆಗೆ, it was of fort of the vested interests ಮಾನ್ಯ ರೆಡ್ಡಿಯವರು ಒಂದು ಮಾತು ಹೇಳಿದರು ಆಮಾತು ನನಗೆ ಬಹಳ ಮೆಚ್ಚುಗೆಯಾಯಿತು ನಿರ್ಣಾಯಕ ಘಟ್ಟಗಳಲ್ಲಿ ಅವರ ಪಾತ್ರ ಮಹತ್ವದ್ದು ಇತ್ತು ಅದನ್ನೇ ನಾನು ಹೇಳಿದ್ದು ವಿಧಿಬದ್ಧವಾದಂಥ ಯಾವುದೇ ಅಧಿಕಾರವನ್ನು ತಮ್ಮ ತೆಕ್ಕೆಯಲ್ಲಿ ಇಟ್ಟುಕೊಳ್ಳದೇ ರಾಷ್ಟ್ರದ ರಾಜಕಾರಣಕ್ಕೆ ರಾಜ್ಯದ ರಾಜಕಾರಣಕ್ಕೆ ಒಂದು ಹೊಸ ಸ್ವರೂಪ ಆಯಾಮ ಕೊಡಲಿಕ್ಕೆ ಪ್ರಗತಿಪರವಾದಂಥ ದಿಕ್ಕು ತೋರಿಸಲಿಕ್ಕೆ ಎಲೆ ಮರೆಯ ಕಾಯಿಯಂತೆ ಇದ್ದುಕೊಂಡು ಸರ್ವಿಸ್ ಮಾಡಿದರು We have lost him There were not many former Prime Ministers in this country ನಾವು ಅನೇಕ ವೇಳೆಯಲ್ಲಿ ಮರೆತುಬಿಡುತ್ತೇವೆ The Office of the former Prime Minister is an honourary title It is just an honour It is not an office A fait accompli, becuase he was the Prime Minister, he becomes the former

Prime Minister who had left the office, whethere it is he or she ಆ ಗೌರವವನ್ನು ಅತ್ಯಂತ ಗೌರವಯುತವಾಗಿ ಈ ದೇಶದ ಸಂವಿಧಾನಕ್ಕೆ, ಪ್ರಜಾಪ್ರಭುತ್ವಕ್ಕೆ ಮತ್ತು ಮುಂದಿನ ಜನಾಂಗಕ್ಕೆ ಯಾವುದೇ ರೀತಿಯ ಮುಜುಗರ, ಅಗೌರವ ಆಗದಂತೆ ಮತ್ತು ಅದನ್ನು ದಿನ ಬಳಕೆಯ ಪದಾರ್ಥದಂತೆ ಉಪಯೋಗಿಸದೇ ಎಲ್ಲಾ ಆಕಾಂಕ್ಷೆಗಳನ್ನು ಹತೋಟಿಯಲ್ಲಿ ಮತ್ತು ನಿಗ್ರಹದಲ್ಲಿಟ್ಟುಕೊಂಡು ಅವರು ಬದುಕನ್ನು ನಡೆಸಿದರು ಮಾನ್ಯ ಬಿಜುಪಟ್ನಾಯಕ್ ಮತ್ತು ಮಾನ್ಯ ಚಂದ್ರಶೇಖರ್‌ರವರಿಬ್ಬರೂ ಕೂಡ Dictatorial attitude ಎಂಬುದು ನೈತಿಕ ಪದವಾಗಿದೆ They could call and address anybody in singular ಮತ್ತೆ ಪಾರ್ಲಿಮೆಂಟ್‌ನಲ್ಲಿ ಅವರು ಎದ್ದು ನಿಂತು ಅವರಿಗೆ ಸಿಗತಕ್ಕಂತ ಗೌರವದ ಬಗ್ಗೆ ತಾವೇ ಹೇಳಿದ್ದೀರಿ 1977ರವರೆಗೆ ಅವರು ಲೋಕಸಭೆಯನ್ನು ಪ್ರವೇಶ ಮಾಡಿರಲಿಲ್ಲ 1977ರಲ್ಲಿ ಮೊದಲ ಬಾರಿಗೆ ಲೋಕಸಭೆಯನ್ನು ಅವರು ಪ್ರವೇಶ ಮಾಡುತ್ತಾರೆ It was immaterial whether he was in office or not, whether he had a band of members behind him or not, he commanded the respect of the House ofor the simple reason of his commitment to the nation His loyalty to the country was unquestionable, unimpeachable ತಮ್ಮ ಅಧ್ಯಕ್ಷತೆಯಲ್ಲಿ ನಮ್ಮ ಹಿರಿಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ನಮ್ಮ ರಾಜ್ಯ ಸರ್ಕಾರ ಮತ್ತು ಈ ಸದನ ಒಟ್ಟುಗೂಡಿ ಅವರ ನೆನಪಿನಲ್ಲಿ ಶಾಶ್ವತವಾಗಿ ಸಂಸದೀಯ ಪ್ರಜಾಪ್ರಭುತ್ವದ ಬಲವರ್ಧನೆಗಾಗಿ ಯಾವುದಾದರೊಂದು ಯೋಗ್ಯ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಆಂತರಿಕ ಪ್ರಜಾಪ್ರಭುತ್ವದ ಅತೀ ದೊಡ್ಡ ರೋಗ ಏನೆಂದರೆ, ಆಂತರಿಕ ಪ್ರಜಾಪ್ರಭುತ್ವಗಳು ಸತ್ತು ಹೋಗಿವೆ ಎಲ್ಲಾ ರಾಜಕೀಯ ಪಕ್ಷಗಳಲ್ಲಿಯೂ ಮಾಲೀಕತ್ವ ಎಂಬುದು ಇದೆ ಮಾಲೀಕತ್ವದಿಂದ ವಿರುದ್ಧ ಯಾರಾದರೂ ಮೇಲಕ್ಕೆ ಎದ್ದರೆ ಆತ ಆಚೆಗೆ ಹೋಗಬೇಕಾಗುತ್ತದೆ ಎಲ್ಲಿಯವರೆಗೆ ರಾಜಕೀಯ ಪಕ್ಷಗಳ ಒಳಗೆ ಆಂತರಿಕ ಪ್ರಜಾಪ್ರಭುತ್ವಕ್ಕೆ ಹೆಚ್ಚು ಬಲವರ್ಧನೆ ಸಿಗದೆ ಇಲ್ಲದಿರುವಾಗ ನಿಜವಾದ ಪ್ರಜಾಪ್ರಭುತ್ವದ ಯಶಸ್ಸಿನ ಫಲವನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲ ಆ ದಿಕ್ಕಿನಲ್ಲಿ ತಮ್ಮ ಭವಿಷ್ಯವನ್ನು ಲೆಕ್ಕ ಹಾಕದೆ ಮತ್ತು ತಮಗೆ ಏನಾಗಬಹುದೆಂದು ಆಲೋಚನೆ ಮಾಡದೆ ಬಹಳ ದೊಡ್ಡ ನಿರ್ಣಯಗಳನ್ನು ಅತೀ ಚಿಕ್ಕ ವಯಸ್ಸಿನಲ್ಲಿಯೇ ತೆಗೆದುಕೊಂಡು ಭಾರತದ ಪ್ರಜಾಪ್ರಭುತ್ವದಲ್ಲಿಯೇ ದೊಡ್ಡ ಮೈಲಿಗಲ್ಲಾಗಿ ಉಳಿದಿರತಕ್ಕಂಥ ಶ್ರೀಯುತ ಚಂದ್ರಶೇಖರ್‌ರವರಿಗೆ ನನ್ನ ಎಲ್ಲಾ ಸಹೋದ್ಯೋಗಿಗಳ ಜೊತೆಗೆ ನಾನೂ ಕೂಡ ನನ್ನ ಪ್ರಾಮಾಣಿಕ ಪೂರಕವಾದಂತ

ಕೃತಜ್ಞತೆಯನ್ನು ಸಲ್ಲಿಸಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಮತ್ತೊಮ್ಮೆ ನಾನು ನಿಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಎಲ್ಲಾ ಪಕ್ಷದ ಮುಖಂಡರೂ ಸಹ ಇಲ್ಲಿಯೇ ಇದ್ದಾರೆ ಆದ್ದರಿಂದ, ನಾನು ಹೇಳುವುದೇನೆಂದರೆ, ಸಂಸದೀಯ ಪ್ರಜಾಪ್ರಭುತ್ವದ ಬಲವರ್ಧನೆಗಾಗಿ ಯೋಗ್ಯ ರೀತಿಯಾದ ಒಂದು ಸ್ಮಾರಕವನ್ನು ಈ ಸದನ ಮತ್ತು ಸರ್ಕಾರ ಮಾಡಿದಾಗ ನಾನು ಮಾಡತಕ್ಕಂಥ ಶ್ರದ್ಧಾಂಜಲಿಗೆ ಹೆಚ್ಚು ಅರ್ಥ ಬರುತ್ತದೆಂಬ ಮಾತನ್ನು ಹೇಳಿ ನನಗೆ ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) – ಮಾನ್ಯ ಅಧ್ಯಕ್ಷರೆ, ತಾವು ತಂದಂಥ ಸಂತಾಪ ಸೂಚನೆ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ ಶ್ರೀಯುತ ಚಂದ್ರಶೇಖರ್‌ರವರ ಜೊತೆ ಕೆಲಸ ಮಾಡುವುದಕ್ಕೆ ನನಗೊಂದು ಅವಕಾಶ ಸಿಕ್ಕಿತು ಜನತಾ ಪಕ್ಷ ಮತ್ತೆ ಜನತಾ ದಳ ಸೇರಿ ರಾಜಕಾರಣಕ್ಕೆ ನಾನು ಬಂದಿದ್ದೇನೆ ಅವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ರಾಷ್ಟ್ರದ ಯುವ ಜನತಾದಳದ ಖಜಾಂಚಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೆ ವ್ಯಾಲೆನ್‌ಷಿಯಾದಲ್ಲಿ ನಡೆದ International Union Socialist Conference ಗೆ ಅವರು ನನ್ನನ್ನು ರಾಷ್ಟ್ರ ತಂಡದ ನಾಯಕನಾಗಿ ಕಳುಹಿಸಿಕೊಟ್ಟಿದ್ದರು ಆಗ ಮಾನ್ಯ ರಾಮ್‌ವಿಲಾಸ್ ಪಾಸ್ವಾನ್‌ರವರು ಅವರ ಸ್ಪೋಕ್‌ಮನ್ ಆಗಿದ್ದರು, ನಾನು ನಾಯಕನಾಗಿದ್ದೆ ಅನೇಕ ನಾಯಕರನ್ನು ಅವರು ಬೆಳೆಸಿದ್ದಾರೆಂದು ನಮಗೆ ಗೊತ್ತಿತ್ತು ಅಂದರೆ, ರಾಷ್ಟ್ರದಲ್ಲಿ ಅನೇಕ ಮಂದಿ ನಾಯಕರುಗಳನ್ನು ಅವರು ಬೆಳಿಸಿದ್ದಾರೆ ಕೇವಲ ನಾನು ಮಾತ್ರ ಬೆಳೆಯುಬೇಕೆಂಬ ಪ್ರಯತ್ನವನ್ನು ಅವರು ಮಾಡಲಿಲ್ಲ ಅವರೊಂದಿಗೆ ಎಲ್ಲರನ್ನು ಬೆಳೆಸಿದರು ಅವರು ನಾಯಕರಾಗಿ ಬೇರೆಯವರೆಲ್ಲರನ್ನೂ ಬೆಳೆಸಿದರು ನಮ್ಮಲ್ಲಿ ಇವತ್ತಿನ ನಾಯಕತ್ವ ಯಾವ ರೀತಿಯಾಗಿದೆ ಎಂದು ಮಾನ್ಯ ರಮೇಶ್ ಕುಮಾರ್‌ರವರು ಈಗಾಗಲೇ ಹೇಳಿದ್ದಾರೆ ಇವತ್ತಿನ ದಿವಸ ನಾಯಕರು ಯಾರೆಂದರೆ, ಯಾರು ಮಾತನ್ನು ಕೊಡಿಸಲಿಕ್ಕೆ ಮತ್ತು ಹಣವನ್ನು ಚುನಾವಣೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಂಥವರನ್ನು ಇವತ್ತಿನ ದಿವಸ ನಾಯಕನಾಗುತ್ತಾನೇ ಹೊರತು ತತ್ವ ಸಿದ್ಧಾಂತವನ್ನು ಅನುಸರಿತಕ್ಕಂಥವನು ನಾಯಕನಾಗುತ್ತಿಲ್ಲ ಅಂಥವರ ನಾಯಕತ್ವ ಇವತ್ತಿನ ದಿವಸ ಹೋಗಿದೆ ತತ್ವ ಸಿದ್ಧಾಂತದ ಬಗ್ಗೆ ಮಾತನಾಡತಕ್ಕಂಥವನನ್ನು ಇವತ್ತಿನ ದಿವಸ ಚುನಾವಣೆಯಲ್ಲಿ ಗೆದ್ದುಬರುವುದಕ್ಕೆ ಸಾಧ್ಯವಾಗುತ್ತಿಲ್ಲ ಮತ್ತೆ ಇವತ್ತಿನ ದಿವಸ ಚುನಾವಣೆಯಲ್ಲಿ ಗೆದ್ದು ಬರುವಂಥವರಿಗೆ ತತ್ವ ಸಿದ್ಧಾಂತವೇ ಇಲ್ಲದಂಥ ಪರಿಸ್ಥಿತಿ

ನಿರ್ಮಾಣವಾಗಿದೆ ಈ ಒಂದು ಪರಿಸ್ಥಿತಿಯಲ್ಲಿ ಅಷ್ಟು ವರ್ಷಗಳ ಕಾಲ ತನ್ನ ತತ್ವ ಸಿದ್ಧಾಂಧಗಳಿಗೆ ಬದ್ಧನಾಗಿ ಕೆಲಸ ಮಾಡಿ ರಾಷ್ಟ್ರ ರಾಜಕಾರಣದಲ್ಲಿ ಎಲ್ಲಾ ನಿರ್ಣಾಯಕ ಘಟಕಗಳ ಸಂದರ್ಭದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು ಇದರ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ ಅಂದರೆ, ಕಾಂಗ್ರೆಸ್ ವಿಭಜನೆ ಸಂದರ್ಭದಲ್ಲಿ ಮತ್ತು ನಮ್ಮ ದೇಶದಲ್ಲಿ ಕಾಂಗ್ರೆಸ್‌ಗೆ ಒಂದು ಪರ್ಯಾಯ ಸರ್ಕಾರವನ್ನು ಮಾಡುವಾಗ ಅವರ ನಾಯಕತ್ವದಲ್ಲಿಯೇ ಮಾಡಲಾಗಿದೆ ತಾನು ಮಂತ್ರಿಯಾಗಬೇಕೆಂದು ಮತ್ತು ರಾಷ್ಟ್ರದ ಯಾವುದಾದರೊಂದು ಹುದ್ದೆ ಬೇಕೆಂದು ಅವರು ಕೇಳಿದ್ದರೆ ಅದಕ್ಕೆ ವಿರೋಧವನ್ನು ಮಾಡುವವರು ಯಾರು ಇರಲಿಲ್ಲ ಆದರೂ ಸಹ ಯಾವ ಹುದ್ದೆಯನ್ನು ಅಲಂಕರಿಸಿದೆ ಒಬ್ಬ ನಾಯಕನಾಗಿ ಉಳಿದುಕೊಂಡರು ಅವರು ದೇಶದಲ್ಲಿ ಯಾತ್ರೆ ಮಾಡಿದ್ದರಿಂದ ಅವರ ಹೆಸರೇನು ಪ್ರಸಿದ್ಧಿಯಾಗಲಿಲ್ಲ ಅವರು ರಾಷ್ಟ್ರದ ನಾಯಕನಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆಯನ್ನು ಮಾಡಿದರು ಪಂಜಾಬ್‌ನಿಂದ ದೆಹಲಿಗೆ ನಮ್ಮ ಕಡೆಯಿಂದ ಕೂಡ ಪಾದಯಾತ್ರೆಯನ್ನು ಮಾಡಿಸಿದ್ದರು ನಮ್ಮ ಪರಿಸ್ಥಿತಿಗೆ ಯಾವ ರೀತಿಯಲ್ಲಿ ಪರಿಣಾಮಗಳು ಆಗುತ್ತವೆಂದರೆ, ನಾನು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ವಿ ಪಿ ಸಿಂಗ್‌ರವರು ಸರ್ಕಾರ ಬಿದ್ದಾಗ ಪಾರ್ಲಿಮೆಂಟ್‌ನಲ್ಲಿದ್ದೆವು ಆಗ ಪಾರ್ಲಿಮೆಂಟ್‌ನ ಎದುರುಗಡೆಯಲ್ಲಿ ಎಲ್ಲರೂ ಕೂಡ ಅವರ ವಿರುದ್ಧವಾಗಿಯೇ ಮಾತನಾಡಿದರು ಮತ್ತೆ ಪ್ರತಿಯೊಬ್ಬರೂ ಅವರ ವಿರುದ್ಧವಾಗಿ ಘೋಷಣೆ ಕೂಗುತ್ತಿದ್ದರು ಆ ನೋವು ಇನ್ನೂ ಕೂಡ ನಮಗೆ ಇದೆ ಮಾನ್ಯ ವಿ ಪಿ ಸಿಂಗ್‌ರವರ ಸರ್ಕಾರ ಬಿದ್ದಾಗ ಇವರು ಪ್ರಧಾನ ಮಂತ್ರಿಯಾಗಿರುವ ಒಂದು ಘಟನೆ ಬಿಟ್ಟರೆ ಅವರ ಜೀವನದಲ್ಲಿ ಬೇರೆ ಯಾವುದೇ ಕಪ್ಪು ಚುಕ್ಕೆಯನ್ನು ಹುಡುಕುವುದಕ್ಕೆ ಸಾಧ್ಯವಾಗಲಿಲ್ಲವೆಂದು ನಾನು ಬಾವಿಸಿದ್ದೇನೆ ಇಂಧ ಒಂದು ಪರಿಸ್ಥಿತಿಯಲ್ಲಿ ನಾವು ಅವರಿಗೆ ಇರುವಾಗಲೂ ಸಹ ಅಂದರೆ, ಅವರು ಮಾಜಿ ಪ್ರಧಾನಿ ಮಂತ್ರಿಯಾದ ಮೇಲೂ ಅವರು ಲೋಕಸಭೆಯಲ್ಲಿ ಮಾತನಾಡುತ್ತಿದ್ದರೆ ಮುಂದಿನ ಬೆಂಚ್‌ನಲ್ಲಿ ಕುಳಿತಂಧವರೆಲ್ಲರೂ ಮತ್ತು ಇಡೀ ಪಾರ್ಲಿಮೆಂಟ್ ನಲ್ಲಿರುವವರೆಲ್ಲರೂ ಕೇಳುತ್ತಿದ್ದರು ಅವರು ಯಾವುದೇ ಒಂದು ವಿಷಯದ ಬಗ್ಗೆ ಮಾತನಾಡತಕ್ಕಂಧದು ಇಡೀ ರಾಷ್ಟ್ರಕ್ಕೆ ಮಾದರಿಯಾಗುತ್ತಿತ್ತು ಅದನ್ನು ಈಗ ನೆನಸಿಕೊಂಡರೆ ನಮ್ಮಲ್ಲಿ ಇವತ್ತಿನ ದಿವಸ ಆ ರೀತಿಯಾದ ನಾಯಕತ್ವ ಬೆಳೆಯುತ್ತದೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ ಅವರು ಕೆಲವೊಂದು ತೀರ್ಮಾನಗಳನ್ನು ತೆಗೆದುಕೊಂಡು ಹೋರಾಟ ಮಾಡಿದಂಧ ಸಂದರ್ಭದಲ್ಲಿ ನಾವೆಲ್ಲರು ಚಿಕ್ಕವರಾಗಿದ್ದೆವು ಮತ್ತೆ ಆ ಸಂದರ್ಭದಲ್ಲಿ ಶಾಲಾ-ಕಾಲೇಜಿನಲ್ಲಿದ್ದೆವು ಅವರ ಹೋರಾಟವನ್ನು ಆ ಸಂದರ್ಭದಲ್ಲಿ ನಾವು ಬಹಳ ಸೂಕ್ಷ್ಮವಾಗಿ

ಗಮನಿಸುತ್ತಿದ್ದೆವು ಆದರೆ, ಇವತ್ತಿನ ದಿವಸ ಇವೆಲ್ಲಾ ಹೋಗಿವೆ ನಮ್ಮ ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಅಂಥವುಗಳನ್ನು ಚರ್ಚೆ ಮಾಡುವಂಥದು ಇಲ್ಲ ನಾನು ಗೆದ್ದು ಬಂದು ವಿಧಾನಸಭೆಯಲ್ಲಿ 5 ವರ್ಷಗಳವರೆಗೆ ಕುಳಿತುಕೊಳ್ಳುವುದು ಹೇಗೆಂದು ಹಾಗ ಮತ್ತೆ ಚುನಾವಣೆಯಲ್ಲಿ ಗೆಲ್ಲುವುದು ಹೇಗೆಂಬ ಆಲೋಚನೆಯೊಂದನ್ನು ಬಿಟ್ಟರೆ ತತ್ವ ಸಿದ್ಧಾಂತಗಳ ಬಗ್ಗೆ ಮಾತನಾಡು ವವರಿಗೆ ಬುದ್ಧಿಯಿಲ್ಲವೆಂದು ಹೇಳತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ ಈ ಒಂದು ಪರಿಸ್ಥಿತಿಯಲ್ಲಿ ನಾವು ಇವರನ್ನು ಕಳೆದು ಕೊಂಡಿದ್ದೇವೆ ಅಂತಿಮ ಸಂದರ್ಭದಲ್ಲಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಜೊತೆಗೆ ಈಗಾಗಲೇ ನಮ್ಮ ಸ್ನೇಹಿತರೆಲ್ಲರೂ ಹೇಳಿದ ಹಾಗೆ ಅವರು ಭಾರತ ಯಾತ್ರಾ ಕೇಂದ್ರಗಳನ್ನು ಬೇರೆ ಬೇರೆ ಕಡೆಗಳಲ್ಲಿ ಸ್ಥಾಪನೆ ಮಾಡಿದ್ದಾರೆ ನಮ್ಮಲ್ಲಿನ ಕನಕಪುರದ ಮರಳುವಾಡಿಯಲ್ಲಿ ಭಾರತ ಯಾತ್ರಾ ಕೇಂದ್ರವನ್ನು ಸ್ಥಾಪನೆ ಮಾಡಿದ್ದಾರೆ ಆ ಸ್ಥಳವನ್ನೇ ನಾವು ತೆಗೆದುಕೊಂಡು ರಾಜ್ಯ ಸರ್ಕಾರ ಅದನ್ನು ಅಭಿವೃದ್ಧಿ ಪಡಿಸಬೇಕು ಕೇವಲ ಅದನ್ನು ಅಭಿವೃದ್ಧಿಪಡಿಸುತ್ತೇವೆಂದು ಅಲ್ಲಿ ಅವರ ಪ್ರತಿಮೆಯನ್ನು ಇಡುವುದಲ್ಲ ಅವರ ತತ್ವ ಸಿದ್ಧಾಂತಗಳ ಬಗ್ಗೆ ಯುವಕ-ಯುವತಿಯರಿಗೆ ತರಬೇತಿಯನ್ನು ಕೊಡುವುದಕ್ಕೆ ಅಲ್ಲಿ ಸೆಮಿನಾರ್‌ಗಳನ್ನು ಮಾಡುವಂಥದು ಮತ್ತು ಹೊಸದಾಗಿ ಗೆದ್ದು ಬಂದಂಥ ಶಾಸಕರುಗಳಿಗೆ ಅಲ್ಲಿ ತರಬೇತಿಯನ್ನು ಕೊಡುವಂಥ ವ್ಯವಸ್ಥೆಯಾಗುವಂಥ ಕೆಲಸ ಅಲ್ಲಿ ಆಗುವಂತಿದ್ದರೆ ಮಾತ್ರ ಮಾಡಬೇಕೆಂದು ಹೇಳತ್ತೇನೆ ವಿನಃ ಕೇವಲ ಮಾನ್ಯ ಚಂದ್ರಶೇಖರ್‌ರವರ ನೆನಪಿಗೆ ಏನ್ನೊಂದು ಮಾಡಿದ್ದೇವೆಂದು ಆಗುವಂಥದ್ದಾದರೆ ದಯವಿಟ್ಟು ಅಂಥದು ಬೇಕಾಗಿಲ್ಲ ಅವರ ಹೆಸರು ಶಾಶ್ವತವಾಗಿ ಉಳಿಯುವಂಥ ಕೆಲಸ ಅಲ್ಲಿ ಆಗಬೇಕು ವ್ಯಕ್ತಿಗಳು ತಪ್ಪುಗಳನ್ನು ಮಾಡುತ್ತಾರೆ ಆದರೆ, ಆ ವ್ಯಕ್ತಿ ಒಳ್ಳೆಯ ಕೆಲಸ ಮಾಡುವುದನ್ನು ಯಾರೂ ಹೇಳುವುದಿಲ್ಲ ಮೊನ್ನೆ ದಿವಸ ನನಗೊಂದು ಎಸ್‌ಎಂಎಸ್ ಬಂತು ಅದರಲ್ಲಿ ಏನಿತ್ತೆಂದರೆ, ಒಬ್ಬ ಗೋಲ್ ಕೀಪರ್ 10 ಗೋಲ್ ಆಗುವಂಥದನ್ನು ತಪ್ಪಿಸಿದಂಥ ವಿಷಯವನ್ನು ಯಾರೂ ಹೇಳುವುದಿಲ್ಲ ಆದರೆ, ಒಂದು ಮಿಸ್ ಮಾಡಿದಂಥದ್ದನ್ನು ಮಾತ್ರ ಆತನ ಜೀವನವಿಡಿ ಹೇಳುತ್ತಾ ಹೋಗುತ್ತಾರೆ ಆದ್ದರಿಂದ, ಆ ವ್ಯಕ್ತಿ ಮಾಡಿದಂಥ ಒಂದು ತಪ್ಪನ್ನು ನಾವು ಮರೆಯಬೇಕಾಗುತ್ತದೆ ಆದರೆ, ಅವರು ರಾಷ್ಟ್ರಕ್ಕೆ ಕೊಟ್ಟಂಥ ಕೊಡುಗೆ ಏನಿದೆ ಅದನ್ನು ಶಾಶ್ವತವಾಗಿ ಉಳಿಸಿಕೊಳ್ಳುವುದಕ್ಕೆ ನಾವು ಏನು ಮಾಡುತ್ತೇವೆಂಬುದೇ ನಾವು ಅವರಿಗೆ ನಿಜವಾಗಿ ಸಲ್ಲಿಸುವಂಥ ಶ್ರದ್ಧಾಂಜಲಿ ಎಂದು ಹೇಳುತ್ತಾ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ(ಹಳಿಯಾಳ) ಮಾನ್ಯ ಅಧ್ಯಕ್ಷರೆ, ಪೂಜ್ಯ ಮಾಜಿ ಪ್ರಧಾನಮಂತ್ರಿ ಚಂದ್ರಶೇಖರ್‌ಜೀಯವರು ಇವತ್ತು ನಮ್ಮೊಂದಿಗೆ ಎಲ್ಲ ಅವರ ಜೊತೆಯಲ್ಲಿ ಕೆಲಸ ಮಾಡುವ ಒಂದು ಅವಕಾಶ ನಮಗೆ ಸಿಕ್ಕಿತ್ತು ಮುಖ್ಯವಾಗಿ ನನಗೆ ಮತ್ತು ಮಾನ್ಯ ಪಿ ಜಿ ಆರ್ ಸಿಂಧ್ಯರವರಿಗೆ, ಆದರೆ ಅವರು ಇವತ್ತು ಸದನಕ್ಕೆ ಬಂದಿಲ್ಲ ಡಾ ಜೀವರಾಜ್ ಆಳ್ವರವನ್ನು ಇವತ್ತು ನಮ್ಮನ್ನು ಬಿಟ್ಟು ಅಗಲಿ ಹೋಗಿದ್ದಾರೆ ಮಾನ್ಯ ಬಿ ಎಲ್ ಶಂಕರ್‌ರವರು, ಎಂ ಪಿ ಪ್ರಕಾಶ್ ರವರು ಯುವ ಜನಾಂಗಕ್ಕೆ ಅವರೊಂದು ಪ್ರೇರಣಾಶಕ್ತಿಯಾಗಿದ್ದರು ಕ್ರಾಂತಿಕಾರಿ ವಿಚಾರಧಾರೆ ಅವರದಾಗಿತ್ತು ಈಗಾಗಲೇ ನಮ್ಮ ಹಲವಾರು ಸ್ನೇಹಿತರು ಹೇಳಿದ ಹಾಗೆ, ಅವರ ಇಡೀ ಜೀವನ ಹೋರಾಟದ ಜೀವನ ಶೋಷಿತವರ್ಗದ ಬಗ್ಗೆ ಹಿಂದುಳಿದ ಜನಾಂಗದ ಬಗ್ಗೆ ರೈತರ ಬಗ್ಗೆ ಹೋರಾಟ ಮಾಡಿದ್ದರು ಲೋಕಸಭೆಯಲ್ಲಿಯೂ ಸಹ ಅವರದೇ ಆದಂಥ ಒಂದು ವರ್ಚಸ್ಸು ಇತ್ತು ಅವರದ್ದೇ ಆದ ಒಂದು ಪ್ರಭಾವ ಇತ್ತು ಲೋಕಸಭೆಯಲ್ಲಿ ಮಾತನಾಡುವಾಗ ಅದು ರೂಲಿಂಗ್ ಬೆಂಚ್ ಇದೆಯೋ ಅಥವಾ ಅಪೋಜಿಷನ್ ಬೆಂಚ್ ಇದೆಯೋ he never used to spare ಅವರ ವಿಚಾರಧಾರೆ ಏನಿತ್ತು ಅದು ಬಹಳ ಸ್ಪಷ್ಟವಾದದ್ದು ಆ ವಿಚಾರದ ಬಗ್ಗೆ ಅವರು ಯಾವಾಗಲೂ ಪ್ರಸ್ತಾಪ ಮಾಡುತ್ತಿದ್ದರು ಮುಖ್ಯವಾಗಿ ಈ ಭಾರತ ಯಾತ್ರಾ, ಇದೊಂದು Historical ಯಾತ್ರಾ ಎಂದು ನಾನು ಭಾವಿಸುತ್ತೇನೆ ಈಗಾಗಲೇ ಸ್ನೇಹಿತರು ಹೇಳಿದ ಹಾಗೆ, ವಿನೋಭಾ ಬಾವೆಯವರು, ಇತರರು ಪಾದಯಾತ್ರೆಯನ್ನು ಮಾಡಿದರು ಆದರೆ ದಕ್ಷಿಣದಿಂದ ಉತ್ತರದವರೆಗೆ ಪಾದಯಾತ್ರೆ ಮಾಡಿ ಹಲವಾರು ಕಡೆ ಭಾರತಯಾತ್ರಾ ಕೇಂದ್ರಗಳನ್ನು ನಿರ್ಮಾಣ ಮಾಡಿ ಆ ಕೇಂದ್ರದ ಮೂಲಕ ಯುವಶಕ್ತಿಗೆ ಹೆಚ್ಚಿನ ಒಂದು ಉತ್ತೇಜನ ಕೊಡುವ ಒಂದು ಪ್ರಾಮಾಣಿಕ ಪ್ರಯತ್ನ ಅವರ ಕಡೆಯಿಂದ ಆಯಿತು ನಮ್ಮ ಕನಕಪುರ ತಾಲ್ಲೂಕಿನ ಮರಳವಾಡಿಯಲ್ಲಿ ಒಂದು ಭಾರತಯಾತ್ರಾ ಕೇಂದ್ರ ನಡೆಯುತ್ತಿದೆ ಅದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ ಅದನ್ನು ಚೆನ್ನಾಗಿ ಬೆಳೆಸುವ ಒಂದು ಪ್ರಯತ್ನವಾಗಬೇಕು ಯುವ ಜನಾಂಗಕ್ಕೆ ಪಾರ್ಲಿಮೆಂಟರ್ಸ್‌ಗೆ ತರಬೇತಿಯನ್ನು ಕೊಡಲಿಕ್ಕೆ ಸಾಧ್ಯವಾಗಬೇಕು ಆದ್ದರಿಂದ ಸರ್ಕಾರ ಅದರ ಬಗ್ಗೆ ಚಿಂತಿಸಿ ನಿರ್ಣಯ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ನಾವು ಒತ್ತಾಯಿಸುತ್ತೇವೆ ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ, ಅವರು 8 ಸಲ ಲೋಕಸಭೆಗೆ ಒಂದು ಸಲ ರಾಜ್ಯ ಸಭೆಗೆ ಆರಿಸಿ ಬಂದರು ಸಹ ಅವರು ಮಂತ್ರಿಯಾಗಲು ಆಗಲಿಲ್ಲ He was just a Prime Minister for a small period ಅವರು ಒಳ್ಳೆಯ ಆಡಳಿತಗಾರರು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ, ಬಿಜು ಪಾಟ್ನಾಯಕ್

ಮತ್ತು ಚಂದ್ರಶೇಖರರವರ ವಿಚಾರಧಾರೆಗಳ ಬಗ್ಗೆ ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಮಾನ್ಯ ರಾಮಕೃಷ್ಣ ಹೆಗಡೆಯವರು, ಜೆ ಹೆಚ್ ಪಟೇಲ್‌ರವರು, ದೇವೇಗೌಡರು ನಾವೆಲ್ಲರೂ ಆ ಸಮಯದಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇವೆ ನನಗೆ ನೆನಪು ಇದೆ, ಅವರು ದೆಹಲಿಯಲ್ಲಿ ಬಹಳ ಉಳಿಯುತ್ತಿರಲಿಲ್ಲ, ಕ್ಷೇತ್ರದಲ್ಲಿರುತ್ತಿದ್ದರು ಈ ಒಂದು ವರ್ಷದಲ್ಲಿ ಅನಾರೋಗ್ಯವಾದ ಕಾರಣ ಹೆಚ್ಚು ದೆಹಲಿಯಲ್ಲಿ ಉಳಿಯುತ್ತಿದ್ದರು ನಾನು ಒಂದೆರಡು ಸಲ ಅವರನ್ನು ಪಾರ್ಲಿಮೆಂಟ್‌ನಲ್ಲಿ ಒಂದು ಸಲ ಮನೆಯಲ್ಲಿ ಸಹ ಭೇಟಿಯಾಗಿ ಬಂದಿದ್ದೇನೆ ನನಗೆ ನೆನಪು ಇದೆ, 1989ನೇ ಇಸ್ವಿಯಲ್ಲಿ ಜನತಾ ಪಾರ್ಟಿಯಿಂದ ಕೇವಲ ನಾವು 24 ಜನ ಆರಿಸಿ ಬಂದಿದ್ದೆವು ದೇವೇಗೌಡರು ನಮಗೆ ದೂರವಾಗಿದ್ದರು, ಅವರು ಹೊಸ ಪಕ್ಷವನ್ನು ಮಾಡಿ ಅವರ ಪಕ್ಷದಿಂದ ಇಬ್ಬರು ಆರಿಸಿ ಬಂದಿದ್ದರು ಆ ಸಮಯದಲ್ಲಿ ಕಾಂಗ್ರೆಸ್ ಪಕ್ಷದಿಂದ 182 ಜನರು ಆರಿಸಿ ಬಂದಿದ್ದರು ಹಾಗಾಗಿ ಕಾಂಗ್ರೆಸ್ ಪಕ್ಷವನ್ನು ಪುನಃ ಎದುರಿಸಬೇಕಾದರೆ ದೇವೇಗೌಡರ ಪಕ್ಷ ನಾವು ಒಂದಾಗಬೇಕು ಎನ್ನುವ ವಿಚಾರಧಾರೆ ನಮ್ಮಲ್ಲಿತ್ತು ನಾನು, ಜೀವರಾಜ್ ಆಳ್ವ, ಪಿ ಜಿ ಆರ್ ಸಿಂಧ್ಯ, ಆ ಸಮಯದಲ್ಲಿ ದೇವೇಗೌಡರ ಜೊತೆಯಲ್ಲಿ ಹಾಗು ನಾವು ಚಂದ್ರಶೇಖರವರನ್ನು ಭೇಟಿಯಾಗಿ ಅವರ ಮೂಲಕ ರಾಮಕೃಷ್ಣ ಹೆಗಡೆಯವರಿಗೆ ಭೇಟಿಯಾದೆವು, ಆ ಸಮಯದಲ್ಲಿ ರಾಮಕೃಷ್ಣ ಹೆಗಡೆಯವರಿಗೆ ಮತ್ತು ದೇವೇಗೌಡರಿಗೆ ಸಾಕಷ್ಟು ಭಿನ್ನಾಭಿಪ್ರಾಯ ಬಂದಿತ್ತು ಹಾಗಾಗಿ ಚಂದ್ರಶೇಖರವರ ಸಹಾಯವನ್ನು ತೆಗೆದುಕೊಂಡು ರಾಮಕೃಷ್ಣ ಹೆಗಡೆಯವರಿಗೆ ಕನ್‌ವಿನ್ಸ್ ಮಾಡಿ ಪುನಃ ಆ ಸಮಯದಲ್ಲಿ ದೇವೇಗೌಡರ ಪಾರ್ಟಿ ಬಂತು ಹಾಗಾಗಿ ಪುನಃ 1994ರ ಚುನಾವಣೆಯಲ್ಲಿ ಜನತಾ ಪಾರ್ಟಿ ಬರಲಿಕ್ಕೆ ಸಹಾಯವಾಯಿತು ಒಂದು ಘಟನೆ ಅಷ್ಟೆ ಎಂದು ನಾನು ಹೇಳುತ್ತಿದ್ದೇನೆ ಒಬ್ಬ ಚಿಂತನಾ ಶೀಲ ವ್ಯಕ್ತಿ, ಬಹಳ ಸಜ್ಜನರು, ಸರಳ ಸ್ವಭಾವದವರು ಮತ್ತು ಬಹಳ ಸಿಂಪಲ್ಲಾಗಿದ್ದರು ಪ್ರಧಾನಮಂತ್ರಿಯಾಗಿದ್ದಾಗಲೂ ಸಹ ಬಹಳ ಸಿಂಪಲ್ಲಾಗಿದ್ದರು ಯಾರು ಬೇಕಾದವರು ಭೇಟಿಯಾಗಬಹುದು, ಸೆಕ್ಯೂರಿಟಿ ಮತ್ತೊಂದಕ್ಕೆ ಅವರು ಹೆಚ್ಚು ಮಹತ್ವವನ್ನು ಕೊಡುತ್ತಿರಲಿಲ್ಲ ಇಂತಹ ಒಬ್ಬ ಮಹಾನ್ ವ್ಯಕ್ತಿ ಇವತ್ತು ನಮ್ಮಿಂದ ದೂರವಾಗಿದ್ದಾರೆ ಈಗಾಗಲೇ ನಾನು ಹೇಳಿದ ಹಾಗೆ ನಮ್ಮೆಲ್ಲರಿಗೂ ಒಂದು ಪ್ರೇರಣಾಶಕ್ತಿಯಾಗಿದ್ದರು ಹಾಗಾಗಿ ತಾವು ಏನು ಒಂದು ರೆಸ್‌ಲ್ಯೂಷನ್ ಇವತ್ತು ಮಂಡಿಸಿದ್ದೀರಿ ಅದಕ್ಕೆ ನಾನು ಬೆಂಬಲವನ್ನು ಕೊಡುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ, ಅವರ ಮಾರ್ಗದರ್ಶನ ಮತ್ತು ಅವರ ವಿಚಾರಧಾರೆ ಮುಂದಿನ ಒಂದು ಜನಾಂಗಕ್ಕೆ ಮಾರ್ಗದರ್ಶನವಾಗಲಿ ಮತ್ತು ಆದರ್ಶವಾಗಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಡಿ ಟಿ ಜಯಕುಮಾರ್ (ಮಾನ್ಯ ವಸತಿ ಸಚಿವರು) ಮಾನ್ಯ ಅಧ್ಯಕ್ಷರೆ, ಈ ದಿವಸ ಏನು ನಮ್ಮ ನೆಚ್ಚಿನ ನಾಯಕರು ಮತ್ತು ಮಾಜಿ ಪ್ರಧಾನ ಮಂತ್ರಿಗಳು ಆಗಿದ್ದಂಥ ಸನ್ಮಾನ್ಯ ಚಂದ್ರಶೇಖರವರ ನಿಧನದಿಂದ ಇಡೀ ರಾಷ್ಟ್ರ ತಬ್ಬಲಿಯಾಗಿದೆ ಎಂದರೆ ತಪ್ಪಾಗಲಾರದು ಅವರು ಭೌತಿಕವಾಗಿ ನಮ್ಮೊಡನೆ ಇಲ್ಲದಿರಬಹುದು, ಆದರೆ ಅವರ ತತ್ವ ಸಿದ್ಧಾಂತಗಳು ಇವತ್ತು ಕೂಡ ಮುಂದಿನ ಪೀಳೀಗೆಗೆ ಮುಂದಿನ ರಾಜಕಾರಣಿಗಳಿಗೆ ಆದರ್ಶಪ್ರಾಯವಾಗಿ ಇರುತ್ತವೆಂದು ನಾನು ಅಂದುಕೊಂಡಿದ್ದೇನೆ ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ, ಅವರು ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು ಎನ್ನುವ ವಿಚಾರಗಳನ್ನು ಅನೇಕ ಸಂದರ್ಭಗಳಲ್ಲಿ ಹೇಳುತ್ತಿದ್ದರು ಅವರನ್ನು ನೋಡತಕ್ಕಂಥ ಭಾಗ್ಯ ನನಗೆ ಮೊದಲನೆ ಸಲ ಪೊಲೀಸ್ ಅಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ ಬಂದಿರುವಂಥ ಸಂದರ್ಭದಲ್ಲಿ ಈ ಕಾವೇರಿ ಕಾಟೇಜಿನಲ್ಲಿ ಮಾನ್ಯ ನಜೀರ್ ಸಾಹೇಬರು ನನಗೆ ಅವರನ್ನು ಪರಿಚಯ ಮಾಡಿಸಿಕೊಟ್ಟರು ಅವರು ಹೇಳಿದರು ಏಕೆ ನೀನು ಪೊಲೀಸ್ ಅಧಿಕಾರಿ ಸ್ಥಾನವನ್ನು ಬಿಟ್ಟು ಬಂದಿಯಾ? ನಿನಗೆ ಬುದ್ಧಿಗಿದ್ಧಿ ಇದೆಯಾ? ರಾಜಕಾರಣ ಇನ್ನೂ ಹೊಲಸು ಏಕೆ ಬಂದಿಯಾ ಎನ್ನುವ ಮಾತನ್ನು ಹೇಳಿದರು ಆಗ ಮಾನ್ಯ ನಜೀರ್‌ಸಾಹೇಬರು ಇವರಿಗೆ ಟಿಕೇಟ್ ಬೇಕಲ್ಲಾ ಎಂದು ಹೇಳಿದಾಗ, ಇವರ ಬಗ್ಗೆ ದೇವೇಗೌಡರಿಗೆ ಹೇಳಿ, 225 ಕ್ಷೇತ್ರದಲ್ಲಿ ಯಾರಿಗೂ ಗೆಲ್ಲುವುದಕ್ಕಾಗುವುದಿಲ್ಲ, ಒಬ್ಬ ಪೊಲೀಸ್ ಅಧಿಕಾರಿಯಾಗಿ ಬುದ್ಧಿಯಿಲ್ಲದೆ ಬಂದಿದ್ದಾನೆ ಅವನು ಸೋಲಲಿ ಬಿಡಲಿ ಅವನಿಗೆ ಟಿಕೇಟ್ ಕೊಡಿಸಿ ಬಿಡಿ ಎಂದು 1989ನೇ ಇಸ್ವಿಯಲ್ಲಿ ಅವರಿಗೆ ಹೇಳಿದರು ಅವರು ಎಷ್ಟು ಸರಳವ್ಯಕ್ತಿಯಾಗಿದ್ದರು ಎಂದರೆ, ಯುವ ಶಕ್ತಿಯ ಕಾರ್ಯಕರ್ತರಲ್ಲಿ ಅವರಿಗೆ ಬಹಳ ಅಪಾರವಾದ ನಂಬಿಕೆ, ಅವರು ಮಾಜಿ ಪ್ರಧಾನ ಮಂತ್ರಿಗಳಾಗಿದ್ದಲೂ ಕೂಡ ನಮ್ಮ ಮನೆಗೆ ಉಪಹಾರಕ್ಕೆ ಬಂದಿದ್ದರು ನಾನು ಸುಮ್ಮನೆ just, curiosity ಗೆ ಅವರು ಬರುವುದಿಲ್ಲವೆಂದು ಗೊತ್ತಿತ್ತು ಆದರೆ ಸುಮ್ಮನೆ curiosity ಗೆ ನಮ್ಮ ಮನೆಗೆ ಬನ್ನಿ ಎಂದು ಕೇಳಿದಾಗ ಎಲ್ಲಿ ನಿಮ್ಮ ಮನೆ ಎಂದು ಕೇಳಿದರು ಇಲ್ಲಿಯೇ ಒಂದು crust park ನಲ್ಲಿ ಒಂದು apartment ನಲ್ಲಿದ್ದೇನೆ ಸರ್ ಎಂದು ಹೇಳಿದೆ, ಅವರನ್ನು ಅಲ್ಲಿಗೆ ಕರೆಯಲೋ ಬೇಡವೋ ಎಂದು ನನಗೆ ಯೋಚನೆ, ನನ್ನ ಮನೆ ಸರಿಯಾಗಿ ಇಲ್ಲವಲ್ಲ ಎಂದು, ಬರುತ್ತೇನೆಂದು ಹೇಳಿ ಅವರು ಬೆಳಗ್ಗೆ ಉಪಹಾರಕ್ಕೆ ಬಂದರು ಮಾಜಿ ಪ್ರಧಾನಮಂತ್ರಿಗಳಾಗಿದ್ದಾಗಲೂ ಮೂರು ಭಾರಿ ನಮ್ಮ ಮನೆಗೆ ಬಂದರು ಮೂರು ಸಲ ನಮ್ಮ ಮನೆಗೆ ಉಪಹಾರಕ್ಕೆ ಬರುತ್ತಾರೆಂದರೆ, ಅವರಿಗೆ ವಿಶೇಷವಾಗಿ ಯುವಕರ ಬಗ್ಗೆ ಬಹಳ ಅಪಾರವಾದ ನಂಬಿಕೆ ಇತ್ತು ಯುವಶಕ್ತಿಯನ್ನು ಬೆಳೆಸಬೇಕು ಎನ್ನತಕ್ಕಂಥ ಆಸೆ ಅವರಲ್ಲಿ ಇತ್ತು ಅವರ

ಸರಳತನ ಅವರು ಒಬ್ಬ ಸಾಮಾನ್ಯ ವ್ಯಕ್ತಿಯ ಮನೆಗೆ ಬರುತ್ತಾರೆಂದರೆ, ಅದು ಏನು ಕೃಷ್ಣ ಕುಚೇಲನ ಮನೆಗೆ ಬಂದ ರೀತಿಯಲ್ಲಿ ಮಾನ್ಯ ಚಂದ್ರಶೇಖರವರು ಬರುವುದು ಒಂದು ಆದರ್ಶಪ್ರಿಯವಾದ ಒಂದು ನಡವಳಿಕೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಅದೇ ರೀತಿ ಸಾಮಾಜಿಕ ನ್ಯಾಯದ ಬಗ್ಗೆ ಅವರಿಗೆ ಎಷ್ಟು ಚಿಂತನೆಯಾಗಿತ್ತು ಎಂದರೆ, ನಾವು 1984ನೇ ಇಸ್ವಿಯಲ್ಲಿ ಹೆಗಡೆಯವರು, ದೇವೇಗೌಡರು, ನಜೀರ್ ಸಾಬ್‌ರು ಇದ್ದಂಥ ಸಂದರ್ಭದಲ್ಲಿ ಈ ಪರಿವಾರ, ನಾಯಕ್, ಬೇಡರ, ವಾಲ್ಮೀಕಿ, ತಳವಾರ ಇವುಗಳನ್ನು ನಾವು ST ಗ್ರೂಪ್‌ಗೆ ಸೇರಿಸಬೇಕೆಂದು ರೆಕ್ಮೆಂಡೇಶನ್ ಮಾಡಿ ಕಳುಹಿಸಿದ್ದೆವು ಅದು 1984 ರಿಂದ 1991ನೆ ಇಸ್ವಿಯವರೆಗೆ ನೆನೆಗುದಿಗೆ ಬಿದ್ದಿತ್ತು ಆದರೆ ಚಂದ್ರಶೇಖರವರ ಹತ್ತಿರ ಬಿ ಎಲ್ ಶಂಕರರವರು, ಪಿ ಜಿ ಆರ್ ಸಿಂಧ್ಯರವರು ಶ್ರೀಮತಿ ಚಂದ್ರಪ್ರಭಾ ಅರಸ್, ಹಾಗೂ ನಾವೆಲ್ಲರು ಆಗ ಒಂದು ನಿಯೋಗ ಹೋಗಿ, ಸರ್ ಈ ಜನಾಂಗ ಕರ್ನಾಟಕದಲ್ಲಿ ಬಹಳ ಹಿಂದುಳಿದಿದೆ ಇವರನ್ನು ST ಗ್ರೂಪ್‌ಗೆ ಸೇರಿಸಬೇಕೆಂದು ಹೇಳಿದಾಗ ಇದನ್ನು ಮಾಡುವುದಕ್ಕೆ ಬರುವುದಿಲ್ಲ ಇದನ್ನು ಪಾರ್ಲಿಮೆಂಟ್‌ಗೆ ತರಬೇಕೆಂದು ಹೇಳಿದರು ಮಾನ್ಯ ದೇವೇಗೌಡರು ಆಗ ಹೇಳಿದರು, ಇದು ಪಾರ್ಲಿಮೆಂಟ್‌ಗೆ ಹೋದರೆ ಖಂಡಿತವಾಗಿ ಆಗುವುದಿಲ್ಲ ಇದಕ್ಕೊಂದು ಆರ್ಡಿನೆನ್ಸ್ ತರಬೇಕೆಂದು ಹೇಳಿ, ಮೊಟ್ಟಮೊದಲಿಗೆ ಇತಿಹಾಸದಲ್ಲಿ ಆರ್ಡಿನೆನ್ಸ್ ತಂದು ST ಗ್ರೂಪ್‌ಗೆ ಸೌಲಭ್ಯ ದೊರಕಿದ್ದು ಎಂದರೆ ಈ ಕರ್ನಾಟಕಕ್ಕೆ ಮಾತ್ರ, ಅದು ಬೇಡ, ಬೇಡರ್, ನಾಯಕ್, ತಳವಾರ ಜನಾಂಗಕ್ಕೆ ಅಷ್ಟರ ಮಟ್ಟಿಗೆ ಅವರ ಒಂದು ಕಮಿಟ್‌ಮೆಂಟ್ ಇತ್ತು ಎಂದು ಹೇಳುವುದಕ್ಕೆ ಆರ್ಡಿನೆನ್ಸ್ ತಂದು ಅದಕ್ಕೊಂದು ಆರ್ಡರ್‌ನ್ನು ಮಾಡಿ ಕೊಡುತ್ತಾರೆಂದರೆ, ಅವರ ಸಾಮಾಜಿಕ ನ್ಯಾಯದ ಬಗ್ಗೆ ಎಷ್ಟು ಆಳವಾದ ಚಿಂತನೆ ಇತ್ತು ಎಂದು ನಿರ್ಧರಿಸುತ್ತದೆ ಆದ್ದರಿಂದ ಇಂತಹ ಮಹಾನ್ ವ್ಯಕ್ತಿ ಒಬ್ಬ ಅಜಾತಶತ್ರು ಇದ್ದ ಹಾಗೆ ಯಾವುದೇ ಪಕ್ಷದವರು ಕಾಂಗ್ರೆಸ್ ಆಗಲಿ, ಬಿಜೆಪಿಯಲ್ಲಿಯಾಗಲಿ, ಯಾವುದೇ ಪಕ್ಷಬೇಧವಿಲ್ಲದೇ ಅವರನ್ನು ಪ್ರೀತಿಸುತ್ತಿದ್ದರು ಅವರ ಮಾರ್ಗದರ್ಶನವನ್ನು ಬೇಡುತ್ತಿದ್ದರು ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದರು ಎನ್ನತಕ್ಕಂಥದ್ದನ್ನು ಹೇಳುತ್ತಾ, ಯಂಗ್‌ಟರ್ಕ್ ಎನ್ನುವ ಪದ ಹುಟ್ಟಿಕೊಂಡಿದ್ದು ಇವರಿಂದ, ಶ್ರೀಮತಿ ಇಂದಿರಾಗಾಂಧಿ, ನೆಹರು ಮನೆತನದ ವಿರುದ್ಧ ಯಾರು ಒಂದು ಮಾತು ಎತ್ತಿದರೆ ಎಲ್ಲಿ ಭೂಗತವಾಗುತ್ತೇವೆ ಅಥವಾ ಎಲ್ಲಿ ನಾಶವಾಗಿ ಬಿಡುತ್ತೇವೋ ಎನ್ನುವ ಸಂದರ್ಭದಲ್ಲಿ ಚಂದ್ರಶೇಖರವರು ಒಂದು ಯಂಗ್‌ಟರ್ಕ್ ಎನ್ನು ಒಂದು ಗುಂಡು ಮಾಡಿಕೊಂಡು ಆ ಪಕ್ಷದಿಂದ ಹೊರಗಡೆ ಬಂದು ರಾಜಕಾರಣವನ್ನು ಮಾಡಿ ಪ್ರಧಾನಮಂತ್ರಿಯಾಗುತ್ತಾರೆಂದರೆ, ನಿಜವಾಗಲೂ ಕೂಡ ಅವರು ಒಂದು ಆದರ್ಶಪ್ರಿಯವಾದಂಥ ರಾಜಕಾರಣವನ್ನು ಮಾಡಿದ್ದಾರೆ

ಅಂತಹ ಒಬ್ಬ ಮಹಾನ್ ವ್ಯಕ್ತಿಯ ಭೌತಿಕವಾದಂಥ ತತ್ವ ಸಿದ್ಧಾಂತಗಳು ಇಡೀ ರಾಜಕಾರಣಿಗಳಿಗೆ ಒಂದು ಆದರ್ಶಪ್ರಿಯವಾಗಿರುತ್ತವೆ, ಅಂತಹ ಮಹಾನ್ ವ್ಯಕ್ತಿಗೆ ನಾವು ಅಂತಿಮ ನಮಸ್ಕಾರಗಳನ್ನು ಸಲ್ಲಿಸತಕ್ಕಂಥ ಸಂದರ್ಭದಲ್ಲಿ ತಾವು ತಂದರಿತಕ್ಕಂಥ ಈ ಶ್ರದ್ಧಾಂಜಲಿಗೆ ಅನುಮೋದನೆಯನ್ನು ನೀಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೆ, ಅನೇಕ ಹಿರಿಯರಂತೆ ನಾನು ಕೂಡ ಶ್ರೀ ಚಂದ್ರಶೇಖರ್‌ರವರ ನಿಧನಕ್ಕೆ ತಾನು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಮಾಡುತ್ತಾ ಸಾರ್ವಜನಿಕ ವ್ಯಕ್ತಿಗಳಿಗೆ, ಸಾರ್ವಜನಿಕ ಜೀವನದಲ್ಲಿರುವಂತಹ ವ್ಯಕ್ತಿಗಳಿಗೆ ಇವರು ಕೊಡುವಂತಹ ಗೌರವ ಮತ್ತು ಮಾರ್ಯಾದೆ ಉಳಿದುಕೊಂಡು ಬಂದಿದೆ ಎಂದು ಹೇಳುವುದಾದರೆ ಮಾನ್ಯ ಚಂದ್ರಶೇಖರ್‌ರವರ ಆದರ್ಶ, ಇವರಂತಹ ವ್ಯಕ್ತಿಗಳ ಜೀವನ ಮತ್ತು ಇವರ ಕೊಡುಗೆ ದೇಶಕ್ಕೆ ಹಾಗೂ ಸಾರ್ವಜನಿಕ ಮೌಲ್ಯಗಳಿಗೆ ಅವರು ಕೊಟ್ಟಿದ್ದಾರೆಂದು ನನಗನಿಸುತ್ತದೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ತುರ್ತುಪರಿಸ್ಥಿತಿಯ ಕರಾಳ ದಿನಗಳ ಅಹಿಂಸೆಯ ಫಲಾನುಭವಿಗಳು ನಾವುಗಳಾಗಿದ್ದೇವೆ ನಾವುಗಳು ಕಾಲೇಜಿನ ವಿದ್ಯಾರ್ಥಿಗಳಗಿದ್ದಾಗ ನಮ್ಮನ್ನು ಹಿಡಿದುಕೊಂಡು ಹೋಗಿ ಜೈಲಿಗೆ ಹಾಕುತ್ತಾರೆ 3–4 ತಿಂಗಳುಗಳ ಕಾಲ ನಾವುಗಳು ಜೈಲಿನ ಗೋಡೆಯನ್ನೇ ಪ್ರಪಂಚವೆಂದು ತಿಳಿದುಕೊಂಡಿದ್ದ ನಮಗೆ ಏಕಾಏಕಿಯಾಗಿ ಚಂದ್ರಶೇಖರ್‌ರವು ಮಾಜಿ ಪ್ರಧಾನಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರ ಈ ಕೃತ್ಯವನ್ನು ಈ ಕೆಲಸವನ್ನು ವಿರೋಧಿಸುತ್ತಾರೆಂದು ಅಂದಾಗ ನಮಗೆಲ್ಲರಿಗೂ ಕೂಡ ಅನಿಸಿದ್ದು, ರಾವಣನ ರಾಜ್ಯದಲ್ಲಿ ವಿಭೀಷಣನ ಒಂದು ಪಾತ್ರ ನಮಗೆ ನೆನಪಾಗುತ್ತದೆ ಇಂತಹ ಮಹತ್ವವಾದ ರೋಲ್‌ನ್ನು ಅಂತಹ ಕಠಿಣವಾದಂತಹ ದಿನಗಳಲ್ಲಿ ಅವರು ವಹಿಸಿದ್ದರು ಶ್ರೀಮತಿ ಇಂದಿರಾಗಾಂದಿಯವರಿಗೆ ಬೇಕಾಗಿತ್ತೋ ಅಥವಾ ಬೇಡವಾಗಿತ್ತೋ, ಯಾರ ಸಲಹೆಯ ಆಧಾರದ ಮೇಲೆ ಆ ತುರ್ತುಪರಿಸ್ಥಿತಿಯನ್ನು ದೇಶದ ಮೇಲೆ ಹೇರಿದರೂ ಗೊತ್ತಿಲ್ಲ ಬಹುಶಃ ಅವರ ನಡುವಿನ ಅವರ ಜೊತೆಯಲ್ಲಿ ಇದ್ದು, ವಿರೋಧಿಸಿ ಇದು ಸರಿಯಲ್ಲವೆಮದು ಇವರು ಹೇಳಿದರು ಶ್ರೀ ಜಯಪ್ರಕಾಶ್ ನಾರಾಯಣವರವನ್ನು, ಶ್ರೀ ಜಾರ್ಜ್‌ಫರ್ನಾಂಡಿಸ್ ಹಾಗೂ ಶ್ರೀ ಅಟಲ್ ಬಿಹಾರಿ ವಾಜಪೇಯಿ ಇಂತಹ ಗಣ್ಯರೆಲ್ಲರನ್ನು ಜೈಲಿಗೆ ತಳ್ಳಿ, ಈ ದೇಶವನ್ನೇ ಜೈಲಾಗಿ ಪರಿವರ್ತನೆ ಮಾಡಿರುವಂತಹ ಆ ದಿನಗಳಲ್ಲಿ, ಶ್ರೀಮತಿ ಇಂದಿರಾ ಗಾಂಧಿಯವರ ನಡುವೆಯೇ ನಿಂತು ಅದನ್ನು ವಿರೋಧ ಮಾಡಿ ಅವರು ಒಳ್ಳೆಯ ಸಲಹೆಯನ್ನು ಕೊಟ್ಟಾಗಲೂ

ಕೂಡ ಒಪ್ಪದಿದ್ದಾಗ ಅದನ್ನು ಪ್ರತಿಭಟನೆ ಮಾಡಿ ಅವರು ಹೊರಗೆ ಬಂದಂತಹ ಒಬ್ಬ ಧೀಮಂತ ನಾಯಕರಾಗಿದ್ದರು ಜನತಂತ್ರ ವ್ಯವಸ್ಥೆ ಸ್ವಾತಂತ್ರ್ಯದ ನಂತರ ಹಳಿತಪ್ಪಿ ಹೋದಂತಹ ದಿನಗಳಲ್ಲಿ ಅದನ್ನು ಹಳಿಯ ಮೇಲೆ ನಿಲ್ಲಿಸರುವಂತಹ ಭಾರಿ ದೊಡ್ಡ ಹೋರಾಟದಲ್ಲಿ ಭಾರಿ ದೊಡ್ಡ ಕೊಡುಗೆ ಮಾನ್ಯ ಚಂದ್ರ ಶೇಖರ್‌ರವರದು ಎಂದು ನಾನು ಭಾವಿಸುತ್ತೇನೆ ನಾವು ಬದುಕಿ ಹೊರಗೆ ಬರುವುದೇ ಇಲ್ಲ ಜೈಲಿನೊಳಗಡೆಯೇ ಸಾಯುತ್ತೇವೆನ್ನುವಂತಹ ದಿನಗಳಲ್ಲಿ ಬಹುಶಃ ಹೊರಗೆ ತಂದಿರುವಂತಹ ಧೀಮಂತ ನಾಯಕರಲ್ಲಿ ಚಂದ್ರ ಶೇಖರ್‌ರವರು ಒಬ್ಬರಾಗಿದ್ದಾರೆ ಅವರ ಅಧಿಕಾರ ಅವಧಿಯು ಕೂಡ ಕಡಿಮೆ ಈಗಾಗಲೇ ನಮ್ಮ ಅನೇಕ ಹಿರಿಯರು ಹೇಳಿದ್ದಾರೆ ಯಾವುದೇ ಒಂದು ಅಧಿಕಾರ ಸ್ಥಾನ ಇಲ್ಲದಿದ್ದಾಗಲೂ ಕೂಡ ಏಕಾಏಕಿಯಾಗಿ ಅವರು ಪ್ರದಾನ ಮಂತ್ರಿಯಾದರು ಅವರು ಪ್ರಧಾನ ಮಂತ್ರಿಯಾದ ದಿನಗಳಲ್ಲಿಯೂ ಕೂಡ ದೇಶದ ಆರ್ಥಿಕ ಸ್ಥಿತಿ ಬಹಳ ಕಠಿಣವಾಗಿತ್ತು ಈ ದೇಶದ ತುಂಬಾ ಜನರಿಗೆಲ್ಲಾ ಬಂಗಾರ ಸಿಗಬೇಕೆಂದು ಹೇಳಿ ಖಜಾನೆಯಲ್ಲಿರುವಂತಹ ಬಂಗಾರವನ್ನು ತೆಗೆದುಕೊಂಡು ಹೋಗಿ ಅಡವು ಇಡುತ್ತಾರೆ ನಾವುಗಳೆಲ್ಲರೂ ಆ ಸಮಯದಲ್ಲಿ ಟೀಕೆಯನ್ನು ಮಾಡಿದೆವು ಇಂತಹ ಪರಿಸ್ಥಿತಿ, ಸಂದಿಗ್ದ ಈ ದೇಶಕ್ಕೆ ಬಂದು ಹೋಯಿತು ಎಂದು ಹೇಳಿದೆವು ಆದರೆ ಇಂತಹ ಒಂದು ಪರಿಸ್ಥಿತಿಯನ್ನು ಚಾಲನೆಗೆ ತರುತ್ತಾರೆ ಇಂತಹ ಒಂದು ಪರಿಸ್ಥಿತಿಯಲ್ಲಿ ಚಂದ್ರಶೇಖರ್‌ರವರಿಗೆ ಪಕ್ಷದ ಚೌಕಟ್ಟು ಇದು ಯಾವುದರಿಂದಲೂ ನೋಡುವುದಕ್ಕೆ ಸಾಧ್ಯವೇ ಇಲ್ಲ ಸಾರ್ವಜನಿಕ ಜೀವನದಲ್ಲಿ ತನ್ನದೇ ಆಗಿರುವಂತಹ ಮೌಲ್ಯವನ್ನು ಮತ್ತು ಹೆಜ್ಜೆಯನ್ನು ಇಟ್ಟಿರುವಂತಹ ಅವರ ಅಯಸ್ಸು ಬಹಳ ಕಡಿಮೆಯಾಯಿತು ಎಂದು ನಮಗನಿಸುತ್ತದೆ ಇನ್ನಷ್ಟು ದಿನ ದೇಶದಲ್ಲಿ ಅವರು ಮಾರ್ಗದರ್ಶನ ಮಾಡಲಿಕ್ಕಾಗಿ, ಸಾರ್ವಜನಿಕ ಜೀವನಕ್ಕೆ ಮೌಲ್ಯವನ್ನು ತುಂಬುವುದಕ್ಕೆ ಅಂತಹವರು ಹೆಚ್ಚು ದಿನ ಬದುಕಿರಬೇಕಾಗುತ್ತದೆ ಆದರೂ ಕೂಡ ವಿಧಿಯ ಇಚ್ಛೆ ನಾವು ಅವರನ್ನು ನಿನ್ನೆಯ ದಿನ ಕಳೆದುಕೊಂಡಿದ್ದೇವೆ ಅವರ ಸಂತಾಪಸೂಚಕ ನಿರ್ಣಯಕ್ಕೆ ಮತ್ತೊಮ್ಮೆ ನಾನು ಕೂಡ ಬೆಂಬಲವನ್ನು ವ್ಯಕ್ತ ಮಾಡಿ ಅಂತಹ ಮೌಲ್ಯಗಳನ್ನು ನಮ್ಮ ಬದುಕಿನಲ್ಲೂ ಕೂಡ ಅಳವಡಿಸಿಕೊಂಡು ನಿಜವಾದಂತಹ ಶ್ರದ್ಧಾಂಜಲಿಯನ್ನು ನಾವೆಲ್ಲರೂ ಸಲ್ಲಿಸೋಣವೆಂದು ಹೇಳು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿದ್ದಾರೆ

ಶ್ರೀ ಬಿ ಎ ಜೀವಿಜಯ (ಸೋಮವಾರ ಪೇಟೆ) ಮಾನ್ಯ ಅದ್ಯಕ್ಷರೆ, ಈ ದಿವಸ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಚಂದ್ರಶೇಖರ್‌ರವರು ವಿಧಿವಶ ರಾದಂತಹ ಸಂದರ್ಭದಲ್ಲಿ ನಮ್ಮ ಭಾವನೆಗಳನ್ನು ಶ್ರದ್ಧಾಂಜಲಿ ಅರ್ಪಿಸುವುದಕ್ಕೆ ತಾವು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಅಭಾರಿಯಾಗಿದ್ದೇನೆ ನಾನು 1983ನೇ ಇಸವಿಯಲ್ಲಿ ವಿಧಾವಸಭೆಗೆ ಸೋಮವಾರಪೇಟೆ ಕ್ಷೇತ್ರದಿಂದ ಆಯ್ಕೆಯಾದಂತಹ ಸಂದರ್ಭದಲ್ಲಿ ಜನತಾಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದೆ ಆ ಸಂದರ್ಭದಲ್ಲಿ ನನ್ನ ಕ್ಷೇತ್ರಕ್ಕೆ ಶ್ರೀ ಚಂದ್ರಶೇಖರ್‌ರವರು ನನ್ನ ಪರವಾಗಿ ಚುನಾವಣೆಯುಲ್ಲಿ ಪ್ರಚಾರಕ್ಕಾಗಿ ಬಂದಿದ್ದರು 1983ನೇ ಇಸವಿಯ ಚುನಾವಣೆಯಿಂದ ಅವರ ಬಾಂಧವ್ಯ ನನ್ನ ಜೊತೆಯಲ್ಲಿ ಮಾತ್ರ ಅಲ್ಲ, ಡಾ ಜೀವರಾಜ್‌ಆಳ್ವರವರು, ಶ್ರೀ ಪಿ ಜಿ ಆರ್ ಸಿಂಧ್ಯಾರವರು, ಶ್ರೀ ಎಂ ಪಿ ಪ್ರಕಾಶ್ ಹಾಗೂ ಶ್ರೀ ರಮೇಶ್ ಜಿಗಜಿಣಗಿ ಈ ಐದು ಜನರ ಜೊತೆಯಲ್ಲಿ ಅವರ ಬಾಂಧವ್ಯ ಬಹಳ ಅತ್ಯಂತ ಆಳವಾಗಿ ಬೇರೂರಿತ್ತು ಅವರು ಅತ್ಯಂತ ಸರಳತೆ ಮತ್ತು ಸಜ್ಜನಿಕೆ ಮತ್ತು ಮಾನವೀಯ ಮೌಲ್ಯಗಳನ್ನು ತುಂಬಿಕೊಂಡಿದ್ದರು ಒಬ್ಬ ಅಪರೂಪದ ರಾಜಕಾರಣಿಯಾಗಿದ್ದರು, ಅವರು ಅತ್ಯಂತ ಮೇಧಾವಿಯಾಗಿದ್ದರು, ದೂರದೃಷ್ಟಿ ಇಟ್ಟುಕೊಂಡಟಿರತಕ್ಕಂತಹ ಮಹಾ ಪುರುಷ ರಾಗಿದ್ದರು ಅವರು ಈ ದಿವಸ ಅಸ್ತಂಗತರಾಗಿದ್ದಾರೆ ನನ್ನ ಅನೇಕ ಮಿತ್ರರು ಕೂಡ ಅವರ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ನಾನು ಅವರ ಜೊತೆಯಲ್ಲಿದ್ದಾಗ ನಡೆ ಕೆಲವು ಘಟನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ ಅನೇಕ ಘಟನೆಗಳು ಈ ದಿವಸ ನನಗೆ ಜ್ಞಾಪಕಕ್ಕೆ ಬರುತ್ತದೆ, ಅವರು 1983ನೇ ಇಸವಿ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು 82 ಸ್ಥಾನಗಳನ್ನು ಗೆದ್ದು, ಉಳಿದ ಸ್ಥಾನಗಳು ವಿರೋಧಪಕ್ಷಕ್ಕೆ ಸಿಕ್ಕಿದಾಗ ಯಾರು ಮುಖ್ಯ ಮಂತ್ರಿಯಾಗಬೇಕು ಎಂದು ಹೇಳತಕ್ಕಂತಹ ವಿಷಯದಲ್ಲಿ ಸ್ವಲ್ಪ ಗೊಂದಲವಿತ್ತು ಮಾನ್ಯ ದೇವೇಗೌಡರು ಆ ದಿನ ಅಧ್ಯಕ್ಷರಾಗಿದ್ದರು ಅವರಿಗೆ ಸಾಧ್ಯವಾದರೆ ನಾನೇ ಮುಖ್ಯಮಂತ್ರಿಯಾಗಬೇಕೆಂಬ ಬಯಕೆ ಇತ್ತು ಆದರೆ ಮಾನ್ಯ ಚಂದ್ರಶೇಖರ್‌ರವರು ಕನ್ಯಾಕುಮಾರಿಯಿಂದ ದೆಹಲಿಯವರೆಗೆ ಬಾರತಯಾತ್ರಾ ಹೋದಂತಹ ಸಂದರ್ಭದಲ್ಲಿ ಮಧುರೈಯಿಂದ ದೂರವಾಣಿ ಮುಖಾಂತರ "Mr Gowda, you back Mr Hegde" ಅಂತ ಹೇಳಿದ ಸಂದರ್ಭ ಅದು ಆ ಸಂದರ್ಭದಲ್ಲಿ ಮಾನ್ಯ ಹೆಗಡೆಯವರು ಜನತಾಪಾರ್ಟಿಯ ಅಲ್ ಇಂಡಿಯಾ ಜನರಲ್ ಸೆಕ್ರೆಟರಿಯಾಗಿದ್ದರು ಇವೆಲ್ಲವೂ ಒಂದು ರೀತಿಯಲ್ಲಿ ಚರಿತ್ರೆಯಾಗಿದೆ ಅವರು ಕೇಂದ್ರದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಆಗ ಮೊರಾರ್ಜಿ ದೇಸಾಯಿಯವರು ಪ್ರಧಾನಮಂತ್ರಿ ಆದರೂ ಕೂಡ ಅವರಿಗೆ ಮಂತ್ರಿ ಪದವಿಯನ್ನು ಕೊಟ್ಟರೂ ಕೂಡ ಅದನ್ನು ಅವರು

ಸ್ವೀಕಾರ ಮಾಡಲಿಲ್ಲ ಅವರು ಹೇಳುತ್ತಿದ್ದರು ಈ ಮೋಹನ್‌ದಾರಿಯ ಮತ್ತು ಕೃಷ್ಣಕಾಂತ್‌ರವರು ಬಂದು ನಮ್ಮನ್ನು ಮಂತ್ರಿ ಮಾಡಬೇಕೆಂದು ಕೇಳುತ್ತಿದ್ದಾರೆ ನಾನು ಮಂತ್ರಿಯಾಗುವುದಕ್ಕೆ ಬಯಸಲಿಲ್ಲ ನಾವು ಪಕ್ಷವನ್ನು ಸಂಘಟನೆ ಮಾಡಬೇಕೆಂದು ಹೇಳತಕ್ಕಂತಹ ವಿಷಯದಲ್ಲಿ ನನಗೆ ಜವಾಬ್ದಾರಿಯನ್ನು ವಹಿಸಿದ್ದಾರೆ ನೀವೆಲ್ಲರೂ ಯುವಕರು ಪಕ್ಷವನ್ನು ಸಂಘಟನೆಯನ್ನು ಮಾಡಬೇಕು, ಪಕ್ಷವನ್ನು ಬೆಳೆಸಬೇಕು ಈ ದೇಶದ ರಾಜಕೀಯ ವಾತಾವರಣದಲ್ಲಿ ಒಂದು ಬದಲಾವಣೆ ಮಾಡತಕ್ಕಂತಹ ಅವಕಾಶ ನಿಮಗೆಲ್ಲರಿಗೂ ಸಿಕ್ಕಿದೆ, ಆದ್ದರಿಂದ ನೀವೆಲ್ಲ ಯುವಕರು ಈ ಪಕ್ಷಕ್ಕೆ ಶಕ್ತಿಯನ್ನು ತುಂಬಬೇಕು ಎಂದು ಹೇಳತಕ್ಕಂತಹ ಮಾತನ್ನು ಅವರು ಹೇಳುತ್ತಿದ್ದರು ಈ ದಿವಸ ಅವರ ಬಗ್ಗೆ ಅನೇಕ ವಿಷಯಗಳನ್ನು ತನ್ನೆಲ್ಲಾ ಸ್ನೇಹಿತರು ಮಾತನಾಡಿದರು ನಾನು ಮತ್ತು ಶ್ರೀ ದೇವೇಗೌಡರು ಮತ್ತು ಶ್ರೀ ಬಿ ಎಲ್ ಶಂಕರ್‌ರವರು ಆಗಾಗ್ಗೆ ದೆಹಲಿಗೆ ಹೋಗಿತ್ತಿದ್ದೆವು ಆ ಸಂದರ್ಭದಲ್ಲಿ ಅವರು ಪ್ರಧಾನ ಮಂತ್ರಿಯಾಗಿದ್ದರು ಅವರು ಪ್ರಧಾನಮಂತ್ರಿಯಾಗಿದ್ದಾಗ ಬೇರೆ ರಾಜಕೀಯ ವಿಷಯದಲ್ಲಿ ಬಜೆಟ್ ಮಂಡನೆ ಅದಂತಹ ಸಂದರ್ಭದಲ್ಲಿ, ಆ ಬಜೆಟ್ ಫೇಲಾಗುತ್ತದೆ, ಅದನ್ನು ಬೀಳಿಸುತ್ತಾರೆನ್ನುವಂತಹ ಸಂದರ್ಭದಲ್ಲಿ ಅವರು ರಾಜೀನಾಮೆಯನ್ನು ಕೊಟ್ಟರು ಆ ಸಂದರ್ಭದಲ್ಲಿ ನಾನು ದೆಹಲಿಯಲ್ಲಿದ್ದೆ, ಮರುದಿವಸ ಫರ್ನಾಂಡೀಸ್ ರಾಜ್ಯಸಭಾ ಮೆಂಬರ್‌ರವರು ಕರ್ನಾಟಕ ಭವನಕ್ಕೆ ಬಂದರು ಅವರು ಮಾನ್ಯ ಚಂದ್ರಶೇಖರ್‌ರವರನ್ನು ಕಾಣಬೇಕು ಎಂದು ಅಪೇಕ್ಷೆಯನ್ನು ವ್ಯಕ್ತಪಡಿಸಿದರು ಬೆಳಿಗ್ಗೆ ನಾವು ಗುರಗಾಂವ್‌ಗೆ ಹೋದಾಗ ಶ್ರೀ ಚಂದ್ರಶೇಖರ್‌ರವರು ಛಾಪೆಯಲ್ಲಿ ಕುಳಿತ್ತಿದ್ದರು ನೀವು ಏತಕ್ಕಾಗಿ ಬಂದಿರಿ ಎಂದು ಕೇಳಿದರು ಬಹುಶಃ ಆಶ್ಚರ್ಯಕರವಾದ ಸಂಗತಿ ಎಂದರೆ ಆಗ ಆ ಸಂದರ್ಭದಲ್ಲಿ ಹಿಂದೂಜಾಸ್ ಬಂದರು, ಹಿಂದೂಜಾಸ್ ಬಂದು ಅವರ ಜೊತೆ ಮಾತುಕತೆ ಆಡುವಾಗ ನಾವು ಸ್ವಲ್ಪ ದೂರಸರಿದೆವು ಆದರೂ ಅವರ ಮಾತನ್ನು ನಾವು ಕೇಳುತ್ತಿದ್ದವು ರಾಜೀವ್‌ಗಾಂಧಿಯವರು ನೀವು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು ಪುನಃ ನೀವು ಲೀಡರ್ ಆಗಿ elect ಆಗಿ ಅಧಿಕಾರ ಸ್ವೀಕಾರ ಮಾಡಬೇಕು ಎಂದು ಹೇಳಿದರು ಸ್ವಲ್ಪ ಹೊತ್ತಿಗೆ ಚಂದ್ರಸ್ವಾಮಿಯವರು, ಡಾ॥ ಸುಬ್ರಮಣ್ಯಸ್ವಾಮಿಯವರು ಬಂದರು, ಅವರೂ ಪುನಃ ಪ್ರಧಾನಿಯಾಗಲು ಒತ್ತಾಯ ತಂದಾಗ ಅವರು ಒಂದೇ ಮಾತನ್ನು ಹೇಳಿದರು, I cannot kneel before the people who have betrayed me for power ಎನ್ನುವ ಮಾತನ್ನು ಅವರು ಆಗ ಹೇಳಿದರು, ಅಂಥ ವ್ಯಕ್ತಿತ್ವವನ್ನು ಹೊಂದಿರತಕ್ಕಂಥ ಆ ಮಹಾಪುರುಷ, ಈ ದಿವಸ ಯಾರಾದರೂ ಪುನಃ ಪುನಃ ಪ್ರಧಾನಮಂತ್ರಿಯಾಗಿ ಅಂದರೆ ಅದನ್ನು ಅವರು ಮನಸ್ಸಿನಲ್ಲಿ ಯಾವ

ರೀತಿಯಾಗಿ ಸ್ವೀಕಾರ ಮಾಡುತ್ತಿದ್ದರೋ, ಆದರೆ ಚಂದ್ರಶೇಖರ್‌ರವರು ತಮ್ಮ ಏನು ವ್ಯಕ್ತಿತ್ವ ಇತ್ತು, ತಮ್ಮ ಸಜ್ಜನಿಕೆ ಭಾವನೆಯಿಂದ ಮತ್ತು ಈ ದೇಶದಲ್ಲಿ ನನಗೆ ಒಂದು ಕೆಟ್ಟ ಹೆಸರು ಬರಬಾರದು ಎಂದು ಪ್ರಧಾನ ಮಂತ್ರಿಯಾಗಬೇಕೆನ್ನುವುದನ್ನು ಅವರು ಸ್ವೀಕಾರ ಮಾಡಲಿಲ್ಲ ಅವರು ಭಾರತೀಯ ಯಾತ್ರಾ ಸೆಂಟರ್ ಮಾಡಿದ್ದಾರೆ ಮತ್ತು ಯರಕಾಡಿನಲ್ಲಿ, ಸೇಲಂನಲ್ಲಿ ಕೂಡ ಬಾರತೀಯ ಯಾತ್ರಾ ಸೆಂಟರ್ ಮಾಡಿದ್ದಾರೆ ನಾವು ಅಲ್ಲಿಗೆ ಪದೇ ಪದೇ ಹೋಗುತ್ತಿದ್ದೆವು ಅವರು ತಮ್ಮ ಸ್ನೇಹಿತರನ್ನು ಎಂದೆಂದಿಗೂ ಮರೆಯುತ್ತಿರಲಿಲ್ಲ ಅವರನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು, ಪ್ರೀತಿಯಿಂದ ಸಂಭೋಧನೆ ಮಾಡುತ್ತಿದ್ದರು ಏತಕ್ಕೆ ಬಂದಿರಿ ಏನು ವಿಷಯ ಎಂದು ಅವರು ಕೇಳುತ್ತಿದ್ದರು ಈ ದಿವಸ ಅಂಥ ಒಬ್ಬ ಮಹಾಪುರಷ ನಮ್ಮ ಕಣ್ಮರೆಯಾಗಿದ್ದಾರೆ ನನ್ನ ವೈಯಕ್ತಿಕ ಜೀವನದಲ್ಲಿ ಯಾವಾಗಲೂ ಮರೆಯಲಾರಂಥ ಒಂದು ಬೆಸುಗೆ ನಮ್ಮ ನಡುವೆ ಇತ್ತು ಈ ದಿವಸ ಅವರು ದೈವಾಧೀನರಾಗಿದ್ದಾರೆ, ಅಂಥ ಮಹಾಪುರುಷನಿಗೆ ಈ ದಿವಸ ಈ ಸದನದ ಮೂಲಕ ಸಂತಾಪಸೂಚನೆಯನ್ನು ವ್ಯಕ್ತಪಡಿಸಿದ್ದೇನೆ, ಅದನ್ನು ನಾನು ಅನುಮೋದನೆ ಮಾಡುತ್ತೇನೆ, ಅವರು ಈ ದಿವಸ ನಿಧನ ಹೊಂದಿದ್ದರೂ ಕೂಡ ಅವರನ್ನು ಎಂದೆಂದಿಗೂ ಮರೆಯಲಾರದಂಥ ಒಂದು ಭಾವನೆ ನಮ್ಮಲ್ಲಿದೆ ಎಂದು ಹೇಳಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) ಆ ಪಾರ್ಟಿ, ಅದು ಜೈಲಿನಲ್ಲಿ ಹುಟ್ಟಿತ್ತು, ಅವರು ಮೊದಲನೇ ಅಧ್ಯಕ್ಷರು, ಅವರು ಎಂದೂ ಯಾವುದೇ ಮಂತ್ರಿಯಾಗಿರಲಿಲ್ಲ, ಡೈರೆಕ್ಟ್ ಆಗಿ ಈ ದೇಶದ ಪ್ರಧಾನಮಂತ್ರಿಯಾದರು ಅವರು ಪ್ರದಾನಮಂತ್ರಿಯಾಗಲಿಕ್ಕೂ ಕೂಡ ಆ ಕಾಲದ ಸಂದರ್ಭಗಳು ಕಾರಣ ಶ್ರೀ ವಿ ಪಿ ಸಿಂಗ್‌ರವರ ಸರ್ಕಾರಕ್ಕೆ ಬಿ ಜೆ ಪಿ ಯವರು ಏನು ತಮ್ಮ ಸಪೋರ್ಟ್ ಅನ್ನು withdraw ಮಾಡಿದರು ಆ ಕಾಲಕ್ಕೆ ಒಂದು ರಾಜಕೀಯ ಅಸ್ಥಿರತೆ ಈ ದೇಶದಲ್ಲಿ ಬರಬಾರದರು, communal fighting ಮೇಲೆ ಅದೇ issue ಮೇಲೆ ಮತ್ತೆ ಚುನಾವಣೆ ಆಗಬಾರದೆನ್ನುವ ದೃಷ್ಟಿಯಿಂದ ಅವರು ಕಾಂಗ್ರೆಸ್ಸಿಗರ ಸಪೋರ್ಟ್‌ನಿಂದ ಈ ದೇಶದ ಪ್ರಧಾನ ಮಂತ್ರಿಯಾದರು ಅವರ ಸಪೋರ್ಟ್‌ನಿಂದ ಆದ ಮಾತ್ರಕ್ಕೆ ಅವರು ಹೇಳಿದ ಪ್ರತಿಯೊಂದು ಮಾತನ್ನು ಅವರು ಒಪ್ಪಲಿಲ್ಲ ಬಹಳಷ್ಟು ಸಲ ಅವರು unreasonable conditions ಹೇರಿದರೂ ಕೂಡ ಅವರು ಒಪ್ಪಲಿಲ್ಲ ಅವೆಲ್ಲಾ ನಡೆಯುವುದಿಲ್ಲವೆಂದು ಕೊನೆಗೆ ಅವರು ಸರಳವಾಗಿ ರಾಜೀನಾಮೆ ಕೊಟ್ಟರು ಮತ್ತೆ ಯಾರಿಗೂ ಹೇಳಿಲ್ಲ, negotiations ಮಾಡಲಿಲ್ಲ ಏನು ಮಾಡಲಿಲ್ಲ

ಅವರು ಪ್ರಧಾನಮಂತ್ರಿ ಇದ್ದಾಗ ಪಾರ್ಲಿಮೆಂಟ್ ಡಿಸಾಲ್ವ್ ಆಯಿತು, ಕಾಂಗ್ರೆಸ್‌ರವರ ಸಪೋರ್ಟ್ ತೆಗೆದುಕೊಳ್ಳದೇ ಸ್ವತಃ ಅವರೇ ತಾವಾಗಿಯೇ ರಾಜೀನಾಮೆ ಕೊಟ್ಟರು ಆ ನಂತರ ಪಾರ್ಲಿಮೆಂಟ್ ಡಿಸಾಲ್ವ್ ಆಯಿತು ಅವರು ಚುನಾವಣೆ ಕಾಲದಲ್ಲಿ ಕರ್ನಾಟಕಕ್ಕೆ ಬಂದಿದ್ದರು, ಇನ್ನೂ seat adjustment ಆಗಿಲ್ಲ ಶ್ರೀ ಚಂದ್ರಶೇಖರ್‌ರವರು ದೇಶದ ಪ್ರಧಾನ ಮಂತ್ರಿಯಾಗಿದ್ದರು ಹಾಗೆಯೇ ಸಮಾಜವಾಧಿ ಜನತಾ ಪಾರ್ಟಿಯ ಅಧ್ಯಕ್ಷರು ಧುರೀಣರೂ ಕೂಡ ಆಗಿದ್ದರು ಶ್ರೀ ವಿ ಪಿ ಸಿಂಗ್‌ರವರ ಜನತಾದಳ, ಈ ಕಡೆ ಸಮಾಜವಾದಿ ಜನತಾ ಪಕ್ಷ, ದೇಶದಲ್ಲಿ ಇವರಿಬ್ಬರ ಹೆಜ್ಜೆ 1991ರ ಚುನಾವಣೆಯಲ್ಲಿ ಹೊಂದಾಣಿಕೆ ಆಗಲಿಲ್ಲ ಆದರೆ ಕರ್ನಾಟಕದಲ್ಲಿ ಮಾತ್ರ ಸಮಾಜವಾದಿ ಜನತಾ ಪಾರ್ಟಿ ಮತ್ತೆ ಜನತಾದಳದಲ್ಲಿ ಹೊಂದಾಣಿಕೆ ಆಯಿತು ಆಗ ಶ್ರೀ ರಾಮಕೃಷ್ಣ ಹೆಗಡೆಯವರು ಬಾಗಲಕೋಟೆಯಿಂದ ದೇವೇಗೌಡರು ಹಾಸನ ಜಿಲ್ಲೆಯಿಂದ ಸ್ಪರ್ಧಿಸಿದ್ದರು, ಅಗ ಪ್ರಚಾರದ ಸಲುವಾಗಿ ಮೈಸೂರು ಜಿಲ್ಲೆಗೆ ಬಂದಿದ್ದರು, ನಾನು ಪಕ್ಷದ ಅಧ್ಯಕ್ಷನಾಗಿದ್ದೆನು ದೇವೇಗೌಡರು ನಮ್ಮ ನಾಯಕರು, ಆಗ ಅವರು ಕೇಳಿದರು, ಏಕೆಂದರೆ ಇಡೀ ದೇಶದಲ್ಲಿ ಎಲ್ಲಿಯೂ ಹೊಂದಾಣಿಕೆಯಾಗುತ್ತಿಲ್ಲ ಮತ್ತು ವಿಶೇಷವಾಗಿ ವಿ ಪಿ ಸಿಂಗ್‌ರವನ್ನು ಸೋಲಿಸಿ ನಂತರ ಅವರ ಸರ್ಕಾರ ಬಿದ್ದ ಮೇಲೆ ಇವರು ಪ್ರಧಾನ ಮಂತ್ರಿಯಾಗಿದ್ದಾರೆ ಎಂದು ವೈರತ್ವ ಇತ್ತು ಅಂಥ ಕಾಲಕ್ಕೆ ವಿ ಪಿ ಸಿಂಗ್ ಅವರ ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಕೂಡದೆಂದು ಅವರು ವಿಚಾರವಿತ್ತು ಆದರೂ ಕೂಡ ಕರ್ನಾಟಕದಲ್ಲಿ ಎಸ್‌ಜೆಪಿಯವರ ಐದು ಸೀಟು, 23 ಸೀಟು ಜನತಾ ದಳದವರದು ಇತ್ತು ಆಗ ಚಂದ್ರಶೇಖರ್‌ರವರು ಮೈಸೂರಿನಲ್ಲಿ ಇನ್ನೂ ಪ್ರೋಗ್ರಾಮ್ ಶುರುವಾಗಲಿಕ್ಕೆ ತಡವಾಗಿತ್ತು, ನಾವು ದೇವೇಗೌಡರು ಇದ್ದಾಗ ಅವರಿಗೆ ಅಂದು Why your are begging for five seats Mr Gowda ಆಗ ಗೌಡರು ಅಂದರು, ನಮ್ಮ ರಾಜ್ಯದ ಪರಿಸ್ಥಿತಿ ಬೇರೆ ಇದೆ, ಇಡೀ ರಾಷ್ಟ್ರದಲ್ಲಿ ಜನತಾದಳ ಮತ್ತು ಎಸ್‌ಜೆಪಿ ನಡುವೆ ವೈರತ್ವ ಇದ್ದರೂ ಕೂಡ ನಾವು ಕರ್ನಾಟಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ ಕೊನೆಗೆ ಅವರು ಅದನ್ನು ಒಪ್ಪಿದರು ರಾಷ್ಟ್ರದ ಪ್ರಧಾನಿಯಾಗಿ ತಾವು ಹೇಳಿದ್ದನ್ನೆ ಕೇಳಬೇಕೆಂಬ ಒತ್ತಾಯ ಮಾಡಲಿಲ್ಲ ಕೊನೆಗೆ ಚುನಾವಣೆ ಆಯಿತು, ಸ್ಪರ್ಧಿಸಿ ನಾವು ಚುನಾವಣೆಯಲ್ಲಿ ಗೆದ್ದೆವು ಅಂದರೆ ಅವರ ವ್ಯಕ್ತಿತ್ವ ಹೇಗಿತ್ತು ಅಂದರೆ differences ಬಂದಾಗ ಅವರು ಒತ್ತಾಯ ಮಾಡುತ್ತಿರಲಿಲ್ಲ ಅವರು ಒತ್ತಾಯ ಮಾಡಿ ಕರ್ನಾಟಕದಲ್ಲಿ ಎಲ್ಲಾ ಸೀಟುಗಳನ್ನು ಸೇರಿಸಿ ಎಂದು ಹೇಳಬಹುದಾಗಿತ್ತು, ಆದರೆ ಅವರು ಹಾಗೆ ಮಾಡಲಿಲ್ಲ ಶ್ರೀ ವಿ ಪಿ ಸಿಂಗ್ ಪ್ರಧಾನಮಂತ್ರಿಯಾದಾಗ ಇವರು contest ಮಾಡುವವರಿದ್ದರು ಆಗ ಆ ನಡುವೆ ದೇವಿಲಾಲ್‌ರವರು ಆ contest

ಅನ್ನು avoid ಮಾಡಿದರು ಆಗ ಅವರಿಗೆ ಮೋಸವಾಯಿತು ಎಂದು ಅನೇಕ ಜನ ಹೇಳಿದರು ಚಂದ್ರಶೇಖರ್ ಅದಕ್ಕೆ ಉತ್ತರವಾಗಿ ಏನು ಹೇಳಿದರು, ಅಂದರೆ, "ಧೋಕಾ ದೇನಾ ಗುನಾ ಹೈ, ಧೋಕಾ ಖಾನಾ ಗುನಾ ನಹಿ ಹೈ" ಎಂದು ಯಾರಿಗಾದರೂ ಮೋಸ ಮಾಡುವುದು ಒಂದು ಅಫೆನ್ಸ್ ಇರಬಹುದು ಸ್ವತಃ ಮೋಸ ಹೋಗುವುದು ಯಾವುದೇ ಅಫೆನ್ಸ್ ಇಲ್ಲ ನಾನು ಮೋಸ ಹೋಗಿದ್ದೇನೆ, ಆದರೆ ಯಾರಿಗೂ ರಾಜಕೀಯದಲ್ಲಿ ಮೋಸ ಮಾಡಿಲ್ಲವೆಂದರು ಇಂಥ ಒಂದು ವ್ಯಕ್ತಿತ್ವದ ರಾಜಕಾರಣಿ ಅವರು ಒಂದೇ ಒಂದು ಪತ್ರಿಕೆಯಲ್ಲಿ, ಅಲ್ಲಿ ಇಲ್ಲ ಕಾಂಗ್ರೆಸ್ ಸಪೋರ್ಟ್ ತೆಗೆದುಕೊಂಡು ಚಂದ್ರಶೇಖರ್‌ರವರು ಪ್ರಧಾನಮಂತ್ರಿಯಾದರು ಕಾಂಗ್ರೆಸ್ಸಿಗರ ಜೊತೆ ಕೈ ಮಿಲಾಯಿಸಿದರು ಎನ್ನುವಂದ ಟೀಕೆಗಳು ಏನು ಆಗುತ್ತಿತ್ತು, ಕೆಲವೊಂದು ಸಲ ಅವರು ಅದಕ್ಕೆ ಒಂದು guilty conscious ಎಂದು ತಿಳಿದ್ದಿದ್ದರೂ ಮುಂದೆ ತಪ್ಪು ಏನೂ ಇಲ್ಲ ಅಂದಿನ ಪರಿಸ್ಥಿತಿಯಲ್ಲಿ ಅವರ ಸಪೋರ್ಟ್ ತೆಗೆದುಕೊಂಡು ಚಂದ್ರಶೇಖರ್‌ರವರು ಪ್ರಧಾನಮಂತ್ರಿಯಾಗಿದ್ದರು ಆದರೆ ಮುಂದೆ ಈ ದೇಶದಲ್ಲಿ ಹೊಸ ಎಕನಾಮಿಕ್ ಪಾಲಿಸಿ ಏನು ಪ್ರಾರಂಭವಾಯಿತು liberalization, globalization ಇದರ ವಿರುದ್ಧ ಚಂದ್ರಶೇಖರ್ ಹಾಗೂ ಜಾರ್ಜ್ ಫರ್ನಾಂಡೀಸ್ ಇವರಿಬ್ಬರು ಅದನ್ನು ವಿರೋಧ ಮಾಡಿ ಇಡೀ ದೇಶದಲ್ಲಿ ಅವರು ಯಾತ್ರಾ ತೆಗೆದರು

ದುರ್ದೈವದಿಂದ ಅವತ್ತು Responses ಸಿಗಲಿಲ್ಲ ಆದರೂ ದುಷ್ಪರಿಣಾಮಗಳು ಏನಾಗುತ್ತವೆ ಇವತ್ತು ಎಂದು ಅವರು ಹೇಳಿದ್ದರು ಅದೇನು ದುಷ್ಪರಿಣಾಮ ಆಗಿದೆ ಎಂದು ನಾವು ನೋಡುತ್ತಿದ್ದೇವೆ ಅಂತಹ ಒಬ್ಬ ರಾಜಕಾರಣಿ ನಮ್ಮ ಮಧ್ಯದಲ್ಲಿ ಇವತ್ತಿಲ್ಲ ಅಂತಹ ರಾಜಕಾರಣಿ ಇರಬೇಕಾಗುತ್ತಿತ್ತು ಏಕೆಂದರೆ, ನವು Formal ಆಗಿ ಯಾರಾದರೂ ಸತ್ತರು ಎಂದರೆ ತುಂಬಲಾರದ ಹಾನಿಯಾಯಿತು ಎಂದು ಎಲ್ಲರಿಗೂ ಅನ್ನುತ್ತೇವೆ ಆದರೆ, ತುಂಬಲಾರದ ಹಾನಿಯಾಗಿದ್ದು ಚಂದ್ರಶೇಖರ್ ಅವರ ಸಾವಿನಿಂದ ನಮಗೆ ಇವತ್ತು ತುಂಬಲಾರದ ಹಾನಿಯಾಗಿದೆ ಇಂತಹ ಸಂದರ್ಭದಲ್ಲಿ ನಾನು ಅವರ ಆತ್ಮಕ್ಕೆ ಶಾಂತಿ ಸಿಗಬೇಕೆಂದು ಕೋರಿ ತಾವು ತಂದಂತಹ Resolution ಅನ್ನು ಸಮರ್ಥನೆ ಮಾಡುತ್ತ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎನ್ ಚಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ ತಾವು ತಂದಂತಹ ಸಂತಾಪ ಸೂಚನೆಗೆ ಅನುಮೋದಿಸುತ್ತ ಕೆಲವು ವಿಚಾರಗಳನ್ನು ಮಾತನಾಡುತ್ತೇನೆ ಮಾನ್ಯ ಚಂದ್ರಶೇಖರ್ ಅವರು ಇನ್ನೂ ಇರಬೇಕಾಗಿತ್ತು ಅವರು ಬಹುಶಃ ಇದ್ದಿದ್ದರೆ ನಾವೆಲ್ಲಾ ಪಾವನರಾಗುತ್ತಿದ್ದೇವೆಂದು

ಕಾಣುತ್ತದೆ ನಿನ್ನೆ ಅವರ ಸಾವನ್ನು ಕೇಳಿದ ತಕ್ಷಣ ನಮ್ಮ ಸಂಬಂಧಿಕರೋ ಅಥವಾ ಹತ್ತಿರದ ಸ್ನೇಹಿತರು ಆಗಿದ್ದರೆ ಎಷ್ಟು ಅಗಾಧ ದುಃಖ ಆಗುತ್ತಿತ್ತೋ ಅಷ್ಟು ದುಃಖ ಆಗಿದೆ ಎಂದು ನಮಗೆ ಗೊತ್ತಿಲ್ಲದ ಹಾಗೆ ಬಂದ ಭಾವನೆ ಅವರ ವ್ಯಕ್ತಿತ್ವ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ ರಾಷ್ಟ್ರದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಂಡಿದ್ದು ಒಂದು ಕಡೆಯಾದರೆ, ಅಷ್ಟೊಂದು ಸರಳತೆ ಮತ್ತನ ಮಾನವ ಪ್ರೇಮಿಯನ್ನು ಕಳೆದುಕೊಂಡದ್ದು ಮತ್ತೊಂದು ಕಡೆ ಬಹುಶಃ ಎಲ್ಲರಿಗೂ ಆ ಪದವನ್ನು ಹೇಳಲಿಕ್ಕೆ ಅಸಾಧ್ಯ ಎನಿಸುತ್ತದೆ ಅಂತಹ ಒಂದು ವ್ಯಕ್ತಿತ್ವವನ್ನು ನಮ್ಮ ರಾಷ್ಟ್ರದಲ್ಲಿ ಇಟ್ಟುಕೊಂಡು, ಅದರಲ್ಲೂ ವಿಶೇಷವಾಗಿ ಅವರು ರಾಷ್ಟ್ರಮಟ್ಟದಲ್ಲಿ ಸಿದ್ಧಾಂತಗಳನ್ನು, ಹೋರಾಟಗಳನ್ನು ಮಾಡಿರುವುದು ಒಂದು ಕಡೆ ಆದರೆ, ಕರ್ನಾಟಕಕ್ಕೆ ಅವರದೇ ಆದ ಕೊಡುಗೆ ಹೆಚ್ಚು ಅವರ ರಾಜಕೀಯ ಹೋರಾಟದಲ್ಲಿ ಪ್ರತಿ ಹಂತದಲ್ಲೂ ಸಹ ಹೆಚ್ಚಿನ ಕೊಡುಗೆಯ ಪ್ರಭಾವ ಇದೆ ನಮ್ಮೆಲ್ಲರಿಗೂ ಸಹ ಅವರ ಪ್ರಭಾವ ಇದೆ ಇವತ್ತು ಕಾಂಗ್ರೆಸ್ಸೇತರ ಸರ್ಕಾರ ರಚನೆ ಆಗುವುದಕ್ಕೆ ಮತ್ತು ನಮಂತಹವರು ವಿಧಾನಸಭೆಯಲ್ಲಿ ನಿಂತು ಮಾತನಾಡುವುದಕ್ಕೆ ಸಾಧ್ಯವಾಗಿದೆ ಮಾನ್ಯ ದೇವೇಗೌಡರ ಹಾಗೂ ಅವರ ಸಂಪರ್ಕ ಮತ್ತು ಅವರ ಸಲಹೆ ಮಾರ್ಗದರ್ಶನದಿಂದಾಗಿ ನಾವೆಲ್ಲಾ ಇಲ್ಲಿರಲು ಕಾರಣವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಮಾನ್ಯ ಡಿ ಟಿ ಜಯಕುಮಾರ್ ಅವರು ಹೇಳಿದಂತೆ ನಾಯಕ ಸಮಾಜಕ್ಕೆ ಎಸ್ ಟಿ Notification ಮಾಡುವಂತಹ ಸಂದರ್ಭದಲ್ಲಿ ಮಾನ್ಯ ದೇವೇಗೌಡರ ಸ್ನೇಹ, ನಿಕಟತನ, ಅವರ ಮೇಲೆ ಎಷ್ಟು ಪ್ರಭಾವ ಬೀರಿ, Parliamentಗೆ ಹೋಗದೆ Ordinance ತಂದಿದ್ದಕ್ಕೆ ಇಡಿ ನಾಯಕ ವರ್ಗ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವಂತಹ ವಾತಾವರಣ ನಿರ್ಮಾಣವಾಯಿತು ಮತ್ತು ಅನುಕೂಲತೆಯನ್ನು ಪಡೆಯುವಂತಹ ಒಂದು ಅವಕಾಶವಾಯಿತು ಅಂತಹ ಅನೇಕ ಅವರ ಉದಾಹರಣೆಗಳು ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ ಮಾನ್ಯ ಹೆಗಡೆಯವರನ್ನು ಮುಖ್ಯಮಂತ್ರಿ ಮಾಡುವ ಸಂದರ್ಭದಲ್ಲೂ ಮಾನ್ಯ ದೇವೇಗೌಡ ಹಾಗೂ ಅವರಿಗೆ ಇದ್ದಂತಹ ಪ್ರೀತಿ ವಾತ್ಸಲ್ಯದಿಂದ ಅವರು, ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಿದರು ಎನ್ನುವುದನ್ನು ಅನೇಕ ನಾಯಕರು ಹೇಳಿದ್ದಾರೆ ಈ ರೀತಿ ಸಮಾಜವಾದಿ ಪಕ್ಷದ ಬೆಳವಣಿಗೆಯ ಬಗ್ಗೆ ಅವರು ಉತ್ತರ ಭಾರತದಲ್ಲಿ ತೆಗೆದುಕೊಂಡಂತಹ ಜವಾಬ್ದಾರಿಯನ್ನು ನಾವೆಲ್ಲಾ ನೆನೆಸಿಕೊಳ್ಳಬೇಕಾಗಿದೆ ಅವರನ್ನು ನಾವು ಕಳೆದುಕೊಂಡಿದ್ದರೂ, ಸಹ ಅವರ ಆಲೋಚನೆಯನ್ನು, ಅವರ ಚಿಂತನೆಯನ್ನು ಜೀವಂತವಾಗಿಟ್ಟರೆ ಬಹುಶಃ ಮುಂದಿನ ಪೀಳಿಗೆಯಲ್ಲಿ ಅಷ್ಟೋ ಇಷ್ಟೋ ರಾಷ್ಟ್ರದಲ್ಲಿ ಏನಾದರೂ ಒಂದು ಒಳ್ಳೆಯ ದಿನಗಳನ್ನು

ನೋಡಲು ಸಾಧ್ಯವಾಗುತ್ತದೆ ಈಗಾಗಲೇ ಅನೇಕರು ಮಾತನಾಡುತ್ತಾ, ನಾವು ಅವರ ಬಗ್ಗೆ ಮಾತನಾಡಲಿಕ್ಕೆ ಅರ್ಹತೆ ಇದೆಯೇ ಇಲ್ಲವೇ ಎಂದು ಹೇಳಿದರು ಇದು ವಾಸ್ತವ ಸತ್ಯವಾದರೂ ನಾವೆಲ್ಲರೂ ಸ್ವಲ್ಪವಾದರೂ ರೂಢಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ ಇವತ್ತು ದಲಿತರ ಬಗ್ಗೆ ಇರಬಹುದು, ಶೋಷಿತ ವರ್ಗಗಳ ಬಗ್ಗೆ ಇರಬಹುದು, ಯುವಕರ ಬಗ್ಗೆ ಕಾಳಜಿ ಇರಬಹುದು, ಅಂಗವಿಕಲರ ಕನಿಕರದ ವಿಚಾರ ಇರಬಹುದು, ಇವರ ಮೇಲೆಲ್ಲಾ ಇದ್ದಂತಹ ಒಂದು ಅಪಾರವಾದಂತಹ ಪ್ರೇಮ ಮತ್ತು ಶೋಷಿತ ವರ್ಗಕ್ಕೆ ಶಕ್ತಿ ತುಂಬತಕ್ಕಂತಹ ಕೆಲಸ ಏನು ಮಾಡಿದ್ದರೊ, ಅದು ಮಾನ್ಯ ಮುಖ್ಯಮಂತ್ರಿಗಳು ಇತ್ತೀಚಿನ ದಿನಗಳಲ್ಲಿ ಅಂಗವಿಕಲರ, ಶೋಷಿತರ ಬಗ್ಗೆ ಕಾಳಜಿ ಹಾಗೂ ಗ್ರಾಮ ವಾಸ್ತವ್ಯ ನೋಡಿದಾಗ, ಅವರದೇ ಪ್ರಭಾವವೇನೋ ಎಂದು ನನಗೆ ಭಾವನೆ ಬರುತ್ತದೆ ಈ ರೀತಿ ನಾವೆಲ್ಲಾ ರಾಷ್ಟ್ರದ ಶ್ರೇಷ್ಠ ವ್ಯಕ್ತಿಗಳನ್ನು ಕಳೆದುಕೊಂಡಾಗ ಈ ರೀತಿ ಒಂದು ದಿನ ಶ್ರದ್ಧಾಂಜಲಿ ಅರ್ಪಿಸಿ, ಅವರನ್ನು ಮತ್ತೆ ಮರೆಯುವುದಕ್ಕಿಂತ ಅವರ ವಿಚಾರ ಧಾರೆಗಳನ್ನು ಜೀವಂತವಾಗಿಡ ತಕ್ಕಂತಹ ಕಾರ್ಯಕ್ರಮಗಳನ್ನು ಮಾಡತಕ್ಕಂತಹದ್ದು ಸೂಕ್ತ ಎಂದು ಹೇಳಿ, ಅವರಿಗೆ ನಮ್ಮೆಲ್ಲ ಯುವಕರ ಪರವಾಗಿ ಮತ್ತೊಮ್ಮೆ ಶ್ರದ್ಧಾಂಜಲಿಯನ್ನು ಅರ್ಪಿಸಿ, ಸಂತಾಪ ಸೂಚನಾ ನಿರ್ಣಯವನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ನರಸಿಂಹ ನಾಯಕ್ (ರಾಜು) (ಸುರಪುರ) ಮಾನ್ಯ ಅಧ್ಯಕ್ಷರೆ, ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ್ ಅವರು ನಿಧನ ಹೊಂದಿರುವುದಕ್ಕೆ ನಮ್ಮೆಲ್ಲರಿಗೂ ಆಘಾತ ಉಂಟಾಗಿದೆ ಯುವಕರಿಗಂತೂ ಬಹಳ ನಷ್ಟವಾಗಿದೆ ದಿವಂಗತ ಚಂದ್ರಶೇಖರ್‌ರವರು Young Turk ಎಂದು ಹೇಳಿ ಪ್ರಸಿದ್ಧರಾಗಿದ್ದರು ಅವರ ಜೀವನ ಚರಿತ್ರೆ ಮತ್ತು ಇತಿಹಾಸವನ್ನು ಕೇಳಿದಾಗ ನಿಜಕ್ಕೂ ಬಹಳ ಸಂತೋಷವಾಗುತ್ತದೆ ಅವರು ಮಾಡುತ್ತಿದ್ದಂತಹ ಕೆಲಸ, ಅವರು ಮಾಡಿದಂತಹ ಹೋರಾಟದ ಮನೋಭಾವನೆ ಇವತ್ತು ನಮ್ಮ ವಯಸ್ಸು ಬಹಳ ಚಿಕ್ಕದಾಗಿರಬಹುದು ಅವರ ಹೋರಾಟಕ್ಕಿಂತ ನಮ್ಮ ವಯಸ್ಸು ಚಿಕ್ಕದಾಗಿರಬಹುದು ಆದರೆ, ಅವರ ಬಗ್ಗೆ ಸಾಕಷ್ಟು ಇತಿಹಾಸಗಳು ಮತ್ತು ಇತರ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇವೆ ಮತ್ತು ಹಲವಾರು ಜನರಿಂದ ಬಹಳಷ್ಟು ಕೇಳಿದ್ದೇವೆ ಇವತ್ತು ಅವರು ಪ್ರದಾನಮಂತ್ರಿಯಾಗಿ ಅವಧಿ ಎಷ್ಟು ಎನ್ನುವುದಕ್ಕಿಂತ ಮುಖ್ಯವಾಗಿ, ಆ ಅವಧಿಯಲ್ಲಿ ಎಷ್ಟು ಕೆಲಸ ಸಾಧಿಸಿದ್ದಾರೆನ್ನುವುದು ಬಹಳ ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿದೆ ಅದರಲ್ಲೂ ನಾನು ವಾಲ್ಮೀಕಿ ಜನಾಂಗದವನಾಗಿದ್ದು, ಅವರಿಗೆ ನಾನು ಶ್ರದ್ಧಾಂಜಲಿಯನ್ನು

ಅವರಿಗೆ ಅರ್ಪಿಸಲಿಲ್ಲ ಎಂದರೆ, ಎಲ್ಲಿ ನಮ್ಮ ಜನಾಂಗಕ್ಕೆ ಒಂದು ಅನ್ಯಾಯ ಮಾಡಿದಂತಾಗುತ್ತದೆ ಎಂದು ತಿಳಿದು, ನಾನು ಇವತ್ತು ಎದ್ದು ನಿಂತು ಮಾತನಾಡುತ್ತಿದ್ದೇನೆ 1984ನೇ ಇಸವಿಯಲ್ಲಿ ವಾಲ್ಮೀಕಿ ಜನಾಂಗವನ್ನು S T ವರ್ಗಕ್ಕೆ ಸೇರಿಸಬೇಕೆಂದು ಪ್ರಸ್ತಾವನೆ ಹೋಯಿತು ಹೋದಂತಹ ಸಂದರ್ಭದಲ್ಲಿ 1991ನೇ ಇಸವಿಯಲ್ಲಿ ಮಾನ್ಯ ಚಂದ್ರಶೇಖರ್ ಸಾಹೇಬರು ಅದಕ್ಕೆ ಅನುಮೋದನೆ ಕೊಟ್ಟರು ಕೋಲಾರದ ಒಂದು ಸಭೆಯಲ್ಲಿ ಬಂದಿದ್ದಾಗ, ಮಾನ್ಯ ದೇವೇಗೌಡರು ಹೋಗಿ ಅವರನ್ನು ಭೇಟಿಯಾದಾಗ, ತಾವು ದೆಹಲಿಗೆ ಬನ್ನಿ ಎಂದು ಹೇಳಿದರು ಮಾನ್ಯ ದೇವೇಗೌಡ ಸಾಹೇಬರು ಮತ್ತು ಹಲವಾರು ಮುಖಂಡರು ದೆಹಲಿಗೆ ಹೋಗಿ 1991ನೇ ಇಸವಿಯಲ್ಲಿ ಈ ಒಂದು ವಾಲ್ಮೀಕಿ ಜನಾಂಗ, ನಾಯಕ ಬರಬಹುದು, ಪರಿವಾರ ಬರಬಹುದು ಅಥವಾ ತಳವಾರ ಬರಬಹುದು ಈ ಒಂದು ವಾಲ್ಮೀಕಿ ಪಂಗಡವನ್ನು S T ವರ್ಗಕ್ಕೆ ಸೇರಿಸಿದರು ಅವರು ಮಾಡಿದಂತಹ ಒಂದು ಒಳ್ಳೆಯ ಕೆಲಸದಿಂದ ಇವತ್ತು ಕರ್ನಾಟಕದಲ್ಲಿ ಇರತಕ್ಕಂತಹ ಜನಾಂಗಕ್ಕೆ ಒಂದು ನೆಲೆ ಸಿಕ್ಕಿದೆ Reservationನಲ್ಲಿ ಒಂದು ಅವಕಾಶ ಸಿಕ್ಕಿದೆ ಮುಂದಿನ ವಿಧಾನಸಭೆಗಳಲ್ಲಿ Reservation ಪ್ರಕಾರ, ಸುಮಾರು 15 ಜನ S T ಶಾಸಕರು ಈ ಸಭೆಯಲ್ಲಿ ಕುಳಿತುಕೊಳ್ಳಬೇಕಾದರೆ, ಅವರ ಒಂದು ಆಶೀರ್ವಾದ ಮತ್ತು ದೇವೇಗೌಡರ ಆಶೀರ್ವಾದ ಎಂದರೆ ತಪ್ಪಾಗಲಾರದು ಇವತ್ತು ತಾವು ಸಂತಾಪ ಸೂಚನೆಯಲ್ಲಿ ಒಂದು ಒಳ್ಳೆಯ ಮಾತನ್ನು ಹೇಳಿದ್ದೀರಿ ಭಾರತ ಹಳ್ಳಿಗಳ ನಾಡಾಗಿದ್ದು, ರೈತರ ಏಳಿಗೆಯಾದರೆ ಮಾತ್ರ ದೇಶದ ಉದ್ಧಾರವಾಗುತ್ತದೆ ಎನ್ನುವ ಮನೋಭಾವ ಹೊಂದಿದ್ದ ಶ್ರೀಯುತರ ಹಳ್ಳಿಗಳ ಪರಿಸ್ಥಿತಿ ಅರಿಯಲು ಭಾರತ್ ಯಾತ್ರಾವನ್ನು ಕನ್ಯಾಕುಮಾರಿಯಿಂದ ದೆಹಲಿಯುವರೆಗೆ ಸುಮಾರು 4260 ಕಿ ಮೀ ಪಾದಯಾತ್ರೆಯನ್ನು ಕೈಗೊಂಡಿದ್ದರು ಎಂದು ಸಂತಾಪ ಸೂಚನೆಯಲ್ಲಿ ಹೇಳಿದ್ದೀರಿ ಇದನ್ನು ನೋಡಿದರೆ ನಮಗನ್ನಿಸುತ್ತದೆ ನಾವಂತೂ ಮಾನ್ಯ ಚಂದ್ರಶೇಖರ್ ಸಾಹೇಬರನ್ನು ಹತ್ತಿರದಿಂದ ನೋಡಿಲ್ಲ ಬರೇ ಸುದ್ದಿ ಮುಖಾಂತರ ಅವರ ವಿಚಾರಗಳನ್ನು ಕೇಳಿದ್ದೇವೆ ಆದರೆ, ಇವತ್ತು ನಮ್ಮ ಕರ್ನಾಟಕ ಚಂದ್ರಶೇಖರ್ ಸಾಹೇಬರನ್ನು ನೋಡುತ್ತಿದ್ದೇವೆ ಮಾನ್ಯ ಕುಮಾರಣ್ಣನವರ ಒಂದು ರೂಪದಲ್ಲಿ ಹಳ್ಳಿಯ ಒಂದು ಗ್ರಾಮ ವಾಸ್ತವ್ಯ ಹಾಗೂ ಹಲವಾರು ಕೆಲಸಗಳನ್ನು ಮುಂದುವರೆಸಲು ಅವರು ಹೊರಟಿದ್ದಾರೆ ನಿಜಕ್ಕೂ ನಮ್ಮೆಲ್ಲ ಯುವಕರಿಗೆ ಒಂದು ದಾರಿ ದೀಪವಾಗಬೆಕು ಅವರ ಒಂದು ಮಾರ್ಗದರ್ಶನ, ಅವರ ಒಂದು ಗಾಂಭೀರ್ಯತೆ ಇತ್ತು, ಅದನ್ನು ಯುವಕರು ಅಳವಡಿಸಿಕೊಂಡು ಹೋಗಬೇಕು ಇವತ್ತು ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ಹೇಳಿದರು ಅವರು ಗಡ್ಡ

ಬಿಟ್ಟು, ಒಂದು ಸಿದ್ಧಾಂತವನ್ನು ಇಟ್ಟುಕೊಂಡಿದ್ದರು ಎಂದು ಹೇಳಿದರು ಆ ಸಾಹೇಬರು ಒಂದು ಸಿದ್ಧಾಂತಕೋಸ್ಕರ ಗಡ್ಡ ಬಿಟ್ಟರೆ, ನಾವು ಈಗಿನ ಯುವಕರು ಹಲವಾರು Fashion ಗೋಸ್ಕರ ಗಡ್ಡ ಬಿಡುತ್ತೇವೆ ಅದನ್ನು ಬಿಟ್ಟು ನಾವು ಅವರ ಒಂದು ಒಳ್ಳೆಯ ಸಿದ್ಧಾಂತ ಮತ್ತು ಅವರ ಜೀವನ ಚರಿತ್ರೆ ಬಗ್ಗೆ ಹೆಚ್ಚು ತಿಳಿದುಕೊಳ್ಳಲು, ಒಂದು ಅಧ್ಯಯನ ಪೀಠವನ್ನು ಕರ್ನಾಟಕ ಸರ್ಕಾರ ರಚನೆ ಮಾಡಬೇಕು ಇವತ್ತು ನಮ್ಮ ಅಣ್ಣನವರು ಹೇಳಿದ ಪ್ರಕಾರ, ಬರೇ ಅವರ ಶ್ರದ್ಧಾಂಜಲಿ ಅರ್ಪಿಸಿ, ಮರೆಯುವುದರ ಬದಲು, ಅವರ ಜೀವನ ಚರಿತ್ರೆ Young Turk ಎಂದು ಯಾವ ರೀತಿಯ ಹೆಸರು ಬಂತು ಅವರ ಒಂದು ಉದ್ದೇಶಗಳೇನು ಎಂದು ಎಲ್ಲಾ ಯುವಕರಿಗೆ ತಿಳಿಯುವಂತಹ ಕೆಲಸ ಇವತ್ತು ಕುಮಾರಣ್ಣನವರ ಸರ್ಕಾರ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ ಇಂತಹ ಒಂದು ಮಹಾನ್ ವ್ಯಕ್ತಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾ, ತಮ್ಮ ಈ ಒಂದು ಸಂತಾಪ ಸೂಚನೆಗೆ ಅನುಮೋದನೆಯನ್ನು ಕೊಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ನಾನು ಬೆಂಬಲಿಸಿ, ಅನುಮೋದಿಸುತ್ತಾ, ದೇಶ ಇವತ್ತು ಒಬ್ಬ ಹಿರಿಯ ಮುತ್ಸದ್ದೀ ರಾಜಕಾರಣಿಯನ್ನು ಕಳೆದುಕೊಂಡು ದುಃಖದಲ್ಲಿದೆ ಮಾಜಿ ಪ್ರಧಾನಿಗಳಾದ ಶ್ರೀಯುತ ಚಂದ್ರಶೇಖರ್‌ರವರು ದೇಶ ಕಂಡಂಥ ಒಬ್ಬ ಅಪರೂಪದ ರಾಜಕಾರಣಿಯೆಂದು ಈ ಸದನ ಅವರನ್ನು ಕೊಂಡಾಡಿರುವುದನ್ನು ನೋಡಿದರೆ ನಮಗೆಲ್ಲರಿಗೂ ಮನವರಿಕೆಯಾಗುತ್ತದೆ ಅವರ ಜೊತೆ ಒಡನಾಡಿದವರೆಲ್ಲರ ಅನುಭವ ಕೇಳಿದರೆ ಅದು ನಮ್ಮ ಅನುಭವಕ್ಕೆ ಬರುತ್ತದೆ ಈ ದೇಶದ ಅನೇಕರು ನಾಯಕರಾಗುತ್ತಾರೆ, ಆದರೆ, ಅವರಿಗೆ ದೇಶದ ಜನರ ಜೀವನಾಡಿ ಗೊತ್ತಿಲ್ಲದೇ ನಾಯಕರಾಗಿ ರುವಂಥಾದ್ದನ್ನು ನಾವು ಅನೇಕ ಸಂದರ್ಭಗಳಲ್ಲಿ ಕಂಡಿದ್ದೇವೆ ಈ ದೇಶದ ಉದ್ದಗಲಕ್ಕೂ ಅವರು ತಮ್ಮ ಪಕ್ಷದ ಸಂಘಟನೆಗೋಸ್ಕರ, ಜನರ ಸಮಸ್ಯೆಯನ್ನು ಬಗೆಹರಿಸುವುದಕೋಸ್ಕರ, ಸರ್ಕಾರದ ಇತರ ಕಾರ್ಯಕ್ರಮಗಳ ಅನುಷ್ಠಾನಕೋಸ್ಕರ ದೇಶದ ಉದ್ದಗಲಕ್ಕ ಅವರು ಪ್ರವಾಸ ಮಾಡಿದರು ವ್ಯಕ್ತಿ–ವ್ಯಕ್ತಿಗಳ ಪರಿಚಯ ಮಾಡಿಕೊಂಡು ನಮ್ಮ ಭಾಗದ ಜನರ ವಿಶೇಷತೆಗಳೇನಿದೆ, ಇಲ್ಲಿನ ಸಂಸ್ಕೃತಿಗಳು ಹೇಗಿವೆ ಎನ್ನುವುದನ್ನು ಮನದಟ್ಟು ಮಾಡಿಕೊಂಡಿರುವ, ದೇಶ ಕಂಡಿರುವ ಒಬ್ಬ ಅಪರೂಪದ ರಾಜಕಾರಣಿ ಶ್ರೀಯುತ ಚಂದ್ರಶೇಖರ್‌ರವರು ಆಗಿದ್ದರು ಎಂಬುದು ನಮ್ಮೆಲ್ಲರ ಅನುಭವ ಹಾಗಾಗಿ, ಹಿರಿಯ ಮುತ್ಸದ್ಧಿಯನ್ನು ಕಳೆದುಕೊಂಡ ಸಂದರ್ಭದಲ್ಲಿ ಸಹಜವಾಗಿ ನಮ್ಮೆಲ್ಲರಿಗೂ ಅವರ

ಅಗಲುವಿಕೆಯಿಂದ ನೋವುಂಟಾಗುವುದು ಸಹಜ ಅವರು ಸ್ವರ್ಗಸ್ಥರಾಗಿರುವ ಈ ಸಂದರ್ಭದಲ್ಲಿ ನಮ್ಮೆಲ್ಲರ ಜವಾಬ್ದಾರಿಗಳನ್ನು ನಾವು ಹೆಚ್ಚು ಮಾಡಿಕೊಳ್ಳುವಂತಹ ಅವಕಾಶಗಳನ್ನು ಅಥವಾ ಆ ರೀತಿಯ ಒಂದು ಸಂಕಲ್ಪವನ್ನು ನಾವು ಈ ಸದನದ ಮೂಲಕ ಮಾಡಬೇಕಾಗಿದೆ ಇವತ್ತು ನಾವು ಜಯಪ್ರಕಾಶ್ ನಾರಾಯಣರವರ ಬಗ್ಗೆ ಮಾತನಾಡುತ್ತೇವೆ ಅಥವಾ ಮೊರಾರ್ಜಿ ದೇಸಾಯಿ, ಜಗಜೀವನರಾಂರವರ ಬಗ್ಗೆ ಹೇಳುತ್ತೇವೆ ಬೇರೆ ಬೇರೆ ಅನೇಕ ಹಿರಿಯರು ಯಾವ ಕನಸು ಕಂಡಿದ್ದರು, ಯಾವ ಸಮಾಜ ನಿರ್ಮಾಣದ ಕನಸು ಕಂಡಿದ್ದರು, ಭದ್ರ ದೇಶ ನಿರ್ಮಾಣದ ಯಾವ ಕನಸು ಕಂಡಿದ್ದರು, ಆ ಕನಸನ್ನು ನನಸು ಮಾಡುವುದಕ್ಕೆ ಬೇಕಾಗಿರುವಂತಹ ಜವಾಬ್ದಾರಿಯನ್ನು ಇವತ್ತು ನಾವೆಲ್ಲರೂ ನಮ್ಮ ಹೆಗಲಿಗೆ ಹೇರಿಕೊಳ್ಳಬೇಕಾಗಿದೆ ಆ ಜವಾಬ್ದಾರಿಯನ್ನು ಸ್ವೀಕರಿಸಿ ಮುಂದೆ ಹೋಗುವುದಕ್ಕೆ ನಮ್ಮನ್ನು ನಾವು ವೈಯಕ್ತಿಕವಾಗಿ ಆ ರೀತಿಯ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳಬೇಕಾದ ಅಗತ್ಯವಿದೆ ಹಿರಿಯರ ಆದರ್ಶಗಳನ್ನು ನಾವು ಎಷ್ಟು ಬೇಕಾದರೂ ಉದಾಹರಿಸಬಹುದು, ಹೇಳಬಹುದು ಆದರೆ, ಸ್ವತಃ ಆ ಆದರ್ಶಗಳನ್ನು ಪಾಲಿಸುವುದಕ್ಕೆ ನಮ್ಮಲ್ಲಿ ವಿಶೇಷವಾದ ಒಂದು ಶಕ್ತಿ ನಿರ್ಮಾಣವಾಗಬೇಕಿದೆ ಆ ಶಕ್ತಿ ನಮಗೆ ಬರಬೇಕೆಂದರೆ, ಇಂತಹ ಸಂದರ್ಭಗಳಲ್ಲಿ ನಾವೆಲ್ಲರೂ ಅದರ ಸಮರ್ಥನೆ ಮಾಡಿಕೊಳ್ಳುವಾಗ, ನಾವೆಲ್ಲರೂ ಮತ್ತೆ ಅವರ ಅಪೇಕ್ಷೆಗಳನ್ನು ಈಡೇರಿಸುತ್ತೇವೆ ಎನ್ನುವಂತಹ ಸಂಕಲ್ಪ ಕೈಗೊಂಡು ಆ ದಿಕ್ಕಿನಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾದಂತಹ ಮಹತ್ತರವಾದ ಸಂದರ್ಭ ಇದಾಗಿದೆಯೆಂದು ನಾನು ಭಾವಿಸಿಕೊಳ್ಳುತ್ತೇನೆ ನಾವೆಲ್ಲರೂ ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿರುವಂತಹವರು ಆದರೆ, ಆ ಸಂದರ್ಭದಲ್ಲಿ ಜಯಪ್ರಕಾಶ್ ನಾರಾಯಣ್, ಚಂದ್ರಶೇಖರ್, ವಾಜಪೇಯಿ, ಅಡ್ವಾಣಿಯವರಿಂದ ಹಿಡಿದು ಇನ್ನು ಅನೇಕ ನಾಯಕರುಗಳು ಈ ದೇಶದ ಯುವ ಸಮೂಹದ ಜೀವನದಲ್ಲಿ ಒಂದು ತಿರುವು ಕೊಡುವಂತಹ ವಿಶೇಷ ಪ್ರಯತ್ನ ಮಾಡಿದರು ಜೀವನದಲ್ಲಿ ತಿರುವುಗಳನ್ನು ಕೊಡುವುದಕ್ಕೆ ಎಲ್ಲಾ ಸಂದರ್ಭಗಳಲ್ಲೂ ಸಾಧ್ಯವಿರುವುದಿಲ್ಲ ಕೆಲವು ವಿಶೇಷ ಸಂದರ್ಭಗಳು ನಿರ್ಮಾಣವಾದಾಗ ಮತ್ತು ಅ ಸಂದರ್ಭಕ್ಕೆ ಯೋಗ್ಯವಾದ ರೀತಿಯಲ್ಲಿ ಸ್ಪಂದಿಸಿದಾಗ ಮಾತ್ರ ಅವರ ನಾಯಕತ್ವವನ್ನು ಉಳಿದವರು ಬೆಂಬಲಿಸುವುದಕ್ಕೆ ಮತ್ತು ಅವರ ಆದರ್ಶಗಳನ್ನು ಅನುಕರಣೆ ಮಾಡುವುದಕ್ಕೆ ಕಾರಣ ಕರ್ತರಾಗುತ್ತಾರೆ ಹಾಗಾಗಿ, ಅನೇಕ ಯುವಕರಿಗೆ ಈ ದೇಶದ ಬಗ್ಗೆ, ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ, ದೇಶಕ್ಕೆ ಸ್ವಾತಂತ್ರ್ಯ ಬಂದು ನಿಜವಾಗಿಯೂ ಅದರ ಫಲವನ್ನು ಜನತೆಗೆ ತಲುಪಿಸುವುದಕ್ಕಾದರೂ ಹಿರಿಯ ನಾಯಕರು, ಮುತ್ಸದ್ದಿಗಳು ಅನೇಕ

ಯುವಕರಿಗೆ ಪ್ರೇರಣೆ ಕೊಟ್ಟಿದ್ದಾರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಈ ದೇಶದಲ್ಲಿ ಪ್ರಜಾಪ್ರಭುತ್ವವಿಲ್ಲ, ವಾಕ್ ಸ್ವಾತಂತ್ರ್ಯವಿಲ್ಲ, ಪತ್ರಿಕಾ ಸ್ವಾತಂತ್ರ್ಯವಿಲ್ಲ, ಏನೂ ಇಲ್ಲವೆನ್ನುವಂತಹ ಸಂದರ್ಭಗಳಲ್ಲೂ ತಾವು ಈ ದೇಶದ ಉಳಿವಿಗೋಸ್ಕರವಾಗಿ, ಪ್ರಜಾಪ್ರಭುತ್ವದ ಈ ದೇಶದ ರಕ್ಷಣೆಗೋಸ್ಕರವಾಗಿ ಅವರೊಬ್ಬರು ಮಾತ್ರವಲ್ಲ, ಇಡೀ ಲಕ್ಷಾಂತರ ಯುವ ಸಮೂಹಕ್ಕೆ ನೇತೃತ್ವ ವಹಿಸಿಕೊಟ್ಟು, ಅವರ ಜೀವನದಲ್ಲಿ ಪರಿವರ್ತನೆ ತರುವಂತಹ ವಿಶೇಷ ಪ್ರಯತ್ನ ಮಾಡಿದರು ಇಂತಹ ಸಂದರ್ಭಗಳು ನಿರ್ಮಾಣವಾಗುವಂತಹ ಸಂದರ್ಭದಲ್ಲಿ ನಾವು ನಮ್ಮ ಮುಂದಿನ ಸವಾಲುಗಳೇನಿವೆ, ಅವುಗಳನ್ನು ಎದುರಿಸುವುದಕ್ಕೆ ಇಂತಹ ಹಿರಿಯರ ಆದರ್ಶಗಳನ್ನು ಬೆಳೆಸುವ ದಿಸೆಯಲ್ಲಿ ಸಂಕಲ್ಪರಾಗೋಣ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ದೇಶ ಇಂತಹ ಮುತ್ಸದ್ಧಿ ನಾಯಕರನ್ನು ಕಳೆದುಕೊಂಡಿರುವ ಈ ಸಂದರ್ಭದಲ್ಲಿ ಮತ್ತೆ ನಾವು ಈ ದೇಶದ ಏಕತೆ, ಅಖಂಡತೆ, ಸಮಗ್ರತೆಯನ್ನು ರಕ್ಷಿಸುವುದಕೋಸ್ಕರ, ಸಂಸ್ಕೃತಿ ಮತ್ತು ವಿಶೇಷತೆಯನ್ನು ಮತ್ತೊಮ್ಮೆ ಎತ್ತಿ ತೋರಿಸುವುದಕ್ಕೆ ಬೇಕಾಗಿರುವಂತಹ ಒಂದು ಸಂಕಲ್ಪ ಮಾಡೋಣವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ

ಅಧ್ಯಕ್ಷರು ಈಗ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದರೆ ದಿವಂಗತವಾದ ಚಂದ್ರಶೇಖರ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತಹ ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಮೃತರ ಗೌರವಾರ್ಥ ಸದನದ ಎಲ್ಲಾ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು

ಈಗ ಸಭೆಯ ಮುಕ್ತಾಯಗೊಂಡು ನಾಳೆ ಬೆಳಗ್ಗೆ 10 00 ಗಂಟೆಗೆ ಸೇರುವುದು

(ಸದನವು ಮಧ್ಯಾಹ್ನ 12 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 10ನೇ ಜುಲೈ ಮಾಹೆ 2007ರ ಮಂಗಳವಾರದಂದು ಬೆಳಗ್ಗೆ 10 00 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ

ಐದನೇ ಅದಿವೇಶನದ ಮುಂದುವರೆದ ಉಪವೇಶನ

ಶ್ರೀ ಕೃಷ್ಣ

ಆಧ್ಯಕ್ಷರು

ಶ್ರೀ ಎನ್ ವೈ ಗೋಪಾಲಕೃಷ್ಣ

ಉಪಾಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ಸೋಮವಾರ 10ನೇ ಜುಲೈ 2007 ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10-26 ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು/ಉಪಾಧ್ಯಕ್ಷರು

ಶ್ರೀ ಕೃಷ್ಣ

ರವರು ಪೀಠವನ್ನು ಅಲಂಕರಿಸಿದ್ದರು

1 ಪ್ರಶ್ನೋತ್ತರಗಳು

ಜನತಾದರ್ಶನ- ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 18 ನೆ ಲ ನರೇಂದ್ರಬಾಬು

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವರೇ?

ಅ) ಮಾನ್ಯಮುಖ್ಯಮಂತ್ರಿಯವರು ಪದಗ್ರಹಣ ಮಾಡಿದಾಗಿನಿಂದ ಇಲ್ಲಿಯವರೆಗೆ ಎಷ್ಟು ಜನತಾ ದರ್ಶನ ಏರ್ಪಡಿಸಲಾಗಿದೆ?

ಆ) ಈ ದರ್ಶನದಲ್ಲಿ ಬಂದ ಚರ್ಚೆಗಳ ಸಂಖ್ಯೆ ಎಷ್ಟು ಇದರಲ್ಲಿ ಎಷ್ಟು ವಿಲೇವಾರಿ ಮಾಡಲಾಗಿದೆ?

ಇ) ಅರ್ಜಿಗಳ ವಿಲೇವಾರಿ ಆಗದಿರಲು ಕಾರಣಗಳೇನು?

ಈ) ಈ ದರ್ಶನದಲ್ಲಿ ಅರ್ಜಿಗಳನ್ನು ಸಲ್ಲಿಸಿದ ವಿಕಲಚೇತನರು ಮತ್ತು ವಿಧವೆಯರಿಗೆ ಯಾವ ರೀತಿಯ ಅನುಕೂಲತೆಗಳನ್ನು ಮಾಡಲಾಗಿದೆ?

ಉತ್ತರ ಶ್ರೀ ಹೆಚ್ ಡಿ ಕುಮಾರಸ್ವಾಮಿ ಮುಖ್ಯಮಂತ್ರಿಗಳು

ಮುಖ್ಯಮಂತ್ರಿಗಳ ಗೃಹಕಛೇರಿ ಕೃಷ್ಣಾದಲ್ಲಿ ನಡೆದ ಜನತಾದರ್ಶನಗಳ ಸಂಖ್ಯೆ 13 ಮುಖ್ಯಮಂತ್ರಿಗಳು ರಾಜ್ಯಧಾನಿ ಹೊರಗೆ ಕೈಗೊಂಡ ಗ್ರಾಮವಾಸ್ತವ್ಯದ ಜನತಾ ದರ್ಶನಗಳ ಸಂಖ್ಯೆ 34 ಸದರಿ ದರ್ಶನಗಳಿಂದ ಬಂದ ಒಟ್ಟಾರೆ ಅರ್ಜಿಗಳ ಸಂಖ್ಯೆ 70 432 ಇದರಲ್ಲಿ ಸುಮಾರು ಶೇಕಡ 40 ರಷ್ಟು ಅರ್ಜಿಗಳು ವಿಲೇವಾರಿ ಆಗಿದೆ ಡಾ ಅಂಬೇಡ್ಕರ್ ಅಭಿವೃದ್ಧಿ ನಿಗಮ ಡಿ ದೇವರಾಜು ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಮಹಿಳಾ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಅಂಗವಿಕಲರ ಮತ್ತು ಹಿರಿಯರ ಕಲ್ಯಾಣ ನಿರ್ದೇನಾನಯ ಇವುಗಳ ಮೂಲಕ ವಿಸೇವಾರಿ ಆಗಬೇಕಾಗಿರುವ ಅರ್ಜಿಗಳನ್ನು ಬ್ಯಾಂಕುಗಳಿಗೆ ಕಳುಹಿಸಿದ್ದು, ಬ್ಯಾಂಕಿನ ಪರಿಶೀಲನೆ ಮತ್ತು ಮಂಜೂರಾತಿಯ ವಿವಿಧ ಹಂತಗಳಲ್ಲಿವೆ

ಹಲವು ಅರ್ಜಿಗಳ ಪ್ರಕರಣಗಳು ನ್ಯಾಯಾಲಯದಲ್ಲಿರುವುದರಿಂದ ವಿಲೇವಾರಿಗೆ ಸಾಧ್ಯವಾಗಿರುವುದಿಲ್ಲ ಬೆಂಗಳೂರಿನಲ್ಲಿ ಮನೆ/ನಿವೇಶನ ಕೋರಿರುವ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ ಬಿಡಿಎ ವತಿಯಿಂದ ಕಡುಬಡವರಿಗಾಗಿ ಮನೆಗಳ ನಿರ್ಮಾಣಕ್ಕೆ ವ್ಯವಸ್ಥೆ ಮಾಡಲಾಗಿದೆ ಸರ್ಕಾರಿ ಉದ್ಯೋಗ ಕೋರಿರುವ ಅರ್ಜಿಗಳು ವಿಲೇವಾರಿಗೆ ಸಾಧ್ಯವಾಗಿಲ್ಲ ಇವುಗಳಿಗೆ ಪರ್ಯಾಯವಾಗಿ ಸ್ವಯಂ ಉದ್ಯೋಗ ಹಾಗೂ ಸುವರ್ಣ ಕಯಕ ಉದ್ಯೋಗ ಶಿಕ್ಷಣ ಯೋಜನೆಯಡಿ ವ್ಯವಸ್ಥೆ ಮಾಡಲಾಗಿದೆ ವಿಕಲಚೇತನೆರಿಗೆ ಹಾಗೂ ವಿಧವೆಯರಿಗೆ ಜನತಾದರ್ಶನ ಪ್ರತಿಫಲವಾಗಿ ಮಾಸಿಕ ಭತ್ಯೆಯನ್ನು ರೂ 400/-ಕ್ಕೆ ಹೆಚ್ಚಿಸಲಾಗಿದೆ ವಿಕಲಚೇತನರಿಗೆ ಕಂಪ್ಯೂಟರ್ ತರಬೇತಿ ಹಾಗೂ ಉದ್ಯೋಗಾವಕಾಶದ ಹೊಸ ಯೋಜನೆ ರೂಪಿಸಲಾಗಿದೆ ಇದಲ್ಲದೆ ಅಂಗವಿಕಲರ ಸ್ವ-ಸಹಾಯ ಗುಂಪುಗಳ ಮೂಲಕವು ಅಂಗವಿಕಲರಿಗೆ ಉದ್ಯೋಗವಕಾಶ ಕಲ್ಪಿಸಲು ಸ್ಫೂರ್ತಿ ಸ್ವ-ಸಹಾಯ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಜಾರಿಗೆ ತರಲಾಗಿದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಮಧ 600 ಹುದ್ದೆಗಳನ್ನು ವಿಕಲಚೇತನರಿಗಾಗಿ ತುಂಬಲು ಕ್ರಮ ತೆಗೆದುಕೊಳ್ಳನಾಗಿದೆ ಸರ್ಕಾರದ ಸವಲತ್ತುಗಳ ವ್ಯಾಪಕ ಪರಿಚಯವನ್ನು ವಿಕಲಚೇತನರು ಮತ್ತು ವಿಧವೆಯರಿಗೆ ಮಾಡಲಾಗಿದೆ ಮಹಿಳಾ ಅಭಿವೃದ್ಧಿ ನಿಗಮದಿಂದ ಅರ್ಹ ವಿಧವೆಯರಿಗೆ ಉದ್ಯೋಗಿನಿ ಮುಂತಾದ ಯೋಜನೆಗಳಿಂದ ಸ್ವ-ಉದ್ಯೋಗ ಅವಕಾಶಗಳನ್ನು ಒದಗಿಸಲಾಗಿದೆ

ಶ್ರೀ ನೆ ಲ ನರೇಂದ್ರ ಬಾಬು ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಜನತಾದರ್ಶನವನ್ನು ಮಾಡುತ್ತಿರತಕ್ಕಂಥಾದ್ದು ರಾಜ್ಯದ ಜನತೆ ಹಿತದೃಷ್ಟಿಯಿಂದ ನಿಜವಾಗಿಯೂ ಶ್ಲಾಘನೀಯ ಆದರೆ ಇಲ್ಲಿ ಬರುತ್ತಿರತಕ್ಕಂತಹ ಸಮಸ್ಯೆಗಳ ಸಂಖ್ಯೆ ವಿಲೇವಾರಿ ಆಗುತ್ತಿರತಕ್ಕಂಥಾದ್ದು ನೋಡಿದಾಗ ಬಹುಶಃ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಜನ ಪ್ರತಿನಿಧಿಗಳಿಗೆ ಇರತಕ್ಕಂತಹ ಕಾಳಜಿ ಏಕೆ ಅಧಿಕಾರವರ್ಗದಲ್ಲಿ ಇಲ್ಲ ಎನ್ನತಕ್ಕಂಥಾದ್ದು ನಿಜವಾಗಿ6ಯೂ ಮನಸ್ಸಿಗೆ ನೋವಾಗುತ್ತದೆ ಇವತ್ತು 70,432 ಅರ್ಜಿಗಳಲ್ಲಿ ಸುಮಾರು ಶೇ 40 ರಷ್ಟು ಮಾತ್ರ ವಿಲೇವಾರಿ ಆಗಿವೆ ಎಂದು ಉತ್ತರ ಬಂದಿದೆ ಉಳಿದಿರತಕ್ಕಂತಹ ಶೇ 60 ರಷ್ಟು ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡುತ್ತಾರೆ? ಏಕೆ ವಿಳಂಬವಾಗುತ್ತಿದೆ, ಜನ ಹಳ್ಳಿಗಳಿಂದ ನಗರಗಳಿಗೆ ಬಂದು ಬಡವನ ದೂರು ದೊರೆತನಕ ಎನ್ನುವ ರೀತಿಯಲ್ಲಿ ವೃದ್ಧಾಪ್ಯ ವೇತನಕ್ಕೆ, ಅಂಗವಿಕಲರ ವೇತವಕ್ಕೆ ಬಂದಿರತಕ್ಕ ಅರ್ಜಿಗಳನ್ನು ನೋಡುತ್ತಿದ್ದರೆ, ಆಡಳಿತ ವರ್ಗದಲ್ಲಿರತಕ್ಕಂತಹ ಅಧಿಕಾರಿಗಳಿಗೆ ಆಸಕ್ತಿ ಇದೆಯಾ ಎಂದು ನನಗನ್ನಿಸುತ್ತದೆ ಅಂಗವಿಕಲರು ಅಂಗಲಾಚುತ್ತಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ರೆಡ್ರೆಸರ್‌ಗೆ ಸಂಬಂಧಪಟ್ಟ

ಹಾಗೆ ಪ್ರತ್ಯೇಕವಾದ ಬಾಡಿಯನ್ನು ಫಾರಂ ಮಾಡುತ್ತೇವೆ ಎನ್ನತಕ್ಕಂಥಾದ್ದು ಹೇಳಿದ್ದರು ಮಾನ್ಯ ಮುಖ್ಯಮಂತ್ರಿಗಳು ಸಹಿ ಹಾಕಿ ಕಳುಹಿಸಿದ್ದನ್ನು ಅಧಿಕಾರಿಗಳು post man ತರಹ post ಮಾಡುತ್ತಾರೆ ಹೊರತು ವಿಲೇವಾರಿ ಆಯಿತಾ ಎಂದು ಆಗಿಂದಾಗ್ಗೆ ನೋಡುವುದಕ್ಕೆ ಯಾವ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಂದು ದಯವಿಟ್ಟು ತಿಳಿಸಬೇಕು 400 ರೂಪಾಯಿ ಹೆಚ್ಚಳಕ್ಕೆ ಸಂಬಂಧಪಟ್ಟ ಹಾಗೆ ಉತ್ತರಗಳನ್ನು ಕೊಟ್ಟಿದ್ದಾರೆ, ಇದು ಯಾವಾಗಿನಿಂದ ಅನುಷ್ಠಾನಕ್ಕೆ ಬರುತ್ತದೆ, old age pension ಮತ್ತು widow pension ಮತ್ತು ಅಂಗವಿಕಲರಿಗೆ BPLಕಾರ್ಡ್ ಕಡ್ಡಾಯ ಇರುವುದನ್ನು ಇನ್ನೂ ಕಡ್ಡಾಯ ಮಾಡುತ್ತಿದ್ದಾರೆ ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಮೊರೆ ಹೋಗುತ್ತೇನೆ ಇದೇ ವಿಧಾನ ಸಭೆಯಲ್ಲಿ ಇದೇ ಮುಖ್ಯ ಮಂತ್ರಿಗಳು BPL card ಕಡ್ಡಾಯ ಮಾಡುವುದಿಲ್ಲವೆಂದು ಹೇಳಿದ್ದರು ದಯವಿಟ್ಟು ಅದಕ್ಕೆ ಉತ್ತರವನ್ನು ಹೇಳಬೇಕು

ಅಧ್ಯಕ್ಷರು. ಸಂಕ್ಷಿಪ್ತವಾಗಿ ಕೇಳಿ ನಾನು ಆಗಲೇ ಅವತ್ತು ತಿಳಿಸಿದ್ದೆ, ಒಂದು ಗಂಟೆಗೆ ನಾನು ಪ್ರಶ್ನೋತ್ತರವನ್ನು ನಿಲ್ಲಿಸುತ್ತೇನೆ ಎಷ್ಟು ಲ್ಯಾಪ್ಸ್ ಆಗುತ್ತದೆ ಆಗಲಿ ತರಹ ನೀವು ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಮುಗಿಸುವುದಕ್ಕೆ ಸಾಧ್ಯವಗುವುದಿಲ್ಲ

ಶ್ರೀ ನೆ ಲ ನರೇಂದ್ರ ಬಾಬು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ತಮ್ಮ ಮುಖೇನ ಕೇಳುವುದೇನೆಂದರೆ, ಕಡ್ಡಾಯವಾಗಿರುವುದರಿಂದ ಪ್ರತಿ ಬಾರಿ ಸಹ ಜನಗಳು ಪನಪ್ರತಿನಿಧಿಗಳ ಹತ್ತಿರ, ಮುಖ್ಯಮಂತ್ರಿಗಳ ಹತ್ತಿರ ಮತ್ತು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಹೋಗಿ ಅಂಗಲಾಚತಕ್ಕಂತಹ ಸ್ಥಿತಿ ಇದೆ ಇದನ್ನು ಕಡ್ಡಾಯವಾಗಿ ತೆಗೆದು ಹಾಕಿರುವುದರ ಬಗ್ಗೆ ಆದೇಶ ಹೊರಡಿಸಿದ್ದಾರಾ ಎಂದು ಸ್ಪಷ್ಟೀಕರಣ ಕೊಟಬೇಕು ಮತ್ತು redresser cell ಎನ್ನತಕ್ಕಂಥಾದ್ದು ಜಿಲ್ಲಾವಾರು ಅಥವಾ ಕ್ಷೇತ್ರಾವಾರು ಸಂಬಂಧಪಟ್ಟ ಅಧಿಕಾರಿಗಳು ಏನಾದರೂ ವ್ಯವಸ್ಥೆಯನ್ನು ಮಾಡದೆ ಹೋದರೆ, ಪ್ರತಿಯೊಂದಕ್ಕೂ ಮಾನ್ಯ ಮುಖ್ಯಮಂತ್ರಿಗಳ ಬಳಿ ಬರತಕ್ಕಂಥಾದ್ದು ನಿಲ್ಲಿಸುವುದಕ್ಕಾಗುವುದಿಲ್ಲ ಉಳಿದಿರತಕ್ಕಂತಹ ಶೇ 60ರಷ್ಟು ಅರ್ಜಿಗಳನ್ನು ಹೇಗೆ ವಿಲೇವಾರಿ ಮಾಡುತ್ತಾರೆ ಇದರ periodical review ಯಾರು ಮಾಡುತ್ತಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಉದ್ದೇಶದಿಂದ ಇದನ್ನು ಮಾಡಿ ಸಾಕಷ್ಟು ಶ್ರಮ ಪಡುತ್ತಿದ್ದಾರೆ ಆದರೆ subsequent stage ನಲ್ಲಿ ಏಕೆ ಈ ಕೆಲಸ ಆಗುತ್ತಿಲ್ಲ ಎನ್ನುವುದರ ಬಗ್ಗೆ ಉತ್ತರ ಕೊಡಬೇಕು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ಒಂದು ಬೇರೆ ಸುದೀರ್ಘವಾದ ಚರ್ಚೆ ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ ಮಾನ್ಯ ನರೇಂದ್ರ ಬಾಬುರವರು ಜನತಾದರ್ಶನದ ಕಾರ್ಯಕ್ರಮದ ಬಗ್ಗೆ ಏನು ವಿವರಗಳನ್ನು ಕೇಳಿದ್ದಾರೆ, ಅವರು ತೋರಿಸಿರತಕ್ಕಂತಹ ಕಾಳಜಿಗೆ ಅವರಿಗೆ ಈ ಸಂದರ್ಭದಲ್ಲಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ನಾನು ಈಗಾಗಲೇ ಏನು ಉತ್ತರಗಳನ್ನು ಒದಗಿಸಿದ್ದೇನೆ, 70,000 ಅರ್ಜಿಗಳಲ್ಲಿ ನಾನು ಜನತಾದರ್ಶನದ ಕಾರ್ಯಕ್ರಮಗಳನ್ನು ಬೆಂಗಳೂರು ನಗರದಲ್ಲಿ 13 ಬಾರಿ ಮಾಡಿತರಕ್ಕಂಥಾದ್ದು, ಮತ್ತು ಗ್ರಾಮ ವಾಸ್ತವ್ಯದ ಕಾರ್ಯಕ್ರಮದ ಸಂದರ್ಭದಲ್ಲಿ ಎಲ್ಲಾ ಗ್ರಾಮಗಳಲ್ಲಿ ಏನು ಅರ್ಜಿಗಳನ್ನು ಸ್ವೀಕಾರ ಮಾಡಿದ್ದೇನೆ, ಅದರ ವಿವರಗಳನ್ನು ಇಲ್ಲಿ ಸಂಪೂರ್ಣವಾಗಿ ಒದಗಿಸಿದ್ದೇನೆ ಇವತ್ತು ಈ ರೀತಿಯ ಕಾರ್ಯಕ್ರಮವನ್ನು ತರುವುದರ ಮುಖಾಂತರ ಸನ್ಮಾನ್ಯ ದೇವೇಗೌಡರು 1995ನೇ ಇಸವಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಾಗ, ಅವರು ಒಂದು ರೀತಿಯ ಜನತಾದರ್ಶನವನ್ನು ಮಾಡಿದ್ದರು ಮಾನ್ಯ ಎಸ್ ಎಂ ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರು ಕೂಡ ಸ್ವಲ್ಪ ದಿವಸ ಜನತಾದರ್ಶನ ಕಾರ್ಯಕ್ರಮವನ್ನು ಮಾಡಿದ್ದರು ಅವರುಗಳಿಗೂ ಈ ಸಂದರ್ಭದಲ್ಲಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಇತ್ತೀಚಿನ ಜನತಾದರ್ಶನ ಕಾರ್ಯಕ್ರಮದ ಪರಿಣಾಮ ಏನು ಎನ್ನುವುದರ ಬಗ್ಗೆ ಈಗಾಗಲೇ ಏನು ವಿವರಗಳನ್ನು ಒದಗಿಸಿದ್ದೇವೆ, ಸುಮಾರು 40% ಆ ಒಂದು ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕ ಅಹವಾಲುಗಳಿಗೆ ಸರ್ಕಾರ ಸ್ಪಂದಿಸಿದೆ, ಇದರಲ್ಲಿ ಬೆಂಗಳೂರು ನಗರದಲ್ಲಿ ಜನತಾದರ್ಶನವನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಸುಮಾರು 33,970 ಅರ್ಜಿಗಳು ಬಂದಿರತಕ್ಕಂಥಾದ್ದು, ಮತ್ತು ಗ್ರಾಮವಾಸ್ತವ್ಯ ಮಾಡುವ ಕಾರ್ಯಕ್ರಮದಲ್ಲಿ 36,462 ಅರ್ಜಿಗಳು ಏನು ನನ್ನ ಮುಮದೆ ಕೊಟ್ಟಿದ್ದಾರೆ ಅದರಲ್ಲಿ ಶೇ 40% ತಕ್ಷಣದಲ್ಲಿಯೇ ಏನು ಪರಿಹಾರವನ್ನು ಒದಗಿಸಿದ್ದೇವೆ ಬೆಂಗಳೂರು ನಗರದಲ್ಲಿ ಸುಮಾರು 15ರಿಂದ 20,000 ಅರ್ಜಿಗಳನ್ನು ಬೆಂಗಳೂರಿನ ಮನೆಗಳು ಮತ್ತು ಹೊರ ಹಳ್ಳಿಗಳ ಮನೆಗಳವರು ಅರ್ಜಿಗಳನ್ನು ಕೊಟ್ಟಿದ್ದಾರೆ ಜನತಾದರ್ಶನದ ಕಾರ್ಯಕ್ರಮಗಳ ಬಗ್ಗೆ ಮತ್ತು ಗ್ರಾಮ ವಾಸ್ತವ್ಯದ ಬಗ್ಗೆ ಬಹಳಷ್ಟು ಸದಸ್ಯರುಗಳು ಮಾತನಾಡಿದ್ದಾರೆ ಮೊನ್ನೆ ಪ್ರವಾಹದ ವಿಷಯದಲ್ಲಿ ಈ ಸದನದ ಹಿರಿಯ ಸದಸ್ಯರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಪ್ರವಾಹ ಪೀಡಿತ ಸಮಸ್ಯೆಗಳಿಗಿಂತ ಹೆಚ್ಚಾಗಿ ಗ್ರಾಮ ವಾಸ್ತವ್ಯದ ಬಗ್ಗೆ ಚರ್ಚೆ ಮಾಡಿದ್ದಾರೆ ನಾನು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಅದರ ಬಗ್ಗೆ ವಿವರವಾದ ವಿವರಣೆಯನ್ನು ಕೊಡಲಿಕ್ಕೆ ಸಿದ್ದನಿದ್ದೇನೆ ಇವತ್ತು ಜನತಾದರ್ಶನದ

ಕಾರ್ಯಕ್ರಮದಲ್ಲಿ ಎರಡು ಉದಾಹರಣೆಗಳನ್ನು ಕೊಡುತ್ತೇನೆ ಹಲವಾರು ವಿಷಯಗಳ ಬಗ್ಗೆ ಉದಾಹರಣೆಗಳನ್ನು ಕೊಡಬಲ್ಲೆ ಪಾಪ ಸಿದ್ದರಾಮಯ್ಯನವರು ಇಲ್ಲಿ ಕೂತಿಲ್ಲ ಅಹಿಂದಾ ಸಮಾವೇಶಗಳನ್ನು ಮಾಡುವುದರ ಮುಖಾಂತರ ಸಂಘಟನೆ ಮಾಡುತ್ತಿದ್ದಾರೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ ಒಂದು ಬಾರಿ ತುಮಕೂರು ಜಿಲ್ಲೆಯಿಂದ ನಾಲ್ಕು ಜನ ಮಕ್ಕಳು ಜನತಾ ದರ್ಶನದ ಕಾರ್ಯಕ್ರಮಕ್ಕೆ ಬಂದರು ಕೊನೇ ಹಂತದಲ್ಲಿ ನಾನು ಅವರಿಗೆ ಭೇಟಿ ಆದಂತಹ ಸಂದರ್ಭದಲ್ಲಿ ಅವರಿಗೆ ತಂದೆ ತಾಯಿಗಳಿಲ್ಲ ತಂದೆ ತೀರಿಕೊಂಡ ಸಂದರ್ಭದಲ್ಲಿ ಮೊದಲನೇ ಮಗನ ವಯಸ್ಸು 10 ವರ್ಷ ಅವನ ಜೊತೆಯಲ್ಲಿ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದಾನೆ, ನಾಲ್ಕು ಜನರೂ ನನ್ನ ಮುಂದೆ ಬಂದು ಜನತಾ ದರ್ಶನದ ಕಾರ್ಯಕ್ರಮದಲ್ಲಿ ಅರ್ಜಿಯನ್ನು ಕೊಟ್ಟರು ಅವನು 10ನೇ ವರ್ಷಕ್ಕೆ ಆ ಮೂರು ಜನರನ್ನು ಸಾಕತಕ್ಕಂತಹ ಒಂದು ದುಡಿಮೆಯನ್ನು ಏನು ಪ್ರಾರಂಭ ಮಾಡಿದ, ಅವನು ಗಾರೆ ಕೆಲಸಕ್ಕೆ ಹೋಗತಕ್ಕಂತಹ ಸಂದರ್ಭದಲ್ಲಿ ಅವನ ಆರೋಗ್ಯ ಸಂಪೂರ್ಣ ಹಾಳಾಗಿ, ಆವನು ರಕ್ತ ವಾಮಿಟ್ ಮಾಡತಕ್ಕಂತಹ ಸಂದರ್ಭ ನನ್ನ ಮುಂದೆ ಅವನು ವ್ಯಕ್ತಪಡಿಸಿದ ನಾನು ಅವನಿಗೆ ಕೃಷ್ಣದಲ್ಲಿ ಕೂರಿಸಿ ಊಟದ ವ್ಯವಸ್ಥೆ ಮಾಡಿ ಸಾಯಂಕಾಲ ಅವನಿಂದ ಸಂಪೂರ್ಣವಾದ ಮಾಹಿತಿಯನ್ನು ಪಡೆದೆ ಆ ಮಾಹಿತಿಯನ್ನು ಪಡೆಯತಕ್ಕಂತಹ ಸಂದರ್ಭದಲ್ಲಿ ಅವನು ಕುರುಬ ಸಮಾಜಕ್ಕೆ ಸೇರಿದಂತಹ ಹುಡುಗ ಅವನ ತಂಗಿ 10ನೇ ತರಗತಿಯಲ್ಲಿ ಸುಮಾರು 85% ಅಂಕಗಳನ್ನು ಪಡೆದಿದ್ದಾಳೆ ಆ ಹೆಣ್ಣು ಮಗಳಿಗೆ ಡಿಪ್ಲೊಮಾದಲ್ಲಿ ಸೀಟು ಸಿಕ್ಕಿತ್ತು ನಾನು ಸರ್ಕಾರಿ ವಸತಿ ನಿಲಯದಲ್ಲಿ ಸೀಟು ಕೊಡಿಸುತ್ತೇನೆ ಎಂದು ಹೇಳಿದಾಗ, ಆ ಹೆಣ್ಣು ಮಗಳು ಹೋಗುವುದಕ್ಕೆ ಇಷ್ಟಪಡಲಿಲ್ಲ ತಂದೆ ತಾಯಿಗಳನ್ನು ಕಳೆದುಕೊಂಡು ನಾವು ನಾಲ್ಕು ಜನ ಏನು ಜೀವನ ಮಾಡುತ್ತಿದ್ದೇವೆ, ನಾವು ಒಟ್ಟಿಗೆ ಇರಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ ಏನಾದರೂ ಸೌಕರ್ಯ ಕೊಡಿ ಎಂದು ಹೇಳಿದರು ಆ ಹೆಣ್ಣು ಮಗಳು ಲೈಟ್ ಕಂಬದ ಬೆಳಕಿನಲ್ಲಿ ಓದಿರತಕ್ಕಂಥಾದ್ದು ಆ ಕುಟುಂಬಕ್ಕೆ ಮನೆ ಇಲ್ಲ ಯಾರೋ ಕೊಟ್ಟಿರತಕ್ಕಂತಹ ಒಂದು ಗುಡಿಸಲಿನಲ್ಲಿ ವಾಸವಾಗಿದ್ದರು ಅವರಿಗೆ 48 ಗಂಟೆಗಳಲ್ಲಿ ತುಮಕೂರು ನಗರದಲ್ಲಿ ಒಂದು ಮನೆಯನ್ನು ಕೊಟ್ಟು, ತಂಗಿಯ ಮದುವೆಗೆ 10,000 ರೂಪಾಯಿಗಳಷ್ಟು ಹಣವನ್ನು ಕೊಟ್ಟು, ಆ ಹೆಣ್ಣು ಮಗಳ ಓದಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಟ್ಟು, ಇವನು ಏನು ಗಾರೆ ಕೆಲಸ ಮಾಡತಕ್ಕಂತಹ ಹುಡುಗನಿಗೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕೆಲಸವನ್ನು ಕೊಡಿಸುವುದರ ಮುಖಾಂತರ ಆ ಕುಟುಂಬಕ್ಕೆ ಏನು ಅನುಕೂಲಗಳನ್ನು ಮಾಡಿ ಕೊಟ್ಟಿದ್ದೇವೆ ಅದರ ಒಂದು ಉದಾಹರಣೆಯನ್ನು

ಕೊಡುತ್ತಿದ್ದೇನೆ ಸಾವಿರಾರು ಉದಾಹರಣೆಗಳನ್ನು ಕೊಡಬಲ್ಲೆ ಜನತಾದರ್ಶನ ಕಾರ್ಯಕ್ರಮದಲ್ಲಿ ನಾನು ಪ್ರಚಾರಕ್ಕಿಂತ ಹೆಚ್ಚಾಗಿ ಬೆಳಿಗ್ಗೆ 9 ಗಂಟೆಗೆ ಹೋದರೆ, ರಾತ್ರಿ 11 ಗಂಟೆಯವರೆಗೆ ನಿಂತು ಜನರ ಸಮಸ್ಯೆಗಳನ್ನು ಆಲಿಸತಕ್ಕಂತಹ ಒಂದು ಹೊಸ ವ್ಯವಸ್ಥೆಯನ್ನು ಏನು ಈ ರಾಜ್ಯದಲ್ಲಿ ತಂದಿದ್ದೇನೆ ಇದನ್ನು ಪರಿಣಾಮಕಾರಿಯಗಿ ಮಾಡತಕ್ಕಂಥಾದ್ದಕ್ಕೆ, ಜನಸಾಮಾನ್ಯರ ನೋವಿಗೆ ಸ್ಪಂದಿಸತಕ್ಕಂತಹ ಏನು ಕಾರ್ಯಕ್ರಮವನ್ನು ತಂದಿದ್ದೇವೆ ಅದರ ಬಗ್ಗೆ ವಿವರವಾದ ವರದಿಯನ್ನು ಕೊಟ್ಟಿದ್ದೇನೆ ಸರ್ಕಾರವೇ ನೇರವಾಗಿ ಎಲ್ಲರಿಗೂ ಉದ್ಯೋಗವನ್ನು ಕೊಡಿಸುವುದಕ್ಕೆ ಆಗುವುದಿಲ್ಲ ಇದರ ಜೊತೆಗೆ ಮನೆಗಳನ್ನು ಕೊಡಿಸುವ ವಿಚಾರದಲ್ಲಿ ಈಗಿರತಕ್ಕಂಥ ವ್ಯವಸ್ಥೆಯೊಳಗೆ ನಾನು ಬೆಂಗಳೂರು ನಗರದಲ್ಲಿ ಬಿ ಡಿ ಎ , ಹೌಸಿಂಗ್ ಬೋರ್ಡ್ ಮತ್ತು ಕೊಳಚೆ ನಿರ್ಮೂಲನಾ ಮಂಡಳಿಗಳು ಹೊಸ ನೀತಿಯನ್ನು ತರಬೇಕು ಮತ್ತು ಮನೆಗಳನ್ನು ಬಡವರಿಗೆ ಕೊಡಬೇಕು ಎಂದು ಈಗಾಗಲೇ ಇವೊತ್ತೇನು ಬೆಂಗಳೂರಿನಲ್ಲಿ ಕೆನವು ಸರ್ಕಾರಿ ಭೂಮಿಗಳನ್ನು ವಶಪಡಿಸಿಕೊಂಡ ನಂತರ ಬಿ ಡಿ ಎ ಗೆ 350 ಎಕರೆ ಭೂಮಿಯುನ್ನು ವರ್ಗಾಯಿಸತಕ್ಕಂಥ ಕೆಲಸವನ್ನೇನು ಮಾಡಿದ್ದೇವೆ, ಅಲ್ಲಿ ಬಡವರು ಮನೆಗಾಗಿ ಅರ್ಜಿಗಳನ್ನು ಏನು ಕೊಟ್ಟಿದ್ದಾರೆ ಅಂಥವರಿಗಾಗಿ ಮನೆಗಳನ್ನು ಕಟ್ಟತಕ್ಕಂಥದ್ದಕ್ಕೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ ಅದೇ ರೀತಿ ಇವೊತ್ತು ಅಂಗವಿಕಲರ ಬಗ್ಗೆ ವಿಶೇಷವಾಗಿ ನರೇಂದ್ರಬಾಬುರವರು ಕೇಳುತ್ತಿದ್ದರು ಈಗಾಗಲೇ 600 ಜನ ಅಂಗವಿಕಲರಿಗೆ ಕೆ ಪಿ ಟಿ ಸಿ ಎಲ್, ಸಂಸ್ಥೆಯಿಂದ ಉದ್ಯೋಗವನ್ನು ಕೊಡತಕ್ಕಂಥದ್ದಕ್ಕೆ ಅರ್ಜಿಗಳನ್ನು ಏನು ಕರೆದಿದ್ದೇವೆ ಅದರಲ್ಲಿ ಸಂಪೂರ್ಣವಾಗಿ 600 ಜನ ಅಂಗವಿಕಲರಿಗೇ ಉದ್ಯೋಗವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಆದೇಶ ಮಾಡಿದ್ದೇವೆ ಅದೇ ರೀತಿ ನಮ್ಮ ಸರ್ಕಾರದ ಆಯವ್ಯಯವನ್ನು ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ, ಈ ಜನತಾ ದರ್ಶನ ಕಾರ್ಯಕ್ರಮದಲ್ಲಿ ವಿಧವೆಯರು, ಅಂಗವಿಕಲರು ಮತ್ತು ವಯಸ್ಸಾಗಿರತಕ್ಕಂಥವರು ಬಂದು ನನ್ನ ಮುಂದೆ ತಮ್ಮ ನೋವುಗಳನ್ನು ಹೇಳಿಕೊಂಡಿದ್ದರು ಆ ಒಂದು ಹಿನ್ನೆಲೆಯೊಳಗೆ ಈ ವರ್ಷದಿಂದ ಅವರಿಗೆ 400 ರೂಪಾಯಿಗಳ ಮಾಸಾಶವನ್ನು ಕೊಡುವುದಕ್ಕೆ ಏನು ಕಾರ್ಯಕ್ರಮವನ್ನು ನಾವು ಪ್ರಾರಂಭ ಮಾಡಿದ್ದೇವೆ ಅದರಡಿಯಲ್ಲಿ ಈಗಾಗಲೇ 400 ರೂಪಾಯಿಗಳ ಮಾಸಾಶವನ್ನು ಕೊಡತಕ್ಕಂಥದ್ದಕ್ಕೆ ಸಂಬಂಧಪಟ್ಟಂತೆ ಆದೇಶವಾಗಿ ಈ 400 ರೂಪಾಯಿಗಳ ಈ ರೀತಿಯ ಫಲಾನುಭವಿಗಳಿಗೆ ದೊರಕತಕ್ಕಂಥದ್ದಕ್ಕೆ ಈಗಾಗಲೇ ನಾವು ಕಾರ್ಯವನ್ನು ತೆಗೆದುಕೊಂಡಿದ್ದೇವೆ ಈಗಾಗಲೇ ಆ ಫಲಾನುಭವಿಗಳಿಗೆ 400 ರೂಪಾಯಿ ಮಾಸಾಶನ ಹೋಗುತ್ತಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ

ಶ್ರೀ ನೆ ಲ ನರೇಂದ್ರಬಾಬು ಮಾನ್ಯ ಮುಖ್ಯಮಂತ್ರಿಗಳೆ, ಈಗ ಬಿ ಪಿ ಎಲ್ ಕಾರ್ಡ್ ಕಡ್ಡಾಯ ಎಂದು ಮಾಡಿ harass ಮಾಡುತ್ತಿದ್ದಾರೆ ಇದೇ ಸದನದಲ್ಲಿ ಹಿಂದೆ ಸನ್ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಬಿ ಪಿ ಎಲ್ ಕಾರ್ಡ್‌ಗಳನ್ನು ಕಡ್ಡಾಯ ಮಾಡುವುದಿಲ್ಲವೆಂದು ಹೇಳಿದ್ದರು ದಯವಿಟ್ಟು ಆ ಬಗ್ಗೆ ಸ್ಪಷ್ಟೀಕರಣ ಕೊಟ್ಟರೆ ಬಹಳಷ್ಟು ಸಮಸ್ಯೆಗಳು ಗ್ರಾಸ್ರೂಡ್ ಲೆವೆಲ್‌ನಲ್ಲಿ ಇತ್ಯರ್ಥವಾಗುತ್ತವೆ ಪದೇ ಪದೇ ಜನರು ತಹಸೀಲ್ದಾರ್ ಹತ್ತಿರ ಮತ್ತು ಜನ ಪ್ರತಿನಿಧಿಗಳ ಹತ್ತಿರ ಬರತಕ್ಕಂಥದ್ದು ತಪ್ಪುತ್ತದೆ ಎಂದು ಹೇಳುತ್ತೇನೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿ ಗ್ರಾಸ್ರೂಡ್ ಲೆವೆಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ Redressel Cell ಅನ್ನು ಟ್ಯೂನಪ್ ಮಾಡಿ ಎಫಿಶಿಯೆನ್ಸಿ ಹೆಚ್ಚಿಸಿ ಯಾವ ಅಧಿಕಾರಿಗಳು ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲವೋ ಅಂಥವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವ ದಿಟ್ಟ ನಿಲುವನ್ನು ತಾವು ತೆಗೆದುಕೊಳ್ಳಬೇಕು ಅದನ್ನು ಮಾಡದೇ ನೀವು ಬೆಳಿಗ್ಗೆ 9 ಗಂಟೆಗೆ ಶುರು ಮಾಡಿ ರಾತ್ರಿ 10 ಗಂಟೆಯವರೆಗೂ ಈ ಜನತಾದರ್ಶನ ಮಾಡಿದ್ದನ್ನು ನಾವು ನೋಡಿದ್ದೇವೆ ಈ ರೀತಿ ನೀವು ಎಷ್ಟು ದಿವಸ ಮಾಡುವುದಕ್ಕಾಗುತ್ತದೆ? (ಆದ ಕಾರಣ ನಾನು ಹೇಳುತ್ತೇನೆ, 'ಸರಿಯಾದ ರೀತಿಯಲ್ಲಿ ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಅಧಿಕಾರಿಗಳ ಮೇಲೆ ತಾವು ಕಠಿಣವಾದ ಕ್ರಮಗಳನ್ನು ಕೈಗೊಳ್ಳಿ ನನಗೆ ಚೆನ್ನಾಗಿ ನೆನಪಿದೆ, ಸನ್ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ರಿಮೋಟ್ ಹಳ್ಳಿಯಿಂದ ಒಲ್ಡ್ ಏಜ್ ಪೆನ್‌ಶನ್ಗೆ ಒಬ್ಬ ಬಂದಾಗ ದೇವರಾಜ ಅರಸುರವರು ಒಂದು ಪತ್ರವನ್ನು ಬರೆಯುತ್ತಾರೆ, ಏನೆಂದರೆ, I doubt whether there is an administration exsting in the district or not ಎಂದು ಡಿ ಸಿ ಯವರಿಗೆ ಬರೆಯುತ್ತಾರೆ 24 ಗಂಟೆಗಳಲ್ಲಿ ಉತ್ತರವನ್ನು ಬರೆಯಿರಿ ಎಂದು ಹೇಳಿ ಕಠಿಣ ಕ್ರಮವನ್ನು ಅವರು ತೆಗೆದುಕೊಳ್ಳುತ್ತಾರೆ ಆ ರೀತಿ ನೀವು ಕೂಡ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಳ್ಳಿ ಈ ರೀತಿ ಮಾಡದಿದ್ದರೆ ಈ ವ್ಯವಸ್ಥೆಯನ್ನು ಖಂಡಿತವಾಗಿಯೂ ತಿದ್ದುವುದಕ್ಕೆ ಸಾಧ್ಯವಾಗುವುದಿಲ್ಲ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ತಮಗೆ ಇಷ್ಟ ಬಂದಂತೆ ಆಡುತ್ತಿದ್ದರೆ, ಜನ ಪ್ರತಿನಿದಿಗಳು ನಾವು ಪ್ರತಿನಿತ್ಯ ಇಲ್ಲಿಗೆ ಬಂದು ನಮ್ಮ ಸಮಸ್ಯೆಯನ್ನು ಹೇಳುವುದಕ್ಕಾಗುವುದಿಲ್ಲ (ಆದಕಾರಣ ದಯವಿಟ್ಟು ತಾವು ಕ್ರಮ ತೆಗೆದುಕೊಳ್ಳಿ ಈಗ ತಾವು ಒ ಎ ಪಿ ಮತ್ತು ಬಿ ಪಿ ಎಲ್ ಕಾರ್ಡ್‌ಗೆ ಸಂಬಂದಪಟ್ಟಂತೆ ಸ್ಪಷ್ಟೀಕರಣವನ್ನು ನೀಡ ಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಬಿ ಪಿ ಎಲ್, ಕಾರ್ಡ್‌ನ ವಿಷಯದಲ್ಲಿ ಆಹಾರ ಇಲಾಖೆ ಮೇಲೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನರೇಂದ್ರಬಾಬುರವರ ಪ್ರಶ್ನೆ ಏನಿದೆ ಅದಕ್ಕೆ ಸುದೀರ್ಘವಾಗಿ ಉತ್ತರವನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ ನಾವು ಈ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಆಗ ಹೇಳುತ್ತೇವೆ ಇನ್ನು ಉಳಿದಂತೆ ಒ ಎ ಪಿ ವಿಷಯದಲ್ಲಿ ಈಗಾಲೇ ನಮ್ಮ ಸರ್ಕಾರ ಬಂದ ನಂತರ ಸುಮಾರು ಎಂಭತ್ತು ಸಾವಿರ ಒ ಎ ಪಿ ಪಡೆಯತಕ್ಕಂಥ ಫಲಾನುಭವಿಗಳನ್ನು ಗುರುತಿಸಿ ಈಗಾಗಲೇ ನಮ್ಮ ಮುಂದೆ ಬಂದಂಥ ಅರ್ಜಿಗಳನ್ನು ವಿಲೇವಾರಿ ಮಾಡಿ ಅನುಕೂಲ ಮಾಡಿಕೊಟ್ಟಿದ್ದೇವೆ ನಾನು ಎಲ್ಲ ಜಿಲ್ಲಾದಿಕಾರಿಗಳಿಗೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ ಮಾನ್ಯ ಉಪ ಮುಖ್ಯಮಂತ್ರಿಗಳೂ ಕೂಡ ಈಗಾಗಲೇ ಎರಡ್ಮೂರು ಬಾರಿ ಈ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ ಒ ಎ ಪಿ ವಿಷಯದಲ್ಲಿ ಇರತಕ್ಕಂಥ ಕೆಲವು ನಿಯಮಗಳೇನಿವೆ ಅದನ್ನು ಸಡಿಲಗೊಳಿಸಿ ಇವೊತ್ತು 65 ವರ್ಷ ಮೇಲ್ಪಟ್ಟಿರತಕ್ಕಂಥ ಎಲ್ಲ ಕುಟುಂಬಗಳಿಗೆ ಒ ಎ ಪಿಯನ್ನು ಕೊಡತಕ್ಕಂಥದ್ದಕ್ಕೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ 65 ವರ್ಷ ಮೇಲ್ಪಟ್ಟವರಿಗೆ ಈಗಾಗಲೇ ನಾವು ಈ ವಿಷಯದಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೇವೆ

ಯುಜಿಡಿ ಪದ್ಧತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 19 ಶ್ರೀ ರಾಜೇಂದ್ರನ್ ಎಸ್(ಕೆ ಜಿ ಎಫ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವರೇ?

ಅ ಕೆ ಜಿ ಎಫ್ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಅಳವಡಿಸ ಲಾಗಿದೆಯೇ?

ಆ ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಇ ಒಳಚರಂಡಿ ವ್ಯವಸ್ಥೆಯನ್ನು ಯಾವಾಗ ಕಲ್ಪಿಸಲಾಗುವುದು?

ಉತ್ತರ ಶ್ರೀ ಹೆಚ್ ಡಿ ಕುಮಾರಸ್ವಾಮಿ ಮುಖ್ಯಮಂತ್ರಿಗಳು

ಅ) ಇಲ್ಲ

ಆ) ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಸರ್ವೆ ಕೆಲಸ ಪೂರ್ಣಗೊಳಿಸಲಾಗಿದ್ದು, ಇಡೀ ಒಳಚರಂಡಿ ಯೋಜನೆಯ ವಿವರವಾದ ಅಂದಾಜನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ತಯಾರಿಸಲಾಗುತ್ತಿದೆ

ಇ) ಮಂಡಳಿಯಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಪರಿಶೀಲಿಸ ಲಾಗುವುದು

ಶ್ರೀ ಎಸ್ ರಾಜೇಂದ್ರನ್ ಮಾನ್ಯ ಸಭಾಧ್ಯಕ್ಷರೆ, ನಾನು ಯು ಜಿ ಡಿ ಬಗ್ಗೆ ಪ್ರಶ್ನೆ ಕೇಳಿದ್ದೆ Whether the stem of UGD introduced in KGF town ಎಂಬುದೇ ನನ್ನ ಪ್ರಶ್ನೆ ಇದಕ್ಕೆ ಇವರು ಏನು ಉತ್ತರ ಕೊಟ್ಟಿದ್ದಾರೆಂದರೆ 'No' ಎಂದಿದ್ದಾರೆ If not, the reasons for the same, ಏನು ಕಾರಣ ಎಂದು ಕೇಳಿರುವುದಕ್ಕೆ ಇಲ್ಲ ಎಂದು ಉತ್ತರ ಹೇಳಿದ ಇವರು The KUWS and D B has completed the survey work of UGD in KGF and detiled estimation is under preparation ಎಂದಿದ್ದಾರೆ ಎಲ್ಲಿದೆ ನ್ಯಾಯ ಹೇಳಿ ನಾನು ಕೇಳಿರುವುದಕ್ಕೂ ಇವರು ಹೇಳಿರುವುದಕ್ಕೂ ಸಂಬಂಧ ಎಲ್ಲಿದೆ? ಯು ಜಿ ಡಿಗೆ ಕೊಟ್ಟಿದ್ದೀರ ಎಂದು ಕೇಳಿರುವುದಕ್ಕೆ ಇವರು ಇಲ್ಲವೆಂದು ಹೇಳಿದ ಮೇಲೆ ಮತ್ತೆ ಇವರು, ನಾವು ಇಂಥದ್ದನ್ನೆಲ್ಲಾ ಮಾಡಿದ್ದೇವೆ ಸರ್ವೆ ಮಾಡಿದ್ದೇವೆ, ಎಸ್ಟಿಮೇಟ್ ಮಾಡಬೇಕು ಎಂದು ಹೀಗೆಲ್ಲಾ ಹೇಳಿದ್ದಾರೆ ಕೊನೆಗೆ When the system would be introduced ಅಂದರೆ ಯಾವಾಗ ನೀವು ಇದನ್ನು ಮಾಡುತ್ತೀರಿ ಎಂದು ಕೇಳಿರುವುದಕ್ಕೆ, after receiving the proposal from the KUWS and D B the same will be examined ಎಂದು ಹೇಳಿದ್ದಾರೆ 9 ಲಕ್ಷ ರೂಪಾಯಿಗಳ ಹಣವನ್ನು ಕಟ್ಟಿದ್ದೇವೆ ನೀವು ಸರ್ವೆ ಮಾಡಿರಬೇಕು ರಿಪೋರ್ಟ್‌ನ್ನು ಈಗಾಗಲೇ ಹತ್ತು ತಿಂಗಳಾದರೂ ಇನ್ನೂ ಕೊಟ್ಟಿಲ್ಲ ಇಷ್ಟೆಲ್ಲಾ ಮಾಡಿ ನೇರವಾಗಿ ಉತ್ತರದಲ್ಲಿ ಇಲ್ಲವೆಂದು ಹೇಳಿ ಮತ್ತೆ ಇಂಥವುಗಳನ್ನೆಲ್ಲಾ ನಾವು ಮಾಡುತ್ತಿದ್ದೇವೆ, ಎಕ್ಸಾಮಿನ್ ಮಾಡುತ್ತಿದ್ದೇವೆ ಎಂದು ಹೇಳಿದರೆ ಎಲ್ಲಿದೆ

ನ್ಯಾಯ? ಕೇರ್‌ಲೆಸ್ ಆಗಿ ಇಂಥ ಉತ್ತರವನ್ನು ಕೊಟ್ಟರೆ ಇವರಿಗೇನು ಭಯ ಈ ಸಭೆಯಲ್ಲಿ ಇದೆ ಹೇಳಿ

ಶ್ರೀ ಅಲಂಗೂರು ಶ್ರೀನಿವಾಸ್ ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವುದು ಯು ಜಿ ಡಿ ಆಗಿದೆಯೋ ಅಥವಾ ಇಲ್ಲವೋ ಎಂದು ಯು ಜಿ ಡಿ ಗೆ ಹಣವನ್ನು ಕೊಟ್ಟಿದ್ದಾರೆ ಸರ್ವೆ ಮುಗಿದಿದೆ ಆದರೆ ಇನ್ನೂ ಎಸ್ಟಿಮೇಟ್ ಆಗಿಲ್ಲ ಆದರೆ ಎಸ್ಟಿಮೇಟ್ ಆದ ಮೇಲೆ ಸಚಿವ ಸಂಪುಟ ಸಭೆಗೆ ಅದು ಬಂದು ಮಂಜೂರಾತಿ ಆದ ನಂತರ ಅದರ ಬಗ್ಗೆ ಟೆಂಡರ್ ಕರೆಯತಕ್ಕಂಥ ಕೆಲಸ ಪ್ರಾರಂಭವಾಗುತ್ತದೆ ಈಗ ಪ್ರೊಸೆಸ್‌ನಲ್ಲಿದೆ ಎನ್ನುವುದನ್ನು ನಾವು ಸಭೆಗೆ ತಿಳಿಸುವುದಕ್ಕೆ ಬಯಸುತ್ತೇನೆ ಆದರೆ ಯು ಜಿ ಡಿ ಸ್ಯಾಂಕ್ಷನ್ ಆಗಿಲ್ಲವೆಂದರೆ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಇನ್ನೂ ಆಗಿಲ್ಲ ಆದರೆ ಆ ಬಗ್ಗೆ ಪ್ರೊಸೆಸ್ ಇವೊತ್ತಿಗೂ ನಡೆಯುತ್ತಿದೆ ಇದರ ಬಗ್ಗೆ ಆಗಸ್ಟ್ 15 ರೊಳಗಾಗಿ ಎಸ್ಟಿಮೇಟನ್ನು ರಿವ್ಯೂ ಮಾಡಿ ಸಚಿವ ಸಂಪುಟ ಸಭೆಯಲ್ಲಿ ಇಡಲು ನಾವು ಸರ್ಕಾರಕ್ಕೆ ಕಳುಹಿಸುತ್ತೇವೆ ಆ ಸಚಿವ ಸಂಪುಟ ಸಭೆಯಲ್ಲಿ ಅದಕ್ಕೆ ಅನುಮತಿ ಆದ ತಕ್ಷಣ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ನಾವು ಟೆಂಡರ್ ಕರೆದು ಕೆಲಸ ಮಾಡುತ್ತೇವೆಂದು ಹೇಳಬಯಸುತ್ತೇನೆ

ಶ್ರೀ ಎಸ್ ರಾಜೇಂದ್ರನ್ ನೀವು ಉತ್ತರದಲ್ಲಿ ಎಕ್ಸಾಮಿನ್ ಮಾಡುತ್ತೇವೆಂದು ಹೇಳಿದ್ದೀರಿ ಈ ಎಕ್ಸಾಮಿನ್ ಅನ್ನು ಯಾವಾಗ ಮಾಡುತ್ತೀರಿ? ನಾವು 07 09 2006ರಲ್ಲಿ ದುಡ್ಡನ್ನು ಕಟ್ಟಿದ್ದೇವೆ ಈ ಆಗಸ್ಟ್ ಬಂದರೆ ಸರಿಯಾಗಿ ಒಂದು ವರ್ಷವಾಗುತ್ತದೆ ಪುನಃ ಮತ್ತೆ ಇದರ ಬಗ್ಗೆ ಇವರು ಯಾವಾಗ ಎಕ್ಸಾಮಿನ್ ಮಾಡುವುದು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ನಮ್ಮ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಹೇಳಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ ತಕ್ಷಣ ಯಾವ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದಿಲ್ಲವೋ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಹಾಗಾದರೆ ಇವರು ಇಷ್ಟು ಡಿಲೆ ಮಾಡಿದ್ದಾರಲ್ಲಾ, ಇವರ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಅಲಂಗೂರು ಶ್ರೀನಿವಾಸ್ ಅದು ಹಾಗಲ್ಲ ಎಸ್ಟಿಮೇಟ್ ಮಾಡಬೇಕಾದರೆ ಕನಿಷ್ಟ ಮುರ್‍ನಾಲ್ಕು ತಿಂಗಳಾಗುತ್ತದೆ ಆ ಎಸ್ಟಿಮೇಟ್‌ನ್ನು 15 ನೆಯ ತಾರೀಖಿನೊಳಗಾಗಿ ಕೊಡತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಎಸ್ ರಾಜೇಂದ್ರನ್ ನಾವು ದುಡ್ಡು ಕಟ್ಟಿ 10 ತಿಂಗಳಾಗಿದೆ

ಶ್ರೀ ಅಲಂಗೂರು ಶ್ರೀನಿವಾಸ್: ಸರ್ವೆ ಮಾಡಬೇಕೆಂದರೆ ಅದಕ್ಕೆ ನಾಲ್ಕೈದು ತಿಂಗಳಾಗುತ್ತದೆ ಅದು ದೊಡ್ಡದಾದಂಥ ನಗರವಾಗಿರುವುದರಿಂದ ಸರ್ವೆ ಕಾರ್ಯವನ್ನು ಮೂಲೆ ಮೂಲೆಯಲ್ಲಿಯೂ ಮಾಡಬೇಕು ಆ ಒಂದು ದೃಷ್ಟಿಯಿಂದ ಸರ್ವೆ ಕಾರ್ಯ ನಾಲ್ಕೈದು ತಿಂಗಳಾಗಿದೆ ಆಗಸ್ಟ್ 15ನೇ ತಾರೀಖಿನೊಳಗಾಗಿ ಎಸ್ಟಿಮೇಟ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಮಂಜೂರಾತಿಗಾಗಿ ಸಚಿವ ಸಂಪುಟಕ್ಕೆ ಕಳುಹಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ

ಶ್ರೀ ಎಸ್ ರಾಜೇಂದ್ರನ್ ಅದರ ಬಗ್ಗೆ ಹೇಳಿ ಕನಿಷ್ಟ ಇಷ್ಟು ತಿಂಗಳೊಳಗೆ, ಎರಡು ತಿಂಗಳೋ, ಮೂರು ತಿಂಗಳೊಳಗೋ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ

ಶ್ರೀ ಅಲಂಗೂರು ಶ್ರೀನಿವಾಸ್. ಈಗ ಹಣದ ವ್ಯವಸ್ಥೆಯನ್ನು ಮಾಡುವ ಬಗ್ಗೆ ಈ ಸಾರಿ ಇದು ಯೋಜನೆಯೊಳಗೆ ಸೇರಿದೆಯೋ ಇಲ್ಲವೋ ಎಂಬುದರ ಬಗ್ಗೆ ಕೂಡ ನಾವು ಪರಿಶೀಲನೆಯನ್ನು ಮಾಡಿ ಹಣದ ಮಂಜೂರಾತಿಯನ್ನು ಮಾಡಿಸಿ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಗುತ್ತದೆ

ಶ್ರೀ ಎಸ್ ರಾಜೇಂದ್ರನ್ ನೀವು ನಮಗೆ ಉತ್ತರ ಕೊಡುವ ಮುಂಚೆಯೇ ಇದು ಯೋಜನೆಯೊಳಗೆ ಸೇರಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಿ ಉತ್ತರ ಕೊಡಬೇಕಲ್ಲವೆ?

ಶ್ರೀ ಅಲಂಗೂರು ಶ್ರೀನಿವಾಸ್ ಈಗ ಇಲ್ಲಿ ಏನಾಗಿದೆಯೆಂದರೆ, ಕೆಲವು ಹೊಸ ಸ್ಕೀಂ ಗಳನ್ನು ಹಾಕಿಕೊಳ್ಳುವುದಕ್ಕೆ ನಾವು ಪ್ರಾವಿಶನ್ ಮಾಡಿಕೊಂಡಿದ್ದೇವೆ ಇದು ಹೊಸ ಸ್ಕೀಂನಲ್ಲಿ ಸೇರಿದರೆ ಮಾತ್ರ ಏನಾದರೂ ಹಣ ಮಂಜೂರಾತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಆ ದಿಕ್ಕಿನಲ್ಲಿ ಈಗ ಸರ್ವೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಮಂಜೂರಾತಿಗೆ ನಾವು ಕಳುಹಿಸುತ್ತೇವೆ ನೀವು ಮತ್ತು ನಾವು ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕುಳಿತುಕೊಂಡು ಮಾತನಾಡಿ ಹಣಕಾಸಿನ ಮಂತ್ರಿಗಳಿಂದ ಹಣವನ್ನು ಮಂಜೂರು ಮಾಡಿಸಿಕೊಂಡು ತದನಂತರ ಕೆಲಸವನ್ನು ಪ್ರಾರಂಭ ಮಾಡೋಣ

ಅಧ್ಯಕ್ಷರು ಜಯ ಪ್ರಕಾಶ್ ಹೆಗಡೆಯವರೆ, ನಿಮ್ಮ ಪ್ರಶ್ನೆಗೆ ಉತ್ತರ ಹೇಳಲು ಈಗ ಮಂತ್ರಿಗಳು ಇಲ್ಲಿ ಇಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗಡೆ ಮಾನ್ಯ ಅಧ್ಯಕ್ಷರೆ, ಇದಕ್ಕೆ ಯಾರಾದರೂ ಉತ್ತರ ಹೇಳಬಹುದು, ಕಷ್ಟದ ಉತ್ತರವೇನೂ ಅಲ್ಲ ಬಹಳ ಸಿಂಪಲ್

ಅಧ್ಯಕ್ಷರು ಆಯಿತು, ಮಂತ್ರಿಗಳು ಬಂದಾಗ ಉತ್ತರ ಕೊಡಿಸುತ್ತೇನೆ

ಸಾರಿಗೆ ಬಸ್ಸುಗಳ ದುಸ್ಥಿತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 21 ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಪ್ರಶ್ನೆ ಅ) ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಸುತ್ತಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಪ್ರತಿ ನಿತ್ಯವೂ ಕೆಟ್ಟುನಿಂತಿರುವ ಬಸ್ಸುಗಳಿಂದ ಪ್ರಯಾಣಿಕರ ಸ್ಥಿತಿ ಅಸ್ತವ್ಯಸ್ತವಾಗಿದ್ದು, ಇದರ ಉನ್ನತೀಕರಣಕ್ಕೆ ಸರ್ಕಾರ ಯಾವ ಕ್ರಮ ತೆಗೆದು ಕೊಂಡಿದೆ,

ಇ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು,

ಈ) ಅದರಲ್ಲಿ ಸುಸ್ಥಿತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು?

ಉತ್ತರ

ಅ) ಇಲ್ಲ ವಾಹನಗಳು ದು-ಸ್ಥಿತಿಯಲ್ಲಿರುವುದಿಲ್ಲ

ಆ) ನಿಗಮದಲ್ಲಿರುವ ವಾಹನಗಳ ನಿರ್ವಹಣೆಗೆ ಸಂಬಂಧಿಸಿದಂತೆ ದಿನಿತ್ಯದ ವಾರದ ಹಾಗೂ ನಿಗದಿತ ಕಿ ಮಿ (Scheduled maintenance) ನಿರ್ವಹಣೆಯನ್ನು ಕ್ರಮ ಬದ್ಧವಾಗಿ ಮಾಡಲಾಗುತ್ತಿದೆ

ಇ) 29

ಈ) ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿರುತ್ತದೆ

ಶ್ರೀ ಜೆ ನರಸಿಂಹಸ್ವಾಮಿ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಆದರೆ ನಮ್ಮ ತಾಲ್ಲೂಕಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಪ್ರದೇಶದಲ್ಲಿ ಕೆಲವು ಪ್ರದೇಶಗಳಿಗೆ ಬಸ್‌ಗಳನ್ನು ಕೇವಲ ಒಂದೊಂದೇ ಟ್ರಿಪ್‌ಗಳನ್ನು ಹಾಕಿದ್ದಾರೆ ಬಹಳಷ್ಟು ಬಸ್‌ಗಳು ಕೆಟ್ಟುಹೋಗಿಬಿಡುತ್ತಿವೆ ಎರಡು ದಿವಸಗಳಾದರು ಸರಿಪಡಿಸದೇ ಶಾಲಾ ಮಕ್ಕಳಿಗೆ ಶಾಲೆಗೂ ಹೋಗುವುದಕ್ಕೆ ಬಸ್ ವ್ಯವಸ್ಥೆ ಸರಿ ಇರುವುದಿಲ್ಲ ಆದುದರಿಂದ ಸುಮಾರು 20,25 ವರ್ಷದ ಹಳೆ ಮಾಡೆಲ್ ಬಸ್ಗಳೇನಿವೆ ಅವುಗಳನ್ನೆಲ್ಲಾ ತಾವು ತೆಗೆದುಹಾಕಬೇಕು ಸರ್ಕಾರದಲ್ಲಿ ಹೇಳಿದ ಹಾಗೆ 15 ವರ್ಷಗಳ ಮೇಲೆ ಯಾವುದೇ ವೆಹಿಕಲ್‌ಗಳನ್ನು ರಿನ್ಯೂವಲ್ ಮಾಡಬಾರದು ಎಂದು ನಿಯಮವಿದೆ ಅದರಲ್ಲಿಯೂ ಸಾರ್ವಜನಿಕರನ್ನು ಕರೆದುಕೊಂಡು ಹೋಗುವಂಥ ಬಸ್‌ಗಳು ಇಂಥದ್ದು ಇರಬಾರದು ನಾನು ಒಂದು ಸಾರಿ ಒಂದು ಗ್ರಾಮಕ್ಕೆ ಹೋಗುತ್ತಿದ್ದಾಗ ಇಂದು ಬಸ್ ಲೈಟ್‌ಗಳನ್ನು ಹಾಕಿಕೊಂಡು ಬರುತ್ತಿತ್ತು ಆ ಬಸ್‌ನ ಛಾಸಿ ಹಿಂದುಗಡೆಯಿಂದ ಬಂದು ನಮ್ಮ ಪಕ್ಕಕ್ಕೆ ಬರುತ್ತಿತ್ತು ಅಲ್ಲಿದ್ದ ಜನಗಳು ಪಕ್ಕಕ್ಕೆ ಹೋಗಿ, ಪಕ್ಕಕ್ಕೆ ಹೋಗಿ ಎಂದು ಹೇಳಿದಾಗ ನಾವು ಪಕ್ಕಕ್ಕೆ ಹೋದೆವು ಅವೊತ್ತು ನಾವು ಪಕ್ಕಕ್ಕೆ ಹೋಗದಿದ್ದರೆ ಆ್ಯಕ್ಸಿಡೆಂಟ್ ಆಗುತ್ತಿತ್ತು ಈ ರೀತಿಯ ಬಸ್‌ಗಳೂ ಕೂಡ ಇವೆ ಬಸ್ಸು ಮುಂದುಗಡೆ ಕಾಣುತ್ತಿತ್ತು ನಾವು ಪಕ್ಕಕ್ಕೆ ತೆಗೆದುಕೊಳ್ಳದೇ ಹೋದರೆ accident ಆಗಬಹುದು ಇಂತಹ ಬಸ್ಸುಗಳು ಇವೆ ಆದುದರಿಂದ ಮಾನ್ಯ ಸಾರಿಗೆ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನನ್ನ ತಾಲ್ಲೂಕಿನಲ್ಲಿ ಬಹಳ ಹಳೆಯ ಬಸ್ಸುಗಳು ಇವೆ ಸರಿಯಾದ ಮಾಹಿತಿಯನ್ನು ತೆಗೆದುಕೊಂಡು ಹೊಸ ಬಸ್ಸುಗಳನ್ನು ಹಾಕಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎಸ್ ಚೆಲುವರಾಯಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ ಅವರು ತಿಳಿಸಿದಂತೆ ಎಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗಿದೆ ಎನ್ನುವ ಪಟ್ಟಿಯನ್ನು ಕಳುಹಿಸಿಕೊಟ್ಟರೆ ತಕ್ಷಣ ಅದನ್ನು operate ಮಾಡುತ್ತೇವೆ ಇವತ್ತು ಅವರು ಬಹಳ ದುಸ್ಥಿತಿಯಲ್ಲಿದೆ ಎಂದು ಏನು ಹೇಳಿದರು, KSRTC ಯಿಂದ ಬಹಳ ಉತ್ತಮವಾದಂತಹ ಬಸ್ಸಗಳನ್ನು ಹಾಕುತ್ತಿದ್ದೇವೆ ಎಂಟು ವರ್ಷದ ಬಸ್ಸುಗಳನ್ನು scrap ಮಾಡುತ್ತಿದ್ದೇವೆ 25 ವರ್ಷದ ಬಸ್ಸುಗಳು

ನಮ್ಮಲ್ಲಿ ಈಗ ಓಡುತ್ತಿಲ್ಲ ಆಕಸ್ಮಿಕವಾಗಿ ಒಂದೆರಡು ಏನಾದರೂ ಓಡುತ್ತಿದ್ದರೆ, ಆ ಡಿಪೋದಲ್ಲಿ ಅದನ್ನು ತಕ್ಷಣ ರದ್ದು ಮಾಡಿ ಹೊಸ ಸರ್ವೀಸ್ ಅನ್ನು ಕೊಡುತ್ತೇವೆ

ಅಧ್ಯಕ್ಷರು ಸಿದ್ದು ಸವದಿ ಪ್ರಶ್ನೆಗೆ ಉತ್ತರಿಸುವುದಕ್ಕೆ ಮಾನ್ಯ ಮಂತ್ರಿಗಳು ಇಲ್ಲ ಶಂಕರಲಿಂಗೇಗೌಡ ಅವರು ಪ್ರಶ್ನೆ ಕೇಳಿ

ಬೀದಿ ನಾಯಿಗಳ ಹಾವಳಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 23 ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್(ಚಾಮರಾಜ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಪ್ರಶ್ನೆ 1 ಮೈಸೂರು ನಗರದಲ್ಲಿ ಎಷ್ಟು ಬೀದಿ ನಾಯಿಗಳಿವೆ ಎಂಬುದನ್ನು ಅಂದಾಜಿಸಲಾಗಿದೆ?

2 ಬೀದಿ ನಾಯಿಗಳಿಂದ ತೊಂದರೆಗೊಳಗಾದವರೆಷ್ಟು? (ಇತ್ತೀಚಿನ ಒಂದು ವರ್ಷದ ವಿವರ ನೀಡುವುದು)

3 ಬೀದಿ ನಾಯಿಗಳ ಹಾವಳಿ ತಡೆಗೆ ಯಾವ ಯಾವ ಕ್ರಮ ವಹಿಸಿದೆ

4 ಕಳೆದ ಒಂದು ವರ್ಷದಿಂದೀಚೆಗೆ ಎಷ್ಟು ಬೀದಿ ನಾಯಿಗಳನ್ನು ಹಿಡಿಯಲಾಗಿದೆ ಬಾಕಿ ಎಷ್ಟು ಬೀದಿ ನಾಯಿಗಳನ್ನು ಹಿಡಿಯಬೇಕಿದೆ (ವಿವರ ನೀಡುವುದು)

ಉತ್ತರ ಹೆಚ್ ಡಿ ಕುಮಾರ ಸ್ವಾಮಿ

1) ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 8000 ಬೀದಿ ನಾಯಿಗಳಿರುತ್ತವೆ ಎಂದು ಅಂದಾಜು ಮಾಡಲಾಗಿದೆ

2) ಮೈಸೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಇದುವರೆವಿಗೆ ಒಟ್ಟು 9822 ಜನಗಳಿಗೆ ನಾಯಿ ಕಚ್ಚಿದೆ ಇದರಲ್ಲಿ ಶೇ 60 ರಿಂದ ಶೇ 70 ನಾಯಿ ಕಡಿತಕ್ಕೆ ಒಳಗಾದವರು ಮೈಸೂರು ನಗರದ ವ್ಯಾಪ್ತಿಗೆ ಒಳಪಟ್ಟವರಾಗಿರುತ್ತಾರೆ

3) ಪಾಲಿಕೆಯಲ್ಲಿ ನಾಯಿ ಹಿಡಿಯಲು ಪ್ರತ್ಯೇಕ ಗ್ಯಾಂಗ್ ಹೊಂದಿದ್ದು ಪಾಲಿಕೆಗೆ ಬರುವ ದೂರಿನ ಪ್ರಕಾರ ಕಾರ್ಯಚರಣೆ ನಡೆಸಿ ನಾಯಿಗಳನ್ನು ಹಿಡಿದು ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ ಮೈಸೂರು ಜಿಲ್ಲೆ ಮೈಸೂರು ಇವರ ಮುಖೇನ ನಗರ ಪಶು ಆಸ್ಪತ್ರೆಯಲ್ಲಿ ಪ್ರಾಣಿ ಜನನ ನಿಯಂತ್ರಣ ಕಾರ್ಯಕ್ರಮ ಹಾಗೂ ದಯಾಮರಣವನ್ನು ಕಲ್ಪಿಸಲಾಗುತ್ತಿದೆ ಇದಲ್ಲದೆ ಅನಧಿಕೃತ ಹಾಗೂ ಅಶುಚಿತ್ವದಿಂದ ಕೂಡಿದ ಮಾಂಸದ ಅಂಗಡಿಗಳಿಗೆ ಬೀಗ ಮುದ್ರೆ ಹಾಕಲಾಗುತ್ತಿದೆ ಮತ್ತು ಈ ವಿಷಯದ ಬಗ್ಗೆ ದಿನಪತ್ರಿಕೆಗಳಲ್ಲಿ ಬೀದಿ ನಾಯಿಗಳ ನಿಯಂತ್ರಣದ ಬಗ್ಗೆ ಪ್ರಕಟಣೆಯನ್ನು ಸಹ ನೀಡಲಾಗುತ್ತಿದೆ

4) ಕಳೆದ ಒಂದು ವರ್ಷದಿಂದೀಚೆಗೆ ಸುಮಾರು 3500 ನಾಯಿಗಳನ್ನು ಹಿಡಿಯಲಾಗಿದೆ ಉಳಿಕೆ 4500 ನಾಯಿಗಳನ್ನು ಹಿಡಿಯುವ ಕಾರ್ಯ ಪ್ರಗತಿಯಲ್ಲದೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಸಮರ್ಥ ಆಡಳಿತವನ್ನು ನೀಡುವಲ್ಲಿ ಯಶಸ್ವಿಯಾದ ಸರ್ಕಾರ ನಾಯಿಕೊಡೆಗಳಂತೆ ಬೆಳೆದಿರುವ ನಾಯಿಗಳನ್ನು ಹಿಡಿಯುವಲ್ಲಿ ನಿಷ್ಕ್ರೀಯವಾಗಿದೆ ಶ್ರೀಕೃಷ್ಣ ಪರಮಾತ್ಮ ನಾಯಿಯ ರೂಪದಲ್ಲಿ ದರ್ಮರಾಯನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋದನು ಇಂತಹ ನಾಯಿಗಳು ಬಡಮಕ್ಕಳ ಮರ್ಮಾಂಗಗಳನ್ನು ಕಚ್ಚಿ ಮಕ್ಕಳನ್ನು ಮೃತ್ಯುಕೂಪಕ್ಕೆ ತಳ್ಳುತ್ತಿವೆ ಇವತ್ತು ಮೈಸೂರು ನಗರ ನಾಯಿ ಕಚ್ಚುವ ಪಟ್ಟಿಯಲ್ಲಿ ಎರಡನೇ ಸಾಲಿಗೆ ಸೇರಿದೆ ಸಾವಿರಾರು ಜನ ಸಾಲುಗಟ್ಟಿ ನಿಂತಿದ್ದಾರೆ ಜನಗಣತಿಯನ್ನು ಮಾಡುವುದಕ್ಕೆ ಬರದೆ ಇರುವಂತಹ ಅಧಿಕಾರಿಗಳು ನಾಯಿಗಳ ಗಣತಿಯನ್ನು ಕೊಡುವುದಕ್ಕೆ ಆಗುತ್ತದೆಯೇ? ಒಂದು ಹೆಣ್ಣು ನಾಯಿ ಪಕ್ಕದ ಬೀದಿಯಲ್ಲಿದ್ದರೆ 15 ಗಂಡು ನಾಯಿಗಳಿರುತ್ತವೆ ಅದನ್ನು ಹೇಗೆ ಇವರು ಜನಗಣತಿ ಮಾಡುತ್ತಾರೆ? ನಿಜವಾಗಿ ಸಮರ್ಥವಾಗಿ ನಾಯಿ ಗಣತಿಯನ್ನು ಕೊಡುವುದಕ್ಕೆ ಆಗುವುದಿಲ್ಲ 8,000 ನಾಯಿಗಳು ಇವೆಯೆಂದು ಹೇಳಿದ್ದಾರೆ ಇದನ್ನು ಯಾವ ಅಂದಾಜಿನ ಮೇಲೆ ಹೇಳಿದ್ದಾರೆ? ನಿಜವಾಗಿಯೂ ಕೂಡ ಆಡಳಿತದಲ್ಲಿ ಸುಧಾರಣೆಯಾಗಿರುವಂತಾದ್ದು ಇದೆ ಈ ಸಮ್ಮಿಶ್ರ ಸರ್ಕಾರ ಸಮರ್ಥವಾದಂತಹ ಆಡಳಿತವನ್ನು ಕೊಟ್ಟಿದ್ದಾರೆ,

ಅದರಲ್ಲಿ ಎರಡನೇ ಮಾತಿಲ್ಲ ಈ ನಾಯಿಗಳು ಬಡವರ ಮಕ್ಕಳಿಗೆ ಮರಣಯಾತನೆಯನ್ನು ನೀಡುತ್ತಿವೆ ಇದಕ್ಕೆ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ ಪ್ರಾಣಿ ಹಿಂಸೆ ಮಾಡಬೇಡಿ ಎಂದು ಮಠಾಧಿಪತಿಗಳು ಹೇಳುತ್ತಾರೆ ಮಠಾಧಿಪತಿಗಳು ಅವುಗಳನ್ನು ತೆಗೆದುಕೊಂಡು ಹೋಗಿ ಸಾಕಲಿ, breeding ಮಾಡಿ, foreignಗೆ ಕಳುಹಿಸಲಿ, ಅಲ್ಲೆಲ್ಲ ತಿನ್ನುತ್ತಾರೆ ಘಟ ಇದ್ದರೆ ಮಠ ಕಟ್ಟಬಹುದು ಆದರೆ ಈ ನಾಯಿಯಿಂದ ಅವರು ಏನು ಕಟ್ಟುವುದಕ್ಕೆ ಆಗುತ್ತದೆ? ಆದುದರಿಂದ ಮಕ್ಕಳನ್ನು ಸಂರಕ್ಷಣೆ ಮಾಡುವಂತಹ ದಿಕ್ಕಿನಲ್ಲಿ ಪ್ರಾಮಾಣಿಕವಾದಂತಹ ಪರಿಶುದ್ಧವಾದಂತಹ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ನಾನು ಈ ಮೂಲಕವಾಗಿ ಕೇಳಿಕೊಳ್ಳುತ್ತೇನೆ

ಶ್ರೀ ಎಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೇ ಈಗಾಗಲೇ ಮೈಸೂರು ನಗರದಲ್ಲಿ ಬೀದಿ ನಾಯಿಗಳ ಜನಗಣತಿ ಮಾಡಿ ಅಂದಾಜು 8,000 ಇದೆ ಎಂದು ಹಾಗೂ ಅದರಲ್ಲಿ ಸುಮಾರು ಮೂರೂವರೆ ಸಾವಿರ ಬೀದಿ ನಾಯಿಗಳನ್ನು ಹಿಡಿದಿರುವುದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ ಇವತ್ತು ಬೀದಿನಾಯಿಗಳಲ್ಲಿ ಆರೋಗ್ಯವಿಲ್ಲದೆ ತೊಂದರೆ ಗೊಳಗಾಗಿರುವಂಥಾದ್ದು ಮತ್ತು ರೋಷಭರಿತವಾಗಿರುವಂತಹ ನಾಯಿಗಳಿಗೆ ಸರ್ಕಾರಿ ಪಶು ಆಸ್ಪತ್ರೆಯ ಸಹಭಾಗಿತ್ವದಲ್ಲಿ ಆಶ್ರಯ ಕೊಡುವಂತಹ ವಿಚಾರದಲ್ಲಿ ಈಗಾಗಲೇ ಮೈಸೂರು ನಗರದಲ್ಲಿ ಕ್ರಮ ತೆಗೆದುಕೊಂಡಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಈ ಕೆಲಸವನ್ನು ತಾವು ಎಷ್ಟು ದಿವಸದಲ್ಲಿ ಮಾಡುತ್ತೀರಿ? ಅಧಿಕಾರಿಗಳು ಬಹಳ ಸೋಮಾರಿಗಳು ಅವರೆಲ್ಲಾ ಬಿದ್ದು ಹೋಗಿದ್ದಾರೆ ಅವರೇನೂ ಮಾಡುವುದಿಲ್ಲ ಈ ಸರ್ಕಾರ ನಡೆಸುತ್ತಿರು ವಂತಹ ಯೋಜನೆಗಳಿಗೆ ಕೈಗೆತ್ತಿಕೊಳ್ಳಲು ಕೈಜೋಡಿಸುತ್ತಿಲ್ಲ ಕೆಲವು ಅಧಿಕಾರಿ ಗಳಂತೂ ಕೆಲಸವನ್ನೇ ಮಾಡುವುದಿಲ್ಲ ನಗರಪಾಲಿಕೆ ಆಡಳಿತದಲ್ಲಿ ಆರೋಗ್ಯ ಶಾಖೆ ನಿಷ್ಕ್ರಿಯವಾಗಿದೆ ಹಾಗೂ ನಿರ್ಲಿಪ್ತವಾಗಿದೆ ಅಲ್ಲಿ ಏನೂ ಇಲ್ಲ ದಯಮಾಡಿ ಅವರಿಗೆ ಚುರುಕು ಮುಟ್ಟಿಸುವಂತಹ ನಿಟ್ಟಿನಲ್ಲಿ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು ಎಂದು ನಾನು ಪ್ರಾಮಾಣಿಕವಾಗಿ ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗಾಗಲೆ ಅಧಿಕಾರಿಗಳು ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಬೀದಿ ನಾಯಿಗಳನ್ನು ಹಿಡಿಯುವಂತಹ ಸಂದರ್ಭದಲ್ಲಿ ಪ್ರಾಣಿ ದಯಾ ಸಂಸ್ಥೆಯ organiza-

tions ಏನಿವೆ, ಅವರುಗಳ ಒತ್ತಡ ಹೇಗಿದೆ ಎಂದರೆ ಬೀದಿ ನಾಯಿಗಳನ್ನು ಕೊಲ್ಲುವುದಕ್ಕೆ ಅವರ ವಿರೋಧ ಇರುವುದರಿಂದ, ಇವೆಲ್ಲಾವನ್ನು ಗಮನದಲ್ಲಿಟ್ಟುಕೊಂಡು ಇದರ ವಿಚಾರದಲ್ಲಿ ಅಧಿಕಾರಿಗಳು ಸಮರ್ಪಕವಾಗಿ ಕೆಲಸವನ್ನು ಮಾಡುತ್ತಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ ಇದಕ್ಕೆ ಕಾಲವನ್ನು ನಿಗದಿ ಮಾಡುವುದಕ್ಕೆ ಆಗುವುದಿಲ್ಲ ಬೀದಿ ನಾಯಿಗಳು ಎಲ್ಲೆಲ್ಲಿ ಇವೆ ಆ ನಾಯಿಗಳ ವರ್ತನೆಯನ್ನು ಗಮನಿಸಿ, ಅವುಗಳ ಬಗ್ಗೆ ತೀರ್ಮಾನವನ್ನು ಮಾಡಬೇಕಾಗುತ್ತದೆ ಅದರ ಬಗ್ಗೆ ಗಮನವನ್ನು ಹರಿಸಿದ್ದೇವೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಬೀದಿ ನಾಯಿಗಳ ವಿಚಾರ ಬಹಳ ಮುಖ್ಯವಾದುದಾಗಿದೆ ಬೀದಿ ನಾಯಿಗಳು ಬೆಂಗಳೂರು ಮತ್ತು ಮೈಸೂರು ನಗರದಲ್ಲಿ ಹೆಚ್ಚಿಗೆ ಇದೆ ಅದರಿಂದ ನಾಗರೀಕರಿಗೆ ಕೂಡ ತೊಂದರೆಯಾಗುತ್ತಿದೆ ಎಂದು ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರು ತಿಳಿಸಿದ್ದಾರೆ ಬೆಂಗಳೂರು ನಗರದಲ್ಲಿ ಮೊದಲು ಯಾವಾಗಲೂ ಇರಲಿಲ್ಲ ಇತ್ತೀಚೆಗೆ ಒಂದೂವರೆ ವರ್ಷದ ಅವಧಿಯಲ್ಲಿ ಸಾಕಷ್ಟು ಬೀದಿ ನಾಯಿಗಳ ಕಾಟ ಹೆಚ್ಚಾಗಿದೆ ಈ ಸಮ್ಮಿಶ್ರ ಸರ್ಕಾರ ಬಂದಮೇಲೆ ಈ ಬೀದಿ ನಾಯಿಗಳು ಹೆಚ್ಚಾಗಿದ್ದು ಎಂಬುದನ್ನು ಒಪ್ಪಲೇ ಬೇಕಾಗುತ್ತದೆ ಯಾವಾಗಲೂ ಕೂಡ ಇಂತಹ ಘಟನೆ ನಡೆದ ಮೇಲೆ ತಾವು ಕೇವಲ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಳ್ಳುತ್ತೀರಿ ಶ್ರೀ ಜಯರಾಜ್ ಅವರಿಂದ ಸಾಕಷ್ಟು ನಿರೀಕ್ಷೆ ನಿಮ್ಮಿಂದ ಮತ್ತು ನಮ್ಮಿಂದ ಇತ್ತು, ಅವರನ್ನು ತೆಗೆದು ಹಾಕಿದಿರಿ ಈಗ ಶ್ರೀ ಸುಬ್ರಮಣ್ಯರವರು ಮಹಾನಗರ ಪಾಲಿಕೆಗೆ ಬಂದಿದ್ದಾರೆ ಇವತ್ತು ಇದು ಬಹಳ ಕಷ್ಟದ ಕೆಲಸವಲ್ಲ You have to identify ನೀವು ಏನು ಮಾಡುತ್ತೀರೆಂದರೆ ಏನೋ ಆಗುತ್ತಿದೆ ಎನ್ನುವ ರೀತಿಯಲ್ಲಿ ಗುಡುಗಿ ಬಿಡುತ್ತೀರಿ ಬೆಂಗಳೂರಿನಲ್ಲಿ ಎಷ್ಟು ಪ್ರಕರಣಗಳು ಆಗಿವೆ? ಮಹಾರಾಜರ ಕಾಲದಲ್ಲಿ ಮೈಸೂರು ನಗರ ಬಹಳ ಹೆಸರು ವಾಸಿಯಾಗಿದ್ದು, that is a historical place ಇವತ್ತು ಬೀದಿ ನಾಯಿಗಳ ಕಾಟ ಈ ರಾಜಧಾನಿಯಾದ ಬೆಂಗಳೂರಿನಲ್ಲಿ ನಡೆಯುತ್ತಿದೆ ಇದು ನಮಗೆ ಶೋಭೆ ತರತಕ್ಕಂಥಾದ್ದಲ್ಲ ನಾನು 27 ವರ್ಷಗಳ ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದೆನು ಆಗ ಈ ನಾಯಿಗಳ ಕಾಟ ಇರಲಿಲ್ಲ ಏನ್ರಿ ನಾಯಿಗಳ ಕಾಟ ಆಗ ಇತ್ತೇ? ಇರಲಿಲ್ಲ ಇವತ್ತು ಈ ವಿಚಾರದ ಬಗ್ಗೆ ಬಹಳ ಗಂಭೀರವಾಗಿ ಪ್ರಶ್ನೆಯಾಗಿದೆ ಸಾಕಷ್ಟು ಇವತ್ತು ಜನಾಭಿಪ್ರಾಯ ಏನಿದೆ ಎಂದರೆ ಬೆಂಗಳೂರಿನಲ್ಲಿ ಸರ್ಕಾರ ಇದರ ಬಗ್ಗೆ ಸರಿಯಾಗಿ ಕ್ರಮ ತವಗೆದುಕೊಂಡಿಲ್ಲ ಹಾಗೂ ಮಹಾನಗರ ಪಾಲಿಕೆ ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಇದೆ ಅದೇ ರೀತಿ ಮೈಸೂರಿನಲ್ಲಿ ಕೂಡ ಇದೆ ಇದರ ಬಗ್ಗೆ ಒಂದು ಸಮಗ್ರವಾದಂತಹ ಚರ್ಚೆ

ಏನೂ ಬೇಕಾಗಿಲ್ಲ ತಾವು ಎಲ್ಲರ ಜೊತೆ ಕೂಡ ಮಾತನಾಡಿ ಇದಕ್ಕೆ ಮೂಲಭೂತವಾಗಿ ನಿಯಂತ್ರಣ ಮಾಡಬೇಕು ಇಲ್ಲಿ ಸರ್ಕಾರದ ಹೆಸರು ಕೆಡುತ್ತದೆ ಇತ್ತೀಚಿನ ದಿನಗಳಲ್ಲಿ ಬೇರೆ ಸಮಸ್ಯೆಗಳು ಇರುವುದು ಬೇರೆ ಎಲ್ಲಾ ಕಡೆಗೆ ಬೀದಿ ನಾಯಿಗಳ ಕಾಟ ಹೆಚ್ಚಾಗುತ್ತಿದೆ ಎಂದು ಹೇಳುತ್ತಿದ್ದಾರೆ ಎಲ್ಲಾ ಕಡೆಗೆ ಆಕ್ರೋಶ ಇದೆ ಇದರ ಬಗ್ಗೆ ಪಾಲಕರು ಕೂಡ ಸಾಕಷ್ಟು ಆತಂಕವನ್ನು ವ್ಯಕ್ತಪಡಿಸಿದ್ದಾರೆ ಸರ್ಕಾರ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ವಿರೋಧ ಪಕ್ಷದ ನಾಯಕರು, ಬೀದಿ ನಾಯಿಗಳ ವಿಚಾರದಲ್ಲಿ ಬಹಳ ಲಘುವಾಗಿ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ ಅದರ ಜೊತೆಗೆ ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಈ ಸಮ್ಮಿಶ್ರ ಸರ್ಕಾರ ಬಂದಮೇಲೆ ಬೀದಿ ನಾಯಿಗಳ ಕಾಟ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ ನಾನು ಅವರಿಗೆ ಒಂದು ಮನವಿ ಮಾಡುತ್ತೇನೆ, ಅವರ ಕಾಲದಲ್ಲಿ ಈ ಬೀದಿ ನಾಯಿಗಳ ಕಾಟ ಇಲ್ಲದೇ ಇರುವ ಹಾಗೆ ವ್ಯವಸ್ಥೆ ಏನಿತ್ತು, ಅದಕ್ಕೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು ಎಂದು ನಮಗೆ ಸಲಹೆ ಕೊಟ್ಟರೆ, ಆ ಸಲಹೆಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಆ ವಿಚಾರವನ್ನು ನಾನು ಮಾನ್ಯ ನಾಗರಾಜ್‌ರವರನ್ನು ಕೇಳಿ ಹೇಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಬೀದಿ ನಾಯಿಗಳ ಇಲಾಖೆ ತಮಗೆ ಸೇರುತ್ತದೆಯೇ? ನನಗೆ ಇನ್ನೂ ಅನುಮಾನ ಇದು ಆರೋಗ್ಯ ಸಚಿವರಿಗೆ ಸೇರಿದ್ದೆಂದು ಕಾಣುತ್ತದೆ ಬೀದಿ ನಾಯಿಗಳು ಕಡಿಯುವಂತಹ ವಿಚಾರ ಆರೋಗ್ಯ ಸಚಿವರಿಗೆ ಹಾಗೂ ನಾಯಿ ಸಾಕುವ ವಿಚಾರ ನಿಮಗೆ ಬರುತ್ತದೆ ನೀವು ಉತ್ತರ ಕೊಡುವಾಗ ಇದು ಯಾವ ಇಲಾಖೆಗೆ ಸೇರುತ್ತದೆಂದು ಸ್ವಲ್ಪ ಅನುಮಾನ ಬಂತು ಮಾನ್ಯ ಆರೋಗ್ಯ ಸಚಿವರು ಬೀದಿ ನಾಯಿಗಳ ಬಗ್ಗೆ ಹಿಂದೆ ಉತ್ತರ ಕೊಡುತ್ತಿದ್ದರು ಯಾವ್ಯಾವ ಜಾತಿ ನಾಯಿಗಳು ಇವೆ? ಇದರಲ್ಲಿ ಕಚ್ಚುವ ನಾಯಿ ಯಾವುದು? ಹುಚ್ಚು ನಾಯಿ ಯಾವುದು? ಈ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳುವುದಲ್ಲ ನಾಯಿಗಳು ಇದುವರೆಗೂ ಎಷ್ಟು ಜನರಿಗೆ ಕಚ್ಚಿದೆ? ಇದರಿಂದ ಎಷ್ಟು ಜನ ಸತ್ತಿದ್ದಾರೆ? ಅದರ ಬಗ್ಗೆ ಏನು ಕ್ರಮತೆಗೆದುಕೊಂಡಿದ್ದೀರಿ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೆ, ಇಲ್ಲಿಯೇ 224ಜನ ಶಾಸಕರದ್ದರೆ 224 ಅಭಿಪ್ರಾಯಗಳಿರುತ್ತವೆ ಕೆಲವರು ಪ್ರಾಣಿಯನ್ನು ದಯೆಯಿಂದ ನೋಡಿಕೊಳ್ಳಬೇಕು ಎನ್ನುವವರು ಇದ್ದಾರೆ ಇನ್ನು ಕೆಲವರು ಕೊಲ್ಲಬೇಕು ಎನ್ನುವವರು ಇದ್ದಾರೆ ಏನಾಗಿದೆ ಎಂದರೆ ನಾಯಿಗಳು ಮಕ್ಕಳನ್ನು ಕಚ್ಚಿ ಕಚ್ಚಿ ಸಾಯಿಸುತ್ತಿವೆ ಆದರೂ ದಯೆ ತೋರಿಸಬೇಕೆಂದು ಹೇಳುವುದು ಏನು ದಯೆ ತೋರಿಸಬೇಕು?

ಶ್ರೀ ವಾಟಾಳ್ ನಾಗರಾಜ್ ಪ್ರಾಣಿ ದಯಾಸಂಘದವರ ಅಭಿಪ್ರಾಯ ಏನೆಂದರೆ

ಅಧ್ಯಕ್ಷರು ಪ್ರಾಣಿ ದಯಾಸಂಘದವರಿಗೆ ಎಲ್ಲಾ ವಹಿಸಿಬಿಡಿ ಅವರು ಎಲ್ಲಾ ವಹಿಸಿಕೊಳ್ಳಲಿ, ನೋಡಿಕೊಳ್ಳಲಿ

ಶ್ರೀ ವಾಟಾಳ್ ನಾಗರಾಜ್ ಕಚ್ಚುವ ನಾಯಿಯನ್ನು ಹಿಡಿಯಿರಿ ಎಂದು ಹೇಳುತ್ತಿರುವುದೇ ಹೊರತು

ಅಧ್ಯಕ್ಷರು ಯಾವ ಅಮಾಯಕರ ಮಕ್ಕಳು ಇರುತ್ತಾರೆ, ಅವರನ್ನು ಬೀದಿ ನಾಯಿಗಳು ಕಡಿದು ಸಾಯಿಸುತ್ತವೆ ಸುಮ್ಮನೆ ಅವರು ಒಂದು ರೀತಿಯಲ್ಲಿ ಒತ್ತಡ ಹಾಕುತ್ತಾರೆ, ಇವರು ಕೂಡ ಒತ್ತಡ ಹಾಕುತ್ತಾರೆ

ಶ್ರೀ ವಾಟಾಳ್ ನಾಗರಾಜ್ ಯಾವ ನಾಯಿಗಳು ಕಚ್ಚುತ್ತದೆ, ಅವುಗಳನ್ನು ಹಿಡಿಯಬೇಕು ಒಂದು ನಾಯಿ ಕಚ್ಚಿದ ತಕ್ಷಣ ಊರಿನಲ್ಲಿರುವ ನಾಯಿಗಳನ್ನೆಲ್ಲಾ ಹಿಡಿಯಬೇಡಿ ಎಂದು ಪ್ರಾಣಿ ದಯಾಸಂಘದವರ ವಾದ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಇದನ್ನು ನಿಗ್ರಹ ಮಾಡುವಂತಹ ಕ್ರಮಗಳೇನು? ಇದು ಮೈಸೂರು ಬೆಂಗಳೂರು ಇಲ್ಲಿಯೆ ಅಲ್ಲ, ಅನೇಕ ಕಡೆ ಈ ಪ್ರಕರಣಗಳಾಗಿವೆ ಅದಕ್ಕೋಸ್ಕರ ನಾಯಿಗಳಿಗೆ ಸಂತಾನಹರಣ ಮಾಡಬೇಕು ಎನ್ನುವ ಒಂದು ಸಲಹೆ ಇದೆ ನಾಯಿಗಳಿಗೆ ಸಂತಾನಹರಣ ಮಾಡಬೇಕೆಂಬ ಒಂದು ಸಲಹೆ ಇದೆ ಅದುದರಿಂದ ಈ ರೀತಿಯಾಗಿ ಏನಾದರೂ ಸರ್ಕಾರ ನಾಯಿಗಳ ಸಂತಾನಹರಣ ಮಾಡುವುದಕ್ಕೆ ಯಾವುದಾದರೂ ಕ್ರಮವನ್ನು ಕೈ ಗೊಂಡಿದ್ದಾರ? ಈ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯುವರೆ, ಇದು ತಮ್ಮ ಇಲಾಖೆ ಸಂಬಂಧಪಟ್ಟಿದ್ದರೆ, ತಾವೇ ಉತ್ತರ ಹೇಳಿ, ಇಲ್ಲವೆಂದರೆ ಮಾನ್ಯ ಆರೋಗ್ಯ ಸಚಿವರು ಹೇಳಲಿ, ಯಾರು ಉತ್ತರವನ್ನು ಹೇಳುತ್ತಾರೋ ಹೇಳಲ್ಲಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಬೀದಿ ನಾಯಿಗಳ ಜನನದ ನಿಯಂತ್ರಣ ಮಾಡುವುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ ಆದರೆ ಒಂದು ವಿಚಾರವನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂಥಾದ್ದು, ಕಚ್ಚಿರುವಂಥಾ ನಾಯಿಗಳನ್ನು ಹಿಡಿಯಬೇಕು, ಕಚ್ಚದೇ ಇರುವಂಥಾ ನಾಯಿಗಳನ್ನು ಹಿಡಿಯಬಾರದೆಂದು ಹೇಳಿದ್ದಾರೆ ಈಗ ಯಾವ ನಾಯಿ ಯಾರಿಗೆ ಕಚ್ಚಿದೆಯೆಂಬುದನ್ನು ಗುರುತಿಸುವುದಕ್ಕೆ, ಮಾನ್ಯ ವಾಟಾಳ್ ನಾಗರಾಜ್‌ರವರ ಅಧ್ಯಕ್ಷತೆಯಲ್ಲೇ ಒಂದು ಸಮಿತಿಯನ್ನು ರಚನೆ ಮಾಡುವುದಕ್ಕೆ, ತಾವು ಒಪ್ಪುವುದಾದರೆ ನಾವು ತಯಾರಾಗಿದ್ದೇವೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿಗೆ ಕೊಟ್ಟಿದ್ದೇನೆ

ಅಧ್ಯಕ್ಷರು ಆಯಿತು, ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಎಸ್ ಎಸ್ ಪಾಟೀಲ್‌ರವರೆ, ಪ್ರಶ್ನೆ ಕೇಳಿ

ಕೆ ಆರ್ ಡಿ ಸಿ ಎಲ್ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 24 (87) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)

ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಪ್ರಶ್ನೆ

ಅ) ಕೆ ಆರ್ ಡಿ ಸಿ ಎಲ್ ವತಿಯಿಂದ ನಡೆಯತಕ್ಕಂತಹ ಸೇತುವೆ ಹಾಗೂ ರಸ್ತೆಗಳ ಕಾಮಗಾರಿಗಳು ಸರಿಯಾದ ಮೇಲ್ವಿಚಾರಣೆ ಇಲ್ಲದೇ ಕಳಪೆ ಕಾಮಗಾರಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಮೇಲ್ವಿಚಾರಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ,

ಇ) ಕೆ ಆರ್ ಡಿ ಸಿ ಎಲ್ ದಲ್ಲಿ ಇಂಜಿನಿಯರ್‌ರ ಕೊರತೆ ಇದ್ದರೆ ಸ್ಥಳೀಯ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ರರಿಂದ ಮೇಲ್ವಿಚಾರಣೆ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದು?

ಉತ್ತರ ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬಂದಿಲ್ಲ

ಆ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ತೆಗೆದುಕೊಂಡ ಸೇತುವೆ ಮತ್ತು ರಸ್ತೆ ಕಾಮಗಾರಿಗಳ ಗುಣಮಟ್ಟ ಮೇಲ್ವಿಚಾರಣೆಯನ್ನು ಮಾಡಲು ತಾಂತ್ರಿಕ ಸಲಹೆಗಾರರನ್ನು ನೇಮಿಸಲಾಗಿದೆ ಸದರಿ ತಾಂತ್ರಿಕ ಸಲಹೆಗಾರರು ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲಿಸಿ ಮೇಲ್ವಿಚಾರಣೆ ಮಾಡುತ್ತಾರೆ ಅಲ್ಲದೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಇಂಜಿನಿಯರ್‌ಗಳು ಸಹ ಸದರಿ ಕಾಮಗಾರಿಗಳ ಮೇಲುಸ್ತುವಾರಿ ಮಾಡುತ್ತಿರುತ್ತಾರೆ

ಇ) ಅಗತ್ಯತೆಗೆ ಅನುಗುಣವಾಗಿ ಇಂಜಿನಿಯರ್‌ಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಮಗ ನಿಯಮಿತಕ್ಕೆ ನೇಮಿಸಲಾಗುವುದು

ಶ್ರಿ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ ನಾನು ಕೆ ಆರ್ ಡಿ ಸಿ ಎಲ್ ವತಿಯಿಂದ ನಡೆಯತಕ್ಕಂತಹ ಸೇತುವೆ ಹಾಗೂ ರಸ್ತೆಗಳ ಕಾಮಗಾರಿಗಳು ಸರಿಯಾದ ಮೇಲ್ವಿಚಾರಣೆ ಇಲ್ಲದೇ ಕಳಪೆ ಕಾಮಗಾರಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೆ ಅದಕ್ಕೆ ಸರ್ಕಾರದ ಉತ್ತರ ಇಲ್ಲವೆಂದು ತಿಳಿಸಿದ್ದಾರೆ ಇಲ್ಲಿ ಹೌದು ಎಂದು ಹೇಳುವುದಕ್ಕೆ ಬರುವುದಿಲ್ಲ, ಇಲ್ಲವೆಂದು ಹೇಳಲೇ ಬೇಕಾಗುತ್ತದೆ ಇನ್ನು ಎರಡನೆಯ ಪ್ರಶ್ನೆ ಹಾಗಿದ್ದಲ್ಲಿ, ಮೇಲ್ವಿಚಾರಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ? ಎಂದು ಕೇಳಿದ್ದೆ ಅದಕ್ಕೆ ಸರ್ಕಾರದ ಉತ್ತರ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ತೆಗೆದುಕೊಂಡ ಸೇತುವೆ ಮತ್ತು ರಸ್ತೆ ಕಾಮಗಾರಿಗಳ ಗುಣಮಟ್ಟ ಮೇಲ್ವಿಚಾರಣೆಯನ್ನು ಮಾಡಲು ತಾಂತ್ರಿಕ ಸಲಹೆಗಾರರನ್ನು ನೇಮಿಸಲಾಗಿದೆ ಸದರಿ ತಾಂತ್ರಿಕ ಸಲಹೆಗಾರರು ಕಾಮಗಾರಿಗಳ

ಗುಣಮಟ್ಟವನ್ನು ಪರಿಶೀಲಿಸಿ ಮೇಲ್ವಿಚಾರಣೆ ಮಾಡುತ್ತಾರೆ ಅಲ್ಲದೇ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಇಂಜಿನಿಯರ್‌ಗಳು ಸಹ ಸದರಿ ಕಾಮಗಾರಿಗಳ ಮೇಲುಸ್ತುವಾರಿ ಮಾಡುತ್ತಿರುತ್ತಾರೆಂದು ಉತ್ತರವನ್ನು ಕೊಟ್ಟಿದ್ದಾರೆ ಮೂರನೆಯ ಪ್ರಶ್ನೆ ಕೆ ಆರ್ ಡಿ ಸಿ ಎಲ್ ದಲ್ಲಿ ಇಂಜಿನಿಯರ್‌ರ ಕೊರತೆ ಇದ್ದರೆ ಸ್ಥಳೀಯ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ರವರಿಂದ ಮೇಲ್ವಿಚಾರಣೆ ಮಾಡಿಸುತ್ತೀರಾ? ಅದಕ್ಕೆ ಬೇರೆ ಬೇರೆ ಮಾಡುತ್ತೇವೆಂದು ಹೇಳಿದ್ದಾರೆ ಇವರು ಹೇಳಿರುವ ಬಗ್ಗೆ, ನಮ್ಮ ಅಂದಾಜಿನ ಸಮಿತಿಯ ಅಧ್ಯಕ್ಷರು ಸದನದಲ್ಲೇ ಇದ್ದಾರೆ ನಾವು ಅಂದಾಜು ಸಮಿತಿಯಲ್ಲೇ ನೋಡಿದ್ದೇವೆ ಇಲ್ಲಿ ತಾವು ಹೇಳಿರುವಂತೆ ಮೇಲ್ವಿಚಾರಣೆ ಇಲ್ಲ ಇದು ನನ್ನ ಊರಿನ ಪಕ್ಕದಲ್ಲೆ ಇದೆ ನಾನು ಪ್ರತಿ ದಿವಸ ಹೋಗಿ ಇಂಜಿನಿಯರ್ ಬರುತ್ತಿದ್ದಾರ ಎಂದು ಕೇಳುತ್ತಿದ್ದೇನೆ ಇಲ್ಲಿ ಕಂಟ್ರಾಕ್ಟ್‌ದಾರನೇ estimate ಮಾಡುತ್ತಾನೆ, ಅವನೇ ಕೆಲಸವನ್ನು ಮುಗಿಸಿ ಹೋದ ಮೇಲೆ, ಇಂಜಿನಿಯರ್ ಮೇಲ್ವಿಚಾರಣೆ ಮಾಡುವುದಕ್ಕೆ ಬರುತ್ತಾರೆ ಎಂ ಡಿ ಯವರನ್ನು ನಮ್ಮ ಒಂದು ಬ್ರಿಡ್ಜ್ ಅನ್ನು ನೋಡುವುದಕ್ಕೆ ಕಳುಹಿಸಿದ್ದರು ಅಧ್ಯಕ್ಷರೆ, ಒಂದು ಬ್ರಿಡ್ಜ್ ಅನ್ನು ಕಟ್ಟಿದ್ದಾರೆ ಅದು ಈ ಕಡೆಯಿಂದ ಬಸ್ ಹೋದರೆ, ಆ ಕಡೆಗೆ ಕಾಣುವುದಿಲ್ಲ ಅಲ್ಲಿ 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಅದು ಬೇಕಾಗಿರಲಿಲ್ಲ ಇದಕ್ಕೆ ಇನ್ನು ಎರಡು ಬ್ರಿಡ್ಜ್ ಅನ್ನು ಮಾಡಬಹುದಾಗಿತ್ತು ಇದನ್ನು ಏಕೆ ಮಾಡಿದ್ದೀರೆಂದು ಕೇಳಿದೆ ಇಲ್ಲಿಗೆ ಅಂದಾಜು ಸಮಿತಿಯಿಂದ ಎಂ ಡಿ ಯವರು ಹೋಗಿದ್ದರು ಅವರು ವರದಿಯನ್ನು ಕೊಟ್ಟಿದ್ದಾರೆ ಆಗ 5 ವರ್ಷಗಳ ಅವಧಿ ಇದೆಯೆಂದು ಹೇಳಿದ್ದರು, ಕಾಮಗಾರಿಯನ್ನು ಮಾಡುತ್ತಾರೆಂದು ಉತ್ತರ ಇತ್ತು ಇವತ್ತು ಮೇಲ್ವಿಚಾರಣೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ ಅದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರತಿ ತಾಲ್ಲೂಕಿನಲ್ಲೂ ಅಸಿಸ್ಟೆಂಟ್ ಇಂಜಿನಿಯರ್‌ಗಳು ಇದ್ದಾರೆ ಜಿಲ್ಲಾ ಮಟ್ಟದಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ಇದ್ದಾರೆ ಇವರು 3-4 ಜಿಲ್ಲೆಗೆ ಒಬ್ಬರು ಇದ್ದರೆ ಎಲ್ಲವನ್ನು ಇವರೇ ನೋಡುವುದಕ್ಕೆ ಆಗುವುದಿಲ್ಲ, ಸೂಪರ್‌ವಿಷನ್ ಬಹಳ ಕಳಪೆಯಾಗುತ್ತಿದೆ ಇವತ್ತಿನ ಪರಿಸ್ಥಿತಿಯಲ್ಲಿ ಸೂಪರ್‌ವಿಸನ್ ಅನ್ನು ಕಂಟ್ರಾಕ್ಟ್‌ದಾರರ ಮೇಲೆ ಬಿಟ್ಟು, ಕೊನೆಯ ಹಂತದಲ್ಲಿ ನೋಡುವುದಕ್ಕೆ ಆಗುವುದಿಲ್ಲ, ಸೂಪರ್‌ವಿಷನ್ ಬಹಳ ಕಳಪೆಯಾಗುತ್ತಿದೆ ಇವತ್ತಿನ ಪರಿಸ್ಥಿತಿಯಲ್ಲಿ ಸೂಪರ್‌ವಿಷನ್ ಅನ್ನು ಕಾಂಟ್ರಾಕ್ಟ್‌ದಾರರ ಮೇಲೆ ಬಿಟ್ಟು, ಕೊನೆಯ ಹಂತದಲ್ಲಿ ನೋಡುವುದಕ್ಕೆ ಹೋದರೆ ಆಗುವುದಿಲ್ಲ ಈಗಾಗಲೇ ಅವರಿಗೆ 25 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಕೊಟ್ಟಿದ್ದೀರಿ ಈ ಕಡೆಗೆ ಸೂಪರ್‌ವಿಷನ್ ಮಾಡುವುದಕ್ಕೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್‌ಗೆ ಕೊಡಿ

ಅಧ್ಯಕ್ಷರು ತಾವು ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ

ಶ್ರೀ ಎಸ್ ಎಸ್ ಪಾಟೀಲ್ ಲೋಕೋಪಯೋಗಿ ಇಲಾಖೆಯವರು supervision ಮಾಡುವುದಕ್ಕೆ ಕೊಡುತ್ತಿರಾ ಹೇಗೆ ಎಂಬುದನ್ನು ಹೇಳಬೇಕು

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಅಧ್ಯಕ್ಷರೆ, ಈಗಾಗಲೇ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ನಿಗಮದಿಂದ ಏನು ಬ್ರಿಡ್ಜ್‌ಗಳನ್ನು ತೆಗೆದುಕೊಳ್ಳುತ್ತೇವೆ, ಅದನ್ನು 25 ಲಕ್ಷ ರೂಪಾಯಿಗಳವರೆಗೂ ಲೋಕೋಪಯೋಗಿ ಇಲಾಖೆಯವರೇ, ಮಾಡುತ್ತೇವೆ 25 ಲಕ್ಷ ರೂಪಾಯಿಗಳಗಿಂತ ಮೇಲ್ಪಟ್ಟ ಕಾಮಗಾರಿಗಳಿಗೆ ರಸ್ತೆ ನಿಗಮದವರು ಟೆಂಡರ್ ಕರೆದು ಮಾಡಿಸುತ್ತಾರೆ ಇದು ಪ್ಯಾಕೇಜ್ ಸಿಸ್ಟಂನಲ್ಲಿ ಟೆಂಡರ್ ಅನ್ನು ಕರೆಯುತ್ತೇವೆ ಅದರಲ್ಲಿ ಏನಾದರೂ ಲೋಪ ಕಂಡಿದ್ದರೆ, ಅದರೆ ಬಗ್ಗೆ ಡಿಟೈಲ್ ಅನ್ನು ಕೊಟ್ಟರೆ, ಅದರ ಬಗ್ಗೆ ಕರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವಂಥಾದ್ದು, ಇಲ್ಲಿ ಕಳಪೆಯಾಗುವಂಥಾದ್ದನ್ನು ತೆಗೆಯೋಣ, ಅದು ಬೇರೆ ವಿಚಾರ ಆದರೆ ಪ್ರತಿ ನಿತ್ಯ ನಿಮ್ಮ ಅಧಿಕಾರಿಗಳು ಅಲ್ಲೆ ಇದ್ದು, ಆದರೆ ಮುಂದೆ ಹಾದು ಹೋದರೂ ಕೂಡ ನೋಡುವುದಿಲ್ಲ ಇದು ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ ಆ ಕಾರಣದಿಂದ ಅಲ್ಲಿ ಲೋಕಲ್‌ನವರಿಗೆ supervision ಕೆಲಸವನ್ನು ಕೊಟ್ಟರೆ, ಕನಿಷ್ಟ ಪಕ್ಷ ಕಳಪೆ ಕಾಮಗಾರಿಗಳು ಕಡಿಮೆಯಾಗುತ್ತದೆಂದು ನನ್ನ ವಾದವಿದೆ

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಸದಸ್ಯರು ಡಿಟೈಲ್ ಕೊಟ್ಟರೆ ಮಾಡಿಸುತ್ತೇನೆ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಹೇಳುವಾಗ, ಪ್ಯಾಕೇಜ್ ಸಿಸ್ಟಂನಲ್ಲಿ ಗ್ಯಾಮೆನ್ ಇಂಡಿಯಾದವರನ್ನು ಕರೆದು ಟೆಂಡರ್ ಕೊಡುವ ವಿಚಾರವನ್ನು ಹೇಳಿದರು ಎಲ್ & ಟಿಯವರು, ನಾಗಾರ್ಜುನದವರು ಟೆಂಡರ್ ಹಾಕಿ, ಮೂರು ವರ್ಷ ಸ್ಥಳೀಐ ಗುತ್ತಿಗೆದಾರರಿಂದ ಮಾಡಿಸುವುದಕ್ಕಿಂತ, ಲೋಕಲ್‌ನಲ್ಲಿ ಸಿಂಗಲ್ ಟೆಂಡರ್ ಕರೆದು, ಒಂದೊಂದು ಬ್ರಿಡ್ಜ್‌ಗೆ ಟೆಂಡರ್ ಕರೆದರೆ, ಅಲ್ಲಿಯವರೇ ಪಾಸು ಮಾಡುತ್ತಾರೆ ಇಲ್ಲಿ 7–8 ತಿಂಗಳಲ್ಲಿ ಕಾಮಗಾರಿಯನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ ಅದಕೋಸ್ಕರ ದಯಮಾಡಿ ಪ್ಯಾಕೇಜ್ ಮಾಡಿ 3–4 ಜಿಲ್ಲೆಗಳದ್ದು ಒಟ್ಟಿಗೆ ಟೆಂಡರ್ ಕರೆಯಬಾರದೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಎನ್ ಎಸ್ ಬೋಸರಾಜ (ಮಾನ್ವಿ) ಮಾನ್ಯ ಅಧ್ಯಕ್ಷರೆ, ಇವತ್ತು ಕೆ ಆರ್ ಡಿ ಸಿ ಎಲ್ ವತಿಯಿಂದ ನಡೆಯುತ್ತಿರುವಂಥಾ ಕಾಮಗಾರಿಗಳು ನಮ್ಮ ಭಾಗದಲ್ಲೂ ಸಹಿತ ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿರುವಂಥಾದ್ದು ಇದೆ ಈಗಾಗಲೇ ಮಾನ್ಯ ಎಸ್ ಎಸ್ ಪಾಟೀಲ್‌ವರು ಹೇಳಿದಂತೆ ಯಾವುದೇ ಕಾಮಗಾರಿಗಳೂ ಲೋಕೋಪಯೋಗಿ ಇಲಾಖೆಯವರಿಗೆ ಸಂಬಂಧವಿಲ್ಲದಂತೆ ಇದೆ ಅದು 25 ಲಕ್ಷ ರೂಪಾಯಿಗಳು ಮೇಲ್ಪಟ್ಟು ಪ್ಯಾಕೇಜ್ ಸಿಸ್ಟಂನಲ್ಲಿ ಕೊಡುವುದಿಲ್ಲ ಇವರೆಲ್ಲರೂ ಇವತ್ತು ಗ್ಯಾಮೆನ್ ಇಂಡಿಯಾದವರು ನಮ್ಮ ಭಾಗದಲ್ಲಿ ಕೆಲಸ ಮಾಡಿಸುತ್ತಿದ್ದಾರೆ ಅವರು ಎಲ್ಲವನ್ನೂ ಸಬ್ ಕಂಟ್ರಾಕ್ಟ್‌ಗೆ ಕೊಡುತ್ತಿದ್ದಾರೆ ನಮ್ಮಲ್ಲಿ ಮೂರು ಬ್ರಿಡ್ಜ್‌ಗಳನ್ನು ಮಾಡುತ್ತಿದ್ದಾರೆ ಮೊನ್ನೆ ಮಳೆ ಬಂದು ಎಲ್ಲಾ side diversion ಆಗಿದೆ, ಕೊಚ್ಚಿಕೊಂಡು ಹೋಗಿದೆ ನಿಮ್ಮ ಕೆ ಆರ್ ಡಿ ಸಿ ಎಲ್ ನ ಎಕ್ಸಿಕುಟೀವ್ ಇಂಜಿನಿಯರ್ ಅನ್ನು ಕೇಳಿದರೆ, ಅವರು ಯಾರೂ ಬರುವುದಕ್ಕೆ ತಯಾರಿಲ್ಲ ಆ ಗ್ಯಾಮೆನ್ ಇಂಡಿಯಾ consultant ಸಿಗುತ್ತಿಲ್ಲ ಈಗ restore ಮಾಡುವುದಕ್ಕೆ ಆಗದಂಥಾ ಪರಿಸ್ಥಿತಿ ಇದೆ ನೀವು ಯಾರಿಗೆ ಪ್ಯಾಕೇಜ್ ಅನ್ನು ಕೊಟ್ಟಿದ್ದರೂ ಸಹಿತ, ಅದನ್ನು P W D ಯ Executive Engineerಗೊ, S E ಗೋ, C E ಗೋ, ಆದರ ಜವಾಬ್ದಾರಿಯನ್ನು ವಹಿಸಿದರೆ, ಮಾತನಾಡುವುದಕ್ಕೆ ಅನುಕೂಲವಾಗುತ್ತದೆ, inspection ಮಾಡುವುದಕ್ಕೆ ಅನುಕೂಲವಾಗುತ್ತದೆ P W D ಇಲಾಖೆಯೇ ಬೇರೆಯಾಗಿದೆ, ಈ ಪ್ಯಾಕೇಜ್ ಸಿಸ್ಟಂಗೆ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಅಲ್ಲಿ ಅಧಿಕಾರಿ ನಮ್ಮ ಮಾತುಗಳನ್ನು ಕೇಳುವುದಿಲ್ಲವೆನ್ನುತ್ತಾರೆ ಅಲ್ಲಿ ಏನಾದರೂ ಮಾಡಬೇಕೆಂದು ಹೇಳಿದರೆ, ಆಗುವುದಿಲ್ಲವೆಂದು ಹೇಳುತ್ತಾರೆ ಇಲ್ಲ side embankment ಏನು ಕಟ್ಟಿರುತ್ತಾರೆ ಅವೆಲ್ಲಾ ಈಗಾಗಲೇ ನಾಲ್ಕು ಬ್ರಿಡ್ಜ್‌ಗಳು ಕೊಚ್ಚಿಕೊಂಡು ಹೋಗಿದೆ ಇದರ ಫೋಟೋಗಳನ್ನು ನಿಮ್ಮ ಅಧಿಕಾರಿಗಳ ಕೈಗೆ ಕೊಟ್ಟಿದ್ದೇವೆ ಇದು ಸಂಬಂಧವಿಲ್ಲವೆಂಬಂತೆ ನಿಮ್ಮ ಇಲಾಖೆಯಲ್ಲಿ ಕನೆಕ್ಷನ್ ಇಡದೇ ಇದ್ದರೆ, ಆ ಇಲಾಖೆಯ ಬೇರೆಯಾಗಿದೆ, ಅಲ್ಲಿ ಜನರಿಗೆ ಬಹಳಷ್ಟು ತೊಂದರೆಯಾಗತಕ್ಕಂಥ ಪರಿಸ್ಥಿತಿ ಇರುವುದರಿಂದ, ತಾವು ದಯಮಾಡಿ P W D ಇಲಾಖೆಯವರು ಸೂಪರ್‌ವೈಸ್ ಮಾಡುವುದಕ್ಕೆ ಅವಕಾಶ ಕಲ್ಪಿಸಿದರೆ ಅನುಕೂಲವಾಗುತ್ತದೆ ಅವರು ರೆಗ್ಯೂಲರ್ ಆಗಿ ಎಲ್ಲಿ ಇರುವುದರಿಂದ ಕಷ್ಟ ಸುಖಗಳನ್ನು ನೋಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಇಲಾಖೆಯ ಮಾನ್ಯ ಸಚಿವರಿಗೆ ತಿಳಿಸುತ್ತೇನೆ

ಶ್ರೀಮತಿ ಭಾಗೀರಥಿ ಟಿ ಮರುಳಸಿದ್ದಗೌಡ ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಒಂದು ಅವಕಾಶ ಕೊಡಿ

ಅಧ್ಯಕ್ಷರು ಇಲ್ಲ, ಈಗ ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಆಗುವುದಿಲ್ಲ ಈಗಾಗಲೇ ಮೂರು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಯೊಳಗೆ ಮುಗಿಸಬೇಕು

ಶ್ರೀ ಹೆಚ್ ಡಿ ರೇವಣ್ಣ· ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ರಾಜ್ಯ ಹೆದ್ದಾರಿ ರಸ್ತೆ ಇರಬಹುದು, ಸೇತುವೆಗಳು ಇರಬಹುದು, ಇದನ್ನು ನಿರ್ಮಾಣ ಮಾಡುವುದಕ್ಕೋಸ್ಕರವೇ ರಾಜ್ಯ ರಸ್ತೆ ನಿಗಮವೆಂದು ಮಾಡಿದ್ದೇವೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ 25 ಲಕ್ಷ ರೂಪಾಯಿಗಳೊಳಗೆ ಇರುವಂಥಾ ಸೇತುವೆಗಳನ್ನು ಲೋಕೋಪಯೋಗಿ ಇಲಾಖೆಗೆ ಕೊಡುತ್ತೇವೆ 25 ಲಕ್ಷ ರೂಪಾಯಿಗಿಂತ ಮೇಲೆದ್ದರೆ ಕೆಲವು ಕಡೆಗಳಲ್ಲಿ ಕೆಲಸ ಮಾಡುವುದಕ್ಕೆ ಲೋಕಲ್‌ನಲ್ಲಿ ಇಲ್ಲವೆಂಬ ದೃಷ್ಟಿಯಿಂದ ಹಿಂದೆಯೆ ಮಾಡಿರುವಂಥಾದ್ದು ನಾವು ಅಧಿಕಾರಕ್ಕೆ ಬರುವುದಕ್ಕಿಂತ ಮೊದಲೇ ಮಾಡಿದ್ದಾರೆ ಅದರಲ್ಲಿ ಏನಾದರೂ ಕಳಪೆ ಕಾಮಗಾರಿ, ಇನ್ನು ಏನಾದರೂ ತಮ್ಮ ಗಮನಕ್ಕೆ ಬಂದು, ಆ ಕಂಟ್ರಾಕ್ಟ್‌ದಾರರು in time ನಲ್ಲಿ ಕೆಲಸ ಮಾಡದೇ ಇರುವಂಥಾದ್ದು ಮಾನ್ಯ ಸದಸ್ಯರುಗಳ ತಮ್ಮ ಗಮನಕ್ಕೆ ಬಂದರೆ ಅದನ್ನು ನನಗೆ ಕೊಟ್ಟರೆ ಆದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ಇಲ್ಲಿ ಟೆಂಡರ್‌ಗೆ ಒಂದು ವರ್ಷವಿರುತ್ತದೆ, ಎರಡು ವರ್ಷಗಳ ಕಾಲಾವಕಾಶವಿರುತ್ತದೆ ಮೇಜರ್ ಬ್ರಿಡ್ಜ್‌ಗಳು ಇರುತ್ತವೆ ಅವರು ಸಮಯಕ್ಕೆ ಸರಿಯಾಗಿ ಮಾಡದೇ time bar ಆದರೆ, ಆ ಬಗ್ಗೆ ಕ್ರಮ ತೆಗೆದುಕೊಳ್ಳವಂಥಾದ್ದು ಇದ್ದರೆ, ಅದನ್ನು ನಾನು ಮಾಡುತ್ತೇನೆ ಅವರಿಗೆ ಟೈಮ್ ಇದ್ದರೆ ಕೆಲಸ ಮಾಡುವುದಕ್ಕೆ ನಾವು ಅವಕಾಶವನ್ನು ಕೊಡಬೇಕಾಗುತ್ತದೆ ಅಲ್ಲಿ ಕ್ವಾಲಿಟಿ ವರ್ಕ್ ಏನಾದರೂ ಸರಿ ಇಲ್ಲದಿದ್ದರೆ, ಕಳಪೆ ಕಾಮಗಾರಿಗಳು ಏನಾದರೂ ಮಾಡಿದ್ದರೆ, ಅದನ್ನು ಸದಸ್ಯರು ಕೊಟ್ಟರೆ ತನಿಖೆ ಮಾಡಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ

ಅಧ್ಯಕ್ಷರು ಮಾನ್ಯ ಹೆಚ್ ನಿಂಗಪ್ಪನವರೆ, ನಿಮ್ಮ ಪ್ರಶ್ನೆಗೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ

ಶ್ರೀ ಧರ್ಮಸಿಂಗ್· ಮಾನ್ಯ ಹೆಚ್ ಡಿ ರೇವಣ್ಣನವರು, ಮಾನ್ಯ ಎಸ್ ಎಸ್ ಪಾಟೀಲ್‌ವರು ಹಾಗೂ ಶ್ರೀ ಎನ್ ಎಸ್ ಬೋಸರಾಜುರವರು

ಕೇಳುವಂಥಾ ಪ್ರಶ್ನೆ ಏನೆಂದರೆ, Karnataka Road Development Corporationನ ಸೇತುವೆ ಮತ್ತೆ ರಸ್ತೆಗಳನ್ನು ಏನು ತೆಗೆದುಕೊಂಡಿದ್ದಾರೆ ಈ ಬಗ್ಗೆ ನನ್ನ ಕಾಲದಲ್ಲೂ ಕೂಡ ಚರ್ಚೆ ಮಾಡಿದ್ದೇವೆ ಇವತ್ತು ಸಾಕಷ್ಟು ಕಡೆಗಳಲ್ಲಿ ಸೇತುವೆಗೆ ಅಪ್ರೋಚ್ ರೋಡ್‌ಗಳು ಇಲ್ಲ ಮೊನ್ನೆ ಕೂಡ ಮಳೆ ಹಾನಿಯಿಂದ ನೆದರಗಿ ಬ್ರಿಡ್ಜ್ ಇದು ಬಿಜಾಪುರ ಜಿಲ್ಲೆಗೆ ಸಂಪರ್ಕವಾಗಿದ್ದು, ದೋಣಿ ಹಳ್ಳ ಬಂದ ಮೇಲೆ ಸಾಕಷ್ಟು ಅಲ್ಲಿ ತೊಂದರೆಯಾಗಿದೆ There we have spent three and a half crores ಇದೇ ರೀತಿಯಾಗಿ karnataka Road Development Corporation ಆಗುತ್ತಾ ಇದೆ ಇಲ್ಲಿ maintenance ಯಾರು? ನೀವು ಹಣವನ್ನು ಖರ್ಚು ಮಾಡುತ್ತೀರಿ ನೀವು ಖರ್ಚು ಮಾಡಿದ ಮೇಲೆ, PWD ಇಲಾಖೆಯವರು ಏನು ಹೇಳುತ್ತಾರೆ ನಮಗೆ ಇದು ಸಂಬಂಧಪಟ್ಟಿದ್ದು ಅಲ್ಲ, Krantaka Road Development Corporationಗೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಾರೆ ಅದಕ್ಕೆ You have to take a policy decision Maintenance ಮಾಡುವಂಥದ್ದು, ಬಹಳ ಮುಖ್ಯವಾದದ್ದು ಇಲ್ಲಿ ಅಷ್ಟು ದುಡ್ಡನ್ನು ಖರ್ಚು ಮಾಡಿ ರಸ್ತೆ, ಸೇತುವೆಗಳನ್ನು ಮಾಡಿದರೆ, ಇದರ maintenance ಆಗದೇ ಹೋದರೆ ತೊಂದರೆಯಾಗುತ್ತದೆ For that you have take a policy decision

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಅಧ್ಯಕ್ಷರೆ, State Highway roads maintenance ಮಾಡುವುದಕ್ಕೆ ಈಗಾಗಲೇ ಲೋಕೋಪಯೋಗಿ ಇಲಾಖೆಗೆ ಕೊಟ್ಟಿದ್ದೇವೆ 3 year ರಸ್ತೆಗಳು ಯಾವುದು ಇದೆ, ಆ ರಸ್ತೆಗಳ maintenance ಮಾಡುವುದಕ್ಕೆ 3 years maintenance ಗೆ ಲೋಕೋಪಯೋಗಿ ಇಲಾಖೆಗೆ ಈಗ ಕೊಟ್ಟಿದ್ದೇವೆ

ಅಧ್ಯಕ್ಷರು ಮಾನ್ಯ ಹೆಚ್ ನಿಂಗಪ್ಪನವರೆ, ನಿಮ್ಮ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಲು ಕಾಲಾವಕಾಶವನ್ನು ಕೇಳಿದ್ದಾರೆ ಇನ್ನು ಶ್ರೀ ಎ ಎಸ್ ಬಸವರಾಜುರವರೆ, ತಾವು ಪ್ರಶ್ನೆ ಕೇಳಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, Business Advisory Committee ಯಲ್ಲಿ ತಮಗೆ ಸ್ಪಷ್ಟವಾಗಿ ಹೇಳಿದ್ದೇವೆ ಇಲ್ಲಿ ಕಾಲಾವಕಾಶ ಕೇಳುವ ಸ್ಥಿತಿಯನ್ನು ನಿರ್ಮಾಣ ಮಾಡಬಾರದೆಂದರೆ, ಇವತ್ತು ಇಷ್ಟ ಪ್ರಶ್ನೆಗಳಿಗೆ ಕಾಲಾವಕಾಶವನ್ನು ಕೇಳುವಂಥಾ ಸ್ಥಿತಿ ಇದೆ? 5ನೇ ಪ್ರಶ್ನೆಗೆ ತಾವು

ಕಾಲಾವಕಾಶವನ್ನು ಕೇಳಿದ್ದಾರೆಂದು ಹೇಳಿದ್ದೀರಿ, ಅಂದ ಮೇಲೆ ಅಧಿವೇಶವನ್ನು ಏಕೆ ಕರೆಯಬೇಕು? ತಾವು ಕರೆದ B A C ಸಭೆಯಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ ನೀವು condone ಮಾಡುತ್ತಾ ಇದ್ದೀರಿ, 15 ದಿವಸಗಳು ಇರುವಂಥಾದ್ದನ್ನು 10 ದಿವಸಗಳಿಗೆ ತರುತ್ತಿದ್ದೀರಿ ಇಲ್ಲಿ ಒಂದು ಪ್ರಶ್ನೆಗೆ ಇಲಾಖೆಗಳಿಂದ ಉತ್ತರ ಬರುವುದಿಲ್ಲವೆಂದಾಗ, ತಾವು ಸೂಚನೆಯನ್ನು ಕೊಟ್ಟರೂ ಕಾಲಾವಕಾಶವನ್ನು ಕೇಳುವುದೆಂದರೆ, ಏನು ಸತ್ತು ಹೋದ ಮೇಲೆ ಉತ್ತರವನ್ನು ಕೊಡುತ್ತಾರ?

ಅಧ್ಯಕ್ಷರು ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಉಪ ಮುಖ್ಯಮಂತ್ರಿಗಳು ಇದ್ದಾರೆ, ಮತ್ತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ B A C ಮೀಟಿಂಗ್‌ನಲ್ಲಿ ತೀರ್ಮಾನವಾಯಿತು ಈಗ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಕ್ಕೆ ನಿಮ್ಮ ಅಧಿಕಾರಿಗಳು ಕೇಳುತ್ತಾ ಬಂದರೆ, ಹೇಗೆ? ಸದನದಲ್ಲಿ ಮತ್ತೆ ಮತ್ತೆ ಇದೇ ಪ್ರಶ್ನೆಗಳನ್ನು ಪ್ರಸ್ತಾಪ ಮಾಡುತ್ತಾ ಇದ್ದರೆ, ಚೆನ್ನಾಗಿರುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಕೆಲವು ಪ್ರಶ್ನೆಗಳಿಗೆ ಉತ್ತರಗಳೇ ಬಂದಿಲ್ಲ

ಅಧ್ಯಕ್ಷರು ಇನ್ನು ಮುಂದೆ ಯಾವುದೇ ಒಂದು ಪ್ರಶ್ನೆಗೂ ಕಾಲಾವಕಾಶವನ್ನು ಕೇಳಬಾರದು ಅದಕ್ಕೆ ಸೂಕ್ತವಾದ ತಿಳುವಳಿಕೆಯನ್ನು ನಿಮ್ಮ ಮಂತ್ರಿಗಳಿಗೆ ಸಂಬಂಧಪಟ್ಟಂಥ ಕಾರ್ಯದರ್ಶಿಗಳಿಗೆ ನೀಡಬೇಕು

ಶ್ರೀ ಜಿ ವಿ ಶ್ರೀ ರಾಮರೆಡ್ಡಿ ಕೆಲವು ಪ್ರಶ್ನೆಗಳಿಗೆ ಉತ್ತರವನ್ನೇ ಕೊಡುವುದಿಲ್ಲ, ಕೆಲವು ಪ್ರಶ್ನೆಗಳಿಗೆ ಕಾಲಾವಕಾಶವನ್ನು ಕೇಳುತ್ತಾರೆ

ಶ್ರೀ ವಾಟಾಳ್ ನಾಗರಾಜ್: ಕಾಲಾವಕಾಶಕ್ಕೆ ಕಾರಣವೇನು?

ಅಧ್ಯಕ್ಷರು ಉತ್ತರವಿಲ್ಲ ಎಂದರೆ ಸಂಬಂಧಪಟ್ಟ ಸಚಿವರು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಕಾಲಾವಕಾಶವನ್ನು ಏಕೆ ಕೊಡಬೇಕು? ಮಂತ್ರಿಗಳಿಗೆ ಬೇರೆ ಕೆಲಸವೇನಿದೆ? ಅವರು ಇಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲವೇ?

ಅಧ್ಯಕ್ಷರು ಆಯಿತು, ನಾನು ಹೇಳಿದ್ದೇನೆ ಇನ್ನು ಮುಂದೆ ಯಾವುದೇ ಕಾರಣಕ್ಕೂ ಕಾಲಾವಕಾಶವನ್ನು ಕೇಳತಕ್ಕಂಥ ಪ್ರಶ್ನೆ ಉದ್ಭವವಾಗಬಾರದು ಈ ರೀತಿ ನೋಡಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ ನಿಂಗಪ್ಪನವರೇ, ನಿಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ ನಿಮಗೆ ನಾನು ಉತ್ತರವನ್ನು ಕೊಡಿಸುತ್ತೇನೆ ಈಗ ನೀವು ಕುಳಿತುಕೊಳ್ಳಿ

ಶ್ರೀ ಸಿದ್ದು ಸವದಿ ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆಯನ್ನು ಹಾಕಿದ್ದೆ ಪ್ರಶ್ನೆಯೇ ಬಂದಿಲ್ಲ ಉತ್ತರವೂ ಇಲ್ಲ, ಪ್ರಶ್ನೆಯೂ ಬರಲಿಲ್ಲ ಮತ್ತೊಮ್ಮೆ ಅವಕಾಶ ಕೊಡುವಿರಾ ಎಂದು ಹೇಳಲಿಲ್ಲ ನನ್ನ ಪ್ರಶ್ನೆ ಏನಾಯಿತೆಂದು ಹೇಳಿ

ಅಧ್ಯಕ್ಷರು ಸಿದ್ದು ಸವದಿಯವರೇ, ನಿಮ್ಮ ಪ್ರಶ್ನೆಗೆ ಉತ್ತರಿಸಬೇಕಾದ ಮಂತ್ರಿಗಳಿಲ್ಲ ಉತ್ತರ ಬಂದಿಲ್ಲ ಎಂದು ಹೇಳಿದ್ದೇನಲ್ಲ

ಶ್ರೀ ಸಿದ್ದು ಸವದಿ ನನ್ನ ಪ್ರಶ್ನೆಗೆ writing ನಲ್ಲಿಯೂ ಉತ್ತರ ಬಂದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಕೆಲವೊಂದು ಪ್ರಶ್ನೆಗಳಿಗೂ ಉತ್ತರವಿಲ್ಲ, ಕೆಲವೊಂದಕ್ಕೆ ಕಾಲಾವಕಾಶ ಕೇಳುತ್ತಾರೆ, ಕೆಲವೊಂದಕ್ಕೆ ಉತ್ತರಿಸಲು ಮಂತ್ರಿಗಳಿಲ್ಲ ಏನು ಅಧ್ಯಕ್ಷರೇ ಇದು? ಮಂತ್ರಿಗಳಿಗೆ ಎಲ್ಲ ವ್ಯವಸ್ಥೆಗಳಿವೆ, ಸವಲತ್ತುಗಳಿವೆ

ಅಧ್ಯಕ್ಷರು ರೆಡ್ಡಿಯವರೇ, ಸರ್ಕಾರಕ್ಕೆ ನಾನು ಸ್ಪಷ್ಟವಾಗಿ ಸೂಚನೆ ನೀಡುತ್ತಿದ್ದೇನೆ ಇನ್ನು ಮುಂದೆ ಇಂಥ ಪ್ರಕರಣಗಳು ಬರಬಾರದು ಯಾವುದೇ ಕಾರಣಕ್ಕಾಗಿ ಕಾಲಾವಕಾಶ ಕೇಳತಕ್ಕಂಥಾದ್ದು, ಮಂತ್ರಿಗಳು ಗೈರುಹಾಜರಾಗತಕ್ಕಂಥಾದ್ದು ಆಗಬಾರದು ಎಂದು ಹೇಳಿದ್ದೇನೆ ಇನ್ನು ಮುಂದೆ ಸರಿಮಾಡಿಸುತ್ತೇನೆ

ಶ್ರೀ ಜಿ ವಿ ಶ್ರೀ ರಾಮರೆಡ್ಡಿ ಕಾಲಾವಕಾಶ ಕೇಳಿರುವ ಬಗ್ಗೆ ನಾನು ಕೇಳುತ್ತಿಲ್ಲ ಉತ್ತರ ಕೊಡಬೇಕಾದಂಥ ಮಂತ್ರಿಯೇ ಇಲ್ಲಿ ಇಲ್ಲ ಕಾಲಾವಕಾಶ ಕೇಳುವುದು ಬೇರೆ ಮಂತ್ರಿಗಳೇ ಇಲ್ಲವೆಂದರೆ ಹೇಗೆ? ಮಂತ್ರಿಗಳಿಗೆ ಬೇರೆ ಏನು ಕೆಲಸ? ಯುವಜನ ಮಂತ್ರಿಗಳೇ ಇಲ್ಲಿ ಇಲ್ಲ

ಶ್ರೀ ವಾಟಾಳ್ ನಾಗರಾಜ್ ಆ ಯುವನಜ ಮಂತ್ರಿಗಳು ಯಾರು ಎಂದು ಹೇಳಿ ಹೋಗಲಿ, ಅವರ ಹೆಸರನ್ನಾದರೂ ಹೇಳಿ ಸ್ವಾಮಿ ಆ ಯುವಜನ ಸಚಿವರು ಗಂಡಸರೇ, ಹೆಂಗಸರೇ, ಅವರು ಯಾರು, ಎಲ್ಲಿದ್ದಾರೆ, ಈ ಸದನದಲ್ಲಿದ್ದಾರೆಯೇ, ಈ ಸರ್ಕಾರವರೇ ಎಂದು ಹೇಳಿ ಸ್ವಾಮಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರ ಮಂತ್ರಿಮಂಡಲದಲ್ಲಿ ಹೆಂಗಸರೇ ಇಲ್ಲ ಅವರು ಹೆಂಗಸರೇ ಎಂದು ನೀವು ಕೇಳುತ್ತಿದ್ದೀರಿ ಒಳ್ಳೆಯ ಕಥೆಯಾಯಿತು ಕುಳಿತುಕೊಳ್ಳಿ ನೀವು

ಶ್ರೀ ವಾಟಾಳ್ ನಾಗರಾಜ್ ನೋಡಿ, ಹೆಂಗಸರ ಬಗ್ಗೆ ಬ್ರಹ್ಮಚಾರಿ ಶ್ರೀ ರಾಮರೆಡ್ಡಿಯವರು ಮಾತನಾಡುತ್ತಿದ್ದಾರೆ

ಅಧ್ಯಕ್ಷರು ಭಾರತ ಆಹ್ವಾನ ಕಬಡ್ಡಿ ಪಂದ್ಯಗಳು ನಡೆಯುತ್ತಿವೆ ಅದಕ್ಕಾಗಿ ನಾನು ಹೋಗಬೇಕಾಗಿದೆ ಎಂದು ತಿಳಿಸಿ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಬೇರೆ ಮಂತ್ರಿಗಳಿಗೆ ಒಪ್ಪಿಸಿ ಹೋಗಬಹುದಲ್ಲವೆ?

ಶ್ರೀ ವಾಟಾಳ್ ನಾಗರಾಜ್ ಅವರು ಯಾವ ಊರಿಗೆ ಹೋಗಿದ್ದಾರೆ ಸ್ವಾಮಿ? ಕಬಡ್ಡಿ ಎಲ್ಲಿ ನಡೆಯುತ್ತಿದೆ?

ಅಧ್ಯಕ್ಷರು ಆಯಿತು, ಉತ್ತರವನ್ನು ಮುಂದಿನ ಸಾರಿ ಕೊಡಿಸುತ್ತೇನೆ ದಯಮಾಡಿ ಕುಳಿತುಕೊಳ್ಳಿ ಮುಂದೆ ಈ ರೀತಿ ಆಗಬಾರದು

ಶ್ರೀ ವಾಟಾಳ್ ನಾಗರಾಜ್ ಅವರು ಈ ಸಭೆಯನ್ನು ಬಿಟ್ಟು ಕಬಡ್ಡಿಗೆ ಹೋಗುವುದು ಎಂದರೇನು? ಅವರಿಗೆ ಅವಕಾಶ ಕೊಟ್ಟವರಾರು? ನೀವು ಕೊಟ್ಟಿರುವಿರಾ?

ಅಧ್ಯಕ್ಷರು ಆಯಿತು, ದಯಮಾಡಿ ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಕೇಂದ್ರ ಸರ್ಕಾರದಲ್ಲಿ ಯಾವುದೋ ಕೆಲಸವಿತ್ತು ಅದಕ್ಕಾಗಿ ಹೋಗಿದ್ದಾರೆ ಎಂದರೆ ಪರವಾಗಿಲ್ಲ ಅದನ್ನು ಬಿಟ್ಟು ಕಬಡ್ಡಿ ಆಟಕ್ಕೆ ಹೋಗಿದ್ದಾರೆ ಎಂದರೆ ಇದೇನು ಸ್ವಾಮಿ?

ಬಸ್‌ನಿಲ್ದಾಣದ ಕಾಮಗಾರಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ (26) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಪ್ರಶ್ನೆ

ಅ) ಅರಸೀಕೆರೆ ಬಸ್ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಿ ಎಷ್ಟು ತಿಂಗಳು ಆಗಿರುತ್ತದೆ, ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸಮಯ ನಿಗದಿಕರಿಸಲಾಗಿದೆಯೇ (ವಿವರ ಒದಗಿಸುವದು),

ಆ) ಬಸ್ ನಿಲ್ದಾಣದ ದುರಸ್ಥಿ ಕಾಮಗಾರಿಯ ನಿದಾನಗತಿಯಲ್ಲಿ ನಡೆಯುತ್ತಿರುವುದು ನಿಜವೇ, ಇದಕ್ಕೆ ಕಾರಣವೇನು,

ಇ) ಅರಸೀಕರೆ ಡಿಪೋಗೆ ಎಷ್ಟು ಹೊಸ ಬಸ್ಸುಗಳನ್ನು ನೀಡಲಾಗಿದೆ,

ಈ) ಅರಸೀಕೆರೆಯಿಂದ ಬೆಂಗಳೂರಿಗೆ ಎಷ್ಟು ಹೊಸ ಬಸ್ಸುಗಳನ್ನು ನೀಡಲಾಗಿದೆ,

ಉ) ಅರಸೀಕೆರೆ ತಾಲ್ಲೂಕಿನ ಬಾಣಾವರ, ಜೆ ಸಿ ಪುರ ಬಸ್ ನಿಲ್ದಾಣಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ

ಊ) ಈ ಕಾಮಗಾರಿಗೆ ಖರ್ಚಾಗುವ ಹಣ ಎಷ್ಟು? (ವಿವರ ಒದಗಿಸವುದು)?

ಶ್ರೀ ಎನ್ ಚಲುವರಾಯಸ್ವಾಮಿ ಸಾರಿಗೆ ಸಚಿವರು

ಅ) ದಿನಾಂಕ 25–5–2006ರಂದು ಪ್ರಾರಂಭಿಸಲಾಗಿದ್ದು, ಟೆಂಡರ್ ಕರಾರಿನ ಪ್ರಕಾರ ಯೋಜನೆಯನ್ನು ಪೂರ್ಣಗೊಳಿಸಲು ಮಳೆಗಾಲ ಹೊರತುಪಡಿಸಿ 9 ತಿಂಗಳ ಕಾಲಾವಕಾಶವನ್ನು ನಿಗದಿಪಡಿಸಲಾಗಿದೆ

ಆ) ಹೌದು ಅರಸೀಕೆರೆ ಬಸ್ ನಿಲ್ದಾಣವು 1 ಎಕರೆ 10 ಗಂಟೆ ಪ್ರದೇಶದಲ್ಲಿ ನಿರ್ಮಾಣಗೊಂಡಿದ್ದು, ಬಸ್‌ಗಳ ಸಂಚಾರಕ್ಕಾಗಿ ಕೇವಲ 25 ಗುಂಟೆಎಎ ವಿಸ್ತೀರ್ಣ ಮಾತ್ರ ಲಭ್ಯವಿರುತ್ತದೆ ವಾಹನಗಳ ಓಡಾಟ ಮತ್ತು ಪ್ರಯಾಣಿಕರ ಓಡಾಟ ಹೆಚ್ಚಾಗಿರುವುದರಿಂದ ಪ್ರಯಾಣಿಕರಿಗೆ ಮತ್ತು ಸಂಚಾರಕ್ಕೆ ಅನಾನಕುಕೂಲವಾಗದಂತೆ ಹಂತಹಂತವಾಗಿ ಕೆಲಸವನ್ನು ನಿರ್ವಹಿಸ ಬೇಕಾಗಿರುತ್ತದೆ ಹಾಗೂ ಸಾರಿಗೆ ನಿಗಮದ ಬಸ್ ಕಾರ್ಯಾಚರಣೆಯನ್ನೂ ಸಹ ಪ್ರಯಾಣಿಕರಿಗೆ ಅನಾನುಕೂಲವಾಗದಂತೆ ನಿರ್ವಹಿಸಲಾಗುತ್ತಿದೆ ಈ ಸಮಸ್ಯೆಯನ್ನು ಬಗೆಹರಿಸಿಕೊಂಡು ಕಾಮಗಾರಿ ನಿರ್ವಹಿಸುವಲ್ಲಿ ವಿಳಂಬ ವಾಗಿರುತ್ತದೆ

ಇ) 2006–07 ರಿಂದ 2007–08 (ಜೂನ್ ಅಂತ್ಯಕ್ಕೆ) ಒಟ್ಟು 21 ಹೊಸ ಬಸ್‌ಗಳನ್ನು ನೀಡಲಾಗಿದೆ

ಈ) 17 ಹೊಸ ಬಸ್ಸುಗಳನ್ನು ನೀಡಲಾಗಿದೆ

ಉ) ಅರಸೀಕೆರೆ ತಾಲ್ಲೂಕು ಬಾಣಾವರ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಿ ಮೇಲ್ದರ್ಜೆಗೇರಿಸಲು ರೂ 26 50ಲಕ್ಷಗಳ ಯೋಜನೆಗೆ ಮಂಜೂರಾತಿ ನೀಡಿ ಕೆಲಸವನ್ನು ಟೆಂಡರ್ ಮೂಲಕ ವಹಿಸಿ ಡಿ 27 4 2006 ರಂದು ಪ್ರಾರಂಭಿಸಲಾಗಿದೆ ಕೆಲಸವು ಬಹುತೇಕ ಪೂರ್ಣಗೊಂಡಿದ್ದು, ಪ್ರಯಾಣಿಕರ ಅನುಕೂಲಕ್ಕೆ ಬಿಟ್ಟುಕೊಡಲಾಗಿದೆ

ಊ) ಭಾಣಾವರ ಬಸ್ ನಿಲ್ದಾಣದ ಅಭಿವೃದ್ಧಿ ಕೆಲಸಗಳಿಗೆ ಈವರೆಗೂ ರೂ 26 50 ಲಕ್ಷಗಳು ವೆಚ್ಚವಾಗಿರುತ್ತದೆ

ಜೆ ಸಿ ಪುರ ಬಸ್ ನಿಲ್ದಾಣದ ಅಭಿವೃದ್ಧಿ ಕೆಲಸಗಳಿಗೆ ಯೋಜನಾ ವರದಿಯನ್ನು ತಯಾರಿಸಿರುವುದಿಲ್ಲ

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೇ, ಅರಸೀಕೆರೆ ಬಸ್ ನಿಲ್ದಾಣದ ಕಾಮಗಾರಿಯನ್ನು ದಿನಾಂಕ 25–5–2006ರಂದು ಪ್ರಾರಂಭ ಮಾಡಿದ್ದು, ಈಗಾಗಲೇ ಸುಮಾರು ಒಂದೂಕಾಲು ವರ್ಷವಾಗಿದೆ ಕಾಮಗಾರಿ ಎಷ್ಟು ವಿಳಂಬವಾಗಲು ಕಾರಣವೇನು? ವಿಳಂಬದ ಕಾರಣದಿಂದಾಗಿ ಅನೇಕ ದುರಂತಗಳಾಗಿವೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಗುತ್ತಿಗೆದಾರರ ವಿಳಂಬದಿಂದಾಗಿ, ಕಳೆದ ತಿಂಗಳ 23ನೇ ತಾರೀಖಿನಂದು ಒಂದು ಬಸ್ಸನ್ನು ಹಿಂದಕ್ಕೆ ತೆಗೆದುಕೊಳ್ಳುವಾಗ ಅದು ಗೋಡೆಗೆ ಗುದ್ದಿ ಅಲ್ಲಿದ್ದಂಥ ಇಬ್ಬರ ದುರ್ಮರಣಕ್ಕೆ ಕಾರಣವಾಯಿತು ಮರಣಕ್ಕೆ ತುತ್ತಾದವರೆಂದರೆ, ದರ್ಶನ್ ಎನ್ನುವ ಆರು ವರ್ಷದ ಹುಡುಗ ಮತ್ತು ಜಾವಗಲ್ ಹೋಬಳಿಯ ಕೂಡನಹಳ್ಳಿಯ ಲಲಿತಮ್ಮ ಎನ್ನುವ ಮಹಿಳೆ ಮೃತಪಟ್ಟ ದರ್ಶನ್‌ನ ತಾಯಿಯಾದ ಮರುಳಮ್ಮ ಎನ್ನುವವರಿಗೆ ಅಪಘಾತದಲ್ಲಿ ಏಟು ಬಿದ್ದಿದೆ ನಾನು ಮತ್ತು ಶಿವರಾಂ ಇಬ್ಬರೂ ಸ್ಥಳ ಪರೀಕ್ಷೆಗೆ ಹೋಗಿ ನೋಡಿ ಅವರನ್ನು ಆಸ್ಪತ್ರೆಗೆ ಸೇರಿಸಿದೆವು ಮರುಳಮ್ಮನ ಗಂಡ ಸತ್ತು ಹೋಗಿ ಎರಡು ತಿಂಗಳಷ್ಟೆ ಆಗಿತ್ತು ಮರುಳಮ್ಮ ಮತ್ತು ಅವರ ಮಗ ಸಂತೆಗೋಸ್ಕರ ಬಂದಾಗ ಈ ಅಪಘಾತವಾಗಿದೆ ಅಪಘಾತದಲ್ಲಿ ಅವಳ ಕರುಳಿನ ಕುಡಿನಾಶವಾಯಿತು ಈಗ ತಾನು ಯಾರಿಗೋಸ್ಕರ ಬದುಕಿರಬೇಕು ಎಂದು ಮರುಳಮ್ಮ ಒದ್ದಾಡುತ್ತಿದ್ದಾಳೆ ಮೃತಪಟ್ಟವರ ಬಂಧುಗಳಿಗೆ KSRTC ಯಿಂದ 15 ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಡಲಾಗಿದೆ

ಅಧ್ಯಕ್ಷರು ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ ಈ ರೀತಿ ಕಥೆ ಹೇಳಿಕೊಂಡು ಹೊರಟುಬಿಟ್ಟರೆ ಹೇಗೆ?

ಶ್ರೀ ಎ ಎಸ್ ಬಸವರಾಜುಳ ಆ ದೃಷ್ಟಿಯಿಂದ ಕೇಳುತ್ತಿದ್ದೇನೆ, ಕಾಮಗಾರಿ ವಿಳಂಬವಾಗಲು ಕಾರಣವೇನು? ಅದು ಪೂರ್ಣಗೊಳ್ಳಲು ಎನ್ನೂ ಎಷ್ಟು ದಿವಸ ಬೇಕು? 9 ತಿಂಗಳು ಬೇಕೆಂದು ಉತ್ತರಲ್ಲಿ ಹೇಳಿದ್ದೀರಿ ಈ ಕಾಮಗಾರಿಯನ್ನು ಮುಗಿಸಲು ಎರಡು ವರ್ಷಗಳು ಬೇಕೇ ಎಂದು ಮಂತ್ರಿಗಳನ್ನು ಕೇಳುತ್ತಿದ್ದೇನೆ

ಶ್ರೀ ಎನ್ ಚಲುವರಾಯಸ್ವಾಮಿ ಮಾನ್ಯ ಅಧ್ಯಕ್ಷರೇ, ಅಪಘಾತದ ಬಗ್ಗೆ ಅವರು ಈಗ ಹೇಳಿದಂಥಾದ್ದರ ಬಗ್ಗೆ ನನಗೆ ಮೊದಲು ಪ್ರಶ್ನೆಯನ್ನು ಕೇಳಿಲ್ಲ ಕಾಮಗಾರಿಯ ಬಗ್ಗೆ ಮಾತ್ರ ಪ್ರಶ್ನೆಯನ್ನು ಕೇಳಿದ್ದಾರೆ ಅಲ್ಲಿ ನಡೆದಂಥ ಘಟನೆಯ ಬಗ್ಗೆ ಅವರು ಈ ಸದನದಲ್ಲಿ ಪ್ರಸ್ತಾಪಿಸಿದ್ದು, ಅದರ ಬಗ್ಗೆ ನಾನು

ಕೂಲಂಕುಷವಾಗಿ ಪರಿಶೀಲನೆ ಮಾಡಿ, ಅವರ ಜೊತೆಯಲ್ಲೂ ಸಹ ಮಾತನಾಡಿ, ಅಧಿಕಾರಿಗಳನ್ನು ಕರೆಸಿ ನಿರ್ಲಕ್ಷ್ಯಕ್ಕೆ ಮತ್ತು ಸಾವಿಗೆ ಯಾರು ಕಾರಣ, ಅಪಘಾತವಾಗಲು ಏನು ಕಾರಣ ಎನ್ನುವುದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಂಡು, ಅದಕ್ಕೆ ಯಾವ ರೀತಿಯ ಸೂಕ್ತ ಪರಿಹಾರವನ್ನು ಕೊಡಬೇಕು ಎನ್ನುವ ಬಗ್ಗೆ ತೀರ್ಮಾನ ಮಾಡುತ್ತೇನೆ ಕಾಮಗಾರಿಗೆ 9 ತಿಂಗಳು ಬೇಕು ಎಂದು ಕೇಳಿಲ್ಲ ಗುತ್ತಿಗೆದಾರರಿಗೆ 9 ತಿಂಗಳ ಕಾಲಾವಕಾಶವನ್ನು ಕೊಡಲಾಗಿದೆ ವಿಳಂಬವಾಗಲು ಕಾರಣವೇನೆಂದರೆ, ಅಲ್ಲಿ ಇರತಕ್ಕಂಥ ಬಸ್ ನಿಲ್ದಾಣ ಚಿಕ್ಕದಾಗಿದ್ದು, ಒಂದೇ ಬಾರಿ ಕೆಲಸವನ್ನು ಪ್ರಾರಂಭ ಮಾಡಲು ಅಗುವುದಿಲ್ಲ ಅನಿವಾರ್ಯ ಕಾರಣದಿಂದಾಗಿ ಸ್ವಲ್ಪ ವಿಳಂಬವಾಗಿದೆ

ಮುಂದಿನ ಸೆಪ್ಟೆಂಬರ್ ಒಳಗೆ ಕೆಲಸವನ್ನು ಸಂಪೂರ್ಣವಾಗಿ ಮುಗಿಸಲು ನಾನು ಸೂಚನೆಯನ್ನು ಕೊಟ್ಟಿದ್ದೇವೆ ಅಷ್ಟರೊಳಗೆ ಮುಗಿಸುತ್ತಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ ಅದು ಮತ್ತೂ ವಿಳಂಬವಾಗದ ರೀತಿಯಲ್ಲಿ, 15-20 ದಿವಸಗಳ ಮೊದಲೇ ಪೂರ್ಣಗೊಳಿಸಲು ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ ಅದೇ ರೀತಿ ಅವರು ಅರಸೀಕೆರೆ ತಾಲ್ಲೂಕಿನ ಬಾಣಾವರದ ಬಸ್ ನಿಲ್ದಾಣದ ಬಗ್ಗೆ ಕೇಳಿದ್ದಾರೆ ಬಾಣಾವರದಲ್ಲಿ ಈಗಾಗಲೇ 26 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಸ್ ನಿಲ್ದಾಣವನ್ನು ಪೂರ್ಣಗೊಳಿಸಿದ್ದು ಅದು ಜನಗಳಿಂದ ಉಪಯೋಗವಾಗುತ್ತಿದೆ ಅದೇ ರೀತಿ, ಜೆ ಸಿ ಪುರದಲ್ಲಿ ಹೊಸ ಬಸ್ ನಿಲ್ದಾಣವನ್ನು ಕೇಳಿದ್ದಾರೆ ಮುಂದೆ ಆದ್ಯತೆಯ ಮೇಲೆ ಅದರ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ

ಶ್ರೀ ಎ ಎಸ್ ಬಸವರಾಜು ಬಾಣಾವರದಲ್ಲಿ ಕಾಮಗಾರಿ ಮುಗಿದಿದೆ ಎಂದು ಹೇಳಿದ್ದೀರಿ ಅಲ್ಲಿ ಸಾರ್ವಜನಿಕರು ಕುಳಿತುಕೊಳ್ಳಲಿಕ್ಕಾಗಿ ಶೌಚಲಯದ ಮುಂದೆ ಪೀಠವನ್ನು ಹಾಕಲಾಗಿದೆ ಇದರಿಂದ ಮಹಿಳೆಯರು ಶೌಚಾಲಯಕ್ಕೆ ಹೋಗಬೇಕಾದರೆ ನಾಚಿಕೆ ಪಡುವಂತಾಗಿದೆ ಆದ್ದರಿಂದ ಆ ಪೀಠಗಳನ್ನು ಅಲ್ಲಿಂದ ತೆಗೆಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ ಅರಸೀಕೆರೆ ಬಸ್ ನಿಲ್ದಾಣ ಕಿರಿದಾಗಿದ್ದು, ಶಿವಮೊಗ್ಗ ಭದ್ರಾವತಿಗಳಿಂದ ಬೆಂಗಳೂರಿಗೆ ಹೋಗುವಂಥ ಬಸ್ಸುಗಳು ಹೆದ್ದಾರಿಯಲ್ಲಿ ನಿಲ್ಲುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಅದು ವೇಗವಾಗಿ ಈ ಬಸ್ ನಿಲ್ದಾಣದ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಕಡೂರು, ಅರಸೀಕೆರೆ ಮತ್ತು ತಿಪಟೂರು ಈ ಮೂರೂ ಸ್ಥಳಗಳಲ್ಲಿ ಕಾಮಗಾರಿ ಮಾಡುತ್ತಿರುವವರುವ ಒಬ್ಬನೇ ಗುತ್ತಿಗೆದಾರನಾಗಿದ್ದಾನೆ ತಾವು

ಸಿಗುತ್ತಿಲ್ಲವಾದ್ದರಿಂದ ನಾನು ಅನೇಕ ಬಾರಿ ನಿಮ್ಮ ಆಪ್ತ ಕಾರ್ಯದರ್ಶಿಯಾದ ವಿಜಯ್ ಕುಮಾರ್‌ರವರ ಬಳಿಯಲ್ಲೂ ನಾಲ್ಕೈದು ಬಾರಿ ಈ ಬಗ್ಗೆ ಹೇಳಿದ್ದೇನೆ ಆದಷ್ಟು ಬೇಗ ಅದನ್ನು ಮುಗಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ

ಅಧ್ಯಕ್ಷರು ಬಸವರಾಜುರವರೇ, supplementary ಪ್ರಶ್ನೆ ಕೇಳಿ ಎಂದರೆ ಈ ರೀತಿ ಮಾತನಾಡುತ್ತಾ ಹೋದರೆ ಹೇಗೆ? ಒಂದು ಗಂಟೆಯಲ್ಲಿ ನಾನು ಪ್ರಶ್ನೋತ್ತರವನ್ನು ಮುಗಿಸಬೇಕಾದರೆ ಈ ರೀತಿಯಾದರೆ ಆಗುವುದಿಲ್ಲ ಮಧ್ಯದಲ್ಲಿ ನಿಲ್ಲಿಸಿಬಿಡಬೇಕಾಗುತ್ತದೆ

ಶ್ರೀ ಎ ಎಸ್ ಬಸವರಾಜು ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ ನಮಗೆ ಅವಕಾಶ ಸಿಗುವುದೇ ಕಷ್ಟ ನಮಗೆ ಹತ್ತು ನಿಮಿಷ ಕಾಲಾವಕಾಶ ಕೊಡಿ ಮಾಧುಸ್ವಾಮಿಯವರಿಗೆ ಅರ್ಧ ಗಂಟೆ ಕೊಡುತ್ತೀರಿ, ವಾಟಾಳ್ ನಾಗರಾಜ್ ರವರಿಗೆ ಅರ್ಧಗಂಟೆ ಕೊಡುತ್ತೀರಿ ಅವರಿಗೆಲ್ಲ ಕೊಡುತ್ತೀರಿ ನಮಗೆ ಅರ್ಧಗಂಟೆ ಕೊಡುವುದಕ್ಕಾಗುವುದಿಲ್ಲವೇ?

ಅಧ್ಯಕ್ಷರು ಯಾರಿಗೂ ಅರ್ಧ ಗಂಟೆಎ ಕೊಡುವುದಿಲ್ಲ ಮಾಧು ಸ್ವಾಮಿಯವರಿಗೂ ಕೊಡುವುದಿಲ್ಲ, ಯಾರ್ರಿಗೂ ಕೊಡುವುದಿಲ್ಲ ಈ ರೀತಿಯಾದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ ಅಷ್ಟೇ

ಶ್ರೀ ಎ ಎಸ್ ಬಸವರಾಜು ಅರಸೀಕೆರೆ ಡಿಪೋಗೆ 21 ಹೊಸ ಬಸ್‌ಗಳನ್ನು ಬಿಟ್ಟಿದ್ದೇವೆ ಎಂದು ಹೇಳಿದ್ದಾರೆ ಇದು ಸುಳ್ಳು ಕೇವಲ 8 ಬಸ್‌ಗಳನ್ನು ಮಾತ್ರ ಬಿಟ್ಟಿದ್ದಾರೆ ಈ ಬಸ್ಸುಗಳಿಗೆ ಪ್ರಾಣಭಯದಿಂದ ಹತ್ತಬೇಕಾಗಿದೆ ಅರಸೀಕೆರೆಯಿಂದ ಬೆಂಗಳೂರಿಗೆ ಬರಬೇಕಾದರೆ 84 ರೂಪಾಯಿಗಳನ್ನು ಕೊಡಬೇಕು ಲೋಕಲ್ ಷೆಟ್ಲ್‌ನಲ್ಲಾದರೆ 29 ರೂಪಾಯಿ ತೆಗೆದು ಕೊಳ್ಳುತ್ತಾರೆ ಹೀಗಾದರೆ ಬಸ್ಸಿಗೆ ಯಾರು ಬರುತ್ತಾರೆ? ಹೋಗಲಿ, ಆ ಬಸ್ಸುಗಳಾದರೂ clean ಆಗಿರುತ್ತವೆಯೇ? ದಢದಢ, ಬಢಬಢ ಎನ್ನುತ್ತಿರುತ್ತವೆ ಎಣ್ಣೆ ಜಿಡ್ಡಿನಿಂದ ಸೀಟುಗಳಲ್ಲಿ ಕುಳಿತುಕೊಳ್ಳಲಾಗುವುದಿಲ್ಲ, ಗ್ಲಾಸಿನ ಮೇಲೆಲ್ಲ ಎಣ್ಣೆ ಜಿಡ್ಡು ಇರುತ್ತದೆ ಈ ರೀತಿಯೆಲ್ಲಾ ಇದೆ ಇದನ್ನು ಮಂತ್ರಿಯವರು ಯೋಚನೆ ಮಾಡಬೇಕು

ಶ್ರೀ ಎನ್ ಚಲುವರಾಯಸ್ವಾಮಿ ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಹೇಳಿರತಕ್ಕಂಥ ಎಲ್ಲ ವಿಚಾರಗಳ ಬಗ್ಗೆ ಬಹಳ ಬೇಗ ಪರಿಹಾರವನ್ನು ಮಾಡುತ್ತೇವೆ ಬಸ್ ನಿಲ್ದಾಣದ ಕಾಮಗಾರಿಯ ಅವಧಿಯನ್ನು ಮತ್ತೆ ವಿಸ್ತರಿಸುವ

ಪ್ರಶ್ನೆಯೇ ಇಲ್ಲ ಅದಷ್ಟು ಬೇಗ ಅದನು ಪೂರ್ಣಗೊಳಿಸುತ್ತೇವೆ ಅದು ಶಿವಮೊಗ್ಗ ಮತ್ತು ಬೆಂಗಳೂರಿನ ಹೆದ್ದಾರಿಯಲ್ಲಿರುವುದರಿಂದ ಅಲ್ಲಿ ಸಮಸ್ಯೆ ಇದೆ ಆ ಸಮಸ್ಯೆಯನ್ನು ಆದಷ್ಟು ಬಏಗ ಪರಿಹಾರ ಮಾಡುತ್ತೇವೆ ಅಲ್ಲಿ ಬಹಳ ಹಳೆಯ ಬಸ್ಸುಗಳಿದ್ದು ಅಲ್ಲಾಡುತ್ತಿವೆ ಎಂದು ಹೇಳಿದ್ದಾರೆ ಅವುಗಳನ್ನೆಲ್ಲ ತೆಗೆದು ಹಾಕುತ್ತೇವೆ

ಹೆಜಮಾಡಿ ಕಡಲನ್ನು ಪ್ರವಾಸೋದ್ಯಮವಾಗಿ ಅಭಿವೃದ್ಧಿ ಪಡಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 27 (211) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು)

ಮಾನ್ಯ ಪ್ರವಾಸೋದ್ಯಮ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹೆಜಮಾಡಿ ಬಂದರನ್ನು ಕೇಂದ್ರ ಸರ್ಕಾರ ಸರ್ವಋತು ಬಂದರಾಗಿ ಅಭಿವೃದ್ಧಿ ಪಡಿಸುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಸರ್ಕಾರವು ಈ ಪ್ರದೇಶವನ್ನು ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿ ಪಡಿಸಲು ಯೋಜನೆ ಸಿದ್ಧಪಡಿಸಿಕೊಂಡಿದೆಯೇ

ಇ) ಹಾಗಾದಲ್ಲಿ ಇದರ ಅಂದಾಜು ವೆಚ್ಚವೆಷ್ಟು?

ಶ್ರೀ ಬಿ ಶ್ರೀರಾಮುಲು ಪ್ರವಾಸೋದ್ಯಮ ಅಭಿವೃದ್ಧಿ ಸಚಿವರು

ಅ) ಇಲ್ಲ

ಆ) ಬಂದರುಗಳನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಯೋಜನೆ ಪ್ರವಾಸೋದ್ಯಮ ಇಲಾಖೆಯ ಮುಂದೆ ಇರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಲಾಲಾಜಿ ಆರ್ ಮೆಂಡನ್ ಮಾನ್ಯ ಅಧ್ಯಕ್ಷರೆ, ನಮ್ಮ ಕಾಪು ಕ್ಷೇತ್ರದ ಹೆಜಮಾಡಿ ಬಂದು ಬಳಿ ಪ್ರೇಕ್ಷಣೀಯ ಸ್ಥಳವಾದ ಕರಾವಳಿ ಪ್ರದೇಶವಿದೆ ಅದನ್ನು ಪ್ರವಾಸೋದ್ಯಮ ಇಲಾಖೆಯವರು ಅಭಿವೃದ್ಧಿಪಡಿಸಲಿಕ್ಕೆ ವಿಪುಲವಾದ ಅವಕಾಶವಿದೆ ಹೆಜಮಾಡಿ ಬಂದರಿಗೆ ಹಿಂದೆ ಆರಂಭಿಕ ಹಂತದಲ್ಲಿ ಸುಮಾರು 1 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅವರು ಬಂದರು ಪ್ರದೇಶವನ್ನು ಸ್ವಲ್ಪ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿದ್ದಾರೆ ಸುಮಾರು ರೂ 87 ಕೋಟಿಯನ್ನು ಇನ್ನೊಂದು ಪ್ರಸ್ತಾವನೆಯನ್ನು ಈಗಾಗಲೇ ಪೂನಾದಿಂದ ಬಂದರು ಇಲಾಖೆಯಿಂದ ಸರ್ವೆ ಮಾಡಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ ಆ ಪ್ರದೇಶದ ಜೊತೆಗೆ ಪ್ರವಾಸೋದ್ಯಮವನ್ನು ಕೂಡ ಅಭಿವೃದ್ಧಿಪಡಿಸಿದರೆ ಹೆಜಮಾಡಿ ಮತ್ತು ಕಾಪು ಪ್ರದೇಶ ಇವೆಲ್ಲ ಕೇರಳ ಮತ್ತು ಗೋವಾ ಮಾದರಿಯಲ್ಲಿ ಒಳ್ಳೆಯ ರೀತಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬಹುದು

ಒಂದು ಸಲ ಕರಾವಳಿ ಜಿಲ್ಲೆಗೆ ಭೇಟಿ ಕೊಟ್ಟು ನಮ್ಮ ಪ್ರವಾಸಿ ಕೇಂದ್ರದ ಆಯ್ದ ಪ್ರದೇಶಗಳನ್ನೆಲ್ಲ ಅಭಿವೃದ್ಧಿಪಡಿಸಬೇಕೆಂದು ಈಗಾಗಲೇ ಸಂಬಂಧಪಟ್ಟ ನಮ್ಮ ಮಾನ್ಯ ಮಂತ್ರಿಯವರಿಗೆ ವಿನಂತಿ ಮಾಡಿದ್ದೆ ಈಗಾಗಲೇ ನಮ್ಮ ಕಾಪುವಿನಲ್ಲಿ ಕೂಡ ಹಿಂದೆ ಬ್ರಿಟಿಷರು ಕಟ್ಟಿದಂಥ ದೀಪಸ್ಥಂಭ ಇದೆ ಆ ಭಾಗ ಕೂಡ ಪ್ರವಾಸೋದ್ಯಮಕ್ಕೆ ಅನುಕೂಲವಾಗಿದ್ದು, ಈಗಾಗಲೇ ಸಾವಿರಾರು ಜನರು ಅಲ್ಲಿಗೆ ಬಂದು ಹೋಗುತ್ತಿದ್ದಾರೆ ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ ಈ ದೃಷ್ಟಿಯಿಂದ ಹೆಜಮಾಡಿ ಮತ್ತು ಕರಾವಳಿಯ ಎಲ್ಲಾ ಪ್ರದೇಶಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಬೇಕಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ

ಶ್ರೀ ಬಿ ಶ್ರೀ ರಾಮುಲು ಮಾನ್ಯ ಅಧ್ಯಕ್ಷರೆ, ಆ ಸ್ಥಳಗಳನ್ನು ಅಭಿವೃದ್ಧಿಪಡಿಸಿ ಪ್ರವಾಸೋದ್ಯಮ ಮಾಡಲಿಕ್ಕೆ ನಮ್ಮ ಸರ್ಕಾರದಲ್ಲಿ, ನಮ್ಮ ಇಲಾಖೆಯಲ್ಲಿ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಬಂದರು ಅಭಿವೃದ್ಧಿಪಡಿಸಲಿಕ್ಕೆ, ಅದೇ ರೀತಿಯಾಗಿ ಪ್ರವಾಸೋದ್ಯಮ ಮಾಡಲಿಕ್ಕೆ ನಮ್ಮ ಶಾಸಕರು ಯಾವ ರೀತಿಯಲ್ಲಿ ನಮಗೆ ಸರ್ಕಾರಕ್ಕೆ, ನಮ್ಮ ಇಲಾಖೆಗೆ ಮಾಹಿತಿಯನ್ನು ಕೊಡುತ್ತಾರೋ, ಆ ರೀತಿಯಲ್ಲಿ ನಾವು ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಹೆಜಮಾಡಿಯಲ್ಲಿ 45 ಲಕ್ಷ ರೂಪಾಯಿಗಳಲ್ಲಿ ಭೂಸ್ವಾಧೀನವನ್ನು ಮಾಡಲಾಗಿದೆ ಅದರಲ್ಲಿ ಮೀನುಗಾರಿಕೆ ಮತ್ತು ತಂಗುದಾಣಕ್ಕೆ 95 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಅಲ್ಲಿ ಸರ್ಕಾರದಲ್ಲಿ ಆಗಲಿ, ನಮ್ಮ ಪ್ರವಾಸೋದ್ಯಮ ಇಲಾಖೆಯಲ್ಲಿಯಾವುದೇ ಭೂಮಿ ಇಲ್ಲ ಆದರೆ ಮುಂದಿನ

ದಿನಮಾನಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅಲ್ಲಿ ಬಂದರಿನಲ್ಲಿ ಅಭಿವೃದ್ಧಿ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆನ್ನುವ ಮಾಹಿತಿಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನೀಡಬಯಸುತ್ತೇನೆ

ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 28 (209) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಮೌಲಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಎಷು ಪ್ರೇಕ್ಷಣೆಯ ಸ್ಥಳಗಳನ್ನು ಪ್ರವಾಸೋದ್ಯ ಇಲಾಖೆ ಗುರುತಿಸಿ ಅಭಿವೃದ್ಧಿ ಪಡಿಸಿದೆ, (ಅವುಗಳ ವಿವರ ಒದಗಿಸುವುದು)

ಆ) ವೇಣೂರು ಗಡಾಯಿಕಲ್ಲು, ಶಿಶಿಲ, ಪಶ್ಚಿಮಘಟ್ಟಗಳ ಪರ್ವತ ಶ್ರೇಣಿಗಳಲ್ಲಿ ಪ್ರವಾಸೋದ್ಯಮ ಇಲಾಕೆಯು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು,

ಇ) ಕರಾವಳಿ ಜಿಲ್ಲೆಗಳಲ್ಲಿ ಅಭಿವೃದ್ಧಿ ಪಡಿಸದೇ ಇರುವ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಕ್ರಮಗಳೇನು

ಶ್ರೀ ಶ್ರೀರಾಮುಲು ಪ್ರವಾಸೋದ್ಯಮ ಮತ್ತು ಮೌಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಇಲಾಖೆಯು ಧರ್ಮಸ್ಥಳ ಹಾಗೂ ವೇಣೂರುಗಳನ್ನು ಪ್ರವಾಸಿ ಸ್ಥಳಗಳೆಂದು ಪ್ರವಾಸೋದ್ಯಮ ನೀತಿಯಡಿ ಗುರುತಿಸಲಾಗಿದೆ ವೇಣೂರು ಹಾಗೂ ಧರ್ಮಸ್ಥಳಗಳನ್ನು ಜೈನ್ ಸರ್ಕ್ಯೂಟ್‌ನ ಅಡಿ ಪ್ರಚಾಪಡಿಸಿ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಈ ಹಿಂದೆಯೇ ಕ್ರಮ ತೆಗೆದುಕೊಳ್ಳಲಾಗಿದೆ

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಬ್ಬರು ಖಾಸಗೀ ಬಂಡವಾಳದಾರರು ಮೇಲ್ಕಂಡ ನೀತಿಯಲ್ಲಿ ಘೋಷಿಸಲಾಗಿದ್ದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಗಡಾಯಿಕಲ್ಲು ವ್ಯಾಪ್ತಿಯಲ್ಲಿ ಪ್ರವಾಸಿ ವಸತಿಗಳನ್ನು ನಿರ್ಮಿಸಿರುತ್ತಾರೆ

ಪಶ್ಚಿಮ ಘಟ್ಟಗಳ ಪರ್ವತ ಶ್ರೇಮಿಯಲ್ಲಿ ಇಲಾಖೆ/ಯು ತನಗೆ ಲಭ್ಯವಿರುವ ಅನುದಾನವನ್ನು ಉಪಯೋಗಿಸಿಕೊಂಡು ಅನೇಕ ಸ್ಥಳಗಳಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುತ್ತದೆ

ಇ) ಅನುದಾನದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಕೆಳಕಂಡ ಕಡಲು ತೀರಗಳಲ್ಲಿ ಪ್ರವಾಸಿ ಸೌಲಭ್ಯ ನಿರ್ಮಿಸಲು ಕೇಂದ್ರ ಧನಸಹಾಯಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು ಸದರಿ ಯೋಜನೆಗಳಿಗೆ ಕೇಂದ್ರವು 209 40 ಲಕ್ಷ ರೂ ಗಳನ್ನು ಮೊದಲ ಕಂತಾಗಿ ಬಿಡುಗಡೆ ಮಾಡಿದ್ದು ಇದರಲ್ಲಿ ರೂ 30 00 ಲಕ್ಷಗಳ ವೆಚ್ಚದಲ್ಲಿ ಸೈನೇಜುಗಳನ್ನು ಅಳವಡಿಸಲಾಗಿದೆ ಏತನ್ಮಧ್ಯೆ ಕೇಂದ್ರವು, ನೂತನ ಮಾರ್ಗಸೂಚಿ ಅನ್ವಯ ವಿವರವಾದ ಯೋಜನಾ ವರದಿಗಳನ್ನು ಸಲ್ಲಿಸುವಂತೆ ತಿಳಿಸಿದ್ದು ಅದೇ ಪ್ರಕಾರ ಪರಿಷ್ಕೃತ ಯೋಜನಾ ವರದಿಗಳನ್ನು ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ

1) ಗೋಕರ್ಣ ಕಡಲ ತೀರ
2) ಮಲ್ಪೆ ಕಡಲ ತೀರ
3) ಸೆಂಟ್ ಮೇರೀ ದ್ವೀಪ
4) ತಣ್ಣೀರುಭಾವಿ ಕಡಲ ತೀರ
5) ತ್ರಾಸಿ ಕಡಲ ತೀರ
6) ಪಣಂಭೂರು ಕಡಲ ತೀರ
7) ಕಾಸರಗೋಡು ಕಡಲ ತೀರ
8) ಉಲ್ಲಾಳ ಕಡಲ ತೀರ

ಮೇಲ್ಕಂಡ ಯೋಜನಾ ವರದಿಗಳನ್ನು ಕೇಂದ್ರದಿಂದ ಅನುಮೋದನೆ ಆದ ಕೂಡಲೇ ಕಾಮಗಾರಿಗಳನ್ನು ಆರಂಭಿಸಲಾಗುವುದು

ಶ್ರೀ ಕೆ ಪ್ರಭಾಕರ ಬಂಗೇರ ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಬ್ಬರು ಖಾಸಗಿ ಬಂಡವಾಳದಾರರಿಗೆ ಸವಲತ್ತುಗಳನ್ನು ಒದಗಿಸಿಕೊಂಡು ಗಡಾಯಿಕಲ್ಲು ವ್ಯಾಪ್ತಿಯಲ್ಲಿ ಪ್ರವಾಸಿ ವಸತಿಗಳನ್ನು ನಿರ್ಮಿಸಿರುತ್ತಾರೆಂದು ಸರ್ಕಾರದ ಉತ್ತರದಲ್ಲಿ ಹೇಳಿದ್ದಾರೆ ನನ್ನ ಗಮನಕ್ಕೆ ಬಂದ ಹಾಗೆ, ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು, ವಸತಿಗಳನ್ನು ಕಟ್ಟಿರುವುದು ನನಗೆ ನೆನಪಿಲ್ಲ ಇಬ್ಬರು ಖಾಸಗಿ ಬಂಡವಾಳಗಾರರೆಂದು ಏನು ಹೇಳಿದ್ದಾರೆ, ಅವರ್‍ಯಾರು ಎಂದು ಹೇಳಬೇಕು ಮತ್ತು ಅವರು ಎಲ್ಲಿ ವಸತಿಗಳನ್ನು ಕಟ್ಟಿದ್ದಾರೆನ್ನುವುದನ್ನು ತಿಳಿಸಬೇಕು ಹಾಗೆಯೇ, ಪಶ್ಚಿಮಘಟ್ಟದ ಪರ್ವತ ಶ್ರೇಣಿಯಲ್ಲಿಯೂ ಕೂಡ ಇಲಾಖೆಯಿಂದ ಲಭ್ಯವಿರುವ ಅನುದಾನದಲ್ಲಿ ಉಪಯೋಗಿಸಿಕೊಂಡು ಅನೇಕ ಸ್ಥಳಗಳನ್ನು ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುತ್ತಾರೆಂದು ಹೇಳಿದ್ದಾರೆ ನಮ್ಮ ತಾಲ್ಲೂಕಿನಲ್ಲಿ ಅದು ಎಲ್ಲಿ ಆಗಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಬಿ ಶ್ರೀರಾಮುಲು ಮಾನ್ಯ ಅಧ್ಯಕ್ಷರೆ, ಬೆಳ್ತಂಗಡಿ, ಧರ್ಮಸ್ಥಳ, ವೇಣೂರುಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದೆ ಗಡಾಯಿಕಲ್ಲು ಪ್ರದೇಶದಲ್ಲಿ ಇಬ್ಬರು ಖಾಸಗಿ ಬಂಡವಾಳಗಾರರು ವಸತಿ ನಿರ್ಮಿಸಿದ್ದಾರೆ ಕರಾವಳಿ ಪ್ರದೇಶದಲ್ಲಿ ಕೇಂದ್ರ ಸರ್ಕಾರದಿಂದ 2 ಕೋಟಿ 9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಇದರಲ್ಲಿ 30 ಲಕ್ಷ ರೂಪಾಯಿಗಳನ್ನು ಸೈನೇಜುಗಳಿಗೆ ಅಳವಡಿಸಲಾಗಿದೆ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕೆಂದು ಗೋಕರ್ಣ, ಮಲ್ಪೆ,St, Maries Island, ತಣ್ಣೀರುಬಾವಿ, ತ್ರಾಸಿ ಕಡಲುತೀರ, ಕಾಸರಗೋಡು, ಉಲ್ಲಾಳ sea-shore ಎಲ್ಲವನ್ನು ಅಬಿವೃದ್ಧಿಪಡಿಸಲಿಕ್ಕೆ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕೊಟ್ಟಿದ್ದೇವೆ ಇನ್ನೂ ಕೂಡ ಹಣ ಬಿಡುಗಡೆಯಾಗಿಲ್ಲ ರಾಜ್ಯ ಸರ್ಕಾರದಿಂದ ಏನು 148 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿತ್ತು, ಆ ಹಣಕ್ಕೆ ನಾನು ಎಲ್ಲ ರೀತಿಯಲ್ಲೂ ಕೂಡ ಒಂದು ಕ್ರಿಯಾ ಯೋಜನೆ ಮಾಡಿಕೊಂಡು Finance Department ಗೆ ಕಳುಹಿಸಿಕೊಟ್ಟಿದ್ದೇವೆ ರಾಜ್ಯ ಸರ್ಕಾರದ ಹಣ ಕೂಡ ಬೇಕಾದರೆ ನಾವು ಅಲ್ಲಿ ಕೊಡುವುದಕ್ಕೆ ರೆಡಿಯಾಗಿದ್ದೇವೆ ಅದರ ಜೊತೆಯಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಹಣದ ಜೊತೆಗೆ ಇನ್ನೂ 8 ಕೋಟಿ ರೂಪಾಯಿ ಬರಬೇಕಾಗಿದೆ ಬಂದನಂತರ ಆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಿಕ್ಕೆ ಒಂದು ಪ್ರಯತ್ನವನ್ನು ಮಾಡುತ್ತೇವೆ

ಶ್ರೀ ಕೆ ಪ್ರಭಾಕರ ಬಂಗೇರ ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ಬಂದಿಲ್ಲ ಆ ಬಂಡವಾಳಗಾರರು ಆಯರು? ಅವರು ಯಾರೆಂದು ಉತ್ತರದಲ್ಲಿ ಹೇಳಲಿಲ್ಲ ಇಬ್ಬರು ಎಂದು ಮಾತ್ರಹೇಳಿದ್ದಾರೆ ಎಲ್ಲಿ ವಸತಿಯನ್ನು ನಿರ್ಮಾಣ ಮಾಡಿದ್ದಾರೆ? ಯಾವ ಪ್ರದೇಶದಲ್ಲಿ ಎಲ್ಲಿ ಎಂಬುದನ್ನು ಉತ್ತರದಲ್ಲಿ ಹೇಳಬೇಕು ಪಶ್ಚಿಮಘಟ್ಟದಲ್ಲಿಯೂ ಕೂಡ ಪರ್ವತಶ್ರೇಣಿಯಲ್ಲಿ ಇಲಾಖೆಗೆ ಲಭ್ಯವಿರುವ ಅನುದಾನದಲ್ಲಿ ಮಾಡಿದ್ದಾರೆಂದು ಹೇಳಿದ್ದಾರೆ ಎಲ್ಲಿ ಯಾವ್ಯಾಯವ ಸ್ಥಳಧಲ್ಲಿ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ ಎನ್ನುವುದನ್ನು ಹೇಳಬೇಕು ನಂತರ, ಶಿಶಿಲ ಎನ್ನುವಲ್ಲಿ ಒಂದು ದೇವಸ್ಥಾನವಿದೆ ಅದು ಕೂಡ ಪ್ರಕೃತಿ ರಮಣೀಯವಾದ ಕ್ಷೇತ್ರವಾಗಿದೆ ಅಲ್ಲಿಯೂ ಕೂಡ ಪ್ರವಾಸಿಗಳ ಸಲುವಾಗಿ ಅಭಿವೃದ್ಧಿಪಡಿಸುವ ಪ್ರಯತ್ನಗಳು ಆಗುತ್ತವೆಯೇ? ಅದರ ಜೊತೆಗೆ, ಸೌತಡ್ಕ ಎಂಬಲ್ಲಿ ಮಹಾಗಣಪತಿ ದೇವಸ್ಥಾನವಿದೆ ಅಲ್ಲಿಯೂ ಕೂಡ ಪ್ರವಾಸಿ ತಾಣವನ್ನು ಮಾಡಬಹುದು ಅಲ್ಲಿಯೂ ಕೂಡ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬುದರ ಬಗ್ಗೆ ತಿಳಿಸಬೇಕಾಗಿ ತಮ್ಮ ಮೂಲಕ ಕೋರುತ್ತೇನೆ

ಶ್ರೀ ಬಿ ಶ್ರೀರಾಮುಲು ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಬಹಳಷ್ಟು ದೇವಸ್ಥಾನಗಳಿವೆ, ದೇವಸ್ಥಾಗಳನ್ನು ಅಭಿವೃದ್ಧಿ ಮಾಡುವುದರಲ್ಲಿ ಪ್ರವಾಸೋದ್ಯಮ ಇಲಾಖೆಯವರು ಮುಂದೆ ಬರಬೇಕೆಂದು ಮಾನ್ಯ ಶಾಸಕರು ಸೂಚನೆಯನ್ನು ಕೊಟ್ಟಿದ್ದಾರೆ ಖಂಡಿತಾಗಿ ಎಲ್ಲಾ ರೀತಿಗಳಿಂದ ಪ್ರವಾಸೋದ್ಯಮ ಇಲಾಖೆಯಲ್ಲಿ ಬೇಕಾದಂಥ ಎಲ್ಲಾ ಸೌಲಭ್ಯಗಳು, ಯಾತ್ರೆಗೆ ಬಂದಂಥ ಸಂದರ್ಭದಲ್ಲಿ ಅವರಿಗೆ ಬೇಕಾದಂಥ ಎಲ್ಲಾ ಸೌಲಭ್ಯಗಳ ಬಗ್ಗೆ ಶಾಸಕರ ಜೊತೆ ಚರ್ಚಿಸಿ ಮಾಡಿಕೊಡುತ್ತೇವೆನ್ನುವ ಮಾತನ್ನು ತಮ್ಮ ಮೂಲಕ ಹೇಳಬಯಸುತ್ತೇನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 29 (94)

(ಶ್ರೀ ಬಿ ಕೆ ಸಂಗಮೇಶ್ವರರವರು ಪ್ರಶ್ನೋತ್ತರ ವೇಲೆಯಲ್ಲಿ ಗೈರುಹಾಜರಾಗಿದ್ದರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 30(69)

(ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ ರವರು ಪ್ರಶ್ನೋತ್ತರ ವೇಳೆಯಲ್ಲಿ ಗೈರುಹಾಜರಾಗಿದ್ದರು)

ಬೃಹತ್ ಬೆಂಗಳೂರು, ಮಹಾನಗರ ಪಾಲಿಕೆ ಚುನಾವಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 16 (182) ಶ್ರೀ ರಾಮಲಿಂಗರೆಡ್ಡಿ (ಜಯನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವಾಗ ಚುನಾವಣೆಗಳನ್ನು ನಡೆಸಲಾಗುತ್ತದೆ,

ಆ) ಚುನಾವಣೆ ದಿನಾಂಕ ನಿಗದಿಪಡಿಸಲು ಇರತಕ್ಕ ತೊಂದರೆಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮುಖ್ಯಮಂತ್ರಿಗಳು

ಅ) ಕರ್ನಾಟಕ ಮಹಾನಗರಪಾಲಿಕೆ ಕಾಯ್ದೆ 1976ರ ಕಲಂ 7 ಮತ್ತು 21 ರನ್ವಯ ಹಾಗೂ 2001 ರ ಜನಗಣತಿಯ ಆಧಾರದ ಮೇಲೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ವಾರ್ಡುಗಳ ಕ್ಷೇತ್ರಗಳ ಮರು ವಿಂಗಡಣೆ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಅಧಿಸೂಚನೆಗಳನ್ನು ಹೊರಡಿಸಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ, ಇವರನ್ನು ಆದಷ್ಟು ಬೇಗ ಚುನಾವಣೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗುವುದು

ಆ) ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಗೆ 7 ನಗರಸಭೆಗಳನ್ನು, 1 ಪುರಸಭೆಯನ್ನು ಹಾಗೂ 1110 ನಗರೀಕರಣ ಹಳ್ಳಿಗಳನ್ನು ಸೇರಿಸಿ ಸರ್ಕಾರವು ದಿ 16 01 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಿ ಆದೇಶ ಹೊರಡಿಸಿದೆ ಕರ್ನಾಟಕ ಮಹಾನಗರಪಾಲಿಕೆ ಕಾಯ್ದೆ 1976ರ ಕಲಂ 7ಕ್ಕೆ ತಿದ್ದುಪಡಿ ತಂದು ಪ್ರಸ್ತುತ 100 ವಾರ್ಡ್‌ಗಳ ಬದಲಿಗೆ ಗರಿಷ್ಠ 150 ವಾರ್ಡುಗಳನ್ನಾಗಿ ವಿಂಗಡಿಸಲು ಕಾಯ್ದೆಗೆ ಸೂಕ್ತ ತಿದ್ದುಪಡಿಯನ್ನು ದಿ 07-05-2007ರಲ್ಲಿ ತರಲಾಗಿದೆ ಅದರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡುಗಳ ಕ್ಷೇತ್ರಗಳ ಮರು ವಿಂಗಡಣೆಯ ಬಗ್ಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ನಿರ್ದೇಶನ ನೀಡಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿದೆ ಸದರಿ ವಿಷಯವು ಪ್ರಗತಿಯ ಹಂತದಲ್ಲಿದ್ದು ಈ ಕಾರ್ಯ ಮುಗಿದ ತಕ್ಷಣ ವಾರ್ಡುವಾರು ಮೀಸಲಾತಿಯನ್ನು

ನಿಗಧಿಪಡಿಸಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಇವರನ್ನು ಆದಷ್ಟು ಬೇಗ ಚುನಾವಣೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗುವುದು

ಶ್ರೀ ರಾಮಲಿಂಗಾರೆಡ್ಡಿ ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಸದಸ್ಯರ ಅವಧಿ ನವೆಂಬರ್ ತಿಂಗಳಿಗೆ ಮುಗಿದುಹೋಗಿದ್ದು ಈಗಾಗಲೇ ಆರೇಳು ತಿಂಗಳು ಕಳೆದಿದೆ ಆದ್ದರಿಂದ ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ಕೇಳಬಯಸುತ್ತೇನೆ ಹಾಗೆಯೇ, 74th amendment ಪ್ರಕಾರ ಚುನಾವಣೆಯನ್ನು ಯಾವುದೇ ಕಾರಣಕ್ಕೂ ನಾವು ಮುಂದೂಡಬಾರದು ಮತ್ತು ಇದರ ಮೇಲೆ Supreme Court judgment ಕೂಡ ಇದೆ ಆಜರೂ ಕೂಡ ಬೃಹತ್ ಬೆಂಗಳೂರು ಮಾಡಬೇಕೆಂದು ಅಷ್ಟು ಅವಕಾಶ ತೆಗೆದುಕೊಂಡು ಐದಾರು ತಿಂಗಳಾದರೂ ಇನ್ನೂ ಕೂಡ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿಲ್ಲ, De-limitations ಕೂಡ ಆಗಿಲ್ಲ ಆದ್ದರಿಂದ, ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ, ಬೆಂಗಳೂರು ಮಾಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿ ಮಾಡಬೇಕೆಂದು ಏನು ಆದೇಶವನ್ನು ಹೊರಡಿಸಿದ್ದೇವೆ, ಈಗಾಗಲೇ ಬೆಂಗಳೂರು ನಗರದ ಜಿಲ್ಲಾಧಿಕಾರಿಗಳಿಗೆ ಈ ಒಂದು ಪ್ರಸ್ತಾವನೆಯನ್ನು ಸಲ್ಲಿಸಿ ವಾರ್ಡ್‌ಗಳ ಮರುವಿಂಗಡಣೆಯ ಕಾರ್ಯಕ್ರಮವನ್ನು ಮಾಡುವುದಕ್ಕೆ ಆದೇಶ ಮಾಡಿದ್ದೇವೆ ಈಗಾಗಲೇ ಕೆಲವು ದಿವಸಗಳ ಹಿಂದೆ ಕೇಂದ್ರದ ಏನು ಒಂದು De-limitation Committee ಯಿಂದ ಬೆಂಗಳೂರು ನಗರದಲ್ಲಿ ಈಗಾಗಲೇ ಕೆಲವು ಹೊಸ ವಿಧಾನಸಭಾ ಕ್ಷೇತ್ರಗಳನ್ನು ರಚನೆ ಮಾಡಿರತಕ್ಕಂಥ ಸಂದರ್ಭದಲ್ಲಿ, ಆ ಒಂದು ವ್ಯಾಪ್ತಿಯಲ್ಲಿ ಬರತಕ್ಕಂಥ ವಾರ್ಡ್‌ಗಳನ್ನು ಇವತ್ತೇನು de-limitation ಮತ್ತು ಮೀಸಲಾತಿ ವ್ಯವಸ್ಥೆಯನ್ನು ತರತಕ್ಕಂಥದ್ದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಮಾಡಿ ಈಗಾಗಲೇ ಆ ಪ್ರಕ್ರಿಯೆ ಏನು ಪ್ರಾರಂಭವಾಗಿದೆ, ಆ ಪ್ರಕ್ರಿಯೆ ಮುಗಿದ ತಕ್ಷಣವೇ ಚುನಾವಣಾ ಆಯೋಗಕ್ಕೆ ವರದಿಯನ್ನು ಸಲ್ಲಿಸಿ ಚುನಾವಣೆ ನಡೆಸತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ

ಶ್ರೀ ರಾಮಲಿಂಗಾರೆಡ್ಡಿ ಮಾನ್ಯ ಅಧ್ಯಕ್ಷರೆ, ಈಗಾಗಲೆ 7 ತಿಂಗಳಾಗಿದೆ ಚುನಾವಣೆ ಯಾವಾಗ ಮಾಡುತ್ತೀರಿ? ಎಂಬುದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕು ನವೆಂಬರ್‌ನಲ್ಲಿ ಮಾಡುತ್ತೀರಾ ಅಥವಾ ಇನ್ನೂ ತಡವಾಗುತ್ತದೆಯೇ?

ಮಾನ್ಯ ಮುಖ್ಯಮಂತ್ರಿಗಳು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ಇವತ್ತು ಬೆಂಗಳೂರು ಮಹಾನಗರ ಪಾಲಿಕೆ ಸ್ಥಿತಿ ಏನಾಗಿದೆಯೆಂದರೆ, ಅಲ್ಲಿಯ ಕೆಲಸಕಾರ್ಯಗಳಲ್ಲಿ ಯಾವ ಜನಪ್ರತಿನಿಧಿಗಳಿಗೂ ಕೂಡ ಅವಕಾಶವಿಲ್ಲ ಬಜೆಟ್ ಮಾಡುವಾಗ ಯಾರನ್ನೂ ಸಹ ಕರೆಸುವುದಿಲ್ಲ ಇಷ್ಟು ದೊಡ್ಡ ಬೆಂಗಳೂರು ನಗರದ ವಿಚಾರದಲ್ಲಿ ಕೆಲಸ ಕಾರ್ಯಗಳನ್ನು ಮಾಡಿಸಬೇಕೆಂದರೆ ನಗರಸಭೆಯ ಸದಸ್ಯರುಗಳಿಲ್ಲ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದು ಬೆಂಗಳೂರು ನಗರದ ವಿಚಾರದಲ್ಲಿ ಏನು ಮಾಡಬೇಕು, ಹೇಗೆ ನಾವು ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಅವರೂ ಕೂಡ ಕರೆದಿಲ್ಲ ಹಾಗೂ ಆಯುಕ್ತರು ಕೂಡ ಕರೆದಿಲ್ಲ ಹಾಗಾಗಿ, ಇದೊಂದು ಪ್ರಜಾಪ್ರಭುತ್ವಕ್ಕೆ ಒಂದು ರೀತಿ ಇಲ್ಲಿ ಯಾವುದೇ ಧಕ್ಕೆ ತರತಕ್ಕಂಥ ವಿಚಾರವಾಗಿದೆ ಮಹಾನಗರ ಪಾಲಿಕೆ ಕೂಡ ಇಲ್ಲ, ಶಾಸಕರಿಗೂ ಕೂಡ ಇಲ್ಲಿ ಯಾವುದೇ ರೀತಿಯ ಗೌರವ ಸಿಗುತ್ತಿಲ್ಲ, ಈ ರೀತಿಯಾದರೆ ಹೇಗೆ? ಇಂಥ ದೊಡ್ಡ ನಗರದಲ್ಲಿ ಇಂಥ important decision ತೆಗೆದುಕೊಳ್ಳುತ್ತಿದ್ದಾರೆ CDP ವಿಚಾರ ನಡೆಯುತ್ತಿದೆ, BMRDA ವಿಚಾರ ನಡೆಯುತ್ತಿದೆ, ಇನ್ನೂ ಅನೇಕ ವಿಚಾರಗಳಿವೆ ಒಂದೂ ವಿಚಾರದಲ್ಲಿ ಕೂಡ ಜನಪ್ರತಿನಿಧಿಗಳಿಗೆ ಅವಕಾಶವೇ ಇಲ್ಲ ಮಾತನಾಡತಕ್ಕಂಥದ್ದಕ್ಕೆ ಏನೂ ಇಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ವಿಧಾನಸಭೆಯ ಕ್ಷೇತ್ರಗಳ ಪುನರ್ ವಿಂಗಡನೆಯ ಕಾರ್ಯಕ್ರಮ ಈಗ ಕೆಲವು ದಿವಸಗಳ ಹಿಂದೆ ಕೇಂದ್ರ ಆಯೋಗದವರು ಏನು ಗುರುತಿಸಿದ್ದಾರೆ, ಆ ಹಿನ್ನೆಲೆಯಲ್ಲಿ ಈಗ ಜಿಲ್ಲಾಧಿಕಾರಿಗಳಿಗೆ ನಾವು ಸೂಚನೆ ಕೊಟ್ಟಿದ್ದೇವೆ, ಈ ಒಂದು ವ್ಯಾಪ್ತಿಯಲ್ಲಿ ಬರತಕ್ಕಂಥ ವಾರ್ಡ್‌ಗಳ ಮೀಸಲಾತಿ ವ್ಯವಸ್ಥೆ ಮತ್ತು ಆ ವಾರ್ಡ್‌ಗಳನ್ನು ರಚನೆ ಮಾಡತಕ್ಕಂಥದ್ದಕ್ಕೆ ಈಗಾಗಲೇ 100 ವಾರ್ಡ್‌ಗಳಿಂದ 150 ವಾರ್ಡ್‌ಗಳಿಗೆ ಹೆಚ್ಚಿಸಿ ಅಧಿವೇಶನದಲ್ಲಿ ನಾವು ಒಂದು ವಿಧೇಯಕವನ್ನು ತಂದಿದ್ದೆವು, ಈ ಒಂದು ವಿಷಯದಲ್ಲಿ ನಿಗದಿಯಾಗಿ ಇಷ್ಟು ಸಮಯದಲ್ಲಿ ಮಾಡುತ್ತೇವೆಂದು ಹೇಗೆ ಹೇಳುವುದಕ್ಕಾಗುತ್ತದೆ? ಈಗಾಗಲೇ ಇದರ ಬಗ್ಗೆ ಕೆಲಸ ಪ್ರಾರಂಭವಾಗಿದೆ ಈ ಕೆಲಸ ಮುಗಿದ ತಕ್ಷಣವೇ ಚುನಾವಣಾ ಪ್ರಕ್ರಿಯೆ ಪ್ರಾರಂಭ ಮಾಡುವುದಕ್ಕೆ ಚುನಾವಣಾ ಆಯೋಗಕ್ಕೆ ಮನವಿ ಮಾಡುತ್ತೇವೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ Assembly de-limitation committee ಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಇದನ್ನು ಕಾರ್ಪೊರೇಷನ್ ಆಗಲೀ ಮುನಿಸಿಪಾಲಿಟಿ ಆಗಲೀ, ಟೌನ್ ಪಂಚಾಯಿತಿ ಸ್ವತಂತ್ರವಾಗಿ de-limitation ಮಾಡಿಕೊಂಡು ಚುನಾವಣೆ ಮಾಡತಕ್ಕಂಥ ಪ್ರಕ್ರಿಯೆ ಸರ್ಕಾರಕ್ಕೆ ಬಿಟ್ಟಿದ್ದು ಮತ್ತುಅದು 74ನೇ ತಿದ್ದುಪಡಿ ಪ್ರಕಾರ ಇವರಿಗೆ ಸಂಪೂರ್ಣವಾದಂಥ ಅಧಿಕಾರಿದೆ ಆ ತಾಲ್ಲೂಕು ಮತ್ತು ಅಸೆಂಬ್ಲಿ ಕ್ಷೇತ್ರಗಳ ವಿಂಗಡಣೆಯ ಬಗ್ಗೆ ಇದಕ್ಕೆ ಅದಕ್ಕೆ ಸಂಬಂಧ ಬರುವುದಿಲ್ಲ ಅದು ಸ್ವತಂತ್ರವಾಗಿ Coustitution ಪ್ರಕಾರ ಮತ್ತು Election Committee ಪ್ರಕಾರ ಅವರು ಮಾಡುತ್ತಾರೆ ಅದರೆ ಇದನ್ನು ಇವರು ಆರು ತಿಂಗಳೊಳಗಾಗಿ ಮಾಡಬೇಕು ಅದನ್ನು ನೀವು ಬೃಹತ್ ಬೆಂಗಳೂರು ಆದರೂ ಮಾಡಿ, ಇರತಕ್ಕಂಥ corporation ಆದರೂ ಮಾಡಿ ಯಾವುದೇ ಮಾಡಿ ಆದರೆ within six months ನೀವು ಮಾಡಲೇಬೇಕು

ಅದರೆ ಇವತ್ತು ಅವರು time ನಿಗದಿ ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ, ಅದು ತಪ್ಪು 73–74 ನೇ ತಿದ್ದುಪಡಿ ಏಕೆ ತಂದಿದ್ದು ಎಂದರೆ, ಯಾವುದೇ ಸರ್ಕಾರಗಳು ಅಧಿಕಾರಕ್ಕೆ ಬಂದ ಮೇಲೆ ನಿಗದಿತ ಸಮಯದಲ್ಲಿ ಸ್ಥಳೀಯ ಸಂಸ್ಥೆಯ ಚುನಾವಣೆಗಳನ್ನು ಮಾಡುವುದಿಲ್ಲ, indefinitely postpone ಮಾಡುತ್ತಾರೆ ಅದಕ್ಕಾಗಿ ಚುನಾವಣೆ ಆಗಲೇಬೇಕೆಂದು ಕಡ್ಡಾಯವಾಗಿ ಸಂವಿಧಾನದಲ್ಲಿ ಇದನ್ನು ತಂದಿದೆ ಅದಕ್ಕಾಗಿ ಅವರು ನಿಗದಿತ ಸಮಯ ಹೇಳುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ, ಅದು ಸತ್ಯಕ್ಕೆ ದೂರವಾದ ಮತ್ತು ಕಾನೂನಿಗೆ ವಿರುದ್ಧವಾದ ಮಾತು ಅದಕ್ಕೆ ದಯವಿಟ್ಟು, ಈಗಾಗಲೇ ಆರು ತಿಂಗಳು ಮುಗಿಯುತ್ತಾ ಬಂದಿದೆ ಅದಕ್ಕಾಗಿ ತಕ್ಷಣ ನೀವು ನಿಮಗೇನು time limit ಇದೆ ಆ time limit ನಲ್ಲಿ ಚುನಾವಣೆ ಮಾಡತಕ್ಕಂಥ ಪ್ರಕ್ರಿಯೆ ಬೆಂಗಳೂರಿಗೂ ನಡೆಸಬೇಕು ಮತ್ತು ಬೇರೆ ಮುನಿಸಿಪಾಲಿಟಿಗಳಿಗೂ ತಾವು ನಡೆಸಬೇಕು

ತಾವು ಇದೇ ರೀತಿಯಾಗಿ indefinitely postpone ಮಾಡಿಕೊಂಡು ಹೋದರೆ ಖಂಡಿತವಾಗಿ ಜನರಿಗೆ ಏನು ಸಂಶಯ ಬರುತ್ತದೆಂದರೆ, ಇವರು ಬೇಕೆಂದೇ ಇದನ್ನು ಮುಂದಕ್ಕೆ ಮುಂದಕ್ಕೆ ಹಾಕಿಕೊಂಡು ತಮ್ಮ ಅಧೀನದಲ್ಲಿ ಎಲ್ಲಾ ಮುನಿಸಿಪಾಲಿಟಿಗಳನ್ನು, ಕಾರ್ಪೊರೇಷನ್‌ಗಳನ್ನು ಇಟ್ಟುಕೊಳ್ಳಬೇಕು ಎನ್ನತಕ್ಕಂಥ ಹುನ್ನಾರ ನಡೆಸಿದ್ದಾರೆ ಎನ್ನುವ ಮಾತು ಬರುತ್ತದೆ ಅದಕ್ಕೆ ತಾವು ದಯವಿಟ್ಟು ತಕ್ಷಣ ಸಮಯವನ್ನು ನಿಗದಿಪಡಿಸಿ ಸ್ಪಷ್ಟವಾಗಿ ಹೇಳಬೇಕು

ಸ್ಥಳೀಯ ಸಂಸ್ಥೆಗಳು including ಟೌನ್ ಪಂಚಾಯಿತಿ, ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಿಗೆ ಯಾವಾಗ ಚುನಾವಣೆ ಮಾಡುತ್ತೀರಿ ಎನ್ನತಕ್ಕಂಥಾದ್ದು ಹೇಳತಕ್ಕಂಥದಾದ್ದು ಸೂಕ್ತ

ಶ್ರೀ ನೆ ಲ ನರೇಂದ್ರ ಬಾಬು ಇದು ಬೆಂಗಳೂರು ಮಹಾನಗರಕ್ಕೆ ಸಂಬಂಧಪಟ್ಟಂತೆ ಹೇಳಬೇಕಾಗುತ್ತದೆ

ಅಧ್ಯಕ್ಷರು ನೋಡಿ, ದಯಮಾಡಿ ಇಲ್ಲಿ ಕಳಿ ನಿಮ್ಮ ಹಿರಿಯ ಸದಸ್ಯರು ಎಂದು ಅವರಿಗೆ ಅವಕಾಶ ಕೊಟ್ಟಿದ್ದೇನೆ, ಆಗಲೇ 3–4 ಜನ supplementary questions ಕೇಳಿದ್ದಾರೆ

ಶ್ರೀ ಹೆಚ್ ಡಿ ಕುಮಾರ್ ಸ್ವಾಮಿ ಸನ್ಮಾನ್ಯ ಹಿರಿಯ ಸದಸ್ಯರಾಗಿರ ತಕ್ಕಂಥ ಮಲ್ಲಿಕಾರ್ಜುನ ಖರ್ಗೆಯವರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನಾನು ಏನು ಹಳುತ್ತೇನೆಂದರೆ, ಯಾವ ತಿಂಗಳಲ್ಲಿ ಯಾವ ದಿನಾಂಕ ನಿಗದಿ ಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದರಿಂದ ನಾನು ಆ ವಿಷಯವನ್ನು ಪ್ರಸ್ತಾಪಿಸಿದ್ದೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಿದ್ದೇವೆ Delimitation ಮತ್ತು ವಾರ್ಡುಗಳ ಮೀಸಲಾತಿಯ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿ, ಚುನಾವಣಾ ಆಯೋಗಕ್ಕೆ ವರದಿಯನ್ನು ಕೊಡುವುದರ ಮೂಲಕ ತಕ್ಷಣವೇ ಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ ಆ ಒಂದು ಪ್ರಕ್ರಿಯೆ ಮುಗಿದ ಮೇಲೆ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ತಕ್ಷಣ ಚುನಾವಣೆ ನಡೆಸುವುದಕ್ಕೆ ಸರ್ಕಾರ ಸಿದ್ಧವಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಸದನದಲ್ಲಿ ಮಾನ್ಯಮುಖ್ಯಮಂತ್ರಿಗಳು Greater Bangalore ಬಗ್ಗೆ ಒಂದು ವಿಧೇಯಕ ತಂದಿದ್ದರು 100 ಪಾಲಿಕೆ ಸದಸ್ಯರು ಇರತಕ್ಕಂಥ ಈ ಕಾರ್ಪೊರೇಷನ್‌ನಲ್ಲಿ 150 ಸದಸ್ಯರನ್ನು ಮಾಡತಕ್ಕಂಥದ್ದರ ಬಗ್ಗೆ ಏಲು ವಿಧೇಯಕ ತಂದಿದ್ದರು ಅದರ ಬಗ್ಗೆ ಈಗಾಗಲೇ ಮಾತನಾಡಿದ್ದೇವೆ ನಮ್ಮ ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಮಾನ್ಯ ರಾಮಲಿಂಗಾರೆಡ್ಡಿಯವರು, ದಿನೇಶ್ ಗುಂಡೂರಾವ್‌ರವರು, ಎ ಕೃಷ್ಣಪ್ಪನವರು, ಕೂಡ ಮಾತನಾಡಿದ್ದಾರೆ ಮೊನ್ನೆ ಮಾನ್ಯ ಜೈಪಾಲ ರೆಡ್ಡಿಯವರು ಬಂದಿದ್ದರು 11–2–2005ರಲಿ ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಭೇಟಿ ಕೊಟ್ಟಿದ್ದರು ನಾನು ಆಗ ಮುಖ್ಯಮಂತ್ರಿಯಾಗಿದ್ದೆ ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ

Infrastructure development ಗೆ you Have to give at least 50% amount from the center ಎನ್ನತಕ್ಕಂಥ ಮಾತನ್ನು ಹೇಳಿದರು ಅದರ ಬಗ್ಗೆ ಕೇಂದ್ರದಲ್ಲಿ ಚರ್ಚೆಯಾಯಿತು ಈಗಾಗಲೇ ಬೆಂಗಳೂರು ಮತ್ತು ಮೈಸೂರು ಇದರಲ್ಲಿ include ಮಾಡಿದ್ದಾರೆ ರೂ 22,536 ಕೋಟಿ ಬೆಂಗಳೂರಿಗೆ, ಒಂದು ಸಾವಿರ ಕೋಟಿ ರೂಪಾಯಿಗಿಂತಲೂ ಹೆಚ್ಚು ಮೈಸೂರಿಗೆ ಕೊಟ್ಟಿದ್ದಾರೆ ಷರತ್ತು ಏನಿದೆ? There must be citizen concern nature ಇವತ್ತು ಮಹಾನಗರ ಪಾಲಿಕೆಯಲ್ಲಿ ಅದರ ಬಗ್ಗೆ ವಿಚಾರ ವಿನಿಮಯ ಆಗಬೇಕು Popular Corporation ಗೆ ವಹಿಸಿಕೊಡಬೇಕೆಂದು ಹೇಳಿದ್ದಾರೆ ಒಟ್ಟಾರೆ ಇಡೀ ರಾಷ್ಟ್ರದಲ್ಲಿ 1 ಕೋಟಿ 24 ಲಕ್ಷ ಕೋಟಿ ಬಿಡುಗಡೆ ಮಾಡಿದ್ದಾರೆ ಇವತ್ತು ನಾವು ಏಕೆ ಹೇಳುತ್ತಿದ್ದೇವೆ Popular Corporation ಇರಲಾರದೇ ಹೋದರೆ, ಇವತ್ತು ದುಡ್ಡು lapse ಆಗುತ್ತದೆ, ಖರ್ಚು ಮಾಡಲಿಕ್ಕೆ ಆಗುತ್ತಿಲ್ಲ ಇವತ್ತು ಕುಡಿಯುವ ನೀರಿಗೆ, under ground drainage ಗೆ ಎಲ್ಲಾ ಕಡೆಗೆ ಹೆಚ್ಚಿನ ಹಣ ಕೊಟ್ಟು ಪ್ರತಿಯೊಂದರಲ್ಲಿ urban poor ಬಗ್ಗೆ Slums ಬಗ್ಗೆ ಎಲ್ಲಾ ಹಣವನ್ನು ಕೊಟ್ಟಿದ್ದಾರೆ

ನಾವು ಚುನಾವಣೆ ನಡೆಸಲಾರದೇ ಹೋದರೆ, ದುಡ್ಡು lapse ಆಗುತ್ತದೆ ಕೇಂದ್ರದಿಂದ ಬರುವ ಹಣ ನಿಂತು ಹೋಗುತ್ತದೆ ಅದಕ್ಕೆ ತಾವು ಮುಖ್ಯಮಂತ್ರಿಗಳಾಗಿದ್ದೀರಿ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ತೀವ್ರವವಾಗಿ ಕೆಲಸ ಮಾಡಬೇಕಾಗುತ್ತದೆ ನೀವು 100 ರಿಂದ 150 ವಾರ್ಡುಗಳನ್ನು ಮಾಡತಕ್ಕಂಥ ಪ್ರಮೇಯ ಇಲ್ಲ ಇರತಕ್ಕಂಥ 100 ಮಹಾನಗರ ಪಾಲಿಕೆ ಕ್ಷೇತ್ರದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ Drinking water problem solve ಆಗುತ್ತಿಲ್ಲ ಬಹಳಷ್ಟು ಸಮಸ್ಯೆಗಳಿವೆ 150 ವಾರ್ಡುಗಳು ಬೇಕಾಗಿದೆ ಎಂದು ಹೇಳುವುದು ಅರ್ಥಹೀನ ಅದರ ಬಗ್ಗೆ ಚರ್ಚೆ ಮಾಡಿಲ್ಲ ಒಟ್ಟಾರೆಯಾಗಿ ಚುನಾವಣೆಗಳನ್ನು ಮಾಡಬಾರದು, ಮುಂದಕ್ಕೆ ಹಾಕಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೀರಿ ಕೇಂದ್ರದಿಂದ ಬರತಕ್ಕಂಥ ಹಣವನ್ನು ಉಪಯೋಗ ಮಾಡತಕ್ಕಂಥ ರೀತಿಯಲ್ಲಿ popuulor Corporation ಗೆ consultation ಮಾಡತಕ್ಕಂಥ ಷರತ್ತು ಏನಿದೆ, ಅದನ್ನು ಹೋಗಲಾಡಿಸತಕ್ಕಂಥ ರೀತಿಯಲ್ಲಿ ಮಾನ್ಯ ಖರ್ಗೆಯವರು ಹೇಳಿ ಹಾಗೆ ಚುನಾವಣೆಗಳನ್ನು ನಡೆಸಬೇಕು

ಶ್ರೀ ವಾಟಾಳ್ ನಾಗರಾಜ್ ಯಾವಾಗ ಚುನಾವಣೆ ಮಾಡುತ್ತೇವೆಂದು ಸರ್ಕಾರದವರು ನೇರವಾದಂಥ ಉತ್ತರ ಕೊಡಬೇಕು, ತಪ್ಪಿಸಿಕೊಳ್ಳುವುದು ಬೇಡ ಉಚ್ಛ ನ್ಯಾಯಾಲಯವೂ ಎರಡು-ಮೂರು ಸಾರಿ ಸರ್ಕಾರಕ್ಕೆ ಛೀಮಾರಿ

ಹಾಕಿದೆ ನೀವು ಏಕೆ ಮುಂದೂಡುತ್ತಿದ್ದೀರಿ? ಇದಕ್ಕೇನು ಕಾರಣ? ಅನೇಕ ಸಲ ಹೇಳಿದರೂ ಸರ್ಕಾರಕ್ಕೆ ಏಕೆ ಅಧೈರ್ಯ? ನೀವು ಚುನಾವಣೆ ಮಾಡಿ ಬೆಂಗಳೂರು ನಗರದ್ದು ಚುನಾವಣೆ ಮಾಡಿ, ಈಗ ತಾವು ಸದನದಲ್ಲಿ ಯಾವ ದಿನಾಂಕದಲ್ಲಿ ಚುನಾವಣೆ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ನೀವು ಸ್ಪಷ್ಟಪಡಿಸಿ ನಗರ ಸಭೆಗಳು, ಪುರಸಭೆಗಳು, ಬೆಂಗಳೂರು ಮಹಾ ನಗರ ಪಾಲಿಕೆ, ಇಷ್ಟಕ್ಕೂ ನೀವು ಯಾವಾಗ ಚುನಾವಣೆ ಮಾಡುತ್ತೀರಿ? ಎನ್ನುವುದನ್ನು ನೀವು ನೇರವಾಗಿ ಹೇಳಬೇಕು

(ಗೊಂದಲ)

ಅಧ್ಯಕ್ಷರು ಆಯಿತು ಹೇಳುತ್ತಾರೆ ಬಿಡಿ ಆಗಲೇ ಒಂದು ಗಂಟೆ ಮೇಲೆ ಆಗಿ ಹೋಯಿತು

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಸರ್ಕಾರಕ್ಕೆ ಚುನಾವಣೆ ಮಾಡುವುದು ಇಷ್ಟವಿಲ್ಲ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಬೇಕು ನಿಮ್ಮ ನಾಯಕರುಗಳೆಲ್ಲ ಮಾತನಾಡಿದ್ದಾರೆ

ಶ್ರೀ ದಿನೇಶ್ ಗುಂಡೂರಾವ್ ಸಂಪೂರ್ಣ ಅಧಿಕಾರ ಅವರ ಕೈಯಲ್ಲಿ ಇರಬೇಕು ಯಾರು ಕೂಡ ಸ್ಥಳೀಯ ಮುಖಂಡರುಗಳು ಬೆಳೆಯಬಾರದು ಎಲ್ಲವನ್ನು ಅವರೇ ತೀರ್ಮಾನ ಮಾಡಬೇಕು ಎಲ್ಲವನ್ನು ಕೂಡ ಮುಖ್ಯಮಂತ್ರಿಗಳೇ ನಿರ್ಣಯ ಮಾಡಬೇಕು ಶಾಸಕರಿಗೆ ಗೌರವವಿಲ್ಲ ನಗರ ಪಾಲಿಕೆಗೆ ಗೌರವವಿಲ್ಲ ಇದೇನಿದು? ಇಲ್ಲಿ ಪ್ರಜಾಪ್ರಭುತ್ವಕ್ಕೆ ಗೌರವವಿಲ್ಲ

ಅಧ್ಯಕ್ಷರು ಆಯಿತು ಬಿಡಿ ನಿಮ್ಮ ಹಿರಿಯ ನಾಯಕರುಗಳು ಸಲಹೆ ಕೊಟ್ಟಿದ್ದಾರೆ ಅವರು ಉತ್ತರ ಹೇಳುತ್ತಾರೆ ಕುಳಿತುಕೊಳ್ಳಿ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ನೀವು ಬರಿ ಆಯಿತು ಎಂದು ಹೇಳುತ್ತೀರಿ ಅದಕ್ಕೆ ಉತ್ತರ ಬೇಕಲ್ಲವೇ? ಪ್ರಜಾಪ್ರಭುತ್ವವನ್ನೇ ಕಗ್ಗೊಲೆ ಮಾಡುತ್ತಿದ್ದೀರಿ ಆಯಿತು ಎಂದು ಹೇಳಿದರೆ ಸದನದಲ್ಲಿ ಯಾರು ಉತ್ತರ ಕೊಡಬೇಕು?

(ಗೊಂದಲ)

ಅಧ್ಯಕ್ಷರು ರೀ ಸುಮ್ಮನೆ ಕುಳಿತುಕೊಳ್ಳಿ ನಿಮ್ಮ ನಾಯಕರುಗಳೆಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೇನೆ ಎಲ್ಲರೂ ನಿಂತರು ಬಿಟ್ಟರೆ ಹೇಗೆ?

ಶ್ರೀ ನೆ ಲ ನರೇಂದ್ರ ಬಾಬು ಬೆಂಗಳೂರು ನಗರದ ಶಾಸಕರಾಗಿರುವ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ

(ಗೊಂದಲ)

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ವಿರೋಧ ಪಕ್ಷದ ಶಾಸಕರನ್ನು ಬಗ್ಗು ಬಡಿಯುವ ಪ್ರಯತ್ನ ಮಾಡಬೇಡಿ ಪ್ರಜಾಪ್ರಭುತ್ವದಲ್ಲಿ ನಮಗೆ ಮಾತನಾಡಲು ಅವಕಾಶ ಕೊಡಿ

ಅಧ್ಯಕ್ಷರು ನೋಡಿ, ನೋಡಿ, ಈ ರೀತಿ ಹೇಳಿದರೆ ಹೇಗೆ? ಇವರಿಗೆ ಏನಾಗಿದೆ? ನಾನು ನೇಮ್ ಮಾಡಬೇಕಾಗುತ್ತದೆ ಅಷ್ಟೆ ದಯಮಾಡಿ ಕುಳಿತುಕೊಳ್ಳಿ No, no I cannot tolerate this ಇಲ್ಲಿ ಕೇಳಿ ಸ್ವಾಮಿ, ನಾನು ನೀವುಗಳು ಹಿರಿಯ ಸದಸ್ಯರೆಂದು ನಿಮಗೆ ಐದು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ ಸುಮ್ಮನೆ ಪ್ರಶ್ನೋತ್ತರ ಕಾಲದಲ್ಲಿ ಎಲ್ಲದಕ್ಕೂ ಈ ರೀತಿ ಮಾಡಿದರೆ ಹೇಗೆ?

ಶ್ರೀ ನೆ ಲ ನರೇಂದ್ರ ಬಾಬು ನಾವು ಬೆಂಗಳೂರಿನ ಶಾಸಕರು

ಅಧ್ಯಕ್ಷರು ಹೌದು ಅದಕ್ಕೋಸ್ಕರವಾಗಿಯೇ ನಾನು ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ ಅದರ ಬಗ್ಗೆ ಬೇರೆ ರೀತಿಯಲ್ಲಿ ಪ್ರಸ್ತಾಪಿಸಲಿ, ಬೇರೆ ರೀತಿಯಲ್ಲಿ ಸೂಚನೆ ತರಲಿ ನೀವು ದಯಮಾಡಿ ಹೇಳಿ ಸ್ವಾಮಿ

(ಗೊಂದಲ)

ಶ್ರೀ ನೆ ಲ ನರೇಂದ್ರಬಾಬು ಈ ಸರ್ಕಾರದಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ವಿರೋಧ ಪಕ್ಷದವರು ನಾವು ಕೇಳಲೇ ಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಸರ್ಕಾರದವರು ಇದಕ್ಕೆ ನೇರವಾಗಿ ಉತ್ತರ ಹೇಳಬೇಕು

ಅಧ್ಯಕ್ಷರು ನಾಗರಾಜ್‌ರವರೆ, ಅಲ್ಲಿ ಬಿಎಸಿ ಯಲ್ಲಿ ಒಂದು ರೀತಿ ತೀರ್ಮಾನ ಮಾಡುತ್ತೀರಿ ನಾನು 5 ಉಪ ಪ್ರಶ್ನೆಗಳಿಗೆ ಅವಕಾಶ ಕೊಟ್ಟಿದ್ದೇನೆ ಅವರ ನಾಯಕರುಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಇಷ್ಟೆಲ್ಲಾ ಮಾಡಿದ್ದರೂ ಪುನಃ ಎಲ್ಲರೂ ನಿಂತರೆ ಹೇಗೆ? ಈಗಾಲೇ ಒಂದು ಗಂಟೆಯ ಮೇಲಾಯಿತು ಅವರು ಮೊದಲೇ ಎಲ್ಲಾ ಕೇಳಿದ್ದಾರೆ ಸ್ವಾಮಿ, ಮತ್ತೆ ಮತ್ತೆ ಹೀಗೆ ನಿಂತರೆ ಹೇಗೆ ಅವಕಾಶ ಕೊಡವುದು?

ಶ್ರೀ ನೆ ಲ ನರೇಂದ್ರ ಬಾಬು ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡಿ

ಅಧ್ಯಕ್ಷರು ಬೇರೆ ರೀತಿಯಲ್ಲಿ ಸೂಚನೆ ಕಳುಹಿಸಿ ಕೊಡಿ ಚರ್ಚೆಗೆ ಅವಕಾಶ ಕೊಡುತ್ತೇನೆ

ಶ್ರೀ ನೆ ಲ ನರೇಂದ್ರ ಬಾಬು ವರ್ಗಾವಣೆ ದಂಧೆ ನಡೆಯುತ್ತಿದೆ ಕೆಲಸ ಕಾರ್ಯಗಳಲ್ಲಿ ಪಾರದರ್ಶಕತೆ ಇಲ್ಲ ಇದನ್ನು ನಾವು ಯಾರಿಗೆ ಹೇಳಬೇಕು?

ಶ್ರೀ ಎನ್ ಧರ್ಮಸಿಂಗ್ ಚುನಾವಣೆ ನಡೆಸತಕ್ಕಂಥ ಮನಸ್ಸು ಸರ್ಕಾರಕ್ಕೆ ಇಲ್ಲ ಕೇಂದ್ರದಿಂದ ಬಂದಂಥ ಹಣವನ್ನು ಉಪಯೋಗಿಸಬೇಕು ಎನ್ನುವುದು ಅವರಿಗೆ ಗೊತ್ತಿಲ್ಲ ಅದಕ್ಕೆ ಇವತ್ತು ಚುನಾವಣೆಯಾಗುತ್ತಿಲ್ಲ ಪದೇ ಪದೇ ನೆಪ ಹೇಳುತ್ತಿದ್ದಾರೆ ಅದಕ್ಕೆ ರಾಜ್ಯದಲ್ಲಿ ಚುಆವಣೆ ನಡೆಯಲೇ ಬೇಕು ಅದಕ್ಕೆ ನಾವು ಸಭಾತ್ಯಾಗ ಮಾಡುತ್ತೇವೆ

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು ಆಯಿತು ಎಲ್ಲದಕ್ಕೂ ಒಂದು ಕ್ರಮವಿದೆ ಅಲ್ಲವೆ? ಒಂದು ಸೂಚನೆ ಕೊಡಿ ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಪ್ರಮುಖ ವಿರೋಧಪಕ್ಷದ ಸದಸ್ಯರುಗಳು ಸದನದಲ್ಲಿ ಅನುಮಾನ ಮತ್ತು ಆಂತಕಗಳನ್ನು ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದ್ದಾರೆ ಮತ್ತೆ ಯಾವ ದಿನಾಂಕದಂದು ಚುನಾವಣೆ ಮಾಡಲಾಗುತ್ತದೆಂಬುದನ್ನು ವ್ಯಕ್ತಪಡಿಸಬೇಕೆಂದು ಇದರ ಜೊತೆಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಶ್ನೆ ಕೇಳಿದ್ದಾರೆ ಚುನಾವಣೆ ದಿನಾಂಕವನ್ನು ಚುನಾವಣಾ ಆಯೋಗದವರು ಪ್ರಕಟ ಮಾಡಬೇಕು ಆದ್ದರಿಂದ ಸರ್ಕಾರ ಚುನಾವಣೆ ದಿನಾಂಕವ್ನು ಪ್ರಕಟ ಮಾಡುವುದಕ್ಕೆ ಸಾಧ್ಯವಿಲ್ಲ ಇದರ ಜೊತೆಗೆ ಮಾನ್ಯ ವಿರೋಧ ಪಕ್ಷದ ಸದಸ್ಯರ ಇವತ್ತಿನ ಒಂದು ಆತಂಕದ ಬಗ್ಗೆ ಅವರುಗಳು ಮಾತನಾಡತಕ್ಕಂಥ ವಿಧಾನ ನೋಡಿದರೆ ಬೆಂಗಳೂರು ನಗರದಲ್ಲಿ ಉದ್ಭವವಾಗಿರತಕ್ಕಂಥ ಸಮಸ್ಯೆ ನಮ್ಮ ಮೈತ್ರಿ ಸರ್ಕಾರ ಬಂದ ತಕ್ಷಣ ಆಗಿರತಕ್ಕದೆಂದು ಬಿಂಬಿಸಲಿಕ್ಕೆ ಅವರಗಳು ಹೊರಟಿದ್ದಾರೆ

ಇವತ್ತಿನ ದಿವಸ ಎಲ್ಲಾ ರೀತಿಯ ಲೋಪದೋಷಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರತಕ್ಕಂಥದ್ದನ್ನು ನಾವು ಗಮನಿಸಬೇಕಾಗುತ್ತದೆ ಚುನಾವಣೆಯ ದಿನಾಂಕವನ್ನು ಮುಂದೂಡುತ್ತಿದ್ದಾರೆಂದು ಅವರು ಇವತ್ತು ಅನುಮಾನವ್ನು ವ್ಯಕ್ತಪಡಿಸುತ್ತಿದ್ದಾರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮಾಡತಕ್ಕಂಥಾದ್ದರ ಸದುದ್ದೇಶ ಮತ್ತು ಕಾರಣಗಳನ್ನು ಈಗಾಗಲೇ ವ್ಯಕ್ತಪಡಿಸಿದ್ದೇವೆ ಬೆಂಗಳೂರು ನಗರದ ಹೊರವಲಯದಲ್ಲಿದ್ದಂಥ 7 ನಗರಸಭೆಗಳು ಮತ್ತು ಒಂದು ಪಟ್ಟಣ ಪಂಚಾಯತಿಯ ವ್ಯಾಪ್ತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ತರುವಂಥ ನಿರ್ಧಾರಗಳನ್ನು ಮಾಡಿರುವಾಗ ಸರಿಯಾದ ರೀತಿಯಲ್ಲಿ ಹೊಂದಾಣಿಕೆಗಳನ್ನು ಮಾಡಬೇಕಾಗುತ್ತದೆ ಆದ್ದರಿಂದ, ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸುವ ದೃಷ್ಟಿಯಿಂದ ಒಂದು ಹೊಸ ಬದಲಾವಣೆಯನ್ನು ತಂದಿದ್ದೇವೆ ಚುನಾವಣೆಯನ್ನು ಮುಂದೂಡತಕ್ಕಂಥ ವಿಷಯವನ್ನಾಗಿ ಇದನ್ನು ಯಾರು ಅನ್ಯಥಾ ಭಾವಿಸುವಂಥ ಅವಶ್ಯಕತೆ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಈಗಾಗಲೇ ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ ಬೆಂಗಳೂರು ನಗರ ಹೊರತು ಪಡಿಸಿ ಉಳಿದ ಎಲ್ಲಾ ಮುನಿಸಿಪಾಲಿಟಿಗೆ ಸಂಬಂಧಪಟ್ಟಂಥ

ಮೀಸಲಾತಿಯ ಪ್ರಕ್ರಿಯೆಯನ್ನು ಮುಗಿಸಿ ದಿನಾಂಕ 31-07-2007ರೊಳಗೆ ಚುನಾವಣಾ ಆಯೋಗಕ್ಕೆ ಸಲ್ಲಿಸುತ್ತಿದ್ದೇವೆ ನಂತರ ಚುನಾವಣಾ ಆಯೋಗದವರು ಚುನಾವಣೆ ದಿನಾಂಕವನ್ನು ಪ್ರಕಟ ಮಾಡುವುದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ ಸರ್ಕಾರಕ್ಕೆ ಕೋರ್ಟ್‌ಗಳು ಪ್ರತಿನಿತ್ಯ ಛೀಮಾರಿ ಹಾಕುತ್ತಿವೆಂದು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು ಆದ್ದರಿಂದ, ಅವರ ಗಮನಕ್ಕೆ ತರುವುದೇನೆಂದರೆ, ಅದೇ ಕೋರ್ಟ್‌ನವರು 8 ವಾರಗಳ ಗಡುವನ್ನು ಕೊಟ್ಟಿರತಕ್ಕಂಥ ಆಧಾರದ ಮೇಲೆಯೇ ಈ ಒಂದು ಪ್ರಕ್ರಿಯೆಯನ್ನು ನಡೆಸುತ್ತಿದ್ದೇವೆ ಆದ್ದರಿಂದ ಸರ್ಕಾರ ಚುನಾವಣೆಯ ದಿನಾಂಕವನ್ನು ಮುಂದೆ ಹಾಕತಕ್ಕಂಥ ಪ್ರಶ್ನೆ ಬರುವುದಿಲ್ಲ ಸರ್ಕಾರ ಕಾನೂನಿನ ಚೌಕಟ್ಟಿನೊಳಗೆ ಚುನಾವಣೆಯ ಪ್ರಕ್ರಿಯೆಯನ್ನು ಮಾಡುತ್ತದೆ ಈ ಚುನಾವಣೆ ಪ್ರಕ್ರಿಯೆ ಮುಗಿದ ಕೂಡಲೇ ಚುನಾವಣೆಯ ದಿನಾಂಕವನ್ನು ನಿಗದಿ ಮಾಡುವುದಕ್ಕೆ ಚುನಾವಣಾ ಆಯೋಗಕ್ಕೆ ವರದಿಯನ್ನು ಸಲ್ಲಿಸುತ್ತೇವೆ ಚುನಾವಣಾ ಆಯೋಗ ಚುನಾವಣೆಯ ದಿನಾಂಕವನ್ನು ಪ್ರಕಟ ಮಾಡುತ್ತದೆ ಮಾನ್ಯ ವಾಟಾಳ್ ನಾಗಾರಾಜ್‌ರವರು ನಮಗಿಂತ ಅನುಭವಸ್ಥರು, ಚುನಾವಣೆಯ ದಿನಾಂಕವನ್ನು ನೀವು ಪ್ರಕಟಿಸಿ ಎಂದು ಕೇಳಿದರೆ ನಾವು ಹೇಗೆ ಪ್ರಕಟ ಮಾಡುವುದಕ್ಕೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ ಸರ್ಕಾರದ ಧೋರಣೆಯನ್ನು ವಿರೋಧಿಸಿ ನಾನೂ ಕೂಡ ಸಭಾತ್ಯಾಗ ಮಾಡುತ್ತೇನೆ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 09-07-2007ರಂದು 1ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 34 ಪ್ರಶ್ನೆಗಳ ಪೈಕಿ 22 ಉತ್ತರಗಳನ್ನು ಮತ್ತು ದಿನಾಂಕ 10-07-2007 ರಂದು 2ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ 26 ಸದನದಲ್ಲಿ ಮಂಡಿಸುತ್ತೇನೆ

ಸಭಾಧ್ಯಕ್ಷರು – ಮಂಡಿಸಲಾಯಿತು

(ಅನುಬಂಧ –1)

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು

1) ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ)

ವಿಚಾರಣಾ ಆಯೋಗದ ಕಾಯ್ದೆ 1952ರ ಕಲಂ 3(4)ರ ಅನ್ವಯ

1 ನ್ಯಾಯಮೂರ್ತಿ ಶ್ರೀ ಬಿ ಪದ್ಮರಾಜ್ ವಿಚಾರಣಾ ಆಯೋಗ, ಬೆಂಗಳೂರು ಇವರ ವರದಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ

1 ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ

3 ಚಾಮರಾಜನಗರ – ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2005–06 ಮತ್ತು 2006–07ನೇ ಸಾಲಿನ ವಾರ್ಷಿಕ ವರದಿ

4 ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ 2001-02, 2002-03ಮತ್ತು 2003-04ನೇ ಸಾಲಿನ ವಾರ್ಷಿಕ ವರದಿ ಆಹಗೂ 2002-03 ಮತ್ತು 2004-05ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

5 ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2005-06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

6 ರಾಮನಗರ - ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2006-07ನೇ ಸಾಲಿನ ವಾರ್ಷಿಕ ವರದಿ

7 ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2006-07ನೇ ಸಾಲಿನ ವಾರ್ಷಿಕ ವರದಿ

9 ಗದಗ - ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2006-07ನೇ ಸಾಲಿನ ವಾರ್ಷಿಕ ವರದಿ

10 ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2005-06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

ಕರ್ನಾಟಕ ನಗರ ನೀರು ಸರಬ್ಬಾರಜು ಮತ್ತು ಒಳಚರಂಡಿ ಮಂಡಳಿಯ ಕಾಯ್ದೆ, 1973ರ ಕಲಂ 39ರ ಪ್ರಕಾರ

1 ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2005-06ನೇ ಸಾಲಿನ ವಾರ್ಷಿಕ ಸಾಧನಾ ವರದಿ

2 ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ, ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಅವರು

1 ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಆಕರದ 2004-05ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

3) **ಹೆಚ್ ಡಿ ರೇವಣ್ಣ (ಜಲಸಂಪನ್ಮೂಲ ಸಚಿವರ ಪರವಾಗಿ) ಅವರು**

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾದಿಕಾರದ 1980ರ ಅಧಿನಿಯಮ 24ರ ಪ್ರಕಾರ

1 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನ ಗುಡಿ, ಶಹಾಪುರ ಗುಲ್ಬರ್ಗಾದ 2006-07ನೇ ಸಾಲಿನ ವಾರ್ಷಿಕ ವರದಿ

2 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾದ 2006-07ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ

4) **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಅವರು**

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

5) **ಶ್ರೀ ಎಂ ಪಿ ಪ್ರಕಾಶ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ) ಅವರು**

1974ರ ಜಲ ಕಾಯ್ದೆಯ ಕಲಂ 40(7)ರ ಪ್ರಕಾರ

1 ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ 2004-05ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

6) ಎಂ ಪಿ ಪ್ರಕಾಶ್ (ಉನ್ನತ ಶಿಕ್ಷಣ ಸಚಿವರ ಪರವಾಗಿ) ಅವರು

2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮದ 47(4)ರ ಪ್ರಕರಣದ ಮೇರೆಗೆ

1 ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿಯ 2004-05ನೇ ಸಾಲಿನ ಲೆಕ್ಕಪರಿಶೋಧನಾ ವರದಿ

2 ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರದ 2003-04ನೇ ಸಾಲಿನ ಲೆಕ್ಕಪರಿಶೋಧನಾ ಅನುಸರಣಾ ವರದಿ

3 ಕುವೆಂಪು ವಿಶ್ವವಿದ್ಯಾಲಯ, ಧಾರವಾಡದ 2004-05 ಮತ್ತು 2005-06ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ

7) ಶ್ರೀ ಎಂ ಪಿ ಪ್ರಕಾಶ್ (ಸಾರಿಗೆ ಸಚಿವರ ಪರವಾಗಿ) ಅವರು

1 ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 45ನೇ 2005-06ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

8) ಶ್ರೀ ಎಂ ಪಿ ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ) ಅವರು

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5) ನೇ ಪ್ರಕರಣದ ಮೇರೆಗೆ

1 ಬೆಂಗಳೂರು ಗ್ರಾಮಾಂತರ ಜಿಲ್ಲಾಪಂಚಾಯತ್‌ವನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

2 ಹಾವೇರಿ ಜಿಲ್ಲಾ ಪಂಚಾಯುತ್‌ನ 2004-05ನೇ ಸಾಲಿನ ಲೆಕ್ಕಪರಿಶೋಧನಾ ವರದಿ

3 ಹಾಸನ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ

4 ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2003-04ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ

5 ಹಾವೇರಿ ಜಿಲ್ಲಾ ಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

6 ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ

7 ತುಮಕೂರು ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ

8 ದಾವಣಗೆರೆ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ

9 ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ

10 ಬೆಳಗಾವಿ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ

11 ಬೀದರ್ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ

12 ಉಡುಪಿ ಜಿಲ್ಲಾ ಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

13 ಕೋಲಾರ ಜಿಲ್ಲಾ ಪಂಚಾಯತ್‌ನ 2004-05ನೇ ಸಾಲಿನ ಲೆಕ್ಕಪತ್ರಗಳ ಪರಿಶೋಧನಾ ವರದಿ

14 ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2005-06ನೇ ಸಾಲಿನ ವಾರ್ಷಿಕ ಆಡಳಿತ ವರದಿ

15 ಕೊಡಗು ಜಿಲ್ಲಾಪಂಚಾಯತ್‌ನ 2004-05ನೇ ಸಾಲಿನ ಲೆಕ್ಕಪತ್ರಗಳ ಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

9) ಶ್ರೀ ಎಂ ಪಿ ಪ್ರಕಾಶ್ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ) ಅವರು

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 20ನೇ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

10) ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮದ್ಯಮ ಕೈಗಾರಿಕಾ ಸಚಿವರು) ಅವರು

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

11) ಶ್ರೀ ಎಂ ಪಿ ಪ್ರಕಾಶ್ (ಕೃಷಿ ಸಚಿವರ ಪರವಾಗಿ) ಅವರು·

1963ರ ಕೃಷಿ ವಿಶ್ವವಿದ್ಯಾಲಯದ ಕಾಯ್ದೆ ಕಲಂ 38(3)ರ ಮೇರೆಗೆ

1 ಕೃಷಿ ವಿಶ್ವಿದ್ಯಾಲಯ, ಧಾರವಾಡದ 2005-06ನೇ ಸಾಲಿನ ವಾರ್ಷಿಕ ವರದಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 33ನೇ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2. ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತದ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

3 ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡೆಕ್ಟ್ ನಿಯಮಿತದ 33ನೇ 2005-06ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನ ವರದಿ

4 ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿಯಮಿತದ 38ನೇ 2004-05ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

5 ಕರ್ನಾಟಕ ರಾಜ್ಯ ಕಂಪೋಸ್ಟ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತದ 30ನೇ 2005-06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

12) ಶ್ರೀ ಎಂ ಪಿ ಪ್ರಕಾಶ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಪರವಾಗಿ) ಅವರು

1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗದ 14ನೇ ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರಿನ 2005-06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1 ಬೆಂಗಳೂರಿನಲ್ಲಿ ಭಯೋತ್ಪಾದಕ ಚಟುವಟಿಕೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮಲ್ಲಿ ಅವಕಾಶವನ್ನು ಕೇಳಿದ್ದೆ ತಾವು ನನಗೆ ಒಂದು ನಿಮಿಷ ಅವಕಾಶ ಕೊಡಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರುವುದಕ್ಕೆ ಬಯಸುತ್ತೇನೆ ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಭಯೋತ್ಪಾದಕರು ಜಾಸ್ತಿಯಾಗಿರತಕ್ಕಂಥದವರ ಬಗ್ಗೆ ದೇಶ ವಿದೇಶಗಳಲ್ಲಿ ಬೆಂಗಳೂಊರಿನ ಕಡೆ ಗಮನ ಹರಿಸತಕ್ಕಂಥಾದ್ದರಿಂದ

ಬೆಂಗಳೂರು ಮತ್ತು ಕರ್ನಾಟಕ ರಾಜ್ಯದ ಹಾಗೂ ದೇಶದ ಪ್ರತಿಷ್ಠೆಗೆ ಎಲ್ಲೋ ಒಂದು ಕಡೆ ಕುಂದಾಗುತ್ತಿದೆ ಎಂಬ ವಿಷಯ ಅನೇಕ ಪತ್ರಿಕೆಗಳಲ್ಲಿ ಬರುತ್ತಿದೆ ಆದ್ದರಿಂದ, ಬೆಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆ ಯಾವರೀತಿ ಇದೆ ಎಂಬುದನ್ನು ಮತ್ತು ಬೆಂಗಳೂರು ನಗರದಲ್ಲಿ ಈ ಭಯೋತ್ಪಾದಕರು ಎಲ್ಲೆಲ್ಲಿ ಮತ್ತು ಯಾರ್ಯಾರು ಇದ್ದಾರೆ ಎಂಬ ಪರಿಸ್ಥಿತಿ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಸದನದಲ್ಲಿ ಕೊಡಬೇಕಾಗಿತ್ತು ಅಂದರೆ, ಇತ್ತೀಚಿನ ದಿನಗಳಲ್ಲಿ ವಾತಾವರಣದ ಬಗ್ಗೆ ಮತ್ತು ಅಲ್ಲಿ ಬಾಂಬ್ ಬ್ಲಾಸ್ಟ್ ಆಗಿರತಕ್ಕಂಥಾದ್ದರ ಮೂಲ ಬೆಂಗಳೂರಿನಿಂದಲೇ ಬರುತ್ತಿದೆಯೆಂದು ಹಾಗೂ ಇದರಲ್ಲಿ ಇಲ್ಲಿನ ವೈದ್ಯರು ಸೇರಿದ್ದಾರೆಂಬ ಅನೇಕ ವಿಚಾರಗಳು ಪೂರ್ಣವಾಗಿ ಬೆಂಗಳೂರು ನಗರಕ್ಕೆ ಕೇಂದ್ರಿಕೃತವಾಗುತ್ತಿದೆ

ಆದ್ದರಿಂದ, ಈಗಿನ ಬೆಂಗಳೂರಿನ ಪರಿಸ್ಥಿತಿ ಬಗ್ಗೆ ಮತ್ತು ಇದು ಯಾವ ರೀತಿಯಾಗಿ ನಡೆದಿದೆ ಎಂದು ಮತ್ತು ಇಲ್ಲಿರುವ ಭಯೋತ್ಪಾದಕರ ಬಗ್ಗೆ ಇಲ್ಲಿನ ಪೊಲೀಸ್‌ನವರು ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಮತ್ತು ವಿದೇಶಿ ಪೊಲೀಸ್‌ನವರು ಇಲ್ಲಿಗೆ ಬಂದಿದ್ದಾರೆಯೇ ಎಂಬ ಬಗ್ಗೆ ಸರ್ಕಾರ ಈ ಸದನದ ಮುಂದೆ ಸ್ಪಷ್ಟವಾಗಿ ಮತ್ತು ನೇರವಾಗಿ ಹೇಳಬೇಕು ತಮ್ಮ ಮೂಲಕ ಅತ್ಯಂತ ಗಂಭೀರವಾದಂಥ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ ಈ ಒಂದು ವಿಷಯ ಗೌಪ್ಯವಾಗಿದ್ದು, ಇದರ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಹೇಳುತ್ತಾ ಇದರ ಜೊತೆಗೆ ಮತ್ತೊಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗ ಗಮನಕ್ಕೆ ತರುತ್ತೇನೆ ಅದೇನೆಂದರೆ, ಕಾವೇರಿ ನೀರನ್ನು ಬಿಟ್ಟಿರತಕ್ಕಂಥಾದ್ದರ ಬಗ್ಗೆ ಈ ಸದನದಲ್ಲಿ ಸ್ಪಷ್ಟನೆ ನೀಡಬೇಕು ಏಕೆಂದರೆ, ಈಗಾಗಲೇ ಕಾವೇರಿ ನೀರು ಹರಿದು ಹೋಗುತ್ತಿದೆ ನಮ್ಮಲ್ಲಿ ಈಗ ಎಷ್ಟು ನೀರು ಇದೆ ಮತ್ತು ಅವರಿಗೆ ಇದುವರೆಗೆ ಎಷ್ಟು ನೀರು ಬಿಟ್ಟಿದೆ ಎನ್ನತಕ್ಕಂಥಾದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಸದನಕ್ಕೆ ತಿಳಿಸಬೇಕೆಂದು ಕೇಳುತ್ತಿದ್ದೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಭಯೋತ್ಪಾದಕರ ವಿಚಾರ ಬಹಳ ಗಂಭೀರವಾದಂಥ ವಿಚಾರವಾಗಿದೆ ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಅರ್ಧ ಗಂಟೆಯ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಮಾನ್ಯ ಸದಸ್ಯರೆಲ್ಲರೂ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ

ಅಧ್ಯಕ್ಷರು ತಾವು ಹಿರಿಯ ಸದಸ್ಯರು, ಈ ರೀತಿಯಾದರೆ ಹೇಗೆ? ಇದರ ಬಗ್ಗೆ ಸೂಚನೆ ಕಳುಹಿಸಿ, ಅವಕಾಶ ಕೊಡುತ್ತೇನೆ ಈಗ ಸರ್ಕಾರ ಉತ್ತರ ಕೊಡುತ್ತದೆ ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಚರ್ಚೆಯ ವಿಷಯ ಆನಂತರ ತೀರ್ಮಾನವನ ತೆಗೆದುಕೊಳ್ಳಿ ಈಗ ನಾನು ಕೇಳಿರುವ ವಿಚಾರದ ಬಗ್ಗೆ ಸರ್ಕಾರ ಉತ್ತರ ಕೊಡಲಿ

ಅಧ್ಯಕ್ಷರು ಈಗ ಸರ್ಕಾರ ಅದಕ್ಕೆ ರಿಯಾಕ್ಟ್ ಮಾಡಲಿ ಆನಂತರ ನೀವು ಸೂಚನೆ ಕಳುಹಿಸಿಕೊಡಿ ಚರ್ಚೆಗೆ ಅವಕಾಶ ಕೊಡುತ್ತೇನೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದಂತೆ ತಾವು ಚರ್ಚೆಗೆ ಅವಕಾಶ ಕೊಡಬೇಕು ಬೆಂಗಳೂರಿನಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಯುತ್ತಿದೆ ಎಂದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ ಇದು ಬಹಳಷ್ಟು ಸೂಕ್ಷ್ಮವಾದಂಥ ವಿಚಾರವೆಂದು ಎಲ್ಲರಿಗೂ ಸಹ ಗೊತ್ತಿದೆ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ತನಿಖೆ ಮಾಡುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳಾಗಲಿ ಅಥವಾ ಮಾನ್ಯ ಗೃಹ ಸಚಿವರ ಕಡೆಯಿಂದ ಒಂದು ಸ್ಪಷ್ಟನೆ ಬರಬೇಕಾಗಿತ್ತು ಲಂಡನ್ ಮತ್ತು ಅಲ್ಲಿ ಇಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ಆದ್ದರಿಂದ ಇದಕ್ಕೆ ಸಂಬಂಧಪಟ್ಟಂಥ ಜನರು ಇಲ್ಲಿರುವುದರಿಂದ ಇದರ ಬಗ್ಗೆ ಸ್ಪಷ್ಟನೆ ಆಗಬೇಕು ಏಕೆಂದರೆ, ಇದರ ಬಗ್ಗೆ ಜನರ ಮನಸ್ಸಿನಲ್ಲಿ ಸಾಕಷ್ಟು ಗೊಂದಲವನ್ನು ಉಂಟುಮಾಡಿದೆ ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಮಾನ್ಯ ಗೃಹಸಚಿವರು ಇದರ ಬಗ್ಗೆ ಸ್ಪಷ್ಟೀಕರಣ ಕೊಟ್ಟರೆ ಸರಿಹೋಗುತ್ತದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಕೂಡ ಬಹಳ ಆಂತಕಕಾರಿಯಾದಂತಹ ಮತ್ತು ದುರ್ದೈವದ ಸಂಗತಿಗಳು ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ ಭಯೋತ್ಪಾದಕರು ಯಾವ್ಯಾವ ಕಾರಣಗಳಿಂದಾಗಿ ಅಂದರೆ, ಅವರು ತಮ್ಮದೇ ಅದಂಥ ಒಂದು ಸಂಘಟನೆಗಳ ಮೂಲಕ ಪ್ರೇರೇಪಿತರಾಗಿ ಧಾರ್ಮಿಕ ಮತಾಂಧರಾಗಿ ಅನೇಕ ಸಂದರ್ಭಗಳಲ್ಲಿ ಇಂಥ ಕುಕೃತ್ಯಗಳಿಗೆ ಅವರುಗಳು ಹೆಸರುವಾಸಿಯಾಗಿದ್ದಾರೆ ಆದರೆ, ಅಪರಾಧಗಳ ಸ್ವರೂಪ ಇತ್ತೀಚೆಗೆ ಬೇರೆ ಬೇರೆ ರೀತಿಯಲ್ಲಿ ರೂಪಾಂತರಗೊಳ್ಳುತ್ತಿದೆ

ಇಲ್ಲಿಯವರೆಗೂ ಕೂಡ ಸಾಮಾನ್ಯವಾಗಿ ಅಪರಾದಗಳನ್ನು ಎಸಗುವಂತಹವರು ಬಹಳ ಮಟ್ಟಿಗೆ ರೌಡಿಗಳಾಗಿರುವಂಥವರು ಅಥವಾ ಯಾವುದೇ ತರವಾದಂಥ ಸಂಸ್ಕಾರ, ಸುಸಂಸ್ಕೃತಿ, ಶಿಕ್ಷಣ ಇಲ್ಲದೇ ಇರತಕ್ಕಂಥವರು ಎಂದು ಪರಿಭಾವಿಸುತ್ತಿದ್ದೆವು ಆದರೆ, ಇತ್ತೀಚಿನ ದಿನಮಾನಗಳಲ್ಲಿ ವಿದ್ಯಾವಂಥರಾಗಿರುವಂಥವರು, ಹೊರ ನೋಟಕ್ಕೆಸಜ್ಜನರಂತೆ ವರ್ತಿಸುವಂತಿರುವವರು ಯಾವುದೇ ತರವಾದ ಉಪದ್ರವಗಳನ್ನು ಬೇರೆಯವರಿಗೆ ಕೊಡಲಾರದಂತಿರುವವರು ಒಳಗಿಂದೊಳಗೇ ಇಂಥ ಒಂದು ಕುಕೃತ್ಯಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಪ್ರೇರಾಪಣೆಯನ್ನು, ಸಾಮಗ್ರಿಗಳನ್ನು ತಯಾರು ಮಾಡಿಕೊಳ್ಳುತ್ತಿರುವಂಥದನ್ನು ನಾವು ಕಾಣುತ್ತಿದ್ದೇವೆ

ಅಲ್ಲಿಯ Glasgow Airport ನ ಮುಂದೆ ಆಗಿರತಕ್ಕಂಥದ್ದು ಮತ್ತು ಲಂಡನ್‌ದಲ್ಲಿ ನಡೆದಿರತಕ್ಕಂಥಾದ್ದು ಈ ಬಗ್ಗೆ ಆಸ್ಟ್ರೇಲಿಯಾದಲ್ಲಿರತಕ್ಕಂಥ ಒಬ್ಬ ಡಾಕ್ಟರ್‌ರ ವಿಚಾರದಲ್ಲಿ ಕಳೆದ 4–5 ದಿವಸಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತು ದೇಶದ ಮಟ್ಟದಲ್ಲಿ ಚರ್ಚೆಯಾಗುತ್ತಿರುವುದನ್ನು ಕಂಡಿರುತ್ತೇವೆ ಈ ಬಗ್ಗೆ ಸರ್ಕಾರ ಸಂಪೂರ್ಣವಾದ ಕಟ್ಟೆಚ್ಚರಿಕೆಯನ್ನು ಕೊಟ್ಟಿರುತ್ತದೆ ಅದರ ಬಗ್ಗೆ ನಿಗಾ ಇಟ್ಟಿದೆ Indian Institute of Science ನ ಪ್ರಕರಣವಾದ ಮೇಲೆ ಅದಕ್ಕಾಗಿ ಭಯೋತ್ಪಾದಕರ ನಿಗ್ರಹಕ್ಕೆ ಬೇಕಾಗಿರತಕ್ಕಂಥ ಎಲ್ಲ ಪೂರಕವಾದಂಥ ಕ್ರಮಗಳನ್ನು ಮತ್ತು ಮಾಹಿತಿಗಳನ್ನು ನಾವ ಸಂಗ್ರಹ ಮಾಡಿದ್ದೇವೆ ಸಾಮಾನ್ಯವಾಗಿ ಹೊರದೇಶದಲ್ಲಿತಕ್ಕಂಥವರು ರಾಷ್ಟ್ರದಲ್ಲಿರತಕ್ಕಂಥ ಮತ್ತೊಂದು ಸರ್ಕಾರಕ್ಕೆ ಈ ವಿಷಯವನ್ನು ತಿಳಿಸುತ್ತಾರೆ ಅವರು ರಾಜ್ಯ ಸರ್ಕಾರೊಂದಿಗೆ ಹೊರರಾಷ್ಟ್ರದವರು ನೇರವಾಗಿ ಸಂಪರ್ಕವನ್ನು ಬೆಳೆಸುವುದಿಲ್ಲ ಆದ್ದರಿಂದ ಅಲ್ಲಿರುವಂಥ ಮಾಹಿತಿಗಳನ್ನು ನಮ್ಮ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ, ಕೇಂದ್ರ ಸರ್ಕಾರದಲ್ಲಿರುವಂಥ ಇವಿಧ ಬೇಹುಗಾರಿಕೆ ಇಲಾಖೆಯವರು ಬಂದಿರುವಂಥ ಮಾಹಿತಿಯನ್ನು ವಿಶ್ಲೇಷಿಸಿ ಅದಕ್ಕೆ ಸಂಬಂಧಪಟ್ಟರತಕ್ಕಂಥ ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ಅದರಲ್ಲಿ ಕರ್ನಾಟಕಕ್ಕೆ, ಅವರು ಕರ್ನಾಟಕದ ಮೂಲ ನಿವಾಸಿಗಳು ಎನ್ನುವ ಕಾರಣಕ್ಕಾಗಿ ಕೊಟ್ಟಿರುವಂಥದ್ದು ಇದೆ ನಮ್ಮ ಅಧಿಕಾರಿಗಳು ಅದಕ್ಕೆ ಬೇಕಾಗಿರತಕ್ಕಂಥ ಕ್ರಮವನ್ನು ಕೂಡ ಕೈಗೊಂಡಿದ್ದಾರೆ ಸಂಬಂಧಪಟ್ಟಂಥ ಕುಟುಂಬದವರನ್ನು, ತಂದೆ–ತಾಯಿಗಳನ್ನು, ಸ್ನೇಹಿತರನ್ನು ಹಾಗೂ ಅವರ ಸಂಬಂಧಿಕರನ್ನು ಈಗಾಗಲೇ ನಾವು ಪ್ರಶ್ನೆಯನ್ನು ಮಾಡಿರತಕ್ಕಂಥಾದ್ದು ಕೂಡ ಇದೆ ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾದಂತೆ Hard disk ಒಂದು ಸಿಕ್ಕಿದೆ ಆ disk ಗೆ ಸಂಬಂಧಪಟ್ಟಂಥಾದ್ದರ ಬಗ್ಗೆ ಕೇಳಿದಾಗ ಅದನ್ನು ಅವರು ಒಪ್ಪಿಕೊಂಡಿದ್ದಾರೆ ಒಪ್ಪಿಕೊಂಡಿರುವುದರ ಎಂದರೆ ಅದನ್ನು ನೀವು ಸುರಕ್ಷಿತವಾಗಿ ಇಡಬೇಕೆಂದು ಹೇಳಿ, ನನ್ನ ಮಗ ನನ್ನ ಕೈಗೆ ಕೊಟ್ಟಿದ್ದ, ಅದನ್ನು ನಾವು

ನೇರವಾಗಿ ಅದಕ್ಕೆ ಸಂಬಂಧಪಟ್ಟ ಕೆಲವು ಮಾಹಿತಿಗಳು ಅಂದರೆ, plan ಗೆ ಸಂಬಂಧಪಟ್ಟಿರುವಂಥಾದ್ದು ನಮ್ಮ ಹತ್ತಿರ ಇದೆ ಎನ್ನುವಂಥ ಮಾತನ್ನು ಹೇಳಿದರು ಈ ಕಾರಣಕ್ಕಾಗಿ ಅದನ್ನು ನಾನು ನನ್ನ ಮಗಳ ಕೈಯಲ್ಲಿ ಕೊಟ್ಟಿರುವೆನು ಮಗಳು ಕೂಡ ಬಹಳ ವಿದ್ಯಾವಂತೆಯಾಗಿರುತ್ತಾಳೆ ದೇವರಾಜ್ ಅರಸು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವಂಥ ಒಬ್ಬ ವಿದ್ಯಾರ್ಥಿನಿ ಆಕೆಯನ್ನು ಪ್ರಶ್ನೆ ಮಾಡಿದಂಥ ಸಂದರ್ಭದಲ್ಲಿ ಇದು ನಮ್ಮ ಮೇಲೆಯೂ ಬರಬಹುದು, ಆಪಾದನೆಗಳು ಆಗಬಹುದು ಎನ್ನುವ ಕಾರಣಕ್ಕಾಗಿ ಗೆಳತಿಯ ಕಡೆಗೆ ಕೊಟ್ಟಿದ್ದೆ, ಅದನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದಕ್ಕೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ ಇದರ ಬಗ್ಗೆ ನಾವು ಆ bfoh ನ್ನು ಯಾವ ರೀತಿಯಾಗಿ ಓದಬೇಕು ಅದನ್ನು ಯಾವ ರೀತಿಯಾಗಿ ಪ್ರವೇಶ ಮಾಡಬೇಕು ಎನ್ನತಕ್ಕಂಥ ವಿಚಾರದಲ್ಲಿ Indian Institute of Science ನ ಮುಖ್ಯಾಧಿಕಾರಿಗಳ ಜೊತೆಯಲ್ಲಿ ಮಾತನಾಡಿದಾಗ ಅವರು ತಿರುವಂತಪುರದಲ್ಲಿ ಇದ್ದರು ಆದಾದ ನಂತರ ಈಗ ಅದರ ಪ್ರಯತ್ನ ನಡೆದಿದೆ ಅದರ ವಿವರಗಳು ಬಂದ ತಕ್ಷಣವೇ ಅದು ಯಾವ ಮಾಹಿತಿ ಇದೆ ಎನ್ನುವುದರ ಮೇಲೆ ಉಳಿದಿರತಕ್ಕಂಥವರ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಧ್ಯತೆಯಾಗುತ್ತದೆ ಆದರೆ ಈ ಘಟ್ಟದಲ್ಲಿ ಅದರ ಮಾಹಿತಿಯ ವಿವರಗಳನ್ನು ಕೊಡುವುದಾಗಲಿ ಅದರಿಂದ ಇಂತಹ ವಿಚಾರಗಳನ್ನು ಈಸಧ್ಯದಲ್ಲಿ ಸದನಕ್ಕೆ ಹೇಳುವಂಥದ್ದು ಅಗಲಿ ಅಥವಾ ಪತ್ರಿಕೆಗಳಿಗೆ ಹೇಳುವಂಥದ್ದು ಅಧಿಕಾರಿಗಳಿಗೂ ಸ್ಪಷ್ಟವಾದ ಮಾತು ಅಲ್ಲವೆನ್ನುವುದನ್ನು ಹೇಳಿದ್ದೇವೆ

ನಮ್ಮ ಎಲ್ಲಾ ಪೊಲೀಸ್ ಅಧಿಕಾರಿಗಳಿಗೂ ಕೂಡ ಸ್ಪಷ್ಟವಾದ ನಿರ್ದೇಶನವನ್ನು ನಮ್ಮ ಮಹಾ ನಿರ್ದೇಶಕರ ಪರವಾಗಿ ಕೊಟ್ಟಿದ್ದೇವೆ ಇಂತಹ ವಿಚಾರಗಳಿಗೆ ಪತ್ರಿಕಾ ಹೇಳಿಕೆಯನ್ನು ಕೊಡಬಾರದು ಬಹಳ ಸೂಕ್ಷ್ಮವಾದ ವಿಚಾರಗಳು ಇವೆ ಇದರಲ್ಲಿ ಬೇರೆ ಬೇರೆ ಜನಗಳು ಬೇರೆ ಬೇರೆ ಸಂಘಟನೆಗಳು ಭಾಗವಹಿಸಿರತಕ್ಕಂಥ ಹಿನ್ನಲೆಯಲ್ಲಿ ಒಬ್ಬೊಬ್ಬರು ಒಂದೊಂದು ತರಹದ ಪತ್ರಿಕಾ ಹೇಳಿಕೆಯನ್ನು ಕೊಡುವುದು ಸಾಧುವಾದುದು ಅಲ್ಲವೆಂದು ಹೇಳಿರುತ್ತೇವೆ ಆದ್ದಿರಿಂದ ನಾವು ಅದರ ಬಗ್ಗೆ ಏನೂ ಕ್ರಮವನ್ನು ಕೈಗೊಂಡಿಲ್ಲವೆಂದು ಇಲ್ಲ ಇದರ ಜೊತೆಗೆ ಸನ್ಮಾನ್ಯ ಅಧ್ಯಕ್ಷರೆ, ಆಸ್ಟ್ರೇಲಿಯಾದಲ್ಲಿದ್ದಂಥ ಡಾ ಹನೀಫ್‌ರವರು ಅಲ್ಲಿ ನಡೆದಿರತಕ್ಕಂತ ಪ್ರಕರಣದ ಜಾಗದಲ್ಲಿ ಇಲ್ಲದೇ ಹೋಗಿರಬಹುದು ಆದರೆ ಅವರೆಲ್ಲರೂ ಕೂಡ ಜಿಹಾದ್ ಮೊದಲಾಗಿರಕ್ಕಂಥ ವಿಚಾರಗಳಲ್ಲಿ ಮತ್ತು ಅವರು ಧಾರ್ಮಿಕವಾದಂಥ ಪ್ರೇರಣೆಗಳ ಮೂಲಕವಾಗಿ ಕೆಲವು ಸಭೆಗಳಲ್ಲಿ ಮಾತನಾಡಿದ್ದರೆ ಎನ್ನುವ ಮಾಹಿತಿಗಳು ಕೂಡ ಲಭ್ಯವಾಗಿವೆ ಆದರೆ ಅವು ಎಷ್ಟರಮಟ್ಟಿಗೆ ಅವು ಶಿಕ್ಷಾರ್ಹವಾದ ಅಪರಾಧಗಳು ಎಷ್ಟು

ಪ್ರಚೋದನಾಕಾರಿಯಾಗಿತರಕ್ಕಂಥ ವಿಚಾರಗಳು ಎನ್ನುವುದರ ಬಗ್ಗೆ ಕೂಡ ನಾವು ಕೈಗೊಳ್ಳಲಿಕ್ಕೆ ತಯಾರಿಯನ್ನು ನಡೆಸಿದ್ದೇವೆ ಇಲ್ಲಿಯವರೆಗೆ ನಾವು ಯಾರನ್ನು ಕೂಡ ದಸ್ತಗಿರಿಯನ್ನು ಮಾಡಿಲ್ಲ ಮಾಹಿತಿಯ ಸಂಗ್ರಹದಲ್ಲಿದ್ದೇವೆ

Indian Institute of Science ನಲ್ಲಿ ಆದಂಥ ಒಂದು ಪ್ರಕರಣದ ನಂತರ ಸಂಪೂರ್ಣವಾದ ಒಂದು ಎಚ್ಚರಿಕೆಯಿಂದ ನಮ್ಮ ರಾಜ್ಯ ಸರ್ಕಾರ ಕೆಲಸವನ್ನು ಮಾಡುತ್ತಿದೆ ಗೃಹ ಇಲಾಖೆಯೂ ಕೂಡ ಹಂಪಿಯಲ್ಲಿದ್ದಂಥ ಒಬ್ಬ ಭಯೋತ್ಪಾದಕನನ್ನು ಸೆರೆಹಿಡಿದಿರತಕ್ಕಂಥದಾದ್ದು ಮೈಸೂರಿನಲ್ಲಿ ಆಗಿರತಕ್ಕಂಥ ಘಟನೆಯ ಬಗ್ಗೆ ಇರತಕ್ಕಂಥ ಮಾಹಿತಿಯನ್ನು ಕೂಡ ಇವತ್ತು ನಿಮಗೆಲ್ಲರಿಗೂ ಗೊತ್ತಿದ್ದಂತೆ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದೇವೆ ಈ ದಿವಸ 4 30 ಗಂಟೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಒಂದು ಪೊಲೀಸ್ ಅಧಿಕಾರಿಗಳ ಸಭೆಯನ್ನು ಕರೆದಿದ್ದಾರೆ ಇಲಾಖೆಯ ಮುಖ್ಯಸ್ಥರು ಮತ್ತು ನಾನು ಅದರಲ್ಲಿ ಭಾಗವಹಿಸಿ ಇರುವಂಥ ಮಾಹಿತಿಗಳ ಬಗ್ಗೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ವಿಚಾರದಲ್ಲಿ ನಾವು ನಿರ್ಧಾರವನ್ನು ಕೈಗೊಳ್ಳಬೇಕಾಗಿದೆ

ಮಹಾರಾಷ್ಟ್ರದ ಮುಂಬೈ ಮಹಾ ನಗರಕ್ಕೆ ಇರುವಂಥ ಅದೇ ರೀತಿಯಾದಂಥ ಒಂದು ವ್ಯವಸ್ಥೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮಾಡಕ್ಕಂಥ ಈ ಸಂದರ್ಭದಲ್ಲಿ ಸುಮಾರು 70 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವಾಗ 10–15 ಲಕ್ಷಕ್ಕಿಂತ ಹೆಚ್ಚು ಜನ ಪ್ರವಾಸಿಗರು, ವ್ಯಾಪಾರಿಗಳು ವಿವಿಧ ಉದ್ದೇಶಗಳಿಗೆ ಬರತಕ್ಕಂಥ ಈ ಪ್ರದೇಶಧಲ್ಲಿ ನಾವು ಕಟ್ಟೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಎನ್ನುವ ಕಾರಣಕ್ಕಾಗಿಯೇ ಬೆಂಗಳೂರು ಮಹಾನಗರ ಪಾಲಿಕೆಗೆ ಸೀಮಿತವಾಗಿ ಭಯೋತ್ಪಾದಕ ನಿಗ್ರಹ ದಳವನ್ನು ನಾವು ಸ್ಥಾಪಿಸಬೇಕು ಎನ್ನುವ ಯೋಚನೆಯನ್ನು ಮಾಡಿ ಸುಮಾರು ಮೂರು ತಿಂಗಳ ಹಿಂದೆ ಪ್ರಸ್ತಾವವನ್ನು ನಾವು ಕಳುಹಿಸಿಕೊಟ್ಟಿದ್ದೆವು ಅದು ಹಣಕಾಸು ಇಲಾಖೆಯಲ್ಲಿ ಆ ವಿಚಾರ ಬಂದಿದೆ ಈಗ ನಾನು ಮೂರು–ನಾಲ್ಕು ದಿವಸಗಳ ಹಿಂದೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರ ಜೊತೆಯಲ್ಲಿ ಮಾತನಾಡಿದಾಗ ಇದು ಬಹಳ ಮಹತ್ವವಾದ ಸಂಗತಿಯಾಗಿರುವುದರಿಂದ ನಾನು ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ, ಇದಕ್ಕೆ ಬೇಕಾಗಿರತಕ್ಕಂಥ ಹಣಕಾಸಿನ ನೆರವನ್ನು ಕೂಡ ಕೊಡುತ್ತೇವೆ ಎನ್ನುವಂಥ ಮಾತನ್ನು ಕೂಡ ಅವರು ಹೇಳಿದ್ದಾರೆ ಪ್ರಾಯಶಃ ಇವತ್ತು 4 ಗಂಟೆಗೆ ನಡೆಯುವಂಥ ಸಭೆಯಲ್ಲಿ ಹಣಕಾಸು ಇಲಾಖೆಯ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳು ಭಾಗವಹಿಸುತ್ತಾರೆ ಆ ಸಂದರ್ಭದಲ್ಲಿ

ಅತ್ಯಂತ ಕ್ರಿಯಾಶೀಲರಾಗಿರುವಂಥ 25,26,27 ವರ್ಷದೊಳಗಿನ ಸದೃಢವಾಗಿರತಕ್ಕಂತ ಮತ್ತು ಬುದ್ಧಿವಂತರು ಆಗಿರತಕ್ಕಂಥ ಕ್ರಿಯಾಶೀಲ ಮತ್ತು ಯೋಚನೆ ಮಾಡುವಂಥ ಜನಗಳನ್ನು ಇದರಲ್ಲಿ ನೇಮಕಾತಿ ಮಾಡಿ ಕೊಳ್ಳ ತಕ್ಕಂಥಾದ್ದು ಅವರಿಗೆ ಅವರ ವೇತನಶ್ರೇಣಿಯ 30% ಅವರ ವೇತನಶ್ರೇಣಿಯಲ್ಲಿ Incentive ಓಗಿ ಪ್ರೋ ಕೊಡತಕ್ಕಂಥದ್ದು ಅವರ ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳುವಂಥದ್ದು ಅವರ ಕುಟುಂಬಕ್ಕೆ ರಕ್ಷಣೆ ಕೊಡತಕ್ಕಂಥ ಭರವಸೆಯ ಮೇಲೆ ಅದರ ನೇಮಕಾತಿ ಮಾಡತಕ್ಕಂಥ ಪ್ರಕ್ರಿಯೆಯನ್ನು ಮಾಡುತ್ತೇವೆ ಈ ಭಯೋತ್ಪಾದಕರಿಗೆ ಒದು ಅನುಕೂಲ ಇರುತ್ತದೆ ಅವರು ತಮ್ಮ ದಿನಾಂಕವನ್ನು ನಿರ್ಧಾರ ಮಾಡುತ್ತಾರೆ, ಸಮಯವನ್ನು ನಿರ್ಧಾರ ಮಾಡುತ್ತಾರೆ ಮತ್ತು ಯಾವ ಸ್ಥಳ ಎನ್ನುವುದನ್ನು ಅವರು ನಿರ್ಧಾರ ಮಾಡುತ್ತಾರೆ ಆದ್ದರಿಂದ ಅದಕ್ಕೆ ವಿರುದ್ಧವಾಗಿರತಕ್ಕಂಥವರು ನಮ್ಮ ರಾಜ್ಯ ಸರ್ಕಾರ ಆಗಬಹುದು, ಬೇರೆ ಇನ್ನಾವುದೇ ಸಂಘಟನೆ ಇದ್ದಂಥದ್ದು ಆಗಿರಬಹುದು ನಾವು ಅವುಗಳ ಬಗ್ಗೆ ಊಹೆ ಮಾಡತಕ್ಕಂಖಥ ಬುದ್ಧಿ ಮತ್ತೆ ಇರಬೇಕು ಯಾವುದೇ ಭಯೋತ್ಪಾದಕತೆ ನಡೆಸುವಂಥ ಕ್ರಿಯೆಯಲ್ಲಿ ನಮಗೆ ಲಭ್ಯವಿರುವ ಮಾಹಿತಿಯ ವಿಶ್ಲೇಷಣೆಯ ಆಧಾರದ ಮೇಲೆ ಅವರು ಯಾವ ದಿವಸ ಯಾವ ಕಡೆಗೆ ಯಾರ ಮೇಲೆ ಪ್ರಯೋಗವನ್ನು ಮಾಡಬಹುದು ಎನ್ನುವುದನ್ನು ನಾವು ಊಹೆ ಮಾಡಿ ಅದಕ್ಕೆ ಎಲ್ಲಾ ತರಹದ ಸನ್ನದ್ಧತೆಯನ್ನು ಮಾಡಿಕೊಳ್ಳಬೇಕು ಎನ್ನುವುದಕ್ಕೆ ತರಬೇತಿಯನ್ನು ಕೊಡಬೇಕಾಗುತ್ತದೆ ಹೆಚ್ಚಿನ ಉಪಕರಣಗಳ ತರಬೇತಿಯನ್ನು ಕೊಡಬೇಕಾಗುತ್ತದೆ ಅಂತಾರಾಷ್ಟ್ರೀಯ ಮಟ್ಟದಲ್ಲಿರತಕ್ಕಂಥ ಬೇಹುಗಾರಿಕೆ ಮತ್ತು ವಿವಿಧ ಸಂಸ್ಥೆಗಳು ಏನಿವೆ, ಇಂಗ್ಲೆಂಡಿನಲ್ಲಿರುವಂಥ M-15 ಆಗಿರಬಹುದು, ಅಥವಾ FBI ಆಗಿರಬಹುದು, ಅಥವಾ ರಷ್ಯಾದಲ್ಲಿರತಕ್ಕಂಥ, ಇವತ್ತೇನೂ ಅದನ್ನು KGB ಎಂದು ಹೇಳುವುದಿಲ್ಲ ceIt was a organization ಆ ತರಹದಂತೆ, ಅವರೆಲ್ಲರ ಜೊತೆಗೂ ಕೂಡ ಬೇರೆ ಬೇರೆ ಸಂಪರ್ಕಕ್ಕೆ ನಮ್ಮ ಭಾರತ ದೇಶದವರು ಸಂಪರ್ಕದಲ್ಲಿದ್ದಾರೆ ಅವರ ಮೂಲಕವಾಗಿ ನಮಗೆ ಮಾಹಿತಿಗಳು ಬರುತ್ತಿದೆ ಈ ಸದನದಲ್ಲಿ ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿರತಕ್ಕಂಥ ಈ ಹಿನ್ನಲೆಯಲ್ಲಿ ನಾನು ಜನತೆಗೆ ಕರ್ನಾಟಕದ ಸರ್ಕಾರದ ಪರವಾಗಿ ಯಾರು ಇಂತಹ ಸಂಸಯಾಸ್ಪದವಾದಂಥ ವ್ಯಕ್ತಿಗಳುಇದ್ದಾರೆ, ಅವರ ಸುಳಿವನ್ನು ಕೊಡತಕ್ಕಂಥಾದ್ದರ ಕಡೆಗೆ ಜನರು ಮುಂದೆ ಬರಬೇಕು, ಹಾಗೂ ಸಂಶಯಾಸ್ಪದವಾಗಿರತಕ್ಕಂಥ ವಸ್ತುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಕಂಡು ಬಂದರೆ ಅದನ್ನು ತತ್‌ಕ್ಷಣದಲ್ಲಿ ತಿಳಿಸತಕ್ಕಂದ ಕೆಲಸವನ್ನು ಮಾಡಬೇಕೆಂದು ಹೇಳಿ, ಸದನದ ಮೂಲಕ ಮಹಾ ಜನತೆಗೆ ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ ಇದರ ಜೊತೆಗೆ ನಾವು ಒಂದು

ಒಳ್ಳೆಯ ಬೆಳವಣಿಗೆ ಈಗ ಆಗಿತರತಕ್ಕಂಥದ್ದು ನನಗೆ ಮಧ್ಯಾಹ್ನ ಪೂರ್ಣ ಮಾಹಿತಿ ಬಂದ ತಕ್ಷಣ ಸದನದಲ್ಲಿ ಮಂಡಿಸಬೇಕೆಂದು ಇದ್ದೆ ನಕ್ಸಲರ ಚಟುವಟಿಕೆಗಳು ಈಗ ಅಲ್ಲಿ ಇಲ್ಲಿ ಆಗತಕ್ಕಂಥ ಹಿನ್ನಲೆಯಲ್ಲಿ ಮೆಣಿಸಿನಹಾಡದಲ್ಲಿ ಈ ದವಸ ನಡೆದಿರತಕ್ಕಂಥಾದ್ದು ಮತ್ತು ಬಂದಿರತಕ್ಕಂಥ ಖಚಿತವಾದ ಮಾಹಿತಿ ಆದಾರದ ಮೇಲೆ ಅವರ ಅಡಗುತಾಣವನ್ನು ನಮ್ಮ ಪೊಲೀಸರು ಸುತ್ತುವರಿದಿದ್ದಾರೆ ಇಬ್ಬರು ನಕ್ಸಲರು ಹತರಾಗಿದ್ದಾರೆ, ಒಬ್ಬ ಪೊಲೀಸ್ ಪೇದೆಗೆ ತಲೆಗೆ ಗಾಯವಾಗಿ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಮತ್ತು ಮೂರು ಜನ ನಕ್ಸಲರು ನಮಗೆ ಶರಣಾಗತರಾಗಿದ್ದಾರೆ ಇನ್ನೂ ಮಾಹಿತಿಗಳು ಬರುತ್ತಿವೆ, ಪೊಲೀಸರು ಇನ್ನೂ ಸ್ಥಳದಲ್ಲಿಯೇ ಇದ್ದಾರೆ ಆದ್ದರಿಂದ ಮಾಹಿತಿ ಬಂದ ನಂತರ ಸಾಯಂಕಾಲ ಅದರ ಬಗ್ಗೆ ನಾನು ಸಭೆಯಲ್ಲಿ ಪ್ರಕಟಣೆಯನ್ನು ಮಾಡುತ್ತೇನೆ

ಶ್ರೀ ಕೆ ಆರ್ ರಮೇಶಕುಮಾರ್ (ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೆ, ತಾವು ಇದ್ದೀರಿ ಎಂದು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಭಯೋತ್ಪಾದನೆ, revolutionary activities, terrorist activities ಅದರ ಸ್ವಭಾವ ಬೇರೆ ಬೇರೆಯಾಗಿ ಇರುತ್ತವೆ Origin ಬೇರೆ ಬೇರೆಯೇ ಇರುತ್ತೆ Ringstead palace fire accident, George Dimitrov ಮಾಡಿದ್ದು ಅವತ್ತಿಗೂ ಕೂಡ ಸಾಕಷ್ಟು intelligence network ಇತ್ತು 19ನೇ ಶತಮಾನದಲ್ಲಿ ಆಗ ತಕ್ಕಂಥ revolutionary activity ನ್ನು ತಕ್ಷಣಕ್ಕೆ detect ಮಾಡತಕ್ಕಂಥ intelligence ಅವರು ತಿದ್ದಿಕೊಳ್ಳುತ್ತಾರೆ ಆ ಮೇಲೆ Sanderson attempt ಆದದ್ದು, convocation hall ನಲ್ಲಿ ನಡೆದಿರತಕ್ಕಂಥಾದ್ದು ನಾನು ತಮ್ಮಲ್ಲಿ ಇಷ್ಟೆ ಕೇಳುವುದು I don't blame you or the Chief Minister or somebody ಕಾಲಕಾಲಕ್ಕೆ ನಾವೋ, ನೀವೋ, ಯಾರೋ, ಆ ಸ್ಥಾನದಲ್ಲಿ ಯಾರೋ ಒಬ್ಬರು ಕುಳಿತುಕೊಳ್ಳುತ್ತಾರೆ police Department Surveillance ಎಂದು ಇರುತ್ತದೆ ಅಲ್ಲವೇ ಅವರು ಏನು ಮಾಡಿದರು

ಅದು ಎಲ್ಲೊ ಸ್ಫೋಟಗೊಂಡ ಮೇಲೆ ಅದರ origin ಇಲ್ಲಿಗೆ trace ಆಗಿ, ಈಗ ಹುಡುಕುವುದು, ಹಿಡಿಯುವುದನ್ನು ಮಾಡುತ್ತಿದ್ದಾರೆ ಅದನ್ನು ಬಿಟ್ಟರೆ ಇವರೆಲ್ಲ ಇಲ್ಲಿ ಬಂದದ್ದು, ಇಲ್ಲಿ ಸೆಟ್ಲ್ ಆಗಿದ್ದು ಇಷ್ಟು conspiracies ಮಾಡಿದ್ದು, ಇಷ್ಟೆಲ್ಲಾ network ಇಟ್ಟುಕೊಂಡು activities ಮಾಡಿಕೊಂಡಿದ್ದರ ಬಗ್ಗೆ ಇವರಿಗೆ ಮಾಹಿತಿಯೆ ಇಲ್ಲವಲ್ಲಾ, ಇಲ್ಲಿ ಅವರ ಇವರ ಹತ್ತಿರ ವರಾಂಡದಲ್ಲಿ ಕುಳಿತುಕೊಂಡು posting ಮಾಡಿಸಿಕೊಂಡು ಜಾತಿ, ಕುಲ ಹೇಳುವುದು ಅಥವಾ ಇನ್ನಾವುದನ್ನೋ ಹೇಳುವುದು ಚಾಡಿಕೋರತನವನ್ನು

ಮಾಡಿಕೊಂಡು ತಿರುಗುತ್ತಾರಲ್ಲಾ ನಾಚಿಗೆಗೆಟ್ಟ ಈ ಪೊಲೀಸ್‌ನವರು, I am not bothered about the Constablary, people belonging to the All India Services, they have run down so bad morally ಏನೂ credibility ಅವರಲ್ಲಿ ಉಳಿದೇ ಇಲ್ಲ ಪಾಪ ನಾವು Can I blame the Inspector or the Sub Inspector? No ಆ ರ್‍ಯಾಂಕ್ ನಲ್ಲಿರುವಂತಹವರು ಅವರ Intelligence ಏನಾಯಿತು? ಅವರು Surveillance ಏನು ಮಾಡಿದರು? why have not they informed the goverment from time to time? It is shocking ತಾವು ಈಗ ಏನೇನು operative measure ತೆಗೆದುಕೊಂಡಿದ್ದೀರಿ, we appreciate all that. ನಮ್ಮ ಸಂಪೂರ್ಣ ಸಹಕಾರ ತಮಗೆ ಇದೆ ನಿಮ್ಮ ಪ್ರಾಮಾಣಿಕತೆಯ ಬಗ್ಗೆ ನಮಗೆ ಅನುಮಾನವಿಲ್ಲ ಆದರೆ ಇದೇ ಕೆಲಸಗಳಿಗಾಗಿ ನಿಯುಕ್ತರಾದಂತಹವರು, ತರಬೇತಿ ಪಡೆದಂತಹವರು, ಅರ್ಹತೆ ಇರುವಂತಹವರು ಮಾಡಿದ್ದೇನು? ಅವರಿಗೆ ಕಡೆಯ ಪಕ್ಷ ಇಂತಹವರೆಲ್ಲರು ಇದ್ದರು ಎಂದು ಸುಳಿವಾದರೂ ಇರಬೇಕಲ್ಲವೇ? ಈಗ ಅಲ್ಲೆಲ್ಲೋ ಸ್ಫೋಟಗೊಂಡ ಮೇಲೆ ಅದನ್ನು ಹುಡುಕುತ್ತಾ ಬಂದು ಇಲ್ಲಿಗೆ ಬಂದು ತಲುಪಿದ್ದೇವೆ ದಯಮಾಡಿ ಆ directionನಲ್ಲಿ as governance, as Government, as Home Minster, I think, ಸ್ವಲ್ಪ narrow considerationನ್ನು ಬಿಟ್ಟು People who deserve to be posted in the respective places, whose integrity is unimpeachable, who are committed to the nation, who don't do this job psycophancy you must put such people in the sensitive positions Otherwise, ತಾವು ಒಂದು ritualistic reply ಕೊಟ್ಟಂತೆ ಆಗುತ್ತದೆಯೇ ಹೊರತು, ಈ ಒಂದು situationನ್ನು ನಾವು ಏನು combat ಮಾಡುತ್ತಿದ್ದೇವೆ House is one with you We have to survive this parliametary democracy We cannot alow this to go into the hands of the stray elements ಅದಕ್ಕೆ ಬೇಕಾಗಿರತಕ್ಕಂತಹ ತರಬೇತಿಯನ್ನು ಇವತ್ತು ಸರ್ಕಾರದಲ್ಲಿ ಹೊಣೆಯನ್ನು ಹೊತ್ತಿರುವಂತಹ ಜಾಗದಲ್ಲಿ ತಾವು ಇರತಕ್ಕಂತಹವರು ಎಲ್ಲೋ ಒಂದು ಕಡೆಯಲ್ಲಿ ಆತ್ಮಾವಲೋಕನವನ್ನು ಮಾಡಿಕೊಂಡು ಯೋಗ್ಯರು ಯಾರು ಇದ್ದಾರೆ ಅಂತಹವರನ್ನು ಆ ಸ್ಥಳಗಳಿಗೆ ತರುವುದರಿಂದ ಬಹುಶಃ ಮುಂದಕ್ಕೆ ಆಗುವಂತಹ ಈ ಅನಾಹುತಗಳನ್ನು ತಡೆಯುವುದಕ್ಕೆ ಸ್ವಲ್ಪ ಮಟ್ಟಿಗೆ ಸಹಾಯವಾಗುಬಹುದು ಎಂದು ನನ್ನ ನಮ್ರವಾದ ನಂಬಿಕೆ ಮತ್ತು ಇದು

ಅಪಾದನೆಯಲ್ಲ, ಇದು ಟೀಕೆಯಲ್ಲ ವಿಮರ್ಶೆಯಲ್ಲ ಎಲ್ಲೋ ಒಂದು ಕಡೆಗೆ we have to subject ourselves to sans introspects

ಶ್ರೀ ಆರ್ ರೋಷನ್ ಬೇಗ್ (ಜಯಮಹಲ್) · ಮಾನ್ಯ ಅಧ್ಯಕ್ಷರೆ, ಕಳೆದ 4 ವರ್ಷದ ಹಿಂದೆ, Parliment ನಲ್ಲಿ ಒಂದು ಪ್ರಶ್ನೆ ಬಂತು ಕರ್ನಾಟಕದಲ್ಲಿ NGOs ಗಳಿಗೆ ಎಷ್ಟು ಹಣ ವಿದೇಶದಿಂದ ಬಂದಿದೆ Foreign donation ಎಷ್ಟು ಬಂದಿದೆ ಎಂದು ಆಗ ಅದನ್ನು ಸಹ Minister State for Home onthe floor of the House ಉತ್ತರವನ್ನು ಕೊಡುತ್ತಾರೆ ಇಷ್ಟು ಸಾವಿರ ಕೋಟಿ ರೂಪಾಯಿಗಳ ಕರ್ನಾಟಕಕ್ಕೆ ಸಂಘಗಳಿಗೆ ಇಷ್ಟು ಸಂಘಟನೆಗಳಿಗೆ ಹಣ ಬಂದಿದೆ ಎಂದು ಪಾರ್ಲಿಮೆಂಟ್‌ನಲ್ಲಿ ಉತ್ತರವನ್ನು ಕೊಡುತ್ತಾರೆ ಅದರ ಬಗ್ಗೆ ಆ statement ಬಂದ ಮೇಲೆ ನಮ್ಮ State Police ನವರು ಎಷ್ಟು ಸಾವಿರ ಕೋಟಿ ರೂಪಾಯಿಗಳು ಯಾವ ಸಂಘಟನೆ ಗಳಿಗೆ ಹೋಗಿದೆ, ಆಗ ಇವರು ಎಚ್ಚರವನ್ನು ವಹಿಸಿದ್ದರೆ ಇಂತಹ ಘಟನೆಗಳು ಆಗುತ್ತಿರಲಿಲ್ಲ We are one in condemning this terrorism, misguided agitators We strongly condemn it But Police ನವರು ಇಷ್ಟು ಸಾವಿರ ಕೋಟಿ ರೂಪಾಯಿಗಳು ಕರ್ನಾಟಕಕ್ಕೆ ಬರುತ್ತದೆ ಎಂದು Parliment ನಲ್ಲಿ statementನ್ನು ಕೊಟ್ಟ ಮೇಲೆ ಇವರು ಏನು ಮಲಗಿದೆ

ಈ State Intelligence Department ನವರು ಏನು enquiry ಯನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲವೆ? ಆಮೇಲೆ ನಾನು ನೇರವಾಗಿ ಅಪಾದನೆಯನ್ನು ಮಾಡುತ್ತೇನೆ Government of India ದಲ್ಲಿ Intelligence Bureau ಎಂದು ಇದೆ ಅವರು State Government neglect ಮಾಡುತ್ತಾರೆ ಈ ಬಗ್ಗೆ ತಾವು ಗೃಹಮಂತ್ರಿಗಳನ್ನು ಕೇಳಬಹುದು ಇವರು ಆಗಾಗ್ಗೆ ಬಂದು brief ಮಾಡುತ್ತಾರೆ The Intelligence Bureau Officer belonging to Karnataka, hundreds of crores funds ಅವರಿಗೆ ಇದೆ ಆ ಹಣ ಎಲ್ಲಿಗೆ ಹೋಗುತ್ತದೆ? ಕರ್ನಾಟಕದಲ್ಲಿ ಅವರು ಯಾವುದಕ್ಕೆ ಖರ್ಚು ಮಾಡುತ್ತಿದ್ದಾರೆ? ಆ ಕಾರಣಕ್ಕೆ ಬರೀ ಅವರು ಕ್ಲಬ್‌ನಲ್ಲಿ ಖರ್ಚು ಮಾಡುವುದಕ್ಕೆ Intelligence Bureau ರವರು ದುಡ್ಡು ಇಟ್ಟುಕೊಂಡಿದ್ದಾರೆಯೇ? ಅವರು ತಮಗೆ ಈ ಬಗ್ಗೆ aOfcO ಮಾಡು ವುದಕ್ಕಾಗುವುದಿಲ್ಲವೆ? ದಯವಿಟ್ಟು ತಾವು ಈ Co-ordination Committee ಯನ್ನು ಮಾಡಿರುವುದನ್ನು ನಾವು ಸ್ವಾಗತ ಮಾಡುತ್ತೇನೆ

ತಾವು ಏನು Squad ರಚನೆ ಮಾಡುತ್ತಿದ್ದೀರಿ, ಆ ಕಮಿಟಿಯಲ್ಲಿ State Intelligence Bureau ನಲ್ಲಿ ಯಾರು Chief ಇದ್ದಾರೆ ಅವರನ್ನು ಸಹ ಕರೆಯಿರಿ ಏತಕ್ಕಾಗಿ ಅವರು ನಿಮಗೆ ಆಗಾಗ್ಗೆ up date ಮಾಡುವುದಿಲ್ಲ ನಾವು ವಿಧಾನಸಭೆಯಲ್ಲಿ ಈ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ ಈ ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಎಷ್ಟು ಜನ ಪಾಕಿಸ್ತಾನ ನಾಗರೀಕರು ಉಳಿದುಕೊಂಡಿದ್ದಾರೆ, abscond ಆಗಿದ್ದಾರೆ ಎಂದು ನಾನು ಕೇಳಿದ್ದೇನೆ ಇದಕ್ಕೆ ಇಲ್ಲವೆಂದು ಉತ್ತರ ಬಂತು ಯಾರು ಪಾಕಿಸ್ತಾನ ನಾಗರೀಕರು ಈ ಬೆಂಗಳೂರಿನಲ್ಲಿ ಇಲ್ಲ ಈಗ ಇದ್ದಾರೆಂದು electronic media ದಲ್ಲಿ ಬರುತ್ತಿದೆ ಏನು confusion? ಅದಕ್ಕಾಗಿ ತಾವು ದಯವಿಟ್ಟು ನಾನೂ ಮಾನ್ಯ ಗೃಹಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಸನ್ಮಾನ್ಯ Chief Minister ರವರಲ್ಲಿ ಮನವಿಯನ್ನು ಏಜೆನ್ಸಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ತಾವು ಇದನ್ನು light ಆಗಿ ತೆಗೆದುಕೊಳ್ಳಬೇಡಿ The intelligence bureau cannot ignore the State Police, the Intelligence Bureau cannot ignore the Chief Minister and the Home Minister ಆಗಾಗ್ಗೆ ಇವರು up date ಮಾಡುತ್ತಿರಬೇಕು Up date ಆಗಿದ್ದರೆ ಈ ಘಟನೆಗಳು ಆಗುತ್ತಿರಲಿಲ್ಲ

ಶ್ರೀ ಎಂ ಪಿ ಪ್ರಕಾಶ್ (ಗೃಹಸಚಿವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾಗಿರುವಂತಹ ವಿಷಯಗಳನ್ನು ವಿಶ್ಲೇಷಿಸಿ ಮಾನ್ಯ ಇಬ್ಬರು ಸದಸ್ಯರುಗಳು ಕೂಡ ಮಾತನಾಡಿದ್ದಾರೆ ತಾವು ಹೇಳಿದಂತೆ ಅರ್ಹವಾದಂತಹ ವ್ಯಕ್ತಿಗಳು ಅರ್ಹವಾದ ಸ್ಥಾನದಲ್ಲಿಬೇಕೆನ್ನುವಂತಹ ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ ಆ ದೃಷ್ಟಿಯಿಂದ ಅವರುಗಳು ಕಾಲಕಾಲಕ್ಕೆ ಮಾಹಿತಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನನಗೂ ಕೂಡ ಕೊಡುತ್ತಿದ್ದಾರೆ ಅದರಲ್ಲಿ ಯಾವುದೇ ತರಹವಾದ ಸಂಶಯವಿಲ್ಲ ತಾವು ಹೇಳಿದಂತೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಒಬ್ಬಿಬ್ಬರು ಅನರ್ಹರು ಅಥವಾ ಈ ಬಗ್ಗೆ ಯೋಚನೆ ಮಾಡಲಾರದಂತಹ ಜನಗಳು ಕೂಡ ಇರಬಹುದು ಆದರೆ ಇಡೀ ಕರ್ನಾಟಕದ ಪೊಲೀಸ್ ಇಲಾಖೆ ತನ್ನ ಕರ್ತವ್ಯವನ್ನು 'ಬಹಳ ಉತ್ತಮವಾದಂತಹ ಗುಣಮಟ್ಟದಲ್ಲಿ ನಿರ್ವಹಿಸಿರುವುದನ್ನು ಕೂಡ ನಾವು ಕಾಣುತ್ತಿದ್ದೇವೆ ಆದ್ದರಿಂದ ತಾವು ಹೇಳಿದಂತಹ ಸಲಹೆಯ ಸ್ವರೂಪದ ಮೂಲಕ 4 ಗಂಟೆಯ ಸಭೆಯಲ್ಲಿ ಕೂಡ ಈ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತೇವೆ

ನೀವು ಹೇಳಿದಂತೆ ಮಾಹಿತಿಗಳನ್ನು ಕೊಡತಕ್ಕಂಥದ್ದರಲ್ಲಿ ಬಹಳ ಭಿನ್ನಾಭಿಪ್ರಾಯಗಳು ಕೂಡ ಇರುತ್ತವೆ ಈ ಬಗ್ಗೆ ನಿಮಗೆಲ್ಲರಿಗೂ ಗೊತ್ತಿರಬಹುದು, ನೀವು ಯೋಚನೆ ಮಾಡಿದಂತೆ FBI ಮುಖ್ಯಸ್ಥ Edward Hoover ರವರು ಅಲ್ಲಿಯ ಅಧ್ಯಕ್ಷರಾಗಿದ್ದಂತಹ ಕೆನಡಿಯವರಿಗೆ ಯಾವ ಮಾಹಿತಿಯನ್ನು ಕೊಡುತ್ತಿರಲಿಲ್ಲ ಅವರು ಕರೆದಂತಹ ಸಭೆಗೂ ಕೂಡ ಬರುತ್ತಿರಲಿಲ್ಲ ಅವರನ್ನು ತೆಗೆಯುವುದಕ್ಕೆ ಸಾಧ್ಯವಾಗಲಾರದಂತಹ ಪರಿಸ್ಥಿತಿ ಉಂಟಾಗಿತ್ತು ರೋನಾಲ್ಡ್ ರೇಗನ್‌ರವರನ್ನು ಅಧ್ಯಕ್ಷ ಸ್ಥಾನಕ್ಕೆ ತರಬೇಕಾದರೆ FBI ಎಂತಹ ಪಾತ್ರವನ್ನು ವಹಿಸಿತ್ತು ಎನ್ನುವುದು ಸಹ ಗೊತ್ತಿದೆ ಗುಪ್ತಚಾರ ಇಲಾಖೆ ಎಷ್ಟು ಸೂಕ್ಷ್ಮವೋ, ಅಷ್ಟೇ ಪರಿಣಾಮಕಾರಿಯಾಗಿ ಕೆಲಸವನ್ನು ಅದು ಮಾಡುತ್ತಲೇ ಇರುತ್ತದೆ ಆದ್ದರಿಂದ ಅನೇಕ ಸಂದರ್ಭದಲ್ಲಿ ಮಾಹಿತಿಗಳು ಅವರು ತಮ್ಮದೇ ಆದಂತಹ ಕಾರಣಗಳಿಗಾಗಿ ಕೊಡದೇ ಇರಬಹುದು ಈಗ ತಾವು ಹೇಳಿದಂತೆ ಭಾರತ ಸರ್ಕಾರದ ಬೇಹುಗಾರಿಕೆ ಇಲಾಖೆಯವರು ಕರ್ನಾಟಕ ಸರ್ಕಾರಕ್ಕೆ ಕೊಡುವಾಗ ಕೆಲವು ವಿಚಾರಗಳನ್ನು ಅವರು ತೆಗೆದು ಇಟ್ಟಿರಬಹುದು ತಾವು ಕೂಡ ಗೃಹ ಮಂತ್ರಿಗಳಾಗಿ ಕೆಲಸ ಮಾಡಿದವರಾಗಿದ್ದೀರಿ ಹಿರಿಯರಾದ ಶ್ರೀ ರಮೇಶ್ ಕುಮಾರ್‌ರವರಿಗೂ ಕೂಡ ಗೊತ್ತಿದೆ ಆ ಸಂದರ್ಭದಲ್ಲಿ ಯಾವ ಮಾಹಿತಿಯನ್ನು ಕೊಟ್ಟಿರುತ್ತೇವೆ ಸುದ್ದೇಶದಿಂದ ಒಮ್ಮೊಮ್ಮೆ ಆ ಮಾಹಿತಿ ಬೇರೆಯವರ ಕಡೆಗೆ ಹೋಗಿ ಬಿಡಬಹುದು ಆ ಮಾಹಿತಿ ಬಹಿರಂಗ ಆಗಬಹುದು ಎನ್ನುವ ಕಾರಣಕ್ಕಾಗಿಯೇ ಕೂಡ ಕೆಲವು ಸಲ ತೆಗೆದು ಇಟ್ಟಿರುತ್ತಾರೆ ಎಲ್ಲಾ ವಿಚಾರಗಳನ್ನು ಎಲ್ಲರಿಗೂ ಕೂಡ ಹೇಳುತ್ತಾರೆನ್ನುವುದು ಕೂಡ ಇರುವುದಿಲ್ಲ ಆದರೆ ಇಷ್ಟೆಲ್ಲಾ ಆದಾಗ್ಯೂ ಕೂಡ ನಮ್ಮಲ್ಲಿ ಈಗ ಇರತಕ್ಕಂತಹ ವ್ಯವಸ್ಥೆಯಲ್ಲಿ ನಾವು ಈ ಕೆಲಸವನ್ನು ಮಾಡಬೇಕಾಗುತ್ತದೆ ಈಗ ಉದಾಹರಣೆಗೆ ಹೇಳುವುದಾದರೆ, ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹ ಒಬ್ಬ ದೊಡ್ಡ ಭಾರತ ದೇಶದ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರು, ಆಕೆಯ ಗುಪ್ತಚಾರ ಇಲಾಖೆಯಲ್ಲಿ ಯಾರು ಅವರನ್ನು ರಕ್ಷಣೆ ಮಾಡಬೇಕಾಗಿತ್ತೋ ಆ ರಕ್ಷಣೆ ಮಾಡಬೇಕಾಗಿರುವಂತಹ ಒಬ್ಬ ವ್ಯಕ್ತಿ ಅವರನ್ನು ಕೊಲೆಗೈದಿರುವುದನ್ನು ನಾವು ನೋಡಿದ್ದೇವೆ ಹಾಗೆಂದ ತಕ್ಷಣವೇ ಮಾಹಿತಿ ಏನೂ ಇರಲಿಲ್ಲ ಎನ್ನುವುದಲ್ಲ ಮಾಹಿತಿ ಇಡಲಾರದಂತಹ ರೀತಿಯಲ್ಲಿ ಆಗಿರುವಂತಹದ್ದು ಇವರನ್ನು ತಾವು ಇಟ್ಟುಕೊಳ್ಳಬೇಡಿ, ಇವರ ಬಗ್ಗೆ ನಮಗೆ ಸಂಶಯ ಇದೆ ಎನ್ನುವಂತಹ ಮಾತನ್ನು ಹೇಳಿ ಒಂದು ಮಾಹಿತಿಯನ್ನು ಅವರಿಗೂ ಸಹ ಕೊಟ್ಟರು ಅವರು ಅನ್ಯ ಕಾರಣಗಳಿಗಾಗಿ ಇಡೀ ಜನಾಂಗವನ್ನು ನಾವು ಸಂಶಯದಿಂದ ನೋಡಬಾರದು, ಅವರು ನಮ್ಮ ಅಂಗರಕ್ಷಕರಾಗಿದ್ದಾರೆನ್ನುವಂತಹ ಕಾರಣಕ್ಕಾಗಿಯೇ ನಾನು ಅವರನ್ನು ತೆಗೆದುಹಾಕುವಂತಹ ಪ್ರಯತ್ನವನ್ನು ಮಾಡುವುದಿಲ್ಲ ಎಂದರು ಆಗಲೂ

ಕೂಡ ಸಂಪೂರ್ಣವಾದ ಮಾಹಿತಿ ಅವರಿಗೆ ಗೊತ್ತಿರಲಿಲ್ಲ ಆದರೆ ಶ್ರೀಮತಿ ಇಂದಿರಾಗಾಂಧಿಯುವರು ಅಂತಹ ಒಂದು ದೊಡ್ಡ ಬೆಲೆಯುನ್ನು ತೆರಬೇಕಾಗಿರುವುದು ಕಂಡುಬಂತು ಅದೇ ರೀತಿಯಾಗಿ ಶ್ರೀ ರಾಜೀವ್ ಗಾಂಧಿಯವರಿಗೆ ಮಾಹಿತಿ ಇದ್ದು, ಶ್ರೀ ಪೆರಂಬೂರು ಇಲ್ಲಿಗೆ ಬರಬಾರದು ಎಂದು ಇತ್ತು ಆದರೆ ಅವತ್ತಿನ ಕಾಲಕ್ಕೆ ಮರಗತಂ ಚಂದ್ರಶೇಖರ್‌ರವರು ಆ ಕುಟುಂಬಕ್ಕೆ ಬಹಳ ನಿಕಟವಾಗಿ ಹತ್ತಿರದಲ್ಲಿದ್ದಂತಹವರಾಗಿದ್ದರು ಪ್ರವಾಸದ ಕಾರ್ಯಕ್ರಮದ ಪಟ್ಟಿಯಲ್ಲಿ ಅವರು ಇಲ್ಲಿಗೆ ಬರಬೇಕೆಂದು ಇರಲಿಲ್ಲ ಮಾಹಿತಿ ಇದ್ದರೂ ಕೂಡ ಒಮ್ಮೊಮ್ಮೆ ಆ ನಾಯಕರಾಗಿದ್ದಂತಹವರು ಅಲ್ಲಿಗೆ ಪ್ರವೇಶ ಮಾಡಿಬಿಡುತ್ತಾರೆ ಈ ಸಂದರ್ಭಗಳಿಗೆ ಮಾಹಿತಿ ಸಿಗಲಿಲ್ಲ ಎನ್ನುವುದಕ್ಕಿಂತಲೂ ಹೆಚ್ಚಾಗಿ ಈ ಇಡೀ ವ್ಯವಸ್ಥೆಯ ಬಗ್ಗೆ ಎಷ್ಟೇ ಊಹೆ ಮಾಡಿದರೂ ಕೂಡ ಕೆಲವು ಸಂದರ್ಭಗಳಲ್ಲಿ ಅವರ ಕೈ ಮೇಲಾಗುವಂತಹ ಸಂದರ್ಭಗಳು ಇರುತ್ತದೆ ಈ ದೃಷ್ಟಿಯಿಂದ ನಮ್ಮಲ್ಲಿ ಹೊಂದಿರುವಂತಹ Indian Institute of Scienceನ ವ್ಯವಸ್ಥೆ ಆದ ಮೇಲೆ ಇಬ್ಬರು ಉಗ್ರಗಾಮಿಗಳ ಮೇಲೆ ನಾವು ತಡೆಹಿಡಿದಿದ್ದೇವೆ ಇತ್ತೀಚಿನ ದಿನಮಾನಗಳಿಂದ ಹೇಳುವುದಾದರೆ ಅವರು ಬಹಳ ಸಜ್ಜನರಾಗಿರುತ್ತಾರೆ ಬಹಳ ಬುದ್ಧಿವಂತರು ಸಹ ಆಗಿರುತ್ತಾರೆ ಪ್ರತಿಭಾವಂತರು ಕೂಡ ಆಗಿರುತ್ತಾರೆ ಒಂದು ಅಪಾಯದ ಸಂಗತಿ ಎಂದರೆ ಈ ವಿದ್ಯಾರ್ಥಿಯಾಗಿರುವಂತಹವರು ಇವರು ಯಾರೂ ತಮ್ಮ ಖರ್ಚಿನಲ್ಲಿ ಅದಂತಹವರಲ್ಲಾ ಇವರೆಲ್ಲರೂ ಡಾಕ್ಟರ್ ಆಗಿ ವಿಶೇಷ ತರಬೇತಿಯನ್ನು ಪಡೆದವರಾಗಿದ್ದಾರೆ ಇವರಿಗೆ ಕನ್ನಡನಾಡಿನ ಎಲ್ಲಾ ಜನಸಾಮಾನ್ಯರು ಕೊಟ್ಟಿರುವಂತಹ ತೆರಿಗೆಯ ಹಣದ ಮೂಲಕವಾಗಿ ವಿದ್ಯಾವಂತರಾಗಿದ್ದಾರೆ ಆ ರೀತಿಯಾಗಿ ವಿದ್ಯಾವಂತರಾಗಿರುವವರು ನಾಡಿನ ಬಗ್ಗೆ ನಿಷ್ಠೆ, ದೇಶಪ್ರೇಮ ಮತ್ತು ಇಡೀ ಮಾನವ ಕುಲದ ಬಗ್ಗೆ ಇರುವಂತಹ ಒಂದು ಪ್ರೇಮ ಇವುಗಳನ್ನು ಇಟ್ಟುಕೊಳ್ಳದೇ ಇದ್ದರೆ ಅವರಂತಹ ಅವಿವೇಕಿಗಳು ಮತ್ತು ಕ್ರೂರಿಗಳು ಮತ್ತೊಬ್ಬರು ಇರುವುದಕ್ಕೆ ಸಾಧ್ಯವೇ ಇಲ್ಲ ಈ ಎಲ್ಲಾ ಕಾರಣಗಳಿಗಾಗಿ ಕೂಡ ನಮ್ಮಲ್ಲಿ ವಿವಿಧ ಇಲಾಖೆಗಳಲ್ಲಿ ಸಾಮಾಜಿಕವಾಗಿ,ಆರ್ಥಿಕವಾಗಿ, ಧಾರ್ಮಿಕವಾಗಿ ಇರತಕ್ಕಂತಹ ರೀತಿಯಲ್ಲಿ ಇದನ್ನು ನಾವು ವಿಶ್ಲೇಷಣೆ ಮಾಡಬೇಕಾಗುತ್ತದೆ

ಆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಇವತ್ತು ತಾವು ವಾಟಾಳ್ ನಾಗರಾಜ್‌ರವರು ಈ ವಿಚಾರವನ್ನು ಎತ್ತಿದ್ದರಿಂದ ಎಲ್ಲರೂ ಕೂಡ ಅಭಿಪ್ರಾಯ ಪಟ್ಟಂತೆ ಮುಂದೆ ಕೆಲವು ವಿಷಯಗಳನ್ನು ಚರ್ಚೆ ಮಾಡುವ ಸಂದರ್ಭದಲ್ಲಿ ಹೇಳಲಿಕ್ಕಾಗುವುದಿಲ್ಲ ಈ ಬಗ್ಗೆ ಕಾಲಕಾಲಕ್ಕೆ ಜನತೆಗೆ ಈ ಸದನದ ಮೂಲಕ ವಿವರಿಸುತ್ತೇವೆಂಬ ಮಾತನ್ನು ಹೇಳುತ್ತೇನೆ

2) ಹೊನ್ನಾಳಿ - ಬೈಂದೂರು ಹೆದ್ದಾರಿಯಲ್ಲಿರು 2 ಸೇತುವೆಗಳು ಕುಸಿದಿರುವ ಬಗ್ಗೆ

ಶ್ರೀ ಹೆಚ್ ಹಾಲಪ್ಪ (ಹೊಸನಗರ) ಸನ್ಮಾನ್ಯ ಅಧ್ಯಕ್ಷರೇ, ನನ್ನ ಮತ ಕ್ಷೇತ್ರದಲ್ಲಿ ಹಾದು ಹೋಗುವಂಥ ಹೊನ್ನಾಳಿ ಬೇಂದೂರು ರಾಜ್ಯ ಹೆದ್ದಾರಿಯಲ್ಲಿ ಎರಡು ಸೇತವೆಗಳು ಕುಸಿದು ಬಿದ್ದು ಜನ ಸಂಪರ್ಕಕ್ಕೆ ತೊಂದರೆಯಾಗಿದೆ ತೀವ್ರ ಮಳೆಗಾಲವಾಗಿರುವುದರಿಂದ ಅಲ್ಲಿನ ಜನರಿಗೆ ಬಹಳ ತೊಂದರೆಯಾಗಿದೆ ಅಲ್ಲಿ ಪಕ್ಷಾತೀತವಾಗಿ ಎಲ್ಲಾ ಸಂಘ ಸಂಸ್ಥೆಯವರು ನಮ್ಮೊಂದಿಗೆ ಕೂಡಲೇ ಸರ್ಕಾರ ಸ್ಪಂದಿಸಿ ಏನಾದರೂ ವ್ಯವಸ್ಥೆಯನ್ನ ಮಾಡಬೇಕೆಂದು, ಸಂಪರ್ಕವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಸ್ಟ್ರೈಕ್, ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ ಆದ್ದರಿಂದ ತಾವು ಸರ್ಕಾರದವರು ಕೂಡಲೇ ಆ ಸ್ಥಳಕ್ಕೆ ಅಧಿಕಾರಿಗಳನ್ನು ಕಳುಹಿಸಬೇಕು ಈ ಜನರಿಗೆ, ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಏನು ತೊಂದರೆಯಾಗಿದೆ, ಇದರ ಬಗ್ಗೆ ತುರ್ತುಕ್ರಮ ಕೈಗೊಳ್ಳಬೇಕೆಂದು ಈ ಶೂನ್ಯವೇಳೆಯಲ್ಲಿ ನಾನು ಸರ್ಕಾರದ ಗಮನಕ್ಕೆ ತರುತ್ತೇನೆ

ಆ ಭಾಗದಲ್ಲಿ ಕಳೆದ 15 ದಿವಸಗಳಿಂದ ವಿದ್ಯುತ್ ಇಲ್ಲ, ವಿದ್ಯುತ್ ಕಂಬಗಳು ಮುರಿದು ಹೋಗಿವೆ, ಅದನ್ನು ಸಾಗಿಸಲಿಕ್ಕೂ ಆಗುತ್ತಿಲ್ಲ ಕಳೆದ ವರ್ಷ ಹಾಕಿದಂಥ ಒಂದು ಕಾಲಸಂಕ ಇತ್ತು ವಿದ್ಯಾರ್ಥಿಗಳು, ಸಾರ್ವಜನಿಕರು ಆ ಕಡೆ ಈ ಕಡೆ ದಾಟಲಿಕ್ಕೆ ತೆಪ್ಪದ ಮೇಲೆ ದಾಟುತ್ತಿದ್ದಾರೆ ಶರಾವತಿಯ ಹಿನ್ನೀರು ಬರುತ್ತದೆ ತೆಪ್ಪದ ಮೇಲೆ ದಾಟಲಿಕ್ಕೆ ವಿದ್ಯಾರ್ಥಿಗಳಿಗೆಲ್ಲಾ ಬಹಳ ತೊಂದರೆಯಿತ್ತು ಆ ಕಾಲಸಂಕವನ್ನು ಸಹ ಸೇತುವೆಯನ್ನು ಕಟ್ಟುತ್ತೇವೆಂದು ಹೇಳಿ ಅದನ್ನು ತೆಗೆದುಹಾಕಿದ್ದಾರೆ, ಈಗ ಆ ಹಿನ್ನೀರು ನಿಂತಿರುವುದರಿಂದ ಆ ಸೇತುವೆಯನ್ನು ಕಟ್ಟಲಿಕ್ಕಾಗುವುದಿಲ್ಲ ಆದ್ದರಿಂದ ಸರ್ಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿ ಈ ಸದನದ ಮೂಲಕ ತಿಳಿಸಬೇಕು ಮತ್ತು ಈ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು, ಆ ಸ್ಥಳಕ್ಕೆ ಅಧಿಕಾರಿಗಳ ತಂಡವನ್ನು ಕಳುಹಿಸಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೇ, ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥ ವಿಚಾರವಾಗಿದೆ ಅದಕ್ಕಾಗಿ ನಾನು ತಮಗೆ ಪತ್ರವನ್ನು ಕಳುಹಿಸಿದೆ

ಅಧ್ಯಕ್ಷರು ನೀವು ಕೇಳಿಬಿಡಿ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಹಾಲಪ್ಪನವರು ಎತ್ತಿರುವುದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವಾಗಿದೆ ಮೊನ್ನೆ ದಿವಸ ಕೂಡ ಅತಿವೃಷ್ಟಿ ವಿಚಾರದಲ್ಲಿ ಮಾತನಾಡಬೇಕಾದ ಸಂದರ್ಭದಲ್ಲಿ ಹೇಳಿದೆ ನಗರದಿಂದ ಕೊಲ್ಲೂರಿಗೆ ಹೋಗುವಂಥ ಬಹಳ ಪ್ರಮುಖವಾದಂಥ ರಾಜ್ಯ ಹೆದ್ದಾರಿಯ ಸೇತುವೆಯದು ಕಳೆದ ನವೆಂಬರ್ ಡಿಸೆಂಬರ್ ತಿಂಗಳಿನಲ್ಲಿ ಬಿದ್ದುಹೋಗಿರುವಂಥ ಬ್ರಿಡ್ಜ್ ಅದು ಸಾಕಷ್ಟು ಒತ್ತಾಯ ಮಾಡಿದ ನಂತರ ಏಪ್ರಿಲ್ ತಿಂಗಳಿನಲ್ಲಿ ಕೆ ಆರ್ ಡಿ ಸಿ ಎಲ್ ನಿಂದ ಅದಕ್ಕೆ ಮಂಜೂರಾತಿ ಸಿಕ್ಕಿತು ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್ ಬೇರೆ ಬೇರೆ ದೊಡ್ಡ ದೊಡ್ಡ ಕಂಪೆನಿ ಎಂದು ಹೇಳಿ ಸಾಕಷ್ಟು ಬ್ರಿಡ್ಜ್‌ಗಳನ್ನು ಕೊಟ್ಟಿದ್ದೇವೆ ಅವರು ಕೆಲಸ ಮಾಡುವುದಿಲ್ಲ ಏಕೆಂದರೆ ಅವರು ಸಿಮೆಂಟ್ ರೇಟ್ ಜಾಸ್ತಿಯಾದರೆ ಸಿಮೆಂಟ್ ರೇಟ್‌ನ ಮೇಲೆ ಏನು ಎಸ್ ಆರ್ ರೇಟ್ ಜಾಸ್ತಿಯಾಗಿದೆ. ಆ ಎಸ್ ಆರ್ ರೇಟ್ ಅನ್ನು ಸೇರಿಸಿಕೊಡುವಂತಹ ಒಂದು ಕಂಡೀಷನ್ ಮೇಲೆ ಕೊಟ್ಟಿರುತ್ತೇವೆ ಹಾಗಾಗಿ ಅವರಿಗೆ ಕೊಟ್ಟಿರತಕ್ಕಂಥ ಯಾವುದೇ ಕೆಲಸವನ್ನು ನಮ್ಮ ಕ್ಷೇತ್ರದಲ್ಲಿ ಮಾಡಲಿಲ್ಲ ಇವತ್ತು alternative ಏನೂ ಇಲ್ಲದೇ ರಾಜ್ಯ ಹೆದ್ದಾರಿ ನಿಂತು ಹೋಗಿದೆ ಎಂದರೆ ನಾವು ತಲೆ ತಗ್ಗಿಸಬೇಕಾಗಿದೆ, ನೀವೇನು ಕೆಲಸ ಮಾಡುವುದಿಲ್ಲ, ಶಾಸನಸಭೆಗೆ ಹೋಗುವುದಿಲ್ಲ, ಮಂತ್ರಿಗಳೊಂದಿಗೆ ಏನು ಮಾತನಾಡುವುದಿಲ್ಲ ವೆಂದು ಜನ ಇವತ್ತು ಚುನಾಯಿತ ಪ್ರತಿನಿಧಿಗಳಾಗಿರುವಂಥ ನಮ್ಮನ್ನು ಚುಚ್ಚುತ್ತಾರೆ ನಾವು ಸಾಕಷ್ಟು ಪ್ರಯತ್ನ ಮಾಡಿದರೂ ಅವರು ಮಾಡುವುದಿಲ್ಲ Alternative ಏನಾದರೂ ವ್ಯವಸ್ಥೆ ಮಾಡಿ, ಇಲ್ಲದೇಹೋದರೆ ನಮ್ಮ M E G ಅಥವಾ ಯಾರಾದರೂ military ಯವರನ್ನು ಕರೆಸಿ ಒಂದು alternative ವ್ಯವಸ್ಥೆ ಮಾಡಿ ಶರಾವತಿಯ ಹಿನ್ನೀರಿನ ಪ್ರದೇಶವದು ಅಲ್ಲಿ ಕೃತಕವಾದ, ತಾತ್ಕಾಲಿಕವಾದ ಬ್ರಿಡ್ಜ್ ಅನ್ನು ನಿರ್ಮಾಣ ಮಾಡಬೇಕು ಆ ಸೇತುವೆ ಆದ ಮೇಲೆ ಅದನ್ನು ತೆಗೆದು ಹಾಕಬಹುದಾಗಿದೆ ಆ ರೀತಿಯಾಗಿ ಬೇರೆ ಬೇರೆ ಕಡೆ ಮಾಡಿದ್ದಾರೆ ದಯವಿಟ್ಟು ಆ ಕೆಲಸವನ್ನು ತಾವು ಮಾಡಬೇಕು ಹೊಸನಗರದ ತಾಲ್ಲೂಕಿನ ಅರ್ಧ ಹೋಬಳಿ ಆ ಎರಡು ಹೋಬಳಿಗಳು ಡಿಲಿಂಕ್ ಆಗಿ ಹೋಗಿವೆ ನಮ್ಮ ಕ್ಷೇತ್ರ ಹಾಗೂ ಹಾಲಪ್ಪನವರ ಕ್ಷೇತ್ರ ಎರಡೂ ಡಿಲಿಂಕ್ ಆಗಿದೆ, ಇಂತ ಒಂದು ದಯನೀಯವಾದ ಪರಿಸ್ಥಿತಿಯಲ್ಲಿ ಹಾಲಪ್ಪನವರ ಕ್ಷೇತ್ರ ಎರಡೂ ಡಿಲಿಂಕ್ ಆಗಿದೆ, ಇಂಥ ಒಂದು ದಯನೀಯವಾದ ಪರಿಸ್ಥಿತಿಯಲ್ಲಿ ಜನ ಬದುಕಿದ್ದಾರೆ ವಿಶೇಷವಾಗಿ ನಕ್ಸಲೈಟ್ ಏರಿಯಾ ಅದು ಇಷ್ಟೊಂದು ಸೂಕ್ಷ್ಮವಾಗಿರತಕ್ಕಂಥ ಪ್ರದೇಶದಲ್ಲಿ ಈ ರೀತಿ ಬಿಟ್ಟುಕೊಂಡು ಹೋಗುವುದು ಒಳ್ಳೆಯದಲ್ಲ ದಯವಿಟ್ಟು ಸರ್ಕಾರ, ಮಾನ್ಯ ಲೋಕೋಪಯೋಗಿ ಸಚಿವರು

ತತ್ಕ್ಷಣ alternative ವ್ಯವಸ್ಥೆ ಮಾಡಬೇಕು ವಾಹನಗಳು ಅಲ್ಲಿ ಪಕ್ಕದಲ್ಲಿ ಓಡಾಡುವ ಹಾಗೆ ವ್ಯವಸ್ಥೆಯನ್ನು ತಾವು ಮಾಡಬೇಕಾಗಿ ವಿನಂತಿ

ಶ್ರೀ ಹೆಚ್ ಡಿ ರೇವಣ್ಣ (ಮಾನ್ಯ ಲೋಕೋಪಯೋಗಿ ಸಚಿವರು) ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರನ್ನು ಆ ಸ್ಥಳಕ್ಕೆ ಕಳುಹಿಸಿದ್ದೇವೆ ನಮ್ಮ ಆರಗ ಜ್ಞಾನೇಂದ್ರರವರು ಹೇಳಿದ ಹಾಗೆ ರಸ್ತೆ ನಿಗಮದಲ್ಲಿ ಬ್ರಿಡ್ಜ್ ಅನ್ನು ತೆಗೆದುಕೊಂಡರೂ ಅವರನ್ನು ಕೇಳಿಯೇ ಮಾಡಿರುವುದು ಅವರು ಯಾವುದನ್ನು ಹೇಳಿದ್ದರೂ ಅವರ ಪ್ರಯಾರಿಟಿ ಪ್ರಕಾರ ಅವರ ತಾಲ್ಲೂಕಿನಲ್ಲಿ ಕೊಟ್ಟಿದ್ದೇನೆ ಆದ್ದರಿಂದ ಆ ಸಮಯದಲ್ಲಿ ಇದನ್ನೇ ಪ್ರಯಾರಿಟಿಯಾಗಿ ಕೊಟ್ಟಿದ್ದಿದ್ದರೆ ನನ್ನದೇನೂ ಅಭ್ಯಂತರವಿರಲಿಲ್ಲ, ನಾನು ಮಾಡುತ್ತಿದ್ದೆ ಆದರೆ ಆ ಬಗ್ಗೆ ವಿಷಯವೇನು ಎಂಬುದನ್ನು ತಿಳಿದುಕೊಳ್ಳುತ್ತೇನೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರನ್ನು ಆ ಸ್ಥಳಕ್ಕೆ ಕಳುಹಿಸಿದ್ದೇನೆ ಯಾವರೀತಿಯಾಗಿ alternative ವ್ಯವಸ್ಥೆ ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಿ ಅದನ್ನು ಮಾಡಿಸಲಿಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಪಡುತ್ತೇನೆ

ಅಧ್ಯಕ್ಷರು ಆಯಿತು, ಸಚಿವರು ಹೇಳಿದ್ದಾರೆ ಬಿಡಿ ಈಗ ನಿಯಮ 69ರ ಮೇಲೆ ಚರ್ಚೆ

ಶ್ರೀ ದಿನೇಶ್ ಗುಂಡೂರಾವ್ ಅಧ್ಯಕ್ಷರೇ, ಒಂದೇ ನಿಮಿಷ, ನಾನು ಒಂದು ಹಕ್ಕುಚ್ಯುತಿಯನ್ನು ಮಂಡನೆ ಮಾಡಿದ್ದೇನೆ, ತಾವು ಅದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ, ಅದನ್ನು ರೈಸ್ ಮಾಡಬೇಕಲ್ಲ

ಅಧ್ಯಕ್ಷರು ಅನಂತರ ಅದಕ್ಕೆ ಅವಕಾಶ ಕೊಡುತ್ತೇನೆ, ಇದಕ್ಕೆ ಮೊದಲು ಉತ್ತರ ಆಗಲಿ

ಶ್ರೀ ದೀನೇಶ್ ಗುಂಡೂರಾವ್ ಆ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ ಗಂಭೀರವಾಗಿದೆ ನಾನು ಯಾವಾಗ ಮಾತನಾಡಲಿ

ಶ್ರೀ ಎಸ್ ಮಲ್ಲಿಕಾರ್ಜುನ್ ಖರ್ಗೆ ನನಗೆ ನಿಯುಮ 69ರಡಿ ಮಾತನಾಡಲಿಕ್ಕೆ ಇನ್ನೂ ಅವಕಾಶ ಸಿಕ್ಕಿಲ್ಲ, ನನ್ನ ಮಾತು ಆದ ನಂತರ ಅವರು ಉತ್ತರ ಕೊಡಲಿ

ಶ್ರೀ ದೀನೇಶ್ ಗುಂಡೂರಾವ್ ಆಯಿತು, ಅವರಿಗೆ ಅವಕಾಶ ಕೊಡಿ

ಅಧ್ಯಕ್ಷರು ಆಯಿತು, ನೀವು ಮಾತನಾಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಅಧ್ಯಕ್ಷರೇ, Rule 69ರಲ್ಲಿ ಅತಿವೃಷ್ಟಿ ಬಗ್ಗೆ ಚರ್ಚೆಯಾಗುತ್ತಿದೆ ಅದು dispose ಆದ ಮೇಲೆ the you can hear the preliminary submission on privilege

ಅಧ್ಯಕ್ಷರು ಆಯಿತು, ಅವರು ಮಾತನಾಡಲಿ, ಉಳಿದದ್ದು next ತೆಗೆದುಕೊಳ್ಳೋಣ

4 ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಚರ್ಚೆ (ಮುಂದುವರೆದ ಚರ್ಚೆ)

ವಿಷಯ ಪ್ರಕೃತಿ ವಿಕೋಪದಿಂದ ರಾಜ್ಯದಲ್ಲ ಉಂಟಾಗಿರುವ ಅನಾಹುತದ ಬಗ್ಗೆ

ಶ್ರೀ ಎಸ್ ಮಲ್ಲಿಕಾರ್ಜುನ್ ಖರ್ಗೆ (ಗುರುವಿಠಕಲ್) ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿರುವ ಅನಾಹುತದ ಬಗ್ಗೆ ಸಾಕಷ್ಟು ಸದಸ್ಯರು ಬೆಳಕು ಚೆಲ್ಲಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು ಕೂಡ ಇದರ ಬಗ್ಗೆ ದೀರ್ಘವಾದ ಉತ್ತರವನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೇನೆ ಅತಿವೃಷ್ಟಿ ಬಂದಾಗಲೆಲ್ಲಾ ಅಥವಾ ಅನಾವೃಷ್ಟಿ ಇದ್ದಾಗಲೂ ಕೂಡ ಸರ್ಕಾರ ಎಚ್ಚರವಹಿಸಿ ಕೆಲಸ ಮಾಡತಕ್ಕಂಥಾದ್ದು ಬಹಳ ಮುಖ್ಯವಾದುದು, ಆದರೆ ಏನಾಗುತ್ತದೆಂದರೆ ಅಲ್ಲಿ ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಅಸಿಸ್ಟೆಂಟ್ ಕಮಿಷನರ್‌ಗಳು ವರದಿ ಕೊಟ್ಟು ಕಳುಹಿಸಿದ ಮೇಲೆ ಆ ವರದಿಯ ಆಧಾರದ ಮೇಲೆ ಮನಸ್ಸು ಬಂದಂತೆ ಹಣವನ್ನು ಕೆಲವು ಸಲ ಬಿಡುಗಡೆ ಮಾಡುವಂಥಾದ್ದು ಇಲ್ಲವೇ ಕೆಲವು ಸಲ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಅದಕ್ಕೆ ಸಾಕಷ್ಟು ಹಣ ಬಿಡುಗಡೆ ಮಾಡದೇ ಇರುವಂಥಾದ್ದು ನಾವು ನೋಡಿದ್ದೇವೆ ಇದರ ಬಗ್ಗೆ ಸತತವಾಗಿ ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಅಥವಾ ಆ ಜಿಲ್ಲೆಗೆ ನೇಮಿಸಿದಂಥ ರಾಜ್ಯ ಮಟ್ಟದ ಕಾರ್ಯದರ್ಶಿಗಳಾಗಲಿ ಅವರು ಏಕೆ ಗಮನ ಹರಿಸಬಾರದು ಎನ್ನುವುದೇ ನನ್ನ ಪ್ರಶ್ನೆ ಅವರು ಯಾವಾಗಲೂ ಕೂಡ ಅಲ್ಲಿ ಹಣ ಎಷ್ಟಿದೆ? ಅಲ್ಲಿ

ಯಾವ್ಯಾವ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕು? ಮತ್ತು ಅದಕ್ಕೆ ಮುಂದಾಲೋಚನೆ ಪ್ರಕಾರ ಸರ್ಕಾರಕ್ಕೆ ಏನು ಕೇಳಬೇಕು? ಅನ್ನುವಂಥಾದ್ದನ್ನು ವಿಚಾರ ಮಾಡದೇ ವಿಧಾನಸಭೆ ಇದ್ದಾಗ ಅಥವಾ ಇಲ್ಲಿನ ಸದಸ್ಯರು ಆ ಪ್ರಶ್ನೆಯನ್ನು ಎತ್ತಿದಾಗ ಅದಕ್ಕೆ ಸ್ಪಂದಿಸತಕ್ಕಂಥಾದ್ದು, ಹೇಳುವಂಥಾದ್ದು ಮಾಡುತ್ತಾರೆಯೇ ಹೊರತಾಗಿ suo motu ಇಂತಹ ಘಟನೆಗಳಾದಾಗ ತಕ್ಷಣ ಕಾರ್ಯಕ್ರಮವನ್ನು ಹಾಕಿಕೊಳ್ಳುವಂಥಾದ್ದಾಗಲಿ ಅಥವಾ ತಕ್ಷಣ ರಿಲೀಫ್ ವಾರ್ ಫುಟಿಂಗ್ ಮೇಲೆ ಕೊಡುವಂಥಾದ್ದು ಇಲ್ಲಿಯವರೆಗೆ ಮಾಡುತ್ತಿಲ್ಲ

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಈಗ ಉದಾಹರಣೆಯಾಗಿ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ, ಏಕೆಂದರೆ ಇದು ಅನೇಕ ಸಾರಿ ಪ್ರಸ್ತಾಪ ಆಗಿದ್ದುಂಟು, ಈಗ ನಾನು ಹೊಸದಾಗಿ ನನ್ನ ಹತ್ತರ ಇರತಕ್ಕಂಥ ಮಾಹಿತಿಯನ್ನು ಕೂಡ ನಾನು ಅವರಿಗೆ ಕೊಡುತ್ತಿದ್ದೇನೆ ಈಗ ನಾನು ಕೂಡ ನಮ್ಮ ಕಾಂಗ್ರೆಸ್ ಪಕ್ಷದ ವತಿಯಿಂದ ಐದು ಟೀಮ್ ಮಾಡಿ ಮೂರು ಜಿಲ್ಲೆಗಳಿಗೆ ಒಂದು ಟೀಮ್‌ನಂತೆ ನಾವು ಕಳುಹಿಸಿದ್ದೇವೆ ಅಂದರೆ ಬಿಜಾಪುರ, ಗದಗ, ಬಾಗಲಕೋಟೆ ಒಂದು ಟೀಮ್, ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು, ಕೊಪ್ಪಳ ಜಿಲ್ಲೆಗಳಿಗೆ ಒಂದು ಟೀಮ್ ಅದೇ ರೀತಿಯಾಗಿ ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಉತ್ತರಕನ್ನಡ ಹೀಗೆ ಅಂದರೆ ಅಲ್ಲಿನ ಪರಿಸ್ಥಿತಿ ಹೇಗಿದೆಯೆಂದು ನೋಡಿಕೊಂಡು, ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ವರದಿಯನ್ನು ಕೊಡಬೇಕು ಮತ್ತು ಅದರ ಆಧಾರದ ಮೇಲ ಸರ್ಕಾರ ಎಷ್ಟರಮಟ್ಟಿಗೆ ಕೆಲಸ ಮಾಡಿದೆ, ಮಾಡಿಲ್ಲ ಎನ್ನತಕ್ಕಂಥಾದ್ದನ್ನು ಸದನದ ಗಮನಕ್ಕೆ ತರಬೇಕೆನ್ನುವು ದೃಷ್ಟಿಯಿಂದ ನಾವು ಮಾಡಿದ್ದೇವೆ, ಆದರೆ ಇಂಥ ಒಂದು ಅತಿವೃಷ್ಟಿಯ ಕೆಟ್ಟ ಪರಿಸ್ಥಿತಿ ಇದ್ದರೂ ಕೂಡ ರಾಜ್ಯ ಸರ್ಕಾರದ ಈಕಡೆ ಎಷ್ಟು ಗಮನವನ್ನು ಹರಿಸಬೇಕು ಅಷ್ಟು ಗಮನವನ್ನು ಹರಿಸುತ್ತಿಲ್ಲವೆಂದರೆ ಬಹುಶಃ ಇದು ಅತಿಶಯೋಕ್ತಿಯೂ ಆಗಲಿಕ್ಕಿಲ್ಲ ಮತ್ತು ಸಹಜವಾಗಿ ನೀವೇನು ಮಾಡಿದಿರಿ? ನಿಮ್ಮ ಕಾಲದಲ್ಲಿ ಏನಾಗಿತ್ತು? ನಾವೆಲ್ಲಾ ಇಂತಹುದನ್ನು ನೋಡಿದ್ದೇವೆ ಎಂಬ ಯಥಾ ಪ್ರಕಾರದ ಅವರ answer ಇರುತ್ತದೆ ಇಂತಹ ಹಾರಿಕೆ ಉತ್ತರಗಳನ್ನು ಕೊಡುವುದನ್ನು ನಾನು ನೋಡಿದ್ದೇನೆ, ಕೇಳಿದ್ದೇನೆ ಮತ್ತು ನೀವು ಕೂಡ ಗಮನಿಸಿದ್ದೀರಿ ಸರ್, ಎರಡು ವರ್ಷಗಳಲ್ಲಿ ಬರ ಮತ್ತು ಅತಿವೃಷ್ಟಿಗೆ ಇವರಿಗೆ ಒಟ್ಟಾರೆ ಸಿಕ್ಕ ಹಣ 742 ಕೋಟಿ ರೂಪಾಯಿಗಳು, ಇದಲ್ಲದೆ, ರೈತರ ಆತ್ಮಹತ್ಯೆಗಳು ಹೆಚ್ಚಾದಾಗ ಸುಮಾರು

6 ಜಿಲ್ಲೆಗಳಿಗೆ ವಿಶೇಷವಾಗಿ, 2,686 ಕೋಟಿ ರೂಪಾಯಿಗಳ ಪ್ಯಾಕೇಜ್ ಅದು ಬೇರೆ, ಅಂದರೆ, ಅದರೊಳಗೆ 361 ಕೋಟಿ ರೂಪಾಯಿಗಳು, ರೈತರ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥಾದ್ದಕ್ಕೆ ಪರಿಹಾರ ಕೊಡುವುದಾಗಲಿ, ಸಹಾಯ ಮಾಡುವುದಾಗಲಿ, ಸಬ್ಸಿಡಿ ಕೊಡುವುದಾಗಲಿ ಅದಕ್ಕಾಗಿ ಕೊಟ್ಟಂತಹ ಹಣ, ಇದೆಲ್ಲವನ್ನೂ ಸೇರಿಸಿದರೆ 1,103 ಕೋಟಿ ರೂಪಾಯಿಗಳಾಗುತ್ತದೆ 1,103 ಕೋಟಿ ರೂಪಾಯಿಗಳಲ್ಲಿ, ಕಳೆದ ವಿಧಾನ ಮಂಡಲದಲ್ಲಿ ಅವರು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ ಅವರು ಏನು ಒಪ್ಪಿಕೊಂಡಿದ್ದಾರೆಂದರೆ, ಇಲ್ಲಿಯವರೆಗೆ 494 ಕೋಟಿ ರೂಪಾಯಿಗಳಷ್ಟು ಮಾತ್ರ ನಾವು ಖರ್ಚು ಮಾಡಿದ್ದೇವೆಂದು ಅವರೇ ಈ ಸದನದಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಕಾಲದಲ್ಲಿ ಮುತ್ತ ಹೇಳಿಕೆ ನೀಡುವ ಕಾಲದಲ್ಲೂ ತಿಳಿಸಿದ್ದಾರೆ ಅಂದರೆ, ಸರಾಸರಿ ಹೆಚ್ಚು ಕಡಿಮೆ ಇನ್ನೂ 500 ಕೋಟಿ ರೂಪಾಯಿಗಳಷ್ಟು ಹಣವನ್ನು ಅವರು ತಮ್ಮ ಬಳಿ ಹಾಗೆಯೇ ಉಳಿಸಿಕೊಂಡಿದ್ದಾರೆ ಎನ್ನತಕ್ಕಂಥಾದ್ದು ಇದರಿಂದ ಅರ್ಥವಾಗುತ್ತದೆ ಇಲ್ಲ, ಇತ್ತೀಚೆಗೆ ಇನ್ನೂ ಹೆಚ್ಚು ಹಣ ಖರ್ಚು ಮಾಡಿದ್ದೇವೆ ಎಂದು ಹೇಳಿದರೂ, ನೀರಿಗಾಗಿ ಜೂನ್ ತಿಂಗಳಿನಲ್ಲಿ ಸುಮಾರು 15 ಕೋಟಿ ರೂಪಾಯಿಗಳಷ್ಟು ಬಿಡುಗಡೆ ಮಾಡಿದ್ದಾರೆ ಇನ್ನೊಂದು, 30 ಕೋಟಿ ಬಿಡುಗಡೆ ಮಾಡಿದ್ದಾರೆ ಅಂದರೆ, 45 ಕೋಟಿ ರೂಪಾಯಿಗಳಾಯಿತು ಇನ್ನು ಉಳಿದ ಸುಮಾರು 375 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರದಿಂದ ಬಂದ ಹಣದಲ್ಲಿ ಖರ್ಚು ಮಾಡದೇ ಹಾಗೆಯೇ ಇಟ್ಟುಕೊಂಡಿದ್ದಾರೆ ನಾವು ಅನೇಕ ಸಲ ಜಿಲ್ಲಾಧಿಕಾರಿಗಳನ್ನು ಕೇಳಿದ್ದೇವೆ, ಫೋನ್ ಮೂಲಕ ಕೇಳಿದ್ದೇವೆ, ನಮ್ಮ ನಮ್ಮ ಜಿಲ್ಲೆಗಳಿಗೆ ಹೋದಾಗ ಅವರನ್ನು ಕರೆಸಿ ಮಾತನಾಡಿದ್ದೇವೆ ಅವರು ಹೇಳಿದ್ದು ಏನೆಂದರೆ, ಇಂತಹ ಅತಿವೃಷ್ಟಿಯಾಯಿತು, ಅನೇಕ ಕಡೆಗಳಲ್ಲಿ ಪ್ರವಾಹ ಉಂಟಾಗಿ ಜಾನುವಾರುಗಳು ಕೊಚ್ಚಿಕೊಂಡು ಹೋದವು ಸುಮಾರು 2,000 ಕ್ಕೂ ಮೇಲ್ಪಟ್ಟು ಜಾನುವಾರುಗಳು ಕೊಚ್ಚಿಕೊಂಡು ಹೋಗಿವೆ, 42 ಜನವರು ನೀರಿನಲ್ಲಿ ಮುಳುಗಿ ಸತ್ತಿದ್ದಾರೆ, ಅವರು ಕೊಟ್ಟಂತಹ figures ಪ್ರಕಾರ 157 ಕೋಟಿ ರೂಪಾಯಿಗಳಿಗಂತಲೂ ಹೆಚ್ಚು ಹಾನಿಯಾಗಿದೆಯೆಂದು ಹೇಳಿದ್ದಾರೆ ಇಷ್ಟೆಲ್ಲಾ ಇದ್ದರೂ ಇವರು ಪ್ರವಾಹ ತಡೆ ಕೆಲಸಕ್ಕಾಗಿ ಬಿಡುಗಡೆ ಮಾಡಿದ್ದು ಕೇವಲ ಒಂದು ಕೋಟಿ ರೂಪಾಯಿ ಅದೇ ರೀತಿ ಬೇರೆ ಜಿಲ್ಲೆಗಳಿಗೂ ಒಂದೊಂದು ಕೋಟಿ ರೂಪಾಯಿಯಂತೆಯೇ ಕೊಟ್ಟಿದ್ದಾರೆ ಅಂದರೆ, ಅಲ್ಲಿನ ಪ್ರವಾಹದ ಪ್ರಮಾಣವೇನು? ಎಷ್ಟು ಜಾನುವಾರುಗಳು ಸತ್ತಿವೆ? ಎಷ್ಟು ಪ್ರಮಾಣದಲ್ಲಿ ಬೀಜ ಬೇಕು? ಇದ್ಯಾವುದನ್ನೂ ಗಮನದಲ್ಲಿಟ್ಟುಕೊಳ್ಳದೇ, ಸಾರಾಸಗಟಾಗಿ ಒಂದೊಂದು ಕೋಟಿ ಕೊಡುವುದು ಮತ್ತು ನಾವು ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿಕೊಂಡು ಹೋದರೆ, ಜನರ ಸಮಸ್ಯೆಗೆ

ನಾವು ಸ್ಪಂದಿಸಿದಂತಾಗುತ್ತದೆಯೇ? ಅಥವಾ ಇದನ್ನು ನಾವು ಮತ್ತಷ್ಟು ಜಟಿಲಗೊಳಿಸಿದಂತಾಗುತ್ತದೆಯೇ ಎಂಬುದನ್ನು ಅವರೇ ಹೇಳಬೇಕು ಇದನ್ನು ಬಹಳ ಗಂಬೀರವಾಗಿ ತೆಗೆದುಕೊಳ್ಳಬೇಕಾಗಿತ್ತು ಇನ್ನೊಂದು ಕಡೆ, ಇಲ್ಲ, ನಾವು ಕೇಂದ್ರ ಸರ್ಕಾರಕ್ಕೆ ಮನವಿ ಕೊಡುತ್ತೇವೆ, ಅಲ್ಲಿಂದ ಹಣ ಬಂದ ನಂತರ ಯಾವಾಗಲೂ ಕೂಡ calamity relief ನಲ್ಲಿ ಅಥವಾ ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆಂದು ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ ನಮ್ಮಲ್ಲಿರುವ ಹಣವನ್ನು ಬಿಡುಗಡೆ ಮಾಡಬೇಕು, ಬೇರೆ ಕೆಲಸಗಳನ್ನು ನಿಲ್ಲಿಸಬೇಕು ಇದಕ್ಕೆ ಹೆಚ್ಚು ಒತ್ತು ಕೊಟ್ಟು ಹಣ ಬಿಡುಗಡೆ ಮಾಡಿ, ಜನರಿಗೆ ಸ್ಪಂದಿಸಿದರೆ, relief ಕೊಟ್ಟರೆ, ಆ ಕೆಲಸ ಮಾಡಿದಂತಾಗುತ್ತದೆ ಅದನ್ನು ಬಿಟ್ಟು ಇವತ್ತು ನಾವು ಕೇವಲ Memorandum ತಯಾರಿಸುತ್ತಿದ್ದೇವೆ, ಒಂದೊಂದು ಕೋಟಿ ಕೊಟ್ಟಿದ್ದೇವೆಂದರೆ, ಏನಾಗುತ್ತದೆ ಈಗ ಒಂದು ಉದಾಹರಣೆ ಹೇಳುತ್ತೇನೆ 13 ಮತಕ್ಷೇತ್ರಗಳು ಮತ್ತು 10 ತಾಲ್ಲೂಕುಗಳಿಂದ ಗುಲ್ಬರ್ಗಾದ ಒಂದೊಂದು ತಾಲ್ಲೂಕಿಗೆ 10 ಲಕ್ಷ ಸಹ ಬರುವುದಿಲ್ಲ ಅನೇಕ bridges ಒಡೆದು ಹೋಗಿವೆ, ರಸ್ತೆಗಳು ಕೆಟ್ಟು ಹೋಗಿವೆ, ಟ್ಯಾಂಕುಗಳು ಹಾಳಾಗಿವೆ, ಕೆರೆಗಳು ಒಡೆದು ಹೋಗಿವೆ, ನಾವು ಅದರ ಫೋಟೋಗಳನ್ನು ನಿಮಗೆ ಕೊಡುತ್ತಿದ್ದೇವೆ ರಾಯಚೂರಿನಲ್ಲಿ ಬಹಳ ಅನಾಹುತವಾಗಿದೆ ಅದೇ ರೀತಿ ಕೊಪ್ಪಳ, ಬಿಜಾಪುರ, ಚಿಕ್ಕಮಗಳೂರು, ಹಾಸನದಲ್ಲೂ ಏನಾಗಿದೆ? ಕಡಲ ಕೊರೆತೆ, ಉಳ್ಳಾಲ ಮತ ಕ್ಷೇತ್ರದಿಂದ ಹಿಡಿದು ಉಡುಪಿ ಇರಬಹುದು, ಮಂಗಳೂರು ಇರಬಹುದು, north canara ಇರಬಹುದು, ಎಲ್ಲಾ ಕಡೆಗಳಲ್ಲೂ ಉಂಟಾಗಿದೆ ಮತ್ತು ಆಲಮಟ್ಟಿ ಡ್ಯಾಮಿಗೆ ಮಹಾರಾಷ್ಟ್ರದವರು ಸುಮಾರು 2,61,000 ಕ್ಯೂಸೆಕ್ಸ್‌ನಷ್ಟು ನೀರು ಬಿಟ್ಟ ಪರಿಣಾಮವಾಗಿ ಇವತ್ತು back water ಹೆಚ್ಚು ಪ್ರಮಾಣದಲ್ಲಿ ಬಂದು ಅನೇಕ ಹಳ್ಳಿಗಳಿಗೆ ನುಗ್ಗಿದೆ ಇದರಿಂದಾಗಿ ಸುಮಾರು 33 ಹಳ್ಳಿಗಳನ್ನು shift ಮಾಡತಕ್ಕಂಥ ಯೋಜನೆ ಇದೆ ಅದಕ್ಕೆ ಕೋಟ್ಯಂತರ ರೂಪಾಯಿಗಳನ್ನು ನಾವು ಹಿಂದೆ ಮಂಜೂರು ಮಾಡಿದ್ದೆವು meeting ಮಾಡಿದ್ದೆವು ಅದನ್ನು ಹಂತ ಹಂತವಾಗಿ ತೆಗೆದುಕೊಳ್ಳಬೇಕೆಂಬುದು ಸರ್ಕಾರದ ನಿರ್ಧಾರವಾಗಿದ್ದರೂ Rehabilitation Programme ಕಡೆ ಗಮನಕೊಡಲಿಲ್ಲ ಹೀಗೆ ನಿರ್ಲಕ್ಷ್ಯ ಮಾಡುವುದರಿಂದ ಇನ್ನೂ ಹೆಚ್ಚಿನ ಅನಾಹುತವಾಗುತ್ತದೆಯೇ ಹೊರತು, ಜನರಿಗೆ ನಾವು ಅನುಕೂಲ ಮಾಡಿ ಕೊಟ್ಟಂತಾಗುವುದಿಲ್ಲ ಅದಕ್ಕೋಸ್ಕರ, ನಾನು ಸ್ಪಷ್ಟವಾಗಿ ಅವರನ್ನು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಕೇವಲ ಒಂದೊಂದು ಕೋಟಿ ರೂಪಾಯಿಯನ್ನು ಕೂಡ ನಾವು ಎಲ್ಲಿ ಖರ್ಚು ಮಾಡಬೇಕು, ಏನು ಕೊಡಬೇಕು ಎನ್ನತಕ್ಕಂಥ ಪರಿಸ್ಥಿತಿಯಲ್ಲಿ ಜಿಲ್ಲಾಧಿಕಾರಿಗಳಿದ್ದಿದೆ ಏಕೆಂದರೆ, ಒಂದೊಂದು ಜಿಲ್ಲೆಗೆ 20-30 ಕೋಟಿ

ರೂಪಾಯಿಗಳಷ್ಟು ಹಾನಿಯಾಗಿದೆ ಹಾನಿಯಾಗಿರುವ ಆ 20 ಕೋಟಿ ರೂಪಾಯಿಗಳನ್ನು ಕೂಡ ಸರ್ಕಾರ ಏಕಕಾಲದಲ್ಲಿಯೇ ಭರಿಸಬೇಕೆಂದೇನೂ ಇಲ್ಲ ಯಾವಾಗಲೂ ಕೂಡ, ಯಾವುದೇ ಸರ್ಕಾರವಾದರೂ ಎಷ್ಟೇ ಲುಕ್ಸಾನವಾದರೂ ನೂರಕ್ಕೆ ನೂರರಷ್ಟು ಭರಿಸಿಲ್ಲ ಆದರೆ, ಕನಿಷ್ಠ ಪಕ್ಷ ಆ ಒಡೆದ ಕೆರೆಗಳನ್ನು ನಿಲ್ಲಿಸುವುದು, ದುರಸ್ತಿಗೊಳಿಸುವುದು, ರಸ್ತೆ ರಿಪೇರಿ ಮಾಡತಕ್ಕಂಥದ್ದು, bridge ಅನ್ನು restore ಮಾಡತಕ್ಕಂಥದಾದ್ದು, ಇವಲ್ಲೆವನ್ನೂ ಮಾಡಬೇಕಲ್ಲ? ಅದ್ಯಾವುದಕ್ಕೂ ಕೂಡ ನಮಗೆ ಯಾವುದೇ instructions ಇಲ್ಲ ಒಂದು ಕೋಟಿ ಕೊಟ್ಟಿದ್ದಾರೆ, ಎಲ್ಲೆಲ್ಲಿ ಸಾಧ್ಯವಿದೆಯೇ, ಅಲ್ಲಲ್ಲಿ ಅದನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಜಿಲ್ಲಾಧಿಕಾರಿಗಳು ಹೇಳಿಕೊಂಡು ಹೋಗಿದ್ದಾರೆ ಅದಕ್ಕೆ ತಕ್ಕಂತೆ ಜಿಲ್ಲಾಮಂತ್ರಿಗಳಾದರೂ ಕೂಡ ತಿರುಗಾಡಿ ಅವರದೇ ಆದ ರೀತಿಯಲ್ಲಿ assessment ಮಾಡಿ ರಾಜ್ಯಮಟ್ಟದ ಕಮಿಟಿ ಮುಂದಿಟ್ಟು, ಇದು National Calamity Relief Fund ನಲ್ಲಿ ತೆಗೆದುಕೊಳ್ಳಬೇಕು ಅದರಲ್ಲಿ ಈ ಸಲ ಬರದೇ ಇರಬಹುದು, ಆದರೆ, ಯಥಾಪ್ರಕಾರ ನಿಮ್ಮ routine course ನಲ್ಲಿ Calamity Relief Fund ನಲ್ಲಾದರೂ ಇದನ್ನು ತೆಗೆದುಕೊಂಡು, ಈ ಕೆಲಸಕ್ಕೆ ರೆವಿನ್ಯೂ ಇಲಾಖೆ ವತಿಯಿಂದ ಆದ್ಯತೆ ಕೊಡಬೇಕಾಗಿತ್ತು ಆದರೆ, ನಾನು ಅಲ್ಲಿಂದ Secretary ಅವರನ್ನು ಸಂಪರ್ಕ ಮಾಡಿದ್ದೇನೆ, ಜಿಲ್ಲಾಧಿಕಾರಿಗಳನ್ನಂತೂ ಸತತವಾಗಿ ಸಂಪರ್ಕಿಸುತ್ತಲೇ ಇದ್ದೇವೆ ಇಷ್ಟು ಮಾಡಿದರೂ ಒಂದು ಕಡೆ treasuryಯಲ್ಲಿ ಹಣ ತುಂಬಿ ತುಳುಕುತ್ತಿದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಇನ್ನೊಂದು ಕಡೆ, ಹಣ ಬಿಡುಗಡೆ ಮಾಡಿಲ್ಲ, ಏಕೆ? ಒಂದೂವರೆ ತಿಂಗಳಾಯಿತು ಅತಿವೃಷ್ಟಿಯಿಂದ ಅನೇಕ ಜಿಲ್ಲೆಗಳು ತತ್ತರಿಸುತ್ತಿವೆ ಅದರ ಕಡೆ immediate ಆಗಿ ನೀವು relief ಕೊಡುವುದಕ್ಕೆ ಏಕೆ ಸಾಧ್ಯವಾಗಿಲ್ಲ? ಹಣವಿದ್ದರೆ, ಏಕೆ ಬಿಡುಗಡೆ ಮಾಡುತ್ತಿಲ್ಲ? ನನಗೆ ಹೇಳಬೇಕಾಗುತ್ತದೆ ಬಹುಶಃ ಹಣದ ತೊಂದರೆ ಇದೆ ಅದಕ್ಕೋಸ್ಕರ, ನೀವು ಈ ಕೆಲಸ ಮಾಡುತ್ತಿಲ್ಲ ಒಂದು ಕಡೆ ಕೇಂದ್ರಸರ್ಕಾರದಿಂದ ಬಂದಂಥ ಹಣಕ್ಕೂ ಕೂಡ ಸರಿಯಾದ ಯೋಜನೆಗಳನ್ನು ತಯಾರಿಸಿ, ಅದಕ್ಕೆ relief ಕೊಡುವುದನ್ನು ಮಾಡುತ್ತಿಲ್ಲ ಇನ್ನೊಂದು ಕಡೆ, ನಿಮ್ಮ ಹಣ ಕೂಡ ಬಿಡುಗಡೆ ಮಾಡಿ ಸಹಾಯ ಮಾಡತಕ್ಕಂಥಾದ್ದನ್ನೂ ನೀವು ಮಾಡುತ್ತಿಲ್ಲ ಅಂದರೆ, ಮನಸ್ಸು ಇಲ್ಲವೇ? ಅಥವಾ ಇದು ಹೀಗೇ ನಡೆಯುತ್ತದೋ, ನಾವು ಏನು ಮಾಡಿದರೂ ಕೂಡ ಜನರು ಕೇಳುತ್ತಾರೆಂದು ನಮ್ಮ ಮನಸ್ಸಿನಲ್ಲಿದೆಯೋ, ಏನೋ, ಗೊತ್ತಿಲ್ಲ ಆದರೆ, ಜನರು ಇವತ್ತೇನೋ ಸುಮ್ಮನಿರಬಹುದು ನಿಮ್ಮ ದಬ್ಬಾಳಿಕೆಗೆ ಸುಮ್ಮನಿರಬಹುದು ಅಥವಾ ಒತ್ತಡಕ್ಕೆ ಸುಮ್ಮನಿರಬಹುದು, pressueಗೆ ಸುಮ್ಮನಿರಬಹುದು, ಅಥವಾ

ನಮ್ಮ ಕೆಲಸವಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಶಾಸಕರು ಕೂಡ ಸುಮ್ಮನಿರಬಹುದು ಆದರೆ ನಿಸರ್ಗ ವಿಕೋಪದ ಮುಂದೆ ನೀವು ಸರಿಯಾಗಿ ಕೆಲಸ ಮಾಡದಿದ್ದರೆ ಜನರು ಮುಂದೆ ನಿಮಗೆ ಪಾಠ ಕಲಿಸುತ್ತಾರೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ ಇದಕ್ಕೆ ನೀವು ಈಗ ಸ್ಪಂದಿಸದಿದ್ದರೆ ಮತ್ತೆ ಯಾವಾಗ ಸ್ಪಂದಿಸುತ್ತೀರಿ? ಇಂಥ ಸಂಕಷ್ಟ ಸಮಯದಲ್ಲಿ, ಕೆಟ್ಟ ಪರಿಸ್ಥಿತಿಯಲ್ಲಿ ಜನರಿಗೆ ನೀವು ಸ್ಪಂದಿಸದಿದ್ದರೆ ಮುಂದೆ ಯಾವಾಗ ಸ್ಪಂದಿಸುತ್ತೀರಿ? ಯಾವಾಗ ಕೆಲಸ ಮಾಡುತ್ತೀರಿ? Natural calamityಗಾಗಿಯೇ ವಿಶೇಷವಾದಂಥ ಫಂಡ್ ಇದ್ದಾಗ ಆದ್ಯತೆಯ ಮೇರೆಗೆ ಕೆಲಸವನ್ನು ತೆಗೆದುಕೊಳ್ಳದಿದ್ದರೆ ನಾವೇನು ಹೇಳಬೇಕು? ಇನ್ನೊಂದು ಕಡೆ Employment Guarantee Scheme ಇದೆ ಅದನ್ನು ಸಹ ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ ಅಲ್ಲೂ ಒಬ್ಬರ ಮೇಲೆ ಒಬ್ಬರು ಎಲ್ಲೋ ಒಂದು ಕಡೆ ಸ್ವಲ್ಪ ಕೆಲಸವಾದರೆ ಕೆಲವು ಜನರು ದುರುಪಯೋಗವಾಗಿದೆಯೆಂದು application ಕೊಡುತ್ತಾರೆ ಕೆಲವು ಕಡೆ ಜನರೇ ಕೆಲಸಕ್ಕೆ ಬುತ್ತಿಲ್ಲವೆಂದು Deputy Commissionerರವರು ಹೇಳುತ್ತಿದ್ದಾರೆ ಇದನ್ನು ಸಮನ್ವಯ ಮಾಡತಕ್ಕ, ಕೂಡಿಸತಕ್ಕ, ಈ ನ್ಯೂನತೆಯನ್ನು ಸರಿಪಡಿಸತಕ್ಕವರು ಯಾರು? ಅನೇಕ ರಾಜ್ಯಗಳಲ್ಲಿ Employment Guarantee Schemeನಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ Tank de-siliting ಇರಬಹುದು, ರಿಪೇರಿ ಇರಬಹುದು, rejuvenation ಇರಬಹುದು, bund strengthen ಮಾಡತಕ್ಕುಟದ್ದು ಇರಬಹುದು, ಕೋಡಿ, ಕಾಲುವೆ ದುರಸ್ತಿ ಮಾಡತಕ್ಕದ್ದು ಇರಬಹುದು, ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಆದರೆ ಇಲ್ಲಿ ಏನೇನೂ ಇಲ್ಲ ಕೆಲವು ಕಡೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದರೆ ಮತ್ತೆ ಕೆಲವು ಕಡೆ ಮಂತ್ರಿಗಳು ನಿರ್ಲಕ್ಷ್ಯ ಮಾಡಿದ್ದಾರೆ ಪಂಚಾಯಿತಿ ಕಾರ್ಯದರ್ಶಿಯವರನ್ನು ಮತ್ತು ಅಲ್ಲಿರುವ ಅಧಿಕಾರಿಗಳನ್ನು ಹದ್ದು ಬಸ್ತಿನಲ್ಲಿಟ್ಟುಕೊಂಡು ಕೆಲಸ ಮಾಡತಕ್ಕದನ್ನು ಸರ್ಕಾರ ಮಾಡುತ್ತಿಲ್ಲ ಇದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಸ್ಪಷ್ಟವಾಗಿ ಹೇಳುತ್ತೇನೆ ಕಂದಾಯ ಸಚಿವರಾದ ಜಗದೀಶ್ ಶೆಟ್ಟರ್‌ರವರು ಬಿಜಾಪುರಕ್ಕೆ, ಮಂಗಳೂರಿಗೆ ಹೋಗಿದ್ದೆ ಎಂದು ಹೇಳುತ್ತಾರೆ ನೀವು ಅಲ್ಲಿ ಹೋಗಿ ಏನು ಮಾಡಿದ್ದೀರಿ? ಒಂದೊಂದು ಕೋಟಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಆದರೆ ನಿಮ್ಮ ವರದಿಯಲ್ಲಿ ಜಿಲ್ಲಾಧಿಕಾರಿಯವರು, ಮೈನರ್ ಇರಿಗೇಷನ್‌ನವರು PWD ಇಲಾಖೆಯವರು,ಜಿಲ್ಲಾ ಪಂಚಾಯಿತಿಯವರು ಹೇಳತಕ್ಕದ್ದು ಒಂದೊಂದು ಕಡೆ 50–100 ಕೋಟಿಯವರೆಗೆ ಹಾನಿಯಾಗಿದ್ದರೆ ಕೆಲವು ಕಡೆ 5–10 ಕೋಟಿ ಹಾನಿಯಾಗಿದೆ ಆ ವರದಿಯ ಪ್ರತಿಯನ್ನು ತಮಗೆ ಕೊಡುತ್ತಿದ್ದೇನೆ ಆದರೂ

ಅಲ್ಲಿಗೆ ಏನು 1 ಕೋಟಿ, 50 ಲಕ್ಷ, 20 ಲಕ್ಷ ಕೋಟಿ, ಇನ್ನು ಕೊಡುತ್ತಿದ್ದೇನೆಂದು ಹೇಳಿದರೆ ಸರಿಯೇ?

ಇನ್ನೊಂದು, ಪದೇ ಪದೇ ಜಿಲ್ಲಾಧಿಕಾರಿಯವರ ಹತ್ತಿರ ಈಗಾಗಲೇ ಹಣ ಇದೆ ಆದರೆ ಅವರು ಹಣವನ್ನು ಖರ್ಚು ಮಾಡುತ್ತಿಲ್ಲ ಎಂದು ಹೇಳುತ್ತಿದ್ದೀರಿ ಈ ಹಿಂದೆ ಯಾವ್ಯಾವ ಕೆಲಸ ಮಾಡಲು ಅನುಮತಿ ಕೊಟ್ಟಿದ್ದಿರೋ ಆ ಕೆಲಸಕ್ಕೆ ಆ ಹಣವನ್ನು ಬಿಡುಗಡೆ ಮಾಡುವ ದೃಷ್ಟಿಯಿಂದ ಇಟ್ಟುಕೊಂಡಿದ್ದಾರೆ ನೂರು ಪರ್‌ಸೆಂಟ್ utilization certificate ಬಂದರೆ ಉಳಿದಂಥ ಹಣವನ್ನು ಅವರು ಬಿಡುಗಡೆ ಮಾಡುತ್ತಾರೆ ಆ ತಕ್ಷಣವೇ ಹಣ ಬಿಡುಗಡೆ ಮಾಡಿದರೆ ಕೆಲಸ ಪೂರ್ಣವಾಗುವುದಿಲ್ಲ ಎಂದು ತಿಳಿದುಕೊಂಡು ಅದು withheld ಮಾಡಿದಂತಹ ಹಣ ಅದು already, in fact ಖರ್ಚಾಗಿದ್ದು ಆದರೆ ಕಾಗದದಲ್ಲಿ ಮಾತ್ರ saving ಮಾಡಿ ಇಟ್ಟುಕೊಂಡಿದ್ದು ಏಕೆಂದರೆ ಅಲ್ಲಿ utilization certificate ಅಥವಾ ಆ ಕೆಲಸ ಪೂರ್ಣವಾಗಿಲ್ಲ ಎಂದು ಇದು ಕಾಗದದಲ್ಲಿ, ಬರವಣಿಗೆಯಲ್ಲಿ ಇಲ್ಲದಿರುವ ಕಾರಣ ,ಅದು ಇದೆ ಆದರೆ ಎಲ್ಲರೂ ಪದೇ ಪದೇ ಜಿಲ್ಲಾಧಿಕಾರಿಯವರ ಹತ್ತಿರ 2–3 ಕೋಟಿ ಹಣ ಇದೆ ತೆಗೆದುಕೊಡಿ ಎಂದು ಹೇಳುತ್ತಾರೆ ಆದರೆ ಆ 3 ಕೋಟಿ ಹಣ in fact ಇಲ್ಲ ಅದು ಕೇವಲ ಕಾಗದದಲ್ಲಿ ಇರತಕ್ಕದ್ದು ಅದು committed workಗೆ ಬಿಡುಗಡೆ ಮಾಡತಕ್ಕ ಹಣ ಆ ಕೆಲಸವನ್ನು extract ಮಾಡಿಕೊಳ್ಳಬೇಕು ಎಂಬ ದೃಷ್ಟಿಯಿಂದ ತಡೆ ಹಿಡಿದಂಥ ಹಣ ಅದನ್ನು ತಕ್ಷಣ ಬೇರೆ ಕಡೆಗೆ ಕೊಡಲು ಬರುತ್ತದೆಯೇ? ಕೊಟ್ಟರೆ ಅಲ್ಲಿನ ಜನರು ಸುಮ್ಮನೆ ಇರುತ್ತಾರೆಯೇ? ಅಲ್ಲಿನ ಕೆಲಸಗಾರರು ಸುಮ್ಮನೆ ಇರುತ್ತಾರೆಯೇ? ಅಥವಾ ನೀವು ಅದೆಲ್ಲವನ್ನು ಖರ್ಚು ಮಾಡಿ ಎಂದು ಅವರು ಖರ್ಚು ಮಾಡಿದರೆ ನಾಲೆ ದಿವಸ ಆ ಪಿ ಡಬ್ಲ್ಯು ಡಿ ಆಫೀಸ್‌ಗೆ, ಜಿಲ್ಲಾ ಪಂಚಾಯಿತಿ ಆಫೀಸ್‌ಗೆ ಎಲ್ಲರೂ ಮುಗಿಬೀಳುತ್ತಾರೆ ಇದರ ಬಗ್ಗೆ ನೀವು ಸ್ವಲ್ಪ practical ಆಗಿ ಯೋಚನೆ ಮಾಡಬೇಕು ಜಿಲ್ಲಾಧಿಕಾರಿಯವರಿಗೆ ಹೆಚ್ಚಿನ ಹಣವನ್ನು ಕೊಟ್ಟು ನೋಡಿ, ಇಷ್ಟು ನಿಮ್ಮ discretion ನಲ್ಲಿ ಹಣವನ್ನು ಕೊಡುತ್ತೇವೆ ಜನರ ಸಮಸ್ಯೆಗೆ ನೀವು ಸ್ಪಂದಿಸಿ ಎಂದು ಹೇಳಿದರೆ ಎಲ್ಲಾ ಜಿಲ್ಲಾಧಿಕಾರಿಗಳು ಮುಕ್ತವಾಗಿ ಕೆಲಸ ಮಾಡುತ್ತಾರೆ ಆದರೆ ಕೊಡುವ ಹಣವೇ ಸ್ವಲ್ಪ, ಈ ರೀತಿ ಸ್ವಲ್ಪ ಹಣವನ್ನು ಕೊಟ್ಟು ಇಷ್ಟೊಂದು ಹಣ ಇದೆಯೆಂದು ಅವರನ್ನು ಬೆದರಿಸುವುದು ಕೆಲವು ಕಡೆ ಇವರು ಹಣವನ್ನು ಬಿಡುಗಡೆ ಮಾಡದೇ ಇರುವುದಕ್ಕೆ, ಇವರಿಂದ ಕೆಲಸ ತೆಗೆದುಕೊಳ್ಳುವ ಸಾಮರ್ಥ್ಯ ಇಲ್ಲದಿರುವ ಕಾರಣ ಅಧಿಕಾರಿಗಳಿಗೆ ಸಿಕ್ಕಾಪಟ್ಟೆ ಬೈದುಕೊಂಡು ಹೋಗುತ್ತೀರಿ ಹಿಂದೆ

ಎಲ್ಲರೂ ಹೀಗೆಯೇ ಬೈದುಕೊಂಡು ಬಂದಿದ್ದಾರೆಯೇ? ನಾನು ಎಲ್ಲೂ ಕೇಳಿಲ್ಲ ಎಲ್ಲಿ ತಪ್ಪು ಮಾಡುತ್ತಾರೋ ಅಂತಹ ಅಧಿಕಾರಿಗಳಿಗೆ ಬೈದಿದ್ದೂ ಉಂಟು, ಅಮಾನತ್ತು ಮಾಡಿದ್ದೂ ಉಂಟು, ಕೆಲವು ದಿವಸ ರಜೆ ಹಾಕಿ ಮನೆಗೆ ಹೋಗಿ ಎಂದು ಹೇಳಿದ್ದೂ ಇದೆ ಆದರೆ ಇವರು ಮಾಡತಕ್ಕ ಕೆಲಸ, ಸರ್ಕಾರ ಮಾಡತಕ್ಕ ಕೆಲಸ, ಇಲಾಖೆಯವರು ಮಾಡತಕ್ಕ ಕೆಲಸ, ನೀವು ಕೊಡತಕ್ಕ ಸೂಚನೆಗಳು ಅದನ್ನು ಬಿಟ್ಟು ಅದು ಜಾರಿಗೆ ಬರಲಿಲ್ಲ ಎಂದು ತಿಳಿದುಕೊಂಡು ಅಧಿಕಾರಿಗಳಿಗೆ ಹೇಳುತ್ತೀರಿ ನೀವು ಕುಳಿತು review ಮಾಡಿ ಏಕೆ ಆ ಅಧಿಕಾರಿಗಳು ಮಾಡಿಲ್ಲ ಯಾವ ಅಧಿಕಾರಿ ಮಾಡಿಲ್ಲ ಅವರನ್ನು ಸಸ್ಪೆಂಡ್ ಮಾಡಿರುವುದನ್ನಾದರೂ ತೋರಿಸಿ ನಿಮ್ಮ ಸಿಟ್ಟು ಕೇವಲ ತುಟಿ, ಬಾಯಿ, ನಾಲಿಗೆಯ ಮೇಲೆ ಇದ್ದರೆ ಪ್ರಯೋಜನವಾಗುವುದಿಲ್ಲ ಅದು ಕೇವಲ ಜನರಿಗೆ, ತೋರಿಸುವುದಕೋಸ್ಕರ ಆಯಿತೇ ಹೊರತು ಅನುಷ್ಠಾನ ತರುವುದಕೋಸ್ಕರ ವಾದುದಲ್ಲ ಅನುಷ್ಠಾನವಾಗಬೇಕೆಂದು ತಮಗೆ ಇಚ್ಛೆ ಇದ್ದರೆ, ಯಾರ ಹತ್ತಿರ ಇಚ್ಛಾಶಕ್ತಿ ಇರುತ್ತದೋ ಖಂಡಿತ ಆ ಕೆಲಸ ಆಗುತ್ತದೆ ಕೆಲವು ಕಡೆ ನಿಮಗೆ ಮನಸ್ಸು ಬಂತು ಎಂದರೆ ಮಾಡಿಯೇ ಮಾಡಿದ್ದೀರಿ

ಮುಖ್ಯಮಂತ್ರಿಯವರು ಅವರಿಗೆ ಬೇಕು ಎಂದರೆ ರಾತ್ರಿ ಹಗಲು ಕುಳಿತು ಕೆಲಸ ಮಾಡಿಸಿಕೊಳ್ಳುತ್ತಾರೆ ಈಗ ರಾಮನಗರಕ್ಕೆ ರಾತ್ರೋರಾತ್ರಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯವನ್ನು ಶಿಫ್ಟ್ ಮಾಡಿಲಿಲ್ಲವೇ? ಕೋಟ್ಯಾಂತರ ರೂಪಾಯಿ ಮಂಜೂರು ಮಾಡಿ ಇವತ್ತು ಪಿ ಡಬ್ಲ್ಯು ಡಿ ಇಲಾಖೆಯ ವತಿಯಿಂದ ಅವರೇ ಹೇಳಿದ ಪ್ರಕಾರ 314 ಕೋಟಿ ರೂಪಾಯಿ ಅಭಿವೃದ್ಧಿಯ ಕೆಲಸ ರಾಮನಗರದಲ್ಲಿ ನಡೆದಿದೆಯೆಂದು ಮೊನ್ನೆ ಉದ್ಘಾಟನೆ ಮಾಡಿದರು ಏಕೆ ನಿಮ್ಮ ಒಂದೇ ಕ್ಷೇತ್ರಕ್ಕೆ 314 ಕೋಟಿ? ಇಲ್ಲಿ ಬೇರೆಯವರ ಮತಕ್ಷೇತ್ರ ಇಲ್ಲವೇ? ಅಲ್ಲಿ ಏನೇನು ಮಾಡಿದಿರಿ ಎಷ್ಟು ಹೈಸ್ಕೂಲ್‌ಗಳನ್ನು ಮಾಡಿದಿರಿ ಎಷ್ಟು ಕಾಲೇಜುಗಳನ್ನು ಮಾಡಿದಿರಿ ಅಧಿಕಾರ ಸಿಕ್ಕಿದೆಯೆಂದು ಅದನ್ನು ದುರುಪಯೋಗ ಮಾಡಿಕೊಂಡು ನೀವು ಯಾವಾಗಲೂ ಅಧಿಕಾರ ಸಿಕ್ಕಿದಾಗ you should use judiciously Yes, one or two ಇರುತ್ತದೆ ಎಲ್ಲಾ ಕಡೆ 4 ಕ್ಲಾಸ್ ಮಾಡಿದರೆ ನೀವು ಒಂದನ್ನು ಹೆಚ್ಚಾಗಿ ತೆಗೆದುಕೊಳ್ಳುವುದು, 2 ಮಾಡಿದರೆ ಒಂದನ್ನು ತೆಗೆದುಕೊಳ್ಳುವುದು, ಅದನ್ನು ಬಿಟ್ಟು ಹುಚ್ಚಿಯ ಮದುವೆಯಲ್ಲಿ ಉಂಡವನೇ ಜಾಣ ಎಂದು ಸಿಕ್ಕಿದ್ದನೆಲ್ಲಾ ಅವರೇ ಹಂಚಿಕೊಳ್ಳುವುದು ಏನು ಬೇಕು ಹೊಳೇನರಸೀಪುರ, ರಾಮನಗರ, ಹಾಸನ ಇಲ್ಲದಿದ್ದರೆ ಅವರ ಪಕ್ಷ, ಅವರ ಶಾಸಕರು ಬೇರೆಯವರು ಇಲ್ಲವೇ? ನಾವೇನು ಆರಿಸಿ ಬಂದಿಲ್ಲವೇ? ಜನರು ನಮ್ಮನ್ನು ಆರಿಸಿ ಕಳುಹಿಸಿಲ್ಲವೇ? ನಾವು ನಿಮ್ಮಂತೆ ಆರಿಸಿ ಬಂದಿದ್ದೇವೆ

ನಾಳೆ ನೀವು ಅವರ ಹತ್ತಿರವೇ ಮತ ಕೇಳುತ್ತೀರಿ ನಮ್ಮ ಮತಕ್ಷೇತ್ರಕ್ಕೆ ಬಂದು ಜೆ ಡಿ ಎಸ್ ನವರಾಗಲಿ ಬಿ ಜೆ ಪಿ ಯವರಾಗಲಿ ಮತವನ್ನು ಕೇಳುವುದಿಲ್ಲವೇ? ನೂರಕ್ಕೆ ನೂರು ಮತವನ್ನು ನನಗೇ ಹಾಕುತ್ತಾರೆಯೇ? ಇಂಥ ಅನ್ಯಾಯ ಎಂದೂ ಆಗಿಲ್ಲ ಬರಗಾಲದಲ್ಲಿ, ಅತಿವೃಷ್ಟಿಯಲ್ಲಿ, ಅಭಿವೃದ್ಧಿಯಲಿ, ಮೂಲಭೂತ ಸೌಲಭ್ಯ ಕೊಡುವುದರಲ್ಲಿ ತಾರತಮ್ಯ ಹೀಗಾದರೆ ಇಡೀ ರಾಜ್ಯದ ಬೆಳವಣಿಗೆಯಾಗುತ್ತದೆಯೇ? ಇಡೀ ರಾಜ್ಯದ ಅಭಿವೃದ್ಧಿಯಾಗುತ್ತದೆಯೇ? ಮಾತು ಬಂದರೆ ನೀವೇನು ಮಾಡಿದ್ದೀರಿ ಎಂಬುದು ಗೊತ್ತು,ಅಲ್ಲಿ ನೀವೇನು ಮಾಡಿದಿರಿ, ಇಲ್ಲಿ ಏನು ಮಾಡಿದಿರಿ ಎಂದು ಹೇಳುವುದು ನೀವು ತೆಗೆದು ನೋಡಿ ಹಾಗೆಲ್ಲಾ ಮಾಡಬೇಕಾಗಿದ್ದರೆ ಯಾವ ಮುಖ್ಯಮಂತ್ರಿಯ ಕಾಲದಲ್ಲೂ ಇಷ್ಟೊಂದು imbalance ಆಗಿಲ್ಲ ಒಂದು ಕಡೆ imbalance ಆಗಿದೆಯೆಂದು ತಿಳಿದುಕೊಂಡು ಡಾ ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದಿರಿ ಆ ವರದಿಯ ಪ್ರಕಾರವಾದರು backward, ಮತ್ತು ಸಾಮಾನ್ಯವಾದ ತಾಲ್ಲೂಕಿಗೆ ಬಿಡುಗಡೆ ಮಾಡಿದ್ದೀರಾ? ಅದರ ಪ್ರಕಾರವೂ ಇಲ್ಲ ಯಾವುದಾದರೂ ಒಂದು norms ಬೇಕಲ್ಲಾ? ಉಪಮುಖ್ಯಮಂತ್ರಿಯವರು ಹಣ ಇದೆಯೆಂದು ಹೇಳುತ್ತಾರೆ ಅವರು ಯದ್ವಾತದ್ವ ಅವರ ಶಿಷ್ಯಂದಿರಿಗೆ, ಶಾಸಕರಿಗೆ, ತಾಲ್ಲೂಕಿಗೆ ಕೊಡುವುದೇ ಕೊಡುವುದು ಹಳ್ಳಿಯಲ್ಲ ಚರಂಡಿ, ರಸ್ತೆ ದುರಸ್ತಿಯನ್ನು ಮಾಡಲು ಅರು 7-80 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿಕೊಂಡಿದ್ದಾರೆ ಅದನ್ನು ಪಿ ಡಬ್ಲ್ಯು ಡಿ ರೇವಣ್ಣನವರು ಮಾಡುವುದಿಲ್ಲವೆಂದು through Rural Development Departmnet allocate ಮಾಡಿಸಿಕೊಂಡು ಮಾಡಿದರು

ನೀವು ಮಾಡಿರಲಿಲ್ಲವೇ ಎಂದು ಕೇಳುತ್ತೀರಿ? ಹಿಂದೆ ಇದ್ದ ಎಲ್ಲರೂ ಊಡ ಇದೇ ರೀತಿಯಾಗಿ indiscriminate ಆಗಿ ಹಂಚಿದ್ದರೇ? ಸ್ವಲ್ಪವಾದರೂ ಆತ್ಮಸಾಕ್ಷಿಯಾಗಿ ನೋಡಿಕೊಳ್ಳಿ ಮನುಷ್ಯನಿಗೆ ಕೊನೆಗೆ ಏನು ಇರಲಿಲ್ಲವೆಂದರೂ ಊಡ, ನಾನು ಒಬ್ಬ ರಾಜಕಾರಣಿಯಾಗಿ, ಒಬ್ಬ ಮಂತ್ರಿಯಾಗಿ, ಒಬ್ಬ ಮುಖ್ಯಮಂತ್ರಿಯಾಗಿ, ನಾನೇನು ಮಾಡುತ್ತೇನೆ ಎಂಬುದನ್ನು ನೀವು ಯೋಚನೆ ಮಾಡಿ, ಅದರ ಬಗ್ಗೆ ತಿಳುವಳಿಕೆ ಇಲ್ಲದೇ ಈ ರೀತಿ ಮಾಡಿದರೆ ರಾಜ್ಯದ ಅಭಿವೃದ್ಧಿ ಹೇಗೆ ಆಗುತ್ತದೆ? ಈ ಕಡೆಗೆ ನೀವು ಗಮನ ಕೊಡಿ ಇಲ್ಲದಿದ್ದರೆ, ರಸ್ತೆಗಳು ತೆಗೆದುಕೊಂಡರೂ ಒಂದೇ ಕಡೆ, ರಿಪೇರಿ ತೆಗೆದುಕೊಂಡರೂ ಒಂದೇ ಕಡೆ ಹಣ ಹೋಗುತ್ತದೆ ಈ ಗ ಒಂದು ಬಾಕಿ ಉಳಿದಿದೆ ಏನಾದರೂ ಕರ್ನಾಟಕ ರಾಜ್ಯದಲ್ಲಿ suicide ಮಾಡಿಕೊಳ್ಳತಕ್ಕ ಗುಳಿಗೆ-ಗಿಳಿಗೆ ಏನಾದರೂ ಬಂದರೆ, ಅದನ್ನು ನಮಗೇ ಹೆಚ್ಚಿಗೆ ಕೊಟ್ಟು ಬಿಡಿ

ಎಂದು ಹೇಳಬಹುದು ರಾಮನಗರಕ್ಕೆ ಜಾಸ್ತಿ ಅಲಾಟ್ ಮಾಡಿ, ಹೊಳೆನರಸೀಪುರಕ್ಕೆ ಜಾಸ್ತಿ ಅಲಾಟ್ ಮಾಡಿ ಅಥವಾ ಹಾಸನಕ್ಕೆ ಜಾಸ್ತಿ ಮಾಡಿ ಅಥವಾ ಬೆಂಗಳೂರು, ಹೀಗೆ ಅವರಿಗೆ ಎಲ್ಲಿಗೆ ಬೇಕೋ ಅಲ್ಲಿಗೆ ಅಲಾಟ್ ಮಾಡಿ ಅನ್ನುವುದೊಂದು ಬಾಕಿ ಉಳಿದಿದೆ ನಾನು ಏಕೆ ಈ ಮಾತನ್ನು ನೊಂದು ಹೇಳುತ್ತಿದ್ದೇನೆ ಎಂದರೆ, ನೀವು ಅನ್ಯಾಯವಾಗಿದ್ದರೆ, ಅದನ್ನು ಕುಳಿತು ಸರಿಪಡಿಸಿ Alright, ನಮ್ಮ ಮೇಲೆ ನಿಮಗೆ ಏನಾದರೂ ದ್ವೇಷ ಇದ್ದರೆ ಬಿಟ್ಟು ಬಿಡಿ, ನಮ್ಮ Constituency ಗೆ ಕೊಡುವುದು ಬೇಡ, ಆದರೆ 224 Constituencies ಗಳನ್ನೂ ಸಹ ನೀವು ಸಮಾನವಾಗಿ ನೋಡಬೇಕಲ್ಲವೇ? ಆದರೆ ನೀವು ಸಮಾನವಾ ನೋಡಿಲ್ಲ ನೀವು ನೂರಕ್ಕೆ ನೂರರಷ್ಟು ತೆಗೆದುಕೊಂಡರೆ, ಶೇಕಡ 90ರಷ್ಟು ಅಥವಾ ಶೇಕಡ 80ರಷ್ಟಾದರೂ ಅವರಿಗೆ ಕೊಡಿ ಹಿಂದೆ ಬರಗಾಲ ಕಾಮಗಾರಿಗಳಲ್ಲಾಗಲಿ ಅಥವಾ ಅತಿವೃಷ್ಟಿ ಕಾಮಗಾರಿಗಳಲ್ಲಾಗಲಿ, ನಾವು ಪ್ರತಿಯೊಬ್ಬ ಶಾಸಕರನ್ನು Task Force Committee ಮಾಡಿ ಅವರು ಹೇಳಿದಂತಹ ಕೆಲಸಗಳನ್ನೇ ತೆಗೆದು ಕೊಳ್ಳಬೇಕೆಂದು ನಾನೇ As a Home Minister, as a Chaiman ಪ್ರತಿಯೊಬ್ಬರಿಗೂ directions ಕೊಟ್ಟಿದ್ದೆ ಒಂದು ಕಡೆಯೂ ತಾರತಮ್ಯ ಮಾಡಲಿಲ್ಲ ಅದು ಮಾನ್ಯ ಶೆಟ್ಟರ್‌ರವರಿಗೆ ಗೊತ್ತಿಗೆ, ಎಲ್ಲರಿಗೂ ಕೂಡ ಗೊತ್ತಿಗೆ ಈಗಲೂ ಅದೇ ರೀತಿಯಾಗಿ ಮಾಡಲಿಕ್ಕೆ ನಿಮಗೆ ಏನಾಗಿದೆ ಸ್ವಾಮಿ? ಈಗ ನಮಗೇ ಎಲ್ಲವೂ ಬೇಕು ಎನ್ನುವುದೇ ಜಾಸ್ತಿಯಾಗಿದೆ ಈ ರೀತಿಯಾಗಿ ಆದರೆ, ಇದು ಸರಿಯಲ್ಲ ಇದರಿಂದ ಯಾರಿಗೂ ಕೂಡ ಭೂಷಣ ಬರುವುದಿಲ್ಲ ಎಂಬ ಮಾತನ್ನು ಇವತ್ತು ನಾನು ನಿಮಗೆ ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ ಅದರ ಜೊತೆಯಲ್ಲಿ ಇವರುತ್ತ ನಮ್ಮ Calamity Relief ನಲ್ಲೂ ಕೂಡ ಕೆಲವೊಂದು ಬದಲಾವಣೆಗಳಾಗಿವೆ ಹಿಂದೆ ಒಂದು ಪ್ರಾಣ ಹಾನಿಯಾದರೆ 50 ಸಾವಿರ ರೂ ಗಳ ಪರಿಹಾರ ಕೊಡುತ್ತಿದ್ದುದ್ದನ್ನು ಈಗ 1 ಲಕ್ಷ ರೂ ಗಳಿಗೆ ಏರಿಸಲಾಗಿದೆ ಹಿಂದೆ ಹೆಕ್ಟೇರ್‌ಗೆ 2,500 ರೂ ಗಳ ಬೆಳೆ ಹಾನಿ ಪರಿಹಾರ ನಿಗದಿ ಪಡಿಸಿದ್ದರೆ, ಈಗ ಅದು ಸುಮಾರು 6,000 ರೂ ಗಳಾಗಿವೆ ಈ ರೀತಿಯ ಬದಲಾವಣೆಗಳೆಲ್ಲಾ ಕೇಂದ್ರ ಸರ್ಕಾರದಿಂದ ಆಗಿ ಬಂದಿದೆ ಅದನ್ನು strict ಆಗಿ implement ಮಾಡಿ ಎಲ್ಲಿ ಹಾನಿ ಆಗಿದೆಯೋ ಅಲ್ಲಿಗೆ ನೀವೇ ಹೋಗಿ Cheque ವಿತರಿಸಿ ಅಥವಾ ನಿಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮುಖಾಂತರ ಕೊಡಿಸಿ Atleast ಅವರು ಸ್ಥಳಕ್ಕೆ ಹೋಗಿ ಪರಿಹಾರ ವಿತರಿಸಿದರೆ, ಜನರಿಗೆ ಸಮಾಧಾನ ಮಾಡಿದರೆ, ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ ಮತ್ತು ನಮ್ಮ ತೊಂದರೆ ಅಥವಾ ಕಷ್ಟಗಳಿಗೆ ಸರ್ಕಾರ ಸ್ಪಂದಿಸುತ್ತಿದೆ ಎಂದು ಅವರಿಗೆ ಅನಿಸುತ್ತದೆ ಇವತ್ತು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆ

ಪಡುತ್ತಿದ್ದೇನೆ ಇದು ಕೇವಲ ಒಂದು ಭಾಗವಲ್ಲ, ಅದು ಗುಲ್ಬರ್ಗಾ ಇರಬಹುದು, ಬೆಳಗಾಂ ಇರಬಹುದು, ಬಾಗಲಕೋಟೆ ಇರಬಹುದು, ಕೊಡಗು ಇರಬಹುದು, ದಕ್ಷಿಣ ಕನ್ನಡ ಇರಬಹುದು, ಉಡುಪಿ ಇರಬಹುದು, ಉತ್ತರ ಕನ್ನಡ ಇರಬಹುದು, ಇಂತಹ ಅನೇಕ ಕಡೆ ಜನ ತೊಂದರೆಗೆ ಒಳಗಾಗಿದ್ದಾರೆ ಅವರಿಗೆ ತಕ್ಷಣ ಹಣ ಬಿಡುಗಡೆ ಮಾಡತಕ್ಕ ಅವಶ್ಯಕತೆ ಇದೆ ಅದರಲ್ಲೂ ವಿಶೇಷವಾಗಿ ರಸ್ತೆಗಳು, ಕೆರೆಗಳು ಮತ್ತು Bridges ದುರಸ್ತಿಗೆ ಹಣ ಬಿಡುಗಡೆ ಮಾಡಬೇಕಾಗಿದೆ ಈಗಾಗಲೇ ಈ ಬಗ್ಗೆ ಕೆಲವು ಸದಸ್ಯರು Zero Hourನಲ್ಲೂ ಪ್ರಸ್ತಾಪ ಮಾಡಿದರು ಆದುದರಿಂದ ಇದು ಬಹಳ ಮುಖ್ಯವಾದ ವಿಚಾರವಾಗದೆ ಇದನ್ನು ನಾವು ಮಾಡದೇ ಹೋದರೆ ಕಷ್ಟವಾಗುತ್ತದೆ ಬಡವರ ಸುಮಾರು 24,618 ಮನೆಗಳು ಕುಸಿದು ಬಿದ್ದಿವೆ ಇತ್ತೀಚೆಗೆ ಇನ್ನೂ ಐದಾರು ಸಾವಿರ ಮನೆಗಳು ಕುಸಿದು ಬಿದ್ದಿವೆ ಒಟ್ಟಾರೆಯಾಗಿ ಸುಮಾರು 30 ಸಾವಿರ ಮನೆಗಳು ಕುಸಿದು ಬಿದ್ದಿವೆ ಅಂತಹ ಮನೆಗಳವರಿಗೆ ತಕ್ಷಣವೇ relief ಕೊಡತಕ್ಕಂಥಾದ್ದು ಆಗಬೇಕು ಏಕೆಂದರೆ, ಮಳೆ ಇನ್ನೂ continuous ಆಗಿ ಬರುತ್ತಲೇ ಇದೆ ಇನ್ನೂ October ವರೆಗೆ ಈ ರೀತಿಯಾಗಿ ಅಲ್ಲಲ್ಲಿ ಮಳೆ ಬರತಕ್ಕಂಥ ಪರಿಸ್ಥಿತಿ ಇರುತ್ತದೆ ಆದ್ದರಿಂದ ಅವರಿಗೆ ತಕ್ಷಣ Zinc Sheets ಕೊಡಬೇಕು ಅಥವಾ ಮತ್ತೆ ಏನಾದರೂ temporary ವ್ಯವಸ್ಥೆ ಮಾಡಬೇಕು ತದನಂತರ ಅವರಿಗೆ ಸಂಪೂರ್ಣವಾಗಿ 30 ಸಾವಿರ ಮನೆಗಳನ್ನು ಯಾವ ರೀತಿಯಾಗಿ ಕಟ್ಟಿಸಿಕೊಡಬೇಕು ಎಂಬ ಬಗ್ಗೆ ಯೋಜನೆಯನ್ನೂ ಸಹ ನೀವು ಹಾಕಿಕೊಳ್ಳಬೇಕು ನಿಮ್ಮ regular ಆಶ್ರಯ committee ಯಲ್ಲಿ ಇದನ್ನು ನೀವು ಕೊಡುತ್ತೀರೋ? ಅಥವಾ ಅದಕ್ಕೆಂದೇ ವಿಶೇಷವಾದಂತಹ ಯೋಜನೆ ಮಾಡುತ್ತೀರೋ? ಅಥವಾ Calamity Relief Fundನಿಂದ ಹಣ ತೆಗೆದು ಅವರಿಗೆ ಕೊಡುತ್ತಿರೋ ಎಂಬುದರ ಬಗ್ಗೆ ನೀವು ಸ್ಪಷ್ಟವಾಗಿ ನಿಮ್ಮ ನಿಲುವನ್ನು ಇಲ್ಲಿ ತಿಳಿಸಬೇಕು ಅದರ ಬಗ್ಗೆಯೂ ಕೂಡ ನೀವು ನಮಗೆ ತಿಳಿಸಬೇಕಾಗುತ್ತದೆ ಇನ್ನು ಬೀಜ ವಿತರಣೆ ಬಗ್ಗೆ ಹೇಳುವುದಾದರೆ, ಮಾನ್ಯ ಬಂಡೆಪ್ಪ ಕಾಶಂಪುರ್ ಸದನದಲ್ಲಿ ಕಾಣುತ್ತಿಲ್ಲ, ನಾನು ನೇರವಾಗಿ ಇದರ ಬಗ್ಗೆ ಅವರನ್ನು ಸಂಪರ್ಕ ಮಾಡಿದ್ದೇನೆ ಅನೇಕ ಕಡೆ, ಏನು ಸೀಡ್ ಸಬ್ಸಿಡಿ ಕೊಡುತ್ತಿದ್ದಾರೆ, ಅದು ಬಹಳಷ್ಟು ಕಡಿಮೆಯಾಗಿದೆ ವಿಶೇಷವಾಗಿ Paddy ಮತ್ತು ಸೂರ್ಯಕಾಂತಿ ಬೆಳೆಗೆ ಈ ರೀತಿಯಾಗುತ್ತಿದೆ ಇದು ನಮ್ಮ ಕಡೆ ಇರತಕ್ಕಂಥ ಖರೀಫ್‌ನಲ್ಲಿ ಹಾಕತಕ್ಕಂಥ ಬೆಲೆಗಳಾಗಿವೆ ಇಂತಹ ಬೆಳೆಗಳ ಬೀಜಕ್ಕೆ ಬೇಕಾದಂತಹ ಹಣ ಇವತ್ತು ಬಿಡುಗಡೆಯಾಗುತ್ತಿಲ್ಲ ಎಲ್ಲಾ ಜನ ಒಂದಲ್ಲ ಒಂದು ರೀತಿಯಿಂದ ಇವತ್ತಿನ ದಿವಸ ತೊಂದರೆಗೀಡಾಗಿದ್ದಾರೆ Usualy ಎಲ್ಲಿ ಜಮೀನುಗಳು ಚೆನ್ನಾಗಿಲ್ಲವೋ, ಅಲ್ಲಿ ಉದ್ದು, ಹೆಸರು, ನವಣೆ ಇಂತಹದ್ದೆಲ್ಲಾ ಹಾಕಿದ್ದಾರೆ ಆದರೆ ವಿಶೇಷವಾಗಿ

ಕೆಲವು ಕಡೆ, ಎಲ್ಲಿ ಸ್ವಲ್ಪ ನೀರು ಇದೆಯೋ, ಅಂತಹ ಕಡೆ ಇವತ್ತು Paddy ಮತ್ತು ಸೂರ್ಯಕಾಂತಿ ಬೆಳೆಯತಕ್ಕಂಥಾದ್ದು ಮಾಡುತ್ತಿದ್ದಾರೆ ಅರಿಗೆ ಸಬ್ಸಿಡಿ in time ಇವತ್ತು ರೈತ ಸಂಪರ್ಕ ಕೇಂದ್ರಗಳಿಂದ ಸಿಗುತ್ತಿಲ್ಲ ಕೆಲವು ಕಡೆ ಹಣ ಬಿಡುಗಡೆಯಾಗಿದೆ ಆದರೆ ಇನ್ನೂ ಸುಮಾರು 50% ಜನರಿಗೆ ಏನು ತಲುಪಬೇಕಾಗಿತ್ತೋ, ಅದು ತಲುಪಿಲ್ಲ ಆದ್ದರಿಂದ ತಕ್ಷಣ ನೀವು seed supply ಮಾಡತಕ್ಕದ್ದನ್ನು ಮಾಡಬೇಕು ವಿಶೇಷವಾಗಿ ಅದಕ್ಕೆ ಸಬ್ಸಿಡಿ ಕೊಡತಕ್ಕಂಥಾದ್ದು ಆಗಬೇಕು ಅದು ಆಗಿಲ್ಲವೆಂದರೆ ಒಂದು ದೊಡ್ಡ ಅನಾಹುತವಾಗುತ್ತದೆ ಮತ್ತು ರೈತರಿಗೆ ನಾವು ಮೋಸ ಮಾಡಿದಂತಾಗುತ್ತದೆ ಎಂಬ ಮಾತನ್ನು ಇವತ್ತು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎರಡನೆಯದಾಗಿ, back water ನಿಂದ ಸಹ ಹಾನಿಯಾಗಿದೆ ಅದು ಬಾಗಲಕೋಟೆ ಇರಬಹುದು, ನಾರಾಯಣಪುರ ಡ್ಯಾಂ ಅಕ್ಕಪಕ್ಕದಲ್ಲಿ ಇರಬಹುದು ಅಥವಾ ಬೆಣ್ಣೆತೊರೆ ಇರಬಹುದು ಈ ಭಾಗದಲ್ಲೂ ಕೂಡ ಸಾಕಷ್ಟು ಹಳ್ಳಿಗಳಲ್ಲಿ ನೀರು ಬಂದು ತೊಂದರೆಯಾಗಿದೆ ಅಲ್ಲಿ ರಸ್ತೆ ಸಂಪರ್ಕವಂತೂ ಇಲ್ಲವೇ ಇಲ್ಲ ಅಲ್ಲಿ ಮಲೇರಿಯಾ ಮತ್ತು ಇನ್ನಿತರ ಬೇರೆ ಬೇರೆ ರೋಗಗಳು ಹರಡತಕ್ಕಂಥ ಸಾಧ್ಯತೆ ಇದೆ ಕೆಲವು ಕಡೆಗಳಲ್ಲಿ DHOಗಳ ಹತ್ತಿರ even ಕುಡಿಯುವ ನೀರು clean ಮಾಡುವುದಕ್ಕೆ ಹಾಕತಕ್ಕಂಥ Bleaching Powder ಇತ್ಯಾದಿಗಳು ಏನಿವೆಯೋ, ಅದೂ ಕೂಡ ಇಲ್ಲ ಪಂಚಾಯಿತಿಯವರಂತೂ ಅದಕ್ಕಾಗಿ ಹಣವನ್ನೇ ಇಟ್ಟಿಲ್ಲ ಆದ್ದರಿಂದ ಕೆಲು ಕಡೆಗಳಲ್ಲಿ ರೋಗ ರುಜಿನಗಳು ಈಗಾಗಲೇ ಹೆಚ್ಚಿಗೆ ಪ್ರಾರಂಭವಾಗಿವೆ ಆರೋಗ್ಯ ಇಲಾಕೆಯವರು ಇದರ ಬಗ್ಗೆ ಮುತುವರ್ಜಿ ವಹಿಸಿ, ಇದಕ್ಕಾಗಿ ಹಣವನ್ನು ಬೇಗನೇ ಬಿಡುಗಡೆ ಮಾಡಬೇಕು ರಾಜ್ಯ ಸರ್ಕಾರ ಮಹಾರಾಷ್ಟ್ರ Government ಗೆ ಹೇಳಬೇಕು ಹೇಳದೇ ಕೇಳದೇ ನೀರು ಬಿಡುವಂತಹ ಸ್ವಭಾವ ಅವರದಾಗಿದೆ ಆ ಮೇಲೆ ಅವರು blame ಅನ್ನು ನಮ್ಮ ಮೇಲೆ ಹಾಕುತ್ತಾರೆ ಕೊಲ್ಲಾಪುರ್ ಮತ್ತು ಸಾಂಗಲಿ, ನಮ್ಮ ಆಲಮಟ್ಟಿ ಡ್ಯಾಂನಿಂದ ಸುಮಾರು 72 ಮೀಟರ್ ಎತ್ತರ ಇದ್ದರೂ ಕೂಡ, ನಮ್ಮ ಹಳ್ಳಿಗಳು ಮುಳುಗತ್ತವೆ ಎಂದು ಅವರು ನೀರು ಬಿಡುಗಡೆ ಮಾಡುತ್ತಾರೆ ನೀರು ಬಿಡುಗಡೆ ಮಾಡಿ, ಇಲ್ಲಿ ನಮ್ಮ ಹಳ್ಳಿಗಳನ್ನು ಹಾಳು ಮಾಡುತ್ತಾರೆ ಕೊನೆಗೆ ಅವರು ನಿಮ್ಮ back water ನಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಇಲ್ಲಿ ನೀರು ಬಿಡುವುದಕ್ಕೆ ಒತ್ತಡ ಮಾಡುತ್ತಾರೆ ಈ ನೀರನ್ನು ನಾವು ಆಂಧ್ರಕ್ಕೆ ಬಿಡುತ್ತೇವೆ ಆಂಧ್ರಕ್ಕೆ ಬಿಟ್ಟ ಮೇಲೆ ಅವರು ಜುರುಲಾ ಪ್ರಾಜೆಕ್ಟ್‌ನಲ್ಲಿ ನೀರು ನಿಲ್ಲಿಸಿಕೊಳ್ಳುತ್ತಾರೆ ಅವರು ನೀರು ನಿಲ್ಲಿಸಿದ್ದನ್ನು ಬಿಟ್ಟರೆ ನಮ್ಮ ರಾಯಚೂರು ಭಾಗದಲ್ಲಿ ಹಳ್ಳಿಗಳಿಗೆ ತೊಂದರೆಯಾಗುತ್ತದೆ ಹೀಗೆ ಒಂದಕ್ಕೊಂದು effect ಇದೆ ಅದಕ್ಕಾಗಿ ಸಂಬಂಧಿಸಿದ ಮಹಾರಾಷ್ಟ್ರದ

ಮಂತ್ರಿಗಳ ಬಳಿ ತಕ್ಷಣ ಈ ಬಗ್ಗೆ ಮಾತನಾಡಬೇಕು ಕೊಯ್ನಾ ಡ್ಯಾಂನಿಂದ ನೀರು ಬಿಡುವಾಗ ಅಥವಾ ಉಜನಿ ಡ್ಯಾಂನಿಂದ ನೀರು ಬಿಡುವಾಗ, ಮೊದಲೇ ಎಷ್ಟು ಕ್ಯೂಸೆಕ್ಸ್ ನೀರು ಬಿಡುತ್ತಾರೆ ಎಂಬುದನ್ನು ಅವರು ತಿಳಿಸುವಂತೆ ಮಾಡಬೇಕು ಅವರು ನೀರು ಬಿಡುವ ಬಗ್ಗೆ warning ಮಾಡಿದರೆ ಇಲ್ಲಿ ಇರತಕ್ಕಂಥ ಜಿಲ್ಲಾಧಿಕಾರಿಗಳು, ನೀರಾವರಿ ಇಂಜಿನಿಯರ್ಸ್ alert ಆಗಿ, ಹಳ್ಳಿಯ ಜನರಿಗೆ ನೀರು ಬಿಟ್ಟಿರುವ ಬಗ್ಗೆ ಎಚ್ಚರಿಸುತ್ತಾರೆ ಇಲ್ಲದಿದ್ದರೆ, ಪಾಪ ಅವರು ಈ ಬಗ್ಗೆ unaware ಆಗಿರುತ್ತಾರೆ ತಕ್ಷಣ ರಾತ್ರೋರಾತ್ರಿ ನೀರು ಬಿಟ್ಟರೆ, ಎಲ್ಲರೂ ಕೂಡ ತೊಂದರೆಗೀಡಾಗುವುದೊಂದೇ ಅಲ್ಲ, ಪ್ರಾಣ ಹಾನಿಯೂ ಸಹ ಆಗುತ್ತದೆ ಬಡವರ ಜಾನುವಾರುಗಳು, ದವಸ ದಾನ್ಯಗಳು ಮತ್ತು ಸಂಪತ್ತು ನೀರಿನಲ್ಲಿ ಕೊಚ್ಚಿ ಹೋಗುತ್ತದೆ ಒಂದು ವರ್ಷಕ್ಕಾಗಿ ಹಳ್ಳಿಗಳಲ್ಲಿ ಇರತಕ್ಕವರು ಕೂಡಿಟ್ಟುಕೊಂಡಿರತಕ್ಕಂಥ ದಾನ್ಯಗಳೂ ಕೂಡ ಕೊಚ್ಚಿಕೊಂಡು ಹೋಗುವುದನ್ನು ನೀವು ನೋಡಿದ್ದೀರಿ ಹೋದ ಸಲ ಇದರಿಂದಾಗಿ ಎಷ್ಟು ಕಷ್ಟವಾಯಿತು, ಎಷ್ಟು ತೊಂದರೆಯಾಯಿತು ಎಂಬುದು ಎಲ್ಲರಿಗೂ ಕೂಡ ಗೊತ್ತಿದೆ ಆದ್ದರಿಂದಲೆ ಅದರ ಉಸ್ತುವಾರಿಗೆ ಮಾನ್ಯ ಶರದ್ ಪವಾರ್‌ರವರೇ ಸ್ವತಃ ಇಲ್ಲಿಗೆ ಬಂದಿದ್ದರು ಇದೆಲ್ಲವನ್ನೂ ಕೂಡ ನೀವು ನೋಡಿದ್ದೀರಿ ಇದು ಗೊತ್ತಿದ್ದೂ ಕೂಡ, ಮಹಾರಾಷ್ಟ್ರದವರಿಗೆ ನೀರು ಬಿಡುವ ಬಗ್ಗೆ ನೀವು ಎಚ್ಚರ ಮಾಡದೇ ಹೋದರೆ ಅಥವಾ ಅವರಿಗೆ warning ಕೊಡದೇ ಹೋದರೆ ಕಷ್ಟವಾಗುತ್ತದೆ ಇಲ್ಲಿನ ಅಧಿಆಕರಿಗಳು ಅಲ್ಲಿಗೆ ಹೋಗಿ, ಅವರನ್ನು ಸರಿಯಾಗಿ ಸಂಪರ್ಕ್ ಮಾಡಿ, ಈ ರೀತಿಯಾಗಿ ಯದ್ವಾತದ್ವಾ ನೀರು ಬಿಡತಕ್ಕದ್ದು ಆಗಬಾರದು ಎಂಬುದನ್ನು ಅವರ ಗಮನಕ್ಕೆ ತರತಕ್ಕದ್ದು ಬಹಳ ಮಹತ್ವದ್ದು ಎಂಬ ಮಾತನ್ನು ಹೇಳುತ್ತೇನೆ ಇವತ್ತು ಪ್ಯಾಕೇಜ್‌ನಲ್ಲಿ ಏನು ಹಣ ಬಂದಿದೆ, ಅದಕ್ಕೊಂದು ಯೋಜನೆ ಮಾಡಿ ಕಳುಹಿಸಿ, ಹಣ ಖರ್ಚು ಮಾಡುವುದಕ್ಕೆ ಏನಾಗಿದೆಯೋ ನನಗೆ ಗೊತ್ತಿಲ್ಲ ಹೋದ ಸಲ ಆ ಬಗ್ಗೆ ಇಲ್ಲಿ ಚರ್ಚೆ ಮಾಡಿದಾಗ, ಕೆಲವು ಮಾನ್ಯ ಸದಸ್ಯರು ನೀವು ಅದು ಮಾಡಬೇಡಿ,ಇದು ಮಾಡಬೇಡಿ, ಎಂದು ನೂರೆಂಟು ಕಂಡೀಷನ್ಸ್ ಹಾಕುತ್ತಾರೆಂದು ಹೇಳುತ್ತಿದ್ದರು

ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು, 108 condition ಹಾಕುತ್ತಾರೆಂದು ಹೇಳುತ್ತಿದ್ದರು 108 condition ಎಲ್ಲಾ ರಾಜ್ಯಗಳಿಗೂ ಹಾಕುತ್ತಾರೆ, ನಿಮ್ಮ ಒಂದೇ ರಾಜ್ಯಕ್ಕೆ ಹಾಕುತ್ತಾರೆಯೇ ? ಎಲ್ಲಾ ರಾಜ್ಯಗಳಲ್ಲಿ ಏನು condition ಇದೆಯೋ ಅದು ನಮ್ಮ ರಾಜ್ಯಕ್ಕೂ ಇದೆ ವಿದರ್ಭಪ್ಯಾಕೇಜ್‌ನಲ್ಲಿ ವಿದರ್ಭಕ್ಕೆ ಕೊಟ್ಟಿದ್ದಿರಬಹುದು, ಆಂಧ್ರಪ್ರದೇಶಕ್ಕೆ ಕೊಟ್ಟಿದ್ದಿರಬಹುದು ಮತ್ತೆ ಬೇರೆ ರಾಜ್ಯಗಳಿಗೆ ಕೊಟ್ಟಿದ್ದಿರಬಹುದು, ಕರ್ನಾಟಕಕ್ಕೂ

ಕೊಟ್ಟಿದ್ದಿರಬಹುದು ನಿಮಗೆ ಯಾವುದಾದರೂ condition ನಿಂದ ಖರ್ಚು ಮಾಡಲು ತೊಂದರೆ ಇದ್ದರೆ, ಇದನ್ನು ನಮಗೆ ರಿಲ್ಯಾಕ್ಸ್ ಮಾಡಿಕೊಡಿ ಎಂದು ಹೋಗಬೇಕು ನೀವು ಹೋಗಿದ್ದೀರಾ, ಕೇಳಿದ್ದಿರಾ, ಪ್ರಯತ್ನ ಮಾಡಿದ್ದಿರಾ? ಯಾವುದೇ ಒಂದು ಸಹಾಯವನ್ನು ಪಡೆದುಕೊಳ್ಳಬೇಕಾದರೆ ಒಂದು ಸಾರಿ ಅಲ್ಲ ನೂರು ಸರಿ ಹೋಗಬೇಕು ನಿಮ್ಮಲ್ಲೆ ನಾವು ಕಾಗದ ಬರೆದುಕೊಟ್ಟ ತಕ್ಷಣ ಮಂಜೂರು ಮಾಡಿಕೊಡುತ್ತಿರಾ? ಹತ್ತು ಸಾರಿ ಫೋನ್ ಮಾಡಿದ ಮೇಲೆ ಹತ್ತು ಕೆಲಸದಲ್ಲಿ ಒಂದು ಸ್ಯಾಂಕ್ಷನ್ ಮಾಡುತ್ತಿರಿ ನಿಮ್ಮಲ್ಲೆ ಈ ಪರಿಸ್ಥಿತಿ ಇದ್ದ ಮೇಲೆ ಸ್ವಭಾವಿಕಾಗಿ ದೇಶದ ಎಲ್ಲಾ ಆಡಳಿತದಲ್ಲಿ ಹೆಚ್ಚು ಕಡಿಮೆ ಇರುತ್ತದೆ ಅದಕ್ಕೆ ನಾವು ಮನಸ್ಸು ಮಾಡಿ ಹೋಗಬೇಕಲ್ಲ?

ನಮ್ಮ ಇಲಾಖೆಗೆ ದುಡ್ಡು ತರಬೇಕು, ಅದು ಹಾರ್ಟಿಕಲ್ಚರ್ ಇರಬಹುದು, ಅಗ್ರಿಕಲ್ಚರ್ ಇರಬಹುದು, ಸಾಯಿಲ್ ಕನ್ಸರ್ವೇಷನ್ ಇರಬಹುದು, ಫಾರೆಸ್ಟ್ ಇಲಾಖೆಯದಿರಬಹುದು ಅದಕ್ಕೆ ನಾವು ಮನಸ್ಸು ಮಾಡಿ ಇಚ್ಛಾಶಕ್ತಿಯನ್ನು ತೋರಿಸಿ ಆ ಕೆಲಸವನ್ನು ಮಾಡಿದಾಗ ಮಾತ್ರ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿದೆ, ಇಲ್ಲದಿದ್ದರೆ ಕೇಂದ್ರ ಸರ್ಕಾರ ಕೊಟ್ಟ 2684 ಕೋಟಿ ಹಣ ಹಾಗೇ ಉಳಿದು ಹೋಗುತ್ತದೆ, ಇಲ್ಲವೆಂದರೆ, ಒಂದು ದಿವಸ, ನೀವು ಅದನ್ನು ಉಪಯೋಗಿಸಿಲ್ಲವೆಂದು ಆಡಿಟ್ ಅಬ್ಜಕ್ಷನ್ ಮತ್ತೊಂದು ಆಗುತ್ತದೆಂದು ನಿಲ್ಲಿಸತಕ್ಕಂತಹ ಸಾಧ್ಯತೆ ಕೂಡ ಆಗುತ್ತದೆ ಯಾವಾಗ ನೀವೇ ಜಿಲ್ಲಾಧಿಕಾರಿಗಳಲ್ಲಿ ಹಣವಿದೆ, ಅವರು ಖರ್ಚು ಮಾಡಿಲ್ಲ, ಅವರು ಖರ್ಚು ಮಾಡುವವರೆಗೆ ನಾವು ಹಣವನ್ನು ಬಿಡುಗಡೆ ಮಾಡುವುದಿಲ್ಲವೆಂದು ನೀವು ಹೇಗೆ ಹೇಳುತ್ತೀರೋ ನಾಳೆ ಕೇಂದ್ರ ಸರ್ಕಾರ ಕೂಡ ಅದೇ ನಿಲುವನ್ನು ತೆಗೆದುಕೊಂಡರೆ ಎಲ್ಲರಿಗೂ ತೊಂದರೆಯಾಗುತ್ತದೆ ಆ ತೊಂದರೆಗೆ ಇಲ್ಲಿ ಈ ರಾಜ್ಯವು ಸೇರಿದಂತೆ ಯಾರು ಕೂಡ ಒಳಪಡಬಾರದು ತಕ್ಷಣ ಈ ಬಗ್ಗೆ ಚಿಂತನೆ ಮಾಡಿ ಈಗಾಗಲೇ ಒಂದುವರೆ ವರ್ಷದಲ್ಲಿಯು ಕೂಡ ಸಂಪೂರ್ಣವಾಗ ಹಣವನ್ನು ಉಪಯೋಗ ಮಾಡುವುದಕ್ಕೆ ಇಮಗೆ ಶಕ್ತಿ ಇಲ್ಲವೆಂದರೆ ನಾನೇನು ಹೇಳಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ ಹೀಗೆ ಇವತ್ತು ಸಾಕಷ್ಟು ಹಣವಿದ್ದರೂ ಕೂಡ ಖರ್ಚು ಮಾಡುವ ಶಕ್ತಿ ಇಲ್ಲವೆಂಬದು ಒಂದು ಎರಡನೆಯದಾಗಿ, ರಾಜ್ಯ ಸರ್ಕಾರದ ಏನು ಹಣ ಬಿಡುಗಡೆ ಮಾಡಬೇಕಾಗಿತ್ತು ಅದನ್ನು ಬಿಡುಗಡೆ ಮಾಡುತ್ತಿಲ್ಲ, ಪ್ರತಿಯೊಬ್ಬ ಜಿಲ್ಲಾಧಿಕಾರಿಗಳು ಗೋಳಾಡುತ್ತಿದ್ದಾರೆ ಏಕೆಂದರೆ, ಇವರು ಪ್ರತಿಯೊಂದು ಜಿಲ್ಲೆಗೆ ಹೋಗಿ ಹೆದರಿಸುವ ಕೆಲಸವನ್ನು ಮಾಡುತ್ತಿದ್ದಾರೆ, ಅವರೇನು ಮಾಡುತ್ತಾರೆ? ಏನ್ರಿ ನಿಮ್ಮಲ್ಲಿ ಹಣವಿದೆ ತಾನೆ ಎಂದು ಜಿಲ್ಲಾಧಿಕಾರಿಗಳನ್ನು ಕೇಳಿದರೆ, ಅವರು ಹೆದರಿಕೊಂಡು, ಒಂದು

ಕೋಟಿ ಇದೆ ಸಾರ್ ಎಂದು ಹೇಳುತ್ತಾರೆ ನೀವು ಕೊಟ್ಟ 1 ಕೋಟಿ ಹಣವನ್ನು ಹಾಗೆ ಇಟ್ಟುಕೊಂಡು, ನೀವು ಎಷ್ಟು ಜನ ಮಂತ್ರಿಗಳು ಜಿಲ್ಲೆಗಳಿಗೆ ರಿವ್ಯೂ ಮಾಡಲು ಹೋದಾಗ, ಜಿಲ್ಲಾಧಿಕಾರಿಗಳು ಅಷ್ಟೆ ತೋರಿಸುತ್ತಾರೆ ಅದೇನೂ ಬದಲಾವಣೆಯಾಗುವುದಿಲ್ಲ ಆ 1 ಕೋಟಿ ಬಿಟ್ಟು, ಹೆಚ್ಚು ಹಣ ಬಂದಿದೆ, ಹೆಚ್ಚು ಕೆಲಸ ಮಾಡಿದ್ದೇವೆಂದು ಹೇಳತಕ್ಕಂಥ ಸಾಮರ್ಥ್ಯ ಆ ಜಿಲ್ಲಾಧಿಕಾರಿಗೂ ಇಲ್ಲ, ನೀವು ಕೂಡ ಹಣವನ್ನು ಬಿಡುಗಡೆ ಮಾಡುತ್ತಿಲ್ಲ 1 ಕೋಟಿ ಬಿಡುಗಡೆ ಮಾಡಿ ಸುಮಾರು ಒಂದು ತಿಂಗಳಾಯಿತು, ಆದಾದ ಮೇಲೆ ಏನು ಮಾಡಿದ್ದೀರಿ, ಏಕೆ ಮಾಡಿಲ್ಲ, ಏನು ತೊಂದರೆ ಇದೆ? ಈಗ ಯಡಿಯೂರಪ್ಪನವರು, ಸಾಕಷ್ಟು ಹಣವಿದೆ, ತುಂಬಿ ತುಳುಕುತ್ತಿದೆ ಎಂದು ಹೇಳುತ್ತಾರೆ, ಸ್ವಾಮಿ ಅಲ್ಲಿ ರೈತರಿಗಾಗಿ ಚೆಲ್ಲಿ ಇಂತಹ ಅತಿವೃಷ್ಟಿಯಲ್ಲಿ ಜನವರು ತೊಂದರೆ ಪಡುತ್ತಿರುವಾಗ, ಅಲ್ಲಿ ರಸ್ತೆ ದುರಸ್ತಿಗಾಗಿ ಆಗಲಿ, ಟ್ಯಾಂಕ್ ದುರಸ್ತಿಗಾಗಿ ಆಗಲಿ ಎಲ್ಲಾ ಕಡೆ ಕೊಡಿ ನೀವು ಕೊಡದೇ ಸುಮ್ಮನೆ ನಮ್ಮಲ್ಲಿ ಹಣವಿದೆ ಹಣವಿದೆ ಎಂದು ಹೇಳಿದರೆ ಹೇಗಾಗುತ್ತದೆಂದರೆ ನೀವು ಬಡವನಿಗೆ ಹಣವನ್ನು ಕೊಟ್ಟು ಅಣಕಿಸಿದಂತಾಗುತ್ತದೆ ಈ ಸಂದರ್ಭದಲ್ಲಿ ನನಗೊಂದು ಕತೆ ನೆನಪಿಗೆ ಬರುತ್ತಿದೆ

ಯಡಿಯೂರಪ್ಪನವರು ಹೇಗೆಂದರೆ, ಕೊಟ್ಟು ಅಣಕಿಸುವುದು ಜಾಸ್ತಿ, ಈಗ ಕೊಡುತ್ತಲೇ ಇಲ್ಲ, ಆ ಮಾತು ಬೇರೆ, ಕೊಟ್ಟರೆ ಹೇಗೆಂದರೆ ಅದಕ್ಕೆ ಒಂದು ಕಥೆ ಹೇಳುತ್ತೇನೆ ಇಬ್ಬರು ಗೆಳೆಯರಿದ್ದರು, ಒಬ್ಬ ಅತ್ಯಂತ ಶ್ರೀಮಂತನಿದ್ದ, ಇನ್ನೊಬ್ಬ ಬಡವನಿದ್ದ ಶ್ರೀಮಂತನಿದ್ದವನು ದುಬೈಗೆ ಹೋಗಿ ಅಲ್ಲಿ ಎಂಜಿನಿಯರಿಂಗ್ ಅದು ಇದು ಕೆಲಸ ಮಾಡಿಕೊಂಡು ಸಾಕಷ್ಟು ಹಣವನ್ನು ಸಂಪಾದನೆ ಮಾಡಿದ ಇನ್ನೊಬ್ಬ ಅವನ ಕ್ಲಾಸ್ ಮೇಟ್, ಬಡತನದಲ್ಲಿ ರೈತನಾಗಿ, ಇಲ್ಲೆ ಇರಬೇಕಪ್ಪ, ಮನೆಬಿಟ್ಟು ಏತಕ್ಕೆ ಹೋಗುವುದೆಂದು ಅವನು ಊರಿನಲ್ಲೇ ಉಳಿದುಕೊಂಡ ದುಬೈನಲ್ಲಿದ್ದಂಥ ಅವನ ಗೆಳೆಯ ಊರಿಗೆ ಬಂದು ಅವನು ಏನು ಹೇಳಿದನೆಂದರೆ, ನಡೆಯಪ್ಪ, ನಮ್ಮ ಸಂಬಂಧಿಕರದು ಮದುವೆ ಇದೆ, ನೀವು ನಾವು ಕೂಡಿ ಹೋಗೋಣ, ನಿಮಗೂ ಕೂಡ ಅವರ ಪರಿಚಯವಿದೆ ಎಂದು ಹೇಳುತ್ತಾನೆ, ಅವಾಗ ಅವು, ಇಲ್ಲಪ್ಪ ನೀನು ದೊಡ್ಡ ಶ್ರೀಮಂತ, ಅವರು ಅನುಕೂಲಸ್ಥರು ನಾನು ಬಡವ, ನನ್ನ ಮೈ ಮೇಲೆ ಬಟ್ಟೆ ಇಲ್ಲ, ನಾನು ಹೇಗೆ ಬರಲಿ, ನಾನು ಬರುವುದಕ್ಕಾಗುವುದಿಲ್ಲಪ್ಪ ನೀನೆ ಹೋಗು ಎಂದು ಹೇಳಿದ ಏನು ನಿನಗೆ ಬಟ್ಟೆ ಇಲ್ಲದಿದ್ದರೇನಾಯಿತು, ನಾನಿದ್ದೇನಲ್ಲ ಬಾ ಎಂದ ಇಲ್ಲಪ್ಪ ನಾನು ಬರುವುದಕ್ಕಾಗುವುದಿಲ್ಲ, ನೀನು ನನ್ನ ಗೆಳೆಯನಷ್ಟೆ, ನನಗೆ ಅವಮಾನವಾಗುತ್ತದೆ, ಜನರು ಕೇಳುತ್ತಾರೆ, ನಿನ್ನ ಪರಿಸ್ಥಿತಿ, ನನ್ನ ಪರಿಸ್ಥಿತಿ ನೋಡಿ ಜನ ಕೇಳುತ್ತಾರೆ, ಅದಕ್ಕಾಗಿ ನಾನು

ಬರುವುದಿಲ್ಲವೆಂದು ಇವನು ಸಾಕಷ್ಟು ಹೇಳುತ್ತಾನೆ ಇಲ್ಲ ಬಾಬಾ ಎಂದು ಬಲವಂತ ಅವನು ತಂದಂಥ ಬಟ್ಟೆಗಳಾದ ಸ್ಯೆರ್ವಾನಿ, ಪೈಜಾಮ, ಟೋಪಿ, ಶೂಸ್ ಕೊಟ್ಟು ಅವನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾನೆ ಒಂದು ಕಡೆ ಸಂಬಂಧಿಕರ ಮನೆಗೆ ಇನ್ವಿಟೇಷನ್ ಕೊಡುವುದಕ್ಕೆ ಹೋಗುತ್ತಾನೆ ಹೋದ ತಕ್ಷಣ, ಬಡ ಗೆಳೆಯ ಹೇಗೆ ಬದುಕಿದ್ದೆಲ್ಲಾ ಅವರಿಗೆಲ್ಲಾ ಗೊತ್ತಿತ್ತು, ಹೊಸ ಬಟ್ಟೆಗಳನ್ನು ನೋಡಿದ ತಕ್ಷಣ, ಏನಪ್ಪ ಇಲ್ಲಿಯವರೆಗೆ ಹರಕಲು ಬಟ್ಟೆಗಳನ್ನು ಹಾಕಿಕೊಂಡು ಓಡಾಡುತ್ತಿದ್ದ ಎಂದು ಕೆಳಗಿನಿಂದ ಮೇಲಿನವರೆಗೆ ನೋಡುತ್ತಾರೆ ಯಾರಿಗೆ ಇನ್ವಿಟೇಷನ್ ಕೊಡಲು ಹೋಗಿದ್ದರೋ ಆ ಮನೆಯವರು ಅವನ ಪೈಜಾಮವನ್ನು ನೋಡುತ್ತಿದ್ದರು, ತಕ್ಷಣ ಶ್ರೀಮಂತ ಗೆಳೆಯ, ಯಡಿಯೂರಪ್ಪನವರು, ಅರೆ ಆ ಪೈಜಾಮ ಇರಲಿಲ್ಲ, ನಾನು ದುಬೈನಿಂದ ಬರುವಾಗ ತಂದೆ, ಅವರ ಹತ್ತಿರವಿಲ್ಲವೆಂದು ಹೇಳಿದರು ಅದಕ್ಕೆ ನಾನು ಕೊಟ್ಟೆ ಎಂದು ಹೇಳಿದ ಅವನು ಲಬೊ ಲಬೊ ಎಂದು ಬಡಿದುಕೊಳ್ಳುತ್ತಿದ್ದ ಏನು ಮಾಡುವುದೆಂದು ತಿಳಿಯಲಿಲ್ಲ, ಇನ್ವಿಟೇಷನ್ ಕೊಟ್ಟು ಹೊರಗಡೆಗೆ ಬಂದರು ಏನಪ್ಪ ನನಗೆ ಅವಮಾನ ಮಾಡುವುದಿಲ್ಲವೆಂದು ಜೊತೆಗೆ ಕರೆದುಕೊಂಡು ಬಂದು, ಅವರ ಮುಂದೆ ಈ ಪೈಜಾಮ ನನ್ನದಲ್ಲವೆಂದು ಅವಮಾನ ಮಾಡಿ, ನನಗಿದ್ದ ಮರ್ಯಾದೆಯನ್ನು ಕಳೆದೆ, ಅದಕ್ಕೆ ನಾನು ನಿನ್ನ ಜೊತೆಯಲ್ಲಿ ಬರುವುದಿಲ್ಲವೆಂದು ಹೇಳಿದ್ದು ಎಂದು ಹೇಳಿದ, ತಪ್ಪಾಯಿತಪ್ಪ ಇನ್ನು ಮುಂದೆ ಹಾಗೆ ಹೇಳುವುದಿಲ್ಲ, ಇನ್ನು ಎರಡು ಮನಗಳಿವೆ, ಹೋಗೋಣ ನಾನೇನು ಮಾತನಾಡುವುದಿಲ್ಲ ನಡೆ ಎಂದು ಎರಡನೇ ಮನೆಗೆ ಕರೆದುಕೊಂಡು ಹೋದ

ಆ ಮನೆಗೆ ಹೋಗಿ ಇನ್ವಿಟೇಷನ್ ಕೊಟ್ಟ ಕೂಡಲೇ, ಅವರು ಕೂಡ ಇವನ ಮೇಲೆ ಕೆಳಗೆಲ್ಲಾ ನೋಡಿದರು ಸೆರ್ವಾನಿದು ಗುಂಡಿ ಸ್ವಲ್ಪ ಮಿಂಚುತ್ತಿತ್ತು ಆ ಕಡೆಗೆ ಗಮನ ಹೋದ ಮೇಲೆ, ತಕ್ಷಣ ಈ ಶ್ರೀಮಂತ ಗೆಳೆಯ, ಈ ಸೆರ್ವಾನಿ ನನ್ನದು, ಆ ಗುಂಡಿ ನೋಡುತ್ತಿದ್ದರಲ್ಲ, ಅದನ್ನು ದುಬೈನಿಂದ ತಂದದ್ದು, ಅವನಿಗೆ ಕೊಟ್ಟಿದ್ದೇನೆಂದು ಹೇಳಿದ ಮನೆಯಿಂದ ಹೊರಗೆ ಬಂದ ತಕ್ಷಣ, ಬಡ ಗೆಳೆಯ, ಇನ್ನು ಮುಂದು ನಿನ್ನ ಸಹವಾಸಬೇಡಪ್ಪ, ಕೊಟ್ಟಿದ್ದಕ್ಕೆಲ್ಲಾ ನೀನು ಅಣಗಿಸಿಕೊಂಡು ತಿರುಗುತ್ತಿದ್ದಿಯಾ ಮತ್ತೆ ಎಲ್ಲಾ ಕಡೆಗೆ ನನಗೆ ಅವಮಾನ ಮಾಡುತ್ತಿದ್ದಿಯಾ, ನನಗೆ ನಿನ್ನಂಥ ಗೆಳೆಯನೇ ಬೇಡವೆಂದು ಅವನು ಸಾಕಷ್ಟು ಬೇಜಾರುಪಟ್ಟು ಕೊಂಡು ಹೇಳಿದ ಕೊನೆಗೆ ಶ್ರೀಮಂತ ಗೆಳೆಯ, ಇಲ್ಲಪ್ಪ ತಪ್ಪಾಯಿತು ನನ್ನನ್ನು ಕ್ಷಮಿಸು ಎಂದು ಕೈ ಜೋಡಿಸುತ್ತೇನೆಂದು, ಕರೆದುಕೊಂಡು ಮೂರನೇ ಮನೆಗೆ ಹೋಗುತ್ತಾನೆ ಆ ಮನೆಯಲ್ಲು ಕೂಡ ಇನ್ವಿಟೇಷನ್

ಅನ್ನು ಕೊಟ್ಟರು, ಆ ಮನೆಯವರು ಕೂಡ, ಏನಪ್ಪ, ದಿನಾ ಓಡಾಡುತ್ತಿದ್ದ ಇವನ ಬಟ್ಟೆ ಈ ರೀತಿ ಇರಲಿಲ್ಲ, ಇವತ್ತು ನೋಡಿದರೆ ಪೈಜಾಮನೂ ಚೆನ್ನಾಗಿದೆ, ಸೆರ್ವಾನಿ ಚೆನ್ನಾಗಿದೆ, ರೀವಿ ಚೆನ್ನಾಗಿದೆ, ಏನು ತಿಳಿಯುತ್ತಿಲ್ಲವೆಂದು ಮೂರ್ನಾಲ್ಕು ಸಾರಿ ಕೆಳಗಿ ನಿಂದ ಮೇಲಿನವರೆಗೆ ನೋಡಿದ, ಆ ಮನೆಯ ಯಜಮಾನ ಟೋಪಿ ಕಡೆ ನೋಡುತ್ತಿರುವಾಗ, ಶ್ರೀಮಂತ ಗೆಳೆಯ, ಯಡಿಯೂರಪ್ಪನವರು, ಈ ಟೋಪಿ ನನ್ನದೇ ದುಬೈನಿಂದ ತಂದು ಕೊಟ್ಟಿದ್ದು ಎಂದು ಹೇಳಿದ ಮನೆಯಿಂದ ಹೊರಗೆ ಬಂದ ಮೇಲೆ ಆ ಬಡ ಗೆಳೆಯ, ಮಾರಾಯ ನಿನ್ನ ಟೋಪಿಯು ಬೇಡ, ನಿನ್ನ ಸೆರ್ವಾನಿನೂ ಬೇಡ, ನಿನ್ನ ಪೈಜಾಮನೂ ಬೇಡ ಎಲ್ಲವನ್ನು ತೆಗೆದುಕೊಂಡು ಹೋಗು, ನನಗೆ ಮರ್ಯಾದೆ ಇದ್ದರೆ ಸಾಕು ನಾನು ಅಂಡರ್ ವೇರ್, ಬನಿಯ್ ನಲ್ಲೆ ಮನೆಗೆ ಹೋಗುತ್ತೇನೆಂದು ಹೇಳುತ್ತಾನೆ ಹಾಗೆ ಯಡಿಯೂರಪ್ಪನವರು ಯಾವಾಗಲೂ ಕೂಡ, ಇದು ನನ್ನದು 10 ಕೋಟಿ, ಈ 2 ಕೋಟಿ ನನ್ನದು, ಈ 1 ಕೋಟಿ ನನ್ನದು ಎಂದ ಹೇಳುತ್ತಾರೆ ಅದಕ್ಕೆ ಜನರೇನು ಹೇಳುತ್ತಾರೆಂದರೆ, ಯಪ್ಪಾ, 1 ಕೋಟಿ, ಕೋಟಿ ತೆಗೆದುಕೊಂಡು ಏತಕ್ಕೆ ಅವಮಾನ ಮಾಡಿಸಿಕೊಳ್ಳುವುದು, ವಾಪಸ್ ಕೊಟ್ಟರೆ ಸಾಕೆಂದು ಇಲ್ಲಿಗೆ ಬಹಳಷ್ಟು ಜನ ಬಂದಿದ್ದಾರೆ ಅದಕ್ಕಾಗಿ ನೀವು ಹಿಂದೆ ರೈತರಿಗೆ ಕೊಟ್ಟು ಇದು ನನ್ನ ದುಡ್ಡು, ಇದು ನನ್ನ ದುಡ್ಡು, ಇದನ್ನು ನಾನು ಮಾಡಿದ್ದೇನೆಂದು ಅಣಕಿಸುವುದಕ್ಕೆ ಹೋಗಬೇಡಿ, ಆ ರೀತಿ ಹೇಳಿದರೆ ಯಾವ ಸ್ವಾಭಿಮಾನಿ ರೈತನೂ ಕೂಡ ಒಪ್ಪುವಂತಿಲ್ಲ ಅದಕ್ಕಾಗಿ ನೀವು ನಿಮ್ಮ ಇತಿಮಿತಿಯಲ್ಲಿ ಕೆಲಸ ಮಾಡಿ, ಜನರ ಸಮಸ್ಯೆಗಳಿಗೆ ಸ್ಪಂಧಿಸತಕ್ಕಂಥಾದ್ದನ್ನು ಮಾಡಿ ಅವರ ಕೆಲಸ ನಮ್ಮ ಕೆಲಸವೆಂದು ತಿಳಿದುಕೊಂಡು ಮಾಡಿದರಾಯಿತು ಅದು ಬಿಟ್ಟು ನಾವು ಹೆಸರು ಗಳಿಸಿಕೊಳ್ಳಬೇಕು, ಯಾವುದೇ ರೀತಿಯಿಂದ ನಮ್ಮ ವೈಯಕ್ತಿಕ ಹೆಸರು ಬರಬೇಕೆಂದು ಮಾಡುತ್ತಿದ್ದೀರಿ, ದಯವಿಟ್ಟು ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ

ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ ಅತೀವೃಷ್ಟಿಯಿಂದ ಇವತ್ತು ಏನು ಜನ ತೊಂದರೆಯಲ್ಲಿದ್ದಾರೆ ಅವರಿಗೆ ನಾವು ಸಹಾಯ ಮಾಡತಕ್ಕಂತಹ ಕೆಲಸ ಮಾಡದೇ ಹೋದರೆ ಖಂಡಿತವಾಗಿ ಜನ ನಿಮ್ಮನ್ನು ಕ್ಷಮಿಸುವುದಿಲ್ಲ ನೀವು ಇಲ್ಲಿ ಇದ್ದಾಗ ಹೇಳುತ್ತಿದ್ದಿರಿ ನಿಮಗೆ ಜನ ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆ ಎಂದು ಹೇಳುತ್ತಿದ್ದೀರಿ ನಿಮಗೆ ಸರಿಯಾದ ಸಮಯದಲ್ಲಿ ಯಾವಾಗ ಹೊಡೆಯಬೇಕು ಆಗ ಬ್ಯಾಲೆಟ್ ಬಾಕ್ಸ್‌ನಲ್ಲಿ ಬ್ಯಾಲೆಟ್‌ನಿಂದ ಜನ ಹೊಡೆಯುತ್ತಾರೆ ನಿಮ್ಮ ಹಾಗೆ ಬಾಡಿಗೆ ಯೂಸ್ ಮಾಡಿ ಎಂದು ಹೇಳುವುದಿಲ್ಲ ನಾವು ಆ ಬ್ಯಾಲೆಟ್‌ನಿಂದ ಹೊಡೆದರೆ ನಿಮ್ಮ ಸರ್ವನಾಶವಾಗುತ್ತದೆ ಆಗ

ಇಲ್ಲಿ ಒಳ್ಳೆಯ ಸರ್ಕಾರ ಬಹುತ್ತದೆ ಅದಕ್ಕೋಸ್ಕರ ಕನಿಷ್ಟ ಪಕ್ಷ ನೀವು ಒಂದಾದರೂ ಒಳ್ಳೆಯ ಕೆಲಸ ಮಾಡಿ ತೊಂದರೆಯಲ್ಲಿದ್ದಾಗ ಅವರಿಗೆ ಸ್ಪಂದಿಸತಕ್ಕಂತಹ ಕೆಲಸ ನೀವು ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ ವಿಶೇಷವಾಗಿ ಹಣಕಾಸಿನ ಸಚಿವರು ಮತ್ತು ಕಂದಾಯ ಸಚಿವರು ಹಣ ಬಿಡುಗಡೆ ಮಾಡಿ ಸುಮ್ಮನೆ ಹೇಳುವುದು ಬೇಡ ನೀವಿಬ್ಬರೂ ಗೆಳೆಯರೇ ಇದ್ದೀರಿ ದುಡ್ಡು ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ನಿಮಗೆ ನನಗೆ ಗೊತ್ತಿಲ್ಲ ತೊಂದರೆ ಇಲ್ಲವೆಂದು ಹೇಳುತ್ತೀರಿ ಆದರೆ ಅಲ್ಲಿ ದುಡ್ಡು ಇಲ್ಲ ನಾನು ಅನೇಕ ಸಾರಿ ಹೇಳುತ್ತೇವೆ ಬೀಗರ ಮೇಲೆ ಪ್ರೀತಿ, ಅಕ್ಕಿ ಮೇಲೆ ಆಸೆ ಅಂದ ಹಾಗೆ, ಜನರ ಮೇಲೆ, ರೈತರ ಮೇಲೆ ಪ್ರೀತಿ, ಆದರೆ ದುಡ್ಡು ಇದೆ ಎಂದು ಹೇಳಿ ಉಳಿಸಿಕೊಳ್ಳುವುದು ದುಡ್ಡಿನ ಮೇಲೆಯೂ ಪ್ರೀತಿ ಬಹಳ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಬಹಳ ಚೆನ್ನಾಗಿ ಹೇಳುತ್ತಿದ್ದಾರೆ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ನಮಗೆ ಹಣ ಇಲ್ಲ ನಿಮಗೆ ಪಂಪ್, ಮೋಟರ್ ಮತ್ತು ಪೈಪ್ ಕೊಂಡುಕೊಳ್ಳುವುದಕ್ಕೆ ಹಣ ಇಲ್ಲ ಏಕೆ ಹೀಗೆಲ್ಲಾ ಸುಮ್ಮನೆ ಹೇಳುತ್ತೀರಿ? ನೆನ್ನೆ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ ನಮ್ಮ ಜಿಲ್ಲಾ ಮಂತ್ರಿಗಳಿಗೆ ಹೇಳಿದ್ದೇನೆ, ಡಿಸಿಯವರ ಹತ್ತಿರ ಕೇಳಿದರೆ ಒಂದೇ ಒಂದು ನಯಾಪೈಸಾ ಇಲ್ಲವೆಂದು ಹೇಳುತ್ತಾರೆ ಕೋಲಾರ ಜಿಲ್ಲೆಯ ಹನ್ನೊಂದು ತಾಲ್ಲೂಕುಗಳು ಕೂಡ ಬರದಲ್ಲಿ ಬೆಂಡಾಗಿವೆ ಕುಡಿಯುವುದಕ್ಕೆ ನೀವು ಕೊಡುವಂತಹ ಶಕ್ತಿ ಇರಬೇಕು ಕುಡಿಯುವ ನೀರಿಗೆ ದುಡ್ಡು ಕೊಡುವ ಶಕ್ತಿ ಇಲ್ಲವೆಂದರೆ ಸುಮ್ಮನೆ ಏಕೆ ಹೇಳುತ್ತಿರಿ?

ಶ್ರೀ ಜಗದೀಶ್ ಶೆಟ್ಟರ್ ಕೋಲಾರ ಜಿಲ್ಲೆಗೆ ಐದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಮಾತನಾಡುವಾಗ ಹೇಳಿದ್ದೇನೆ, ಎಇಲ್ಲ ಇದೆ ಐದು ಕೋಟಿ ರೂಪಾಯಿ?

(ಗೊಂದಲ)

ಶ್ರೀ ಕೆ ಶ್ರೀನಿವಾಸಗೌಡ ಕೋಲಾರ ಜಿಲ್ಲೆಯಲ್ಲಿ ಮಳೆ ಇಲ್ಲವೆಂದು ನಾವು ಉಳುಮೆ ಮಾಡಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ 500 ಲಕ್ಷ ರೂಪಾಯಿಗಳು ಎಲ್ಲಿ ಇವೆ ಎಂದು ತೋರಿಸಿ ನೀವು ಬೋರ್‌ವೆಲ್ ಡಿಗ್ ಮಾಡಿರುವವರಿಗೆ ಕಂಟ್ರ್ಯಾಕ್ಟರ್‌ಗೆ ದುಡ್ಡು ಕೊಟ್ಟಿಲ್ಲ ಜಿಲ್ಲಾ ಪಂಚಾಯಿತಿಯವರಿಗೆ ಹೋಗಿ ಕೇಳಿ

ಶ್ರೀ ಕೆ ಶ್ರೀನಿವಾಸಗೌಡ ಜಿಲ್ಲಾ ಪಂಚಾಯಿತಿಯುವರೂ ನಮ್ಮಲ್ಲಿ ಬೇಕಾದಷ್ಟು ದುಡ್ಡು ಇವೆ ಎಂದು ಹೇಳುವವರು ಈಗಲಾದರೂ ಕುಡಿಯುವ ನೀರಿನ ಕಡೆ ಗಮನ ಕೊಡಿ ಸ್ವಾಮಿ ನಮ್ಮ ಕಡೆ ಮಳೆಯೇ ಇಲ್ಲ

ಶ್ರೀ ಆಲಂಗೂರು ಶ್ರೀನಿವಾಸ್ ತಾವು ಹೇಳಿದ ಹಾಗೆ ಡ್ರಿಲ್ ಮಾಡಿದ ಹಣ ಕೊಡುವುದಕ್ಕಾಗಿಲ್ಲ ಇನ್ನೂ ಸ್ವಲ್ಪ ಹಣ ಬರಬೇಕಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಒಪ್ಪಿಕೊಳ್ಳುತ್ತಿದ್ದಾರೆ ದುಡ್ಡು ಕೊಟ್ಟಿಲ್ಲ ಬಾಕಿ ಇದೆ ಎಂದು ಹೇಳುತ್ತಿದ್ದಾರೆ

ಶ್ರೀ ಆಲಂಗೂರು ಶ್ರೀನಿವಾಸ್ ಈಗಾಗಲೇ ಐದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೆ, ಇದು ಸಾಕಾಗುವುದಿಲ್ಲ ಇನ್ನು ಕೂಡ ಐದು ಕೋಟಿ ರೂಪಾಯಿಗಳು ಬೇಕಾಗುತ್ತವೆ

ಶ್ರೀ ಕೆ ಶ್ರೀನಿವಾಸಗೌಡ ಸ್ವಾಮಿ ನೀವು ಕೊಟ್ಟಿರುವ ಐದು ಕೋಟಿ ರೂಪಾಯಿಗಳನ್ನು ಎಲ್ಲಿ ಖರ್ಚು ಮಾಡಿದ್ದೀರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಐದು ಕೋಟಿ ಖರ್ಚು ಮಾಡಿರುವವರು ಬೋರ್‌ವೆಲ್ ಡ್ರಿಗ್ ಮಾಡಿರುವವರಿಗೆ ಏಕೆ ಹಣ ಕೊಡಲಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಕುಡಿಯುವ ನೀರಿಗೆ ಹಾಹಾಕಾರ ಇದೆ ನೀವು ಸುಮ್ಮನೆ ಸುಳ್ಳು ಹೇಳಬೇಡಿ ಒಂದು ಪೈಸೆ ಹಣ ಬಿಡುಗಡೆ ಆಗಿಲ್ಲ

ಶ್ರೀ ಆಲಂಗೂರು ಶ್ರೀನಿವಾಸ ಹಣ ಸಾಕಾಗುವುದಿಲ್ಲ ಐದು ಕೋಟಿ ರೂಪಾಯಿ ಅಂತೂ ಬಿಡುಗಡೆ ಮಾಡಿದ್ದೇವೆ ಇನ್ನೂ ಬೇಕಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಜಿಲ್ಲೆಯಲ್ಲಿ ಯಾರಿಗೆ ಕೊಟ್ಟಿದ್ದೀರಿ ಎಂದು ಮೊದಲು ಲೆಕ್ಕ ಹೇಳಿ ಸುಮ್ಮನೆ ಪಿಡಿ ಅಕೌಂಟ್ ಎಂದು ಹೇಳುತ್ತೀರಿ

ಜಿಲ್ಲಾಧಿಕಾರಿಗಳಿಗೆ ಕರೆದು ಕೇಳಿ ನೀವು ಐದು ಕೋಟಿ ಹಣ ಇದ್ದರೆ ಬೋರ್‌ವೆಲ್ ಡಿಗ್ ಮಾಡಿರುವವರಿಗೆ ನೀವು ಹಣ ಕೊಡಲಿಲ್ಲ?

ಶ್ರೀ ಆಲಂಗೂರು ಶ್ರೀನಿವಾಸ್ ಐದು ಕೋಟಿ ರೂಪಾಯಿ ಅಲ್ಲ, ಸುಮಾರು 12 ಕೋಟಿ ರೂಪಾಯಿ ಇತ್ತು ಅದರಲ್ಲಿ ಐದು ಕೋಟಿ ರೂಪಾಯಿಗಳನ್ನು ನಾವು ಪಾವತಿ ಮಾಡಿದ್ದೇವೆ ಇನ್ನೂ ಏಳು ಕೋಟಿ ರೂಪಾಯಿಗಳು ಈಗ ಬೇಕಾಗಿವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಐದು ಕೋಟಿ 12 ಕೋಟಿ ಎಂದು ಹೇಳುತ್ತಿದ್ದೀರಿ ಬೋರ್‌ವೆಲ್ ಡಿಗ್ ಮಾಡಿದಂತಹ ಕಂಟ್ರ್ಯಾಕ್ಟರ್‌ಗೆ ನಾಲ್ಕು ತಿಂಗಳುಗಳಿಂದ ಏಕೆ ದುಡ್ಡು ಕೊಡಲಿಲ್ಲ ಹಾಗಾದರೆ, ಏಕೆ ಬಾಕಿ ಇಟ್ಟು ಕೊಂಡಿದ್ದೀರಿ?

ಶ್ರೀ ಕೆ ಶ್ರೀನಿವಾಸಗೌಡ ನಾವೆಲ್ಲಾ ಡೀಸಲ್ ಹಾಕಿ ಬೋರ್ ಕೊರೆಯುವಂತಹ ಸ್ಥಿತಿಗೆ ನಾವು ತಲುಪಿದ್ದೇವೆ ನಮ್ಮ ಜಿಲ್ಲೆಯಲ್ಲಿ ಆ ತರಹ ಪರಿಸ್ಥಿತಿ ಇದೆ 12 ಕೋಟಿ ರೂಪಾಯಿ ಎಲ್ಲಿ ಇದೆಯೋ ನನಗೆ ಗೊತ್ತಿಲ್ಲ ಅಧ್ಯಕ್ಷರೆ

ಶ್ರೀ ಆಲಂಗೂರು ಶ್ರೀನಿವಾಸ್ 12 ಕೋಟಿ ರೂಪಾಯಿಗಳನ್ನು ಪಾವತಿ ಮಾಡಬೇಕಾಗಿತ್ತು, ಅದರಲ್ಲಿ ಐದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಇನ್ನೂ ಏಳು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಪ್ರತಿ ತಾಲ್ಲೂಕಿನಲ್ಲಿ 40 ಲಕ್ಷ, 30 ಲಕ್ಷ ರೂಪಾಯಿಗಳು ಪಾವತಿ ಆಗಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಉಪಾಧ್ಯಕ್ಷರೆ ಐದು ಕೋಟಿಯೋ, 7 ಕೋಟಿಯೋ, 120 ಕೋಟಿಯೋ, ನನಗೆ ಗೊತ್ತಿಲ್ಲ ಕುಡಿಯುವ ನೀರಿಗೆ ಬಹಳ ತೀವ್ರವಾದ ಸಮಸ್ಯೆ ಇದೆ ಕೆಲವು ಕಡೆ ಬೋರ್‌ವೆಲ್ ಕೊರೆಯುವುದಕ್ಕೆ ಆಗಲಿಲ್ಲ ಇನ್ನೂ ಕೆಲವು ಕಡೆ ಬೋರ್‌ವೆಲ್ ಕೊರೆದಿದ್ದೀರಿ ಪಂಪ್ ಮೋಟರ್ ಸಪ್ಲೇ ಆಗಿಲ್ಲ ಪಂಪ್ ಮೋಟಾರಂ ಸಪ್ಲೇ ಮಾಡಿದರೆ ಕೆಲವು ಊರುಗಳಲ್ಲಿ ಏಳೆಂಟು ಪಾಯಿಂಟ್ ಹಾಕಿ ಫೇಲ್ ಆಗಿ ದೂರದಲ್ಲಿ ಬೋರ್‌ವೆಲ್ ಹಾಕಿದ್ದೇವೆ ಪೈಪ್‌ಲೈನ್ ಹಾಕಬೇಕೆಂದರೆ ಪೈಪ್‌ಲೈನ್‌ರಿಗೆ ದುಡ್ಡು ಕೊಟ್ಟಿಲ್ಲ ನಾವು ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡದ ಹೊರತು

ಅವರಿಗೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ ನಾವು ಕೋಟಿಗಳ ಅಂಕಿ ಅಂಶಗಳನ್ನು ನಾವು ಆಡಿಟ್ ಮಾಡುವುದಕ್ಕೆ ಬರುತ್ತಿಲ್ಲ ನಾನು ನಿಮಗೆ ಇಷ್ಟೇ ಕೇಳುತ್ತಿದ್ದೇವೆ, ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವುದರಲ್ಲಿ ನಾವು ಎಷ್ಟು ಯಶಸ್ವಿಯಾಗಬೇಕಾಗಿತ್ತು ಅಷ್ಟು ಯಶಸ್ವಿಯಾಗಿಲ್ಲ ಪೇಮೆಂಟ್ ಬಂದಿಲ್ಲವೆಂದು ಕಾರಣವನ್ನು ಹೇಳುತ್ತಾರೆ ಮಾನ್ಯ ರೆಡ್ಡಿಯವರು ಮತ್ತು ಗೌಡರು ಹೇಳಿದಂತೆ ರಿಗ್ ಓನರ್ ನಮಗೆ ಬಿಲ್ಸ್ ಬರಬೇಕು ನಾವು ಎಲ್ಲಿಂದ ತರುವುದು, ನಮಗೆ ಬರುವುದಕ್ಕಾಗುವುದಿಲ್ಲವೆಂದು ಹೇಳುತ್ತಾನೆ ಈಗಲೇ ಡ್ಯೂ ಇದೆ ಎಂದು ಹೇಳುತ್ತಾನೆ ನೀವೇ ಒಪ್ಪಿಕೊಳ್ಳುತ್ತೀರಿ ಮುಖಂಡರಾದ ಶ್ರೀಮಾನ್ ಖರ್ಗೆಯವರು ಕೇಳಿದ್ದು ಏನೆಂದರೆ, ಯಡಿಯೂರಪ್ಪನವರು ಲಕ್ಷ್ಮಿ ತಾಂಡವ ನೃತ್ಯ ಮಾಡುತ್ತಿದ್ದಾಳೆ, ಏನೂ ಕಡಿಮೆ ಇಲ್ಲ, ನಾವು ಕಾಲು ಇಟ್ಟ ಮೇಲೆ ಕರ್ನಾಟಕ ಸಮೃದ್ಧವಾಗಿದೆ ಎಂದು ಅವರು ಹೇಳುತ್ತಾರೆ ನೀವು ನೋಡಿದರೆ ಬಾಕಿ ಇದೆ ಎಂದು ಹೇಳುತ್ತೀರಿ, ಕಳುಹಿಸುತ್ತಿದ್ದೇವೆ ಎಂದು ಅವರು ಹೇಳುತ್ತಾರೆ, ಊರು ಜನ ನೋಡಿದರೆ ಕುಡಿಯುವುದಕ್ಕೆ ನೀರು ಇಲ್ಲವೆಂದು ಹೇಳುತ್ತಾರೆ, ನೀರಿಲ್ಲವೆಂದು ಹೇಳುವವರು ಸತ್ಯವಂತರಾ, ಲಕ್ಷ್ಮಿ ತಾಂಡವ ನೃತ್ಯ ಮಾಡುತ್ತಿದ್ದಾಳೆ ಎಂದು ಹೇಳುವ ಉಪ ಮುಖ್ಯಮಂತ್ರಿಗಳ, ಹಣಕಾಸಿನ ಇಲಾಖೆ ಹೊಂದಿರುವವರು ಅವರು ಸತ್ಯವಂತರಾ ಅಥವಾ ಅದೇ ಸಚಿವ ಸಂಪುಟದಲ್ಲಿ ಇಟ್ಟುಕೊಂಡು ಹಣ ಬಾಕಿ ಇದೆ ಎಂದು ಹೇಳುವವರು ನೀವು ಸತ್ಯವಂತರಾ, ಯಾರ ಮಾತು ನಂಬಬೇಕು? ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಬೇರೆ ಎಲ್ಲ ಸ್ವಲ್ಪ ನಿಧಾನ ಮಾಡಿ, ಕುಡಿಯುವ ನೀರಿನ ವಿಚಾರಕ್ಕೆ immediate ನೀವು ಏನು ಹಣ ಕೊಡಬೇಕು ಅದನ್ನು ಆರ್ಗನೈಸ್ ಮಾಡಿ, ಬಾಕಿ ಇಲ್ಲದ ಹಾಗೆ ಮಾಡಿ ಪಂಪ್ ಮೋಟಾರ್ ಸಪ್ಲೈ ಮಾಡಿದರೆ ಅವರಿಗೆ ನೀರು ಸಿಕ್ಕಾಗ ಕೆಲಸ ಆಯಿತು ಎಂದು ಲೆಕ್ಕ ಇಲ್ಲದೆ ಹೋದರೆ ನಿಮ್ಮ ಅಂಕಿ ಅಂಶ ಕಟ್ಟಿಕೊಂಡು ಏನು ಮಾಡಬೇಕು?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ಐದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, scarcity ಗೆ 100 ಲಕ್ಷದ ಕಾರ್ಯಕ್ರಮ ಕೊಡಿ ಎಂದು ಒಂದೊಂದು ತಾಲ್ಲೂಕಿಗೆ ನೀವು ಪತ್ರ ಬರೆದಿದ್ದೀರಿ ನಾವು 100 ಲಕ್ಷ ಕಾರ್ಯಕ್ರಮ ಕಳುಹಿಸಿದೆವು ನೀವು ಅದರಲ್ಲಿ ಹಣ ಬಿಡುಗಡೆ ಮಾಡಿರುವುದು ಎಷ್ಟು? ಐದು ತಿಂಗಳುಗಳಿಂದ ಅದರಲ್ಲಿ ಬಿಡುಗಡೆ ಮಾಡಿರುವುದು 34 ಲಕ್ಷ ರೂಪಾಯಿಗಳು 100 ಲಕ್ಷಕ್ಕೆ action plan ತೆಗೆದುಕೊಂಡಿರಿ ಐದು ತಿಂಗಳುಗಳಿಂದ 34 ಲಕ್ಷ ಬಿಡುಗಡೆ ಮಾಡಿದ್ದಾರೆ,

ನಮ್ಮ ಹನ್ನೊಂದು ತಾಲ್ಲೂಕುಗಳಿಗೆ ಒಂದೊಂದು ಕೋಟಿ ಕೊಡುತ್ತೇವೆ ಎಂದು ಹೇಳಿದ್ದೀರಿ ಒಂದೊಂದು ತಾಲ್ಲೂಕಿಗೆ ಇವರು 34 ಲಕ್ಷ ಅಪ್ರೂವಲ್ ಮಾಡಿದ್ದಾರೆ ಅಷ್ಟೇ ಇವರು ಹಣ ಕೊಟ್ಟಿರುವುದು ಉಳಿದದ್ದು ಇನ್ನು 66 ಲಕ್ಷ ಕೊಟ್ಟೇ ಇಲ್ಲ Entire Action Plan ಗೆ ಅಪ್ರೂವಲ್ ಕೊಟ್ಟಿದ್ದಾರೆ ಹಣ ಕೊಟ್ಟಿರುವುದು ಮಾತ್ರ 34 ಲಕ್ಷ

ಶ್ರೀ ಆಲಂಗೂರು ಶ್ರೀನಿವಾಸ್ ಕೋಲಾರದ್ದು ಮೊನ್ನೆ ಕೂಡ 100 ಕೋಟಿ ಚಿಲ್ಲರೆ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿ ಪ್ರತಿ ತಾಲ್ಲೂಕಿಗೆ ಕೂಡ ಹಳೆಯ ಬಾಕಿ ಎಂದು 20–20 ಲಕ್ಷ ರೂ CRF fund ನಲ್ಲಿ ಕೊಟ್ಟಿದ್ದೇವೆ CRF fund ನಲ್ಲಿ ಸ್ವಲ್ಪ ಹಣದ ಕೊರತೆ ಇರುವುದರಿಂದ ಐದು ಕೋಟಿ ಬಿಟ್ಟು

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಒಪ್ಪಿಕೊಳ್ಳಿ ಅದನ್ನು 100 ಲಕ್ಷದ ಪ್ರೋ ಅಪ್ರೂವಲ್ ಮಾಡಿದ್ದೀರಿ 100 ಲಕ್ಷ ಅಪ್ರೂವಲ್ ಮಾಡಿ ಐದು ತಿಂಗಳುಗಳಿಂದ 34 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಇನ್ನೂ 66 ಲಕ್ಷ ಕೊಟ್ಟಿಲ್ಲ ನೀವು ನಿಮ್ಮ ಅಧಿಕಾರಿಗಳು ನಮ್ಮ ಬಳಿ ಹಣ ಇಲ್ಲವೆಂದು ಹೇಳುತ್ತಿದ್ದಾರೆ ನೀವು ನೋಡಿದರೆ ಎಲ್ಲ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ 100 ಲಕ್ಷಕ್ಕೆ ಪ್ರೋ aproval ಮಾಡಿ ಐದು ತಿಂಗಳುಗಳಿಂದ ಇವರು ಕೊಟ್ಟಿರುವುದು 34 ಲಕ್ಷ ಇವರು ಬಿಡುಗಡೆ ಮಾಡಿರುವುದು

ಶ್ರೀ ಆಲಂಗೂರು ಶ್ರೀನಿವಾಸ್ Scarcityಯಡಿ ಈಗಾಗಲೇ ಹಣ ಇದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ Entire Action Plan approval ಮಾಡಿದ್ದೀರಿ

ಶ್ರೀ ಕೆ ಶ್ರೀನಿವಾಸಗೌಡ ಕುಡಿಯುವ ನೀರಿಗಾಗಿ ನಾವು ಕೇಳುತ್ತಿರುವುದು ಬೇರೆ ಯಾವುದಕ್ಕೂ ನಾವು ಕೇಳುತ್ತಿಲ್ಲ

ಶ್ರೀ ಆಲಂಗೂರು ಶ್ರೀನಿವಾಸ್ ಪ್ರತಿ ತಾಲ್ಲೂಕಿಗೆ ಎರಡೆರಡು ಕೋಟಿ ರೂಪಾಯಿಗಳಂತೆ ಕೊಟ್ಟಿದ್ದೇವೆ

ಸ್ವಾಮಿ, ಪ್ರತಿ ತಾಲ್ಲೂಕಿಗೂ ಎರಡೆರಡು ಕೋಟಿ ರೂಪಾಯಿಗಳನ್ನು ಕೊಟ್ಟು ಒಂದೇ ಆ್ಯಕ್ಷನ್ ಪ್ಲಾನ್ ಅನ್ನು 100 ಲಕ್ಷಕ್ಕೆ ಹಾಗೂ ಎರಡನೇ ಆ್ಯಕ್ಷನ್ ಪ್ಲಾನ್ ಅನ್ನು 100 ಲಕ್ಷಕ್ಕೆ ಕೊಟ್ಟಿರುವುದು ಆ್ಯಕ್ಷನ್ ಪ್ಲಾನ್‌ನ ಮೊದಲನೆಯ ಕಂತು ಬಿಡುಗಡೆಯಾಗಿದೆ, ಪೂರ್ತಿಯೂ ಕೂಡ ಆಗಿದೆ ಮೊನ್ನೆ ರಿವ್ಯೂ ಮಾಡಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಾಧ್ಯಕ್ಷರೆ, 100 ಲಕ್ಷಕ್ಕೆ ಆ್ಯಕ್ಷನ್ ಪ್ಲಾನ್‌ನ್ನು ಇವರು ಅಪ್ರೂವಲ್ ಮಾಡಿ ಕೇವಲ 34 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿರುವುದು ಇವರು ಪೂರ್ತಿ ಬಿಡುಗಡೆ ಆಗಿದೆ ಎಂದು ಏನು ಹೇಳುತ್ತಿದ್ದಾರೆ ಅದನ್ನು ಇವರು ಪ್ರೂವ್ ಮಾಡಿದರೆ ಅವರು ಹೇಳಿದ ಹಾಗೆ ನಾನು ಕೇಳುತ್ತೇನೆ

(ಗೊಂದಲ)

ಉಪಾಧ್ಯಕ್ಷರು ಶ್ರೀರಾಮರೆಡ್ಡಿಯವರೆ, ಈಗ ಉತ್ತರವನ್ನು ಕೊಟ್ಟಮೇಲೆ ಅದರ ಬಗ್ಗೆ ನೀವು ಏನಾದರೂ ಕ್ಲಾರಿಫಿಕೇಷನ್ ಕೇಳುವುದಿದ್ದರೆ ಆಮೇಲೆ ಕೇಳಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಉಪಾಧ್ಯಕ್ಷರೆ, ನಾನು ಅದನ್ನೇ ಹೇಳುತ್ತಿದ್ದೆ ಆಗ ನನ್ನ ಮಾತನ್ನು ಅವರು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ ಮಂತ್ರಿಗಳು ಕೂಡ ಹೇಳುತ್ತಿದ್ದಾರೆ, ಸಿ ಆರ್ ಎಫ್ ಫಂಡ್‌ನಲ್ಲಿ ದುಡ್ಡಿನ ಕೊರತೆ ಇದ್ದ ಕಾರಣ ಹಣ ಬಿಡುಗಡೆ ಆಗಿಲ್ಲ ಎನ್ನತಕ್ಕಂಥ ಮಾತನ್ನು ಅವರೇ ಹೇಳುತ್ತಿದ್ದಾರೆ ದುಡ್ಡಿಲ್ಲವೆಂದು ಹೇಳಿ ನಮ್ಮ ನಮ್ಮ ಮತಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಕೊಡಬೇಕಾದಂಥ ಹಣವನ್ನು, ಬಿಡುಗಡೆ ಬೇಕಾದಂಥ ಹಣವನ್ನು ಬಿಡುಗಡೆ ಮಾಡಿಲ್ಲ ಸುಮಾರು 12 ಕೋಟಿ ರೂಪಾಯಿ ಬಾಕಿ ಇದೆ ಆ ಬಾಕಿಯನ್ನು ಇವೊತ್ತು ಒಟ್ಟು 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಮಾಡಿದಷ್ಟು ಹಣವನ್ನು ಕೊಡತಕ್ಕಂಥ ಶಕ್ತಿ ನಿಮಗಿಲ್ಲವೆಂದರೆ ನಾವೇನು ಹೇಳಬೇಕು ನಿಮ್ಮ ಖಜಾನೆ ತುಂಬಿ ತುಳುಕುತ್ತಿದೆ ಎಂದು ನೀವು ಹೇಳುತ್ತೀರಲ್ಲ ಒಂದು ಕಡೆ 340 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗಳ ಉದ್ಘಾಟನೆಯನ್ನು ತಾವು ಮಾಡುತ್ತೀರಿ 79 ಕೋಟಿ ರೂಪಾಯಿಗಳ ಚರಂಡಿಗಳನ್ನು ಮಾಡುತ್ತೀರಿ ಒಂದೊಂದು ಮತಕ್ಷೇತ್ರದಲ್ಲಿ ರಸ್ತೆಗಳನ್ನು ಮಾಡುತ್ತೀರಿ ಒಂದು ಜಿಲ್ಲೆಗೆ ಕುಡಿಯುವ ನೀರಿಗೆ 12 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಇಲ್ಲವೆಂದರೆ

ನಾವೇನು ಹೇಳಬೇಕು ಏನು ಹೇಳಬೇಕು ನೀವೇ ಹೇಳಿ ಉಪಾಧ್ಯಕ್ಷರೆ, ನಾವೇ ಹೇಳಿದರೆ ಅವರಿಗೆ ಏನಾಗುತ್ತದೆ ಎಂದರೆ, ಇವರು ಬೇಕಂತಲೇ ಹೇಳುತ್ತಾರೆ ಎಂದು ಅವರು ನಮಗೆ ಹೇಳುತ್ತಾರೆ ಈಗ ಮಾನ್ಯ ಸಚಿವರ ಬಾಯಿಂದಲೇ ಬಂತಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈಗಾಗಲೇ ಪ್ರತಿ ತಾಲ್ಲೂಕಿಗೆ ಒಂದೊಂದು ಕೋಟಿಯಂತೆ ಹಣ ಬಿಡುಗಡೆ ಮಾಡಿತರತಕ್ಕಂಥಾದ್ದು ಏನಿದೆ ಅಡಿಶನಲ್ ಆಗಿ ಕೋಲಾರ ಜಿಲ್ಲೆಗೆ 5 ಕೋಟಿ ಹಣವನ್ನು ಬಿಡುಗಡೆ ಮಾಡಿರತಕ್ಕಂಥಾದ್ದು ಮಂತ್ರಿಗಳು ಏನು ಹೇಳುತ್ತಿದ್ದಾರೆ ಆ ಬಗ್ಗೆ ಸ್ವಲ್ಪ ಕ್ಲಾರಿಫಿಕೇಷನ್ ಕೊಡುವುದಕ್ಕೆ ಬಯಸುತ್ತೇನೆ ಒಂದೊಂದು ಕೋಟಿಯಂತೆ ಒಂದೊಂದು ತಾಲ್ಲೂಕಿಗೂ ಹಣವನ್ನು ಬಿಡುಗಡೆ ಮಾಡಿದ್ದೆವು ಈಗ 5 ಕೋಟಿ ಹಣವನ್ನು ಅಡಿಷನಲ್ ಆಗಿ ಕೋಲಾರ ಜಿಲ್ಲೆಗೆ ಕೊಟ್ಟಿದ್ದೇವೆ ಅಧಿಕಾರಿಗಳೇನಾದರೂ ಶಾಸಕರಿಗೆ ಈ ವಿಷಯದಲ್ಲಿ ದಿಕ್ಕು ತಪ್ಪಿಸತಕ್ಕಂಥ ರೀತಿಯಲ್ಲಿ ನಿಮಗೆ ವರದಿಯನ್ನು ಕೊಟ್ಟಿದ್ದರೆ ಅದರ ಬಗ್ಗೆ ನಾವೇ ಆ್ಯಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಬೇಕು 100 ಲಕ್ಷಕ್ಕೆ ಅಪ್ರೂವಲ್ ಮಾಡಿ ಕೇವಲ 34 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದು ಇನ್ನೂ 66 ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟಿಲ್ಲ ಆದರೆ ಆ್ಯಕ್ಷನ್ ಪ್ಲಾನ್ ಅಪ್ರೂವಲ್ ಆಗಿದೆ

ಶ್ರೀ ಜಗದೀಶ್ ಶೆಟ್ಟರ್ ಆ್ಯಕ್ಷನ್ ಪ್ಲಾನ್‌ನಲ್ಲಿ ಅಪ್ರೂವ್ ಆಗಿರುವುದನ್ನು ವರ್ಕಿಂಗ್ ಪ್ರೋ್ರ ನೋಡಿಕೊಂಡು ಕೊಡುತ್ತಾರೆ ಆದರೆ 5 ಕೋಟಿ ರೂಪಾಯಿಗಳ ಹಣವನ್ನೇನು ಬಿಡುಗಡೆ ಮಾಡಿದೆ ಅದನ್ನು ಆಡಿಶನಲ್ ಆಗಿ ಕುಡಿಯುವ ನೀರಿನ ಪರ್ಪಸ್‌ಗೆಂತಲೇ ಕೊಟ್ಟಿರುವುದು ಆ ಹಣ ಸಿ ಆರ್ ಎಫ್ ನಿಂದ ಕಳುಹಿಸಿದಂಥಾದ್ದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಕೇಳುತ್ತಿರುವುದು scarcity ಕೆಳಗೆ ನೀವು 100 ಲಕ್ಷ ರೂಪಾಯಿಗಳದ್ದನ್ನು ಅಪ್ರೂವಲ್ ಏನು ಮಾಡಿದ್ದೀರಿ ಅದರಲ್ಲಿ ಇವೊತ್ತಿನವರೆಗೂ ನೀವು ಬಿಡುಗಡೆ ಮಾಡಿರುವುದು ಕೇವಲ 34 ಲಕ್ಷ ರೂಪಾಯಿಗಳನ್ನು ಮಾತ್ರ. ಕುಡಿಯುವ ನೀರಿನದು ಬೇರೆ

ಶ್ರೀ ಅಲಂಗೂರು ಶ್ರೀನಿವಾಸ್ ನೀವು ಆ್ಯಕ್ಷನ್ ಪ್ಲಾನ್ ಆಮೇಲೆ ಕೊಟ್ಟಿರಬಹುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇಲ್ಲ ಆ್ಯಕ್ಷನ್ ಪ್ಲಾನ್‌ನನ್ನು ಮೊದಲು ಕೊಟ್ಟಿದ್ದೇ ನಾವು ಅದರಲ್ಲಿ 34 ಲಕ್ಷ ರೂಪಾಯಿಗಳದ್ದನ್ನು ಅಪ್ರೂವಲ್ ಮಾಡಿ ಉಳಿದದ್ದನ್ನು ಅಪ್ರೂವಲ್ ಮಾಡಿಲ್ಲ

ಶ್ರೀ ಆಲಂಗೂರು ಶ್ರೀನಿವಾಸ್ ಇಲ್ಲಾ ಸಾರ್, 100 ಲಕ್ಷ ರೂಪಾಯಿಗಳದ್ದು ಅಪ್ರೂವಲ್ ಆಗಿದೆ ಮತ್ತು ಹಣ ಬಿಡುಗಡೆ ಆಗಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಸಚಿವರೆ, ಮಾನ್ಯ ರೆಡ್ಡಿಯವರು ಏನು ಹೇಳುತ್ತಿದ್ದಾರೆಂದರೆ, ನಿಮ್ಮ ಸುತ್ತೋಲೆಗಳ ಪ್ರಕಾರ ನಾವು 100 ಲಕ್ಷ ರೂಪಾಯಿಗಳ ಕ್ರಿಯಾ ಯೋಜನೆಯನ್ನು ತಯಾರು ಮಾಡಿದೆವು ಅದನ್ನು ನಿಮ್ಮ ಒಪ್ಪಿಗೆಗೆ ಕಲುಹಿಸಿದೆವು ನೀವು ಒಪ್ಪಿಗೆಯನ್ನು ಕೊಟ್ಟಮೇಲೆ ಭೌಗೋಳಿಕವಾಗಿ ನಮ್ಮ ತಾಲ್ಲೂಕಿನ ಎಲ್ಲಾ ಭಾಗಗಳಲ್ಲೂ ಕೂಡ ರೈತರಿಗೆ ಕೆಲಸ ಸಿಗಬೇಕು ಎನ್ನುವ ಉದ್ದೇಶದಿಂದ ಎಲ್ಲಾ ಕಡೆಯಲ್ಲಿಯೂ ರೈತರಿಂದ ಕೆಲಸವನ್ನು ತೆಗೆದುಕೊಂಡೆವು ಆ ಎಲ್ಲಾ ಕೆಲಸವನ್ನು ತೆಗೆದುಕೊಂಡು ನಾವು ಕಮಿಟ್ ಮಾಡಿಕೊಂಡ ಮೇಲೆ ನೀವು ಅಪ್ರೂವಲ್ ಕೊಟ್ಟಿದ್ದು ಕೇವಲ 34 ಲಕ್ಷ ರೂಪಾಯಿಗಳಿಗೆ ಮಾತ್ರ, ಇಲ್ಲೇನಾಗಿದೆ ತಾವು 100 ಲಕ್ಷ ರೂಪಾಯಿಗಳ ನಮ್ಮ ಕ್ರಿಯಾ ಯೋಜನೆಗೆ ಅಪ್ರೂವಲ್ ಕೊಡುತ್ತೀರಿ ಎನ್ನುವ ಭರವಸೆ ಮೇಲೆ ಎಲ್ಲಾ ಕಡೆಯಲ್ಲಿಯೂ ನಾವು ಕೆಲಸವನ್ನು ಮಾಡಿಸಿದೆವು ಜನರಿಗೆ ಈಗ ನಾವು ದುಡ್ಡು ಕೊಡಬೇಕಾದ್ದು ಬಾಕಿ ಇದೆ ಅವರು ಮೊದಲೇ ಬಡವರಾಗಿದ್ದು ಬರಗಾಲ ಸಮಸ್ಯೆಯನ್ನು ಎದುರಿಸುತ್ತಿರತಕ್ಕಂಥವರಾಗಿದ್ದಾರೆ ಕೂಲಿಕಾರರು ಬಂದು ಕೆಲಸವನ್ನು ಮಾಡಿದರು ನಿಮ್ಮಲ್ಲಿ ಹಣವಿಲ್ಲ ಅಲ್ಲಿ ಅವರಿಗೆ ಪೇಮೆಂಟ್ ಆಗಿಲ್ಲ

ಶ್ರೀ ಆಲಂಗೂರು ಶ್ರೀನಿವಾಸ್ ಅದು ಹಾಗಲ್ಲ scarcity ಹಣದ ಕೊರತೆ ಏನಿಲ್ಲ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ದಯಮಾಡಿ ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬೇಕಾದರೆ ಅಧಿಕಾರಿಗಳನ್ನು ಕರೆದು ಇನ್ನೊಂದು ಸಾರಿ ಚರ್ಚೆ ಮಾಡಿಕೊಳ್ಳಿ ನಾನು ಬಹಳ ಸರಳವಾಗಿ ನಿಮಗೆ ಹೇಳುತ್ತಿದ್ದೇನೆ

ಸರ್ಕಾರ ಕಳುಹಿಸಿದಂಥ ಸುತ್ತೋಲೆಗಳನ್ನು ನಾವು ಗೌರವಿಸಿ 100 ಲಕ್ಷ ರೂಪಾಯಿಗಳ ಕ್ರಿಯಾ ಯೋಜನೆಯನ್ನು ನಿಮಗೆ ಸಲ್ಲಿಸಿದೆವು ನೀವು ಆ ಆ್ಯಕ್ಷನ್ ಪ್ಲಾನ್‌ಗೆ ಅಪ್ರೂವಲ್‌ನ್ನು ಕೊಟ್ಟಿರಿ ನೀವು ಆ್ಯಕ್ಷನ್ ಪ್ಲಾನ್‌ಗೆ ಅಪ್ರೂವಲ್ ಕೊಟ್ಟ ತಕ್ಷಣ ನಮ್ಮ ಅಭಿಪ್ರಾಯ ಏನೆದಂರೆ ಇದಕ್ಕೆ ಹಣ ಒದಗುತ್ತದೆ ಎಂದು ತಿಳಿದುಕೊಂಡು ಏಕಕಾಲದಲ್ಲಿ ತಾಲ್ಲೂಕಿನ ಎಲ್ಲಾ ಭಾಗದಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ಎಂದು ನಾವು ಹೇಳಿದೆವು ಆ ಕೆಲಸಗಳನ್ನು ಪ್ರಾರಂಭ ಮಾಡಿ ಅವುಗಳೆಲ್ಲಾ ವಿವಿಧ ಹಂತಗಳನ್ನು ತಲುಪಿದ ಮೇಲೆ ಸರ್ಕಾರದಿಂದ ಬಿಡುಗಡೆಯಾಗಿ ಬಂದಿರತಕ್ಕಂಥಾದ್ದು ಕೇವಲ 34 ಲಕ್ಷ ರೂಪಾಯಿಗಳು ಮಾತ್ರ 100 ಲಕ್ಷ ರೂಪಾಯಿಗಳ ಕ್ರಿಯಾ ಯೋಜನೆಗೆ ಮಂಜೂರಾತಿ ಕೊಟ್ಟ ಜಾಗದಲ್ಲಿ ಬಿಡುಗಡೆಯಾದ ಹಣ ಕೇವಲ 34 ಲಕ್ಷ ಕೆಲಸವಾಗಿದೆ ಜನರಿಗೆ ನಾವು ಹಣವನ್ನು ಕೊಡಬೇಕಾಗಿದೆ ಬಾಕಿ ಇದೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ನಾವು ತರುತ್ತಿದ್ದೇವೆ

ಶ್ರೀ ಆಲಂಗೂರು ಶ್ರೀನಿವಾಸ್ ಇಲ್ಲ ಇಲ್ಲ ಇಲ್ಲ ತಮ್ಮ ಕ್ಷೇತ್ರದ್ದೇ ನೋಡಿ ಬೇಕಾದರೆ ತಮ್ಮ ಕ್ಷೇತ್ರದಲ್ಲೂ ಕೂಡ 200 ಲಕ್ಷಕ್ಕೆ ಮಂಜೂರಾತಿ ಆಗಿ ಈಗಾಗಲೇ ಹಣವನ್ನೂ ಕೂಡ ಬಿಡುಗಡೆ ಮಾಡಿದ್ದೇವೆ ಶ್ರೀರಾಮರೆಡ್ಡಿಯವರೆ, ಬಾಗೇಪಲ್ಲಿಯಲ್ಲೊಂದರಲ್ಲಿ ಬಹುಶಃ ನೀವು ಕ್ರಿಯಾಯೋಜನೆಯನ್ನು ತಯಾರು ಮಾಡಿಕೊಟ್ಟಿರುವುದು ನಿಧಾನವಿರಬಹುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಒಪ್ಪುವುದಿಲ್ಲ ನಾವು ಕ್ರಿಯಾ ಯೋಜನೆಯನ್ನು ನೀವು ಹೇಳಿದ ತಕ್ಷಣ ರೆಡಿ ಮಾಡಿ ಕೊಟ್ಟಿದ್ದೇವೆ ಈ ರೀತಿ ಮಾನ್ಯ ಸಚಿವರು ಹೇಳುವುದು ಸರಿಯಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಸ ಚಿವರೆ, ನೀವು ಪ್ರತಿ ಹಂತದಲ್ಲಿ ನಮ್ಮ ಹತ್ತಿರ ಚರ್ಚೆ ಮಾಡುತ್ತಿದ್ದೀರಿ ನಮ್ಮನ್ನು ನೀವು ವಿಶ್ವಾಸಕ್ಕೆ ತೆಗೆದುಕೊಂಡಿದ್ದೀರಿ ಎಲ್ಲವನ್ನೂ ಕೆಲಸ ಮಾಡಿಸುವುದಕ್ಕೆ ಸಾಕಷ್ಟು ಶ್ರಮ ವಹಿಸಿರುವುದಕ್ಕೆ ನಿಮ್ಮನ್ನು ನಾವು ಅಭಿನಂದಿಸುತ್ತೇವೆ ನಾವು ತಮಗೆ ವಾಸ್ತವಾಂಶ ಏನು ಹೇಳುತ್ತಿದ್ದೇವೆಂದರೆ, ನಾವು ಕ್ರಿಯಾ ಯೋಜನೆಯನ್ನು ಏನು ನಿಮಗೆ ಕೊಟ್ಟಿದ್ದೆವೋ ಅದಕ್ಕೆ ತಾವು ಮಂಜೂರಾತಿ ಕೊಟ್ಟಿರಿ, ಅದಕ್ಕೆ ಪ್ರತ್ಯುತ್ತರವಾಗಿ ಮಂಜೂರಾತಿಗೆ ತಕ್ಕಷ್ಟು ಹವನ್ನು ನೀವು ನಮಗೆ ಕೊಡಲಿಲ್ಲ ಕೇವಲ 34 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು

ಶ್ರೀ ಆಲಂಗೂರು ಶ್ರೀನಿವಾಸ್ ಅದನ್ನು ನಾವು ಕೊಟ್ಟೇ ಕೊಡುತ್ತೇವೆ ಕುಡಿಯುವ ನೀರಿಗೆ ಕೊಡಬೇಕಾದ್ದು ನಮ್ಮ ಜವಾಬ್ದಾರಿ ಅದನ್ನು ಕೊಡುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಕೊಡುತ್ತೇವೆ ಎಂದು ಹೇಳುವುದು ಬೇರೆ ವಿಚಾರ ಕೊಟ್ಟಿಲ್ಲ ಎಂದು ಹೇಳುವುದು ಬೇರೆ ವಿಚಾರ

ಶ್ರೀ ಆಲಂಗೂರು ಶ್ರೀನಿವಾಸ್ ಹಣ ಬಿಡುಗಡೆಯಾದ ತಕ್ಷಣ ಅದನ್ನು ನಾವು ಕೊಡುತ್ತೇವೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಮುಖ್ಯಮಂತ್ರಿಗಳೆ, ತಾವು ಸದನದಲ್ಲಿ ಹಾಜರಿದ್ದೀರಿ ಸರ್ಕಾರದ ಅಧಿಕಾರಿಗಳ ಒಂದು ತಂಡ ಅಲ್ಲಿಗೆ ಬಂದಿದ್ದರು ಆ ತಂಡದಲ್ಲಿ ರೆವಿನ್ಯೂ ಅಧಿಕಾರಿಗಳು ಮತ್ತು ಸ್ಪೆಶಲ್ ಸೆಕ್ರೆಟರಿ, ಇವರೆಲ್ಲರೂ ಇದ್ದರು ಅದೆಲ್ಲ ನಡೆದ ಸಮಯಲ್ಲಿ ನಾವು ಕೆಲ ವಿಚಾರಗಳನ್ನು ಅವರ ಗಮನಕ್ಕೆ ತಂದೆವು ಹೇಗೂ ಬರಗಾಲ ಬಂದಿದೆ, ಸ್ವಲ್ಪ ಹಣವನ್ನು ಖರ್ಚು ಮಾಡುತ್ತಿದ್ದೇವೆ, ಈ ಹಣ ಖರ್ಚಾಗತಕ್ಕಂಥಾದ್ದು ಸ್ವಲ್ಪ ಶಾಶ್ವತವಾದಂಥ ಆಸ್ತಿ ನಿರ್ಮಾಣಕ್ಕೆ ಆಗಲಿ ಎಂದು ಸಲಹೆ ಕೊಟ್ಟೆವು ಈ ಅಧಿಕಾರಿಗಳು ಅವೊತ್ತು ಅಲ್ಲಿಂದ ಸ'ಯನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದವರು, ಆಯಿತು ನಿಮ್ಮ ಸಲಹೆಯನ್ನು ಸರ್ಕಾರಕ್ಕೆ ತಿಳಿಸಿ ಸರ್ಕಾರದ ಅಭಿಪ್ರಾಯವನ್ನು ನಿಮಗೆ ತಿಳಿಸುತ್ತೇವೆ, ಇದಕ್ಕೆ ಸೆಂಟ್ರಲ್ ಗೌವರ್ನ್‌ಮೆಂಟ್‌ನ ಈ ರೀತಿಯ ನಿರ್ಬಂ' ಇದೆ ಎಂದು ಹೇಳಿ ತದನಂತರದಲ್ಲಿ ಇದನ್ನು ಮಾಡಬಹುದು ಅಥವಾ ಮಾಡುವುದಕ್ಕಾಗುವುದಿಲ್ಲವೇ ಎನ್ನುವ ವಿಚಾರವನ್ನೇ ನಮಗೆ ತಿಳಿಸಲಿಲ್ಲ ನಾವೇನು ಅವೊತ್ತು ಹೇಳಿದೆವೆಂದರೆ, ಇಷ್ಟೆಲ್ಲಾ ನಾವು ದುಡ್ಡು ಖರ್ಚು ಮಾಡಿ ಎಲ್ಲಾ ಮಣ್ಣು ಕೆಲಸವನ್ನು ಮಾಡಿ ಈ ಕಡೆಯಿಂದ ಆ ಕಡೆಗೆ ಎತ್ತಿ ಮಣ್ಣು ಬಿಸಾಕಿದರೆ ದುಡ್ಡು ಖರ್ಚಾಗಿತಬಿಡುತ್ತದೆ, ಶಾಶ್ವತವಾದ ಯಾವ ಕೆಲಸವೂ ಆಗುವುದಿಲ್ಲ, ಕೆಲವು ಕಡೆ ನಾವು ಚರಂಡಿ ಕೆಲಸ, ಮತ್ತೊಂದು ಶಾಶ್ವತವಾದ ಕೆಲಸ ಮಾಡಿಸಬಹುದು, ಹಾಗೆಂದಾಕ್ಷಣ ನಾವೇನೂ ಕಟ್ಟಡದ ಕೆಲಸ ಮಾಡಿಸುವುದಕ್ಕೆ ಹೋಗುವುದಿಲ್ಲ, ನಾವು ಮಟೇರಿಯಲ್ ಕಾಂಪೊನೆಂಟ್ ಏನಿದೆ ಅದನ್ನೂ ಕೂಡ ಹೆಚ್ಚು ಬಳಕೆಯನ್ನು ಮಾಡುವುದಿಲ್ಲ ಎಂದು ಇವೆಲ್ಲವನ್ನೂ ಅಧಿಕಾರಿಗಳಿಗೆ ಹೇಳಿದೆವು ಈ ಅಧಿಕಾರಿಗಳಿಗೆ ಜನ ಪ್ರತಿನಿಗಳು ಎಂದರೆ ಎಷ್ಟು ಅಗೌರವವೆಂದರೆ, ಇಲ್ಲಿಂದ ಬಂ'ಂಥ ಸ್ಪೆಶಲ್ ಸೆಕ್ರೆಟರಿ ಒಳಗೊಂಡಂತೆ ಅಧಿಕಾರಿಗಳ ತಂಡ ಏನು ಬಂದು ನಮಗೆ ಅಶ್ಯೂರೆನ್ಸ್‌ನ್ನು ಕೊಟ್ಟು ಬಂದಿದ್ದರೋ ಅವರು ನಮಗೆ ಸೌಜನ್ಯಕ್ಕೋಸ್ಕರವಾದರೂ ಏನಾಯಿತು

ಎಂದು ತಿಳಿಸಲಿಲ್ಲ ಇವೊತ್ತಿಗೂ ಕೂಡ ನಮ್ಮ ಜಿಲ್ಲಾಕಾರಿಗಳಿಗಾಗಲಿ, ನಮಗಾಗಲಿ ಸರ್ಕಾರದ ನಿಲುವು ಇದು, ಇದನ್ನು ಒಪ್ಪಿದ್ದೇವೆ ಅಥವಾ ಒಪ್ಪಿಲ್ಲ ಎಂದು ಹೇಳಿಯೇ ಇಲ್ಲ ಏನು ದುರಹಂಕಾರ ಇವರಿಗೆ ಎಂದು ಹೇಳುತ್ತೀರಿ, ಮಾನ್ಯ ಮುಖ್ಯಮಂತ್ರಿಗಳೆ, ಎಲ್ಲೋ ಒಂದು ಸಲ ತಾವು ಸಿಟ್ಟಿಗೆದ್ದು ಹೇಳಿದ್ರಲ್ಲಾ, ಆ ಸಿಟ್ಟು ಆ್ಯಕ್ಷನ್‌ಗೆ ಬರಬೇಕು ಇಲ್ಲದೇ ಹೋದರೆ ಇವರ ಸೊಕ್ಕೆಷ್ಟು ಹೇಳಿ, ಎಲ್ಲಾ ಜನ ಪ್ರತಿನಿಧಿಗಳ ಸಭೆಯಲ್ಲಿ ನಮ್ಮ ಮಾತುಗಳನ್ನು ಕೇಳಿ ಬಂದು ವಾಪಸ್ಸು ಹೇಳುತ್ತೇವೆ ಎಂದು ಹೇಳಿದವರು ಅದಕ್ಕೆ ಉತ್ತರ ಕೊಡತಕ್ಕಂಥ ಸೌಜನ್ಯವೂ ಇವರಿಗೆ ಇಲ್ಲವೆಂದರೆ What do they think of themselves? ಅವರೇ ಈ ಎಲ್ಲ ಗೊಂದಲಕ್ಕೂ ಕೂಡ ಕಾರಣಕರ್ತರು ಸುಮ್ಮಸುಮ್ಮನೆ ಚೀಟಿಗಳನ್ನು ಬರೆದು ನಿಮಗೆ ಕಳುಹಿಸುತ್ತಾರೆ ಆ ಸ್ಥಾನದಲ್ಲಿ ಕುಳಿತ ಎಲ್ಲರನ್ನೂ ಕೂಡ ಹೀಗೆಯೇ ಇವರು ದಾರಿ ತಪ್ಪಿಸಿದ್ದು ಅವರಿಗೆ ಬೇರೆ ಉದ್ಯೋಗವೇ ಇಲ್ಲ ಇವರು ಟ್ರೈನಿಂಗ್‌ನಲ್ಲಿ ಕಲಿತದ್ದೆಲ್ಲಾ ಇದೆ, ದಾರಿ ತಪ್ಪಿಸುವುದು, ದಯಮಾಡಿ ತಾವು ಅದಕ್ಕೆ ಬೆಲೆ ಕೊಡಬೇಡಿ ನಾವು ಇದರಲ್ಲೇನೂ ರಾಜಕಾರಣ ಮಾಡಬೇಕೆ ಹೇಳಿ ನಾವು ವಾಸ್ತವಾಂಶ ಏನಿದೆ ಅದನ್ನು ಹೇಳುತ್ತಿದ್ದೇವೆ ನಿಮ್ಮ ಮಂತ್ರಿಗಳನ್ನು ನಾವೇ ಅಭಿನಂದಿಸುತ್ತಿದ್ದೇವೆ ಏಕೆಂದರೆ ಅವರು ಪ್ರಾಮಾಣಿಕವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸವನ್ನು ಕೂಡ ಸಮಯಕ್ಕೆ ತಕ್ಕಂತೆ ಮಾಡುತ್ತಿದೆ ವಾಸ್ತವಾಂಶ ಹೇಳಿದರೆ ಮತ್ತೆ ಅಲ್ಲಿಂದ ಒಂದು ಚೀಟಿಯನ್ನು ಅಧಿಕಾರಿಗಳು ಬರೆದು ಕಳುಹಿಸುತ್ತಾರೆ ನೋಡಿ ದುಡ್ಡು ಬಂದಿಲ್ಲ

ಶ್ರೀ ಆಲಂಗೂರು ಶ್ರೀನಿವಾಸ್ ಅವತ್ತು ನಾವೆಲ್ಲಾ ಕೂಡ ಏನು ಹೇಳಿದ್ದೇವೆಂದರೆ ಕಾಂಕ್ರೀಟ್ ರೋಡ್ಸ್ ಅನ್ನು

ಉಪಾಧ್ಯಕ್ಷರು ಮಾನ್ಯ ಶ್ರೀನಿವಾಸ್‌ರವರೆ ತಾವು ಕುಳಿತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಉಪಾಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ ಏಕೆಂದರೆ ನೀವು ಅಧಿಕಾರಿಗಳು ದಿಕ್ಕುತಪ್ಪಿಸುತ್ತಿದ್ದಾರೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದಿರಿ ನನಗೆ ಮೇಲಿ ಅಧಿಕಾರಿ ಕೋಲಾರ ಜಿಲ್ಲೆಗೆ ಬರಗಾಲದ ವಿಷಯಕ್ಕೆ ಸಂಬಂಧ ಪಟ್ಟ ಹಾಗೆ ಮಾಹಿತಿ ಕೊಟ್ಟಿರುವುದೇನೆಂದರೆ, Drinking waterಗೆ 5 ಕೋಟಿ ಏನು ರೂಪಾಯಿ ಬಿಡುಗಡೆ ಮಾಡಿದ್ದೇವೆ ಅದನ್ನು ಹೊರತುಪಡಿಸಿ

ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿಗೆ 2 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ ಅಲ್ಲಿ District in charge Minister ಏನು Chairman ಆಗಿದ್ದಾರೆ, ಅವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದಾರೆ ತಾವು ಒಂದು ಮಾತು ದಿಕ್ಕು ತಪ್ಪಿಸುತ್ತಿದ್ದಾರೆಂದು ಹೇಳಿದಿರಿ ನಾನು ಸಾಯಂಕಾಲದ ಹೊತ್ತಿಗೆ ಇದರ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ತೆಗೆದುಕೊಂಡು ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಇದರಲ್ಲಿ ಗೊಂದಲ ಬೇಡ

ಶ್ರೀ ಮಲ್ಲಿಕಾರ್ಜುನ ಖರ್ಗೆ ನೋಡಿ ನಿಮಗೆ ಎಷ್ಟು ಬೇಗನೇ ಸ್ಪಂದಿಸಿದರು ಕೋಲಾರ ಅತ್ತೆ ಮಾವನ ಊರು ಎಂದು ಬೇಗ ಸ್ಪಂದಿಸಿದರು

ಶ್ರೀ ಕೆ ಶ್ರೀನಿವಾಸಗೌಡ ನಿಮಗೆ ಏಕೆ ಬಾಧೆ, ಇರಬಹುದು ಅವರ ಮಾವನವರ ಮನೆಗಾದರೂ ಕೇಳುತ್ತಾರಲ್ಲ, ನಮ್ಮೂರಲ್ಲಿ ನೀರಿಲ್ಲವೆಂದು

ಶ್ರೀ ಮಲ್ಲಿಕಾರ್ಜುನ ಖರ್ಗೆ ಇಲ್ಲ, ಸಂತೋಷ ನಿಮಗೆ Atleast ನೀರನ್ನಾದರೂ ಕುಡಿಸುತ್ತಾರಲ್ಲ ಇದಕ್ಕೆ ಹಣದ ಕೊರತೆ ಇರಬಹುದು ಎನ್ನುವುದಕ್ಕೆ ನನ್ನ ಹತ್ತಿರ ಕೆಲವು ಮಾಹಿತಿ ಇದೆ ಆದರೆ ಅವರು ಹಣದ ಕೊರತೆ ಇಲ್ಲವೆಂದು ಹೇಳುತ್ತಾರೆ ಆದುದರಿಂದ ಇದರ ಬಗ್ಗೆ ತಾವು ಹೇಳುವಾಗ ಅವರು ಸ್ಪಷ್ಟಪಡಿಸಬೇಕು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾವು ಎಷ್ಟೇ ಜಂಬ ಕೊಚ್ಚಿಕೊಂಡರೂ ಕೂಡ ವಾಸ್ತವವಾಗಿ ಖಜಾನೆಯಲ್ಲಿ ಏನು ಜಮಾ ಆಗಿರುತ್ತದೆ ಅದು ಮುಖ್ಯ ಅವರು ಇಲ್ಲಿಯವರೆಗೆ ಕೊಟ್ಟಂತಹ concisions, ಹೇಳಿಕೆಗಳು, ಭರವಸೆಗಳು ಹಾಗೂ ಅವರು ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದನ್ನು ನೋಡಿದರೆ, ರೈತರ ಸಾಲ ಮನ್ನಾದಿಂದ ಸುಮಾರು 2,300 ಕೋಟಿ ರೂಪಾಯಿ, pay commission ಜಾರಿ ಮಾಡಿದ್ದರಿಂದ 600 ರಿಂದ 700 ಕೋಟಿ ರೂಪಾಯಿ ಏನು ಹೆಚ್ಚು ಕಡಿಮೆಯಾಗಿದೆ ಅದನ್ನು ಸರಿಪಡಿಸಬೇಕು ಸುಮಾರು ಹೆಚ್ಚು ಕಡಿಮೆ 6,000 ಕೋಟಿ ರೂಪಾಯಿ ಈ ಎಲ್ಲಾ ಬಾಬತ್ತಿನಲ್ಲಿ ಅವರು ತಯಾರಿ ಮಾಘಾಡಬೇಕಾದಂತಹ ಸ್ಥಿತಿ ಬಂದಿದೆ ಈ 6,000 ಕೋಟಿ ರೂಪಾಯಿ ಸಂಗ್ರಹ ಮಾಡುವುದಕ್ಕೆ ಇವರ ಹೇಳಿಕೆ ಪ್ರಕಾರ ಇಲ್ಲಿಯವರೆಗೆ 650 ಕೋಟಿ ರೂಪಾಯಿವರೆಗೆ ನಿರೀಕ್ಷೆ ಮಾಡಿದ್ದಾರೆ 'ಎ ಹರಾಜಿನಿದ ಸುಮಾರು 300 ಕೋಟಿ ರೂಪಾಯಿ ಬಂದರೆ ಹೆಚ್ಚು ಕಡಿಮೆ 950 ಕೋಟಿ ರೂಪಾಯಿ ಎಂದರೆ 1,000 ಕೋಟಿ ರೂಪಾಯಿ

ಇದರಿಂದ ಬಂದಂತಾಯಿತು ಇನ್ನು 5,000 ಕೋಟಿ ರೂಪಾಯಿ ಉಳಿಯುತ್ತದೆ ಇನ್ನೂ 1,000 ಕೋಟಿ ರೂಪಾಯಿ ಅವರು ಸಂಗ್ರಹ ಮಾಡುತ್ತಾರೆಂದು ತಿಳಿದುಕೊಳ್ಳೋಣ ಆದರೆ ಇನ್ನೂ 3,000 ದಿಂದ 4,000 ಕೋಟಿ ರೂಪಾಯಿ ಇವರ budget ನಲ್ಲಿ ಖೋತಾ deficit ಬರುತ್ತದೆ ಅದಕ್ಕೋಸ್ಕರ ಈಗಿನಿಂದಲೇ ಕತ್ತರಿ ಶುರುವಾಗುತ್ತಿದೆ Budget ನಲ್ಲಿ ಹಣವನ್ನು ಕೊಡುತ್ತೇವೆಂದು ತೋರಿಸುವುದು, ಆದರೆ ಆ ಹಣವನ್ನು ಬಿಡುಗಡೆ ಮಾಡುವುದಿಲ್ಲ Resolution ಮಾಡುವುದು, ಆದರೆ ಹಣವನ್ನು ಬಿಡುಗಡೆ ಮಾಡುವುದಿಲ್ಲ 12 ಕೋಟಿ ರೂಪಾಯಿ administrative approval ಕೊಡುವುದು, ಆದರೆ 340 ಲಕ್ಷ ರೂಪಾಯಿಯದು ಮಾತ್ರ ಕೆಲಸ ಮಾಡುವುದು ಎಂದರೆ 3 ಕೋಟಿ 40 ಲಕ್ಷ ಕೊಟ್ಟರೆ, ಇನ್ನು 9 ಕೋಟಿ ರೂಪಾಯಿ ಬಿಡುಗಡೆ ಮಾಡಿಲ್ಲ ಅದನ್ನು ಹೀಗೇ ಮುಂದಕ್ಕೆ ತಳ್ಳಿಕೊಳ್ಳುತ್ತಾ ಹೋಗುವುದು Government order ನಲ್ಲಿ ಹೆಚ್ಚಿನ ಹಣವನ್ನು ತೋರಿಸುವುದು ಕಡಿಮೆ ಕಡಿಮೆ ಹಣವನ್ನು ಬಿಡುಗಡೆ ಮಾಡಿಕೊಳ್ಳುತ್ತಾ ಹೋಗುವುದು ಅಂತಿಮವಾಗಿ ಅವರು deficit ಏನಿದೆ ಅದನ್ನು ಸರಪಡಿಸಿಕೊಳ್ಳುವುದಕ್ಕೋಸ್ಕರ ಇದೆಲ್ಲಾ exercise ನಡೆದಿದೆ ಎನ್ನುವಂತಹ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ ಇದು ಇವತ್ತಲ್ಲ ಅಥವಾ ನಾಳೆ ಹೊರಗೆ ಬೀಳುತ್ತದೆ ಹಣದ ಕೊರತೆ ಇದೆ, ಅದಕ್ಕೆ ಬಹುಶಃ ಇವರು ಬಿಡುಗಡೆ ಮಾಡಿಲ್ಲ ನಿಮಗೆ ಬಿಡುಗಡೆ ಮಾಡುವುದಕ್ಕೆ ಶಕ್ತಿ ಇದೆಯೆಂದರೆ ನಾನು ಈಗಾಗಲೇ ಎಲ್ಲೆಲ್ಲಿ ಎಷ್ಟೆಷ್ಟು ಬಿಡುಗಡೆ ಮಾಡಬೇಕೆಂದು ಹೇಳಿದ್ದೇನೆ ನಾನು ಮಾತನಾಡುವುದಕ್ಕೆ ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ, 9 ಜಿಲ್ಲೆಯಲ್ಲಿ ಕೊರತೆಗಳು ಏನಿವೆ, ಅದು ಜಾನುವಾರು ಸತ್ತಿರುವುದಾಗಲಿ, bridges ಕಿತ್ತು ಹೋಗಿರುವುದಾಗಲೀ, ರಸ್ತೆಗಳು ಹಾಳಾಗಿರುವುದಾಗಲೀ, ಕೆರೆಗಳು ಒಡೆದಿರುವುದಾಗಲೀ ಇವಲ್ಲೆದರ ಬಗ್ಗೆ ಕೂಡ ಫೋಟೋ ಸಹ ಇವೆ ಈ 9 ಜಿಲ್ಲೆಗಳ ಮಾಹಿತಿಯನ್ನು ತಮ್ಮ ಮುಖಾಂತರ ಅವರಿಗೆ ಕೊಡುತ್ತೇನೆ ಇದರ ಬಗ್ಗೆ ಹೇಳಿಕೊಳ್ಳುತ್ತಾ ಕುಳಿತುಕೊಂಡರೆ ಬಹಳಷ್ಟು ಸಮಯವಾಗುತ್ತದೆ ಆದುದರಿಂದ ದಯವಿಟ್ಟು ಅದರ ಬಗ್ಗೆ ಆಕ್ಷನ್ ಏನು ತೆಗೆದುಕೊಳ್ಳುತ್ತೀರಿ ಎಂದು ಹೇಳಿ, ನಾನು ಮಾತನ್ನು ಮುಂದುವರಿಸದೇ REGS ಯೋಜನೆಗೆ ಕೊಟ್ಟಂತಹ ಹಣ ಕೂಡ 3,41,03,100 ಆಗಿದ್ದು, ಅದರಲ್ಲಿ expenditure 2,48,02,900 ಆಗಿದ್ದು, 341 ಕೋಟಿ ರೂಪಾಯಿಯಲ್ಲಿ 348 ಕೋಟಿ ರೂಪಾಯಿ ಮಾತ್ರ ನಿಮ್ಮ ಜಿಲ್ಲೆ ಸಹ ಸೇರಿಕೊಂಡು, ಚಿತ್ರದುರ್ಗ, ಗುಲ್ಬರ್ಗ, ರಾಯಚೂರು, ಬೀದರ್ ಇವೆಲ್ಲಾ ಸೇರಿ National Rural Employment Guaranty Scheme ಕೆಳಗೆ ಖರ್ಚಾಗಿದೆ ದುಡ್ಡು ಇದ್ದು ಎಷ್ಟು ಆಸಕ್ತಿ ವಹಿಸಿದ್ದಾರೆ

ದುಡ್ಡು ಇಲ್ಲದೇ ಇರುವಂತಹ ಪರಸ್ಥಿತಿಯಲ್ಲಿ ಯಾವ ರೀತಿ ಮಾಡಿದ್ದಾರೆ ಈ ಎಲ್ಲಾ ವಿಚಾರ ಕೂಡ ತಮ್ಮ ಮುಂದೆ ಇದೆ ಆದುದರಿಂದ ಈ ಪ್ರಕೃತಿ ವಿಕೋಪದ ವಿಚಾರದಲ್ಲಿ tackle ಮಾಡುವುದರಲ್ಲಿ, ಸ್ಪಂದಿಸುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಷ್ಟು ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕಾಗಿತ್ತು ಅಷ್ಟನ್ನು ಬಿಡುಗಡೆ ಮಾಡಿಲ್ಲ ಈಗ ಕೋಲಾರಕ್ಕೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿನ ಬಗ್ಗೆ ಚರ್ಚೆ ಬಂತು, ಅದಕ್ಕೆ ಸ್ಪಂದಿಸಿದರು ಆದರೆ ಹೆಚ್ಚು ಮಳೆಯಿಂದ ಎಲ್ಲಿ ತೊಂದರೆಯಾಗಿದೆ ಅಂತಹ ಕಡೆಗಳಲ್ಲಿ ಪ್ರತಿ ತಾಲ್ಲೂಕಿಗೆ 10 ಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದನ್ನು ಬಿಟ್ಟರೆ, ಇನ್ನು ಯಾವ ಹಣವನ್ನು ಬಿಡುಗಡೆ ಮಾಡಿಲ್ಲ ಇದರಿಂದ ಸರ್ಕಾರ ಸಂಪೂರ್ಣವಾಗಿ tackle ಮಾಡುವುದರಲ್ಲಿ ವಿಫಲವಾಗಿದೆ ಇನ್ನೂ ಅವರು ಮಾಹಿತಿಯನ್ನು ಸಂಗ್ರಹಿಸುವುದರಲ್ಲಿ ಇದ್ದಾರೆ Interim Memorandum ಕೂಡ ತಯಾರು ಮಾಡಿಲ್ಲ ಇವರು ವಿಶೇಷವಾಗಿ ಹಣ ಏನು ಬಿಡುಗಡೆ ಮಾಡಬೇಕಾಗಿತ್ತು ಅದನ್ನು ಬಿಡುಗಡೆ ಮಾಡಿಲ್ಲ ಇದು ಸರಿಯಲ್ಲ ಎನ್ನುವಂತಹ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ (ಹಳಿಯಾಳ) ಮಾನ್ಯ ಅಧ್ಯಕ್ಷರೆ, ನಾನು ಭಾಷಣ ಮಾಡುವುದಿಲ್ಲ, ಎರಡು ಸಲಹೆಗಳನ್ನು ಕೊಡುತ್ತೇನೆ ಮಾನ್ಯ ಕಂದಾಯ ಸಚಿವರೆ, ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ ನಿಮ್ಮ ಭಾಷಣದಲ್ಲಿ ನನಗೆ ಏನು ಉತ್ತರ ಬೇಕೆಂದರೆ ಅತಿವೃಷ್ಟಿಯಿಂದ ಭತ್ತ, ಜೋಳ, ಹತ್ತಿ ಹೀಗೆ ಬೆಳೆಗಳು ನಾಶವಾಗಿವೆ ಅಲ್ಲಿ ನೀರು ನಿಂತಿದೆ ಇನ್ನೂ ನಿಮ್ಮ ಇಲಾಖೆಯಿಂದ ಸಮೀಕ್ಷೆಯಾಗಿಲ್ಲ ಏಕೆಂದರೆ ರೈತರಿಗೆ compensation ಕೊಡಬೇಕಲ್ಲ ಜೋಳ, ಹತ್ತಿ, ಕಬ್ಬು ಮತ್ತು ಭತ್ತ ಕೆಲವು ಕಡೆ ಹಾಳಾಗಿದೆ, ಇನ್ನು ಕೆಲವು ಕಡೆ ನೀರು ನಿಂತಿದೆ ಸಮೀಕ್ಷೆ ಮಾಡುವ ವಿಚಾರದಲ್ಲಿ ತಾವು ಆದೇಶವನ್ನು ಕೊಡಬೇಕಾಗುತ್ತದೆ ನಿಮ್ಮ ಮತ್ತು ಕೃಷಿ ಇಲಾಖೆಯಿಂದ ಸೇರಿ ಬಿತ್ತನೆ ಬೀಜ ಮತ್ತು ಬೆಳೆ ಪರಿಹಾರಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು ನಮ್ಮ ಸ್ನೇಹಿತರಾದ ರೇವಣ್ಣನವರು ಇಲ್ಲಿ ಬಂದಿದ್ದಾರೆ ಮೊನ್ನೆ ತಾವು ಇರಲಿಲ್ಲ, ಇಡೀ ಮುಳಗೋಡು ತಾಲ್ಲೂಕಿನಲ್ಲಿ ಆರು ದಿನದಿಂದ ವಿದ್ಯುಚ್ಛಕ್ತಿ ಇಲ್ಲ ನಾನು ಇದನ್ನು ಟೀಕೆ ಮಾಡುವುದಕ್ಕೆ ಹೇಳುತ್ತಿಲ್ಲ ಅಧಿಕಾರಿಗಳನ್ನು ಕೇಳಿದರೆ ಅವರು conductors, transformers ಮತ್ತು wire ಇಲ್ಲ ನಾವೇನು ಮಾಡಬೇಕೆಂದು ಸಮಸ್ಯೆಯನ್ನು ಹೇಳುತ್ತಾರೆ ನಾನು ಮಾನ್ಯ ಸ್ನೇಹಿತರಾದಂತಹ ರೇವಣ್ಣನವರಿಗೆ

ವಿನಂತಿ ಮಾಡುತ್ತೇನೆ, ನಿಮ್ಮಂತಹ ದಕ್ಷ ಸಮರ್ಥ ಮಂತ್ರಿಯವರಿದ್ದಾಗ ಈ ರೀತಿಯಾಗಬಾರದು

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಏನೇನೋ ಹೇಳುತ್ತಿದ್ದೀರಿ ನಿಮ್ಮಿಬ್ಬರಲ್ಲೂ ಏನೋ understanding ಕಾಣುತ್ತಿದೆ

ಶ್ರೀ ಹೆಚ್ ಎಂ ರೇವಣ್ಣ ತಾವು ಎರಡು ನಿಮಿಷ ಯೀಲ್ಡ್ ಆಗಿ ಸಾರ್

ಶ್ರೀ ಆರ್ ವಿ ದೇಶಪಾಂಡೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಅಲ್ಲಿಗೆ ತಕ್ಷಣ ಮೆಟಿರಿಯಲ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿ

ಶ್ರೀ ಜೆ ಸಿ ಮಾಧುಸ್ವಾಮಿ ಎಲ್ಲರಿಗೂ ಎರಡೆರಡು ಬಾರಿ ಭಾಷಣ ಮಾಡುವುದಕ್ಕೆ ಅವಕಾಶ ಕೊಡಿ, ನಾನು ಮಾಡುತ್ತೇವೆ

ಶ್ರೀ ಆರ್ ವಿ ದೇಶಪಾಂಡೆ ಆಗ ಮಾನ್ಯ ಮಂತ್ರಿಗಳು ಇರಲಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಇರಲಿಲ್ಲವೆಂದು ಮತ್ತೆ ಎದ್ದು ಭಾಷಣ ಮಾಡುವುದಕ್ಕಾಗುತ್ತದೆಯೇ? You are a seasoned politician

ಶ್ರೀ ಆರ್ ವಿ ದೇಶಪಾಂಡೆ ನಾನು ಭಾಷಣ ಮಾಡಲಿಲ್ಲ, ಅವರಿಗೆ ಸಲಹೆ ಕೊಡುತ್ತದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ ಹೇಳಬೇಕಾದುದನ್ನೆಲ್ಲ ಹೇಳಿದ್ದೀರಿ ಅವರು reply ಮಾಡಿದ ಮೇಲೆ clarification ಕೇಳುವುದು ಬೇರೆ ವಿಷಯ ನಾವು ಎಲ್ಲಿ ಎಷ್ಟೊತ್ತು ಕುಳಿತುಕೊಂಡು ಕೇಳುವುದು?

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾಂತಹ ದೇಶಪಾಂಡೆಯವರು ಆರು ದಿವಸದಿಂದ ಕರೆಂಟ್ ಇಲ್ಲ, ಹಾಗೂ ಖಇ, ಐಗೇಆ ಇಲ್ಲವೆಂದು ಹೇಳಿದರು TC ಮತ್ತು wire ಕೊಡಿಸುವುದಕ್ಕೆ ಇವತ್ತೇ

ಕ್ರಮವನ್ನು ತೆಗೆದುಕೊಳ್ಳುತ್ತೇನೆ ಕೆಲವು ಕಡೆ forest area ದಲ್ಲಿ ಮಳೆ ಸಿಕ್ಕಾಪಟ್ಟೆ ಆಗುತ್ತಿರುವುದರಿಂದ ಹೋಗುವುದಕ್ಕಾಗುವುದಿಲ್ಲ ಅಲ್ಲಿ 40 ರಿಂದ 45 ಇಂಚು ಮಳೆಯಾಗುತ್ತಿದೆ ಕೆಲವು ಭಾಗದಲ್ಲಿ restore ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ ಉದಾಹರಣೆಗೆ ಸಕಲೇಶಪುರ ತಾಲ್ಲೂಕಿನಲ್ಲಿ 45 ಸೆಂ ಮೀ ಮಳೆ ಆಗುತ್ತಿದೆ, ಅಲ್ಲಿ ಕಾಡು ಒಳಗಡೆ ಹೋಗುವುದಕ್ಕಾಗುವುದಿಲ್ಲ Forest area ಇಲ್ಲದೆ ಇದ್ದು, ಮೈದಾನ ಇರುವಂತಹ ಪ್ರದೇಶದಲ್ಲಿ immediate ಆಗಿ restore ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ನಮ್ಮ ಅಧಿಕಾರಿಗಳಿಗೆ ಇಲಾಖೆಯಲ್ಲಿ ದಿನಗೂಲಿ ಮೇಲೆ ಕೆಲಸಗಾರರನ್ನು ಮಳೆಗಾಲದಲ್ಲಿ ಮೂರು ತಿಂಗಳ ಮಟ್ಟಿಗೆ ತೆಗೆದುಕೊಂಡು ಕೆಲಸ ಮಾಡಿಸಿ ಎಂದು ಹೇಳಿದ್ದೇನೆ TC, wire ಮತ್ತು ಕಂಬವನ್ನು ಕೊಡಿಸುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆ

ಈಗ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಗೂ ವೈರ್ ಎಷ್ಟು ಬೇಕೊ ಅಷ್ಟನ್ನು ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ

ಉಪಾಧ್ಯಕ್ಷರು ಸರ್ಕಾರದ ಉತ್ತರವನ್ನು ಯೋಜನಾನಂತರ ಮೇಲೆ ತೆಗೆದುಕೊಳ್ಳೋಣ ಈಗ ಸದನವನ್ನು 2–30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವನ್ನು ಮಧ್ಯಾಹ್ನ 1–22 ಗಂಟೆಗೆ ಮುಂದೂಡಿ, ಪುನಃ ಮಧ್ಯಾಹ್ನ 2–30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 2 ಗಂಟೆ 53 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು ಈಗ ಸರ್ಕಾರದಿಂದ ಉತ್ತರ

ಶ್ರೀ ಜೆ ಸಿ ಮಾಧುಸ್ವಾಮಿ ಸರ್ಕಾರ ಎಲ್ಲಿದೆ ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸರ್ಕಾರ ಆರಾಮವಾಗಿ ಬರುತ್ತಿದೆ ನೀವು ಇಲ್ಲವೆಂದು ಹೇಳುತ್ತಿರಲ್ಲ?

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಸರ್ಕಾರದಿಂದ ಉತ್ತರ ಎಂದು ಹೇಳಿಬಿಟ್ಟರು ಹೀಗಾಗಿ ಯಾರಾದರೊಬ್ಬರು ಎದ್ದೇಳಿ ಸಾರ್

ಶ್ರೀ ಹೆಚ್ ಡಿ ಕುಮಾರ್ ಸ್ವಾಮಿ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ನಮ್ಮ ಉತ್ತರ ಕೇಳುವುದಕ್ಕೆ ಪ್ರಮುಖವಾಗಿ ಚರ್ಚೆ ಮಾಡಿದವರೇ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನಾವು ಇದ್ದೇವೆ ಹೇಳಿ ಸಾರ್

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ದೊಡ್ಡ ಪಕ್ಷ ನಾಯಕರುಗಳು ಇಲ್ಲವಲ್ಲ ಅವರೂ ಕೂಡ ನಮ್ಮ ತರಹ ಆರಾಮಾಗಿ ಬರುತ್ತಾರೆ ಕಳೆದ 3–4 ದಿವಸಗಳ ಹಿಂದೆ ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಆಗಿರತಕ್ಕಂಥ ಅತಿವೃಷ್ಟಿಯ ವಿಷಯವಾಗಿ ನಿಯಮ 69ರ ಅಡಿಯಲ್ಲಿ ತಾವು ಸದನದಲ್ಲಿ ಏನೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ, ಎಲ್ಲಾ ಸದಸ್ಯರು ಈ ಒಂದು ಅತಿವೃಷ್ಟಿಯ ವಿಷಯವಾಗಿ, ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸರ್ಕಾರದ ತಪ್ಪು ಒಪ್ಪುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರಕ್ಕೆ ತಪ್ಪು ಮಾಡಿರತಕ್ಕಂಥ ಸಂದರ್ಭದಲ್ಲಿ ಸಲಹೆಗಳನ್ನು ಕೊಡುವುದಕ್ಕೆ ತಾವೇನು ಒಂದು ಅವಕಾಶವನ್ನು ಕೊಟ್ಟಿದ್ದೀರಿ, ಈ ಒಂದು ವಿಷಯದ ಬಗ್ಗೆ ಸದನದಲ್ಲಿ ಎಲ್ಲಾ ಹಿರಿಯ ಅನು'ವವಿರುವ ಸದಸ್ಯರು ಮತ್ತು ಹೊಸದಾಗಿ ಆಯ್ಕೆಯಾಗಿರುವ ಸದಸ್ಯರುಗಳು ಈ ವಿಷಯವನ್ನು ಏನು ಪ್ರಸ್ತಾಪಿಸಿದ್ದಾರೆ, ಸರ್ಕಾರಕ್ಕೆ ಹಲವಾರು ವಿಷಯಗಳ ಬಗ್ಗೆ ಗಮನ ಸೆಳೆದಿದ್ದಾರೆ, ಅವರೆಲ್ಲರಿಗೂ ಮೊದಲನೆಯದಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ ಅತಿವೃಷ್ಟಿಯ ವಿಷಯವಾಗಿ ಹಲವಾರು ಹಿರಿಯ ಸದಸ್ಯರುಗಳೇನು ಚರ್ಚೆಯನ್ನು ಮಾಡಿದ್ದಾರೆ, ನಾನು

ಅದನ್ನೆಲ್ಲಾ ಗಮನಿಸಿದ್ದೇನೆ ಹಿರಿಯ ಸದಸ್ಯರುಗಳೇನು ಚರ್ಚೆಯನ್ನು ಮಾಡಿದ್ದಾರೆ, ನಾನು ಅದನ್ನೆಲ್ಲಾ ಗಮನಿಸಿದ್ದೇನೆ ವಿರೋ ಪಕ್ಷದ ನಾಯಕರು ಈ ಒಂದು ವಿಷಯದ ಬಗ್ಗೆ ಸದನದಲ್ಲಿ ಗಮನ ಸೆಳೆದಿದ್ದಾರೆ, ವಿರೋಧ ಪಕ್ಷದ ನಾಯಕರು ಹಾಗೂ ಹಲವಾರು ಜನ ಹಿರಿಯ ಸದಸ್ಯರುಗಳು ಅವರ ಮಾತುಗಳನ್ನು ಆಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಸಿಕ್ಕಿರತಕ್ಕಂಥ ಮಾಹಿತಿಗಳ ಸಮೇತವಾಗಿ ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ನನಗೆ ಎಲ್ಲೋ ಒಂದು ಕಡೆ ಹಿರಿಯ ಸದಸ್ಯರುಗಳಿಂದ ಸರ್ಕಾರಕ್ಕೆ ಹೆಚ್ಚಿನ ಸಲಹೆಗಳು ಸಿಗುವಂಥಾದ್ದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ಸು ಕಂಡಿಲ್ಲವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ ಅದಕೆ ಕಾರಣ ಸನ್ಮಾನ್ಯ ಧರ್ಮಸಿಂಗ್‌ರವರು ಇರಬಹುದು, ಅವರು ವಿರೋಧ ಪಕ್ಷದ ನಾಯಕರು, ಸುದೀರ್ಘವಾಗಿ ಈ ಒಂದು ಸದನದ ಸದಸ್ಯರಾಗಿ ಕೆಲಸ ಮಾಡಿರತಕ್ಕಂಥವರು ಹಾಗೂ ಬಹುತೇಕ ಅವರು ಸುದೀರ್ಘ ರಾಜಕಾರಣದಲ್ಲಿ ಮಂತ್ರಿಗಳಾಗಿ ಅಧಿಕಾರವನ್ನು ನಿರ್ವಹಿಸಿರುವುದು ಮತ್ತು ಮುಖ್ಯಮಂತ್ರಿಗಳಾಗಿ ಏನು ಕೆಲಸವನ್ನು ನಿರ್ವಹಿಸಿದ್ದಾರೆ, ಅವರು ಈ ಸದನದಲ್ಲಿ ಸರ್ಕಾರದ ಲೋಪದೋಷಗಳ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತಾರೆನ್ನುವ ನಂಬಿಕೆಯನ್ನು ನಾನಿಟ್ಟಿದ್ದೆ ಆದರೆ, ವಿರೋದಿ ಪಕ್ಷದ ನಾಯಕರು ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ವಿರೋದಿ ಪಕ್ಷವೋ ವಿರೋಧ ಪಕ್ಷವೋ ಎನ್ನುವ ಗೊಂದಲದಲ್ಲಿ ನಾವು ಇದ್ದೇವೆ ಏಕೆಂದರೆ, ನೀವು ವಿರೋದಿ ಪಕ್ಷ ಎನ್ನುತ್ತೀರಿ ನಾವು ವಿರೋಧ ಪಕ್ಷ ಎನ್ನುತ್ತೇವೆ ಇದರಲ್ಲಿ ಯಾವುದು ಸರಿ ಎಂದು ನೀವಾದರೂ ಹೇಳಿ ಅದು ವಿರೋಧ ಪಕ್ಷ ಸಾರ್

ಶ್ರೀ ಹೆಚ್ ಡಿ ಕುಮಾರಸ್ವಾಮಿ ಆಯಿತು ವಿರೋಧ ಪಕ್ಷವೆಂದು ಕರೆಯುತ್ತೇವೆ ವಿರೋದಿ ಪಕ್ಷ ಎಂತಲೂ ಕರೆಯಬಹುದು

ಶ್ರೀ ಎಸ್ ರಾಜೇಂದ್ರನ್ ವಿರೋಧ ಪಕ್ಷವೆಂದು ತಾವು ಹೇಳಿದಾಗ ಪೂರ್ತಿಯಾಗಿ ನಮ್ಮನ್ನು ವಿರೋಗಳೆಂದು ಕೊಂಡಿದ್ದೀರಾ ಎಂದು ನಮಗೆ ಅನುಮಾನ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಧರ್ಮಸಿಂಗ್ ರವರು ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ ಅದರಲ್ಲಿ ಪ್ರಮುಖವಾಗಿ ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನು ಈ ಸರ್ಕಾರ ಸರಿಯಾದ ರೀತಿಯಲ್ಲಿ ಉಪಯೋಗ

ಮಾಡಿಕೊಂಡಿಲ್ಲವೆಂದು ಹೇಳಿದ್ದಾರೆ ಅವರೇನು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಆ ಅಂಕಿ ಅಂಶಗಳು ವಾಸ್ತಾವಾಂಶಕ್ಕೆ ದೂರವಾಗಿವೆ ಎಂದು ಹೇಳುವುದಕ್ಕೆ ಬಯಸುತ್ತೇನೆ ಅದರೆ ಜೊತೆಗೆ ಅವರು ಅತಿವೃಷ್ಟಿಯ ವಿಷಯವಾಗಿ ಚರ್ಚೆ ಮಾಡುವುದರ ಜೊತೆಗೆ ಇತ್ತೀಚಿನ ಚುನಾವಣೆಗಳನ್ನು ಬಹಳ ಪ್ರಮುಖವಾಗಿ ಚರ್ಚಿಸಿದ್ದಾರೆ ದಿವಗಂತ ಇಂದಿರಾಗಾಂಯವರು ಈ ದೇಶಕ್ಕೆ ತಂದಂಥ ಹಲವಾರು ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಕೂಡ ಚರ್ಚಿಸಿದ್ದಾರೆ ದೇವರಾಜ್ ಅರಸ್‌ರವರು ಸುದೀರ್ಘ ರಾಜಕಾರಣದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿರುವ ಬಗ್ಗೆಯೂ ಕೂಡ ಚರ್ಚಿಸಿದ್ದಾರೆ ಆದರೆ ಅವರು ಕೆಲವೊಂದು ವಾಸ್ತಾವಂಶಕ್ಕೆ ಹತ್ತಿರಕ್ಕೆ ಮಾತನಾಡಲಿಲ್ಲ ಎನ್ನುವುದಕ್ಕೆ ಒಂದು ವಿಷಯವನ್ನು ಇಲ್ಲಿ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ ಮಾನ್ಯ ಶರದ್ ಪವಾರ್ ರವರು ಬಂದರು, ಒಟ್ಟಾರೆ ಆ ಜಾಗದಲ್ಲಿರತಕ್ಕಂಥ ಪ್ರವಾಹ ಪೀಡಿತ ಪ್ರದೇಶಕ್ಕೆ ಈಗಾಗಲೇ 3270 ಕೋಟಿ ರೂಪಾಯಿ ಕೇಂದ್ರ ಸರ್ಕಾರಕ್ಕೆ ಬಿಡುಗಡೆ ಮಾಡಿದೆ ಅವರು ಹೇಳಿರುವ ವಿಷಯ ಒಂದು ಕಡೆ ಮತ್ತೊಂದು ಕಡೆ ವಿಧದ ಪ್ಯಾಕೇಜಿನ ವಿಷಯದಲ್ಲಿ ಸುಮಾರು 2690 ಕೋಟಿ ರೂಪಾಯಿ ಕೊಟ್ಟರೂ ಕೂಡ ಏನೂ ಕೆಲಸವಾಗಿಲ್ಲವೆಂದು ಹೇಳಿದ್ದಾರೆ ಅದೇರೀತಿ ಸನ್ಮಾನ್ಯ ಸಿದ್ದರಾಮಣ್ಣನವರು ಮಾತನಾಡುವ ಸಂದರ್ಭದಲ್ಲಿ 2690 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಈಗಾಗಲೇ ಬಿಡುಗಡೆ ಮಾಡಿದೆ ಈ ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲಿಕ್ಕೆ ಈ ಸರ್ಕಾರ ಸರಿಯಾದ ಗಮನ ಹರಿಸಿಲ್ಲ ಎನ್ನುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ ಹೀಗೆ ಇವತ್ತು ಬೆಳಿಗ್ಗೆ ನಮ್ಮ ಹಿರಿಯರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೇಂದ್ರ ಸರ್ಕಾರದಿಂದ ಏನು ಭಾರಿ ಮೊತ್ತದ ಹಣ ಈಗಾಗಲೇ ರಾಜ್ಯ ಸರ್ಕಾರಕ್ಕೆ ರವಾನೆಯಾಗಿ ಹೋಗಿದೆ, ಈ ಹಣವನ್ನು ಈ ಸರ್ಕಾರ ಉಪಯೋಗ ಮಾಡಿಕೊಳ್ಳಲಿಕ್ಕೆ ಇವರು ವಿಫಲರಾಗಿದ್ದಾರೆ ಎನ್ನುವ ರೀತಿಯಲ್ಲಿ ಪದೇ ಪದೇ ಹಿರಿಯ ಸದಸ್ಯರುಗಳು ಅವರ ಭಾವನೆಗಳನ್ನು ಈ ಸದನದಲ್ಲಿ ಇಡತಕ್ಕಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ರೀತಿಯ ಸಹಕಾರ ಸಿಕ್ಕಿದೆ ಎನ್ನುವ ರೀತಿಯಲ್ಲಿ ಆ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ ಇವತ್ತಿನ ದಿವಸ ವಿದರ್ಭ ಪ್ಯಾಕೇಜ್‌ನಲ್ಲಿ ಇದುವರೆಗೆ ರಾಜ್ಯ ಸರ್ಕಾರಕ್ಕೆ 66 ಕೋಟಿ ರೂಪಾಯಿಗಳು ಮಾತ್ರ ಬಂದಿದೆ ಎನ್ನತಕ್ಕಂಥ ವಿಷಯವನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಈ ಸರ್ಕಾರ ಇವತ್ತಿನ ದಿವಸ ಅತೀವೃಷ್ಟಿಗೆ ಸಂಬಂಧ ಪಟ್ಟಂತ ಗಮನವನ್ನು ಕೊಟ್ಟಿಲ್ಲವೆಂಬುದು ಮತ್ತು ಯಾವ ಮಂತ್ರಿಗಳೂ ಸಹ ಆ ಒಂದು ಭಾಗಗಳಲ್ಲಿ ಪ್ರವಾಸವನ್ನು ಮಾಡಿಲ್ಲವೆಂಬ ರೀತಿಯಲ್ಲಿ ಹೇಳಿದ್ದಾರೆ ಅಂದರೆ, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳೂ ಸಹ ಹೋಗಲಿಲ್ಲ ನಾವುಗಳು

ಹಿಂದೆ ಸರ್ಕಾರವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಕೆಲಸವನ್ನು ಮಾಡಿದ್ದೇವೆಂದು ಹೇಳಿದ್ದಾರೆ ಆದ್ದರಿಂದ, ಅವರು ಹಿಂದೆ ಮಾಡಿರತಕ್ಕಂಥ ಕೆಲಸಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಏಕೆಂದರೆ, ಮೊದಲನೇ ಸಾಲಿನಲ್ಲಿ ಕುಳಿತು ಕೆಲಸ ಮಾಡತಕ್ಕಂಥವರು ಮತ್ತು ಮೊದಲನೇ ಬಾರಿಗೆ ಮಂತ್ರಿಗಳಾಗಿರುವಂಥವರು ನಮ್ಮ ಕಡೆ ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ ಆ ಸಾಲಿನಲ್ಲಿರುವ ಪ್ರಮುಖ ಪಕ್ಷವಾಗಿರತಕ್ಕಂಥ ಕಾಂಗ್ರೆಸ್ ಪಕ್ಷದ ಸುದೀರ್ಘ ಆಡಳಿತದ ರಾಜಕಾರಣ ಈ ರಾಜ್ಯದಲ್ಲಿತ್ತು ಆದ್ದರಿಂದ, ಅವರಿಗೆ ಇರತಕ್ಕಂಥ ರಾಜಕೀಯ ಅನುಭವ ಮತ್ತು ಆಡಳಿತದ ಅನುಭವ ನಮ್ಮಲ್ಲಿ ಸ್ವಲ್ಪ ಕಡಿಮೆ ಇದೆ ಎನ್ನತಕ್ಕಂಥಾದ್ದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ ಈ ವಿಷಯದಲ್ಲಿ ಎರಡನೇ ಮಾತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಹಣವನ್ನು ಬಿಡುಗಡೆ ಮಾಡಿಲ್ಲವೆಂಬ ರೀತಿಯಲ್ಲಿ ವಿಷಯವನ್ನು ಹೇಳುತ್ತಿದ್ದಾರೆ ಅತೀವೃಷ್ಟಿಯಿಂದ ಆಗಿರತಕ್ಕಂಥ ನಷ್ಟಗಳ ಬಗ್ಗೆ ಸರ್ಕಾರ ಸಂಪೂರ್ಣವಾದ ಮಾಹಿತಿಗಳನ್ನು ಕ್ರೋಢೀಕರಿಸಿದರೆ ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಸಿ ಆರ್ ಎಫ್ ಗೈಡ್‌ಲೈನ್ಸ್ ಪ್ರಕಾರ ಕಳೆದ ಏಪ್ರಿಲ್ ತಿಂಗಳಿಂದ 205 ಜನ ಮರಣ ಹೊಂದಿದ್ದಾರೆ ಇದೇನು 15 ದಿವಸದಿಂದ ಆಗಿರತಕ್ಕಂಥಾದ್ದಲ್ಲ ಕಳೆದ ಏಪ್ರಿಲ್‌ನಿಂದ ಆಗಿರತಕ್ಕಂಥ ಜೀವ ಹಾನಿಗೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿ ಪರಿಹಾರವನ್ನು ಕೊಟ್ಟಿದ್ದೇವೆ ಎನ್ನತಕ್ಕಂಥಾದ್ದನ್ನು ಸದನ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಮತ್ತೆ ಹೌಸ್ ಡ್ಯಾಮೇಜ್ ವಿಷಯದಲ್ಲಿಯೂ ಕೂಡ ಎಲ್ಲಾ ಜಿಲ್ಲೆಗಳಿಂದ ತರಿಸಿರುವ ವರದಿಯ ಪ್ರಕಾರ 14 32 ಕೋಟಿ ರೂಪಾಯಿಗಳನ್ನು ಹೌಸ್ ಡ್ಯಾಮೇಜ್‌ಗೆ ಬಿಡುಗಡೆ ಮಾಡಬೇಕಾಗಿದೆ ಕ್ರಾಪ್ ಕಾಂಪ್‌ನ್ಸೇಷನ್ ಬಗ್ಗೆ ಇರತಕ್ಕಂಥ ಗೈಡ್‌ಲೈನ್ಸ್ ಪ್ರಕಾರ 7 ಕೋಟಿ ರೂಪಾಯಿಗಳಷ್ಟು ನಷ್ಟವಾಗಿರತಕ್ಕಂಥಾದ್ದರ ಬಗ್ಗೆ ವರದಿಯನ್ನು ಸರ್ಕಾರ ತರಿಸಿಕೊಂಡಿದೆ ಆದ್ದರಿಂದ, ಸರ್ಕಾರ ಮೌನವನ್ನು ವಹಿಸಿಲ್ಲ ವಂಬ ಇಷಯವನ್ನು ಈ ಸದನದ ಸದಸ್ಯರ ಗಮನಕ್ಕೆ ತಮ್ಮ ಮುಖಾಂತರ ತರುವುದಕ್ಕೆ ಬಯಸುತ್ತೇನೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಬೆಳಿಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ಪರಿಹಾರವನ್ನು ಕೊಡತಕ್ಕಂಥಾದ್ದಕ್ಕೆ ತೀರ್ಮಾನ ಮಾಡಿದೆ ಆದರೆ, ಆ ಹಣವನ್ನು ಬಿಡುಗಡೆ ಮಾಡಿಲ್ಲವೆಂಬ ವಿಷಯವನ್ನು ಪ್ರಸ್ತಾಪ ಮಾಡಿದರು ಕೇಂದ್ರ ಸರ್ಕಾರ ಪರಿಹಾರದ ಒಂದು ನಿಯಮವನ್ನು ಬದಲಾವಣೆ ಮಾಡಿ ಜೂನ್ 27ನೇ ತಾರೀಖಿನಿಂದ ಒಂದು ಹೊಸ ನೀತಿಯನ್ನು ತಂದಿರತಕ್ಕಂಥಾದ್ದನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಅದಕ್ಕಿಂತ ಮುಂಚೆ ನಾನು ಹೇಳುವುದೇನೆಂದರೆ, ಈ ಒಂದು ಮೈತ್ರಿ ಸರ್ಕಾರ ಬಂದ ಮೇಲೆ ಕಳೆದ

ವರ್ಷ ಪ್ರಕೃತಿಯ ಒಂದು ಅಸಹಕಾರದಿಂದ ಅತೀವೃಷ್ಟಿ ಅಥವಾ ಅನಾವೃಷ್ಟಿ ತೊಂದರೆಗಳನ್ನು ನಾವು ಅನುಭವಿಸಿದ್ದೇವೆ ಒಂದು ಕಡೆ ಅತೀವೃಷ್ಟಿಯಾದರೆ ಮತ್ತೊಂದು ಕಡೆ ಅನಾವೃಷ್ಟಿಯಾಗಿರತಕ್ಕಂಥ ಘಟನೆಗಳನ್ನು ಈ ರಾಜ್ಯದಲ್ಲಿ ಮೊದಲನೇ ಬಾರಿಗೆ ನೋಡುತ್ತಿದ್ದೇವೆ, ಕಳೆದ ವರ್ಷ ಆಗಿರತಕ್ಕಂಥ ಅತೀವೃಷ್ಟಿ ಮತ್ತು ಅನಾವೃಷ್ಟಿ ವಿಷಯದಲ್ಲಿ ಪ್ರತಿ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಆದರೆ, ಇವತ್ತು ಬೆಳಿಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ನನ್ನ ತಾಲ್ಲೂಕಿಗೆ ಕೇವಲ 34 ಲಕ್ಷ ಹಣ ಬಿಡುಗಡೆ ಮಾಡಿದ್ದಾರೆ ಹೆಚ್ಚಿನ ಹಣ ಇನ್ನೂ ಬಂದಿಲ್ಲವೆಂದು ಹೇಳಿದರು ಇವತ್ತು ಡಾ ಸುಧಾಕರ್‌ರವರು ಹಿಂದೆ ಕುಳಿತುಕೊಂಡಿದ್ದಾರೆ ಚಿಂತಾಮಣಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಅವರ ಹತ್ತಿರ ಕೂಡ ಮಾಹಿತಿ ಇದೆ ನಾನು ಕೋಲಾರ ಜಿಲ್ಲೆಯ ಅಳಿಯನೆಂದು ಬಹಳ ಬೇಗ ಸ್ಪಂದಿಸಿದೆ ಎಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು ಆದರೆ, ನಾನು ಕೇವಲ ಕೋಲಾರ ಜಿಲ್ಲೆಗೆ ಮಾತ್ರ ಸ್ಪಂದಿಸಿಲ್ಲ ಇಡೀ ರಾಜ್ಯದಲ್ಲಿನ ಯಾವ ಒಂದು ತಾಲ್ಲೂಕಿನಲ್ಲಿ ಅತೀವೃಷ್ಟಿ ಮತ್ತು ಅನಾವೃಷ್ಟಿಯಿಂದ ಜನ ನೊಂದಿದ್ದಾರೆ ಈ ಎಲ್ಲಾ ತಾಲ್ಲೂಕುಗಳಿಗೆ ಇವತ್ತಿನ ದಿವಸ ಸಮರ್ಪಕವಾಗಿ ಹಣ ಬಿಡುಗಡೆ ಮಾಡತಕ್ಕಂಥದರಲ್ಲಿ ತೀರ್ಮಾನಗಳನ್ನು ಮಾಡಿದ್ದೇವೆ ಆದ್ದರಿಂದ ಈ ವಿಷಯವನ್ನು ತಿರುಚತಕ್ಕಂಥದು ಬೇಡವೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡುವುದಕ್ಕೆ ಬಯಸುತ್ತೇನೆ ಎಲ್ಲಾ ಜಿಲ್ಲೆಗಳಿಗೆ ಕಳೆದ ವರ್ಷ 2 ಕೋಟಿ ರೂಪಾಯಿಗಳವರೆಗೆ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ ಈ ವರ್ಷ ಕುಡಿಯುವ ನೀರಿನ ಸಮಸ್ಯೆಗೆ 49 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ ಯಾವ್ಯಾಯ ಜಿಲ್ಲೆಗಳಲ್ಲಿ ತೊಂದರೆಗಳಿದ್ದಾವೆಯೋ ಆ ಒಂದು ಜಿಲ್ಲೆಗಳಿಗೆ 47 50 ಕೋಟಿ ರೂಪಾಯಿ ಗಳವರೆಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಇದಕ್ಕೆ ಸಂಬಂದಪಟ್ಟಂಥ ಜಿಲ್ಲಾವಾರು ಪಟ್ಟಿಯನ್ನು ಸದನದ ಮುಂದಿಡುವುದಕ್ಕೆ ನಾನು ಸಿದ್ಧನಿದ್ದೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ತಾವು ಎಲ್ಲಾ ಜಿಲ್ಲೆಗಳಿಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ ಆದರೆ, ನಮ್ಮ ಜಿಲ್ಲೆಗೆ ಕೇವಲ 50 ಲಕ್ಷ ರೂಪಾಯಿ ಮಾತ್ರ ಬಂದಿದೆ ಜಿಲ್ಲಾಕಾರಿಗಳು ನಮಗೆ ಪತ್ರ ಬರೆದು ಆ ಹಣದಲ್ಲಿ 8 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಬೇರೆ ಜಿಲ್ಲೆಗೆ ಕೊಟ್ಟಿರತಕ್ಕಂಥದು ನನಗೆ ಗೊತ್ತಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಬರಗಾಲದ ಸಂಕಷ್ಟಕ್ಕೆ ಒಳಗಾಗಿರತಕ್ಕಂಥ ಜಿಲ್ಲೆಗಳಿಗೆ 2 ಕೋಟಿ ರೂಪಾಯಿಗಳನ್ನು ತಾಲ್ಲೂಕುವಾರು ಬಿಡುಗಡೆ ಮಾಡಿರಕ್ಕಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ ಕುಡಿಯುವ ನೀರಿನ ವಿಷಯದಲ್ಲಿ ಸರ್ಕಾರ ಸರಿಯಾಗಿ ಹಣವನ್ನು ಬಿಡುಗಡೆ ಮಾಡಿಲ್ಲ, ಕೇವಲ ಕಾಗದ ಪತ್ರಗಳಲ್ಲಿ ಮಾತ್ರ ಹಣವನ್ನು ಬಿಡುಗಡೆ ಮಾಡಿರತಕ್ಕಂಥ ವಿಷಯವನ್ನು ಸರ್ಕಾರ ಹೇಳುತ್ತಿದೆ ಎಂಬ ಮಾತನ್ನು ಹೇಳುತ್ತಿದ್ದಾರೆ ಇದರ ಬಗ್ಗೆ ಕೇವಲ ಕಾಗದ ಪತ್ರದಲ್ಲಿಯೇ ಸೀಮಿತ ಮಾಡುವ ಪ್ರಶ್ನೆ ಇಲ್ಲವೆಂಬ ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೆ, ಕಾಗದ ಪತ್ರಗಳಲ್ಲಿ ನೀವು ತಿರುಚಿ ಮಾಡಿದ್ದೀರೆಂದು ನಾವು ಹೇಳಲಿಲ್ಲ ಕೋಲಾರ ಜಿಲ್ಲೆಯಲ್ಲಿ ವಾಸ್ತವಾಂಶ ಏನಿದೆ ಎಂಬುದನ್ನು ನಾನು ಹೇಳಲಿಲ್ಲ ಈ ವಿಷಯವನ್ನು ನಿಮ್ಮ ಮಂತ್ರಿಗಳೇ ಹೇಳಿದ್ದಾರೆ ಕುಡಿಯುವ ನೀರನ್ನು ಒದಗಿಸುವುದಕ್ಕೋಸ್ಕರ ಬೋರ್‌ವೆಲ್ ಹಾಕುವುದಕ್ಕೆ ಮತ್ತು ಪಂಪ್‌ಸೆಟ್ ಕೊಡುವುದಕ್ಕೆ ಹಾಗೂ ಪೈಪ್‌ಗೆ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ ಈ ಒಂದು ಪರಿಸ್ಥಿತಿಯ ವಾಸ್ತವಾಂಶವನ್ನು ತಮ್ಮ ಮುಂದಿಟ್ಟಿದ್ದೇವೆ ವಿನಃ ತಿರುಚುತ್ತಿದ್ದಾರೆಂದು ನಾವು ಹೇಳಿಲ್ಲ ದುಡ್ಡು ಕೊಟ್ಟಿದ್ದಾರೆ, ಆದರೆ, ಆ ಹಣ ಸಾಕಾಗುತ್ತಿಲ್ಲ ನಮಲ್ಲಿ ಇದುವರೆಗೂ ಸರಿಯಾದಂಥ ಮಳೆ ಬಂದಿಲ್ಲದೆ ಇರುವುದರಿಂದ ಯಾವುದೇ ಕೆರೆಗೆ ನೀರು ಬಂದಿಲ್ಲ ನಮ್ಮ ಜಿಲ್ಲೆಯಲ್ಲಿ 2ನೇ ತಾರೀಖಿನ ದಿವಸ ಸಿಆರ್‌ಎಫ್ ಮೀಟಿಂಗ್ ಇದ್ದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇದೆ ಆದ್ದರಿಂದ ನಮಗೆ ಹಣವನ್ನು ಬೇಗನೆ ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಗಳ ಜೊತೆ ಮಾತನಾಡಿದ್ದೇನೆ ಮತ್ತೆ ಮಾನ್ಯ ಎಂ ಪಿ ಪ್ರಕಾಶ್‌ರವರ ಹತ್ತಿರ ಕೂಡ ಪರ್ಸನಲ್ ಆಗಿ ಮಾತನಾಡಿದ್ದೇನೆ ಹಾಗೆಯೇ ಕುಡಿಯುವ ನೀರಿಗೆ ಮೊದಲು ಹಣ ಬಿಡುಗಡೆ ಮಾಡಿ, ಉಳಿದ ಕೆಲಸಗಳಿಗೆ ಲೇಟ್ ಆದರೂ ಪರವಾಗಿಲ್ಲವೆಂಬ ಮಾತನ್ನೂ ಸಹ ಹೇಳಿದ್ದೆ ಇವತ್ತು ನಮ್ಮಲ್ಲಿ ದುಡ್ಡಿದೆ ಎಂದು ಹೇಳಿದರೆ ನಾನು ಬಹಳ ಸಂತೋಷಪಡುತ್ತೇನೆ ನಾಳೆ ದಿವಸ ಕೊಡುವ ಬಾಕಿಯನ್ನು ಕೊಟ್ಟರೆ ನಮ್ಮದೇನು ಅದಕ್ಕೆ ವಿರೋಧ ಇಲ್ಲ

ಶ್ರೀ ಜಿ ವಿ ಶ್ರೀ ರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ಯಾವ ತಾರೀಖಿನಿಂದ ಯಾವ ತಾರೀಖಿನವರೆಗೆ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂಬುದನ್ನು ಹೇಳಬೇಕು ಏಕೆಂದರೆ, 2 ಕೋಟಿ

ರೂಪಾಯಿಗಳನ್ನು ಒಂದೊಂದು ತಾಲ್ಲೂಕಿಗೆ ಸ್ಕೇರ್‌ಸಿಟಿಗೆಂದು ಬಿಡುಗಡೆ ಮಾಡಿಲ್ಲ ಹಿಂದೆ 100 ಲಕ್ಷ ರೂಪಾಯಿಗೆ ಆಕ್ಷನ್ ಪ್ಲಾನ್ ಕೇಳಿದ್ದರು ಮತ್ತೆ 100 ರೂಪಾಇಯಗೆ ಆಕ್ಷನ್ ಪ್ಲಾನ್ ಕೇಳಿದ್ದರು ಒಟ್ಟಿಗೆ ಹಿಂದಿನದು ಮತ್ತು ಇವತ್ತಿನದು ಹಾಗೂ ಫುಡ್ ಕಾಂಪೋನೆಂಟ್ಸ್ ಸೇರಿ ಅವರು ಬಿಡುಗಡೆ ಮಾಡಿರತಕ್ಕಂಥದು ಎಷ್ಟು ಎನ್ನತಕ್ಕಂಥಾದ್ದರ ಬಗ್ಗೆ ಅವರು ಲೆಕ್ಕ ಹೇಳಬೇಕು ಹಾಗೆಯೇ ಇನ್ನೂ ಎಷ್ಟು ಬಾಕಿ ಇದೆ ಎನ್ನತಕ್ಕಂಥದರ ಲೆಕ್ಕ ಹೇಳಬೇಕು ಹಾಗೆಯೇ ಇನ್ನೂ ಎಷ್ಟು ಬಾಕಿ ಇದೆ ಎನ್ನತಕ್ಕಂಥದರ ಲೆಕ್ಕ ಕೂಡ ಹೇಳಬೇಕು ಹಾಗೆಯೇ ಇನ್ನೂ ಎಷ್ಟು ಬಾಕಿ ಇದೆ ಎನ್ನತಕ್ಕಂಥದರ ಲೆಕ್ಕ ಕೂಡ ಹೇಳಬೇಕು ನಾವು 2 ಕೋಟಿ ರೂಪಾಯಿಗಳನ್ನು ಒಂದೇ ಸಾರಿ ಬಿಡುಗಡೆ ಮಾಡಿದ್ದೇವೆಂದು ಹೇಳತಕ್ಕಂಥದು ಸರಿಯಲ್ಲ ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕಂಥದು 2 ಕೋಟಿ ರೂಪಾಯಿ ಆಗಿದೆ ಒಂದು ಸಲ 100 ಲಕ್ಷ ರೂಪಾಯಿಗೆ ಮತ್ತೊಂದು ಸಲ 100 ಲಕ್ಷ ರೂಪಾಯಿಗೆ ಆಕ್ಷನ್ ಪ್ಲಾನ್ ಮಾಡಿ ಎಂದು ಹೇಳಿದ್ದೀರಿ ಒಂದು ಸಲ ಮಾಡಿರತಕ್ಕಂಥ 100 ಲಕ್ಷ ರೂಪಾಯಿಗಳ ಆಕ್ಷನ್ ಪ್ಲಾನ್‌ನಲ್ಲಿ 75 ಲಕ್ಷ ರೂಪಾಯಿ ಫುಡ್ ಕಾಂಪೋನೆಂಟ್ಸ್‌ಗೂ ಸೇರಿ ಹಣ ಬಿಡುಗಡೆ ಮಾಡಿದ್ದೀರಿ ಇನ್ನೊಂದು ಸಲ ಮಾಡಿರತಕ್ಕಂಥ 100 ಲಕ್ಷ ರೂಪಾಯಿ ಆಕ್ಷನ್ ಪ್ಲಾನ್‌ನಲ್ಲಿ ಫುಡ್ ಕಾಂಪೋನೆಂಟ್ಸ್ ಸೇರಿ 54 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೀರಿ ಎರಡು ಸೇರಿಸಿದ್ದರೂ ಕೂಡ ಇನ್ನೂ 60 ಲಕ್ಷ ರೂಪಾಯಿಗಳಷ್ಟು ಸ್ಕೇರ್ ಸಿಟಿಯಲ್ಲಿ ಬಾಕಿ ಇದೆ ಕುಡಿಯುವ ನೀರಿನ ಸಮಸ್ಯೆಗೆ ಬಿಟ್ಟು ಕೇವಲ ಸ್ಕೇರ್‌ಸಿಟಿಗೆ ಮಾತ್ರ ಇದು ಸಂಬಂಧ ಪಟ್ಟಿದೆ ಕುಡಿಯುವ ನೀರಿನ ಸಮಸ್ಯೆಗೆ ನೀವು ಬಿಡುಗಡೆ ಮಾಡಿರತಕ್ಕಂಥದರಲ್ಲಿ ಸ್ಟೇಟ್ ಅಂಡ್ ಸೆಂಟ್ರಲ್ ಸೆಕ್ಟರ್ ಗಳೆರಡೂ ಕೂಡ ಇದೆ ಸ್ಟೇಟ್ ಸೆಕ್ಟರ್‌ನಲ್ಲಿ ನೀವು ಬೋರ್‌ವೆಲ್‌ಗಳನ್ನು ಕೊರೆದಿರುವುದು ಕಡಿಮೆ ಸೆಂಟ್ರಲ್ ಸೆಕ್ಟರ್‌ನಲ್ಲಿ ನೀವು ಹೆಚ್ಚು ಕೊರೆದಿದ್ದೀರಿ ಹಣ ಬಿಡುಗಡೆ ಆಗಿಲ್ಲ, ಸ್ಟೇಟ್ ಸೆಕ್ಟರ್‌ನಲ್ಲಿ ಹೆಚ್ಚು ಬೋರ್‌ವೆಲ್‌ಗಳನ್ನು ಕೊರೆದಿಲ್ಲ ಈ ಎರಡೂ ಸೇರಿಸಿ ನೀವು ಲೆಕ್ಕ ಹೇಳಿ ಮತ್ತೆ 2 ಕೋಟಿ ರೂಪಾಯಿ ಯಾವಾಗ ಕೊಟ್ಟಿದ್ದೀರಿ ಎಂಬುದನ್ನು ಹೇಳಿ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಅನಾವೃಷ್ಟಿಯಿಂದ ಕೂಡಿದಂಥ 134 ತಾಲ್ಲೂಕುಗಳನ್ನು ಗುರುತು ಮಾಡಿ ಈ ಎಲ್ಲಾ ತಾಲ್ಲೂಕುಗಳಿಗೆ 2 ಕೋಟಿ ಹಣವನ್ನು ಸ್ಕೇರ್‌ಸಿಟಿ ಕೆಲಸಕ್ಕೋಸ್ಕರ ಬಿಡುಗಡೆ ಮಾಡಿದ್ದೇವೆ ನಮ್ಮ ಸರ್ಕಾರ ಇದ್ದಾಗ ಟಾಸ್ಕ್‌ಫೋರ್ಸ್‌ನಲ್ಲಿ ಶಾಸಕರುಗಳಿಗೆ ಜವಾಬ್ದಾರಿ ಕೊಟ್ಟು ಮತ್ತು ಅವರು ಕೊಡತಕ್ಕಂಥ ಕೆಲಸಕ್ಕೆ

ಅನುಮತಿ ಕೊಟ್ಟು ಅದಕ್ಕೆ ಹಣವನ್ನು ಬಿಡುಗಡೆ ಮಾಡಲಾಗುತ್ತಿತ್ತು ಎಂಬುದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿ ಪ್ರಸ್ತಾಪ ಮಾಡಿದರು

ಈಗಲೂ ನಾವು ಮಾಡತಕ್ಕಂಥ ಆ ಚಟುವಟಿಕೆಯಲ್ಲಿಯೇ ಕೆಲಸವನ್ನು ಮಾಡುತ್ತಿದ್ದೇವೆ ಎಂ ಎಲ್ ಎ ಗಳ ಅಧ್ಯಕ್ಷತೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಏನು task force ಅನ್ನು ಮಾಡಿದ್ದೀರಿ, ನಾವು ಯಾವುದೇ ರೀತಿಯ ಬದಲಾವಣೆಯನ್ನು ಮಾಡಿಲ್ಲ ಎನ್ನುವುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ ಇವತ್ತು ಪಾಪ ಮಾನ್ಯ ಯಡಿಯೂರಪ್ಪನವರ ಬಗ್ಗೆ ತುಂಬಾ ಮಮತೆಯಿಂದ ಒಂದು ರೀತಿಯಲ್ಲಿ ಚರ್ಚೆಯನ್ನು ಮಾಡಿದರು ಹಣ ತುಂಬಿ ತುಳುಕುತ್ತಿದೆ ಎಂದು ಮಾನ್ಯ ಯಡಿಯೂರಪ್ಪನವರು ಯಾವಾಗಲೂ ಹೇಳುತ್ತಿರುತ್ತಾರೆ ಆದರೆ ಹಣವನ್ನು ಬಿಡುಗಡೆಯೇ ಮಾಡಿಲ್ಲ ಎನ್ನುವ ರೀತಿಯಲ್ಲಿ ಸದನದಲ್ಲಿ ಕೆಲವು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಹಣವನ್ನು ಬಿಡುಗಡೆ ಮಾಡತಕ್ಕಂಥದ್ದರಲ್ಲಿ ಹಣಕಾಸು ಇಲಾಖೆಯಿಂದ ಯಾವುದೇ ರೀತಿಯ ಒಂದು ತೊಂದರೆಗಳು ಆಗಿಲ್ಲ, ಹಣವನ್ನು ಬಿಡುಗಡೆ ಮಾಡಿದ್ದಾರೆ ಪ್ರತಿ ಜಿಲ್ಲೆಗಳಲ್ಲಿ ಬಿಡುಗಡೆಯಾಗಿರತಕ್ಕಂಥ ಹಣದಲ್ಲಿ 136 ಕೋಟಿ ರೂ ಗಳು, ಇವತ್ತಿಗೂ ಕೂಡ ಜಿಲ್ಲಾಧಿಕಾರಿಗಳ ಒಂದು ನೇತೃತ್ವದಲ್ಲಿ ಇಟ್ಟಿರತಕ್ಕಂಥದ್ದು ಇದೆ, ಹಣದ ಕೊರತೆ ಇಲ್ಲ ಎನ್ನುವ ಸ್ಪಷ್ಟೀಕರಣವನ್ನು ಇವತ್ತು ನಾನು ಕೊಡುವುಕ್ಕೆ ಬಯಸುತ್ತಿದ್ದೇನೆ ಅದಕ್ಕೆ ಮಾಹಿತಿಗಳು ಬೇಕಾದರೆ ನಾನು ಕೊಡಲಿಕ್ಕೆ ಸಿದ್ಧನಿದ್ದೇನೆ ಇದು ಕೇವಲ ಕಾಗದದಲ್ಲಿ ನಾವು ಆದೇಶ ಮಾಡಿರತಕ್ಕಂಥದ್ದು ಅಲ್ಲ, ವಾಸ್ತವವಾಗಿ ಹಣ ಇದೆ ಏಕೆಂದರೆ ಕೆಲವರು ಇಲ್ಲಿ ಹೇಳಿದರು, ಹಣದ ಬಗ್ಗೆ ಚರ್ಚೆಯನ್ನು ಮಾಡಿದಾಗ ಎಲ್ಲಿದೆ ಹಣ ತೋರಿಸಿ ಎಂದು ಹೇಳುತ್ತಾರೆ

ಏಕೆಂದರೆ ಹಿರಿಯ ಸದಸ್ಯರುಗಳು ಇವತ್ತು ಚರ್ಚೆ ಮಾಡಬೇಕಾದರೆ ಎಲ್ಲಿದೆ ಹಣ ತೋರಿಸಿ ಎಂದರು ಸದನದ ಸಭಾಂಗಣಕ್ಕೆ ಹಣ ಇಲ್ಲಿ ತಂದು ಇಟ್ಟು ತೋರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಹಿಂದೆ ಅವರು ಯಾವ ರೀತಿಯಾಗಿ ಸರ್ಕಾರವನ್ನು ನಡೆಸಿಕೊಂಡು ಬಂದಿದಾರೆ, ಅದೇ ರೀತಿ ನಾವು ಕೆಲಸವನ್ನು ಮಾಡುತ್ತಿದ್ದೇವೆ ಹೊರತು ಹಣ ಎಲ್ಲಿದೆ ತೋರಿಸಿ ಎಂದರೆ, ಆ ಹಣವನ್ನು ಇಲ್ಲಿ ತಂದು ತೋರಿಸುವುದಕ್ಕೆ ಸಾಧ್ಯವಾಗುವುದಿಲ್ಲ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, ಹಣ ತಂದು ಇಲ್ಲಿ ತೋರಿಸಿ ಎಂದು ಯಾರು ಕೇಳುವುದಿಲ್ಲ, ಆ ರೀತಿ ಯಾರಾದರೂ ಹೇಳುತ್ತಾರಾ? ಡಿ ಸಿ ಹತ್ತಿರ ಹಣ ಇದೆ ಎಂದು ಹೇಳುತ್ತೀರಿ ಅದನ್ನು ತೋರಿಸಿ ಎಂದು

ಕೇಳಿರಬಹುದು ಡಿ ಸಿ ಹತ್ತಿರ ನೀವು ಬಿಡುಗಡೆ ಮಾಡಿರುವ ಹಣ ಇರುತ್ತದೆ ಒಂದು ನಿಮಿಷ, ಪ್ರವಾಹಕ್ಕೋಸ್ಕರವಾಗಿ ಹಣವನ್ನು ಬಿಡುಗಡೆ ಮಾಡಿಲ್ಲ ಪ್ರವಾಹವಾಗಿ ಅನೇಕ ಕಡೆ ಒಂದು,ತಿಂಗಳಾಯಿತು, ಜನರಿಗೆ ತೊಂದರೆಯಾಗಿದೆ, ಸಾವು-ನೋವುಗಳು ಆಗಿದೆ, 50 ಜನರವರೆಗೆ ಸತ್ತಿದ್ದಾರೆ, 2000 ಕ್ಕಿಂತ ಹೆಚ್ಚು ಜಾನುವಾರುಗಳು ಸತ್ತಿವೆ, ಸುಮಾರು 25 ಸಾವಿರಕ್ಕಿಂತ ಹೆಚ್ಚು ಮನೆಗಳು ಬಿದ್ದು ನಾಶವಾಗಿದೆ ಪರಿಹಾರ ಏನೂ ಕೊಟ್ಟಿಲ್ಲ, ಮನೆ ಕಟ್ಟಿಕೊಳ್ಳಲು ಏನೂ ಕೊಟ್ಟಿಲ್ಲ, ಕಡಲ ಕೊರೆತವಾಗಿದೆ, ಮನೆಗಳು ಬಿದ್ದು ಹೋಗಿ ಅಲ್ಲಿಂದ ಮೀನುಗಾರರು ಬಹಳ ಕಷ್ಟದಲ್ಲಿದ್ದಾರೆ, ಇವರ ಪರಿಹಾರಕ್ಕೆ ಏನೂ ಕೊಟ್ಟಿಲ್ಲವೆಂದು ಹೇಳಿದ್ದಾರೆ ಹೊರತು ಇಲ್ಲೆ ವಿಧಾನ ಸೌಧದಲ್ಲಿ ಹಣ ತೋರಿಸಿ ಎಂದು ಹೇಳುವುದಕ್ಕಾಗುತ್ತದೆಯೇ? ಆ ತರಹ ತೋರಿಸುವುದಕ್ಕೆ ಬರುವುದು ಇಲ್ಲ, ಯಾರೂ ತೋರಿಸುವುದು ಇಲ್ಲ

ನಾನು ಹೇಳಿದ್ದು ನಿಜ, ಮಾನ್ಯ ಯಡಿಯೂರಪ್ಪನವರು ನೂರು ಸಲ ನಮ್ಮಲ್ಲಿ ಹಣ ತುಂಬಿ ತುಳುಕುತ್ತಿದೆ ಎಂದು ಹೇಳಿದ್ದಾರೆ, ಬೇಕಾದರೆ ಅವರು ಇಲ್ಲವೆಂದು ಹೇಳಲಿ ಹಾಗೆ ಅಂದೆ ಮೇಲೆ, ನಾವು ಮಾತನಾಡುವುದು ಏನು ಎಂದರೆ, 2300 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ ಇನ್ನೂ 1550 ಕೋಟಿ ರೂ ಗಳು ಬಿಡುಗಡೆಯಾಗಿಲ್ಲ ಆ ಹಣ ಬಿಡುಗಡೆಯಾಗದಿರುವುದರಿಂದ ಅದರ ಪರಿಣಾಮ ಏನಾಗಿದೆ ಎಂದರೆ, ಹೋದ ವರ್ಷಕ್ಕೆ ಇದೇ ಕಾಲಕ್ಕೆ 2200 ಕೋಟಿ ರೂ ಗಳ ಸಾಲ ವಿತರಣೆ ಕೋ-ಆಪರೇಟಿವ್ ಸೊಸೈಟಿಗಳಿಂದ ಆಗಿತ್ತು ಇವತ್ತಿನವರೆಗೆ 450 ರಿಂದ 500 ಕೋಟಿ ರೂ ಗಳ ಸಾಲಕ್ಕೆ ಹಣ ಬಿಡುಗಡೆಯಾಗಿರಬಹುದು ರೈತರಿಗೆ ಯಾವ ಸಮಯದಲ್ಲಿ ಸಾಲ ಸಿಕ್ಕಬೇಕಾಗಿತ್ತು, ಸಿಕ್ಕಿಲ್ಲ ಏಕೆಂದರೆ ಇವರು ಹಣ ಸೊಸೈಟಿಗಳಿಗೆ ಕಟ್ಟಿಕೊಡದಿರುವುದರಿಂದ ಮತ್ತು ನಬಾರ್ಡಿಗೆ ಕಟ್ಟಿ ಕೊಡದಿರುವುದರಿಂದ ಅಪೆಕ್ಸ್ ಬ್ಯಾಂಕಿಗೆ ಕಟ್ಟಿ ಕೊಡದಿರುವುದರಿಂದ ಸಿಕ್ಕಲಿಲ್ಲ ಎನ್ನತಕ್ಕಂಥದ್ದು ನಮ್ಮ ಆರೋಪ ಇವರ ಹತ್ತಿರ ದುಡ್ಡಿಲ್ಲ, ಇವರ ಖಜಾನೆ ಎಲ್ಲಾ ಖಾಲಿಯಾಗಿದೆ ಬ್ಯಾಂಕ್ ದಿವಾಳಿಯಾಗಿದೆ ಎಂದು ನಾವೇನು ಹೇಳಲಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಇವತ್ತು ಬೆಳಗ್ಗೆ ಸದನದಲ್ಲಿ ಇರಲಿಲ್ಲ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಈ ಸರ್ಕಾರ 5000 ಕೋಟಿ ರೂ ಗಳವರೆಗೆ deficit ನಿಂದ ತೊಂದರೆಯನ್ನು ಅನುಭವಿಸುತ್ತದೆ ಎನ್ನುವ ವಿಷಯವ್ವು ಅವರು ಪ್ರಸ್ತಾಪ ಮಾಡಿದರು ಅವರು

ಏನು ಹೇಳಿದ್ದಾರೆ ಅದರ ಬಗ್ಗೆ ಚರ್ಚೆ ಮಾಡುತ್ತಿರುವುದು ಇವತ್ತು ಬೆಳಿಗ್ಗೆ ಕೋಲಾರ ವಿಷಯ ಬಂದಾಗ ದುಡ್ಡು ಎಲ್ಲಿದೆ ಎಲ್ಲಿ ಕೊಟ್ಟಿರಿ ತೋರಿಸಿ ಎಂದು ಕೇಳಿದರು ಅದಕ್ಕೆ ನಾನು ಈ ವಿಷಯವನ್ನು ಹೇಳಿದೆ ಈಗ ಏನು ಹಣವನ್ನು ಬಿಡುಗಡೆ ಮಾಡಿದ್ದೇವೆ ಅದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೊಡಲಿಕ್ಕೆ ನಾನು ಸಿದ್ಧವಾಗಿದ್ದೇನೆ ಹಣ ಕೊಡುತ್ತೇವೆ ಏನೂ ತೊಂದರೆ ಇಲ್ಲ ಮಾನ್ಯ ಸಿದ್ಧರಾಮಯ್ಯನವರು, ಸಾಲ ವಿಷಯದ ಮೇಲೆ ಚರ್ಚೆಯನ್ನು ಮಾಡಿದ್ದಾರೆ 750 ಕೋಟಿ ರೂ ಗಳವರೆಗೆ ಈ ಸಾಲ ಮನ್ನಾದ ಬಾಬ್ತಿಗೆ ಈಗಾಗಲೇ ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಿದ್ದೇವೆ ಇವತ್ತು ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ ಈ ವರ್ಷ 450–500 ಕೋಟಿ ರೂ ಗಳ ಸಾಲ ಕೊಟ್ಟಿರಬಹುದೆಂದು ಹೇಳಿದರು ಈ ವರ್ಷ ಸಾಲವನ್ನುಕೊಟ್ಟಿರುವಂಥದ್ದು 3 ಲಕ್ಷ 56 ಸಾವಿರ ಜನರಿಗೆ 1097 ಕೋಟಿ ರೂ ಗಳ ಸಾಲವನ್ನು ಈಗಾಗಲೇ ಕೊಟ್ಟಿರುತ್ತೇವೆ ಕಳೆದ ವರ್ಷ 2006–07ರಲ್ಲಿ ಏಪ್ರಿಲ್‌ದಿಂದ ಜೂನ್‌ವರೆಗೆ 909 ಕೋಟಿ ರೂ ಗಳನ್ನು ಕೊಟ್ಟಿರುವುದು ಸಾಲ ಕೊಡತಕ್ಕಂಥ ವಿಷಯದಲ್ಲಿ ಏನು ಸದನದ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ ಏನು ಆತಂಕವನ್ನು ವ್ಯಕ್ತಪಡಿಸಿದ್ದಾರೆ, ಇದರಲ್ಲಿ ಯಾವುದೇ ರೀತಿಯ ಸರ್ಕಾರ ಲೋಪವನ್ನು ಎದುರಿಸತಕ್ಕಂಥ ಕೆಲಸವನ್ನು ಮಾಡಿಲ್ಲವೆನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಕೊಡುವುದಕ್ಕೆ ನಾನು ಬಯಸುತ್ತೇನೆ ಇವತ್ತು ಏನು 2500 ಕೋಟಿ ರೂ ಗಳ ಬಗ್ಗೆ ಸಾಲ ಮನ್ನಾ ವಿಷಯದಲ್ಲಿ ಬರೀ 750 ಕೋಟಿ ರೂ ಗಳನ್ನು ಕೊಟ್ಟಿದ್ದಾರೆಂದು ಚರ್ಚೆ ಮಾಡುತ್ತಿದ್ದಾರೆ ಆ ಬಗ್ಗೆ ಹೇಳುವುದಾದರೆ ಸರ್ಕಾರದಲ್ಲಿ ಯಾವ ರೀತಿಯಾಗಿ ಹಿಂದಿನಿಂದ ನಡೆದುಕೊಂಡು ಬಂದಿದೆ ಎನ್ನುವ ಬಗ್ಗೆ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ ಹಂತ ಹಂತವಾಗಿ ಹಣವನ್ನು ಏನು ಬಿಡುಗಡೆ, ಮಾಡಬೇಕಾಗುತ್ತದೆ, ಅದರಲ್ಲಿ ಸರ್ಕಾರ ಹಣ ಬಿಡುಗಡೆ ಮಾಡತಕ್ಕಂಥದ್ದರಲ್ಲಿ ಯಾವುದೆ ರೀತಿಯ ಲೋಪವನ್ನು ಎಸಗಿರುವುದಕ್ಕೆ ಸಾಧ್ಯವಿಲ್ಲ ಈಗ ಉದಾಹರಣೆಗೆ ಮುಂಗಾರಿನ ಬೆಳೆ ಸಾಲದ ಮೇಲೆ ಬಡ್ಡಿ ಮನ್ನಾ ಯೋಜನೆಯ ಅಡಿಯಲ್ಲಿ 136 ಕೋಟಿ ರೂ ಗಳ ಏನು claim ಇತ್ತು ಹಿಂದಿನ ಸರ್ಕಾರದಲ್ಲಿ ಬಿಡುಗಡೆ ಮಾಡಿದ್ದು 115 ಕೋಟಿ ರೂ ಗಳು ಈ ಪ್ರಸಕ್ತ ಸರ್ಕಾರದಲ್ಲಿ 12 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಯಿತು ಅದೇ ರೀತಿ 2005–06ರಲ್ಲಿ ಬಡ್ಡಿ ಮನ್ನಾ ಯೋಜನೆ ಏನಿತ್ತು ಆ ಕಾರ್ಯಕ್ರಮದಲ್ಲಿ 1180 ಕೋಟಿ ರೂ ಗಳ ಹಣವನ್ನು claim ಮಾಡಿದಂಥ ಸಂದರ್ಭದಲ್ಲಿ ಹಿಂದಿನ ಸರ್ಕಾರ 450 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದ್ದು ಈ ಒಂದು ಸರ್ಕಾರ ಬಂದ ಮೇಲೆ ಆ ಬಾಬ್ತಿನ 650

ಕೋಟಿ ರೂ ಗಳನ್ನು ಹೋದ ವರ್ಷ ಬಿಡುಗಡೆ ಮಾಡಿರುವಂಥದ್ದನ್ನು ಸದನದ ಸದಸ್ಯರ ಗಮನಕ್ಕೆ ತರಲಿಕ್ಕೆ ನಾನು ಬಯಸುತ್ತೇನೆ ಏಕೆಂದರೆ ನಾನು ಆರ್ಥಿಕ ತಜ್ಞ ಅಲ್ಲ, ನಾನು ಯಾವುದೇ ರೀತಿಯ ಬಜೆಟ್‌ನ್ನು ಕೂಡ ಮಂಡನೆ ಮಾಡಿಲ್ಲ ನನಗೆ ಅದರ ಬಗ್ಗೆ ಅನುಭವ ಕಡಿಮೆ ಇದೆ ನಾನು ಇವತ್ತು ಏನು ಒಂದು ಮಾತನ್ನು ಹೇಳುತ್ತಿದ್ದೇನೆ ಮಾನ್ಯ ಸಿದ್ಧರಾಮಯ್ಯನವರು 7 ಸಲ ಬಜೆಟ್ ಮಂಡನೆ ಮಾಡಿದ್ದಾರೆ, ಅವರು ಏನು ಸಲಹೆಯನ್ನು ಕೊಟ್ಟರೆ ಅದನ್ನು ನಿರ್ವಹಿಸಲಿಕ್ಕೆ ನಾವು ತಯಾರಾಗಿದ್ದೇವೆ

ಶ್ರೀ ಸಿದ್ಧರಾಮಯ್ಯ ನಾನು ಏನು ಮುಖ್ಯಮಂತ್ರಿಯಾಗಿಲ್ಲ ಹಣಕಾಸಿನ ತಜ್ಞ ಏನೂ ಸರ್ಕಾರದಲ್ಲಿ ಆಗಬೇಕಾಗಿಲ್ಲ ಮುಖ್ಯಮಂತ್ರಿಯಾದವರಿಗೆ ಹಣಕಾಸು ಇಲಾಖೆಯವರು ಹಾಗೂ ಎಲ್ಲಾ ಇಲಾಖೆಯವರು ಮಾಹಿತಿಯನ್ನು ಕೊಡುತ್ತಾರೆ ಹಣಕಾಸಿನ ಮಂತ್ರಿ ಆಗಬೇಕೆಂದು ಏನು ಅಗತ್ಯವಿಲ್ಲ ಬಜೆಟ್ ಮಂಡಿಸ ಬೇಕಾದಂಥ ಅಗತ್ಯವು ಇಲ್ಲ Finance Minister ಆದವರ ಜವಾಬ್ದಾರಿ ಅದನ್ನು ಅವರ ಮಾಡುತ್ತಾರೆ ಆದರೆ ಮುಖ್ಯಮಂತ್ರಿಯಾದವರಿಗೆ

ಅಧ್ಯಕ್ಷರು ಆದರೆ ಅವರಿಗೆ ಹೆಚ್ಚಿನ ಅನುಭವ ಇರುತ್ತದೆ

ಶ್ರೀ ಸಿದ್ಧರಾಮಯ್ಯ ಅದು ಸರಿ Speaker ಅವರಿಗೆ Speaker ಅನುಭವ ಜಾಸ್ತಿ ಇರುತ್ತದೆ ಮುಖ್ಯಮಂತ್ರಿಯಾದವರಿಗೆ ಮುಖ್ಯಮಂತ್ರಿ ಅನುಭವ ಇರುತ್ತದೆ ಆದರೆ ನಮಗೆ ಆ ಅನುಭವ ಇರುತ್ತದೆ, ಅವೆಲ್ಲಾ ನಿಜವೆ ಈಗ ನಾನು ಏನು ಹೇಳುತ್ತೇನೆಂದರೆ, 2005–06ನೇ ಸಾಲಿನಲ್ಲಿ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಿದಾಗ ಬಜೆಟ್‌ನಲ್ಲಿ 450 ಕೋಟಿ ರೂ ಗಳನ್ನು ಇಟ್ಟಿರುತ್ತೀರಿ ಆದರೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮ್ಡಿದಾಗ ಎಲ್ಲಾ ಸೇರಿ 1083 ಕೋಟಿ ರೂ ಗಳು ಆಯಿತು ಆ ವರ್ಷಕೂಡ ಇವರು ಅಧಿಕಾರಕ್ಕೆ ಬಂದಿದ್ದಾರೆ ಇವರು ಫೆಬ್ರವರಿ ತಿಂಗಳಲ್ಲಿ ಅಕಾರಕ್ಕೆ ಬಂದಿದ್ದಾರೆ ಅದಕ್ಕಿಂತ ಹಿಂದೆ ಪಿ ಜಿ ಆರ್ ಸಿಂಧ್ಯರವರು ಹಣಕಾಸಿನ ಮಂತ್ರಿಯಾಗಿದ್ದರು ಸಿಂಧ್ಯರವರು 450 ಕೋಟಿ ರೂ ಗಳನ್ನು ಇಟ್ಟಿದ್ದು ಉಳಿದ ದುಡ್ಡು ಕೊಡಬಾರದೆಂದು ಏನೂ ಇಲ್ಲ Government is a continuous process ಅವರು ಇದ್ದರು ಇವರು ಬಿಟ್ಟಿಕೊಡಲಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ ಸರ್ಕಾರದ ಜವಾಬ್ದಾರಿ ಇರುತ್ತದೆ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವುದು, it is a comitement on the part of the Government. ಸರ್ಕಾರದ ನೀತಿ ಎಂದು ಅದನ್ನು ಘೋಷಣೆ ಮಾಡಿ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ

ಮಾಡುತ್ತದೆ ಹಿಂದಿನವರು ಏನು ಮಾಡಿದರು ಎನ್ನುವುದಕ್ಕಿಂತ ಹೆಚ್ಚಿಗೆ ಈಗ ರೈತರಿಗೆ ಏನು ಅನಾನುಕೂಲವಾಗಿದೆ ಎನ್ನತಕ್ಕಂಥದ್ದು ಮುಖ್ಯ 2300 ಕೋಟಿ ರೂ ಗಳ ಸಾಲವನ್ನು ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡಿದ್ದೀರಿ, O K ಅದನ್ನೆಲ್ಲವನ್ನು ನಾವು welcome ಮಾಡಿದ್ದೇವೆ ಈಗ ಅದರಿಂದ ರೈತರಿಗೆ ಆಗಿರತಕ್ಕಂಥ ಪರಿಣಾಮಗಳು ಏನು ಎನ್ನುವಂಥದ್ದು ಅಷ್ಟೆ ಈಗ ಹಿಂದಿನವರು ಮಾಡಿಲ್ಲ ಅದಕ್ಕಾಗಿ ನಾವು ಮಾಡಿಲ್ಲವೆಂದರೆ ಅದು ಉತ್ತರವಾಗುತ್ತದೆಯೆ? ಹಿಂದಿನವರು ದುಡ್ಡನ್ನು ಕೊಡಲಿಲ್ಲ ಅದಕ್ಕೆ ನಾವು ಕೊಡಲಿಲ್ಲ, let the farmers suffer ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ತಾವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿದೆ ತಾವು ಏನು ಹೇಳಿದಿರಿ, continuous ಎಂದು ಹೇಳಿದಿರಿ ನಾನು ಕೂಡ ಅದನ್ನೆ ಹೇಳುತ್ತಿರುವಂಥದ್ದು ಇವತ್ತು 2500 ಕೋಟಿ ರೂ ಗಳ ರೈತರ ಸಾಲದ ಮನ್ನಾದ ವಿಷಯದಲ್ಲಿ ಏನೊಂದು ತೀರ್ಮಾನವಾಗಿದೆ ಪ್ರಥಮ' ಹಂತವಾಗಿ ಮೂರು ತಿಂಗಳಲ್ಲಿ 750 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದ್ದೇವೆ ನಂತರ ಇದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆ, ತಾವು ಏನು continuous process ಎಂದು ಹೇಳುತ್ತಿದ್ದೀರಿ ಆ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ ನೀವು ಮಾಡಿಲ್ಲವೆಂದು ಲೋಪದೋಷಗಳನ್ನು ವ್ಯಕ್ತಪಡಿಸುವುದಕ್ಕೆ ನಾನು ಹೋಗುತ್ತಿಲ್ಲ ನಿನ್ನೆ ಮೊನ್ನೆ ಏನು ವಿಷಯವನ್ನು ಇಲ್ಲಿ ಚರ್ಚೆ ಮಾಡಿದ್ದಾರೆ ಅದನ್ನು ನಾನು ಇಲ್ಲಿ ತರುತ್ತಿದ್ದೇನೆ, ಏನು continuous process ಎಂದು ತಮ್ಮ ಅನುಭವವನ್ನು ಹೇಳುತ್ತಿದ್ದೀರಿ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅ'ಕ್ಷರೆ, ಸರ್ಕಾರದ ಈ ನೀತಿಯ ಗೋಷಣೆಯ ಪರಿಣಾಮವಾಗಿ ಯಾವ ಹಣ ಕೆಲವು ಸಂಸ್ಥೆಗಳಿಗೆ ರೈತರಿಂದ ಬರಬೇಕಾಗಿತ್ತೋ ರೈತರ ಪರವಾಗಿ ಆ ಹಣವನ್ನು ತುಂಬತಕ್ಕಂತಹ ಜವಾಬ್ದಾರಿ ಸರ್ಕಾರವು ವಹಿಸಿಕೊಂಡಿರುವುದರಿಂದ ಆ ಕೆಲಸವು ಆಗದೇ ಇರುವುದರಿಂದ ಪುನಃ ಸಾಲ ಕೊಡುವಂತಹ ಸ್ಥಿತಿಯಲ್ಲಿ ಆ ಸಂಸ್ಥೆಗಳು ಇಲ್ಲ ಹೋದ ವರ್ಷ ಈ ಸನ್ನಿವೇಶದಲ್ಲಿ ಎಷ್ಟು ಸಾವಿರ ಕೋಟಿ ರೂಪಾಯಿಗಳು ಸಾಲ ರೈತರಿಗೆ ವಿತರಣೆಯಾಗಿತ್ತು ಅಷ್ಟು ಪ್ರಮಾಣದಲ್ಲಿ ಈ ಸಲ ಆಗಲಿಲ್ಲ ಎನ್ನುವಂತಹ observationನ್ನು ಅವರು ಮಾಡಿರುವುದು I think that needs to be clarified.

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ನಾನು ಸ್ಪಷ್ಟಿಕರಣವನ್ನು ಕೊಡುತ್ತಿದ್ದೇನೆ ಹೋದ ವರ್ಷ ಇದೇ ಅವಯೊಳಗೆ 909 ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿದ್ದೇವೆ ಈ ವರ್ಷ 1092 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ ಸಾಲ ರೈತರಿಗೆ ಸಿಕ್ಕಲೇ ಇಲ್ಲ ಎನ್ನುವಂತಹ ರೀತಿಯಲ್ಲಿ, ರೈತಲು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎನ್ನುವಂತಹ ರೀತಿಯಲ್ಲಿ ಹೇಳಿದ್ದಾರೆ

ಶ್ರೀ ಸಿದ್ಧರಾಮಯ್ಯ ಇಲ್ಲ, ಕಡಿಮೆಯಾಗಿದೆ ಎಂದು ನಾವು ಹೇಳಿರುವುದು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಕಡಿಮೆಯಾಗಲಿಲ್ಲವೆನ್ನುವಂತಹ ಸ್ಪಷ್ಟೀಕರಣವನ್ನು ನಾನು ಕೊಡುತ್ತಿದ್ದೇನೆ ನೀವು ಕಡಿಮೆಯಾಗಿದೆ ಎಂದು ಹೇಳಿದ್ದೀರಿ, ರೈತರಿಗೆ ನಿರೀಕ್ಷಿಸಿದಷ್ಟು ಬರಲಿಲ್ಲವೆಂದು ಹೇಳಿದ್ದೀರಿ ಆ ವಿಷಯದ ಬಗ್ಗೆ ನಾವು ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ, ನಾನು ಮಾಹಿತಿಯನ್ನು ಕೊಡುತ್ತಿದ್ದೇನೆ ತಪ್ಪು ಎಂದು ಹೇಳುತ್ತಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ನಾನು ಅದನ್ನೇ ಹೇಳುತ್ತಿದ್ದೇನೆ ನಾಯಕರಾಗಿ ತಾವು ಆ ಫಿಗರ್ಸ್‌ನ್ನು ಅಧಿಕೃತವಾಗಿ ಕೊಟ್ಟಮೇಲೆ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ ನಮ್ಮ ಹತ್ತಿರ ಇರುವ ವರ್ತಮಾನದ ಆಧಾರದ ಮೇಲೆ ನಾವು ಮಾತನಾಡಿದ್ದೇವೆ ಪುನಃ ನಾವು ಅದನ್ನು ವೆರಿಫೈ ಮಾಡಿಕೊಂಡು ನೀವು ಕೊಟ್ಟಿರುವಂತಹ information ಸರಿಯಲ್ಲ ಎಂದು ಸದನದಲ್ಲಿ ನಮ್ಮ ನಿಯಮಾವಳಿಗಳ ಪ್ರಕಾರ ಹೇಗೆ ಎತ್ತಬೇಕೋ ಹಾಗೇ ಎತ್ತುತ್ತೇವೆ otherwise, ತಾವು ಕೊಟ್ಟಿರುವಂತಹ information ಏನು ಇದೆ, ಹೆಚ್ಚಿಗೆ ಕೊಟ್ಟಿದ್ದೇವೆ ಅಂದರೆ ಅದಕ್ಕಾಗಿ ನಾವು ನಿಮ್ಮನ್ನು ಅಭಿನಂದಿಸುತ್ತೇವೆ ಎಲ್ಲರ ಉದ್ದೇಶ ಒಟ್ಟಾರೆಯಾಗಿ ಎಲ್ಲಾ ರೈತರಿಗೆ ಒಳ್ಳೆಯದಾಗಬೇಕು ಅದಕ್ಕಾಗಿ ತಮ್ಮನ್ನು ನಾವು ಅಭಿನಂದಿಸುತ್ತೇವೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೇ, ತಾವು ಹೇಳಿರುವುದನ್ನು ನಾವು ನಂಬಬೇಕಾಗುತ್ತದೆ ನಾನಾದರೂ ಇಷ್ಟು ಪ್ರಸ್ತಾಪ ಮಾಡಿದ್ದೇ ಏಪ್ರಿಲ್‌ನಿಂದ ಸೆಪ್ಟೆಂಬರ್‌ರವರೆಗೆ ನಮ್ಮ ಕರ್ನಾಟಕದಲ್ಲಿ ಖಾರಿಫ್ ಸೀಸನ್‌ನಲ್ಲಿ 65% –70% lending ಆಗುತ್ತದೆ ನೀವು ಮಾರ್ಚ್ ಒಳಗಾಗಿ 500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಅದರೊಳಗೆ 250

ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಇನ್ನು ಬಜೆಟ್‌ನಲ್ಲಿ 250 ಕೋಟಿ ರೂಪಾಯಿಗಳು ಇದೆ Total amount budget ಪಾಸಾದಾಗ 250 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ ಬಾಕಿ ಉಳಿದಂತಹ 1300 ಕೋಟಿ ರೂಪಾಯಿಗಳು ಬಜೆಟ್‌ನಲ್ಲಿ ಇಲ್ಲ ಅದಕ್ಕೆ ತಾವು ವ್ಯವಸ್ಥೆ ಮಾಡಿ ಕೊಳ್ಳಬೇಕಾಗುತ್ತದೆ ಅದನ್ನು ನಾವು ತಮ್ಮ ಗಮನಕ್ಕೆ ತಂದೆವು ತಾವು ಈ ಹಣವನ್ನು ಬಿಡುಗಡೆ ಮಾಡಿದಾಗ Private societyಗಳು ರೈತರಿಗೆ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ ಇದು ನಮ್ಮ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ ನಮ್ಮ ಮಾಹಿತಿ ಪ್ರಕಾರ 450 ಕೋಟಿ ರೂಪಾಯಿಗಳಷ್ಟೆ ರೈತರಿಗೆ ಸಾಲ ಸಿಕ್ಕಿದೆ Of course, ತಾವು statement ನ್ನು verify ಮಾಡಿ ಇಷ್ಟನ್ನು ನಾನು ತಮಗೆ ರಿಕ್ವೆಸ್ಟ್ ಮಾಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ತಾವು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕೆಂಬ ಬಗ್ಗೆ ಗುರಿಯನ್ನು ಇಟ್ಟುಕೊಂಡಿದ್ದೀರಿ?

ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಏನು ಹೇಳುತ್ತಾರೋ ಹೇಳಲಿ ನಾನು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶವನ್ನು ಕೊಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ಆಗ ಅವಕಾಶವನ್ನು ಕೊಡುವುದಿಲ್ಲ ತಾವು ಅವಕಾಶವನ್ನು ಕೊಡುತ್ತೇನೆಂದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ

ಅಧ್ಯಕ್ಷರು ಎಲ್ಲ ಸದಸ್ಯರುಗಳು ಮಾತನಾಡಿದ ಮೇಲೆ ಉತ್ತರ ಹೇಳಿದ ನಂತರ ಸ್ಪಷ್ಟೀಕರಣದ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ಆಗ ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಅವಕಾಶವೇ ಕೊಡುವುದಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ನಾನು ಈ ವಿಷಯವನ್ನು ಏತಕ್ಕಾಗಿ ಪ್ರಸ್ತಾಪ ಮಾಡಿದೆ ಎಂದರೆ, ನಾನು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ನೋಡಿದೆ ಆ ಪತ್ರಿಕೆಯಲ್ಲಿ ಅಕಾರವನ್ನು ನಡೆಸುವುದಕ್ಕೆ ಆಗದಿದ್ದರೆ ಅಕಾರವನ್ನು ತ್ಯಾಗ ಮಾಡಿ ಎನ್ನುವ ರೀತಿಯಲ್ಲಿ ಚರ್ಚೆ ಮಾಡಿದ್ದಾರೆ ಮಾನ್ಯ ಸಿದ್ದರಾಮಯ್ಯನವರು ಒಂದು ವಿಷಯವನ್ನು ಹೇಳಿದ್ದಾರೆ ಗಂಭೀರವಾದ ಕಾರ್ಯಕ್ರಮವನ್ನು ಮಾಡಲಿಲ್ಲ, ಹಣವನ್ನು ಬಿಡುಗಡೆ ಮಾಡಲಿಲ್ಲ, ತಾವು ಈಗ

ಏನು ಕಾರ್ಯಕ್ರಮವನ್ನು ಮಾಡಿದ್ದೀರಿ, ಜನರಿಗೆ ಎಲ್ಲಿ ಪರಿಹಾರ ದೊರಕುತ್ತದೆ, ಇಷ್ಟರಮಟ್ಟಿಗೆ ಸರ್ಕಾರದ ದಿವ್ಯಮೌನ, ಏನು ಆಗಿಲ್ಲ, ಈ ರಾಜ್ಯದಲ್ಲಿ ಏನೂ ನಡೆದೇ ಇಲ್ಲ ಎನ್ನುವ ರೀತಿಯಲ್ಲಿ ಸರ್ಕಾರ ಇದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ ಅದಕ್ಕೋಸ್ಕರವೇ ನಾವು ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಈ ಸರ್ಕಾರಕ್ಕೆ ಬಹಳ ಪ್ರಚಾರ ಸಿಕ್ಕಿಬಿಟ್ಟಿದೆ ಎಂದು ಹೇಳಿದ್ದಾರೆ ಹೊರಗಡೆ ಜನರು ಏನು ಮಾತನಾಡಿಸಿ ಕೊಳ್ಳುತ್ತಿದ್ದಾರೆಂದರೆ, ನೀವು ಮಾಡತಕ್ಕಂತಹ ಕಾರ್ಯಕ್ರಮಗಳು ಸರಿಯಾದಂತಹ ಪ್ರಚಾರ ತೆಗೆದುಕೊಳ್ಳುತ್ತಿಲ್ಲ ಎಂದು ಹೊರಗಡೆಯ ಜನರು ಹೇಳುತ್ತಿದ್ದಾರೆ ಆದರೆ ವಿರೋಧ ಪಕ್ಷದ ನಾಯಕರು ನೀವು ಈ ಸರ್ಕಾರಕ್ಕೆ ಬಹಳ ದೊಡ್ಡಮಟ್ಟದ ಪ್ರಚಾರವನ್ನು ಕೊಟ್ಟಿಬಿಟ್ಟಿದ್ದೀರಿ, ಕೆಲಸವೇ ಆಗುತ್ತಿಲ್ಲವೆಂದು ಮಾತನಾಡುವಾಗ ಹೇಳಿದ್ದಾರೆ ಆ ದೃಷ್ಟಿಯಿಂದ ಕೇಂದ್ರ ಸರ್ಕಾರದಿಂದ ಹಣ ನಾವು ಏನು ನಿರೀಕ್ಷೆಯನ್ನು ಮಾಡಿದಕ್ಕಿಂತಲೂ ಹೆಚ್ಚಿಗೆ ಹಣ ಬರುತ್ತಿದೆ ಎನ್ನುವಂತಹ ರೀತಿಯಲ್ಲಿ ವಿರೋಧ ಪಕ್ಷದ ನಾಯಕರು ಹಿರಿಯರು ಇದ್ದಾರೆ ಅವರು ಅನುಭವದಲ್ಲಿ ದೊಡ್ಡವರಾಗಿದ್ದಾರೆ, ಮಾನ್ಯ ಸಿದ್ಧರಾಮಯ್ಯನವರೆ 2490 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ ವಿದರ್ಭ ಪ್ಯಾಕೇಜ್ 2490 ಕೋಟಿ ರೂಪಾಯಿಗಳು ಹಣ ಸಂಪೂರ್ಣವಾಗಿ ಬಂದಿದೆ ಎನ್ನುವಂತಹ ರೀತಿಯಲ್ಲಿ ಚರ್ಚೆ ಮಾಡಿದ್ದೀರಿ ನಾನು ಸದನದ ಕಲಾಪದ ಬಗ್ಗೆಯೇ ಮಾಹಿತಿಯನ್ನು ತೆಗೆದುಕೊಳ್ಳುತ್ತಿರುವುದು ವಿದರ್ಭ ಪ್ಯಾಕೇಜ್‌ನಲ್ಲಿ ಇದು ಸದನದ ಕಲಾಪದ್ದೇ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)· ಮಾನ್ಯ ಅಧ್ಯಕ್ಷರೆ, ಬಹಳ ಪ್ರಚಾರ ಸಿಕ್ಕಿದೆ ಎಂದು ನಾವು ಹೇಳಿದ್ದೇವೆ ಆದರೆ practically ಏನೂ ಕೆಲಸ ಆಗುತ್ತಿಲ್ಲ ಈಗ ಬಹಳ ದೊಡ್ಡ ಪ್ರಚಾರವೇನೆಂದರೆ, ಬಜೆಟ್‌ಗಿಂತ 6 ತಿಂಗಳು ಮುಂಚೆ ಸಾಲ ಮನ್ನಾ ಮಾಡುತ್ತೇವೆ, ಸಾರಾಯಿ ನಿಷೇಧವಾಯಿತು, ಹೊಸ ಅಧ್ಯಾಯ ಪ್ರಾರಂಭವಾಗಿದೆ ಎಂದು ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ್ದಾರೆ ತಾವು ಕೂಡ ಹೇಳಿದ್ದೀರಿ ಇವತ್ತು ಬಿತ್ತನೆ start ಆಗಿದೆ ಯಾವ ಡಿಸಿಸಿ ಬ್ಯಾಂಕ್ ಫಾರ್ಮರ್ಸ್‌ಗೆ ಲೋನ್ ಕೊಟ್ಟಿದ್ದಾರೆ verify ಮಾಡಿ ನಾವು ನಿಮ್ಮ ಎದುರಿಗೆ ಬರುತ್ತೇವೆ, ಫೋನ್ ಮಾಡಿ ತಾವು ಕೇಳಿ ಇದನ್ನು ನಾವು ಹೇಳಬೇಕಾಗಿಲ್ಲ ನಿಮ್ಮ ಸಹಕಾರ ಮಂತ್ರಿಗಳಾದ ಶ್ರೀ ಜಿ ಟಿ ದೇವೇಗೌಡರು ಹೇಳಿದ್ದಾರೆ ಇವತ್ತು ಅಪೆಕ್ಸ್ ಬ್ಯಾಂಕ್‌ಗೆ ಅವರು ಯಾವ ರೀತಿಯಾಗಿ ಕೆಲಸವನ್ನು ಮಾಡಬೇಕೆಂದು ಹಣಕಾಸಿನ ಮಂತ್ರಿಗಳು ಹಣವನ್ನು ಕೊಡುತ್ತಿಲ್ಲ ನಾನು ಇವತ್ತು ಖಚಿತವಾಗಿ ಹೇಳುತ್ತಿದ್ದೇನೆ ಇವತ್ತು ಖಚಿತವಾಗಿ ಹೇಳುತ್ತಿದ್ದೇನೆ ಇವತ್ತು ರೈತರ ನೆರವಿಗೆ ಯಾವ ರೀತಿಯಾಗಿ

ಸರ್ಕಾರ ಬರುತ್ತಿಲ್ಲವೆಂದು ಹೇಳುತ್ತೇನೆ ವಿದರ್ಭ ಪ್ಯಾಕೇಜ್‌ನಲ್ಲಿ 2680 ಕೋಟಿ ರೂಪಾಯಿಗಳು ಮಾನ್ಯ ಶರದ್‌ಪವಾರ್‌ರವರು, ಪ್ರಧಾನ ಮಂತ್ರಿಗಳು ಏನು ಕೊಟ್ಟಿದ್ದಾರೆ ನೀವು Action Plan ಅನ್ನು prepare ಮಾಡಿಲ್ಲ ಮಾನ್ಯ ಈಶ್ವರಪ್ಪನವರು ಹೇಳುತ್ತಾರೆ, 800 ಕೋಟಿ ರೂಪಾಯಿಗಳು ನೀರಾವರಿಗೆ ಬೇಕು ನಮ್ಮ ಕೇಂದ್ರದಿಂದ ಬಂದಂತಹ ಹಣ ಮಾನ್ಯ ಶಿವರಾಜ್ ಪಾಟೀಲ್‌ರವರು ಬಂದ ಮೇಲೆ 750 ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೇ? ಬರದ ಬಗ್ಗೆ ನಿರ್ವಹಣೆಯನ್ನು ಮಾಡಿದ್ದೀರಿ? 128 ತಾಲ್ಲೂಕಿನಲ್ಲಿ ಏನೂ ಕೆಲಸವನ್ನು ಮಾಡಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈಗ ವಿರೋದ ಪಕ್ಷದ ನಾಯಕರು 128 ತಾಲ್ಲೂಕುಗಳಲ್ಲಿ ಕೆಲಸಗಳೇ ಆಗಲಿಲ್ಲವಲ್ಲ ಎಂದು ಹೇಳಿದ್ದಾರೆ ನಾನು ವಿರೋಧ ಪಕ್ಷದ ನಾಯಕರಿಗಿಂತ ಚಿಕ್ಕವನಾಗಿದ್ದೇನೆ ಅವರಿಗೆ ಇರುವಂತಹ ಅನುಭವ ಸುದೀರ್ಘ ಆಡಳಿತವನ್ನು ನಡೆಸಿದ್ದಾರೆ ಆ ಆಡಳಿತದ ಅನುಭವ ನಮಗೆ ಇಲ್ಲ ನಾನು ಆಕಸ್ಮಿಕವಾಗಿ ಮುಖ್ಯಮಂತ್ರಿ ಆಗಿದ್ದೇನೆ ನಾನು 18 ತಿಂಗಳ ಕಾಲ ಆಳ್ವಿಕೆಯನ್ನು ನಡೆಸಿದ್ದೇನೆ ನೀವು ಹೇಳಿರತಕ್ಕಂಥದ್ದರಲ್ಲಿ ನಾನು ಸದನದ ಕಾರ್ಯಕಲಾಪದ ವರದಿಯನ್ನು ನಾನು ಹೇಳುತ್ತಿದ್ದೇನೆ ಇಲ್ಲಿ ಆಗಿರುವಂತಹ ಏನು ರೆಕಾರ್ಡ್ ಆಗಿದೆ, ತಾವೇ ಇಲ್ಲಿ ಹೇಳಿದ್ದೀರಿ, Agriculture Ministry ಇಂದ ಕೇಂದ್ರ ಸರ್ಕಾರ ಕೊಟ್ಟಿರುವುದು 361 ಕೋಟಿ ರೂಪಾಯಿಗಳು ಒಟ್ಟಾರೆ 1103 ಕೋಟಿ ರೂಪಾಯಿಗಳು ಕೇಂದ್ರದಿಂದ ಬಂದಿದೆ ವಿದ'ರ್ಭ ಪ್ಯಾಕೇಜ್ ಬೇರೆ ವಿದರ್ಭ ಪ್ಯಾಕೇಜ್‌ನಲ್ಲ 2490 ಕೋಟಿ ರೂಪಾಯಿಗಳು ಕೊಟ್ಟರೂ ಕೂಡ ರೇವಣ್ಣನವರ ಅಧ್ಯಕ್ಷತೆಯಲ್ಲಿ ಏನು ಸಬ್ ಕಮಿಟಿ ಇದೆ, ಇವತ್ತು ಏನು ಈಶ್ವರಪ್ಪನವರು 800 ಕೋಟಿ ರೂಪಾಯಿಗಳು ಎಂದು ಏನು ಹೇಳಿಕೊಂಡು ಬಂದಿದ್ದಾರೆ ಅವರು ಹೇಳಿರುವುದು ಇಲ್ಲವೆಂದು ನಾನು ಹೇಳುವುದಿಲ್ಲ ಮತ್ತೆ ಇನ್ನೊಂದು ಕಡೆ ಹೇಳುತ್ತೀರಿ ಮಾನ್ಯ ಶರದ್‌ಪವಾರ್‌ರವರು ಬಂದು ಒಟ್ಟಾರೆ ಆ ಭಾಗದಲ್ಲಿರುವಂತಹ ಪ್ರವಾಹ ಪೀಡಿತ ಪ್ರದೇಶಕ್ಕೆ ಈಗಾಗಲೆ 2270 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಎಂದು ಮತ್ತೇ ಇನ್ನೊಂದು ಕಡೆ ಹೇಳುತ್ತೀರಿ ನಾನು ರೇಕಾರ್ಡ್‌ನಲ್ಲಿ ಇರುವುದನ್ನೇ ಹೇಳುತ್ತಿದ್ದೇನೆ

ಶ್ರೀ ಎನ್ ಧರ್ಮಸಿಂಗ್ We have requested the Prime Minister ಶರದ್ ಪವಾರ್‌ರವರು ಅಲ್ಲಿಗೆ ಬಂದಿದ್ದರು ನಾವೆಲ್ಲರೂ ಮಾತುಕತೆಯನ್ನು ಆಡಿದೆವು ಅದರ ಪರಿಣಾಮವಾಗಿ ಆ ಬಾಗದ ಪ್ರವಾಹ

ಪೀಡಿತ ಪ್ರದೇಶಗಳಿಗೆ ಅಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ ಬೆಳಗಾಂ ಜಿಲ್ಲೆಗೆ 196 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ನಾವು ಮುಖ್ಯ ಮಂತ್ರಿಗಳಾಗಿದ್ದಾಗ ಅವರು ಉಪಮುಖ್ಯ ಮಂತ್ರಿಗಳಾಗಿದ್ದರು ಅವರು ಮತ್ತು ನಾವು ಕೂಡ ಒಟ್ಟಿಗೆ ಅಇಲ್ಲಗೆ ಹೋಗಿದ್ದೆವು ಅಷ್ಟು ಹಣವನ್ನು ಕೊಟ್ಟಿದ್ದಾರೆ ಒಟ್ಟಾರೆ ಹಣ ಬಂದಿದೆ You have to use the break up That ıs the ınformatıon. ಅದನ್ನು ಕೊಡಿ

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ, Suıcıde Package ಅನ್ನು ಕೇಂದ್ರ ಸರ್ಕಾರ ಅಕ್ಟೋಬರ್ 17ನೇ ತಾರೀಖು announce ಮಾಡಿದರು ಅವರು ಅನೌನ್ಸ್ ಮಾಡಿದ ತಕ್ಷಣವೇ ಸಚಿವರ ಸಂಪುಟದ ಉಪಸಮಿತಿಯಲ್ಲಿ 11ನೇ ತಿಂಗಳು 31ನೇ ತಾರೀಖು ಸಮಿತಿಯು ರಚನೆಯಾಯಿತು ಅದು ರಚನೆಯಾದ ತಕ್ಷಣವೇ ಸುಮಾರು 6–7 ಮೀಟಿಂಗ್‌ಗಳು ಮಾಡಿದ್ದೇವೆ Chıef Secretary ಯವರ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ಮೀಟಿಂಗ್‌ನ್ನು ಮಾಡಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದೇವೆ ಇದು ಅಲ್ಲದೇ ಇವತ್ತು ನಮ್ಮ Agrıculture Secretary ಯವರು ಪ್ರತಿ ತಿಂಗಳು ಅವರು ಕೂಡ ಮೀಟಿಂಗ್‌ನ್ನು ಮಾಡುತ್ತಿದ್ದಾರೆ ಸಂಬಂಧ ಪಟ್ಟಂತಹ ಜಿಲ್ಲಾ ಸಚಿವರುಗಳು ಕೂಡ ಅಕಾರವನ್ನು ಕೊಟ್ಟಿದ್ದೇವೆ ಸಂಬಂಧ ಪಟ್ಟಂತಹ ಇಲಾಖಾ ಮುಖ್ಯಸ್ಥರು ಯಾರು ಮಿನಿಸ್ಟರ್‌ಗಳು ಇದ್ದಾರೆ ಅವರಿಗೂ ಕೂಡ ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ ಈ ಪ್ಯಾಕೇಜ್ ಬಂದಿದ್ದರಲ್ಲಿ ಕೃಷಿ ಇಲಾಖೆಗೆ 10 ಕೋಟಿ 37 ಲಕ್ಷ ರೂ ಗಳು ಬಿಡುಗಡೆಯಾಗಿದೆ ಅದರಲ್ಲಿ 9 ಕೋಟಿ 27 ಲಕ್ಷರೂ ಗಳನ್ನು ನಾವು ಇಲ್ಲಿಯವರೆಗೆ ಖರ್ಚು ಮಾಡಿದ್ದೇವೆ ಅದರಲ್ಲಿ ಬೀಜ, ಹನಿ ನೀರಾವರಿ, ವಿಸ್ತರಣೆಯ ಬಗ್ಗೆ 10 ಕೋಟಿ 37 ಲಕ್ಷ ರೂ ಗಳಲ್ಲಿ, ಇಲ್ಲಿಯವರೆಗೆ 9 ಕೋಟಿ 27 ಲಕ್ಷ ರೂ ಗಳನ್ನು ಖರ್ಚು ಮಾಡಿದ್ದೇವೆ ಇದೇ ರೀತಿಯಾಗಿ ಜಲಾನಯನ ಅಭಿವೃದ್ಧಿ ಅದಕ್ಕೆ 180 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ ಆದರೆ ಇವತ್ತಿನವರೆಗೂ ಕೂಡ 1 ರೂಪಾಯಿ ಕೂಡ ಬಂದಿಲ್ಲ ಅದಕ್ಕೂ ಕೂಡ ಯೋಜನಾ ವರದಿ ಎಲ್ಲವನ್ನು ತಯಾರು ಮಾಡಿ ಕಳುಹಿಸಿಕೊಟ್ಟಿದ್ದೇವೆ ಪೂರ್ತಿಯಾಗಿ ಕಳುಹಿಸಿಕೊಟ್ಟಿದ್ದೇವೆ ಅಲ್ಲಿಂದ ಬಂದರೆ ತೋಟಗಾರಿಕೆ ಇಲಾಖೆಗೆ 106 00 ಕೋಟಿ ರೂ ಗಳು Actıon Plan sanctıon ಆಗಿದೆ 31 00 ಕೋಟಿ ರೂ ಕೊಟ್ಟಿದ್ದಾರೆ ಅದರಲ್ಲಿ 10 11 ಲಕ್ಷ ರೂ ಗಳು ಬಿಡುಗಡೆ ಆಗಿರುವುದನ್ನು ಖರ್ಚು ಮಾಡಿದ್ದೇವೆ, ಬಾಕಿ ಹಣವನ್ನು ಹಂತಹಂತವಾಗಿ ಖರ್ಚು ಮಾಡುತ್ತಿದ್ದಾರೆ

ಪಶುಸಂಗೋಪನೆಯಿಂದ ಡ್ಯೆರಿ ತೆಗೆದುಕೊಂಡಿರುವುದಕ್ಕೆ ಒಂದು ಅಪಾದನೆ ಇದೆ, 93 00 ಕೋಟಿ ರೂ ಗಳ ಮಂಜೂರಾತಿ ಅದರಲ್ಲಿ 16 00 ಕೋಟಿ ರೂ ಗಳು ಇದ್ದು ಡ್ಯೆರಿಗಾಗಿ 13 00 ಕೋಟಿ ರೂ ಗಳು ಕೊಟ್ಟಿದ್ದಾರೆ, ಆದರೆ ನಾನು 13 00 ಕೋಟಿ ರೂ ಗಳನ್ನು ಡ್ಯೆರಿಗೆ ಖರ್ಚು ಮಾಡುವುದಿಲ್ಲ ಜಿಲ್ಲಾಕಾರಿಗಳ ಅಧ್ಯಕ್ಷತೆಯಲ್ಲಿ ಇರುತ್ತದೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿ ಸದಸ್ಯರಾಗಿರುತ್ತಾರೆ ಜಿಲ್ಲಾ ಪಶುಸಂಗೋಪನಾ ಇಲಾಖೆಯವರು ಖಜಾಂಚಿಯಾಗಿರುತ್ತಾರೆ, ಲೀಡ್ ಬ್ಯಾಂಕ್‌ನ ಮ್ಯಾನೇಜರ್‌ರವರೊಬ್ಬರು ಸದಸ್ಯರಾಗಿರುತ್ತಾರೆ ಡ್ಯೆರಿಯ ಎಂ ಡಿ ಒಬ್ಬರು ಸದಸ್ಯರಿರುತ್ತಾರೆ ಇವರು 5 ಜನ ಸೇರಿ ಫಲಾನುಭವಿಗಳ ಪಟ್ಟಿಯನ್ನು ಆಯ್ಕೆ ಮಾಡುತ್ತಾರೆ ಯಾರ್ಯಾರು eligible ಇರುತ್ತಾರೆ ಅವರನ್ನು ಪತ್ತೆ ಹಚ್ಚುವುದು ಅವರ ಉದ್ದೇಶವಾಗಿರುತ್ತದೆ ಎಲ್ಲಾ ಜಿಲ್ಲೆಗಳಿಗೂ ಆಯ್ಕೆ ಮಾಡುತ್ತಾರೆ ಕೆ ಎಂ ಎಫ್ ಗೆ 13 00 ಕೋಟಿ ರೂ ಗಳನ್ನು ಕೊಡುವುದು ಒಂದು ಏಜನ್ಸಿ ತೆಗೆದುಕೊಳ್ಳುವುದಕ್ಕೆ ಮಾತ್ರ ಇದೆ ಕಳೆದ ಸಲ 70 00 ಕೋಟಿ ರೂ ಗಳನ್ನು ದೇವೇಗೌಡರು ಪ್ರ್ರಾನಿಯಾದಾಗ ಎಸ್ ಸಿ /ಎಸ್ ಟಿ ಜನಾಂಗದವರಿಗೆ ನಾನೇ ತಂದು ಇಡೀ ರಾಷ್ಟ್ರದಲ್ಲಿ ಮೊದಲನೇ ಸಾರಿ ಡ್ಯೆರಿಗಾಗಿ 70 00 ಕೋಟಿ ರೂ ಗಳನ್ನು 100–00 ರೂ ಇದ್ದರೆ 70 00 ಕೋಟಿ ರೂ ಪುಕ್ಸಟ್ಟೆ ಕೊಡುವುದು 70% ಇಡೀ ರಾಷ್ಟ್ರದಲ್ಲಿ ನಾನು ಫಸ್ಟ್ ಟೈಮ್ ಅಷ್ಟು ಕ್ಲೀನ್ ಆಗಿ ಮಾಡಿರುವುದು ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಲೇಡಿಸ್ ಸೊಸೈಟಿಗಾಗಿ ಕೊಟ್ಟಿದ್ದಾರೆ, ಒಳ್ಳೆಯ ರೀತಿ ಕೆಲಸ ಮಾಡುತ್ತಿದ್ದೇವೆಂದು, ಕೇಂದ್ರ ಸರ್ಕಾರ ಇವತ್ತು ಐದು ಸಾರಿ ಕೊಟ್ಟಿದ್ದಾರೆ ಬೇಕಾದರೆ ಕಡತವನ್ನು ಕೊಡುತ್ತೇವೆ ನೋಡಿ ನಿಮಗೆ ಗೊತ್ತಾಗುತ್ತದೆ ಇದರಲ್ಲೇನಾದರೂ ಲೋಪವಿದ್ದರೆ, ಈ ಐದು ಜಿಲ್ಲೆ, ಬೆಳಗಾಂ ಜಿಲ್ಲೆಯ ಡೆಪ್ಯುಟಿ ಕಮಿಷನರ್, ಅಲ್ಲಿನ District Animal Husbandry department, ಲೀಡ್ ಬ್ಯಾಂಕ್ ಚೀಫ್ ಸೆಕ್ರೆಟರಿ ಇರುತ್ತಾರೆ ಡ್ಯೆರಿಯ ಎಂ ಡಿ ಇರುತ್ತಾರೆ ನಾನು ಹೇಗೆ ಹಣ ಖರ್ಚು ಮಾಡಲಿಕ್ಕಾಗುತ್ತದೆ? ಇದು ಒಂದು ಬಾಗ ಮತ್ತೆ ನಮ್ಮ ನೀರಾವರಿ ಇಲಾಖೆಯ ಬಗ್ಗೆ ಸಿದ್ಧರಾಮಯ್ಯನವರೇ ನಾನು ಹೇಳುತ್ತೇನೆ, ಆ ಮೇಲೆ ತಾವು ಫೈನಲ್ ಆಗಿ ಏನು ಬೇಕಾದರೂ ಹೇಳಿ, ಏಕೆಂದರೆ ಕೆಲವರು ತಮಗೆ ಹೇಳಿಕೊಡುವವರು ಇರುತ್ತಾರೆ, ನಿಜವಾಗಿಯೂ ತಾವು ಸ್ವಂತವಾಗಿ ಹೇಳುವುದಿಲ್ಲ ಕೆಲವರು ಯಾರೋ ಹೇಳಿದ್ದನ್ನು ತಾವು ಹೇಳಿರುತ್ತೀರಿ, ಇರುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ ತಮ್ಮ ಗಮನಕ್ಕೆ ನಿಜ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ ಬೇರೇನೂ ಸುಳ್ಳು ಹೇಳುತ್ತಿಲ್ಲ

ಶ್ರೀ ಎಸ್ ಸಿದ್ದರಾಮಯ್ಯ ನೀವೆ ಎಲ್ಲ ಕಡೆ ಹೇಳಿಬಿಟ್ಟಿದ್ದೀರಲ್ರೀ

ಶ್ರೀ ಹೆಚ್ ಡಿ ರೇವಣ್ಣ ನಾನು ಎಲ್ಲಿಯೂ ಹೇಳಿಲ್ಲ ನಾನು ಇವತ್ತಿನವರೆಗೂ ಪ್ರೆಸ್ ಕಾನ್ಫರೆನ್ಸ್‌ನಲ್ಲಿಯೂ ಹೇಳುತ್ತಿದ್ದೇನೆ, ನಾನು ಕೆ ಎಂ ಎಫ್ ನ ಅಧ್ಯಕ್ಷತೆ ವಹಿಸಿಲ್ಲ ಜಿಲ್ಲಾಕಾರಿಗಳು ಅಧ್ಯಕ್ಷರಾಗಿರುತ್ತಾರೆಂದು ಪತ್ರಿಕಾ ಸ್ನೇಹಿತರೆದುರಿಗೆ 50 ಸಾರಿ ಹೇಳಿದ್ದೇನೆ

ಶ್ರೀ ಬಿ ಶಿವರಾಂ ಈಗ ಡೈರಿ ಮೂಲಕ ಅನುಷ್ಠಾನ ಮಾಡುವುದನ್ನು ಪಶುಸಂಗೋಪನೆ ಇಲಾಖೆಯ ಮೂಲಕವೇ ಮಾಡಿ

ಶ್ರೀ ಹೆಚ್ ಡಿ ರೇವಣ್ಣ ನಾನು ಯಾವ ತರಹ ಮಾಡಬೇಕೆಂಬ ಬಗ್ಗೆ ಸರ್ಕಾರ ನನಗೆ ಬಿಟ್ಟಿದೆ

ಶ್ರೀ ಬಿ ಶಿವರಾಂ ಸರ್ಕಾರದಲ್ಲಿರುವ ಹೊತ್ತಿಗೆ ತಮ್ಮನ್ನು ನಾವು ಕೇಳುತ್ತಿರುವುದು ಅಲ್ಲಿರತಕ್ಕಂಥ ಆದೇಶವೇ ಈಗ ಜಲಾನಯನ ಯೋಜನೆ ಬೇರೆಯದನ್ನು ಕೃಷಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತೇವೆಂದಾಗ ಪಶು ಸಂಗೋಪನೆ ಇಲಾಖೆಗೆ ಬರುವ ಹಣವನ್ನು ಪಶು ಸಂಗೋಪನೆ ಏಜೆನ್ಸಿ ಮೂಲಕ ಮಾಡಬೇಕು ಡೈರಿ ಮೂಲಕ ಏತಕ್ಕೆ ಮಾಡಬೇಕು?

ಶ್ರೀ ಎಸ್ ಸಿದ್ಧರಾಮಯ್ಯ ಈಗ ನಮ್ಮದೇನು ತಕರಾರು ಎಂದರೆ ನೀವು 8 ತಿಂಗಳುಗಳಿಂದ ನಿಮ್ಮ ಸಬ್ ಕಮಿಟಿ ಅಧ್ಯಕ್ಷತೆಯಲ್ಲಿ ಇಂಪ್ಲಿಮೆಂಟ್ ಮಾಡುತ್ತಿದ್ದೀರಿ ಆ ಸಬ್ ಕಮಿಟಿಗೆ ನೀವೇ ಅಲ್ಲವೇ ಅಧ್ಯಕ್ಷರು ನಿಮ್ಮ ಅಧ್ಯಕ್ಷತೆಯಲ್ಲಿ ಮಾಡುತ್ತಿದ್ದೀರಿ ಈಗ ಡೈರಿ ಮೂಲಕ, ಕೆ ಎಂ ಎಫ್ ಗೆ 13 ಕೋಟಿ ರೂ ಗಳನ್ನು ಕೊಟ್ಟಿದ್ದೀರಿ, ಅದನ್ನು ಎಲ್ಲಾ ಎಸ್ ಸಿ /ಎಸ್ ಟಿ ಜನಾಂಗದ ಫಲಾನುಭವಿಗಳಿಗೆ ಕೊಡಿ ಏಜೆನ್ಸಿ ಸರ್ಕಾರವೇ ತಾನೇ, ನೀವು ತಾನೇ ಯಜಮಾನರು ಅಲ್ಲಿಗೆ

ಶ್ರೀ ಹೆಚ್ ಡಿ ರೇವಣ್ಣ ಎರಡು ನಿಮಿಷ ಈಲ್ಡ್ ಆಗಿ 13 00 ಕೋಟಿ ರೂ ಗಳನ್ನು ಕೊಟ್ಟಿರುವುದನ್ನು ನನಗಲ್ಲ ಕೆ ಎಂ ಎಫ್ ಗೆ ಕೊಟ್ಟಿರುವುದು 13 00 ಕೋಟಿ ರೂ ಗಳನ್ನು ಒಂದು ಏಜೆನ್ಸಿ ಆಗಿ ಮಾರ್ಚ್ 31ರೊಳಗೆ ಆ ಹಣ ಲ್ಯಾಪ್ಸ್ ಆಗುತ್ತದೆಂದು ನನಗೆ ಕೊಟ್ಟಿದ್ದಾರೆ, ಆದರೆ ಆ ಹಣ ನಾನು ಖರ್ಚು ಮಾಡುವ ಹಾಗಿಲ್ಲ, ಇವತ್ತಿನವರೆಗೆ ಅದರಲ್ಲಿ 10–00 ರೂ ಗಳನ್ನು

ಖರ್ಚು ಮಾಡಿಲ್ಲ ಯಾರು ಬೆಳಗಾಂ ಡೆಪ್ಯುಟಿ ಕಮಿಷನರ್ ಇರುತ್ತಾರೆ, ಚಿಕ್ಕಮಗಳೂರು ಡೆಪ್ಯುಟಿ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಇದು ನಡೆಯುತ್ತಿದೆ

ಶ್ರೀ ಎಸ್ ಸಿದ್ಧರಾಮಯ್ಯ ಯಾರೇ ಜಿಲ್ಲಾಕಾರಿಗಳು ಖರ್ಚು ಮಾಡುವವರು ಯಾರೇ ಅಧಿಕಾರಿಗಳು ಆದರೂ ರೇವಣ್ಣನವರೇ, ಸರ್ಕಾರ is answerable You are answerable ನಾನು ಖರ್ಚು ಮಾಡಿಲ್ಲವೆಂದು ನೀವು ಹೇಳಲಿಕ್ಕೆ ಬರುವುದಿಲ್ಲ ಜಿಲ್ಲಾಕಾರಿಗಳು ಖರ್ಚು ಮಾಡಿದರೂ ಕೂಡ, ಜಿಲ್ಲಾಕಾರಿಗಳು ಖರ್ಚು ಮಾಡುವಾಗ ತಪ್ಪು ಮಾಡಿದರೂ ಕೂಡ you will be held responsible You are answerable ಅವರು ಮಾಡಿದ್ದಾರೆ ನನ್ನದೇನೂ ಇಲ್ಲ, ನಾನು ಒಂದು ರೂಪಾಯಿಯನ್ನು ಖರ್ಚು ಮಾಡಿಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ

(ಗೊಂದಲ)

ಶ್ರೀ ಹೆಚ್ ಸಿ ಮಹದೇವಪ್ಪ ರೇವಣ್ಣನವರ ಉತ್ತರ ಕೇಳಿದ ಮೇಲೆ ನಮಗೆ ಸಂತೋಷವಾಗುತ್ತಿದೆ, ಏನೆಂದರೆ, ಅಭಿವೃದ್ಧಿ ಮಾಡಬೇಕು ಎನ್ನುವ ಬಗ್ಗೆ ಅವರಿಗಿರುವ ಕಾಳಜಿ, ಇದನ್ನೆಲ್ಲಾ ಕೇಳಿದ ಮೇಲೆ ರೇವಣ್ಣನವರಿಗೆ Agriculture, Horticulture, Serculture, Animal Husbandry ಖಾತೆ ಕೊಟ್ಟರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ ದಯಮಾಡಿ ಮುಖ್ಯಮಂತ್ರಿಗಳು

ಶ್ರೀ ಹೆಚ್ ಡಿ ರೇವಣ್ಣ ನಾನು ಅಷ್ಟು ಬುದ್ಧಿವಂತನಲ್ಲ, ನಮ್ಮ ಮಹದೇವಪ್ಪನವರು ನಮಗಿಂತ ಬುದ್ಧಿವಂತರಿದ್ದಾರೆ ಮೂರು ಆಸರಿ ಮಂತ್ರಿಮಂಡಲದಲ್ಲಿ ಕೆಲಸ ಮಾಡಿದ್ದಾರೆ, ನನಗೇಕೆ? ನನಗೆ ಇರುವ ಖಾತೆಯನ್ನು ಸರಿಯಾಗಿ ಕೆಲಸ ನಿರ್ವಹಿಸಲಿಕ್ಕೆ ಆಗುತ್ತಿಲ್ಲ ಇನ್ನೂ ಅಗ್ರಿಕಲ್ಚರ್ ಏತಕ್ಕೆ ಬೇಕು?

(ಗೊಂದಲ)

ಶ್ರೀ ಕೆ ಆರ್ ರಮೇಶ್ ಕುಮಾರ್ ಮಹದೇವಪ್ಪನವರು ಹೇಳಿದ್ದು ಶುದ್ಧ ತಪ್ಪು He is wating for promotion ನೀವು demotion ಮಾಡುತ್ತಿದ್ದೀರಲ್ಲ ಇಲ್ಲಿ ಕೇಳಿ ರೇವಣ್ಣನವರೇ, Chief Minister, Deputy

Chief Minister, Ex-Deputy Chief Minister, Probationary Chief Minister

ಶ್ರೀ ಹೆಚ್ ಡಿ ರೇವಣ್ಣ ರಮೇಶ್‌ಕುಮಾರ್‌ರವರು ಇರುವ ಖಾತೆಯನ್ನು ತೆಗೆಯಬೇಕು ಎಂದು ಹೇಳುತ್ತಿದ್ದಾರೋ ಏನೋ ನನಗೆ ಗೊತ್ತಾಗುತ್ತಿಲ್ಲ

ಅಧ್ಯಕ್ಷರು ಆಯಿತು

ಶ್ರೀ ಹೆಚ್ ಡಿ ರೇವಣ್ಣ ಎರಡು ನಿಮಿಷ clarification ಕೊಡುತ್ತೇನೆ ಮೀನುಗಾರಿಕೆ ಇಲಾಖೆಗೆ 6 24 ಲಕ್ಷ ರೂ ಗಳನ್ನು ಕೊಟ್ಟಿದ್ದಾರೆ Suicide package ವಿಷಯ ಹೇಳಿಬಿಡುತ್ತೇನೆ, ಉಳಿದ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ, ಮಾನ್ಯ ನೀವು ಏಕೆ ಮಾತನಾಡುತ್ತೀರಿ, ಆಮೇಲೆ ಹೇಳಿ ಮೊದಲು ಮುಖ್ಯಮಂತ್ರಿಗಳು ಉತ್ತರ ಮುಗಿಸಲಿ, ಆಮೇಲೆ ಕ್ಲಾರಿಫಿಕೇಷನ್ ಮತ್ತೊಂದು ವಿಷಯ ಕೇಳಬಹುದು

ಶ್ರೀ ಬಿ ಶಿವರಾಂ ಈಗ action plan submit ಮಾಡಿರುವುದು ಯಾವಾಗ ಎಂದು ಹೇಳಬೇಕಲ್ಲವೇ? ಕೇಂದ್ರ ಸರ್ಕಾರದಿಂದ ಹಣ ಬರಲಿಕ್ಕೆ ವಿಳಂಬವಾಗಿರುವಂಥದ್ದು, action plan submit ಮಾಡಲಿಕ್ಕೆ ಆಗಿರುವ ವಿಳಂಬದ ಬಗ್ಗೆ ಸ್ಪಷ್ಟೀಕರಣ ಕೊಡಬೇಕು Action plan Central Governmnet ಗೆ ಯಾವಾ ಹೋಗಿದೆಯೆಂಬ ಬಗ್ಗೆ ಸ್ಪಷ್ಟ ಮಾಡಬೇಕು

ಅಧ್ಯಕ್ಷರು ರೇವಣ್ಣನವರು, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ, ಈಗ ಶಿವರಾಂರವರೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಧ್ಯಕ್ಷರೇ, ನಾನು ಎಲ್ಲಾ ಸದಸ್ಯರಲ್ಲಿ ಮನವಿ ಮಾಡುತ್ತೇನೆ, ಏಕೆಂದರೆ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಕೆಲವು ವಿಷಯಗಳನ್ನು ಮತ್ತೆ ಎತ್ತುತ್ತಿರುವುದು, ನಾನು ಉತ್ತರ ಕೊಡುವಾಗ ಪ್ರತಿ ಸಂದರ್ಭದಲ್ಲಿ ಕ್ಲಾರಿಫಿಕೇಷನ್ ಎಲ್ಲರೂ ಕೇಳುತ್ತಿದ್ದಾರೆ ಉತ್ತರ ಕೊಟ್ಟ ನಂತರ ಕ್ಲಾರಿಫಿಕೇಷನ್ ಕೇಳಿದರೆ ನಾನು ಅವರಿಗೆ ಉತ್ತರ

ಕೊಡಲಿಕ್ಕೆ ಸಿದ್ಧನಿದ್ದೇನೆ ನಾನಂತೂ ಯಾವತ್ತೂ ಸದನದಲ್ಲಿ ಈ ಸ್ಥಾನದಲ್ಲಿ ಕುಳಿತು

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ಇಲ್ಲಿಗಿಂತ ಹೆಚ್ಚಾಗಿ ಎದುರಿಗೆ ಕುಳಿತಿರುವ ಎಲ್ಲಾ ಹಿರಿಯ ಸದಸ್ಯರಿಗೆ ರೇವಣ್ಣನವರ ಬಗ್ಗೆ ಬಹಳ ಮಮತೆ ಇದೆ ಬಹಳ ಹತ್ತಿರದಲ್ಲಿರುವವರು

ಶ್ರೀ ಎಸ್ ಸಿದ್ಧರಾಮಯ್ಯ ರೇವಣ್ಣನವರೇ ಈಗ ಗೊತ್ತಾಯಿತೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ರೇವಣ್ಣನವರನ್ನು ಏನಾದರೂ ಸ್ವಲ್ಪ tempt ಮಾಡಲಿಕ್ಕೆ ಸಾಧ್ಯವೇ ಎಂದು ಬಹಳ ದಿವಸಗಳಿಂದ ಅವರನ್ನು ಸ್ವಲ್ಪ tempt ಮಾಡಲಿಕ್ಕೆ ಪ್ರಯತ್ನಿಸುತ್ತಿದ್ದಾರೆ, ಆದರೆ ಅರಿಗೆ ನಿರಾಶೆ ಕಾದಿದೆ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗುತ್ತದೆ

ಶ್ರೀ ಎಸ್ ಸಿದ್ಧರಾಮಯ್ಯ ರೇವಣ್ಣನವರು ಆ ಬ್ರಹ್ಮ ಬಂದರೂ ಟೆಂಪ್ಟ್ ಆಗುವುದಿಲ್ಲ ಎಂಬುದು ನಮಗೆ ಗೊತ್ತಾಗಿಬಿಟ್ಟಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಧ್ಯಕ್ಷರೇ, ಇವತ್ತು ವಿದರ್ಬ ಪ್ಯಾಕೇಜ್ ಇರತಕ್ಕದ್ದು ಮೂರು ವರ್ಷಗಳ ಅವಗೆ, 2,690–00 ಕೋಟಿ ರೂ ಗಳನ್ನು ಒಂದೇ ವರ್ಷಕ್ಕೆ ಖರ್ಚು ಮಾಡಲಿಕ್ಕೆ ಅವಕಾಶವಿಲ್ಲ ಇವತ್ತು ನೀರಾವರಿ ಇಲಾಖೆಯ ಬಗ್ಗೆ ಈಶ್ವರಪ್ಪನವರು ಜೊತೆ ಏನು ಚರ್ಚೆ ಮಾಡುತ್ತಿದ್ದಾರೆ ಈಗಾಗಲೇ 17 ಡಿ ಪಿ ಆರ್ ಗಳನ್ನು ಈಗಾಗಲೇ ಕೇಂದ್ರದ ವಾಟರ್ ಬೋರ್ಡ್‌ಗೆ ಕಳುಹಿಸಿದ್ದೇವೆ ಅಲ್ಲಿಂದ ನಮಗೆ ಆ ಹಣ ಖರ್ಚು ಮಾಡಲಿಕ್ಕೆ ಅನುಮತಿ ಕೊಟ್ಟಿಲ್ಲ ಇಲ್ಲಿ ಇರತಕ್ಕಂಥದ್ದು ಮೂಲ ನ್ಯೂನತೆ ಎಂದು ಹೇಳಲಿಚ್ಛಿಸುತ್ತೇನೆ ನೀರಿನ ವಿಷಯುದಲ್ಲಿ ಅಕ್ಕಪಕ್ಕದ ರಾಜ್ಯಗಳ ಜೊತೆಗ ಇರತಕ್ಕಂಥ ನ್ಯಾಯಾಧಿಕರಣದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಇಲ್ಲಿಂದ ಕಳುಹಿಸಿರುವ ಪ್ರಸ್ತಾವನೆಗಳಿಗೆ ಅವರು ಮಂಜೂರಾತಿ ಕೊಡದೇ ಇರುವುದರಿಂದ ಇವತ್ತು ಈ ಒಂದು ವ್ಯಾಪ್ತಿಯಲ್ಲಿ ನಮಗೆ ಹಣವನ್ನು ಖರ್ಚು ಮಾಡಲಿಕ್ಕೆ ನಮಗೆ ಅವಕಾಶ ಇಲ್ಲ ಇದುವರೆಗೆ 2,690 ಕೋಟಿ ರೂ ಗಳು ಕೇಂದ್ರ ಸರ್ಕಾರದಿಂದ ಬಂದುಬಿಟ್ಟದೆ ಎಂದು ಎಲ್ಲಾ ನಮ್ಮ ಹಿರಿಯ ಸದಸ್ಯರು ಪ್ರಮುಖವಾಗಿ

ಚರ್ಚೆ ಮಾಡಿದ್ದಾರೆ ಆದರೆ ಇಲ್ಲಿಯವರೆಗೆ ಬಂದಿರತಕ್ಕಂಥ ಹಣ 66 00 ಕೋಟಿ ರೂ ಗಳು ಮಾತ್ರ 2,690-00 ಕೋಟಿ ರೂಪಾಯಿಗಳು ಬಂದಿಲ್ಲ ಎಂಬುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ

ಬಂದಿರುವುದು 66 ಕೋಟಿ ರೂಪಾಯಿಗಳು ಅದರಲ್ಲಿ irrigation ವಿಷಯವಾಗಿ 800 ಕೋಟಿ ರೂಪಾಯಿಗಳ ಪ್ರಸ್ತಾವ ಕಳುಹಿಸಿರುವುದಕ್ಕೆ ಅವರು ಮಂಜೂರಾತಿ ಕೊಟ್ಟಿಲ್ಲ ಇನ್ನು ನಾವು ಹಣ ಖರ್ಚು ಮಾಡುವುದು ಎಲ್ಲಿಂದ ಬರುತ್ತದೆ? ಇದರ ಜೊತೆಗೆ, ಇವತ್ತು ಹಣ ಬಂದಿರುವ ಸಂದರ್ಭದಲ್ಲಿ ಉದಾಹರಣೆಗೆ, seeds ಬಗ್ಗೆ ಸರ್ಕಾರ ಸರಿಯಾದ ರೀತಿಯಲ್ಲಿ ಕ್ರಮ ಕೈಗೊಂಡಿಲ್ಲವೆಂದು ಹೇಳಿರುವುದಕ್ಕೆ, ಕೇಂದ್ರ ಸರ್ಕಾರದ ವಿದರ್ಭ ಪ್ಯಾಕೇಜ್ ನಡಿಯಲ್ಲಿ ನಮಗೆ ಇಲ್ಲಿಯವರೆಗೆ 86 ಲಕ್ಷ ರೂಪಾಯಿಗಳು ಮಾತ್ರ ಬಂದಿದೆ ಆದರೆ, ನಮ್ಮ ಇವತ್ತಿನ 5 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಹಣ ಮೀಸಲಿಟ್ಟು ರಾಜ್ಯ ಸರ್ಕಾರದಿಂದ ನಾವು ಹಣ ಬಿಡುಗಡೆ ಮಾಡಿದ್ದೇವೆ ಶೇಕಡ 75ರಷ್ಟು subsidy ಕೊಡುತ್ತಿದ್ದೇವೆ ಇವತ್ತು ಏನಾಗಿದೆ, subsidy ಯನ್ನು ಶೇಕಡ 75ರಷ್ಟಕ್ಕೆ ಏರಿಸಿದ ನಂತರ ನಾನು ಕೇಳುತ್ತೇನೆ ಪಾವಗಡದ ಆ ರೀತಿಯಲ್ಲಿ seeds ಕೊಟ್ಟಿಲ್ಲವೆಂದು ಕೆಲವರು ಚರ್ಚೆ ಮಾಡಿದ್ದೀರಿ ಇತಿಹಾಸದಲ್ಲಿಯೇ ಪಾವಗಡಕ್ಕೆ ಆ ರೀತಿಯಲ್ಲಿ ಶೇಂಗಾ ಬೀಜ ಕೊಡುವುದರಲ್ಲಿ ಈ ಸರ್ಕಾರ ಕೊಟ್ಟಿರುವಷ್ಟು ಆದ್ಯತೆ ಬೇರೆ ಹಿಂದಿನ ಸರ್ಕಾರಗಳು ಕೊಟ್ಟಿಲ್ಲವೆಂಬುದನ್ನು ನಾನು ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ

ರೈತರಿಗೆ ಉತ್ತಮ ಬಿತ್ತನೆ ಬೀಜ ಕೊಡುವುದಕ್ಕೆ, ಕಳೆದ ವರ್ಷ ಸುಮಾರು 85 ಕೋಟಿ ರೂಪಾಯಿಗಳವರೆಗೆ ಇಟ್ಟಿದ್ದೇವೆ ಇವತ್ತು ಉತ್ತಮ ಬಿತ್ತನೆ ಬೀಜಗಳನ್ನು supply ಮಾಡುವುದಕ್ಕೆ, ವಿರೋಧ ಪಕ್ಷದ ನಾಯಕರು ನಿನ್ನೆ ಮಾತನಾಡುತ್ತಾ, ನೀವೇನಾದರೂ ಹಳ್ಳಿಗಳ ಕಡೆ ಹೋದರೆ, ಜನರು ನಿಮಗೆ ಯಾವ ರೀತಿ ಛೀಮಾರಿ ಹಾಕುತ್ತಾರೆ, ನೋಡಿ ಎಂದು ಹೇಳುತ್ತಿದ್ದರು ನಾನು ಮೊನ್ನೆ ತಾನೇ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ ಪ್ರವಾಸದಲ್ಲಿ ನನ್ನೊಂದಿಗೆ ಎಂ ಪಿ ಪ್ರಕಾಶ್‌ರವರೂ ಇದ್ದರು ನನಗೆ ಎಲ್ಲಿಯೂ ಆ ರೀತಿಯಾಗಿ ಜನರು ಛೀಮಾರಿ ಹಾಕಲಿಲ್ಲ ಜನರು ಯಾವ ರೀತಿಯಲ್ಲಿ ನನ್ನನ್ನು ಬರಮಾಡಿಕೊಂಡಿದ್ದಾರೆಂಬ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು ಅನವಶ್ಯಕ ನನ್ನಷ್ಟು ಜನಸಾಮಾನ್ಯರ ಮಧ್ಯದಲ್ಲಿ ಬೆರೆತು ಕೆಲಸ ಮಾಡುತ್ತಿರುವ ಮುಖ್ಯಮಂತ್ರಿ ಬಹುಶಃ ಇವತ್ತು ಜನಸಾಮಾನ್ಯರ ಹತ್ತಿರಕ್ಕೆ ನೇರವಾಗಿ ಬಂದು ಸಂಪರ್ಕಿಸತಕ್ಕಂಥ ಒಂದು ವಾತಾವರಣ ನಿರ್ಮಾಣ ಮಾಡಿರತಕ್ಕಂಥದ್ದು ಈ ಸರ್ಕಾರದಲ್ಲಿ

ಎನ್ನುವುದನ್ನು ಸದಸ್ಯರ ಗಮನಕ್ಕೆ ತರುತ್ತೇನೆ ವಿಧಾನಸೌಧದಲ್ಲಿ ವಾಸ್ತವ್ಯ ಮಾಡಿ, ಗ್ರಾಮ ವಾಸ್ತವ್ಯ ಬಿಡಿ ಎಂದ ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ನಂತರ ಬರುತ್ತೇನೆ ಏಕೆಂದರೆ, ವಿದರ್ಭ ಪ್ಯಾಕೇಜ್‌ನಡಿಯಲ್ಲಿ ಇವತ್ತು ನೀವೇನೂ ಕ್ರಮ ಕೈಗೊಂಡಿಲ್ಲವೆಂದು ಏನು ಹೇಳುತ್ತಿದ್ದಾರೆ, ಇವತ್ತು Horticulture Department ಗೆ ಬಂದಿರುವ 66 ಕೋಟಿ ರೂಪಾಯಿಗಳಲ್ಲಿ 30 ಕೋಟಿ ರೂಪಾಯಿಗಳವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ, ಅದರ ಬಗ್ಗೆ ಈಗಾಗಲೇ ಕಾರ್ಯಕ್ರಮ ಪ್ರಾರಂಭ ಮಾಡಿದ್ದೇವೆ 2,690 ಕೋಟಿ ರೂಪಾಯಿಗಳಷ್ಟು ಹಣ ಬಂದಿರುವ ವಿಷಯದ ಬಗ್ಗೆ ಏನು ಪದೇ ಪದೇ ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ clarification ಕೊಡುವುದಕ್ಕೆ ಬಯಸುತ್ತಿದ್ದೇನೆ ಅದೇ ರೀತಿ ವಿರೋಧ ಪಕ್ಷದ ನಾಯಕರು ಏನೂ ಹೇಳಲಿಲ್ಲವೆಂದು ಹೇಳುತ್ತಾರೆ ಇವತ್ತು ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ವಿಷಯದಲ್ಲಿ ಮಾಹಿತಿ ಇಡಬೇಕೆಂದು ಹೇಳುತ್ತಿದ್ದಾರೆ ನಾನು ಮಾಹಿತಿ ಇಡುತ್ತೇನೆ 2004–05ರಲ್ಲಿ ಸಿ ಆರ್ ಎಫ್ ನಲ್ಲಿ ಬಂದಿರುವ 90 64 ಕೋಟಿ ರೂಪಾಯಿಗಳು, ಎನ್‌ಸಿಸಿಎಫ್ ನಲ್ಲಿ ಬಂದಿರುವ 63 62 ಕೋಟಿ ರೂಪಾಯಿಗಳು, ಒಟ್ಟು 154 24 ಕೋಟಿ ಬಂದಿದೆ 2005–06ರಲ್ಲಿ ಸಿಆರ್‌ಎಫ್‌ನಲ್ಲಿ 114 66 ಕೋಟಿ ರೂಪಾಯಿ, ಎನ್‌ಸಿಸಿಎಫ್ ನಲ್ಲಿ 358 85 ಕೋಟಿ ರೂಪಾಯಿಗಳು, ಒಟ್ಟು 473 5 ಕೋಟಿ ರೂಪಾಯಿಗಳು, 2006–07ರಲ್ಲಿ ಸಿಆರ್‌ಎಫ್ ನಲ್ಲಿ 120 38 ಕೋಟಿ ಬಂದಿದೆ, ಎನ್‌ಸಿಸಿಎಫ್ ನಲ್ಲಿ 226 30 ಕೋಟಿ ರೂಪಾಯಿಗಳು, ಒಟ್ಟಾರೆ 346 68 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರ 2004–05ರಲ್ಲಿ 74 12 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ 2005–06ರಲ್ಲಿ 120 94 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ 2006–07ರಲ್ಲಿ 114 97 ಕೋಟಿ ರೂಪಾಯಿಗಳಷ್ಟು ಹಣವನ್ನು ರಾಜ್ಯ ಸರ್ಕಾರ ಖರ್ಚು ಮಾಡಿದೆ ಈ ವರ್ಷ 2007–08ರಲ್ಲಿ ಕೇಂದ್ರ ಸರ್ಕಾರದ ಎನ್‌ಸಿಸಿಎಫ್‌ನಿಂದ ಯಾವುದೇ ಹಣ ಬಂದಿಲ್ಲ ಮತ್ತು ಸಿಆರ್‌ಎಫ್‌ನಲ್ಲಿ ಇವತ್ತು ಬೆಳಿಗ್ಗೆ 23 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿದ್ದೇವೆಂದು ನನಗೆ ಅಲ್ಲಿಂದ communication ಕಳುಹಿಸಿದ್ದಾರೆ ಇಲ್ಲಿಯವರೆಗೂ 126 41 ಕೋಟಿ ಏನಿದೆ, 2007–08ನೇ ಇಸವಿಯ ಬಾಬ್ತು 23 ಕೋಟಿ ರೂಪಾಯಿಗಳಷ್ಟು ಹಣವನ್ನು ಇವತ್ತು ಬಿಡುಗಡೆ ಮಾಡಿದ್ದೇವೆಂದು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಮಾಹಿತಿ ಕಳುಹಿಸಿದ್ದಾರೆ ಈ ವರ್ಷ additional ಆಗಿ ನಾವು ಈಗಾಗಲೇ ಅತಿವೃಷ್ಟಿಗೆ ಸಂಬಂಧಿಸಿದಂತೆ 50 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಆದೇಶ ಮಾಡಿ ಹಣ ಬಿಡುಗಡೆ ಮಾಡಿದ್ದೇವೆ ಇದನ್ನು ಸದಸ್ಯರ

ಎಲ್ಲಾ ಪಕ್ಷದವರೂ ಸಿದ್ಧರಾಗಿರಬೇಕು ಚುನಾವಣೆಯ ಸಂದರ್ಭದಲ್ಲಿ ಯಾರ್‍ಯಾರು ಹೇಗೆ ಮತವನ್ನು ಕೊಡುತ್ತಾರೆಂದು ಈಗಲೇ ಹೇಳುವುದಕ್ಕೆ ಆಗುವುದಿಲ್ಲ

ಇವತ್ತು ಉಲ್ಲಾಳ ಉಪ ಚುನಾವಣೆ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಪ್ರಸ್ತಾಪ ಮಾಡಿದರು ನಿಮ್ಮ ಪಕ್ಷ ಆ ಚುನಾವಣೆಯಲ್ಲಿ ರೇವಣಿ ಕಳೆದುಕೊಂಡಿದೆ ಎಂಬ ಮಾತನ್ನು ಅವರು ಹೇಳಿದರು ಉಲ್ಲಾಳ ಉಪ ಚುನಾವಣೆಯಲ್ಲಿ ಗೆದ್ದಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ, ಅಲ್ಲಿಂದ ಗೆದ್ದು ಬಂದಿರುವ ಮಾನ್ಯ ಸದಸ್ಯರು ಇಲ್ಲಿ ಕುಳಿತಿರಬಹುದು, ಅವರಿಗೂ ಸಹ ನಾನು ಅಭಿನಂದನೆ ಸಲ್ಲಿಸುತ್ತೇನೆ ಹಿಂದೆ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ಇದ್ದಾಗ ಎಲ್ಲಾ ಉಪ ಚುನಾವಣೆಗಳಲ್ಲೂ ಗೆದ್ದಿತ್ತು ಹೀಗಿದ್ದರೂ ಕೂಡ ಸಾರ್ವತ್ರಿಕ ಚುನಾವಣೆಯಲ್ಲಿ ಯಾವ ರೀತಿಯಲ್ಲಿ ಜನ ತೀರ್ಮಾನ ಮಾಡಿದರು ಎಂಬುದನ್ನೂ ಸಹ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಲ್ಲಾ ಚುನಾವಣೆಗಳಲ್ಲೂ ನಾವೇ ಗೆಲ್ಲುತ್ತೇವೆ ಎನ್ನುವ ನಿರೀಕ್ಷೆ ಏನು ಇರುತ್ತದೋ, ಆ ನಿರೀಕ್ಷೆ ತಲೆಕೆಳಗು ಮಾಡತಕ್ಕವರು ಈ ರಾಜ್ಯದ ಮತದಾರರು ಆ ಪ್ರಭುಗಳೇ ಅದರ ತೀರ್ಮಾನ ಮಾಡಬೇಕಾಗುತ್ತದೆ ನಾನು ಇಲ್ಲವೆಂದು ಹೇಳುವುದಿಲ್ಲ ಅದಕ್ಕೆ ನಾನು ಸಹಮತ ವ್ಯಕ್ತಪಡಿಸುತ್ತೇನೆ ಜನ ಏನು ತೀರ್ಮಾನ ಕೊಡುತ್ತಾರೋ, ಆ ತೀರ್ಮಾನಕ್ಕೆ ನಾವೆಲ್ಲರೂ ತಲೆಬಾಗಲೇಬೇಕಾಗುತ್ತದೆ ಉಪ ಚುನಾವಣೆಯ ಫಲಿತಾಂಶದ ಆಧಾರದ ಮೇಲೆ ಈ ಸರ್ಕಾರದ ಕಾರ್ಯಕ್ರಮಗಳು ತಪ್ಪು ಎಂದು ತೀರ್ಮಾನ ಮಾಡಲಿಕ್ಕಾಗುವುದಿಲ್ಲ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ ನಾನು ಮೊನ್ನೆ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೆ ಜನ ಒಳ್ಳೆಯ ರೀತಿಯಲ್ಲಿ ನನಗೆ ಆ ಒಂದು ಕಾರ್ಯಕ್ರಮಕ್ಕೆ ಬರುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದರು ಇವತ್ತು ನಾನು ಈ ಒಂದು ರಾಜ್ಯದ ಮುಖ್ಯಮಂತ್ರಿಯಾದ ನಂತರ ರಾಜ್ಯಾದ್ಯಂತ ಪ್ರವಾಸವನ್ನು ಮಾಡುತ್ತಿದ್ದೇನೆ ಯಾವುದೇ ಒಂದು ಜಿಲ್ಲೆಗೆ ನಾನು ಹೋದಾಗ, ಇವತ್ತು ಈ ಬಗ್ಗೆ ಯಾವುದೇ ರೀತಿಯ ಪ್ರಸ್ತಾಪವಾಗಿಲ್ಲ ಇವತ್ತು ಅತಿವೃಷ್ಟಿ ಇರಬಹುದು, ಅನಾವೃಷ್ಟಿ ಇರಬಹುದು,ಈ ವಿಷಯದಲ್ಲಿ ನಿಮ್ಮ ಸರ್ಕಾರ ಎಡವಿದೆ ಎಂಬ ವಿಷಯವನ್ನು ಈ ರಾಟಜ್ಯದ ಜನ ಸಾಮಾನ್ಯರು ಇದುವರೆಗೂ ನನ್ನ ಮುಂದೆ ಪ್ರಸ್ತಾಪ ಮಾಡಿಲ್ಲ ವಿರೋಧ ಪಕ್ಷದ ನಾಯಕರುಗಳು ಈ ವಿಷಯವನ್ನು ಕಳೆದ ಹಲವಾರು ತಿಂಗಳುಗಳಿಂದ ಹೇಳುತ್ತಿದ್ದಾರೆ ಬಹುಶಃ ನೂರು ಸುಳ್ಳನ್ನು ಹೇಳಿ ಒಂದು ಸತ್ಯ ಮಾಡು ಎಂಬ ಹಿರಿಯರ ಗಾದೆ ಮಾತೇನಿದೆ, ಅದನ್ನು ನಿಜ ಮಾಡಲಿಕ್ಕೆ ಇವರು ಹೊರಟಿರಬಹುದು ಎಂಬ ಭಾವನೆ ನನ್ನದಾಗಿದೆ ಇವತ್ತು ಈ ಒಂದು ಅತಿವೃಷ್ಟಿಯ ಬಗ್ಗೆ ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಪ್ರಮುಖವಾಗಿ ಎಲ್ಲಾ ಸದಸ್ಯರೂ ಗ್ರಾಮ ವಾಸ್ತವ್ಯ

ಬಗ್ಗೆಯೇ ಪ್ರಸ್ತಾಪ ಮಾಡಿದ್ದಾರೆ ಇವತ್ತು ಆ ಬಗ್ಗೆ ಎಲ್ಲಾ ರೀತಿಯ ಚರ್ಚೆಗಳೂ ಇಲ್ಲಿ ನಡೆದವು ನಾನು ನೋಡಿದ್ದೇನೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿರುವುದು, ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡಿರುವುದು, ಎಲ್ಲವನ್ನೂ ನಾನು ನೋಡಿದ್ದೆನೆ

ಇಲ್ಲಿ ಪ್ರಮುಖವಾದಂತಹ ನಾಯಕರುಗಳು ಏನು ಚರ್ಚೆ ಮಾಡಿದ್ದಾರೆ, ಅದರಲ್ಲಿ ಅತಿವೃಷ್ಟಿಯ ಬಗ್ಗೆ ಎಷ್ಟು ಸಮಯವನ್ನು ಮೀಸಲಿಟ್ಟಿದ್ದಾರೆ ಎಂಬುದು ಇಲ್ಲಿ ರೆಕಾರ್ಡ್ ಆಗಿದೆ ಅತಿವೃಷ್ಟಿ ಬಿಟ್ಟು ಬೇರೆ ವಿಷಯಗಳ ಬಗ್ಗೆ ಎಷ್ಟರಮಟ್ಟಿಗೆ ಚರ್ಚೆ ನಡೆದಿದೆ ಎಂಬುದು ಈ ಸದನದ ರೆಕಾರ್ಡ್‌ನಲ್ಲಿದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರಾಜಕೀಯಕ್ಕೆ ಹೆಚ್ಚಿನ ಮಹತ್ವ ಕೊಡದೆ, ಅವರಲ್ಲಿ ಇರತಕ್ಕಂಥ ಅಂಕಿ ಅಂಶಗಳ ಆಧಾರದ ಮೇಲೆ, ಸುದೀರ್ಘವಾಗಿ ಈ ಅತಿವೃಷ್ಟಿ ಮತ್ತು ಬರಗಾಲದ ವಿಷಯದಲ್ಲಿ ಏನು ಪ್ರಸ್ತಾಪ ಮಾಡಿದ್ದಾರೋ, ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಏಕೆಂದರೆ, ಅವರು ಹೆಚ್ಚಿನ ಸಮಯವನ್ನು ಈ ರಾಜ್ಯದ ಜನ ಸಾಮಾನ್ಯರ ಸಮಸ್ಯೆ ಬಗ್ಗೆ, ಅವರಿಗೆ ಇರತಕ್ಕಂಥ ಮಾಹಿತಿಗಳ ಆಧಾರದ ಮೇಲೆ ಚರ್ಚೆ ಮಾಡಿದ್ದಾರೆ ಆದರೆ ಹಲವಾರು ಜನ ಹಿರಿಯ ಸದಸ್ಯರುಗಳೇನು ಪ್ರಸ್ತಾಪ ಮಾಡಿದ್ದೀರಿ, 2–3 ಪೇಜ್‌ಗಳನ್ನು ಬಿಟ್ಟರೆ, ಇನ್ನುಳಿದಂತೆ 15–20 ಪೇಜ್‌ಗಳಲ್ಲಿ ಗ್ರಾಮ ವಾಸ್ತವ್ಯದ ಕಾರ್ಯಕ್ರಮ ಇರಬಹುದು, ಎಂ ಪಿ ಪ್ರಕಾಶ್‌ರವರ ಬಗ್ಗೆ ಇರಬಹುದು, ಅತ್ಯಂಕ ಮಮತೆಯಿಂದ ಹೆಚ್ಚಿನ ವಿಷಯವನ್ನು ಅದಕ್ಕೇ ಮೀಸಲಿಟ್ಟಿದ್ದಾರೆ ಇವತ್ತು ಮಾನ್ಯ ಯಡಿಯೂರಪ್ಪನವರು ಮಾತನಾಡದೆ ಮೌನವಾಗಿ ಕುಳಿತರೆ, ಅವರು ಮಾತ ಆಡುವುದಿಲ್ಲವಲ್ಲಾ! ಎನ್ನುತ್ತಾರೆ ಅವರು ಮಾತನಾಡಲಿಕ್ಕೆ ಎದ್ದು ನಿಂತರೆ, ಯಾಕಿಷ್ಟು ಕೋಪ ಪ್ರದರ್ಶನ ಮಾಡುತ್ತಿದ್ದೀರಿ? ಎಂದು ಅದಕ್ಕೆ ಇನ್ನೊಂದು ತರಹ ಮಾತನಾಡುತ್ತಾರೆ ಅವರಿಗೆ ಈಗ ಒಂದು ತರಹ ಇಕ್ಕಟ್ಟಿನ ಪರಿಸ್ಥಿತಿ ಉಂಟು ಮಾಡುತ್ತಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಮುಖ್ಯಮಂತ್ರಿಗಳೇ, ಈ ರೀತಿಯಲ್ಲಿ ನೀವು ಅವರನ್ನು ತಪ್ಪು ದಾರಿಗೆ ಎಳೆಯಬೇಡಿ ಅವರು ವಿರೋಧ ಪಕ್ಷದಲ್ಲಿದ್ದಾಗ ಹುಲಿಯಂತಿದ್ದರು, ಅಲ್ಲಿ ಹೋಗಿ ಇಲಿಯಂತಾಗಿದ್ದರಲ್ಲಾ! ಎಂದಷ್ಟೇ ನಾವು ಪ್ರಸ್ತಾಪಿಸಿದ್ದೆವು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಅದಕ್ಕೆ ಕಾರಣವೇನೆಂದರೆ, ಅವರು ಇಲಿ ಆಗಿಲ್ಲ ಮುಂದಿನ ಜವಾಬ್ದಾರಿಯನ್ನು ನಿರ್ವಹಿಸತಕ್ಕಂಥ

ವಿಷಯದಲ್ಲಿ ಏನೊಂದು ಮುಖ್ಯಮಂತ್ರಿ ಸ್ಥಾನದ ಗಾಂಭೀರತ್ಯತೆಯನ್ನು ಪ್ರದರ್ಶನ ಮಾಡಬೇಕಾಗ್ತುದೆ, ಅದನ್ನು ಅವರು ಮಾಡುತ್ತಿದ್ದಾರೆ ನೀವೆಲ್ಲಾ ಅವರಿಗೆ ಸ್ವಲ್ಪ ಕೋಪ ಜಾಸ್ತಿ ಎಂದೇನು ಹೇಳುತ್ತಿದ್ದೀರಿ ಅದಕ್ಕಾಗಿ ಸ್ವಲ್ಪ ತಾಳ್ಮೆಯಿಂದ ಇದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಮುಖ್ಯಮಂತ್ರಿಗಳೇ, ಕಡೆಯವರೆಗೂ ಮಾನ್ಯ ಯಡಿಯೂರಪ್ಪನವರನ್ನು ಬಾಯಿ ಮುಚ್ಚಿಕೊಂಡು ಇರುವಂತೆಯೇ ಈಗಲೂ ಕೂಡ ನೀವು ಮಾತನಾಡುತ್ತಿದ್ದೀರಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇದರಿಂದ, ಅಧಿಕಾರ transfer ಆಗಬಹುದು ಎಂದು ಖಾತ್ರಿಯಾಗುತ್ತದೆ ಅದಕ್ಕೆ ಈ ಮಾತು ನಾಂದಿಯಾಗುತ್ತಿರುವಂತೆ ಕಾಣುತ್ತಿದೆ

ಶ್ರೀ ಧರ್ಮಸಿಂಗ್ ಮಾನ್ಯ ಯಡಿಯೂರಪ್ಪನವರನ್ನು ಖಂಡಿತವಾಗಿಯೂ ಮುಖ್ಯಮಂತ್ರಿಗಳನ್ನಾಗಿ ಮಾಡುತ್ತೇವೆ ಎಂದು ನೀವು ಹೇಳಿಬಿಡಿ ಆದರೆ ಎಂದು ಹೇಳಬೇಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಏತಕ್ಕೋಸ್ಕರವಾಗಿ ಈ ಅನುಮಾನಗಳನ್ನು ಕಳೆದ 7–8 ತಿಂಗಳುಗಳಿಂದ ಹುಟ್ಟು ಹಾಕುತ್ತಿದ್ದಾರೋ ಗೊತ್ತಿಲ್ಲ ಏತಕ್ಕಾಗಿ ಸಾರ್ವಜನಿಕವಾಗಿ ಪದೇ ಪದೇ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಎಂಬುದೇ ನನಗೆ ಗೊತ್ತಾಗುತ್ತಿಲ್ಲ ನಮಗಿಂತ ಹೆಚ್ಚಾಗಿ, ಮಾನ್ಯ ಯಡಿಯೂರಪ್ಪನವರ ಚಿಂತೆಗಿಂತ ಹೆಚ್ಚಾಗಿ ವಿರೋಧ ಪಕ್ಷದಲ್ಲಿ ಕುಳಿತವರಿಗೇ ಸ್ವಲ್ಪ ಚಿಂತನೆ ಜಾಸ್ತಿಯಾಗಿದೆ ಅಧಿಕಾರ transfer ಆಗುತ್ತದೋ, ಇಲ್ಲವೋ ಎಂದು ನೀವೇ ಜಾಸ್ತಿ ಚಿಂತೆ ಮಾಡುತ್ತಿದ್ದೀರಿ

ಶ್ರೀ ಧರ್ಮಸಿಂಗ್ ಇವತ್ತು ರಾಜಕಾರಣ ಏನಾಗುತ್ತದೆ? ನೀವು ಹೋದ ಮೇಲೆ ಮುಂದೆ ಏನಾಗುತ್ತದೆ ಎಂದು ನಾವು ಕೇಳಲೇ ಬೇಕಾಗುತ್ತದೆ ಮಾನ್ಯ ಯಡಿಯೂರಪ್ಪನವರು ಏನೊಂದು ಕನಸನ್ನು ಕಾಣುತ್ತಿದ್ದಾರೆ, ಅದು ನನಸಾಗುತ್ತದೆಯೇ? ನೀವು ಅಧಿಕಾರ ಬಿಟ್ಟು ಕೊಡುತ್ತೀರಾ? ಆದರೆ ಎಂದು ಷರತ್ತು ಹಾಕಿ ಹೇಳುತ್ತಿದ್ದೀರಲ್ಲಾ, ಅದಕ್ಕಾಗಿ ನಮಗೆ ಸ್ವಲ್ಪ ಅಂಜಿಕೆ ಬರುತ್ತಿದೆ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಮುಖ್ಯಮಂತ್ರಿಗಳು ಈ ಹೌಸ್‌ನಲ್ಲಿ ಮಾನ್ಯ ಯಡಿಯೂರಪ್ಪನವರು ಮುಂದಿನ ಮುಖ್ಯಮಂತ್ರಿಗಳು ಎಂದು ಹೇಳಿದ್ದಾರೆ ನೀವು ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ಮಾಡದೇ ಹೋದರೆ, ನಾವು Privilege Motion move ಮಾಡಬೇಕಾಗುತ್ತದೆ ಆದ್ದರಿಂದ ಸ್ವಲ್ಪ ಯೋಚನೆ ಮಾಡಿ ಹೇಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಆದರೆ ಎಂಬ ಪ್ರಶ್ನೆ ಇಲ್ಲಿಲ್ಲ ರೆ ರಾಜ್ಯಕ್ಕೆ ನಾನಿನ್ನೂ ಹೋಗಿಯೇ ಇಲ್ಲ ಕಳೆದ 7–8 ತಿಂಗಳುಗಳಿಂದ ಇದರ ಬಗ್ಗೆ ಬಹಳ ದೊಡ್ಡ ಮಟ್ಟದ ಚರ್ಚೆ ಪ್ರಾರಂಭವಾಗಿದೆ ಇವತ್ತು ಬೆಳಿಗ್ಗೆ ಸಹ ಪ್ರಜಾವಾಣಿ ಪತ್ರಿಕೆ ತೆಗೆದರೆ, ಇದೇ ವಿಷಯ ಪ್ರಸ್ತಾಪವಾಗಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಸಭಾನಾಯಕರೆ, ನೀವು ಬುದ್ಧಿವಂತರು, ನಿಮಗೆ ೧ೆನ್ನಾಗಿ ಅನುಭವ ಬಂದು ಬಿಟ್ಟಿದೆ, ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ ನಾನೇನು ಹೇಳುತ್ತೇನೆ ಎಂದರೆ, ಇಷ್ಟೆಲ್ಲಾ ಆದರೂ, ನೀವು ಮತ್ತು ರೇವಣ್ಣನವರು ಚಿರಂಜೀ ಗಳು, ಯಜಮಾನದ ಮಾತನ್ನು ಕೇಳದೆ, ನೇರ ಏಕಾಏಕಿ ಎಲ್ಲವನ್ನೂ ಹೇಳಿ ಬಿ ಲಿಕ್ಕೆ ಹೋಗಬೇಡಿ ಒಂದು ಮಾತು ಅವರನ್ನು ಕೇಳಿ, ಅನಂತರ ಹೇಳಿ, ಆ ರ ಬೀಳಬೇಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ನಾನು ಏನಾದರೂ ನಮ್ಮ ಪಕ್ಷದ ಯಜಮಾನದ ಮಾತನ್ನು ಕೇಳಿದ್ದರೆ, ಇವತ್ತು ಬಹುಶಃ ಮಾನ್ಯ ಧರ್ಮಸಿಂಗ್‌ರವರೇ ಈ ಸ್ಥಾನದಲ್ಲಿ ಕುಳಿತುಕೊಂಡಿರುತ್ತಿದ್ದರು ಯಜಮಾನರ ಮಾತು ಕೇಳದಿರುವುದರಿಂದಲೇ ನಾನು ಈ ಸ್ಥಾನಕ್ಕೆ ಬಂದಿದ್ದೇನೆ ಅದೊಂದು ಸ್ಪಷ್ಟೀಕರಣವನ್ನು ನಾನಿಲ್ಲಿ ಕೊಡಲಿಕ್ಕೆ ಬಯಸುತ್ತೇನೆ ಇದರಲ್ಲಿ ರಾಜಕೀಯ ನಾಟಕ, ಅಪ್ಪ ಮಕ್ಕಳು ಏನೂ ಇಲ್ಲ ಅದರ ಬಗ್ಗೆ ಬಹಳ ಚರ್ಚೆಗಳು ನಡೆದು ಹೋಗಿವೆ ಅದು ಈಗ ಹಳೆಯ ಕಥೆಯಾಗಿ ಹೋಗಿದೆ ಈ ವಿಷಯದ ಬಗ್ಗೆ ಈಗ ಪುನಃ ಪ್ರಸ್ತಾಪ ಮಾಡತಕ್ಕಂದದ್ದು ಅವಶ್ಯಕ ಏಕೆಂದರೆ, ನಾನು ಸತ್ಯ ಹೇಳಿದರೆ ಕೆಲವರಿಗೆ ಕಹಿಯಾಗಬಹುದು, ಅದಕ್ಕೆ ನಾನೇನು ಮಾಡಲಿಕ್ಕಾಗುವುದಿಲ್ಲ

ಡಾ ಹೆಚ್ ಸಿ ಮಹದೇವಪ್ಪ ಮಾನ್ಯ ಮುಖ್ಯಮಂತ್ರಿಗಳೇ, ನೀವು ಬಹಳ sincere ಆಗಿದ್ದೀರಿ ಆದರೆ ಜೆ ಡಿ (ಎಸ್) ಮಂತ್ರಿಗಳು ಮತ್ತು ಶಾಸಕರು

ಅಧಿಕಾರ transfer ಮಾಡಿದರೆ ನಾವು ಇರುವುದಿಲ್ಲ, ನಾವು electionಗೆ ಸಿದ್ಧರಿದ್ದೇವೆಂದು ಏನೇನೋ ಶಪಥ ಮಾಡಿದ್ದಾರೆ ನಿನ್ನೆಯೂ

ಶ್ರೀ ಸಿದ್ಧರಾಮಯ್ಯ ಮಾನ್ಯ ಮಹದೇವಪ್ಪನವರೆ, ಒಂದು ನಿಮಿಷ ಮಾನ್ಯ ಕುಮಾರಸ್ವಾಮಿ ಟೈಂ ಮುಗಿದ ತಕ್ಷಣವೇ ಮಾನ್ಯಯಡಿಯೂರಪ್ಪನವರು ಮುಂದಿನ ಮುಖ್ಯಮಂತ್ರಿಗಳಾಗಬೇಕು ಎನ್ನುವುದೇ ನಮ್ಮ ಪ್ರಾಮಾಣಿಕವಾದ ಕಳಕಳಿಯಾಗಿದೆ ಆದರೆ ಗೊಂದಲವನ್ನು ನಾವ್ಯಾರೂ ನಿರ್ಮಾಣ ಮಾಡಲಿಕ್ಕೆ ಹೋಗಿಲ್ಲ ಕಾಂಗ್ರೆಸ್‌ನವರೇನಾದರೂ ಗೊಂದಲ ನಿರ್ಮಾಣ ಮಾಡಿದ್ದಾರೆಯೇ? ಮಾನ್ಯ ಅನ್ಸಾರಿಯವರಿಂದ ಹಿಡಿದು ಈ ಬಗ್ಗೆ ಮಾತನಾಡಿರುವವರೆಲ್ಲಾ ಯಾರ್‍ಯಾರು? ಎಂಬುದನ್ನು ನೀವೇ ನೋಡಿ ಅದೂ ಸರ್ಕಾರದಲ್ಲಿ ಮಂತ್ರಿಗಳಾಗಿ ಇರುವವರೇ, ನಿಮ್ಮ ಮುಂದೆಯೇ ಸಭೆಯಲ್ಲಿ ಈ ಬಗ್ಗೆ ಮಾತನಾಡಿದ್ದಾರೆ ಇದು ಅವರು ನಿರ್ಮಾಣ ಮಾಡಿರುವ ಗೊಂದಲವೋ? ಅಥಾ ನಾವು ನಿರ್ಮಾಣ ಮಾಡಿರುವ ಗೊಂದಲವೋ? ಹೆಗ್ಗಡೆದೇವನಕೋಟೆಯ ಶಾಸಕರಾದ ಮಾನ್ಯ ವೆಂಕಟೇಶ್‌ರವರು ಎಲ್ಲಿಯವರೆಗೂ ಹೋಗಿದ್ದಾರೆ ಎಂದರೆ, ಅವರು ತಮ್ಮ ಕತ್ತಿನಲ್ಲಿರುವ ಸರವೊಂದನ್ನು ಹಿಡಿದುಕೊಂಡು, ಪ್ರಮಾಣ ಮಾಡಿ, ಅಧಿಕಾರ ಕೊಡುವುದಿಲ್ಲವೆಂದು ಹೇಳಿದರೆ, ನಾವು ಅದರೆ ಬಗ್ಗೆ ಏನೆಂದು ಮಾತನಾಡಬೇಕು? ವಿರೋಧ ಪಕ್ಷದಲ್ಲಿ ಇದ್ದುಕೊಂಡು ಅದರ ಬಗ್ಗೆ ಮಾತನಾಡದೇ, ನಾವು ಸುಮ್ಮನೆ ಕುಳಿತುಕೊಂಡಿರುವುದಕ್ಕಾಗುತ್ತದೆಯೇ? ನಾವು ಅದರ ಬಗ್ಗೆ ಮಾತನಾಡಲೇಬೇಕಾಗುತ್ತದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈ ವಿಚಾರದ ಬಗ್ಗೆ ತಮ್ಮ ವಿರೋಧ ಪಕ್ಷದ ನಾಯಕರುಗಳು ಮುಂಚೆಯೇ ಚರ್ಚೆ ಪ್ರಾರಂಭ ಮಾಡಿದ್ದರು ಮಾನ್ಯ ವೆಂಕಟೇಶ್ ಅವರಾಗಲಿ ಅಥವಾ ಮಾನ್ಯ ಇಕ್ಬಾಲ್ ಅನ್ಸಾರಿಯವರಾಗಲಿ ಚರ್ಚೆ ಮಾಡಿದ ನಂತರ ಇದು ಪ್ರಸ್ತಾಪವಾಗುತ್ತಿಲ್ಲ ನಾನು ಅದಕ್ಕೇ ಹೇಳಿದೆ, ಕಳೆದ 7–8 ತಿಂಗಳಿನಿಂದ ಯಾವ್ಯಾವ ನಾಯಕರುಗಳು ಎಷ್ಟರಮಟ್ಟಿಗೆ ಮುಖ್ಯಮಂತ್ರಿಗಳ ಅಧಿಕಾರ ಹಸ್ತಾಂತರದ ವಿಷಯದಲ್ಲಿ ಚರ್ಚೆ ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ ಅದರ ಬಗ್ಗೆ ಪತ್ರಿಕೆಗಳಲ್ಲೆಲ್ಲಾ ವರದಿಯಾಗಿದೆ ಮಾನ್ಯ ಇಕ್ಬಾಲ್ ಅನ್ಸಾರಿಯವರು ಚುನಾವಣೆ ಸಂದರ್ಭದಲ್ಲಿ ಚುನಾವಣೆ strategy ಯಿಂದ ಏನು ಹೇಳಿದ್ದರೋ, ಅದು ಅವರ ವೈಯಕ್ತಿಕ ಅಭಿಪ್ರಾಯವಾಗಿದೆ ಚುನಾವಣಾ strategy ಯಾಗಿ ಅವರು ಈ ರೀತಿಯಾಗಿ ಮಾತನಾಡಿದ್ದರು ವೈಯಕ್ತಿಕವಾದಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಎಲ್ಲರೂ ಸರ್ವಸ್ವಾತಂತ್ರ್ಯರಿದ್ದಾರೆ ಇವತ್ತು ಈ ವಿಷಯದ ಬಗ್ಗೆ

(ಗೊಂದಲ)

ಸ್ವಲ್ಪ ನಾನು ಹೇಳುವುದನ್ನು ಕೇಳಿ ಏಕೆಂದರೆ, ಯಾವ್ಯಾಯವ ರೀತಿಯಲ್ಲಿ ಎಷ್ಟೆಷ್ಟು ಚರ್ಚೆ ನಡೆಯುತ್ತಿದೆ ಎಂಬುದು ನನಗೂ ಕೂಡ ಗೊತ್ತಿದೆ ನಾನು ಸ್ವಲ್ಪ ತಿಳಿದುಕೊಂಡಿದ್ದೇನೆ ಏನೇನು ಮಾತನಾಡಿದ್ದೀರಿ? ಯಾವ ಮಟ್ಟದಲ್ಲಿ ನಮ್ಮ ಕುಟುಂಬದ ತೇಜೋವಧೆ ಮಾಡುವುದಕ್ಕೆ ಚರ್ಚೆಗಳು ನಡೆದಿವೆ ಎಂಬುದು ನನಗೆ ಗೊತ್ತಿದೆ ಅದನ್ನೆಲ್ಲಾ ಮತ್ತೆ ಇಲ್ಲಿ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇಲ್ಲ ಇವತ್ತು ಮಾನ್ಯ ಯಡಿಯೂರಪ್ಪನವರು ತಾಳ್ಮೆಯಿಂದ ಇದ್ದಾರೆ ಅದೇ ತಾಳ್ಮೆ ಮಾನ್ಯ ಸಿದ್ಧರಾಮಣ್ಣನವರಿಗೆ ಇದ್ದಿದ್ದರೆ, ಇವತ್ತು ನಾನು ಈ ಜಾಗದಲ್ಲಿ ಎಲ್ಲಿ ಕುಳಿತುಕೊಳ್ಳುತ್ತಿದ್ದೆ? ಈ ಮಾತನ್ನು ನಾನು ಅವರಿಗೇ ನೇರವಾಗಿ ಹೇಳಿದ್ದೇನೆ, ಅವರು ಇಲ್ಲವೆಂದು ಹೇಳಲಿ

(ಗೊಂದಲ)

ಶ್ರೀ ಸಿದ್ಧರಾಮಯ್ಯ ನನ್ನ ಬಗ್ಗೆ ಮಾತನಾಡಬೇಕಾದಂತಹ ಅಗತ್ಯವಿಲ್ಲ ಅದರ ಬಗ್ಗೆ ಚರ್ಚೆ ಮಾಡುವುದಿದ್ದರೆ ಚರ್ಚೆ ಮಾಡೋಣ ಈ ವೇದಿಕೆ ಆಗಲಿ ಅಥವಾ ಬೇರೆ ವೇದಿಕೆಯೇ ಆಗಲಿ, ಚರ್ಚೆ ಮಾಡೋಣ ಯಾರ್‍ಯಾರು ಏನೇನು ಮಾಡಿದ್ದಾರೆ ಎಂಬುದು ಚರ್ಚೆಯಾಗಲಿ ಚರ್ಚೆ ಮಾಡಲಿಕ್ಕೆ ನಾನು ತಯಾರಾಗಿದ್ದೇನೆ

(ಗೊಂದಲ)

ತಾಳ್ಮೆ ಎಂದರೆ ಏನು? ತಾಳ್ಮೆ ಕಳೆದುಕೊಳ್ಳುವುದು ಎಂದರೆ ಏನು? ಅದನ್ನು ಹೇಳುವ ಅಗತ್ಯವೇನಿದೆ?

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಪ್ಪ ಮಕ್ಕಳ ಬಗ್ಗೆ ಹೊರಗಡೆ ಏನು ಮಾತನಾಡುತ್ತೀರಿ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ ನೆರೆ ಹಾವಳಿ ಇದರ ಬಗ್ಗೆ ಮಾತನಾಡೋಣ

(ಗೊಂದಲ)

ಶ್ರೀ ಸಿದ್ಧರಾಮಯ್ಯ ಅದೆಲ್ಲಾ ಕತೆ ಹೇಳೋಣವಂತೆ

(ಗೊಂದಲ)

ಭವಿಷ್ಯಗಳು ಹಿಂದೆ ಬೇಕಾದಷ್ಟು ಹೇಳಲಾಗಿದೆ ನೀವು ಸಹ ಮಾನ್ಯ ಯಡಿಯೂರಪ್ಪನವರಿಗೆ ನಾವು ಅಧಿಕಾರ ಹಸ್ತಾಂತರ ಮಾಡುವುದಿಲ್ಲ ಎಂದು ಹೇಳಿದ್ದೀರಲ್ಲಾ

ಶ್ರೀ ಸಿದ್ಧರಾಮಯ್ಯ You are also a Cabinet Minister You also said it.

ಯಡಿಯೂರಪ್ಪನವರಿಗೆ ಅಧಿಕಾರ ಹಸ್ತಾಂತರ ಮಾಡುವುದಿಲ್ಲವೆಂದು ನೀವು (ವಸತಿ ಸಚಿವರು) ಹೇಳಿದ್ದೀರಿ, ಹೌದು ಈಗಲು ಹೇಳುತ್ತೇನೆ, ಈ ರೀತಿ ಅಲ್ಲಾಡುತ್ತಿರುವಾಗ ಸರ್ಕಾರ ಮೂರು ತಿಂಗಳು ಇರುವುದಿಲ್ಲ, ನಾಲ್ಕು ತಿಂಗಳು ಇರುವುದಿಲ್ಲವೆಂದು ಹೇಳಬೇಕಾಗುತ್ತದೆ

ಅಧ್ಯಕ್ಷರು ಈಗ ಕೆಲವು ರಾಜಕೀಯಕ್ಕೆ ಸಂಬಂಧಪಟ್ಟ ಚರ್ಚೆಗಳು ಬೇಡ

ಮಾನ್ಯ ಸದಸ್ಯರು ಅಧ್ಯಕ್ಷರೆ, ಈಗ ಅತಿವೃಷ್ಟಿ, ಅನಾವೃಷ್ಟಿ ಬಗ್ಗೆ ಮಾತನಾಡುವುದು ಬಿಟ್ಟು ವಿಷಯ ಬೇರೆ ಕಡೆಗೆ ಹೋಗುತ್ತಿದೆ,`ಈಗ ರಾಜಕೀಯ ಕಾಳಜಿ ಪ್ರಾರಂಭವಾಗಿದೆ,ಈಗ ಮಳೇನೂ ಇಲ್ಲ ಬೆಳೇನೂ ಇಲ್ಲ

(ಗೊಂದಲ)

ಶ್ರೀ ಸಿದ್ಧರಾಮಯ್ಯ ರಾಜಕೀಯದ ಬಗ್ಗೆ ಮಾತನಾಡಬೇಕಾಗುತ್ತದೆ, ಬಾಯಿಮುಚ್ಚಿಕೊಂಡು ಸುಮ್ಮನೆ ಕುಳಿತು ಕೊಳ್ಳುವುದಕ್ಕಾಗುತ್ತದೆಯೇ?

ಅಧ್ಯಕ್ಷರು ಈಗ ಏನು ಮುಖ್ಯ ವಿಷಯವಿದೆಯೊ ಆ ಬಗ್ಗೆ ಉತ್ತರವನ್ನು ಕೊಡಲಿ

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ನಾನು ಏತಕ್ಕೆ ಹೇಳಿದೆ ಎಂದರೆ, ಈಗ ನೀವು (ವಿರೋಧ ಪಕ್ಷದ ನಾಯಕರು) ಅತಿವೃಷ್ಟಿಯ ಬಗ್ಗೆ ನಿಯಮಾವಳಿ 69ರಡಿಯಲ್ಲಿ ಚರ್ಚೆ ಮಾಡಿದಿರಿ, ನೀವು ಯಾವ ರೀತಿ ಭಾಷಣ ಮಾಡಿದ್ದಿರೆಂಬುದನ್ನು ನಾವು ಕುಳಿತು ಕೇಳಿದ್ದೇವೆ, ನಮ್ಮದು ಸ್ವಲ್ಪ ಕೇಳಿ ಈ ರಾಜ್ಯದಲ್ಲಿ ಸತ್ಯವಿದೆ, ಈ ರಾಜ್ಯದಲ್ಲಿ ಪಾಪ ದೇವೇಗೌಡರು, ದೇವೇಗೌಡರ ಕುಟುಂಬ ಬಿಟ್ಟರೆ, ಇನ್ನು ಉಳಿದ ಎಲ್ಲಾ ರಾಜಕಾರಣಿಗಳು ಇಲ್ಲಿ ಸತ್ಯಹರಿಶ್ಚಂದ್ರರೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಹಾಗೆ ಯಾರು ಹೇಳಿದರು?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಸತ್ಯ ಹೇಳುತ್ತಿದ್ದೇವೆಂದು ಹೇಳುತ್ತಿದ್ದಾರಲ್ಲ, ಸತ್ಯ ಹೇಳುತ್ತೇನೆ ಎಂದರಲ್ಲ ಅದಕ್ಕೆ ಹೇಳಿದೆ, ನಾನು ನಿಮಗೆ ಹೇಳುತ್ತಿಲ್ಲ

ಶ್ರೀ ಎನ್ ಧರ್ಮಸಿಂಗ್ ' ನಿಮ್ಮ ಗ್ರಾಮ ವಾಸ್ತವ್ಯದಿಂದ ಉಪಯೋಗವಾಗಿಲ್ಲವೆಂದು ಆಗಲು ಹೇಳಿದ್ದೇವೆ, ಈಗಲೂ ಹೇಳುತ್ತೇವೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈಗ ಆ ವಿಷಯಕ್ಕೆ ಬರುತ್ತೇನೆ, ಈ ವಿಷಯ ಮತ್ತೆ ಏತಕ್ಕೆ ಬಂತೆಂದರೆ, ನಮ್ಮ ಮಂತ್ರಿಗಳಾದ ಇಕ್ಬಾಲ್ ಅನ್ಸಾರಿ ಇವರೆಲ್ಲಾ ಹೇಳಿದ್ದಕ್ಕೆ ಬಂದಿದೆ ನಮ್ಮ ಒಪ್ಪಂದವಿರುವುದು ನಮಗೂ ಯಡಿಯೂರಪ್ಪನವರಿಗೆ ನಾವು ತೀರ್ಮಾನ ಮಾಡಿಕೊಳ್ಳುತ್ತೇವೆ ಈ ಸದನದಲ್ಲಿರುವ ಹಿರಿಯ ಸದಸ್ಯರಿಗೆ ಏತಕ್ಕೆ ಚಿಂತೆ ಬೇಕು? ನಾವು ಯಡಿಯೂರಪ್ಪನವರು ಕುಳಿತು ಕೊಂಡು ಅದನ್ನು ತೀರ್ಮಾನ ಮಾಡಿಕೊಳ್ಳುತ್ತೇವೆ ಬಿಡಿ ನಾನು ನೇರವಾಗಿ ವಿಷಯಕ್ಕೆ ಬಂದುಬಿಡುತ್ತೇನೆ ಇವತ್ತು ಪಡಿತರ ಚೀಟಿಯ ಬಗ್ಗೆ ಚರ್ಚೆ ಮಾಡಿದ್ದೇವೆ ಪಡಿತರ ಚೀಟಿಯನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಯೋಗ್ಯತೆ ಇಲ್ಲವೆಂದು ಹೇಳಿದ್ದಾರೆ ಪಡಿತರ ಚೀಟಿತ ಕೊಡುವ ಒಂದು ಹೊಸ ವ್ಯವಸ್ಥೆಯನ್ನು ತೀರ್ಮಾನ ಮಾಡಿದ್ದು, ನಾನು ಮುಖ್ಯಮಂತ್ರಿಯಾದ ಮೇಲೆ ಈ ಸರ್ಕಾರ ತೀರ್ಮಾನ ಮಾಡಿದ್ದಲ್ಲ, ನೀವು

ಮುಖ್ಯಮಂತ್ರಿಯಾಗಿದ್ದಾಗ (ವಿರೋಧ ಪಕ್ಷದ ನಾಯಕರು) ತೀರ್ಮಾನ ಮಾಡಿದ್ದು

ಶ್ರೀ ಎನ್ ಧರ್ಮಸಿಂಗ್ ಕುಮಾರಸ್ವಾಮಿಯವರೆ, ನಾನು ಅಲ್ಲಿ ಮುಖ್ಯಮಂತ್ರಿಯಾಗಿ ಕುಳಿತ್ತಿದ್ದೆ, ಇಲ್ಲಿ ಯಡಿಯೂರಪ್ಪನವರು ವಿರೋದ ಪಕ್ಷದ ನಾಯಕರಾಗಿದ್ದರು, ಪಡಿತರ ಚೀಟಿಯನ್ನು ಬೇಗ ವಿತರಣೆ ಮಾಡಿ ಎಂದು ಹೇಳುತ್ತಿದ್ದರು, ಈಗ ನೀವು ಏನು ಮಾಡುತ್ತಿದ್ದೀರಿ? ಈಗ ಪಡಿತರ ಚೀಟಿಯನ್ನು ಕೊಡುವುದಕ್ಕೆ ಏತಕ್ಕೆ ಕೊಡುತ್ತಿಲ್ಲ? ಏನು ಮಾಡುತ್ತಿದ್ದೀರಿ? ನಾವು ಒಂದು ಕೆ ಜಿ ಗೆ ರೂ 3 00ಯಂತೆ ಅಕ್ಕಿಯನ್ನು ಕೊಟ್ಟಿದ್ದೇವೆ, ನೀವೇನು ಮಾಡಿದ್ದೀರಿ?

ಅಧ್ಯಕ್ಷರು ಪಡಿತರ ಚೀಟಿಯ ವಿಚಾರದ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಜೆ ಹೆಚ್ ಪಟೇಲರ ಕಾಲದಿಂದ ಎಲ್ಲಾ ಸರ್ಕಾರಗಳು ಎಳೆದುಕೊಂಡು ಹೋಗುತ್ತಿದ್ದಾವೆಯೆ ಹೊರತು, ಯಾರು ಪಡಿತರ ಚೀಟಿಯನ್ನು ನೀಡಲಿಲ್ಲ ಏನಪ್ಪ ಎಂದರೆ, ಹಿಂದೆ ಆಳಿದವರಿಗೆ, ಇಂದು ಆಳುತ್ತಿರುವವರಿಗೆ ಕಾರಣ ಗೊತ್ತಾಗುತ್ತಿಲ್ಲ

ಡಾ ಹೆಚ್ ಸಿ ಮಹದೇವಪ್ಪ ಅಧ್ಯಕ್ಷರೆ, ಎಳೆದುಕೊಂಡೇನು ಹೋಗುತ್ತಿಲ್ಲ, 2004 ಇಸವಿಯಲ್ಲಿ ಮಾಡಿದಂಥ ಕಾರ್ಯಕ್ರಮವಿದು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಪಡಿತರ ಚೀಟಿಯ ಬಗ್ಗೆ ಸದನದಲ್ಲಿ ಇವರೇನು ವಾಚಾಮಗೋಚರವಾಗೇನು ಚರ್ಚ ಮಾಡುತ್ತಿದ್ದಾರೆ, ನಾನು ಸಂಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ನಾನೇನು ಮಾಡಲಿ ಇವತ್ತು ದೇಶದಲ್ಲಿ ಬಿಪಿಎಲ್ ಕಾರ್ಡ್ ಅನ್ನು ಹಂಚತಕ್ಕ ಕಾರ್ಯಕ್ರಮದಲ್ಲಿ ಆಂಧ್ರ ಪ್ರದೇಶ ಬಿಟ್ಟರೆ ನಾವು 2ನೇ ಸ್ಥಾನದಲ್ಲಿದ್ದೇವೆ ಸನ್ಮಾನ್ಯ ಧರ್ಮಸಿಂಗ್ ಮುಖ್ಯಮಂತ್ರಿಗಳಾಗಿದ್ದಾಗಲೆ ಹೊಸ ಪಡಿತರ ಚೀಟಿಯನ್ನು ಕೊಡುತ್ತೇವೆಂದು ಏನು ಹೊಸ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದಿರಿ, ನಿಮಗೆ 20 ತಿಂಗಳುಗಳ ಕಾಲಾವಕಾಶವಿತ್ತು, ಆ ಅವಧಿಯಲ್ಲಿ ನೀವೇ ಮಾಡಲಿಲ್ಲ ಇವತ್ತು ನಮ್ಮ ಮೇಲೇನು ಅಪಾದನೆ ಬರುತ್ತಿದೆ, ಇವತ್ತು ಆಂಧ್ರ ಪ್ರದೇಶದಲ್ಲಿ 67 42% ಪಡಿತರ ಚೀಟಿ ವ್ಯವಸ್ಥೆಯನ್ನು ತಂದಿದ್ದಾರೆ, ತಮ್ಮ ರಾಜ್ಯದಲ್ಲಿ 63 17% ಬಿಪಿಎಲ್ ಕಾರ್ಡ್ ವ್ಯವಸ್ಥೆಯಲ್ಲಿ ಏನು ತರಲಾಗಿದೆ, ಯೋಜನಾ ಆಯೋಗದನ್ವಯ ಬಡತನದ ಅನುಪಾತ ಶೇಕಡವಾರು 15 77 ಆಂಧ್ರ ಪ್ರದೇಶದಲ್ಲಿದ್ದರೆ, ನಮ್ಮ ರಾಜ್ಯದಲ್ಲಿ 20 04% ಕೊಟ್ಟಿದ್ದೇವೆ ಇವತ್ತು ಈ ಪಡಿತರ ಚೀಟಿ ವಿಚಾರದಲ್ಲಿ

ಏನಾಗಿದೆ. ಎಂದರೆ, ಸರ್ಕಾರ ಬಹಳ ಎಡವಿದೆ ಎಂದೇನು ಹೇಳುತ್ತಿದ್ದಾರೆ, ಇವತ್ತು ನಾನು ಇಡೀ ದೇಶಕ್ಕೆ ನಮ್ಮ ರಾಜ್ಯ ಬಡತನ ರೇಖೆಗಿಂತ ಕೆಳಗಿದ್ದೇವೆಂದು ಮೊದಲನೇ ಸ್ಥಾನದಲ್ಲಿದ್ದೇವೆಂಬುದನ್ನು ತೋರಿಸುವುದಕ್ಕೆ ಹೊರಟ್ಟಿದ್ದೇವೆ ಇವತ್ತು ಬಾಗಲಕೋಟೆ ಜಿಲ್ಲೆಗೆ 62 31% ಬಿಪಿಎಲ್ ಕಾರ್ಡ್ ಏನು ಕೊಟ್ಟಿದ್ದೇವೆ, ಅದರ ಎಲ್ಲಾ ವರದಿಯಲ್ಲಿ ಕೊಡುವುದಕ್ಕೆ ಸಿದ್ಧನಿದ್ದೇನೆ, ನಿಮ್ಮ ಗಮನಕ್ಕೆತರುತ್ತೇನೆ ಹಾಸನ ಒಂದೇ ಜಿಲ್ಲೆಯಲ್ಲ, ಎಲ್ಲಾ ಕಡೆ ಈ ಸಮಸ್ಯೆ ಇದೆ, ಇದರಲ್ಲಿ ಇವತ್ತು ಈ ಸಂದರ್ಬದಲ್ಲಿ ಅಧಿಕಾರಿಗಳದ್ದು ಎಷ್ಟು ಜವಾಬ್ದಾರಿ ಇದೆ ಅಷ್ಟೆ ಜವಾಬ್ದಾರಿ ಜನಪ್ರತಿನಿಧಿಗಳದ್ದಿದೆ ಎಂದು ಹೇಳಬಯಸುತ್ತೇನೆ ಇವತ್ತು ಹೊಸದಾಗಿ ಜಿ-9 ರೂಲ್ಸ್ ಅನ್ನು ತಂದಿದ್ದೇವೆ ಅದರ ಪ್ರಕಾರ 72% ಇಡಿ ರಾಜ್ಯದಲ್ಲಿ ಕೊಡಬೇಕಾಗುತ್ತದೆ ಜಿಲ್ಲಾವಾರು ಹಾಸನಕ್ಕೆ 101% ಜಾಸ್ತಿ ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ ಇಷ್ಟು ಕೊಟ್ಟು ಪಡಿತರ ಚೀಟಿಯ ಸಮಸ್ಯೆ ಎಂದು ಹೇಳುವುದಾದರೆ, ನಾನು ಯಾರನ್ನು ದೂಷಿಸಬೇಕು, ಸರ್ಕಾರದ ಮೇಲೆ ದೂಷಣೆ ಮಾಡುತ್ತಿರೋ ಯಾರ ಮೇಲೆ ದೂಷಣೆ ಮಾಡುತ್ತೀರಾ? ಇವತ್ತು ಯಾರಾದದರು ಪಡಿತರ ಚೀಟಿಯನ್ನು ವಾಪಸ್ ತೆಗೆದುಕೊಳ್ಳುವ ಕೆಲಸ ಮಾಡುವುದಕ್ಕೆ ಹೋದರೆ ಮತಕ್ಕೆ ತೊಂದರೆಯಾಗುತ್ತದೆಂದು ಜನಪ್ರತಿನಿಧಿಗಳೇ ಅಂಥದಕ್ಕೆ ಅವಕಾಶ ಕೊಡುವುದಿಲ್ಲ ಇದನ್ನು ಇವತ್ತು ನಾವೆಲ್ಲಾ ಕುಳಿತು ಚರ್ಚೆ ಮಾಡಬೇಕಾಗುತ್ತದೆ, ನಾನು ಯಾವ ಸರ್ಕಾರದ ಮೇಲೆ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ ಇಲ್ಲಿರತಕ್ಕಂತಹ ಸಮಸ್ಯೆ, ಇವತ್ತು ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಪಡಿತರ ಚೀಟಿ ಬೇಕೆ ಬೇಕು ಎನ್ನುವ ರೀತಿಯಲ್ಲಿ ಹೊರಟಿದ್ದಾರೆ, ಇದರಿಂದ ಇವತ್ತು ಕೇಂದ್ರ ಸರ್ಕಾರ ಇತ್ತಿಚೆಗೆ ಒಂದು ಪತ್ರ ಬರೆದಿದ್ದಾರೆ ರೂ 3 00 ಗೆ ಕೆಜಿ ಅಕ್ಕಿಯನ್ನು ಅಷ್ಟು ಕೊಟ್ಟೆವು, ಇಷ್ಟು ಕೊಟ್ಟೆವೆಂದು ಹೇಳುತ್ತಿದ್ದಾರೆ, ಅವತ್ತು ಮಹಾದೇವ ಪ್ರಸಾದ್‌ರವರು ಆಹಾರ ಮಂತ್ರಿಗಳಾಗಿದ್ದರು, ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೆ, ಅವತ್ತು ತಲಾವಾರು 4 ಕೆ ಜಿ ಕೊಡಬೇಕೆಂದು ತೀರ್ಮಾನ ಮಾಡುವುದಕ್ಕೆ ಹೊರಟಿದ್ದರೆಂದು ನನಗೆ ಗೊತ್ತಿದೆ ಇವತ್ತು ಕೇಂದ್ರ ಸರ್ಕಾರ ಕ್ಲಾರಿಫಿಕೇಷನ್ ಕೇಳಿ ಪತ್ರವನ್ನು ಬರೆಯುತ್ತಾರೆ ಬಿಪಿಎಲ್ ಮತ್ತು ಎಎವೈ ಹೌಸ್ ಹೋಲ್ಡ್‌ನಲ್ಲಿ ಬಿಪಿಎಲ್‌ಗೆ 19 20 ಲಕ್ಷ, ಎಎವೈ ಹೌಸ್ ಹೋಲ್ಡ್‌ನಲ್ಲಿ 12 ಲಕ್ಷಕ್ಕೆ ಮಾತ್ರ ನಿಮಗೆ ಪಡಿತರ ಧಾನ್ಯ ಕೊಡುವುದರಲ್ಲಿ ನಾವು ಲಿಮಿಟ್ ಮಾಡುತ್ತೇವೆ ಇದನ್ನು ರೆಡ್ಯುಸ್ ಮಾಡಬೇಕೆಂದು ಕೇಂದ್ರ ಸರ್ಕಾರ ನಮಗೆ ಪತ್ರವನ್ನು ಬರೆದಿದ್ದಾರೆ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, ಇದನ್ನು ಎಲ್ಲಾ ಕಾಲದಲ್ಲು ಮಾಡಿದ್ದಾರೆ, ಬಿಪಿಎಲ್ ಎಷ್ಟು ಜನರಿದ್ದಾರೆ, ಯೋಜನಾ ಇಲಾಖೆಯಲ್ಲಿ ಬಡತನ ರೇಖೆ ಕೆಳಗಿರುವವರು ಎಷ್ಟುಟ ಅಂಕಿಅಂಶಗಳಿವೆ ಅದರ ಪ್ರಕಾರವೇ ಅವರು ನಮಗೆ ಅಕ್ಕಿಯನ್ನು ಕೊಡುತ್ತಾರೆ, ನಾವು ಲೆಕ್ಕಾ ಹಾಕಿದಷ್ಟು ಕೊಡುವುದಿಲ್ಲ ನಾನು ನಿಮ್ಮ ಆರ್ಗ್ಯುಮೆಂಟ್‌ಗೆ ಸಪೋರ್ಟ್ ಆಗಿ ಹೇಳುತ್ತಿದ್ದೇನೆ, ನಮ್ಮಲ್ಲಿ 65% ಬಿಪಿಎಲ್ ಕಾರ್ಡ್‌ಗಳಿವೆ, ಅಕೋಸ್ಕರವೆ ನಾವು ಸಬ್ಸಿಡಿ ಕೊಡುವುದು ಎಪಿಎಲ್-ಬಿಪಿಎಲ್ ಕಾರ್ಡ್‌ಗೆ ಕೊಡುವ ವ್ಯತ್ಯಾಸವಿದೆಯಲ್ಲ ಆ ವ್ಯತ್ಯಾದಿಂದಲೇ 750 ಕೋಟಿ ರೂಪಾಯಿಗಳ ಸಬ್ಸಿಡಿಯಾಗಿರುವುದು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಸಿದ್ಧರಾಮಯ್ಯನವರೆ, ಈಗ ಸಮಸ್ಯೆ ಏನು ಬಂದಿದೆ ಎಂದರೆ, ನೀವು ದುಡ್ಡು ಕೊಟ್ಟರೂ ಕೂಡ ನಾವು ಅಕ್ಕಿ ಕೊಡುವುದಿಲ್ಲವೆಂದು ಪತ್ರ ಬರೆದಿದ್ದಾರೆ ನಮ್ಮ ಕಾಲದಲ್ಲಿ ನಮ್ಮ ಮತ್ತು ಅವರ ನಡುವೆ ವ್ಯತ್ಯಾಸವಿರುತ್ತಿತ್ತು, ಅವರು 28% ಬಿಪಿಎಲ್ ಕೆಳಗಿರುವವರು, ನಾವು 60%, 62% 65% ಮಾಡಿರುತ್ತಿದ್ದೇವೆ, ಅದರ ವ್ಯಕತ್ಯಾಸವನ್ನು ನಾವು ಕೊಡುತ್ತಿದ್ದೇವೆ ಈಸಾರಿ ಅವರೇನು ಹೇಳಿದ್ದಾರೆಂದರೆ, ನಮ್ಮಲ್ಲಿ ಅಕ್ಕಿ ದಾಸ್ತಾನು ಇಲ್ಲದಿರವುದರಿಂದ ನೀವು ದುಡ್ಡನ್ನು ಕೊಟ್ಟರೂ ಕೂಡ ನಾವು ಅಕ್ಕಿಯನ್ನು ಒದಗಿಸುವುದಿಲ್ಲವೆಂದು ಪತ್ರವನ್ನು ಬರೆದಿದ್ದಾರೆ ಈಗ ನಾವು ಒಪನ್ ಮಾರುಕಟ್ಟೆಯಲ್ಲಿ' ಖರೀದಿ ಮಾಡಬೇಕಾಗಿದೆ

ಶ್ರೀ ಸಿದ್ಧರಾಮಯ್ಯ ಮಾಡಬೇಕಾಗುತ್ತದೆ There is no other alternative You have to go to the open market.

ಶ್ರೀ ಎಂ ಪಿ ಪ್ರಕಾಶ್ ಅವಾಗ exchequer ಮೇಲೆ ಏನು ಪರಿಣಾಮವಾಗುತ್ತದೆ ಯೋಚನೆ ಮಾಡಿ, ರೂ 12 00, ರೂ 13 00 ಗೆ ತೆಗೆದುಕೊಳ್ಳಬೇಕಾಗುತ್ತದೆ

ಶ್ರೀ ಸಿದ್ಧರಾಮಯ್ಯ ಈಗ ಬಡತನದ ರೇಖೆಗಿಂತ ಕೆಳಗಿರುವವರಿಗೆ ರೂ 3 00 ಒಂದು ಕೆ ಜಿ ಅಕ್ಕಿಯನ್ನು ಕೊಡುತ್ತೇವೆಂದು ನಾವೊಂದು ಕಾರ್ಯಕ್ರಮವನ್ನು ಕಮಿಟ್ ಮಾಡಿಕೊಂಡಿದ್ದೇವೆ ಅದಕ್ಕೆ ಹಣವೆಷ್ಟಾಗುತ್ತದೆ ಅದರ ಮೇಲೆ ಕೊಡುತ್ತೇವೆಂದು ನಾವು ಎಲ್ಲೂ ಹೇಳಿಲ್ಲ ಅದು 700 ಕೋಟಿ, 800 ಕೋಟಿ, 1000 ಕೋಟಿಯಾದರೆ ನಾವು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ ಬಡತನ ರೇಖೆಗಿಂತ

ಕೆಳಗಿರುವವರಿಗೆ ಒಂದು ಕೆ ಜಿ ಗೆ ರೂ 3 00 ಯಂತೆ 20 ಕೆ ಜಿ ಅಕ್ಕಿಯನ್ನು ಕೊಡುತ್ತೇವೆಂದು ತೀರ್ಮಾನವಾಗಿದೆ, ಕಾರ್ಯಕ್ರಮ ಜಾರಿಯಲ್ಲಿದೆ ಇಲ್ಲಿ ಪ್ರಶ್ನೆ ಇರುವುದೇನೆಂದರೆ, ಜಾಸ್ತಿ ಜನರಾಗಿರುವುದು ನಿಜ ಒಂದು ಕಡೆ 75% ಆಗಿದೆ, ಇನ್ನೊಂದು ಕಡೆ 70%, 80% ಕೆಲವು ಕಡೆ 100%, 110% ಆಗಿದೆ ಹಿಂದೆ 66 ಲಕ್ಷಕ್ಕಿಂತ ಜಾಸ್ತಿ ಹೋಗಿರಲಿಲ್ಲ ಕೇಂದ್ರ ಸರ್ಕಾರದ ಕಾರ್ಯಕ್ರಮಗಳಾದ ಅಂತ್ಯೋದಯ, ಅನ್ನಪೂರ್ಣ ಇವೆಲ್ಲಾ ಸೇರಿಕೊಂಡು 66 ಲಕ್ಷವಿತ್ತು, ಈಗ ಜಾಸ್ತಿಯಾಗಿದೆ, ಇಷ್ಟಾದರು ಎಲ್ಲಾ ಕಡೆಯಲ್ಲೂ ಸಮಸ್ಯೆ ಏತಕ್ಕೆ ಇದೆ? ಎರಡು ಸಮಸ್ಯೆಗಳಾಗಿದ್ದಾವೆ, ಒಂದು ಕೆಲವರಿಗೆ ಸಿಕ್ಕೇ ಇಲ್ಲ, ಇನ್ನು ಕೆಲವರಿಗೆ ಎಪಿಎಲ್ ನವರಿಗೆ ಬಿಪಿಎಲ್ ಸಿಕ್ಕಿದೆ, ಬಿಪಿಎಲ್ ನವರಿಗೆ ಎಪಿಎಲ್ ಸಿಕ್ಕಿದೆ, This is the problem ಈ ಸಮಸ್ಯೆಯನ್ನು ಬಗೆಹರಿಸಬೇಸಬೇಕಾಗಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅದೇ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ ಕೇಂದ್ರ ಸರ್ಕಾರ ನಾವು ಹಣ ಕೊಟ್ಟರೂ ನಿಮಗೆ ಅಕ್ಕಿ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ ಅದು ಯಾವ ರೀತಿ ಮಾಡಬೇಕೆನ್ನುವುದರ ಬಗ್ಗೆ ಆರ್ಥಿಕ ಇಲಾಖೆಯವರ ಜೊತೆಗ ಚರ್ಚೆ ಮಾಡಿ, ಮಾನ್ಯ ಉಪಮುಖ್ಯಮಂತ್ರಿಗಳ ಜೊತೆಗೆ ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಘಡಿ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಈಗಾಗಲೇ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದೇವೆ ಬಿಪಿಎಲ್ ಕಾರ್ಡ್‌ನ ಸಮಸ್ಯೆ ನಮ್ಮ ಸರ್ಕಾರದ ಅಸಮರ್ಥತೆಯಿಂದ ಈ ಕಾರ್ಯಕ್ರಮದಲ್ಲಿ ಲೋಪದೋಷ ಗಳು ಆಗಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ ಅದನ್ನು ಯಾವ ತರಹ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡೋಣ

ಡಾ ಹೆಚ್ ಸಿ ಮಹದೇವಪ್ಪ ಅಸಮಾಧಾನವನ್ನು ತಾವೇ ಅಧಿಕಾರಿಗಳ ಸಭೆ ನಡೆಸಿ ಹೇಳಿ ಸೀರಿಯಸ್ ಆಗಿ ವಾರ್ನ್ ಮಾಡಿದ್ದೀರಿ 15 ದಿವಸಗಳಲ್ಲಿ ಸರಿಪಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಾದ ತಾವೇ ಹೇಳಿದ್ದೀರಿ ಬೇರೆ ಯಾರೋ ಹೇಳಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ನಾವು ಹೇಳಿದ್ದೆಲ್ಲಾ ಆಗಬೇಕಾದರೆ ಸರ್ಕಾರದಲ್ಲಿ ಕೆಲಸ ಮಾಡಬೇಕಾದರೆ, ನಮಗಿಂತ ಹೆಚ್ಚಾಗಿ ನೀವೆಲ್ಲಾ ಸುದೀರ್ಘವಾಗಿ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ ನಿಮಗೂ ಅಉಭವ

ಆಗಿರುತ್ತದೆ ಗ್ರಾಮ ವಾಸ್ತವ್ಯದ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ ಗ್ರಾಮ ವಾಸ್ತವ್ಯದ ಕಾರ್ಯಕ್ರಮ ಕೇವಲ ಪ್ರಚಾರಕ್ಕಾಗಿ ಮಾಡುತ್ತಿರುವುದು ಎನ್ನುವುದನ್ನು ಹಲವಾರು ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ ಈಗ ತಾನೇ ನಮ್ಮ ಹಿರಿಯ ನಾಯಕರು ಅದರ ಬಗ್ಗೆ ಮತ್ತೆ ಏನು ಪ್ರಸ್ತಾಪ ಮಾಡಿದ್ದಾರೆ ಕೆಲವು ವಿಷಯಗಳನ್ನು ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಶ್ವೇತ ಪತ್ರವನ್ನು ಹೊರಡಿಸಬೇಕೆಂದು ಕೇಳಿದ್ದೀರಿ ಅದಕ್ಕೂ ನಾನು ಸಿದ್ಧನಿದ್ದೇನೆ ಎಲ್ಲಾ ಅಧಿಕಾರಿಗಲ ಹಿಂಡನ್ನೇ ಏತಕ್ಕೆ ಕರೆದುಕೊಂಡು ಹೋಗಬೇಕೆಂದು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಎಂ ಪಿ ಪ್ರಕಾಶ್‌ರವರು ಇವತ್ತು ಡಿಫೆಂಡ್ ಮಾಡಿಕೊಳ್ಳತಕ್ಕಂತಹ ಸಂದರ್ಭದಲ್ಲಿ ಡಯಾನ ಅವರ ವಿಷಯ ಇರಬಹುದು, ಇದೆಲ್ಲಾ ಪ್ರಸ್ತಾಪವಾಗಿದೆ ಗಾಂಧೀಜಿಯವರಿಗೆ ನಾನು ಹೋಲಿಕೆ ಮಾಡಿಕೊಂಡಿಲ್ಲ ಅವರು ಉದಾಹರಣೆ ಕೊಡಲಿಕ್ಕೆ ಹೊರಟಿದ್ದು ಅಷ್ಟೆ ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ಮಾನ್ಯ ಗೋಪಾಲ ಕೃಷ್ಣ ಗೋಖಲೆಯವರು ಏನು ಸಲಹೆ ಕೊಟ್ಟರು, ಅದರ ಆಧಾರದ ಮೇಲೆ ಅವರು ಹಳ್ಳಿಗಳಿಗೆ ಬೇಟಿ ಕೊಡುವುದರ ಮುಖಾಂತರ ಸಂಘಟನೆ ಮಾಡುವುದಕ್ಕೆ ಗೋಖಲೆಯವರು ಆ ಸಂದರ್ಭದಲ್ಲಿ ಅವರಿಗೇನು ಸಲಹೆ ಕೊಟ್ಟರು, ಅದರ ಆಧಾರದ ಮೇಲೆ ಅವರು ಬಂದಾಗ, ಅವರೂ ದಲಿತರ ಕೊಳೆಗೇರಿಗಳಿಗೆ ಹೋಗತಕ್ಕಂಥಾದ್ದು ಎಲ್ಲ ಪ್ರಾರಂಭ ಮಾಡಿದಾಗ ಆಗಲೂ ಹೈ ಕಲ್ಚರ್ಡ್ ಕಾಂಗ್ರೆಸ್ ಪಕ್ಷದವರು ಇದ್ದರು ಆಗಲೂ ಗಾಂಧೀಜಿಯವರ ಬಗ್ಗೆ ಅವರು ಏನು ಚರ್ಚೆ ಮಾಡಿದ್ದಾರೆ ಎನ್ನುವುದನ್ನು ಕೆಲವು ಪುಸ್ತಕಗಳಲ್ಲಿ ಬರೆದಿರುವುದನ್ನು ನಾನು ಗಮನಿಸಿದ್ದೇನೆ ಇದರಿಂದ ಸ್ವಾತಂತ್ರ್ಯ ತರುವುದಕ್ಕಾಗುವುದಿಲ್ಲ ಏನೋ ದೊಡ್ಡ ಕೆಲಸ ಮಾಡಿದ್ದಾರೆ ಎಂದು ಹೇಳಿ, ಈ ದೇಶಧಲ್ಲಿ ಗಾಂಧೀಜಿಯವರಿಗೂ ಬಿಟ್ಟಿಲ್ಲ ಅವರದ್ದೂ ಚರ್ಚೆ ಮಾಡಬೇಕಾಗುತ್ತದೆ ಗಾಂಧೀಜಿಯವರ ಮಟ್ಟಕ್ಕೆ ಹೋಲಿಕೆ ಮಾಡಿಕೊಳ್ಳಲಿಕ್ಕೆ ಮಾನ್ಯ ಎಂ ಪಿ ಪ್ರಕಾಶ್‌ರವರು ಹೋಗಲಿಲ್ಲ ಅವರು ಏನು ಆ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನು ತಂದರು ಆ ರೀತಿ ಅವರ ಮಾರ್ಗದರ್ಶನದಲ್ಲಿ ಈಕಾರ್ಯಕ್ರಮವನ್ನು ಪ್ರಾರಂಭ ಮಾಡಿರಬಹುದು ಎನ್ನುವ ದೃಷ್ಟಿಯಲ್ಲಿ ಹೇಳಿದ್ದಾರೆ ಇವತ್ತು ಈ ಗ್ರಾಮ ಸಂದರ್ಶನ ಕಾರ್ಯಕ್ರಮದಲ್ಲಿ ಒಂದು ಪ್ರಮುಖವಾದ ವಿಷಯವನ್ನು ನಿಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ ನೀವೂ ಕೂಡ ಹಣಕಾಸು ಸಚಿವರಾಗಿ ಮುಖ್ಯಮಂತ್ರಿಗಳಾಗಿ ಮತ್ತು ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ ಬಾಗಲಕೋಟೆ ಜಿಲ್ಲೆಯ ಚಿಕ್ಕಮ್ಯಾಗೇರಿ ಎಂಬ ಒಂದು ಗ್ರಾಮಕ್ಕೆ ಭೇಟಿ ಕೊಟ್ಟೆ, ಜನತಾ ದರ್ಶನ ಕಾರ್ಯಕ್ರಮದಲ್ಲಿ ಅಲ್ಲಿ ಒಬ್ಬ ಹೆಣ್ಣು ಮಗಳು ದೇವದಾಶ

ಕುಟುಂಬದಲ್ಲಿ ಜೀವನ ಮಾಡತಕ್ಕಂತಹ ತಾಯಿಗೆ ಜನಿಸಿದ ಒಂದು ಹೆಣ್ಣು ಮಗಳು M A graduate ಆಗಿದ್ದಾಳೆ ಒಬ್ಬ ಲಿಂಗಾಯಿತ ಸಮುದಾಯಕ್ಕೆ ಸೇರಿದ ಹುಡುಗ ಅವಳನ್ನು ಮದುವೆಯಾಗಿದ್ದಾನೆ ಆ ಹೆಣ್ಣು ಮಹಜಿಗಳಿಗೆ ಸರ್ಕಾರದ ಕಾರ್ಯಕ್ರಮದ ಅಂತರ್ಜಾತಿ ವಿವಾಹವಾದವರಿಗೆ ರೂ 25,000 ಕೊಡುವುದಕ್ಕೆ ಅವಕಾಶವಿತ್ತು ನಾನು ಜನತಾದರ್ಶನದಲ್ಲಿ ಆ ಹಳ್ಳಿಗೆ ಹೋಗುವವರೆಗೆ ಆ ಹೆಣ್ಣು ಮಗಳು ಹಲವಾರು ತಿಂಗಳುಗಳಿಂದ ಎಲ್ಲಾ ಕಛೇರಿಗಳಿಗೆ ಭೇಟಿ ಮಾಡಿದ್ದರೂ ಅವಳಿಗೆ ಹಣ ಸಿಕ್ಕಿರಲಿಲ್ಲ ನನ್ನ ಮುಂದೆ ಬಂದು ಅವಳ ಪರಿಸ್ಥಿತಿಯನ್ನು ಹೇಳಿಕೊಂಡಾಗ 24 ಗಂಟೆಗಳಲ್ಲಿ 25,000 ರೂಪಾಯಿಗಳ ಚೆಕ್ಕನ್ನು ಕೊಡಿಸತಕ್ಕಂತಹ ಕೆಲಸವನ್ನು ಮಾಡಿದ್ದೇನೆ ಅದರ ಜೊತೆಯಲ್ಲಿ ಅಲ್ಲಿ ಕೆಲವರು ನನಗೆ ಸಲಹೆ ಕೊಟ್ಟರು ಏನು ಲಿಂಗಾಯಿತ ಸಮುದಾಯಕ್ಕೆ ಸೇರಿದ ಹುಡುಗ ಮದುವೆಯಾಗಿದ್ದಾನೆ, ಅವರು ಇಲ್ಲಿಯೇ ಇದ್ದರೆ ಅವರ ಕುಟುಂಬದಲ್ಲಿ ಬದುಕುವುದು ಕಷ್ಟವಾಗಬಹುದು ಅವರಿಗೆ ಬೇರೆ ಏನಾದರೂ ರಕ್ಷಣೆ ಕೊಡಬೇಕೆಂದು ಸವಾಲನ್ನು ಸ್ವೀಕಾರ ಮಾಡಿದ್ದಾಳೆ, ಅವಳಿಗೆ ಮತ್ತು ಅವಳ ಗಂಡನಿಗೆ ನನ್ನ ಕಛೇರಿಯಲ್ಲಿ ಉದ್ಯೋಗವನ್ನು ಕೊಟ್ಟಿದ್ದೇನೆ, ಇವತ್ತು ಆ ಹೆಣ್ಣು ಮಗಳು ಐಎಎಸ್ ಪರೀಕ್ಷೆಗೆ ತಯಾರಾಗುವ ವ್ಯವಸ್ಥೆ ಇವೆಲ್ಲಾ ನಾನು ಈ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಮಾಡದೇ ಹೋಗಿದ್ದರೆ, ಆ ಹೆಣ್ಣು ಮಗಳ ಪರಿಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ಸದನದ ಸದಸ್ಯರ ವಿವೇಚನೆಗೆ ಬಿಡುತ್ತೇನೆ ಇವತ್ತು ಈ ರೀತಿಯ ಸಾವಿರಾರು ನಿದರ್ಶನಗಳನ್ನು ನಾನು ಕೊಡಬಲ್ಲೆ ಯಾವ ರೀತಿ ಈ ಗ್ರಾಮ ಸಂದರ್ಶನದ ಕಾರ್ಯಕ್ರಮದಿಂದ ಅನುಕೂಲಗಳು ಆಗಿವೆ ಎನ್ನುವುದನ್ನು ತಿಳಿದುಕೊಳ್ಳ ಬಹುದು ಜನಸಾಮಾನ್ಯರನ್ನು ಭೇಟಿ ಮಾಡತಕ್ಕಂತಹ ವ್ಯವಸ್ಥೆಯನ್ನು ಇಂದಿನ ರಾಜಕಾರಣದಲ್ಲಿ ನಾನು ಮರೆಯುತ್ತಿದ್ದೇವೆ ನಾನು ಇವತ್ತು ಎಲ್ಲ ಹಿರಿಯ ನಾಯಕರುಗಳಲ್ಲಿ ಮನವಿ ಮಾಡುತ್ತೇನೆ, ನಾನು ದೊಡ್ಡ ಕೆಲಸ ಮಾಡಿದ್ದೇನೆಂದು ಇವತ್ತು ಎಲ್ಲ ಹಿರಿಯ ನಾಯಕರುಗಳಲ್ಲಿ ಮನವಿ ಮಾಡುತ್ತೇನೆ, ನಾನು ದೊಡ್ಡ ಕೆಲಸ ಮಾಡಿದ್ದೇನೆಂದು ಹೇಳುವುದಕ್ಕೆ ಹೋಗುವಿದಿಲ್ಲ ನಾನು ಮನವಿ ಮಾಡುವಂಥಾದ್ದು, ಅಧಿಕಾರದಲ್ಲಿರತಕ್ಕಂತಹ ನಮ್ಮಂತಹವರು ಯಾವುದೋ ಒಂದು ಸಾರ್ವಜನಿಕ ಕಾರ್ಯಕ್ರಮಕ್ಕೆ ಹೋಗುತ್ತೇವೆ ಸಾರ್ವಜನಿಕ ಕಾರ್ಯಕ್ರಮದಲ್ಲಿ ಅಲ್ಲಿಯ ಆಡಳಿತ ವ್ಯವಸ್ಥೆ ಮತ್ತು ಅಲ್ಲಿಯ ಕಾರ್ಯಕರ್ತರು ಏನು ಸಭೆಗಳನ್ನು ಏರ್ಪಾಡು ಮಾಡಿರುತ್ತಾರೆ, ಆ ಸಭೆಗಳಲ್ಲಿ ಭಾಷಣ ಮಾಡಿ ಮತ್ತು ಕಾರು ಹತ್ತಿ ಬರತಕ್ಕಂತಹ ಪ್ರವೃತ್ತಿಯನ್ನು ನಾವು ಏನು ಇಟ್ಟುಕೊಂಡುದ್ದೇವೆ, ಇದು ಹೋಗಬೇಕು ಎನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ ಬೆಳಗಾವಿ ಜಿಲ್ಲೆಗೆ ಮೊದಲನೇ

ಬಾರಿಗೆ ಏನು ಪ್ರವಾಸ ಮಾಡಿದೆ, ರಾತ್ರಿ 11 30 ಗಂಟೆಯಲ್ಲಿ ನನಗೆ ಒಂಟಮರಿ ಎಂಬ ಗ್ರಾಮದ ಹೆಣ್ಣುಮಗಳು ಒಂದು ಮನವಿ ಕೊಡುತ್ತಾರೆ ಹಲವಾರು ವರ್ಷಗಳಿಂದ ನಮ್ಮ ಊರಿಗೆ ಕುಡಿಯುವ ನ ಇಈರಿನ ವ್ಯವಸ್ಥೆ ಮಾಡಿಕೊಡಿ ಎಂದು ಜನಪ್ರತಿನಿಧಿಗಳಿಗೆ ಕೇಳುತ್ತಿದ್ದೇವೆ, ನಮ್ಮ ಕೆಲಸವಾಗಲಿಲ್ಲವೆಂದು ಹೇಳಿದರು ನಾನು ಆ ಗ್ರಾಮಕ್ಕೆ ರಾತ್ರಿ 11 30 ಗಂಟೆಗೆ ಹೋಗಿಅಲ್ಲಿನ ಪರಿಸ್ಥಿತಿ ನೋಘಡಿದೆ 83 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಘಟಪ್ರಭಾ ನದಿಯಿಂದ ಇವತ್ತು ಕಾಲುವೆ ಮೂಲಕ ನೀರನ್ನು ಹರಿಸಿ ಕುಡಿಯುವ ನೀರಿನ ಕೆಲಸವನ್ನು ಮಾಡಿಕೊಟ್ಟಿದ್ದೇವೆ, ಇದು ಪ್ರಚಾರಕ್ಕೆ ನಾನು ಮಾಡತಕ್ಕಂತಹ ಕಾರ್ಯಕ್ರಮ ಅಲ್ಲ ನಾನು ಈ ಸದನದಲ್ಲಿ ವಿಶ್ವಾಸವುತವನ್ನು ಪಡೆಯುತಕ್ಕಂತಹ ಸಂದರ್ಭದಲ್ಲಿಈ ಸರ್ಕಾರ ಬಸವಣ್ಣನವರ ಸಂದೇಶವೇನಿದೆ ಕಾಯಕವೇ ಕೈಲಾಸ ಎಂದು ಆ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತದೆ ಎನ್ನುವ ಮಾತನ್ನು ಹೇಳಿದ್ದೆ ಇವತ್ತು ಆ ನಿಟ್ಟಿನಲ್ಲಿ ಅಲ್ಪ ಸ್ವಲ್ಪ ಮಟ್ಟಿಗೆ ಕಾರ್ಯಕ್ರಮಗಳನ್ನು ತರತಕ್ಕಂಥಾದ್ದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟಿದ್ದೇನೆ ಇವತ್ತು ಕೆಲವು ಟೀಕೆಗಳನ್ನು ಕೇಳಿದ್ದೇನೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ರೀತಿಯ ಸೌಲಭ್ಯಗಳನ್ನು Five Star Hotel ತರಹ ಸೌಲಭ್ಯಗಳನ್ನು ಮಾಡುತ್ತಾರೆ ಎಂದು ಹೇಳಿದ್ದಾರೆ ಬೆಳಿಗ್ಗೆ ನಾನು ನನ್ನ ನಿತ್ಯ ಕರ್ಮಗಳನ್ನು ಪೂರೈಸಿಕೊಳ್ಳಲಿಕ್ಕೆ ಸಣ್ಣ ಒಂದು ವ್ಯವಸ್ಥೆ ಇಲ್ಲದೇ ಹೋದರೆ ನಾನು ಏನಾದರೂ ಹೊರಗಡೆ ಬಂದರೆ ನನ್ನ ಹಿಂದೆ ಎರಡ ರಿಂದ ಸಾವಿರ ಜನ ಹೊರಗಡೆ ಬರುತ್ತಾರೆ ನಾನು ನನ್ನ ಕೆಲಸ ಎಲ್ಲಿ ಮಾಡಲಿ? ಇದು ನನ್ನ ಸಮಸ್ಯೆ ಇದೆ ಇದಕ್ಕೋಸ್ಕರವಾಗಿ ಅಲ್ಪಸ್ವಲ್ಪ ಮಟ್ಟಿಗೆ ಕೆಲವು ವ್ಯವಸ್ಥೆ ಮಾಡಿರಬಹುದು ನಾನು ಹೋಗಬೇಕಾದರೆ ದಿಂಬು, ಹಾಸಿಗೆ ತೆಗೆದುಕೊಂಡು ಹೋಗಿ ಚಾಪೆ ಮೇಲೆ ಮಲಗಿರುವಂತಹ ನಿದರ್ಶನಗಳೂ ಇವೆ ನೆಲದ ಮೇಲೆಯೂ ಮಲಗಿದ್ದೇನೆ ಕೆಲವು ಹಳ್ಳಿಗಳಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಿನ ವ್ಯವಸ್ಥೆ ಮಾಡಿರಬಹುದು ನಾನು ಇಲ್ಲವೆಂದು ಹೇಳುವುದಿಲ್ಲ ಹೀಗೆ ಮಾಡಬೇಕು ಹಾಗೆಯೇ ಮಾಡಬೇಕು ಎಂದು ನಾನು ಯಾರಿಗೂ ಕೇಳಿಲ್ಲ ಅಧಿಕಾರಿಗಳು ಮುಖ್ಯಮಂತ್ರಿಗಳು ಬಂದಾಗ ಸಹಜವಾಗಿ ಏನು ವ್ಯವಸ್ಥೆ ಮಾಡಬೇಕೆಂದು ಮಾಡಿದ್ದಾರೆ, ಅದರ ಬಗ್ಗೆ ನಮ್ಮ ಜನಪ್ರತಿನಿಧಿಗಳಲ್ಲಿ ಏನಾದರೂ ಈ ರೀತಿಯ ವ್ಯವಸ್ಥೆಯ ಅವಶ್ಯಕತೆ ಇತ್ತಾ ಎನ್ನುವ ಭಾವನೆ ಇದ್ದರೆ,

ಶ್ರೀ ಕೆಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಬಹಳ ಚೆನ್ನಾಗಿ ಹೇಳುತ್ತಿದ್ದೀರಿ ಪತ್ರಿಕೆಗಳವರು ಮಾಡಿದ ತಪ್ಪು ಇದು ನೀವು ಬೀದರ್‌ಗೆ ಎಲ್ಲಿಯೋ ಹೋಗಿ ಬಂದಿರಲ್ಲಾ ಕರ್ಟನ್ ಕಿತ್ತುಕೊಂಡು ಹೋದರು, ಫುಟ್‌ರಗ್

ಎತ್ತಿಕೊಂಡು ಹೋಗಿಬಿಟ್ಟರು, ಈ ಹೆಣ್ಣು ಮಗಳು ಕೇಳಿದರೂ ಬಿಡಲಿಲ್ಲವೆಂದು ಎಲ್ಲ ಸುಮ್ಮನೆ ನಿಮ್ಮ ಮೇಲೆ ಅಪಪ್ರಚಾರ ಮಾಡುವುದಕ್ಕಾಗಿ ಬರೆದಿದ್ದಾರೆ ನೀವು ಮಲಗುವ ಡೀಟೇಲ್ಸ್ ಎಲ್ಲ ನಾವು ಕೇಳಲಿಲ್ಲ ಹೇಗೇಗೆ ಅನುಕೂಲವಾಗುತ್ತದೆ ಹಾಗೆ ಮಲಗಿಕೊಳ್ಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಪತ್ರಿಕಾ ಸ್ನೇಹಿತರ ಬಗ್ಗೆ ನಾನು ಲೋಪ ಕೊಡುವುದಕ್ಕೆ ಹೋಗುವುದಿಲ್ಲ ಅವರು ಪರವಾಗಿಯೂ ಕೆಲವು ವರದಿಗಳನ್ನು ಮಾಡಿದ್ದಾರೆ, ಕೆಲವು ಹಳ್ಳಿಗಳಲ್ಲಿ ಕೆಲಸಗಳು ಆಗದೇ ಇರುವಂತಹ ವಿಷಯಗಳನ್ನು ಪ್ರಸ್ತಾಪ ಮಾಡಿ ಕೆಲಸದ ಬಗ್ಗೆ ನಾನು ಗಮನ ಹರಿಸುವುದಕ್ಕೆ ಪತ್ರಿಕಾ ಸ್ನೇಹಿತರು ನನ್ನ ಗಮನ ಸೆಳೆದಿದ್ದಾರೆ ಪತ್ರಿಕಾ ಸ್ನೇಹಿತರು ಹೊಗಳಿದಾಗಲೂ ನಾನು ಹಿಗ್ಗಿಲ್ಲ ನನ್ನ ಬಗ್ಗೆ ಟೀಕೆ ಮಾಡಿದಾಗ ನಾನು ಕುಗ್ಗಿಲ್ಲ ಪತ್ರಿಕಾ ಸ್ನೇಹಿತರು ಕೊಟ್ಟಿರತಕ್ಕಂತಹ ವರದಿಗಳನ್ನು ನಾನು ಸಮಚಿತ್ತ ಭಾವದಿಂದ ತೆಗೆದು ಕೊಂಡಿದ್ದೇನೆ ಯಾವುದೇ ರೀತಿ ನನ್ನ ತಲೆ ತಿರುಗಿ ಹೋಗತಕ್ಕಂತಹ ರೀತಿಯಲ್ಲಿ ನನ್ನ ನಡುವಳಿಕೆಗಳನ್ನು ನಾನು ವ್ಯಕ್ತಪಡಿಸಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ ಪ್ರಮುಖವಾಗಿ ಹೆಚ್ ಐ ವಿ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದೀರಿ ಆ ಕುಟುಂಬವನ್ನು ಇವತ್ತು ತುಂಬ ಕೆಟ್ಟ ಪರಿಸ್ಥಿತಿಗೆ ಸಮಾಜದಲ್ಲಿ ದೂಡಿದ್ದೇವೆ, ಆಕುಟುಂಬಕ್ಕೆ ಹೋಗಿ ವಾಸ್ತವ್ಯ ಹೂಡಿದ್ದರ ಬಗ್ಗೆ ಹೇಳಿದ್ದಾರೆ ಕೆಲವು ವರದಿಗಳು ತಿರುಚಿ ಮಾಡತಕ್ಕಂಥಾದ್ದು ಏನಿದೆ,

ಆ ಗ್ರಾಮದಲ್ಲಿ ಹೆಚ್ ಐ ವಿ ಪೀಡಿತರ ವಿಷಯದಲ್ಲಿ ಅಲ್ಲಿರುವ ಜನಗಳಲ್ಲಿ ಒಂದು ರೀತಿಯ ಕೆಟ ಭಾವನೆ ಮೂಡಿದೆ ಎನ್ನುವ ರೀತಿಯಲ್ಲಿ ಒಂದು ಟಿ ವಿ ಚಾನೆಲ್‌ನಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದರ ಮೇಲೆ ಕನ್ನಡ ಪ್ರಭ ಪತ್ರಿಕೆಯವರು ಆ ಗ್ರಾಮಕ್ಕೆ ಹೋಗಿ ಒಂದು ವರದಿಯನ್ನು ಸಂಗ್ರಹ ಮಾಡಿದ್ದಾರೆ ಅದರಲ್ಲಿ ಏನು ಹೇಳುತ್ತಾರೆಂದರೆ, ಕುಮಾರಣ್ಣನ ಭೇಟಿ ಖುಷಿ ತಂದಿದೆ ಎಂದು ಹೊಲದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ ಹಲವಾರು ಮಹಿಳೆಯರು ತಿಳಿಸಿದರು, ಗ್ರಾಮವೆಲ್ಲಾ ಸುತ್ತಾಡಿದ ಪತ್ರಕರ್ತರಿಗೆ ಯಾವ ಮೂಲೆಯಲ್ಲಿಯೂ ಕುಮಾರಸ್ವಾಮಿ ಭೇಟಿ ಕುರಿತಂತೆ ಅಪಸ್ವರ ಕೇಳಿ ಬರಲಿಲ್ಲವೆಂದಿದ್ದಾರೆ ಇನ್ನೂ ಬೇರೆ ಬೇರೆ ವಿಷಯುಗಳನ್ನು ಜನರು ಮಾತನಾಡಿದ್ದಾರೆ ಅದನ್ನೆಲ್ಲಾ ಹೇಳಿ ಶಹಭಾಸ್‌ಗಿರಿ ತೆಗೆದುಕೊಳ್ಳತಕ್ಕಂಥ ವಿಷಯಕ್ಕೆ ನಾನು ಹೋಗುವುದಿಲ್ಲ ಹೆಚ್ ಐ ವಿ ವಿಷಯದಲ್ಲಿ ನಾನು ಏತಕ್ಕೋಸ್ಕರ ಆ ಗ್ರಾಮಕ್ಕೆ ಹೋದೆನೆಂದರೆ ಇತ್ತೀಚಿಗೆ ಒಂದು ಪ್ರಕರಣ ನಡೆಯಿತು ಕೊಪ್ಪಳದಲ್ಲಿ ಹೆಚ್ ಐ ವಿ ಯಿಂದ ಬಳಲುತ್ತಿದ್ದ ಒಂದು ಮಗು

ಶಾಲೆಗೆ ಹೋದಾಗ ಆ ಒಂದು ಶಾಲೆಯಲ್ಲಿ ಓದತಕ್ಕಂಥ ಇತರ ಎಲ್ಲಾ ವಿದ್ಯಾರ್ಥಿಗಳು ಬಹಿಷ್ಕಾರ ಹಾಕಿ ಹೋದಂಥ ಘಟನೆಯನ್ನು ಕೆಲವು ಪತ್ರಿಕೆಗಳವರು ವರದಿ ಮಾಡಿದ್ದಾರೆ ಇವೊತ್ತು ನಾನು ಹೋಂಥ ಉದ್ದೇಶವೇನೆಂದರೆ, ಹೆಚ್ ಐ ವಿ ಪೀಡಿತ ಆ ಹೆಣ್ಣುಮಗಳು ತಯಾರು ಮಾಡಿಕೊಟ್ಟಂಥ ಊಟವನ್ನೇ ನಾನು ಮಾಡಿದ್ದೇನೆ ನಾನು ಬೇರೆ ಕಡೆಯಿಂದ ಊಟ ತರಿಸಲಿಲ್ಲ ಏಕೆಂದರೆ ಸಿದ್ದರಾಮಣ್ಣನವರು ನನಗೆ ಒಂದು ಸಲಹೆಯನ್ನು ಕೊಟ್ಟರು ಅವರ ಜಿಲ್ಲೆಯಲ್ಲಿ ನಾನು ಯಾವುದೋ ಒಂದು ಹಳ್ಳಿಗೆ ಹೋದಾಗ ಊಟ ಬೇರೆ ಕಡೆಯಿಂದ ಬಂತು ಎಂದು ಹೇಳಿ ಅವರು ಈ ಸಲಹೆ ಕೊಟ್ಟರು ಅವೊತ್ತು ಎರಡೂವರೆ ಸಾವಿರ ಜನರು ಸೇರಿದ್ದಾಗ ಎಲ್ಲರೂ ಊಟ ಮಾಡುವುದಕ್ಕಾಗಿ ಅಇಲ್ಲಅಂದು ಅಡಿಗೆಯವರನ್ನು ಕರೆಸಿ ಅಡಿಗೆಯನ್ನು ಮಾಡಿಸಿದ್ದರು ಆ ದೃಷ್ಟಿಯಿಂದ ನಾನೂ ಕೂಡ ಅದೆ ಊಟವನ್ನು ಮಾಡಿದೆ ಅದು ನಡೆದ ಘಟನೆ ಇದು ಅದಾದ ಮೇಲೆ ಮಾನ್ಯ ಸಿದ್ಧರಾಮಣ್ಣನವರ ಸಲಹೆಯಂತೆ ಯಾವ ಮನೆಯಲ್ಲಿ ನಾನು ಉಳಿದುಕೊಳ್ಳುತ್ತೇನೋ ಆ ಕುಟುಂಬದವರು ಮಾಡಿದಂಥ ಅಡಿಗೆಯನ್ನೇ ನಾನು ಸ್ವೀಕಾರ ಮಾಡುತ್ತಾ ಬಂದಿದ್ದೇನೆ ಇವೊತ್ತು ಗ್ರಾಮ ವಾಸ್ತವ್ಯ ಕಾರ್ಯಕ್ರಮದಿಂದ ಏನಾಗಿದೆಯೆಂದು ಅವರು ಕೇಳುತ್ತಿದ್ದಾರೆ ಇವೊತ್ತು ವಾಟಾಳ್ ನಾಗರಾಜ್‌ರವರು ಈಗ ಇಲ್ಲಿ ಇಲ್ಲ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಾಗಿದ್ದಾರೆ ಅವರು ಸುದೀರ್ಘವಾಗಿ ಚರ್ಚೆ ಮಾಡಿರತಕ್ಕಂಥದ್ದನ್ನು ನಾನು ನೋಡಿದೆ ಅವರು ಅತಿವೃಷ್ಟಿಯ ಬಗ್ಗೆ ಚರ್ಚೆ ಮಾಡಿರತಕ್ಕಂಥದ್ದು ಒಂದೆರಡು ಪದವೂ ಕೂಡ ಅಲ್ಲಿ ಇಲ್ಲ ಅವರು ಚರ್ಚೆ ಮಾಡಿರತಕ್ಕಂಥದ್ದು ಗ್ರಾಮ ವಾಸ್ತವ್ಯದ ಬಗ್ಗೆ, ಎಂ ಪಿ ಪ್ರಕಾಶ್‌ರವರ ನೋವು ನಲಿವು, ಅವರ ಮುಖದಲ್ಲಿರತಕ್ಕಂಥ ಚಹರೆ, ಇದರ ಬಗ್ಗೆಯೇ ಬಹಳ ವಿಷಯ ಚರ್ಚೆ ಮಾಡಿ ಸರ್ಕಾರದಲ್ಲಿ, ಪಾಪ ಅವರು ಬಹಳ ಉಸಿರುಗಟ್ಟುವ ವಾತಾವರಣದಲ್ಲಿದ್ದಾರೆ, ಅವರ ಮನಸ್ಸಿಗೆ ಬಹಳ ನೋವಾಗಿದೆ, ಹೀಗೆಲ್ಲಾ ಅವರು ಮಾತನಾಡಿ ಆ ಚರ್ಚೆಗೆ ಮಾತ್ರವೇ ಸೀಮಿತವಾಗಿರುವುದನ್ನು ಬಿಟ್ಟರೆ ಈ ಒಂದು ಅತಿವೃಷ್ಟಿಯ ಬಗ್ಗೆ ಚರ್ಚೆ ಮಾಡಿರತಕ್ಕಂಥದ್ದು ಕಡಿಮೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡುತ್ತಾ, ಗ್ರಾಮ ವಾಸ್ತವ್ಯದ ಬಗ್ಗೆ ಕೇಳಿದ್ದಾರೆ ಬದಜಮೋಳೆ ಗ್ರಾಮಕ್ಕೆ ನಾನು ಹೋಗಿದ್ದೇನೆ ಇವತೊತ್ತು ಆ ಊರಿನಲ್ಲಿರತಕ್ಕಂಥ ಎಲ್ಲಾ ಮನೆಗಳನ್ನು ಶಾಶ್ವತವಾದಂಥ ಮನೆಗಳನ್ನೇನು ನಾವು ಕಟ್ಟಿದ್ದೇವೆ, ಊರಿಗೆ ಒಳಚರಂಡಿ ವ್ಯವಸ್ಥೆ ಇರಬಹುದು, ರಸ್ತೆಗಳ ಕೆಲಸವಿರಬಹುದು, ಹಾಗೂ ಆ ಬಡ ಕುಟಂಬಗಳಿಗೆ ಆರ್ಥಿಕವಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಯಾವ ಯಾವ ರೀತಿಯ ಒಂದು ಅನುದಾನಗಳನ್ನು ಕೊಟ್ಟಿದ್ದೇವೆ, ಆರ್ಥಿಕವಾದ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ,

ಇದನ್ನೆಲ್ಲಾ ಚಾಮರಾಜನಗರದ ಪ್ರತಿನಿಧಿಯಾಗಿ ಅವರು ಏನು ಕೆಲಸ ಮಾಡುತ್ತಿದ್ದಾರೆ ಅವರು ಇವೊತ್ತು ಆ ಹಳ್ಳಿಗೆ ಹೋಗಿ ಅಲ್ಲಿ ನಾವು ಏನು ಕೆಲಸ ಮಾಡಿದ್ದೇವೆ ಎನ್ನುವುದನ್ನು ನೋಡಾದರೂ ಅವರು ನನಗೆ ಮೆಚ್ಚುಗೆ ವ್ಯಕ್ತಪಡಿಸುವುದು ಬೇಡ, ಇವೊತ್ತು ಈ ಗ್ರಾಮ ವಾಸ್ತವ್ಯದ ಕಾರ್ಯಕ್ರಮದಿಂದ ಎಷ್ಟು ಅನುಕೂಲಗಳಾಗಿದೆ ಎನ್ನುವುದನ್ನು ಅರಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಈ ತಿಂಗಳ ಜುಲೈ 26ನೇ ತಾರೀಖು ದೇವದುರ್ಗಕ್ಕೆ ನಾನು ಭೇಟಿ ಕೊಡುತ್ತಿದ್ದೇನೆ ಆ ಊರಿನಲ್ಲಿ ಸಂಪೂರ್ಣವಾದ ಅಭಿವೃದ್ಧಿಗೆ ಈಗಾಗಲೇ ಚಾಲನೆ ಕೊಟ್ಟಿರತಕ್ಕಂಥದ್ದರ ಬಗ್ಗೆ ಇವೊತ್ತೇನು ಕೆಲವು ಪತ್ರಿಕೆಗಳಲ್ಲಿ ವರದಿ ಬಂದಿದೆ

ಶ್ರೀ ಜೆ ಸಿ ಮಾಧುಸ್ವಾಮಿ ನಾವು ಇದನ್ನೇ ಟೀಕೆ ಮಾಡುತ್ತಿರುವುದು ಯಾವುದೋ ಒಂದು ಊರಿನಲ್ಲಿ ಯಾವುದೋ ಒಂದು ಮನೆಯನ್ನು ಮುಖ್ಯಮಂತ್ರಿಗಳು ಹೋಗಿ ಡೆವಲಪ್ ಮಾಡಿಬಿಟ್ಟರೆ ಅದು ಸಮಗ್ರ ಅಭಿವೃದ್ಧಿ ಆದಂತಾಯಿತೇ? ನೀವೇ ಹೋಗಬೇಕಲ್ಲ ಇವೊತ್ತು ಅಲ್ಲಿಯ ಜನರಿಗೆ ಕುಡಿಯುವ ನೀರನ್ನು ಕೊಡಿಸುವುದಕ್ಕೆ ನೀವೇ ಹೋಗಿ ಅಲ್ಲಿ ಒಂದು ರಸ್ತೆಯನ್ನು ಮಾಡಿಸಬೇಕಲ್ಲ, ಶಾಸಕರಾಗಿ ಇನ್ನು ಏಕೆ ಅಲ್ಲಿ ನಾವಿರಬೇಕು? ಇದುವರೆಗೆ ಶಾಸಕರು ಎಲ್ಲಿ ಇದ್ದರೂ ಕೂಡ ಈ ಕೆಲಸಗಳು ಇನ್ನೂ ಏಕೆ ನಡೆದಿರಲಿಲ್ಲ ಎಂದು ಯಾವ ಶಾಸಕರ ಮೇಲಾದರೂ ನೀವು ಆ್ಯಕ್ಷನ್ ತೆಗೆದುಕೊಂಡಿದ್ದೀರ? ಸ್ವಲ್ಪ ಯೋಚನೆ ಮಾಡಿ ಸಾರ್, ನೀವು ಹೋಗಿ ಬಂದಿರಿ ಎಂದು ಹೇಳಿ ಒಂದು ಊರು ಉದ್ಧಾರ ಆಗಿಬಿಟ್ಟರೆ ಪ್ರತಿ ಊರಿನಲ್ಲಿಯೂ ಶಾಸಕರನ್ನು ಏನೂ ಕೇಳುವುದಿಲ್ಲ, ಅವರು ಏನು ಕೇಳುತ್ತಾರೆಂದರೆ ಮುಖ್ಯಮಂತ್ರಿಗಳನ್ನು ನಮ್ಮ ಊರಿಗೆ ಕರೆದುಕೊಂಡು ಬಂದು ಇಲ್ಲಿ ಮಲಗಿಸಿ ಇಲ್ಲಿ ಮಲಗಿಸಿ, ಇಲ್ಲಿ ಮಲಗಿಸಿ, ಅದರಿಂದ ನಮ್ಮ ಊರು ಅಭಿವೃದ್ಧಿ ಆಗುತ್ತದೆ ಎಂದು ನಮ್ಮನ್ನು ಕೇಳುವುದಕ್ಕೆ ಶುರು ಮಾಡುತ್ತಾರೆ ಆಗ ನಾವೇನು ಅವರಿಗೆ ಹೇಳಬೇಕು ಹೇಳಿ ನಾವು ಮಲಗಿಕೊಳ್ಳುತ್ತೇವೆಂದರೆ ನಮಗೆ ಜಾಗ ಕೊಡುವುದಿಲ್ಲ ನಿಮಗೂ ಕೂಡ ಎಲ್ಲ ಊರಿಗೂ ಹೋಗಿ ಮಲಗಿಕೊಳ್ಳುವುದಕ್ಕೆ ಆಗುವುದಿಲ್ಲ ಹೀಗಾದರೆ ನಮ್ಮ ಗತಿ ಏನು ಹೇಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಈ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಎಲ್ಲ ಜನಪ್ರತಿನಿಧಿಗಳೂ ಕೂಡ ಕೈಗೊಳ್ಳುವುದಕ್ಕೆ ತೀರ್ಮಾನ ಮಾಡುವುದಾದರೆ ಎಲ್ಲ ರೀತಿಯ ಸಹಕಾರವನ್ನು ಸರ್ಕಾರ ಕೊಡತಕ್ಕಂಥದ್ದಕ್ಕೆ ಇವೊತ್ತೇ ತೀರ್ಮಾನ ಮಾಡುವುದಕ್ಕೆ ಸಿದ್ಧರಿದ್ದೇವೆ ಈಗ ನಾನು ಏತಕ್ಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ

ಶ್ರೀ ಜೆ ಸಿ ಮಾಧುಸ್ವಾಮಿ ನೋ, ನೋ, ನೋ, ಆ ರೀತಿ ಇಲ್ಲ ನೀವು ಈ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಎಲ್ಲರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಬಗೆಹರಿಸುವುದಕ್ಕೆ ಏನಾದರೂ ನೀವು ಪ್ರಯತ್ನ ಮಾಡಿ ಎಂದು ನಾವು ಹೇಳಿದರೆ, ನೀವು ನಾನೇ ಹೋಗುತ್ತೇನೆ ಆ ಊರು ಇಂಪ್ರೂವ್ ಆಯಿತು, ನಾನೇ ಹೋಗುತ್ತೇನೆ ಆ ಮನೆ ಇಂಪ್ರೂವ್ ಆಯಿತು ಎಂದರೆ ಹೇಗೆ ನಾನು ಈ ಬಗ್ಗೆಯೇ ಕೇಳಿದ್ದೇನೆ ಎಷ್ಟು ಮನೆಗಳಿಗೆ ಹೋಗುತ್ತೀರ?, 5 ಕೋಟಿ ಜನರ ಮನೆಗೂ ನೀವು ಹೋಗುತ್ತೀರ? ಎಷ್ಟು ಅಂತರ್ಜಾತಿ ಸಮಸ್ಯೆಯನ್ನು ನೀವು ಬಗೆಹರಿಸುತ್ತೀರಿ?

(ಗೊಂದಲ)

ಶ್ರೀ ಸಿದ್ಧರಾಮಯ್ಯ ಈಗ ಮುಖ್ಯಮಂತ್ರಿಗಳು ಮಾತನಾಡುತ್ತಾ ಎಲ್ಲ ಎಂ ಎಲ್ ಎ ಗಳು ಇದೇ ರೀತಿ ಮಾಡಿದರೆ, ಎಲ್ಲ ಮಂತ್ರಿಗಳು ಹೀಗೆ ಮಾಡಿದರೆ ಸಮಸ್ಯೆ ಬಗೆಹರಿಯಬಹುದು ಎಂದು ಹೇಳಿದರು, ನಾನು ಹೇಳುವುದೇನೆಂದರೆ ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ಒಂದು ರಸ್ತೆ ರಿಪೇರಿ ಮಾಡುತ್ತಾರೆ, ಹತ್ತು ಮನೆಗಳನ್ನು ಅಲ್ಲಿ ಮಂಜೂರು ಮಾಡಿಕೊಟ್ಟು ಬಿಡುತ್ತಾರೆ ಆದರೆ ಶಾಸಕರು ಗ್ರಾಮಕ್ಕೆ ಹೋಗಿ ಅಲ್ಲಿ ಮಲಗಿಕೊಂಡು ಬಿಟ್ಟರೆ ತಕ್ಷಣ ಅಲ್ಲಿ ಹತ್ತು ಮನೆಗಳನ್ನು ಮಂಜೂರು ಮಾಡಿಬಿಡುತ್ತಾರೆಯೇ? ಇದ್ದಕ್ಕಿದ್ದ ಹಾಗೆ ಅಲ್ಲಿ ರಸ್ತೆ ರಿಪೇರಿ ಮಾಡಿಬಿಡುತ್ತಾರೆಯೇ? ಹೋಗಲಿ ನೀವೇ ಹೋಗಿ ನಿಮ್ಮ ಕ್ಷೇತ್ರಕ್ಕೆ ಹೋಗಿ ಮಲಗಿಕೊಂಡು ಬಿಡಿ, ಇವೆಲ್ಲಾ ಬಂದುಬಿಡುತ್ತದೆಯೆ? ಒಟ್ಟು 27 ಸಾವಿರ ಹಳ್ಳಿಗಳಿವೆ, ಮುಖ್ಯಮಂತ್ರಿಗಳೇನೋ 32 ಹಳ್ಳಿಗಳಿಗೆ ಹೋದಾಕ್ಷಣ ಈ 27 ಸಾವಿರ ಹಳ್ಳಿಗಳ ಉದ್ಧಾರವಾಗಿ ಬಿಡುತ್ತದೆಯೇ ಇಲ್ಲೆಲ್ಲಾ ಸಮಗ್ರ ಅಭಿವೃದ್ಧಿಯಾಗಿಬಿಡುತ್ತದೆಯೇ ಅದು ನಮ್ಮ ಪ್ರಶ್ನೆ ಈ ಕೆಲಸವನ್ನು ಇಲ್ಲಿ ಇದ್ದುಕೊಂಡೇ ಅವರು ಮಾಡುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಸಿದ್ಧರಾಮಣ್ಣನವರು ಕೇಳಿರುವುದಕ್ಕೆ ಈಗಲೇ ನಾನು ಉತ್ತರವನ್ನು ಕೊಡುತ್ತೇನೆ ಇವೊತ್ತು ಸುವರ್ಣ ಗ್ರಾಮೋದಯದ ಕಾರ್ಯಕ್ರಮವನ್ನು ಏನು ಪ್ರಾರಂಭ ಮಾಡಿದ್ದೇವೆ ಅದರಲ್ಲಿ ವರ್ಷಕ್ಕೆ ಒಂದು ಸಾವಿರ ಗ್ರಾಮಗಳನ್ನು ಆಯ್ಕೆ ಮಾಡಲಾಗುತ್ತದೆ ಸುಮ್ಮಸುಮ್ಮನೆ ಮಾಡುವುದಕ್ಕೆ ಆಗುವುದಿಲ್ಲ ಇವೊತ್ತು ಸುವರ್ಣ ಗ್ರಾಮೋದಯದ ಕಾರ್ಯಕ್ರಮವನ್ನು ಮಾಡಿ ವರ್ಷಕ್ಕೆ ಒಂದು ಸಾವಿರ ಗ್ರಾಮಗಳನ್ನು ಆಯ್ಕೆ ಮಾಡಿ ಒಂದು ಕೋಟಿಯಿಂದ

ಮೂರು, ಮೂರೂವರೆ ಕೋಟಿಯವರೆಗೆ ಖರ್ಚು ಮಾಡಿ ಆ ಹಳ್ಳಿಯ ಅಭಿವೃದ್ಧಿಗೆ ವಿವಿಧ ಇಲಾಖೆಗಳಡಿಯಲ್ಲಿ ಹಣ ಬಿಡುಗಡೆ ಮಾಡಿ ಕೆಲಸ ಮಾಡಿಸುವುದಕ್ಕೆ ನಾವು ಕಾರ್ಯಕ್ರಮವನ್ನು ಮಾಡಿದ್ದೇವೆ ಅದಕ್ಕೆ ಮೂಲ ಈ ಗ್ರಾಮ ವಾಸ್ತವ್ಯವೇ ಆಗಿದೆ ಯಾವುದೇ ಮೂವತ್ತು ಹಳ್ಳಿಗೆ ನೀವು ಹೋಗಿರಬಹುದು ಎಂದು ನನಗೆ ನೀವು ಹೇಳುತ್ತಿದ್ದೀರಿ ಈ ಸುವರ್ಣ ಗ್ರಾಮೋದಯ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದು ಈ ಗ್ರಾಮ ವಾಸ್ತವ್ಯದ ಹಿನ್ನಲೆಯೊಳಗೆ ಎಂದು ನಾನು ಸ್ಪಷ್ಟೀಕರಣ ಕೊಡುವುದಕ್ಕೆ ಬಯಸುತ್ತೇನೆ ವರ್ಷಕ್ಕೆ ಇಷ್ಟು ಹಳ್ಳಿಗಳು ಎಂದು ಏತಕ್ಕೆ ತೀರ್ಮಾನ ಮಾಡಿದ್ದೇವೆಂದರೆ ಎಲ್ಲ ಹಳ್ಳಿಗಳಿಗೂ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದಲೇ ಕೇವಲ ಪ್ರಚಾರಕೋಸ್ಕರ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡುತ್ತಿದ್ದಾರೆ ಎಂದು ನೀವು ಪದೇ ಪದೇ ಹೇಳುತ್ತಿರುವುದು ಸರಿಯಲ್ಲವೆಂದು ಹೇಳುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ

ಡಾ ಹೆಚ್ ಸಿ ಮಹದೇವಪ್ಪ ಸುವರ್ಣ ಗ್ರಾಮೋದಯ ಕಾರ್ಯಕ್ರಮವನ್ನು ಮಾಡಿದ್ದು ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯದ ಹಿನ್ನಲೆಯಿಂದ ಅಲ್ಲ ಸ್ವಾತಂತ್ರ್ಯ ಬಂದ ಮೇಲೆ, ಕರ್ನಾಟಕ ರಾಜ್ಯವೆಂದು ಫಾರ್ಮೇಶನ್ ಆಗಿ 50 ವರ್ಷಗಳಿಂದ ಹಿನ್ನಲೆಯಲ್ಲ ಈ ರೀತಿ ಮಾಡಬೇಕೆಂದು ಆಯಿತು

ಶ್ರೀ ಹೆಚ್ ಡಿ ಕುಮಾರಸ್ವಾಮಿ . ತಾವು ಯಾವುದನ್ನು ಎಲ್ಲಿ ತರುತ್ತಿದ್ದೀರಿ ಹೇಳಿ ಯಾವ ಇಲಾಖೆಯಲ್ಲಿ ಈ ರೀತಿ ಆಯಿತು ಹೇಳಿ

ಡಾ ಹೆಚ್ ಸಿ ಮಹದೇವಪ್ಪ ಮುಖ್ಯಮಂತ್ರಿಗಳು ಯಾವುದೋ ಒಂದು ಗ್ರಾಮಕ್ಕೆ ಹೋಗಿ ಅಲ್ಲಿ ವಿಷಯಗಳನ್ನು ತಿಳಿದುಕೊಂಡು ಬಂದ ಹಿನ್ನಲೆಯಿಂದ ಈ ಕಾರ್ಯಕ್ರಮ ಮಾಡಿಲ್ಲ

ಶ್ರೀ ಹೆಚ್ ಡಿ ಬಸವರಾಜು ಮಹದೇವಪ್ಪನವರೆ, ಅದಕ್ಕೆ ಕಲ್ಪನೆ ತೆಗೆದುಕೊಂಡು ಬಂದವರ್‍ಯಾರು ಹೇಳಿ ಆ ಕಲ್ಪನೆ ಬರುವುದಕ್ಕೆ ಗ್ರಾಮ ವಾಸ್ತವ್ಯದಿಂದ ಸಾಧ್ಯವಾಯಿತಲ್ಲವೇ? ಏಕೆಂದರೆ ಇಷ್ಟು ವರ್ಷ ಬೇರೆ ಯಾರೂ ಮಾಡದೇ ಇರುವಂಥ ಆ ಕಲ್ಪನೆಯನ್ನು ಜಾರಿಗೆ ತರಲು ಅವರು ಸಹಕಾರ ಮಾಡುತ್ತಿದ್ದಾರೆ ನೀವು ಅದನ್ನು ಜೀರ್ಣ ಮಾಡಿಕೊಳ್ಳಿ

ಡಾ ಹೆಚ್ ಸಿ ಮಹದೇವಪ್ಪ ಕುಗ್ರಾಮ ಸುಗ್ರಾಮ ಮಾಡಿದ್ದು ಕಾಂಗ್ರೆಸ್ ಸರ್ಕಾರ ಅವಧಿಯಲ್ಲಿ ಇದ್ದಾಗ ರಾಜ್ಯಾಂಗದಲ್ಲಿ ಹಕ್ಕಿರುವಂತೆ ಮುಖ್ಯಮಂತ್ರಿಗಳು ಎಲ್ಲಿಗೆ ಬೇಕಾದರೂ ಹೋಗಬಹುದು ಅದಕ್ಕೆ ಯಾರ ಅಭ್ಯಂತರವೂ ಇರುವುದಿಲ್ಲ ಆದರೆ ಅವರ ಗ್ರಾಮ ವಾಸ್ತವ್ಯಕ್ಕೂ ಮತ್ತು ಸುವರ್ಣ ಗ್ರಾಮೋದಯದ ಕಾರ್ಯಕ್ರಮಕ್ಕೂ ಸಂಬಂಧವಿಲ್ಲ

ಶ್ರೀ ಹೆಚ್ ಟಿ ಕೃಷ್ಣಪ್ಪ ಮಾನ್ಯ ಅಧ್ಯಕ್ಷರೆ, ಮಹದೇವಪ್ಪನವರು ಆರ್ ಡಿ ಪಿ ಆರ್ ಸಚಿವರಾಗಿದ್ದರು ಆಗ ಇದನ್ನು ಅವರು ಎಕ್ಸಿಕ್ಯೂಟರ್ ಮಾಡುವುದಕ್ಕೆ ಆಗಲಿಲ್ಲ ಇಲ್ಲಿ ಹಳ್ಳಿ ವಾಸ್ತವ್ಯವೇ ಮುಖ್ಯ

ಡಾ ಹೆಚ್ ಸಿ ಮಹದೇವಪ್ಪ ಮಾನ್ಯ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡಿದ್ದಕ್ಕೂ ಈ ಸುವರ್ಣ ಗ್ರಾಮೋದಯ ಕಾರ್ಯಕ್ರಮಕ್ಕೂ ಸಂಬಂಧವಿಲ್ಲ ಅವರ ಅನುಭವದಲ್ಲಿ ಇದನ್ನು ಮಾಡಬೇಕೆಂದು ಬಂದಿರಬಹುದು ಅದಕ್ಕೆ ಮೊದಲೇ ಈ ಕಾರ್ಯಕ್ರಮಗಳನ್ನು ಮಾಡಲಾಗಿತ್ತು

ಶ್ರೀ ಹೆಚ್ ಡಿ ಬಸವರಾಜು ಯಾರು ಮಾಡಿದ್ದರು ಸ್ವಾಮಿ ಯಾರು ಮಾಡಿದ್ದರು? ಯಾರೂ ಹಿಂದೆ ಮಾಡದೇ ಇರುವಂಥದ್ದನ್ನು ಇಲ್ಲಿ ಹೇಳುವುದಕ್ಕೆ ಹೋಗಬೇಡಿ ಈಗ ಮಾಡಿರುವಾಗ ಅಂಥವರಿಗೆ ನೀವು ಶಹಭಾಸ್‌ಗಿರಿ ಕೊಡಿ

(ಗೊಂದಲ)

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಬೇಡಿ ಅವರು ಈಗ ಉತ್ತರ ಕೊಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ,

ಡಾ ಹೆಚ್ ಸಿ ಮಹದೇವಪ್ಪ . ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಒಬ್ಬ ದೇವದಾಸಿ ಮಹಿಳೆ ಹಲವಾರು ಕಛೇರಿಗಳಿಗೆ ಅಲೆದು ಅಲೆದು ಸುಸ್ತಾಗಿರುವುದನ್ನು ಗ್ರಾಮ ವಾಸ್ತವ್ಯದಲ್ಲಿ ಹೇಳಿದಳು ಆಗ 25 ಸಾವಿರ ರೂಪಾಯಿಗಳ ಚೆಕ್ ಕೊಡುವುದಕ್ಕೆ ಅಧಿಕಾರಿಗಳಿಗೆ ನಾನು ಹೇಳಿದೆ ಎಂದು ಹೇಳಿದರು What does is speak? It speak lack of government. ಹೆಚಂ ಐ ವಿ ಪೀಡಿತರ ಮನೆಗೆ ಹೋಗಿ ಮಲಗಲಿ ಅಧ್ಯಕ್ಷರೆ, ಯಾರ ಅಭ್ಯಂತರವೂ ಇಲ್ಲ

(ಗೊಂದಲ)

ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೋ ಬೇಡವೋ ಹೇಳಿ ಈ ರೀತಿ ಎಲ್ಲರೂ ಮಾತನಾಡಿದರೆ ಹೇಗೆ ಎಲ್ಲರೂ ಕುಳಿತುಕೊಳ್ಳಿ ಎಷ್ಟು ಸಾರಿ ಹೇಳಿದರೂ ಕೂಡ ಹೀಗೇ ಮಾಡುತ್ತೀರಲ್ಲ ಮುಖ್ಯಮಂತ್ರಿಗಳೆ, ತಾವು ಮಾತನಾಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ನರೇಂದ್ರಬಾಬುರವರು ಇಂದು ಬೆಳಗ್ಗೆ ಪ್ರಶ್ನೋತ್ತರ ಅವಧಿಯಲ್ಲಿ ಜನತಾ ದರ್ಶನದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು ದೇವರಾಜ ಅರಸುರವರ ಆಡಳಿತದ ಅವಧಿಯಲ್ಲಿ ನಡೆದ ಒಂದು ಘಟನೆಯನ್ನು ಅವರು ಪ್ರಸ್ತಾಪ ಮಾಡಿದ್ದರು ಆಗ ಮಹದೇವಪ್ಪನವರು ಇದ್ದರೋ ಇರಲಿಲ್ಲವೋ ನನಗೆ ಗೊತ್ತಿಲ್ಲ ದೇವರಾಜ ಅರಸರುರವರ ಹತ್ತಿರಕ್ಕೆ ಒಬ್ಬರು ಒ ಎ ಪಿ ಯೋಜನೆಯಲ್ಲಿ ತಮಗೆ ಪೆನ್‌ಶೆನ್ ಕೊಡಿಸಬೇಕೆಂದು ಹೇಳಿ ಅರ್ಜಿಯನ್ನು ಹಿಡಿದುಕೊಂಡು ಹೋದಂಥ ಸನ್ನಿವೇಶವನ್ನು ಮಾನ್ಯ ನರೇಂದ್ರ ಬಾಬುರವರು ಬೆಳಗ್ಗೆ ಪ್ರಸ್ತಾಪ ಮಾಡಿದರು

ಹಾಗಾದರೆ ಮಾನ್ಯ ದೇವರಾಜು ಅರಸುರವರು ಎಂಟು ವರ್ಷ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸುವಂತಹ ಸಂದರ್ಭದಲ್ಲಿ ಆಡಳಿತ ಯಂತ್ರ ಸರಿಯಾಗಿ ಸಮರ್ಥವಾಗಿ ಕೆಲಸ ಮಾಡಲಿಲ್ಲವೆಂದು ಅರಿಗೆ ದೋಷವನ್ನು ಹೋರಿಸುತ್ತೀರಾ?

ಡಾ ಹೆಚ್ ಸಿ ಮಹದೇವಪ್ಪ ಮಾನ್ಯ ಮುಖ್ಯಮಂತ್ರಿಯವರು ಗ್ರಾಮ ವಾಸ್ತವ್ಯ ಮಾಡುವ ವಿಚಾರದಲ್ಲಿ ಯಾರ ಅಭ್ಯಂತರವೂ ಇಲ್ಲ ಸಂವಿಧಾನದಲ್ಲಿ ಜನ ಯಾವರೀತಿ ಬದುಕಬೇಕು ಎಂದು Fundamental Rights ಮುಖಾಂತರ provision ಮಾಡಿದ್ದಾರೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ ಆ ಸ್ಥಳೀಯ ಸಂಸ್ಥೆಗಳ ರಾಜ್ಯಾಂಗಬದ್ಧ ಹಕ್ಕನ್ನು ಮೊಟಕು ಮಾಡಿ, ಅಲ್ಲಿರುವವರನ್ನೆಲ್ಲಾ ಬಿಟ್ಟು, ನೀವು ಅಧಿಕಾರ ಮಾಡುವ ಬದಲು ಸರ್ಕಾರ ಅಲ್ಲಿರುವಾಗ, ಅವರ ವಿಶ್ವಾಸವನ್ನು ತೆಗೆದುಕೊಂಡು ನೀವು ಮಾಡಿ ದಯವಿಟ್ಟು ಆ ರೀತಿ ಮಾಡಿ ಮಾನ್ಯ ಉಪ ಮುಖ್ಯಮಂತ್ರಿಗಳು ಗ್ರಾಮೀಣ ಅಭಿವೃದ್ಧಿ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿದ್ದಜರು Why don't you take all those institutions into condence? They are also elected bodies, constitutionally created bodies

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯದ ಬಗ್ಗೆ ಚರ್ಚೆ ಮಾಡಿದಿರಿ ಯಾವುದೇ ಸಂದರ್ಭದಲ್ಲಿ ಯಾರೇ ಆಡಳಿತದಲ್ಲಿ ಇದ್ದರೂ ಕೂಡ ಚರ್ಚೆಗೆ ಇಲ್ಲಿ ಸಂಪೂರ್ಣ ಸ್ವಾತಂತ್ರವಿದೆ ನಿಮ್ಮ ಟೀಕೆಯನ್ನು ನಾವು ಸ್ವಾಗತ ಮಾಡುತ್ತೇವೆ ಹಾಗೂ ಕೊರತೆಯಿದ್ದಲ್ಲಿ ಅದನ್ನು ಸರಿಪಡಿಸಿಕೊಳ್ಳುತ್ತೇನೆ ಆದರೆ ಇವತ್ತು ಒಬ್ಬೊಬ್ಬ ಶಾಸಕರಿಗೆ ಎಂ ಎಲ್ ಎ ನಿಧಿ ಒಂದು ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ ನೀವು ಒಂದು ವರ್ಷದಲ್ಲಿ ನಾಲ್ಕೈದು ಗ್ರಾಮಕ್ಕೆ ಹೋಗಿ ಒಂದು ಕೋಟಿ ರೂಪಾಯಿಯಲ್ಲಿ ಹತ್ತತ್ತು ಲಕ್ಷ ರೂಪಾಯಿ ಖರ್ಚು ಮಾಡಿ, ನಾವೂ ಮಾಡಿದ್ದೇವೆಂದು ಹೇಳಿ ಅದೇ ಗ್ರಾಮದಲ್ಲಿ ಉಳಿದು ಅಲ್ಲಿ ಒಎಪಿ ಮತ್ತೊಂದು, ಮೊಗದೊಂದು ಕೆಲಸಗಳು ಏನಾಗಿಲ್ಲ, ಅಲ್ಲಿಗೆ ಅಧಿಕಾರಿಗಳನ್ನು ಕರೆಸಿ, ಆ ಸಮಸ್ಯೆಗಳನ್ನು ಬಗೆಹರಿಸುವಂತರ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿ

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು ಯಡಿಯೂರಪ್ಪನವರೆ, ಯಾವ ರೀತಿ ಮಾಡಬೇಕು ಎಂದು ನಿಮ್ಮಿಂದ ಕಲಿಯಬೇಕಾಗಿಲ್ಲ ನಮಗೆ ಏನು ಮಾಡಬೇಕೆಂದು ಗೊತ್ತಿದೆ

ಶ್ರೀ ಬಿ ಎಸ್ ಯಡಿಯೂರಪ್ಪ ಇವತ್ತು ಇಡೀ ರಾಜ್ಯದಲ್ಲಿ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯದ ಬಗ್ಗೆ ಸ್ವಾಗತ ಇದೆ ಗ್ರಾಮೀಣ ಜನ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವಾದರೂ, ಯಾರೋ ಒಬ್ಬರು ಮುಖ್ಯಮಂತ್ರಿಯಾದವರು ಇಷ್ಟು ಸಮಯ ಮಾಡಿಕೊಂಡು ಇಲ್ಲಿ ಕುಳಿತು ಸಮಸ್ಯೆ ಕೇಳಿ, ಈ ಸಮಸ್ಯೆ ಇಡೀ ರಾಜ್ಯದಲ್ಲಿ ಇದೆಯೆಂದು ಅದನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಇಲ್ಲದೇ ಇದ್ದರೆ ನೂರು ರೂಪಾಯಿ ಇದ್ದಂತಹ ವಿಧವಾ ವೇತನ, ಅಂಗವಿಕಲ ವೇತನ ಮತ್ತು ವೃದ್ಧಾಪ್ಯ ವೇತನ 400 ರೂಪಾಯಿ ಆಗುತ್ತಿತ್ತೇನು? ಇವತ್ತು ವಿಧವೆಯರಿಗೆ 20,000 ರೂಪಾಯಿ ಸವಲತ್ತು ಒದಗಿಸುತ್ತಿದ್ದೇವಲ್ಲ, ಹಿಂದೆ ಆ ಸವಲತ್ತುಗಳನ್ನು ಯಾರು ಮಾಡಿದ್ದರು? ಸಾಮೂಹಿಕವಾಗಿ ಒಂದು ಹೆಣ್ಣು ಮಗಳಿಗೆ ಮದುವೆಯಾಗುವ ಹುಡುಗಿಗೆ 10,000 ರೂಪಾಯಿ ಕೊಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ ಆ ರೀತಿ ಯಾರು ಮಾಡಿದ್ದರು? ಭಾಗ್ಯಲಕ್ಷ್ಮಿ ಯೋಜನೆ, ಈ ದೇಶದಲ್ಲಿ ಯಾರೂ ಯೋಚನೆ ಮಾಡಿರಲಿಲ್ಲ

ಮಾನ್ಯ ಸದಸ್ಯರು ಇನು ಅದು ಬರಲೇ ಇಲ್ಲ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ ಸುಮಾರು 40 ಲಕ್ಷ ಕುಟುಂಬಗಳಿಗೆ ನೇರವಾಗಿ

(ಗೊಂದಲ)

ಅಧ್ಯಕ್ಷರು ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಲ್ಲರೂ ಕುಳಿತುಕೊಳ್ಳಿ ಆಮೇಲೆ ಏನಾದರೂ ಕೇಳುವುದಿದ್ದರೆ ಕೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಮುಖ್ಯಮಂತ್ರಿಗಳೇ ತಾವು ಇರಲಿಲ್ಲ ಅದಕ್ಕೆ ಕತೆ ಹೇಳಿದ್ದು, ಶೇರ್ವಾನಿ ಪೇಜಾಮ

(ಗೊಂದಲ)

ಅಧ್ಯಕ್ಷರು ಕುಳಿತುಕೊಳ್ಳಿ ದಯಮಾಡಿ ಉತ್ತರ ಕೊಡಲಿ ಮೂರು ಗಂಟೆಯಿಂದ ಇಲ್ಲಿಗೆ ಒಂದೂ ಮುಕ್ಕಾಲು ಗಂಟೆಯಾಯಿತು ಸುಮ್ಮನೆ ಇದರಲ್ಲೇ ಕಳೆದು ಹೋಯಿತು

ಶ್ರೀ ಕೆ ಆರ್ ರಮೇಶ್ ಕುಮಾರ್ ಗ್ರಾಮ ವಾಸ್ತವ್ಯದ ಬಗ್ಗೆ ನೀವು ಹೇಳಿದ ಹಿನ್ನೆಲೆಯನ್ನು ನೋಡಿದಾಗ ಹಳ್ಳಿಗಳಿಂದ ಗೆದ್ದು ಬಂದವರು, ಬೆಂಗಳೂರಿನಲ್ಲಿ ಮನೆ ಮಾಡಿಕೊಂಡು ಐಷಾರಾಮಿಯಾಗಿ ಕಾಲ ತಳ್ಳುವುದು, ಜನ ಸಂಪರ್ಕ ಕಳೆದುಕೊಳ್ಳುವಂತಹ ರಾಜಕಾರಣ ಬರುತ್ತಿದೆ ನಮಗೆ ಅವರ ನಿಕಟ ಸಂಪರ್ಕ ಇರಬೇಕು, ಅವರುಗಳ ಮಧ್ಯೆ ಇರಬೇಕು, ಅಧಿಕಾರ ಇದ್ದವರು ಅಲ್ಲಿಗೆ ಹೋದಾಗ ಒಂದು ರೀತಿಯ warning ಆಗುತ್ತದೆ, ಒಂದು message ಕೊಡುತ್ತದೆ ಎನ್ನುವುದು ಸರಿ ನಾವು ನಿಮಗೆ ಇಷ್ಟೇ request ಮಾಡಿಕೊಳ್ಳುವುದು, ಇದೆಲ್ಲಾ ಚೆನ್ನಾಗಿದೆ, ಆದರೆ ನೀವು halt ಮಾಡುವಾಗ ಸ್ವಲ್ಪ information ಕೊಟ್ಟು ಹೋಗಿ ಎಂದು ಹೇಳುತ್ತಿರುವುದ ಹೋದಬಾರಿ session ನಡೆಯುತ್ತಿರುವಾಗ ನೀವು ಎರಡು ಮೂರು ದಿವಸ ಇರಲಿಲ್ಲ ನೀವು ಎಲ್ಲಿದ್ದಿರಿ ಎಂದು ಯಾರಿಗೂ ಗೊತ್ತಾಗಲಿಲ್ಲ ಪೇಪರ್‌ನವರಿಗೂ

ಅನುಮಾನ, ನಮಗೂ ಅನುಮಾನ ಮುಖ್ಯಮಂತ್ರಿಗಳು ಎಲ್ಲಿಗೆ ಹೋದರು ಎಂದು ನಮಗೆ ಆತಂಕವಾಯಿತು ನೀವು ಎಲ್ಲಿಯಾದರೂ ಹೋಗಿ ವಾಸ್ತವ್ಯ ಮಾಡಿ ಆದರೆ notify ಮಾಡಿ ಹೋಗಿ ಅಷ್ಟೇ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ನನಗೆ ಅರ್ಥವಾಗುತ್ತದೆ ಏಕೆಂದರೆ ಮಾನ್ಯ ರಮೇಶ್‌ಕುಮಾರ್‌ರವರು ನನಗೆ ಅವತ್ತು ಒಂದು ಪತ್ರವನ್ನು ಬರದರು ಒಂದು ಸ್ಲಿಪ್ ಕಳುಹಿಸಿದರು ವಿಷಯ ಏನು ಹೇಳುತ್ತಿದ್ದಾರೆ, ತಾಂವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ ನಾನು ಯಾವ ರೀತಿ ನಡವಳಿಕೆ ಇರಬೇಕು ಎಂದು ಯಾರಿಗೋ ಹೆದರಿ ರಾಜಕೀಯ ಮಾಡುವವನಲ್ಲ ಅದಕ್ಕೆ ಪಕ್ಕದಲ್ಲಿ ಇರುವವರಿಗೆ ಕೇಳಿ ಇದಕ್ಕೆ ಯಾರು ಕಾರಣ ಕೇಳಿ ಎಂದು ನಾನು ಕೈಸನ್ನೆ ಮಾಡಿದೆ ಅವರನ್ನಲ್ಲ, ಇದರ ಬಗ್ಗೆ ಚರ್ಚೆ ಬೇಡ ಏತಕ್ಕೋಸ್ಕರ ಈ ರೀತಿ ಸೃಷ್ಟಿ ಮಾಡುತ್ತಾರೆ ಎನ್ನುವುದರ ಬಗ್ಗೆ ಈಗ ಚರ್ಚೆ ಬೇಡ ಆ ವಿಷಯ ರಮೇಶ್‌ಕುಮಾರ್ ಮತ್ತು ನನಗೆ ಗೊತ್ತಿದೆ ಬಿಡಿ

ಶ್ರೀ ಸಿದ್ಧರಾಮಯ್ಯ ನೀವು ವೈಯಿಕ್ತಿಕವಾಗಿ ಏನಾದರೂ ಮಾಡಿಕೊಳ್ಳಿ, ನಮ್ಮದೇನು ತಕರಾರಿಲ್ಲ

ಅಧ್ಯಕ್ಷರು ಅವರು ಮಾತನಾಡುತ್ತಿದ್ದಾರೆ, ಅವರು ಯೀಲ್ಡ್ ಆಗಿಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಂದು ಗೋಖಲೆಯವರು ಗಾಂಧೀಜಿ ಯವರಿಗೆ ಒಂದು ಮಾತು ಹೇಳಿದರು ನೀವು ಹಳ್ಳಿಗಳಿಗೆ ಭೇಟಿ ಕೊಡುವುದರಿಂದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಂತೆ ಆಯಿತಾ ಎಂದು ಆನು ಹೇಳುತ್ತೇನೆ, ಸ್ವಲ್ಪ ಕೇಳಿ ಇವತ್ತು ಗ್ರಾಮವಾಸ್ತವ್ಯ ಕಾರ್ಯಕ್ರಮ ಮತ್ತು ಜನತಾ ದರ್ಶನ ಮಾಡುವುದು ಅಷ್ಟು ಸುಲಭವಲ್ಲ ಅದನ್ನು ಮಾಡಿದಾಗ ಅದರ ಪರಿಸ್ಥಿತಿ ಏನು ಎಂದು ಗೊತ್ತಾಗುತ್ತದೆ ನೀವು ಭಾಷಣ ಮಾಡುವುದಕ್ಕೆ ಹೋಗಿದ್ದೀರಿ ಜನರ ಸಮಸ್ಯೆಗಳನ್ನು ಕೇಳಿದ್ದೀರಾ ಎಂದು ಕೇಳುತ್ತಿದ್ದೇನೆ

ಶ್ರೀ ಸಿದ್ಧರಾಮಯ್ಯ ನಾವು ಹಳ್ಳಿಯಲ್ಲೇ ಹುಟ್ಟಿರುವುದು, ಹಳ್ಳಿಯಲ್ಲೇ ಬೆಳೆದಿರುವುದು ಅಲ್ಲಿ ಹಳ್ಳಿಗೆ ಎಲ್ಲಾ ತೆಗೆದುಕೊಂಡು ಹೋಗಿ ಎದ್ದು ಬರುವುದಕ್ಕೆ ಕಷ್ಟದ ಕೆಲಸವೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾಡಬಹುದಾಗಿತ್ತು ಇವರನ್ನು ಯಾರು ಮಾಡಬೇಡಿ ಎಂದು ಹೇಳಿದರು

(ಗೊಂದಲ)

ಅಧ್ಯಕ್ಷರು ಕುಳಿತುಕೊಳ್ಳಿ, ಎಷ್ಟು ಹೇಳಿದರೂ ಅಷ್ಟೇ

ಒಬ್ಬರು ಮಾನ್ಯ ಸದಸ್ಯರು ವಾಸ್ತವಾಂಶವನ್ನು ಸ್ವಲ್ಪ ಹೇಳುತ್ತೇವೆ, ನಮಗೂ ಸ್ವಲ್ಪ ಅವಕಾಶ ಕೊಡಿ ಈಗ ಕಾಂಗ್ರೆಸ್ ನಾಯಕರಿಗೆ ಒಂದು ಚಿಂತನೆ ಪ್ರಾರಂಭವಾಗಿದೆ

(ಗೊಂದಲ)

ಅಧ್ಯಕ್ಷರು ಸಭಾನಾಯಕರು ಎದ್ದು ನಿಂತಾಗ ವಿರೋಧ ಪಕ್ಷದ ನಾಯಕುರ ಗಂಭೀರವಾಗಿ ಇರಬೇಕು ಅದನ್ನು ಕಲಿತುಕೊಳ್ಳಲಿಲ್ಲವೇ ನಾನೇನು ಮಾಡೋಣ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಮಹೇದವಪ್ಪನವರು ಒಂದು ಸಲಹೆಯನ್ನು ಕೊಟ್ಟರು ಸ್ಥಳೀಯ ಸಂಸ್ಥೆಗಳು, ಸ್ಥಳೀಯ ಜನಪ್ರತಿನಿಧಿಗಳ ಜೊತೆಗ ಸೇರಿ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳಿದರು ನಾನು ಇಲ್ಲಿ ಕ್ಷೇತ್ರದ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಇದು ಆರೇಳು ವರ್ಷಗಳ ಹಿಂದೆ ನಾನು ಒಂದು ಕ್ಷೇತ್ರದಲ್ಲಿ ಕಾರ್ಯಕ್ರಮಕ್ಕೆ ಹೋದಾಗ ಅದಂತಹ ಘಟನೆ ಅಲ್ಲಿ ಒಬ್ಬ ನಮ್ಮ ಪಕ್ಷದ ಕಾರ್ಯಕರ್ತ ಬಂದನು ಆ ಕ್ಷೇತ್ರದಲ್ಲಿ ಇದ್ದಂತಹ ಜನಪ್ರತಿನಿಧಿಗೆ ಆಶ್ರಯ ಮನೆ ಬೇಕೆಂದು ಹಲವಾರು ಬಾರಿ ಅರ್ಜಿಯನ್ನು ಕೊಟ್ಟುಕೊಂಡು ಬಂದಿದ್ದನು ಅಂದು ಆಶ್ರಯ ಮನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಆ ವ್ಯಕ್ತಿ ಬಂದಾಗ ಅಲ್ಲಿಯವರೆಗೂ ಅವನಿಗೆ ಆಶ್ರಯ ಮನೆ ದೊರಕಿರಲಿಲ್ಲ ಅಲ್ಲಿರುವಂತಹ ಜನ ಪ್ರತಿನಿಧಿ ಏನು ಹೇಳುತ್ತಾರೆಂದರೆ, ನೀನು ಬೇರೆ ಪಕ್ಷದವನು, ನಿನಗೆ ಮನೆ ಅವಶ್ಯಕತೆ ಇದ್ದು, ಬೇಕೆ ಬೇಕೆಂದರೆ ನನ್ನ ಪಕ್ಷಕ್ಕೆ ಸೇರು ಎಂದು ಹೇಳುತ್ತಾರೆ ನಾನು ಅವನಿಗೆ ಹಾಳಾಗಿ ಹೋಗಲಿ, ಆ ಪಕ್ಷಕ್ಕೆ ಸೇರಿಬಿಟ್ಟು ಮನೆ allot ಮಾಡಿಸಿಕೊಳ್ಳಪ್ಪ ಎಂದು ಹೇಳಿದೆ ಆದರೆ ಆ ಕಾರ್ಯಕರ್ತ

ನನ್ನ ಕೈ ತುಂಡು ಮಾಡಿದರೂ ನಾನು ಹೋಗಿ ಕೇಳುವುದಿಲ್ಲ, ನನಗೆ ಮನೆ ಬೇಕಿಲ್ಲವೆಂದು ಹೇಳಿದ ಇವತ್ತು ರಾಜಕಾರಣ ಈ ಮಟ್ಟಕ್ಕೆ ಬಂತು ನಿಂತಿದೆ

ಶ್ರೀ ದಿನೇಶ್ ಗುಂಡುರಾವ್ ತಾವು ಅದನ್ನೇ ಮಾಡುತ್ತಿದ್ದೀರಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಸ್ವಲ್ಪ ಕುಳಿತುಕೊಳ್ಳಿ ಹೇಳುತ್ತೇನೆ ಏನು ನಿಮ್ಮ ಕಾಂಗ್ರೆಸ್‌ನವರು ದೊಡ್ಡ ಮಟ್ಟದಲ್ಲಿ ಮಾಡಿದಿರಿ ನನಗೆ ಗೊತ್ತಿದೆ ಏನು ಮಾಡುತ್ತಿದ್ದೀವಿ? ಇರಿ ವಿಷಯವನ್ನು ಹೇಳುತ್ತೇನೆ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಸುಮ್ಮನೆ ಏಕೆ ಹೀಗೆ ಎದ್ದು ನಿಂತುಕೊಳ್ಳುತ್ತೀರಿ?

ಒಬ್ಬರು ಮಾನ್ಯ ಸದಸ್ಯರು ಅವರಿಗೆ ಹೇಳಿ ಸಭಾನಾಯಕರು ಮಾತನಾಡುವಾಗ ಸ್ವಲ್ಪ ಶಾಂತಿಯಿಂದ ಪೂರ್ತಿ ಕೇಳಿ ಆಮೇಲೆ ಪ್ರಶ್ನೆ ಕೇಳುವಂತೆ ಅವರಿಗೆ ಹೇಳಿ ಒಂದೇ ಕಡೆ ಮಾತನಾಡುವುದು ಬೇಡ

ಅಧ್ಯಕ್ಷರು ಕುಳಿತುಕೊಳ್ಳಿ, ಅವರಾದರೂ ಅಷ್ಟೇ, ನೀವಾದರೂ ಅಷ್ಟೇ ಇನ್ನು ಮೇಲೆ ಯಾರು ಎದ್ದು ನಿಂತುಕೊಳ್ಳಬೇಕಾದರೂ ಕೂಡ ನನ್ನ permission ತೆಗೆದುಕೊಳ್ಳಬೇಕು ಅವರು ಮಾತನಾಡುತ್ತಿರುವಾಗ ಯಾರೂ ಕೂಡ ಮಧ್ಯದಲ್ಲಿ ಮಾತನಾಡಬಾರದು ದಯಮಾಡಿ ಅವರ ಉತ್ತರ ಆದಮೇಲೆ ಏನಾದರೂ clarification ಕೇಳುವುದಿದ್ದರೆ ಕೇಳಿ ಅಲ್ಲಿಯವರೆಗೆ ಯಾರೂ ದಯಮಾಡಿ ಎದ್ದು ನಿಂತುಕೊಳ್ಳಬೇಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ದಿನೇಶ್ ಗುಂಡುರಾವ್‌ರವರು ನೀವು ಅದೇ ಕೆಲಸವನ್ನು ಮಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಿದ್ದಾರೆ, ನನ್ನ ಕ್ಷೇತ್ರದಲ್ಲಿ ನಾನೇನಾದರೂ ಒಂದು ಪಕ್ಷದ ರಾಜಕಾರಣ ಮಾಡಿದ್ದರೆ, ಸರ್ಕಾರದ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕಾದರೆ ವೈಯಕ್ತಿಕವಾಗಿ ನಿಂತು ನಾನೇ

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ನನ್ನ ಕ್ಷೇತ್ರದಲ್ಲಿ ಆ ರೀತಿ ಸುಳ್ಳು ರಾಜಕಾರಣವನ್ನು ಮಾಡಿದ್ದರೆ

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ಇವತ್ತು ನಾನೇನಾದರೂ ನನ್ನ ಕ್ಷೇತ್ರದಲ್ಲಿ ಆ ರೀತಿಯ ಕ್ಷುಲ್ಲಕ ರಾಜಕಾರಣ ಮಾಡಿದ್ದರೆ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ನಮ್ಮ ಎಲ್ಲ ಸದಸ್ಯರುಗಳಲ್ಲಿ ನಾನು ಮನವಿ ಮಾಡುತ್ತೇನೆ ಅವರು ಕೇಳತಕ್ಕಂಥ ಪ್ರಶ್ನೆಗಳಿಗೆ ಉತ್ತರ ಕೊಡತಕ್ಕಂಥ ಸಾಮರ್ಥ್ಯವನ್ನು ನೀವು ನನಗೆ ಕೊಟ್ಟಿದ್ದೀರಿ ನನಗೆ ಆ ಸಾಮರ್ಥ್ಯವಿದೆ ಅವರ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಆಗದಿರತಕ್ಕಂಥ ಅಸಮರ್ಥ ನಾನಲ್ಲ ನೀವೂ ಅದೇ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ ಈ ರಾಜ್ಯದಲ್ಲಿ ಹಿಂದೆ ಯಾವುದೇ ಸರ್ಕಾರಗಳು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಪ್ರೌಢಶಾಲೆಗಳನ್ನು, ಜೂನಿಯರ್ ಕಾಲೇಜುಗಳನ್ನು, ಪ್ರಥಮ ದರ್ಜೆ ಕಾಲೇಜುಗಳನ್ನು ಕೊಡತಕ್ಕಂಥ ವಿಷಯದಲ್ಲಿ ಆದ್ಯತೆಯನ್ನು ಕೊಟ್ಟಿದ್ದರು ಎನ್ನುವುದನ್ನು ಸರ್ಕಾರದ ಪ್ರತಿ ವರ್ಷದ ಬಜೆಟ್‌ನಲ್ಲಿಯೇ ಆನು ನೋಡಲಿಕ್ಕೆ ಸಾಧ್ಯವಿದೆ ಹಿಂದಿನ ಸರ್ಕಾರಗಳಲ್ಲಿ ಪ್ರತಿ ವರ್ಷ ಪ್ರಥಮ ದರ್ಜೆ ಕಾಲೇಜುಗಳನ್ನು ಒಂದೋ, ಎರಡೋ ಕೊಡುತ್ತಿದ್ದರು ಇವತ್ತು ನಮ್ಮ ಸರ್ಕಾರದಲ್ಲಿ, ಶಿಕ್ಷಣ ಕ್ಷೇತ್ರಕ್ಕೆ ಸಂಬಧಪಟ್ಟ ಹಾಗೆ 159 ಪ್ರಥಮ ದರ್ಜೆ ಕಾಲೇಜುಗಳನ್ನು ಕೊಟ್ಟಿದ್ದೇವೆ ಅದರ ಪಟ್ಟಿಯನ್ನು ನಾನು ಸದನದ ಮುಂದೆ ಇಡಲಿಕ್ಕೆಸಿದ್ದನಿದ್ದೇನೆ ಇವತ್ತು ಬೆಳಗ್ಗೆ ಮಾತನಾಡುವಾಗ ನಮ್ಮ ಹಿರಿಯ ಸದಸ್ಯರಾದ ಖರ್ಗೆಯವರು, ರಾಮನಗರ, ಹೊಳೆನರಸೀಪುರ, ಹಾಸನ ಜಿಲ್ಲೆಗಳಿಗೆ ಮಾತ್ರ ನಿಮ್ಮ ಸರ್ಕಾರದ ಕಾರ್ಯಕ್ರಮಗಳು ಎಂದು ಹೇಳಿದರು ಇಲ್ಲಿ ಕೊಪ್ಪಳದ ಶಾಸಕರು ಹಾಜರಿರಬೇಕು ಅವರು ನಮ್ಮ ಪಕ್ಷದ ಶಾಸಕರಲ್ಲ ಅವರು ಕಾಂಗ್ರೆಸ್ ಪಕ್ಷ ಸದಸ್ಯರು ಕೊಪ್ಪಳದಲ್ಲಿ 120 ಕೋಟಿ ರೂಪಾಯಿಗಳ ಕೆಲಸಗಳಿಗೆ ನಾವು ಮೊನ್ನೆ ಶಂಕು ಸ್ಥಾಪನೆಯನ್ನು ನೆರವೇರಿಸಿ ಬಂದೆನು ಇವತ್ತು ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿ ಇಡೀ ರಾಜ್ಯದಲ್ಲಿ

ಯಾವಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೋಟಿ ರೂಪಾಯಿಗಳ ವೆಚ್ಚದಲ್ಲಿ transformer, sub station ಗಳನ್ನು ಹಾಕತಕ್ಕಂಥಾದ್ದಕ್ಕೆ ಅನುದಾನವನ್ನು ಕೊಟ್ಟಿದ್ದೇವೆ ಎನ್ನುವುದನ್ನು ಸದನದ ಮುಂದೆ ಇಡಲು ತಯಾರಾಗಿದ್ದೇವೆ ಒಂದು ಪಾಲಿಟೆಕ್ನಿಕ್ ಕಾಲೇಜನ್ನು ರಾಮನಗರಕ್ಕೆ ಕೊಡಲಿಕ್ಕೆ ತೀರ್ಮಾನ ಮಾಡಿದ್ದರು ದು ನನ್ನ ಗಮನಕ್ಕೆ ಬಂದಿರಲಿಲ್ಲ ಅಫ್ಜಲ್‌ಪುರದ ಶಾಸಕರಾದ ಎಂ ವೈ ಪಾಟೀಲರು ನನ್ನ ಮುಂಎದ ಬಂದು, ಅಫ್ಜಲ್‌ಪುರಕ್ಕೆ ಪಾಲಿಟೆಕ್ನಿಕ್ ಕಾಲೇಜನ್ನು ಕೊಟ್ಟಿಲ್ಲ ಎಂದು ಹೇಳಿದರು ರಾಮನಗರದಿಂದ ತೆಗೆದು ಅಫ್ಜಲ್‌ಪುರಕ್ಕೆ ಪಾಲಿಟೆಕ್ನಿಕ್ ಕಾಲೇಜನ್ನು ಕೊಡಿ ಎಂದು ನಾನು ತೀರ್ಮಾನ ಮಾಡಿಸಿದ್ದೇನೆ ದನ್ನು ನಾನು ರಾಮನಗರಕ್ಕೆ ತೆಗೆದುಕೊಳ್ಳಲಿಲ್ಲ ಅದೇ ರೀತಿ, ಚಾಮರಾಜ ನಗರಕ್ಕೆ ಎಂಜಿನಿಯರಿಂಗ್ ಕಾಲೇಜನ್ನು ಕೊಡತಕ್ಕಂಥ ವಿಚಾರದಲ್ಲಿ ಯಾರೂ ನಮ್ಮ ಮುಂದೆ ಪ್ರಸ್ತಾವನೆಯನ್ನು ಇಟ್ಟಿರಲಿಲ್ಲ ವಾಟಾಳ್ ನಾಗರಾಜ್‌ರವರು ಇಟ್ಟಿರಲಿಲ್ಲ, ಯಾರೂ ಇಟ್ಟಿರಲಿಲ್ಲ

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಧರಂಸಿಂಗ್‌ರವರು ಮಾತನಾಡಲು ಪ್ರಯತ್ನಪಟ್ಟರು)

ಶ್ರೀ ಹೆಚ್ ಡಿ ಕುಮಾರಸ್ವಾಮಿ ಒಂದು ನಿಮಿಷ ಕೇಳಿ ನಾನು ಕಡಿಮೆ ಮಾಡುತ್ತೇನೆ ನೀವು ಹೇಳುವುದನ್ನು ನಾವು ಕೇಳಬೇಕು ಆದರೆ

ಶ್ರೀ ಧರ್ಮಸಿಂಗ್ ತಾವು ಬಂದ ಮೇಲೆ ಹೈಸ್ಕೂಲುಗಳನ್ನು, ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೀರಿ ಅದರ ಪಟ್ಟಿಯನ್ನು ತಾವು ಸದನದ ಮುಂದೆ ಇಡಿ ಬೀದರ್‌ಗೆ ಎಷ್ಟು ಕೊಟ್ಟಿದ್ದೀರಿ, ಗುಲ್ಬರ್ಗಕ್ಕೆ ಎಷ್ಟು ಕೊಟ್ಟಿದ್ದೀರಿ, ರಾಯಚೂರಿಗೆ ಎಷ್ಟು ಕೊಟ್ಟಿದ್ದೀರಿ, ಕೊಪ್ಪಳಕ್ಕೆ ಎಷ್ಟು ಕೊಟ್ಟಿದ್ದೀರಿ, ಈ ಭಾಗಕ್ಕೆ ಎಷ್ಟು ಕೊಟ್ಟಿದ್ದೀರಿ ಇವುಗಳೆಲ್ಲವನ್ನು ಹೇಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅದನ್ನು ಸದನದ ಮುಂದೆ ಇಡಲಿಕ್ಕೆ ತಯಾರಾಗಿದ್ದೇವೆ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು ಗುಲ್ಬರ್ಗಕ್ಕೆ ಬೇಕಾಗಿರಲಿಲ್ಲವೆಂದು ಕಾಣುತ್ತದೆ ಏಕೆಂದರೆ ಹಿಂದೆ ತಾವು ಮುಖ್ಯಮಂತ್ರಿಯಾಗಿದ್ದವರು

(ಗೊಂದಲ)

ಶ್ರೀ ಧರ್ಮಸಿಂಗ್ ನೀವು ಹೇಳಲಿಕ್ಕೇ ಹೋಗಬಾರದು

(ಗೊಂದಲ)

ಅಧ್ಯಕ್ಷರು ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿಗಳೇ, ನನ್ನ ಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜು sanction ಮಾಡಿದ್ದನ್ನು ರದ್ದು ಮಾಡಿದ್ದೀರಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಹಾಗಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸೋಣವಂತೆ

ಶ್ರೀ ಧರ್ಮಸಿಂಗ್ ಸುಮ್ಮನೆ ಏಕೆ ಹೇಳುವುದಕ್ಕೆ ಹೋಗುತ್ತೀರಿ? ಹೇಳಲಿಕ್ಕೆ ಹೋಗಬೇಡಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಏನೂ ಹೇಳುವುದಿಲ್ಲ ವಿರೋಧ ಪಕ್ಷದ ನಾಯಕರ ಸಲಹೆಯ ಮೇರೆಗೆ ಎಲ್ಲವನ್ನೂ ನಿಮ್ಮ ಮುಂದೆ ಇಟ್ಟು ಬಿಡುತ್ತೇವೆ ಹೈದರಾಬಾದ್ ಕರ್ನಾಟಕಕ್ಕೆ ಎಷ್ಟು ಪ್ರೌಢಶಾಲೆಗಳನ್ನು, ಜೂನಿಯರ್ ಕಾಲೇಜುಗಳನ್ನು, ಪ್ರಥಮ ದರ್ಜೆ ಕಾಲೇಜುಗಳನ್ನು ಕೊಟ್ಟಿದ್ದೇವೆ ಎನ್ನುವುದೆಲ್ಲವನ್ನೂ ಸದನದ ಮುಂದೆ ಇಡಲಿಕ್ಕೆ ತಯಾರಾಗಿದ್ದೇನೆ ಇದರಲ್ಲಿ ಯಾವುದು ಪಕ್ಷಪಾತ ಎಂದು ತಾವು ಹೇಳಲಿಕ್ಕೆ ಹೊರಟ್ಟಿದ್ದೀರಿ

ಶ್ರೀ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿಗಳೇ, ನಮ್ಮ ಕ್ಷೇತ್ರಕ್ಕೆ ಒಂದು ಡಿಗ್ರಿ ಕಾಲೇಜು ಕೊಟ್ಟು, ನಂತರ ಅದನ್ನು ನೀವು ರದ್ದು ಮಾಡಿದ್ದೀರಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅದನ್ನು ನಾನು confirm ಮಾಡುತ್ತೇನೆ ಪಟ್ಟಿಯನ್ನು ಸದನದ ಮುಂದೆ ಇಡಲಿಕ್ಕೆ ನಾನು ತಯಾರಾಗಿದ್ದೇನೆ

(ಗೊಂದಲ)

ಅಧ್ಯಕ್ಷರು ಸದನದ ಮುಂದೆ ಇಡುತ್ತೇನೆ ಎಂದು ಹೇಳುತ್ತಿದ್ದಾರೆ ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು ಅವರು ಉತ್ತರ ಕೊಟ್ಟ ಮೇಲೆ ಅವಕಾಶ ಕೊಡುತ್ತೇನೆ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಕೊಟ್ಟಿರುವ ಹೈಸ್ಕೂಲುಗಳ ಲಿಸ್ಟ್, ಜೂನಿಯರ್ ಕಾಲೇಜುಗಳ ಲಿಸ್ಟ್, ಡಿಗ್ರಿ ಕಾಲೇಜುಗಳ ಲಿಸ್ಟನ್ನು ಸದನದ ಮುಂದೆ ಇಟ್ಟರೇ ಇಡೀ ರಾಜ್ಯದಲ್ಲಿ ತಾರತಮ್ಯ ಆಗಿದೆಯೋ, ಇಲ್ಲವೋ ಎನ್ನುವುದು ಗೊತ್ತಾಗುತ್ತದೆ ಲಿಸ್ಟನ್ನು eduction ministerರವರು ಮಾಡಿಲ್ಲ, ರೇವಣ್ಣನವರು ಮಾಡಿದ್ದಾರೆ ಎಂದು ಹೇಳುತ್ತಾರೆ ರೇವಣ್ಣನವರು ಏನು ಹೇಳುತ್ತಾರೆಂದರೆ, eduction minister ಮಾಡಿದುದರಲ್ಲಿ ವ್ಯತ್ಯಾಸವಿದೆ ಎಂದು ಹೇಳುತ್ತಾರೆ ಈ ಮೂವರಲ್ಲಿ ಎಲ್ಲಿ ವ್ಯತ್ಯಾಸವಾಗಿದೆಯೋ ಗೊತ್ತಿಲ್ಲ ನಮಗೆ ಮಾತ್ರ ಕೊಕ್ಕೆ ಬಿದ್ದಿದೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ರಾಯಚೂರು, ಬೀದರ್, ಗುಲ್ಬರ್ಗಾ ಈ ಜಿಲ್ಲೆಗಳಿಗೆ ಏನು ಕೊಟ್ಟಿದ್ದೀರಿ, ಅದನ್ನು ಸದನದ ಮುಂದೆ ಇಡಿ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು ಎಲ್ಲ ನನ್ನ ಗಮನದಲ್ಲೇ ಇದೆ ನನಗೆ ಮೊಂಡು ಧೈರ್ಯವೇನಿಲ್ಲ ಏಕೆಂದರೆ, ಮೊಂಡು ಧೈರ್ಯವಿದೆ, ಎದುರಿಸುತ್ತಾರೆ ಎಂದೆಲ್ಲಾ ಪದೇ ಪದೇ ಹೇಳುತ್ತಿರುತ್ತಾರೆ

ಶ್ರೀ ಧರ್ಮಸಿಂಗ್ ಒಳ್ಳೆಯ ಕೆಲಸ ಮಾಡಿದ್ದರೆ ನಾವು ನಿಮ್ಮನ್ನು blame ಮಾಡುವವರಲ್ಲ ಒಳ್ಳೆಯ ಕೆಲಸ ಮಾಡಿದ್ದರೆ ಋಣಿಯಾಗಿರುತ್ತೇವೆ ಆದರೆ, ಎಲ್ಲಿ ಮಾಡಿದ್ದೀರಿ ಎನ್ನುವುದನ್ನು ಹೇಳಿ ಎಂ ವೈ ಪಾಟೀಲ್, ದರ್ಶನಾಪೂರ್‌ರವರನ್ನು ಕೇಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಯಾವ ಯಾವ ತಾಲ್ಲೂಕುಗಳಿಗೆ ಹೈಸ್ಕೂಲುಗಳು, ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದೇವೆ ಎನ್ನುವುದನ್ನು ಇಡಲಿಕ್ಕೆ ತಯಾರಾಗಿದ್ದೇವೆ

ಶ್ರೀ ಬಸವರಾಜ ರಾಯರೆಡ್ಡಿ ನಮಗೆ ಕೊಟ್ಟಿದ್ದಂಥ ಡಿಗ್ರಿ ಕಾಲೇಜನ್ನು ರದ್ದು ಮಾಡಿದ್ದೀರಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಇದ್ದರೆ ನಮ್ಮ ಗಮನಕ್ಕೆ ತನ್ನಿ, ನೋಡೋಣವೆಂದು ಹೇಳಿದ್ದೇನೆ ಪದೇ ಪದೇ ಅದನ್ನೇ ಏಕೆ ಚರ್ಚೆ ಮಾಡುತ್ತೀರಿ

(ಗೊಂದಲ)

ಅಧ್ಯಕ್ಷರು ಅವರು ಉತ್ತರ ಹೇಳಲಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ . ಗ್ರಾಮ ವಾಸ್ತವ್ಯದ ಕಾರ್ಯಕ್ರಮದ ಬಗ್ಗೆ ಮಾತನಾಡಿ, ಅದರಿಂದ ಏನೂ ಆಗಲೇ ಇಲ್ಲ, ಬರೀ ಪ್ರಚಾರಕ್ಕಾಗಿ ಎಂದು ಹೇಳಿದ್ದಾರೆ ನಿನ್ನೆಯ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು ಫೋಟೋ ಬಂದಿದೆ ಸೊಂಟ ಮುರಿದುಕೊಂಡಿರುವ, ಮೂರು ಸಣ್ಣ ಸಣ್ಣ ಮಕ್ಕಳಿರುವ ಒಬ್ಬ ವ್ಯಕ್ತಿ

ಶ್ರೀ ಧರ್ಮಸಿಂಗ್ It ıs an exceptıonal case

ಶ್ರೀ ಹೆಚ್ ಡಿ ಕುಮಾರಸ್ವಾಮಿ Exceptıonal ಅಲ್ಲ ಅಂಥವು ಎಷ್ಟು ಕೇಸುಗಳನ್ನು ಮಾಡಿದ್ದೇನೆ ಎನ್ನುವುದನ್ನು ನಾನು ಸದನದ ಮುಂದೆ ಇಡಲಿಕ್ಕೆ ತಯಾರಾಗಿದ್ದೇನೆ ಗರೀಬಿ ಹಠಾವೋ ಕಾರ್ಯಕ್ರಮದ ಮೂಲಕ ಇಂದಿರಾ ಗಾಂಧಿಯವರು ಬಹಳ ಕ್ರಾಂತಿಕಾರಿಯಾದ ತೀರ್ಮಾನಗಳನ್ನು ತೆಗೆದುಕೊಂಡರು ಎಂದು ಹೇಳಿದರು ಆ ಕಾರ್ಯಕ್ರಮಗಳು ಸರಿಯಾದರೀತಿ ಅನುಷ್ಠಾನಕ್ಕೆ ಬಂದಿದ್ದರೆ, ಇವತ್ತು ನನ್ನ ಮುಂದೆ ಒಂದು ದಿವಸಕ್ಕೆ 10–15 ಸಾವಿರ ಅರ್ಜಿಗಳನ್ನು ಕೂಡತಕ್ಕಂಥ ವ್ಯವಸ್ಥೆ ಇರುತ್ತಿರಲಿಲ್ಲ ಈ ವ್ಯವಸ್ಥೆ 17 ತಿಂಗಳುಗಳ

ನಮ್ಮ ಆಡಳಿತದ ಕಾಲದಲ್ಲಿ ನಿರ್ಮಾಣವಾಗಿರತಕ್ಕಂಥಾದ್ದೇ ಎಂದು ಕೇಳಲಿಕ್ಕೆ ಬಯಸುತ್ತೇನೆ ಸ್ವಾತಂತ್ರ್ಯ ಬಂದು 60 ವರ್ಷಗಳಿಗೆ ಕಾಲಿಡುತ್ತಿದ್ದೇವೆ ಏತಕ್ಕೋಸ್ಕರವಾಗಿ ಹಳ್ಳಿಗಳಲ್ಲಿ ಈ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದನ್ನು ಚರ್ಚೆ ಮಾಡಬೇಕಾಗುತ್ತದೆ ಇವತ್ತು ನಾವು ಸತ್ಯವನ್ನು ಹೇಳಲಿಕ್ಕೆ ಹೋದರೆ ಅದನ್ನು ಕೇಳಲು ತಯಾರಿಲ್ಲ ಒಬ್ಬ ಅಂಗವಿಕಲ ನನ್ನ ಮುಂದೆ ಒಂದು ನೇರವಾಗಿ ನನ್ನ ಜೊತೆಯಲ್ಲಿ ಚರ್ಚೆ ಮಾಡುವಂಥ ವಾತಾವರಣವನ್ನು ನಾನು ಇವತ್ತು ನಿರ್ಮಾಣ ಮಾಡಿದ್ದೇವೆ ಇವತ್ತು ಹಲವಾರು ಜನರು ದೂರವಾಣಿ ಮುಖಾಂತರ ನನ್ನ ಜೊತೆ ಚರ್ಚೆ ಮಾಡಿ ಪರಿಹಾರ ಪಡೆದಿರತಕ್ಕಂಥ ಘಟನೆಗಳಿವೆ ಇತ್ತೀಚೆಗೆ ನಾನು ವಿಧಾನಸೌಧದ ಮೂರನೇ ಮಹಡಿಯ ಸಮಿತಿಯ ರೂಮಿನಿಂದ ಮೀಟಿಂಗ್ ಮುಗಿಸಿಕೊಂಡು ಬರಬೇಕಾದರೆ, ಒಬ್ಬ ಎಂಟು ವರ್ಷದ ಹುಡುಗ ನನ್ನ ಹತ್ತಿ ಬಂದು ನನ್ನ ಕೈ ಹಿಡಿಯುತ್ತಾನೆ

ಶ್ರೀ ಧರ್ಮಸಿಂಗ್ Are you meant for that ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈ ರೀತಿ ನೀವು ಮಾಡಿದ್ದೀರಾ ಎಂದು ದಯವಿಟ್ಟು ಹೇಳಿ ಏಕೆ ನಿಮಗೆ ಇದನ್ನು ಸಹಿಸುವುದಕ್ಕಾಗುವುದಿಲ್ಲ ನೀವೇನು ಮಾಡಿದ್ದೀರಿ ಎಂದು ಹೇಳಿ ?

(ಗೊಂದಲ)

ಶ್ರೀ ಸಿದ್ಧರಾಮಯ್ಯ ಎಲ್ಲರೂ ಮಾಡಿದ್ದಾರೆ ಹೊಸದೇನೂ ಇಲ್ಲ ಅಂಗವಿಕಲರು, ಹಿಂದುಳಿದವರು ಹೀಗೆ ಸಾವಿರಾರು ಜನರನ್ನು ನಾವು ಭೇಟಿ ಮಾಡಿದ್ದೇವೆ ಅದು ಹೊಸ ವಿಚಾರೇನೂ ಅಲ್ಲ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಗ್ರಾಮ ವಾಸ್ತವ್ಯದ ಬಗ್ಗೆ ಅವರ ಅನುಭವಗಳನ್ನು ಅವರು ಹೇಳುತ್ತಿದ್ದಾರೆ ಅದನ್ನು ಕೆಲವರು ಒಪ್ಪಬಹುದು ಕೆಲವರು ಒಪ್ಪದೇ ಇರಬಹುದು ಅವರು ಏನು ಹೇಳುತ್ತಾರೆ ಎಂದು ದಯಮಾಡಿ ಕೇಳಿ ಅದರಲ್ಲಿ ಏನಾದರೂ ಲೋಪಗಳಿದ್ದರೆ, ನಿಮ್ಮ comments ಏನಾದರೂ ಇದ್ರೆ ಅನಂತರ ಹೇಳಿ ಸುಮ್ಮನೆ ಮಧ್ಯಮಧ್ಯದಲ್ಲಿ ಏಕೆ

ಮಾತನಾಡುತ್ತೀರಿ? Let him complete ಅವರು ಏನು ಹೇಳಬೇಕೋ ಹೇಳಲಿ

(ಗೊಂದಲ)

ಡಾ ಹೆಚ್ ಸಿಮಹದೇವಪ್ಪ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಆದರೆ ಹಿಂದೆ ಪ್ರಧಾನ ಮಂತ್ರಿಗಳಾಗಿದ್ದಂಥ ದಿವಂಗತ ರಾಜೀವ್ ಗಾಂಧಿಯವರು, ಸಂವಿಧಾನದ 73ನೇ ಕಲಂಗೆ ತಿದ್ದುಪಡಿ ತಂದು ಅಧಿಕಾರದ ವಿಕೇಂದ್ರೀಕರಣ ಮಾಡುವಾಗ ಅವರು Parliament ಅನ್ನು ಉದ್ದೇಶಿಸಿ ಭಾಷಣ ಮಾಡಿರುವುದನ್ನು ದಯಮಾಡಿ ಮುಖ್ಯಮಂತ್ರಿಗಳು ಓದಬೇಕು

(ಗೊಂದಲ)

ಅಧ್ಯಕ್ಷರು ಅವರು ಏನೂ ಹೇಳುತ್ತಾರೋ ಹೇಳಲಿ ಆಮೇಲೆ ನಿಮಗೆ ಅವಕಾಶವನ್ನು ಕೊಡುತ್ತೇನೆ

(ಗೊಂದಲ)

ಡಾ ಹೆಚ್ ಸಿ ಮಹದೇವಪ್ಪ ಮುಖ್ಯಮಂತ್ರಿಗಳಿಗೆ ನಿಜವಾಗಿ ಗ್ರಾಮೀಣಾಭಿವೃದ್ಧಿಯ ಬಗ್ಗೆ ಕಾಳಜಿ ಇದೆ ಅವರು ಆ ರೀತಿ ಮಾಡಬೇಕೆಂದು ಹೊರಟಿದ್ದಾರೆ, ಸಂತೋಷ ಆದರೆ, ಪ್ರಧಾನ ಮಂತ್ರಿಯಾಗಿದ್ದಂಥ ರಾಜೀವ್ ಗಾಂಧಿಯವರು, ಅಧಿಕಾರ ವಿಕೇಂದ್ರೀಕರಣ ಮಾಡುವಾಗ ಸಂಸತ್ತನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ ದಯಮಾಡಿ ಮುಖ್ಯಮಂತ್ರಿಗಳು ಅದನ್ನು ತರಿಸಿ ಓದಬೇಕು

ಅಧ್ಯಕ್ಷರು ಇಲ್ಲಿ ಪರಿಸ್ಥಿತಿ ಗೋಡಾ ಹೈ, ಮೈದಾನ್ ಹೈ ಎನ್ನುವಂತಾಗಿದೆ ಯಾರು, ಏನು ಬೇಕಾದರೂ ಮಾತನಾಡಬಹುದು ಎನ್ನುವಂತಾಗಿದೆ ಈ ರೀತಿಯಾದರೆ ಯಾರೂ ಈ ಸಭೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ

(ಗೊಂದಲ)

ಶ್ರೀ ಹೆಚ್ ಸಿ ಮಹಾದೇವಪ್ಪ ನನ್ನ ಮನವಿ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಓದಬೇಕು

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ರಾಜೀವ್‌ಗಾಂಧಿಯವರು ತಂದಿರತಕ್ಕಂಥ ಕ್ರಾಂತಿಕಾರಿ ತಿದ್ದುಪಡಿಗಳ ಬಗ್ಗೆ ಮಾನ್ಯ ಮಹಾದೇವಪ್ಪನವರು ಏನು ಹೇಳುತ್ತಿದ್ದಾರೆ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಗ್ರಾಮ ವಾಸ್ತವ್ಯಯ ಏನು ಮಾಡುತ್ತಿದ್ದೀರಿ ಅದು ಸರಿಯಾದದ್ದು ಆದರೆ, ನೀವು ವಾಸ್ತವ್ಯ ಮಾಡುತ್ತಿಲ್ಲ, ಕೇವಲ ಭೇಟಿ ಮಾಡುತ್ತಿದ್ದೀರಷ್ಟೆ ೖಜೆಂಜಿ ಬೇರೆ, ೮ರಿಬಿಢ ಬೇರೆ

(ಗೊಂದಲ)

ಅಧ್ಯಕ್ಷರು ನಾನು ಏನು ಹೇಳುವುದಕ್ಕಾಗುತ್ತದೆ? ನಾನು ಏನೂ ಮಾಡುವುದಕ್ಕಾಗುತ್ತದೆ ಹೇಳಿ ಇವರೆಲ್ಲರನ್ನು ಹಿಡಿದುಕೊಂಡು ಹೊಡೆಯುವುದಕ್ಕಾಗುತ್ತದೆಯೇ? ಎಷ್ಟು ಸಾರಿ ಹೇಳಿದರೂ ಅಷ್ಟೆಯೇ Original ಗುಣ ಹೋಗುವುದಿಲ್ಲ ಆ original ಗುಣ ಮಾತ್ರ ಹೋಗಿಲ್ಲ ಮೊದಲ ಅವರು complete ಮಾಡಿ ಬಿಡಲಿ, ಆಮೇಲೆ clarification ಕೇಳಿ ಎಂದರೆ, ಸುಮ್ಮನೆ ಪಟ ಪಟ ಎಂದು ಮಾತನಾಡುತ್ತಿದ್ದಾರೆ, ಎಲ್ಲರೂ ಕುಳಿತುಕೊಳ್ಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರು ಗ್ರಾಮ ವಾಸ್ತವ್ಯ ಮಾಡಲಿಲ್ಲವೆಂದು ವಿಷಯ ಪ್ರಸ್ತಾಪ ಮಾಡಿದರು ಹೌದು, ಕೊಪ್ಪಳದ ಹಳ್ಳಿಯಲ್ಲಿ ಗ್ರಾಮ ವಾಸ್ತವ್ಯ ಮಾಡಲಿಲ್ಲ

ಶ್ರೀ ಬಸವರಾಜ ರಾಯರೆಡ್ಡಿ ಅಲ್ಲಿ ಮಾತ್ರವಲ್ಲ, ಬೇರೆ ಎಲ್ಲೂ ವಾಸ್ತವ್ಯ ಮಾಡಲಿಲ್ಲ ಕೇವಲ ಭೇಟಿ ಭೇಟಿ ಕೊಟ್ಟು ಬರುತ್ತಿದ್ದೀರಿ ಅದರಂದಾಗಿ, ಪ್ರಯೋಜನವಿಲ್ಲವೆಂದು ಹೇಳಿದೆ

ಅಧ್ಯಕ್ಷರು ಮೊದಲು ಮುಖ್ಯಮಂತ್ರಿಗಳು ಉತ್ತರ ಹೇಳಲಿ ಆಮೇಲೆ ತಾವು ಕೇಳಬಹುದು ರಾಯರೆಡ್ಡಿಯವರೆ, ಅನಂತರ ಕೇಳಬಹುದು

ಶ್ರೀ ಹೆಚ್ ಡಿ ಕುಮಾರಸ್ವಾಮಿ ಈ ವಿಷಯದ ಬಗ್ಗೆ ನೀವು ಲಘುವಾಗಿ ಮಾತನಾಡುತ್ತೀರಲ್ಲಾ, ನಾನು ನಿಮ್ಮೆಲ್ಲರಿಗಿಂತ ಚಿಕ್ಕ ಸದಸ್ಯರ, ಸಣ್ಣವನಿದ್ದೇನೆ ನೀವು ಐದು ಸಲ, ಆರು ಸಲ ಗೆದ್ದು ಬಂದಿದ್ದೀರಿ GDP growth ಬಗ್ಗೆ ನಿನ್ನೆಯ ದಿವಸ ಮಾನ್ಯ ದೇಶಪಾಂಡೆಯವರು ಚರ್ಚೆ ಮಾಡಿದ್ದಾರೆ ಅವರ ಭಾಷಣದಲ್ಲಿ ಆ ಅಂಶವನ್ನು ನಾನು ಗಮನಿಸಿದ್ದೇನೆ GDP growth ಅನ್ನು ಏರಿಸುವುದರಿಂದ ಈ ರಾಜ್ಯದಲ್ಲಿರುವ ಬಡತನವನ್ನು ಬಗೆಹರಿಸಲಿಕ್ಕೆ ಆಗುವುದಿಲ್ಲವೆನ್ನುವುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ನಾನು ಗ್ರಾಮ ವಾಸ್ತವ್ಯಕ್ಕೆ ಹೋಗುವ ಉದ್ದೇಶವೇನೆಂದರೆ, ಎಲ್ಲಾ ಗ್ರಾಮಗಳನ್ನು ನಾನು ಉದ್ಧಾರ ಮಾಡಿಬಿಡುತ್ತೇನೆಂದು ಹೋಗುತ್ತಿಲ್ಲ ಇದನ್ನು ನೀವು ಮೊದಲು ಅರ್ಥ ಮಾಡಿಕೊಳ್ಳಬೇಕು ಮೊನ್ನೆ ನಾನು ಆ ಹಳ್ಳಿಗೆ ಬೆಳಗ್ಗಿನ ಜಾವ 6 ಗಂಟೆಗೆ ನಿದ್ದೆ ಮಾಡುವುದಕ್ಕೆ ಹೋದೆ ಬೆಳಗ್ಗಿನ ಜಾವ ಎರಡೂವರೆ ಮೂರು ಗಂಟೆಯಲ್ಲಿ ಕೊಪ್ಪಳದಲ್ಲಿ ನೇಕಾರರು ಏನು ಅವರ ವೃತ್ತಿಯನ್ನು ನಡೆಸುತ್ತಿದ್ದಾರೆ, ಆ ಊರಿನ ಸಂಪೂರ್ಣ ಜನ ಭಾಗ್ಯ ನಗರದ ಬಡಾವಣೆಯಲ್ಲಿ ಸೇರಿದ್ದರು ಅಲ್ಲಿ ನಾನು ಅವರ ಸಮಸ್ಯೆಗಳನ್ನು ಗಮನಿಸಿದ್ದೇನೆ ಅವರು ಮಗ್ಗದ ಕೆಲಸ ಮಾಡಬೇಕಾದರೆ ಅವರ ಆರೋಗ್ಯದ ಪರಿಸ್ಥಿತಿ ಹೇಗಿದೆ ಎಂಬುದನ್ನೆಲ್ಲ ನಾನು ಗಮನಿಸಿದೆ ವಿಧಾನಸೌಧದಲ್ಲಿ ಕುಳಿತು ಅವರನ್ನ ನಾನು ನೋಡುವುದ ಕ್ಕಾಗುವುದಿಲ್ಲ ಇವತ್ತು ನಿಮಗೆ ನೋವಾಗಬಹುದು ಹೊಟ್ಟೆಕಿಚ್ಚು ಬಹಬಹುದು ಅದಕ್ಕೆ ನಾನೇನೂ ಮಾಡವುದಕ್ಕಾಗುವುದಿಲ್ಲ ಇದನ್ನೇ ಮುಂದುವರಿಸುವುದಾದರೆ ಮುಂದುವರಿಸಿಕೊಳ್ಳಲಿ ಇವರು ನನ್ನ ಜೊತೆಯಲ್ಲಿ ಬರಲಿ ಎಂದು ನಾನು ಆಹ್ವಾನ ನೀಡುತ್ತೇನೆ ನನ್ನ ಕಡೆಯಿಂದ ತಪ್ಪುಗಳೇನಾದರೂ ಆಗಿದ್ದರೆ ಸರಿಪಡಿಸಿಕೊಳ್ಳಲಿಕ್ಕೆ ಅವರು ನನ್ನ ಜೊತೆಯಲ್ಲಿ ಬಂದು ಆ ಕಾರ್ಯಕ್ರಮದಲ್ಲಿ ಭಾಗವಹಿಸಿ, ನನ್ನ ತಪ್ಪುಗಳನ್ನು ಸರಿಪಡಿಸಲಿಕ್ಕೆ ಅವರು ಅವಕಾಶ ಮಾಡಿಕೊಟ್ಟರೆ ಅವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ, ಅಭಿನಂದನೆಯನ್ನು ಸಲ್ಲಿಸುತ್ತೇನೆ ಆ ಎರಡೂವರೆ ಗಂಟೆಯಲ್ಲಿ ನಾನು ಏನು ಆ ನೇಕಾರರ ಸಮಸ್ಯೆ ನೋಡಿದ್ದೇನೆ, ನಮಗೆ ಸ್ವಾತಂತ್ರ್ಯ ಬಂದು 60 ವರ್ಷಗಳಿಗೆ ಕಾಲಿಡುತ್ತಿದ್ದೇವೆ ನಾನು ಯಾವ ಪಕ್ಷಗಳ ಬಗ್ಗೆಯೂ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಕೆಲವು ಅನಿವಾರ್ಯ ಘಟನೆಗಳಲ್ಲಿ ನಾನು ಆಕಸ್ಮಿಕವಾಗಿ ಮುಖ್ಯಮಂತ್ರಿಯಾಗಿದ್ದೇನೆಂದು ಹೇಳುತ್ತಿದ್ದೇನೆ ಹಳ್ಳಿಗಳಲ್ಲಿ ಈ ಸಮಸ್ಯೆಗಳೇನು ಉದ್ಭವವಾಗಿವೆ, ನಾನು ಈ ದಿನ ಹಿರಿಯ ನಾಕರುಗಳಿಗೆ ಮನವಿ ಮಾಡುತ್ತೇನೆ, ಈ ದೋಷಗಳು, ಈರೀತಿಯಾದ

ಸಮಸ್ಯೆಗಳು ಉದ್ಭವವಾಗಿರುವುದು ಈ 18 ತಿಂಗಳ ನಮ್ಮ ಆಡಳಿತದಿಂದಲ್ಲ ಈ ರಾಜಕೀಯದ ವ್ಯವಸ್ಥೆ ಮತ್ತು ಆಡಳಿತ ಯಂತ್ರದ ವ್ಯವಸ್ಥೆಯೇನಿದೆ, ಈ ವ್ಯವಸ್ಥೆಯನ್ನು ಸರಿಪಡಿಸತಕ್ಕಂಥದ್ದಕ್ಕೆ ಇವತ್ತು ಪಕ್ಷಭೇದ ಮರೆತು ಎಲ್ಲರ ಸಹಕಾರವನ್ನು ನಾನು ಕೋರುತ್ತೇನೆ ಚುನಾವಣೆ ಬಂದಾಗ ನೀವು ಯಾರಿಗೆ ಬೇಕಾದರೂ ಮತ ಕೊಡಿ ಆದರೆ, ನಿಮ್ಮ ಕೆಲಸವನ್ನು ಮಾಡಿಸಿಕೊಳ್ಳಬೇಕಾದರೆ, ಮುಖ್ಯಮಂತ್ರಿ ಸೇರಿದಂತೆ ಕುತ್ತಿಗೆಪಟ್ಟಿ ಹಿಡಿದು ನೀವು ನಿಮ್ಮ ಸಮಸ್ಯೆ ಬಗೆಹರಿಸಿಕೊಳ್ಳಲಿಕ್ಕೆ ಪ್ರಶ್ನೆ ಮಾಡಬೇಕೆಂದು ನಾನು ಎಷ್ಟೋ ಹಳ್ಳಿಗಳಲ್ಲಿ ಹೇಳಿದ್ದೇನೆ ಜನ ನನ್ನನ್ನು ಪ್ರಶ್ನೆ ಮಾಡುತ್ತಾರೆಂದು ನಾನು ದಿನಾಲು ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತುಕೊಳ್ಳಲಿಲ್ಲ ಜನಸಾಮಾನ್ಯರ ಮಧ್ಯೆ ನಾನು ಹೋಗಿದ್ದೇನೆ ನಾನು ಜನಸಾಮಾನ್ಯರ ಮಧ್ಯೆ ಹೋಗತಕ್ಕಂಥಾದ್ದು ಏಕೆಂದರೆ, ಹಿಂದೆ ಎಷ್ಟೋ ದಿವಸ ಮುಖ್ಯಮಂತ್ರಿಗಳ ಮನೆಯ ಹತ್ತಿರ 3 ದಿವಸ, 4 ದಿವಸ ಆ ಅಶೋಕ ಹೋಟೆಲ್ ರಸ್ತೆಯಲ್ಲಿ ಆ foot path ನಲ್ಲಿ ಕುಳಿತುಕೊಂಡಿರತಕ್ಕಂಥ ಘಟನೆಯನ್ನು ನಾನು ಗಮನಿಸಿ ನೋಡಿದ್ದೇನೆ ಈಗ ಆ ಜನಗಳು ಮುಖ್ಯಮಂತ್ರಿಗಳನ್ನು ನೇರವಾಗಿ ಭೇಟಿ ಮಾಡತಕ್ಕಂಥ ವ್ಯವಸ್ಥೆಗೆ ನಾನು ತಂದಿದ್ದೇನೆ ನನಗೆ ಸಮಾಧಾನವಿದೆ ಎಲ್ಲರ ಸಮಸ್ಯೆ ಬಗೆಹರಿಸಲಿಕ್ಕೆ ಆಗದಿರಬಹುದು ಆದರೆ, ಆ ಜನಸಾಮಾನ್ಯರ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಅವರೊಂದಿಗೆ ನೇರವಾಗಿ ಚರ್ಚೆಯನ್ನು ಮಾಡುತ್ತೇನೆ, ನೂರಕ್ಕೆ ನೂರರಷ್ಟು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲದಿದ್ದರೂ ಸಹ ಅವರ ಮನಸ್ಸಿನಲ್ಲಿ ಎಷ್ಟೋ ಆತ್ಮಸ್ಥೈರ್ಯ ತುಂಬುವಂಥ ಕೆಲಸವನ್ನು ಮಾಡಿದ್ದೇನೆ ನೂರಕ್ಕೆ ನೂರರಷ್ಟು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ ರಾಜೀವ್ ಗಾಂಧಿಯವರು ತಂದ ಯೋಜನೆಯಲ್ಲಿ ಅದಕ್ಕೆ ತಿದ್ದುಪಡಿ ತಂದು ಅದರಿಂದ ಏನೋ ದೊಡ್ಡ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ತಂದರು ಎಂದು ನಮ್ಮ ಮಹಾದೇವಪ್ಪನವರು ಹೇಳಿದರು ಪಂಚಾಯತಿಗಳಿಗೆ ಮನೆಗಳನ್ನು ಹಂಚತಕ್ಕಂಥ ಜವಾಬ್ದಾರಿ ಏನು ಕೊಟ್ಟಿದ್ದೀರಿ, ಇವತ್ತು ಆ ಮನೆಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಪಂಚಾಯತಿಗಳಿಂದ ಸಮರ್ಪಕವಾಗಿ ಆಗುತ್ತಿದೆಯೇ ಎನ್ನುವುದನ್ನು ತಮ್ಮ ಮೂಲಕ ಎಲ್ಲಾ ಸದಸ್ಯರುಗಳನ್ನು ಕೇಳಬಯಸುತ್ತೇನೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಮುಖ್ಯಮಂತ್ರಿಗಳೇ, systemನಲ್ಲಿ ದೋಷ ಇರುತ್ತವೆ, ಅದನ್ನು ಸುಧಾರಿಸಬೇಕಿದೆ ಆ system ಅನ್ನು destroy ಮಾಡಬಾರದು ನಾವು ಅಧಿಕಾರದ ವಿಕೇಂದ್ರೀಕರಣದಲ್ಲಿ

ವಿಶ್ವಾಸವಿಡುಬೇಕಾಗುತ್ತದೆ system ನಲ್ಲಿ ದೋಷ ಇರಬಹುದು ಅದನ್ನು ನಾವು ಸರಿಪಡಿಸಬೇಕಾಗುತ್ತದೆಯೇ ವಿನಃ system should not be destroyed

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಹೌದು, ಈ ತಿದ್ದುಪಡಿಗಳನ್ನು ತರಬೇಕಾದರೆ, ಈ ಹೊಸ ಕಾಯಿದೆಗಳನ್ನು ತರಬೇಕಾದರೆ, ಇದರಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸತಕ್ಕಂಥ ರೀತಿಯಲ್ಲಿ ಇವತ್ತೇನೆ ಕಾಯಿದೆಗಳನ್ನು ತರಬೇಕಾಗುತ್ತದೆ, ಅದರ ಬಗ್ಗೆ ಎಲ್ಲರೂ ಗಮನ ಹರಿಸ ಬೇಕಾಗುತ್ತದೆ ನಾನು ಇಲ್ಲವೆಂದು ಹೇಳುತ್ತಿಲ್ಲ ಉದಾಹರಣೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಮಾಡಿದೆ ಅರಣ್ಯ ಇಲಾಖೆಯ ಬಗ್ಗೆ ನೀವೆಲ್ಲ ಸದನದಲ್ಲಿ ಚರ್ಚೆಮಾಡಿದಿರಿ ಉತ್ತರ ಕನ್ನಡ ಜಿಲ್ಲೆಯೊಳಗೆ ಕಳೆದ 60 ವರ್ಷಗಳಿಂದ, 100 ವರ್ಷಗಳಿಂದ 20 ಗುಂಟೆ, 30 ಗುಂಟೆ ಜಮೀನಿನಲ್ಲಿ ಕೃಷಿ ವೃತ್ತಿ ಮಾಡತಕ್ಕಂಥವರಿದ್ದಾರೆ ಇವತ್ತು 20–30 ಅಡಿ ಜಾಗದಲ್ಲಿ ಗುಡಿಸಲು ವಾಸ ಮಾಡತಕ್ಕಂಥ ಜನ ಏನಿದ್ದಾರೆ, ಯಾವ ಕಾರಣಕ್ಕೋಸ್ಕರವಾಗಿ ಇವತ್ತಿನವರೆಗೆ ಅವರಿಗೆ ನೀವು ಪಟ್ಟಾ ಕೊಡಲಿಕ್ಕೆ ಸಾಧ್ಯವಾಗಿಲ್ಲ 1978ನೇ ಇಸವಿಯಲ್ಲಿ ಕೇಂದ್ರ ಸರ್ಕಾರದಲ್ಲಿ ನಿಮ್ಮ ಅರಣ್ಯಯ ಇಲಾಖೆಯವರು ಒಂದು ಹೊಸ ಕಾನೂನನ್ನು ತಂದರು ಆ ಕಾನೂನನ್ನು ತರಬೇಕಾದರೆ ವಾಸ್ತವಾಂಶಕ್ಕೆ ಆ ಒಂದು ಕಾಯಿದೆ ತರಬೇಕಾದರೆ, ಜನಸಾಮಾನ್ಯರಿಗೆ ಏನು ತೊಂದರೆ ಯಾಗುತ್ತದೆಂಬುದನ್ನು ಯೋಚನೆ ಮಾಡದೇ ಈರೀತಿ ಕಾರ್ಯಕ್ರಮ ತಂದು ಇವತ್ತು ಜನ ಅಲ್ಲಿ ಆ ಒಂದು ಒಡೆತನ ಪಡೆಯಲಿಕ್ಕೆ ಸಾಧ್ಯವಾಗದೇ ಏನು ಒಂದು ಅರ್ಜಿಯನ್ನು ಕೊಡುತ್ತಾರೆ, ಈ ಸಮಸ್ಯೆಯನ್ನು 18 ತಿಂಗಳಲ್ಲಿ ನಾನು ಸೃಷ್ಟಿ ಮಾಡಿದ್ದಲ್ಲ ಇದಕ್ಕೋಸ್ಕರವೇ ಇಂಥ ವಿಷಯಗಳನ್ನು ಯಾವ್ಯಾವ ಜಿಲ್ವೆಲಯಲ್ಲಿ ಏನೇನು ಸಮಸ್ಯೆ ಇದೆ, ಇದರ ಬಗ್ಗೆ ನಾನು ಅರಿತುಕೊಂಡಾಗ ನಾನು ತಕ್ಷಣವೇ ನಮ್ಮ ಅಧಿಕಾರಿಗಳ ಸಭೆಯನ್ನು ಕರೆದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ, ಇದು ಗ್ರಾಮವಾಸ್ತವ್ಯ ಕಾರ್ಯಕ್ರಮಗಳು ಯಾವುದೋ ಪ್ರಚಾರಕ್ಕೋಸ್ಕರ ಮಾಡುತ್ತಿಲ್ಲವೆನ್ನುವುದನ್ನು ತೋರಿಸಲು ಈ ಉದಾಹರಣೆಗಳನ್ನು ಯಾವುದೋ ಪ್ರಚಾರಕ್ಕೋಸ್ಕರ ಮಾಡುತ್ತಿಲ್ಲವೆನ್ನುವುದನ್ನು ತೋರಿಸಲು ಈ ಉದಾಹರಣೆಗಳನ್ನು ಕೊಟ್ಟೆ, ಇವತ್ತೇನೆ ಸದನದಲ್ಲಿ ಇಷ್ಟೊಂದು ವಿವರವಾಗಿ ನಾನು ನನ್ನ ಭಾವನೆಗಳನ್ನಿಡತಕ್ಕಂಥದ್ದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಿಮಗೆ ನಾನು ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸ್ಪಷ್ಟೀಕರಣ ಕೇಳುವುದಕ್ಕೆ ಹೋಗುವುದಿಲ್ಲ ಗ್ರಾಮ ವಾಸ್ತವ್ಯದ ಬಗ್ಗೆ ನಾವು ಏನು ಹೇಳಿದ್ದೇವೆಂದರೆ, 32-33 ಗ್ರಾಮ ವಾಸ್ತವ್ಯ ಮಾಡಿದ್ದೀರಿ, ಸರ್ಕಾರದ ಆದೇಶ ಏನೇನು ಕೊಟ್ಟಿದ್ದೀರಿ? ಯಾವ್ಯಾವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿದಿದ್ದೀರಿ? ಅದರಿಂದ ಎಷ್ಟು ಗ್ರಾಮದ ಎಲ್ಲಾ ಜನರಿಗೆ ಸಹಾಯಾಗಿದೆ ಎನ್ನುವ ಮಾತನ್ನು ಕೇಳಿದ್ದೇವೆ ತಾವು ಹೇಳಿದಿರಿ, ಇವತ್ತು ಗ್ರಾಮ ವಾಸ್ತವ್ಯ ಮಾಡುತ್ತೀರಿ, ಗ್ರಾಮ ಪಂಚಾಯತಿಗೆ ಕೊಟ್ಟಂಥ ಅಧಿಕಾರವನ್ನು ಕಿತ್ತುಹಾಕುತ್ತೀರಿ ರಾಜೀವ ಗಾಂಧಿಯವರು ಸಂವಿಧಾನದ ತಿದ್ದುಪಡಿ ಮಾಡಿ ಈ ದೇಶದಲ್ಲಿರತಕ್ಕಂಥ ಬಡವರಿಗೆ, ದಲಿತರಿಗೆ, ಹೆಣ್ಣು ಮಕ್ಕಳಿಗೆ ಗ್ರಾಮ ಪಂಚಾಯತಿಯಲ್ಲಿ ಅಧಿಕಾರ ಕೊಟ್ಟಿದ್ದಾರೆ ಆ ಅಧಿಕಾರವನ್ನು ಕಿತ್ತು ಹಾಕಿದ್ದೀರಿ ನಂತರ ಈಗ ಗ್ರಾಮವಾಸ್ತವ್ಯ ಎಂದು ತಾವು ಮಾಡಿದ್ದೀರಿ ತಮ್ಮ ಗ್ರಾಮ ವಾಸ್ತವ್ಯವನ್ನು ಮಹಾತ್ಮಗಾಂಧಿಯವರಿಗೆ, ಗೋಖಲೆಯವರಿಗೆ ಹೋಲಿಸತಕ್ಕಂಥದ್ದು ಸರಿಯಲ್ಲ ಮಹಾತ್ಮಗಾಂಧಿಯವರು ಗ್ರಾಮಗಳಿಗೆ ಹೋಗುವಾಗ ಸುಣ್ಣ ಬಣ್ಣ ಹಚ್ಚಿ ಹೋಗಲಿಲ್ಲ ಎಲ್ಲಾ ಕಡೆಗೆ bed, Pan, pole, ತೆಗೆದುಕೊಂಡು ಹೋಗಿಲ್ಲ ಇವತ್ತು ಏಕಾಏಕಿ ಯಾಗಿ ಗ್ರಾಮದ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕಾದರೆ ತಾವು ಹೋಗಬೇಕಾಗಿದೆ ಅದಕ್ಕೆ ನಾನು ಹೇಳಿದ್ದೇನೆ, 33 ಗ್ರಾಮಗಳ ವಾಸ್ತವ್ಯ ಏನು ಮಾಡಿದ್ದೀರಿ, ಯಾವ್ಯಾವ ಆದೇಶ ಕೊಟ್ಟಿದ್ದೀರಿ, ಆ ಬಗ್ಗೆ white paper publish ಮಾಡಬೇಕೆಂದು ಹೇಳಿದ್ದೇವೆ ಇವತ್ತು ನಾನು ಹೇಳತಕ್ಕಂಥದ್ದು ಅಲ್ಲ ಕೆ ಬಿ ಶಾಣಪ್ಪನವರು ರಾಜ್ಯಸಭಾ ಸದಸ್ಯರು ಅವರು 10ನೇ ಮಾರ್ಚ್‌ಗೆ ರಾಜ್ಯಸಭೆಯಲ್ಲಿ ಒಂದು ಪ್ರಶ್ನೆ ಕೇಳಿದ್ದಾರೆ ಶರತ್‌ಪವಾರ್‌ರವರು ಖಡಾಖಂಡಿತವಾಗಿ ಹೇಳಿದ್ದಾರೆ ಕರ್ನಾಟಕ ರಾಜ್ಯಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಈಗಾಗಲೇ ಅವರು ಕೊಟ್ಟಂಥ ಮಾಹಿತಿಯನ್ನು National Calamity Relief Fund ನಲ್ಲಿ 2005-06ನಲ್ಲಿ 358 ಕೋಟಿ ರೂಪಾಯಿಗಳು

National Calamity Relief Fund ನಲ್ಲಿ 2005-06ನೇ ಸಾಲಿಗೆ 356 ಕೋಟಿ 2006-07 ರಲ್ಲಿ 384 ಕೋಟಿ Agriculture Minister ಯಿಂದ 161 ಕೋಟಿ, ಒಟ್ಟಾರೆ 1103 ಕೋಟಿ ರೂಪಾಯಿಗಳನ್ನು ಕೊಡಲಾಗಿದೆಯೆಂದು ರಾಜ್ಯ ಸಭಾದಲ್ಲಿ ನೀಡಿರತಕ್ಕಂಥ ಉತ್ತರದಲ್ಲಿ ಹೇಳಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್, ನಮ್ಮ ಪ್ರಶ್ನೆ ಏನೆಂದರೆ ನಿಮ್ಮ ಒಬ್ಬರದೇ reply ಅಥವಾ ಬೇರೆಯವರದು ಇದೆಯೇ ಎಂಬುದು

ಗೊತ್ತಾಗಬೇಕು ಬೇರೆ Minister ಗಳು ಏನಾದರೂ ಉತ್ತರ ಕೊಡುತ್ತಾರೆಯೇ? ನಿಮ್ಮದು ಒಂದೇ ಆದರೆ ನಾವು clarification ಕೇಳಿ ಬಿಡುತ್ತೇವೆ ಅಧ್ಯಕ್ಷರಾದ ತಾವು ಇದರ ಬಗ್ಗೆ ಹೇಳಬೇಕು Reply ಮುಗಿಯಿತಾ, clarification ಕೇಳಬೇಕಾ ಎಂಬುದರ ಬಗ್ಗೆ ತಾವು ಹೇಳಬೇಕು

ಶ್ರೀ ಕೆ ಶ್ರೀನಿವಾಸಗೌಡ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಬೇರೆ ಮಂತ್ರಿಗಳು ಉತ್ತರ ಕೊಡುತ್ತಾರೆಯೆ ? ಇದು ಕೆಟ್ಟ ಸಂಪ್ರದಾಯ, ಅವರು ಉತ್ತರ ಕೊಡುವ ಹಾಗೆ ಇದ್ದರೆ ನಾಳೆ ಕೊಡಲಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ Clarifications ಕೇಳುವುದಕ್ಕೆ ಶುರು ಮಾಡಿದರೆ ಬೇರೆ ಮಂತ್ರಿಗಳು ಉತ್ತರ ಕೊಡುವುದಕ್ಕಾಗುವುದಿಲ್ಲ ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ Clarifications ಕೇಳುವುದಕ್ಕೆ ಶುರುವಾದ ಮೇಲೆ ಇನೊಬ್ಬ ಮಂತ್ರಿಗಳು ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಬೇರೆ ಯಾರಾದರೂ ಉತ್ತರ ಕೊಡುವವರು ಇದ್ದಾರೆಯೇ ಅಥವಾ ಇಲ್ಲಿಗೇ ಮುಗಿಯತೆ?

ಅಧ್ಯಕ್ಷರು ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ ಹೀಗಾಗಿ ಬೇರೆಯವರು ಕೊಡುವ ಅಗತ್ಯವಿಲ್ಲ ಬಿಡಿ

ಶ್ರೀ ಸಿದ್ಧರಾಮಯ್ಯ ಬೇರೆ ಮಂತ್ರಿಗಳು ಉತ್ತರ ಕೊಟ್ಟಮೇಲೆ ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು ಆದರೆ, ಮಾನ್ಯಮುಖ್ಯಮಂತ್ರಿಗಳು ಉತ್ತರ ಕೊಟ್ಟಾಗಿರುವುದರಿಂದ ಅವರು ಇನ್ನೆಲ್ಲಿಂದ ಕೊಡುತ್ತಾರೆ ? ಇನ್ನು ಕೇವಲ Clarification ಅಷ್ಟೆ

ಶ್ರೀ ಆರ್ ಶ್ರೀನಿವಾಸ್ ಕೋಲಾರಕ್ಕೆ ಸಂಬಂಧಪಟ್ಟ ಹಾಗೆ ನಾನು ಉತ್ತರ ಕೊಟ್ಟು ಬಿಡುತ್ತೇನೆ

ಶ್ರೀ ಸಿದ್ಧರಾಮಯ್ಯ ಇನ್ನೇನು ಹೇಳುತ್ತೀರಿ ಬಿಡಿ ನಿಮ್ಮ ಪರವಾಗಿ ಅವರು ಉತ್ತರ ಕೊಟ್ಟು ಬಿಟ್ಟಿದ್ದಾರೆ ಬಿಡಿ ಇನ್ನೇನಿದ್ದರೂ Clarification ಅಷ್ಟೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ Flood ಬಗ್ಗೆ ಇವರಿಂದ ಉತ್ತರವೇ ಬರಲಿಲ್ಲ ಅದಕ್ಕೆ ಯಾರು ಉತ್ತರ ಕೊಡುತ್ತಾರೆ?

ಅಧ್ಯಕ್ಷರು ಆಯಿತು ಬಿಡಿ, ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಉತ್ತರ ಕೊಡುತ್ತಾರೆಯೇ ಅಥವಾ ಅಲ್ಲಿಗೇ ಅದು ಮುಗಿಯತೇ? ಉತ್ತರ ಮುಗಿಯಿತು ಎಂದರೆ ನೀವು clarification allow ಮಾಡಿ clarifications ಆದ ಮೇಲೆ ಮತ್ತೆ ಇನ್ಯಾರೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ

ಅಧ್ಯಕ್ಷರು ಇಲ್ಲ ಇಲ್ಲ clarification ಕೇಳುವುದಕ್ಕೆ allow ಮಾಡುತ್ತೇನೆ ಇದಾದ ಮೇಲೆ ಮತ್ತೆ ಉತ್ತರ ಕೊಡುವುದಕ್ಕಾಗುವುದಿಲ್ಲ ಈಗಾಗಲೇ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಉತ್ತರ ಮುಗಿದಿದೆ ಎಂದರೆ ನಮ್ಮದೇನೂ ಅಭ್ಯಂತರಿಲ್ಲ Reply ಇನ್ನೇನು ಇಲ್ಲವೆ?

ಅಧ್ಯಕ್ಷರು ಇಲ್ಲ, ಕುಳಿತುಕೊಳ್ಳಿ

ಶ್ರೀ ಎನ್ ಧರ್ಮಸಿಂಗ್ ಈಗ National Calamity Relief Fund ನಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಹಣ ಎಷ್ಟು? State Calamity Relief Fund ನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಮೊನ್ನೆಯಾದಂಥ ಪ್ರವಾಹ ಪೀಡಿತ ಪ್ರದೇಶಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ 2680 ಕೋಟಿ ಒಂದೇ ಸಲ ಹಣ ಕೊಟ್ಟಿದ್ದೇವೆಂದು ಹೇಳಿಲ್ಲ ಯಾವುದೇ ರಾಜ್ಯ ಸರ್ಕಾರ, you have to prepare action plan ಇದನ್ನು ನೀವು ಮಾಡಿಲ್ಲ ಹಣ ಖರ್ಚು ಮಾಡಿ utilization certificate ಅನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ಕೇಂದ್ರದಿಂದ ಹಣವನ್ನು ಪಡೆಯಬೇಕು ಆ ದಿಶೆಯಲ್ಲಿ ಈ ಸರ್ಕಾರ ಕೆಲಸ ಮಾಡಿಲ್ಲ ಕೇವಲ ಪ್ರಚಾರಕ್ಕೋಸ್ಕರ ಮಾಡುತ್ತಿದ್ದೀರಿ ಇವತ್ತಿನ ದಿವಸ ನೀವು ಗ್ರಾಮ ವಾಸ್ತವ್ಯದಿಂದ ಈ ರಾಜ್ಯದ ಜನತೆಗೆ, ರೈತರಿಗೆ ಯಾವ ತರಹದ ಲಾಭವಾಗಿಲ್ಲ ಮತ್ತೊಂದು ಕಡೆ ಬಿತ್ತನೆ ಪ್ರಾರಂಭವಾಗಿರುವ ಬಗ್ಗೆ ಈಗಾಗಲೇ ಹೇಳಿದ್ದೇನೆ ತಾವು ಸಲಾ ಮನ್ನಾ ಮಾಡಿದ್ದೀರಿ ಈಗಾಗಲೇ 1950 ಕೋಟಿ ರೂಪಾಯಿಗಳನ್ನು ನೀವು ಅಪೆಕ್ಸ್ ಬ್ಯಾಂಕ್‌ಗೆ ಕೊಡಬೇಕಾಗಿದೆ

ನೀವು ಅದನ್ನು release ಮಾಡಿಲ್ಲ ಎಲ್ಲಾ ಕಡೆಗೆ ಡಿಸಿಸಿ ಬ್ಯಾಕಂ default ಆಗಿದೆ ಎಲ್ಲಿಯೂ ಹಣವನ್ನು ಕೊಡುತ್ತಿಲ್ಲ ನೀವು ಬೇಕಾದರೆ, you call all the DCC Banks of the state ಅಪೆಕ್ಸ್ ಬ್ಯಾಂಕ್, ಎಲ್ಲರನ್ನು ಕರೆಸಿರಿ ನಾವು ಮಾತನಾಡುತ್ತೇವೆ ಯಾವುದರಲ್ಲಿ ಕೂಡ ನಿಮ್ಮ ಕೆಲಸವಾಗಿಲ್ಲ

ಶ್ರೀ ಜಿ ವಿ ಶ್ರೀ ರಾಮರೆಡ್ಡಿ Clarification ನಾವು ಕೇಳಬಹುದೆ?

ಅಧ್ಯಕ್ಷರು ಏನಾದರೂ ಕೇಳುವುದಿದ್ದರೆ ಕೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಮಗೆ ಅಕಾಶ ಕೊಡಿ ನಾವು clarification ಕೇಳುತ್ತೇವೆ Ministerರವರು ಎದ್ದೇಳುತ್ತಿದ್ದಾರೆ ನಮಗೆ clarification ಗೆ ಅವಕಾಶ ಕೊಡಿ

ಶ್ರೀ ಆರ್ ಶ್ರೀನಿವಾಸ್ ಬೆಳಿಗ್ಗೆ ಮಾನ್ಯ ಶಾಸಕರು ಕೋಲಾರ ಜಿಲ್ಲೆಯ ಬಗ್ಗೆ ಮಾತನಾಡಿದ್ದಾರೆ ಅದಕ್ಕೆ ನಾನು ಉತ್ತರ ಹೇಳಬೇಕಾಗಿದೆ

ಅಧ್ಯಕ್ಷರು ಶ್ರೀನಿವಾಸರವರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ ಅದಕ್ಕೆ ವಿರೋಧ ಪಕ್ಷದ ಸದಸ್ಯರಾಗಲಿ ಇತರೆ ಸದಸ್ಯರಾಗಲಿ clarification ಕೇಳಬಹುದು, ನೀವು ಏಕೆ ನಿಂತುಕೊಂಡಿದ್ದೀರಿ?

ಶ್ರೀ ಆರ್ ಶ್ರೀನಿವಾಸ್ ಬೆಳಿಗ್ಗೆ ಕೋಲಾರ ಜಿಲ್ಲೆಯ ಬಗ್ಗೆ ಮಾತನಾಡಿದ್ದಾರೆ ಹೀಗಾಗಿ ನನಗೆ ಕಾಲಾವಕಾಶ ಕೊಡಲೇಬೇಕಾಗಿದೆ ನಾನು clarification ಕೊಡಬೇಕು

ಅಧ್ಯಕ್ಷರು ಆಯಿತು ಬಿಡಿ, ಮತ್ಯಾಕೆ, ತಾವು ದಯಮಾಡಿ ಕುಳಿತುಕೊಳ್ಳಿ

ಶ್ರೀ ಆರ್ ಶ್ರೀನಿವಾಸ್ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ನಾನು ಕೂಡ ಕೆಲವು clarification ಗಳನ್ನು ಕೊಡಬೇಕಾಗುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದೇನಿದು ? ಸದನ ಎಲ್ಲಿ ಹೋಗುತ್ತದೆ? ಅವರು ಉತ್ತರ ಹೇಳಿದ ಮೇಲೆ clarifications ಕೇಳುತ್ತಿದ್ದೇವೆ, ಇದೇನಿದು?

ಶ್ರೀ ಡಿ ಟಿ ಜಯಕುಮಾರ್ ಮಂತ್ರಿಗಳಿಗೆ ಅವಕಾಶ ಇಲ್ಲವೆಂದರೆ, ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಈ ಸದನ ಎಲ್ಲಿಗೆ ಹೋಗುತ್ತದೆಂದು ನನಗೆ ಅರ್ಥವಾಗುತ್ತಿಲ್ಲ

ಅಧ್ಯಕ್ಷರು ಈಗ ನೀವು ಯಾರಾದರೂ clarifications ಕೇಳುವವರು ಇದ್ದೀರಾ?

ಶ್ರೀ ಜೆ ಸಿ ಮಾಧುಸ್ವಾಮಿ ಸಾರ್ ನಾವು clarifications ಕೇಳುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ Clarificationಕೇಳಲು ನಾನು ಎದ್ದು ನಿಂತಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ ನಾವು clarifications ಕೇಳಲಿಕ್ಕೆ Minister ರವರು ಬಿಡುತ್ತಿಲ್ಲ

ಅಧ್ಯಕ್ಷರು ಬೆಳಿಗ್ಗೆ ನೀವು ಕೋಲಾರ ಜಿಲ್ಲೆಯ ಬಗ್ಗೆ Minister ರವರನ್ನು ಕೇಳಿ grill ಮಾಡಿಬಿಟ್ಟಿದ್ದೀರಲ್ಲ ಅದಕ್ಕೆ ಅವರು clarification ಕೊಡಬೇಕೆಂದು ಆಸಕ್ತಿಯಿಂದ ನಿಂತಿದ್ದಾರೆ ಈಗ ಅದರ ಅಗತ್ಯವಿಲ್ಲ ಮುಖ್ಯಮಂತ್ರಿಗಳು ಉತರ ಕೊಟ್ಟಿದ್ದಾರೆ ನೀವು' clarification ಕೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ನಾವು clarification ಕೇಳಬೇಕಾಗಿದೆ ಅದನ್ನು ನಮಗೆ ಬಿಡಿ

ಅಧ್ಯಕ್ಷರು ಆಯಿತು ಕೇಳಿ

ಶ್ರೀ ಆರ್ ಶ್ರೀನಿವಾಸ್ ಕೋಲಾರದ ಬಗ್ಗೆ ತಾವು ಪ್ರಸ್ತಾಪಿಸಿದಿರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದೇನು ಸಾರ್ ಇದು ? ಮಾನ್ಯ ಪ್ರಕಾಶ್‌ರವರೆ ದಯವಿಟ್ಟು ಅವರಿಗೆ ಹೇಳಿ

ಶ್ರೀ ಹೆಚ್ ಡಿ ಕುಮಾರ್‌ಸ್ವಾಮಿ ಕೋಲಾರದ ಬಗ್ಗೆ ಚರ್ಚೆ ಮಾಡಬೇಕೆಂದು ಅವರು ಹೇಳುತ್ತರಬಹುದು ಅವರನ್ನು ಕೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಿಮ್ಮ ಉತ್ತರಕ್ಕೆ ನಾವು clarification ಅನ್ನು ನಾವು ಕೇಳುತ್ತಿದ್ದೇವೆ ಸಾರ್ ಇದು ಸರಿಯಲ್ಲ ನಾವು ಮುಖ್ಯಮಂತ್ರಿಗಳ ಉತ್ತರಕ್ಕೆ clarification ಕೇಳುತ್ತಿದ್ದರೆ ಇವರು ಬಂದು ಉತ್ತರ ಹೇಳುತ್ತೇನೆಂದರೆ ಹೇಗೆ?

ಅಧ್ಯಕ್ಷರು ನಿಮ್ಮ ಪರ್ಸನಲ್, ಇದಕ್ಕಾಗಿ ಅವರು ನಿಂತು ಬಿಟ್ಟಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಶ್ರೀನಿವಾಸ್‌ರವರು ಅದಕ್ಕೆ ಪ್ರತ್ಯೇಕವಾಗಿ ಉತ್ತರ ಕೊಡಲಿ, ನಾವು ಮುಖ್ಯಮಂತ್ರಿಗಳ ಹತ್ತಿರ clarification ಕೇಳುತ್ತಿದ್ದೇವೆ

ಅಧ್ಯಕ್ಷರು ಶ್ರೀನಿವಾಸ್‌ರವರೇ ದಯಮಾಡಿ ಕುಳಿತುಕೊಳ್ಳಿ ನಾನು ಈಗ clarification ಕೇಳಲಿಕ್ಕೆ ಖರ್ಗೆಯವರನ್ನು ಕರೆದಿದ್ದೇನೆ ದಯಮಾಡಿ ಕುಳಿತುಕೊಳ್ಳಿ ಆ ನಂತರ ಅಗತ್ಯ ಬಿದ್ದರೆ ಕೊಡುತ್ತೇನೆ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಾವು ಎಲ್ಲರೂ ಕೂಡ ಒಂದು Adjournment Motion ಅನ್ನು move ಮಾಡಿದ್ದೇವೆ ತಾವು ಅದಕ್ಕೆ ಏನು ಮಾಡಿದಿರಿ, Rule 69 ಗೆ ವರ್ಗಾಯಿಸಿ ಈಗಲೇ ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿ ನಮಗೆ ಅವಕಾಶ ಮಾಡಿ ಕೊಟ್ಟಮೇಲೆ ಚರ್ಚೆಯನ್ನು ಪ್ರಾರಂಭಿಸಿದೆವು ಆ ಚರ್ಚೆಯಲ್ಲಿ ನಮಗೆ ತಿಳಿದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದೆವು ಆದರೆ, ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ನಾವೇನು ವಿಷಯಗಳನ್ನು ಮಂಡನೆ ಮಾಡಿದ್ದೇವೆ, ಸುಮಾರು 9 ಜಿಲ್ಲೆಗಳಿಂದ ಬಂದಂಥ memorandumಗಳನ್ನು ಅವರಿಗೆ ತಮ್ಮ ಮುಖಾಂತರ ಕೊಟ್ಟಿದ್ದೇವೆ ಎಷ್ಟು ಹಣ ಬಂತು ಅದರಲ್ಲಿ ಏನು ಖರ್ಚಾಯಿತು ಎಂಬುದನ್ನು ಹೇಳಿದ್ದೇವೆ ಮತ್ತು ಈಗ ರಸ್ತೆ ದುರಸ್ತಿಯಾಗಲಿ ಅಥವಾ ಅನೇಕ ಕೆರೆಗಳು ಒಡೆದು ಹೋಗಿವೆ ಅದರ ದುರಸ್ತಿ, bridges ದುರಸ್ತಿ, ಬಿದ್ದಂಥ ಮನೆಗಳು, ಸಮುದ್ರ ಕೊರೆತ, ದನಗಳು ಸತ್ತಿರುವುದು, ಬೆಳೆ ಹಾನಿ, ಇವೆಲ್ಲವನ್ನೂ ಕೂಡ ಸ್ಪಷ್ಟವಾಗಿ ಎಷ್ಟು ಮನೆಗಳು ಬಿದ್ದಿವೆ ಅದರ ಅಂಕಿ ಅಂಶಗಳನ್ನು ನೀವು ಕೊಟ್ಟಿದ್ದೀರಿ ನಮ್ಮಲ್ಲಿರತಕ್ಕಂಥ ಅಂಕಿ ಅಂಶಗಳನ್ನು ಕೂಡ ನಾವು ಪ್ರಸ್ತಾಪಿಸಿದ್ದೇವೆ ಇಷ್ಟೆಲ್ಲಾ ಮಾಡಿದ್ದೇವೆ, ಅದಕ್ಕೆ ನೀವು ಪರಿಹಾರ ಹೇಳಲಿಲ್ಲ ಅದಕ್ಕೆ ಎಷ್ಟು ಹಣವನ್ನು

ಬಿಡುಗಡೆ ಮಾಡುತ್ತೀರೆಂದು ಹೇಳಲಿಲ್ಲ Bridges ಮತ್ತು tanks ರೀಪೇರಿಗೆ ಏನು ಮಾಡುತ್ತೇವೆಂದು ಹೇಳಿಲಿಲ್ಲ ಅಥವಾ ನಿಮ್ಮ ಸರ್ಕಾರದಿಂದ Calamity Relief Fund ನಲ್ಲಿ ಏನು ಕೊಡುತ್ತೇವೆಂದು ಹೇಳಿಲಿಲ್ಲ ಸಾರಾಸಗಟಾಗಿ ಗ್ರಾಮ ವಾಸ್ತವ್ಯ, ಅವರು ಹೇಳಿದ್ದಾರೆಂದು ನೀವು ಅದನ್ನೆ ಹೇಳಿದಿರಿ, ಅದು ಉತ್ತರನೇ ನಿಮ್ಮದಾಯಿತು ಇನ್ನೊಂದು ವಿಷಯ ಏನೆಂದರೆ, ನಿಮಗೆ ಯಾವ್ಯಾವ ವಿಷಯಗಳು ಬೇಕಾಗಿತ್ತೋ ಅಷ್ಟು ಮಾತ್ರ ಹೇಳಿದಿರಿ ಆದರೆ, ಅಸಲು ನಾವು ಕೇಳಿದ್ದು ಪ್ರಸ್ತಾಪ ಮಾಡಿದ ವಿಷಯ ಅತಿವೃಷ್ಟಿ ಮತ್ತು ಅನಾವೃಷ್ಟಿ ಹಾಗೂ ಕುಡಯುವ ನೀರು ಇವೆಲ್ಲವ್ನು ನಾವು ಅಲ್ಲಿ ಪ್ರಸ್ತಾಪಿಸಿದರೆ ಅದಕ್ಕೆ ನಿಮ್ಮ ಉತ್ತರವೇ ಇಲ್ಲ So, ನಾವು ಕೇಳಿದ್ದೇ ಒಂದು ನೀವು ಹೇಳುವುದೇ ಒಂದು ಅದಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿದ್ದೀರಿ? ಈಗ ಎಷ್ಟು ಮಾಡುತ್ತಿದ್ದೀರಿ? ಈ ಪ್ರಸ್ತಾಪ ಮಾಡಿದ ಮೇಲೆ ಯಾವ್ಯಾವ ತಾಲ್ಲೂಕಿಗೆ ವಿವಿಧ ಬಾಬತ್ತಿನಲ್ಲಿ ಬಿಡುಗಡೆ ಮಾಡಿರುವ ಬಗ್ಗೆ ಹೇಳಬೇಕು ಅದನ್ನು ಬಿಟ್ಟು ಕೇವಲ ಪ್ಯಾಕೇಜ್ ಬಗ್ಗೆ ಹೇಳಿದಿರಿ ಅದರ ಬಗ್ಗೆ ಅರೂ ಕೂಡ ಕೇಳಿದರು ನೀವು ಅದನ್ನು planning ನಿಂದ ಸರಿಯಾಗಿ ಮಾಡಿ ಕಳುಹಿಸಿಲ್ಲ, utilization certificate ಬರುವವರೆಗೆ ಅವರು ಹಣ ಬಿಡುಗಡೆ ಮಾಡಲ್ಲವೆಂದು ಹೇಳುತ್ತಾ ಆ ವಿಷಯ ಅಲ್ಲಿಗೆ ಉಳಿಯಿತು ನಾನು ಏನು ಹೇಳುತ್ತೇನೆಂದರೆ, ಯಾವ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆ, ಅದಕ್ಕೆ ಸ್ಪಷ್ಟವಾದಂಥ ಉತ್ತರ ಬೇಕು ಮನೆ ಕಟ್ಟಿಸುವುದು ಇರಬಹುದು, ರಿಪೇರಿ ಮಾಡುವುದು ಇರಬಹುದು, ಪ್ರಾಣ ಹಾನಿ ಇರಬಹುದು, ಬೆಳೆ ಹಾನಿ ಮಾಡಿರುವ ವಿಚಾರ ಇರಬಹುದು, ಅಥವಾ ಜಾನುವಾರುಗಳು ಸತ್ತಿರುವುದು ಇರಬಹುದು, ಇದರ ಬಗ್ಗೆ ಸ್ಪಷ್ಟವಾದ relief ನೀವು announce ಮಾಡಿ

ಶ್ರೀ ಆರ್ ಶ್ರೀನಿವಾಸ್ ಕೋಲಾರದ ಬಗ್ಗೆ ಅವರು ಹೇಳಿದ್ದಾರೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಕೋಲಾರ ಜಿಲ್ಲೆಯ ಬಗ್ಗೆ ಏಕೆ ತಲೆಕೆಡಿಸಿಕೊಳ್ಳುತ್ತೀರಿ ಬಿಡಿ ಎಲ್ಲಾ over all ಅದೇ ತಾನೆ, ಇನ್ನೇನಿದೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಎಲ್ಲರದ್ದು clarifications ಕೇಳಿ ಉತ್ತರ ಕೊಟ್ಟರೆ ಒಳ್ಳೆಯದು ಒಬ್ಬೊಬ್ಬರಿಗೆ ಉತ್ತರ ಕೊಡುವ ಬದಲು ಒಟ್ಟಿಗೆ ಹೇಳಿ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾತನಾಡುವಾಗ ಈ ವಿಷಯಬಿಟ್ಟು ಬೇರೆ ಮಾತನಾಡುವುದು, ಈಗ ಹೇಳಿದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ಪ್ರಸ್ತಾಪಿಸಿದ್ದು ಈ ಅತಿವೃಷ್ಟಿಯ ಬಗ್ಗೆ ನಾನು ಮಾತನಾಡಿದ್ದನ್ನು ಬಹುಶಃ ಮುಖ್ಯಮಂತ್ರಿಗಳು ಕೇಳಿಸಿಕೊಳ್ಳಲಿಲ್ಲ ಅತಿವೃಷ್ಟಿಯ ಬಗ್ಗೆ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಎರಡು ವಿಚಾರಗಳನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೆ ಅದರಲ್ಲಿ ಕೇಂದ್ರ ಮತ್ತು ರಾಜ್ಯ ಹವಮಾನ ನಿಯಂತ್ರಣ ಇಲಾಖೆಯ ಬಹಳ ಮೊದಲೇ ಅತಿವೃಷ್ಟಿಯಾಗುತ್ತದೆ ಎನ್ನುವುದರ ಬಗ್ಗೆ ಎಚ್ಚರಿಕೆಯನ್ನು ಕೊಟ್ಟರೂ ಕೂಡ ಈ ಸರ್ಕಾರ ಏಕೆ ಗಮನಕ್ಕೆ ತೆಗೆದುಕೊಳ್ಳಲಿಲ್ಲ?

ಒಂದು ವೇಳೆ ಅದನ್ನು ಇವರು ಗಮನಕ್ಕೆ ತೆಗೆದುಕೊಂಡಿದ್ದರೆ, ಈಗ ಏನು ಫ್ಲಡ್ಸ್‌ನಲ್ಲಿ ನಷ್ಟವಾಗಿದೆ ಎಂದು ಇವರು ಹೇಳುತ್ತಿದ್ದಾರೆ ಅಷ್ಟು ನಷ್ಟವಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಎರಡನೆಯದಾಗಿ ನಷ್ಟವಾಗಿರುವ ಬಗ್ಗೆ ಯಾವ ರೀತಿಯಾಗಿ ಹೇಳುತ್ತಿದ್ದಾರೆಂದರೆ, 6558 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಾಶವಾಗಿದೆ ಎಂದು ಮತ್ತು ಇದರಿಂದ 527 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಹೇಳುತ್ತಾರೆ ಆದರೆ, ನಷ್ಟವಾಗಿರುವ ಬಗ್ಗೆ ಪರಿಹಾರ ಕೊಡುವುದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ ಬೇರೊಂದು ರೀತಿಯಲ್ಲಿ ವರದಿಯನ್ನು ಕೊಡುತ್ತಾರೆ ಇವರು ಹೇಳಿಕೆಯಲ್ಲಿ ಹೇಳಿರತಕ್ಕಂಥದಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೆ ಕೇಳಿರುವ ಸಹಾಯಕ್ಕೂ ಯಾವುದೇ ರೀತಿಯಾದ ಸಂಬಂಧವಿಲ್ಲ 1557 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಒಂದು ಕಡೆ ಹೇಳುತ್ತಾರೆ ಆದರೆ, ಕೇಂದ್ರದಿಂದ 500 ಕೋಟಿ ರೂಪಾಯಿಗಳಷ್ಟು ಪರಿಹಾರ ಕೇಳಿದ್ದೇವೆಂದು ಒಂದು ಕಡೆ ಹೇಳುತ್ತಾರೆ ಆದ್ದರಿಂದ, ಸರ್ಕಾರ ಕೊಟ್ಟಿರತಕ್ಕಂಥ ಯಾವ ಅಂಕಿ-ಅಂಶಗಳು ಸರಿಯೆಂದು ನಾನು ಪ್ರಶ್ನೆ ಕೇಳುವುದಕ್ಕೆ ಬಯಸುತ್ತೇನೆ

ಅಧ್ಯಕ್ಷರು ನೀವು ಈಗಾಗಲೇ ಹೇಳಿರತಕ್ಕಂಥದ್ದನ್ನೆ ಮತ್ತೆ ರಿಪಿಟ್ ಮಾಡುತ್ತಿದ್ದೀರಿ ಯಾವುದನ್ನು ಬಿಟ್ಟಿದ್ದಾರೆಯೋ ಅದರ ಬಗ್ಗೆ ಕ್ಲಾರಿಫಿಕೇಶನ್ ಕೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದರ ಬಗ್ಗೆಯೇ ನಾನು ಉತ್ತರ ಕೇಳುತ್ತಿದ್ದೇನೆ

ಅಧ್ಯಕ್ಷರು ಅದನ್ನು ಮಾತ್ರ ಕೇಳಿ ಒರಿಜನಲ್ ಭಾಷಣವನ್ನು ಮತ್ತೆ ರಿಪಿಟ್ ಮಾಡಿದರೆ ಹೇಗೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಉತ್ತರ ಬಾರದಿದ್ದರೆ ಏನು ಮಾಡಬೇಕು?

ಅಧ್ಯಕ್ಷರು ಅದನ್ನೇ ಸಂಕ್ಷಿಪ್ತವಾಗಿ ಕೇಳಿ

ಇದು ಮಾನವ ನಿರ್ಮಿತ ಫ್ಲಡ್ ಆಗಿದೆ ಏಕೆಂದರೆ, ಮಳೆ ಜಾಸ್ತಿಯಾಗಿ ಹೆಚ್ಚು ನೀರು ಬಂದಾಗ ಅದನ್ನು absorb ಮಾಡತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ಕ್ರಿಯೇಟ್ ಮಾಡಿಲ್ಲ ಕೇವಲ 2 ಹದ ಮಳೆ ಜಾಸ್ತಿ ಬಂದರೆ ತಡೆಕೊಳ್ಳುವ ಶಕ್ತಿ ನಮ್ಮ ಹಳ್ಳಿಗಳಿಗೆ ಮತ್ತು ಪಟ್ಟಣಗಳಿಗೆ ಇಲ್ಲ ಹಾಗೆಯೇ 2 ತಿಂಗಳ ಕಾಲ ಮಳೆ ನಿಂತು ಹೋದರೂ ಸಹ ತಡೆದುಕೊಳ್ಳುವ ಶಕ್ತಿ ಇಲ್ಲ ಈ ಒಂದು ಸ್ಥಿತಿಯನ್ನು ರಾಜ್ಯದಲ್ಲಿ ನಿರ್ಮಾಣ ಮಾಡಿದ್ದೇವೆ We are unable to develop the infrasturcture in such a way that we are able to absorb even heavy rains ಬೆಂಗಳೂರಿನಲ್ಲಿ ಮಳೆ ಬಿದ್ದರೆ ಮನೆಗಳಿಗೆಲ್ಲಾ ಏಕೆ ನೀರು ನುಗ್ಗುತ್ತದೆಂದರೆ, ನೀರು ಹೊರಗಡೆ ಹೋಗುವುದಕ್ಕೆ ಚರಂಡಿಗಳಿಲ್ಲ ಮತ್ತೆ ಹಳಿಳ್ಳಿಗಳಲ್ಲಿ ಮಳೆ ಬಂದರೆ ಮನೆಗಳು ಏಕೆ ಬಿದ್ದು ಹೋಗುತ್ತವೆಂದರೆ, ಬಿದ್ದಂಥ ಮಲೆ ನೀರು ಹೊರಕ್ಕೆ ಹೋಗುವುದಕ್ಕೆ ದಾರಿ ಮಾಡಿಲ್ಲ ಈ ಕೆಲಸಗಳನ್ನು ಮಾಡದೇ ಮಳೆಯಿಂದ ಫ್ಲಡ್ ಬಂದು ಮನೆಗಳೆಲ್ಲಾ ಬಿದ್ದು ಹೋಯಿತೆಂದು ಬಡಿದುಕೊಳ್ಳುವ ಸ್ಥಿತಿಯಲ್ಲಿ ನಾವು ಇದ್ದೇವೆ ಹೊರತು ಇದನ್ನು ಸುಧಾರಣೆ ಮಾಡುವುದರ ಬಗ್ಗೆ ನಾವೇನು ಮಾಡಲಿಲ್ಲ ಮತ್ತೆ ಕೆರೆಗಳಲ್ಲಿ ಹೂಳೆತ್ತುವ ಕೆಲಸ ಮಾಡಲಿಲ್ಲ ಮಳೆ ಜಾಸ್ತಿಯಾದರೆ ಕೆರೆಗಳ ಕೆಪಾಸಿಟಿ ಕಡಿಮೆಯಾಗಿ ಕೆರೆಫಳು ಒಡೆದು ಹೋಗಿ ಹಳ್ಳಿಗಳು ಕೊಚ್ಚಿಕೊಂಡು ಹೋಗುತ್ತದೆ ಕೆರೆಗಳನ್ನು ಭದ್ರ ಮಾಡತಕ್ಕಂಥ ಕೆಲಸವನ್ನು ಮಾಡಲಿಲ್ಲ ಇವತ್ತಿನ ದಿವಸ ಮಳೆಯನ್ನು ಹೆಚ್ಚಾಗಿ ಬಂದಿಲ್ಲ ಆದ್ದರಿಂದ, ಅದೇನು ಫ್ಲಡ್ ಅಲ್ಲ ಆದರೆ, ಅದನ್ನು ತಡೆದುಕೊಳ್ಳುವ ಶಕ್ತಿಯನ್ನು ನಾವು ಕ್ರಿಯೇಟ್ ಮಾಡಿಲ್ಲವೆಂದು ನಾನು ಹೇಳಿದ್ದೇನೆ ಅದಕ್ಕೆ ತಾವು ಏನೂ ಉತ್ತರವನ್ನೇ ಕೊಡಲಿಲ್ಲ ನಾನು ಈಗಾಗಲೇ ಮಾಡಿರುವ ಭಾಷಣವನ್ನು ತಾವು ಕೇಳಿಲ್ಲ

ಶ್ರೀ ಎನ್ ರಾಜೇಂದ್ರನ್ ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುವ ವಿಷಯ ಏನೆಂದರೆ, ನಮ್ಮ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಶಾರ್ಟೇಜ್ ಬಗ್ಗೆ ಹೇಳಿದ್ದೇನೆ ಆದ್ದರಿಂದ, ಅಲ್ಲಿಗೆ ತಕ್ಷಣ ಒಂದು ಟೀಮ್ ಕಳುಹಿಸಿ ಅದನ್ನು ಯಾವ ರೀತಿಯಾಗಿ ಬಗೆಹರಿಸುತ್ತೀರೆಂಬ ಬಗ್ಗೆ ನನಗೆ ಉತ್ತರ ಕೊಡಬೇಕು ನಮ್ಮಲ್ಲಿ ಬೇತುಮಂಗಲ ಕೆರೆ ಇದೆ ಮಾನ್ಯ ಸಚಿವರಿಗೂ ಕೂಡ ಇದು ಗೊತ್ತಿದೆ ಇವತ್ತಿನ ದಿವಸ ಆ ಕೆರೆ ಒಣಗಿದೆ ಬಿ ಜಿ ಎಂ ಎಲ್ ರವರು ವಾಲಂಟರಿಯಾಗಿ ಬಂದು ಡೋಜರ್‌ಗಳನ್ನು ನಾವು ಕೊಡುತ್ತೇವೆ ಅದಕ್ಕೆ ಡೀಸೆಲ್ ಹಾಕಿಕೊಂಡು ಡಿಸಿಲ್ಟಿಂಗ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆ ಇಷ್ಟು ಸಹಾಯ ಅವರು ಮಾಡುವುದಕ್ಕೆ ಬಂದಿದ್ದಾರೆ ಆದ್ದರಿಂದ, ತಾವು ಏನಾದರೂ ಪ್ರಯತ್ನ ಮಾಡಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಪ್ರಾರಂಭ ಮಾಡಿದರೆ ನಮ್ಮ ಜನರಿಗೆ ಅನುಕೂಲವಾಗುತ್ತದೆ ಇವತ್ತಿನ ಇದವಸ ಅಧಿಕಾರಿಗಳು ಮೆತ್ತಗಾಗಿದ್ದಾರೆ They are keeping silen and mum inefficiently, no doubt. ಆದ್ದರಿಂದ, ಇದರ ಬಗ್ಗೆ ತಮ್ಮ ಬಾಯಿಯಿನಿಂದ ಎರಡು ಮಾತು ಬಂದರೆ, ತಾವು ಒಂದು ಆರ್ಡರ್ ಇಷ್ಯೂ ಮಾಡಿದರೆ ತಕ್ಷಣ ಅವರು ಕೆಲಸ ಪ್ರಾರಂಭ ಮಾಡಲಿ ತಾವು ಇಲ್ಲಿ, ಅಲ್ಲಿ ಮಲಗಿಕೊಂಡಿದ್ದಾರೆಂದು ಚರ್ಚೆ ಮಾಡಿದ್ದಾರೆ ಮುಖ್ಯಮಂತ್ರಿಯಾಗಿರುವವರಿಗೆ ಸ್ವಲ್ಪ ಡಿಸ್‌ಕ್ರಿಷನರಿ ಪವರ್ ಇರುತ್ತದೆ You have the discretionary power ಊಟ ಮತ್ತು ಮನೆ ಇಲ್ಲದೇ ಇರತಕ್ಕಂಥ ಯಾರೊಬ್ಬ ಬಡವ ನಿಮ್ಮ ಹತ್ತಿರ ಬರುತ್ತಾನೆ ನನಗೆ ಮನೆ ಇಲ್ಲದೇ ಇರತಕ್ಕಂಥ ಯಾರೊಬ್ಬ ಬಡವ ನಿಮ್ಮ ಹತ್ತಿರ ಬರುತ್ತಾನೆ ನನಗೆ ಮನೆ ಮತ್ತು ಊಟ ಇಲ್ಲವೆಂದರೆ, ನಿಮ್ಮ ಎಂ ಎಲ್ ಎ ರವರನ್ನು ಕೇಳಿ ಕೊಡುತ್ತೇವೆಂದು ತಾವು ಹೇಳುತ್ತೀರಾ? ಆ ರೀತಿಯಾಗಿ ತಾವು ಹೇಳುವುದಕ್ಕೆ ಆಗುತ್ತದೆಯೇ? You are the King of the State You must pass an order then and there ನಾವು ಈ ಸಭೆಯಲ್ಲಿ ಭಾಷಣ ಮಾಡಿದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಆರ್ಡರ್ ಪಾಸ್ ಮಾಡುತ್ತಾರೆಂದು ತಿಳಿದುಕೊಂಡಿದ್ದೇವೆ ತಕ್ಷಣ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಜೊತೆಯಲ್ಲಿ ನಮ್ಮಲ್ಲಿಗೆ ಒಂದು ಟೀಮ್ ಕಳುಹಿಸಿ ಕುಡಿಯುವ ನೀರಿಗೆ ಒಂದು ಒಳ್ಳೆಯ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಬಿ ಎ ಜೀವಿಜಯ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರೆ ಅವರು ಉತ್ತರ ಕೊಡುವಾಗ ಪದೇ ಪದೇ ಅಡಚಣೆ ಉಂಟಾಯಿತು ಅದು ಬೇರೆ ಪ್ರಶ್ನೆ, ಆದರೆ, ಅವರ ಉತ್ತರ ನನಗೆ ನಿರಾಸೆ ತಂದಿದೆ ಏಕೆಂದರೆ, ನಮ್ಮ ಮಲೆನಾಡು ಪ್ರದೇಶದಲ್ಲಿ ಅದರಲ್ಲಿಯೂ ಮೊದಲಿಗೆ

ನಮ್ಮ ಕೊಡಗಿನಲ್ಲಿ ಅರ್ತೆ ಮಳೆ 22ನೇ ತಾರೀಖಿನ ದಿವಸ ಪ್ರಾರಂಭವಾಯಿತು ಅಲ್ಲಿ ಎಷ್ಟೆಷ್ಟು ಮಳೆ ಬಿತ್ತೆಂಬುದರ ಬಗ್ಗೆ ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ರೆಕಾರ್ಡ್ ಮಾಡಿರುತ್ತಾರೆ ಇದು ಮಾನ್ಯ ರೇವಣ್ಣನವರಿಗೂ ಸಹ ಗೊತ್ತಿದೆ ಒಂದು ದಿವಸಕ್ಕೆ 22 ಇಂಚು ಮಳೆ ಬಿದ್ದಿದೆ ಇಲ್ಲಿಯವರೆಗೆ ಸೋಮವಾರಪೇಟೆ, ಮಡಿಕೇರಿ ಮತ್ತು ವಿರಾಜಪೇಟೆ ಹಾಗೂ ತೀರ್ಥಹಳ್ಳಿಯಲ್ಲಿ, ಸಕಲೇಶಪುರ, ಮೂಡಿಗೆರೆಯಲ್ಲಿ ಸುಮಾರು 100 ಇಂಚಿಗಿಂತ ಹೆಚ್ಚು ಮಳೆಯಾಗಿದೆ ನಮ್ಮಲ್ಲಿ ಕಾಫಿ ಮತ್ತು ಏಲಕ್ಕಿ ಸರ್ವನಾಶವಾಗಿದೆ ಹಾಗೆಯೇ ಸಾವಿರಾರು ಮರಗಳು ಬಿದ್ದು ಹೋಗಿವೆ ಮತ್ತೆ ನಮ್ಮಲ್ಲಿ ರಸ್ತೆಗಳು ಎಷ್ಟು ದುಸ್ಥಿತಿಯಲ್ಲಿವೆಯೆಂದರೆ, ಅದನ್ನು ಹೇಳುವುದಕ್ಕೆ ಅಸಾಧ್ಯವಾಗುತ್ತದೆ ಕರೆಂಟ್ ವಿಷಯ ಬಿಡಿ, ಏಕೆಂದರೆ, ನಮ್ಮಲ್ಲಿ ನೂರಾರು ಕರೆಂಟ್ ಕಂಬಗಳು ಬಿದ್ದು ಹೋಗಿವೆ ಇದುವರೆಗೂ ಒಂದೇ ಒಂದು ಕಂಬವನ್ನು ಸರಿಮಾಡುವುದಕ್ಕೆ ಆಗಿಲ್ಲ

ಈ ಎಲ್ಲಾ ಮಾಹಿತಿಗಳಿದ್ದರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮಲೆನಾಡು ಜಿಲ್ಲೆಗೆ Natural calamity relief Fund ನಿಂದ ಹಣವನ್ನು ಯಾವ ರೀತಿಯಾಗಿ ಬಿಡುಗಡೆ ಮಾಡಲಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಕೇಂದ್ರ ಸರ್ಕಾರದಿಂದ ಕಳೆದ ವರ್ಷ 780 ಕೋಟಿ ರೂಪಾಯಿಗಳು ಬಂದಿತ್ತೆಂದು ನಮ್ಮ ನಾಯಕರು ಹೇಳಿದರು ಇದಕ್ಕೆ ನೀವು ಬೇರೆ ರೀತಿಯಲ್ಲಿ ಉತ್ತರ ಕೊಟ್ಟಿದ್ದೀರಿ ನಮಗೆ ಕೇಂದ್ರ ಸರ್ಕಾರದಿಂದ ಹಿಂದೆ ಎಷ್ಟು ಬಂದಿತ್ತೆಂದು ಮತ್ತು ಈಗ ಎಷ್ಟು ಕೊಟ್ಟಿದ್ದಾರೆ ಎನ್ನತಕ್ಕಂಥ ಪ್ರಶ್ನೆಯ ಅಗತ್ಯತೆ ನನಗೆ ಇಲ್ಲ ನಮ್ಮ ಕೊಡಗು ಒಂದು ಪುಟ್ಟ ಜಿಲ್ಲೆಯಾಗಿದೆ ನಮ್ಮ ಜಿಲ್ಲೆಗೆ ಯಾವುದಕ್ಕೂ ಹಣ ಕೊಡುತ್ತಿಲ್ಲ 3054 ಹೆಡ್‌ನಲ್ಲಿ ಶಿಕಾರಿಪುರಕ್ಕೆ 87 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದಾರೆ ನಮಗೆ ಕೇವಲ 25 ಲಕ್ಷ ರೂಪಾಯಿ ಮಾತ್ರ ಕೊಡುತ್ತಾರೆ ಈ ರೀತಿಯಾದರೆ, ಕೊಡಗು ಜಿಲ್ಲೆ ಯಾವ ರೀತಿಯಾಗಿ ಅಭಿವೃದ್ಧಿಯಾಗುತ್ತದೆ? ನಿಮ್ಮ ಅಣೆಕಟ್ಟುಗಳೆಲ್ಲಾ ತುಂಬ ಬೇಕು ಹಾರಂಗಿ, ಚಕ್ಕಲಿ ಅಣೆಕಟ್ಟು ತುಂಬಿದೆ ಮತ್ತೆ ಈಗ ಕೆ ಆರ್ ಎಸ್ ಅಣೆಕಟ್ಟು ತುಂಬುತ್ತಿದೆ ನಮ್ಮ ಸೋಮವಾರ ಪೇಟೆಯಿಂದ ಹೇಮಾವತಿಗೆ ನೀರು ಹೋಗುತ್ತದೆ ಮತ್ತೆ ದಕ್ಷಿಣ ಕೊಡಗಿನಿಂದ ಕಾವೇರಿಗೆ ಸೇರುವ ಕಬಿನಿಗೆ ನೀರು ಬರುತ್ತದೆ ಇಷ್ಟು ಕಷ್ಟವನ್ನು ನಾವು ಅನುಭವಿಸುತ್ತಿದ್ದರೂ ಕೂಡ ಹಿಂದಿನ ಸರ್ಕಾರವಾಗಲಿ ಅಥವಾ ಈಗಿನ ಸರ್ಕಾರವಾಗಲಿ ನಮ್ಮ ಮಲೆನಾಡು ಜಿಲ್ಲೆಗಳಿಗೆ ಹಣವನ್ನು ಏಕೆ ಬಿಡುಗಡೆ ಮಾಡುತ್ತಿಲ್ಲ? ಆದ್ದರಿಂದ, ಕೊಡಗು ಜಿಲ್ಲೆಗೆ ಮಳೆಯಿಂದ ಆಗಿರುವ ಹಾನಿಗೆ ಎಷ್ಟು ಪರಿಹಾರವನ್ನು ಕೊಡತ್ತಿರೆಂದು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು

ಉತ್ತರ ಕೊಡಬೇಕು ಮಳೆ ಹಾನಿಯಿಂದ 29 5 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಈಗಾಗಲೇ ಮೊದಲನೇ ವರದಿ ಕೊಡಗು ಜಿಲ್ಲೆಯಿಂದ ತಮಗೆ ಬಂದಿದೆ ಮತ್ತೆ ಅಲ್ಲಿನ ಗ್ರಾಮಗಳಲ್ಲಿ ಆಗಿರುವ ನಷ್ಟವನ್ನು ನೋಡುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಹೋಗುವುದಕ್ಕೆ ಆಗಿಲ್ಲ ಕಾರಣ ಏನೆಂದರೆ, ಅಲ್ಲಿರತಕ್ಕಂಥ ರಸ್ತೆಗಳೆಲ್ಲಾ ಕಟ್ ಆಗಿದೆ ಎಲ್ಲಿಗೂ ಸಹ ಹೋಗುವುದಕ್ಕೆ ಆಗುತ್ತಿಲ್ಲ

ಅಧ್ಯಕ್ಷರು ಈಗಾಗಲೇ ಎಲ್ಲವನ್ನು ಹೇಳಿದ್ದೀರಿ ಉತ್ತರವನ್ನು ಕೊಡುತ್ತಾರೆ ಕುಳಿತುಕೊಳ್ಳಿ

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸ್ಪಷ್ಟವಾಗಿ ಉತ್ತರವನ್ನು ಸರ್ಕಾರದ ಕಡೆಯಿಂದ ಬಯಸಿದ್ದಾರೆ ತಮ್ಮ ಮುಖಾಂತರ ಒಂದು ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ ಅದೇನೆಂದರೆ, ಇತ್ತೀಚಿಗೆ ಬಂದಂಥ ಮಳೆಯಿಂದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿದೆ ಇದರಿಂದ ಸುಮಾರು 1500 ಕ್ಕಿಂತ ಹೆಚ್ಚು ಜಾನುವಾರುಗಳು ಸತ್ತಿವೆ ಮತ್ತೆ ಸುಮಾರು 60 ಕ್ಕೂ ಹೆಚ್ಚು ಜನವರು ಸತ್ತಿದ್ದಾರೆ ಈವರೆಗೂ ಕೂಡ ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆಂದು ಹೇಳುತ್ತಾ ಬರುತ್ತಿದ್ದಾರೆ ತಮಗೆ ಗೊತ್ತಿರುವ ಹಾಗೆ, as per the recommendatio of the 12th Finance, 12ನೇ ಹಣಕಾಸಿನ ರೆಕಮಂಡೇಷನ್ ಪ್ರಕಾರ ಈಗಾಗಲೇ ಕೇಂದ್ರ ಸರ್ಕಾರ ಈ ವರ್ಷರಾಜ್ಯ ಸರ್ಕಾರಕ್ಕೆ 123 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಅಷ್ಯೂರ್ ಮಾಡಿದೆ ಇದರಲ್ಲಿ 75% ಕೇಂದ್ರ ಸರ್ಕಾರ ಕೊಡುತ್ತದೆ ಉಳಿದ 25% ಹಣವನ್ನು ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ ಇದು Calamity Relief Fund ಆಗಿರುತ್ತದೆ ಈ Calamity Relief Fund ಅನ್ನು ಇವರಿಗೆ ಈಗಾಗಲೇ ಕೇಂದ್ರ ಸರ್ಕಾರ ಬಿಡುಗಡೆ ಮಾಡುತ್ತಿದೆ, ಆದರೆ, ಇವರು ಅಡ್ವಾನ್ಸ್‌ನ್ನು ರಿಲೀಸ್ ಮಾಡುಬೇಕು ಇವರು ಅಡ್ವಾನ್ಸ್‌ನ್ನು ರಿಲೀಸ್ ಮಾಡಿದರೆ ಮಾತ್ರ ಅವರು ಹಣವನ್ನು ಬಿಡುಗಡೆ ಮಾಡುತ್ತಾರೆ ಆದರೆ, ಇವತ್ತಿನವರೆಗೂ ಕೂಡ ರಾಜ್ಯ ಸರ್ಕಾರ ಸಿ ಆರ್ ಎಫ್ ಗೆ ಸಂಬಂಧಪಟ್ಟಂತ ಅಡ್ವಾನ್ಸ್ ಹಣವನ್ನು ರಿಲೀಸ್ ಮಾಡಿಲ್ಲ ಈ ರೀತಿಯಾಗಿ ತೊಂದರೆಯಾಗಿದೆ ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ಕಂದಾಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, 12ನೇ ಹಣಕಾಸಿನ ಆಯೋಗದ ಶಿಫಾರಸ್ಸಿನ ಪ್ರಕಾರ ನಮ್ಮ ರಾಜ್ಯಕ್ಕೆ 123 ಕೋಟಿ ರೂಪಾಯಿ ಸಿಗಬೇಕಾಗುತ್ತದೆ

ಈ ಹಣದಲ್ಲಿ ಅತಿವೃಷ್ಟಿಗಾಗಿ ಈಗಾಗಲೇ ಎಷ್ಟು ಹಣವನ್ನು ತಾವು ಅಡ್ವಾನ್ಸ್ ಆಗಿ ಬಿಡುಗಡೆ ಮಾಡಿದ್ದೀರಿ? ನಾನು ಹೇಳುವುದನ್ನು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಕೇಳಬೇಕು 12ನೇ ಹಣಕಾಸಿನ ಆಯೋಗದ ಶಿಫಾರಸ್ಸಿನ ಪ್ರಕಾರ ನಮ್ಮ ರಾಜ್ಯಕ್ಕೆ 123 ಕೋಟಿ ರೂಪಾಯಿಗಳಷ್ಟು ಬಿಡುಗಡೆ ಮಾಡುವುದಕ್ಕೆ ಅಷ್ಯೂರ್ ಮಾಡಿದೆ It is an assured money ಅದೇ, ಇವತ್ತಿನವರೆಗೂ ತಾವು ಏಕೆ ಬಿಡುಗಡೆ ಮಾಡಿಲ್ಲ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ

ಇದಕ್ಕೆ ಕಾರಣ, ಈ ಸರ್ಕಾರ ನಿಷ್ಕ್ರೀಯವಾಗಿದೆ, ಈ ಅತಿವೃಷ್ಟಿಯಾದ ಪ್ರದೇಶದಲ್ಲಿರುವ ಜನರನ್ನು ಮತ್ತು ಅಲ್ಲಿಯ ಕಷ್ಟಕಾರ್ಪಣ್ಯವನ್ನು ನೋಡುವುದಕ್ಕೆ ನಿಮಗೆ ಯಾರಿಗೂ ಕೂಡ ಇವತ್ತು ಟೈಮ್ ಇಲ್ಲ ಹೀಗಾಗಿ ಈ ಹಣ ಬಿಡುಗಡೆಯಾಗಿಲ್ಲ ದಯಮಾಡಿ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು

ಅಧ್ಯಕ್ಷರು ಹುಕ್ಕೇರಿಯವರೆ, ನೀವು ಮಾತನಾಡಿ, ಆ ಮೇಲೆ ಅವಕಾಶ ಕೊಟ್ಟಿಲ್ಲವೆಂದು ಬಾಯಿ ಬಡಿದುಕೊಳ್ಳುತ್ತೀರಿ

ಶ್ರೀ ಪ್ರಕಾಶ್ ಹುಕ್ಕೇರಿ ಅವರ ಉತ್ತರ ಬಂದು ಬಿಟ್ಟರೆ ಎಲ್ಲರ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ

ಶ್ರೀ ಎಸ್ ಎಸ್ ಪಾಟೀಲ್ ಅವರಿಗೆ ಉತ್ತರ ಬಂದು ಬಿಟ್ಟರೆ ಎಲ್ಲರ ಪ್ರಶ್ನೆ ಮುಗಿದಂತಾಗುತ್ತದೆ ಅಶ್ಯಕತೆ ಇಲ್ಲಾ ಬಿಡಿ, ಎಲ್ಲವನ್ನು ಅವರು ಕೇಳಿಬಿಟ್ಟಿದ್ದಾರೆ

ಅಧ್ಯಕ್ಷರು ಮಾನ್ಯ ಪಾಟೀಲರೆ, ಹುಕ್ಕೇರಿಯವರನ್ನು ಕರೆದಿದ್ದೇನೆ ಹುಕ್ಕೇರಿಯವರೆ ತಾವು ಹೇಳಿ

ಶ್ರೀ ಪ್ರಕಾಶ್ ಹುಕ್ಕೇರಿ (ಸದಲಗ) ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ನಾವು ಮಾತನಾಡುವಾಗ ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕು, ಅಥಣಿ ತಾಲ್ಲೂಕಿಗೆ ಈ ಕೃಷ್ಣಾನದಿ ಮತ್ತು ದೂದಗಂಗಾ ನದಿಯಿಂದ ಮಹಾಪೂರ ಬಂದು ಸಾಕಷ್ಟು ಹಳ್ಳಿಗಳು ಜಲಾವೃತವಾಗಿವೆ ಆ ರಸ್ತೆಗಳನ್ನು ಎತ್ತರ ಮಾಡುವುದಕ್ಕೆ ನಾವು ಹಣವನ್ನು ಪ್ರತಿ ವರ್ಷ ಕೇಳುತ್ತೇವೆ ಆ ಜನವರು ಹಳ್ಳಿಗಳಿಂದ ಹೊರಗೆ ಬರಬೇಕಾದರೆ ರಸ್ತೆಯನ್ನು ಎತ್ತರ ಮಾಡಬೇಕಾಗಿದೆ

ಅದಕ್ಕಾಗಿ ಹಣವನ್ನು ಒದಗಿಸಿ ಎಂದು ನಾವು ಪ್ರತಿ ವರ್ಷ ಕೇಳುತ್ತಿದ್ದೇವೆ ದಯವಿಟ್ಟು ಹಳ್ಳಿಗಳನ್ನು ಸ್ಥಳಾಂತರ ಮಾಡುವುದು ಅದು ಬೇರೆ ಮತ್ತು ಆ ರಸ್ತೆಗಳನ್ನು ಎತ್ತರ ಮಾಡಿ, ಜನರು ಗ್ರಾಮದಿಂದ ಹೊರಗೆ ಬರುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೋಗ ವರ್ಷ ಮತ್ತು ಈ ವರ್ಷವು ಹಣವನ್ನು ಕೇಳಿದ್ದೇವೆ ಮಾನ್ಯ ಮುಖ್ಯಮಂತ್ರಿಗಳು ಅಥಣಿಗೆ ಭೇಟಿ ಕೊಟ್ಟಾಗ ಗ್ರಾಮವನ್ನು ಸ್ಥಳಾಂತರ ಮಾಡುವುದಕ್ಕೆ ಮತ್ತು ರಸ್ತೆಯನ್ನು ಎತ್ತರ ಮಾಡುವುದಕ್ಕೆ 550 ಕೋಟಿ ರೂ ಗಳನ್ನು ಕೊಟ್ಟಿದ್ದೇವೆಂದು ಹೇಳಿದರು ಆ ಹಣ ಇನ್ನುವರೆಗೆ ಖರ್ಚಾಗಿಲ್ಲ, ಏಕೆ ಹಣ ಖರ್ಚಾಗಲಿಲ್ಲ ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ಹೇಳಇದ್ದರು ನಾವು ಅಥಣಿ ತಾಲ್ಲೂಕಿನ ಹಳ್ಳಿಗಳನ್ನು ಸ್ಥಳಾಂತರಿಸುತ್ತೇವೆ, ಆ ಮೇಲೆ ರಸ್ತೆಗಳನ್ನು ಎತ್ತರ ಮಾಡುತ್ತೇವೆಂದು ಹೇಳಿದ್ದರು ಆದರೆ ಆ ಕಾರ್ಯಕ್ರಮದ ಇನ್ನುವರೆಗೆ ಆಗಿಲ್ಲ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ದಯವಿಟ್ಟು ರಸ್ತೆಗಳನ್ನು ಎತ್ತರ ಮಾಡಬೇಕು ಬೆಳೆಗಳಿಗೆ ಪರಿಹಾರವನ್ನು ಕೊಡುವ ವ್ಯವಸ್ಥೆ ಆಗಬೇಕೆಂದು ಕಳಕಳಿಯಾಗಿ ತಮ್ಮ ಮೂಲಕ ನಾನು ಅವರನ್ನು ವಿನಂತಿಸಿಕೊಳ್ಳುತ್ತೇನೆ

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರ್) ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಕಳೆದ ಎರಡು ವರ್ಷಗಳ ಹಿಂದೆ ಕೂಡ ಉತ್ತರವನ್ನು ಕೊಡುವಾಗ ಈ ಹಳ್ಳಿಗಳನ್ನು ಸ್ಥಳಾಂತರ ಮಾಡುವ ಬಗ್ಗೆ ಹೋದ ಸಲ ಈ ಸದನದಲ್ಲಿ ಸ್ಥಳಾಂತರ ಮಾಡತಕ್ಕಂಥ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ ಭೂಮಿಯನ್ನು ಆಯ್ಕೆ ಮಾಡಿಕೊಂಡಿದೆ, ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಕೊಡುತ್ತೇವೆಂದು ಹೇಳಿದ್ದರು ಇವತ್ತಿಗೂ ಅದರ ಬಗ್ಗೆ ಉತ್ತರದಲ್ಲಿ ಏನೊಂದು ಚಕಾರ ಶಬ್ಧವು ಕೂಡ ಬಂದಿಲ್ಲ ದಯವಿಟ್ಟು ಪುನರ್ ವಸತಿ ಕಾರ್ಯಕ್ರಮದ ಬಗ್ಗೆ ಏನು ಮಾಡುತ್ತಾರೆ, ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವ ಬಗ್ಗೆ ಒಂದು ನಿಖರವಾದ ದಿನಾಂಕವನ್ನು ಪ್ರಕಟ ಮಾಡುತ್ತಾರೆಯೆ ಎನ್ನುವ ಬಗ್ಗೆ ತಮ್ಮ ಮೂಲಕ ನಾನು ಉತ್ತರವನ್ನು ಬಯಸುತ್ತೇನೆ

ಶ್ರೀ ಅಪ್ಪಾಜಿ ಎಸ್ ನಾಡಗೌಡ (ಮುದ್ದೇಬಿ ಹಾಳ್) ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯಲ್ಲಿ ಸತತವಾಗಿ ಮೂರು ವರ್ಷದಿಂದ ನೆರೆ ಹಾವಳಿ, ಒಂದು ಕಡೆ ನದಿ ಪ್ರವಾಹ ಇನ್ನೊಂದು ಕಡೆ ದೋಣಿ ನದಿಯ ಪ್ರವಾಹ, ಈ ಎರಡನ್ನು ಕೂಡ ತಪ್ಪಿಸಿ ಹೋಗಿಬಿಟ್ಟಿದೆ ಇನ್ನುವರೆಗೆ ಕೂಡ ಯಾವ ಶಾಶ್ವತವಾದ ಒಂದು ಕಾರ್ಯಕ್ರಮಗಳು ಬಿಜಾಪುರ ಜಿಲ್ಲೆಯಲ್ಲಿ ನಡೆದಿಲ್ಲ ನಮ್ಮ ಸ್ನೇಹಿತರಾದ ಪ್ರಕಾಶ್ ಹುಕ್ಕೇರಿಯವರಾಗಲಿ, ಹಂಪನಗೌಡ ಬಾದರ್ಲಿಯವರು ಹೇಳಿದ

ಹಾಗೆ, ಹಿಂದೆ ಇದ್ದ ಮಾಜಿ ಜಿಲ್ಲಾಧಿಕಾರಿಯಾದ ಅಜೀಜಶೆಟ್ಟಿ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು ಆ ಸಮಿತಿಯ ವರದಿ ಕೊಟ್ಟರೆ ಇವತ್ತಿಗೂ ಏನಾಯಿತು ಎನ್ನುವುದು ನಮಗೆ ಗೊತ್ತಿಲ್ಲ ದೋಣಿ ನದಿಯ ಪ್ರವಾಹ ಪ್ರತಿ ವರ್ಷ ಏಕಾಗುತ್ತದೆ ಆ ನದಿಯ ಹೂಳನ್ನು ತೆಗೆಯಬೇಕು ಮತ್ತು ಅಲ್ಲಿ ಒತ್ತುವರಿಯಾದಂಥ ಜಮೀನನ್ನು ಹಾಗೂ ಅಲ್ಲಿರುವ ಗಿಡಗಂಟೆಗಳನ್ನು ಸ್ವಚ್ಛ ಮಾಡಿ ದೋಣಿ ನದಿಯ ಪ್ಯಾಸೇಜ್‌ನ್ನು ಕ್ಲೀಯರ್ ಮಾಡಬೇಕು ಎಲ್ನುವಂಥ ಪ್ರಸ್ತಾಪ ಸರ್ಕಾರದಲ್ಲಿ ಹಲವಾರು ವರ್ಷಗಳಿಂದ ಇದೆ ಇವತ್ತಿನವರೆಗೂ ಅದರ ಬಗ್ಗೆ ಯಾವ ಕ್ರಮವು ಆಗಿಲ್ಲ ಅದರ ಬಗ್ಗೆ ಸರ್ಕಾರದಿಂದ ಏನು ಹೇಳಿಕೆ ಬರುತ್ತಿಲ್ಲ ಇವತ್ತಿಗೂ ಒಂದು ಬಿಡಿಗಾಸಿನ ಪರಿಹಾರವನ್ನು ರೈತರಿಗೆ ಕೊಟ್ಟಿಲ್ಲ ದೋಣಿ ನದಿಯ ಅಕ್ಕಪಕ್ಕದಲ್ಲಿರುವ ಜಮೀನು ಈ ವರ್ಷ ಪೂರ್ತಿಯಾಗಿ ಕೊಚ್ಚಿ ಹೋಗಿದೆ, ಬಂಜರವಾಗಿದೆ ಈ ಸಲ ಅಲ್ಲಿ ಒಂದು ಚೀಲ ಅಲ್ಲ ಒಂದು ಕಾಳು ಬೆಳೆಯುವುದಕ್ಕೆ ಸಾಧ್ಯವಿಲ್ಲ ಆ ಪರಿಸ್ಥಿತಿ ನಿರ್ಮಾಣವಾಗಿದೆ ಇವತ್ತಿನವರೆಗೆ ಯಾವ ಕ್ರಮ ನಡೆದಿಲ್ಲ, ಯಾವ ಪರಿಹಾರ ಕೂಡ ರೈತರಿಗೆ ಸಿಕ್ಕಿಲ್ಲ ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಆ ದೋಣಿ ನದಿಯ ಹೂಳನ್ನು ತೆಗೆಯುತಕ್ಕಂಥ ಕಾರ್ಯಕ್ರಮ ಮತ್ತು ಅಕ್ಕಪಕ್ಕದಲ್ಲಿರತಕ್ಕಂಥ ರೈತರ ಜಮೀನಿಗೆ ಜಲಾನಯನ ಇಲಾಖೆಯಿಂದ ತಾವು ಹೆಚ್ಚಿನ ಒಂದು ಒತ್ತುಕೊಟ್ಟು ಒಡ್ಡು, ಬಾಂಧಾರಗಳನ್ನು ಆಯುಕಟ್ಟಿನ ಡ್ಯಾಮ್‌ಗಳನ್ನು ಈ ರೀತಿಯಾಗಿ ನಿರ್ಮಾಣ ಮಾಡಿದರೆ ಸ್ವಲ್ಪ ಮಟ್ಟಿಗೆ ಅದರ ಪ್ರವಾಹವನ್ನು ಕಡಿಮೆ ಮಾಡಿ ಅಲ್ಲಿರತಕ್ಕಂಥ ರೈತರ ಭೂಮಿ ಮತ್ತು ಹಳ್ಳಿಗಳಿಗೆ ನೀರು ನುಗ್ಗದ ಹಾಗೆ ಮಾಡಲಿಕ್ಕೆ ಸಾಧ್ಯವಿದೆ ದಯವಿಟ್ಟು ಅದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) ಮಾನ್ಯ ಅಧ್ಯಕ್ಷರೆ, ನಮ್ಮ ಧಾರವಾಡ ಕೆಸಿಸಿ ಬ್ಯಾಂಕ್‌ನಲ್ಲಿ ಸಾಲ ಮನ್ನಾ ಆದಂತಹ ರೈತರಿಗೆ ಮರುಸಾಲವನ್ನು ಕೊಡುತ್ತಿದ್ದಾರೆ ಇದು ಅತ್ಯಂತ ಹೆಮ್ಮೆ ಪಟ್ಟುಕೊಳ್ಳುವಂತಹದ್ದು ಮತ್ತು ಅದಕ್ಕಾಗಿ ಸರ್ಕಾರಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ ಏನು ಮರು ಸಾಲವನ್ನು ಕೊಡುತ್ತಿದ್ದಾರೆ ಅವರು ಪ್ರತಿಶತ 10 ರಷ್ಟು ಷೇರು ಹಣವನ್ನು ಮುರಿದುಕೊಳ್ಳುತ್ತಿದ್ದಾರೆ ಈಗಾಗಲೇ ಎಲ್ಲಾ ರೈತರ ಷೇರು ಪ್ರತಿಶತ 10 ರಷ್ಟು ಇದ್ದರೂ ಕೂಡ ಈಗ ಕೊಡುತ್ತಿರುವಂತಹ ಸಾಲದ ಮೇಲೆ 10% ಷೇರನ್ನು ಮುರಿದುಕೊಳ್ಳುವುದರಿಂದ ರೈತರಿಗೆ ಇವತ್ತು ತೊಂದರೆಯಾಗುತ್ತಿದೆ ಆ ಷೇರನ್ನು ಮುರಿದುಕೊಳ್ಳುವುದರ ಬದಲಾಗಿ ಆ ಹಣವನ್ನು ಅಲ್ಲಿ ಸಸ್ಪೆನ್ಸ ಖಾತೆಯಲ್ಲಾಗಲಿ, ಅಥವಾ ಅವರ ಎಸ್ ಬಿ ಖಾತೆಯಲ್ಲಿ ಇಟ್ಟು ಕೆಲವು ದಿನಗಳ ನಂತರ ಕೆಸಿಸಿ

ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಯೂ ಸುಧಾರಿಸಿದ ನಂತರ ಕೊಡುವಂತಹ ವ್ಯವಸ್ಥೆಯಾಗಬೇಕು

ನಾನು ತಮ್ಮ ಹತ್ತಿರ ಕೇಳುವುದಕ್ಕೆ ಇಷ್ಟಪಡುತ್ತೇನೆ ಕಳೆದ 5ನೇ ತಾರೀಖಿನ ದಿವಸ ಅತಿವೃಷ್ಟಿ ಮತ್ತು ಬಂಗಾಲದ ಬಗ್ಗೆ ಸಾಕಷ್ಟು ಚರ್ಚೆಯಾಯಿತು ಆ ಸಂದರ್ಭದಲ್ಲಿ ಹಾವೇರಿ ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಾಗಿರಲಿಲ್ಲ ಮತ್ತು ಪ್ರವಾಹವೂ ಕೂಡ ಬಂದಿರಲಿಲ್ಲ ಆದರೆ ಇತ್ತೀಚಿನ 3 ದಿನಗಳಲ್ಲಿ ಸುರಿದಂತಹ ಭಾರಿ ಮಳೆಯಿಂದಾಗಿ ಹಾವೇರಿ ಜಿಲ್ಲೆಯಲ್ಲಿ ಹರಿದಿರುವಂತಹ ವರದಾನದಿ ಅಪಾಯ ಮಟ್ಟವನ್ನು ಮೀರಿ ಇವತ್ತು ಹರಿಯುತ್ತಿರುವುದರಿಂದ ಹಾನಗಲ್ ಮತ್ತು ಹಾವೇರಿ ತಾಲ್ಲೂಕಿನ ಅನೇಕ ರೈತರ ಹೊಲಗಳು ಇವತ್ತು ಜಲಾವೃತ್ತವಾಗಿವೆ ಅದರ ಬಗ್ಗೆ ತಾವು ತಕ್ಷಣ ವರದಿಯನ್ನು ತರಿಸಬೇಕು ಅಲ್ಲಿ ಸಾಕಷ್ಟು ಮನೆಗಳು ಕೂಡ ಬೀಳುತ್ತಿವೆ ಆ ಎಲ್ಲಾ ವರದಿಯನ್ನು ತರಿಸಿ ಶೀಘ್ರವಾಗಿ ಪರಿಹಾರವನ್ನು ಒದಗಿಸುವಂತಹ ಕೆಲಸವನ್ನು ಸನ್ಮಾನ್ಯ ಕಂದಾಯ ಸಚಿವರು ಮಾಡಬೇಕು ಮತ್ತು ರೈತರ ಷೇರನ್ನು ಏನು ಮುರಿದುಕೊಳ್ಳುತ್ತಿದ್ದಾರೆ ಇದರ ಬಗ್ಗೆ ತಕ್ಷಣ ಒಂದು ಆದೇಶವ್ನು ಮಾಡಿ ಆ ಷೇರನ್ನು ಮುರಿದು ಕೊಳ್ಳಬಾರದು ಪೂರ್ತಿ ಹಣವನ್ನು ಸಾಲದ ರೂಪದಲ್ಲಿ ಕೊಡಬೇಕೆಂದು ಆದೇಶವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೆ, ಮೊನ್ನೆ ದಿನ ಅತಿವೃಷ್ಟಿಯ ಬಗ್ಗೆ ಮಾತನಾಡಿದೆವು ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ ನನ್ನ ವಿನಂತಿ ಏನೆಂದರೆ, ಇನ್ನು 5–6 ದಿವಸ ಬಿಟ್ಟು ಈ ಬಗ್ಗೆ ಚರ್ಚೆ ನಡೆದರೆ ಒಳ್ಳೆಯದು ಇತ್ತು ಏಕೆಂದರೆ ನಮ್ಮಲ್ಲಿ ಹಗಲು ಮತ್ತು ರಾತ್ರಿ ಯಾವುದು ಎಂದು ಗೊತ್ತಾಗುತ್ತಿಲ್ಲ ಆ ರೀತಿಯಿಂದ ಅಲ್ಲಿ ಮಳೆ ಸುರಿಯುತ್ತಿದೆ ಅಲ್ಲಿ ಏನೇನು ಅನಾಹುತವಾಗುತ್ತಿದೆ ಎಂದು ನಮಗೆ ಇನ್ನೂ ಗೊತ್ತಾಗುತ್ತಿಲ್ಲ ಏಕೆಂದರೆ ಅಲ್ಲಿನ ನೆರೆ ಆವೃತ್ತವಾಗಿ ಹಳ್ಳಿಹಳ್ಳಿಯ ಹತ್ತಿರ ಬಂದಿದೆ ರಸ್ತೆಗಳು ಡೀಲಿಂಕ್ ಆಗಿದೆ ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಹೋಗುವುದಕ್ಕೆ ಸಂಪರ್ಕವೇ ಕಡಿದುಹೋಗಿವೆ ಇಂತಹ ಒಂದು ಪರಿಸ್ಥಿತಿ ಯಾಗಿದೆ ಸುಮಾರು 1 ತಿಂಗಳಿನಿಂದ ಹಳ್ಳಿಗಳಲ್ಲಿ ಕರೆಂಟ್ ಇಲ್ಲ, ಅದರಿಂದ ದಯವಿಟ್ಟು ಸಮರೋಪಾದಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಇನ್ನು ಸ್ವಲ್ಪ ದಿವಸ ಬಿಟ್ಟು ಈ ಬಗ್ಗೆ ಚರ್ಚೆ ಮಾಡಿದರೆ ಅನುಕೂಲವಾಗುತ್ತಿತ್ತು ಸಾಕಷ್ಟು ಜನರನ್ನು ಅಲ್ಲಿಗೆ ಕಳುಹಿಸಿ ಸರ್ವೆ ಮಾಡುವಂತಹ ಅಗತ್ಯವಿದೆ

ನಾವು ಮೊನ್ನೆ ದಿನ ವಿಶೇಷವಾಗಿ ಹೇಳಿದ್ದೇವೆ ಮಲೆನಾಡಿನ ರಸ್ತೆಗಳಲ್ಲಿ ಮಳೆ ಮುಗಿಯುವವರೆಗೆ ಕರಾವಳಿ ಮತ್ತು ಮನಲೆನಾಡಿನ ರಸ್ತೆಗಳಲ್ಲಿ ಮೈನ್ಸ್ ಲಾರಿಗಳ ಓಡಾಟವನ್ನು ಮಾನ್ಯ ಮುಖ್ಯಮಂತ್ರಿಗಳು ನಿರ್ಬಂಧ ಮಾಡಬೇಕು ಇಲ್ಲದೇ ಹೋದರೆ ಎಷ್ಟು ಕೋಟಿ ರೂಪಾಯಿಗಳನ್ನು ರಸ್ತೆಗಾಗಿ ತೆಗೆದಿಟ್ಟಿದ್ದರೂ ಏನು ಪ್ರಯೋಜನವಾಗುವುದಿಲ್ಲ ಸಮುದ್ರದಲ್ಲಿ ಹುಣಸೇ ಹಣ್ಣನ್ನು ಕದಡಿದಹಾಗೆ ಎಂದು ನಮ್ಮ ಹಳ್ಳಿಯಲ್ಲಿ ಹೇಳುತ್ತಾರೆ, ಆ ಸ್ಥಿತಿಯಾಗುತ್ತದೆ ದಯವಿಟ್ಟು ಇದಕ್ಕೆ ನಿರ್ಬಂಧ ಹಾಕಬೇಕೆಂದು ನನ್ನ ವಿನಂತಿ

ಶ್ರೀ ಜಿ ಎಸ್ ಗಡ್ಡದೇವಮಠ (ಶಿರಹಟ್ಟಿ) ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಭಾಗದೊಳಗೆ ವಿಶೇಷವಾಗಿ ಬಹಳ ಮುಖ್ಯವಾಗಿ ಮುಂಗಾರು ಮಳೆ ಎಂದು ನಾವು ಹೆಸರನ್ನು ಬಿತ್ತುತ್ತೇವೆ ಆದರೆ ಈ ವರ್ಷದ ಸ್ಥಿತಿ ಅಲ್ಲಿ ಏನಾಗಿದೆ ಎಂದರೆ, ಈಗ ನಮ್ಮಲ್ಲಿ ವಿಶೇಷವಾದಂಥ ಮಳೆ, ವಾಡಿಕೆ ಮಳೆ ಏನು ಒಂದು ತಿಂಗಳಿಗೆ ಆಗಬೇಕಾಗಿತ್ತು ಆ ಮಳೆ ಒಂದೇ ದಿವಸದಲ್ಲಿ ಆಗಿದೆ ಬಹುತೇಕವಾಗಿ ಕೊಡಪಾ ತೆಗೆದುಕೊಂಡು ನೀರು ಸುರಿದಂಥ ಪರಿಸ್ಥಿತಿಯಾಗಿದೆ ಇದು ಅಷ್ಟೇ ಅಲ್ಲ, ಅವತ್ತಿನಿಂದ ಇವತ್ತನವರೆಗೂ 15–20 ದಿವಸಗಳಿಂದಲೂ ಸತತವಾಗಿ ಮಳೆಯಾಗುತ್ತಿರುವುದರಿಂದ ರೈತರಿಗೆ ತಮ್ಮ ಕಾರ್ಯ ಕೆಲಸಗಳನ್ನು ಮಾಡುವ ಬಗ್ಗೆ ಹೊಲಕ್ಕೆ ಹೋಗುವುದಕ್ಕೆ ಮಳೆಯೂ ಬಿಡುತ್ತಿಲ್ಲ ಇದರಿಂದಾಗಿ ಹೊಲದೊಳಗೆ ಏನು ಅನಾಹುತವಾಗಿದೆ ಎಂದರೆ, ಹೊಲದೊಳಗೆ ಹಲ್ಲು ಯಾವುದು, ಬೆಳೆಯಾವುದು ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಹೆಸರಿಗೆ ಕೆಂಪು ರೋಗ ಬಂದು ಪೂರ್ತಿಯಾಗಿ ಹಾಳಾಗಿದೆ ಅಲ್ಪಸ್ವಲ್ಪ ಸಾಲಸೋಲವನ್ನು ರೈತ ಮಾಡಿದ್ದಾನೆ ಈಗ ಗೊಬ್ಬರದ ಬಗ್ಗೆಯೂ ವಿಶೇಷವಾದ ತೊಂದರೆಯಲ್ಲಿದೆ, ಅಂತಹ ಪ್ರಸಂಗದಲ್ಲಿ ಹೆಚ್ಚೆಚ್ಚು ರೊಕ್ಕವನ್ನು ಕೊಟ್ಟು ಜೊತೆಗೆ ಗೊಬ್ಬರ ತಂದು ಶೇಂಗಾವನ್ನು ಭಿತ್ತಿದರೆ, ಶೇಂಗಾವು ಕೂಡ ಹುಲ್ಲುಗೂಡಿ ಹೊಗ್ಯೆತಿ ಬಹುತೇಕ ಹುಲ್ಲು ಯಾವುದು, ಪೀಕ್ ಯಾವುದು ಎನ್ನುವ ಭಾವನೆಯೊಳಗೆ ಇರುವಾಗ ಈಗ ಮತ್ತೆ ಮಳೆಯಾದರೆ ಪೂರ್ತಿ ಹೊಲ ಹರಗುವಂತಹ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ ಅದಕ್ಕಾಗಿ ನಾನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದಿಷ್ಟೇ, ಅಂತಹ ವಿಶೇಷವಾಗಿ ಏನು ಬೆಳೆ ಹಾನಿಯಾಗುವಂತಹ ರೈತರಿಗೆ ಏನಾದರೂ ಸಹಾಯಧನವನ್ನು ಕೊಡುವುದರ ಬಗ್ಗೆ ಸರ್ಕಾರ ಮುಂದಾಗಬೇಕಾಗುತ್ತದೆ ಏನು ಬೆಳೆ ಹಾನಿಯಾಗುವಂತಹ ರೈತರಿಗೆ ಏನಾದರೂ ಸಹಾಯಧನವನ್ನು ಕೊಡುವ ಬಗ್ಗೆ ಸರ್ಕಾರದವರು ಮುಂದಾಗಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ಇವತ್ತಿನ ಸಂದರ್ಭದಲ್ಲಿ ಹೇಳುತ್ತೇನೆ ತಮ್ಮ ಮುಖೇನ ಇನ್ನೊಂದು

ಪ್ರಶ್ನೆಯನ್ನು ಕೇಳುತ್ತೇನೆ ಅಲ್ಲಿ ಮಳೆ ಕಡಿಮೆಯಾಗಿದೆ ವಿಶೇಷವಾಗಿ ರಸ್ತೆಗಳೆಲ್ಲವೂ ಕೊಚ್ಚಿಹೋಗಿ ನಾಶವಾಗಿದೆ ಇವತ್ತು ಬ್ರಿಡ್ಜ್‌ಗಳು ಹಾಳಾಗಿದೆ, ಬಹುತೇಕ ಬ್ರಿಡ್ಜ್‌ಗಳು ಹಾಳಾಗಿರುವುದರಿಂದ ಆ ಕಡೆಯಿದ್ದವರು ಆ ಕಡೆಗೆ, ಈ ಕಡೆಯಲ್ಲಿದ್ದವರು ಈಕಡೆಯಲ್ಲಿ ಇರುವಂತಹ ವಾತಾವರಣ ನಿರ್ಮಾಣವಾಗಿದೆ ಅಂತಹದ್ದಕ್ಕೆ ವಿಶೇಷವಾದ flood damagನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದರೆ ಅಲ್ಪಸ್ವಲ್ಪ ಇವತ್ತು ಗ್ರಾಮೀಣ ಪ್ರದೇಶಗಳಿಗೆ ಸಂಪರ್ಕ ಮಾಧ್ಯಮಗಳ ವ್ಯವಸ್ಥೆಯಾಗುತ್ತದೆಂದು ತಮ್ಮ ಮೂಲಕ ಕೇಳಿಕೊಂಡು ಇವತ್ತು ಇವಷ್ಟಕ್ಕೂ ಅದಷ್ಟು ತೀವ್ರವಾಗಿ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಡಾ ಹೆಚ್ ಸಿ ಮಹದೇವಪ್ಪ (ಟೀ ನರಸೀಪುರ) ಮಾನ್ಯ ಸಭಾಧ್ಯಕ್ಷರೆ, ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುವ ತೀರ್ಮಾನವನ್ನು ಕೈಗೊಂಡಿರುವುದನ್ನು ನಾವು ಸ್ವಾಗತ ಮಾಡಿದ್ದೇವೆ ಅತಿವೃಷ್ಟಿಯಾಗಿರುವುದು ಒಂದು Distress Management ಈ ಅಪತ್ಕಾಲದ ಪರಿಸ್ಥಿತಿಯನ್ನು ಯುದ್ಧೋಪಾದಿಯಲ್ಲಿ ಮಾಡುವುದಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಂಟಿಯಾಗಿ ಕಾರ್ಯಕ್ರಮಗಳನ್ನು ಮತ್ತು ಹಣಕಾಸಿನ ನೆರವಿನ ಮುಖಾಂತರ ಸಂಕಷ್ಟದಲ್ಲಿರುವಂತಹ ಎಲ್ಲಾ ಜನಸಮುದಾಯಗಳನ್ನು ರಕ್ಷಣೆ ಮಾಡತಕ್ಕಂತಹದ್ದು ಸರ್ಕಾರದ ಹೊಣೆಗಾರಿಕೆ ಮತ್ತು ಜವಾಬ್ದಾರಿಯಾಗಿದೆ ಅದನ್ನು ಮಾಡುವ ಬಗ್ಗೆ ತಕ್ಷಣವೇ ಅಗತ್ಯವಿರುವಂತಹ ರಾಜ್ಯ ಸರ್ಕಾರದ ಹಣ ಮತ್ತು ಕೇಂದ್ರ ಸರ್ಕಾರದ ಹಣದ ಬಗ್ಗೆ ಎಲ್ಲಾ ಪಕ್ಷಗಳು ಸೇರಿ ರಾಜ್ಯದ ಜನರ ಸಂಕಷ್ಟದ ಬದುಕನ್ನು ಪಾರು ಮಾಡುವ ಬಗ್ಗೆ ಜಂಟಿಯಾಗಿ ಪ್ರಯತ್ನವನ್ನು ಪ್ರಯತ್ನವನ್ನು ಮಾಡುವುದು ಒಂದು ಭಾಗವಾದರೆ, ಸರ್ಕಾರ ಮುಖ್ಯಮಂತ್ರಿಗಳು ಉತ್ಸಾಹದಿಂದ ನಾನು ಕೆಲಸವನ್ನು ಮಾಡಬೇಕೆಂಬ ಭಾವನೆಗಳನ್ನು ವ್ಯಕ್ತ ಮಾಡಿರುವುದರಿಂದ ಇಂತಹ ಒಂದು distress managementನಲ್ಲಿ ಇವತ್ತು Natural calamities ವಿರುದ್ಧವಾಗಿ ಜನರು ಹೋರಾಟ ಮಾಡುವುದಕ್ಕಾಗುವುದಿಲ್ಲ Natural calamities ಬಂದಾಗ ಜನರು ಇಡೀ ರಾಜ್ಯದ 5 ಕೋಟಿ ಜನರನ್ನು ಇಟ್ಟುಕೊಂಡು ಹೋರಾಟ ಮಾಡುವುದಕ್ಕೆ ಸಾಧ್ಯವಿಲ್ಲ Man cannot stand against the law of nature ಆದ್ದರಿಂದ distress managmentನ್ನು ಮಾಡಬೇಕಾದರೆ ರಾಜ್ಯ ಸರ್ಕಾರ ಯುದ್ಧೋಪಾದಿಯಲ್ಲಿ ತನ್ನ ಹಣಕಾಸನ್ನು ಕೂಡಲೇ ಬಿಡುಗಡೆ ಮಾಡಿ ಅದು ರಸ್ತೆ ಇರಬಹುದು, ಮನೆ ನಿರ್ಮಾಣ ಇರಬಹುದು, ಜಾನುವಾರು ಮತ್ತು ಜನರ ರಕ್ಷಣೆಗೆ, ಅಗತ್ಯವಾದ ನೆರವನ್ನು ಕೊಡುವುದರ ಜೊತೆಗೆ ರೈತನ ಜೊತೆಜೊತೆಗೆ, ರೈತ ಕಾರ್ಮಿಕರಾಗಿರತಕ್ಕಂತಹ ಬಡತನದ ರೇಖೆಯಿಂದ ಕೆಳಗಡೆ ಇರತಕ್ಕಂತಹ ಹರಿಜನರು, ಹಿಂದುಳಿದ

ವರ್ಗದವರು, ಅಲ್ಪಸಂಖ್ಯಾತರು ಮಾಡಿರತಕ್ಕಂತಹ ಸಾಲಸೋಲಗಳಿಂದ ಅವರುಗಳು ಬದುಕುವುದಕ್ಕೆ ಆಗುತ್ತಿಲ್ಲ ಅವರುಗಳಿಗೆ ಕೂಲಿಯೇ ಸಿಗುತ್ತಿಲ್ಲ SC/ST Corporationಗಳು ಇರಬಹುದು, Backward classesನವರು ಇರಬಹುದು, ಅವರುಗಳು ಅಲ್ಲಿ ಮಾಡಿರುವಂತಹ ಸಾಲಗಳು ನೂರಾರು ಕೋಟಿ ರೂ ಗಳು ಏನೂ ಇಲ್ಲ ಎಲ್ಲವನ್ನು ಸೇರಿಸಿದರೆ 25–30 ಕೋಟಿ ರೂಪಾಯಿಗಳು ಆಗಬಹುದು ನಾನು ಮಾನ್ಯಮುಖ್ಯಮಂತ್ರಿಗಳಿಗೆ ಮನವಿಯನ್ನು ಮಾಡಿದ್ದೇವೆ ಇದೇ ಸಂದರ್ಭದಲ್ಲಿ ಹಣಕಾಸಿನ ಸಚಿವರು ಬಜೆಟ್‌ನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅವರು ಸಹ ಮನ್ನಾ ಮಾಡುವಂತಹ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಘೋಷಣೆಯನ್ನು ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಈಗ ಮಲೆನಾಡು ಭಾಗದಲ್ಲಿ ಅಗತಕ್ಕಂತಹ ಒಂದು ಸಮಸ್ಯೆಯನ್ನು ಬಹುಶಃ ಇಲ್ಲಿ ಕುಳಿತುಕೊಂಡು ಅಲೋಚನೆಯನ್ನು ಮಾಡಿದರೆ ಗೊತ್ತಾಗುವುದಿಲ್ಲ ಆದ್ದರಿಂದ ತಾವು ದಯಮಾಡಿ ಪ್ರಮುಖವಾಗಿ ಸರ್ಕಾರದ ಪರವಾಗಿ ವಿಶೇಷವಾಗಿ ತೋಟಗಾರಿಕೆ ಇರಬಹುದು, ಪಿಡಬ್ಲ್ಯುಡಿ ಇರಬಹುದು, ಗ್ರಾಮೀಣಾಭಿವೃದ್ಧಿ ಇರಬಹುದು, ಪವರ್ ಇರಬಹುದು, ಈಗ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳ ಮಟ್ಟದೊಳಗಡೆ ಅಲ್ಲಿಯ ಶಾಸಕರುಗಳನ್ನು ಸೇರಿಸಿಕೊಂಡು ಇಡೀ ಮಲೆನಾಡು ಭಾಗದಲ್ಲಿ ಆಗಿರತಕ್ಕಂತಹ ಒಟ್ಟು ಏನು ತೊಂದರೆಯಾಗಿದೆ ಅಲ್ಲಿಯ ಪರಸ್ಥಿತಿಯನ್ನು ಅಧ್ಯಯನ ಮಾಡಿ ವಿಶೇಷವಾದ ಪ್ಯಾಕೇಜನ್ನು ಮಾಡಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಿದರೆ ಏನಾದರೂ ಸಮಸ್ಯೆಯನ್ನು ಬಗೆಹರಿಸಬಹುದು ಇಲ್ಲಿ ಕುಳಿತುಕೊಂಡು 50 ಲಕ್ಷ ರೂಪಾಯಿಗಳು 1 ಕೋಟಿ ರೂಪಾಯಿಗಳನ್ನು ಕೊಟ್ಟರೆ ನಾವು ಅಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಅಲ್ಲಿ ಏನು ಸಮಸ್ಯೆಯಾಗಿದೆ ಎಂದು ಸರ್ಕಾರದ ಗಮನಕ್ಕೆ ಗೊತ್ತಾಗುವುದಿಲ್ಲ ದಯಮಾಡಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಎಲ್ಲಾ ಡ್ಯಾಂಗಳು ಮತ್ತು ಕಟ್ಟೆಗಳು ತುಂಬಿದೆ, ನಿಮಗೆಲ್ಲಾ ಸುಭಿಕ್ಷವಾಗಿದೆ ಇಡೀ ದೇಶಕ್ಕೆ ಸುಭೀಕ್ಷೆಯಾಗಿದೆ, ಆದರೆ ಹಾಳಾದವರು ಮಾತ್ರ ಮಲೆನಾಡಿನವರು ದಯಮಾಡಿ ಉನ್ನತಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಶಾಸಕರುಗಳನ್ನು ಅಲ್ಲಿಗೆ ಕಳುಹಿಸಿ ಆ ಭಾಗದಲ್ಲಿ ಅಧ್ಯಯನ ಮಾಡಿ ಅದಕ್ಕೆ

ವಿಶೇಷವಾದ ಪ್ಯಾಕೇಜನ್ನು ಬಿಡುಗಡೆ ಮಾಡಿಕೊಡಬೇಕೆಂದು ನಾನು ಮ್ಯಾ ಮುಖ್ಯಮಂತ್ರಿಗಳನ್ನು ಮತ್ತು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಕೆ ಶ್ರೀನಿವಾಸ್‌ಗೌಡ (ಕೋಲಾರ) ಮಾನ್ಯ ಅಧ್ಯಕ್ಷರೆ, ಈ ನಿಯಮ 69ರ ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅತಿವೃಷ್ಟಿ ಮತ್ತು ಅನಾವೃಷ್ಟಿಯ ವಿಷಯದಲ್ಲಿ ರಿಪ್ಲೈ ಮಾಡಬೇಕೆಂದು ನಾವೆಲ್ಲರೂ ಕಾತುರರಾಗಿದ್ದೇವು ಆದರೆ ಅವರ ರಿಪ್ಲೈ ಹೇಗಿತ್ತು ಎಂದರೆ, ರೈತರ ಆತ್ಮಹತ್ಯೆ, ಗ್ರಾಮ ವಾಸ, ಸಹಕಾರ ಇಲಾಖೆಯ ಮೇಲೆ ರಾಜಕೀಯ ದೊಂಬರಾಟ ವಿಷಯಗಳಲ್ಲಿ ಮಾತ್ರ ಚರ್ಚೆಯಾಯಿತು ಅತಿವೃಷ್ಟಿಯ ಬಗ್ಗೆ ಯಾವ ರೀತಿಯಾಗಿ ಟ್ಯಾಕಲ್ ಮಾಡುತ್ತೀರಿ, ಅದಕ್ಕೆ ಎಲ್ಲಿಂದ ಹಣವನ್ನು ತರುತ್ತೀರಿ, ಅನಾವೃಷ್ಟಿಯ ಬಗ್ಗೆ ಯಾವ ರೀತಿಯಾಗಿ ಟ್ಯಾಕಲ್ ಮಾಡುತ್ತೀರಿ, ಇದಕ್ಕೆ ಹಣವನ್ನು ಎಷ್ಟು ಇಡುತ್ತೀರಿ, ಇವುಗಳು ಮುಖ್ಯವಾದಂತಹ ವಿಷಯಗಳು ಈ ಬಗ್ಗೆ ವಿರೋಧ ಪಕ್ಷದವರು ಮಾತನಾಡಿರುವುದನ್ನು ನೀವು ಮೂಲಭೂತವಾಗಿ ತೆಗೆದುಕೊಳ್ಳದೇ, ನೀವು ಬೇರೆ ಬೇರೆ ಕಡೆಯಂದ ನೀವು ಅತಿವೃಷ್ಟಿಯನ್ನು ಟ್ಯಾತಲ್ ಮಾಡುವುದರ ಬಗ್ಗೆ ಒಂದೇ ಪದವನ್ನು ಉಪಯೋಗಿಸಲಿಲ್ಲ ಇದಕ್ಕೆ ಇಷ್ಟು ಹಣವನ್ನು ಇಟ್ಟಿದ್ದೇವೆನ್ನುವಂತಹ ಮಾತನ್ನು ಕೂಡ ಆಡಲಿಲ್ಲ ಅನಾವೃಷ್ಟಿಗೆ ನೀವು ಹೇಳುವಾಗ 5 ಕೋಟಿ ರೂಪಾಯಿಗಳು ಏನು ಕೋಲಾರಕ್ಕೆ ಕೊಟ್ಟಿದ್ದೇವೆನ್ನು ವಂತಹ ಮಾತನ್ನು ಹೇಳುತ್ತಿದ್ದೀರಿ, ಇದರ ಬಗ್ಗೆ ನೀವು ನಮಗೆ ಎಷ್ಟೆಷ್ಟು ಹಣವನ್ನು ಇಟ್ಟಿದ್ದೀರಿ, ಇವತ್ತು ಬ್ರಿಡ್ಜ್‌ಗಳು ಹಾಗೂ ಕೆರೆಗಳು ಓಡೆದುಹೋಗಿವೆ, ರಸ್ತೆಗಳು ಹಾಳಾಗಿವೆ, ಇವುಗಳು ಆ ಭಾಗದಲ್ಲಿ ಆದರೆ, ಈ ಭಾಗದಲ್ಲಿ ಮಳೆಯೇ ಇಲ್ಲ, ಇದುವರೆಗೂ ಕೂಡ ಬಿತ್ತನೆಯೇ ಆಗಿಲ್ಲ ಇಂತಹ ದುಸ್ಥಿತಿಯಲ್ಲಿ ಸರ್ಕಾರ ತೆಗೆಟದುಕೊಂಡಂತಹ ಕ್ರಮಗಳೇನು ಎಂಬುದರ ಬಗ್ಗೆ ಬಹಳ ಮುಖ್ಯವಾಗಿ ಹೇಳಬೇಕಾಗುತ್ತದೆ ಇದನ್ನು ಬಿಟ್ಟು ತಾವು ಬೇರೆ ಮಾತನಾಡಿದ್ದೀರಿ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ ಈ ಎಲ್ಲಾ ವಿಷಯಗಳ ಬಗ್ಗೆ ತಾವು ದಯವಿಟ್ಟು ಇನ್ನೊಂದು ಸಾರಿ ನೇರವಾಗಿ ಹೇಳುವುದಕ್ಕೆ ಪ್ರಯತ್ನ ಮಾಡಿ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಯು ಟಿ ಖಾದರ್ (ಉಳ್ಳಾಲ) ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪರಿತವಾದ ಮಲೆಯಿಂದ ಬಹಳಷ್ಟು ಹಾನಿಯಾಗಿದೆ ನಾನು ಉಳ್ಳಾಲ ಕ್ಷೇತ್ರದ ಶಾಸಕನಾಗಿ ಉಳ್ಳಾಲದ ಸಮಸ್ಯೆಗಳ ವಸ್ತು ಸ್ಥಿತಿಯನ್ನು ತಮ್ಮ ಮುಂದಿಡುವುದಕ್ಕೆ ಇಚ್ಛಿಸುತ್ತೇನೆ ಉಳ್ಳಾಲ ಕ್ಷೇತ್ರದ ವ್ಯಾಪ್ತಿಯಲ್ಲಿ

ವಿಪರೀತವಾದ ಮಳೆಯಿಂದಾಗಿ ಹಾಗೂ ಬಿರುಗಾಳಿಯಿಂದ ಬಹಳಷ್ಟು ಮನೆಗಳು ಬಿದ್ದು ಹೋಗಿದ್ದು, ಎಲ್ಲಾ ಮನೆಗಳು ಕೂಡ ಬಡವರ ಮನೆಯಾಗಿದ್ದು, ಆದಕಾರಣ ಅವರಿಗೆ ಸಂಪೂರ್ಣವಾಗಿ ನಾಶವಾದಂತಹ ಮನೆಗಳಿಗೆ ಕೇವಲ 10 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತಿದ್ದೇವೆ ಮತ್ತೆ ಅವರು ಅಲ್ಲಿ ಮನೆ ಕಟ್ಟುವಂತಹ ಪರಿಸ್ಥಿತಿಯಲ್ಲಿ ಇಲ್ಲ ಆದಕಾರಣ ನನ್ನ ಪ್ರಾಮಾಣಿಕವಾದ ಕಳಕಳಿ ಏನೆಂದರೆ, ಅಲ್ಲಿ ಮನೆಯನ್ನು ಕಳೆದುಕೊಂಡವರಿಗೆ ಮತ್ತೆ ಮನೆಗಳನ್ನು ಕಟ್ಟುವ ಬಗ್ಗೆ ಸ್ವಲ್ಪ ಪರಿಹಾರವನ್ನು ಹೆಚ್ಚಿಸುವಂತಹ ಕೆಲಸವನ್ನು ಮಾಡಬೇಕು ಅದೇ ರೀತಿಯಲ್ಲಿ ಉಳ್ಳಾಲದ ವಿಶೇಷವಾದ ಸಮಸ್ಯೆ ಯಾವಾಗಲೂ ಇರುವುದರಿಂದಾಗಿ ಈ ಬಗ್ಗೆ ವಿಶೇಷವಾಗಿ ಇದರ ಬಗ್ಗೆ ನಮ್ಮ ಪತ್ರಿಕಾ ಮಾಧ್ಯಮದವರು ಕಡಲಕೊರೆತದ ಬಗ್ಗೆ ಆಗಾಗ ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಕಳೆದ ವರ್ಷವೂ ಕೂಡ ಬಹಳಷ್ಟು ಮನೆಗಳು ಬಿದ್ದು ಹಾನಿಯಾಗಿವೆ, ಮಾನ್ಯ ಮುಖ್ಯಮಂತ್ರಿಗಳು ಹಾಗ ಮಾನ್ಯ ಉಪಮುಖ್ಯಮಂತ್ರಿಗಳು ಆ ಪ್ರದೇಶಕ್ಕೆ ಭೇಟಿ ನೀಡಿ ಕಳೆದ ಸೆಪ್ಟೆಂಬರ್‌ನಲ್ಲಿ Break water ಕೆಲಸವನ್ನು ಖಂಡಿತವಾಗಿ ಪ್ರಾರಂಭಿಸುತ್ತೇವೆನ್ನುವಂತಹ ಮಾತನ್ನು ಕೂಡ ಹಾಗೂ ಈ ಪರಿಸರದ ದಂಡೆಗೆ ಮಾಡುತ್ತೇವೆನ್ನುವಂತಹ ಮಾತನ್ನು ಕೊಟ್ಟಿದ್ದಾರೆ ಈ ವರ್ಷವು ಕೂಡ 8 ಮನೆಗಳು ಸಂಪೂರ್ಣವಾಗಿ ನಾಶವಾಗಿದೆ 120 ಮನೆಗಳು ಹಾನಿಯಾಗಿವೆ ಆದರೂ ಕೂಡ ಅಲ್ಲಿ ಕೆಲಸ ಸಂಪೂರ್ಣವಾಗಿ ಪ್ರಾರಂಭವಾಗಿಲ್ಲ ಈ ಬಗ್ಗೆ ನನ್ನ ಕಳಕಳಿಯ ವಿನಂತಿ ಏನೆಂದರೆ, ಈಗಾಗಲೇ ಇಲಾಖೆಯವರು ಕೂಡ 1 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಕ್ಷಣೆಯ ಗೋಡೆಯನ್ನು ಕಟ್ಟುವ ಬಗ್ಗೆ ಅನುದಾನವ್ನು ಕೇಳಿದೆ ಅದನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಬೇಕು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದು ಜನರಿಗೆ ಏನು ಮಾತನ್ನು ಕೊಟ್ಟಿದ್ದಾರೆ ಆ ಮಾತನ್ನು ಉಳಿಸುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ನಾನು ಕಳಕಳಿಯಿಂದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು ಎಲ್ಲರೂ ಮಾತನಾಡುತ್ತೇನೆಂದು ಕೈಯನ್ನು ಎತ್ತಿದರೆ ಹೇಗೆ? ಮಾತನಾಡಿದವರು ಮಾತನಾಡದವರು ಎಲ್ಲರೂ ಕೂಡ ಕೈ ಎತ್ತಿದರೆ ಹೇಗೆ?

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ ತಾವು ಹಿಂದುಗಡೆ ಇರುವವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು

ಅಧ್ಯಕ್ಷರು ಒಂದೇ ಒಂದು ನಿಮಿಷ ತಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) ಮಾನ್ಯ ಅಧ್ಯಕ್ಷರೆ, ಹೋದ ವರ್ಷವ ಕೂಡ ಗುಲ್ಬರ್ಗಾ ಜಿಲ್ಲೆಯಲ್ಲಿ ಬಹಳಷ್ಟು ನಮ್ಮ ಕಡೆಯಲ್ಲಿ ಮಳೆಯೂ ಬೀಳದೆ ಇದ್ದರೂ ಕೂಡ ಮಹಾರಾಷ್ಟ್ರದಲ್ಲಿ ಅತಿವೃಷ್ಟಿಯಾಗಿ ನಮ್ಮ ಭೀಮಾನದಿಗೆ ಪ್ರವಾಹ ಬಂದು ಬಹಳಷ್ಟು ಹಳ್ಳಿಗಳಿಗೆ ನಷ್ಟವಾಯಿತು ಆಗ ಉಪಮುಖ್ಯಮಂತ್ರಿಗಳು ಅಲ್ಲಿಗೆ ಬಂದಿದ್ದರು ಅಲ್ಲಿ ಸಭೆಯನ್ನು ಕರೆದು ಘೋಷಣೆ ಏನು ಮಾಡಿದರೆಂದರೆ, ನಾವು ಈ ಹಳ್ಳಿಗಳನ್ನು ಸ್ಥಳಾಂತರ ಮಾಡುತ್ತೇವೆ ಇಲ್ಲಿಗೆ ಇಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆನ್ನುವಂತಹ ಆಶ್ವಾಸನೆಯನ್ನು ಕೊಟ್ಟರು ಆದರೆ ಹಣ ಬಿಡುಗಡೆಯಾಗಲಿಲ್ಲ ಈ ವರ್ಷವೂ ಕೂಡ ಪುನಃ ಪ್ರವಾಹವು ಬಂದು ಮತ್ತೆ ಇನ್ನಷ್ಟು ಹಳ್ಳಿಗಳಿಗೆ ಬಹಳಷ್ಟು ನಷ್ಟವಾಗಿದೆ ಆದರೆ ಈ ವರ್ಷವೂ ಕೂಡ ನಿರ್ದಿಷ್ಟವಾಗಿ ಸರ್ಕಾರ ಇಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಇಲ್ಲಿಯವರೆವಿಗೂ ಹೇಳಿಲ್ಲ ಮೊನ್ನೆ ದಿವಸ ಜಿಲ್ಲಾ ಉಸ್ತುವಾರಿ ಸಚಿವರು ಒಂದು ಮೀಟಿಂಗ್ ಕರೆದಿದ್ದರು ಇವತ್ತು ಏಉ ಇಷ್ಟು ನಷ್ಟವಾಗಿದೆ, ಬೆಳೆ ಹಾನಿಯಾಗಿದೆ, ಮನೆಗಳು ಬಿದ್ದು ಹೋಗಿವೆ, ರಸ್ತೆಗಳು ಹಾಳಾಗಿವೆ, ಕೆರೆಗಳು ಒಡೆದು ಹೋಗಿವೆ, ಇದಕ್ಕಾಗಿ ಸರ್ಕಾರದಿಂದ ನಿರ್ದಿಷ್ಟವಾಗಿ ನಮಗೆ ಬೇಕಾಗಿರುವಂತಹ ಹಣದ ಬಗ್ಗೆ ಪಟ್ಟಿಯನ್ನು ಮಾಡಿಸಿ ತಾಲ್ಲೂಕುವಾರು ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಕ್ಷೇತ್ರಕ್ಕೆ ಎಷ್ಟೇಷ್ಟು ಹಣ ಡಿಟೇಲ್ ಆಗಿ ನಾವು ನಮ್ಮ ನಮ್ಮ ಕ್ಷೇತ್ರದಲ್ಲಿ ಓಡಾಡಿ ಮಾಡಿಸಿದರೂ ಕೂಡ ಇಲ್ಲಿಯವರೆವಿಗೂ ಸರ್ಕಾರದಿಂದ ಇಷ್ಟು ಹಣವನ್ನು ಬಿಡುಗಡೆ ಮಾಫಾಡುತ್ತೇವೆ ನಿರ್ದಿಷ್ಟವಾಗಿರುವಂತಹ ಯಾವುದೇ ಒಂದು ಹೇಳಿಕೆಯೂ ಬಂದಿಲ್ಲ ಹೋದ ವರ್ಷವು ಕೂಡ ನೀವು ಆಶ್ವಾಸನೆಯನ್ನು ಕೊಟ್ಟೀದ್ದಿರಿ, ಅದು ಕಾರ್ಯರೂಪಕ್ಕೆ ಬರಲಿಲ್ಲ ನಾವು ಏನಾದರೂ ಹೇಳಿದರೆ ನೀವು ವಿರೋಧ ಪಕ್ಷದವರು ಹೇಳುತ್ತೀರಿ ಎನ್ನುತ್ತೀರಿ ಆದರೆ ಜನರಿಗೆ ಗೊತ್ತಾಗಬೇಕಲ್ಲವೇ? ಇವತ್ತು ಯಾವುದೇ ಹಳ್ಳಿಗಳಿಗೆ ಹೋದರೂ ಕೂಡ ಸರ್ಕಾರ ಆಶ್ವಾಸನೆಯನ್ನು ಕೊಟ್ಟು ಬಂದಿದೆ ಅದು ಯಾವುದೇ ಸರ್ಕಾರವಾಗಲಿ, ಮುಂದೆ ಪ್ರವಾಹ ಬಂದಾಗ ನಾವು ಇದನ್ನು ಸ್ಥಳಾಂತರ ಮಾಡುತ್ತೇವೆಂದು

ಕೊಟ್ಟು ಕೊಂಡು ಬಂದು ನಾವು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಅದು ಆಗುವುದಿಲ್ಲ ಇದಕ್ಕೆ ಯಾರು responsoble? ಉಪಮುಖ್ಯಮಂತ್ರಿಗಳು ಒಂದು ಒಂದು ಸಾರಿ ಬಂದು ಮಾತನ್ನು ಕೊಟ್ಟ ಮೇಲೆ ಆ ಮಾತಿನ ಪ್ರಕಾರ ನಡೆದುಕೊಳ್ಳುವಂತಹದ್ದನ್ನು ಮಾಡಬೇಕು ಅದು ನಮ್ಮ ಜಿಲ್ಲೆಯಲ್ಲಿ ಆಗಿಲ್ಲ ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು

ಅಧ್ಯಕ್ಷರು ಆಯಿತು, ಉತ್ತರ ಹೇಳಿ ಸಾಕು

ಅಧ್ಯಕ್ಷರು ಹೆಗ್ಡೆಯವರು ನೀವು ಎಷ್ಟು ಸಲಹೆಗಳನ್ನು ಕೊಡುತ್ತೀರಿ, ನೀವು ಸಾಕಷ್ಟು ಮಾತನಾಡಿದ್ದೀರಿ, ಆಯಿತು ಒಂದು ನಿಮಿಷ ಮಾತನಾಡಿ

ಶ್ರೀ ಸರಿಕಲ್ ಭೀಮಪ್ಪ ಚನ್ನಪ್ಪ ಹೆಗ್ಡೆಯವರೇ ನೀವು ಎಷ್ಟು ಸಾರಿ ಮಾತನಾಡುತ್ತೀರಿ, ಕುಳಿತುಕೊಳ್ಳಿ ಒಂದು ನಿಮಿಷ ಪ್ಲೀಸ್ I kindly request you please

ಅಧ್ಯಕ್ಷರು ಸಾಕಷ್ಟು ಜನಕ್ಕೆ ಅವಕಾಶ ಕೊಟ್ಟಿದ್ದೇನೆ ಈಗ ಜಯಪ್ರಕಾಶ್ ಹೆಗ್ಡೆಯವರನ್ನು ಕರೆದಿದ್ದೇನೆ, ಅವರು ಮಾತನಾಡಿದ ನಂತರ ನೀವು ಮಾತನಾಡಿ ಅವರು ಮಾತನಾಡುತ್ತಾರೆ, ಅವರದೇನು ಕೇಳಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ್) ಅಧ್ಯಕ್ಷರೇ, ಮುಖ್ಯಮಂತ್ರಿಗಳು ಸ್ವಲ್ಪ ಗಮನಿಸಬೇಕು ಈಗ ತಾವು ಸಹ ಉಲ್ಲಾಳಕ್ಕೆ ಹೋಗಿದ್ದೀರಿ, ಸಮುದ್ರದ ಕೊರೆತದ ಬಗ್ಗೆ ಮೊನ್ನೆ ಸಹ ಮಾತನಾಡಿದ್ದೇವೆ ಆದರೆ ಅಲ್ಲಿ ಹಳೆಯ ಬಾಕಿಯನ್ನು ಕೊಡಲಿಲ್ಲ ಹಾಗಾಗಿ ಹೊಸದಾಗಿ ಯಾರು ಕೆಲಸ ಮಾಡಲಿಕ್ಕೆ ಬರುವುದಿಲ್ಲ ಸಮುದ್ರದ ಕೊರೆತ ಪ್ರಾರಂಬವಾಗಿದೆಯೆಂದು ಇವತ್ತು ಫೋನ್ ಬಂದಿತ್ತು ಅದಕ್ಕೆ ನಾವು ಆದೇಶವನ್ನು ತೆಗೆದುಕೊಂಡು ಮಾಡಬೇಕೇ? ಅಥವಾ ತಕ್ಷಣ ಕೆಲಸವನ್ನು ಪ್ರಾರಂಭ ಮಾಡಬೇಕೆ ಎಂಬ ಬಗ್ಗೆ ತಾವು ಸ್ವಲ್ಪ ನಮಗೆ ಹೇಳಬೇಕು ಶ್ರೀ ಆರಗ ಜ್ಞಾನೇಂದ್ರರವರು ಮುತ್ತು ವಿಶ್ವನಾಥ್‌ರವರು ಮಾತನಾಡಿದ್ದಾರೆ, ಅಲ್ಲಿ ಶಿರಾಡಿ ಘಾಟ್, ಚಾರುಮುಡಿ ಘಾಟ್ ಬಂದ್ ಆಗುತ್ತದೆ, ಮ್ಯೆನ್ಸ್ ಲಾರಿಯನ್ನು ನಿಲ್ಲಿಸಲಿಕ್ಕೆ ನೀವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಈ ಪರಿಸ್ಥಿತಿಯನ್ನು ಓಡಾಡಲಿಕ್ಕೆ ಸಾಧ್ಯವಿಲ್ಲ ನಮ್ಮಲ್ಲಿ ಕರಾವಳಿ ರಸ್ತೆ ಸರಿಯಿಲ್ಲವೆಂದು ರಸ್ತೆಯನು ನಿನ್ನೆ ರಾತ್ರಿ ಜನ ಹೋಗಿ ಕಡಿದಿದ್ದಾರೆ, ನಾವು ಪೊಲೀಸ್ ಕಂಪ್ಲೇಂಟ್ ಕೊಟ್ಟು ಯಾರು ರಸ್ತೆಯನ್ನು ಕಡಿದಿದ್ದು ಎಂದು

ಹುಡುಕಿಸುವ ಪರಿಸ್ಥಿತಿ ಬಂದಿದೆ, ಆದೇಶ ತೆಗೆದುಕೊಳ್ಳದೇ ನಾವು ರಸ್ತೆ ರಿಪೇರಿ ಮಾಡುವ ಹಾಗಿಲ್ಲ ಈ ಪರಿಸ್ಥಿತಿ ನಿರ್ಮಾಣವಾದರೆ ನಾವು ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ ಶಾಸಕರ ನಿಧಿಯಲ್ಲಿ ಕೊಡುತ್ತೇವೆಂದು ಮುಂದಾಗಿ ಕೆಲಸ ಮಾಡಿದರೆ ಜಿಲ್ಲಾಧಿಕಾರಿಗಳಿಗೆ ಅದಕ್ಕೆ ಅನುಮೋದನೆಯನ್ನು ಕೊಡುವುದಿಲ್ಲ ಹಿಂದಿನ ವರ್ಷದ 2005–06ರ ಸಾಲಿನದ್ದು ಜಿಲ್ಲಾಧಿಕಾರಿಗಳು ಅಉಮೋದನೆ ಕೊಟ್ಟು ಕೆಲಸವನ್ನು ಮಾಡಿದ್ದು ಈಗಿನ ಜಿಲ್ಲಾಧಿಕಾರಿಗಳು ಕೈಬಿಡಲಾಗಿದೆ ಎನ್ನುತ್ತಾರೆ, ಶಾಸಕರು ಕೊಟ್ಟ ಕೆಲಸ, ಕೆಲಸ ಆದ ಮೇಲೆ ಈಗಿನ ಜಿಲ್ಲಾಧಿಕಾರಿಗಳು ಕೈ ಬಿಡುತ್ತೇವೆಂದರೆ ನಮಗೆ ಶಾಸಕರ ನಿಧಿ ಏತಕ್ಕೆ ಬೇಕು ಎಂದು ನಾನು ತಮ್ಮ ಹತ್ತಿರ ಕೇಳುತ್ತೇನೆ ಅದು ಮಾಡಲಿಕ್ಕೆ ಸಾಧ್ಯವಿದೆಯೇ, ಇಲ್ಲದೇ ಹೋದರೆ ನಾನು privilege motion move ಮಾಡಬೇಕು ಇಷ್ಟನ್ನು ತಾವು ಹೇಳಬೇಕಾಗುತ್ತದೆ

ಶ್ರೀ ಎನ್ ಎಸ್ ಬೋಸರಾಜ್ (ಮಾನ್ವಿ) ಸನ್ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಅನಾಹುತ ಆಗಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ 12 ಜನ ಸತ್ತಿದ್ದಾರೆ, ಹಾಗೆಯೇ ಇವತ್ತಿನ ಪ್ರಿಲಿಮನರಿ ರಿಪೋರ್ಟ್‌ನಲ್ಲಿ ಜಿಲ್ಲಾಧಿಕಾರಿಗಳು 40 ಕೋಟಿ ರೂ ಗಳಷ್ಟು ಹಾನಿಯಾಗಿದೆಯೆಂದು ವರದಿ ಸಲ್ಲಿಸಿದ್ದಾರೆ ನಮ್ಮ ಜನಪ್ರತಿನಿಧಿಗಳ ಅಂದಾಜಿನ ಮೇಲೆ ಅದು 60 00 ಕೋಟಿ ರೂ ಗಳಷ್ಟು ಆಗಿದೆಯೆಂದು ನಾವು ಭಾವಿಸಿದ್ದೇವೆ ಇಲ್ಲಿಯವರೆಗೆ ಆ ಜಿಲ್ಲೆಗೆ ಕೊಟ್ಟಿರುವುದು ಕೇವಲ 50 00 ಲಕ್ಷ ರೂ ಗಳು ಮಾತ್ರ, 5 00 ಲಕ್ಷ ರೂ ಗಳನ್ನು ಒಂದೊಂದು ತಾಲ್ಲೂಕಿಗೆ ಇವತ್ತು ರಿಲೀಸ್ ಮಾಡಿದ್ದಾರೆ 12 ಜನ ಸತ್ತಿರುವ ಜಿಲ್ಲೆಗೆ 50 00 ಲಕ್ಷರೂ ಗಳನ್ನು ಕೊಡುವುದರ ಮೂಲಕ ಇವತ್ತು ಅಲ್ಲಿ ಆಗಿರತಕ್ಕಂಥ ಹಾನಿಗೆ ಜನರಲ್ಲಿ ಧೈರ್ಯ ತುಂಬಿಸಬೇಕಾದರೆ ಯಾವ ರೀತಿಯಾಗಿ ರೈತರಿಗೆ ಆತ್ಮಸ್ಥೈರ್ಯ ತುಂಬಿಸಬೇಕು, ಸಾವಿರಾರು ಮನೆಗಳು ಇವತ್ತು ಬಿದ್ದು ಹೋಗಿರುವುದು, 500 ಲಕ್ಷ ರೂ ಗಳ ಹಣದಲ್ಲಿ ನಾವು ಯಾರಿಗೆ ಪರಿಹಾರ ಕೊಡಬೇಕು, ಯಾವ ರೀತಿ ಮಾಡಬೇಕು ಎಂದು ಇವತ್ತು ತಹಶೀಲ್ದಾರರವರು ಕಾಯುತ್ತಿದ್ದಾರೆ ಇಂಥದ್ದರಲ್ಲಿ ಈಗಾಗಲೇ ಮೊನ್ನೆ ನಾನು ಮಾತನಾಡುವ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕದ್ದೇನೆ, ತಕ್ಷಣ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯನ್ನಾದರೂ ಅಲ್ಲಿಗೆ ಕಳುಹಿಸಿದರೆ ಅಲ್ಲಿರುವ ಜನಪ್ರತಿನಿಧಿಗಳ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಯಾವ ಆಧ್ಯತೆ ಮೇಲೆ ನಾವು ರಿಹಾರ ಕೊಡಲಿಕ್ಕೆ ಸಾಧ್ಯತೆಯಾಗುತ್ತದೆ, ಯಾವುದಕ್ಕೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆಂಬುದಕ್ಕೆ ಒಂದು co-ordination ಆದರೂ ಆ ಜಿಲ್ಲೆಯಲ್ಲಿ ಆಗುತ್ತದೆಂದು ವಿನಂತಿಸಿದೆ,

ಆದರೆ 20 ದಿವಸಗಳ ಕಾಲ ಆಗಿದೆ, ಯಾವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶೀಯವರೂ ಆ ಜಿಲ್ಲೆಗೆ ಬಂದಿಲ್ಲ ಜಿಲ್ಲಾಧಿಕಾರಿಗಳು ಸಹಿತ ಎಲ್ಲಾ ಕಡೆ ಭೇಟಿ ನೀಡಲಿಕ್ಕೆ ಅವರಿಗೆ ಅವಕಾಶ ಸಿಗುತ್ತಿಲ್ಲ ಅನೇಕ ಕಡೆ ಟ್ಯಾಂಕ್‌ಗಳು ಒಡೆದು ಹೋಗಿವೆ, ತಕ್ಷಣ ಆ ಟ್ಯಾಂಕ್‌ಗಳನ್ನು ರಿಪೇರಿ ಮಾಡಿಸದಿದ್ದರೆ ಮತ್ತೆ ಬಂದಿರುವ ಮಳೆ ನೀರು ಸಹಿತ ಹರಿದು ಹೋಗುತ್ತದೆ ಹಾಗಾಗಿ ತಕ್ಷಣ ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯನ್ನಾದರೂ ಅಲ್ಲಿಗೆ ಕಳುಹಿಸಿದರೆ ಅಲ್ಲಿನ ಜನಪ್ರತಿನಿಧಿಗಳ ಜೊತೆಯಲ್ಲಿ ಕುಳಿತು ಅಲ್ಲಿ ಆದ್ಯತೆ ಮೇಲೆ ಮಾಡ ಬೇಕಾಗಿರುವಂಥ ಕಾಮಗಾರಿಗಳ ಬಗ್ಗೆ ಸರ್ಕಾರಕ್ಕೆ ಒಂದು ವರದಿ ನೀಡಲಿಕ್ಕೆ ಮತ್ತು ಅದಕ್ಕೆ ಹಣ ರಿಲೀಸ್ ಮಾಡಲಿಕ್ಕೂ ಅನುಕೂಲವಾಗುತ್ತದೆ ಅದರ ಜೊತೆಗೆಯಲ್ಲಿ ಈಗಾಗಲೇ ನಾವು ಬಂಡೆಪ್ಪ ಕಾಶಂಪುರ್‌ರವರಿಗೆ ತಕ್ಷಣ ಸಬ್ಸಿಡಿ ಮೇಲೆ ಬೀಜ ಬೇಕು ಎಂದು ವಿನಂತಿ ಮಾಡಿದ್ದೇವೆ ಆದರೆ ಒಂದು ವಾರ, ಹತ್ತು ದಿವಸವಾದರೂ ಒಂದು ಕೆ ಜಿ ಬೀಜ ಸಹಿತ ಸಬ್ಸಿಡಿ ಮೇಲೆ ರೈತರಿಗೆ ಜಿಲ್ಲೆಯಲ್ಲಿ ಕೊಟ್ಟಿಲ್ಲ ಮೊದಲೇನು ಕೊಟ್ಟಿದ್ದರೋ ಅದೇ, ಈ ಅನಾಹುತ ಆದನಂತರ ಒಂದು ಕಿಲೋ ಸಹಿತ ಬೀಜವನ್ನು ಸಬ್ಸಿಡಿ ಮೇಲೆ ರಾಯಚೂರು ಜಿಲ್ಲೆಯಲ್ಲಿ ಕೊಟ್ಟಿಲ್ಲ ಇವತ್ತು ಎಲ್ಲಾ ತಾಲ್ಲೂಕುಗಳಲ್ಲಿ ರೈತರ ಬೇಡಿಕೆಯಿದೆ, ಹಾಗಾಗಿ ತಾವು ಅದರ ಬಗ್ಗೆ ಗಮನ ಹರಿಸಿ ತಕ್ಷಣ ಸಬ್ಸಿಡಿ ಮೇಲೆ ಬೀಜ ಸರಬರಾಜು ಮಾಡುವಂಥದ್ದು, ಅತಿ ಮುಖ್ಯವಾಗಿ ಸನ್‌ಫ್ಲವರ್, ಭತ್ತ ಬೇಕು ಎಂದು ಜನರು ಕೇಳುತ್ತಿದ್ದಾರೆ, ಅದರ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ಸರಿಕರ್ ಭೀಮಪ್ಪ ಚನ್ನಪ್ಪ (ರಾಯಭಾಗ) ಮಾನ್ಯ ಅಧ್ಯಕ್ಷರೇ ನನಗೆ ಮಾತನಾಡಲಿಕ್ಕೆ ಅಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು, ಈ ನಮ್ಮ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನಲ್ಲಿ 2005-06-07 ಈ ಮೂರು ವರ್ಷಗಳಲ್ಲಿ ಪ್ರವಾಹ ಹೆಚ್ಚಾಗಿ ನಮ್ಮ ರೈತರಿಗೆ ದೊಡ್ಡ ಸಮಸ್ಯೆಯಾಗಿದೆ ಈ ಮಳೆಹಾನಿಯಿಂದ ಈ ಮೂರು ವರ್ಷದಿಂದ ಪ್ರತಿ ವರ್ಷ ನಮ್ಮ ಜನರಿಗೆ ತೊಂದರೆ ಸಹ ಆಗಿದೆ ಮತ್ತು ಅದರ ಸಂಗಡ ನಾನು 3 ವರ್ಷದಿಂದ ಮಾನ್ಯ ಉಪಮುಖ್ಯಮಂತ್ರಿಯವರಿಗೆ, ಮುಖ್ಯಮಂತ್ರಿವ/ಯರಿಗೆ ಮತ್ತು ಲೋಕೋಪ ಯೋಗಿ ಮತ್ತು ನಮ್ಮ ಉಸ್ತುವಾರಿ ಸಚಿವರಿಗೆ ಸಹ ನಾನು ಎರಡು ಮೂರು ಪತ್ರ ಬರೆದರೂ ಸಹ ಈ ನಮ್ಮ ಹುಗಾರ್ ಕುಡಿ ಬ್ರಿಡ್ಜ್ ಅನ್ನು ಮೂರು ಮೀಟರ್ ಎತ್ತರ ಮಾಡಿಸುವ ಸಲುವಾಗಿ ನಾನು ಬಹಳ ಪ್ರಯತ್ನ ಪಡುತ್ತಿದ್ದೇನೆ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಪತ್ರ ಬರೆದಾಗ ಅವರ ಆಪ್ತ

ಕಾರ್ಯದರ್ಶಿಯವರಿಂದ ಬಂದದ್ದು ಅದೇ ಉತ್ತರ, ನಮ್ಮ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರು ಸಹ ಅದೇ ಉತ್ತರವನ್ನು ಕೊಡುತ್ತಾರೆ, ಅವರು 08-01-2007 ರಲ್ಲಿ ಇಹಂದಿನ ಡಿ ಸಿ ಯವರಾದ ಶ್ರೀಮತಿ ಶಾಲಿನಿ ರಜನೀಶ ರವರು ಲೋಕೋಪಯೋಗಿ ಇಲಾಖೆಗೆ ಒಂದು ಪತ್ರವನ್ನು ಬರೆದಿದ್ದರು ಅದು 8 00 ಕೋಟಿ ರೂ ಗಳನ್ನು ಸ್ಯಾಂಕ್ಷನ್ ಮಾಡಿ ಆ ಹುಗಾರ್ ಕುಡಚಿಯ ಬ್ರಿಡ್ಜ್‌ಗೆ ಸೇತುವೆ ಮಾಡುವಂಥ ಒಂದು ವ್ಯವಸ್ಥೆಯನ್ನು ತಮ್ಮ ಮುಖಾಂತರ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವರಿಗೂ ಕೇಳಿಕೊಳ್ಳುತ್ತೇವೆ ಏಕೆಂದರೆ ಇದು ಪ್ರತಿ ವರ್ಷ ಈಗೊಂದು ಮಲೆಯಾದ ಎರಡು ದಿವಸದಲ್ಲಿ ಇವತ್ತಿಗೆ 10 ದಿವಸ ಆಯಿತು, ಆ ಹುಗಾರ್ ಕುಡಚಿ ಬ್ರಿಡ್ಜ್ ಈಗ ಬಂದ್ ಆಗಿ ಸಾರಿಗೆ ಸಂಪರ್ಕ ಕೂಡ ತಪ್ಪಿಹೋಗಿದೆ, ಏಕೆಂದರೆ ಆ ಬ್ರಿಡ್ಜ್‌ನಿಂದ ನಮ್ಮ ಕರ್ನಾಟಕ ಹಾಗೂ ಮಹಾರಾಷ್ಟ್ರಕ್ಕೆ ಒಂದು ಸಹಾಯಕವಾದ ರಸ್ತೆಯಿದೆ, ಅದಕ್ಕೆ ಯಾವುದೇ ಪರಿಸ್ಥಿತಿಯಿಂದ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರಿಂದ, ಹಾಗೂ ನಮ್ಮ ಉಸ್ತುವಾರಿ ಸಚಿವರಾದ ಶಶಿಕಾಂತ್ ನಾಯಕರವರು ಒಂದು ಕ್ರಮ ಕೈಗೊಂಡು ನನ್ನ ಒಂದು ಈ ರಾಯಬಾಗ ತಾಲ್ಲೂಕಿನ ಈ ಬ್ರಿಡ್ಜ್ ಅನ್ನು ಮೂರು ಮೀಟರ್ ಎತ್ತರ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮಳೆ ಪ್ರವಾಹದಿಂದ ಮುಖ್ಯಮಂತ್ರಿಯವರಿಗೆ, ಉಪಮುಖ್ಯಮಂತ್ರಿಯವರಿಗೆ ಕೇಳಿಕೊಂಡಿದ್ದೇವೆ, ಪ್ರತಿ ವರ್ಷ ನಮ್ಮ ಒಂದು ತಾಲ್ಲೂಕಿನ 12 ಹಳ್ಳಿಗಳು ನೀರಿನಲ್ಲಿ ಮುಳುಗಿ ಹೋಗುತ್ತವೆ ಅದರಲ್ಲಿ 5 ಹಳ್ಳಿಗಳು complusory ಮುಳುಗಿ ಹೋದಾಗ ನಮಗೆ ಅದಕ್ಕೆ ಪರಿಹಾರ ಕೊಡಲು ವಿಚಾರವೇ ಮಾಡಲಿಲ್ಲ ಏಕೆಂದರೆ ಮುಳುಗಿಹೋಗುವಂತಹ ಒಂದು ಹಳೆಬಿಗ್ಗೆವಾಡಿ, ಗುಂಡುವಾಡು ಮತ್ತು ಸಿರಗೂರು ಇವು ಮೂರು ಹಳ್ಳಿಗಳನ್ನು ಹಿಪ್ಪರಗಿ ಡ್ಯಾಮ್ ಪ್ರಕಾರ ಶಿಫ್ಟ್ ಮಾಡುವ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಅಧ್ಯಕ್ಷರ ಮೂಲಕ ಎಲ್ಲಾ ಸಚಿವರಲ್ಲಿಯೂ ಕಳಕಳಿಯಿಂದ ಕೇಳಿಕೊಂಡು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮತ್ತೊಮ್ಮೆ ತಮಗೆಲ್ಲರಿಗೂ ಅಧ್ಯಕ್ಷರಿಗೆ ವಂದಿಸುತ್ತೇನೆ

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಅಧ್ಯಕ್ಷರೇ, ನಾನು ಈಗಾಗಲೇ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದೆ, ಆದರೆ ಬೇರೆ ಬೇರೆ ರೀತಿಯ ವಿಷಯಗಳು ಬಂದಂಥ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ಅದು ಬಂದಿಲ್ಲದೇ ಇರಬಹುದೆಂದು ಹೇಳಲಿಚ್ಛಿಸುತ್ತೇನೆ ಈ ಅತಿವೃಷ್ಟಿಯಿಂದ ಆಗಿರತಕ್ಕಂಥ ನಾವು ಏನಿದೆ, ಅದಕ್ಕೆ ಈಗಾಗಲೇ ನಾವು ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆ House damages,

Infrastructure damages ವಿಷಯದಲ್ಲಿ ಈಗಾಗಲೇ ನಮಗೆ latest ಮಾಹಿತಿ ಬಂದಿರುವ ಪ್ರಕಾರ ಸುಮಾರು 279 00 ಕೋಟಿ ರೂ ಗಳು

ಶ್ರೀ ಎಸ್ ಮಲ್ಲಿಕಾರ್ಜುನ ಖರ್ಗೆ ಹಣ ಯಾ ದಿನಾಂಕದಲ್ಲಿ ಕೊಟ್ಟಿದ್ದೀರಿ ಎಂದು ಹೇಳಿದರೆ ಚೆನ್ನಾಗಿರುತ್ತದೆ, ಏಕೆಂದರೆ ನಾನು ಎರಡು ದಿನಗಳ ಹಿಂದೆ ಗುಲ್ಬರ್ಗಾದಿಂದ ಕಾರ್ಯದರ್ಶಿಯವರಿಗೆ ಫೋನ್ ಮಾಡಿ ಕೇಳಿದೆ, ಅವರು ಒಂದೆರಡು ದಿವಸದಲ್ಲಿ ಹಣ ಬಿಡುಗಡೆಯಾಗಬಹುದು ಎಂದು ಹೇಳಿದರು, Deputy Commissioner ಅವರು ಒಂದು ತಿಂಗಳ ಹಿಂದೆ ಒಂದು ಕೋಟಿ ರೂಪಾಯಿ ಏನು ಬಿಡುಗಡೆ ಮಾಡಿದ್ದಾರೆ ಅದರಲ್ಲಿ ಹಣ ಬಂದಿಲ್ಲವೆಂದು ಏಹಳಿದ್ದಾರೆ ದಯವಿಟ್ಟು ಅದರ ಬಗ್ಗೆ ತಾವು ಕ್ಲಾರಿಫೈ ಮಾಡಿದರೆ ನಮಗ ಹಣ ಯಾವಾಗ ಬಿಡುಗಡೆಯಾಗಿದೆಯೆಂಬುದು ನಮಗೆ ಗೊತ್ತಾಗುತ್ತದೆ`

ಶ್ರೀ ಹೆಚ್ ಡಿ ಕುಮಾರಸ್ವಾಮಿ ಕುಡಿಯುವ ನೀರಿಗೆ 31 00 ಕೋಟಿ ರೂಪಾಯಿಗಳು flood relief ಗೆ ಈಗಾಗಲೇ 14 50 ಕೋಟಿ ರೂ ಗಳ ಹಣ ಈಗಾಗಲೇ ಬಿಡುಗಡೆಯಾಗಿದೆ Infrasturcture damage ಆಗಿರತಕ್ಕಂಥ ವಿಷಯದಲ್ಲಿ ನಾನು ಸದಸ್ಯರ ಗಮನಕ್ಕೆ ತರುವುದು, ಈಗಾಗಲೇ ಸರ್ಕಾರಕ್ಕೆ ಏನು ಸಂಪೂರ್ಣವಾದ ಮಾಹಿತಿ ಬಂದಿದೆ, ಆಗಲೇ ಈ ವಿಷಯವನ್ನು ಹೇಳಿದ್ದೇನೆ, ಈ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಮಳೆ ನಿಲ್ಲದೇ ರಸ್ತೆ ಕೆಲಸಗಳನ್ನು ಪ್ರಾರಂಭ ಮಾಡಲಿಕ್ಕೆ ಆಗುವುದಿಲ್ಲ ಮನೆಗಳನ್ನು ಕಟ್ಟಲಿಕೆ ತೊಂದರೆ ಏನಿದೆ, ಕ್ರಾಪ್ ನಾಶವಾಗಿರುವುದು ತಾವು ಹೇಳಿರುವಂತೆ 5,000 ಹೆಕ್ಟೇರ್ ಅಲ್ಲ, ಅದು 25,000 ಹೆಕ್ಟೇರ್ ಬೆಳೆ ನಾಶವಾಗಿದೆಯೆಂದು ಸದಸ್ಯರ ಗಮನಕ್ಕೆ ತರಬಯಸುತ್ತೇನೆ ಇವತ್ತು ಸಿ ಆರ್ ಎಫ್ norm ನಡಿಯಲ್ಲಿ ನಾವು ಇದಕ್ಕೆ ಏನೊಂದು ಪರಿಹಾರವನ್ನು ಕೊಡಬೇಕಾಗುತ್ತದೆ, ಪರಿಹಾರವನ್ನು ಕೊಡಲಿಕ್ಕೆ ತಕ್ಷಣವೇ ಕ್ರಮ ಕೈಗೊಳ್ಳುತ್ತಿದ್ದೇವೆ ಈ ವಾರದೊಳಗೆ ಇನ್ನು 50 00 ಕೋಟಿ ರೂ ಗಳನ್ನು ಬಿಡುಗಡೆ ಮಾಡುತ್ತೇವೆ, ಈಗಾಗಲೇ 50 00 ಕೋಟಿ ರೂ ಗಳನ್ನು ಬಿಡುಗಡೆ ಮಾಡಿದ್ದೇವೆ, ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಸರ್ಕಾರ ಇವತ್ತು ತೀರ್ಮಾನ ಮಾಡುತ್ತಿದೆಯೆಂದು ಹೇಳಿ, ಮುಂದಿನ ದಿನಗಳಲ್ಲಿ Infrastructure damages ಆಗಿರತಕ್ಕಂಥ ವಿಷಯದಲ್ಲಿ ಯಾವ ರೀತಿ ಹಣವನ್ನು ಕೊಡಬೇಕಾಗುತ್ತದೆ ಬ್ರಿಡ್ಜಸ್ ಕನೆಕ್ಟಿವಿಟಿ ಹೋಗಿರುವಂಥದ್ದು ರಸ್ತೆಗಳು ಹಾಳಾಗಿರುವ ವಿಷಯದಲ್ಲಿ ಏನು ಈಗಾಗಲೇ ಮಾಹಿತಿ ಬಂದಿದೆ ರಸ್ತೆಗಳು ಹಾಳಾಗಿರುವುದಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾಹಿತಿಗಳು ಬಂದಿವೆ

ಅದೇ ರೀತಿ ಮುಂದಿನ ದಿನಗಳಲ್ಲೂ ಕೆಲವು ನಷ್ಟವಾಗುವ ಮಾಹಿತಿಗಳನ್ನು ಪಡೆದ ನಂತರವೇ ಹಣ ಬಿಡುಗಡೆ ಮಾಡುವುದಕ್ಕೆ ಯಾವುದೇ ರೀತಿಯಲ್ಲೂ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಇವತು ಕೆಲವು ಪ್ರದೇಶಗಳಲ್ಲಿ ನೀರಿನಿಂದ ಜಲಾವೃತವಾಗಿರುವ ಬೆಳಗಾವಿ, ಗುಲ್ಬರ್ಗ ಜಿಲ್ಲೆಗಳಲ್ಲಿ ಈಗಾಗಲೇ ಭೂಮಿಯನ್ನು ಖರೀದಿಸುವುದಕ್ಕೆ ಆದೇಶ ಕೊಟ್ಟು ಹಣ ಬಿಡುಗಡೆ ಮಾಡಿದ್ದೇವೆ ಈಗಾಗಲೇ 4(1) ನೋಟಿಫಿಕೇಷನ್ ಮಾಡಿರುವ ಸಂದರ್ಭಗಳಲ್ಲಿ ಭೂಮಿಯನ್ನು ಖರೀದಿಸುವ ಪ್ರಕ್ರಿಯೆ ಮುಗಿದ ತಕ್ಷಣವೇ ಮನೆಗಳನ್ನು ಕಟ್ಟುವುದಕ್ಕೆ ಕ್ರಮ ಕೈಗೊಳ್ಳಲು ಸರ್ಕಾರ ಆದೇಶ ಮಾಡಿದೆ ಆದುದರಿಂದ, ಖರ್ಗೆಯವರು ಮಾತನಾಡುತ್ತಾ, ಬೇರೆ ಬೇರೆ ಡ್ಯಾಮೇಜ್‌ಗಳ ಬಗ್ಗೆ ಏನೇನು ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬ ಬಗ್ಗೆ ವಿವರಗಳನ್ನು ಕೊಡಬೇಕೆಂದು ಏನು ಕೇಳಿದ್ದಾರೆ, ಅದರ ಬಗ್ಗೆ ಈಗಾಗಲೇ ಸರ್ಕಾರದ ಮಾಹಿತಿಯನ್ನು ನಾನು ನೀಡಿದ್ದೇನೆ ಇವತ್ತು ಮಳೆ ನಿಂತ ನಂತರವೇ ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ತಕ್ಷಣ ರಸ್ತೆ ಕೆಲಸ ಇರಬಹುದು, ಮನೆಗಳನ್ನು ಕೊಡುವುದಕ್ಕೆ ಇವತ್ತು ತೊಂದರೆ ಇದೆ ಈಗ ಮನೆಗಳನ್ನು ಕೊಟ್ಟರೂ ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದನ್ನು ಗಮನಕ್ಕೆ ತರುತ್ತೇನೆ ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಉಡುಪಿ ಜಿಲ್ಲೆಯಲ್ಲಿನ ಕಡಲ ಕೊರೆತದ ಬಗ್ಗೆ ಪ್ರಸ್ತಾಪಿಸಿದರು ಅದೇ ರೀತಿ ವಿಶ್ವೇಶ್ವರ ಹೆಗ್ಡೆಯವರು ಸಹ ಪ್ರಸ್ತಾಪಿಸಿದ್ದಾರೆ ಈ ವಿಷಯದಲ್ಲಿ ಹಲವಾರು ವರ್ಷಗಳುಇಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪವನೆಗಳು ಹೋಗುತ್ತಿದೆ ಮೊನ್ನೆ ಕುಮಾರ್ ಬಂಗಾರಪ್ಪನವರು ಈ ವಿಷಯ ಪ್ರಸ್ತಾಪಿಸಿದರು ಮಳೆಗಾಲದಲ್ಲಿ ಕಡಲ ಕೊರೆತದಿಂದ ಆಗುವ ಅನಾಹುತಕ್ಕೆ ಸಂಬಂಧಿಸಿದಂತೆ ಮೊನ್ನೆ ಪ್ರಸ್ತಾಪಿಸಿ ಗಮನಕ್ಕೆ ತಂದರು ಇವತ್ತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪನೆ ಹೋಗಿದ್ದರೂ, ಅಲ್ಲಿಂದ ನಮಗೆ ಯಾವುದೇರೀತಿಯ ಸಕರಾತ್ಮಕ ಉತ್ತರ ಬಂದಿಲ್ಲ ಈಗಾಗಲೇ ಇದರ ಬಗ್ಗೆ ಸರ್ಕಾರದ ಗಮನದಲ್ಲಿ ಏಇದೆ, ತುರ್ತು ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ವ್ಯಾಪ್ತಿಯೊಳಗೆ ನಾವು ಏನು ಹಣ ಬಿಡುಗಡೆ ಮಾಡಬೇಕಾಗುತ್ತದೋ, ಅದನ್ನು ತಕ್ಷಣವೇ ಬಿಡುಗಡೆ ಮಾಡಿ, ಅಲ್ಲಿನ ಕಡಲು ಕೊರೆತದ ವಿಷಯದಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ಬೆಳೆ ಹಾನಿ ಬಗ್ಗೆಚಟ್ಟುಟ್ಟಇರ ಅಡಿಯಲ್ಲಿ ಅವರಿಗೆ ಪರಿಹಾರ ಕೊಡಬೇಕಾಗುತ್ತದೆ, ಅದನ್ನು ತಕ್ಷಣ ಕೊಡುತ್ತೇನೆ ಮತ್ತೊಂದು ವಿಚಾರ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ನೀವು ಇಲಾಖಾವಾರು ಚರ್ಚೆ ಮಾಡುವ ಸಂದರ್ಭದಲ್ಲಿ ಉತ್ತರ ಕೊಡುತ್ತೇನೆ

ಶ್ರೀ ಧರ್ಮಸಿಂಗ್ ಈಗ ತಾವೇ ಹೇಳಿದ್ದೀರಿ, ಎಲ್ಲರೂ ಕೂಡ ಬೇರೆ ಬೇರೆ ಭಾಷಣ ಮಾಡಿದರು, ಮಲ್ಲಿಕಾರ್ಜುನ ಖರ್ಗೆಯವರು ನೇರವಾಗಿ ವಿಚಾರದ ಬಗ್ಗೆ ಮಾತನಾಡಿದ್ದಾರೆಂದು ಹೇಳಿದ್ದಾರೆ ಇವತ್ತು ಕೊಟ್ಟಿರುವ ಉತ್ತರವೇನಿದೆ, ರಾಜ್ಯ ಸರ್ಕಾರ ಯಾವ ಬಾಬ್ತಿನಲ್ಲೂ ಕೂಡ ಹಣ ಕೊಟ್ಟಿಲ್ಲ, ಕೆಲಸ ಪ್ರಾರಂಬವಾಗಿಲ್ಲ, ಜಿಲ್ಲಾಧಿಕಾರಿಗಳ ಹತ್ತಿರವೂ ಹಣವಿಲ್ಲ ಸರ್ಕಾರ ರೈತರ ಬಹಗ್ಗೆ ಯಾವ ತತರಹದ ಕೆಲಸವನ್ನೂ ಪ್ರಾರಂಭ ಮಾಡಿಲ್ಲ ಅದಕ್ಕೆ ತಮ್ಮ ಉತ್ತರವೇನಿದೆ, ಇದರಲ್ಲಿ ವೈಫಲ್ಯತೆ ಕಾಣುತ್ತದೆ ತಮ್ಮ ಉತ್ತರಿಂದ ನಮಗೆ ತೃಪ್ತಿಯಾಗಿಲ್ಲ ನಾವೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ

(ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು ಈಗ ಸದನವನ್ನು ನಾಳೆ ಬೆಳಗ್ಗೆ 10 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಸಂಜೆ 6 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 11ನೇ ಜುಲೈ ಮಾಹೆ 2007ರ ಬುಧವಾರದಂದು ಬೆಳಗ್ಗೆ 10 00 ಗಂಟೆಗೆ ಸೇರಲು ನಿಶ್ಚಯಿಸಿದರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ

ಅನುಬಂಧ-1

ಬಿಳಿಗಿರಿ ರಂಗನ ಬೆಟ್ಟದ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ

ಸಂಖ್ಯೆ (186) 35 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧ ಪಡಿಸಲು ಮನವಿಗಳು ಬಂದಿವೆಯೇ,

ಆ) ಬಂದಿದ್ದಲ್ಲಿ, ಯಾರಿಂದ ಹಾಗೂ ಯಾವಾಗ ಬಂದಿದೆ,

ಇ) ಈ ಮನವಿಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಪ್ರವಾಸೋದ್ಯಮ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು

ಅ) ಬಂದಿವೆ

ಆ) ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಕಳೆದ ಸಾಲಿನಲ್ಲಿ ಬಿ ಆರ್ ಹಿಲ್ಸ್ ಅನ್ನು ಒಳಗೊಂಡಂತೆ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಯೋಜನೆಯೊಂದನ್ನು ತಯಾರಿಸಿ ಅದನ್ನು ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಿರುತ್ತಾರೆ

ಇ) ಚಾಮರಾಜನಗರ ಜಿಲ್ಲೆಯ ಎಲ್ಲಾ ಪ್ರವಾಸಿ ಸ್ಥಳಗಳ ಬಗ್ಗೆ ಈಗಾಗಲೇ ಇಲಾಖೆಯು ಪ್ರಾರ ಕೈಗೊಂಡಿದ್ದು ಮಾಹಿತಿ ಮಡಿಕೆಗಳನ್ನು ಮುದ್ರಿಸಿ ಪ್ರವಾಸಿಗರಿಗೆ ಹಂಚಲಾಗುತ್ತಿದೆ ಬಿ ಆರ್ ಹಿಲ್ಸ್‌ನ ಕೆ ಗುಡಿ ಎಂಬಲ್ಲಿ ಉನ್ನತ ದರ್ಜೆಯ ವಸತಿ ಸೌಕರ್ಯ ನಿರ್ಮಿಸಿ ಜಂಗಲ್ ಲಾಡ್ಜಸ್ ಸಂಸ್ಥೆಯ ವತಿಯಿಂದ ನಡೆಸಲಾಗುತ್ತಿದೆ

ಇದಲ್ಲದೆ ಬಿಳಿಗಿರಿರಂಗನ ಬೆಟ್ಟದಲ್ಲಿ ಒಂದು ಉಪಹಾರ ಗೃಹವನ್ನು ನಿರ್ಮಿಸಲಾಗಿದ್ದು ಇದನ್ನು ಖಾಸಗೀಕರಣಗೊಳಿಸಲಾಗಿದೆ ಹಾಗೂ ಇಲ್ಲಿ ಒಂದು ಯಾತ್ರಿ ನಿವಾಸವನ್ನು ನಿರ್ಮಿಸಲು ಯೋಜನೆಯನ್ನು

ಪ್ರಶ್ನೆ ಸಂಖ್ಯೆ (187) 36 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ಕೊಳ್ಳೇಗಾಲ ಮತ್ತು ಯಳಂದೂರು ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2 ಈ ದಿಸೆಯಲ್ಲಿ ಮನವಿಗಳನ್ನು ಸಲ್ಲಿಸಿದಾಗ್ಯೂ ಇದುವರೆವಿಗೂ ಕೆಲಸಗಳನ್ನು ಪ್ರಾರಂಭಿಸದಿರಲು ಕಾರಣಗಳೇನು?

3 ಎಂದಿನಿಂದ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಮುಖ್ಯಮಂತ್ರಿ

1) ಹೌದು

2) ಕೊಳ್ಳೇಗಾಲ ಪಟ್ಟಣದಲ್ಲಿ ಹಾಲಿ ಶೇಕಡ 40 ರಷ್ಟು ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇದ್ದು, ಇನ್ನು ಉಳಿದ ಭಾಗಕ್ಕೆ ಸಮಗ್ರ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ಸರ್ವೆ ಕಾಮಗಾರಿಗೆ ಬೇಕಾಗುವ ಹಣವನ್ನು ನಗರಸಭೆ ಕೊಳ್ಳೇಗಾಲ ಇವರು ದಿನಾಂಕ 24-03-2007ರಲ್ಲಿ ರೂ 2 00 ಲಕ್ಷಗಳನ್ನು ಹಾಗೂ ದಿನಾಂಕ 22-05-2007ರಲ್ಲಿ ರೂ 3 00 ಲಕ್ಷಗಳನ್ನು ಮಂಡಳಿಗೆ ಪಾವತಿಸಿರುತ್ತಾರೆ ಸದರಿ ಒಳಚರಂಡಿ ಯೋಜನೆ ಕಲ್ಪಿಸಲು ಸರ್ವೆ ಕಾರ್ಯ ಪ್ರಗತಿಯಲ್ಲಿದೆ ಯಳಂದೂರು ಪಟ್ಟಣಕ್ಕೆ ಒಳಚರಂಡಿ ಅಳವಡಿಸಬೇಕಾದರೆ ನೀರು ಸರಬರಾಜು ಕನಿಷ್ಠ ತಲಾ ದಿನಂಪ್ರತಿ 100 ಲೀಟರ್ ಇರಬೇಕಾಗುತ್ತದೆ ಈಗ ತಲಾ ದಿನಂಪ್ರತಿ 30 ಲೀಟರ್ ಮಾತ್ರ ಇರುತ್ತದೆ ಆದ್ದರಿಂದ, ಈಗ ನೀರು ಸರಬರಾಜು ಯೋಜನೆಯಡಿ ರೂ 747 00 ಲಕ್ಷಗಳ ಅಂದಾಜಿಗೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದ್ದು,

ಕಾಮಗಾರಿಗಳು ಪ್ರಗತಿಲ್ಲಿವೆ ನೀರು ಸರಬರಾಜು ಯೋಜನೆಯನ್ನು ಚಾಲನೆಗೊಳಿಸಿದ ನಂತರ, ಒಳಚರಂಡಿ ಮಂಡಳಿಯು ಅಂದಾಜು ತಯಾರಿಸಿದ ನಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಮೂಲಭತ್ಯೆಗೆ ಅನುಗುಣವಾಗಿ ಪರಿಶೀಲಿಸಲಾಗುವುದು

3) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ತೊಂದರೆ ಬಗ್ಗೆ

ಪ್ರಶ್ನೆ ಸಂಖ್ಯೆ (188) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಮತ್ತು ಬಸ್ತೀಪುರ ಗ್ರಾಮಗಳಲ್ಲದೇ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಪ್ರದೇಶಗಳಲ್ಲಿನ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ತೊಂದರೆಯನ್ನು ನಿವಾರಿಸಲು ಈ ಸ್ಥಳಗಳಲ್ಲಿ ಉಪ ವಿದ್ಯುತ್ ಕೇಂದ್ರಗಳನ್ನು ತೆರೆಯಲು ಕೋರಿಕೆ ಸಲ್ಲಿಸಿದಾಗ್ಯೂ ಇದುವರೆವಿಗೂ ಉಪವಿದ್ಯುತ್ ಕೇಂದ್ರಗಳನ್ನು ಪ್ರಾರಂಭಿಸದಿರಲು ಕಾರಣಗಳೇನು,

ಇ) ಮೇಲ್ಕಂಡ ಸ್ಥಳಗಳಲ್ಲಿ ಯಾವಾಗ ಈ ಕೇಂದ್ರಗಳನ್ನು ತೆರೆಯಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು

ಅ) ಹೌದು

ಆ) ಮತ್ತು ಇ) ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಗ್ರಾಮದಲ್ಲಿ ಒಂದು 66/11 ಕೆ ವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಬಗ್ಗೆ ಪ್ರಸ್ತಾಪನೆಯನ್ನು

ಕರ್ನಾಟ ವಿದ್ಯುತ್ ಪ್ರಸರ ನಿಗಮದ ತಾಂತ್ರಿಕ ಸಲಹಾ ಸಮತಿಯ ಅನುಮೋದನೆಗಾಗಿ ಸಲ್ಲಿಸಲಾಗುತ್ತಿದೆ ಈ ಪ್ರಸ್ತಾಪನೆಗೆ ಕೆ ವಿ ಪ್ರ ನಿ ನಿ ಯ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ದೊರೆತ ನಂತರ ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು

ಕೊಳ್ಳೇಗಾಲ ತಾಲ್ಲೂಕಿನ ಬಸ್ತೀಪುರದಲ್ಲಿ ಹೊಸ ವಿದ್ಯುತ್ ವಿತರಣಾ ಕೇಂದ್ರದ ಸ್ಥಾಪನೆಗೆ ಯಾವುದೇ ಪ್ರಸ್ತಾವನೆ ಸದಸ್ಯಕ್ಕೆ ಇರುವುದಿಲ್ಲ ಬಸ್ತೀಪುರ ಗ್ರಾಮಕ್ಕೆ ಹಾಲಿ ಕೊಳ್ಳೇಗಾಲ ಪಟ್ಟಣದ ಟೌನ್ ಫೀಡರ್‌ನಿಂದಲೇ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ವಿದ್ಯುತ್ ಸರಬರಾಜಿನಲ್ಲಿ ವೋಲ್ಟೇಜ್ ಗುಣಮಟ್ಟದ ಸುಧಾರಣೆಗಾಗಿ ಈ ಗ್ರಾಮದಲ್ಲಿ ಹಾಲಿ ಇರುವ ಒಂದು ವಿತರಣಾ ಟ್ರಾನ್ಸ್‌ಫಾರ್ಮರ್ ಜೊತೆಗೆ ಹೆಚ್ಚುವರಿಯಾಗಿ ಇನ್ನೊಂದು ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ

ಯಳಂದೂರು ಪಟ್ಟಣದಲ್ಲಿ ಒಂದು 66/11 ಕೆ ವಿ 2 8 ಎಂ ವಿ ಎ ಸಾಮರ್ಥ್ಯದ ವಿದ್ಯುತ್ ಉಪಕೇಂದ್ರವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ನಿರ್ಮಾಣ ಮಾಡುತ್ತಿದೆ ನಿರ್ಮಾಣ ಕಾರ್ಯವು ಈಗ ಪ್ರಗತಿಯಲ್ಲಿದೆ ಅಕ್ಟೋಬರ್ 07 ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ ಸದರೀ ವಿದ್ಯುತ್ ಉಪಕೇಂದ್ರವು ಕಾರ್ಯಾರಂಭ ಮಾಡಿದ ನಂತರ ಯಳಂದೂರು ತಾಲ್ಲೂಕಿನದ್ಯಂತ ವಿದ್ಯುತ್ ಸರಬರಾಜಿನ ಗುಣಮಟ್ಟದಲ್ಲಿ ಸುಧಾರಣೆ ಆಗಲಿದೆ ಬಿಳಿಗಿರಿರಂಗನ ಬೆಟ್ಟ ಪ್ರದೇಶಕ್ಕೆ ಯಳಂದೂರು ಟೌನ್ ಫೀಡರ್‌ನಿಂದಲೇ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ಸದರಿ ಫೀಡರ್‌ನ ವಾಹಕಗಳನ್ನು ಹೆಚ್ಚಿನ ಗಾತ್ರದ ವಾಹಕಗಳ ಮೂಲಕ ಈಗಾಗಲೇ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯು ಬದಲಾಯಿಸಿರುತ್ತದೆ ಅಲ್ಲದೇ ಬಿಳಿಗಿರಿರಂಗನ ಬಬೆಟ್ಟಕ್ಕೆ ಪ್ರತ್ಯೇಕ 11 ಕೆ ವಿ ಮಾರ್ಗವನ್ನು ಇರ್ಗಸುವ ಬಗ್ಗೆ ಪರಿಶೀಲನೆ ಮಾಡುತ್ತಿದೆ ಆದುದರಿಂದ ಬಿಳಿಗಿರಿರಂಗನ ಬೆಟ್ಟದಲ್ಲಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಅವಶ್ಯಕತೆ ಸದ್ಯಕ್ಕೆ ಇರುವುದಿಲ್ಲ

ಪ್ರಶ್ನೆ ಸಂಖ್ಯೆ (190) 39 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಯಳಂದೂರು ತಾಲ್ಲೂಕಿನ ಮದ್ದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲದಲ್ಲಿ ಪೊಲೀಸ್ ಡಿನ್‌ಪೋಸ್ಟ್ ತೆರೆಯಲು ಮನವಿ ಸಲ್ಲಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಮನವಿಗಳ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) ಯಳಂದೂರು ತಾಲ್ಲೂಕಿನ ಮದ್ದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗ್ರಾಮದಲ್ಲಿ ಪೊಲೀಸ್ ಔಟ್‌ಪೋಸ್ಟ್ ತೆರೆಯಲು ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಪ್ರಶ್ನೆ ಸಂಖ್ಯೆ (207) 41 ಶ್ರೀ ಬಸವರಾಜು ಎ ಎಸ್ (ಅರಸೀಕೆರೆ)

ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪುರಸಭೆ ವಾರ್ಡ್‌ಗಳ ಮೀಸಲಾತಿಯನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗಿದೆ,

ಆ) ಈ ಮೀಸಲಾತಿಯನ್ನು ನಿಗದೀಕರಿಸುವಾಗ ಹಿಂದಿನ ಎಷ್ಟು ಬಡಾವಣೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ,

ಇ) ಪುರಸಭೆ ಮೀಸಲಾತಿಯನ್ನು ರೊಟೇಷನ್ ಆಧಾರದ ಮೇಲೆ ನಿರ್ಧರಿಸಲಾಗಿದೆಯೇ?

ಈ) ಅರಸೀಕೆರೆ ಪುರಸಭೆಯ 1996, 2001ರಲ್ಲಿ 23 ವಾರ್ಡ್ ಮೀಸಲಾತಿ ವಿವರ ಒದಗಿಸುವುದು

ಉ) ಈ ಪುರಸಭೆಯ ನೈರ್ಮಲ್ಯ ಕಾರ್ಯದ ಗುತ್ತಿಗೆದಾರರು ಯಾರು,

ಊ) ಇವರುಗಳ ಗುತ್ತಿಗೆ ಅವಧಿ ಎಷ್ಟು (ವಿವರ ಒದಗಿಸುವುದು)?

ಶ್ರೀ ಆಲಂಗೂರು ಶ್ರೀನಿವಾಸ್

ಅ) ಕರ್ನಾಟಕ ಪುರಸಭೆ ಕಾಯ್ದೆ 1964 ರ ಕಲಂ 11 ಉಪ ಕಲಂ 4,5,6ಮತ್ತು 2001ರ ಜನಗಣತಿ ಅನ್ವಯ ನಗರಾಭಿವೃದ್ಧಿ ಇಲಾಖೆಯ ಮಾರ್ಗಸೂಚಿ ಆದೇಶ ಸಂಖ್ಯೆ ನಅಇ 82 ಎಂಎಲ್‌ಆರ್ 2007 ದಿ 07-05-2007 ಮತ್ತು 14-05-2007ರನ್ವಯ ಅರಸೀಕೆರೆ ಪುರಸಭೆಗೆ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಿ ಸರ್ಕಾರವು ಕರಡು ಅದಿಸೂಚನೆಯನ್ನು 18-06-2007 ರಲ್ಲಿ ಹೊರಡಿಸಲಾಗಿದೆ

ಆ) ಮೀಸಲಾತಿಯನ್ನು ನಿಗಧಿಪಡಿಸುವಾಗ ಹಿಂದಿನ 23 ವಾರ್ಡ್‌ಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ

ಇ) ಹೌದು

ವಾರ್ಡ್‌ನಂ	1995ರ ಮೀಸಲಾತಿ	2001ರ ಮೀಸಲಾತಿ
1	ಸಾಮಾನ್ಯ	ಹಿಂದುಳಿದವರ್ಗ(ಎ) (ಮಹಿಳೆ)
2	ಪರಿಶಿಷ್ಟ ಜಾತಿ (ಮಹಿಳೆ)	ಹಿಂದುಳಿದ ವರ್ಗ (ಬಿ)
3	ಹಿಂದುಳಿದ ವರ್ಗ (ಎ)	ಪರಿಶಿಷ್ಟ ಜಾತಿ (ಮಹಿಳೆ)
4	ಪರಿಶಿಷ್ಟ ಜಾತಿ	ಹಿಂದುಳಿದವರ್ಗ(ಎ) (ಮಹಿಳೆ)
5	ಹಿಂದುಳಿದ ವರ್ಗ (ಎ)	ಪರಿಶಿಷ್ಟ ಜಾತಿ (ಮಹಿಳೆ)
6	ಹಿಂದುಳಿದವರ್ಗ(ಎ)(ಮಹಿಳೆ)	ಪರಿಶಿಷ್ಟ ಜಾತಿ
7	ಸಾಮಾನ್ಯ	ಹಿಂದುಳಿದ ವರ್ಗ (ಬಿ) (ಮಹಿಳೆ)
8	ಪರಿಶಿಷ್ಟ ಜಾತಿ (ಮಹಿಳೆ)	ಹಿಂದುಳಿದ ವರ್ಗ (ಎ)
9	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ (ಎ)
10	ಸಾಮಾನ್ಯ (ಮಹಿಳೆ)	ಪರಿಶಿಷ್ಟ ಜಾತಿ
11	ಪರಿಶಿಷ್ಟ ಜಾತಿ	ಸಾಮಾನ್ಯ (ಮಹಿಳೆ)
12	ಸಾಮಾನ್ಯ	ಸಾಮಾನ್ಯ
13	ಹಿಂದುಳಿದವರ್ಗ(ಬಿ)(ಮಹಿಳೆ)	ಸಾಮಾನ್ಯ
14	ಹಿಂದುಳಿದವರ್ಗ(ಎ)	ಸಾಮಾನ್ಯ (ಮಹಿಳೆ)
15	ಸಾಮಾನ್ಯ	ಸಾಮಾನ್ಯ
16	ಸಾಮಾನ್ಯ	ಸಾಮಾನ್ಯ
17	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ (ಎ)
18	ಹಿಂದುಳಿದವರ್ಗ(ಎ)(ಮಹಿಳೆ)	ಸಾಮಾನ್ಯ
19	ಸಾಮಾನ್ಯ	ಸಾಮಾನ್ಯ
20	ಹಿಂದುಳಿದ ವರ್ಗ (ಎ)	ಸಾಮಾನ್ಯ (ಮಹಿಳೆ)
21	ಹಿಂದುಳಿದ ವರ್ಗ (ಎ)	ಸಾಮಾನ್ಯ (ಮಹಿಳೆ)
22	ಸಾಮಾನ್ಯ (ಮಹಿಳೆ)	ಹಿಂದುಳಿದ ವರ್ಗ (ಎ)
23	ಸಾಮಾನ್ಯ	ಸಾಮಾನ್ಯ

ಉ) ಶ್ರೀ ರಾಮಯ್ಯ ಮಾತಾ ಸೆಕ್ಯುರಿಟಿ ಸರ್ವಿಸಸ್, ತುಮಕೂರು

ಊ) 21 04 2007 ರಿಂದ 31 03 2008 ರವರೆಗೆ

ಅರಸೀಕರೆ ಪುರಸಭೆಯ ವ್ಯಾಪ್ತಿಯ ವಾರ್ಡ್ ನಂ 2 ರಿಂದ 13ರ ವರೆಗಿನ ಘನತ್ಯಾಜ್ಯ ವಸ್ತುವಿನ ವಿಲೇವಾರಿ ಗುತ್ತಿಗೆ ನೀಡಲು ಪುರಸಭೆಯ ವ್ಯಾಪ್ತಿಯಿಂದ ದಿ 24 02 2007ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಜಿಲ್ಲಾಧಿಕಾರಿಯವರಿಂದ ದಿ 19 4 2007 ರಲ್ಲಿ ಅನುಮೋದನೆ ಪಡೆದು ದರ ರೂ 88,880/–ಗಳಿಗೆ ಕಾರ್ಯನಿರ್ವಹಿಸಲು ಅನುಮೋದನೆಯನ್ನು ನೀಡಲಾಗಿದೆ

ಪ್ರಶ್ನೆ ಸಂಖ್ಯೆ 43 (196) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರತಿ ವಿಶ್ವವಿದ್ಯಾಲಯಗಳಿಂದ ಪ್ರಥಮ ದರ್ಜೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದ ಮೂವರು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳನ್ನು ಗ್ರೂಪ್–ಎ ಮತ್ತು ಗ್ರೂಪ್–ಬಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿ ಕೊಳ್ಳಲು 1985ರಲ್ಲಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ,

ಆ) ಈ ಆದೇಶವನ್ನು ಪರಿಪಾಲಿಸಿಕೊಂಡು ಬರಲಾಗುತ್ತಿದೆಯೇ,

ಇ) ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಆದೇಶದ ಅನ್ವಯ ಗ್ರೂಪ್ – ಎ ಮತ್ತು ಗ್ರೂಪ್ – ಬಿ ಹುದ್ದೆಗಳಿಗೆ ನೇರ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) ಕರ್ನಾಟಕ ಸಿವಿಲ್ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು–ಎ ಮತ್ತು ಗುಂಪು–ಬಿ ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಗಳು, 1985 ದಿನಾಂಕ 11–4–1985 ರಿಂದ ಜಾರಿಗೆ ಬಂದಿವೆ

ಆ) ಹೌದು

ಇ) 2002–03 ಹಾಗೂ ನಂತರ ಶೈಕ್ಷಣಿಕ ಸಾಲುಗಳಿಗೆ ಸಂಬಂಧಿಸಿದಂತೆ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ

ಪ್ರಶ್ನೆ ಸಂಖ್ಯೆ 44 (197) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೋಲಾರ ತಾಲ್ಲೂಕಿನ ದೊಡ್ಡ ಅಯ್ಯರು ಬೆಟ್ಟಗಳಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ದೊಡ್ಡ ಅಯ್ಯರಿನ ಬೆಟ್ಟಕ್ಕೆ ಹೊಂದಿಕೊಂಡ ಖಾಜಿಕಲ್ಲಿಹಳ್ಳಿ ಬೆಟ್ಟದಲ್ಲಿ ದೇವರಗುಡಿ ಇರುವುದು ಮತ್ತು ಪ್ರತಿವಾರವೂ ಭಕ್ತಾಧಿಗಳು ಇಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಬ್ಬದ ದಿನಗಳಲ್ಲಿ ಈ ಎರಡು ಬೆಟ್ಟಗಳಲ್ಲಿ ಜನತೆ ಅಗ್ನಿಕುಂಡ ಹಾಕುವುದು ಸರ್ಕಾರದ ಗಮನದಲ್ಲಿ ಇದೆಯೇ,

ಈ) ಈ ಜೋಡಿ ಬೆಟ್ಟದಲ್ಲಿ ಕಲ್ಲು ಗಣಿಗಾರಿಕೆ ನಡೆಸಿ, ಬೆಟ್ಟ ಕರಗಿರುವುದರಿಂದ ಪರಿಸರ ಅಸಮತೋಲನ ಉಂಟಾಗುವುದರ ಜೊತೆಗೆ ಸಾಂಪ್ರದಾಯಿಕ ಜೊತೆಗೆ ಸಾಂಪ್ರದಾಯಿಕ ಆಚರಣೆಗಳಿಗೆ ತೊಂದರೆ ಉಂಟಾಗುವುದಿಲ್ಲವೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) ಬಂದಿದೆ

ಆ) ಬಂದಿದೆ

ಇ) ಸ್ಥಾನಿಕ ವಿಚಾರಣೆಯಿಂದಾಗಿ ಈ ರೀತಿಯ ಆಚರಣೆ ನಡೆಯುತ್ತಿರುವ ಬಗ್ಗೆ ಯಾವುದೇ ಖಚಿತ ಮಾಹಿತಿ ಲಭ್ಯವಾಗಿಲ್ಲ

ಈ) ಖಾಜಿ ಕಲ್ಲುಗುಡ್ಡದ ಅತಿ ಹೆಚ್ಚಿನ ಎತ್ತರ ಪ್ರದೇಶದಲ್ಲಿ ಈ ದೇವಸ್ಥಾನವಿದ್ದು, ಈ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಕಲ್ಲುಗಣಿಗಾರಿಕೆ ನಡೆಯುತ್ತಿಲ್ಲ ಹಾಗೂ ಈ ಪ್ರದೇಶದಲ್ಲಿ ಇಲಾಖೆಯಿಂದ ಕಲ್ಲು ಗಣಿಗಾರಿಕೆಗಾಗಿ ಯಾವುದೇ ಪರವಾನಿಗೆಯನ್ನು ನೀಡಿರುವುದಿಲ್ಲ ಈ ಬೆಟ್ಟಕ್ಕೆ ಹೊಂದಿಕೊಂಡಂತೆ ಸುಮಾರು 750 ಮೀಟರು ಅಂತರದಲ್ಲಿರುವ ದೊಡ್ಡ ಅಯ್ಯರ್ ಗ್ರಾಮದ ಸರ್ವೆ ನಂ 76ರ ಬೆಟ್ಟದಲ್ಲಿ ಇಲಾಖೆಯಿಂದ 10 00 ಎಕರೆ ಪ್ರದೇಶದಲ್ಲಿ ಕಟ್ಟಡ ಕಲ್ಲಿಗಾಗಿ 5 ಕಲ್ಲುಗಣಿ ಕಾರ್ಯವನ್ನು ನಿಷ್ಕ್ರಿಯವಾಗಿಟ್ಟಿದ್ದಾರೆ ಮತ್ತು ಈ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಕ್ರಷರ್ ಯಂತ್ರಗಳು ಸಹ ಇರುವುದಿಲ್ಲ ಆದ್ದರಿಂದ ಈ ಬೆಟ್ಟದ ಪ್ರದೇಶದಲ್ಲಿ ಯಾವುದೇ ಪರಿಸರ ಮಾಲಿನ್ಯ ಉಂಟಾಗುವ ಸಾಧ್ಯತೆ ಇರುವುದಿಲ್ಲ ಹಾಗೂ ಸಾಂಪ್ರದಾಯಿಕ ಆಚರಣೆಗೆ ಅಡಚಣೆ ಯಾಗುವುದಿಲ್ಲ

ಸಂಖ್ಯೆ 46 (53) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)

ಮಾನ್ಯ ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರಿ ಸ್ವಾಮ್ಯದ ಮೈಸೂರು ಮಿನರಲ್ಸ್ ಸಂಸ್ಥೆಯ ಈ ಹಿಂದಿನ ಮುಖ್ಯಸ್ಥರುಗಳು ತಪ್ಪು ನಿರ್ಧಾರ ಕೈಗೊಂಡ ಕಾರಣದಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಯಾವ ಕಾರಣಗಳಿಗಾಗಿ ಈ ನಷ್ಟ ಉಂಟಾಗಿದೆ,

ಇ) ಎಷ್ಟು ಅವಧಿಯಿಂದ ಈ ನಷ್ಟ ಉಂಟಾಗಿದೆ, (ಪ್ರಕರಣಗಳ ಪೂರ್ಣ ವಿವರಗಳನ್ನು ಒದಗಿಸುವುದು),

ಈ) ಇದರಲ್ಲಿ ಭಾಗಿಗಳಾದ ಅಧಿಕಾರಿಗಳು ಮತ್ತು ಉದ್ಯಮಿಗಳ ಹೆಸರು ವಿವರಗಳೇನು,

ಉ) ಸರ್ಕಾರ ಈ ವಿಷಯವಾಗಿ ಲೋಪವೆಸಗಿರುವ ತಪ್ಪಿತಸ್ಥರ ಮೇಲೆ ಕೈಗೊಳ್ಳಲಿರುವ ಕ್ರಮಗಳೇನು,

ಊ) ಹಾಗಿದ್ದಲ್ಲಿ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ

ನಷ್ಟ ಉಂಟಾಗಿರುವ ಈ ಪ್ರಕರಣವನ್ನು ಸರ್ಕಾರವು ಲೋಕಾಯುಕ್ತ ತನಿಖೆಗೆ ವಹಿಸುತ್ತದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) ಸದರಿ ವಿಷಯವನ್ನು ಸರ್ಕಾರದಿಂದ ಲೋಕಾಯುಕ್ತ ತನಿಖೆಗೆ ಆದೇಶವಾಗಿರುವುದರಿಂದ, ಸಂಬಂಧಪಟ್ಟ ದಾಖಲೆ ಮತ್ತು ಕಡತಗಳನ್ನು ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯಿಂದ ಲೋಕಾಯುಕ್ತ ಕಛೇರಿಗೆ ಒದಗಿಸಲಾಗಿದೆ ಲೋಕಾಯುಕ್ತ ತನಿಖಾ ವರದಿ ಬಂದ ನಂತರ ನಷ್ಟದ ಪ್ರಮಾಣವು ತಿಳಿಯಬಹುದಾಗಿದೆ

ಆ) ಈ ವಿಷಯವೂ ಕೂಡ ಲೋಕಾಯುಕ್ತ ತನಿಖೆಯ ನಂತರವೇ ತಿಳಿಯಬಹುದಾಗಿದೆ

ಇ) ಸರ್ಕಾರದ ಆದೇಶ ಸಂಖ್ಯೆ ಸಿಐ 164 ಎಂಎಂಎಂ 2006 ದಿನಾಂಕ 01-01-2000ದಿಂದ ದಿನಾಂಕ 22-07-2006ರ ಅವಧಿಯಲ್ಲಿ ನಡೆದಿದೆ ಎನ್ನಲಾದ ನಷ್ಟದ ಬಗ್ಗೆ ವಿಚಾರಣೆಯನ್ನು ಲೋಕಾಯುಕ್ತರಿಂದ ಕೈಗೊಳ್ಳಲಾಗಿರುತ್ತದೆ

ಈ) ಮಾನ್ಯ ಲೋಕಾಯುಕ್ತರಿಂದ ವಿಚಾರಣೆಯು ಪೂರ್ಣಗೊಂಡ ನಂತರವೇ ವಿವರವು ತಿಳಿಯಬಹುದಾಗಿರುತ್ತದೆ

ಉ) ಸದರಿ ವಿಚಾರದಲ್ಲಿ ಲೋಕಾಯುಕ್ತರಿಂದ ವರದಿ ಬಂದ ನಂತರ ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ

ಊ) ಹೌದು ಸರ್ಕಾರದ ಆದೇಶ ಸಂಖ್ಯೆ ಸಿಐ 164 ಎಂಎಂಎಂ 2006 ದಿನಾಂಕ 12-03-2007 ರಂದು ಸದರಿ ವಿಷಯವನ್ನು ಈಗಾಗಲೇ ಮಾನ್ಯ ಲೋಕಾಯುಕ್ತರ ತನಿಖೆಗೆ ಒಳಪಡಿಸಲಾಗಿದೆ

ರಾಜಾಜಿನಗರದ 2ನೇ ಹಂತದ ಪ್ರದೇಶವಲ್ಲ ಸಿಂಗಲ್ ಫೋಲ್ ಟಿ ಸಿ ಗಳನ್ನು ಸ್ಥಳಾಂತರಿಸುವ ಬಗ್ಗೆ

ಪ್ರಶ್ನೆ ಸಂಖ್ಯೆ 47 (92) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)

ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ವಿದ್ಯುತ್ ಪ್ರಸರಣ ನಿಗಮದವರು ಬೆಂಗಳೂರು ನಗರದ ರಾಜಾಜಿನಗರ 2ನೇ ಹಂತದ ಪ್ರದೇಶದಲ್ಲಿ (ವಿಶಾಲ್ ಭವನದ ಇಹಂದೆ) ಹಲವಾರು ಸಿಂಗಲ್ ಫೋಲ್ ಟಿ ಸಿ ಗಳನ್ನು ಜನವಸತಿ ಮನೆಗಳ ಪಕ್ಕದಲ್ಲಿ ಸ್ಥಾಪಿಸಿರುವುದನ್ನು ಸ್ಥಳಾಂತರಿಸಬೇಕೆಂದು ಕೋರಿ ಎಷ್ಟು ದೂರುಗಳು ಬಂದಿವೆ, (ವಿವರಗಳನ್ನು ಒದಗಿಸುವುದು)

ಆ) ಈ ದೂರುಗಳ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಈ ಟಿ ಸಿ ಗಳನ್ನು ಕೂಡಲೇ ಸ್ಥಳಾಂತರಿಸಬೇಕೆಂದು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಿಗೆ ಮುಖ್ಯಮಂತ್ರಿಗಳು ಎರಡು ಬಾರಿ ಆದೇಶ ಮಾಡಿರುವುದು ನಿಜವಲ್ಲವೆ,

ಇ) ಮುಖ್ಯಮಂತ್ರಿಗಳ ಆದೇಶದ ಪ್ರಕಾರ ತಕ್ಷಣ ಕ್ರಮ ಕೈಗೊಂಡು ವರದಿಸಲ್ಲಿಸಬೇಕೆಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕರು ದಿನಾಂಕ 22-01-2007 ರಂದು ಅಭಿಯಂತರರು, ಉತ್ತರ ವಿಭಾಗ ಇವರಿಗೆ ಸೂಚಿಸಿರುವುದು ನಿಜವಲ್ಲವೇ,

ಈ) ಹಾಗಿದ್ದಲ್ಲಿ ಈ ಬಗ್ಗೆ ಇಲ್ಲಿಯವರೆವಿಗೆ ಯಾವುದೇಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಮುಖ್ಯಮಂತ್ರಿಗಳ ಆದೇಶವನ್ನು ಧಿಕ್ಕರಿಸಿರುವ ಸಂಬಂದಪಟ್ಟ ಕಾರ್ಯನಿರ್ವಾಹಕ ಅಭಿಯಂತರರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಟಿ ಸಿ ಗಳನ್ನು ಸ್ಥಳಾಂತರಿಸಲಾಗುವುದೇ,

ಶ್ರೀ ಹೆಚ್ ಡಿ ರೇವಣ್ಣ

ಅ) ಬೆಂಗಳೂರು ರಾಜಾಜಿನಗರ 2ನೇ ಹಂತದ ಪ್ರದೇಶದಲ್ಲಿ (ವಿಶಾಲ್ ಭವನದ ಹಿಂದೆ) ಜನವಸತಿ ಮನೆಗಳ ಪಕ್ಕದಲ್ಲಿರುವ ವಿತರಣಾ ಪರಿವರ್ತಕ ಕೇಂದ್ರಗಳನ್ನು ಸ್ಥಳಾಂತರಿಸಬೇಕೆಂದು 2 ಅರ್ಜಿಗಳು / ದೂರುಗಳು ಬಂದಿವೆ ವಿವರಗಳು ಕೆಳಕಂಡಂತಿವೆ

1 ಶ್ರೀ ಹನುಮಂತೇಗೌಡ ಇವರು ದಿನಾಂಕ 19-10-2006 ರಂದು ಅರ್ಜಿ ನೀಡಿ ಅವರ ಖಾಲಿ ನಿವೇಶನದ ಮುಂದೆ ಇದ್ದ 4 ಕಂಬ ನಮೂನೆಯ 2 ಪರಿವರ್ತಕ ಕೇಂದ್ರಗಳನ್ನು ಸ್ಥಳಾಂತರಿಸಿ ಏಕಕಂಬ ರೂಪದ ಪರಿವರ್ತಕ ಕೇಂದ್ರಕ್ಕೆ ಪರಿವರ್ತಿಸಿಕೊಡಲು ಕೋರಿದ್ದರು ಅನಂತರ ಬೆವಿಕಂ ನಿಯಮಗಳ ಪ್ರಕಾರ ಅವರ ನಿವೇಶನದ ಮುಂದೆ ಅವರು ಕೋರಿರುವ ಸ್ಥಳದಲ್ಲಿ ಸ್ವಯಂ ಕಾಮಗಾರಿ ನಿರ್ವಹಣೆ ಅಡಿಯಲ್ಲಿ ಪರಿವರ್ತಕಗಳನ್ನು ಸ್ಥಳಾಂತರಿಸಿ ಕೆಲಸವನ್ನು ದಿನಾಂಕ 25-11-2006 ರಂದು ಪೂರ್ಣಗೊಳಿಸಲಾಯಿತು ಈ 2 ಪರಿವರ್ತಕಗಳಲ್ಲಿ 1 ಪರಿವರ್ತಕವನ್ನು ನಿವೇಶನದ ಮತ್ತೊಂದು ಬದಿಯಲ್ಲಿ ಅಳಡಿಸಲಾಗಿದ್ದು, ಸದ್ಯದಲ್ಲಿ ನಿವೇಶನದ ಈ ಭಾಗವು ಶ್ರೀಮತಿ ವಸಂತರಾಜ್ ಕೋಂ ರಾಜಗೋಪಾಲ್ ಇವರಿಗೆ ಸೇರಿರುತ್ತದೆ

2 ಶ್ರೀಮತಿ ವಸಂತರಾಜ್ ಕೋಂ ರಾಜಗೋಪಾಲ್‌ರವರು ದಿನಾಂಕ 3-1-2007 ರಂದು ದೂರು ನೀಡಿ ಅವರು ನಿರ್ಮಿಸುತ್ತಿರುವ ಮನೆಯ ಪಕ್ಕದಲ್ಲಿ ಈಗ ಸ್ಥಳಾಂತರಗೊಳಿಸಿ ನಿರ್ಮಿಸಲಾಗಿದ್ದ ಪರಿವರ್ತಕ ಕೇಂದ್ರವನ್ನು ಪಕ್ಕದಲ್ಲಿರುವ ಉದ್ಯಾನವನಕ್ಕೆ ಸ್ಥಳಾಂತರಿಸಲು ಕೋರಿರುತ್ತಾರೆ ದಿನಾಂಕ 5-2-2007 ರಂದು ಆ ಕ್ಷೇತ್ರದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಸ್ಥಳ ಪರಿಶೀಲನೆ ನಡೆಸಿ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮೋದನೆಗೊಂಡ ನಕ್ಷೆಯ ಮೇರೆಗೆ ಹಾಗೂ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮಗಳ ಪ್ರಕಾರ ಕಟ್ಟಡ ಮತ್ತು ಬೆ ವಿ ಕಂ ವಿದ್ಯುತ್ ಮಾರ್ಗಗಳ ಮಧ್ಯೆ 1 2 ಮೀಟರ್ ಸುರಕ್ಷಿತ ಅಂತರವನ್ನು ಕಾಯ್ದುಕೊಂಡು ಕಟ್ಟಡ ನಿರ್ಮಾಣ ಮಾಡಿಕೊಳ್ಳಲು ತಿಳಿಸಲಾಗಿರುತ್ತದೆ

ಆದರೆ, ಶ್ರೀಮತಿ ವಸಂತರಾಜ್ ರವರು ತಮ್ಮ ಕಟ್ಟಡದ ಮೊದಲನೆ ಮಹಡಿಯನ್ನು ಪರಿವರ್ತಕಕ್ಕೆ ಹತ್ತಿರದವರೆಗೆ ವಿಸ್ತರಿಸಿ ಕಟ್ಟಿರುತ್ತಾರೆ ಆದುದರಿಂದ ಮೇಲಿನ ಮಹಡಿ ಮತ್ತು ಪರಿವರ್ತಕದ ಮಧ್ಯದ ಸುರಕ್ಷಿತ ಅಂತರವು

ಕಡಿಮೆಯಾಗಿರುತ್ತದೆ ಅರ್ಜಿದಾರರು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮಗಳನ್ನು ಅನುಸರಿಸದೆ ಕಟ್ಟಡವನ್ನು ನಿರ್ಮಿಸುತ್ತಿರುವುದರಿಂದ ಉಂಟಾಗಿರುವ ಸಮಸ್ಯೆಗೆ ದೂರು ನೀಡಿರುವ ಶ್ರೀಮತಿ ವಸಂತರಾಜ್‌ರವರೇ ಹೊಣೆಗಾರರಾಗಿರುತ್ತಾರೆ ಈ ಪರಿವರ್ತಕವನ್ನು ಬೇರೆಡೆಗೆ ಸ್ಥಳಾಂತರಿಸಲು ಸೂಕ್ತ ಸ್ಥಳಾವಕಾಶ ಲಭ್ಯವಿಲ್ಲದೆ ಕಾರಣ ಬೇರೆಡೆಗೆ ಸ್ಥಳಾಂತರಿಸಲು ಸಾಧ್ಯವಾಗುವುದಿಲ್ಲ

ಆ) ಹೌದು ನಿಜ

ಇ) ಹೌದು ನಿಜ

ಈ) ಪರಿವರ್ತಕವನ್ನು ಬೇರೆಡೆಗೆ ಸ್ಥಳಾಂತರಿಸಲು ಸೂಕ್ತ ಸ್ಥಳಾವಕಾಶ ಲಭ್ಯವಿಲ್ಲದ ಕಾರಣ ಈ ಪರಿವರ್ತಕ ಕೇಂದ್ರವನ್ನು ಸ್ಥಳಾಂತರಿಸಲು ಸಾಧ್ಯವಾಗಿಲ್ಲ

ಉ) ಈ ಪ್ರಕರಣದಲ್ಲಿ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮಗಳನ್ನು ಅನುಸರಿಸದೆ ಮತ್ತು ನಗರಪಾಲಿಕೆಯಿಂದ ಅನುಮೋದನೆಗೊಂಡ ನಕ್ಷೆಯ ಪ್ರಕಾರ ಕಟ್ಟಡವನ್ನು ನಿರ್ಮಿಸದೆ ಇರುವುದರಿಂದ ಉಂಟಾಗುವ ಸಮಸ್ಯೆಗಳಿಗೆ ಅರ್ಜಿದಾರರೇ ಸ್ವಯಂ ಹೊಣೆಗಾರರಾಗಿರುವುದರಿಂದ ಬೆ ವಿ ಕಂ ನ ಯಾವ ಅಧಿಕಾರಿಗಳ ವಿರುದ್ಧವೂ ಶಿಸ್ತಿನ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಈ ಪರಿವರ್ತಕವನ್ನು ಸ್ಥಳಾಂತರ ಮಾಡಲೇ ಬೇಕಾದಲ್ಲಿ ಅದಕ್ಕೆ ಬೇಕಾದ ಸೂಕ್ತ ಸ್ಥಳವನ್ನು ಅರ್ಜಿದಾರರೇ ದೊರಕಿಸಿಕೊಡಬೇಕಾಗಿರುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದ ಕಾಮಗಾರಿಯನ್ನು ಸ್ವಯಂ ಕಾಮಗಾರಿ ನಿರ್ವಹಣೆ ಯೋಜನೆಯಡಿಯಲ್ಲಿ ಅರ್ಜಿದಾರರೇ ನಿರ್ವಹಿಸಬೇಕಾಗುತ್ತದೆ ಸೂಕ್ತ ಸ್ಥಳಾವಕಾಶ ಲಭ್ಯವಿಲ್ಲದ ಕಾರಣ ಪರಿವರ್ತಕವನ್ನು ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗಿಲ್ಲ

ಪ್ರಶ್ನೆ ಸಂಖ್ಯೆ 48 (11) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)

ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹುಬ್ಬಳ್ಳಿ – ಧಾರವಾಡ ಮಧ್ಯದ ರಸ್ತೆಯನ್ನು ಚುತುಷ್ಪಥ ರಸ್ತೆಯಾಗಿ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರಕ್ಕಿದೆಯೇ,

ಆ) ಹಾಗಿದ್ದಲ್ಲಿ, ಚುತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಅಂದಾಜು ಎಷ್ಟು ಹಣ ಬೇಕಾಗುತ್ತದೆ, ಈವರೆಗೂ ಎಷ್ಟು ಹಣ ಮಂಜೂರು ಮಾಡಲಾಗಿದೆ, ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಹೆಚ್ ಡಿ ರೇವಣ್ಣ

ಅ) ಹೌದು

ಆ) ಹುಬ್ಬಳ್ಳಿ – ಧಾರವಾಡ ಮಧ್ಯದ ರಸ್ತೆಯನ್ನು ಚುತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ರೂ 100 ಕೋಟಿಗಳ ಅಂದಾಜು ಮೊತ್ತದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳುವ ಪ್ರಸ್ತಾವನೆಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಸಲಹೆಗಾರರನ್ನು ನೇಮಿಸಲು ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಈ ರಸ್ತೆಯ ಅಭಿವೃದ್ಧಿಯ ಯೋಜನಾ ವರದಿ ತಯಾರಿಕೆಯ ಹಂತದಲ್ಲಿರುವುದರಿಂದ ಇದುವರೆವಿಗೂ ಯಾವುದೇ ಹಣ ಮಂಜೂರು ಮಾಡಿರುವುದಿಲ್ಲ

ಪ್ರಶ್ನೆ ಸಂಖ್ಯೆ 49 (12) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹುಬ್ಬಳ್ಳಿ – ಧಾರವಾಡ ಮಹಾನಗರದ ಜನತೆಯ ಬಹುದಿನಗಳ ಬೇಡಿಕೆಯಾದ 3ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಸರ್ಕಾರ

ಅನುಮತಿ ನೀಡಿ ಆಡಳಿತಾತ್ಮಕ ಒಪ್ಪಿಗೆ ನೀಡಿದೆಯೇ, ಇಲ್ಲವಾದಲ್ಲಿ, ಕಾರಣಗಳೇನು

ಆ) 3ನೇ ಹಂತದ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಲಿಕ್ಕೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣಗಳೇನು,

ಇ) ಕಳೆದ 1 1/2 ವರ್ಷಗಳಿಂದ ಪಾಲಿಕೆಯ ವ್ಯಾಪ್ತಿಯಲ್ಲಿ 6–7 ದಿನಕ್ಕೊಮ್ಮೆ ನೀರು ಸರಬರಾಜು ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಿಗೆ ನೀರು ಸರಬರಾಜು ವ್ಯವಸ್ಥೆ ಉತ್ತಮ ಪಡಿಸಲು ರೂ 195 00 ಕೋಟಿ ಅಂದಾಜು ವೆಚ್ಚದಲ್ಲಿ ಮಲಪ್ರಭಾ ಜಲಾಶಯದಿಂದ 3ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ವರ್ಷಾಸನ ಪಾವತಿ (ANNUITY FUNDS) ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಲಾಗಿದೆ

ಈ ಮಧ್ಯೆ ರೂ 195 00 ಕೋಟಿಗಳ ಕಾಮಗಾರಿಯ ಭಾಗವಾದ ವಿತರಣಾ ವ್ಯವಸ್ಥೆ ಸುಧಾರಣೆ ಕಾಮಗಾರಿಗೆ ರೂ 50 25 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರ ದಿನಾಂಕ 16–03–2006ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ ಇದಲ್ಲದೆ ಯು ಐ ಡಿ ಎಸಂ ಎಸ್ ಎಂ ಟಿ ಯೋಜನೆಯಡಿ ರೂ 990 21ಲಕ್ಷಗಳಿಗೆ ದಿನಾಂಕ 16–06–2007ರಲ್ಲಿ ಕೊಳವೆ ಮಾರ್ಗ ನವೀಕರಣ, ಜಲಸಂಗ್ರಹಾಗಾರಗಳು ಮತ್ತು ಇತರ ಕಾಮಗಾರಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ ಮಂಡಳಿಯು ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತಾರೆ

ಆ) ಮೇಲೆ ವಿವರಿಸಿರುವ ಅಭಿವೃದ್ಧಿ ಕೆಲಸಗಳನ್ನು ಬಿಟ್ಟು, ಉಳಿದ ಕೆಲಸಗಳನ್ನು ವರ್ಷಾಸನ ಪಾವತಿ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ ಸದರಿ ನೀತಿಯು ಸರ್ಕಾರದ ಪರಿಶೀಲನೆಯಲ್ಲಿದೆ ಇದೇ ವೇಳೆಗೆ ಮೇಲೆ

ನಮೂದಿಸಿದಂತೆ ರೂ 50 25 ಕೋಟಿ ಹಾಗೂ ರೂ 9 90 ಕೋಟಿಗಳ ಅನುದಾನದಲ್ಲಿ ವಿವಿಧ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ

ಇ) ಕಳೆದ 1 1/2 ವರ್ಷಗಳಿಂದ ಹುಬ್ಬಳ್ಳಿ ಧಾರವಾಡದಲ್ಲಿ 3 – 4 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ

ಈ) ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಅಮ್ಮಿನಭಾವಿಯಿಂದ ಹುಬ್ಬಳ್ಳಿಗೆ ನೇರವಾಗಿ ನೀರು ಸರಬರಾಜು ಮಾಡುವ 1168 ಮೀ ಮೀ ವ್ಯಾಸದ ಎಂ ಎಸ್ ಏರು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ ಹಾಗೂ ಅಮ್ಮಿನಭಾವಿಯಲ್ಲಿ 400 ಅಶ್ವಶಕ್ತಿ ಪಂಪ್ ಸೆಟ್ ಅಳವಡಿಸುವ ಕಾಮಗಾರಿಯು ಮುಗಿದಿದ್ದು ಜುಲೈ 2007ರ ಅಂತ್ಯದೊಳಗೆ ಚಾಲನೆಗೊಳಿಸಲಾಗುವುದು ಅಲ್ಲದೇ ವಿಶ್ವ ಬ್ಯಾಂಕ್ ನೆರವಿನಿ ಅಡಿಯಲ್ಲಿ ಕ್ವಿಕ್ ಫಿಕ್ಸ್ ಯೋಜನೆ ಮಂಜೂರಾಗಿದ್ದು ಯೋಜನೆಯಡಿ ಹುಬ್ಬಳ್ಳಿ ನಗರದಲ್ಲಿ 17 5 ಕಿ ಮೀ ಹಾಗೂ ಧಾರವಾಡ ಶಹರದಲ್ಲಿ 9 00 ಕಿ ಮೀ ಪೂರಕ ಕೊಳವೆ ಮಾರ್ಗಗಳನ್ನು ಅಳವಡಿಸಲು ಅವಕಾಶವಿದ್ದು ಕಾಮಗಾರಿಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ ಮೇಲೆ ನಮೂದಿಸಿದಂತೆ ರೂ 50·25 ಕೋಟಿ ಹಾಗೂ ರೂ 9 90 ಕೋಟಿಗಳ ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ತೆಗೆದು ಕೊಳ್ಳಲು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು

ಪ್ರಶ್ನೆ ಸಂಖ್ಯೆ 50 (85) ಶ್ರೀ ಐವಾನ್ ನಿಗ್ಲಿ, ಎಂಎಲ್ಎ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೀದಿ ನಾಯಿಗಳ ಹಾವಳಿಯನ್ನು ತೊಡೆದು ಹಾಕಲು ಸರ್ಕಾರವು ಎದುರಿಸುತ್ತಿರುವ ತೊಂದರೆಗಳೇನು? ಕಳೆದ ಒಂದು ವರ್ಷದಿಂದ ಬೀದಿ ನಾಯಿಗಳು ಕಚ್ಚಿರುವ ಬಗ್ಗೆ ವರದಿಯಾಗಿರುವ ಪ್ರಕರಣಗಳೆಷ್ಟು? ಮತ್ತ ಎಷ್ಟು ಮಂದಿ ಜನ/ಮಕ್ಕಳು ಗಾಯಗೊಂಡಿರುತ್ತಾರೆ ಅಥವಾ ಮರಣ ಹೊಂದಿರುತ್ತಾರೆ ಪರಿಹಾರವನ್ನು ನೀಡಲಾಗಿದೆಯೇ? ಎಷ್ಟು ಹಣವನ್ನು ನೀಡಲಾಗಿದೆ

ಆ) ನಗರದಲ್ಲಿ ಬೀದಿ ನಾಯಿಗಳು ಹೆಚ್ಚಾಗಲು ಕಾರಣಗಳೇನು,

ಇ) ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳನ್ನು ನಿರ್ಮೂಲನೆ ಮಾಡಲು ನಿಯಂತ್ರಿಸಲು ಸರ್ಕಾರವು ಸಾರ್ವಜನಿಕರಿಗೆ ನೀಡಿರುವ ಮಾರ್ಗಸೂಚನೆಗಳೇನು,

ಈ) ಈವರೆವಿಗೂ ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು,

ಉ) ವಿವಿಧ ಸರ್ಕಾರೇತರ ಸಂಸ್ಥೆಗಳು ಕೆಲಸವನ್ನು ನಿರ್ವಹಿಸಿರುವ ಬಗ್ಗೆ ಸಂತಾನಹರಣ ಕಾರ್ಯಕ್ರಮದ ಅನುಷ್ಠಾನವನ್ನು ಮೌಲ್ಯ ಮಾಪನ ಮಾಡಲಾಗಿದೆಯೇ, ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಲಾಗಿದೆಯೇ, ಮತ್ತು ಬಾಕಿ ಇರಲು ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) ಬೀದಿ ನಾಯಿಗಳ ಹಾವಳಿಯನ್ನು ಹತೋಟಿ ಮಾಡುವಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವ ಆಡಚಣೆಗಳಿರುವುದಿಲ್ಲ ಇಬ್ಬರು ಮಕ್ಕಳು ನಾಯಿ ಕಡಿತದಿಂ ಹಾಗೂ ಇಬ್ಬರು ಮಕ್ಕಳು ಹಾಗೂ ಓರ್ವ ವಯಸ್ಕರು ಹುಚ್ಚು ನಾಯಿ ಕಡಿತದಿಂದ ರೇಬೀಸ್ ರೋಗದಿಂದ ಮರಣ ಹೊಂದಿರುತ್ತಾರೆ ನಾಯಿಗಲ ಕಡಿತದಂದ ಮರಣವನ್ನಪ್ಪಿದ ಎರಡು ಮಕ್ಕಳ ಕುಟುಂಬಗಳಿಗೆ ಮತ್ತು ರೇಬೀಸ್‌ನಿಂದ ಮೃತಪಟ್ಟ ಒಬ್ಬ ಬಾಲಕನ ಕುಟುಂಬಕ್ಕೆ ಒಟ್ಟು ರೂ 2 65 ಲಕ್ಷಗಳ ಪರಿಹಾರವನ್ನು ನೀಡಲಾಗಿರುತ್ತದೆ

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಗಣತಿಯನ್ನು ಪಶುಸ್ಸಂಗೋಪನೆ ಇಲಾಕೆ ಮೂಲಕ ಕೈಕೊಂಡಿದ್ದು ಇದರಿಂದ ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳ ನಿಖರವಾದ ಅಂಕಿ ಅಂಶಗಳು ಲಭ್ಯವಾಗುತ್ತದೆ

ಇ) ಪಾಲಿಕೆಯು ಮಾಧ್ಯಮಗಳಲ್ಲಿ ಶುಚಿತ್ವ ಕಾಪಾಡಲು ಹಾಗೂ ಬೀದಿ ನಾಯಿಗಳ ಕುರಿತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಪ್ರಕಟಣೆ ನೀಡಿದೆ

ಈ) 2001 ರಿಂದ ಇಲ್ಲಿಯವರೆಗೆ ನಾಯಿಗಳ ಸಂತಾನಹರಣ ಕಾರ್ಯಕ್ರಮಕ್ಕೆ (ಎಬಿಸಿ ಕಾರ್ಯಕ್ರಮ) ರೂ 686 ಲಕ್ಷಗಳನ್ನು ಖರ್ಚು ಮಾಡಲಾಗಿದೆ

ಉ) ನಾಲ್ಕು ಎನ್‌ಜಿಓಗಳು ನಾಯಿಗಳ ಸಂತಾನಹರಣ ಕಾರ್ಯಕ್ರಮದ ಅನುಷ್ಠಾನ ಮಾಡುತ್ತಿದ್ದು 2001 ರಿಂದ 2,30,335 ನಾಯಿಗಳನ್ನು ಹಿಡಿದಿದ್ದು 1,76,146 ನಾಯಿಗಳ ಸಂತಾನಹರಣ ಮಾಡಿದ್ದು, 1,25,120 ನಾಯಿಗಳಿಗೆ ಲಸಿಕೆ ಹಾಕಿದ್ದು 45,980 ನಾಯಿಗಳಿಗೆ ದಯಾಮರಣ ಮಾಡಿದೆ, ಡಾ ಸುದರ್ಶನ್‌ರವರ ನೇತೃತ್ವದ ತಂಡದಿಂದ ಕಾರ್ಯಧಾರಿತ ಪರಿಶೀಲನೆಯನ್ನು ಮಾಡಿಸಿದೆ ಎನ್ ಜಿ ಓ ಗಳಿಗೆ ಪಾವತಿ ಮಾಡಬೇಕಾಗಿರುವ ಯಾವುದೇ ಹಣ ಬಾಕಿಯಿರುವುದಿಲ್ಲ

ಪ್ರಶ್ನೆ ಸಂಖ್ಯೆ 51 (86)ಶ್ರೀ ಐವಾನ್ ನಿಗ್ಲಿ, ಎಂಎಲ್‌ಎ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ವಿಧಾನ ಮಂಡಲದ ಸದಸ್ಯರೊಂದಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಶಿಷ್ಟಾಚಾರ ಪಾಲಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಲಾದ ಅಧಿಕೃತ ಜ್ಞಾಪನಗಳು, ಸುತ್ತೋಲೆಗಳು, ಆದೇಶಗಳು, ಮಾರ್ಗಸೂಚಿಗಳ ಒಟ್ಟು ಸಂಖ್ಯೆ

ಬಿ) ಶಿಷ್ಟಾಚಾರ ಪಾಲನೆಯ ಬಗ್ಗೆ ಹೊರಡಿಸಲಾದ ಅಧಿಕೃತ ಜ್ಞಾಪನ ಸುತ್ತೋಲೆ ಆದೇಶಗಳು ಮಾರ್ಗಸೂಚಿಗಳನ್ನು ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಪಾಲಿಸುತ್ತಿಲ್ಲ ಎಂಬ ಅಂಶ ಸರ್ಕಾರಕ್ಕೆ ಗೊತ್ತಿದೆಯೇ?

ಸಿ) ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಧವರು ಶಿಷ್ಟಾಚಾರ ಪಾಲಿಸುತ್ತಿಲ್ಲವೆಂಬ ಬಗ್ಗೆ ಸರ್ಕಾರಕ್ಕೆ ದೂರುಗಳೇನಾದರೂ ಬಂದಿವೆಯೇ?

ಡಿ) ಅಂತಹ ಆದೇಶಗಳನ್ನು ಯಾರು ಉಲ್ಲಂಘಿಸುತ್ತಾರೋ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಳ್ಳಬಹುದಾದ ಕ್ರಮವೇನು? (ಆದೇಶದ ಪ್ರತಿಯನ್ನು ದಯವಿಟ್ಟು ನೀಡುವುದು)

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) 41

ಆ) ಹೌದು

ಇ) ಬಂದಿವೆ

ಈ) ಶಿಷ್ಟಾಚಾರವನ್ನು ಉಲ್ಲಂಘಿಸುವವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು ಶಿಷ್ಟಾಚಾರ ಕುರಿತಂತೆ ಹೊರಡಿಸಲಾದ ಆದೇಶಗಳ ಸುತ್ತೋಲೆ ಸಂಗ್ರಹದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ

ಸಂಸತ್ ಸದಸ್ಯರು ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ ಅವರುಗಳಿಂದ ಬಂದ ಪತ್ರಗಳಿಗೆ ಉತ್ತರಿಸುವಲ್ಲಿ ಹಾಗೂ ಶಿಷ್ಟಾಚಾರ ಕುರಿತಂತೆ ಪಾಲಿಸಬೇಕಾದ ನೀತಿ ನಿಯಮಗಳ ಆದೇಶ ಸುತ್ತೋಲೆಗಳ ಸಂಗ್ರಹ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜಕೀಯ)

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 28 ರಾರಾಆ 2005

ಕರ್ನಾಟಕ ಸರ್ಕಾರದ ಸಚಿವಾಲಯ ವಿಧಾನ ಸೌಧ

ಬೆಂಗಳೂರು, ದಿನಾಂಕ 02-07-2007

ಸುತ್ತೋಲೆ

ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಪತ್ರಗಳಿಗೆ ಶೀಘ್ರವಾಗಿ ಉತ್ತರಿಸುವ ಬಗ್ಗೆ ಹಾಗೂ ಅವರು ಕಛೇರಿಗಳಿಗೆ ಭೇಟಿ ನೀಡಿದಾಗ ಸೌಜನ್ಯದಿಂದ ವರ್ತಿಸುವ ಬಗ್ಗೆ, ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ/ಸಮಾರಂಭಗಳಿಗೆ ಆಹ್ವಾನಿಸುವುದು ಹಾಗೂ ಆದ್ಯತಾ ಪಟ್ಟಿಗೆ ಅನುಗುಣವಾಗಿ`ಆಹ್ವಾನ ಪತ್ರಿಕೆಗಳಲ್ಲಿ ಅವರುಗಳು ಹೆಸರುಗಳನ್ನು ಮುದ್ರಿಸುವುದು, ಮತ್ತು ಅವರುಗಳಿಗೆ ಸಮಾರಂಭಗಳಲ್ಲಿ ಸ್ಥಾನ-ಮಾನ ನೀಡುವ ಬಗ್ಗೆ ಮತ್ತಿತರ ಶಿಷ್ಟಾಚಾರವನ್ನು ನಿಯಮಿತವಾಗಿ ಅನುಸರಿಸುವ ಬಗ್ಗೆ ಕಾಲಕಾಲಕ್ಕೆ ಸೂಚನೆಗಳನ್ನು ನೀಡಿ ಹಲವಾರು ಸುತ್ತೋಲೆ/ ಆದೇಶಗಳನ್ನು ಸರ್ಕಾರದಿಂದ ಹೊರಡಿಸಿದ್ದು, ಅವುಗಳ ಸಂಗ್ರಹದ ಪುಸ್ತಕವನ್ನು ಸಂಬಂಧಪಟ್ಟವರಿಗೆಲ್ಲಾ ದಿನಾಂಕ 06-02-2007ರ ಪತ್ರದಲ್ಲಿ ಮತ್ತೊಮ್ಮೆ ಕಳುಹಿಸಲಾಗಿದೆ ಈ ಸುತ್ತೋಲೆ / ಆದೇಶಗಲ ಸಂಗ್ರಹವನ್ನು dpar Kar nic in ವೆಬ್ ಸೈಟ್‌ನಲ್ಲೂ ಸಹ ಅಳವಡಿಸಲಾಗಿದೆ

ಶಿಷ್ಟಾಚಾರ ಪಾಲನೆ ಕುರಿತಂತೆ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಹಾಗೂ ಮೇಲೆ ತಿಳಿಸಲಾದ ಸುತ್ತೋಲೆಗಳಲ್ಲಿ ನೀಡಲಾದ ಸೂಚನೆಗಳನ್ನು

ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂಹ ಅಧಿಕಾರಿಗಳು ಹಾಗೂ ಅವರ ಮೇಲಾಧಿಕಾರಿಗಳ ವಿರುದ್ಧ ಉಗ್ರಹ ಶಿಸ್ತಿನ ಕ್ರಮವನ್ನು ನಿಯಮಾನಸಾರ ತೆಗೆದುಕೊಳ್ಳಲಾಗುವುದು

ಇವರಿಗೆ

1) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

2) ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು

3) ಎಲ್ಲಾ ಇಲಾಖಾ ಮುಖ್ಯಸ್ಥರು

4) ಸರ್ಕಾರದ ಮುಖ್ಯ ಕಾರ್ಯದರ್ಶಿ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು

5) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯರ್ಶಿ

6) ಸರ್ಕಾರದ ಎಲ್ಲಾ ಅಪರ / ಜಂಟಿ / ಉಪ ಮತ್ತು ಅಧೀನ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 31 ರಾರಾಆ 2006
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 06-02-2007

ಇಂದ,

ಸರ್ಕಾರದ ಮುಖ್ಯ ಕಾರ್ಯದರ್ಶಿ
ವಿಧಾನ ಸೌಧ,
ಬೆಂಗಳೂರು

ಗೆ,

1) ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಕಾರ್ಯದರ್ಶಿಗಳು ಅಪರ ಕಾರ್ಯದರ್ಶಿಗಳು

2) ಎಲ್ಲಾ ಜಿಲ್ಲಾಧಿಕಾರಿಗಳು ಎಲ್ಲಾ ಇಲಾಖಾ ಮುಖ್ಯಸ್ಥರುಗಳು

3) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

4) ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು

5) ಮುಖ್ಯ ಕಾರ್ಯದರ್ಶಿ ಅಪರ ಮಾನ್ಯ ಕಾರ್ಯದರ್ಶಿಗಳು ಆಪ್ತ ಕಾರ್ಯದರ್ಶಿಗಳು

6) ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು

ಮಾನ್ಯರೇ,

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ

ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರಗಳ ಬಗ್ಗೆ ಆಗಿಂದಾಗ್ಗೆ ನಿರ್ದಿಷ್ಟವಾದ ಸುತ್ತೋಲೆ ಆದೇಶಗಳನ್ನು ಹೊರಡಿಸಿದ್ದಾಗ್ಯೂ ಸಹ ವಿಧಾನ ಮಂಡಲದ ಸದಸ್ಯರಿಗೆ ಶಿಷ್ಟಾಚಾರದ ಪ್ರಕಾರ ಸಲ್ಲಿಸಬೇಕಾದ ಸ್ಥಾನಮಾನಗಳು ಸೂಕ್ತವಾಗಿ ಪಾಲನೆಯಾಗುತ್ತಿಲ್ಲದಿರುವ ವಿಷಯವನ್ನು ಕರ್ನಾಟಕ ವಿಧಾನ ಪರಿಷತ್ತಿನ 2003-04ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯು 36ನೇ ವರದಿಯಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದೆ ಈ ಹಿನ್ನಲೆಯಲ್ಲಿ ಶಿಷ್ಟಾಚಾರ ಅನುಸರಿಸುವ ಕುರಿತಂತೆ ಹೊರಡಿಸಲಾಗಿರುವ ಸುತ್ತೋಲೆ ಆದೇಶಗಳ ಸಂಗ್ರಹವನ್ನು ಇದರೊಡನೆ ಲಗತ್ತಿಸಿ ಕಳುಹಿಸಲಾಗಿದೆ ಈ ಆದೇಶ ಸುತ್ತೋಲೆಗಳಲ್ಲಿರುವ ಎಲ್ಲಾ ಅಂಶಗಳನ್ನು ತಪ್ಪದೇ ಪಾಲಿಸಬೇಕೆಂದು ಸರ್ಕಾರವು ಆದೇಶಿಸಿದೆ

ಸಂಬಂಧಿಸಿದ ಇಲಾಕೆಯ ಅಧಿಕಾರಿಗಳಿಗೆ ಬದಲಾಗಿ ಶಾಸಕರು, ಸಂಸತ್ ಸದಸ್ಯರು ಹಾಗೂ ಸಾರ್ವಜನಿಕರೇ ಕಾರ್ಡ್‌ಗಳನ್ನು ಮುದ್ರಿಸಿ, ನಿಯಮಬಾಹಿರವಾಗಿ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸುತ್ತಿರುವರೆಂದು ಸರ್ಕಾರದ ಗಮನಕ್ಕೆ ತರಲಾಗಿದೆ ಇಂತಹ ನಿಯಮ ಬಾಹಿರ ಕ್ರಮಗಳು ಮುಂದೆ ಜರುಗುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ತೀವ್ರ ನಿಗಾವಹಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ

ತಮ್ಮ ನಂಬುಗೆಯ,

ಕರ್ನಾಟಕ ಸರ್ಕಾರ
ಸಂಖ್ಯೆ ಸಿಆಸುಇ 91 ರಾರಾಆ 2005
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌದ,
ಬೆಂಗಳೂರು, ದಿನಾಂಕ 25-04-2006

ಸುತ್ತೋಲೆ

ವಿಷಯ ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಉತ್ತರಿಸಲು ಇಲಾಖಾ ವರಿಷ್ಠರು ಶಿಷ್ಟಾಚಾರ ಪಾಲಿಸಿ ಕ್ರಮಕೈಗೊಳ್ಳುವುದರ ಕುರಿತು

ಉಲ್ಲೇಖ 1) ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳು ಹಾಗೂ ನಿವೃತ್ತ ಮತ್ತು ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವರ ಪತ್ರ ದಿನಾಂಕ 20-09-2005

2) ಕೇಂದ್ರ ಸಚಿವರ ಸಂಪುಟ ಕಾರ್ಯದರ್ಶಿಯವರ ದಿನಾಂಕ 03-01-2006ರ ಅರೆ ಸರ್ಕಾರಿ ಪತ್ರ ಸಂಖ್ಯೆ 1/95/2/2005-CAV

ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ ಉತ್ತರಿಸುವಲ್ಲಿ ರಾಜ್ಯ ಸರ್ಕಾರದ ಇಲಾಖೆಗಳಿಂದ ತಡವಾಗುತ್ತಿರುವ ವಿಚಾರವು ಗಮನಕ್ಕೆ ಬಂದಿರುವುದಾಗಿ ಕೇಂದ್ರ ಸರ್ಕಾರವು ದಿನಾಂಕ 20-09-2005ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಬರದಿರುವ ಉಲ್ಲೇಖಿತ 01ರ ಪತ್ರದಲ್ಲಿ ತಿಳಿಸಿದ ನಂತರ ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಸ್ವೀಕೃತಿ ಪತ್ರವನ್ನು ಹಾಗೂ ಮುಂದಿನ 15 ದಿನಗಳ್ಲಿ ಕೈಗೊಂಡ ಕ್ರಮವನ್ನು ತಿಳಿಸಬೇಕಾದುದು ಇಲಾಖೆಗಳ ಜವಾಬ್ದಾರಿಯಾಗಿರುತ್ತದೆ ಎಂದು ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 91 ರಾರಾಜಿ 2005, ದಿನಾಂಕ 05-11-2005ರಲ್ಲಿ ಈಗಾಗಲೇ ತಿಳಿಸಲಾಗಿತ್ತು ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ ಇಲಾಖೆಗಳು ಉತ್ತರಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿಗಳು ಉಲ್ಲೇಖಿತ (2)ರ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ

ಆದ್ದರಿಂದ, ಲೋಕಸಭಾ ಸದಸ್ಯರುಗಳಿಂದ ಬರುವ ಎಲ್ಲಾ ಪತ್ರಗಳಿಗೂ ಈ ಹಿಂದೆ ತಿಳಿಸಿರುವಂತೆ 15 ದಿನಗಳಲ್ಲಿ ಸ್ವೀಕೃತಿ ಪತ್ರ ಕಳುಹಿಸುವುದು ಹಾಗೂ ನಿಗದಿತ ಅವಧಿಯಲ್ಲಿ ಉತ್ತರಿಸಿ ಶಿಷ್ಟಾಚಾರ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಮತ್ತೊಮ್ಮೆ ಮೂಲಕ ಸೂಚಿಸಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 97 ಶಿಸನೇ 96
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 04-03-1997

ಸುತ್ತೋಲೆ

ವಿಷಯ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ವೇದಿಕೆಯ ಮೇಲೆ ಉಪಸ್ಥಿತರಿರುವ ಬಗ್ಗೆ

ಉಲ್ಲೇಖ ಸರ್ಕಾರಿ ಸುತ್ತೋಲೆ ಸಂಖ್ಯೆ ಡಿಪಿಎಆರ್ 73 ಜಿಎಂ 92, ದಿನಾಂಕ 25-11-92

ಸಚಿವರು ಪಾಲ್ಗೊಳ್ಳುವ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವ ಪರಿಪಾಠವನ್ನು ನಿಲ್ಲಿಸಬೇಕೆಂದು ಉಲ್ಲೇಖಿತ ಸುತ್ತೋಲೆಯಲ್ಲಿ ಸರ್ಕಾರವು ಸೂಚನೆಯನ್ನು ನೀಡಲಾಗಿದೆ

ಹೀಗಿದ್ದಾಗ್ಯೂ, ಅಂಥ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಸಚಿವರು ಪಾಲ್ಗೊಳ್ಳುವ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವುದು ಹಾಗೂ

ಅಧಿಕಾರಿಗಳು ವೇದಿಕೆಯ ಮೇಲೆ ಉಪಸ್ಥಿತರಿರುವುದನ್ನು ಸರ್ಕಾರವು ಈ ಮೂಲಕ ನಿಷೇಧಿಸಿದೆ

ಸರ್ಕಾರದ ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲ ಇಲಾಖಾ ಕಾರ್ಯದರ್ಶಿಗಳು ಇಲಾಖಾ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 91 ರಾರಾಆ 2005
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 05-11-2005

ಸುತ್ತೋಲೆ

ವಿಷಯ ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಿಗೆ ಉತ್ತರಿಸಲು ಇಲಾಖಾ ವರಿಷ್ಠರು ಶಿಷ್ಟಾಚಾರ ಪಾಲಿಸಿ ಕ್ರಮ ಕೈಗೊಳ್ಳುವುದರ ಕುರಿತು

ಉಲ್ಲೇಖ ಕೇಂದ್ರಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಹಾಗೂ ನಿವೃತ್ತಿ ಮತ್ತು ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವರ ಪತ್ರ ದಿನಾಂಕ 20-09-2005

ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ ಉತ್ತರಿಸುವಲ್ಲಿ ಸರ್ಕಾರದ ಇಲಾಖೆಗಳಿಂದ ತಡವಾಗುತ್ತಿರುವ ವಿಚಾರವು ಗಮನಕ್ಕೆ ಬಂದಿರುವುದಾಗಿ ಕೇಂದ್ರ ಸರ್ಕಾರವು ದಿನಾಂಕ 20-09-2005ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿರುತ್ತದೆ

ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಸ್ವೀಕೃತಿ ಪತ್ರವನ್ನುಹಾಗೂ ಮುಂದಿನ 15 ದಿನಗಳಲ್ಲಿ ಕೈಗೊಂಡ ಕ್ರಮವನ್ನು ತಿಳಿಸಬೇಕಾದುದು ಇಲಾಖೆಗಳ ಜವಾಬ್ದಾರಿಯಾಗಿರುತ್ತದೆಂದು ಮೇಲ್ಕಂಡ ಉಲ್ಲೇಖಿತ ಪತ್ರದಲ್ಲಿ ತಿಳಿಸಿದ್ದು ಅದರ ಪ್ರತಿ ಇದರೊಂದಿಗೆ ಲಗತ್ತಿಸಿದೆ

ಆದ್ದರಿಂದ ಇನ್ನು ಮುಂದೆ ಲೋಕಸಭಾ ಸದಸ್ಯರುಗಳಿಂದ ಬರುವ ಎಲ್ಲಾ ಪತ್ರಗಳಿಗೂ ನಿಗದಿತ ಅವಧಿಯಲ್ಲ ಉತ್ತರಿಸಿ ಶಿಷ್ಟಾಚಾರ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಸೂಚಿಸಿದೆ

ಸಹಿ/-
ಸರ್ಕಾರದ ಮುಖ್ಯ ಕಾರ್ಯದರ್ಶಿ,

Minister of State for personnel,
public Grievances & Persions,
And Parlimamentary Affairs
Government of India

Dear Shri Dharam Singhji,
20 09 2005

We have been receiving references from the Members of Parliament regarding delay in responding to their letters This issue has been repeatedly raised within and outside the Parliament

Guidelines laid down in the Central Secretariat Manual of Office Procedre for handling the communications received from the Members of Parliament specify that such communications should be attended to promptly and acknowledged within 15 days, followed by a reply within the next 15 days In cases where delay is anticipated, and

interim •reply should be given indicating the possible date for a final rely This is to ensure that prompt attention is given to the communications received from the Members of Parliament

As the complaint of delayed responses to the letters of Members of the Parliament are regularly being received I would be grateful if you could issue suitable instructions to ensure prompt reply to the letters of the Members of Parliament In this regard, you may also like to ceived from the Members of the parliament

With regards,

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 62 ರಾರಾಆ 2005
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 05-09-2005

ಸುತ್ತೋಲೆ

ವಿಷಯ Sub Official dealings between the Administration and Members of Parliament and State Legislatures-Observance of proper procedure-invitation to public functions

ಉಲ್ಲೇಖ 1 ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳ (ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಕಛೇರಿ ಜ್ಞಾಪನ ಪತ್ರ ಸಂಖ್ಯೆ 11013/2/2000- ಕಲ್ಕಲ್ಸಿಸ ದಿನಾಂಕ 25-08-2000

2 ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳ (ಸಿಬ್ಬಂದಿ ಮತ್ತು ತರಬೇತಿ) ಇಲಾಖೆಯ ನಿರ್ದೇಶಕರ ಕಛೇರಿ ಜ್ಞಾಪನ ಪತ್ರ ಸಂಖ್ಯೆ 11013/6/2005 ESTT(A) ದಿನಾಂಕ 27-06-2005

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರುಗಳನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅದರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಪೂರ್ವಭಾವಿಯಾಗಿ ತಲುಪಿಸುವ ಬಗ್ಗೆ ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಗಳನ್ನು ಏರ್ಪಡಿಸುವ ಬಗ್ಗೆ ಹಲವಾರು ಸುತ್ತೋಲೆ /ಅಧಿಕೃತ ಜ್ಞಾಪನ/ ಆದೇಶಗಳಲ್ಲಿ ಈಗಾಗಲೇ ಸೂಚಿಸಲಾಗಿದೆ

ಮೇಲ್ಕಂಡ ಉಲ್ಲೇಖಿತ (1) ಮತ್ತು (2)ರ ಕೇಂದ್ರ ಸರ್ಕಾರದ ಕಚೇರಿ ಜ್ಞಾಪನ ಪತ್ರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ ಕೇಂದ್ರ ಸಚಿವಾಲಯದ ಸಿಬ್ಬಂದಿ ಸಾರ್ವಜನಿಕ ಕುಂದುಕೊರತೆಗಳು ಮತ್ತು ವಿಶ್ರಾಂತಿ ವೇತನ ಇಲಾಖೆಯ (ಸಿಬ್ಬಂದಿ ಮತ್ತು ತರಬೇತಿ) ಕಚೇರಿ ಜ್ಞಾಪನದಂತೆ ಮಾನ್ಯ ಲೋಕಸಭಾ, ಸದಸ್ಯರುಗಳಿಗೆ ಹಾಗೂ ವಿಧಾನ ಮಂಡಲದ ಸದಸ್ಯರುಗಳಿಗೆ ಸರ್ಕಾರಿ ಸಮಾರಂಭಗಳಲ್ಲಿ ಆಹ್ವಾನಿಸುವ ಶಿಷ್ಟಾಚಾರವನ್ನು ಪಾಲಿಸುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ

No 11013/62005-Estt (A)
Government of India
Ministry of Personnel P G &Pensions
(Department of Personnel & Training)

New Delhi,dated the 27th June, 2005

Office Memorandum

Sub Official dealings between the Administration and Members of Parliament and State Legislatures-Observance of proper procedure-invitation to public functions

The undersigned is directed to refer to this Department's O M No 11013/2/2000-Estt (A) dated 25th August, 2000 (copy enclosed) on the subject mentioned above wherein Ministeries/ Departments were requested ensure that Members of Parliament/State Legislatures of the area are invariably invited to public functions organized

by a Government office and that proper and comfortable seating arrangements at public functions should be made for the Members These instructions also provide that intimations/ invitations regarding public meetings Fuctions should be sent through speediet modes or communication and devices to the MPs so that thee are received by them well in time The receipt of the intimation by the Member was required to be confirmed by the officer/official concerned

2 The Secretary Gneral, Lok Sabha has pointed out that despite these instructions, complaints have been received from the Members of Parliament that they are ot invited to the functions held by Government agencies in the MPs Parlimentary constituencies Hon'ble Speaker has desired the Ministry of Personnel, Public Grievances and Pensions to take up the matter with all the Ministries / Departmnets/ Government functinaries It needs to be reiteated that Members of Parliament/ State Legislatures of the area should be invariably invited to public functions organized by Government Departments, their Subordinate Offices and Public Undertakng under those Departments and intimation regarding such public metings/functions should be sent to the Members concerned well in advance It may also be ensured that receipt of such intimation by the Members is confirmed by the office/official concerned Such functions should be held, as far as possible, when Parliament is not in sesion

3 All Ministries/ Departments are again requested to ensure that the instructions referred to above are scrupulously followed in letter an spirity by all concerned which

shpuld leave no room for complaints by the Members of Parliament in the future

No 11031/2/2000-Esst (A)
Government of India
Ministry of Personnel P G & Pensions
(Department of Personnel & Training)

New Delhi, dated the 25th August, 2000

Offfice Memorandum

Sub Official dealings between the Administration and Members of Parliament and State Legislatures-Observance of proper procedure

The udnersigned is directed to refer to this Department's O M of even No dated 23rd May, 2000 on the subject mentioned above wherein a gist of the previous instructions on the subject matter has been reiterated In Para 2(v) it has been specified that Members of Parliament/State Legislature of the area are to be invariably invited to public functions organised by a Government office and that proper and comofortable seating arrangements at public functins should be made for the Members who appearabove the officers of the rank of Secretaries to the Government of India in the Warrant of Precedence In the context of a notice of qeustion of privilege given by an

Hon Member of Parliament that he was not sent the invitation to a public function in advance, the Hon Speakwer, Lok Sabha desired that the requisite instructions/ gudidelines be reiterated with suitable amendments In order to ensure that the same are strictly adhered to in the right spirity, by the concerned excuitve functionaries

2 Attention of the Ministries/ Departments in invited in the conncectin to Ministry of Home Affair's OM No 25/6/68-Ests (A) dated 27-3-1968 wherein it has been emphasised that where any meeting convened by the Government is to be attended by members of Parliament, special care should be taken to see that notice is given to them in good time regarding the date, time, venue etc , of the metting, and it should be ensured that there is no slip in any matter of detail, however, minor it may be Ministries/ Departments are, therefore, requested to ensure that-

(i) intimations regarding public meetings/ functins be sent through speedier communication devices to fthe Hon'ble Members, so that they are received by them well in time

(ii) It may also be ensured that receipt of intimation by the Member is confirmed by the officer/ official concerned

3 It is requested that the above instructions may be brought to the notice of all concerned for strict compliance

ಸಂಖ್ಯೆ ಸಿಆಸುಇ 02 ರಾರಾ ಆ 2004
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,

ಬೆಂಗಳೂರು, ದಿನಾಂಕ 11-02-2004

ಸುತ್ತೋಲೆ

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ

ಉಲ್ಲೇಖ 1 ದಿನಾಂಕ 25-08-1977ರ ಅಧಿಕೃತ ಜ್ಞಾಪಕ ಸಂಖ್ಯೆ ಡಿಪಿಎಆರ್ 17 ಪಿಎಲ್‌ಎಕ್ಸ್ 77

2 ದಿನಾಂಕ 08-02-1985ರ ಆದೇಶ ಸಂಖ್ಯೆ ಡಿಪಿಎಆರ್ 119 ಪಿಎಲ್‌ಎಕ್ಸ್ 84

3 ದಿನಾಂಕ 08-01-1992ರ ಅಧಇಕೃತ ಜ್ಞಾಪನ ಸಂಕ್ಯೆ ಸಿಆಸುಇ 18 ರಾರಾಆ 91

4 ದಿನಾಂಕ 15–1–93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಆ 93

5 ದಿನಾಂಕ 12–07–2001ರ ಆದೇ ಸಂಖ್ಯೆ ಸಿಆಸುಇ 09 ರಾರಾ ಅ 2001

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರುಗಳನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ತಲುಪಿಸುವ ಬಗ್ಗೆ ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಯನ್ನು ಏರ್ಪಡಿಸುವ ಬಗ್ಗೆ ಉಲ್ಲೇಖಿತ ಸುತ್ತೋಲೆ ಅಧಿಕೃತ ಜ್ಞಾಪನ ಆದೇಶಗಳಲ್ಲಿ ಈಗಾಗಲೇ ಸೂಚಿಸಲಾಗಿದೆ

ಸರ್ಕಾರದ ಎಲ್ಲಾ ಸಮಾರಂಭಗಳಲ್ಲಿ ಸಂಬಂಧಪಟ್ಟಂತೆ ಜಿಲ್ಲಾ ಅಧಿಕಾರಿಗಳು ಒಂದು ಆಮಂತ್ರಣ ಪತ್ರಿಕೆಯಲ್ಲಿ ವಿಧಾನಸಭೆ ಸದಸ್ಯರಿಗೆ ಶಾಸಕ ರೆಂತಲೂ ವಿಧಾನ ಪರಿಷತ್ ಸದಸ್ಯರನ್ನು ವಿಧಾನ ಪರಿಷತ್ ಸದಸ್ಯ ರೆಂದೂ ಮುದ್ರಿಸುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆ ಇನ್ನು ಮುಂದೆ ಆಮಂತ್ರಣ ಪ್ರಿಕೆಗಳಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನಸಭೆ) ಎಂದು ನಮೂದನೆ ಮಾಡುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 24 ರಾರಾ ಆ 2001
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,

ಬೆಂಗಳೂರು, ದಿನಾಂಕ 02-03-2002

ತಿದ್ದೋಲೆ

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 9 ರಾರಾಆ 2001, ದಿನಾಂಕ 12-07-2001ರ ಆದೇಶ ಭಾಗದ 2ನೇ ಕಂಡಿಕೆಯ 3ನೇ ಸಾಲಿನಲ್ಲಿ ನಮೂದಿಸಿರುವ ಚುನಾವಣಾಆ ಕ್ಷೇತ್ರವು ನಿರ್ದಿಷ್ಟವಾಗಿರದ ಕಾರಣ ಎಂಬ ಪದಗಳಿಗೆ ಬದಲಾಗಿ ಚುನಾವಣಾ ಕ್ಷೇತ್ರವು ಯಾವುದೇ ತಾಲ್ಲೂಕಿಗೆ ನಿರ್ದಿಷ್ಟವಾಗಿರದ ಕಾರಣ ಎದು ತಿದ್ದಿ ಓದಿಕೊಳ್ಳತಕ್ಕದ್ದು

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 10 ರಾರಾಆ 2002
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,

ಬೆಂಗಳೂರು, ದಿನಾಂಕ 25-02-2002

ಸುತ್ತೋಲೆ

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ

ಉಲ್ಲೇಖ 1 ದಿನಾಂಕ 25-08-1977ರ ಅಧಿಕೃತ ಜ್ಞಾಪನ ಸಂಕ್ಯೆ ಡಿಪಿಎಆರ್ 17 ಪಿಎಲ್ಎಕ್ಸ್ 77

2 ದಿನಾಂಕ 08-02-1985ರ ಆದೇಶ ಸಂಖ್ಯೆ ಡಿಪಿಎಆರ್ 119 ಪಿಎಲ್ಎಕ್ಸ್ 84

3 ದಿನಾಂಕ 08-01-1992ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 18ರಾರಾಆ 91

4 ದಿನಾಂಕ 15-1-93ರ ಸುತ್ತೋಲೆ ಸಂಕ್ಯೆ ಸಿಆಸುಇ 2 ರಾರಾಆ 93

5 ದಿನಾಂಕ 17-4-2000ರ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 29 ರಾರಾಆ 2000

6 ದಿನಾಂಕ 12-7-2001ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 09 ರಾರಾಆ 2001

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಧಿಗಳಾದ ಸಂಸತ್ ಸದಸ್ಯರ, ವಿಧಾನ ಪರಿಷತಿಇನ ಸದಸ್ಯರ ಮತ್ತು ವಿದಾನ ಸಭೆಯ ಸದಸ್ಯರ ಸ್ಥಾನವು ಮಹತ್ವಪೂರ್ಣವಾಗಿದ್ದು ಅವರು ಸಾರ್ವಜನಿಕ ಆಹಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಬಗಳಿಗೆ, ಸಸಂತ್ ಸದಸ್ಯರು ಹಾಗೂ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಮತ್ತು ರಾಜ್ಯ ವಿದಾನ ಮಂಡಲದ ಸ0ದಸ್ಯುರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ಮಾಡುವಂತೆ ಉಲ್ಲೇಖಿತ ಸುತ್ತೋಲೆ ಅಧಿಕೃತ ಜ್ಞಾಪನ ಮತ್ತು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದೆ

ಇತ್ತೀಚೆಗೆ, ವಿಧಾನ ಪರಿಷತ್ತಿನ ಸದಸ್ಯರುಗಳು, ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ ತಮ್ಮನ್ನು ಆಹ್ವಾನಿಸುತ್ತಿಲ್ಲವೆಂದು ಹಾಗೂ ತಮ್ಮ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದೇ ಅಧಿಕಾರಿಗಳು ಅಗೌರವದಿಂ ನಡೆಸಿಕೊಳ್ಳುತ್ತಿರುವ ವಿಷಯವನ್ನು ಸದನದಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ ಇದನ್ನು ಸರ್ಕಾರವು ತೀವ್ರವಾಗಿ ಪರಿಗಣಿಸಿದೆ

ಆದ್ದರಿಂದ, ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಮಾರಂಗಳಿಗೆ ಸ್ಥಳೀಯ ಸಂಸತ್ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ವಿಧಾನ ಸಭೆಯ ಸದಸ್ಯರನ್ನು ತಪ್ಪದೇ ಆಹ್ವಾನಿಸುವುದಲ್ಲದೇ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 50 ರಾರಾ ಆ 2001
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 20-09-2001

ಸುತ್ತೋಲೆ

ವಿಷಯ ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ

ಉಲ್ಲೇಖ 1 ದಿನಾಂಕ 19-05-75ರ ಅನಧಿಕೃತ ಜ್ಞಾಪನ ಸಂಖ್ಯೆ ಜಿಎಡಿ 4 ಪಿಎಲ್ಎಕ್ಸ್ 75

2 ದಿನಾಂಕ 20-03-98ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಆ 98

3 ದಿನಾಂಕ 01-08-2000ದ ಸುತ್ತೋಲೆ ಸಂಖ್ಯೆ ಸಿಆಸುಇ ರಾರಾಆ 2000

ದಿನಾಂಕ 19-05-75ರ ಅಧಿಕೃತ ಜ್ಞಾಪನದಲ್ಲಿ, ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕಲ್ಲದೆ, ಅಂತಹ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಇಸಿ, ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಅವುಗಳಿಗೆ ಉತ್ತರಿಸತಕ್ಕದೆಂದು ಸೂಚನೆಯನ್ನು ನೀಡಲಾಗಿದೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು, ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೋರಿದಾಗ, ಅಧಿಕಾರಿಗಳು ಅಂತಹ ವಿವರಗಳನ್ನು ಅವರಿಗೆ ಒದಗಿಸಬೇಕಲ್ಲದೆ ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಕೂಡ ಪಡೆಯಬೇಕೆಂದು ಕೂಡ ಸೂಚಿಸಲಾಗಿದೆ

2 ದಿನಾಂಕ 20-03-98ರ ಸುತ್ತೋಲೆಯಲ್ಲಿ ಸಂಸತ್ ಸದಸ್ಯರಿಂದ ಹಾಗೂ ಶಾಸಕರುಗಳಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದಲ್ಲದೆ, ಎಲ್ಲಾ ಪತ್ರಗಳಿಗೂ ತಕ್ಷಣ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ ಉತ್ತರ ನೀಡಲು ತಡವಾದಲ್ಲಿ ಮಧ್ಯಂತರ ಉತ್ತರವನ್ನು ಕಳುಹಿಸಿ, ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ನೀಡಲಾಗುವುದೆಯದ ಮಧ್ಯಂತರ ಉತ್ತರದಲ್ಲಿ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ

3 ದಿನಾಂಕ 01-03-2000ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 2000ದಲ್ಲಿ ಈ ಸೂಚನೆಗಳನ್ನು ಪುನರುಚ್ಚರಿಸಿ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು, ತಮ್ಮ ಅಧೀನಕ್ಕೆ ಒಳಪಡಿಸುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಸಂಸತ್ ಸದಸ್ಯರು ಮತ್ತು ಶಾಸರುಗಳು ಪತ್ರ ಬರೆದಾಗ, ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ

ಸಂಸತ್ ಹಾಗೂ ವಿಧಾನ ಮಂಡಲದ ಸದಸ್ಯರಿಂದ ಬರುವ ಪತ್ರಗಳಿಗೆ ಸಂಬಂದಿಸಿದಂತೆ ಈಗಾಗಲೇ ನೀಡಿರುವ ಸೂಚನೆಗಳನ್ನು ಪುನರ್ ಉಚ್ಚರಿಸುತ್ತಾ, ಮಾನ್ಯ ಸಂಸತ್ ಸದಸ್ಯರುಗಳು ಹಾಗೂ ವಿಧಾನ ಸದಸ್ಯರುಗಳು ಬರೆದ ಪತ್ರಗಳಿಗೆ ಸಂಬಂಧಪಟ್ಟಂತೆ ಅವುಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮ ವಿವರವನ್ನು ಸಂಬಂಧಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕಾರ್ಯದರ್ಶಿಗಳು ಅಥವಾ ಇಲಾಖಾ ಮುಖ್ಯಸ್ಥರುಗಳು (ಆಯುಕ್ತರು ನಿರ್ದೇಶಕರು ವ್ಯವಸ್ಥಾಪಕ ನಿರ್ದೇಶಕರು) ಸ್ವತಹ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ ಹಾಗೂ ಸಂಸತ್ ಸದಸ್ಯರುಗಳು ಮತ್ತು ವಿಧಾನ ಮಂಡಲದ ಸದಸ್ಯರುಗಳಿಂದ ಬಂದ ಪತ್ರಗಳ ಸ್ವೀಕೃತಿ ಕೈಗೊಂಡ ಕ್ರಮದ ವಿವರಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಿ ನಿರ್ವಹಿಸಬೇಕೆಂದು ಸಹಾ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ

ಓದಲಾಗಿದೆ 1 ದಿನಾಂಕ 25-08-1977ರ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 17 ಪಿಎಲ್ಎಕ್ಸ್ 77

2 ದಿನಾಂಕ 08-02-1985ರ ಆದೇಶ ಸಂಖ್ಯೆ ಡಿಪಿಆರ್ 119 ಪಿಎಲ್ಎಕ್ಸ್ 84

3 ದಿನಾಂಕ 08-01-1992ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 18 ರಾರಾಅ 91

4 ದಿನಾಂಕ 15-1-1993 ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾ ಅ 93

ಪ್ರಸ್ತಾವನೆ

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಂಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಯನ್ನು ಮಾಡುವಂತೆ ಉಲ್ಲೇಖಿತ ಸುತ್ತೋಲೆ ಅಧಿಕೃತ ಜ್ಞಾಪನ ಮತ್ತು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದೆ

ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರದ ಅಧಿಕೃತ ಸಮಾರಂಭಗಳಿಗೆ ಸಂಬಂಧಪಟ್ಟಂತೆ ಆಹ್ವಾನಿಸದಿರುವ ಹಾಗೂ ಅವರುಗಳ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದಿರುವ ಬಗ್ಗೆ ಲೋಪದೋಷಗಳು ಅನೇಕ ಬಾರಿ ಸಂಭವಿಸಿದ್ದು ಇದರಿಂದ ಚುನಾಯಿತ ಪ್ರತಿನಿಧಿಗಳಿಗೆ ಅಗೌರವವನ್ನು ತೋರಿಸಿದಂತಾಗುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆದುದರಿಂದ ಈಗಾಗಲೇ ಈ ಹಿಂದೆ ಈ ವಿಷಯದಲ್ಲಿ ಸೂಚನೆಗಳನ್ನು ನೀಡಿ ಹೊರಡಿಸಿರುವ ಮೇಲೆ ಓದಲಾದ ಅಧಿಕೃತ ಜ್ಞಾಪನ ಆದೇಶ ಸುತ್ತೋಲೆಗಳನ್ನು ಉಲ್ಲೇಖಿಸಿ, ಹೊಸ ಸೂಚನೆಗಳನ್ನೊಳಗೊಂಡ ಮಾರ್ಗ ಸೂಚನೆಗಳನ್ನು ಹೊರಡಿಸಲು ಸರ್ಕಾರವು ನಿರ್ಧರಿಸಿದೆ

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 09 ರಾರಾ ಅ 2001

ಬೆಂಗಳೂರು, ದಿನಾಂಕ 12ನೇ ಜುಲೈ 2001

ಅದಕ್ಕನುಸಾರವಾಗಿ ಈ ಮುಂದಿನ ಮಾರ್ಗ ಸೂಚಿಗಳನ್ನು ಹೊರಡಿಸಿದೆ

ಅ) ಸರ್ಕಾರದ ಸಮಾರಂಭಗಳನ್ನು ಏರ್ಪಡಿಸುವ ಜವಾಬ್ದಾರಿ ಇರುವ ಎಲ್ಲಾ ಇಲಾಖಾ ಮುಖ್ಯಸು ಮತ್ತು ಜಿಲ್ಲಾಧಿಕಾರಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದಲ್ಲದೆ ದಿನಾಂಕ 19–05–1975ರ ಅಧಿಕೃತ ಜ್ಞಾಪನದ ಕಂಡಿಕೆ 5ರಲ್ಲಿರವ ಸೂಚನೆಗಳಂತೆ ಆಸನದ ವ್ಯವಸ್ಥೆಯನ್ನು ಮಾಡಬೇಕು

ಆ) ಸರ್ಕಾರದ ಇಲಾಖೆಗಳು ಏರ್ಪಡಿಸುವಂತಹ ಸಮಾರಂಭಗಳಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರನ್ನು ತಪ್ಪದೆ ಆಹ್ವಾನಿಸಬೇಕು ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನು ಆಧರಿಸಿ ಸಚಿವರು ರಾಜ್ಯ ಸಚಿವರು ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ, ಅಧ್ಯಕ್ಷರು ಮುಖ್ಯ ಅತಿಥಿ ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಬೇಕು

ಇ) ಸರ್ಕಾರದ ಸಮಾರಂಭವನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು, ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದಲ್ಲದೆ, ಇಲಾಕೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು ಆಹ್ವಾನ

ಪತ್ರಿಕೆಗಳನ್ನು ಮುದ್ರಿಸದಿದ್ದ ಪಕ್ಷದಲ್ಲಿ ಕನಿಷ್ಟ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರನ್ನು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು

ಈ) ವಿಧಾನ ಪರಿಷತ್ತಿನ ಹಾಗೂ ವಿಧಾನಸಭಾ ಸದಸ್ಯರ ನಡುವೆ ತಾರತಮ್ಯ ಮಾಡಲಾಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದ ಪ್ರಯುಕ್ತ ಈ ಎರಡು ಸದನಗಳ ಸದಸ್ಯರ ನಡುವೆ ಯಾವುದೇ ರೀತಿಯ ತಾರತಮ್ಯ ಮಾಡಬಾರದೆಂದು ಸೂಚಿಸಿದೆ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಲು ಬಂದಾಗ ಅವರನ್ನು ಗೌರವ ಪೂರ್ವಕವಾಗಿ ಕಾಣಬೇಕು ಹಾಗೂ ಅವರುಗಳೊಡನೆ ಅಧಿಕಾರಿಗಳು ಸೌಜನ್ಯ ಪೂರ್ವಕವಾಗಿ ವರ್ತಿಸಬೇಕು ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು

ವಿಧಾನ ಪರಿಷತ್ತಿನ ಸದಸ್ಯರುಗಳಲ್ಲಿ ಕೆಲವರು ಪದವೀಧರ ಕ್ಷೇತ್ರದಿಂದ ಶಿಕ್ಷಣ ಕ್ಷೇತ್ರಗಳಿಂದ ಹಾಗೂ ಲೋಕಲ್ ಅಥಾರಿಟೀಸ್‌ಗಳಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದು ಅವರುಗಳ ಚುನಾವಣಾ ಕ್ಷೇತ್ರವು ನಿರ್ದಿಷ್ಟವಾಗಿರದ ಕಾರಣ, ಸ್ಥಳೀಯ ಶಾಸಕರೆಂದು ಗುರುತಿಸಲು ಅವರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ, ಅವರು ಇಷ್ಟಪಡುವ ಯಾವುದಾದರೊಂದು ತಾಲ್ಲೂಕನ್ನು ನೋಡಲ್ ತಾಲ್ಲೂಕೆಂದೂ ಮತ್ತು ನಾಮ ನಿರ್ದೇಶನ ಹೊಂದಿರುವ ವಿಧಾನ ಪರಿಷತ್ ಸದಸ್ಯರುಗಳು ಹಾಗೂ ವಿಧಾನ ಸಭೆಯಿಂದ ಆಯ್ಕೆಯಾದ ವಿಧಾನ ಪರಿಷಿತ್ತನ ಸದಸ್ಯರು ಅವರು ಇಷ್ಟಪಡುವ ಒದು ತಾಲ್ಲೂಕಿನ್ನು ನೋಡಲ್ ತಾಲ್ಲೂಕೆಂದು ಪರಿಗಣಿಸಿ ಅವರನ್ನು ಸರ್ಕಾರದ ಅಧಿಕೃತ ಸಮಾರಂಭಕ್ಕೆ ಆದ್ಯತೆ ಮೇಲೆ ಆಹ್ವಾನಿಸಲು ಹಾಗೂ ಅವರುಗಳ ಹೆಸರನ್ನು ಆಹ್ವಾನ ಪತ್ರಿಕೆಗಳಿಲ್ಲ ಮುದ್ರಿಸಲು ಕ್ರಮ ಕೈಗೊಳ್ಳಬೇಕು

ರಾಜ್ಯ ಸಭಾ ಸದಸ್ಯರುಗಳು ತಾವು ಅಂಗೀಕರಿಸುವ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವುದರಿಂದ ಸರ್ಕಾರದ ಅಧಿಕೃತ ಸಮಾರಂಭಗಳಿಗೆ ಅವರನ್ನು ಆಹ್ವಾನಿಸಲು ಅವರುಗಳೊಡನೆ ಚರ್ಚಿಸಿ, ಆಯಾ ಜಿಲ್ಲೆಯ ಅಧಿಆಕರಿಗಳು ವ್ಯವಸ್ಥೆ ಮಾಡಬೇಕೆಂದು, ಲೋಪದೋಷಗಳಿಗೆ ಅಸ್ಪದ ನೀಡಬಾರದೆಂದು ಈ ಮೂಲಕ ಸೂಚಿಸಿದೆ ಸಂಬಂಧಪಟ್ಟ ವಿಧಾನ ಪರಿಷತ್ತಿನ ಸದಸ್ಯರುಗಳು ಹಾಗೂ ರಾಜ್ಯ ಸಭಾ ಸದಸ್ಯರುಗಳು ಅವರುಗಳು ಇಷ್ಟಪಡುವ ತಾಲ್ಲೂಕು

ಜಿಲ್ಲೆಯನ್ನು ನೋಡಲ್ ತಾಲ್ಲೂಕು ನೋಡಲ್ ಜಿಲ್ಲೆ ಎಂದು ಕ್ರಮವಾಗಿ ಆಯ್ಕೆ ಮಾಡಿಕೊಂಡು ಅದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ತಿಳಿಸುವುದು

ಸಂಖ್ಯೆ ಸಿಆಸುಇ 52 ರಾರಾ ಆ 2000
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,

ಬೆಂಗಳೂರು, ದಿನಾಂಕ 30-09-2000

ಸುತ್ತೋಲೆ

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ಜಿಲ್ಲಾ ಪಂಚಾಯತ್ ಸಬೆ, ಜಿಲ್ಲಾಧಿಕಾರಿಗಳಿಗೆ ಸಬೆ ಹಾಗೂ ಸರ್ಕಾರಿ ಕಾರ್ಯಕ್ರಮಗಳಿಗೆ ಸರ್ಕಾರಿ ಮುಖ್ಯ ಸಚೇತಕರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ

ಉಲ್ಲೇಖ 1 ದಿ 08-02-85ರ ಆದೇಶ ಸಂಖ್ಯೆ ಸಿಆಸುಇ 119 ಪಿಎಲ್ಎಕ್ಸ್ 84

2 ದಿ 23-04-92ರ ಸುತ್ತೋಲೆ ಸಂಖ್ಯೆ ಸಿಆಸುಇ 8 ರಾರಾಅ 92

3 ದಿ 15-01-92ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

4 ದಿ 16-04-93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

5 ದಿ 03-07-93ರ ಸುತ್ತೋಲೆ ಸಂಖ್ಯೆ ಸಿಆಸುಇ 49 ರಾರಾಅ 93

ದಿನಾಂಕ 08-02-85ರ ಆದೇಶ ಸಂಖ್ಯೆ ಡಿಪಿಎಆರ್ 119 ಪಿಎಲ್ಎಕ್ಸ್ 84ರಲ್ಲಿ ಸರ್ಕಾರಿ ಇಲಾಖೆಯು ಏರ್ಪಡಿಸುವಂತಹ ಸರ್ಕಾರಿ ಸಮಾರಂಭದಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಹಾಗೂ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರನ್ನು ಆಹ್ವಾನಿಸಲು ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನು ಆಧರಿಸಿ ಮಂತ್ರಿ ರಾಜ್ಯ ಮಂತ್ರಿ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ ಅಧ್ಯಕ್ಷರು ಮುಖ್ಯ ಅತಿಥಿ ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗೆ ಹಾಕಿಸಬೇಕೆಂದು, ಈ ಸೂಚನೆಗಳನ್ನು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ

ಸಚಿವರು, ರಾಜ್ಯ ಸಚಿವರು, ವಿಧಾನ ಮಂಡಲದ ವರಿಷ್ಠರು, ಸಂಸತ್ ಸದಸ್ಯರು, ವಿಧಾನ ಮಂಡಲದ ಸದಸ್ಯರುಗಳು ಹಾಗೂ ಸರ್ಕಾರದ ಮುಖ್ಯ ಸಚೇತಕರುಗಳಿಗೆ ತೋರಿಸಬೇಕಾದ ಗೌರವ, ನೀಡಬೇಕಾದ ಸ್ಥಾನಮಾನ, ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ದಿನಾಂಕ 03-07-93ರ ಸುತ್ತೋಲೆಯಲ್ಲಿ ಸೂಚನೆಯನ್ನು ನೀಡಲಾಗಿದೆ ಈ ಸೂಚನೆಗಳನ್ನು ದಿನಾಂಕ 17-04-2000ದ ಸುತ್ತೋಲೆಯಲ್ಲಿಯೂ ಕೂಡ ಪುನರುಚ್ಚರಿಸಲಾಗಿದೆ

ಕರ್ನಾಟಕ ಸರ್ಕಾರದ ಮುಖ್ಯ ಸಚೇತಕರು ಇತ್ತೀಚಿನ ಜಿಲ್ಲಾ ಪಂಚಾಯತ್‌ನ ಸಭೆ, ಜಿಲ್ಲಾಧಿಕಾರಿಗಳ ಸಭೆ ಹಾಗೂ ಹಲವಾರು ಸರ್ಕಾರಿ ಕಾರ್ಯಕ್ರಮಗಳಲ್ಲಿ, ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುತ್ತಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ ಆದುದರಿಂದ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವಂತೆ, ವರಿಷ್ಠರಿಗೆ ಸಲ್ಲಬೇಕಾದ ಸ್ಥಾನಮಾನದ ಶಿಷ್ಟಾಚಾರಗಳನ್ನು ಈಗಾಗಲೇ ಸೂಚನೆಗಳನ್ನು ಕೊಟ್ಟಿರುವಂತೆ, ವಿಧಾನ ಸಭೆಯ ಸರ್ಕಾರಿ ಮುಖ್ಯ ಸಚೇತಕರಿಗೂ ತಪ್ಪದೇ ಸಲ್ಲಿಸಬೇಕೆಂದು

ಸೂಚಿಸಿದೆ ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು

ಸಂಖ್ಯೆ ಸಿಆಸುಇ 46 ರಾರಾಅ 99
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,

ಬೆಂಗಳೂರು, ದಿನಾಂಕ 28-4-2000

ಸುತ್ತೋಲೆ

ವಿಷಯ ಮುಖ್ಯಮಂತ್ರಿಯವರು ಹಾಗೂ ಇತರ ಸಚಿವರುಗಳ ಪ್ರವಾಸ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ

ಉಲ್ಲೇಖ 1 ದಿ 18-05-82ರ ಸುತ್ತೋಲೆ ಸಂಖ್ಯೆ ಸಿಆಸುಇ 55 ಎಎಆರ್ 85

2 ದಿ 25-11-92ರ ಸುತ್ತೋಲೆ ಸಂಖ್ಯೆ ಸಿಆಸುಇ 73 ಜಿಎಂ 95

3 ದಿ 17-03-97ರ ಸುತ್ತೋಲೆ ಸಂಖ್ಯೆ ಸಿಆಸುಇ 16 ರಾರಾಅ 97

ದಿನಾಂಕ 18-05-82ರ ಸುತ್ತೋಲೆಯಲ್ಲಿ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು, ತಮ್ಮ ಜಿಲ್ಲೆಯ ಮುಖಾಂತರ ಮುಖ್ಯಮಂತ್ರಿಯವರು ತಮ್ಮ ಪ್ರವಾಸದ ಸಮಯದಲ್ಲಿ ಹಾದು ಹೋದಲ್ಲಿ

ಅಥವಾ ಪ್ರವಾಸ ಮಾಡಿದಲ್ಲಿ, ಅವರನ್ನು ತಮ್ಮ ಜಿಲ್ಲೆಯ ಗಡಿಯಲ್ಲಿ ಭೇಟಿ ಮಾಡುವುದಲ್ಲದೆ, ತಮ್ಮ ಜಿಲ್ಲೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಯನ್ನು ಅವರಿಗೆ ಒದಗಿಸುವಂತೆ ಸೂಚಿಸಲಾಗಿತ್ತು ಸಚಿವರು ಪ್ರವಾಸದ ಸಮಯದಲ್ಲಿ, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು ಕೇಂದ್ರ ಸ್ಥಾನದಲ್ಲಿದ್ದಲ್ಲಿ ಮಾತ್ರ ಸಚಿವರನ್ನು ಭೇಟಿ ಮಾಡುವಂತೆ ಸೂಚಿಸಲಾಗಿತ್ತು ಹಾಗೆಯೇ, ಸಚಿವರು ಪ್ರವಾಸ ಮಾಡಿದಾಗ, ಅವರ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು, ಅವರುಗಳನ್ನು ಸ್ವಾಗತಿಸುವುದಲ್ಲದೆ, ಬೀಳ್ಕೊಡಬೇಕಾಗಿರುತ್ತದೆ ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದಲ್ಲದೆ, ಸಚಿವರುಗಳು ಕೋರಿದ್ದಲ್ಲಿ, ಅವರುಗಳೊಡನೆ ಪ್ರವಾಸ ಮಾಡುವಂತೆ ಕೂಡ ಸೂಚಿಸಲಾಗಿದೆ ಸಚಿವರ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು, ಸಚಿವರ ಪ್ರವಾಸದ ಸಮಯದಲ್ಲಿ, ಅವರಿಗೆ ಹಾಗೂ ಅವರೊಂದಿಗೆ ಪ್ರವಾಸ, ಮಾಡುವ ಇತರ ಅಧಿಕಾರಿಗಳಿಗೆ, ಅವರು ಹಣಸಂದಾಯ ಮಾಡುವ ಷರತ್ತಿಗೊಳಪಟ್ಟು, ವಸತಿ, ಆಹಾರ ಪೂರೈಕೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಬೇಕೆಂದು ಸೂಚಿಸಲಾಗಿತ್ತು ಈ ಸೌಲಭ್ಯಗಳನ್ನು ಒದಗಿಸಿದ್ದಕ್ಕಾಗಿ ತಕ್ಷಣ ಬಿಲ್ಲುಗಳನ್ನು ತಯಾರು ಮಾಡಿ ವಸೂಲಿ ಮಾಡಬೇಕೆಂದು ಕೂಡ ಸೂಚಿಸಲಾಗಿದೆ

ದಿನಾಂಕ 25-11-92ರ ಸುತ್ತೋಲೆಯಲ್ಲಿ ಹೊರಡಿಸಿರುವ ಸಚಿವರುಗಳ ನೀತಿ ಸಂಹಿತೆಯಂತೆ ಸಚವರು ತಮ್ಮ ಪ್ರವಾಸದ ಸಮಯದಲ್ಲಿ ತಮ್ಮ ವಸತಿ ಮತ್ತು ಇತರ ವ್ಯವಸ್ಥೆಗಳಿಗೆ ಹಣ ಸಂದಾಯ ಮಾಡಬೇಕೆಂದು ಸೂಚಿಸಲಾಗಿದೆ

ದಿನಾಂಕ 17-3-97ರ ಸುತ್ತೋಲೆಯಲ್ಲಿ ಮುಖ್ಯಮಂತ್ರಿಯವರು ಪ್ರವಾಸ ಮಾಡಿದಾಗ ಅಧಿಕಾರಿಗಳು ಇಅವರಿಗೆ ಸಲ್ಲಿಸಬೇಕಾದ ಶಿಷ್ಟಾಚಾರದ ವ್ಯವಸ್ಥೆಯನ್ನು ಮಾಡಿಲ್ಲವೆಂದು ದೂರು ಬಂದಾಗ, ಇಂತಹ ದೂರುಗಳಿಗೆ ಅವಕಾಶ ಕೊಡದೆ, ಮುಖ್ಯಮಂತ್ರಿಯವರು ಇತರ ಸಚಿವರು ರಾಜ್ಯದ ಒಳಗಡೆ ಪ್ರವಾಸ ಮಾಡಿದಾಗ, ಅವರಿಗೆ ಸಲ್ಲಬೇಕಾದ ಎಲ್ಲಾ ಶಿಷ್ಟಾಚಾರದ ವ್ಯವಸ್ಥೆಯನ್ನು ಮಾಡುವಂತೆ ಸೂಚಿಸಲಾಗಿದೆ

ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ ಕೂಡ, ಸಚಿವರುಗಳು ಜಿಲ್ಲೆಯಲ್ಲ ಪ್ರವಾಸ ಮಾಡಿದಾಗ, ಜಿಲ್ಲಾಧಿಕಾರಿಗಳು, ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು, ಮಾನ್ಯ ಸಚಿವರನ್ನು ಬೇಟಿ ಆಗುತ್ತಿಲ್ಲೇವೆಂಬ ದೂರು ಸರ್ಕಾರಕ್ಕೆ

ಬರುತ್ತಿದೆ ಇನ್ನು ಮುಂದೆ ಇಂಹ ದೂರುಗಳಿಗೆ, ಅವಕಾಶ ಕೊಡದೆ, ಮುಖ್ಯಮಂತ್ರಿಯವರು ಮತ್ತು ಇತರ ಸಚಿವರು ರಾಜ್ಯದ ಒಳಗಡೆ ಪ್ರವಾಸ ಮಾಡಿದಾಗ ಉಲ್ಲೇಖಿತ ಸುತ್ತೋಲೆಗಳಲ್ಲಿನ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸಲ್ಲಬೇಕಾದ ಎಲ್ಲಾ ಶಿಷ್ಟಾಚಾರದ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ

ಸಂಖ್ಯೆ ಸಿಆಸುಇ 13 ರಾರಾ ಆ 2000
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,

ಬೆಂಗಳೂರು, ದಿನಾಂಕ 27-4-2000

ಸುತ್ತೋಲೆ

ವಿಷಯ ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದಂತಹ ದೂರವಾಣಿ ಕರೆಗಳನ್ನು ಹಿಂತಿರುಗಿಸುವ ಬಗ್ಗೆ

ಇತ್ತೀಚೆಗೆ, ವಿಧಾನ ಮಂಡಲದಲ್ಲಿ, ಸದಸ್ಯರು ಸರ್ಕಾರದ ಅಧಿಕಾರಿಗಳು ಜನರಪ್ರತಿನಿಧಿಗಳಿಗೆ ಗೌರವ ನೀಡುತ್ತಿಲ್ಲವೆಂದು ಹಾಗೂ ಅವರ ದೂರವಾಣಿ ಕರೆಗಳಿಗೆ ಸ್ಪಂದಿಸುತ್ತಿಲ್ಲವೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಸಂಸತ್ ಸದಸ್ಯರು ಹಾಗೂ ಶಾಸಕರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುವುದರಿಂದ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ಸಭೆಯಲ್ಲಿದ್ದಾಗ, ಅವರ ಆಪ್ತ ಕಾರ್ಯದರ್ಶಿಗಳು ಆಪ್ತ ಸಹಾಯಕರುಗಳು, ಅವರುಗಳಿಗೆ ಬಂದಂತಹ ದೂರವಾಣಿ ಕರೆಗಳನ್ನು ಪಟ್ಟಿ ಮಾಡುವುದಲ್ಲದೆ, ಅವರುಗಳು ಹಿಂತಿರುಗಿ ಬಂದ ನಂತರ ಅವರಿಗೆ ಅದನ್ನು ತೋರಿಸಲು ಕ್ರಮ

ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ ಸಚಿವರುಗಳು, ಸಂಸತ್ ಸದಸ್ಯರುಗಳು, ಶಾಸಸಕರುಗಳು, ಅತಿ ಗಣ್ಯ ವ್ಯಕ್ತಿಗಳು ಮತ್ತು ಹಿರಿಯ ಅಧಿಕಾರಿಗಳಿಂದ ಬಂದಂತಹ ದೂರವಾಣಿ ಕರೆಗಳನ್ನು ಕಡ್ಡಾಯಾಗಿ ಹಿಂತಿರುಗಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾರ್ಯದರ್ಶಿಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಸೂಚಿಇಸಲಾಗಿದೆ

ಸಂಖ್ಯೆ ಸಿಆಸುಇ 29 ರಾರಾ ಆ 2000
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,

ಬೆಂಗಳೂರು, ದಿನಾಂಕ 17-04-2000

ಸುತ್ತೋಲೆ

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಸಂಸತ್ ಸದಸ್ಯರುಗಳು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ

ಉಲ್ಲೇಖ 1 ದಿನಾಂಕ 08-01-1992ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 18 ರಾರಾಅ 91

2 ದಿನಾಂಕ 23-04-1992ರ ಸುತ್ತೋಲೆ ಸಂಖ್ಯೆ ಸಿಆಸುಇ 8 ರಾರಾಅ 92

3 ದಿನಾಂಕ 15-01-1993ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

4 ದಿನಾಂಕ 16-04-1993ರ ಸುತ್ತೋಲೆ ಸಂಖ್ಯೆ ಸಿಆಸುಇ 2

ಪ್ರಜಾಪ್ರಭುತ್ವದಲ್ಲಿ, ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ, ವಿಧಾನ ಪರಿಷತ್ತಿನ ಸದಸ್ಯರ ಮತ್ತುವಇಧಾನ ಸಭೆಯ ಸದಸ್ಯರ ಸ್ಥಾನವು ಮಹತ್ವ ಪೂರ್ಣವಾಗಿದ್ದು, ಅವರು ಸಾರ್ವಜನಿಕ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ ಸರ್ಕಾರದ ವತಿಯಿಂದ ಏರ್ಪಡಿಸವ ರಾಷ್ಟ್ರೀಯ ಮತ್ತು ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿ ಸುತ್ತಿಲ್ಲವೆಂದು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸುತ್ತಿಲ್ಲವೆಂಬುದ ಸರ್ಕಾರದ ಗಮನಕ್ಕೆಬಂದಿದೆ

ಇತ್ತೀಚೆಗೆ, ವಿಧಾನ ಪರಿಷತ್ತಿನ ಸದಸ್ಯರುಗಳು, ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ ತಮ್ಮನ್ನು ಆಹ್ವಾನಿಸುತ್ತಿಲ್ಲವೆಂದು ಹಾಗೂ ತಮ್ಮ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದೇ ಅಧಿಕಾರಿಗಳು ನಡೆಸಿಕೊಳ್ಳುತ್ತಿರುವ ವಿಷಯವನ್ನು ಸದನದಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ ಮುಖ್ಯ ಮಂತ್ರಿಗಳು ಈ ವಿಷಯವನ್ನು ತೀವ್ರವಾಗಿ ಪರಿಗಣಿಸಿದ್ದಾರೆ

ಆದ್ದರಿಂದ, ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಮಾರಂಭಗಳಿಗೆ ಸಂಸತ್ ಸದಸ್ಯರನ್ನು, ವಿಧಾನ ಪರಿಷತ್ತಿನ ಮತ್ತು ವಿಧಾನಸಭೆಯ ಸದಸ್ಯರನ್ನು ತಪ್ಪದೇ ಆಹ್ವಾನಿಸುವುದಲ್ಲದೇ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ ಆ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 2 ರಾರಾ ಆ 2000
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 1-03-2000

ಸುತ್ತೋಲೆ

ವಿಷಯ ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ

ಉಲ್ಲೇಖ 1 ದಿ 19-5-75ರ ಅಧಿಕೃತ ಜ್ಞಾಪನ ಸಂಖ್ಯೆ ಜಿಎಡಿ 4 ಪಿಎಲ್‌ಎಕ್ಸ್ 75

2 ದಿ 20-3-98ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 98

ದಿನಾಂಕ 19-5-1975ರ ಅಧಿಕೃತ ಜ್ಞಾಪನದಲ್ಲಿ, ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡುತಕ್ಕದ್ದಲ್ಲದೆ, ಅಂತಹ ಎಲ್ಲಾ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಅವುಗಳಿಗೆ ಉತ್ತರಿಸತಕ್ಕದ್ದೆಂದು ಸೂಚನೆಗಳನ್ನು ನೀಡಲಾಗಿದೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು, ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೋರಿದಾಗ, ಅಧಿಕಾರಿಗಳು ಅಂತಹ ವಿವರಗಳನ್ನು ಅವರಿಗೆ ಒದಗಿಸಬೇಕಲ್ಲದೆ, ಸಂದೇಹಾಸ್ಪದ ಸಂದರ್ಭಗಳಲ್ಲಿ, ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆಯಬೇಕೆಂದು ಕೂಡ ಸೂಚಿಸಲಾಗಿದೆ

ದಿನಾಂಕ 20-3-98ರ ಸುತ್ತೋಲೆಯಲ್ಲಿ, ಸಂಸತ್ ಸದಸ್ಯರಿಂದ ಹಾಗೂ ಶಾಸಕರುಗಳಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದ್ದಲ್ಲದೆ, ಆ ಎಲ್ಲಾ ಪತ್ರಗಳಿಗೂ ತಕ್ಷಣ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ

ಉತ್ತರ ನೀಡಲು ತಡವಾದಲ್ಲಿ, ಮಧ್ಯಂತರ ಉತ್ತರವನ್ನು ಅವರಿಗೆ ಕಳುಹಿಸಿ, ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ನೀಡಲಾಗುವುದೆಂದು ಮಧ್ಯಂತರ ಉತ್ತರದಲ್ಲಿ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ

ಪ್ರಜಾಪ್ರಭುತ್ವದಲ್ಲಿ, ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ ಹಾಗೂ ಶಾಸಕರ ಸ್ಥಾನವು ಮಹತ್ವಪೂರ್ಣವಾಗಿ, ಅವರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ ಈ ಬಗ್ಗೆ ನೀಡಿರುವ ಸೂಚನೆಗಳನ್ನು ಪುನರುಚ್ಚರಿಸುತ್ತಾ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು, ತಮ್ಮ ಅಧೀನಕ್ಕೆ ಒಳಪಡುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಸಂಸತ್ ಸದಸ್ಯರು ಮತ್ತು ಶಾಸಕರುಗಳು ಪತ್ರ ಬರೆದಾಗ, ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 2 ರಾರಾ ಆ 98
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 20-03-98

ಸುತ್ತೋಲೆ

ವಿಷಯ ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ

ಉಲ್ಲೇಖ 1 ದಿ 19-5-75ರ ಅಧಿಕೃತ ಜ್ಞಾಪನ ಸಂಖ್ಯೆ ಜಿಎಡಿ 4 ಪಿಎಲ್ಎಕ್ಸ್ 75

ದಿನಾಂಕ 19-5-1975ರ ಅಧಿಕೃತ ಜ್ಞಾಪನದಲ್ಲಿ, ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದಿಂದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದ್ದಲ್ಲದೆ ಅಂತಹ ಎಲ್ಲಾ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಅವುಗಳಿಗೆ

ಉತ್ತರಿಸತಕ್ಕದ್ದದೆಂದು ಸೂಚನೆಗಳನ್ನು ನೀಡಲಾಗಿದೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು, ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿಅಂಶಗಳನ್ನು ಕೋರಿದಾಗ ಅಧಿಕಾರಿಗಳು ಅಂತಹ ವಿವರಗಳನ್ನು ಅವರಿಗೆ ಒದಗಿಸಬೇಕಲ್ಲದೆ, ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆಯಬೇಕೆಂದು ಕೂಡ ಸೂಚಿಸಲಾಗಿದೆ

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ ಹಾಗೂ ಶಾಸಕರ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರು ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ ಆದ್ದರಿಂದ ಸಂಸತ್ ಸದಸ್ಯರಿಂದ ಹಾಗೂ ಶಾಸಕರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದ್ದಲ್ಲದೆ ಆ ಎಲ್ಲಾ ಪತ್ರಗಳಿಗೂ ತಕ್ಷಣ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ ಉತ್ತರ ನೀಡಲು ತಡಾವಾದಲ್ಲಿ, ಮಧ್ಯಂತರ ಉತ್ತರವನ್ನು ಅವರಿಗೆ ಕಳುಹಿಸಿ, ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ಕೊಡಲಾಗುಉವುದೆಂದು ಮಧ್ಯಂತರ ಉತ್ತರದಲ್ಲಿ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಪತ್ರ ಬರೆದಾಗ ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 50 ರಾರಾ ಆ 97
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 28-07-97

ಸುತ್ತೋಲೆ

ವಿಷಯ ವಿರೋಧ ಪಕ್ಷದ ನಾಯಕರುಗಳಿಗೆ ಸೌಜನ್ಯ ತೋರಿಸುವ ಬಗ್ಗೆ

ವಿರೋಧ ಪಕ್ಷದ ನಾಯಕರುಗಳಿಗೆ ಸರ್ಕಾರದ ಅಧಿಕಾರಿಗಳು ನೇರವಾಗಿ ಪತ್ರ ಬರೆದು ಶಿಷ್ಟಾಚಾರದ ಉಲ್ಲಂಘನೆ ಮಾಡುತ್ತಿದ್ದಾರೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ ವಿಧಾನ ಪರಿಷತ್ತಿನ ಮುತ್ತ ವಿಧಾನಸಭೆಯ ವಿರೋಧ ಪಕ್ಷದ ನಾಯಕರುಗಳಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಿದ್ದು,ಅವರುಗಳಿಗೆ ನೇರಾಗಿ ಪತ್ರ ಬರೆಯುವುದು ಶಿಷ್ಟಾಚಾರವನ್ನು ಉಲ್ಲಂಘಿಸಿದಂತಾಗುತ್ತದೆ ಆದ್ದರಿಂದ ಇನ್ನು ಮುಂದೆ ವಿಧಾನ ಪರಿಷತ್ತಿನ ಮತ್ತುವ ಇಧಾನ ಸಭೆಯ ವಿರೋಧ ಪಕ್ಷದ ನಾಯಕರುಗಳಿಗೆ ನೇರವಾಗಿ ಪತ್ರವನ್ನು ಬರೆಯುವುದಾಗಲೀ ಅಥವಾ ಸಭೆಯ ಸೂಚನಾ ಪತ್ರವನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ ವಿಧಾನ ಪರಿಷಿತ್ತನ ಮತ್ತು ವಿಧಾನ ಸಭೆಯ ವಿರೋಧ ಪಕ್ಷದ ನಾಯಕರುಗಳಿಗೆ ಪತ್ರಗಳನ್ನಾಗಲೀ ಅಥವಾ ಸಭೆಯ ಸೂಚನಾ ಪತ್ರಗಳನ್ನಾಗಲೀ, ಕಳುಹಿಸಬೇಕಾಗಿದ್ದಲ್ಲಿ, ಅವುಗಳನ್ನು ಅವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿ, ವಿಷಯವನ್ನು ವಿರೋಧ ಪ ಕ್ಷದ ನಾಯಕರ ಗಮನಕ್ಕೆ ತರುವಂತೆ ಕೋರಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 75 ರಾರಾ ಆ 96
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 15-11-96

ಸುತ್ತೋಲೆ

ವಿಷಯ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಅಧಿಕಾರಿಗಳನ್ನು ಭೇಟಿ ಮಾಡಿದಾಗ ಅವರಿಗೆ ಸೌಜನ್ಯ ಮತ್ತು ಗೌರವ ತೋರಿಸುವ ಬಗ್ಗೆ

ಉಲ್ಲೇಖ 1 ದಿನಾಂಕ 19-5-75ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 4 ಪಿಎಲ್‌ಎಕ್ಸ್ 75

2 ದಿನಾಂಕ 25-8-77ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 17 ಪಿಎಲ್‌ಎಕ್ಸ್ 77

3 ದಿನಾಂಕ 29-3-78ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 31 ಪಿಎಲ್‌ಎಕ್ಸ್ 78

4 ದಿನಾಂಕ 21-6-79ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 53 ಪಿಎಲ್‌ಎಕ್ಸ್ 79

5 ದಿನಾಂಕ 8-2-85ರ ಸರ್ಕಾರದ ಆದೇಶದ ಸಂಖ್ಯೆ ಸಿಆಸುಇ 110 ಪಿಎಲ್‌ಎಕ್ಸ್ 74

6 ದಿನಾಂಕ 6-12-76ರ ಸುತ್ತೋಲೆ ಸಂಖ್ಯೆ ಸಿಆಸುಇ 113 ಪಿಎಲ್‌ಎಕ್ಸ್ 85

7 ದಿನಾಂಕ 23-9-86ರ ಸುತ್ತೋಲೆ ಸಂಖ್ಯೆ ಸಿಆಸುಇ 115 ಪಿಎಲ್‌ಎಕ್ಸ್ 86

8 ದಿನಾಂಕ 25-3-87ರ ಸುತ್ತೋಲೆ ಸಂಖ್ಯೆ ಸಿಆಸುಇ 44 ಪಿಎಲ್‌ಎಕ್ಸ್ 86

9 ದಿನಾಂಕ 21-6-90ರ ಸುತ್ತೋಲೆ ಸಂಖ್ಯೆ ಸಿಆಸುಇ 23ಪಿಎಲ್‌ಎಕ್ಸ್ 90

10 ದಿನಾಂಕ 20-7-91ರ ಸುತ್ತೋಲೆ ಸಂಖ್ಯೆ ಸಿಆಸುಇ 35 ಪಿಎಲ್‌ಎಕ್ಸ್ 91

11 ದಿನಾಂಕ 8-1-92ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 18 ರಾರಾಅ 91

12 ದಿನಾಂಕ 23-4-92ರ ಸುತ್ತೋಲೆ ಸಂಖ್ಯೆ ಸಿಆಸುಇ 8 ರಾರಾಅ 92

13 ದಿನಾಂಕ 15-1-93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

14 ದಿನಾಂಕ 16-4-93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 92

15 ದಿನಾಂಕ 10-4-95ರ ಸುತ್ತೋಲೆ ಸಂಖ್ಯೆ ಸಿಆಸುಇ 28 ರಾರಾಅ 95

16 ದಿನಾಂಕ 24-2-96ರ ಸುತ್ತೋಲೆ ಸಂಖ್ಯೆ ಸಿಆಸುಇ 10 ರಾರಾಅ 96

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರು ಆಡಳಿತ ವ್ಯವಸ್ಥೆ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ ಸರ್ಕಾರದ ಕಛೇರಿಗಳಿಗೆ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಭೇಟಿ ನೀಡಿದಾಗ, ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ

ಅವರುಗಳೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ವಿಸ್ತೃತವಾದ ಸೂಚನೆಗಳನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಸರ್ಕಾರವು ಈಗಾಗಲೇ ನೀಡಿದೆ

ಸರ್ಕಾರವು, ಇಷ್ಟೆಲ್ಲಾ ಸುತ್ತೋಲೆಗಳನ್ನು ಹೊರಡಿಸಿದ್ದರೂ ಕೂಡ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಲು ಬಂದಾಗ, ಅವರುಗಳನ್ನು ಗೌರವಪೂರ್ವಕವಾಗಿ ಕಾಣುತ್ತಿಲ್ಲವೆಂದು ಹಾಗೂ ಅವರುಗಳೊಡನೆ ಕೆಲವು ಅಧಿಕಾರಿಗಳು, ಸೌಲಜ್ಯ ಪೂರ್ವಕವಾಗಿ ವರ್ತಿಸುತ್ತಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ ಇನ್ನು ಮುಂದೆ ಇಂತಹ ದೂರುಗಳಿಗೆ ಅವಕಾಶ ಕೊಡದೆ, ಸಂಸತ್ ಸದಸ್ಯರಾಗಲೀ ಅಥವಾ ಶಾಸಕರಾಗಲೀ, ಸರ್ಕಾರದ ಕಛೇರಿಗೆ ಭೇಟಿ ನೀಡಿದಾಗ, ಅವರಿಗೆ ಸಲ್ಲತಕ್ಕ ಗೌರವಾದರಗಳೊಂದಿಗೆ ಸ್ವಾಗತಿಸಬೇಕಲ್ಲದೆ, ಅವರು, ಭೇಟಿಗಾಗಿ ಕೋರಿದಾಗ ಆದ್ಯತೆ ಮೇಲೆ ನೀಡತಕ್ಕದ್ದು, ಅವರು ಕ್ಷೇತ್ರವೊಂದರ ಪ್ರತಿನಿದಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು, ಅವರು ನೀಡುವ ಮನವಿ ಹಾಗೂ ಸಲಹೆಗಳನ್ನು ಪರಿಗಣಿಸಬೇಕೆಂದು ಸೂಚಿಸಲಾಗಿದೆ ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೋರಲಾಗಿದೆ

ಸಂಖ್ಯೆ ಸಿಆಸುಇ 28 ರಾರಾಆ 95
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 10–4–95

ಸುತ್ತೋಲೆ

ವಿಷಯ ಸಂಸತ್ ಸದಸ್ಯರು ಹಾಗೂ ಶಾಸಕರುಗಳಿಗೆ ಸೌಜನ್ಯ ಮತ್ತು ಗೌರವ ನೀಡುವ ಬಗ್ಗೆ

ಉಲ್ಲೇಖ 1 ದಿನಾಂಕ 19–5–75ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 4 ಪಿಎಲ್ಎಕ್ಸ್ 75

2 ದಿನಾಂಕ 25–8–77ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 17 ಪಿಎಲ್ಎಕ್ಸ್ 77

3 ದಿನಾಂಕ 29–3–78ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 31 ಪಿಎಲ್‌ಎಕ್ಸ್ 78

4 ದಿನಾಂಕ 21–6–79ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 53 ಪಿಎಲ್‌ಎಕ್ಸ್ 79

5 ದಿನಾಂಕ 8–2–85ರ ಸರ್ಕಾರದ ಆದೇಶದ ಸಂಖ್ಯೆ ಸಿಆಸುಇ 110 ಪಿಎಲ್‌ಎಕ್ಸ್ 74

6 ದಿನಾಂಕ 6–12–76ರ ಸುತ್ತೋಲೆ ಸಂಖ್ಯೆ ಸಿಆಸುಇ 113 ಪಿಎಲ್‌ಎಕ್ಸ್ 85

7 ದಿನಾಂಕ 23–9–86ರ ಸುತ್ತೋಲೆ ಸಂಖ್ಯೆ ಸಿಆಸುಇ 115 ಪಿಎಲ್‌ಎಕ್ಸ್ 86

8 ದಿನಾಂಕ 25–3–87ರ ಸುತ್ತೋಲೆ ಸಂಖ್ಯೆ ಸಿಆಸುಇ 44 ಪಿಎಲ್‌ಎಕ್ಸ್ 86

9 ದಿನಾಂಕ 21–6–90ರ ಸುತ್ತೋಲೆ ಸಂಖ್ಯೆ ಸಿಆಸುಇ 23ಪಿಎಲ್‌ಎಕ್ಸ್ 90

10 ದಿನಾಂಕ 20–7–91ರ ಸುತ್ತೋಲೆ ಸಂಖ್ಯೆ ಸಿಆಸುಇ 35 ಪಿಎಲ್‌ಎಕ್ಸ್ 91

11 ದಿನಾಂಕ 8–1–92ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 18 ರಾರಾಅ 91

12 ದಿನಾಂಕ 23–4–92ರ ಸುತ್ತೋಲೆ ಸಂಖ್ಯೆ ಸಿಆಸುಇ 8 ರಾರಾಅ 92

13 ದಿನಾಂಕ 15–1–93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

14 ದಿನಾಂಕ 16–4–93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್‌ಸದಸ್ಯರು ಹಾಗೂ ಶಾಸಕರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರುಗಳು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ ಸರ್ಕಾರದ ಕಛೇರಿಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಭೇಟಿ ನೀಡಿದಾಗ, ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ವಿಸ್ತೃತವಾದ ಸೂಚನೆಗಳನ್ನು ಉಲ್ಲೇಖಿತ ಸುತ್ತೋಲೆಗಳನ್ನು ಸರ್ಕಾರವು ನೀಡಿದೆ

ಇಷ್ಟೆಲ್ಲಾ ಸುತ್ತೋಲೆಗಳನ್ನು ಹೊರಡಿಸಿದ್ದರೂ ಕೂಡ, ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಲು ಬಂದಾಗ, ಅವರನ್ನು ಗೌರವಪೂರ್ವಕವಾಗಿ ಕಾಣುತ್ತಿಲ್ಲ ಮತ್ತು ಅವರುಗಳೊಡನೆ ಅಧಿಕಾರಿಗಳು ಸೌಜನ್ಯಪೂರ್ವಕವಾಗಿ ವರ್ತಿಸುತ್ತಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ ಅಲ್ಲದೆ, ಈ ವಿಷಯವನ್ನು ಇತ್ತೀಚೆಗೆ ಉಭಯ ಸದನಗಳಲ್ಲೂ ಕೂಡ ವಿವರವಾಗಿ ಪ್ರಸ್ತಾಪಿಸಲಾಗಿದೆ ಸರ್ಕಾರವು ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ ಸಹ ಅವುಗಳನ್ನು ಉಲ್ಲಂಘಿಸಿ, ಸಂಸತ್ ಸದಸ್ಯರು ಮತ್ತು ಶಾಸಕರುಗಳಿಗೆ, ಅಧಿಕಾರಿಗಳು ಗೌರವ ತೋರಿಸುತ್ತಿಲ್ಲವೆಂಬುದು ನಿಜವಾಗಲೂ ವಿಷಾಧನೀಯ

ಸರ್ಕಾರದ ಎಲ್ಲಾ ಸೂಚನೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು ತಪ್ಪದೇ ಪಾಲಿಸಬೇಕಾಗುತ್ತದೆ ಆದುದರಿಂದ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ಶಾಸಕರುಗಳು ತಮ್ಮ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವಂತೆ ಮತ್ತು ಅವರುಗಳೊಡನೆ ಸೌಜನ್ಯ ಪೂರ್ವಕವಾಗಿ ನಡೆದುಕೊಳ್ಳಲು ಸೂಚಿಸಲಾಗಿದ ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ

ಸಂಖ್ಯೆ ಸಿಆಸುಇ 49 ರಾರಾಅ 93
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 13–7–1993

ತಿದ್ದೋಲೆ

ದಿನಾಂಕ 3–7–1993ರ ಸುತ್ತೋಲೆ ಸಂಖ್ಯೆ ಸಿಆಸುಇ 49 ರಾರಾಅ 93ರ ಆದ್ಯತಾ ಪಟ್ಟಿಯ (ಟೇಬಲ್ ಆಫ್‌ಪಿ ಪ್ರಿಸಿಡೆನ್ಸ್) ಅಂಶ 6ನ್ನು ಈ ಕೆಳಕಂಡಂತೆ ಮಾರ್ಪಡಿಸಿ ಓದಿಕೊಳ್ಳುವುದು

ಇವಿಧಾನ ಪರಿಷತ್ತಿನ ಉಪ ಸಭಾಪತಿಗಳು, ವಿಧಾನಸಭೆಯ ಉಪಾಧ್ಯಕ್ಷರು ರಾಜ್ಯ ಸರ್ಕಾರದ ರಾಜ್ಯ ಸಚಿವರುಗಳು ಹಾಗೂ ಸರ್ಕಾರಿ ಮುಖ್ಯ ಸಚೇತಕರುಗಳು

ಸಂಖ್ಯೆ ಸಿಆಸುಇ 49 ರಾರಾಅ 93
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 3–7–1993

ಸುತ್ತೋಲೆ

ಸಚಿವರುಗಳು, ರಾಜ್ಯ ಸಚಿವರುಗಳು, ವಿಧಾನ ಮಂಡಲದ ವರಿಷ್ಠರು, ಲೋಕಸಭೆ, ರಾಜ್ಯ ಸಭೆ ಸದಸ್ಯರು, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಸದಸ್ಯರುಗಳಿಗೆ ತೋರಿಸಬೇಕಾದ ಶಿಷ್ಟಾಚಾರ ಸ್ಥಾನಮಾನ, ಗೌರವಗಳ ಬಗ್ಗೆ ಈಗಾಗಲೇ ಪದೇ ಪದೇ ಸೂಚನೆಗಳನ್ನು ನೀಡಲಾಗಿದೆ

ಇತ್ತೀಚೆಗೆ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳು ಭಾಗವಹಿಸಿದ ಸಮಾರಂಭವೊಂದಕ್ಕೆ ಸಂಬಂಧಪಟ್ಟ ಆಹ್ವಾನ ಪತ್ರಿಕೆಯಲ್ಲಿ ಅವರ ಹೆಸರನ್ನು ಮುಖ್ಯಮಂತ್ರಿಗಳು ಹಾಗೂ ಇತರ ಸಚಿವರುಗಳು ಹಾಗೂ ಮತ್ತಿತರರ ನಂತರ ಕೊನೆಯಲ್ಲಿ ಸೇರಿಸಲಾಗಿತ್ತೆಂದು, ಅದೇ ರೀತಿ ಸಮಾರಂಭಕ್ಕೆ ಸಂಬಂಧಪಟ್ಟ ಶಿಲೆಯಲ್ಲೂ ಸಹ ಅವರ ಹೆಸರನ್ನು ಕೊನೆಯಲ್ಲಿ ಸೇರಿಸಿ ಅವರಿಗೆ ಸಲ್ಲಬೇಕಾದ

ಶಿಷ್ಟಾಚಾರ ಮತ್ತು ಗೌರವ ಸಲ್ಲಿಸುವುದರಲ್ಲಿ ಲೋಪದೋಷ ಉಂಟಾಗಿರುವ ಬಗ್ಗೆ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ

ರಾಜ್ಯ ಸರ್ಕಾರವು ವಿವಿಧ ವರಿಷ್ಠರಿಗೆ ಸಲ್ಲಬೇಕಾದ ಸ್ಥಾನಮಾನ ಶಿಷ್ಟಾಚಾರ ವ್ಯವಸ್ಥೆಯ ಆದ್ಯತೆಯ ಬಗ್ಗೆ ಹೊರಡಿಸಿರುವ ಆದ್ಯತಾ ಪಟ್ಟಿಯ ಪ್ರಕಾರ (ಟೇಬಲ್ ಆಫ್ ಪ್ರಿಸಿಡೆನ್ಸ್) ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಸಚಿವರುಗಳ, ಇತರ ವರಿಷ್ಠರುಗಳು ಸ್ಥಾನಮಾನಗಳು ಈ ಕೆಳಕಂಡಂತೆ ಇರುತ್ತದೆ

1 ಮುಖ್ಯಮಂತ್ರಿಗಳು, ಭಾರತ ಸರ್ಕಾರದ ಮಂತ್ರಿಗಳು ಲೋಕಸಭೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು – ಕ್ರಮಾಂಕ 7

2 ರಾಜ್ಯ ಸಭೆ, ಲೋಕಸಭೆಗಳ ಉಪ ಸಭಾಪತಿಗಳು, ಉಪಾಧ್ಯಕ್ಷರು, ಕೇಂದ್ರ ಸರ್ಕಾರದ ರಾಜ್ಯ ಮಂತ್ರಿಗಳು –ಕ್ರಮಾಂಕ 10

3 ವಿಧಾನ ಪರಿಷತ್ತಿನ ಸಭಾಪತಿಗಳು ಮತ್ತು ವಿಧಾನ ಸಭೆಯ ಅಧ್ಯಕ್ಷರು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು – ಕ್ರಮಾಂಕ 14

4 ರಾಜ್ಯದ ಸಚಿವ ಸಂಪುಟ ದರ್ಜೆಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರುಗಳು, ಕೇಂದ್ರ ಸರ್ಕಾರದ ಉಪಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು – ಕ್ರಮಾಂಕ 15

5 ಉಚ್ಚ ನ್ಯಾಯಾಲಯ ನ್ಯಾಯಾಧೀಶರುಗಳು – ಕ್ರಮಾಂಕ 17

6 ರಾಜ್ಯ ಸರ್ಕಾರದ ರಾಜ್ಯ ಸಚಿವರುಗಳು ಹಾಗೂ ಸರ್ಕಾರಿ ಮುಖ್ಯ ಸಚೇತಕರುಗಳು – ಕ್ರಮಾಂಕ 18

7 ರಾಜ್ಯ ಸಭೆ, ಲೋಕಸಭೆ ಸದಸ್ಯರು, ವಿಧಾನ ಪರಿಷತ್ತಿನ, ವಿಧಾನಸಭೆಯ ಸದಸ್ಯರು – ಕ್ರಮಾಂಕ 21

ರಾಜ್ಯ ಸರ್ಕಾರದ ವತಿಯಿಂದ ಏರ್ಪಡಿಸಿದ ಎಲ್ಲ ಸಬೆ ಸಮಾರಂಭಗಳಲ್ಲಿ ಮೇಲ್ಕಂಡ ಆದ್ಯತಾ ಪಟ್ಟಿಯ ಪ್ರಕಾರ ಅವರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು ಆಸನ ವ್ಯವಸ್ಥೆ ಮಾಡುವಾಗಲೂ

ಇದೇ ಕ್ರಮವನ್ನು ಅನುಸರಿಸಬೇಕು ಸಮಾರಂಭಗಳಲ್ಲಿ ಆಗುವ ಶಂಕುಸ್ಥಾಪನೆ ಅಥವಾ ಪ್ರಾರಂಭೋತ್ಸವ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಇದೇ ಆದ್ಯತೆಯ ಕ್ರಮಗಳನ್ನು ನುಸರಿಸಿ ಅವರ ಹೆಸರುಗಳನ್ನು ನಮೂದಿಸಬೇಕು ರಾಜ್ಯ ಸರ್ಕಾರದ ಪರವಾಗಿ ನಡೆಯುವ ಯಾವುದೇ ಸಭೆ ಸಮಾರಂಭಕ್ಕೆ ಸಂಬಂಧಪಟ್ಟ ಆಹ್ವಾನ ಪತ್ರಿಕೆಗಳಲ್ಲೂ ಸಹ ಇದೇ ಆದ್ಯತೆಯ ಕ್ರಮವನ್ನು ಅನುಸರಿಸಿ ಅವಹೆಸರುಗಳನ್ನು ನಮೂದಿಸಬೇಕು ಈ ಬಗ್ಗೆ ಯಾವುದೇ ಲೋಪದೋಷಗಳು ಇನ್ನು ಮುಂದೆ ವರದಿ ಅದಲ್ಲಿ ಸಂಬಂಧಪಟ್ಟವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗುವುದು

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 47 ರಾರಾಅ 93
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 25ನೇ ಜೂನ್ 1993

ಸುತ್ತೋಲೆ

ವಿಷಯ ಸಂಸತ್ ಸದಸ್ಯರು ಶಾಸಕರಿಗೆ ಸೌಜನ್ಯ ಹಾಗೂ ಗೌರವ ನೀಡುವುದು ಮತ್ತು ಅವರ ಅಭಿಪ್ರಾಯಗಳನ್ನು ಪಡೆಯುವುದರ ಬಗ್ಗೆ

ನಮ್ಮ ದೇಶವು ಚುನಾಯಿತ ಪ್ರತಿನಿಧಿಗಳಿಂದ ಸರ್ಕಾರ ನಡೆಸುವಂಥ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡಿದೆ ಆದಕಾರಣ, ನಮ್ಮ ದೇಶದ ಆಡಳಿತ ವ್ಯವಸ್ಥೆಯಲ್ಲಿ ಸಂಸತ್ ಸದಸ್ಯರು ಮತ್ತು ಶಾಸಕರು ವಿಶೇಷ ಮತ್ತು ಪ್ರಮುಖ ವಹಿಸುತ್ತಾರೆಂಬುದನ್ನು ನಾವು ಮನಗಾಣಬೇಕು

2 ಈ ಬಗ್ಗೆ ಅನೇಕ ಸುತ್ತೋಲೆಗಳನ್ನು ಹೊರಡಿಸಿದ್ದಾಗ್ಯೂ, ಸಂಸತ್ ಸದಸ್ಯರು ಹಾಗೂ ಶಾಸಕರು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಆ ಅಧಿಕಾರಿಗಳು ಅವರಿಗೆ ಸಾಕಷ್ಟು ಗೌರವ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಇದಲ್ಲದೆ ಶಾಸಕರುಗಳ ಮತಕ್ಷೇತ್ರಗಳಲ್ಲಿ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಗಳಿಜಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಆ ಶಾಸಕರ ಅಭಿಪ್ರಾಯಗಳನ್ನು ಪಡೆಯುತ್ತಿಲ್ಲದಿರುವುದು ಅಥವಾ ಅವರ ಅಭಿಪ್ರಾಯಗಳಿಗೆ

ಕಿವಿಗೊಡದೆ ಕಡೆಗಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತೆ ಆದಕಾರಣ, ಈ ವಿಷಯದಲ್ಲಿ ಮತ್ತೆ ಸೂಚನೆಗಳನ್ನು ನೀಡುವುದು ಅತ್ಯಾವಶ್ಯಕವಾಗಿದೆ

3 ಸಂಸತ್ ಸದಸ್ಯರಾಗಲೀ ಅಥವಾ ಶಾಸಕರಾಗಲಿ ಸರ್ಕಾರಿ ಕಛೇರಿಗೆ ಭೇಟಿ ನೀಡಿದಾಗ ಅವರಿಗೆ ಸಲ್ಲತಕ್ಕ ಗೌರವಾದರಗಳೊಂದಿಗೆ ಅವರನ್ನು ಸ್ವಾಗತಿಸಲೇಬೇಕು ಮತ್ತು ಅವರು ಕ್ಷೇತ್ರವೊಂದರ ಪ್ರತಿನಿಧಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರು ನೀಡುವಂಥ ಮನವಿ ಹಾಗೂ ಸಲಹೆ ಸೂಚನೆಗಳನ್ನು ಪರಿಗಣಿಸಬೇಕು

4 ಜಿಲ್ಲಾ ಮಟ್ಟದ ಅಧಿಕಾರಿಗಳು ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಅವರ ಮತಕ್ಷೇತ್ರದ ಅಭಿವೃದ್ಧಿ ಕಾರ್ಯ ಕುರಿತಂತೆ ನೀಡುವ ಸಲಹೆ ಸೂಚನೆಗಳನ್ನು ಸಾಮಾನ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಅವುಗಳನ್ನು ಲಭ್ಯವಿರುವ ಆರ್ಥಿಕ ಪರಿಸ್ಥಿಥಿಯ ಹಿನ್ನೆಲೆಯಲ್ಲಿ ಎಷ್ಟರ ಮಟ್ಟಿಗೆ ಕಾರ್ಯಗತಗೊಳಿಸಲು ಸಾಧ್ಯವೋ ಅಷ್ಟರ ಮಟ್ಟಿಗೆ ಅನುಷ್ಠಾನಗೊಳಿಸಬೇಕು

5 ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೋರಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 63 ರಾರಾಅ 93
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 24-4-1993

ವಿಷಯ ಮುಖ್ಯಮಂತ್ರಿಗಳು ಮಂತ್ರಿಗಳು ರಾಜ್ಯ ಮಂತ್ರಿಗಳು ಪ್ರವಾಸದಲ್ಲಿದ್ದಾಗ ವಿಹಿತಾಚಾರಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆಗಳು

ದಿನಾಂಕ 18-5-1982 ರಂದು ಹೊರಡಿಸಲಾದ ಸರ್ಕಾರಿ ಸುತ್ತೋಲೆ ಸಂಖ್ಯೆ ಸಿಆಸುಇ ಎಎಆರ್ 82ರಲ್ಲಿ, ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳು ಪ್ರವಾಸದಲ್ಲಿರಬೇಕಾದರೆ ಯಾವ ವಿಧವಾಗಿ ಸೌಜನ್ಯವನ್ನು ತೋರಿಸಬೇಕು ಮತ್ತು ವಿಹಿತಾಚಾರಗಳನ್ನು ಅನುಸರಿಸಬೇಕೆಂಬ ಬಗ್ಗೆ ಸ್ವಯಂ ವೇದಿತವಾದ ಸೂಚನೆಗಳನ್ನು ನೀಡಲಾಗಿದ್ದಿತು ಸದರಿ ಸುತ್ತೋಲೆಯ

ಪ್ರತಿಯನ್ನು ಇದರೊಂದಿಗೆ ಶೀಘ್ರ ಮಾಹಿತಿಗಾಗಿ ಲಗತ್ತಿಸಲಾಗಿದೆ

ಎಲ್ಲಾ ವಿಭಾಗಾಧಿಕಾರಿಗಳೂ, ಇಲಾಖಾ ಮುಖ್ಯಸ್ಥರೂ, ಜಿಲ್ಲಾಧಿಕಾರಿಗಳೂ, ಪೊಲೀಸ್ ಸೂಪರಿಟೆಂಡೆಂಟ್‌ಗಳು ಮತ್ತು ಅವರ ಅಧೀನದಲ್ಲಿರುವ ಅಧಿಕಾರಿಗಳೂ ದಿನಾಂಕ 18–5–1982ರ ಸುತ್ತೋಲೆಯಲ್ಲಿರುವ ಸೌಜನ್ಯ ಸೂಚನೆಗಳನ್ನು ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳು ಪ್ರವಾಸದಲ್ಲಿದ್ದಾಗ, ಚಾಚೂ ತಪ್ಪದೆ ಅನುಸರಿಸುವಂತೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 2 ರಾರಾಅ 93
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 16–4–1993

ವಿಷಯ ಸ್ಥಳೀಯ ಶಾಸಕರನ್ನು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ ಹಾಗೂ ಅವರುಗಳಿಗೆ ತೋರಿಸಬೇಕಾದ ಗೌರವ ಮತ್ತು ಸೌಜನ್ಯತೆಯ ಬಗ್ಗೆ

ಉಲ್ಲೇಖ 1 ದಿನಾಂಕ 19–5–75ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 4 ಪಿಎಲ್‌ಎಕ್ಸ್ 75

2 ದಿನಾಂಕ 25–8–77ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 17 ಪಿಎಲ್‌ಎಕ್ಸ್ 77

3 ದಿನಾಂಕ 29–3–78ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 31 ಪಿಎಲ್‌ಎಕ್ಸ್ 78

4 ದಿನಾಂಕ 21–6–79ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 53 ಪಿಎಲ್‌ಎಕ್ಸ್ 79

5 ದಿನಾಂಕ 8-2-85ರ ಸರ್ಕಾರದ ಆದೇಶದ ಸಂಖ್ಯೆ ಸಿಆಸುಇ 110 ಪಿಎಲ್‌ಎಕ್ಸ್ 74

6 ದಿನಾಂಕ 6-12-76ರ ಸುತ್ತೋಲೆ ಸಂಖ್ಯೆ ಸಿಆಸುಇ 113 ಪಿಎಲ್‌ಎಕ್ಸ್ 85

7 ದಿನಾಂಕ 23-9-86ರ ಸುತ್ತೋಲೆ ಸಂಖ್ಯೆ ಸಿಆಸುಇ 115 ಪಿಎಲ್‌ಎಕ್ಸ್ 86

8 ದಿನಾಂಕ 25-3-87ರ ಸುತ್ತೋಲೆ ಸಂಖ್ಯೆ ಸಿಆಸುಇ 44 ಪಿಎಲ್‌ಎಕ್ಸ್ 86

9 ದಿನಾಂಕ 21-6-90ರ ಸುತ್ತೋಲೆ ಸಂಖ್ಯೆ ಸಿಆಸುಇ 23ರಾಕಾವ್ಯ 90

10 ದಿನಾಂಕ 20-7-91ರ ಸುತ್ತೋಲೆ ಸಂಖ್ಯೆ ಸಿಆಸುಇ 35 ರಾಕಾವ್ಯ 91

11 ದಿನಾಂಕ 8-1-92ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 18 ರಾರಾಅ 91

12 ದಿನಾಂಕ 23-4-92ರ ಸುತ್ತೋಲೆ ಸಂಖ್ಯೆ ಸಿಆಸುಇ 8 ರಾರಾಅ 92

13 ದಿನಾಂಕ 15-1-93ರ ಸುತ್ತೋಲೆ ಸಂಖ್ಯೆ ಸಿಆಸುಇ 2 ರಾರಾಅ 93

14 ದಿನಾಂಕ 5-1-93ರ ಕೇಂದ್ರ ಸಚಿವ ಸಂಪುಟದ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಸಂಖ್ಯೆ 712192 ಸಿಎಬಿ (11)

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರುಗಳು ಸಾರ್ವಜನಿಕರು ಹಾಗೂ ಆಡಳಿತ ವ್ಯವಸ್ಥೆಯು ನಡುವೆ ಪ್ರಮುಖ

ಕೊಂಡಿಯಾಗಿರುತ್ತಾರೆ ಸರ್ಕಾರದ ವತಿಯಿಂದ ರಾಜ್ಯಮಟ್ಟದಲ್ಲಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಏರ್ಪಡಿಸುವ ರಾಷ್ಟ್ರೀಯ ಹಾಗೂ ಇತರ ಸರ್ಕಾರದ ಸಮಾರಂಭ ಮತ್ತು ಕಾರ್ಯಕ್ರಮಗಳಿಗೆ ಸಂಸತ್ ಸದಸ್ಯರನ್ನು ಹಾಗೂ ಶಾಸಕರನ್ನು ಆಹ್ವಾನಿಸುವಾಗ, ಸರ್ಕಾರದ ಕಛೇರಿಗಳಿಗೆ ಅವರು ಭೇಟಿ ನೀಡಿದಾಗ ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳೊಡನೆ ಹೇಗೆ ವರ್ತಿಸಬೇಕು ಮತ್ತು ಅವರುಗಳನ್ನು ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸಿದಾಗ ಅವರಿಗೆ ಯಾವ ರೀತಿಯ ಆಸನದ ವ್ಯವಸ್ಥೆಯನ್ನು ಮಾಡಬೇಕೆಂಬ ಬಗ್ಗೆ ವಿಸ್ತೃತ ಸೂಚನೆಗಳನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಸರ್ಕಾರವು ನೀಡಿದೆ

ಆದಾಗ್ಯೂ ಸಹ ಸರ್ಕಾರದಿಂದ ಏರ್ಪಡಿಸುವ ಸಮಾರಂಭಗಳಿಗೆ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಸಂಸತ್ ಸದಸ್ಯರನ್ನು ಹಾಗೂ ಸ್ಥಳೀಯ ಶಾಸಕರುಗಳನ್ನು ಆಹ್ವಾನಿಸದೇ ಕಡೆಗಣಿಸಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆ ಹಾಗೂ ಈ ಬಗ್ಗೆ ಸದನದಲ್ಲಿಯೂ ಸಹ ಪ್ರಸ್ತಾಪಿಸಲ್ಪಟ್ಟಿದೆ ಸರ್ಕಾರವು ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ ಸಹ ಶಾಸಕರು ಮತ್ತು ಸಸಂಸತ್ ಸದಸ್ಯರುಗಳಿಗೆ ಗೌರವ ತೋರಿಸುತ್ತಿಲ್ಲವೆಂಬ ವಿಷಯವು ವಿಷಾಯದನೀಯ

ಸರ್ಕಾರದ ಎಲ್ಲಾ ಸೂಚನೆಗಳನ್ನು ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಪ್ಪದೇ ಪಾಲಿಸಬೇಕಾಗುತ್ತದೆ ಆದುದರಿಂದ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ಶಾಸಕರು ತಮ್ಮ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವುದಲ್ಲದೇ, ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಸಮಾರಂಭಗಳು ಮತ್ತು ಇತರ ಸಮಾರಂಭಗಳಿಗೆ ಕಾರ್ಯಕ್ರಮಗಳಿಗೆ ಅವರುಗಳನ್ನು ತಪ್ಪದೇ ಆಹ್ವಾನಿಸಬೇಕೆಂದು ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ ಆ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ಅವರುಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಕೋರಲಾಗಿದ್ದು, ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಈ ಬಗ್ಗೆ ಸಂಸತ್ ಸದಸ್ಯರಿಂದಾಗಲೀ ಅಥವಾ ಶಾಸಕರುಗಳಿಂದಾಗಲೀ ಯಾವುದೇ ದೂರುಗಳು ರಾಜ್ಯ ಸರ್ಕಾರಕ್ಕೆ ಬಂದಲ್ಲಿ, ಅಂತಹವರು ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 2 ರಾರಾಅ 93
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 15-1-1993

ಸುತ್ತೋಲೆ

ವಿಷಯ ಸ್ಥಳೀಯ ಶಾಸಕರನ್ನು ಹಾಗೂ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ

ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯದ ಸಮಾರಂಭಗಳಿಗೆ ಜನತೆಯ ಅಧಿಕೃತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರನ್ನು ಆಹ್ವಾನಿಸುವ ವಿಷಯದಲ್ಲಿ ಈಗಾಗಲೇ ಹಲವಾರು ಬಾರಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ. ಹಾಗೆ ನೀಡಿದ ಸುತ್ತೋಲೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ

ಆದರೂ, ಈ ಹಿಂದೆ ನೀಡಿರುವ ಸೂಚನೆಗಳನ್ನು ಅನುಸರಿಸದೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಸದಸ್ಯರ ನಡುವೆ ತಾರತಮ್ಯ ಮಾಡಲಾಗುತ್ತಿದೆ ಎಂಬ ದೂರು ಸರ್ಕಾರಕ್ಕೆ ಆಗಾಗ್ಗೆ ಬರುತ್ತಲೇ ಇದೆ

ಈ ರೀತಿ ತಾರತಮ್ಯಕ್ಕೆ ಯಾವ ರೀತಿಯಲ್ಲೂ ಅವಕಾಶ ಮಾಡದೆ, ಸರ್ಕಾರದ ವತಿಯಿಂದ ಏರ್ಪಡಿಸುವ ಸಭೆ ಮತ್ತು ಸಮಾರಂಭಗಳಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ವ್ಯವಸ್ಥೆಯನ್ನು ಈ ಹಿಂದೆ ಹೊರಡಿಸಿರುವ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಯಂತೆ ತಪ್ಪದೆ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಮತ್ತೊಮ್ಮೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 8 ರಾರಾಅ 92
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 23-4-1992

ಸುತ್ತೋಲೆ

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ

ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯದ ಸಮಾರಂಭಗಳಿಗೆ ಜನತೆಯ ಅಧಿಕೃತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಆಹ್ವಾನಿಸುವ ಬಗ್ಗೆ ಸವಿಸ್ತಾರವಾದ ಸೂಚನೆಗಳನ್ನು ಸಂಖ್ಯೆ ಸಿಆಸುಇ 18 ರಾರಾಅ 91, ದಿನಾಂಕ 8-1-1992ರ ಅಧಿಕೃತ ಜ್ಞಾಪನದಲ್ಲಿ ನೀಡಿದೆ

ಆದರೂ, ಆಹ್ವಾನಪತ್ರಿಕೆಗಳನ್ನು ಕಳುಹಿಸುವಾಗ ವಿಧಾನಸಭೆಯ ಮತ್ತು ವಿಧಾನ ಪರತ್ತಿನ ಸದಸ್ಯರ ನಡುವೆ ತಾರತಮ್ಯ ತೋರಿಸಲಾಗುತ್ತಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆ

ಪ್ರಸ್ತುತ ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರ ನಡುವೆ ಅಂತಸ್ತಿನ ತಾರತಮ್ಯವಿಲ್ಲದ ಪ್ರಯುಕ್ತ ಅವರ ನಡುವೆ ಭೇದಭಾವ ಮಾಡುವುದು ಸರಿಯಾಗುವುದಿಲ್ಲ ಆದ್ದರಿಂದ, ಇನ್ನು ಮುಂದೆ ಇಂತಹ ಭೇದಭಾವಗಳಿಗೆ ಅವಕಾಶ ಮಾಡದೆ ದಿನಾಂಕ 8-1-1992ರ ಅಧಿಕೃತ ಜ್ಞಾಪನದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ- ಮತ್ತೊಮ್ಮೆ ಸೂಚಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 18 ರಾರಾಅ 91
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 8-1-1992

ಅಧಿಕೃತ ಜ್ಞಾಪನಾ ಪತ್ರ

ವಿಷಯ ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ - ನಿರ್ದೇಶನ

ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳು ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನತೆಯ ಅಧಿಕೃತ ಪ್ರತಿನಿಧಿಗಳಿಂದಲೆ ಅತೀ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ

ಸರ್ಕಾರದ ವತಿಯಿಂದ ಜಿಲ್ಲೆಗಳಲ್ಲಿ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯ ಸಮಾರಂಭಗಳಿಗೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುತ್ತಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ

ಇನ್ನು ಮುಂದೆ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಲು ಜವಾಬ್ದಾರರಾದ ಎಲ್ಲಾ ಇಲಾಖಾ ಮುಖ್ಯಸ್ಥರುಗು ಮತ್ತು ಜಿಲ್ಲಾಧಿಕಾರಿಗಳು, ಸಂಸತ್ತಿನ ಎಲ್ಲಾ ಸದಸ್ಯರು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಬಗ್ಗೆ ಸೂಕ್ತ ವ್ಯವಇಸ್ಥೆ ಮಾಡತಕ್ಕದ್ದು ಮತ್ತು ಈ ನಿಟ್ಟಿನಲ್ಲಿ ತಪ್ಪು ತಿಳುವಳಿಕೆಗೆ ಅನಪೇಕ್ಷಿತ ಘಟನೆಗಳಿಗೆ ಅವಕಾಶ ಕಲ್ಪಿಸದಿರಲು ಕೋರಿದೆ ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟಂತೆ ಹಿರಿಯ ಅಧಿಕಾರಿಯನ್ನು ಗೊತ್ತುಪಡಿಸಿ ಅವರ ಮುಖಾಂತರ ಸಂಸತ್ ಸದಸ್ಯರು ಮತ್ತು ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನಪತ್ರಿಕೆಯನ್ನು ಖುದ್ದಾಗಿ ತಲುಪಿಸುವ ಬಗ್ಗೆ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡುವುದು ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಸಂದರ್ಭಗಳಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ

ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ತಿನ ಸದಸ್ಯರನ್ನು ಮತ್ತು ರಾಜ್ಯ ವಿಧಾನಸಭಾ ವಿಧಾನ ಪರಿಷತ್ತಿನ ಸದಸ್ಯರನ್ನು ಸಬೆಯ ಸಮಾರಂಭ ಕಾರ್ಯಕ್ರಮಗಳಿಗೆ ಆಹ್ವಾನಿಸಲು ಮತ್ತೊಮ್ಮೆ ಕೋರಿದೆ

ಈ ವಿಷಯದ ಬಗ್ಗೆ ಈಗಾಗಲೇ ಹೊರಡಿಸಿರುವ ಸುತ್ತೋಲೆ ಸಂಖ್ಯೆ ಸಿಅಸುಇ 35 ರಾಕಾವ್ಯ 91, ದಿನಾಂಕ 20–7–91ರತ್ತ ಗಮನ ಸೆಳೆದಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 35 ರಾಕಾವ್ಯ 91
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 20–7–1991

ಸುತ್ತೋಲೆ

ವಿಷಯ ಸಂಸತ್ ಸದಸ್ಯರುಗಳಿಗೆ, ಶಾಸಕರುಗಳಿಗೆ ಅಧಿಕಾರಿಗಳು ತೋರಿಸಬೇಕಾದ ಗೌರವ ಮತ್ತು ಸೌಜನ್ಯತೆಯ ಬಗ್ಗೆ

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರುಗಳು, ಶಾಸಕರುಗಳ ಸ್ಥಾನ ಬಹಳ ಪ್ರಾಮುಖ್ಯವಾದುದು ಅವರು ಜನತೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರಿ ಕಛೇರಿಗಳಿಗೆ ಬೇಟಿ ನೀಡಿದಾಗ ಅಧಿಕಾರಿಗಳು ಅವರೊಂದಿಗೆ ಜವಾಬ್ದಾರಿಯಾಗಿ ಕ್ರಿಯಾಶೀಲತೆ, ಕರ್ತವ್ಯ ಪ್ರಜ್ಞೆ ಗೌರವ ಮತ್ತು ಸೌಜನ್ಯಗಳಿಂದ ವರ್ತಿಸಿ, ಸರ್ಕಾರಿ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಮೂಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಯತ್ನಿಸುವ ಬಗ್ಗೆ ಸವಿಸ್ತಾರವಾದ ಮಾರ್ಗದರ್ಶನವನ್ನು ಈಗಾಗಲೇ ಅಧಿಕೃತ ಜ್ಞಾಪನ ಜಿಎಡಿ 4 ಪಿಎಲ್‌ಎಕ್ಸ್ 75, ದಿನಾಂಕ 19–5–1975, ಸಂಖ್ಯೆ ಡಿಪಿಎಆರ್ 17 ಪಿಎಲ್‌ಎಕ್ಸ್ 77, ದಿನಾಂಕ 25–8–77 ಮತ್ತು ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 31, ಪಿಎಲ್‌ಎಕ್ಸ್ 78, ದಿನಾಂಕ 29–2–78ಗಳಲ್ಲಿ ನೀಡಿರುವುದನ್ನು ಮುಂದೆಯೂ ತಪ್ಪದೇ ಪರಿಪಾಲಿಸಲು ಈ ಮೂಲಕ ಪುನರುಚ್ಚರಿಸಿದೆ ಮತ್ತ ಅವುಗಳ ಪ್ರತಿಗಳನ್ನು ಸಹ ಇದರೊಂದಿಗೆ ಲಗತ್ತಿಸಲಾಗಿದೆ ಈ ವಿಷಯದಲ್ಲಿ ಯಾವುದೇ ಲೋಪದೋಷಗಳಿಗೆ ಅವಕಾಶ ಕಲ್ಪಿಸದೆ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ

ಅನುಷ್ಠಾನಕ್ಕೆ ತರಲು ಮೇಲ್ಕಾಣಿಸಿದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲರಿಗೂ ಪುನರುಚ್ಚರಿಸಿ ಮನವರಿಕೆ ಮಾಡಲು ಕೋರಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 23 ರಾಕಾವ್ಯ 90
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 21-6-1990

ಸುತ್ತೋಲೆ

ವಿಷಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ – ಶಾಸಕರು ಮತ್ತು ಸಂಸತ್ ಸದಸ್ಯರುಗಳ ಆಸನ ವ್ಯವಸ್ಥೆ – ಗೌರವದಿಂದ ಕಂಡು ವಿಳಂಬ ಮಾಡದೆ ಕೆಲಸ ಮಾಡಿಕೊಡುವ ಬಗ್ಗೆ ಸೂಚನೆಗಳು

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ (1) ಜಿಎಡಿ 4 ಪಿಎಲ್‌ಎಕ್ಸ್ 75 ದಿನಾಂಕ 19-5-1975, (2) ಪಿಎಲ್‌ಎಕ್ಸ್ 77 ದಿನಾಂಕ 25-8-1977, (3) ಡಿಪಿಎಆರ್ 53 ಎಎಆರ್ 79 ದಿನಾಂಕ 21-6-1979, (4) ಸರ್ಕಾರಿ ಆಜ್ಞೆ ಡಿಪಿಎಆರ್ 119 ಪಿಎಲ್‌ಎಕ್ಸ್ 84 ದಿನಾಂಕ 8-2-1985, (5) ಸುತ್ತೋಲೆ ಸಂಖ್ಯೆ ಡಿಪಿಎಆರ್ 113 ಎಎಆರ್ 85 ದಿನಾಂಕ 6-12-1985, (6) ಸುತ್ತೋಲೆ ಸಂಕ್ಯೆ ಡಿಪಿಎಆರ್ 115 ಪಿಎಲ್‌ಎಕ್ಸ್ 86 ದಿನಾಂಕ 23-9-1986 ಹಾಗೂ (7) ಸುತ್ತೋಲೆ ಸಂಖ್ಯೆ ಡಿಪಿಎಆರ್ 44 ಪಿಎಲ್‌ಎಕ್ಸ್ 87 ದನಾಂಕ 25-3-1987 (ಆದೇಶಗಳ ಪ್ರತಿ ಲಗತ್ತಿಸಿದೆ) ಈ ಆದೇಶಗಳಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ನೌಕರರು ಸಂಸತ್ತಿನ ಸದಸ್ಯರು, ಶಾಸಕರು ಹಾಗೂ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸರ್ಕಾರಿ ಕಛೇರಿಗಳಿಗೆ ಭೇಟಿ ಇತ್ತಾಗ ಅವರೊಡನೆ ಸೌಜನ್ಯದಿಂದ ವರ್ತಿಸುವ ಬಗ್ಗೆ ಮತ್ತು ಅವರಿಗೆ ಗೌರವ ನೀಡುವ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಹಾಗೂ ಈ ಗಣ್ಯರನ್ನು ಸರ್ಕಾರದ ಇಲಾಖೆಗಳು ಏರ್ಪಡಿಸುವ ಸಾರ್ವಜನಿಕ ಸಮಾರಂಭಗಳಿಗೆ ಆಹ್ವಾನಿಸುವಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಕೂಡ ನಿರ್ದೇಶನ ನೀಡಲಾಗಿದೆ

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ನಡೆಯುವಾಗ ಜಿಲ್ಲಾಧಿಕಾರಿಗಳು ಸಭಾಂಗಣದ ಮೇಲಿನ ಕುರ್ಚಿಯಲ್ಲಿ ಆಸೀನರಾಗಿ ಶಾಸಕರು ಸಂಸತ್ ಸದಸ್ಯರುಗಳನ್ನು ಕೆಳಗೆ ಕೂಡಿಸುವ ವ್ಯವಸ್ಥೆಯಿದೆಯೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ ಇದು ಸರಿಯಾದ ವ್ಯವಸ್ಥೆಯಲ್ಲ ಆದ್ದರಿಂದ ಇನ್ನು ಮುಂದೆ, ಜಿಲ್ಲಾಧಿಕಾರಿಗಳೂ ಸಹ ಶಾಸಕರು ಸಂಸತ್ ಸದಸ್ಯರುಗಳ ಜೊತೆಯಲ್ಲಿಯೇ ಕುಳಿತುಕೊಂಡು ಸಭೆ ನಡೆಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ನಿರ್ದೇಶಿಸಲಾಗಿದೆ

ಜಿಲ್ಲಾಧಿಕಾರಿಗಳಿಗೆ, ಅವರ ಕಚೇರಿ, ತಾಲ್ಲೂಕು ಕಛೇರಿ ಹಾಗೂ ಉಪ ವಿಭಾಗಾಧಿಕಾರಿಗಳ ಕಛೇರಿಗಳಲ್ಲಿನ ನೌಕರರು ಅಧಿಕಾರಿಗಳಿಗೆ, ಶಾಸಕರು ಹಾಗೂ ಸಂಸತ್ ಸದಸ್ಯರುಗಳನ್ನು ಗೌರವದಿಂದ ಕಾಣುವುದರ ಜೊತೆಗೆ ಅವರ ಕೆಲಸಗಳನ್ನು ವಿಳಂಬ ಮಾಡದೆ ಜರೂರಾಗಿ ಮಾಡಿಕೊಡುವಂತೆ ತಿಳುವಳಿಕೆ ನೀಡಲು ಸಹ ನಿರ್ದೇಶಿಸಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಸಿಆಸುಇ 44 ಪಿಎಲ್‌ಎಕ್ಸ್ 87
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 25ನೇ ಮಾರ್ಚ್ 1987

ಸುತ್ತೋಲೆ

ವಿಷಯ ಸಂಸತ್ ಸದಸ್ಯರುಗಳಿಗೆ ಶಾಸಕರುಗಳಿಗೆ ಅದಿಕಾರಿಗಳು ತೋರಿಸುವ ಸೌಜನ್ಯದ ಬಗ್ಗೆ ಮತ್ತು ಸರ್ಕಾರದ ಎಲ್ಲಾ ಸಮಾರಂಭಗಳಿಗೆ ಸಂಸತ್ ಸದಸ್ಯರುಗಳನ್ನು ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ – ಸೂಚನೆಗಳು

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ (1) ಜಿಎಡಿ 4 ಪಿಎಲ್‌ಎಕ್ಸ್ 5 ದಿನಾಂಕ 19–5–197, (2) ಡಿಪಿಎಆರ್ 17 ಪಿಎಲ್‌ಎಕ್ಸ್ 77 ದಿನಾಂ 25–8–1977, (3) ಡಿಪಿಆರ್ 53 ಎಎಆರ್ 79 ದಿನಾಂಕ 21–6–1979, (4) ಸರ್ಕಾರಿ ಆಜ್ಞೆ ಡಿಪಿಎಆರ್ 119 ಪಿಎಲ್‌ಎಕ್ಸ್ 84 ದಿನಾಂಕ 6–12–1985, (5) ಸುತ್ತೋಲೆ ಸಂಖ್ಯೆ ಡಿಪಿಎಆರ್ 113 ಎಎಆರ್ 85 ದಿನಾಂಕ 6–

12-1985, ಹಾಗೂ (6) ಸುತ್ತೋಲೆ ಸಂಖ್ಯೆ ಡಿಪಿಎಆರ್ 115 ಪಿಎಲ್ಎಕ್ಸ್ 86 ದಿನಾಂಕ 23-9-1986 (ಆದೇಶಗಲ ಪ್ರತಿ ಲಗತ್ತಿಸಿದೆ) ಈ ಆದೇಶಗಳಲ್ಲಿ ಸರ್ಕಾರದ ಅಗಿಕಾರಿಗಳು ಮತ್ತು ನೌಕರರು ಸಂಸತ್ತಿನ ಸದಸ್ಯರು, ಹಾಗೂ ಶಾಸಕರು ಸರ್ಕಾರಿ ಕಚೇರಿಗಳಿಗೆ ಭೇಟಿ ಇತ್ತಾಗ ಅವರೊಡನೆ ಸೌಜನ್ಯದಂದ ವರ್ತಿಸುವ ಬಗ್ಗೆ ಮತ್ತು ಅವರಿಗೆ ಗೌರವ ನೀಡುವ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಹಾಗೂ ಈ ಗಣ್ಯರನ್ನು ಸರ್ಕಾರದ ಇಲಾಖೆಗಳು ಏರ್ಪಡಿಸುವ ಸಾರ್ವಜನಿಕ ಸಮಾರಂಭಗಳಿಗೆ ಆಹ್ವಾನಿಸುವಲ್ಲಿಅನುಸರಿಸಬೇಕಾದ ವಿಧಾನಗಳ ಬಗ್ಗೆ ಕೂಡ ನಿರ್ದೇಶನ ನೀಡಲಾಗಿದೆ

ಆದರೆ ಇತ್ತೀಚಿಗೆ ರಾಜ್ಯದ ಹಿರಿಯ ಅಧಿಕಾರಿಗಳು ಅಂದರೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ಸೂಪರಿಂಟೆಂಡ್‌ಗಳು ತಮ್ಮ ಕಛೇರಿಗಳಿಗೆ ಶಾಸಕರು ಹಾಗೂ ಸಂಸತ್ ಸದಸ್ಯರು ಭೇಟಿ ನೀಡಿದಾಗ ಅವರನ್ನು ಗೌರವಪೂರ್ಣವಾಗಿ ಕಾಣುತ್ತಿಲ್ಲ ಮತ್ತು ಸೌಜನ್ಯವನ್ನು ತೋರಿಸುತ್ತಿಲ್ಲವೆಂಬ ಅಂಶವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ ಮುಖ್ಯಮಂತ್ರಿಗಳು ಈ ವಿಷಯವನ್ನು ತೀವ್ರವಾಗಿ ಪರಿಗಣಿಸಿದ್ದಾರೆ

ಆದ್ದರಿಂದ, ಸರ್ಕಾರದ ಅಧಿಕಾರಿಗಳು, ಸಂಸತ್ ಸದಸ್ಯರಾಗಲೀ, ಶಾಸಕರಾಗಲೀ, ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಾಗಲೀ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿದಾಗ ಅವರನ್ನು ಗೌರವದಿಂದ ಕಾಣಬೇಕಾಗಿ ಈ ಮೂಲಕ ತಿಳಿಸಲಾಗಿದೆ ತಪ್ಪಿದಲ್ಲಿ ಶಿಸ್ತಿನ ಕ್ರಮ ಕೈಗೊಳಳ್ಳಲಾಗುವುದು

ಕರ್ನಾಟಕ ಸರ್ಕಾರದ

ಸಂಖ್ಯೆ ಸಿಆಸುಇ 115 ಪಿಎಲ್ಎಕ್ಸ್ 86
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ ಸೆಪ್ಟೆಂಬರ್ 23, 1986

ಸುತ್ತೋಲೆ

ವಿಷಯ ಸರ್ಕಾರದ ಮತ್ತು ಸಂಸತ್ ಹಾಗೂ ರಾಜ್ಯದ ಶಾಸಕಾಂಗ ಸದಸ್ಯರ ನಡುವಿನ ಅಧಿಕೃತ ಕಲಾಪಗಳು ಸಾರ್ವಜನಿಕ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ - ಸೂಚನೆಗಳು

ಉಲ್ಲೇಖ 1 ಅಧಿಕೃತ ಜ್ಞಾಪನ ಜೆಎಡಿ 4 ಪಿಎಲ್‌ಎಕ್ಸ್ 75 ದಿನಾಂಕ 19-5-1975

2 ಅಧಿಕೃತ ಜ್ಞಾಪನ ಡಿಪಿಎಆರ್ 17 ಪಿಎಲ್‌ಎಕ್ಸ್ 77 ದಿನಾಂಕ 25-8-1977

3 ಸರ್ಕಾರಿ ಆಜ್ಞೆ ಡಿಪಿಎಆರ್ 119 ಪಿಎಲ್‌ಎಕ್ಸ್ 84 ದಿನಾಂಕ 8-2-1985

4 ಸುತ್ತೋಲೆ ಸಂಖ್ಯೆ ಡಿಪಿಎಆರ್ 113 ಎಎಆರ್ 85 ದಿನಾಂಕ 6-12-85

ಸರ್ಕಾರದ ಇಲಾಖೆಗಳು ಏರ್ಪಡಿಸುವ ಸಾರ್ವಜನಿಕ ಸಮಾರಂಭಗಳಿಗೆ ಸ್ಥಳೀಯ ಕ್ಷೇತ್ರದ ಸದಸ್ಯರುಗಳು ಹಾಗೂ ಶಾಸಕಾಂಗದ ಸದಸ್ಯರನ್ನು ಆಹ್ವಾನಿಸುವ ಬಗ್ಗೆ ನಿರ್ದೇಶನಗಳನ್ನು ಉಲ್ಲೇಖ (1) ರಲ್ಲಿನ ಅಧಿಕೃತ ಜ್ಞಾಪನದಲ್ಲಿ ನೀಡಲಾಗಿದೆ ಅಲ್ಲದೆ, ಅವರ ಪೀಠಾಸನ ವ್ಯವಸ್ಥೆಯನ್ನು ಕ್ರಮಾಂಕ ಜೆಎಡಿ 4 ಪಿಎಲ್‌ಎಕ್ಸ್ 75 ದಿನಾಂಕ 19-5-75ರ ಅಧಿಕೃತ ಜ್ಞಾಪನ ಕಂಡಿಕೆ 5ರ ಅನುಸಾರವಾಗಿ ಮಾಡಬೇಕೆಂದು ನಿರ್ದೇಶಿಸಲಾಗಿದೆ ಕ್ರಮಾಂಕ ಡಿಪಿಎಆರ್ 119 ಪಿಎಲ್‌ಎಕ್ಸ್ 84 ದಿನಾಂಕ 8-2-85ರ ಆದೇಶದಲ್ಲಿ ಸರ್ಕಾರದ ಅಥವಾ ಸಾರ್ವಜನಿಕ ಸಮಾರಂಭಗಳನ್ನು ನಡೆಸುವಲ್ಲಿ, ಸ್ಥಳೀಯ ಪ್ರಜಾ ಪ್ರತಿನಿಧಿಗಳಿಗೆ ಯಾವ ರೀತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೂಡ ನಿರ್ದೇಶಗಳನ್ನು ನೀಡಲಾಗಿದೆ ಹಾಗೂ ಕ್ರಮಾಂಕ ಡಿಪಿಎಆರ್ 113 ಎಎಆರ್ 85 ದಿನಾಂಕ 6-12-85ರ ಸುತ್ತೋಲೆಯಲ್ಲಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಾಸಕರೇ ಆದಿಯಾಗಿ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮೀಕ್ಷಣಾ ಸಮಿತಿಗಳ ಸಭೆಗಳಿಗೆ, ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟ ಸಮೀಕ್ಷಣಾ ಸಭೆಗಳನ್ನು ಇವರು ನಡೆಸಬಹುದೆಂದು ಸ್ಪಷ್ಟೀಕರಿಸಲಾಗಿದೆ

ಅದಾಗ್ಯೂ, ಇತ್ತೀಚೆಗೆ ಸ್ಥಳೀಯ ವಿಧಾನಸಭಾ ಸದಸ್ಯರೊಬ್ಬರನ್ನು ಅವರ ಚುನಾವಣಾ ಕ್ಷೇತ್ರದಲ್ಲಿ ನಡೆದ ಸಾರ್ವಜನಿಕ ಸಮಾರಂಭಕ್ಕೆ ಸಕಾಲದಲ್ಲಿ ಆಹ್ವಾನಿಸಲಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಅದುದರಂ, ಪ್ರಜಾ ಪ್ರತಿನಿಧಿಗಳನ್ನು ಮೇಲೆ ಹೇಳಿದ ಸಮಾರಂಭಗಳಿಗೆ ಆಹ್ವಾನಿಸುವ ಸಂದರ್ಭದಲ್ಲಿ ಈವರೆವಿಗೂ ಹೊರಡಿಸಿದ ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹೇಳುತ್ತಾ, ಆಹ್ವಾನ ಪತ್ರಿಕೆಗಳನ್ನು ಸಾಕಷ್ಟು ಮುಂಚಿತವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಿ ಹೇಳಲಾಗಿದೆ ಹಾಗೂ ಇನ್ನು ಮುಂದೆ ಇಂತಹ ದೂರುಗಳು ಬರದಂತೆ ಜಾಗ್ರತೆ ವಹಿಸಬೇಕೆಂದು ವಿನಂತಿಸಲಾಗಿದೆ

ಕರ್ನಾಟಕ ಸರ್ಕಾರದ

ಸಂಖ್ಯೆ ಡಿಪಿಎಆರ್ 113 ಎಎಆರ್ 85
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 6-12-1985

ಸುತ್ತೋಲೆ

ವಿಷಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮೀಕ್ಷಣಾ ಸಭೆಗಳು

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಾಜ್ಯ ಸರ್ಕಾರದ ನಾನು ಇಲಾಖೆಗ ಅಭಿವೃದ್ಧಿ ಮತ್ತು ಇತರ ಕಾರ್ಯಕ್ರಮಗಳ ಸಮೀಕ್ಷಾ ಸಭೆಗಳನ್ನು ಶಾಸಕರೇ ಆದಿಯಾಗಿ ಖಾಸಗಿ ಪ್ರಮುಖರುಗಳು ಅಧ್ಯಕ್ಷತೆಯಲ್ಲಿ ನಡೆಸಬಹುದೇ ಎಂಬುವ ಪ್ರಶ್ನೆ ಉದ್ಭವಿಸಿದೆ ಈ ವಿಚಾರದಲ್ಲಿ ಸರ್ಕಾರದ ದಿನಾಂಕ 29-11-1985 ರಂದು ಟೆಲಿಪ್ರಿಂಟರ್ ಮುಖಾಂತರ ಕಳುಹಿಸಲಾದ ಆದೇಶವನ್ನು ಕೆಳಕಂಡಂತೆ ವಿಶದೀಕರಿಸಿದೆ

ಅ) ಕ್ರಮ ಸಂಖ್ಯೆ ಪಿಡಿ 209 ಪಿಎಂಎಂ 80, ದಿನಾಂಕ 23-4-80ರಂದು ಹೊರಡಿಸಿರುವ ಸರ್ಕಾರಿ ಆದೇಶ ಮತ್ತು ಇದೇ ರೀತಿಯ ಇತರೆ ಆದೇಶಗಳಲ್ಲಿ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು

ನೇಮಕ ಮಾಡಲಾಗಿದೆ ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟ ಸಮೀಕ್ಷಣಾ ಸಭೆಗಳನ್ನು ಇವರು ನಡೆಸಬಹುದು

ಆ) ಮೇಲೆ (ಅ) ದಲ್ಲಿ ಸೂಚಿಸಿರುವಂತಹ ಪ್ರಸಂಗಗಳ ಹೊರತು ಶಾಸಕರೇ ಆಗಲಿ ಇತರೆ ಖಾಸಗಿ ಪ್ರಮುಖರೇ ಆಗಲಿ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವ ಹಾಗಿಲ್ಲ ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ

ಈ ಸ್ಪಷ್ಟನೆಯನ್ನು ತಮ್ಮ ಆಡಳಿತಾಧೀನದಲ್ಲಿರುವ ಎಲ್ಲಾ ಅಧಿಕಾರಿಗಳ ಗಮನ ಮತ್ತು ಅನುಸರಣೆಗೆ ಕೂಡಲೇ ತರಬೇಕೆಂದು ಸರ್ಕಾರ ಈ ಮೂಲಕ ಆದೇಶಿಸುತ್ತದೆ

ಕರ್ನಾಟಕ ಸರ್ಕಾರದ ವ್ಯವಹರಣೆಗಳು

ವಿಷಯ ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳ ನಡುವಣ ಸರ್ಕಾರ ವ್ಯವಹಾರಗಳು – ಸರ್ಕಾರಿ ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವುದು – ಸೂಚನೆಗಳು ಕುರಿತು

ಪ್ರಸ್ತಾವನೆ

ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 17 ಪಿಎಲ್‌ಎಕ್ಸ್ 77 ದಿನಾಂಕ 25–8–77ರಲ್ಲಿ ಸಂಸತ್ತಿನ ಎಲ್ಲ ಸ್ಥಳೀಯ ಸದಸ್ಯರುಗಳಿಗೆ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಸಲುವಾಗಿ ಸರ್ಕಾರಿ ಸಮಾರಂಭ, ಸರ್ಕಾರಿ ಇಲಾಖೆಗಳು ಏರ್ಪಡಿಸುವ ಸಮಾರಂಭಗಳನ್ನು, ಏರ್ಪಡಿಸಲು ಜವಾಬ್ದಾರರಾದ ಎಲ್ಲ ಇಲಾಖಾ ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಅಲ್ಲದೆ, ಸದರಿ ಅಧಿಕೃತ ಜ್ಞಾಪನ ಪತ್ರದಲ್ಲಿ, ಅಜ್ಞಾ ಸಂ ಜಿಎಡಿ 4 ಪಿಎಲ್ ಎಕ್ಸ್ 75, ದಿನಾಂಕ 19–5–1975ನೇ ಪ್ಯಾರಾಕ್ಕನುಸಾರವಾಗಿ ಆಸನ ವ್ಯವಸ್ಥೆಗಳನ್ನು ಮಾಡಬೇಕೆಂದು ಸೂಚನೆಗಳನ್ನು ನೀಡಲಾಗಿದೆ ಈ ವಿಷಯವನ್ನು 29–9–1982ರಂದು ದೊಡ್ಡಹಳ್ಳಿಯಲ್ಲಿ ಸಂಭವಿಸಿದ ಪೊಲೀಸ್ ಗೋಲಿಬಾರ್ ಪ್ರಕರಣಕ್ಕೆ

ಸಂಬಂಧಿಸಿರುವಂತೆ ವಿಚಾರಣಾ ಆಯೋಗದ ವರದಿಯಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ ಅಷ್ಟೇ ಅಲ್ಲದೆ, ಸರ್ಕಾರಿ ಆದೇಶ ಸಂಕ್ಯೆ ಹೆಚ್‌ಡಿ 93 ಪಿಸಿಇ 83, ದಿನಾಂಕ 15-3-1984ರಲ್ಲಿ, ಇತರ ವಿಷಯಗಳ ಜನತೆ ಸ್ಥಳೀಯ ಜನತೆಯ ಪ್ರತಿನಿಧಿಗಳು, ವಿಚಾರಣಾ ಆಯೋಗವು ಶಿಫಾರಸು ಮಾಡಿರುವ ಪ್ರಕಾರ, ಸರ್ಕಾರಿ ನಡವಳಿಯಲ್ಲಿ ಅಥವಾ ಸರ್ಕಾರಿ ಸಮಾರಂಭಗಳಲ್ಲಿ ಯಾವ ರೀತಿ ಪಾಲ್ಗೊಳ್ಳಬೇಕೆಂಬುದನ್ನು ವಿವರಿಸುವ ಮತ್ತು ನಿರ್ದೇಶಿಸುವ ಸ್ಪಷ್ಟವಾದ ಸರ್ಕಾರಿ ಆದೇಶವೊಂದನ್ನು ಹೊರಡಿಸುವಂತೆ ನಿರ್ದೇಶನ ನೀಡಲಾಗಿದೆ

ಆದೇಶ ಸಂಖ್ಯೆ ಡಿಪಿಎಆರ್ 119 ಪಿಎಲ್‌ಎಕ್ಸ್, 84

ಬೆಂಗಳೂರು, ದಿನಾಂಕ 8ನೇ ಫೆಬ್ರವರಿ 1985

ಅದಕ್ಕನುಸಾರವಾಗಿ ಈ ಮುಂದಿನ ಆದೇಶಗಳನ್ನು ಹೊರಡಿಸಲಾಗಿದೆ

1 ಸರ್ಕಾರಿ ಇಲಾಕೆಯು ಏರ್ಪಡಿಸುವಂತಹ ಸರ್ಕಾರಿ ಸಮಾರಂಭಗಳಲ್ಲಿ ಚುನಾಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳನ್ನು ತಪ್ಪದೆ ಆಹ್ವಾನಿಸಬೇಕು

2 ಅ ಜ್ಞಾಸಂ ಜಿಎಡಿ 4 ಪಿಎಲ್‌ಎಕ್ಸ್ 75, ದಿನಾಂಕ 19ನೇ ಮೇ 1975ರಲ್ಲಿ ತಿಳಿಸಿರುವಂತೆ ಅವರೆಲ್ಲರಿಗೂ ಆಸನ ವ್ಯವಸ್ಥೆಗಳನ್ನು ಮಾಡಬೇಕು

3 ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನು ಆಧರಿಸಿ, ಮಂತ್ರಿ ರಾಜ್ಯ ಮಂತ್ರಿ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ ಅಧ್ಯಕ್ಷರು ಮುಖ್ಯ ಅತಿದಿ ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಹಾಕಿಸಬೇಕು

ಈ ಸೂಚನೆಗಳನ್ನು ಎಲ್ಲ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕು

Government of Karnataka

No DPAR 55 AAR 82
Karnataka Government Secretariat,
Vidhana Soudha,
Bangalore, date 18th May 1982

Sub Tours of Chief Minister / Ministers / Ministers of State – Instructions to officers

Ref 1 Circular No GAD 89 OOM 68 dated 17-08-1968

2 Circular No GAD 23 MMR 72 dated 09-05-1972

3 Circular No GAD 69 MMR 72 dated 27-09-1972

4 Circular No GAD 10 MMR 74 dated 18-02-1974

5 Circular No GAD 47 MMR 75 dated 10-07-1975

Government have isued detailed instruction from time to time regarding the courtesies to be shown by Government Officers the tours of Ministers and Ministers of State It is considered desirable to consolidate all these instructions and issue them in a single circular to facilitate reference nd adherence to these instructions in day to day working accordingly, in supersession of the (circulars) referred to above, the following self-contained instructions

are issued

1 (a) Whenever any Minister visits any place in a District, the District Officer (s) of the Department (s) comprised in the portfolio of the Minister should receive him on arrival and see him off at the time of his departure In the unavoidable absence of the District Office, the next senior most officer should be present If desired by the Minister, these officers should accompany him during his tour within their jurisdiction

(b) The Divisional Commissioner, Deputy Commissioner and the Superintendent of Police will call on the Minister if they are in Headquarters Unless specifically desired by the Minister, they should not accompany him during his tour It is also not necessary for them to make a Special trip to the place of visit or in case of visit to Headquarters, break camp and return specially to Head quarters to receive the Ministers Hoever, when intimation is received of a Minister's visit to Head quarters well in advance, the Divisional Comisioner, Deputy Commissioner, Superintendent of Police should so arrange their tour programme as to be avaqilable, if posible, at Headquarters at the time of the minister's visit, these instructions will apply equally to the subordinate Revenue Officers like the Assistant Commissioners and the Tahasildars The Superintendent of Police will, however, make the usual security arrangemetns on such occassions

c) The Heads of Department and District Heads are instructed not to take with them junior officers whenever they accompany the Minister

(d) While on tour in the districts Ministers and inisters of State may required information about various matters from district officers Whenever officers are called upon to furnish information pertaining to their departments by the Ministers and Ministers of State, they should do so promptly

(e) It will be the duty of the Officer (s) of the Department comprised in the portfolio of the Minister to assist him and the officer travelling with him on Government duty to procure accommodation, supply of food and other reasonable necessities on payment, Bills for supply should be presented for payment immediately and not delayed

(f) To ensure economy in the use of Government vehicles, the District Officers of the Departments comprised in the porfolio of the Minister are instructed to regulate the use of their Departmentaly vehicle s by mutual consultation and arrangement to the minimum extent possible Depending upon the capacity of the vehicle, as far as possible, four to five offiers belonging to the different departments should travel in one vehicle

(g) Copies of tour programmes of the Minister should be communicated in time to the concerned offiers by the Deputy Commissioners so as to enable the officers to call on the Ministers

2 In respect of tours of the Chief Minister, it is considered necessary that the Deputy Commissioners of districts and the Superintendents of Police should invariably meet hime at the border of their districts as and when he

passes through the districts irrespective of the fact whether he breaks his journey or not in the distric, to keep him appraised of the latest information about the district Accordingly, they are directed to do so

3 When Ministers undetake tours on the eve of the Elections, Government Officers while they should make the usual arrangemetns to enable the Ministers to carry on their responsibilities as Ministers should not themselves organise any Election Meetings, nor be present during such meetings except when their duties enjoin them to be present in order to maintain law and order or to make security arrangements

4 NO gruard of honour by the Reserve or other Police should be arranged in honour of Ministers or Ministers of State when they are on tour Erection of pendals, green buntings and offering a garlands should be avoioded Tea, lunch on or dinner parties should not be got up by the officers on such occasions

5 The Divisional Commissioners and Deputy Commissioners are requested to ensure that these instructions are strictly adhered to

M K VENKATESHAN
Addional Chief Secretary to Government

ಕರ್ನಾಟಕ ಸರ್ಕಾರ

ಸಂಖ್ಯೆ ಡಿಪಿಎಆರ್ 53 ಎಎಆರ್ 79
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 21ನೇ ಜೂನ್ 1979

ಅಧಿಕೃತ ಜ್ಞಾಪನ ಪತ್ರ

ವಿಷಯ ಶಾಸಕರುಗಳು, ಸಚಿವರ ಆಪ್ತ ಕಾರ್ಯದರ್ಶಿ ಮತ್ತು ಆಪ್ತ ಸಹಾಯಕರುಗಳಿಗೆ ಸೂಚನೆಗಳು

ಶಾಸಕರುಗಳು ಸಚಿವರುಗಳ ಕಛೇರಿಗಳಿಗೆ ಭೇಟಿ ಕೊಟ್ಟಾಗ, ಅಲ್ಲಿನ ಸಚಿವರುಗಳ ಆಪ್ತ ಕಾರ್ಯದರ್ಶಿ ಮತ್ತು ಆಪ್ತ ಸಹಾಯಕರುಗಳು ಅವರಿಗೆ ಸೌಜನ್ಯತೆ ತೋರಿಸದೆ ಮತ್ತು ಅವರಿಗೆ ಕೂರಲು ಕುರ್ಚಿಗಳನ್ನು ಸಹ ಕೊಡದೇ ಇದ್ದುದರ ಬಗೆಗೆ ಕೆಲವು ವಿಧಾನ ಸಭಾ ಸದಸ್ಯರುಗಳು ಇತ್ತೀಚೆಗೆ ಸರ್ಕಾರಕ್ಕೆ ದೂರು ಸಲ್ಲಿಸಿದ್ದಾರೆ

2 ಸಚಿವರುಗಳನ್ನು ನೋಡಲು ಬರುವ ಸಂದರ್ಶನಕರುಗಳಿಗೆ ಮತ್ತು ಅದರಲ್ಲೂ ಸಂಸತ್ ಮತ್ತು ವಿಧಾನ ಮಂಡಲದ ಸದಸ್ಯರುಗಳಿಗೆ ತೋರಬೇಕಾದ ಸೌಜನ್ಯತೆಯ ಬಗ್ಗೆ ಈ ಹಿಂದೆ ಸೂಚನೆಗಳನ್ನು ನೀಡಲಾಗಿದೆ ಮತ್ತು ಈ ಸೂಚನೆಗಳನ್ನು ಮೇಲಿಂದ ಮೇಲೆ ಕಾಲಕಾಲಕ್ಕೆ ನೀಡಲಾಗಿದೆ ಆದಾಗ್ಯೂ ಸಚಿವರನ್ನು ನೋಡಲು ಬರುವ ಸಂಸತ್, ವಿಧಾನ ಮಂಡಲದ ಸದಸ್ಯರುಗಳು ಮತ್ತು ಇತರ ವ್ಯಕ್ತಿಗಳನ್ನು ಸರಿಯಾಗಿ ಉಪಚರಿಸದಿರುವ ಬಗ್ಗೆ ಈಗಲೂ ದೂರುಗಳು ಬರುತ್ತಿರುವುದು ವಿಷಾದನೀಯ ಸಂಗತಿಯಾಗಿದೆ

3 ಸಂದರ್ಶಕರನ್ನು ಎಲ್ಲ ರೀತಿಯ ಗೌರವದಿಂದ ಸ್ವಾಗತಿಸಬೇಕು ಮತ್ತು ಅವರಿಗೆ ಆಸನಗಳನ್ನು ನೀಡಿ ಕೂರಿಸುವುದಕ್ಕೆ ಅಲ್ಲದೆ ಅವರ ಆಗಮನವನ್ನು ಸಚಿವರುಗಳ ಗಮನಕ್ಕೆ ತರಬೇಕು ಮತ್ತು ಸಚಿವರುಗಳ ಇತರ ಕಾರ್ಯಕಲಾಪಗಳ ಗೊತ್ತುಪಾಡುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಸಾಧ್ಯವಾದ,ಷ್ಟು ಬೇಗನೆ ಸಂದರ್ಶನದ ಏರ್ಪಾಡು ಮಾಡಬೇಕು ಇನ್ನು ಮುಂದೆ ಈ ತರಹ ದೂರುಗಳು ಬರದಂತೆ ನೋಡಿಕೊಳ್ಳುವಂತೆ ಸಚಿವರುಗಳ ಆಪ್ತ ಕಾರ್ಯದರ್ಶಿ ಮತ್ತು

ಆಪ್ತ ಸಹಾಯಕರುಗಳನ್ನು ವಿನಂತಿಸಲಾಗಿದೆ ಈ ಬಗ್ಗೆ ಯಾವುದೇ ದೂರುಗಳು ಬಂದರೆ ತೀವ್ರ ಕ್ರಮವನ್ನು ಕೈಗೊಳ್ಳಲಾಗುವುದು

Government of Karnataka

No DPAR 31 PLX 78
Karnataka Government Secretariat,
Vidhana Soudha,
Bangalore, date 29th March 1978

Official Memorandum

Sub Official dealings between the Administration and Members of Parliament and state Legislatures – Observance of proper procedure

Ref 1 O M No GAD 4 PLX 75 dated 19-05-75 (copy enclosed)

2 O M DPAR 17 PLX 77 dated 25-8-77, (copy enclosed)

It has been brought to the notice of Government that some of the officers of the State Government are not extending adequate courtesy and consideration to Members of Parliament and of the State Legislature as well as the other representatives of the people

1 Attention is invited to the intructions and guide-

lines issued in O M No GAD 4 PLX 75 dated 19-5-1975 The Secretaries to Government and Heads of Departments are requested to issue ncessary instruction to all subordinate officers coming under their adinistrative control to ensure that these instructions are strictly adhered to and that no room is given for any complaint regarding abasence of decorum or courtesy in their behaviour with the elected representatives

ಕರ್ನಾಟಕ ಸರ್ಕಾರ

ಸಂಖ್ಯೆ ಡಿಪಿಎಆರ್ 17 ಎಎಆರ್ 77
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 25ನೇ ಆಗಸ್ಟ್ 1977

ಸರ್ಕಾರಿ ಜ್ಞಾಪನ ಪತ್ರ

ವಿಷಯ ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳ ನಡುವಣ ಸರ್ಕಾರಿ ವ್ಯವಹಾರಗಳು ಸರ್ಕಾರಿ ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಬಗೆಗಿನ ಸೂಚನೆಗಳನ್ನು ಕುರಿತು

ಉಲ್ಲೇಖ ಅ ಜ್ಞಾಸಂ ಜಿಎಡಿ 4 ಪಿಎಲ್‌ಎಕ್ಸ್ 75, ದಿನಾಂಕ 19-5-1975

ಸರ್ಕಾರಿ ಇಲಾಖೆಗಳು ಏರ್ಪಡಿಸುವ ಸರ್ಕಾರಿ ಸಮಾರಂಭಗಳಿಗೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುತ್ತಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆತರಲಾಗಿದೆ

ಅಂಥ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಲು ಜವಾಬ್ದಾರರಾದ ಎಲ್ಲಾ ಇಲಾಖಾ ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಎಲ್ಲ ಸದಸ್ಯರು ಮತ್ತು

ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಪ್ರದೆ ಕಳುಹಿಸುವುದಾಗಿ ಖಚಿತಪಡಿಸಬೇಕು ಆಸನ ವ್ಯವಸ್ಥೆಗಳು ಮುಂತಾದವುಗಳನ್ನು ಸರ್ಕಾರಿ ಜ್ಞಾಪನಪತ್ರ ಸಂಕ್ಯೆ ಜಿಎಡಿ 4 ಪಿಎಲ್‌ಎಕ್ಸ್ 75, ದಿನಾಂಕ 19–5–75ರ (ಪ್ರತಿಯನ್ನು ಲಗತ್ತಿಸಿದೆ) 5ನೇ ಪ್ಯಾರಾದಲ್ಲಿಯ ಸೂಚನೆಗಳಿಗನುಸಾರವಾಗಿ ಮಾಡಬೇಕು

ಈ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಕಾ ಮುಖ್ಯಸ್ಥರನ್ನು ತಮ್ಮ ಆಡಳಿತ ನಿಯಂತ್ರಣದಲ್ಲಿರುವ ಸಂಬಂಧಪಟ್ಟ ಎಲ್ಲಾ ಅಧೀನ ಕಚೇರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ವಿನಂತಿಸಿಕೊಳ್ಳಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ ಜಿಎಜಿ 4 ಪಿಎಲ್‌ಎಕ್ಸ್ 75
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 19ನೇ ಮೇ 1975,

ಸರ್ಕಾರಿ ಜ್ಞಾಪನ ಪತ್ರ

ವಿಷಯ ಆಡಳಿತ ವರ್ಗ ಮತ್ತು ಸಂಸತ್ ಹಾಗೂ ವಿಧಾನ ಮಂಡಲಗಳ ನಡುವಣ ಸರ್ಕಾರಿ ವ್ಯವಹಾರಗಳು ಸೂಕ್ತ ಕಾರ್ಯ ವಿಧಾನದ ಪಾಲನೆ – ಸೂಚನೆಗಳು ಕುರಿತು

ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳು ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿನಿಧಿಗಳಾಗಿ ಅತೀ ಮಹತ್ವದ ಸ್ಥಾನವನ್ನು ಪಡೆದಿದ್ದಾರೆಂದು ತಿಳಿಸಲು ಈ ಕೆಳಗೆ ಸಹಿ ಮಾಡಿರುವವರಿಗೆ ನಿರ್ದೇಶನ ದೊರೆತಿದೆ ಸಂವಿಧಾನದ ಮೇರೆಗೆ ಅವರು ನಿರ್ವಹಿಸಬೇಕಾದ ಮಹತ್ವದ ಕರ್ತವ್ಯಗಳಿಗೆ ಮತ್ತು ತಮ್ಮ ಸಂಸದೀಯ ಹಾಗೂ ಸಂಬಂಧಪಟ್ಟ ಸಾರ್ವಜನಿಕ ಕರ್ತವ್ಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಇಲಾಖೆಗಳಿಂದ ಮಾಹಿತಿ ಕೋರುವುದು ಅಥವಾ ಅವರ ಪರ್ಯಾಲೋಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುವುದು ಅಧಿಕಾರಿಗಳ ಸಂದರ್ಶನಗಳಿಗಾಗಿ ಕೋರುವುದು ಅವಶ್ಯವೆಂದು ಅವರಿಗೆ ಸಂದರ್ಭಕ್ಕನುಸಾರವಾಗಿ ಕಂಡುಬರಬಹುದು ಇದಕ್ಕೆ

ಸಂಬಂಧಿಸಿದಂತೆ ಸಂಸತ್ ಹಾಗೂ ವಿಧಾನ ಮಂಡಲಗಳ ಸದಸ್ಯರುಗಳು ಮತ್ತು ಸರ್ಕಾರಿ ನೌಕರರ ನಡುವಣ ಸಂಬಂಧಗಳನ್ನು ಕ್ರಮಪಡಿಸಲು ಯುಕ್ತವಾಗಿ ಪರಿಗಣಿಸಿದ ತತ್ವಗಳು ಮತ್ತು ನಡವಳಿಗಳನ್ನು ಈಗಾಗಲೇ ರಚಿಸಲಾಗಿದೆ

ಅದಾಗ್ಯೂ, ಸ್ಥಿತಿಗತಿಗಳನ್ನು ಪರಿಶೀಲಿಸಿದ ತರುವಾಯ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರು ಮತ್ತು ಸರ್ಕಾರ ನೌಕರರ ನಡುವಣ ಸಂಬಂಧಗಳನ್ನು ಕ್ರಮಪಡಿಸುವಂಥ ತತ್ವಗಳು ಮತ್ತು ಪದ್ಧತಿಗಳನ್ನು ಸ್ವಲ್ಪಮಟ್ಟಿಗೆ ವಿವರವಾಗಿ ಮೇಲಿಂದ ಮೇಲೆ ಸ್ಪಷ್ಟವಾಗುವಂತೆ ತಿಳಿಸುವುದು ಅಗತ್ಯವೆಂದು ಭಾವಿಸಲಾಗಿದೆ ಈ ಕುರಿತ ಸೂಚನೆಗಳು ಮುಂದಿನ ಪ್ಯಾರಾಗಳಲ್ಲಿವೆ

1 ಗಮನದಲ್ಲಿಡಬೇಕಾದ 2 ಮೂಲಭೂತ ತತ್ವಗಳು ಎಂದರೆ (1) ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರ ಬಗ್ಗೆ ಸರ್ಕಾರಿ ನೌಕರರು ಸೌಜನ್ಯದಿಂದ ಹಾಗೂ ಗೌರವದಿಂದ ವರ್ತಿಸಬೇಕು ಮತ್ತು (2) ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳು ಏನು ಹೇಳಬಹುದು ಎಂಬುದನ್ನು ಎಚ್ಚರಿಕೆಯಿಂದ ಪರ್ಯಾಲೋಚಿಸಿ ಅಥವಾ ತಾಳ್ಮೆಯಿಂದ ಆಲಿಸಿ ಅವರು ಯಾವಾಗಲೂ ತಮ್ಮ ಸ್ವಂತ ವಿವೇಚನಾನುಸಾರವಾಗಿ ವರ್ತಿಸಬೇಕು

2 ಸಂಸತ್ ಹಾಗೂ ವಿಧಾನ ಮಂಡಲದ ಸದಸ್ಯರುಗಳು ಸಂವಿಧಾನದ ಮೇರೆಗೆ ತಮ್ಮ ಪ್ರಮುಖ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಾಧ್ಯವಾದ ಎಲ್ಲ ನೆರವನ್ನು ನೀಡುವುದು ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಬೇಕು ಅದಾಗ್ಯೂ, ಒಬ್ಬ ಸದಸ್ಯನ ಕೋರಿಕೆ ಅಥವಾ ಸಲಹೆಗಳನ್ನು ಒಪ್ಪಿಕೊಳ್ಳಲು ಒಬ್ಬ ಅಧಿಕಾರಿಗೆ ಸಾಧ್ಯವಾಗದೆ ಇರುವಂಥ ಸಂದರ್ಭಗಳಲ್ಲಿ ಆ ರೀತಿ ಮಾಡಲು ಸಾಧ್ಯವಾಗದಿರುವಂಥ ಅಧಿಕಾರಿಯ ಅಸಹಾಯಕತೆಯ ಕಾರಣಗಳನ್ನು ಆ ಸದಸ್ಯರಿಗೆ ಸೌಜನ್ಯದಿಂದ ವಿವರಿಸಬೇಕು

3 ಅನೇಕ ಅಧಿಕಾರಿಗಳು ಅತಿ ಮಹತ್ತರವಾದ ಸಾರ್ವಜನಿಕ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಹೊಂದಿರುವುದು ಮನವರಿಕೆಯಾಗಲಿದೆ ಮತ್ತು ಅವರು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಸ್ವಲ್ಪ ಎಚ್ಚರಿಕೆಯಿಂದ ತಮ್ಮ ದೈನಂದಿನ ಕಾರ್ಯದ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳಲು ಮತ್ತು ಯೋಜನೆಗಳಿಗನುಸಾರವಾಗಿ ನಡೆಯಲು ಅವರಿಗೆ ಅನುಮತಿ ನೀಡಬೇಕು ಅಧಿಕಾರಿಗೆ ಕೆಲವು ಗಂಟೆಗಳ

ಕಾಲ ವಿಶ್ರಾಂತಿಯ ಅಗತ್ಯವಿರುವುದರಿಂದ ಅವರು ಅಸೌಜನ್ಯತೆ, ಅವಿಚಾರ ಇವೇ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಂದರ್ಶಕರನ್ನು ಸಂದರ್ಶಿಸಲು ನಿರಾಕರಿಸಬಹುದು ಅದಾಗ್ಯೂ ಅವನನ್ನು ಯಾರಾದರೂ ಸಂದರ್ಶಿಸಲು ಬರಬಹುದಾದ್ದರಿಂದ ಪ್ರತಿದಿನ ಅವನು ಕೆಲವು ಗಂಟೆಗಳ ಕಾಲವನ್ನು ಅದಕ್ಕಾಗಿಯೇ ಮೀಸಲಿಡಬೇಕು ಮತ್ತು ಆ ಸಮಯಗಳಲ್ಲಿ ಮತ್ತು ಸಂದರ್ಶಕರನ್ನು ಅವನು ಭೇಟಿಯಾಗುವ ಕಚೇರಿಯ ಇತರ ಸಮಯಗಳಲ್ಲಿ ಮುಂಚಿತವಾಗಿಯೇ ಸಂದರ್ಶನ ಸಮಯವನ್ನು ಗೊತ್ತುಪಡಿಸಿಕೊಂಡು ಬಂಧಂಧ ಸಂದರ್ಶಕರನ್ನು ಮತ್ತು ಮುಂಚಿತವಾಗಿಯೇ ಸಮಯವನ್ನು ಗೊತ್ತುಪಡಿಸಿಕೊಳ್ಳದೆ ಸಂಸತ್ ಅಥವಾ ವಿಧಾನ ಮಂಡಲದ ಸದಸ್ಯರನ್ನು ಹೊರತುಪಡಿಸಿ, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಅವನು ಆದ್ಯತೆಯನ್ನು ನೀಡಬೇಕು ಅಂಥ ಸಂದರ್ಭದಲ್ಲಿ ಮುಂಚಿತವಾಗಿಯೇ ಸಂದರ್ಶನ ಸಮಯವನ್ನು ಗೊತ್ತುಪಡಿಸಿಕೊಂಡು ಬಂದ ಸಂದರ್ಶಕರನ್ನು ಭೇಟಿಯಾದ ಕೂಡಲೇ ಸಂಸತ್ ಸದಸ್ಯ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಸಂದರ್ಶಿಸಬೇಕು ಸಂಸತ್ ಸದಸ್ಯ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯರೊಂದಿಗೆ ಅಥವಾ ವಾಸ್ತವವಾಗಿ ಇತರ ಯಾರೇ ವ್ಯಕ್ತಿಗಳೊಂದಿಗೆ ಮಾಡಿಕೊಂಡಿದ್ದ ಸಂದರ್ಶನ ವ್ಯವಸ್ಥೆ ಯಾವುದೇ ಅನಾನುಕೂಲತೆಯಿಂದಾಗಿ ತಪ್ಪಿಹೋದಲ್ಲಿ ಅವರೊಂದಿಗೆ ಸಮಾಲೋಚಿಸಿ ಹೊಸದಾಗಿ ಸಂದರ್ಶನ ಸಮಯವನ್ನು ನಿಗದಿಪಡಿಸಬೇಕು

4 ಸಂಸತ್ ಸದಸ್ಯ ಅಥವಾ ರಾಜ್ಯ ವಿಧಾನ ಮಂಡಲ ಸದಸ್ಯರು ಅಧಿಕಾರಿಯನ್ನು ನೋಡಲು ಬಂದಾಗ ಅವರನ್ನು ಸ್ವಾಗತಿಸಲು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲಬೇಕು ಅಧಿಕಾರಿಗಳ ಸಣ್ಣಪುಟ್ಟ ಚಲನವಲನಗಳಿಗೂ ಸಾಂಕೇತಿಕ ಮೌಲ್ಯವಿರುತ್ತದೆ ಆದ್ದರಿಂದ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳೊಂದಿಗೆ ಅವರು ವ್ಯವಹರಿಸುವಾಗ ಸೂಕ್ಷ್ಮವಿವರಗಳನ್ನು ಸಮರ್ಪಕವಾಗಿ ಹಾಗೂ ಸೌಜನ್ಯದಿಂದ ತಿಳಿಸಬೇಕು

5 ಹಾಗೆಯೇ ಸರ್ಕಾರಿ ಸಮಾರಂಭಗಳ ಆಸನ ವ್ಯವಸ್ಥೆಯನ್ನು ಎಲ್ಲಾ ಸಮಯದಲ್ಲೂ ತುಂಬಾ ಎಚ್ಚರಿಕೆಯಿಂದ ಮಾಡಬೇಕು ಮತ್ತು ಈ ನಿಟ್ಟಿನಲ್ಲಿ ಯಾವುದೇ ತಪ್ಪು ತಿಳಿವಳಿಕೆಗೆ ಅವಕಾಶವಿಲ್ಲವೆಂದು ಖಚಿತಪಡಿಸಬೇಕು ಸಂಸತ್ ಸದಸ್ಯರ ಸ್ಥಾನಮಾನವನ್ನು ಅಧ್ಯಕ್ಷರಿಂದ ಅನುಮೋದಿತವಾದ ಅಧ್ಯಕ್ಷರ ವಾರಂಟಿನಲ್ಲಿಯೇ ಸ್ಪಷ್ಟವಾಗಿ ಸೂಚಿಸಲಾಗಿದೆ ಅನುಚ್ಛೇದ 80ರಲ್ಲಿರುವಂತೆ ಸಂಸತ್ ಸದಸ್ಯರು ಪೂರ್ಣ ಪ್ರಮಾಣದ ಸಾಮಾನ್ಯ ದರ್ಜೆಯ ಅಧಿಕಾರಿಗಳು

ಅಥವಾ ಭಾರತ ಸರ್ಕಾರದ ಕಾರ್ಯದರ್ಶಿಗಳು ಮೊದಲಾದವರು ಸಮವಾಗಿ ಪರಿಗಣಿಸಲ್ಪಡುತ್ತಾರೆ ರಾಜ್ಯದ ಪ್ರಮುಖ ಸಭೆಗಳಲ್ಲಿ ಪಾಲ್ಗೊಳ್ಳಲು ಸಂಸತ್ ಸದಸ್ಯರನ್ನು ಆಹ್ವಾನಿಸಿದಾಗ ಅಧ್ಯಕ್ರ ವಾರಂಟಿನ ಜೊತೆಗೆ ಅನುಬಂಧಿಸಲ್ಪಟ್ಟ ಸೂಚನೆಗಳಲ್ಲಿ ರಾಜ್ಯಪಾಲರು, ಮುಖ್ಯ ನ್ಯಾಯಾಧೀಶರು, ಲೋಕಸಭೆಯ ಸಭಾಧ್ಯಕ್ಷರು, ರಾಯಭಾರಿ ಮೊದಲಾದವರ ನಂತರವೇ ಅವರಿಗೆ ಆಸನಗಳನ್ನು ಕಾದಿರಿಸತಕ್ಕದ್ದು ಎಂದು ತಿಳಿಸಲಾಗಿದೆ ಆ ಸೂಚನೆಗಳಲ್ಲಿರುವ ಮತ್ತೊಂದು ಉಪಬಂಧವೆಂದರೆ ಸರ್ಕಾರಿ ಸಮಾರಂಭಗಳಿಗಾಗಿ ಆಮಂತ್ರಿತರಾಗಿ ದೆಹಲಿಯಲ್ಲಿ ತಂಗಿರುವ ರಾಜ್ಯ ವಿಧಾನ ಮಂಡಲಗಳ ಸದಸ್ಯರಿಗೆ, ಸಂಸತ್ ನೀಡುವ ಸ್ಥಾನಮಾನದ ನಂತರದ ಸ್ಥಾನಮಾನವನ್ನು ನೀಡತಕ್ಕದ್ದು ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರಿಗಾಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕದು ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕದ್ದಲ್ಲ ಅರಿಗೆ ಒದಗಿಸಲಾದ ಆಸನಗಳು ಕನಿಷ್ಠ ಪಕ್ಷ ಸರ್ಕಾರಿ ನೌಕರರಿಗಾಗಿ ಇರಿಸಲಾದ ಅನುಕೂಲಕರ ಹಾಗೂ ಎದ್ದು ಕಾಣಿಸುವಂಥ ಆಸನಗಳಿಗೆ ಸಮನಾಗಿರತಕ್ಕದ್ದು

6 ಸಂಸತ್ ಸದಸ್ಯರ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತ ನೀಡತಕ್ಕದ್ದು ಅಂಥ ಎಲ್ಲಾ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಇವುಗಳಿಗೆ ಉತ್ತರಿಸತಕ್ಕದ್ದು ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು ಕೂಡಲೇ ದೊರೆಯುವ ಹಾಗೂ ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಅಥವಾ ಅಂಕಿಅಂಶಗಳನ್ನು ಕೋರಿದಾಗ ಅಧಿಕಾರಿಗಳು ಅಂಥ ವಿವರಗಳನ್ನು ಅವರಿಗೆ ಒದಗಿಸಬೇಕು

7 ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರೊಂದಿಗೆ ಸರ್ಕಾರಿ ನೌಕರರ ಸರ್ಕಾರಿ ವ್ಯವಹಾರಗಳ ಬಗ್ಗೆ ಈ ಹಿಂದಿನ ಪ್ಯಾರಾಗಳಲ್ಲಿ ಹೇಳಿದಂತೆ ಕ್ರಮಬದ್ಧಗೊಳಿಸುವಲ್ಲಿ ಸರ್ಕಾರಿ ನೌಕರರ ಸೇವಾ ಷರತ್ತುಗಳ ವಿಷಯದಲ್ಲಿ ತಮ್ಮ ಸ್ವಂತ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಅವರ ವೈಯಕ್ತಿಕ ಸಾಮರ್ಥ್ಯದಲ್ಲಿ ಅವರಿಂದ ಏನನ್ನು ನಿರೀಕ್ಷಿಸಬಹುದು ಎಂಬ ಅಂಶವನ್ನು ಅವರ ಗಮನಕೆ ತರುವುದು ಅಗತ್ಯವಾಗಿದೆ ಅವರಡನ್ನು ನಿಯಂತ್ರಿಸಿದ ಸಂಬಂಧಪಟ್ಟ ವ್ಯವಹಾರ ನಿಯಮಗಳ ಮೇರೆಗೆ, ಸರ್ಕಾರದಲ್ಲಿನ ತಮ್ಮ ಸೇವೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸರ್ಕಾರಿ ನೌಕರರು ಯಾವುದೇ

ವರಿಷ್ಠಾಧಿಕಾರಿಯ ಮೂಲಕ ಯಾವುದೇ ರಾಜಕೀಯ ಅಥವಾ ಇತರ ಪ್ರಭಾವ ತರುವುದು ಅಥವಾ ಹಾಗೇ ಆ ಪ್ರಭಾವ ತರಲು ಪ್ರಯತ್ನಿಸುವುದನ್ನು ನಿಷೇಧಿಸಲಾಗಿದೆ ಆದುದರಿಂದ ಸರ್ಕಾರಿ ನೌಕರರನ್ನು ತಮ್ಮ ವೈಯಕ್ತಿಕ ವಿಷಯದ ಬಗ್ಗೆ ಸಂಸತ್ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯರ ಸಂಪರ್ಕವನ್ನು ನಿರೀಕ್ಷಿಸಬಹುದು

Government of Karnataka

No DPAR 4PLX 75
Karnataka Government Secretariat,
Vidhana Soudha,
Bangalore, date 29th March 1978

Official Memorandum

Sub Official dealings between the Administration and Members of Parliament and State Legislatures-Observance of proper procedure-instructions-regarding

The undersigned is directed to state that Members of Parliament and State Legislatures occupy in our demoncratic set-up very important place as accredited representatives of the people They hve important functions to perform under the Constitution and they may occasionaly find it necessary to seek information from the Departments of State Government or make suggessions for their consideration or ask for interview with officers connection with their parliamentary and allied public duites IN this connection certain well recognised principles and conventions to govern the relations between Members of Parliament and of State Legislatures and Government servants have already been established

However, on a review of the position it has been considered necessary to reiterate, and to spell out in some detail, the principles and practices that should govern the relations between Members of Parliament and of State Legislatures and Government servants The instructions in this regard are contained in the subsequent paragraphs

1 The two basic principles to be borne in mind (i) that Government servants should show courtesy and consideration to Members of Parliament and of State Legislatures and (ii) that while they should consider carefully or listen patiently to what the Members of Parliament and of State Legislatures may have to say, they should always act according to their own best judgemetn

2 2 It should be the endeavour of every officer to help the Members of Parliament and of State Legislature to the extent possible in the discharge of their important functions under the Constitution In cases however, where an officer is unable to accede to the request or suggestion of a Member, the reasons for this inability to do so should be courteously explained to the Member

3 3 It is realised that many offiers have very heavy public duites and responsibilities and if they are to function effectively they should be permitted to plan out their day's work with some care and adhere to the plan An offier should feel free to set-apart some hour when he can refuse to meet visitors without being considered guilty of discourtey, lack of consideration and the like He should, however, set apart some time every day when any body can see him and, within these hours and also during other of-

fice hours in which he is to meet visitors, he must give priority to Members for Parliament and of State Legislatures execpt when a visitior has come by previous appointment and a Member of Parliament or of State Legislature has come without an appointment In such case he should see the Member of Parliament or of State Legislature immediately after he has met the visitor who had come by previous apointment Any deviation from an appointment made with a Member of Parliament or of a State Legislature – or indeed with any other person – might cause inconvenience and a fresh appointment should be fixed in consultioan with him

4 When a Member of Parliament or of a State Legislautre comes to see him, and officer should rise in his seat to receive the Member and to see him off Small gestures have symbolic value and officers shouls therefore, be meticulously correct and courteous in their dealings with Members of Parliament and of State Legislatures

5 Similary, seating arrangements at Public fucntions should receive very carful attention at all times and it should be ensured that there is no room for any misunderstanding on this score The position of Members of Parliament has bee clearly brought out in the Warrant of Presedence approved by the President Members Parliament appear at Article 30 above officers of the rank of full General or equivalent, Secretaries to the Government of India, etc The instructions ap enbloc to major State functions, the enclosure reserved for them should be next to the Governors, Chief Justice, Speaker of the Lok Sabha, Ambassadors ect A further provision I the instructions in

that the Members of State Legislature who, owing to their presence in Delhi happen to be invited to State functions should be assigned rank just after Members of Parliament To avoid inconvenience to Members of Parliament and of State Legislatures who may come late, the block seats meant for them should be kept reserved till the end of the functions and should not be occupied by other persons even though they may be vacant The seats provided for them should be atleast as comfortable and as prominently placed as those for officials

6 Letters received from Members of Parliament and of State Legislatures should be acknowledge promptly All such letters should receive careful consideration and should be responded to at an appropriate level and expenditiously The officers should furnish to Members of Parliament and of State Legislatures when asked for, such information or statitics relating to matters of local importance as are readily available and are not confidential In doubtful cases instructions should be taken from higher authority before refusing the request

7 While the official dealings of Government servants with Members of Parliament and of State Legislatures have to be regulated as staed in the previous pragraph, it is necessary to invite the attention of Government servants to what is expected of them in their individual capacity in respect of their own grievances in the matter of conditions of service Under the relevant cnduct Rules governing them, Government servants are prohibited from brining or attempting bring any political or other influence to bear upon any superior authority to further thie interest in respect of matters pertaining to their service under the Government Therefore, a Government servant is not ex-

pected to approach a Member of Parliament or of a State Legislature for sponsoring his individual case

ಕುಂದಾಪುರ ರಾಣಾ ವ್ಯಾಪ್ತಿಯ ಕ್ರೈಸ್ತ ಮತಾಂತರದ ಬಗ್ಗೆ

ಕುಂದಾಪುರ ರಾಣಾ ವ್ಯಾಪ್ತಿಯ ಕ್ರೈಸ್ತ ಮತಾಂತರದ ಬಗ್ಗೆ

ಸಂಖ್ಯೆ 52 (178) ಶ್ರೀನಿವಾಸ್ ನಿಗ್ಲಿ (ನಾಮಾಂಕಿತ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 Whether the Government is aware that the Catholic Priest of Katkare Carmel Ashrama and another person of Koteshwara Kundapura were assaulted by some anti social elements when they were on their way to hospital?

2 if so what action the Governmetn has taken to apprehend the culptrits

3 How many were arrested on wht changes they were booked

4) What action government is taking to protect the peace loving minority community seminary people whose contribution to the society in the form of Education, health sector and social services are praiseworthy

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು

1) ದಿನಾಂಕ 25–06–2007 ರಂದು 13–10 ಗಂಟೆಗೆ ಕುಂದಾಪುರ ರಾಣಾಧಿಕಾರಿಯವರಿಗೆ ಬಂದ ಫಿರ್ಯಾದಿಯಂತೆ ಅದೇ ದಿನ ಬೆಳಿಗ್ಗೆ 9–

30 ಗಂಟೆಗೆ ಕ್ಯಾಥೋಲಿಕ್ ಗುರು ಸಿಲ್ವೆಸ್ಟಾರ್ (36), ಕಾಟಕೆರೆ, ಕಾರ್ಮೆಲ್ ಆಶ್ರಮ, ಕುಂದಾಪುರ ರವರು ಕೋಟೇಶ್ವರದ ಸರ್ಜನ್ ಆಸ್ಪತ್ರೆಯಲ್ಲಿರುವಾಗ ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸಿರುತ್ತಾರೆಂಬ ಕಾರಣದಿಂದ 4 ಮಂದಿ ಸಾಧಾರಣ ಹಾಗೂ ಗಂಭೀರ ಗಾಯವಾಗುವಂತೆ ಹಲ್ಲೆ ನಡೆಸಿರುತ್ತಾರೆ ಈ ಬಗ್ಗೆ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಅಪರಾಧ ಕ್ರಸಂ 216/2007 ಕಲಂ 323, 325, 506 ಜೊತೆಗೆ 34 ಐಪಿಸಿಯಂತೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ ಕೆಳಗಿನ 4 ಜನವರು ಅಪಾದಿತರಾಗಿರುತ್ತಾರೆ

(1) ರಾಮಣ್ಣಸೆಟ್ಟಿ (43) ತಂದೆ ದಿ ತಿಮ್ಮನ್ನಸೆಟ್ಟಿ, ವಾಸ ಅಂಕದಕಟ್ಟೆ, ಕುಂದಾಪುರ

(2) ರಾಜು (26) ತಂದೆ ನಾರಾಯಣ ಮೊಗವೀರ, ವಾಸ ಅಂಕದಕಟ್ಟೆ, ಕುಂದಾಪುರ

(3) ಪ್ರಶಾಂತ್ (25) ತಂದೆ ರಾಮ ಮೊಗವೀರ, ವಾಸ ಅಂಕದಕಟ್ಟೆ, ಕುಂದಾಪುರ

(4) ಸುಧಾಕರ (28) ತಂದೆ ರಾಮ ದೇವಾಡಿಗ, ವಾಸ ಅಂಚೆ ಕಛೇರಿ ಹತ್ತಿರ, ಹಂಗ್ಲೂರು ಗ್ರಾಮ, ಹಂಗ್ಲೂರು

2) ಎಲ್ಲಾ 4 ಜನ ಆರೋಪಿತರನ್ನು ದಿನಾಂಕ 26-06-2007 ರಂದು ಬಂಧಿಸಿ ಮಾನ್ಯ ಎ ಸಿ ಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಕುಂದಾಪುರ ರವರ ಮುಂದೆ ಹಾಜರುಪಡಿಸಲಾಗಿದೆ

3) ಈ 4 ಜನ ಆರೋಪಿತರನ್ನು ಬಂಧಿಸಿ ಅವರ ವಿರುದ್ಧ ಸಾದಾ ಮತ್ತ ತೀವ್ರತರದ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ಆರೋಪಿಸಿ ಕಲಂ 323,325, 506 ಜೊತೆಗೆ 34 ಐಪಿಸಿಯಂತೆ ಕ್ರಮ ಕೈಗೊಳ್ಳಲಾಗಿದೆ

4) ಎಲ್ಲಾ ಆರೋಪಿಗಳು ಭಜರಂಗದಳದ ಕಾರ್ಯಕರ್ತರಾಗಿರುತ್ತಾರೆ

5) ಕೋಮುಗಲಭಗೆ ನಡೆದ ಸಂದರ್ಭದಲ್ಲಿ ಶೀಘ್ರಗತಿಯಲ್ಲಿ ಸ್ಪಂದಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಗುತ್ತಿದೆ ಕೋಮುಗಲಭೆಗಳ ಸಂದರ್ಭದಲ್ಲಿ ಪ್ರಕರಣಗಳನ್ನು ದಾಖಲಿಸಿ ತನಿಖೆಯನ್ನು ನಡೆಸಿ ಕಿಡಿಗೇಡಿಗಳ ಮೇಲೆ ಕಟ್ಟುನಿಟ್ಟಿನ

ಕ್ರಮಗಳನ್ನು ಜರುಗಿಸಲಾಗುತ್ತಿದೆ ಮತೀಯ ಗಲಭೆಕೋರರ ಪಟ್ಟಿಯನ್ನು ನಿರ್ವಹಿಸುತ್ತಿದ್ದು ಅವರ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಸೂಕ್ತ ಕಾನೂನು ಪ್ರತಿಬಂಧಕ ಕ್ರಮಗಳನ್ನು ಜರುಗಿಸಾಲಗುತ್ತಿದೆ ಅಂತಹ ವ್ಯಕ್ತಿಗಳ ಮೇಲೆ ಸೂಕ್ಷ್ಮ ನಿಗಾವಹಿಸಲಾಗುತ್ತಿದೆ

ಪ್ರಶ್ನೆ ಸಂಖ್ಯೆ 54 (180) ಶ್ರೀನಿವಾಸ್ ನಿಗ್ಗಿ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕಸ ಹಾಕಲು ಗುರುತಿಸಿರುವ ಜಾಗಗಳು ಯಾವುವು (ಪ್ರದೇಶಾವಾರು ವಿವರವನ್ನು ನೀಡಿ),

ಆ) ಪ್ರತಿದಿನ ಸಂಗ್ರಹವಾಗುವ ಕಸ ಎಷ್ಟು, (ಟನ್‌ವಾರು ವಿವರವನ್ನ ನೀಡಿ),

ಇ) ವಿದ್ಯುತ್ ಸಂಗ್ರಹ ಘಟಕಗಳನ್ನು ಸ್ಥಾಪಿಸುವ ಘಟಕಗಳ ಪೈಕಿ ಪುನರ್ ಉಪಯೋಗ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ,

ಈ) ಹಾಗಿದ್ದಲ್ಲಿ, ಯಾವ ಜಾಗಗಳಲ್ಲಿ ಯಾವ ಘಟಕಗಳು ಸ್ಥಾಪಿತವಾಗಿವೆ,

ಉ) ಇಲ್ಲದಿದ್ದರೆ, ಏಕೆ? ಈ ರೀತಿಯ ಘಟಕಗಳ ಪ್ರಸ್ತಾವನೆ ಅಥವಾ ಯೋಜನೆ ಇದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಮುಖ್ಯಮಂತ್ರಿ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಈ ಕೆಳಕಂಡ ಜಾಗಗಳನ್ನು ಕಸ/ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಗುರುತಿಸಲಾಗಿದೆ

1 ಸರ್ವೆ ನಂ 8, ಮಾವಳ್ಳಿಪುರ, ಹೆಸರಘಟ್ಟ ಹೋಬಳಿ, ಬೆಂಗಳೂರು

2 ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಕೂಡ್ಲು, ಹೊಸೂರು ರಸ್ತೆ, ಬೆಂಗಳೂರು

3 ಸರ್ವೆ ನಂ 155, ಮಂಡೂರು ಗ್ರಾಮ, ಬಿದರಹಳ್ಳಿ ಹೋಬಳಿ ಬೆಂಗಳೂರು (ಇನ್ನೂ ಪ್ರಾರಂಭವಾಗಬೇಕಾಗಿದೆ)

4 ಸರ್ವೆ ನಂ 143ಸ, ಕುಂಬಳಗೋಡು

5 ಸರ್ವೆ ನಂ 77, 44, 23, ಚಿಮ್ಮಸಂದ್ರ ಹಳ್ಳಿ, ಹೊಸಕೋಟೆ ಹೋಬಳಿ, ಬೆಂಗಳೂರು

ಆ) ಸುಮಾರು 3000 ಟನ್‌ಗಳಷ್ಟು ಕಸ/ಘನ ತ್ಯಾಜ್ಯ ಪ್ರತಿ ನಿತ್ಯ ಸಂಗ್ರಹವಾಗುತ್ತದೆ

ಇ) ಹೌದು

ಈ) ಬೆಂಗಳೂರು ತಾಲ್ಲೂಕಿನ ಮಂಡೂರು ಗ್ರಾಮದ, ಬಿದರಹಳ್ಳಿ ಹೋಬಳಿಯ ಸರ್ವೆ ನಂ 155ರ 135 ಎಕರೆ ಪ್ರದೇಶದಲ್ಲಿ ಕಸದ ಪುನರ್ ಬಳಕೆ ಘಟಕದ ನಿರ್ಮಾಣಕ್ಕಾಗಿ ಬಳಸಲಾಗಿದೆ

ಉ) ಉದ್ಭವಿಸುವುದಿಲ್ಲ

ಉಡುಪಿ ಜಿಲ್ಲೆಯಲ್ಲಿ ಅನೈತಿಕ ಚಟುವಟಿಕೆ ಹೊಂದಿದ್ದ ಹೋಟೆಲ್‌ಗಳನ್ನು ಕುರಿತು

ಪ್ರಶ್ನೆ ಸಂಖ್ಯೆ 55(14) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ ಕಳೆದ ಎರಡು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಅನೈತಿಕ ಚಟುವಟಿಕೆ ಹೊಂದಿದ್ದ ಹೋಟೆಲ್‌ಗಳು ಯಾವುವು? ಹೋಟೆಲ್ ಮಾಲೀಕರು ಯಾರು?

ಆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ವರ್ಷ	ವರದಿಯಾದ ಪ್ರಕರಣ	ಹೋಟೆಲ್ ಹೆಸರು	ಮಾಲೀಕರ ಹೆಸರು
2005	1	ಶಶಿಧರ ಲಾಡ್ಜ್, ಕುಂದಾಪುರ	ಶ್ರೀಧರ ಪೂಜಾರಿ
2006	4	1 ಶಶಿಧರಲಾಡ್ಜ್, ಕುಂದಾಪುರ	ಶ್ರೀಧರ ಪೂಜಾರಿ
2 ಅನುಗ್ರಹಲಾಡ್ಜ್,		ಸುಭಾಷ್ ಶೆಟ್ಟಿ ಕುಂದಾಪುರ	
		3 ಪ್ರವಾಸಿ ಲಾಡ್ಜ್ ಕುಂದಾಪುರ	ಆನಂದಶೆಟ್ಟಿ
		4 ಮಾನಸ	
ಬಿ ಎನ್ ಶಂಕರ			
		ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಬ್ರಹ್ಮಾವರ ಅರುಣ)	ಪೂಜಾರಿ (ಹೋಟೆಲ್ ನಡೆಸುತ್ತಿದ್ದವರು
2007 (30–06–07)	3	1 ಶಶಿಧರ ಲಾಡ್ಜ್, ಕುಂದಾಪುರ	ಶ್ರೀಧರ ಪೂಜಾರಿ
		2 ಹೋಟೆಲ್‌ಲ್ಯಾಕ್ ವೀಪ್, ಮಣಿಪಾಲ	ಸಂಜಯ್‌ನಾಯಕ್
		3 ಕಿಂಗ್ಸ್ ಲಾಡ್ಜ್,	ಶಂಕರ ಶೆಟ್ಟಿ ಕಾರ್ಕಳ

ಆ) ಇಂತಹ ಪ್ರಕರಣಗಳು ವರದಿಯಾದಲ್ಲಿ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ ವೇಶ್ಯಾವಾಟಿಕೆ ಬಗ್ಗೆ ಮಾಹಿತಿ ಸಂಗ್ರಹಿಸಿ ಉಡುಪಿ ಜಿಲ್ಲಾ ವ್ಯಾಪ್ತಿಯ ಎಲ್ಲಾ ವಸತಿ ಗೃಹಗಳ ಮೇಲೆ ನಿಗಾ ಇರಿಸಲಾಗುತ್ತಿದೆ

ಪ್ರವಾಸೋದ್ಯಮ ಇಲಾಖೆಯ ಹೋಟೆಲ್ ಉದ್ದಿಮೆದಾರರಿಗೆ ಸಹಾಯಧನ ನೀಡುವ ಬಗ್ಗೆ

ಸಂಖ್ಯೆ 56 (15) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)

ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದ ಹೋಟೆಲ್ ಉದ್ದಿಮೆದಾರರಿಗೆ ಸರ್ಕಾರದಿಂದ ನೀಡುವ ಸಹಾಯಧನ ಎಂದಿನಿಂದ ಬಾಕಿ ಎಷ್ಟು ಇರುತ್ತದೆ

ಆ) ಬಾಕಿಯಿರುವ ಸಹಾಯಧನವನ್ನು ಕೂಡಲೇ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ ಶ್ರೀರಾಮುಲು

ಅ) ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ ಪಡೆದ ಹೋಟಲ್ ಉದ್ದಿಮೆದಾರರಿಗೆ ಸರ್ಕಾರದಿಂದ ನೀಡಬೇಕಾದ ಸಹಾಯಧನ 1-5-2001 ರಿಂದ 188 ಅರ್ಜಿಗಳು ಬಾಕಿ ಇರುತ್ತವೆ ಇವುಗಳಿಗೆ ಅಂದಾಜು ರೂ 27 00 ಕೋಟಿ ರೂಪಾಯಿಗಳು ಅನುದಾನ ಅಗತ್ಯವಿರುತ್ತದೆ

ಆ) ಪ್ರಸ್ತುತ ಸಾಲಿನಲ್ಲಿ ಸಹಾಯಧನ ವಿತರಣೆಗಾಗಿ 6 00 ಕೋಟಿ ರೂಪಾಯಿಗಳ ಅನುದಾನವನ್ನು ಆಯವ್ಯಯದಲ್ಲಿ ಸರ್ಕಾರವು ಒದಗಿಸಿರುತ್ತದೆ ಬಾಕಿ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಅನುದಾನವನ್ನು ಕೋರಲಾಗುತ್ತಿದ್ದು, ಅನುದಾನ ದೊರೆತ ನಂತರ ಸಹಾಯಧನವನ್ನು ಬಿಡುಗಡೆ ಮಾಡಲು ಕ್ರಮ

ಕೈಗೊಳ್ಳಲಾಗುವುದು

ಪ್ರಶ್ನೆ ಸಂಖ್ಯೆ 57 (215) ಶ್ರೀ ಕೃಷ್ಣಪಾಲೇಮಾರ್ ಜೆ (ಸುರತ್ಕಲ್)

ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಲಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಪ್ರವಾಸೋದ್ಯಮ ನೀತಿಗಳನ್ನು ಘೋಷಿಸಲಾಗಿದೆ ಪ್ರಸಕ್ತ ನೂತನ ಪ್ರವಾಸೋದ್ಯಮ ನೀತಿಯಲ್ಲಿ ಅಳವಡಿಸಲಾಗಿರುವ ವಿಶೇಷಗಳೇನು,

ಆ) ನೀತಿ ಘೋಷಣೆಯನ್ನು ಜಾರಿಗೆ ರುವಲ್ಲಿ ಯೋಜಿತ ಹಾಗೂ ದೂರದೃಷ್ಟಿಯುಳ್ಳ ಕ್ರಿಯಾ ಯೋಜನೆಯನ್ನು ರೂಪಿಸಗೆ ಇರುವುದರಿಂದ ಅನುಷ್ಠಾನಗೊಳ್ಳುವಲ್ಲಿನ ಅವ್ಯವಸ್ಥೆಯನ್ನು ಸರ್ಕಾರ ಗಮನಿಸಿದೆಯೇ,

ಇ) ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚಿನ ಪ್ರವಾಸೋದ್ಯಮದ ಅವಕಾಶವಿದ್ದರೂ ಈ ತನಕವೂ ನಿರೀಕ್ಷಿತ ರೀತಿಯಲ್ಲಿ ಅಭಿವೃದ್ಧಿ ಪಡಿಸದೆ ಇರಲು ಕಾರಣಗಳೇನು,

ಈ) ಗೋವಾ ರಾಜ್ಯ ಮಾದರಿಯಲ್ಲಿ ಈ ಜಿಲ್ಲೆಗಳಲ್ಲಿ ಪ್ರವಾಸೋದ್ಯಮವನ್ನು ಬಲಪಡಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಬಿ ಶ್ರೀರಾಮುಲು

ಅ) ಪ್ರವಾಸೋದ್ಯಮ ಇಲಾಖೆಯು 2002 ರಿಂದ 2007ಕ್ಕೆ ಅನ್ವಯಿಸುವಂತೆ ಪ್ರವಾಸೋದ್ಯಮ ನೀತಿಯನ್ನು ಘೋಷಿಸಲಾಗಿತ್ತು ಸದರಿ ನೀತಿಯ ದಿನಾಂಕ 31-05-2007ಕ್ಕೆ ಮುಕ್ತಾಯಗೊಂಡಿರುತ್ತದೆ

ಪ್ರಸಕ್ತ ನೂತನ ಕರಡು ಪ್ರವಾಸೋದ್ಯಮ ನೀತಿಯು ಪರಿಶೀಲನೆಯಲ್ಲಿದೆ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ ಕೋರಲಾಗಿದ್ದು, ಅಭಿಪ್ರಾಯ

ಕೋರಲಾಗಿದ್ದು, ಅಭಿಪ್ರಾಯ ಬಂದ ನಂತರ ಹೊಸ ನೀತಿಯನ್ನು ಪ್ರಕಟಿಸಲಾಗುವುದು

ಆ) ನೂತನ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸುವ ಬಗ್ಗೆ ಕ್ರಮ ಕೈ ಗೊಳ್ಳಲಾಗುವುದು

ಇ) ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಲಭ್ಯವಿರುವ ಪ್ರವಾಸಿ ತಾಣಗಳನ್ನು ಇಲಾಖೆಗೆ ಒದಗಿಸಲಾಗಿರುವ ಅನುದಾನಕ್ಕೆ ಅನುಗುಣವಾಗಿ ಅಭಿವೃದ್ಧಿ ಪಡಿಸಲಾಗಿದೆ

ಈ) ಕರಾವಳಿ ರಾಜ್ಯಗಳಾದ ಗೋವಾ, ಕರ್ನಾಟಕ ಹಾಗೂ ಕೇರಳಗಳಲ್ಲಿ ಪ್ರವಾಸೋದ್ಯಮ ಬೆಳವಣಇಗೆಗೆ ಇರುವ ನಿಯಮಗಳು ವಿಭಿನ್ನವಾಗಿದೆ ಅಲ್ಲದೆ ಗೋವಾ ರಾಜ್ಯಕ್ಕೆ ಈ ಕಡಲು ತೀರ ನಿಯಮಗಳು ಸಡಲಿಕೆ / ವಿನಾಯಿತಿ ನೀಡಿರುಂತೆ ನಮ್ಮ ಕಡಲು ತೀರಗಳಿಗೆ ವಿನಾಯ್ತಿ ನೀಡಿರುವುದಿಲ್ಲ ನಿಯಮದ ಚೌಕಟ್ಟಿನ ಒಳಗೆ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳನ್ನು ಪ್ರವಾಸೋದ್ಯಮ ಇಲಾಖೆಯ ಜಾರಿಗೊಳಿಸುತ್ತಿದೆ

ಪ್ರಶ್ನೆ ಸಂಖ್ಯೆ 58 (212) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು)

ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಾಪು ದೇಶ ಸ್ಥಂಭವನ್ನು ಪ್ರವಾಸೋದ್ಯಮವಾಗಿ ಅಭಿವೃದ್ಧಿಪಡಿಸಲು ನಿಗಧಿಪಡಿಸಿದ ಅನುದಾನವೆಷ್ಟು,

ಆ) ಪ್ರಸ್ತುತ ವರ್ಷದಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು,

ಇ) ಇದರ ನೀಲಿ ನಕ್ಷೆಯನ್ನು ನೀಡುವುದು

ಶ್ರೀ ಬಿ ಶ್ರೀರಾಮುಲು

ಅ) ಕಾಪು ದೀಪಸ್ಥಂಭ – ಅಭಿವೃದ್ಧಿಗಾಗಿ ಯಾವುದೇ ಅನುದಾನವನ್ನು ನಿಗಧಿಪಡಿಸಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಪ್ರಶ್ನೆ ಸಂಖ್ಯೆ 59 (89) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಎಷ್ಟು ಕಿ ಮೀ ರಸ್ತೆಗಳಿವೆ (ಈ ರಸ್ತೆಗಳ ಹೆಸರು ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು),

ಆ) ಈ ರಸ್ತೆಗಳ ದುರಸ್ತಿ ಮತ್ತು ಮೇಲ್ದರ್ಜೆಗೆ ಏರಿಸಲು ಸರ್ಕಾರ ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ,

ಇ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಬಹುತೇಕ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ತುರ್ತಾಗಿ ಈ ರಸ್ತೆಗಳನ್ನು ದುರಸ್ತಿಪಡಿಸಿ ಮೇಲ್ದರ್ಜೆಗೆ ಏರಿಸಲು ಸರ್ಕಾರದ ಮುಂದಿರುವ ಕ್ರಮಗಳೇನು,

ಉ) ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಇದಕ್ಕಾಗಿ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ

ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳ ರಸ್ತೆವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಈ ರಸ್ತೆಗಳ ದುರಸ್ತಿ ಹಾಗೂ ಮೇಲ್ದರ್ಜೆಗೆ ಏರಿಸಲು ಪ್ರಸಕ್ತ 2007–08 ನೇ ಸಾಲಿನಲ್ಲಿ ಈ ಕೆಳಕಂಡಂತೆ ಖರ್ಚು ಮಾಡಲು ಅಂದಾಜಿಸಿದೆ

1) ನಂಜುಂಡಪ್ಪ ವರದಿಯನ್ವಯ – 646 66 ಲಕ್ಷಗಳು

2) 2007–08ನೇ ಸಾಲಿನ – 772 35 ಲಕ್ಷಗಳು ಆಯವ್ಯಯದನ್ವಯ

3) 12ನೇ ಹಣಕಾಸಿನ ಯೋಜನೆಯಡಿ – 156 00 ಲಕ್ಷಗಳು

4) 3054 ಮುಖ್ಯಮಂತ್ರಿಗಳ ಗ್ರಾಮೀಣ – 700 00 ಲಕ್ಷಗಳು ರಸ್ತೆ ಅಭಿವೃದ್ಧಿ ನಿಧಿಯಡಿ

ಇ) ಹೌದು

ಈ) ಅನುದಾನದ ಲಭ್ಯತೆ ಯ ಮೇರೆಗೆ ಹದಗೆಟ್ಟಿರುವ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಯನ್ನು ಕೈಗೊಳ್ಳಲಾಗುವುದು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆತಯಲ್ಲಿರುತ್ತದೆ

ಉ) ಕಳೆದ ಮೂರು ವರ್ಷಗಳಲ್ಲಿ ಬಸವಕಲ್ಯಾಣ ಮತಕ್ಷೇತ್ರದ ರಸ್ತೆಗಳ ನಿರ್ವಹಣೆ / ದುರಸ್ತಿಗಾಗಿ ಬಿಡುಗಡೆ ಮಾಡಲಾದ ಹಣ ಈ ಕೆಳಗಿನಂತಿದೆ

ಆರ್ಥಿಕ ವರ್ಷ	ಬಿಡುಗಡೆಯಾದ ಅನುದಾನ ರೂ ಲಕ್ಷಗಳಲ್ಲಿ
2004–05	91 95
2005–06	24 75

ಅನುಬಂಧ
ಪ್ರಶ್ನೆ ಸಂಖ್ಯೆ 89 ಆ ಗೆ ಉತ್ತರ ಅನೆಕ್ಷರ್-1
ವಿಧಾನಸಭಾ ಕ್ಷೇತ್ರವಾರು ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು

ಕ್ರ.ಸಂ	ವಿಧಾನಸಭಾ ಕ್ಷೇತ್ರ ಹಾಗೂ ಸಂಖ್ಯೆ	ತಾಲೂಕು	ರಸ್ತೆ ಹೆಸರು	ಸರಪಳಿ	ಒಟ್ಟು ಉದ್ದ
1	ಔರಾದ್-01	ಔರಾದ್	ಸಂಗಮದಿಂದ ಸಂತಪೂರ	0 00-12 90	12 90
			ಕುಶನೂರ ಮಾರ್ಗವಾಗಿ	13 25-20 20	6 95
2	ಔರಾದ್-01	ಔರಾದ್	ಸಂಗಮ ಕೂಡು ರಸ್ತೆ	0 00-0 80	0 80
3	ಔರಾದ್-01	ಔರಾದ್	ಸಂತಪೂರದಿಂದ	0 00-18 70	18 70
		ನಾರಾಯಣ	ಖೇಡ ಆಂದ್ರ ಗಡಿ		
4	ಔರಾದ್-01	ಔರಾದ್	ಮುರ್ಕಿದಿಂದ ಕರಂಜಿಗಡಿರಸ್ತೆ		
			ರಾಮಪುರ ಔರಾದ ಮಾರ್ಗವಾಗಿ	0 00-56 80	56 80
5	ಔರಾದ್-01	ಔರಾದ್	ಕಮಲಾನಗರ ಕೂಡು ರಸ್ತೆ	0 00-1 00	1 00
6	ಔರಾದ್-01	ಔರಾದ್	ಕುಶನೂರು ಬಾವಲಗಾಂವರಸ್ತೆ	0 00-37 30	37 30
7	ಔರಾದ್-01	ಔರಾದ್	ಏಕಂಬಾದಿಂದ ಮುರ್ಕಿಗಡಿ ರಸ್ತೆ	0 00-17 40	17 40
8	ಔರಾದ್-01	ಔರಾದ್	ಕೌಶದಿಂದ ಚಿಂತಾಕಿನಾಗನಪಲ್ಲಿ		
			ಗಡಿ ರಸ್ತೆ ವಡಗಾವ ಮಾರ್ಗವಾಗಿ	0 00-27 20	27 20
9	ಔರಾದ್-01	ಔರಾದ್	ಕಂದಗೋಳದಿಂದ ವಡಗಾವ ರಸ್ತೆ	0 00-12 00	12 00
10	ಔರಾದ್-01	ಔರಾದ್	ಔರಾದ-ಮುಧೋಳ ರಸ್ತೆ ವಯಾ		
			ಹಂದಿಕೇರ	0 00-12 00	12 00
11	ಔರಾದ್-01	ಔರಾದ್	ಯನಗುಂದಾ-ಚಿಂತಾಕಿ ರಸ್ತೆ		
			ವಯಾ ಖಾಸೆಂಪೂ	0 00-12 60	12 60
12	ಔರಾದ್-01	ಔರಾದ್	ಸಂಗಮ-ಸೊನಾಳಾ ರಸ್ತೆ	0 00-13 80	13 80
			ವಯಾ ಖೇಡ		
13	ಔರಾದ್-01	ಔರಾದ್	ಕುಶನೂರ-ದುಡಕಿನಾಳ ರಸ್ತೆ		
			ವಯಾ ಕೋರೆಕಲಾ	0 00-11 80	11 80
14	ಔರಾದ್-01	ಔರಾದ್	ಮಧಚೋಳ-ತೋರಣಾ		
			ರಾಮಪೂರ ರಸ್ತೆ	0 00-11 80	11 80
15	ಔರಾದ್-01	ಔರಾದ್	ಕಮಲಾನಗರ-ಭಾತಂಬ್ರಾ		
			ರಸ್ತೆ ಮಾಯಾ ಲಿಖಿನಗಾಂವ	0 00-10 00	10 00
			ಒಟ್ಟು		259 25

ವಿಧಾನಸಬಾ ಕ್ಷೇತ್ರವಾರು ಜಿಲ್ಲಾ ಮುಖಿಗಳ ರಸ್ತೆಗಳ ವಿವರಗಳು

1	ಭಾಲ್ಕಿ-2	ಬೀದರ	ಕಮಠಾದಿಂದ ಹಾಲಹಳ್ಳಿ ವಯಾ	14 00-17 00	3 00
			ಬಾವಗಿ		
2	ಭಾಲ್ಕಿ-2	ಬೀದರ	ಬೀದರದಿಂದ ತ್ರಿಮಂಡಲ ರಸ್ತೆ	9 00-13 00	4 00
3	ಭಾಲ್ಕಿ-2	ಬೀದರ	ಬೀದರಿಂದ ಬೆನಕನಳ್ಳಿ		
			ಚಾಂದೋಳ ರಸ್ತೆ	3 00-12 00	9 00
4	ಭಾಲ್ಕಿ-2	ಬೀದರ	ಜನವಾಡಾ ಅಲೆಯಂಬರ		
			ಚಂದಾಪೂರ ರಸ್ತೆ	0 00-10 00	1 00

5	ಭಾಲ್ಕಿ-2	ಬೀದರ	ಭಾಲ್ಕಿ-ನಿಲಂಗಾ ರಸ್ತೆ	0 00-18 00	18 00
6	ಬಾಲ್ಕಿ-2	ಬೀದರ	ಹಲಬುರ್ಗಾ-ಬಾವಗಿ ರಸ್ತೆ	1 20-17 40	16 20
7	ಭಾಲ್ಕಿ-2	ಬೀದರ	ಕೋಟಗಾಳ್ಯ ಜನವಾಡಿ ವಯಾ ಬಾಳೂರ ಚಂದಾಪೂರ ರಸ್ತೆ	0 00-10 00	10 00
8	ಭಾಲ್ಕಿ-2	ಬೀದರ	ಖಾನಾಪೂರ-ಕಲಬುರ್ಗಿ ವಯಾ ಧನ್ನೂರಾ ರಸ್ತೆ	0 00-13 00	13 00
9	ಭಾಲ್ಕಿ-2	ಬೀದರ	ಮರೂರ-ಜೋಳದಾಬಣ ರಸ್ತೆ	0 00-5 60	5 60
10	ಭಾಲ್ಕಿ-2	ಬೀದರ	ರಾಜ್ಯ ಹೆದ್ದಾರಿ-15 ರ ಮೇಲಿನ ಬಣಗದಲದಿಂದ ರಾಮತೀರ್ಥ ವಯಾ ಕಮಬಾಣಾ-ಭವಗಿ ಹಾಲಹಳ್ಳಿ-ಕರಂಜಿ ಜೋಳದಾಬಣ ಪುರುರ ಚಕಲಚಂದಾ(ರಾಮತೀರ್ಥ) ವಾಡಿ ಮರೂರವರೆಗೆ	0 00-13 00	13 00
11	ಭಾಲ್ಕಿ-2	ಬೀದರ	ಕಮಲನಗರ ಬಾತಂಬ್ರಾ ವಯಾ ಲಖಣಗಾಂವ ಕಾಕನಾಳ ರಸ್ತೆ	3 00-9 00	6 00
12	ಭಾಲ್ಕಿ-2	ಬೀದರ	ಕಾಕನಾಳ-ಲಖನಗಾಂವ ರಸ್ತೆ	9 00-15 00	6 00
			ಒಟ್ಟು		**108 80**

ವಿದಾನಸಭಾ ಕ್ಷೇತ್ರವಾರು ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು

ಕ್ರ.ಸಂ	ವಿಧಾನಸಭಾ ಕ್ಷೇತ್ರ ಹಾಗೂ ಸಂಖ್ಯೆ	ತಾಲೂಕು	ರಸ್ತೆ ಹೆಸರು	ಸರಪಳಿ	ಒಟ್ಟು ಉದ್ದ
1	ಬೀದರ-04	ಬೀದರ	ಕಮಲಾಳದಿಂದ ಜಾಲಹಳ್ಳಿ ವಯಾ ಬಾವಗಿ	0 00 3 00	3 00
2	ಬೀದರ-04	ಬೀದರ	ಬೀದರದಿಂದ ಶ್ರೀಮಂಡಲರಸ್ತೆ	0 00 9 00	9 00
3	ಬೀದರ-04	ಬೀದರ	ಬೀದರದಿಂದ ಬಾಗೂರ ವರೆಗೆ ಮನಹಳ್ಳಿ ಮೂಲಕ	0 00 30 30	30 30
4	ಬೀದರ-04	ಬೀದರ	ರಾಜ್ಯದ ಗಿಡದಿಂದ ಸುಲ್ತಾನ ಪೂರ ಬೀದರವರೆಗೆ	0 00 8 00	8 00
5	ಬೀದರ-04	ಬೀದರ	ಬಗಲದಿಂದ ಬರೂರ ರಾಜ್ಯದ ಗಡಿಯವರೆಗೆ	0 00 18 80	9 80
6	ಬೀದರ-04	ಬೀದರ	ಗಾದಗಿಯಿಂದ ಚಲ್ಬಗಿಘ ವಯಾ ಚಿಮಕೊಂಡ ರಸ್ತೆ	0 00 11 00	11 00
7	ಬೀದರ-04	ಬೀದರ	ಬೀದರದಿಂದ ಚಿಲ್ಬರ್ಗವರೆಗೆ ವಯಾ ಮಾಳೆಗುಂದ ರಸ್ತೆ ಮತ್ತು ಸೇತುವೆ ವರೆಗೆ	0 00 17 20	17 20
8	ಬೀದರ-04	ಬೀದರ	ಬೀದರಿದಿಂದ ಬೆನಕನಳ್ಳಿ ಚಾಂಬೋಲ ರಸ್ತೆ	0 00 3 00	3 00
9	ಬೀದರ-04	ಬೀದರ	ಚೌಖಂಡಿ-ಜಾಂಪಾಡ ರಸ್ತೆ ವಯಾ ಗುಮ್ಮ	0 00 14 30	14 30

10	ಬೀದರ-04	ಬೀದರ	ಜಹೀರಾಬಾದ-ನಾಂದೇಡ ರಾ ಹೆ 4ರಿಂದ ಚೊಂಡಿ ಗ್ರಾಮಕ್ಕೆ ಕೂರು ರಸ್ತೆ	0 00	0 50	0 50
11	ಬೀದರ-04	ಬೀದರ	ಜಹೀರಾಬಾದ-ನಾಂದೇಡ ರಾ ಹೆ 4ರಿಂದ ಲಾಡಗೇರಿ ಗ್ರಾಮಕ್ಕೆ ಕೂಡು ರಸ್ತೆ	0 00	0 60	0 60
12	ಬೀದರ-04	ಬೀದರ	ಜಹೀರಾಬಾದ-ನಾಂದೇಡ ರಾ ಹೆ 4ರಿಂದ ಲಾಲಬಾಗ ಗ್ರಾಮಕ್ಕೆ ಕೂಡು ರಸ್ತೆ	0 00	0 40	0 40
13	ಬೀದರ-04	ಬೀದರ	ಬೀದರ ಹುಮನಾಬಾದ ರಾ ಹೆ 105ರಿಂದ ಬಕಚೌಡಿ ಗ್ರಾಮಕ್ಕೆ ಕೂಡು ರಸ್ತೆ	0 00	1 00	1 00
14	ಬೀದರ-04	ಬೀದರ	ಬೀದರ ಹುಮನಾಬಾದ ರಾ ಹೆ 105ರಿಂದ ದೂಸಪೂರ ಕೂಡು ರಸ್ತೆ	0 00	3 00	3 00
15	ಬೀದರ-04	ಬೀದರ	ವನಮಾರಪಲ್ಲಿ ರಾಯಚೂರು ರಾಹೆ15ರಿಂದ ಐಸಾಪೂರ ಕೂಡು ರಸ್ತೆ	0 00	1 00	1 00
16	ಬೀದರ-04	ಬೀದರ	ದೇದರ ಮನಹಳ್ಳಿ ಬಂಗುರ ಜಿಲ್ಲಾ ಮುಖ್ಯರಸ್ತೆಯಿಂದ ನಾಗೂರ ಕೂಡು ರಸ್ತೆ	0 00	1 00	1 00
17	ಬೀದರ-04	ಬೀದರ	ಕಮಲಾನಗರ-ಗೂನಳ್ಳಿ ರಾಹೆ4ರಿಂದ ಗೂವಳ್ಳಿ ಗ್ರಾಮಕ್ಕೆ ಕೂಡು ರಸ್ತೆ	0 00	2 00	2 00
18	ಬೀದರ-04	ಬೀದರ	ದೇವರ ಮನಸಳ್ಳಿ ಭಂಗುರ ಜಿಲ್ಲಾ ಮುಖ್ಯ ರಸ್ತೆಯಿಂದ ರಾಜಗೀರ ಕೂಡು ರಸ್ತೆ	0 00	1 30	1 30
19	ಬೀದರ-04	ಬೀದರ	ಗಾದಗಿ ಚಿಲ್ಬುರ್ಗ ಜಿಲ್ಲಾ ಮುಖ್ಯ ರಸ್ತೆಯಿಂದ ಮಿರ್ಜಾ ಪೂರಾ ಕೂಡು ರಸ್ತೆ	0 00	1 00	1 00
20	ಬೀದರ-04	ಬೀದರ	ಗಾದಗಿ-ಚಿಲ್ಬುರ್ಗಾ ಮುಖ್ಯ ರಸ್ತೆಯಿಂದ ಅಲ್ಲಾಸಪೂರ ಕೂಡು ರಸ್ತೆಯವರೆಗೆ	0 00	2 00	2 00
21	ಬೀದರ-04	ಬೀದರ	ಸಿಂದೋರ-ತಡಪಲ್ಲಿರಸ್ತೆ	0 00	2 00	2 00
22	ಬೀದರ-04	ಬೀದರ	ಬೀದರ ಮನಹಳ್ಳಿಬಂಗೂರ ಜಿಲ್ಲಾ ಮುಖ್ಯರಸ್ತೆಯಿಮದ ಚಿಟ್ಟಾ ಗ್ರಾಮಕ್ಕೆ ಕೂಡು ರಸ್ತೆ	0 00	2 50	2 50
23	ಬೀದರ-04	ಬೀದರ	ಬೀದರ ಮನಹಳ್ಳಿ ಭಂಗೂರ ಜಿಲ್ಲಾ ಮುಖ್ಯ ರಸ್ತೆಯಿಂದ ಚೋಂಡಪಳ್ಳಿ ಗ್ರಾಮಕ್ಕೆ ಕೂಡು ರಸ್ತೆ	0 00	3 00	3 00
			ಒಟ್ಟು			126 90

ವಿಧಾನಸಭಾ ಕ್ಷೇತ್ರವಾರು ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು

ಕ್ರಸಂ	ವಿಧಾನಸಭಾ ಕ್ಷೇತ್ರ ಹಾಗೂ ಸಂಖ್ಯೆ	ತಾಲೂಕು	ರಸ್ತೆ ಹೆಸರು	ಸರಪಳಿ		ಒಟ್ಟು ಉದ್ದ
1	ಹಲಸೂರು-3	ಹುಮನಾಬಾದ	ಧೋರಂಭಿ-ಸಿಂದಬಂದಗಿ ರಸ್ತೆ	0 00	12 40	12 40
2	ಹಲಸೂರು-3	ಹುಮನಾಬಾದ	ಅಡಬಾಳ-ಹಳ್ಳಿಖೇಡ್ ರಸ್ತೆ	19 00	27 00	8 00
3	ಹಲಸೂರು-3	ಹುಮನಾಬಾದ	ಹಳ್ಳಿಖೇಡ್-ಮುಗನೂರು ರಸ್ತೆ	0 00	10 00	10 00
4	ಹಲಸೂರು-3	ಹುಮನಾಬಾದ	ಮಾಣಿಕನಗರ ಘೂಡವಾಡಿ ರಸ್ತೆ	0 00	23 00	23 00
5	ಹಲಸೂರು-3	ಬಸವಕಲ್ಯಾಣ	ಬಸವಕಲ್ಯಾಣದಿಂದ ಬಿ ಎಸ್ ಕೂಡುವ ರಸ್ತೆ	9 50	18 50	9 00
6	ಹಲಸೂರು-3	ಭಾಲ್ಕಿ	ಭಾಲ್ಕಿ-ನಿಲಂಗಾ ರಸ್ತೆ	18 00	31 20	13 20
7	ಹಲಸೂರು-3	ಭಾಲ್ಕಿ	ದೋರಂಬಿ -ಸಿಂದಬಂದಗಿ	0 00	6 00	6 00
				20 40	33 70	13 30
8	ಹಲಸೂರು-3	ಭಾಲ್ಕಿ	ಕೇಸರ ದೇವಳಗಾ ಅಭವಾಯಿ ರಸ್ತೆ			119 90

ವಿಧಾನಸಭಾ ಕ್ಷೇತ್ರವಾರು ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು

ಕ್ರಸಂ	ವಿಧಾನಸಭಾ ಕ್ಷೇತ್ರ ಹಾಗೂ ಸಂಖ್ಯೆ	ತಾಲೂಕು	ರಸ್ತೆ ಹೆಸರು	ಸರಪಳಿ		ಒಟ್ಟು ಉದ್ದ
1	ಹುಮನಾಬಾದ-5	ಬೀದರ	ಕಮತಾಣದಿಂದ ಹಾಲಹಳ್ಳಿ ವಯಾ ಬಾವಗಿ	3 00	14 00	11 00
2	ಹುಮನಾಬಾದ-5	ಬೀದರ	ಬಗಲದಿಂದ ಬರೂರ ರಾಜ್ಯದ ಗಡಿಯವರೆಗೆ	0 00	9 00	9 00
3	ಹುಮನಾಬಾದ-5	ಬೀದರ	ಬದೆಗಲ್-ರಿಮತೀರ್ಥವಾಡಿ	0 00	17 50	17 50
4	ಹುಮನಾಬಾದ-5	ಬೀದರ	ಇಡವಾಡ-ಸಿಂದೋಲ	0 00	15 00	15 00
5	ಹುಮನಾಬಾದ-5	ಹುಮನಾಬಾದ	ದೇವಳಬೀಡು ವಯ ಉಡಬಾಳ ನಿರ್ಣಾ ವಿಕಲಮೂರ ರಸ್ತೆ	0 00	28 00	28 00
6	ಹುಮನಾಬಾದ-5	ಹುಮನಾಬಾದ	ಬಂಗೂರ ಚಿಂಚೋಳಿ ರಸ್ತೆ	0 00	14 60	14 60
7	ಹುಮನಾಬಾದ-5	ಹುಮನಾಬಾದ	ಎನ್-ಎಚ್9 ರಿಂದ ನಿರ್ಣಾ ಬಸಂತಮೂರ	0 00	12 00	12 00
8	ಹುಮನಾಬಾದ-5	ಹುಮನಾಬಾದ	ಎನ್-ಎಚ್9 ರಿಂದ ಚಿಟಗುಪ್ಪಾ ವಯಾ ತಮಿಹಾಬಾದ ರಸ್ತೆ	0 00	9 20	9 20
9	ಹುಮನಾಬಾದ-5	ಹುಮನಾಬಾದ	ಚಿಟಗುಪ್ಪಾದಿಂದ ರಾ ಹೆ ಗೆ ಕೂಡುವ ರಸ್ತೆ ವಯಾ ಇಟಗಾ ವಳಕಂಡಾ -ಲಾಲಧರಿ	0 00	19 20	19 20
10	ಹುಮನಾಬಾದ-5	ಹುಮನಾಬಾದ	ಉಡಬಾಳ-ಹಳ್ಳಿಖೇಡ ರಸ್ತೆ	0 00	19 00	19 00
11	ಹುಮನಾಬಾದ-5	ಹುಮನಾಬಾದ	ಮಾಣಿಕನಗರ ಕೂಡುರಸ್ತೆ	0 00	1 40	1 40
12	ಹುಮನಾಬಾದ-5	ಬಸವಕಲ್ಯಾಣ	ಹಳ್ಳಿಖೇಡ-ಮೂಡಬಿರಸ್ತೆ	0 00	1 00	1 00
	ಹುಮನಾಬಾದ-5		ಒಟ್ಟು			**156 90**

ವಿಧಾನಸಭಾ ಕ್ಷೇತ್ರವಾರು ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು

ಕ್ರಸಂ	ವಿಧಾನಸಭಾ ಕ್ಷೇತ್ರ ಹಾಗೂ ಸಂಖ್ಯೆ	ತಾಲೂಕು	ರಸ್ತೆ ಹೆಸರು	ಸರಪಳಿ		ಒಟ್ಟು ಉದ್ದ
1	ಬಸವಕಲ್ಯಾಣ-6	ಬಸವಕಲ್ಯಾಣ	ಬಸವಕಲ್ಯಾಣ ತಾಂಬೋಲಾ ವಯಾ ಪರತಾಪೂರ	2 40	7 60	5 20
2	ಬಸವಕಲ್ಯಾಣ-6	ಬಸವಕಲ್ಯಾಣ	ಭೂಸಗಾ ಮುಡಬಿ ವಯಾ ರಾಜೋರಾ ರಸ್ತೆ	0 00	15 00	15 00
3	ಬಸವಕಲ್ಯಾಣ-6	ಬಸವಕಲ್ಯಾಣ	ಬಸವಕಲ್ಯಾಣ-ರಾಜೋರಾರಸ್ತೆ	0 00	12 00	12 00
4	ಬಸವಕಲ್ಯಾಣ-6	ಬಸವಕಲ್ಯಾಣ	ಶರಾಪೂರ-ಜಾಜನಮುಗಳಿರಸ್ತೆ	16 97	25 00	8 03
5	ಬಸವಕಲ್ಯಾಣ-6	ಬಸವಕಲ್ಯಾಣ	ಕೋಹಿನೂರ ಪತ್ತಗಾ ರಸ್ತೆ	0 00	7 40	7 40
6	ಬಸವಕಲ್ಯಾಣ-6	ಬಸವಕಲ್ಯಾಣ	ಬಸವಕಲ್ಯಾಣದಿಂದ ಬಿ ಎನ್ ಕೂಡುವ ರಸ್ತೆ	0 00	9 50	9 50
7	ಬಸವಕಲ್ಯಾಣ-6	ಬಸವಕಲ್ಯಾಣ	ರಾಜೋಳಾ ರಾಜೇಶ್ವರ ರಸ್ತೆ	0 00	7 00	7 00
8	ಬಸವಕಲ್ಯಾಣ-6	ಬಸವಕಲ್ಯಾಣ	ರಾಜೇಶ್ವರ ಮುಡಬಿ ರಸ್ತೆ	0 00	15 00	15 00
9	ಬಸವಕಲ್ಯಾಣ-6	ಬಸವಕಲ್ಯಾಣ	ಹಳ್ಳಿಖೇಡ (6) ಮುಡಬಿರಸ್ತೆ	0 00	10 50	10 50
10	ಬಸವಕಲ್ಯಾಣ-6	ಬಸವಕಲ್ಯಾಣ	ಮುಡಬಿ ವರವಾಳ ರಸ್ತೆ	0 00	10 50	10 50
11	ಬಸವಕಲ್ಯಾಣ-6	ಬಸವಕಲ್ಯಾಣ	ಬೇಟಗೇರಾ ಬೇಮಳಗಿ ರಸ್ತೆ	0 00	7 00	7 00
	ಬಸವಕಲ್ಯಾಣ		ಒಟ್ಟು			111 63
	ಬೀದರ್‌ಜಿಲ್ಲೆ		ಒಟ್ಟು			883 38

ವಿಧಾನಸಭಾ ಕ್ಷೇತ್ರವಾರು ಜಿಲ್ಲಾ ಮುಖ್ಯ ರಸ್ತೆಗಳ ವಿವರಗಳು

ಕ್ರಸಂ	ವಿಧಾನಸಭಾ ಕ್ಷೇತ್ರ ಹಾಗೂ ಸಂಖ್ಯೆ	ತಾಲೂಕು	ರಸ್ತೆ ಹೆಸರು	ಸರಪಳಿ		ಒಟ್ಟು ಉದ್ದ
1	ಔರಾದ 01	ಔರಾದ	ಕಮಲಾನಗರ ಗೂನಳ್ಳಿರಸ್ತೆ	0 00	7 70	14 70
2	ಔರಾದ 01	ಔರಾದ	ವನಮಾರಪಲ್ಲಿ ರಾಯಚುರು	0 00	32 26	32 26
3	ಔರಾದ 01	ಔರಾದ	ಔರಾದ-ಸದಾಶಿವನಗರ ರಸ್ತೆ	0 00	21 00	21 00
	ಔರಾದ 01	**ಔರಾದ**	ಒಟ್ಟು			**74 96**
1	ಭಾಲ್ಕಿ	ಭಾಲ್ಕಿ	ಕಮಲಾನಗರ ಗೂನಳ್ಳಿರಸ್ತೆ	14 70	45 01	30 31
2	ಭಾಲ್ಕಿ	ಬೀದರ	ಕಮಲಾನಗರ ಗೂನಳ್ಳಿ	45 01	46 71	1 70
3	ಭಾಲ್ಕಿ	ಬೀದರ	ವನಮಾರಪಲ್ಲಿ ರಾಯಚೂರುರಸ್ತೆ	32 26	43 76	11 50
4	ಬಾಲ್ಕಿ	ಭಾಲ್ಕಿ	ಔರಾದ ಸದಾಶಿವಘಡ ರಸ್ತೆ	21 00	31 79'	10 79
5	ಬಾಲ್ಕಿ	ಭಾಲ್ಕಿ	ಬಾಲ್ಕಿ-ಚಿಂಚೋಳಿ ರಸ್ತೆ	0 00	8 60	8 60
6	ಬಾಲ್ಕಿ	ಭಾಲ್ಕಿ	ಹುಮನಾಬಾದ-ಬೀದರರಸ್ತೆ	21 30	32 40	11 10
		ಬಾಲ್ಕಿ	ಒಟ್ಟು			**43 69**
1	ಹುಲಸೂರು	ಬೀದರ	ವನಮಾರಪಲ್ಲಿ ರಾಯಚುರು ರಸ್ತೆ	60 56	75 84	15 28
2	ಹುಲಸೂರು	ಭಾಲ್ಕಿ	ಔರಾದ ಸದಾಶಿವಗಡ ರಸ್ತೆ	31 79	68 95	37 16
3	ಹುಲಸೂರು	ಭಾಲ್ಕಿ	ಹುಲಸುರು-ಮಹಾಗಾಂವ ರಸ್ತೆ	0 00	2 17	2 17
4	ಹುಲಸುರು	ಭಾಲ್ಕಿ	ಭಾಲ್ಕಿ-ಚಿಂಚೋಳಿ ರಸ್ತೆ	8 60	9 90	1 30
5	ಹುಲಸೂರು	ಹುಮನಾಬಾದ	ಭಾಲ್ಕಿ ಚಿಂಚೋಳಿ	9 90	19 30	9 40

6	ಹುಲಸೂರು	ಹುಮನಾಬಾದ್	ಹುಮನಾಬಾದ್-ಬೀದರ ರಸ್ತೆ	3 00	21 30	18 30
7	ಹುಲಸೂರು	ಬಸವಕಲ್ಯಾಣ	ಹುಲಸೂರು ಮಹಾಗಾಂವ ರಸ್ತೆ	2 17	4 57	2 40
	ಹುಲಸೂರು		**ಒಟ್ಟು**			**86 01**
1	ಬೀದರ-04	ಬೀದರ	ಕಮಲಾನಗರ-ಗೂನಳ್ಳಿ	46 71	68 33	21 62
2	ಬೀದರ-04	ಬೀದರ	ಹುಮನಾಬಾದ್-ಬೀದರ್ ರಸ್ತೆ	32 40	45 33	12 93
3	ಬೀದರ-04	ಬೀದರ	ವನಮಾರಪಲ್ಲಿ ರಾಯಚುರು ರಸ್ತೆ	43 76	60 56	16 80
	ಬೀದರ	**ಒಟ್ಟು**		**51 35**		
1	ಹುಮನಾಬಾದ-5	ಹುಮನಾಬಾದ	ಹುಮನಾಬಾದ್-ಬೀದರರಸ್ತೆ	0 00	3 00	3 00
2	ಹುಮನಾಬಾದ-5	ಹುಮನಾಬಾದ	ವನಮಾರಪಲ್ಲಿ-ರಾಯಚೂರು ರಸ್ತೆ ರಾ ಹೆ ಸಮ 15	75 84	91 16	15 32
3	ಹುಮನಾಬಾದ-5	ಹುಮನಾಬಾದ	ಭಾಲ್ಕಿ-ಚಿಂಚೋಳಿ ರಸ್ತೆ	19 30	43 68	24 38
	ಹುಮನಾಬಾದ		**ಒಟ್ಟು**			**42 70**
1	ಬಸವಕಲ್ಯಾಣ-6	ಬಸವಕಲ್ಯಾಣ	ಹುಲಸೂರು-ಮಹಾಗಾಂವ ರಸ್ತೆ	4 57	56 90	52 33
2	ಬಸವಕಲ್ಯಾಣ-6	ಬಸವಕಲ್ಯಾಣ	ಔರಾದ-ಸದಾಶಿವಗಡ ರಸ್ತೆ	68 96	138 67	69 72
3	ಬಸವಕಲ್ಯಾಣ-6	ಬಸವಕಲ್ಯಾಣ	ಬಸವಕಲ್ಯಾಣ-ರಾಯಚೂರು ರಸ್ತೆ	0 00	32 85	32 85
	ಬಸವಕಲ್ಯಾಣ		**ಒಟ್ಟು**			**154 90**
			ಒಟ್ಟು			**453 61**

2006-07 201 21

ಪ್ರಶ್ನೆ ಸಂಖ್ಯೆ 60 (90)

ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಸೇತುವೆಗಳ ಸಂಖ್ಯೆ ಎಷ್ಟು ಮತ್ತು ಇವು ಯಾವುವು,

ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಹೊಸ ಸೇತುವೆಗಳು ಮಂಜೂರಾಗಿವೆ, ಈ ಪೈಕಿ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಇ)ಇದಕ್ಕಾಗಿ ವೆಚ್ಚ ಮಾಡಲಿರುವ ಹಣವೆಷ್ಟು, ಇಲ್ಲಿಯವರೆವಿಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಶ್ರೀ ಹೆಚ್ ಡಿ ರೇವಣ್ಣ

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಜಿಲ್ಲೆಗಳ ಎರಡನೆಯ ಮತ್ತು ಮೂರನೇ ಹಂತದ ಸೇತುವೆಯ ಯೋಜನೆಯಲ್ಲಿ ತೆಗೆದುಕೊಂಡ ಸೇತುವೆಗಳ ಕೆಳಗಿನಂತಿವೆ.

ಜಿಲ್ಲೆ	1ನೇ ಹಂತ		2ನೇ	ಹಂತ	3ನೇ	ಹಂತ
ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ		ಸ' ಂ ಖ್ ' ್ಯ
ಗುಲ್ಬರ್ಗ	32	1167	26	560	11	835
ಬೀದರ್	6	270	8	570	5	1285
ರಾಯಚೂರು	7	609	12	675	20	1025
ಕೊಪ್ಪಳ	8	298	9	495	9	535
ಬಳ್ಳಾರಿ	3	235	20	692	6	375
ಒಟ್ಟು	56	2579	75	2992	51	4055

ಹಂತವಾರು ಜಿಲ್ಲೆವಾರು ಸೇತುವೆಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ

(ಮೊತ್ತ ರೂ ಲಕ್ಷಗಳಲ್ಲಿ)

ಆ) ಪ್ರಸಕ್ತ ಸಾಲಿನಲ್ಲಿ ನಾಲ್ಕನೆಯ ಹಂತದ ಸೇತುವೆಯ ಯೋಜನೆಯ ಅಡಿಯಲ್ಲಿ ಒಟ್ಟು 51 ಸೇತುವೆಗಳು ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ವಿವರಗಳನ್ನು ಅನುಬಂಧ-2ಲ್ಲಿ ನೀಡಲಾಗಿದೆ

District wise Details of Bridges taken up in Hyderaba Karnataka Phase -1

sl no	Date of Agreement	District/Taluk	Bridgecode	SH/MDR	Package	Location of Bridges	Carriage way	Span Configuration	Estimated Cost	Completed Date
1	4 7-2000	Aland	N GUB Al35	SH	3	construction of RCC bridge at km 61 20 on state border of Hulsur Basavalalyan mudabi mohangao road	7 5 M	8 span of 12 30 M	137 64	April2002
2	4 7-2000	Aland	N GUB AL36	SH	4	Re construction of Bridge on wagadhari rivvabpalli road at km 40 50	7 5 M	1 span of 9 m	21 51	aug-2001
3	4-7-2000	Aland	NGUB AL37	SH	4	Reconstruction of Bridge on Wagdhari Ribbonpalli road at km 118 40	7 5 M	3*2 5*1 5m	10 77	june 2001
4	4-7-2000	Sedam	NGUBYA38	SH	3	Reconstruction of Bridge on wagdhari Ribbonpoli road at km 118 40	7 5 M	7 span of 12 30 m	119 32	june 2002
5	4 7 2000	Yadgir	NGUB YA39	SH	4	Reconstruction of RCC bridge on Hyderabad Bijapur road at km 28 80	7 5 M	1span of 9m	22 37	December 2001
6	4 7 2000	yadgir	NGUB YA40	SH	3	Reconbstruction of Bridge on Warampalli Raichur road at km 204 40	7 5 M	5 span of 12 3m	87 34	april2002
7	4 7 2000	Shorapur	NGUB SO 41 NGUB SO43	SH	3	Reconstruction of bridge on sindagi shahapur rpad at km 46 30 & 46 40	7 5 M	14 8m	66 24	april2002
8	4 7 2000	Chitapur	NGUB CT44	SH	4	Reconstruction of Bridge on Wagdhari Ribbanpalli road at Km 109	7 5 M	4 span of 10m	48 52	december 2001
9	4 7 2000	Sharapur	NGUB SH45	SH	4	Reconstruction of Bridge on Wanampalli Raichur road at	7 5 M	3 span of 9m	28 94	traffic alowd work is in

						km 225				progress
10	4-7 2000	Shahapur	NGUB SH46	SH	4	Reconstruction of Bridge on Wanampalli Raichur road at km 216	7 5 M	1span of 6m	onlyBTTo done 24 14	aug 2001
11	4-7 2000	shahapur	NGUB SH47	SH	4	Reconstruction of Bridge on Wanampalli Raichur road at km 218	7 5 M	1*2 58*1 5m	30 9	traffic alowd work is in progress
12	4 7 2000	Afzalpur	NGUB AZ48	SH	4	Reconstruction of Bridge on Gulbarga Hosur Road at km 89 8	7 5 M	1*2 58*1 5m	5 9	Feb 2001
13	4 7-2000	Afzalpur	NGUB AZ48a	SH	4	Reconstruction of Bridge on Gulbarga Hosur road at km 91 2	7 5 M	1*2 58*1 5m	5 49	Feb 2001
14	4 7-2000	Afzalpur	NGUB AZ49	SH	4	Reconstruction of Bridge on Gulbarga Hosur road at km 90 1	7 5 M	1*2 58*1 5m	5 59	Feb 2001
15	4 7-2000	Afzalpur	NGUB AZ49a	SH	4	Reconstruction of Bridge on Gulbarga Hosur road at km 90 9	7 5 M	1*2 58*1 5m	5 56	Feb 2001
16	4 7 2000	Afzalpur	NGUB AZ50	SH	4	Reconstruction of Bridge on Gulbarga Hosur road at km 95 9	7 5 M	1*2 58*1 5m	6 35	Feb 2001
17	4 7 2000	Afzalpur	NGUB AZ50a	SH	4	Reconstruction of Bridge on Gulbarga Hosur road at km 96 5	7 5 M	1*2 58*1 5m	6 35	Feb 2001
18	4 7 2000	Afzalpur	NGUB AZ51	SH	4	Reconstruction of Bridge on Gulbarga Hosur road at km 93 10	7 5 M	1*2 58*1 5m	6 16	Feb 2001
19	4 7 2000	Afzalpur	NGUB AZ52	SH	4	Reconstruction of Bridge on Gulbarga Hosur road at km 94 3	7 5 M	1*2 58*1 5m	7 96	Feb 2001
20	4 7 2000	Afzalpur	NGUB AZ52a	SH	4	Reconstruction of Bridge on	7 5 M	1*2 58*1 5m	7 65	Feb 2001

						Gulbarga Hosur road at km 95 2				
21	4 7 2000	Afzalpur	NGUB AZ53	SH	4	Reconstruction of Bridge on Gulbarga Hosur road at km 93 6	7 5 M	1*2 58*1 5m	9 38	Feb 2001
22	4 7-2000	Chincholi	NGUB CH54	MDR	3	Construction of MCPC acro ssMulla Mari river near Karchked village on Nida-gunda chandapur road at at km 4 5	7 5M	6span of 16 86	187 61	work is in progress
23	4-7-2000	Jewargi	NGUB JE55a	MDR	3	Reconstruction of HP culvert on Chickamubal channal road in km 6 8	7 5M	14 80M	10 82	feb2002
24	4-7 2000	Jewargi	NGUB JE55b	MDR	3	Reconstruction of HP culvert on Chickamubal channal road in km 18 20	7 5M	30 0M	8 43	may2001
25	4-7 2000	Jewargi	NGUB JE55c	MDR	3	Reconstruction of HP culvert on Chickamubal channal road in km 17 60	7 5M	10 20M	31 13	April2002
26	4 7 2000	Jewargi	NGUB JE56a	MDR	3	Reconstruction of LCC culvert Nedalgi arulagunndgi road in km 7 20	7 50M	16 8M	14 84	Feb2002
27	4-7 2000	Jewargi	NGUB JE56b	MDR	3	Reconstruction of LCC culvert on Chickamubal channal road in km 7 90	7 5M	30 00	8 97	May2001
28	4-7-2000	Jewargi	NGUB JE57	MDR	4	Reconstruction of LCC culvert Raddewadgi kunde road in km 2 80	7 5M	improvement	10 71	April2001
29	4-7 2000	Jewargi	NGUB JE57a	MDR	4	Reconstruction of LCC culvert Raddewadgi kunde road in km 4 20	7 5M		31 93	April2001

30	4 7-2000	Jewargı	NGUB JE57b	MDR	4	Reconstruction of LCC culvert Raddewadgı kunde road ın km 6 20	7 5M	ımprovement	10 34	June 2001
31	4 7-2000	Jewargı	NGUB JE57c	MDR	4	Reconstruction of LCC culvert Raddewadgı kunde road ın km 7 20	7 5M	ımprovement	5 08	June 2001
32	4 7 2000	Jewargı	NGUB JE58a	MDR	3	Constrıction of Brıdge on Jewargı-Chıkkodı Road near km 32 2 nedolgı village	7 5M	6span of 16 86	181 95	Work ıs ın progress (LAQ Delay)

Bıdar

1	4 7 2000	Bıdar	N BDR B116	SH	3	Construction of RCC Desk Slab Brıdge on Wanampallı Raıchur Road ın Km 61 70	7 5M	4 span of 12 30 m	82 21	Mar 2002
2	4 7 2000	Basavakalyan	N BDR BK 17	SH	3	Re construction of RCC Desk brıdge on State Border Hulsoor B Kalyan Mudabı mahagao km 29 60	7 5M	3 span of 10 40 M	75 25	Aprıl 2002
3	4 7 2000	Bhlkı	N BDR BH18	SH	4	Re construction of Brıdge on Zaheerabad nanded at km 67 20	7 5M	3 span of 9 m	39 3	Nov 2001
4	4 7 2000	Bhalkı	N BDR BH 19	SH	4	Re construction of Brıdge on Zaheerabad nanded at km 69 20	7 5M	2 span of 9 m	31 71	Nov 2001
5	4 7-2000	Bhalkı	N BDR BH 19a	SH	4	Re construction of Brıdge on Zaheerabad nanded at km 69 20	7 5M	Road ımprovement	12 52	Aug 2001
6	4 7-2000	Bhalkı	N BDR BH 20	SH	4	Re construction of Brıdge on	7 5M	2 span of 6m	28 54	Dec2001

Raichur

1	4-7-2000	Raichur	N RCR RC80	SH	3	Hyderabad Bangalore Road at km 188 of Raichur Taluk	11 5	7 span of 10 40	231 85 in progress	work is
2	4 7 2000	Raichur	N RCR RC81	SH	3	Hyderabad Bangalore Road at km 220 of Raichur Taluk	7 5m	7 span of 12 30m	107 14	structure work comp
3	4 7-2000	Manvi	NRCR MA82	SH	4	Raichur Bachi (Belguam) road at km 37 of manvi taluk	7 5m	2 span of 9m	58 25	work is in progress
4	4 7 2000	Manvi	NRCR MA83	SH	4	Raichur Bachi (Belguam) road km 67 5of Raichur Taluk	7 5m	2 span of 9 m	33 51	August2001
5	4 7 2000	Manvi	NRCR MA 84	SH	4	Raichur Bachi (Belguam) road at km 68 5 of manvi taluk	7 5m	2 span of 9 m	36 8	June 2001
6	4-7 2000	Lingsgur	NRCR LI 85	SH	4	Raichur Bachi (Belguam) road at km 85 of manvi taluk	7 5m	5 span of 10 m	57 85	March2002
7	4 7 2000	Deodurg	NRCR DE 86	SH	3	Raichur Wanampalli (Deodurga) road at km 18 5 Deodurgataluk	7 5m	5 span of 12 30 m	83 86	feb 2002

Koppal

1	4 7 2000	Gangavathi	NKOPGA72	SH	3	Construction of desk slab bridge on bypass on kanakagiri town on lingasgur kundanti road	7 5m	6 span of 12 30 m	96 07	April2002
2	4-7 2000	Gangavathi	NKOPGA73	SH	4	construction of MCPC on km75 3 of on lingasgur kundanti road	7 5m	7*2 5*1 5m (Box culvert)	35 57	March 2001
3	4 7 2000	Gangavathi	NKOPGA74	SH	4	onstruction of bridge on km71 of on lingasgur kundanti road	7 5m	27*1 2m	43 64	Marcg 2001

4	4-7 2000	Gangavathı	NKOPGA75	SH	4	onstruction of bridge on km67 3 of on lingasgur kundanti road	7 5m	19*1 2M	31 11	Oct 2001
5	4 7 2000	Gangavathı	NKOPGA76	SH	4	onstruction of bridge on km67 6 of on lingasgur kundanti road	7 5m	16*0 9M	24 9	Sept 2001
6	4 7 2000	Kusthagı	NKOPKU77	SH	4	onstruction of bridge on km53 8 of on lingasgur kundanti road	7 5m	3*5 0*1 5M (Box culvert)	17 35	June 2001
7	4 7 2000	Kushtagı	NKOPKU78	SH	4	Construction of Bridge across Hanchinal nala at km 50 on sindhanur Naragunda road	7 5m	35 spam of 9m	31 86	Nov 2001
8	4 7 2000	Yelburga	NKOPYE79	SH	4	Construction of bridge across neljeri halla at km 26 4 on kusthagı Koppal road	7 5m	2*2 5*1 5M (Box culvert)	17 05	March 2001
						Total			297 55	

Bellary

1	4-7-2000	Bellary	N BRY BE 14	MDR	3	Construction of Bridge across	7 5m	2*10 42*	53 98	May 2002
						Uppanaholla on Rupanagudı Challaurkı		2*10 43		
2	4-7-2000	Bellary	N BRY BE 15a	MDR	3	Construction of bridge near yemmiganur village on KKK Road	7 5m	4 span of 12 30 M	96 62	Sept 2001
3	4 7 2000	Bellary	N BRY BE 15 b	MDR	3	Construction of bridge near yemmiganur village on KKK Road	7 5m		84 00	Sept 2001

DISTRICTWISE DETAILS OF BRIDGES TAKEN UP IN HYDERABAD KARNATAKA UNDER PHASE II & III

Sl No	District Taluk	Location of Bridges	SH MDR	Cost Est (Rs in Lakhs)
Phase II				
1	aland	Construction of RCC Bridge at KM 12 10 on aland Kulali road near devantgi village	MDR	150 00
2	aland	Construction of RCC Bridge at km 18 00 on Lad Chincholi to Madanhipparaga road	MDR	40 00
3	Aland Kamalapur	Construction of Bridge on kamalapur Jeevargi road near Jeevangi village	MDR	40 00
4	Chincholi	Construction of Bridge at Km109 00 near Padma college on Wanampalli Raichur road in chincholi taluq Gulbarga	SH	125 00
5	Kamalapur	Construction of Bridge on Omarga border to aland to V K Salgarsulpet road at 39 80	SH-32	50 00
6	Chittapur	Construction of Bridge at Km 80 20 on wagdhari-Ribbanpalli Road	SH	60 00
7	Chithapur	Construction of Gotur bridge on Tenkli Arankal road	MDR	70 00
8	Afzalpur	Construction of Bridge at km 53 80 on Gulbarga Hosur road	SH	10 00
9	Aland/ Kamalaur	Construction of Bridge on Kamalapur Chengta road at km 0 60	MDR	15 00
		Total		**560 00**

Phase III

1	Afzalpur	Construction of bridge at km 6 40 chodapura-chincholi road near banarwadi village	MDR	50 00
2	Afzalpur	Construction of Bridge at km 87 50 on gulbarga-hosur road	SH	150 00
3	Chitapur	Constriction of bridge on chitapur Malakheda road across Maragulla Nala	MDR	100 00
4	Chincholi	Construction of bridge on tandure Chincholi road at 94 00 km	MDR	50 00
5	Chincholi	Construction of Bridge at 10 50 km on Nidagunda Chandapur road	MDR	60 00
6	Chincholi	Construction of Bridge on 103 00 km on chincholi road	MDR	10 00
7	Afzalpur	Construction of RCC Deck slan bridge at km 112 00 on Aurad Sadashivgad Road SH-34 across Bennithora river near Kotana hippargi village in aland tq	SH34	250 00
8	Chithapur	Construction of bridges on chitapur malakheda road at km 5 20 and 5 50	MDR	20 00
9	Chitapur	construction of bridges on road joining SH 32 at Km 4,00, 22 40 and 22 80 (via kalgurthi-Gottura, Chincholi)	MDR	45 00

10	Chitapur	Construction of bridge on Kalagi Mangalagi road on Km 1.20	MDR	60 00
11	Chitapur	Constructiom of bridges on Margol Thegalathippi road at km 4 00 5 00 and 5 60	MDR	40 00
		Total		**835 00**

II Phase **Bidar**

1	Bidar	Construction of Wanampalli Raichur at km 57 05 near Kamathana village Bidar Tq	SH	80 00
2	Aurad	Construction of bridge on Wanampalli raichur road at km 4 20 near narayanpura village on Aurad	SH	100 00
3	Aurad	Construction of bridge across kotgiyalanala in Km 14 80 of Murki border to karni border road	MDR	75 00
4	Aurad	Construction of bridge on Wanmarpalli Raichur Road Km 10 20 in Aurad Taluk	SH	50 00
5	Aurad	Construction of Bridge at 21 90 on Koutha Chintaki-Naganapalli road	MDR	40 00
6	Humnabad	Construction of bridge across at km 0 6 on maniknagar approach road	MDR	50 00

7	Basava kalyana	Construction of bridge across Balatnala at km 1 9 on sangam, Kusnoor, santhiput road	MDR	150 00
8	Basava kalyana	Construction of bridge on chankapur border to attarga road in Basavakalyana tq	MDR	25 00
		Total		**570 00**

III Phase

1	Basava Kalyan	Construction of Bridge on SH 11 at km 55 10 in Basavakalyan taluq	SH	25 00
2	Balki	Construction of bridge near village Nittur (B) on river manjra on state highway No 34 in Bidar district	MDR	900 00
3	Bhalki	Construction of Bridge on Kesar Jawalga Akvai road in Bhalki Taluk (Saigaon Bridge)	MDR	250 00
4	Humnabad	Construction of bridge at Km 7 50 on Hugdi, Chittaguppa, Ainapur road	MDR	250 00
5	Bidar	Construction of bridge at km 13 70 and 13 80 on Bidar, manahalli, Bhangoor road in between nagora and yakatpur village	MDR	80 00
		Total		**1285 00**

II Phase

1	Raichu Kalmala	Construction of Bridge on Raichur Arashango road at km 36 00	MDR	75 00
2	Raichur	Construction of Bridge on Raichur -Jambaldinni road near Bihangera at km 8 10	MDR	30 00
3	Deodurga	Construction of bridge at km 15 00 on deodurga gugal road via chiiabudur	MDR	80 00
4	Deodurga	construction of bridge cause at km 70 on amarapur gulaga chneharaki road	MDR	60 00
5	Manvi	Construction of bridge on Manvi Umbli pannut road at 7 00 km via kataragi	MDR	70 00
6	Manvi	Construction of Bridge on Managoli Bichal road near valkamdini at 234 3 km	SH-61	60 00
7	Lingasgur	Construction of bridge at km 20 80 on Ankalmath mediknal road via nagalapur	MDR	
8	Lingasgur	Construction of bridge at km 23 00 on ankalmath mediknal road via nagalapur	MDR	80 00
9	Lingasgur	Construction of bridge at km 25 00 on ankalmath mediknal road via nagalapur	MDR	
10	Lingasgur	Construction of bridge at km 5 00 on mudagal-Chikkahesruru via \ SantheKallur Road	MDR	

11	Lingasgur	Construction of bridge at km 9 00 on mudagal-Chikkahesruru via \ SantheKallur Road	MDR	70 00
12	Lingasgur	Construction of bridge at km 14 00 on mudagal-Chikkahesruru via \ SantheKallur Road	MDR	
13	Lingasgur	Construction of bridge at km 158 60 on Ramdurga Manvi Road	MDR	30 00
14	Sindhanur	Construction of bridge at on Walabellary Ayyanur Road at km 1 00	MDR	40 00
15	Sindhanur	Construction of bridge on Maski- Dhadesugur road at km 18 00	MDR	30 00
16	Sindhanur	Construction of bridge on Raravi0-Bellur road near kengal village	MDR	50 00
		Total		**675 00**

III Phase

1	Raichur	Construction of bridge on Hyderabad-Bangalore road at km 230 00	SH-13	50 00
2	Raichur	Construction of bridge on Gujahlli Matmari road road at km 1 00	MDR	75 00
3	Raichur	Construction of bridge Raichur-arashangi road at km 30 40	MDR	100 00

4	Manvı	Constructıon of brıdge on Munagolı-Bıchalı road near Sanna Hosur kn 8 00	SH	25 00
5	Kalmala	Constructıon of brıdge on Chagbavı cros to manvı vıa ȷambaladınnı road at km 6 to 7	MDR	50 00
6	Kalmala	Constructıon of brıdge on raıchur arashınagı road at km 12 00 near hospete hırehalla	MDR	100 00
7	Manvı	Constructıon of brıdge on Ramdurga-manvı road at km 205 00 (km 6 27 on manvı chıkalparvı road	SH-14	60 00
8	Manvı	Constructıon of brıdge on Ramdurga-manvı road at km 179 90	SH	45 00
9	Manvı	Constructıon of brıdge on Ramdurga-manvı road at km 178 30	SH	30 00
10	Lıngasgur	Constructıon of HLC at km 20 50 on Ankalımath Medıknal road vıa Nagalpur	MDR	20 00
11	Lıngasgur	Constructıon of HLC at km 24 00 on Ankalımath Medıknal road vıa Nagalpur	MDR	20 00
12	Lıngasgur	Constructıon of HLC at km 5 00 on Mudagal-Chıkkahesruru vıa santhekellur road	MDR	30 00

13	Lingasgur	Construction of HLC at km 9 00 on Mudagal-Chikkahesruru via santhekellur road	MDR	25 00
14	Deodurga	Construction of Bridge at km 289 00 to 289 20 on Wanampalli raichur road	SH	80 00
15	Deodurga	Construction of Bridge at km 292 60 to on Wanampalli raichur road	SH	90 00
16	Deodurga	Construction of Bridge at anwar village on alkod galga road	MDR	80 00
17	Chincholi	Construction of Bridge on Wanampalli raichur road (SH015) at 109 km near Padma College	SH	40 00
18	Sindhoor	Construction of MCPC on Maski Dhadesugur road km 4 00	MDR	50 00
19	Sindhoor	Construction of MCPC on Maski Dhadesugur road km 24 00	MDR	30 00
20	Sindhoor	Construction of MCPC on Maski Dhadesugur road km 30 00	MDR	25 00
		Total		**1025 00**

II phase **Koppal**

1	Kustagi	Construction of Bridge on Kusthagi kadiguppa road at km 5 00 in Kusthagi tq	SH	60 00
2	Kustagi	Construction of Bridge on Kusthagi kadiguppa road at km 12 00 in Kusthagi tq	SH	
3	Kustagi	Construction of Bridge on Hanumasagar Nilogal pattadakal road at km 18 70 in kustagi taluk	SH	50 00
4	Gangavathi	Construction of Bridge on Gangavathi Sriramnagai Road across Hosalli halla at km at km 18 50	MDR	60 00
5	Kanakagiri	Construction of Bridge across somanala on kanakagiri kartagi raod at km 19 00 (ravari bellur road)	SH	90 00
6	Koppal	Construction of Bridge on Koppal Belghatta road at 7 00 km	SH	90 00
7	Yelburga	Construction of Bridge on across katinahalla in kim 43 00 of Kavaloor Managalore road	MDR	50 00
8	Yelburga	Construction of Bridge on across katinahalla in kim 19 20 of Kukkanur-thimmapur road	MDR	50 00

9	Gangavathı	Wıdenıng of Deck slab brıdge on Lıongasgur Kudıthını road at km 74 60 (Gabgavathı Town lımıts)	SH-29	20 00
10	Gangavathı	Constructıon of low level cause way at km 5 20 on Kanagagırı-Karatagı road	SH	25 00
		Total		**495 00**

III Phase

1	Yelburga	Constructıon of hıgh level Brıdge across hırehall at km 37 10 of kuknoor-mangalore road	MDR	175 00
2	Koppal	Constructıon of Brıdge across Hırehalla near Ojanahallı vıallage ın Koppal taluk	MDR	150 00
3	Koppal	Constructıon of Brıdge on Kınnal Road to Joın SH-23 at km 24 20	MDR	20 00
4	Gangavathı	Constructıon of Brıdge on Karatagı- hanwala road at km 13 00 near sınganal vıllage	MDR	20 00
5	Koppal	Constructıon of brıdge on Alawandı kavaloor Bannıkoppa road at km 12 00	MDR	30 00
6	Kustagı	Constructıon of Brıdge on Raravı Belur road (Kanakagırı-Karatagı road at km 9 60) near wadakı vıllage	MDR	40 00

7	Gangavthı	Constructıon of brıdge on Raravı Belur road (kanakagırı karatagı road at km 9 60) near wadakı vıllage	SH	50 00
8	Koppal	Constructıon of brıdge on Raravı Belur Bannıkoppa road at km 13 00	MDR	30 00
9	Koppal	Constructıon of brıdge on Halagera- kelsapura km 1 60	MDR	20 00
		Total		**535 00**

II phase **Bellary**

1	Hadagalı	Constructıon of brıdge 188 05 on Arabhavı chellakere SH	SH-45	65 00
2	Hadagalı	Constructıon of brıdge 198 585 on Arabhavı chellakere SH	SH-45	30 00
3	Hadagalı	Constructıon of brıdge 197 855 on Arabhavı chellakere SH	SH-45	40 00
4	Hadagalı	Constructıon of brıdge 194 785 on Arabhavı chellakere SH	SH-45	30 00
5	Hadagalı	Constructıon of brıdge 186 685 on Arabhavı chellakere SH	SH-45	40 00
6	Hadagalı	Constructıon of brıdge 20 830 to joın Holagundı vıa morıgere	MDR	40 00
7	Belları	Constructıon of brıdge 2 02 on Belları Badanahattı Major dıstrıct road	MDR	35 00

8	Sırıguppa	Constructıon of brıdge at km 12 40 on Raravı-belur state hıghway	SH-63	30 00
9	Sırıguppa	Constructıon of brıdge at km 7 90 on Raravı-belur state hıghway	SH-63	30 00
10.	Sandur	Constructıon of brıdge at km 104 99 on Lıngasgur-Kudıthımı (LMTGKK Road) state hıghway	SH-29	55 00
11.	Kottur	Constructıon of brıdge at km 149 00 on Yekkumbı-Molakalmuru road	SH	50 00
12.	Kottur	Constructıon of brıdge at km Kottur, Hagarıbommanahallıo road at 5 5 km	MDR	50 00
13.	Kudlagı	Constructıon of brıdge at km Kudlıgı Tummer Gubbı road at 5 1	SH	50 00
14	Hospet	Constructıon of brıdge at km 94 60 of Lıngasgur-Kudathımı road	SH	50 00
15	Sandur	Constructıon of Brıdge at km 112 50 on Lıngasgur Kuduthımı (LMTGKK Road) State Hıghway	SH-29	20 00
16.	Sandur	Constructıon of Brıdge at km 105 10on Lıngasgur Kuduthımı (LMTGKK Road) State Hıghway	SH-29	16 00
17.	Sandur	Constructıon of Brıdge at km 10 5018 on Lıngasgur Kuduthımı (LMTGKK Road) State Hıghway	SH-29	20 00

18	Sandur	Construction of Bridge at km 107 65 on Lingasgur Kuduthini (LMTGKK Road) State Highway	SH-29	18 00
19	Sandur	Construction of Bridge at km 110 40 on Lingasgur Kuduthini (LMTGKK Road) State Highway	SH-29	18 00
20	Hospet	Construction of Bridge at km 102 50 on Lingasgur Kuduthini Road	SH	25 00
		Total		**692 00**

III Phase

1	H Hadagali	Construction of Bridge on Mailara Thoranagal road at km 15 20	SH-40	120 00
2	Bellary	Construction of Bridge at km 25 20 on Bellary-Maka alur road across HLC	MDR	50 00
3	Bellary	Construction of Bridge at km 2 60 on Bellary-Belagal Haragina Dona road acros HLC	MDR	50 00
4	Hospet	Construction of Bridge at km 94 65 and at km 97 15 on Lingasgur Kuduthini State Highway	SH-29	45 00
5	Kudligi	Construction of Bridge at km 10 00 on Kotturu-Sokke Border Road	MDR	40 00

6	Sıruguppa	Constructıon of Brıdge at km 12 35 & at 14 20 on raravı belur SH	SH-63	70 00
		Total		**375 00**

Dıstrıct wıse Detaıls of Brıdges takeb up ın Hyderabad Karnataka under Phase IV

Sl No	Dıstrıct Taluk	Locatıon of Brıdges	SH MDR	Cost Est (Rs ın Lakhs)
Phase II				
1	Afzalpur	Constructıon of Brıdge at KM 1 2 afzalpur-ghattalga road		50 00
2	Afzalpur	Constructıon of Brıdge at KM 16 80 Gulbarga Hosur road	SH-22	200 00
3	Afzalpur	Constructıon of Brıdge at KM 27 60 afzalpur-ghattalga road		30 00
4	Chıttapur	constructıon of brıdge on Gundugurthı-Sharawadı road neaf bagodı vıllage across kagına halla	MDR	400 00
5	Chıttapur	constructıon of brıdge on Gulbarga Hagaraga-Hebbala road across Kotnur Halla at km 14	MDR	100 00
6	Chıncholı	constructıon of Brıdge on Umarga border road to aland salgara mahagoa sulepet road at km 113 66 road	SH	100 00

7	Aland	Construction of Bridge on Lad Chincholi Madana Hipparaga At km 4 00	MDR	75 00
8	Gulbarga	Construction of Bridge on Gulbarga shahabad via marathura naganalli road at km 2 00 road	MDR	80 00
9	Chittapur sedam	Construction of bridge on Chitapura -ladlapura road at km 17 20 near allolli	MDR	60 00
		Total		**1095 00**

District/Taluk-Bidar

1	Bhalki	Construction of bridge on Aurad sadhashiv ghad road (SH- 34) at km 41 60 (Aurad town limit)	SH	30 00
2	Bhalki	Construction of bridge on Aurad sadhashiv ghad road (SH- 34) at km 41 60 (Aurad town limit)	SH	30 00
3	Bhalki	Construction of bridge on Bhalki Nilanga road at km 25 40	MDR	15 00
4	Bhalki	Construction of bridge on Halsur-mahagao SH at km g 4 10	SH	15 00
5	Bhalki	Construction of bridge on Halsur-mahagao SH at km g 4 60	SH	15 00
6	Basava kalyana	Construction of bridge on Basavakalyana rajola road at km 4 00	MDR	50 00

7	Basava kalyana	Construction of bridge on Halasur Mahagao SH-11 at km 23 60 across chulaki halla	SH	75 00
8	Basava kalyana	Construction of bridge on Aurad- Sadashiv gad at at km 97 20	SH	50 00
9	Basava kalyana	Construction of bridge on Basavakalyana-BM road at km 1 00	MDR	60 00
10	Basava kalyana Hulsur	Construction of bridge on Hosur-Mahagao SH-11 at km km 16 across Bellora Halla	SH	50 00
11	Bidar	Construction of bridge on Gadagi-Chillargi road at km 9 6	MDR	35 00
12	Bidar	Construction of bridge on Bidar-Munali road at km 9 6	MDR	35 00
13	Bidar	Construction of bridge on Kamalanagar-Gunali road SH 4 at km 62 60	MDR	35 00
14	Bidar Humnabad	Construction of bridge on Bagadala-Ramathirthavadi Baimalli road at km 2 90	MDR	35 00
15	Humnabad	Construction of bridge on NH-9 to Nirna Basanthapura Road at km 8 20	MDR	40 00

16	Humnabad	Construction of bridge on Bhalki Chincholi SH 75 at km 28 60	SH	30 00
17	Aurad	Construction of bridge on Wanamarapalli-Raichur Road SH 15 at km 10 00	SH	25 00
18	Aurad	Construction of bridge on Wanamarapalli-Raichur Road SH 15 at km 12 00	SH	25 00
		Total		**820 00**

District/Taluq - Raichur

1	Raichu Kalmal	Construction of Bridge on Vanamarapalli-Raichur road (SH-13) at km 302 60 (Sulthan River)	SH	120 00
2	Raichur	Construction of Bridge on Yaramaras-Dhongataramapura Road at km 5 8	MDR	90 00
3	Manvi	Construction of Bridge on Ramdurga-Manvi road (SH-14) (Near Jajipanoor village) at km 225 00	SH	90 00
4	Lingasgur Kustagi	Construction of Bridge on Mudagal/ Ramtnal road at km 2 00 (near bannigoda village)	MDR	60 00
5	Devadurga	Construction of Bridge on Mangoli-Bichali road km 169 00	SH	60 00

6	Devadurga	Construction of Bridge on Sankeswarahala- Hirirayakampi road at 7 29	MDR	60 00
7	Lingasgur	Construction of Bridge on Yaradona- Hirekotnekal road (Jimura) at km 5 40 near maidanapura village	MDR	120 00
8	Lingasgur	Construction of Bridge on Ramadurga-Manvi road at km 131 5 km	SH	60 00
9	Lingasgur	Construction of Bridge on Srirnagapatna Bidar road at km 463 00 km	SH	40 00
10	Sindhanur	construction of Bridge on Sindhanoor-varabally road km No 19 00	MDR	60 00
		Total		**820 00**

District/taluk Koppal

1	Gangavthi kanakagiri	Construction of Bridge across Singanala river on Karatagi-Hanumanal road at km 14 00	MDR	80 00
2	Koppal	Construction of Bridge on Koppal-Kinnal road to SH 23 Connectivity road at km 24.20	MDR	50 00
3	Koppal	Construction of Bridge on Dadegal-Hiresindagi road km 3 5	MDR	25 00
4	Kustagi	Construction of Bridge on Garjanala- to Bagalkot road at km 18 00	MDR	100 00

5	Yelburga	Construction of Bridge on Kukanur thimmapura road via Batapanahalli road at km 4 05	MDR	65 00
6	Gangavathi	Construction of Bridge across durgamma nala on link road at km 1 00 between RG road Gangavathi siddikeri Basapatna road	MDR	50 00
7	Gangavathi	Rehabilitation of Bridge across tungabadra river, abutments and aproach slabs on Lingasgur kuduthini road at km 83 00	SH	45 00
8	Gangavathi	Construction of Bridge to rover on Shriramnagar-Gangavathi at km 0 40	MDR	60 00
9	Gangavathi	Constructionof Bridge at 11 30 km on Masalapura-Venkatagiri road	MDR	25 00
10	Gangavathi	Constructionof Bridge at Sri ramanagara gangavathi road	MDR	20 00
		Total		**520 00**

District/Taluq Bellary

1	Siraguppa	Re-construction of Deck slab bridge on sandur-siraguppa road at km 97 80	SH	65 00
2	Siraguppa	Re-construction of RCC Deck slab bridge on sBellary talur road at km 19 20	MDR	90 00

3	Hospet	Re-construction of RCC Deck slab bridge on Lingasgur kuduthini road at km 87 8 and 88.20	SH	35 00
4	Hospet	Re-construction of RCC Deck slab bridge on Metri-srirampur road at km 4 90	MDR	45 00
5	Hospet	Re-construction of RCC Deck slab bridge on Sandur-siriguppa road at km 56 45	SH	20 00
6	Hospet	Re-construction of RCC Deck slab bridge on Lingasgur-Kudithini road at km 97 10	SH	20 00
7	Sandur	Re-construction of RCC Deck slab bridge on Mylara-Thoranagallu road at km 17 50	SH	20 00
8	Kurugodu	construction of RCC Deck slab bridge on Kampli-Kurugodu-kolur- road at km 17 50	MDR	60 00
9	Kurugodu	construction of Bridge on HLC canal at km 5 00 on Kekere road	MDR	80 00
10	Kurugodu	Re-construction of RCC Deck slab on Bellari-Moka-Alur Road at km 14 20	MDR	20 00
11	Kurugodu	Re-construction of RCC Deck slab on Bellari-Moka-Alur Road at km 14 60 00	MDR	20 00

12	Kurugodu	Re-construction of RCC Deck slab on Bellari-Moka-Alur Road at km 14 90	MDR	25 00
13.	Kurugodu	Construction of RCC wearing Coat to MCPC on Bellari-Moka-Alur-Road at km 18 10	MDR	55 00
14	Kurugodu	Construction of RCC Desk Slab on Moka-Basaragodu km 0 00	MDR	15 00
15.	Kurugodu	Construction of Bridge at Kekere road at km 3 00 on HLC Canal	MDR	80 00
		Total		**685 00**

ಇ) ಪ್ರಸ್ತುತ ಸಾಲಿನಲ್ಲಿ ನಾಲ್ಕನೆಯ ಹಂತದ ಸೇತುವೆಯ ನಿರ್ಮಾಣಕ್ಕಾಗಿ ವೆಚ್ಚಮಾಡಲಿರುವ ಹಣ ರೂ 3870 00 ಲಕ್ಷಗಳು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ ಇಲ್ಲಿಯವರೆಗೆ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ

ಪ್ರಶ್ನೆ ಸಂಖ್ಯೆ 61(219) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮ್ನಾಬಾದ್)

ಮಾನ್ಯ ಮುಖ್ಯಮತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಹಿಂದಿನ ಸರ್ಕಾರದ ಅವಧಿಯಲ್ಲಿ 24 ಜನ ಗುತ್ತಿಗೆ ನೌಕರರನ್ನು ಸೇವೆಯಲ್ಲಿ ಖಾಯಂ ಮಾಡುವಾಗ, ಹೊರಡಿಸಿದ್ದ ಡ್ರಾಫ್ಟ್‌ರೂಲ್ಸ್‌ಗೆ ಅಕ್ಷೇಪಣೆಗಳನ್ನು ಸಕಾಲದಲ್ಲಿ ಸಲ್ಲಿಸಿ, ಸ್ವೀಕೃತಿಯನ್ನು ಪಡೆದಿದ್ದರೂ, ಅಕ್ಷೇಪಣೆಗಳ ಬಗ್ಗೆ ಕ್ರಮ ಕೈಗೊಳ್ಳದೆ ತಟಸ್ಥರಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆರವರಿಂದ ಕೆಲವು ನೌಕರರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) 24 ಜನ ನೌಕರರನ್ನು ಖಾಯಂ ಮಾಡುವಾಗ ಅವರುಗಳು ಪ್ರಕರಣವು ನ್ಯಾಯಾಲಯದಲ್ಲಿದ್ದರೂ ಅವರುಗಳ ಕಡತವನ್ನು ಸಚಿವ ಸಂಪುಟಕ್ಕೆ ಮಂಡಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,` ಈ ನೌಕರರ ಕಡತವನ್ನು ಮಂಡಿಸಲು ಆದೇಶಿಸಿದ್ದರೂ, ಪ್ರಕರಣ ನ್ಯಾಯಾಲಯದಲ್ಲಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೇಳುವುದು ತಪ್ಪಲ್ಲವೇ,

ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಕೆ ಉದ್ದೇಶ ಪೂರ್ವಕವಾಗಿ ಈ ರೀತಿ ತಪ್ಪು ಮಾಹಿತಿ ನೀಡಿದ್ದರಿಂದ, ಇವರುಗಳು ನೊಂದು ನ್ಯಾಯಾಲಯದ ಮೊರೆ ಹೋಗಿರುತ್ತಾರೆ ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ರವರು 24 ಜನ ನೌಕರರ ಪ್ರಕರಣದಲ್ಲಿ ಕ್ರಮ ಕೈಗೊಂಡಂತೆ ಇವರ ವಿಷಯದಲ್ಲೂ ಸರ್ಕಾರದ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ

ಅ) ಕರಡು ನಿಯಮಾವಳಿಗಳಿಗೆ ಬಂದ ಎಲ್ಲಾ ಆಕ್ಷೇಪಣೆಗಳನ್ನು

ಪರಿಶೀಲಿಸಿದ ನಂತರ ಕರಡು ನಿಯಮಾವಳಿಯನ್ನು ಅಂತಿಮಗೊಳಿಸಿ ನಿಯಮಾವಳಿಯ ಷರತ್ತುಗಳನ್ನು ಪೂರೈಸಿದ 24 ಜನರ ಸೇವೆಯನ್ನು ಖಾಯಂಗೊಳಿಸಲಾಗಿದೆ

ಆ) ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಕೆಲವು ನೌಕರರು ಸದರಿ ನೇಮಕಾತಿಯ ನಿಯಮಗಳ ಅನುಬಂಧವನ್ನು ರದ್ದುಪಡಿಸುವಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿಯನ್ನು ದಾಖಲಿಸಿರುತ್ತಾರೆ ಈ ಬಗ್ಗೆ ನ್ಯಾಯ ಮಂಡಳಿಯ ತೀರ್ಪನನ್ನು ನಿರೀಕ್ಷಿಸಲಾಗಿದೆ

ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಕೆಯಲ್ಲಿ ಲಭ್ಯವಿದ್ದ ಮಾಹಿತಿಯನ್ನು ಕಡತದಲ್ಲಿ ಸಚಿವ ಸಂಪುಟಕ್ಕೆ ನೀಡಲಾಗಿದ್ದು ಸಚಿವ ಸಂಪುಟದ ತೀರ್ಮಾನದಂತೆ 28 ಜನರ ಸೇವೆಯನ್ನು ಖಾಯಂಗೊಳಿಸಲು ವಿಶೇಷ ನಿಯಮಾವಳಿಯನ್ನು ರಚಿಸಲಾಗಿದ್ದು ನಿಯಮಾವಳಿಯ ಷರತ್ತುಗಳನ್ನುಪೂರೈಸಿದ 24 ಜನರ ಸೇವೆಯನ್ನು ಖಾಯಂಗೊಳಿಸಲಾಗಿದೆ

ಪ್ರಶ್ನೆ ಸಂಖ್ಯೆ 64 (82) ಶ್ರೀ ನರಸಿಂಹನಾಯಕ್ (ರಾಜೂಗೌಡ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಸೂರಪುರ ತಾಲ್ಲೂಕಿನಲ್ಲಿ ಅನೇಕ ಪ್ರವಾಸಿ ತಾಣಗಳು ಹಾಗೂ ಪ್ರೇಕ್ಷಣಿಯ ಸ್ಥಳಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ, ಈ ಪ್ರವಾಸಿ ತಾಣ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ ಶ್ರೀರಾಮುಲು

ಅ) ಹೌದು

ಆ) ಸುರಪುರ ತಾಲ್ಲೂಕಿನಲ್ಲಿ ಕೆಲವು ಚಾರಿತ್ರಕ ಸ್ಮಾರಕಗಳಿದ್ದು ಇಲ್ಲಿನ ನಾರಾಯಣಪುರದ ಬಳಿ ಛಾಯಾಭಗವತೀ ದೇವಾಲಯವು ಪ್ರಸಿದ್ಧವಾಗಿದೆ

ಇಲ್ಲಿಂದ 3 ಕಿ ಮೀ ಕೆಳಗೆ ಕೃಷ್ಣಾ ನದಿಯು 60 ಮೀಟರ್ ಆಳಕ್ಕೆ ಧುಮುಕಿ ಜಲಪಾತ ನಿರ್ಮಿಸಿದೆ ಸುರಪುರದಲ್ಲಿರುವ ಗೋಪಾಲಸ್ವಾಮಿಯಗುಡಿ, ಅರಮನೆ ಮತ್ತು ಕೋಟೆಯ ಅವಶೇಷಗಳು ಪ್ರೇಕ್ಷಣೀಯ ಸ್ಥಳಗಳಾಗಿವೆ

ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಅಂಕಿ ಸಂಖ್ಯೆ ಹಾಗೂ ನಿವೇಶನಗಳ ಲಭ್ಯತೆಯ ಬಗ್ಗೆ ಖಚಿತ ಮಾಹಿತಿ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಪ್ರಶ್ನೆ ಸಂಖ್ಯೆ 68 (205) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಕೆ ಪಿ ಟಿ ಸಿ ಎಲ್ ನಿಂದ ಮಂಜೂರಾಗದ ವಿದ್ಯುತ್ ಉಪ ಸ್ಥಾವರಗಳ ನಿರ್ಮಾಣಕ್ಕೆ ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ಸ್ಥಾವರಗಳ ನಿರ್ಮಾಣ ವಿಳಂಬವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾದಿದ್ದಲ್ಲಿ, ಖಾಸಗಿ ಜಮೀನುಗಳನ್ನು ಆಯಾ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗೆ ಖರೀದಿಸಿ ಉಪಸ್ಥಾವರ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ,

ಇ) ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು,

ಶ್ರೀ ಹೆಚ್ ಡಿ ರೇವಣ್ಣ

ಅ) ಈ ಹಿಂದೆ, ಕೆ ಪಿ ಟಿ ಸಿ ಎಲ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಂದ ಮಂಜೂರಾಗುತ್ತಿದ್ದ ವಿದ್ಯುತಂ ಉಪ-ಕೇಂದ್ರಗಳ ನಿರ್ಮಾಣಕ್ಕೆ ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ವಿದ್ಯುತ್ ಉಪ ಕೇಂದ್ರಗಳ ನಿರ್ಮಾಣ ವಿಳಂಬವಾಗುತ್ತಿತ್ತು ಆದರೆ, ಈಗ ಆಸಗಿ ಜಮೀನುಗಳನ್ನು ಕ ವಿ ಪ್ರ ನಿ ನಿ ಯು ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆಗಳಲ್ಲಿ ನೇರವಾಗಿ ಖರೀದಿ ಮಾಡಲು ಸರ್ಕಾರವು ಕರ್ನಾಟಕ ಭೂ ಸುಧಾರಣೆ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿ

ಆದೇಶ ಹೊರಡಿಸಿರುತ್ತದೆ ಸರ್ಕಾರಿ ಭೂಮಿ ಲಭ್ಯವಿಲ್ಲದೆ ಕಡೆಗಳಲ್ಲಿ ಖಾಸಗಿ ಜಮೀನುಗಳನ್ನು ನೇರವಾಗಿ ಈಗ ಖರೀದಿಸುತ್ತಿರುವುದರಿಂದ, ವಿದ್ಯುತ್ ಉಪಕೇಂದ್ರಗಳ ನಿರ್ಮಾಣವನ್ನು ಕೈಗೊಳ್ಳುವಲ್ಲಿ ಅಷ್ಟೇನು ವಿಳಂಬವಾಗುತ್ತಿಲ್ಲ

ಆ) ಖಾಸಗಿ ಜಮೀನುಗಳನ್ನು ವಿದ್ಯುತ್ ಉಪ-ಕೇಂದ್ರಗಳ ನಿರ್ಮಾಣಕ್ಕೆ ಭೂಮಾಲೀಕರಿಂದ ಖರೀದಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂ ಬೆಲೆ ನಿಗದೀಕರಣ ಸಮಿತಿಯನ್ನು ಸರ್ಕಾರವು ರಚಿಸಿರುತ್ತದೆ ಭೂ ಮಾಲೀಕರು ಒಪ್ಪುವ ಹಾಗೂ ಮಾರುಕಟ್ಟೆ / ಮಾರ್ಗಸೂಚಿ ಬೆಲೆಗಳ ಆಧಾರದ ಮೇಲೆ ಕಂದಾಯ ಇಲಾಖೆಯು ನೀಡಿರುವ ನಿರ್ದೇಶನಗಳ ಪ್ರಕಾರ ಜಮೀನುಗಳನ್ನು ಖರೀದಿಸುವ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ

ಪ್ರಶ್ನೆ ಸಂಖ್ಯೆ 69 (217) ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೀಳಗಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ 33/11, 110/33 ಕೆ ವಿ ಸಾಮರ್ಥ್ಯದ ವಿದ್ಯುತ್ ವಿತರಣಾ ಸ್ಥಾವರಗಳೆಷ್ಟು

ಆ) ಈಗ ಕೈಗೆತ್ತಿಕೊಂಡಿರುವ ಸ್ಥಾವರ ಸಂಖ್ಯೆಗಳು

ಇ) ಹೊಸ ಸ್ಥಾವರಗಳಿಗೆ ಪಡೆದುಕೊಂಡ ಜಮೀನುಗಳ ರೈತರಿಗೆ ಅವರು ನೀಡಿದ ಜಮೀನಿಗೆಪರಿಹಾರ ನೀಡಲಾಗಿದೆಯೇ,

ಈ) ಇಲ್ಲವಾದಲ್ಲಿ, ಕಾರಣಗಳೇನು,

ಉ) ಕೋಲಾರ ಮತ್ತು ಅನಗವಾಡಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಜಮೀನು ನೀಡಿದ ರೈತರಿಗೆ ನಿಗದಿತ ಸಮಯದಲ್ಲಿ ಪರಿಹಾರ ನೀಡದಿರುವ ಬಗ್ಗೆ ಸರ್ಕಾರದ ಕ್ರಮಗಳೇನು,

ಶ್ರೀ ಹೆಚ್ ಡಿ ರೇವಣ್ಣ

ಅ) ಬೀಳಗಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಐದು 33/11 ಕೆ ವಿ ಮತ್ತು ಐದು 110/33/11 ಕೆ ವಿ ವಿದ್ಯುತ್ ಉಪ-ಕೇಂದ್ರಗಳು ಹಾಲಿ ಕಾರ್ಯನಿರ್ವಹಿಸುತ್ತಿವೆ

ಆ) ಬೀಳಗಿ ಮತಕ್ಷೇತ್ರದ್ಲಿಲ್ಲ ಹಾಲಿ ಮೂರು ಹೊಸ 110/33/11 ಕೆ ವಿ ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ

ಇ)&ಈ) ಬೀಳಗಿ ಮತಕ್ಷೇತ್ರದಲ್ಲಿ ಹೊಸದಾಗಿ ಸ್ಥಾಪಿಸುತ್ತಿರುವ 3 ವಿದ್ಯುತ್ ಉಪ ಕೇಂದ್ರಗಳ ಪೈಕಿ ಗಿರಿಸಾಗರ ಹಾಗೂ ಮರೆಗುದ್ದಿ ಉಪಕೇಂದ್ರಗಳ ಸ್ಥಾಪನೆಗೆ ಜಮೀನು ನೀಡಿದ ರೈತರುಗಳಿಗೆ ಪರಿಹಾರ ಧನ ನೀಡಲಾಗಿದೆ

ಶಿರಗುಪ್ಪಿ ಗ್ರಾಮದಲ್ಲಿ ಸ್ಥಾಪಿಸಲಾಗುತ್ತಿರುವ 110/11 ಕೆ ವಿ ವಿದ್ಯುತ್ ಉಪ ಕೇಂದ್ರದ ಜಮೀನಿನ ಖರೀದಿಗಾಗಿ ಜಮಖಂಡಿಯ ಉಪ ವಿಭಾಗಾಧಿಕಾರಿ ರವರಲ್ಲಿ ರೂ 9,04,030/- ಗಳನ್ನು ದಿನಾಂಕ 5-6-2006ರಂದು ಕೆ ಪಿ ಟಿ ಸಿ ಎಲ್ ವತಿಯಿಂದ ರೇವಣಿ ಇಡಲಾಗಿದೆ ಜಮಖಂಡಿಯ ಉಪ ವಿಭಾಗಾಧಿಕಾರಿಗಳ ಮೂಲಕ ಜಮೀನಿನ ಮಾಲೀಕರಿಗೆ ಪರಿಹಾರ ವಿತರಣೆ ಆಗಬೇಕಾಗಿರುತ್ತದೆ

ಉ)ಅನಗವಾಡಿ 33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಜಮೀನು ನೀಡಿದ ರೈತರಿಗೆ ಬಾಗಲಕೋಟೆ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್ ರವರ ಮೂಲಕ 1 79 ಲಕ್ಷ ರೂ ಗಳನ್ನು ದಿನಾಂಕ 22-10-2002 ರಂದು ನೀಡಲಾಗಿದೆ

ಅನಗವಾಡಿ 33/11 ಕೆ ವಿ ವಿದ್ಯುತ್ ಉಪ ಕೇಂದ್ರಕ್ಕ ಜಮೀನು ಮಾಲೀಕರಿಂದ 2 ಎಕರೆ ಖರೀದಿ ಮಾಡಿದ್ದು, ಕಂದಾಯ ಇಲಾಖೆಯು 2 ಎಕರೆ 10 ಗುಂಟೆ ಜಮೀನಿಗೆ ಡಿಮಾರ್ಕೇಷನ್ ಮಾಡಿಕೊಟ್ಟಿರುವುದರಿಂದ ತಂತಿ ಬೇಲಿ ಹಾಕಲಾಗಿದೆ ಆದರೆ ಜಮೀನಿನ ಮಾಲೀಕರು 3 ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆಯೆಂದು ಬೀಳಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಈ ಪ್ರಕರಣ ಈಗ ನ್ಯಾಯಾಲಯದ ಮುಂದಿದ್ದು, ನ್ಯಾಯಾಲಯದ ತೀರ್ಪಿನಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಕೋಲಾರ (ಮುಂಡಗನೂರು) 110/11 ಕೆ ವಿ ವಿದ್ಯುತ್ ವಿತರಣಾ

ಕೇಂದ್ರಕ್ಕೆ ಜಮೀನು ನೀಡಿದ ರೈತರು ಅಸಿಸ್ಟೆಂಟ್ ಕಮೀಷನರ್, ಜಮಖಂಡಿ ರವರ ಕಛೇರಿಯಿಂದ ಪರಿಹಾರ ರೂಪದಲ್ಲಿ ರೂ 3,46880/- ಮೊತ್ತವನ್ನು ದಿನಾಂಕ 10-5-2007 ರಂದು ಮತ್ತು ರೂ 20,154/- ಮೊತ್ತವನ್ನು ದಿನಾಂಕ 18-5-2007 ರಂದು ಪಡೆದಿರುತ್ತಾರೆ

ಪ್ರಶ್ನೆ ಸಂಖ್ಯೆ 71 (210) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸೌತಡ್ಕ ಮಹಾಗಣಪತಿ ಮುಕ್ತ ಧಾರ್ಮಿಕ ಪ್ರೇಕ್ಷಣೀಯ ಸ್ಥಳಕ್ಕೆ ರಾಜ್ಯ ಮತ್ತು ಹೊರರಾಜ್ಯಗಳ ಪ್ರವಾಸಿಗರು ಮತ್ತು ಭಕ್ತ ಜನರು ಅಧಿಕ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದು ಮೂಲಭೂತ ಸೌಕರ್ಯಗಳನ್ನು ಇಲಾಖೆಯುವರು ಒದಗಿಸಿಕೊಡಲು ಸರ್ಕಾರವು ಮುಂಧಾಗುವುದೆ,

ಆ) ಈ ಕ್ಷೇತ್ರದ ದೇವಾಲಯುವು ಯಾವುದೇ ಕಟ್ಟಡಗಳನ್ನು ಹೊಂದಿರದಿರುವ ಮುಕ್ತ ದೇವಳವಾಗಿದೆ, ಅಲ್ಲಿನ ಪ್ರಕೃತಿ ಸೌಂದರ್ಯವನ್ನು ನೋಡಲು ಕೂಡ ಹೆಚ್ಚಿನ ಜನರು ಭೇಟಿ ನೀಡುತ್ತಿರುವ ಕಾರಣ ಅತಿಥಿಗೃಹ ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಅವಶ್ಯಕ ವ್ಯವಸ್ಥೆಗಳನ್ನು ಇಲಾಕೆಯು ಒದಗಿಸಿಕೊಡಲು ಸರ್ಕಾರ ಕ್ರಮಕ್ಕೆಗೊಳ್ಳುವುದೇ?

ಶ್ರೀ ಬಿ ಶ್ರೀರಾಮುಲು

ಅ) ಹೌದು

ಆ) ಭೇಟಿ ನೀಡುತ್ತಿರುವ ಪ್ರವಾಸಿಗರ ಅಂಕಿ ಸಂಖ್ಯೆಯನ್ನು ಗಮನಿಸಿ

ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಕಾಮಗಾರಿಗಳನ್ನು ನಿರ್ಮಿಸಲು ಅಗತ್ಯವಾದ ಜಮೀನು/ನಿವೇಶನಗಳನ್ನು ಇಲಾಖೆಗೆ ಒದಗಿಸಲು ಜಿಲ್ಲಾ ಆಡಳಿತಕ್ಕೆ ಪತ್ರ ಬರೆದು ನಿವೇಶನ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಪ್ರಶ್ನೆ ಸಂಖ್ಯೆ 72 (181) ಶ್ರೀ ರಾಮಲಿಂಗರೆಡ್ಡಿ (ಜಯನಗರ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ, ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸಿರುವುದನ್ನು ದ್ವಿಚಕ್ರ ವಾಹನ ಚಾಲಕರು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ ಬೆಂಗಳೂರು ನಗರದಲ್ಲಿ ವಾಹನಗಳ ದಟ್ಟಣೆಯಿಂದ ದ್ವಿಚಕ್ರ ವಾಹನಗಳು ನಿಧಾನವಾಗಿ ಸಂಚರಿಸುತ್ತಿರುವುದರಿಂದ, ಹೆಲ್ಮೆಟ್ ಕಡ್ಡಾಯ ಗೊಳಿಸಿರುವುದನ್ನು ರದ್ದುಗೊಳಿಸಲು ಸರ್ಕಾರ ಆಲೋಚಿಸಿದೆಯೇ,

ಇ ತಮಿಳುನಾಡಿನಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸಿ, ಸಾರ್ವಜನಿಕ ಒತ್ತಾಯದ ಮೇರೆಗೆ ರದ್ದು ಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ ಹೆಲ್ಮೆಟ್ ಕಡ್ಡಾಯದಿಂದ ದ್ವಿಚಕ್ರ ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆ, ಕಿರುಕುಳವನ್ನು ತಪ್ಪಿಸಲು ಸರ್ಕಾರ ದ್ವಿಚಕ್ರ ವಾಹನ ಚಾಲಕರ ಮನವಿಗೆ ಸ್ಪಂದಿಸುತ್ತದೆಯೇ?

ಶ್ರೀ ಎಂ ಪಿ ಪ್ರಕಾಶ್

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ಇಂತಹ ಯಾವುದೇ ಮನವಿ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ

ಪ್ರಶ್ನೆ ಸಂಖ್ಯೆ 76 (72) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ ಮೈಸೂರು ಜಿಲ್ಲೆಯ ಹೆಚ್ ಡಿ ಕೋಟೆ ಸಮೀಪದ ಚಾಮಲಪುರದಲ್ಲಿ ಕಲ್ಲಿದ್ದಲು ವಿದ್ಯುತ್ ಸ್ಥಾವರ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ,

ಆ ಹಾಗಿದ್ದಲ್ಲಿ, ಉದ್ದೇಶಿತ ಸ್ಥಾವರ ಸ್ಥಾಪನೆಯಿಂದ ಜೀವರಾಶಿ ನಾಶವುಂಟಾಗುವುದೆಂದು ನಾಗರೀಕರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗುವುದೆಂದು ತಿಳಿಸಿ, ಮೈಸೂರು ಜಿಲ್ಲೆಯಾದ್ಯಂತ ಸ್ಥಾವರ ವಿರೋಧಿ ಚಳುವಳಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ ಜೀವರಾಶಿ ನಾಶ ಹಾಗೂ ನಾಗರೀಕರ ಅನಾರೋಗ್ಯಕ್ಕೆ ಕಾರಣವಾಗುವ ಉದ್ದೇಶಿತ ಸ್ಥಾವರದ ಸ್ಥಾಪನೆ ನಿಲ್ಲಿಸುವ ಬಗ್ಗೆ ಸರ್ಕಾರದ ನಿಲುವೇನು, ನಾಗರೀಕರಿಗೆ ಕೆಡುಕುಂಟು ಮಾಡುವ ಈ ಸ್ಥಾವರದ ಅವಶ್ಯಕತೆ ಇದೆಯೇ,

ಶ್ರೀ ಹೆಚ್ ಡಿ ರೇವಣ್ಣ

ಅ) ಹೌದು

ಆ) ಹೌದು

ಇ) ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಸರಿದೂಗಿಸುವ

ನಟ್ಟಿನಲ್ಲಿ ಮೈಸೂರು ಜಿಲ್ಲೆ ಹೆಚ್ ಡಿ ಕೋಟೆ ಸಮೀಪದ ಚಾಮಲಾಪುರ ಸಮೀಪ ಕಲ್ಲಿದ್ದಲು ವಿದ್ಯುತ್ ಸ್ಥಾವರನ್ನು ಸ್ಥಾಪಿಸಲು ಉದ್ದೇಶಿಸಿದೆ ವಿದ್ಯುತ್ ಸ್ಥಾವರದ ಸ್ಥಾಪನೆಯು ಇನ್ನು ಪ್ರಾರಂಭಿಕ ಹಂತದಲ್ಲಿದೆ ಯೋಜನೆಯನ್ನು ಅನುಷ್ಠಾನಗೊಳಿಸಲು ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರದ ಇವರಿಂದ ಯೋಜನೆಗೆ ಅನುಮೋದನೆಯನ್ನು ನೀಡಬೇಕಾಗಿರುತ್ತದೆ ಈ ಅನುಮೋದನೆಯನ್ನು ಅರಣ್ಯ ಮತ್ತು ಪರಿಸರ ಇಲಾಖೆಯು ಪರಿಸರ ಮತ್ತು ಸಾರ್ವಜನಿಕರ ಮೇಲೆ ಉಂಟಾಗಬಹುದಾದ ಪ್ರಭಾವಗಳನ್ನು ಪರಿಗಣಿಸಿ Environment Impact Assessment ಅಧ್ಯಯನ ಮಾಡಿದ ನಂತರವೇ ಈ ಯೋಜನೆಗೆ ಒಪ್ಪಿಗೆಯನ್ನು ನೀಡುತ್ತದೆ ಪರಿಸರದ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಅಧ್ಯಯನವನ್ನು (Environment Impact Assessment) ಮಾಡಬೇಕಾಗಿರುತ್ತದೆ

ಪ್ರಶ್ನೆ ಸಂಖ್ಯೆ 80 (213) ಶ್ರೀ ಶಿವರಾಮು (ಗಂಡಸಿ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಯಾವ ಜಿಲ್ಲೆಗೆ ಯಾವಾಗ ಮಂಜೂರಾತಿಯಾಗಿರುತ್ತದೆ,

ಆ ಈ ಯೋಜನೆಗೆ ಮಂಜೂರಾತಿಯಾಗಿರುವ ಮೊತ್ತವೆಷ್ಟು, (ಜಿಲ್ಲಾವಾರು ವಿವರ ನೀಡುವುದು)

ಇ ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ಹೆಸರು, ಮೊತ್ತ ಪ್ರಗತಿ ಮತ್ತು ಪೂರ್ಣಗೊಳ್ಳಲು ಕರಾರಿನಂತೆ ಅಂತಿಮ ದಿನಾಂಕ ಯಾವುದು (ಜಿಲ್ಲಾವಾರು ನೀಡುವುದು),

ಈ ಕರಾರಿನಂತೆ ಪೂರ್ಣಗೊಳ್ಳದಿದ್ದಲ್ಲಿ ಕಾರಣಗಳೇನು,

ಶ್ರೀ ಹೆಚ್ ಡಿ ರೇವಣ್ಣ

ಅ)&ಆ) ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯು

ರಾಜ್ಯದ 26 ಜಿಲ್ಲೆಗಳಿಗೆ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಮಂಜೂರಾತಿಯಾಗಿರುತ್ತದೆ ಮಂಜೂರಾತಿಯಾಗಿರುವ ದಿನಾಂಕ, ಮಂಜೂರಾತಿಯಾಗಿರುವ ಮತ್ತು ಬಿಡುಗಡೆಯಾಗಿರುವ ಮೊತ್ತಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ

ಇ) ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ಹೆಸರು, ಗುತ್ತಿಗೆಯ ಮೊತ್ತ, ಕಾಮಗಾರಿಗಳ ಪ್ರಗತಿ ಮತ್ತು ಕರಾರಿನಂತೆ ಪೂರ್ಣಗೊಳ್ಳಲು ನಿಗದಿಪಡಿಸಿರುವ ಅಂತಿಮ ದಿನಾಂಕಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ

ಈ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್), ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ) ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ)ಗಳಲ್ಲಿ ಈ ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳು ಪ್ರಗತಿಯಲ್ಲಿವೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಧಾರವಾಡ, ಗದಗ, ಹಾವೇರಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳ ಕಾಮಗಾರಿಗಳು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಫಲಾನುಭವಿಗಳ ಪಟ್ಟಿಗಳು ಪೂರ್ತಿಯಾಗಿ ಸರಿಯಾದ ಸಮಯಕ್ಕೆ ಜಿಲ್ಲಾ ಪಂಚಾಯ್ / ತಾಲ್ಲೂಕು ಪಂಚಾಯತ್‌ಗಳಿಂದ ಲಭ್ಯವಾಗದೇ ಇರುವುದರಿಂದ ಕರಾರಿನಂತೆ ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ವಿಳಂಬವಾಗಿರುತ್ತದೆ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯಾಪ್ತಿಯಲ್ಲಿ, ಫೆಬ್ರವರಿ -07 ರಿಂದ ಏಪ್ರಿಲ್-07ರ ಅವಧಿಯಲ್ಲಿ ಕಾವೇರಿ ನ್ಯಾಯಾಧೀಕರಣದ ತೀರ್ಪಿನ ವಿರುದ್ಧ ಜರುಗಿದ ಪ್ರತಿಭಟನೆ, ರಸ್ತೆ, ಚಳುವಳಿ, ಬಂದ್ ಇತ್ಯಾದಿಗಳಿಂದಾಗಿ ಸಾಮಗ್ರಿಗಳನ್ನು ಕೆಲಸ ಪ್ರಗತಿಯಲ್ಲಿರುವ ಹಳ್ಳಿಗಳಿಗೆ ಸಾಗಿಸಲು ಅಡಚಣೆ ಉಂಟಾಯಿತು

ಈಗಾಗಲೇ, ಸುಮಾರು 300 ಕೋಟಿ ರೂ ಗಳನ್ನು ವಿದ್ಯುತ್ ಸರಬರಾಜು ಕಂಪನಿಗಳು ವೆಚ್ಚಮಾಡಿರುತ್ತವೆ ಆದರೆ ಭಾರತ ಸರ್ಕಾರದಿಂದ

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಶಿವರಾಮುರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 213ರ ಪ್ರಶ್ನೆಗ ಅನುಬಂಧ-1 ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ಮಂಜೂರಾತಿಯಾದ ದಿನಾಂಕ, ಮಂಜೂರಾತಿ ಆಗಿರುವ ಮೊತ್ತ ಮತ್ತು ಬಿಡುಗಡೆಯಾದ ಮೊತ್ತದ ಜಿಲ್ಲಾವಾರು ವಿವರಗಳು

ಕ್ರ.ಸಂ	ಜಿಲ್ಲೆಯ ಹೆಸರು	ಮಂಜೂರಾತಿ ದಿನಾಂಕ	ಮಂಜೂರಾತಿ ಆಗಿರುರವ ಮೊತ್ತ	ಬಿಡುಗಡೆಯಾದ ಮೊತ್ತ
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ				
1	ಬೆಂಗಳೂರು ಗ್ರಾಮೀಣ	14-09-2005	2604	11 47
2	ಚಿತ್ರದುರ್ಗ	04-10-2005	29 24	13 57
3	ದಾವಣಗೆರೆ	04-10-2005	29 72	12 62
4	ಕೋಲಾರ	04-10-2005	22 01	9 4
5	ತುಮಕೂರು	14-10-2005	16 26	7 04
	ಒಟ್ಟು		**123 27**	**54 1**
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ				
1	ಉಡುಪಿ	05-12-2006	14 45	-
2	ದಕ್ಷಿಣ ಕನ್ನಡ	05-12-2006	24 6	-
3	ಶಿವಮೊಗ್ಗ	05-12-2006	21 93	-
4	ಚಿಕ್ಕಮಗಳೂರು	05-12-2006	29 23	-
	ಒಟ್ಟು		**90 21**	-
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ				
1	ಮಂಡ್ಯ	04-10-2005	8 19	3 92
2	ಮೈಸೂರು	04-10-2005	37 42	13 43
3	ಚಾಮರಾಜನಗರ	05-12-2006	9 73	-
4	ಹಾಸನ	04-10-2005	32 54	14 99
5	ಕೊಡಗು	05-12-2006	33 61	-
	ಒಟ್ಟು		**121 49**	

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ

1	ಧಾರವಾಡ	14-09-2005	13 29	5 7
2	ಗದಗ	04-10-2005	13 82	5 49
3	ಹಾವೇರಿ	04-10-2005	19 61	7 8
4	ಬಿಜಾಪುರ	04-10-2005	23 29	9 09
5	ಬಾಗಲಕೋಟೆ	04-10-2005	25 57	11 71
6	ಬೆಳಗಾವಿ	05-12-2006	41 56	0
7	ಉತ್ತರಕನ್ನಡ	05-12-2006	23 63	0
	ಒಟ್ಟು		**160 77**	**39 79**

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ

1	ಗುಲ್ಬರ್ಗಾ	05-12-2006	39 25	7 327
2	ಬೀದರ್	04-10-2005	16 74	9 993
3	ರಾಯಚೂರು	04-10-2005	21 78	7 438
4	ಕೊಪ್ಪಳ	04-10-2005	17 33	7 438
5	ಬಳ್ಳಾರಿ	04-10-2005	22 54	8 923
	ಒಟ್ಟು		**117 64**	**33 681**
ರಾಜ್ಯದ ಒಟ್ಟು ಮೊತ್ತ			**613.38**	**159 911**

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಶಿವರಾಮುರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 213ರ ಪ್ರಶ್ನೆಗ ಅನುಬಂಧ-2 ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ಗುತ್ತಿಗೆದಾರರಹೆಸರು ಗುತಿಗೆ ಮೊತ್ತ ಪ್ರಗತಿ ಮತ್ತು ಕರಾರಿನಂತೆ ನಿಗದಿಪಡಿಸಿರುವ ಅಂತಿಮ ದಿನಾಂಕದ ಜಿಲ್ಲಾವಾರು ವಿವರಗಳು

ಕ್ರಸಂ	ಜಲ್ಲೆಯ ಹೆಸರು	ಗುತ್ತಿಗೆದಾರರ ಹೆಸರು	ಗುತ್ತಿಗೆ ಮೊತ್ತ	ಶೇಕಡಾವಾರು ಪ್ರಗತಿ	ಕರಾರಿನಂತೆ ನಿಗದಿ ಪಡಿಸಿರುವ ಅಂತಿಮ ದಿನಾಂಕ
1	ಬೆಂ ಗ್ರಾಮೀಣ	ಮೆ/ಎಸ್ ಪಿ ಎಂ ಎಲ್ ಬೆಂಗಳೂರು	38 43	26 01	16 30 08
2	ಚಿತ್ರದುರ್ಗ	ಮೆ/ಎಸ್ ಪಿ ಎಂ ಎಲ್ ಬೆಂಗಳೂರು	41 77	34 33	16 03 08
3	ದಾವಣಗೆರೆ	ಮೆ/ಎಲ್ & ಟಿ ಬೆಂಗಳೂರು	45 86	59 27	26 03 08
4	ಕೋಲಾರ	ಮೆ/ಎಲ್ & ಟಿ ಬೆಂಗಳೂರು	32 39	20 79	16 03 08
5	ತುಮಕೂರು	ಮೆ/ಎಲ್ & ಟಿ ಬೆಂಗಳೂರು	24 07	16 72	16 3 08
		ಒಟ್ಟು	**182 52**		

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

1	ಮಂಡ್ಯ	ಮೆ/ಎಬಿಬಿ ಲಿ ಬೆಂಗಳೂರು	3 92	92 07	31 01 2007
2	ಮೈಸೂರು	ಮೆ/ಎಬಿಬಿ ಲಿ, ಬೆಂಗಳೂರು	13 43	50	31 01 2007
3	ಚಾಮರಾಜನಗರ	ಮೆ/ಸುಭಾಷ್ ಪ್ರಾಜೆಕ್ಟ್ಸ್ & ಮಾರ್ಕಟಿಂಗ್ (ಲಿ) ಬೆಂಗಳೂರು	3 92 18 48	92 07 -	31 01 2007 ನವೆಂಬರ್-07
4	ಹಾಸನ	ಮೆ/ದೀಪಕ್ ಕೇಬಲ್ಸ್ ಇಂಡಿಯಾ ಲಿ ಬೆಂಗಳೂರು	14 99	40 48	31 01 2007

5	ಕೊಡಗು	ಮೆ/ದೀಪಕ್ ಕೇಬಲ್ಸ್ ಇಂಡಿಯಾ ಲಿ, ಬೆಂಗಳೂರು	60 14	–	ಮಾರ್ಚ್–08
		ಒಟ್ಟು	**110 96**		

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ

1	ಧಾರವಾಡ	ಮೆ/ಎಬಿಬಿ ಲಿ, ಬೆಂಗಳೂರು	23 46	92	17 2 2007
2	ಗದಗ	ಮೆ/ಜಿ ವಿ ಪಿ ಆರ್ ಲಿ ಹೈದರಾಬಾದ್	22 79	75	17 2 2007
3	ಹಾವೇರಿ	ಮೆ/ಎಬಿಬಿ ಲಿ ಬೆಂಗಳೂರು	35 34	92	17 2 07
4	ಬಿಜಾಪುರ	ಮೆ/ಜಿ ವಿ ಪಿ ಆರ್ ಲಿ ಹೈದರಾಬಾದ್	39 56	88	17 2 2007
5	ಬಾಗಲಕೋಟೆ	ಮೆ/ಪಾವನಿ ಕಂಟ್ರೋಲ್ಸ್ ಮತ್ತು ಪೆನಾಲ್ಸ್ ಲಿ, ಹೈದರಾಬಾದ್	44 18	92	17 2 2007
6	ಬೆಳಗಾವಿ	ಮೆ/ದೀಪಕ್ ಕೇಬಲ್ಸ್ ಇಂಡಿಯಾ ಲಿ ಬೆಂಗಳೂರು	41 31	–	12 02 08
7	ಉತ್ತರಕನ್ನಡ	ಮೆ/ಎಬಿಬಿ ಲಿ, ಬೆಂಗಳೂರು	41 31	–	12 02 08
		ಒಟ್ಟು	**278 63**	**439**	

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪೆನಿ

1	ಗುಲ್ಬರ್ಗಾ	ಮೆ/ನಾಗಾರ್ಜುನ ಕನಸ್ಟ್ರಕ್ಷನ್ ಲಿ, ಹೈದರಾಬಾದ್	58 23	–	ಜನವರಿ–2008
2	ಬೀದರ್	ಮೆ/ಜಿ ವಿ ಪಿ ಆರ್ ಇಂಜನಿಯರ್ಸ್ ಹೈದರಾಬಾದ್	26 48	58	ಸೆಪ್ಟಂಬರ್–07
3	ರಾಯಚೂರು	ಮೆ/ಎಬಿಬಿ ಲಿ ಬೆಂಗಳೂರು	36 9	85	ಡಿಸೆಂಬರ್–7

4	ಕೊಪ್ಪಳ	ಮೆ/ವಿಜಯ ಎಲೆಕ್ಟ್ರಿಕಲ್ಸ್	24 02	48	ಸೆಪ್ಟಂಬರ್-07
5	ಬಳ್ಳಾರಿ	ಮೆ/ಜಿ ವಿ ಪಿ ಆರ್ ಇಂಜಿನಿಯರ್ಸ್ ಹೈದರಾಬಾದ್	33 54	88	ಡಿಸೆಂಬರ್-07
		ಒಟ್ಟು	**179 17**		
		ರಾಜ್ಯದ ಒಟ್ಟು ಮೊತ್ತ	**751 28**		

ಬಿಡುಗಡೆಯಾಗಿರುವ ಒಟ್ಟು ಮೊತ್ತ ಸುಮಾರು 160 ಕೋಟಿ ರೂಗಳು ಮಾತ್ರ. ಭಾರತ ಸರ್ಕಾರದಿಂದ ಹಣ ಬಿಡುಗಡೆಯಾಗುವಲ್ಲಿ ಉಂಟಾಗಿರುವ ವಿಳಂಬದಿಂದಾಗಿ ಗುತ್ತಿಗೆದಾರರಿಗೆ ಸಕಾಲದಲ್ಲಿ ಹಣವನ್ನು ಪಾವತಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಾಧ್ಯವಾಗುತ್ತಿಲ್ಲ ಇದೂ ಸಹ ಕಾಮಗಾರಿಗಳ ನಿರ್ವಹಣೆಯಲ್ಲಿನ ವಿಳಂಬಕ್ಕೆ ಮುಖ್ಯ ಕಾರಣವಾಗಿರುತ್ತದೆ.

ಪ್ರಶ್ನೆ ಸಂಖ್ಯೆ 81 (191) ಶ್ರೀ ಸಿದ್ದು ಸಾವದಿ (ಜಮಖಂಡಿ)

ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ತಾಲ್ಲೂಕನ ಜಂಬಗಿ ಬಿ ಕೆ ಗ್ರಾಮದ ಮುಂದೆ ಕೃಷ್ಣಾ ನದಿಗೆ ಸೇತುವೆ ನಿರ್ಮಿಸುವ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ, ಯಾವಾಗ ಮಂಜೂರಾತಿ ಕೊಟ್ಟು ಕೆಲಸವನ್ನು ಪ್ರಾರಂಭಿಸಲಾಗುವುದು,

ಇ) ಈ ಸೇತುವೆ ತಾಲ್ಲೂಕಿನ ಸಂಪರ್ಕ ದೃಷ್ಟಿಯಿಂದ ಬಹಳ ಅವಶ್ಯವಿದ್ದು, ಪ್ರತಿ ವರ್ಷ ಬರುವ ಮಹಾಪೂರದಿಂದ ಜಮಖಂಡಿ ನಗರವನ್ನು ನಡುಗಡ್ಡೆ ಆಗುವುದನ್ನು ತಪ್ಪಿಸುವ ದೃಷ್ಟಿಯಿಂದ ತುರ್ತಾಗಿ ಅಂದರೆ ಇದೇ ವರ್ಷದಲ್ಲಿ ಈ ಕಾರ್ಯವನ್ನು ಕೈಗೊಳ್ಳಲಾಗುವುದು?

ಹೆಚ್ ಡಿ ರೇವಣ್ಣ

ಅ) ಬಂದಿದೆ

ಆ) ಈ ಸೇತುವೆಯ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಯ ಆಧಾರದ ಮೇಲೆ ಕೈಗೊಳ್ಳಲು ಬಗ್ಗೆ ಪರಿಗಣಿಸಲಾಗುವುದು

ಪ್ರಶ್ನೆ ಸಂಖ್ಯೆ 82 (192) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ಉತ್ತರ ಕರ್ನಾಟಕದ ನಗರಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ದೃಷ್ಟಿಯಿಂದ ಈಗಾಗಲೇ ಮಂಜೂರು ಮಾಡಿದ ಎಡಿಬಿ ಯೋಜನೆಯ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು,

2 ಇದುವರೆಗೆ ಈ ಕಾರ್ಯವನ್ನು ಪ್ರಾರಂಭಿಸದೆ ಇರುವ ಕಾರಣಗಳೇನು,

3 ವೇಗವಾಗಿ ಬೆಳೆಯುತ್ತಿರುವ ನಗರಗಳ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಯುಜಿಡಿ ಡ್ರೈನೇಜು ಶೌಚಾಲಯ ರಸ್ತೆ ವಿದ್ಯುತ್ ದೀಪ ಈ ರೀತಿ ಅನೇಕ ಸಮಸ್ಯೆಗಳ ಅಭಿವೃದ್ಧಿಗೆ ಎಡಿಬಿಯಲ್ಲಿ ಮಂಜೂರಾದ ಹಣ ಕಡಿಮೆಯಾಗಿದ್ದು, ಅದನ್ನು ಹೆಚ್ಚಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ

1) ಏಷಿಯನ್ ಅಭಿವೃದ್ಧಿ ಬ್ಯಾಂಕ್ ಡಿಸೆಂಬರ್ 2006 ಜನವರಿ 2007ರಲ್ಲಿ ಕಾರ್ಯಕ್ರಮಕ್ಕೆ ಅನುಮೋದನೆ ನೀಡಿರುತ್ತದೆ

ಕಾರ್ಯಕ್ರಮ ಸಮಾಲೋಚಕರ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಯೋಜನೆಗೆ ಅಗತ್ಯವಾದ ಭೂಸ್ವಾಧೀನಪಡಿಸಿಕೊಂಡ ನಂತರ ಕಾಮಗಾರಿಗಳನ್ನು ಪ್ರಾಂಭಿಸಲಾಗುವುದು

2) ಸಮಾಲೋಚಕರನ್ನು ಆಗಸ್ಟ್ 2007ರಲ್ಲಿ ನೇಮಕಗೊಳಿಸುವ ಸಾಧ್ಯತೆಯಿದ್ದು, ಸವಾಲೋಲಕರ ನೇಮಕಾತಿ ಹಾಗೂ ಭೂಸ್ವಾಧೀನ ಪಡಿಸಿಕೊಂಡ ನಂತರ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ವಿಳಂಬವಾಗಿದೆ

3) ಯೋಜನಾ ವರದಿಯನ್ನು ಆಧರಿಸಿ ಹಣದ ಹಂಚಿಕೆ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಇದಕ್ಕೆ ಎಡಿಬಿಯು ಅನುಮೋದನೆ ನೀಡಿರುತ್ತದೆ, ಯೋಜನಾ ಗಾತ್ರ ಹೆಚ್ಚಿಸುವ ಬಗ್ಗೆ ಯಾವುದೇ ಪ್ರಸ್ತಾಪ ಇರುವುದಿಲ್ಲ

ಪ್ರಶ್ನೆ ಸಂಖ್ಯೆ 83 (193) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ಬಸ್‌ಘಟಕಕ್ಕೆ ಪೂರೈಸಿದ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು, ಅವುಗಳಲ್ಲಿ ಅವಧಿ ಮೀರಿದ ಅಂದರೆ ಇಲಾಖೆ ನಿಯಮಕ್ಕಿಂತ ಹೆಚ್ಚು ಕಿ ಮೀ ಕ್ರಮಿಸಿದ ಬಸ್‌ಗಳ ಸಂಖ್ಯೆ ಎಷ್ಟು,

ಆ) ಬಹಳ ಹಳೆಯ ಬಸ್‌ಗಳನ್ನು ಓಡಿಸುವುದರಿಂದ ಅವು ಅಲ್ಲಲ್ಲೇ ನಿಂತು, ಪ್ರಯಾಣಿಕರಿಗೆ ತೊಂದರೆ ಆಗುತ್ತಿರುವುದಷ್ಟೆ ಅಲ್ಲದೇ ಹೆಚ್ಚಾಗಿ ಅಪಘಾತಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ)ಹಾಗಿದ್ದಲ್ಲಿ, ಯಾವಾಗ ಅವುಗಳನ್ನು ಬದಲಾಯಿಸಿ ಹೊಸ ಬಸ್‌ಗಳನ್ನು ಘಟಕಕ್ಕೆ ಪೂರೈಸಲಾಗುವುದು, ಎಷ್ಟು ಬಸ್‌ಗಳನ್ನು ಪೂರೈಸಲಾಗುವುದು,

ಈ) ತಾಲ್ಲೂಕಿನ ಗ್ರಾಮಾಂತರದಲ್ಲಿ ಅನೇಕ ಬಸ್‌ಗಳ ಬೇಡಿಕೆ ಇದ್ದು ಅವುಗಳ ಸಂಚಾರವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಚಲುವರಾಯಸ್ವಾಮಿ

ಅ) ಒಟ್ಟು 122 ವಾಹನಗಳು ಇವುಗಳಲ್ಲಿ 40 ವಾಹನಗಳು ಅವಧಿ ಮೀರಿದ ವಾಹನಗಳಿರುತ್ತವೆ

ಆ) ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ವಾಹನಗಳನ್ನೇ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ

ಇ) ಪ್ರಸಕ್ತ 2007-08ನೇ ಸಾಲಿನಲ್ಲಿ ಜಮಖಂಡಿ ಘಟಕದಲ್ಲಿ ಎಲ್ಲಾ

40 ಹಳೆಯ ವಾಹನಗಳನ್ನು ಅನುಪಯುಕ್ತಗೊಳಿಸಿ ಹೊಸ ವಾಹನಗಳನ್ನು ಒದಗಿಸಲಾಗುವುದು

ಈ) ಪ್ರಸ್ತುತ 4 ಅನುಸೂಚಿಗಳಿಗೆ ಬೇಡಿಕೆ ಇದ್ದು ಅವುಗಳನ್ನು ಕೂಡಲೇ ಪ್ರಾರಂಭಿಸಲಾಗುವುದು

ಪ್ರಶ್ನೆ ಸಂಖ್ಯೆ 84 (218) ಶ್ರೀ ಸೋಮಲಿಂಗಪ್ಪ ಎಂ ಎಸ್ (ಶಿರಗುಪ್ಪ)

ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1) ಶಿರುಗುಪ್ಪ ಕ್ಷೇತ್ರದಲ್ಲಿ ಹರಿಯುವ ತುಂಗಭದ್ರ ನದಿಗೆ ನಿಟ್ಟೂರು ಮತು ಸಿಂಗಪೂರ ನಡುವೆ ಸೇತುವೆ ನಿರ್ಮಾಣ ಮಾಡುವ ಅಶವ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

2) ಹಾಗಿದ್ದಲ್ಲಿ, ಯಾವಾಗ ಸೇತುವೆ ನಿರ್ಮಾಣ ಮಾಡಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ

1) ಬಂದಿದೆ

2) ಈ ಸೇತುವೆಯ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಯ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ಪರಿಗಣಿಸಲಾಗುವುದು

ಪ್ರಶ್ನೆ ಸಂಖ್ಯೆ 85 (126) ಶ್ರೀ ಸುರೇಶ್ ಎಸ್ ಮಾರ್ಿಹಾಳ (ಕಿತ್ತೂರು)

ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ ಕಿತ್ತೂರು ಮತಕ್ಷೇತ್ರದಲ್ಲಿ 2005-06, 2006-07ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳು ಯಾವುವು

ಹಾಗೂ ಮಂಜೂರಾದ ಅನುದಾನವೆಷ್ಟು?

ಆ 2005–06ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಗುತ್ತಿಗೆದಾರರು ಇದುವರೆಗೆ ಕಾರ್ಯಾರಂಬ ಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ ಹಾಗಿದ್ದಲ್ಲಿ ಅವರುಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್ ಡಿ ರೇವಣ್ಣ

ಅ) ಕಿತ್ತೂರು ಮತಕ್ಷೇತ್ರದಲ್ಲಿ 2005–06, 2006–07ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರವನ್ನು ಅನುಬಂಧ–1 (ಅ ಮತ್ತು ಬ)ದಲ್ಲಿ ನೀಡಲಾಗಿದೆ ಮಂಜೂರಾದ ಅನುದಾನ ವಿವರ ಕೆಳಕಂಡಂತಿದೆ

ಕ್ರ.ಸಂ	ವರ್ಷ	ಮಂಜೂರಾದ ಅನುದಾನ
1	2005–06	20 00
2	2006–07	20 50
	ಒಟ್ಟು	**40 50**

ಆ) 2005–06ನೇ ಸಾಲಿನ ಎಲ್ಲಾ ಕಾಮಗಾರಿಗಳನ್ನು ಮೆ ಕಲ್ಲೂರ ಕನ್ಸ್‌ಟ್ರಕ್ಷನ್, ಗುತ್ತಿಗೆದಾರರು, ವರ್ಗ–1, ಇವರಿಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ - 1 (ಅ)

ಕಿತ್ತೂರು ಮತಕ್ಷೇತ್ರದಲ್ಲಿ 2005-06 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ರ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ ಹಾಗೂ ಅನುದಾನ

ಕ್ರಸಂ	ಕಾಮಗಾರಿಯ ಹೆಸರು	ಮೂಲ ಮಂಜೂರಾದ ಅಂದಾಜು	05-06ನೇ ಸಾಲಿನ ಬಜೆಟ್ ಅಂದಾಜು
ಕಿತ್ತೂರ ಮತಕ್ಷೇತ್ರ (ಬೈಲಹೊಂಗಲ ತಾಲೂಕು)			
1	ಎಂ ಕೆ ಹುಬ್ಬಳ್ಳಿ,ಚಿಕ್ಕಬಾಗೇವಾಡಿ ಜಿಮು ರಸ್ತೆಯ ಆಯ್ದ ಭಾಗಗಳಲ್ಲಿ ಮರುಡಾಂಬರೀಕರಣ	6 00	3 00
2	ಎಂ ಕೆ ಹುಬ್ಬಳ್ಳಿ, ಹೊಳೆಹೊಸೂರ ನೇಗಿನ ಹಾಳ ಜಿಮು ರಸ್ತೆಯ ಆಯ್ದ ಬಾಗಗಳಲ್ಲಿ ಮರು ಡಾಂಬರೀಕರಣ	10 00	5 00
3	ಕಿಕ್ಕೇರಿ, ಬೈಲೂರ, ತಿಗಡೊಳ್ಳಿ ದೇವರತೀಗಿಹಳ್ಳಿ ರಸ್ತೆ ಆಯ್ದ ಭಾಗಗಲ್ಲಿ ಮರು ಡಾಂಬರೀಕರಣ	8 00	4 00
4	ಸಂಗೊಳ್ಳಿ ಕಿತ್ತೂರ ರಸ್ತೆಯ ಆಯ್ದ ಭಾಗಗಳಲ್ಲಿ ಮರುಡಾಂಬ ರೀಕರಣ ಹಾಗೂ ತಿಗಡಿ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10 00	5 00
5	ಮಲ್ಲಾಪೂರ-ಅವರಾದಿ-ಜಮಳೂರ ಖೋದಾನಪುರ ರಸ್ತೆಯ ಆಯ್ದ ಬಾಗ ಮರು ಡಾಂಬರೀಕರಣ	6 00	3 00
	ಒಟ್ಟು	**40 00**	**20 00**

ಅನುಬಂಧ-1 (ಬಿ)

ಕಿತ್ತೂರ ಮತಕ್ಷೇತ್ರದಲ್ಲಿ 2006-07ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054ರ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ ಹಾಗೂ ಅನುದಾನ

1	ಎಂ ಕೆ ಹುಬ್ಬಳ್ಳಿ, ಚಿಕ್ಕಬಾಗೇವಾಡಿ ಜಿ ಮು ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	6 00	2 00
2	ಎಂ ಕೆ ಹುಬ್ಬಳ್ಳಿ, ಹೊಳೆಹೊಸೂರ ನೇಗಿನ ಹಾಳ ಜಿಮು ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10 00	3 00
3	ಕಿಕ್ಕೇರಿ, ಬೈಲೂರ, ತಿಗಡೊಳ್ಳಿ ದೇವರತೀಗಿಹಳ್ಳಿ ರಸ್ತೆ ಆಯ್ದ ಭಾಗಗಲ್ಲಿ ಮರು ಡಾಂಬರೀಕರಣ	8 00	3 00
4	ಸಂಗೊಳ್ಳಿ ಕಿತ್ತೂರ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ ಹಾಗೂ ತಿಗಡಿ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	10 00	3 00
5	ಮಲ್ಲಾಪೂರ-ಅವರಾದಿ-ಜಮಳೂರ ಖೋದಾನಪುರ ರಸ್ತೆಯ ಆಯ್ದ ಬಾಗ ಮರು ಡಾಂಬರೀಕರಣ	6 00	2 00
6	ಎಂ ಕೆ ಹುಬ್ಬಳ್ಳಿ ಹೊಳೆಹೆಬಸೂರ ನೇರಿಹಾಳ ರಸ್ತೆಯ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ	25 00	7 50
	ಒಟ್ಟು	**65 00**	**20 50**

ಪ್ರಶ್ನೆ ಸಂಖ್ಯೆ 86 (77) ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ, ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿರುವ ಪೊಲೀಸ್ ಠಾಣೆಗಳೆಷ್ಟು ಕರ್ನಾಟಕ ರಾಜ್ಯದಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಪೊಲೀಸ್ ಠಾಣೆಗಳು ಬೇಕಾಗಿವೆ,

ಆ) ಧರ್ಮವೀರ ಸಮಿತಿ ವರದಿ ನೀಡಿ ಎಷ್ಟು ವರ್ಷವಾಯಿತು, ಈ ವರದಿ ಆಧಾರದ ಮೇಲೆ ಎಷ್ಟು ಕ್ರಮ ಕೈಗೊಳ್ಳಲಾಗಿದೆ,

ಇ) ಕೆಳ ವರ್ಗದ ಪೊಲೀಸ್‌ರಿಗೆ ಬಡಿ ವಿಲಂಭ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಕೆಳ ವರ್ಗದ ಪೊಲೀಸರ ಹದಗೆಟ್ಟಿರುವುದನ್ನು ಸರ್ಕಾರದ ಪರಿಶೀಲಿಸಿದೆಯೇ,

ಈ) ರಾಜ್ಯದಲ್ಲಿ ಬೆಂಗಳೂರು ಸೇರಿದಂತೆ 2004-05, 2005-06 ಹಾಗೂ ಇಲ್ಲಿಯವರೆಗೆ ನಡೆದಿರುವ ಕೊಲೆಗಳು ಹಾಗೂ ದರೋಡೆಗಳೆಷ್ಟು, ಯಾವ ಯಾವ ಪ್ರದೇಶದಲ್ಲಿ, ಇವರ ನೀಡುವುದು?

ಶ್ರೀ ಎಂ ಪಿ ಪ್ರಕಾಶ್

ಅ) 851 ಪೊಲೀಸ್ ಠಾಣೆಗಳು ಇರುತ್ತವೆ ಇನ್ನು 106 ಪೊಲೀಸ್ ಠಾಣೆಗಳ ಅವಶ್ಯಕತೆ ಇರುತ್ತದೆ

ಆ) ಧರ್ಮವೀರ ಸಮಿತಿ ವರದಿಯನ್ನು ನೀಡಿ 25 ವರ್ಷಗಳಾಗಿರುತ್ತದೆ

ಈ ವರದಿಯ ಆಧಾರದ ಮೇಲೆ ಜನಸಾಮಾನ್ಯರಿಗೆ ಉತ್ತಮ ರಕ್ಷಣೆ ಒದಗಿಸುವ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ವ್ಯವಸ್ಥೆಯನ್ನು ಅಭಿವೃದ್ಧಿ / ಸುಧಾರಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಪೊಲೀಸರಿಗೆ ವಸತಿಗೃಹ ನಿರ್ಮಾಣ, ವಸತಿಯೇತರ ಕಟ್ಟಡ ನಿರ್ಮಾಣ, ವಾಹನಗಳು, ಸಂಪರ್ಕ ಮತ್ತು ಸಾಧನೆಗಳು, ಗಣಕೀಕರಣ, ಅತ್ಯಾಧುನಿಕ

ಉಪಕರಣಗಳು, ತರಬೇತಿ ವಿಭಾಗಕ್ಕೆ ಮೂಲಭೂತ ಸೌಕರ್ಯಗಳು, ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ಬೆರಳು ಮುದ್ರೆ ಸಂಗ್ರಹಾಲಯಕ್ಕೆ ಉತ್ತಮವಾದ ಉಪಕರಣಗಳನ್ನು ಒದಗಿಸಿ ಪೊಲೀಸ್ ಇಲಾಖೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಂಡಿರುತ್ತದೆ

ಇ) ಹೌದು

ಈ) ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಸೇರಿದಂತೆ 2004, 2005,2006 ಮತ್ತು 2007ರಲ್ಲಿ (ಏಪ್ರಿಲ್ ವರೆಗೆ) ವರದಿಯಾದ ಕೊಲೆ ಮತ್ತು ದರೋಡೆ ಪ್ರಕರಣಗಳ ವಿವರ ಈ ಕೆಳಗಿನಂತಿದೆ

ಅಪರಾಧ ಶೀರ್ಷಿಕೆ	2004	2005	2006	2007 (ಏಪ್ರಿಲ್‌ವರೆಗೆ)
ಕೊಲೆ	1519	1609	1627	540
ದರೋಡೆ	286	327	449	130

ಕೊಲೆ ಮತ್ತು ದರೋಡೆ ಪ್ರಕರಣಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ

ಅನುಬಂಧ-ಅ

ಘಟನೆಯ ಸ್ಥಳ	ಕೊಲೆ 2004	2005	2006	2007 (upto April)	ದರೋಡೆ 2004	2005	2006	2007 (upto April)
ಬಾಗಲಕೋಟೆ	38	43	35	15	19	26	11	7
ಬೆಂಗಳೂರು ನಗರ	214	242	218	73	110	117	241	67
ಬೆಂಗಳೂರು ಜಿಲ್ಲೆ	152	171	175	66	17	26	27	1
ಬೆಳಗಾಂ	106	116	98	35	15	13	15	4
ಬಳ್ಳಾರಿ	42	58	56	31	4	5	8	2
ಬೀದರ್	0	38	38	17	10	2	6	5
ಬಿಜಾಪುರ	66	49	63	14	7	13	14	5
ಚಾಮರಾಜನಗರ	23	24	20	7	2	36	0	1
ಚಿಕ್ಕಮಗಳೂರು	29	35	40	13	5	6	4	3
ಸಿತ್ರದುರ್ಗ	32	21	38	10	6	4	2	0
ದಕ್ಷಿಣ ಕನ್ನಡ	24	35	28	11	8	12	7	2
ದಾವಣಗೆರೆ	38	40	23	7	7	3	10	1
ಧಾರವಾಡ	26	22	34	12	4	3	1	3
ಗದಗ	16	20	20	6	4	11	2	1
ಗುಲ್ಬರ್ಗಾ	102	115	99	30	16	9	10	4
ಹಾಸನ	61	63	61	19	4	6	6	0
ಹಾವೇರಿ	25	25	27	7	1	2	11	3
ಹುಬ್ಬಳ್ಳಿ ಧರವಾಡ	17	15	23	5	0	1	14	3
ಕೊಡಗು	21	34	27	11	1	1	0	1
ಕೋಲಾರ	59	73	96	29	3	4	11	1
ಕೆ ಜಿ ಎಫ್	16	8	14	2	0	1	0	1
ಕೊಪ್ಪಳ	25	29	25	3	3	11	7	1
ಮಂಡ್ಯ	58	43	58	15	3	4	3	0
ಮೈಸೂರು ನಗರ	29	27	33	12	1	2	4	2
ರಾಯಚೂರು	43	41	32	19	4	6	2	3
ರೈಲ್ವೇಸ್	20	17	22	8	1	1	3	1
ಶಿವಮೊಗ್ಗ	48	50	50	15	7	15	11	4
ತುಮಕೂರು	65	64	62	19	8	6	6	4
ಉಡುಪಿ	16	26	21	4	10	6	5	0
ಉತ್ತರಕನ್ನಡ	24	22	31	4	3	3	3	0
ಒಟ್ಟು	**1519**	**1609**	**1627**	**540**	**286**	**327**	**449**	**130**

ಪ್ರಶ್ನೆ ಸಂಖ್ಯೆ 89 (80) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತಮ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಆ) ಯಾವ ಯಾವ ಪ್ರದೇಶಗಳು ಪ್ರವಾಸಿ ಕೇಂದ್ರಗಳಾಗಿವೆ,

ಇ) ರಾಜ್ಯದಲ್ಲಿರುವ ಪ್ರವಾಸೋದ್ಯಮದ ಹೋಟೆಲ್‌ಗಳು ಎಷ್ಟು,

ಈ) ಪ್ರವಾಸೋದ್ಯಮ ಇಲಾಖೆ ಖಾಸಗಿಯವರಿಗೆ ಕೊಟ್ಟಿರುವ ಹೋಟೆಲ್‌ಗಳು ಎಷ್ಟು,

ಉ) ಅವು ಯಾವುವು?

ಶ್ರೀ ಬಿ ಶ್ರೀರಾಮುಲು

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಇಲಾಖೆಯು ಎರಡು ಪ್ರಮುಖ ಮಾರ್ಗಗಳನ್ನು ಅನುಸರಿಸುತ್ತಿದೆ

1 ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರವಾಸಿ ಮಾರುಕಟ್ಟೆಗಳಲ್ಲಿ ನೇರವಾಗಿ ಭಾಗವಹಿಸಿ ರಾಜ್ಯ ಪ್ರವಾಸಿ ತಾಣಗಳ ಬಗ್ಗೆ ಪ್ರಚಾರ ಹಾಗೂ ಜಾಹೀರಾತು ನೀಡುವುದು ಈ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ರಾಜ್ಯಕ್ಕೆ ಆಕರ್ಷಿಸುವುದು

2 ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸಾಂದ್ರತೆಯನ್ನು ಅನುಸರಿಸಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಇದಲ್ಲದೆ ಮಾರ್ಗಸೂಚಿ ಫಲಕಗಳು, ಹೋರ್ಡಿಂಗ್‌ಗಳ ಅಳವಡಿಕೆ ಹಾಗೂ ರಸ್ತೆ ಬದಿ ಸೌಲಭ್ಯಗಳ ನಿರ್ಮಾಣ ಇತ್ಯಾದಿ ಕ್ರಮಗಳನ್ನು ಇಲಾಖೆಯು ಕೈಗೊಳ್ಳುತ್ತಿದೆ

ಆ) ಪ್ರಸಿದ್ಧ ಪ್ರವಾಸಿ ಸ್ಥಳಗಳಾದ ಬೇಲೂರು, ಹಳೇಬೀಡು, ಶ್ರವಣ ಬೆಳಗೊಳ, ಶ್ರೀರಂಗಪಟ್ಟಣ, ಮೈಸೂರು, ಕೆ ಆರ್ ಎಸ್, ನಂಜನಗೂಡು, ಬಿ ಆರ್ ಹಿಲ್ಸ್, ಎಂ ಎಂ ಹಿಲ್ಸ್, ಬಾದಾಮಿ ಪಟ್ಟದ ಕಲ್ಲು, ಐಹೊಳೆ, ಹಂಪಿ, ಬಿಜಾಪುರ ಬೀದರ್ ಇತ್ಯಾದಿ 257 ಕ್ಕೂ ಹೆಚ್ಚು ಪ್ರವಾಸಿ ಕೇಂದ್ರಗಳನ್ನು ಪ್ರವಾಸೋದ್ಯಮ ನೀತಿಯಡಿ ಗುರುತಿಸಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಒಟ್ಟು 40 ಹೋಟೆಲ್‌ಗಳು ಇವೆ

ಈ) ಖಾಸಗೀಕರಣಗೊಳಿಸಿರುವ ಹೋಟೆಲ್‌ಗಳ ಸಂಖ್ಯೆ 24

ಉ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ

ಅನುಬಂಧ–2

ಈ ಕೆಳಕಂಡ ಸ್ಥಳಗಳಲ್ಲಿನ ಸೌಲಭ್ಯಗಳನ್ನು ನಿಗಮದ ವತಿಯಿಂದ ಖಾಸಗೀಕರಿಸಲಾಗಿರುವ ಪಟ್ಟಿ

1 ಅನ್‌ಮೋಡ್	2 ಹುನುಗುಂದ
3 ಲೋಕಾಪುರ	4 ಮೊದಲಘಟ್ಟ
5 ರಾಮನಗರ (ಉ ಕ)	6 ಸೌಂದತ್ತಿ
7 ತೋರಣಗಲ್	8 ಆಗುಂಬೆ
9 ಬಿ ಆರ್ ಹಿಲ್ಸ್	10 ಬಸವಕಲ್ಯಾಣ
11 ಮೇಲುಕೋಟೆ	12 ಸೋಮೇಶ್ವರ
13 ತನ್ನಿಕೊಳ್ಳ	14 ಉಡುಪಿ

15 ಮಂಗಳೂರು	16 ಗುಲ್ಬರ್ಗ–1
17 ಬೆಳಗಾಂ	18 ಬೀದರ್
19 ದೇವರಾಯನದುರ್ಗ	20 ಧಾರವಾಡ
21 ಶಿಂಷಾ	22 ಹಾಸನ
23 ಗುಲ್ಬರ್ಗಾ–2	24 ಮಲ್ಲೆಕಾಮನಹಳ್ಳಿ

ಉಳಿದ 16 ಹೋಟೆಲ್ ಸೌಲಭ್ಯಗಳನ್ನು ನಿಗಮದಿಂದಲೇ ನಡೆಸಲಾಗುತ್ತಿದೆ

ಪ್ರಶ್ನೆ ಸಂಖ್ಯೆ 90 (61) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೆಂಗಳೂರು ನಗರದಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳಿವೆ,

ಆ) ಬೆಂಗಳೂರು ನಗದಲ್ಲಿ ಇರುವ ಮೇಲು ಸೇತುವೆ ರಸ್ತೆಗಳೆಷ್ಟು ಹಾಗೂ ಮುಂದೆ ನಿರ್ಮಿಸಲಿರುವ ಮೇಲು ಸೇತುವೆ ಸಂಖ್ಯೆಗಳೆಷ್ಟು,

ಇ) ಬೆಂಗಳೂರಿನ ಜನಸಂಖ್ಯೆಗೆ ಆಧಾರವಾಗಿ ಬೆಂಗಳೂರಿನಲ್ಲಿ ಎಷ್ಟು ಹೊಸ ಬಡಾವಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಾಣ ಮಾಡಲಿದೆ,

ಈ) ಇದುವರೆವಿಗೆ ಎಷ್ಟು ಒತ್ತುವರಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ, ಈ ಒತ್ತುವರಿ ಜಮೀನನ್ನು ಯಾವ ರೀತಿ ಉಪಯೋಗಿಸಲಾಗುವುದು,

ಉ) ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇಲ್ಲಿಯವರೆಗೆ ಒಟ್ಟು 759 ಅಪಾರ್ಟ್‌ಮೆಂಟ್ ಕಟ್ಟಡಗಳ ನಕ್ಷೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ

ಆ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಟ್ಟು 8(ಎಂಟು) ಮೇಲುಸೇತುವೆ ರಸ್ತೆಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ 3(ಮೂರು) ಮೇಲುಸೇತುವೆ ರಸ್ತೆಗಳನ್ನು ನಿರ್ಮಿಸಲು ಉದ್ದೇಶಿಸಿದೆ

ಇ) ಬೆಂಗಳೂರು ನಗರದ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಎರಡು ಬೃಹತ್ ವಸತಿ ಬಡಾವಣೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ

ಈ) ಪ್ರಾಧಿಕಾರವು ಇದುವರೆವಿಗೆ 250 ಎಕರೆ 19 ಗುಂಟೆ ಒತ್ತುವರಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಈ ಒತ್ತುವರಿ ಜಮೀನನ್ನು ಆಯಾ ಬಡಾವಣೆಗಳಲ್ಲಿ ನಿವೇಶನಗಳನ್ನಾಗಿ ರಚಿಸಿ ಸೇರ್ಪಡಿಸಲಾಗಿದೆ

ಉ) ಬೆಂಗಳೂರು ನಗರಕ್ಕೆ ಪರಿಷ್ಕೃತ ಮಾಸ್ಟರ್ ಪ್ಲಾನ್ 2015 ಅನ್ನು ದಿನಾಂಕ 25-06-2007 ರಂದು ಅನುಮೋದಿಸಲಾಗಿದ್ದು, ಇದರಲ್ಲಿ ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲಾಗಿದೆ

****